ಅಮೆರಿಕನ್ ಜಾನಪದ

ಕನ್ನಡ ಕಂಗಳಿಗೆ ಕಂಡಂತೆ

ಸಂಪಾದಕರು: ಮೈ. ಶ್ರೀ. ನಟರಾಜ
ಜ್ಯೋತಿ ವೆಂಕಟಸುಬ್ರಹ್ಮಣ್ಯ



ಅಮೆರಿಕದ ಮೂಲನಿವಾಸಿಗಳ ಬದುಕು, ಸಾಹಿತ್ಯ ಮತ್ತು ಸಂಸ್ಕೃತಿಗಳ ಕುರಿತ ಲೇಖನ ಮಾಲೆ

ಅಮೆರಿಕನ್ ಜಾನಪದ

ಕನ್ನಡ ಕಂಗಳಗೆ ಕಂಡಂತೆ

Compendium of
Americal Folklore, History and Culture

ಅಮೆರಿಕನ್ ಜಾನಪದ

ಕನ್ನಡ ಕಂಗಳಿಗೆ ಕಂಡಂತೆ...

ಸಂಪಾದಕರು
ಮೈ. ಶ್ರೀ. ನಟರಾಜ
ಜ್ಯೋತಿ ವೆಂಕಟಸುಬ್ರಹ್ಮಣ್ಯ

ಕನ್ನಡ ಸಾಹಿತ್ಯ ರಂಗ
ಯು.ಎಸ್.ಎ.

ಹತ್ತನೆಯ ವಸಂತ ಸಾಹಿತ್ಯೋತ್ಸವದ ಸಂಭ್ರಮ

American Janapada- Kannada Kangalige Kandante - ED. by **M. S. Nataraja and Jyothi Venkatasubramanya.** Published by **Kannada Sahithya Ranga, U S A.** Website: www.kannadasahityaranga.org

First Impression: 2022 Pages: 528 Price: Rs. 500.00 USD 20

Paper Used: 80 GSM N.S. Maplitho Book Size: Demy 1/8

ಬಳಸಿರುವ ಕಾಗದದ ಗುಣಮಟ್ಟ: ೮೦ ಜಿಎಸ್‌ಎಂ ಎನ್‌ಎಸ್ ಮ್ಯಾಪ್‌ಲಿಥೋ

ಪುಸ್ತಕದ ಆಕಾರ: ೧/೮ ಡೆಮಿ (ಅಷ್ಟದಳ)

ಪುಸ್ತಕ ಸಂಯೋಜನೆ ಮತ್ತು ಪ್ರಸ್ತುತಿ
ಅಭಿನವ
17/18–2, ಮೊದಲನೆಯ ಮುಖ್ಯರಸ್ತೆ,
ಮಾರೇನಹಳ್ಳಿ ವಿಜಯನಗರ
ಬೆಂಗಳೂರು–560040.
ದೂ 9448804905
Email: abhinavabooks21@gmail.com.

ಪುಸ್ತಕ ವಿನ್ಯಾಸ: ಶ್ರೀಧರ್
ತಾಂತ್ರಿಕ ನೆರವು: ಶ್ರೀವತ್ಸ ಜೋಶಿ
ಹೊದಿಕೆ ವಿನ್ಯಾಸ : ಹರಿದಾಸ್ ಲಹರಿ
ಮುದ್ರಣ: ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು

ಅರ್ಪಣೆ

ಜಾನಪದ ಸತ್ವದ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ
ಚಂದ್ರಶೇಖರ ಕಂಬಾರ ಅವರಿಗೆ
ಕನ್ನಡ ಸಾಹಿತ್ಯ ರಂಗದ
ಸಮರ್ಪಣೆ

ಕನ್ನಡ ಸಾಹಿತ್ಯ ರಂಗ

ಯು ಎಸ್ ಎ

ಶ್ರೀ ನಾಗ ಐತಾಳ್
ಅಧ್ಯಕ್ಷರು, ಆಡಳಿತ ಮಂಡಲಿ

ಶ್ರೀ ಮೈ. ಶ್ರೀ. ನಟರಾಜ
ಅಧ್ಯಕ್ಷರು, ಕಾರ್ಯಕಾರಿ ಸಮಿತಿ

ಸಂಪಾದಕೀಯ ಸಲಹಾ ಸಮಿತಿ
ಶ್ರೀಮತಿ ನಳಿನಿ ಮೈಯ
ಶ್ರೀ ಪ್ರಕಾಶ್ ನಾಯಕ್
ಶ್ರೀಮತಿ ಮೀರಾ ರಾಜಗೋಪಾಲ್

ಪ್ರಾಯೋಜಕರು
ಕಸಾರಂ ಪೋಷಕರು, ಹ್ಯೂಸ್ಟನ್ ಕನ್ನಡಿಗ
ಶ್ರೀ ವತ್ಸ ಕುಮಾರ್



'ಅಮೆರಿಕನ್ ಜಾನಪದ': ಒಂದು ಪ್ರವೇಶ

ಕರ್ನಾಟಕದಿಂದ ಹೊರಗಿರುವ ಕನ್ನಡಿಗರು ತಮ್ಮ ಮೂಲ ನೆಲ-ಭಾಷೆಗಳನ್ನು ಮರೆಯದೆ, ಅವುಗಳಿಗೆ ತಮ್ಮದೇ ಆದ ಕೊಡುಗೆ ಕೊಡಲು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಅನೇಕ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದಾರೆ. ಅಂತಹ ಅನೇಕ ದೇಶಗಳಲ್ಲಿರುವ ಸಂಸ್ಥೆಗಳಲ್ಲಿ ಒಂದು ಅಮೆರಿಕಾದಲ್ಲಿರುವ 'ಕನ್ನಡ ಸಾಹಿತ್ಯ ರಂಗ.' ಕಳೆದೆರಡು ದಶಕಗಳಿಂದ ಕ್ರಿಯಾಶೀಲರಾಗಿರುವ ಈ ಸಂಘದ ಸದಸ್ಯರು ಪ್ರತಿ ಎರಡು ವರ್ಷಗಳಿಗೊಮ್ಮೆ 'ವಸಂತ ಸಾಹಿತ್ಯೋತ್ಸವ'ವನ್ನು ಆಯೋಜಿಸುತ್ತಾ ಬಂದಿದ್ದಾರೆ; ಆ ಉತ್ಸವದ ಒಂದು ಪ್ರಮುಖ ಆಯಾಮವೆಂದರೆ ಅಮೆರಿಕಾದಲ್ಲಿರುವ ಕನ್ನಡಿಗರೇ ಬರೆದಿರುವ ಕನ್ನಡ ಭಾಷೆ-ಸಾಹಿತ್ಯಗಳಿಗೆ ಸಂಬಂಧಿಸಿದ ಒಂದು ಗಂಭೀರ ವಿಮರ್ಶನ ಗ್ರಂಥದ ಪ್ರಕಟಣೆ. ಮೊದಲ ಉತ್ಸವದ ಕಾಲದಲ್ಲಿ ಪ್ರಕಟವಾದದ್ದು ಕುವೆಂಪು ಅವರ ಸಾಹಿತ್ಯವನ್ನು ಕುರಿತ 'ಕುವೆಂಪು ಸಾಹಿತ್ಯ ಸಮೀಕ್ಷೆ' (2004); ಈ ವರ್ಷದ ಉತ್ಸವದಲ್ಲಿ ಪ್ರಕಟವಾಗುತ್ತಿರುವ ಗ್ರಂಥ 'ಅಮೆರಿಕನ್ ಜಾನಪದ: ಕನ್ನಡ ಕಂಗಳಿಗೆ ಕಂಡಂತೆ' (2022). ಐನೂರು ಪುಟಗಳನ್ನೂ ಮೀರುವ ಈ ಬೃಹತ್ ಸಂಕಲನದಲ್ಲಿ 35 ಲೇಖನಗಳಿವೆ; ಪ್ರಾರಂಭದಲ್ಲಿ ಕನ್ನಡ ಪ್ರಾಧ್ಯಾಪಕರು ಹಾಗೂ ಖ್ಯಾತ ಜಾನಪದ ವಿದ್ವಾಂಸರೂ ಆದ ಡಾ. ಕೃಷ್ಣಮೂರ್ತಿ ಹನೂರು ಬರೆದಿರುವ ಕನ್ನಡ ಜಾನಪದ ಅಧ್ಯಯನದ ಸಂಕ್ಷಿಪ್ತ ಚರಿತ್ರೆಯಿದ್ದರೆ; ಗ್ರಂಥದ ಕೊನೆಯಲ್ಲಿರುವುದು ಪ್ರಸಿದ್ಧ ಕಾದಂಬರಿಕಾರರಾದ ಡಾ. ಗುರುಪ್ರಸಾದ್ ಕಾಗಿನೆಲೆ ಅವರು ಈ ಸಂಕಲನದ ಎಲ್ಲಾ ಲೇಖನಗಳನ್ನೂ ಒಟ್ಟಾರೆಯಾಗಿ ಪರಿಶೀಲಿಸಿರುವ ಸಮೀಕ್ಷಾ ಲೇಖನ. ಈ ವಿಶಿಷ್ಟ ಸಂಕಲನಕ್ಕೆ ಪ್ರವೇಶವನ್ನು ಕಲ್ಪಿಸುವುದು ನನ್ನ ಈ ಕಿರು ಲೇಖನದ ಉದ್ದೇಶ.

'ಜಾನಪದ' ಎಂದರೇನು ಎಂಬ ಪ್ರಶ್ನೆಗೆ ಎಲ್ಲರೂ ಒಪ್ಪುವಂತಹ ಒಂದು ವ್ಯಾಖ್ಯಾನವನ್ನು ಕೊಡುವುದು ಅಸಾಧ್ಯ. ಒಂದು ಸಂದರ್ಭದಲ್ಲಿ, ಡಾ. ಹನೂರು ಕೃಷ್ಣಮೂರ್ತಿಯವರು ಹೀಗೆ ಹೇಳುತ್ತಾರೆ: 'ಜನಪದ ಕಲೆ- ಸಾಹಿತ್ಯ ಶ್ರಮ ಮತ್ತು ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿರುವಂಥದು; ಅದು ಎಂದೂ ಬದುಕಿನಿಂದ ಪ್ರತ್ಯೇಕಗೊಂಡು ಸಂಪೂರ್ಣ ಮನರಂಜನೆಗೆಂದೇ ಹುಟ್ಟಿಕೊಂಡಿದ್ದಲ್ಲ.' ಇಲ್ಲಿ ಅವರು ಮಂಡಿಸುವ 'ಶ್ರಮ ಮತ್ತು ಆರಾಧನೆ' ಪದಗಳು ತುಂಬಾ ಮುಖ್ಯವಾದವುಗಳು. ಜಾನಪದ ಸಾಹಿತ್ಯ ಮತ್ತು ಜಾನಪದ ಕಲೆಗಳು ದೈಹಿಕ ಶ್ರಮದಿಂದ ಬದುಕುವ ಕೃಷಿಕರು ಮತ್ತು

ವಿವಿಧ ಕಾಯಕಗಳನ್ನಾಧರಿಸಿರುವವರು, ಅಲೆಮಾರಿ ಜನಾಂಗದವರು, ಇತ್ಯಾದಿ ಸಮೂಹಗಳಿಂದ ಸೃಷ್ಟಿಯಾದವುಗಳು; ಇವು ಸಾಮೂಹಿಕ ಸೃಷ್ಟಿಗಳು ಹಾಗೂ ಸಾಮೂಹಿಕ ಪ್ರದರ್ಶನ ಕಲೆಗಳು. ಇವುಗಳ ಮುಖ್ಯ ಉದ್ದೇಶಗಳು ತಾವು ನಂಬಿದ ದೇವ-ದೇವತೆಗಳ ಆರಾಧನೆ ಮತ್ತು ಪ್ರೇಕ್ಷಕರ ಮನರಂಜನೆ. ಈ ಹೇಳಿಕೆ ಕೇವಲ ಮನರಂಜನೆಗಾಗಿಯೇ ಇರುವಂತೆ ತೋರುವ ಕೋಲಾಟ, ಸುಗ್ಗಿ ಕುಣಿತ, ಡೊಳ್ಳು ಕುಣಿತ, ಇತ್ಯಾದಿ ನೃತ್ಯ-ಗೀತೆಗಳಿಗೂ ಅನ್ವಯಿಸುತ್ತದೆ. ಹೀಗೆ ಹೇಳಬಹುದೇನೋ! ಜಾನಪದ ಕಲೆಗಳ ಉದ್ದೇಶಗಳನ್ನು ಅಥವಾ ನಿಯೋಗಗಳನ್ನು ಕುರಿತು ಒಂದು ಸರಳ ರೇಖೆಯನ್ನು ಎಳೆದರೆ, ಆ ರೇಖೆಯ ಒಂದು ತುದಿ ಮನರಂಜನೆಯನ್ನು ಹಾಗೂ ಮತ್ತೊಂದು ತುದಿ ಆರಾಧನೆಯನ್ನೂ ಪ್ರತಿನಿಧಿಸುತ್ತವೆ. ಇವುಗಳ ನಡುವೆ ಭಿನ್ನ ಜಾನಪದ ಕಲೆಗಳು ಎಲ್ಲಿಯಾದರೂ ಬರಬಹುದು. ಗೀತೆ-ನೃತ್ಯ-ವಾದ್ಯ-ಚಿತ್ರಕಲೆ ಇತ್ಯಾದಿ ಕಲೆಗಳು ಮನರಂಜನೆಯ ತುದಿಗೆ ಹತ್ತಿರವಿರುತ್ತವೆ, ಮತ್ತು ದೀರ್ಘ ಕಥನಕಾವ್ಯಗಳು ಹಾಗೂ ಮೌಖಿಕ ಮಹಾಕಥನಗಳು ಆರಾಧನೆಯ ತುದಿಗೆ ತುಂಬಾ ಸಮೀಪವಿರುತ್ತವೆ. 'ಮಲೆ ಮಾದೇಶ್ವರ' (ಕನ್ನಡ), 'ಭಿಲ್ಲ ಭಾರತ' (ಭಿಲ್ಲ ಭಾಷೆ), 'ಅಂತಾರ್' (ಅರಾಬಿಕ್), 'ಸುನ್‌ಜಾತಾ' (ಮಾಲಿ), ಇತ್ಯಾದಿ ಮಹಾ ಕಥನಕಾವ್ಯಗಳ ಉದ್ದೇಶಗಳನ್ನು/ ನಿಯೋಗಗಳನ್ನು, ಪ್ರಸಿದ್ಧ ಜಾನಪದ ವಿದ್ವಾಂಸ ಎ. ಟಿ. ಹ್ಯಾಟೋ ಹೇಳುವಂತೆ, ಹೀಗೆ ಗುರುತಿಸಬಹುದು: ಧಾರ್ಮಿಕ ಆಚರಣೆ, ಚರಿತ್ರೆ, ಅಧಿಕೃತೀಕರಣ, ಮತ್ತು ಸಾಹಿತ್ಯಕತೆ. ಇಲ್ಲಿ, 'ಚರಿತ್ರೆ' ಎಂದರೆ ಸಂಬಂಧಿಸಿದ ಬುಡಕಟ್ಟು, ಜನಾಂಗ, ಅಥವಾ ಸಮುದಾಯ ಇವುಗಳ ಸಾಂಸ್ಕೃತಿಕ-ಸಾಮಾಜಿಕ ಚರಿತ್ರೆ; 'ಅಧಿಕೃತೀಕರಣ' (legitimisation) ಎಂದರೆ, ಸಂಬಂಧಿಸಿದ ಆಯಾಯಾ ಜನಾಂಗದ/ ಸಮುದಾಯದ ನಂಬಿಕೆಗಳು ಹಾಗೂ ಆಚರಣೆಗಳು ಆಯಾಯಾ ಸಮುದಾಯದ/ಜನಾಂಗದ ಪ್ರಾಚೀನ ಧಾರ್ಮಿಕ-ಸಾಂಸ್ಕೃತಿಕ ನಾಯಕರು ರೂಢಿಗೆ ತಂದಂತಹವು ಎಂದು ಮಂಡಿಸಿ, ಆ ಮೂಲಕ ಅವುಗಳಿಗೆ ಒಂದು ಬಗೆಯ ಅಧಿಕೃತತೆಯ ಛವಿಯನ್ನು ಕೊಡುವುದು.

ಈ ಸಂದರ್ಭದಲ್ಲಿ ಕೂಡಲೇ ಏಳುವ ಪ್ರಶ್ನೆ 'ಆಯಿತು; ಆಚರಣೆ- ಅಧಿಕೃತತೆ ಇತ್ಯಾದಿ ಇತ್ಯಾದಿ. ಆದರೆ ಇಂದು ನಮಗೆ ಈ ಜಾನಪದ ಅಧ್ಯಯನದಿಂದ ಸಿಗುವ ಪ್ರಯೋಜನವೇನು?' ಈ ಪ್ರಶ್ನೆಗೆ ಒಂದು ಸಂಕ್ಷಿಪ್ತ ಉತ್ತರವೆಂದರೆ 'ಬಹುತ್ವ ದರ್ಶನ.' ಸಂಸ್ಕೃತಿ, ಸಾಹಿತ್ಯ, ಧರ್ಮ, ಇತ್ಯಾದಿ ಪರಿಕಲ್ಪನೆಗಳು ಕೇವಲ 'ಪರಿಕಲ್ಪನೆ'ಗಳಷ್ಟೇ; ಸ್ವಯಂ ಸಿದ್ಧ ಸತ್ಯಗಳಲ್ಲ. ಆದುದರಿಂದ ಯಾವ ಸಾಹಿತ್ಯ ಶ್ರೇಷ್ಠ, ಯಾವ ಸಾಹಿತ್ಯ ಕನಿಷ್ಠ; ಯಾವುದು ಶ್ರೇಷ್ಠ ಸಂಸ್ಕೃತಿ, ಯಾವುದು ಅಲ್ಲ ಎಂಬಂತಹ ಶ್ರೇಣೀಕರಣ ಸಲ್ಲದು. ಒಂದು ಸಮಾಜದಲ್ಲಿ, ಒಂದು ಕಾಲಘಟ್ಟದಲ್ಲಿ ಅನೇಕ ಬಗೆಯ ಸಾಹಿತ್ಯಗಳಿರುತ್ತವೆ, ಅನೇಕ ಸಂಸ್ಕೃತಿಗಳು ಜೀವಂತವಾಗಿರುತ್ತವೆ, ಇವುಗಳಲ್ಲಿ ಮೇಲು-ಕೀಳೆಂಬ ಶ್ರೇಣೀಕರಣವಿಲ್ಲ ಎಂಬಂತಹ ಅರಿವು - ಬಹುತ್ವದ ಅರಿವು - ಬುಡಕಟ್ಟು ಜನಾಂಗಗಳ, ಕೃಷಿಕರ, ಅಲೆಮಾರಿ ಜನಾಂಗಗಳ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನದಿಂದ ದೊರಕುತ್ತದೆ. ಯಾವ ಕಾಲದಲ್ಲಿಯೂ ಈ ಬಹುತ್ವದ ಅರಿವು ಪ್ರಸ್ತುತವಾಗಿಯೇ ಇರುತ್ತದೆ.

ಇನ್ನು 'ಅಮೆರಿಕನ್ ಜಾನಪದ' ಕೃತಿಗೆ ಹಿಂದಿರುಗಿದರೆ, ಹೆಸರು 'ಅಮೆರಿಕನ್' ಎಂದಿದ್ದರೂ, ಇದರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳಷ್ಟೇ ಅಲ್ಲದೆ ಕೆನಡಾ, ಬ್ರೆಝಿಲ್, ಮತ್ತು ಆಸ್ಟ್ರೇಲಿಯಾ ದೇಶಗಳ ಜಾನಪದವನ್ನು ಕುರಿತ ಲೇಖನಗಳಿವೆ. ಹಾಗೆಯೇ, 'ಜಾನಪದ' ಎಂಬ ಪರಿಕಲ್ಪನೆಯನ್ನೂ ಈ ಸಂಕಲನದ ಲೇಖನಗಳು ಹಿಗ್ಗಿಸುತ್ತವೆ; ಇದರಲ್ಲಿರುವ ಲೇಖನಗಳು ಮೇಲೆ ಹೆಸರಿಸಿದ ದೇಶಗಳ ಮೂಲ ನಿವಾಸಿಗಳು, ಗುಲಾಮರಾಗಿ ದುಡಿಯಲು ಬಲಾತ್ಕಾರದಿಂದ ತರಲ್ಪಟ್ಟ ಆಫ್ರಿಕಾದ ಕಪ್ಪು ಜನರು, ಇವರುಗಳ ಜನಾಂಗೀಯ ಅಧ್ಯಯನ; ಭಿನ್ನ ಸಮುದಾಯಗಳಲ್ಲಿ ಬೆಳೆದು ಬಂದ ಕಥೆಗಳು ಹಾಗೂ ಗಾದೆಗಳು; ಸಂಗೀತ–ನೃತ್ಯ–ಚಿತ್ರಕಲೆ ಮತ್ತು ವೈದ್ಯವಿದ್ಯೆ ಇವೆಲ್ಲವುಗಳನ್ನೂ ಒಳಗೊಳ್ಳುತ್ತವೆ.

ಈ ಸಂಕಲನದಲ್ಲಿರುವ ಹೆಚ್ಚಿನ ಲೇಖನಗಳು (ಸುಮಾರು 14), ಸ್ಥೂಲವಾಗಿ, 'ಜನಾಂಗೀಯ ಅಧ್ಯಯನ' ಎಂಬ ವರ್ಗಕ್ಕೆ ಸೇರುತ್ತವೆ. ಇವುಗಳು ವಿಶಿಷ್ಟ ಬುಡಕಟ್ಟುಗಳ/ ಸಮುದಾಯಗಳ ಚರಿತ್ರೆ, ಧಾರ್ಮಿಕ ಆಚರಣೆಗಳು ಹಾಗೂ ನಂಬಿಕೆಗಳು, ಜೀವನಕ್ರಮ, ಕಲೆ, ಸಾಹಿತ್ಯ ವಿಮರ್ಶೆ, ಇತ್ಯಾದಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತವೆ: ಇಂದು ಅಮೆರಿಕನ್ ಇಂಡಿಯನ್ಸ್ ಎಂದು ಕರೆಯಲ್ಪಡುವ ಅಮೆರಿಕಾ–ಕೆನಡಾ–ಬ್ರೆಝಿಲ್ ದೇಶಗಳ ಮೂಲನಿವಾಸಿಗಳು, ಆಸ್ಟ್ರೇಲಿಯ ದೇಶದ ಮೂಲನಿವಾಸಿಗಳು, ಇವರುಗಳ ಬಗ್ಗೆ ಒಟ್ಟಾರೆಯಾಗಿ ಹಾಗೂ ಕೆಲವು ಲೇಖನಗಳು ಇವರುಗಳಲ್ಲಿಯೇ ಇರುವ ಭಿನ್ನ ಬುಡಕಟ್ಟುಗಳನ್ನೇ ವಿಶೇಷವಾಗಿ ಪರಿಚಯಿಸುತ್ತವೆ. ಪರಿಚಯಿಸಿರುವ ಭಿನ್ನ ಬುಡಕಟ್ಟುಗಳೆಂದರೆ: ಕೆನಡಾದ ಇನ್ಯೂಟ್ ಜನರು, ಚಿಪ್ಪೆವಾ ಬುಡಕಟ್ಟು, ಹಿಂದೆ ಎಸ್ಕಿಮೊ ಎಂದು ಕರೆಯಲ್ಪಡುತ್ತಿದ್ದ ಇನ್ಯೂಯಿಟ್ಸ್ ಸಮುದಾಯ, ಸಿಲಿಕಾನ್ ವ್ಯಾಲಿಯ ಮೂಲ ನಿವಾಸಿಗಳಾಗಿದ್ದ ಓಹ್ಲೋನಿಯನ್ನರು, ಇಲಿನಾಯ್ ಪ್ರಾಂತ್ಯದಲ್ಲಿ ಹಾಗೂ ಅದರ ಸುತ್ತಮುತ್ತ ಇರುವ ಇಲಿನಿ ಒಕ್ಕೂಟ, ಅಪಾಚಿ ಇಂಡಿಯನ್ಸ್, ಕ್ರಿಶ್ಚಿಯನ್ ಭಿನ್ನ ಪಂಥಗಳಾದ ಆಮಿಷ್ ಮತ್ತು ಮೋರ್ಮಾನ್ ಸಮುದಾಯಗಳು, ಕಂಟ್ರಿ ಮ್ಯೂಸಿಕ್ ಎಂಬ ಜಾನಪದೀಯ ಗಾಯನಕ್ರಮವನ್ನು ಸೃಷ್ಟಿಸಿದ ಕ್ಲೋವಿಸ್ ಜನಾಂಗ, ಇತ್ಯಾದಿ. ಈ ದೃಷ್ಟಿಯಿಂದ ನೋಡಿದರೆ, ಇಡೀ ಸಂಕಲನವನ್ನು **'ಅಮೆರಿಕನ್ ರಾಷ್ಟ್ರದ ರೋಚಕ ಸಾಮಾಜಿಕ ಕೈಪಿಡಿ'** ಎಂದು ಕರೆಯಬಹುದು.

'ಜನಾಂಗೀಯ ಅಧ್ಯಯನ' ಎಂಬ ವರ್ಗದಲ್ಲಿ ಬರುವ ಎಲ್ಲಾ ಲೇಖನಗಳೂ ಸಾಕಷ್ಟು ಸಂಶೋಧನೆ ಹಾಗೂ ಚಿಂತನೆಗಳನ್ನು ಆಧರಿಸಿವೆ. ಆದರೆ ಈ ವರ್ಗದಲ್ಲಿ ಎದ್ದು ಕಾಣುವ ಎರಡು ಲೇಖನಗಳೆಂದರೆ ರಾಗು ಕಟ್ಟಿನಕೆರೆ ಬರೆದಿರುವ 'ಕೆನಡಾದ ದೇಶೀ ಕಲೆಗಳು ಮತ್ತು ಭಾರತೀಯ ಸಂವೇದನೆಗಳು' ಮತ್ತು ಗುಂಡೂ ಶಂಕರ್ ಬರೆದಿರುವ (ಕನ್ನಡಕ್ಕೆ: ಶ್ರೀಕಾಂತ ಬಾಬು) 'ಮೂಲನಿವಾಸಿಗಳ ಮೇಲೆ ಯೂರೋಪಿನ ವಲಸೆಗಾರರ ಮತ್ತು ಯಾತ್ರಿಕರ ಪ್ರಭಾವ: ಸಾಹಿತ್ಯದಲ್ಲಿ ಪ್ರತಿಧ್ವನಿ.' ಮೊದಲ ಲೇಖನದಲ್ಲಿ ಕಟ್ಟಿನಕೆರೆ ಅವರು ಕೆನಡಾದ ಇನ್ಯೂಟ್ ಮತ್ತು ಇತರ ಮೂಲಜನರ ಮತ್ತು ಕರ್ನಾಟಕದ ಜಾನಪದೀಯ ಸಂಗೀತ, ಸಾಹಿತ್ಯ, ಮತ್ತು ಚಿತ್ರಕಲೆ ಇವುಗಳನ್ನು ತೌಲನಿಕವಾಗಿ (ಹಾಗೂ

ಚಿತ್ರಗಳ ಮೂಲಕ) ವ್ಯಾಖ್ಯಾನಿಸುತ್ತಾರೆ. ಎರಡೂ ಪರಂಪರೆಗಳಲ್ಲಿ ಇರುವ ವಾದ್ಯಗಳು, ಪೂಜಾ ಸಂಗೀತ ಮತ್ತು ಮನರಂಜನೆಯ ಸಂಗೀತ ಎಂಬ ಪ್ರಭೇದಗಳು, ಯಕ್ಷಗಾನದ ಏಕತಾಳಕ್ಕೆ ಹೊಂದುವ ಇನ್ಯೂಟ್ ಹಾಡುಗಳ ಲಯ, ಹೆಣೆದ ಬುಟ್ಟಿಗಳ ಮೇಲೆ ಮಾಡುವ ಚಿತ್ತಾರಗಳು ಇತ್ಯಾದಿ ಸಮಾನ ಅಂಶಗಳನ್ನು ಸಮರ್ಥವಾಗಿ ಈ ಲೇಖನ ನಮ್ಮ ಗಮನಕ್ಕೆ ತರುತ್ತದೆ. ಗುಂಡೂ ಶಂಕರ್ ಅವರ ಲೇಖನವನ್ನು ಉತ್ತಮ ಸಾಹಿತ್ಯ ವಿಮರ್ಶೆ ಎಂದು ಕರೆಯಬಹುದು, ಅಥವಾ ವರ್ಣಭೇದವು ಸೃಷ್ಟಿಮಾಡಿದ ಜನಾಂಗೀಯ ಚರಿತ್ರೆ ಎಂದೂ ನೋಡಬಹುದು. ಲೂಯಿಸ್ ಎರ್ಡ್ರಿಚ್ ಎಂಬ ಚಿಪ್ಪೆವಾ ಬುಡಕಟ್ಟಿಗೆ ಸೇರಿದ ಕಾದಂಬರಿಕಾರ್ತಿಯ 'ದ ನೈಟ್ ವಾಚ್‌ಮನ್' ಎಂಬ ಕಾದಂಬರಿ ಮತ್ತು ಮಾರ್ಕೆಸ್ ಅವರ 'ಒನ್ ಹಂಡ್ರೆಡ್ ಯಿಯರ್ಸ್ ಆಫ್ ಸಾಲಿಟ್ಯೂಡ್' ಎಂಬ ಕಾದಂಬರಿ ಇವುಗಳು ತಮ್ಮದೇ ಜನಾಂಗದ ಅನುಭವಗಳು, ನಂಬಿಕೆಗಳು ಹಾಗೂ ಜೀವನಕ್ರಮ ಇವುಗಳನ್ನು ಎಷ್ಟು ಪರಿಣಾಮಕಾರಿಯಾಗಿ ನಾಟ್ಯೀಕರಿಸುತ್ತವೆ ಎಂಬುದನ್ನು ಈ ಲೇಖನ ಸಮರ್ಥವಾಗಿ ವ್ಯಾಖ್ಯಾನಿಸುತ್ತದೆ.

ಈ ಸಂಕಲನದ ಸುಮಾರು ಹತ್ತು ಲೇಖನಗಳು ಭಿನ್ನ ಬುಡಕಟ್ಟುಗಳ ಹಾಗೂ ಸಮುದಾಯಗಳ ಮೌಖಿಕ ಪರಂಪರೆಗೆ ಸೇರಿದ ಕಥೆಗಳನ್ನು ಪರಿಚಯಿಸುತ್ತವೆ. ಈ ವರ್ಗದಲ್ಲಿ 'ಗುಳ್ಳೆನರಿಯ ಚಾತುರ್ಯ' ಎಂಬ ಆಶಯವುಳ್ಳ ಕಥೆಗಳು, 'ಮೋಸಗಾರನಿಗೇ ಆಗುವ ಮೋಸ' ('The Biter Bit') ಎಂಬ ಆಶಯದ ಕಥೆಗಳು, ವೈನೋದಿಕ–ಪ್ರೇಮ ಕಥೆಗಳು, ಇತ್ಯಾದಿ ಬರುತ್ತವೆ. ಕಥೆಗಳೆಲ್ಲವೂ ಆಕರ್ಷಕವಾಗಿವೆ ಮತ್ತು ಇವುಗಳಿಗೆ ಸಮಾನವಾದ ಕನ್ನಡ ಕಥೆಗಳನ್ನು ಲೇಖಕರು ಪ್ರಸ್ತಾಪಿಸುತ್ತಾರೆ. ಆದರೆ ಇವುಗಳಲ್ಲಿ ಶಶಿಕಲಾ ಚಂದ್ರಶೇಖರ್ ಅವರ ಲೇಖನದಲ್ಲಿ ಬರುವ 'ಹಾರಿ ಹೋದವರು' ಎಂಬ ಅಸಾಧಾರಣ ಕಥೆ ತನ್ನ ಆಶಯ ಹಾಗೂ ತಂತ್ರದ ಕಾರಣಗಳಿಂದ ನಮ್ಮನ್ನು ಮತ್ತೆ ಮತ್ತೆ ಕಾಡುತ್ತದೆ. ಕಪ್ಪು ಜನಾಂಗಕ್ಕೆ ಸೇರಿದ ಈ ಕಥೆ 'ಮ್ಯಾಜಿಕ್ ರಿಯಲಿಸಂ' ತಂತ್ರದ ಮೂಲಕ ಸ್ವತಂತ್ರವಾಗಿದ್ದ ಒಂದು ಜನಾಂಗ ಹೇಗೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ('ರೆಕ್ಕೆಗಳನ್ನು ಕಳೆದುಕೊಂಡು') ಅಮೆರಿಕಾದಲ್ಲಿ ಗುಲಾಮರಾಗಿ ಬದುಕಬೇಕಾಗಿ ಬಂದಿತು ಎಂಬುದನ್ನು ನಿರೂಪಿಸುತ್ತಲೇ ಆ ಜನಾಂಗವು ಮತ್ತೆ ತನ್ನ 'ರೆಕ್ಕೆ'ಗಳನ್ನು ಬೆಳೆಸಿಕೊಂಡು ತನ್ನ ಸ್ಥಳಕ್ಕೆ ಮರಳಿ ಹೋಗುತ್ತದೆ ಎಂಬ ಅಚಲ ನಂಬಿಕೆಯನ್ನೂ ಸೂಚಿಸುತ್ತದೆ. ಸ್ವಾತಂತ್ರ್ಯಕ್ಕಾಗಿ ಗುಲಾಮರಿಗಿರುವ ಹಂಬಲ ಹಾಗೂ ಮುಂದೆ ಒಂದಲ್ಲಾ ಒಂದು ದಿನ ಆ ಹಂಬಲ ಸಫಲವಾಗುತ್ತದೆ ಎಂಬ ಆತ್ಮವಿಶ್ವಾಸ ಇವೆರಡನ್ನೂ ಧ್ವನಿಸುತ್ತದೆ.

ಇದೇ ಆಶಯವನ್ನು, ಎಂದರೆ ಭವಿಷ್ಯದಲ್ಲಿ ಒಂದಲ್ಲಾ ಒಂದು ದಿನ ಶೋಷಿತರು ತಮ್ಮ ಶೋಷಿತ ಅವಸ್ಥೆಯಿಂದ ಮುಕ್ತರಾಗುತ್ತಾರೆ ಎಂಬ ಆಶಯವನ್ನು, ಹೊಂದಿರುವ 'We shall overcome' ಎಂಬ ಗೀತೆಯ ಉಗಮ ಮತ್ತು ಅದು ಬೆಳೆದು ಬಂದ ರೀತಿಯನ್ನು ನಳಿನಿ ಮೈಯ ಅವರ 'ಹೋರಾಟಕ್ಕೆ ದನಿಯಾದ ಜನಪದಗೀತೆ' ಎಂಬ ಲೇಖನವು ವಿಶ್ವಸನೀಯವಾಗಿ ನಿರೂಪಿಸುತ್ತದೆ. ಲೇಖಕಿಯು ಈ ಗೀತೆಯ ಉಗಮ

19ನೆಯ ಶತಮಾನದಲ್ಲಿ ಕಪ್ಪು ಜನರ ಚರ್ಚ್ ಪ್ರಾರ್ಥನೆಯಲ್ಲಿ ಆಯಿತು ಎಂದು ದಾಖಲಿಸುತ್ತಾರೆ. (ಈ ಲೇಖನವನ್ನು ನಾನು ಓದುವವರೆಗೂ ಇದು ಕಮ್ಯೂನಿಸ್ಟ್ ಚಳವಳಿಗಳಲ್ಲಿ ಹುಟ್ಟಿಕೊಂಡಿತು ಎಂದು ತಿಳಿದಿದ್ದೆ.) ಮುಂದೆ ಇದೇ ಗೀತೆಯ ಹಿಂದಿ ರೂಪಾಂತರ 'ಹಮ್ ಹೋಂಗೆ ಕಾಮಯಾಬ್ ಏಕ್ ದಿನ್' ಸ್ವಾತಂತ್ರ್ಯ ಚಳವಳಿಯೂ ಸೇರಿದಂತೆ ಭಾರತದ ಎಲ್ಲಾ ಶ್ರಮಿಕರ–ಶೋಷಿತರ ಚಳವಳಿಗಳ ಒಂದು ಅವಿಭಾಜ್ಯ ಅಂಗವಾಯಿತು ಎಂಬುದು ಇಂದು ಇತಿಹಾಸ.

ದೇಹಕ್ಕೂ ಮನಸ್ಸಿಗೂ ಗಾಢ ಸಂಬಂಧವಿದೆ ಎಂಬ ತತ್ವವನ್ನು ಆಧರಿಸಿದ ಜನಪದ ವೈದ್ಯವನ್ನು ಕುರಿತ ಎರಡು ಲೇಖನಗಳು ('ಮೂಲನಿವಾಸಿಗಳ ವೈದ್ಯಲೋಕ' ಮತ್ತು 'ಜನಪದ ವೈದ್ಯ'), ವಿಶಿಷ್ಟ ಸಂಗೀತ ಪ್ರಭೇದಗಳನ್ನು ಕುರಿತ 'ಕಂಟ್ರಿ ವೆಸ್ಟರ್ನ್ ಮ್ಯೂಸಿಕ್' ಕುರಿತ ಲೇಖನ (ನಾನು ಅಮೆರಿಕಾದಲ್ಲಿದ್ದಾಗ ನನ್ನದೇ ಹಂಬಲವನ್ನು ಅಭಿವ್ಯಕ್ತಿಸುವ 'Take me home –Country road' ಎಂಬ ಕಂಟ್ರಿ ಮ್ಯೂಸಿಕ್ ಪ್ರಭೇದಕ್ಕೆ ಸೇರಿದ ಅತ್ಯಂತ ಜನಪ್ರಿಯ ಗೀತೆಯನ್ನು ಸದಾ ಗುನುಗುನಿಸುತ್ತಿದ್ದುದು ನೆನಪಿಗೆ ಬರುತ್ತದೆ), ಆಕರ್ಷಕ ಸಾಮೂಹಿಕ ನೃತ್ಯ ಪ್ರಕಾರಗಳು ('ಚೌಕ ನೃತ್ಯ'), ಗಾದೆಗಳು ('ಆಫ್ರಿಕ ಖಂಡದ ಒಂದಿಷ್ಟು ಗಾದೆಗಳು': ಇದರಲ್ಲಿ ಲೇಖಕರು ಸಾಕಷ್ಟು ಗಾದೆಗಳನ್ನು ಕನ್ನಡಕ್ಕೆ ಅನುವಾದಿಸುತ್ತಲೇ ಸಮಾನ ಕನ್ನಡ ಗಾದೆಗಳನ್ನೂ ಅವುಗಳೊಡನೆ ಉದ್ಧರಿಸುತ್ತಾರೆ), ಇತ್ಯಾದಿ ಲೇಖನಗಳು ಲಲಿತ ಕಲೆಗಳಿಗೆ ಭೌಗೋಳಿಕ ಎಲ್ಲೆಗಳಿಲ್ಲ ಎಂಬುದನ್ನು ಸಾಧಾರವಾಗಿ ದಾಖಲಿಸುತ್ತವೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಅಪಾರ ಪರಿಶ್ರಮವಿರುವ ಮೈ. ಶ್ರೀ. ನಟರಾಜ ಅವರ ಲೇಖನ ಸೃಜನಾತ್ಮಕವಾಗಿದೆ.

ಇಷ್ಟು ವಿಷಯ ವೈವಿಧ್ಯವಿರುವ ಈ ಸಂಕಲನದಲ್ಲಿ ಇರಲೇಬೇಕಾಗಿದ್ದ ಒಂದು ಲೇಖನವೆಂದರೆ ಮೊಹಾವೆ ಬುಡಕಟ್ಟಿನ ಜನರ ಮೌಖಿಕ ಮಹಾಕಥನ 'ಮೊಹಾವೆ ಮಹಾಕಥನ'ದ ಬಗ್ಗೆ. ಅದಿಲ್ಲದಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಕಾರಣ, 'ಅಮೆರಿಕನ್ ಜಾನಪದ' ಎಂದಕೂಡಲೇ ನೆನಪಿಗೆ ಬರುವುದು ಈ ಕಥನ. ಶ್ವೇತವರ್ಣೀಯರು ಅಮೆರಿಕಾಕ್ಕೆ ಬರುವ ಮೊದಲು (ಈಗಿನ ಅರಿಝೋನಾ ಪ್ರಾಂತ್ಯದಲ್ಲಿರುವ) ಮೊಹಾವೆ ಬುಡಕಟ್ಟಿನ ಜನರು ತಮ್ಮ ಪವಿತ್ರ ಗ್ರಂಥವೆಂದು ಗೌರವಿಸುತ್ತಿದ್ದುದು ಈ ಕಥನವನ್ನು. ಇದನ್ನು ಮೊದಲಿಗೆ 1902ರಲ್ಲಿ ಸಂಪಾದಿಸಿದವರು ಕ್ಯಾಲಿಫೋರ್ನಿಯಾ ವಿವಿಯ ಜನಾಂಗೀಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಎಂ. ಎಲ್. ಕ್ರೋಬರ್ ಎಂಬ ವಿದ್ವಾಂಸರು; ಕೇವಲ ಮೌಖಿಕ ಪರಂಪರೆಯಲ್ಲಿದ್ದ ಈ ಕಥನವನ್ನು ಕ್ರೋಬರ್ ಎದುರು ಸಂಪೂರ್ಣವಾಗಿ ಹಾಡಿದವರು ಅದೇ ಬುಡಕಟ್ಟಿನ ಇನ್ಯೋ–ಕುಟಾವೆರೆ ಎಂಬ ವೃದ್ಧ; ಅದನ್ನು ಕ್ರೋಬರ್ ದುಭಾಷಿಯ ಮೂಲಕ ಲಿಪಿಗೆ ಇಳಿಸಿದರು. ಅನಂತರ ಕಾರಣಾಂತರಗಳಿಂದ ಅದರ ಪ್ರಕಟಣೆ ತಡವಾಗಿ A Mohave Heroic Epic ಎಂಬ ಹೆಸರಿನಲ್ಲಿ 1951ರಲ್ಲಿ ಪ್ರಕಟವಾಯಿತು. ಇದರ ವ್ಯಾಖ್ಯಾನವನ್ನು ಬ್ರಿಟಿಷ್ ವಿದ್ವಾಂಸ

ಆರ್ಥರ್ ಹ್ಯಾಟೋ The Mohave Heroic Epic of Inya-Kutavere ಎಂಬ ಹೆಸರಿನಲ್ಲಿ 1999ರಲ್ಲಿ ಪ್ರಕಟಿಸಿ, ಅದನ್ನು ಅಂತರರಾಷ್ಟ್ರೀಯ ವಿದ್ವಾಂಸರ ಗಮನಕ್ಕೆ ತಂದರು.

ಈ ಕಾವ್ಯದಲ್ಲಿ ಮೂರು ಮುಖ್ಯ ವಿಭಾಗಗಳಿವೆ: ಸ್ಥಾನಚ್ಯುತಿ ಮತ್ತು ಅಲೆದಾಟ, ಹೋರಾಟ ಮತ್ತು ಪುನಃಪ್ರಾಪ್ತಿ, ಮತ್ತು ರಕ್ಷಣೆ. ಮೊಹಾವೆ ಜನಾಂಗವು ಕೃಷಿಕರಾಗಿದ್ದು, ಅನೇಕ ಕಾರಣಗಳಿಂದ ತಮ್ಮ ಮೂಲ ವಾಸಸ್ಥಳವಾದ ಕಣಿವೆಯನ್ನು ಬಿಡಬೇಕಾಗಿ ಬಂದು ಅಲ್ಲಲ್ಲಿ ಅಲೆದಾಡುತ್ತಾರೆ. ಒಮ್ಮೆ, ಅವರು ಒಂದು ನಿರ್ಜನ ಹಳ್ಳಿಯಲ್ಲಿ ಹಿಪಹಿಪ ಎಂಬ ವ್ಯಕ್ತಿಯನ್ನು ಭೇಟಿಯಾಗುತ್ತಾರೆ. ನಿಧಾನವಾಗಿ ಅವನು ಅಲೆದಾಡುತ್ತಿದ್ದ ಮೊಹಾವೆ ಜನಾಂಗದ ನಾಯಕನಾಗುತ್ತಾನೆ. ಅವನ ನಾಯಕತ್ವದಲ್ಲಿ ಆ ಜನಾಂಗದವರು ಮತ್ತೆ ತಮ್ಮ ಮೂಲ ಕಣಿವೆಗೆ ಬರುತ್ತಾರೆ. ಅದನ್ನು ಆಕ್ರಮಿಸಿಕೊಂಡಿದ್ದ ಇನ್ನೊಂದು ಸಮುದಾಯವನ್ನು ಮೂರು ಭೀಕರ ಯುದ್ಧಗಳಲ್ಲಿ ಸೋಲಿಸಿ, ತಮ್ಮ ಕಣಿವೆಯನ್ನು ಮತ್ತೆ ಪಡೆಯುತ್ತಾರೆ. ಆದರೆ ಆ ಯುದ್ಧದಲ್ಲಿ ಹಿಪಹಿಪ ಕೂಡಾ ಸಾಯುತ್ತಾನೆ. ನೂತನ ನಾಯಕನ ಆಳ್ವಿಕೆಯಲ್ಲಿ ಆ ಕಣಿವೆಯಲ್ಲಿ ಸುಖ-ಶಾಂತಿಗಳು ನೆಲೆಸುತ್ತವೆ. ವಿಪುಲ ಹಾಗೂ ಖಚಿತ ವಿವರಗಳಿಂದ ಈ ಕಾವ್ಯವು ಮೊಹಾವೆ ಜನಾಂಗದ ಚರಿತ್ರೆ, ಜೀವನಕ್ರಮ, ಆಹಾರ ಪದ್ಧತಿ, ಧಾರ್ಮಿಕ ವಿಧಿಗಳು ಹಾಗೂ ನಂಬಿಕೆಗಳು ಇತ್ಯಾದಿಗಳನ್ನು ಅಧಿಕೃತವಾಗಿ ಕಟ್ಟಿಕೊಡುತ್ತದೆ.

ಅಗಾಧ ವಿಷಯವೈವಿಧ್ಯ, ಸರಿ ಸುಮಾರು ಎಲ್ಲಾ ಲೇಖನಗಳಲ್ಲಿಯೂ ಕಂಡು ಬರುವ ಅಮೆರಿಕನ್-ಕರ್ನಾಟಕ ಜಾನಪದ ಪ್ರಕಾರಗಳ ಸಾಮ್ಯತೆ, ಭಿನ್ನ ವೃತ್ತಿಗಳಲ್ಲಿದ್ದೂ ಜಾನಪದ ಕ್ಷೇತ್ರದಲ್ಲಿ ಲೇಖಕರಿಗಿರುವ ಅಸಾಧಾರಣ ಆಸಕ್ತಿ-ಅಧ್ಯಯನ - ಇವೆಲ್ಲಾ ಕಾರಣಗಳಿಗಾಗಿ ಲೇಖಕರಿಗೆ ಹಾಗೂ ಸಂಪಾದಕರಾದ ಮೈ. ಶ್ರೀ. ನಟರಾಜ ಮತ್ತು ಜ್ಯೋತಿ ವೆಂಕಟಸುಬ್ರಹ್ಮಣ್ಯ ಅವರಿಗೆ, ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ನಾಗ ಐತಾಳ ಮತ್ತು ಇತರ ಸದಸ್ಯರಿಗೆ ನನ್ನ ಹಾರ್ದಿಕ (ಹಾಗೂ ತುಸು ಅಸೂಯೆಯ) ಅಭಿನಂದನೆಗಳು.

ಸಿ. ಎನ್. ರಾಮಚಂದ್ರನ್

ಅನುಕ್ರಮ

* ನಮ್ಮೊಳಗಿದೆ ಕರ್ನಾಟಕ 17
(ಕಸಾರಂ ಆಡಳಿತ ಮಂಡಲಿಯ ಅಧ್ಯಕ್ಷರ ಸಂದೇಶ)

* ಕನ್ನಡ ಕಂಗಳಿಗೆ ಕಂಡ ಅಮೆರಿಕನ್ ಜಾನಪದ 19
(ಸಂಪಾದಕೀಯ)

* ಕನ್ನಡ ಜಾನಪದ – ಡಾ. ಕೃಷ್ಣಮೂರ್ತಿ ಹನೂರು 25

ಲೇಖನಗಳು

1. ಅಮೆರಿಕನ್ ಮೂಲನಿವಾಸಿಗಳ ಪರಂಪರೆಯ ಒಂದು ಅವಲೋಕನ 57
– ಮೂಲ ಇಂಗ್ಲಿಷ್: **ಗುಂಡೂ ಶಂಕರ್**
– ಕನ್ನಡ ಭಾವಾನುವಾದ: **ಶ್ರೀಕಾಂತ ಬಾಬು**

2. ನಯಾಗರಾ ಜಲಪಾತದ (Maid of the mist) ಮೇಲಿನ ಒಂದು ಐತಿಹ್ಯ ಕಥೆ 67
– **ಆಹಿತಾನಲ**

3. ಐರೋಪ್ಯ ವಲಸೆಗಾರರ ಬರ್ಬರತೆಗೀಡಾದ ಅಮೆರಿಕದ ಮೂಲ ನಿವಾಸಿಗಳ ನೈಜ ಇತಿಹಾಸ 74
ಮೂಲ ಇಂಗ್ಲಿಷ್: **ಮಾಧವಿ ರಾಜಗೋಪಾಲ್ ರಿಜ಼ಿಯೋ**
ಅನುವಾದ: **ಶ್ರೀಕಾಂತ ಬಾಬು**

4. ಜೋಳದ ಪೂರಿ ಜೇನುತುಪ್ಪ 80
– **ಮೈ. ಶ್ರೀ. ನಟರಾಜ**

5. ಕೆನಡಾದ ದೇಶೀ ಕಲೆಗಳು ಮತ್ತು ಭಾರತೀಯ ಸಂವೇದನೆಗಳು 98
– **ರಾಗು ಕಟ್ಟಿನಕೆರೆ**

6. ಮೂಲನಿವಾಸಿಗಳ ಮೇಲೆ ಯುರೋಪಿನ ವಲಸೆಗಾರರ ಮತ್ತು ಯಾತ್ರಿಕರ ಪ್ರಭಾವ: ಸಾಹಿತ್ಯದಲ್ಲಿ ಪ್ರತಿಧ್ವನಿ 111
ಮೂಲ ಇಂಗ್ಲಿಷ್: **ಗುಂಡೂ ಶಂಕರ್**. ಕನ್ನಡಕ್ಕೆ: **ಶ್ರೀಕಾಂತ ಬಾಬು**

7. ಕೆನಡ ದೇಶದ ಮೂಲ ನಿವಾಸಿಗಳು 124
– ಸಿಮ್ ಮೂರ್ತಿ

8. ಹಾರಿ ಹೋದವರು 132
–ಶಶಿಕಲಾ ಚಂದ್ರಶೇಖರ್

9. ಎಸ್ಕಿಮೊ ಅಲ್ಲ! ಇವರು ಇನ್ಯುಯಿಟ್ಸ್ 138
– ತ್ರಿವೇಣಿ ಶ್ರೀನಿವಾಸರಾವ್

10. ಅಮೇರಿಕಾ – ಭಾರತ ಜಾನಪದದ ಸಾಮ್ಯತೆ 151
– ಅನಿಲ್ ದೇಶಪಾಂಡೆ

11. ಹೋರಾಟಕ್ಕೆ ದನಿಯಾದ ಜನಪದ ಗೀತೆ 158
– ನಳಿನಿ ಮೈಯ

12. ಉಸಿರುಗಟ್ಟಿದವರ ಸುಡುಸುಯ್ಲು ಕಥೆ 169
– ವೈಶಾಲಿ ಹೆಗಡೆ

13. ಅಮೇರಿಕನ್ ಇಂಡಿಯನ್ ಕಥೆ – ವಿಚಾರಣೆ 182
– ವಿಶ್ವನಾಥ್ ಹುಲಿಕಲ್

14. ಆಮಿಶ್ ಸಮುದಾಯದ ಇತಿಹಾಸ ಮತ್ತು ಪರಂಪರೆ 188
– ಉಮಾ ವೆಂಕಟೇಶ್

15. ಬ್ರೆಜಿಲ್: ಇತಿಹಾಸ, ಸಂಸ್ಕೃತಿ, ಮತ್ತು ಜಾನಪದ ಸೊಗಡು 200
– ತಳಿ ನಂಜಪ್ಪ ರಾಜಶೇಖರ್

16. ಪ್ಲಾಂಟೇಷನ್ ಗುಲಾಮರ ಜಾನಪದ 211
– ಮೀರಾ ಪಿ. ಆರ್

17. ಡಿಯಾನಳ ಸಂಕಲ್ಪ 227
– ಉಮಾ ವೆಂಕಟೇಶ್

18. ಜೀವನ, ಮರಣ ಮತ್ತು ಮರಣೋತ್ತರ ಜೀವನ:
ಅಮೆರಿಕೆಯ ಮೂಲನಿವಾಸಿಗಳ ನಂಬಿಕೆ ಮತ್ತು ಸಂಪ್ರದಾಯಗಳು 244
– ಶಂಕರ್ ಹೆಗಡೆ

19. ಕಡಲಾನೆಗಳ ಜೊತೆ ಬೆಳೆದ ಬಾಲಕ 259
– ಪ್ರವೀಣ್ ಶಿವಶಂಕರ್

20. 'ವೂಡೂ' ಎಂಬ ಜಾನಪದ ಧಾರ್ಮಿಕ ಸಂಸ್ಕೃತಿ 276
– ಸರಿತಾ ನವಲಿ

21. ಅಮೇರಿಕೆಯ ಜಾನಪದ ಕಥೆಗಳಲ್ಲಿ ಭೂತ–ಪ್ರೇತಗಳು 295
– ಶಂಕರ ಹೆಗಡೆ

22. ಆಫ್ರಿಕ ಖಂಡದ ಒಂದಿಷ್ಟು ಗಾದೆಗಳು 310
– ಟಿ. ಎನ್. ಕೃಷ್ಣರಾಜು

23. ನಾಲ್ಕು ಜಾನಪದ ಕಥೆಗಳು 321
– ಕಾವ್ಯಾ ಕಡಮೆ

24. ಬೇ ಏರಿಯಾದ ಓಹ್ಲೋನೀಯರು: ಒಂದು ಪಕ್ಷಿನೋಟ 330
– ಆನಂದ್ ಸಿಂಹ

25. ಮೂಲನಿವಾಸಿಗಳ ವೈದ್ಯ ಲೋಕ – ಒಂದು ಕೌತುಕಮಯ ಜಗತ್ತು. 342
– ಜ್ಯೋತಿ ವೆಂಕಟಸುಬ್ರಹ್ಮಣ್ಯ

26. ಮೌಂಟ್ ಶಾಸ್ತಾ – ದಂತ ಕಥೆಗಳ ಬೆಳ್ಳಿಶಿಖರ 362
– ಪ್ರಕಾಶ್ ನಾಯಕ್

27. ಮಿಯಾಮ್ಮೆ ಸಪ್ತ ಸಹೋದರಿಯರು 370
– ಸಿಡ್ನಿ ಶ್ರೀನಿವಾಸ್

28. ಇಲಿನಿ ಒಕ್ಕೂಟ 379
– ಅನುರಾಧ ಅರುಣ್

29. ಜನಪದ ವೈದ್ಯ – ಕೆಲವು ಸೌತ್ ಇಂಡಿಯನ್ ಮತ್ತು
ರೆಡ್ ಇಂಡಿಯನ್ ಮನೆಮದ್ದುಗಳು 389
– ಜ್ಯೋತಿ ಮಹಾದೇವ್

30. ಜಾಣರ ಜಾಣ – ಕಯೋಟಿ ಅಣ್ಣ 409
– ಪೂರ್ಣಿಮಾ ಕಶ್ಯಪ್

31. ಅಮೆರಿಕದಲ್ಲಿ ಕಂಟ್ರಿ ವೆಸ್ಟರ್ನ್ ಮ್ಯೂಸಿಕ್ 420
– ವತ್ಸ ಕುಮಾರ್

32. ಕರ್ನಾಟಕ ಮತ್ತು ಅಮೆರಿಕೆಯ ಶ್ರಮಿಕರ ಜನಪದ ಹಾಡುಗಳು:
ತೌಲನಿಕ ಅಧ್ಯಯನ 431
– ಅಹೀಶ ಭಾರದ್ವಾಜ್

33. ನನ್ನ ತಲೆಯನ್ನು ಹಿಂತಿರುಗಿಸು 452
– ನಿವೇದಿತಾ ಕಶ್ಯಪ್

34. ಮಾರ್ಮನ್ನರ ಜಾನಪದ ಮತ್ತು ಜೀವನ ಶೈಲಿ 457
– ಮಂಗಳಾ ಕುಮಾರ್

35. ಚೌಕ ನೃತ್ಯ 465
– ಹೇಮಾ ಶ್ರೀಕಂಠ

ಅನುಬಂಧ

1. ಸಹ ಸ್ಪಂದನ – ಬಹುಮುಖಿ ಸಂಸ್ಕೃತಿಯ ಒಂದು ಪಕ್ಷಿನೋಟ 472
– ಗುರುಪ್ರಸಾದ್ ಕಾಗಿನೆಲೆ

2. ನಮ್ಮ ಲೇಖಕರು 482

3. ಕನ್ನಡ ಸಾಹಿತ್ಯ ರಂಗದ ಪ್ರಕಟಣೆಗಳು 504

4. ನಮ್ಮ ಪ್ರಕಟಣೆಯ ಬಗ್ಗೆ ಅಭಿಪ್ರಾಯಗಳು 510



ನಮ್ಮೊಳಗಿದೆ ಕರ್ನಾಟಕ

ಕಸಾರಂ ಆಡಳಿತ ಮಂಡಲಿಯ ಅಧ್ಯಕ್ಷರ ಸಂದೇಶ

ಇದೀಗ 'ಕನ್ನಡ ಸಾಹಿತ್ಯ ರಂಗ' (ಕಸಾರಂ) ತನ್ನ ಹತ್ತನೆಯ ವಸಂತ ಸಾಹಿತ್ಯೋತ್ಸವವನ್ನು ನಡೆಸಲು ಸಿದ್ಧವಾಗಿದೆ. ಈ ಸಂಸ್ಥೆಯ ಸ್ಥಾಪಕ ಸದಸ್ಯರಲ್ಲಿ ಒಬ್ಬನಾದ ನಾನು 'ಕಸಾರಂ' ಶುರುವಿನಲ್ಲಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟು ಮನೆಗಳಲ್ಲಿ ಮೀಟಿಂಗುಗಳನ್ನು ಮಾಡಿದ ಕಾಲದಿಂದ ಹಿಡಿದು ಈಗ ದಿಟ್ಟ ದಿಟ್ಟ ಹೆಜ್ಜೆಗಳನ್ನಿಟ್ಟು ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ಛಾಪು ಮೂಡಿಸುತ್ತಿರುವ ಸುದೀರ್ಘ ಪಯಣವನ್ನು ನೋಡಿದ್ದೇನೆ. ನಡೆದು ಬಂದ ಹಾದಿಯನ್ನು ಅವಲೋಕಿಸುವಾಗ ಒಂದು ಬಗೆಯ ಧನ್ಯತೆ ಮತ್ತು ತೃಪ್ತಿಯ ಭಾವ ಮನಸ್ಸನ್ನು ಆವರಿಸುತ್ತದೆ. ಸಾಹಿತ್ಯ ಸಮ್ಮೇಳನಗಳೇ ಅಲ್ಲದೆ 2006ನೆಯ ಇಸವಿಯಲ್ಲಿ ಅನೇಕ ನಗರಗಳಲ್ಲಿ ಕನ್ನಡ ಸಾಹಿತ್ಯದ ಇತಿಹಾಸದ ಬಗ್ಗೆ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಂದ ಕಮ್ಮಟ, ತಿಂಗಳಿಗೊಮ್ಮೆ ಬುಕ್ ಕ್ಲಬ್ ಮೀಟಿಂಗ್, ಕಳೆದ ಎರಡು ವರ್ಷಗಳಲ್ಲಿ ಕರೋನಾ ಶುರುವಾಗಿ ಜನ ಕಾಲು ಕಟ್ಟಿ ಮನೆಯಲ್ಲಿ ಕೂರಿಸಿದಂತೆ ಇದ್ದಾಗ ಜಾಲಸಂಪರ್ಕದ ಮೂಲಕ 'ವರ್ಚುಯಲ್' ಕಾರ್ಯಕ್ರಮಗಳು... ಹೀಗೆ ಹೊಸ ಹೊಸ ರೂಪಗಳಲ್ಲಿ ಕಸಾರಂ ತನ್ನ ಕೈಂಕರ್ಯವನ್ನು ಮುಂದುವರಿಸುತ್ತಿದೆ.

'ಕಸಾರಂ' ಪ್ರಕಟಿಸಿದ ಮೊದಲ ಪುಸ್ತಕ 'ಕುವೆಂಪು ಸಾಹಿತ್ಯ ಸಮೀಕ್ಷೆ'ಯ ಸಂಪಾದಕನಾಗಿ, ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷನಾಗಿ, ಈಗ ಕೆಲವು ವರ್ಷಗಳಿಂದ ಆಡಳಿತ ಮಂಡಳಿಯ ಮುಖ್ಯಸ್ಥನಾಗಿ ನನ್ನ ಅಳಿಲುಸೇವೆ ಈ ಸಂಸ್ಥೆಗೆ ಸಂದಿದೆ ಎಂದು ಯೋಚಿಸುವಾಗ ಒಂದು ಬಗೆಯ ಸಾರ್ಥಕತೆ ಮತ್ತು ಸಾಫಲ್ಯದ ಭಾವದಲ್ಲಿ ಮನಸ್ಸು ಮೀಯುತ್ತದೆ. ಈ ಅವಕಾಶಗಳನ್ನು ನೀಡಿದ ಕನ್ನಡ ಬಾಂಧವರಿಗೆ, ಮುಖ್ಯವಾಗಿ ಮಿತ್ರ ದಿ. ರಾಜಗೋಪಾಲ್ ಅವರಿಗೆ ಹೇಗೆ ತಾನೆ ಧನ್ಯವಾದಗಳನ್ನು ಹೇಳಬಹುದು? ಒಂದು ಮಾತಿನಲ್ಲಿ ಮುಗಿಯುವ ಋಣವೆ ಇದು!

ಈ ಗ್ರಂಥದ ಸಂಪಾದಕರಾಗಿ, ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ, ಮೈ. ಶ್ರೀ. ನಟರಾಜ ಅವರು ವಹಿಸಿದ ಶ್ರಮಕ್ಕಾಗಿ, ಅವರ ದಕ್ಷತೆಗಾಗಿ ನಾನು ಆಭಾರಿ. ಗೆಳೆಯರಾಗಿ, ಸಾಹಿತ್ಯ ಪ್ರೇಮಿಗಳಾಗಿ ನಟರಾಜ ಅವರು ಮತ್ತು ನಾನು ಒಟ್ಟೊಟ್ಟಿಗೆ ಹೆಜ್ಜೆ ಹಾಕಿದವರು. ಯಾವ ಬಗೆಯ ಘರ್ಷಣೆಗಳೇ ಇಲ್ಲದೆ ಸಹೃದಯಿ ಮನಸ್ಸುಗಳು ಪ್ರೀತಿಯಿಂದ ಒಂದಾಗಿ ಕೈಗೊಂಡ ಕಾಯಕ ಇದು. ಈ ಎಲ್ಲ ವರ್ಷಗಳಲ್ಲಿ ನನ್ನ ಜೊತೆ ಹೆಗಲೆಣೆಯಾಗಿ ದುಡಿದ ಆಡಳಿತ ಮಂಡಳಿಯ ಎಲ್ಲ ಸದಸ್ಯರಿಗೂ ನನ್ನ ಹೃತ್ಪೂರ್ವಕ ನಮನ. ಬಾಳಿನುದ್ದಕ್ಕೂ ಹಿನ್ನೆಲೆಯಲ್ಲಿ ನಿಂತು ಬೆಂಬಲ ನೀಡಿದ ದಿವ್ಯ ಶಕ್ತಿ ನನ್ನಾಕೆ ಲಕ್ಷ್ಮಿ. ನನ್ನ ಎಲ್ಲ ಕನ್ನಡಪರ ಕೆಲಸಗಳಲ್ಲೂ ನಗುನಗುತ್ತಾ ಜೊತೆಗೂಡಿದವಳು. ಪ್ರಭುಶಂಕರ, ಯು. ಆರ್. ಅನಂತಮೂರ್ತಿ, ಎನ್. ಎಸ್. ಎಲ್. ಭಟ್ಟರು, ಜಿ. ಎಸ್. ಶಿವರುದ್ರಪ್ಪ, ಡಿ. ಎಲ್. ನಾಗರಾಜ, ಲಕ್ಷ್ಮೀಶ ತೋಳ್ಪಾಡಿ ಮುಂತಾದವರ ಒಡನಾಟವನ್ನು ನಾನೆಷ್ಟು ಮನದುಂಬಿ ಸವಿದಿದ್ದೆನೋ ಅಷ್ಟೇ ತುಂಬು ಹೃದಯದಿಂದ ಅವರಿಗೆ ಆತಿಥ್ಯ ನೀಡುವ ಅವಕಾಶವನ್ನು ಆನಂದಿಸಿದವಳು ನನ್ನ ಲಕ್ಷ್ಮಿ. ಅವಳಿಗೆ ಧನ್ಯವಾದ ಸಲ್ಲಿಸಿ ಕಳಚಿಕೊಳ್ಳಬಹುದೆ!

ಈ ಸಂದರ್ಭದಲ್ಲಿ, ಅಮೆರಿಕನ್ನಡಿಗರ ಬಗ್ಗೆ ಅತ್ಯಂತ ಪ್ರೀತ್ಯಾದರಗಳನ್ನು ಹೊಂದಿದ್ದ ನಮ್ಮೆಲ್ಲರ ನೆಚ್ಚಿನ ಕವಿ ಜಿ. ಎಚ್. ಶಿವರುದ್ರಪ್ಪ ಅವರು ಅನಿವಾಸಿ ಕನ್ನಡಿಗರ ಕನ್ನಡತನದ ಬಗ್ಗೆ ಬರೆದ ಕವನದ ಸಾಲುಗಳು ನೆನಪಾಗುತ್ತಿವೆ...

ಕಟ್ಟಿಕೊಂಡರೂ ಬಿಡುವಿಲ್ಲದ ಚಕ್ರ ಚಲನೆಗಳ ಜೊತೆಗೆ
ಇಲ್ಲೂ ಇದೆ ತುಡಿಯುವ ಎದೆ ಕನ್ನಡ ನಾಡಿಗೆ ನುಡಿಗೆ
ನಮ್ಮೊಳಗಿದೆ ಕರ್ನಾಟಕ ಉಸಿರಿನ ಉಸಿರಾಗಿ
ಕವಿಗಳ, ಸಂತರ, ನದಿಗಳ ಸಂಗೀತದ ಶ್ರುತಿಯಾಗಿ
ಗುಡಿ ಗೋಪುರಗಳ ಉಜ್ವಲ ಸ್ಮೃತಿಯಾಗಿ
ನಮ್ಮೊಳಗಿದೆ ಕರ್ನಾಟಕ ಉಸಿರಿನ ಉಸಿರಾಗಿ

ತಾಯ್ನಾಡಿನಿಂದ ಸಾವಿರಾರು ಮೈಲಿ ದೂರ ಬಂದರೂ, ಅಮೆರಿಕನ್ ಪ್ರಜೆಗಳೇ ಆದರೂ ಸಹ ನಾವು ಎಂದೆಂದೂ ಕನ್ನಡಿಗರೇ. ನಮ್ಮೊಳಗೆ ಕರ್ನಾಟಕವೆಂದೂ ಇದ್ದೇ ಇದೆ. ಪ್ರೀತಿಯಿಂದ ಕನ್ನಡಿಗರಿಗೆ ಉಣಬಡಿಸುತ್ತಿದ್ದೇವೆ ಅಮೆರಿಕನ್ ರುಚಿಯ ಖಾದ್ಯವಾದ ಈ ಗ್ರಂಥ– 'ಅಮೆರಿಕನ್ ಜಾನಪದ'ವನ್ನು ದಯವಿಟ್ಟು ಸ್ವೀಕರಿಸಿ. ಹತ್ತನೆಯ ಕಸಾರಂ ವಸಂತ ಸಾಹಿತ್ಯೋತ್ಸವದಲ್ಲಿ ಭಾಗವಹಿಸಲು ಬಂದಿರುವ ತಮಗೆಲ್ಲಾ ಹಾರ್ದಿಕ ಸ್ವಾಗತವನ್ನು ಈ ಮೂಲಕ ಕೋರಬಯಸುತ್ತೇನೆ.

ನಾಗ ಐತಾಳ



ಸಂಪಾದಕೀಯ

ಕನ್ನಡ ಕಂಗಳಿಗೆ ಕಂಡ ಅಮೆರಿಕನ್ ಜಾನಪದ

ಕನ್ನಡ ಓದುಗರಿಗೆ ಅಮೆರಿಕದ 'ಕನ್ನಡ ಸಾಹಿತ್ಯ ರಂಗ'ದ (ಕಸಾರಂ) ಇನ್ನೊಂದು ಕೊಡುಗೆ, ಇದೋ ತಮ್ಮ ಮುಂದೆ ಇಡುತ್ತಿದ್ದೇವೆ, ಸ್ವೀಕರಿಸಿ! ಕೊರೋನ-ಕೋವಿಡ್ ಮಹಾಮಾರಿಯ ಕ್ರೂರ ಆಘಾತದ ನಡುವೆ ಅಮೆರಿಕದ ಕನ್ನಡ ಬರಹಗಾರರು ಗಣಕಗಳ ಮುಂದೆ ಕುಳಿತು ಜಾಲತಾಣಗಳಿಗೆ ಭೇಟಿ ಕೊಟ್ಟು ತಮ್ಮ ಕೈಗಳನ್ನು 'ಇಲಿ'ಯ ಮೇಲಾಡಿಸುತ್ತ ಸಂಶೋಧನೆ ಮಾಡಿ, ಕೀಲಿಮಣೆಯನ್ನು ಕುಟ್ಟುತ್ತ ಹೊಸದೊಂದು ವಿಷಯದ ಬಗ್ಗೆ ಚಿಂತಿಸಿದ ಫಲವಾಗಿ, ನಾವು ಮತ್ತೊಂದು ಗ್ರಂಥವನ್ನು ಲೋಕಾರ್ಪಣೆ ಮಾಡುವ ಹವಣಿಕೆಯಲ್ಲಿದ್ದೇವೆ. ಮಹಾಮಾರಿಯ ಕಾರಣದಿಂದ ಒಂದು ವರ್ಷ ಮುಂದೂಡಲ್ಪಟ್ಟರೂ ರಂಗದ ಹತ್ತನೆಯ ವಸಂತ ಸಾಹಿತ್ಯೋತ್ಸವದ ಸುಸಂದರ್ಭ ಬಂದು ಆಶಾವಾದವನ್ನು ತಂದಿದೆ!

ಕನ್ನಡದಲ್ಲಿ ಸಣ್ಣಕಥೆ, ಹಾಸ್ಯ, ಕಾದಂಬರಿ, ಪ್ರಬಂಧ, ವಲಸೆಗಾರರ ಬವಣೆ/ ಪರದೇಶದ ಬದುಕು/ಅನುಭವ, ಅನುವಾದ ಸಾಹಿತ್ಯ, ಭಕ್ತಿ ಸಾಹಿತ್ಯ, ಬದಲಾವಣೆ, ಮುಂತಾದ ವಸ್ತುಗಳನ್ನೊಳಗೊಂಡ ಹಲವು ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ ಸಾರ್ಥಕ ಸಂತೋಷ ನಮ್ಮದು. ಇಷ್ಟೊಂದು ವಸ್ತುವೈವಿಧ್ಯಗಳ ಚಿಂತನ-ಮಂಥನದ ನಂತರ, ಕಸಾರಂ ಪ್ರಕಟಣೆಗಳಿಗೆ ಮೂಲವಸ್ತುವನ್ನು ಹುಡುಕುವುದು ಸಾಹಸದ ಕೆಲಸವೇ ಆಗಿದೆ. ಕುವೆಂಪು ಸಾಹಿತ್ಯ ಸಮೀಕ್ಷೆಯಿಂದ ಪ್ರಾರಂಭವಾದ ನಮ್ಮ ಪ್ರಕಟಣೆಗಳಲ್ಲಿ ಒಂಬತ್ತು ಕೃತಿಗಳು ಲೋಕಾರ್ಪಣೆಗೊಂಡಿವೆ. ಮುಖ್ಯ ಅತಿಥಿಗಳ ಭಾಷಣದ ಸಂಗ್ರಹವೊಂದನ್ನೂ ಸೇರಿಸಿದರೆ ಒಟ್ಟು ಹತ್ತು ಕೃತಿಗಳು. ಆದರೂ 'ಕಾವ್ಯ' ಮತ್ತು 'ನಾಟಕ'ವನ್ನು ಹಲವು ಕಾರಣಗಳಿಂದ ನಾವಿನ್ನೂ ಮೂಲವಸ್ತುವನ್ನಾಗಿ ಆಯ್ದುಕೊಂಡಿಲ್ಲ. ನಮ್ಮ ಹತ್ತನೆಯ ವಸಂತ ಸಾಹಿತ್ಯೋತ್ಸವದ ಗ್ರಂಥಕ್ಕೆ ಮತ್ತು ಚರ್ಚೆಗೆ ಮೂಲವಸ್ತುವನ್ನು ಹುಡುಕುತ್ತ, 'ಜನಪದ' ಏಕಾಗಬಾರದು? ಎಂಬ ಪ್ರಶ್ನೆ ಎದ್ದಿತು. ಕನ್ನಡ ಜನಪದದ ಬಗ್ಗೆ ದೀರ್ಘ ಅಧ್ಯಯನ ಮತ್ತು ಕ್ಷೇತ್ರಕಾರ್ಯ ಮಾಡಿರುವ ಹಲವು ಪಂಡಿತರ ಗ್ರಂಥಗಳು ಲಭ್ಯವಿರುವಾಗ

ಅಮೆರಿಕದಲ್ಲಿದ್ದುಗೊಂಡು ಆ ವಸ್ತುವಿನ ಬಗ್ಗೆ ಬರೆಯಲಿಚ್ಛಿಸುವವರು ಮತ್ತು ಬರೆಯಬಲ್ಲವರು ಎಷ್ಟು ಜನರಿದ್ದಾರು? ಎಂಬ ಪ್ರಶ್ನೆಯೂ ಎದ್ದಿತು. ಆಗ, ಕನ್ನಡದ ಜನಪದ ಸಾಹಿತ್ಯದ ಬದಲು ಅಮೆರಿಕದ ಜಾನಪದದ ಬಗ್ಗೆ ಬರೆದರೆ ಕನ್ನಡಕ್ಕೆ ಹೊಸದೇನಾದರೂ ಕೊಡುಗೆ ಆದೀತೇನೋ ಎಂಬ ವಿಷಯವೂ ಹೊಳೆದು ನಾವು ಉತ್ತೇಜಿತರಾದೆವು. ನಾವುಗಳು ಯಾರೂ 'ಅಮೆರಿಕನ್ ಫ್ಲೋಕ್‌ಲೋರ್' ಕುರಿತು ಅಧ್ಯಯನ ಮಾಡಿದವರಲ್ಲದಿದ್ದರೂ ಒಂದಿಷ್ಟು ಓದಿ ಅಮೆರಿಕದ ಜನಪದದಲ್ಲಿ ಪ್ರಚಲಿತವಿರುವ ಕಥೆ, ಕವಿತೆ ಮುಂತಾದವುಗಳನ್ನು ಶೇಖರಿಸಿ, ಅನುವಾದಿಸಿ ಅಥವಾ ನಮ್ಮದೇ ಮಾತುಗಳಲ್ಲಿ ಪುನಃ ರಚಿಸಿ ಬರೆದರೂ ಕನ್ನಡಕ್ಕೆ ಅವು ಹೊಸತೇ ಆಗುವುವು ಎಂಬ ಮಾತಂತೂ ಖಚಿತವಾಯಿತು.

ಅಮೆರಿಕ ಒಂದು ಬಹು ವಿಸ್ತಾರವಾದ ದೇಶ; ಸಹಸ್ರಾರು ವರ್ಷಗಳಿಂದ ಮೂಲನಿವಾಸಿಗಳ ಬೀಡಾಗಿದ್ದ ದೇಶ. ಐರೋಪ್ಯ ವಲಸೆಗಾರರು ಇಲ್ಲಿಗೆ ಬರುವ ಮುನ್ನ ಮೂಲನಿವಾಸಿಗಳ ನೂರಾರು ಬುಡಕಟ್ಟುಗಳು ಸುಮಾರು 3,000 ಮೈಲಿ ಉದ್ದ, 3,000 ಅಗಲದ ಅಮೆರಿಕ ಖಂಡದಲ್ಲಿ ಹರಡಿ ಹಂಚಿಹೋಗಿದ್ದರು. ತಮ್ಮದೇ ಸಂಸ್ಕೃತಿ ಮತ್ತು ಭಾಷೆಗಳನ್ನೂ ಜೀವನ ಪದ್ಧತಿಯನ್ನೂ ಬೆಳೆಸಿಕೊಂಡಿದ್ದರು. ಅವರ ಚರಿತ್ರೆ ಏನು, ಅವರು ಹೇಗಿದ್ದರು, ಈಗ ಹೇಗಾಗಿದ್ದಾರೆ ಮುಂತಾದ ವಿಷಯಗಳ ಕುರಿತು ನಂತರ ಬಂದ 'ಹೊರಗಿವರು' ಬರೆದಿಟ್ಟಿದ್ದಾರೆ. ಹಾಗೆ ಬಂದವರು ಮೂಲನಿವಾಸಿಗಳನ್ನು ಅವರ ತವರಿನಿಂದ ಹೊರದಬ್ಬಿ ಇಡೀ ಖಂಡವನ್ನು ತಮ್ಮದಾಗಿಸಿಕೊಂಡು ಅವರನ್ನೇ ಪರದೇಸಿಗಳನ್ನಾಗಿಸಿದ್ದು ಇದೀಗ ಇತಿಹಾಸ. ಈ ಪ್ರಕ್ರಿಯೆ ಇತರ ಎಲ್ಲಾ ಖಂಡಗಳಲ್ಲೂ ಒಂದಿಲ್ಲ ಒಂದು ರೀತಿ ನಡೆದೇ ಇದೆ. ಹೀಗೆ ಹೊರಗಿಂದ ಬಂದು ನೆಲೆಸಿ, ಮೂಲನಿವಾಸಿಗಳ ಬಗ್ಗೆ ಬರೆದ ಚರಿತ್ರೆಯ ಸತ್ಯಾಸತ್ಯತೆಯನ್ನು ಚರ್ಚಿಸುವ ಗೊಡವೆಗೆ ನಾವು ಕೈಹಾಕಬೇಕೇ? ಅಥವಾ ನಮ್ಮ ಉದ್ದೇಶವನ್ನು 'ಏನನ್ನು ಇಂದಿನ ಸಾಧಾರಣ ಪ್ರಜೆಗಳು ಅಮೆರಿಕದ ಜನಪದವೆಂದು ನಂಬಿದ್ದಾರೋ' ಅದನ್ನು ಕನ್ನಡದಲ್ಲಿ ಹೇಳಲು ಸೀಮಿತಗೊಳಿಸಿಕೊಂಡರೆ ಸಾಲದೇ? ಈ ಎಲ್ಲ ಪ್ರಶ್ನೆಗಳ ನಡುವೆಯೂ ನಾವು ಕಾಲಹರಣ ಮಾಡದೇ ಮುಂದುವರೆಯುವುದು ಅಗತ್ಯವಾಗಿತ್ತು.

ಲೇಖನಗಳನ್ನು ಬರೆದುಕೊಡುವವರಿಗೆ, ಗೊಂದಲ ಉಂಟಾಗದಿರುವಂತೆ ಕೆಲವು ಇತಿ-ಮಿತಿಗಳನ್ನು ಹಾಕಿಕೊಡದಿದ್ದರೆ ಒಟ್ಟಾರೆ ನಮ್ಮ ಗ್ರಂಥಕ್ಕೆ ಒಂದು ರೂಪ ಕೊಡುವುದು ಕಷ್ಟವೆಂದರಿತು, ಆಕರಗಳು ಎಲ್ಲಿ ಸಿಗಬಹುದು, ಬರಹಗಳು ಯಾವ ಚೌಕಟ್ಟಿನಲ್ಲಿರಬೇಕು, ಮುಂತಾಗಿ ಆಸಕ್ತ ಬರಹಗಾರರಿಗೆ ವಿವರಿಸಿದರೂ ನಮ್ಮ ಮುಂದಿರುವ ಕೆಲಸ ಅಷ್ಟೇನೂ ಸುಲಭದ್ದಲ್ಲವೆಂದು ಮನದಟ್ಟಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಆದರೇನು, ತಾಯಿ, ತಾಯ್ನುಡಿ ಮತ್ತು ತಾಯ್ನಾಡುಗಳನ್ನು ತೊರೆದು ಬಂದು, ಪರಕೀಯರ ದೇಶವೊಂದರಲ್ಲಿ ತಳವೂರಿ ಜಯಸಾಧಿಸಿ ಸಾಹಸಿಗಳೆನಿಸಿದ ಅಮೆರಿಕನ್ನಡಿಗರಿಗೆ, ತಮ್ಮ ನೆಲೆಯನ್ನು ಕಳೆದುಕೊಂಡ ಮೂಲನಿವಾಸಿಗಳ ಜೀವನದ ಕಷ್ಟಕಾರ್ಪಣ್ಯಗಳು, ಅವರ ಹಾಡುಹಸೆಗಳು,

ನೋವು-ನಲಿವುಗಳು, ಸೋಲು-ಗೆಲವುಗಳ ಪರಿಚಯಮಾಡಿಕೊಳ್ಳುವುದು ಕಷ್ಟವೇ? ನಾವು ಹೆಚ್ಚೇನೂ ನಿರ್ದೇಶನ ಕೊಡಲು ಹೋಗಲೇ ಇಲ್ಲ. 'ನೀವಿರುವ ಪ್ರಾಂತ್ಯದ ಮೂಲನಿವಾಸಿಗಳ ಕುರಿತು ನಿಮ್ಮೂರಿನ ಗ್ರಂಥಾಲಯದಲ್ಲಿ ಸಿಗುವ ಆಕರಗಳನ್ನು ಓದಿ, ಅವರ ಬಗ್ಗೆ ಒಂದಿಷ್ಟು ಮಾಹಿತಿ ಸಂಗ್ರಹಿಸಿ, ಅವರಲ್ಲಿ ಪ್ರಚಲಿತವಾಗಿರುವ ಕಥೆಗಳು, ನಂಬಿಕೆಗಳು, ಆಚಾರ, ವಿಚಾರ ಮುಂತಾದ ವಿಷಯಗಳ ಬಗ್ಗೆ ನಿಮ್ಮದೇ ಮಾತುಗಳಲ್ಲಿ ಬರೆದುಕೊಡಿ. ನೀವೇ ಊಹಿಸಿದ, ಭಾವಿಸಿದ ಕಟ್ಟುಕಥೆಯಾದರೂ ಸರಿ, ಜನಪದ ಸಾಹಿತ್ಯದಡಿಯಲ್ಲಿ ಬರಬಹುದಾದ ಯಾವುದೇ ವಿಷಯಗಳಾದರೂ ಸರಿ' ಮುಂತಾಗಿ ಸಲಹೆಗಳನ್ನು ಕೊಟ್ಟು ಲೇಖಕರನ್ನು ಹುರಿದುಂಬಿಸಿದೆವು. ವಿಷಯಗಳು ಪುನರಾವೃತ್ತಿಗೊಳ್ಳ-ದಂತೆ ಮಾಡಲು, ಬರಹಗಾರರಿಂದ ತಮ್ಮ ಲೇಖನದ ಶೀರ್ಷಿಕೆ ಮತ್ತು ಸಾರಾಂಶವನ್ನು ಮೊದಲು ತರಿಸಿಕೊಂಡು, ಒಬ್ಬರಿಗಿಂತ ಹೆಚ್ಚು ಲೇಖಕರು ಒಂದೇ ವಿಷಯದ ಕುರಿತು ಬರೆಯದಂತೆ ನೋಡಿಕೊಂಡೆವು. ಆದರೂ ಹಲವಾರು ಲೇಖನಗಳ ಕಥನಶೈಲಿ ಮತ್ತು ಪ್ರಸ್ತುತಿಯಲ್ಲಿ ಒಂದಿಷ್ಟು ಸಾಮ್ಯತೆಯನ್ನು ಗಮನಿಸಿದೆವು. ಈ ಮಿತಿಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು. ಕೊರೋನಾ ಮಹಾಮಾರಿಯ ಗೋಳುದಿನಗಳ ನಡುವೆ ಮನೆಯಲ್ಲೇ ಇದ್ದು ಸಾವು-ನೋವಿನ ಕೆಟ್ಟ ಸುದ್ದಿಗಳನ್ನೇ ಕೇಳುತ್ತ ಬೇಸತ್ತಿದ್ದ ನಮ್ಮ ಲೇಖಕರು ಅಮೆರಿಕದ ಜನಪದವನ್ನು ಜಾಲಾಡುವ, ಜಾಲಿಸುವ, ಸೋಸುವ ಅವಕಾಶವನ್ನು ಸವಾಲಿನಂತೆ ಸ್ವೀಕರಿಸಿ ಕಾರ್ಯತತ್ಪರರಾದರು.

ಮೂಲನಿವಾಸಿಗಳೇ ಅಲ್ಲದೇ, ನಂತರ ಬಂದು, ಇತ್ತೀಚಿನ ಅಮೆರಿಕದ ಚರಿತ್ರೆಯಲ್ಲಿ ಈ ದೇಶದ ಬಣ್ಣವನ್ನೇ ಬದಲಾಯಿಸುತ್ತಿರುವ, ಕರಗಿಸುವ ಕಡಾಯಿಯಲ್ಲಿ ಬಿದ್ದು ಕರಗಿದವರ, ಕೊರಗಿದವರ ಜನಪದವೂ ನಮ್ಮ ಈ ಗ್ರಂಥದ ಮೂಲವಸ್ತುವಿನ ಒಂದು ಭಾಗವಾಗಿರಲಿ ಎಂಬುದನ್ನೂ ನಾವು ನಿರ್ಧರಿಸಿಬಿಟ್ಟೆವು. ಹಾಗಾಗಿ, ಮೂಲನಿವಾಸಿಗಳೇ ಅಲ್ಲದೇ, ನಂತರ ಬಂದ ವಲಸೆಗಾರರು ಮತ್ತು ಬಿಳಿಯರು ಬಲಾತ್ಕಾರವಾಗಿ ಹಿಡಿದು ತಂದ ಕರಿಜನರ ಕಥೆಗಳೂ ಹಾಡುಗಳೂ ನಮ್ಮ ಮೂಲವಸ್ತುವಿನಡಿಯಲ್ಲಿ ವಿವಿಧ ರೀತಿಗಳಲ್ಲಿ ಬೆರೆತುಕೊಂಡವು. ಒಟ್ಟಿನಲ್ಲಿ ಕನ್ನಡಿಗರು ಭಾವಿಸಿದ, ಊಹಿಸಿದ, ಓದಿದ, ಚರಿತ್ರೆ ಮತ್ತು ಕಥನಗಳು, ಕನ್ನಡ ಮಸೂರದ ಮೂಲಕ ಕಂಡ 'ಅಮೆರಿಕದ ಜಾನಪದ ಮೇಲೋಗರವಾಗಿ' ನಮ್ಮ ಕೈಸೇರಿತು. ನಾವದನ್ನು ವಿಂಗಡಿಸುವ ಗೋಜಿಗೆ ಹೋಗಲಿಲ್ಲ, – ಹಾಗೆ ವಿಂಗಡಿಸಲು ಹಲವಾರು ಸಾಧ್ಯತೆಗಳಿದ್ದರೂ ಕೂಡ. 'ಅಮೆರಿಕ' ಎಂದರೆ ಕೇವಲ ಸಂಯುಕ್ತ ಸಂಸ್ಥಾನಗಳೇ ಅಲ್ಲ, ಒಂದಿಷ್ಟು ಕೆನಡಾ ಮತ್ತು ದಕ್ಷಿಣ ಅಮೆರಿಕದ ಪ್ರಸ್ತಾಪಗಳೂ ಸಹ ಪ್ರಾತಿನಿಧಿಕ ರೂಪದಲ್ಲಿ ಸೇರಿಕೊಂಡಿವೆ. ದೂರದ ಆಸ್ಟ್ರೇಲಿಯಾ ಸಹ ಸೇರಿದೆ! ಇದರಿಂದ ನಮಗೆ ಅರಿವಾಗಿದ್ದು, –ಜನಪದವೆಂಬುದು 'ಜಗದಗಲ' ಹಾಗು ಮೂಲರೂಪದಲ್ಲಿ ಸಾಕಷ್ಟು ಸಾಮ್ಯಗಳಿಂದ ಕೂಡಿದ್ದು– ಎಂಬ ಸತ್ಯ. ಒಂದು ರೀತಿಯಲ್ಲಿ ನಾವು ಆಯ್ದು ಪೋಣಿಸಿದ ಹೂವುಗಳು ವಿವಿಧ ಬಣ್ಣ ಮತ್ತು ಸುಗಂಧಗಳಿಂದ ಕೂಡಿ,

ವೈಚಾರಿಕತೆ ಮತ್ತು ರಂಜಕತೆಯ ಜೊತೆಗೆ ಮಾಹಿತಿಪೂರ್ಣವೂ ಆದ ಒಂದು ಸುಂದರ ಹಾರವಾಗಿದೆಯೆಂದು ನಂಬಿದ್ದೇವೆ.

'ಗ್ರಂಥಕ್ಕೆ ನಾವಿಬ್ಬರು ಸಂಪಾದಕರು ಮತ್ತು ನಮಗೆ ಸಹಾಯಹಸ್ತ ನೀಡಲು ಮೂರು ಜನರ ಸಲಹಾಸಮಿತಿ' ಎಂಬುದಾಗಿ ರಂಗದ ಆಡಳಿತ ಮಂಡಲಿ ತೀರ್ಮಾನಿಸಿತು. ಕೈಸೇರಿದ ಪ್ರತಿ ಲೇಖನವನ್ನೂ ಸಲಹಾ ಸಮಿತಿಯ ಸದಸ್ಯರು ಸ್ವತಂತ್ರವಾಗಿ ಓದಿ, ಲೇಖನವನ್ನು ಸ್ವೀಕರಿಸಬಹುದೇ ಇಲ್ಲವೆ, ಸ್ವೀಕರಿಸಿದಲ್ಲಿ ಲೇಖನದ ಬಗ್ಗೆ ಟೀಕೆ/ಟಿಪ್ಪಣಿಗಳಿವೆಯೇ, ಅಭಿವೃದ್ಧಿಪಡಿಸಲು ಸಲಹೆಗಳಿವೆಯೇ, ಮುಂತಾದ ವಿಷಯಗಳನ್ನು ಪ್ರತ್ಯೇಕವಾಗಿ ಸಂಪಾದಕರಿಗೆ ತಿಳಿಸಿದರು. ಅವುಗಳಲ್ಲಿ ಸೂಕ್ತವಾದ ಟೀಕೆ/ಟಿಪ್ಪಣಿ/ಸಲಹೆಗಳನ್ನು ನಾವು ಲೇಖಕರೊಂದಿಗೆ ಹಂಚಿಕೊಂಡು, ಲೇಖನದ ತಿದ್ದಿದ ಕರಡನ್ನು ತಯಾರಿಸಿ ಕಳಿಸಲು ಕೋರಿದೆವು. ಹೀಗೆ ಹಲವು ಸುತ್ತುಗಳಲ್ಲಿ ಪರಿಷ್ಕೃತಗೊಂಡ ಲೇಖನಗಳನ್ನು ಓದುಗರ ಮುಂದೆ ಇಡಲಾಗಿದೆ. ಇದು ನಮ್ಮ ಗ್ರಂಥ ಸಂಪಾದನೆಯ ಪ್ರಕ್ರಿಯೆ.

ನಮ್ಮೀಸಂಕಲನದಲ್ಲಿ ವೈವಿಧ್ಯಮಯ ವಿಷಯಗಳ ಬಗ್ಗೆ ಲೇಖನಗಳಿವೆ (ಹಾಡು, ಹಸೆ, ಕುಣಿತ, ನಂಬಿಕೆ, ಗಾದೆ, ಔಷಧ, ಕಥೆ, ಸಂಪ್ರದಾಯ, ಚರಿತ್ರೆ, ಸಂಸ್ಕೃತಿ, ನೋವು, ನಲಿವು, ಸಂಕಟ, ಕನಸು, ಇನ್ನೂ ಮುಂತಾಗಿ). ಮೊದಲೇ ತಿಳಿಸಿದಂತೆ, ಭೌಗೋಳಿಕವಾಗಿ ಉತ್ತರ ಅಮೆರಿಕವೇ ಪ್ರಧಾನವಾಗಿದ್ದರೂ ದಕ್ಷಿಣ ಅಮೆರಿಕಾ, ಆಸ್ಟ್ರೇಲಿಯ ಮತ್ತು ಆಫ್ರಿಕಾ ಖಂಡಗಳ ಪ್ರಾತಿನಿಧ್ಯವಿದೆ. ಭಾರತದ ಜನಪದ, ಲೇಖಕರ ಮನಸ್ಸಿನ ಹಿನ್ನೆಲೆಯಲ್ಲಿ ಕೆಲಸಮಾಡಿದ್ದರೂ (ಒಂದೆರಡು ಲೇಖನಗಳನ್ನು ಬಿಟ್ಟರೆ) ಅಲ್ಲಿನ ಜನಪದದ ಬಗ್ಗೆ ಲೇಖಕರು ಕೇಂದ್ರೀಕರಿಸಿಲ್ಲ. ಅಮೆರಿಕದಲ್ಲಿ ನೆಲೆಸಿರುವ ಸುಮಾರು 35 ವಿವಿಧ ಕನ್ನಡ ಲೇಖಕರು 'ಈಚೆ' ಕುಳಿತು 'ಆಚೆ' ಭಾರತದಲ್ಲಿರುವ ಮತ್ತು ಇತರೆಡೆಗಳಲ್ಲಿರುವ ಕನ್ನಡಿಗರನ್ನು ಉದ್ದೇಶಿಸಿ ಬರೆದ ಲೇಖನಗಳಿವು. ಇಲ್ಲಿ ಮಾಹಿತಿಯ ಜೊತೆಗೆ ಭಾವುಕ ಅಭಿಪ್ರಾಯಗಳು, ರಚನಾತ್ಮಕ ಚಿಂತನೆಗಳು ಮತ್ತು ಕಳಕಳಿಯಿಂದ ಕೂಡಿದ ಸ್ಪಂದನೆಗಳೂ ವ್ಯಕ್ತವಾಗಿವೆ. ಒಟ್ಟಾರೆ, ಇಂಥಾ ಅಂತರರಾಷ್ಟ್ರೀಯ, ಪ್ರಮುಖವಾಗಿ ಅಮೆರಿಕದ ಜಾನಪದ ವೈವಿಧ್ಯವನ್ನೊಳಗೊಂಡ ಪುಸ್ತಕವೊಂದನ್ನು ಕನ್ನಡದಲ್ಲಿ ಹೊರತರುವ ಗಂಭೀರ ಯತ್ನದಲ್ಲಿ ಇದೇ ಮೊದಲೆಂಬುದು ನಮ್ಮ ನಂಬಿಕೆ. ಹಲವಾರು ವರ್ಷಗಳಿಂದ ಹೊರದೇಶದಲ್ಲಿ ನೆಲೆಸಿ ಅಮೆರಿಕವನ್ನೇ ನಮ್ಮ ಕರ್ಮಭೂಮಿಯಾಗಿ ಆಯ್ದುಕೊಂಡು ಇಲ್ಲಿನ ಸಂಸ್ಕೃತಿಯ ಒಂದು ಸಣ್ಣ – ಆದರೂ ಮುಖ್ಯ ಅಂಶವಾಗಿರುವ ನಮ್ಮಂಥಾ ಅಮೆರಿಕನ್ನಡಿಗರಲ್ಲದೇ ಈ ಕಾರ್ಯವನ್ನು ಮತ್ತಾರು ಮಾಡಬಲ್ಲರು? ಇತರ ಭಾರತೀಯ ಭಾಷೆಗಳಿಗಿಂತ ಮುನ್ನ ಈ ಕೆಲಸ ಕನ್ನಡದಲ್ಲಿ ನಡೆಯುತ್ತಿರುವುದು ಪುಳಕವನ್ನುಂಟುಮಾಡಿದೆ!

ಇನ್ನು ಕೃತಜ್ಞತೆಗಳು. ಮೊದಲಿಗೆ ಕಸಾರಂ ಆಡಳಿತ ಮಂಡಲಿ ನಮಗಿತ್ತ ಈ ಜವಾಬ್ದಾರಿಗಾಗಿ ನಮ್ಮ ನಮ್ರ ನಮನಗಳು. ಸಲಹಾ ಸಮಿತಿಯಲ್ಲಿರಲು ಒಪ್ಪಿ ಸಹಕರಿಸಿ ನಮ್ಮ ಜೊತೆ–ಜೊತೆಗೂ ದುಡಿದ ನಳಿನಿ ಮೈಯ, ಪ್ರಕಾಶ್ ನಾಯಕ್ ಮತ್ತು ಮೀರಾ ರಾಜಗೋಪಾಲ್ ಅವರ ಕೊಡುಗೆ ಅತ್ಯಮೂಲ್ಯವಾದದ್ದು. ಲೇಖನಗಳನ್ನು ಹಲವು

ಬಾರಿ ಓದಿ ಗುಣಮಟ್ಟವನ್ನು ಅಭಿವೃದ್ಧಿಪಡಿಸುವಲ್ಲಿ ಶ್ರಮಿಸಿದ್ದಕ್ಕಾಗಿ ಮೂವರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಈ ಬಾರಿಯ ವಸಂತೋತ್ಸವಕ್ಕೆ ಮುಖ್ಯ ಅತಿಥಿಗಳಾಗಿರುವ, ಜನಪದ ಕ್ಷೇತ್ರದಲ್ಲಿ ದೀರ್ಘಕಾಲದಿಂದ ದುಡಿಯುತ್ತಿರುವ ಕನ್ನಡದ ಹೆಸರಾಂತ ಲೇಖಕ ಮತ್ತು ವಿದ್ವಾಂಸರಾದ ಡಾ. ಕೃಷ್ಣಮೂರ್ತಿ ಹನೂರು ಅವರು ತಮ್ಮ ವಿದ್ವತ್ಪೂರ್ಣ ಭಾಷಣದ ಸಾರಾಂಶವನ್ನು ನಮ್ಮ ಗ್ರಂಥದಲ್ಲಿ ಪ್ರಕಟಿಸಲು ಅನುವು ಮಾಡಿಕೊಟ್ಟ ಸೌಹಾರ್ದಕ್ಕಾಗಿ ಅವರಿಗೆ ನಮ್ಮ ಗೌರವಪೂರ್ವಕ ನಮನಗಳು.

ಈ ಬಾರಿಯ ಒಂದು ವೈಶಿಷ್ಟ್ಯ ನಮ್ಮ ಲೇಖನಗಳನ್ನು ಕೂಲಂಕಷವಾಗಿ ಓದಿ ಸಮೀಕ್ಷಿಸಿ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಬರೆದುಕೊಟ್ಟ, ನಮ್ಮವರೇ ಆದ, ಕಸಾರಂನ ಹೆಮ್ಮೆಯ ಬರಹಗಾರರಾದ ಗುರುಪ್ರಸಾದ್ ಕಾಗಿನೆಲೆ ಅವರಿಗೆ ಒಂದು 'ಉಫ಼ೇ!' ನಾವು ಶ್ರದ್ಧೆಯಿಂದ ಸಂಪಾದಿಸಿದ ಈ ಗ್ರಂಥಕ್ಕೆ ಬೆನ್ನುಡಿಯನ್ನು ಬರೆದುಕೊಟ್ಟಿರುವುದೇ ಅಲ್ಲದೇ, ಅತ್ಯಂತ ಸೂಕ್ತವಾದ ಪ್ರವೇಶವನ್ನೂ ವಿದ್ವತ್ಪೂರ್ಣ ಮುನ್ನುಡಿಯ ರೂಪದಲ್ಲಿ ಒದಗಿಸಿರುವ, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಉದ್ದಾಮ ಪಂಡಿತರಾದ ಡಾ. ಸಿ. ಎನ್. ರಾಮಚಂದ್ರನ್ ಅವರಿಗೆ ಕೃತಜ್ಞತೆಗಳು. ಕಸಾರಂ ಗ್ರಂಥಗಳ ಪ್ರಕಟಣೆಯಲ್ಲಿ ಶ್ರದ್ಧೆಯಿಂದ ಕೈಜೋಡಿಸುತ್ತಾ ಬಂದಿರುವ ಅಭಿನವದ ರವಿಕುಮಾರ್ ಅವರಿಗೆ ನಮ್ಮ ನಲ್ಮೆಯ ವಂದನೆಗಳು.

ಸುಂದರವಾದ ರಕ್ಷಾಪುಟವನ್ನು ವಿನ್ಯಾಸಮಾಡಿದ ರಾಜಧಾನಿ ಪ್ರದೇಶದ ಶ್ರೇಷ್ಠ ಕಲಾವಿದ ಹರಿದಾಸ್ ಲಹರಿ ಅವರಿಗೆ ನಮ್ಮ ಮೆಚ್ಚುಗೆಗಳು. ಈ ಗ್ರಂಥವನ್ನು ಅಂದವಾಗಿಯೂ ಆಕರ್ಷಕ ವಾಗಿಯೂ ಮುದ್ರಿಸಿಕೊಟ್ಟ ಲಕ್ಷ್ಮೀ ಮುದ್ರಣಾಲಯದವರಿಗೆ ನಮ್ಮ ಅಭಿನಂದನೆಗಳು. ಸುಮಾರು ಐನೂರು ಪುಟಗಳಿಷ್ಟಿರುವ ಈ ಉದ್ಗ್ರಂಥವನ್ನು ಮೊದಲಿಂದ ಕೊನೆಯವರೆಗೆ ಓದಿ ನಮ್ಮ ಕಣ್ಣಿಗೂ ಸಿಗದೆ ನುಣುಚಿಕೊಂಡಿದ್ದ ತಪ್ಪುಗಳನ್ನು ತಿದ್ದಿದ ಉಮಾ ವೆಂಕಟೇಶ್‌ರಿಗೂ, ಪೂರ್ಣಿಮಾ ಕಶ್ಯಪ್‌ರಿಗೂ ಮತ್ತು ಶ್ರೀ ಇಂದ್ರಕುಮಾರ್ ಅವರಿಗೂ ನಮ್ಮ ಪ್ರೀತಿಪೂರ್ವಕ ಕೃತಜ್ಞತೆಗಳು.

ಕಸಾರಂ ಗ್ರಂಥಗಳು ಮುದ್ರಣಕ್ಕೆ ಹೋಗುವ ಮುನ್ನ ಲಿಪಿಗಳನ್ನು ಸಮಾನರೂಪಕ್ಕೆ ತಂದುಕೊಡುತ್ತ ಬಂದಿರುವ ಶ್ರೀವತ್ಸ ಜೋಶಿಯವರ ಮುಂದುವರೆದ ಸಹಾಯ ಮತ್ತು ಸಹಕಾರಕ್ಕಾಗಿ ಸಪ್ರೇಮ ವಂದನೆಗಳು. ಪುಸ್ತಕ ವಿನ್ಯಾಸ ಮಾಡಿದ ಶ್ರೀ ಆರ್. ಎಸ್. ಶ್ರೀಧರ್ ಅವರಿಗೂ ಧನ್ಯವಾದಗಳು.

ಎಲ್ಲಕ್ಕಿಂತ ಮಿಗಿಲಾಗಿ, ಯಾರಿಲ್ಲದೇ ಈ ಗ್ರಂಥವಿರುತ್ತಿರಲಿಲ್ಲವೋ, ಯಾರು ಲೇಖನಗಳನ್ನು ಬರೆದುಕೊಟ್ಟು, ಸಂಪಾದಕರ ಸಲಹೆಗಳನ್ನು ಸಹನೆಯಿಂದ ಒಪ್ಪಿ ತಮ್ಮ ಲೇಖನಗಳನ್ನು ಪರಿಷ್ಕರಿಸಿದರೋ ಆ ನಮ್ಮ ಮಹನೀಯರಿಗೆ/ಮಹಿಳೆಯರಿಗೆ ನಮ್ಮ ಆತ್ಮೀಯ ಮೆಚ್ಚುಗೆಗಳು.

2022ರ ವಸಂತ ಸಾಹಿತ್ಯೋತ್ಸವ ಕಸಾರಂನ ಹತ್ತನೆಯ ಉತ್ಸವ. ಈ ವಿಶೇಷ ಉತ್ಸವವನ್ನು ಟೆಕ್ಸಸ್ ಪ್ರಾಂತ್ಯದ ಡ್ಯಾಲಸ್ ನಗರದ 'ಮಲ್ಲಿಗೆ' ಕನ್ನಡ ಸಂಘದ ಆಶ್ರಯದಲ್ಲಿ ವಿಜೃಂಭಣೆಯಿಂದ ಆಚರಿಸಲು ಮುಂದಾಗಿರುವ ಸರ್ವಸದಸ್ಯರಿಗೂ, ಪದಾಧಿಕಾರಿಗಳಿಗೂ, ದಾನಿಗಳಿಗೂ ಮತ್ತು ಸ್ವಯಂಸೇವಕರಿಗೂ ನಾವು ಅತ್ಯಂತ ಆಭಾರಿಗಳಾಗಿದ್ದೇವೆ.

ಕಸಾರಂ ಗ್ರಂಥಗಳ ಪ್ರಕಟಣೆಗಳನ್ನು ಹಿಂದೆ ಹಲವು ಬಾರಿ ಮಾಡಿದಂತೆ ಈ ಬಾರಿಯೂ ಪ್ರಾಯೋಜಿಸಿ ಅಮೆರಿಕನ್ನಡ ಬರಹಗಾರರನ್ನು ಪ್ರೋತ್ಸಾಹಿಸುತ್ತಿರುವ ಕನ್ನಡ ಪ್ರೇಮಿ–ಪೋಷಕ, ಟೆಕ್ಸಸ್ ಪ್ರಾಂತ್ಯದ ಹ್ಯೂಸ್ಟನ್ ವಾಸಿ ವತ್ಸಕುಮಾರ್ ಅವರಿಗೆ ಅಕ್ಕರೆಯ ಅಭಿನಂದನೆಗಳ ಹಾರ–ತುರಾಯಿಗಳನ್ನು ಅರ್ಪಿಸಲು ನಮಗೆ ಹೆಮ್ಮೆ ಎನಿಸುತ್ತಿದೆ.

ಕೊನೆಯದಾಗಿ, ಆದರೆ ಪ್ರಮುಖವಾಗಿ ಈ ಗ್ರಂಥವನ್ನು ಪ್ರೀತ್ಯಾದರಗಳೊಂದಿಗೆ ಸ್ವೀಕರಿಸಿ, ಕೊಂಡು–ಓದಿ, ತಮ್ಮ ಪ್ರತಿಕ್ರಿಯೆಯನ್ನು ನಮಗೆ ತಿಳಿಸುವ ಓದುಗರಿಗೆ ಮುಂಗಡವಾಗಿ ದೊಡ್ಡ ಸಲಾಮುಗಳು!

ಒಂದು ಮುಖ್ಯ ವಿಷಯ: ಈ ಗ್ರಂಥದಲ್ಲಿ ಪ್ರಕಟವಾಗಿರುವ ವೈಯಕ್ತಿಕ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬ್ದಾರರಲ್ಲದೇ ಕನ್ನಡ ಸಾಹಿತ್ಯ ರಂಗವಾಗಲೀ ಅದರ ಆಡಳಿತ ಮಂಡಲಿಯ ಸದಸ್ಯರಾಗಲೀ, ಗ್ರಂಥದ ಸಂಪಾದಕರಾಗಲೀ, ಸಲಹಾ ಸಮಿತಿಯ ಸದಸ್ಯರಾಗಲೀ ಅಲ್ಲವೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಬಯಸುತ್ತೇವೆ.

ಸಿರಿಗನ್ನಡಂ ಗೆಲ್ಗೆ!

ಮೈ. ಶ್ರೀ. ನಟರಾಜ
mysreena@aol.com

ಜ್ಯೋತಿ ವೆಂಕಟಸುಬ್ರಹ್ಮಣ್ಯ
jyolight@gmail.com



ಕನ್ನಡ ಜಾನಪದ

ಕನ್ನಡ ಸಾಹಿತ್ಯ ರಂಗದ ಹತ್ತನೆಯ ವಸಂತ ಸಾಹಿತ್ಯೋತ್ಸವದ ಮುಖ್ಯ ಅತಿಥಿಗಳ ಭಾಷಣದ ಸಾರಾಂಶ

ಡಾ. ಕೃಷ್ಣಮೂರ್ತಿ ಹನೂರು

*

ಹುಟ್ಟಿದ ಹಳ್ಳಿ – ಹಳ್ಳಿಯ ಹಾಡು

1933ರಲ್ಲಿ ಮಂಡ್ಯ ಜಿಲ್ಲೆ, ಕೆ. ಆರ್. ಪೇಟೆ ತಾಲ್ಲೂಕು, ಬಂಡಿಹೊಳೆ ಗ್ರಾಮದ ಅರ್ಚಕ ಬಿ. ರಂಗಸ್ವಾಮಿಯವರು ಪ್ರಕಟಿಸಿದ ಮೊದಲ ಜನಪದ ಗ್ರಂಥ 'ಹುಟ್ಟಿದ ಹಳ್ಳಿ–ಹಳ್ಳಿಯ ಹಾಡು' ಗ್ರಂಥದ 'ಅರಿಕೆ' ಭಾಗದಲ್ಲಿ ಬರುವ ಕೆಲವು ಅಭಿಪ್ರಾಯಗಳನ್ನು ಪ್ರಸ್ತಾಪಿಸಿಯೇ ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಬಂಧ ಕನ್ನಡದಲ್ಲಿ ನಡೆದಿರುವ ಕೆಲಸ ಕುರಿತು ವಿವರಣೆಗೆ ತೊಡಗುವುದು ಸೂಕ್ತವೆನ್ನಿಸುತ್ತದೆ. ಅರ್ಚಕ ರಂಗಸ್ವಾಮಿಯವರು ಒಮ್ಮೆ ವಿಶ್ವ ಕರ್ನಾಟಕ ಪತ್ರಿಕೆಯಲ್ಲಿ 'ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂಬ ವಾಕ್ಯವನ್ನು ಗಮನಿಸಿದಾಗ, "ಹಳ್ಳಿಗರಾಗಿ ಬೀಸುವ ಪದ, ಕೋಲಾಟದ ಪದ, ಕಣಗಳಲ್ಲಿ ಹಾಡುವ ಪದ ಇವೆಲ್ಲವುಗಳ ಅರ್ಥದ ಕಡೆಗೆ ಲಕ್ಷ್ಯವಿಟ್ಟು ನೋಡಿದಾಗ ಮೇಲಿನ ವಾಕ್ಯವು ಹೃದಯದಲ್ಲಿ ತನ್ನದೇ ಒಂದು ರಾಜ್ಯವನ್ನು ಕಟ್ಟಿತು...." ಎಂದು ಹೇಳಿಕೊಂಡಿದ್ದಾರೆ. ತದನಂತರ ಪಾಮರ ಸಾಹಿತ್ಯವನ್ನು ಸಂಗ್ರಹಿಸಿಬಿಟ್ಟರೆ ಸಾಹಿತ್ಯ ಸೇವೆಯ ಜೊತೆಗೆ ಹಳ್ಳಿಗರ ಅನೂಚೂನವಾದ ಆಚಾರವನ್ನು ಭದ್ರವಾದ ಬರಹವನ್ನಾಗಿ ಮಾಡಿಟ್ಟಂತೆ ಆಗುವುದೆಂದು ತೋರಿತು. ಹೆಸರಿಗೆ 'ಪಾಮರ ಸಾಹಿತ್ಯ' ಎಂಬುದು ದಿಟ. ಆದರೆ ರಸದ ಝರಿಯು ಪಂಡಿತ ಸಾಹಿತ್ಯದ ಜೊತೆಯಲ್ಲಿಯೇ ಹರಿಯುವುದು. ಮೇಲಿನ ತೊಗಟೆಯಾದ ಭಾಷೆಯು ಮಾತ್ರ ಹಳ್ಳಿಯದು. ...ನಮ್ಮ ಸಾಹಿತ್ಯವು ಬೀಳಾಗಿದೆ. ಬೀಳೆಂದು ಬಿಟ್ಟುಬಿಡಲು ಸಾಧ್ಯವಿಲ್ಲ. ನಾವು ಇಂಗ್ಲಿಷ್ ಸಾಹಿತ್ಯವನ್ನು ನಮ್ಮ ಮಾತೃಭಾಷೆಯನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ನಮ್ಮದರಲ್ಲಿ ಮುರಿದ ಭಾಗವನ್ನು ಸರಿಪಡಿಸಬೇಕು. ಸಾಹಿತ್ಯದೇವಿಗೆ ಹಳ್ಳಿಯ ವಿಚಾರ ರೂಪವಾದ ಉಡುಗೊರೆಯನ್ನು ನಮ್ಮ ಕನ್ನಡ ನಾಡಿನವರೇ ಕೊಡಬೇಕು...

ಹೀಗೆಲ್ಲ ಜನಪದ ಸಾಹಿತ್ಯದ ಮೇಲಿದ್ದ ತಮ್ಮ ಪ್ರೀತಿಯನ್ನೂ, ಶಿಷ್ಟಸಾಹಿತ್ಯದ ಜೊತೆಗೆ ಜನಪದ ಸಾಹಿತ್ಯಕ್ಕಿರಬಹುದಾದ ಸಂಬಂಧದ ಅರಿವನ್ನೂ, ಇಂಗ್ಲಿಷ್ ಭಾಷೆ ನಮ್ಮದಾಗುವುದರ ಕಷ್ಟ, ಕನ್ನಡವನ್ನು ಉಳಿಸಿ ಬೆಳೆಸಬೇಕಾದುದರ ಅಗತ್ಯ ಇದೆಲ್ಲವನ್ನೂ ರಂಗಸ್ವಾಮಿಯವರು ಕಳೆದ ಶತಮಾನದ ನಲವತ್ತರ ದಶಕದಲ್ಲೇ ಪ್ರಸ್ತಾಪಿಸಿರುವುದು ಮೆಚ್ಚತಕ್ಕ ಸಂಗತಿ.

ಅರ್ಚಕ ರಂಗಸ್ವಾಮಿಯವರ ಹೇಳಿಕೆಗಳನ್ನು ಸ್ವಲ್ಪ ದೀರ್ಘವಾಗಿಯೇ ಪ್ರಸ್ತಾಪಿಸಿರುವುದರ ಉದ್ದೇಶವೆಂದರೆ, ಜಾನಪದ ಪುರೋಭಿವೃದ್ಧಿಯನ್ನು ಕುರಿತು ಈ ಶತಮಾನದ ಉದ್ದಕ್ಕೂ ಕನ್ನಡ ವಿದ್ವಾಂಸರು ಆಡಿಕೊಂಡು ಬಂದಿರುವ ಮಾತನ್ನು ನಲವತ್ತರ ದಶಕದಲ್ಲಿ ಒಂದು ಪುಟ್ಟ ಗ್ರಾಮದಲ್ಲಿ ಕುಳಿತು ರಂಗಸ್ವಾಮಿಯವರು ಜನಪದ ಸಾಹಿತ್ಯ ಕುರಿತು ಆಡಿರುವ ಮಾತುಗಳು ಮನನೀಯವೆನ್ನಿಸುತ್ತದೆ. ಬೇರೆ ಯಾವ ರಾಜ್ಯಗಳಿಗಿಂತಲೂ ಕರ್ನಾಟಕದಲ್ಲಿ ಜಾನಪದ ಸಂಗ್ರಹ, ಅಧ್ಯಯನ ವ್ಯಾಪಕವಾಗಿಯೇ ನಡೆದಿರುವುದಕ್ಕೆ ಒಂದು ಗ್ರಾಮಮೂಲದಿಂದಲೇ ಹುಟ್ಟಿಕೊಂಡ ಈ ಬಗೆಯ ಅಂತರಂಗಪೂರ್ವಕವೆನಿಸುವ ಕಳಕಳಿಯ ಮಾತುಗಳೇ ಕಾರಣವಾಯಿತೆಂದು ನಾವು ಭಾವಿಸಬಹುದಾಗಿದೆ.

ಅರ್ಚಕ ರಂಗಸ್ವಾಮಿಯವರು ಆ ಕಾಲಕ್ಕೆ ತಮ್ಮ ಗ್ರಾಮಸುತ್ತಿನ ಭಾಷೆ ಮತ್ತು ಬಹಿರಂಗ ಬದುಕಿನ ವಿವರಗಳನ್ನು 'ಹುಟ್ಟಿದ ಹಳ್ಳಿ' ಗ್ರಂಥದ ಮೂಲಕ ಹಿಡಿದಿದ್ದಾರೆ. ಅದೇ ದಶಕದಲ್ಲಿ ಉತ್ತರ ಕರ್ನಾಟಕದ ಬಿಜಾಪುರ ಸುತ್ತಿನ ಒಂದು ಗ್ರಾಮದಲ್ಲಿ ಹಲಸಂಗಿ ಗೆಳೆಯರಾದ ಕಾಪಸೆ ರೇವಪ್ಪ, ಚನ್ನಮಲ್ಲಪ್ಪ, ಮಧುರಚನ್ನರು ಆ ಪ್ರದೇಶದ ಹೆಣ್ಣುಮಕ್ಕಳ ಬದುಕಿನ ಅಂತರಂಗವನ್ನು ಬಿಂಬಿಸುವ ಗೀತೆಗಳನ್ನು ಸಂಗ್ರಹಿಸಿ 'ಗರತಿಯ ಹಾಡು' ಎಂಬ ಶೀರ್ಷಿಕೆಯಲ್ಲಿ ಜನಪದ ಆಸಕ್ತರು, ವಿದ್ವಾಂಸರ ಮುಂದೆ ಇಟ್ಟರು. ಇದರಿಂದಾಗಿ ನಲವತ್ತರ ದಶಕದಲ್ಲೇ ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಕನ್ನಡ ಜನಪದದ ಮೂಲಕ ತನ್ನ ಅಂತರಂಗ ಮತ್ತು ಬಹಿರಂಗ ಸತ್ವವನ್ನು ಅರಿತುಕೊಂಡಂತಾಯಿತು. ಇಂಥ ಕಾರ್ಯಸಾಮರ್ಥ್ಯಕ್ಕಾಗಿ ನಾವು ಹೆಮ್ಮೆಪಡಬಹುದಾಗಿರುತ್ತದೆ. ಇದಾದ ಕೆಲವೇ ವರ್ಷಗಳಲ್ಲಿ ದೇವುಡು ನರಸಿಂಹ ಶಾಸ್ತ್ರಿಯವರು ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯ ಪರಂಪರೆಯ ನಡುವಣ ಸಂಬಂಧಗಳನ್ನು ಕುರಿತು ತಮ್ಮ 'ಕರ್ನಾಟಕ ಸಂಸ್ಕೃತಿ' ಗ್ರಂಥದಲ್ಲಿ ಚರ್ಚಿಸಿದರು. ಹಾಗೆಯೇ ಐವತ್ತರ ದಶಕದಲ್ಲಿ ಉತ್ತರ ಕರ್ನಾಟಕದಾದ್ಯಂತ ವ್ಯಾಪಕ ಜನಪದ ಕ್ಷೇತ್ರಕಾರ್ಯ ನೆರವೇರಿಸಿದ ಬಿ. ಎಸ್. ಗದ್ದಗೀಮಠ ಅವರ ಅಧ್ಯಯನ ಕ್ರಮ ಇನ್ನೊಂದು ದಾಖಲಾರ್ಹ ಸಂಗತಿಯಾಯಿತು. ಹೀಗೆ ಸ್ವಾತಂತ್ರ್ಯ ಪೂರ್ವದಲ್ಲೇ ಅಥವಾ ಅದರ ಹಿಂಚು ಮುಂಚಿನಲ್ಲಿಯೇ ಕನ್ನಡ ಜನಪದ ಪರಂಪರೆಗೆ ಸಂಗ್ರಹ, ಅದರ ಅಂತಃಸತ್ತ್ವದ ಹುಡುಕಾಟ ಮತ್ತು ಪ್ರಾಮುಖ್ಯತೆ, ಚಿಂತನೆ, ವಸ್ತುವಿಶ್ಲೇಷಣೆ ಇದೆಲ್ಲ ಕುರಿತು ಒಂದು ಭದ್ರ ಬುನಾದಿ ಬಿದ್ದದ್ದನ್ನು ಪ್ರಸ್ತಾಪಿಸಿಯೇ ಸ್ವಾತಂತ್ರ್ಯಾನಂತರ ನಡೆದ ಜನಪದ ಸಂಬಂಧದ ಕಾರ್ಯ ವೈಖರಿಯ ಬಗೆಯನ್ನು ಗಮನಿಸಬಹುದಾಗಿರುತ್ತದೆ.

ಗೀತ ಸಂಗ್ರಹ – ಪ್ರಚಾರ

ಹಲಸಂಗಿ ಸಹೋದರರು ಜನಪದ ಗೀತೆಗಳನ್ನು ಸಂಗ್ರಹಿಸಿದ ಕಾಲಕ್ಕೆ ಜನಪದ ಸಾಹಿತ್ಯ ಎಂದರೆ ಅದು ಗೀತ ಪ್ರಕಾಶನ, ಭಾವುಕ ಸಂಗತಿಗಳಿಂದ ಕೂಡಿದ್ದು, ಹಾಡುವುದೇ ಅದರ ಗಂತವ್ಯ ಸ್ಥಿತಿ ಎಂದು ತಿಳಿಯಲಾಗಿತ್ತು. ಜನಪದ ತ್ರಿಪದಿಗಳನ್ನು ಕುರಿತು ವ್ಯಾಖ್ಯಾನ ಮಾಡಲಾಗುತ್ತಿತ್ತು. ಕೆ. ಆರ್. ಲಿಂಗಪ್ಪ, ಎಸ್. ಕೆ. ಕರೀಂಖಾನ್, ಮತಿಘಟ್ಟ ಕೃಷ್ಣಮೂರ್ತಿ ಇವರೆಲ್ಲ ಜನಪದ ಸಂಗ್ರಹದ ಬಗ್ಗೆ ಎಷ್ಟು ಶ್ರಮವಹಿಸುತ್ತಿದ್ದರೋ ಅದನ್ನು ಹಾಡುತ್ತ ಪ್ರಚಾರ ಮಾಡುವ ಕಾಯಕವನ್ನೂ ಅಷ್ಟೇ ಪ್ರೀತಿಯಿಂದ ಕೈಗೊಂಡಿದ್ದರು.

ಸ್ವಾತಂತ್ರ್ಯ ಪಡೆದ ಭಾರತದ ಮುಂದಿನ ಧ್ಯೇಯ ಸಮಾಜದ ಉದ್ಧಾರ ಆಗಿದ್ದಿತು. ಮಹಾತ್ಮ ಗಾಂಧೀಜಿಯವರಿಂದ ಸ್ಫೂರ್ತಿ ಪಡೆದ ನಾಡಿನ ಸಾಹಿತಿಗಳು ಜನಪದ ಗೀತೆಗಳನ್ನು ಸಂಗ್ರಹಿಸಿ ಹಾಡುವುದರ ಮೂಲಕ, ನಾವು ಜನಪದ ಸಾಹಿತ್ಯದ ಅಧ್ಯಯನ ಮಾಡುತ್ತಿದ್ದೇವೆ ಎನ್ನುವುದಕ್ಕಿಂತ ಸಮಾಜಕ್ಕೆ ಈ ಸಾಹಿತ್ಯದ ಮೂಲಕ ತಿಳುವಳಿಕೆ ಮೂಡಿಸಿ, ಆ ಮೂಲಕ ಗ್ರಾಮೋದ್ಧಾರವೂ ಆಗುತ್ತದೆ ಎಂತಲೇ ತಿಳಿದಿದ್ದರು. ಹೀಗಾಗಿ ಜನಪದ ಸಂಗ್ರಹ ಅಧ್ಯಯನ ಎಂದರೆ ಅದು ಜನಪದ ಗೀತೆಗಳ ಸಂಗ್ರಹ ಮತ್ತು ಪ್ರಸಾರ ಎಂಬ ಉದ್ದೇಶವೇ ಮುಖ್ಯವಾಗಿದ್ದಿತು. ಎಲ್ಲಿಯವರೆಗೆ ಜನಪದವು ವಿಶ್ವವಿದ್ಯಾನಿಲಯ ಮತ್ತು ಸಂಸ್ಥೆಗಳನ್ನು ಪ್ರವೇಶಿಸಿರಲಿಲ್ಲವೋ ಅಲ್ಲಿಯವರೆಗೆ ಅದು ಗೀತೆಗಳ ಸಮುಚ್ಚಯ, ಹಾಡುಗಾರಿಕೆ ಮತ್ತು ಅದರ ಸೌಂದರ್ಯ ಪ್ರಚಾರವೇ ಸರಿಯಾದ ಕ್ರಮ ಎಂದಾಗಿತ್ತು. ಇದೇನೆ ಇರಲಿ, ಜನಪದ ಪ್ರಕಾರದ ಬೆಳವಣಿಗೆಯಲ್ಲಿ ಇದೂ ಕೂಡ ಒಂದು ಮುಖ್ಯ ಮಜಲಾಯಿತೆಂದು ತಿಳಿಯಬೇಕಾಗಿದೆ.

1930ರ ವೇಳೆಗೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಹೆಚ್. ಎಲ್. ನಾಗೇಗೌಡ ಅಂಥವರು ರೆವಿನ್ಯೂ ಅಧಿಕಾರಿಗಳಾಗಿ ಜನಪದ ಸಂಗ್ರಹ ಮತ್ತು ಅವುಗಳನ್ನು ಅಧ್ಯಯನ ಮಾಡಬೇಕಾದ ಅಗತ್ಯದ ಬಗ್ಗೆ ಮಾತನಾಡಿದ್ದಲ್ಲದೆ ತಾವೇ ಜನಪದ ಸಂಗ್ರಾಹಕರಾಗಿ ಕೆಲಸ ಮಾಡಿದರು. ಅಷ್ಟು ಹೊತ್ತಿಗಾಗಲೇ ಬಿ.ಎಂ.ಶ್ರೀ. ಅವರು ಹಲಸಂಗಿ ಸಹೋದರರು ಪ್ರಕಟಿಸಿದ್ದ 'ಗರತಿಯ ಹಾಡು' ಜನಪದ ಗೀತ ಸಂಕಲನಕ್ಕೆ ಮುನ್ನುಡಿ ಬರೆಯುತ್ತ '...ಶಾಸ್ತ್ರ ಬಲದಿಂದಲೂ ಸಂಸ್ಕೃತ ಪ್ರತಿಭೆಯಿಂದಲೂ ರಚಿತವಾದ ಪ್ರೌಢ ಸಾಹಿತ್ಯವೇ ಸಾಹಿತ್ಯವೆಂದೂ; ಹಳ್ಳಿಗಳಲ್ಲಿಯೂ, ಬೀದಿಗಳಲ್ಲಿಯೂ, ಮನೆಗಳಲ್ಲಿಯೂ ಜನಸಾಮಾನ್ಯರು ಹಾಡಿಕೊಳ್ಳುವ ಹಾಡುಗಳು ಸಾಹಿತ್ಯವಲ್ಲವೆಂದೂ ಇಂತಹ ಪಂಡಿತರ ಭಾವನೆ. ಈ ಅಭಿಪ್ರಾಯದ ಪ್ರಕಾರ ಆದಿಯಲ್ಲಿ ದೇವತಾಪ್ರೇರಣೆಯಿಂದ ಹುಟ್ಟಿದುದೇ ಕವಿತಾವಾಣಿ. ಅದು ಋಷಿಗಳಲ್ಲಿಯೂ, ಮಹಾಕವಿಗಳಲ್ಲಿಯೂ ಕಾಣುವುದು. ಆ ಬಳಿಕ ಸರಸ್ವತೀ ಪ್ರಸಾದವಿಲ್ಲದ ಬರಿಯ ದುರಾಶೆಯ ದುಷ್ಕರ್ಮಿಗಳಲ್ಲಿ ತಲೆದೋರುವುದು ಅದರ ಆಭಾಸ. ಕಟ್ಟಕಡೆಗೆ ಕಾಣಿಸಿಕೊಂಡು ಜನಗಳು ಹಾಡಿ ನಲಿಯುತ್ತಿರುವ ಬಡ ಹಾಡಂತೂ ಕವಿತ್ವವೇ ಅಲ್ಲ. ಈ ಅಭಿಪ್ರಾಯಕ್ಕೆ ವಿರೋಧವಾಗಿ ಕವಿತ್ವದ ಮೂಲವನ್ನು ಆದಿ ಚರಿತ್ರೆಯನ್ನೂ ಪರಿಶೋಧಿಸಿರತಕ್ಕವರು ಹೇಳುವುದೇನೆಂದರೆ ಮೊದಲು ಹುಟ್ಟಿದುದು ಜನವಾಣಿ. ಅದು

ಬೆಳೆದು ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. 'ಜನವಾಣಿ ಬೇರು, ಕವಿವಾಣಿ ಹೂವು' ಎಂದರು.

1940ರ ದಶಕದಲ್ಲಿ ಜನಪದ ಅಧ್ಯಯನ ಎಂದರೆ ತ್ರಿಪದಿಗಳ ಹಾಡುಗಾರಿಕೆ ಎಂಬ ತಿಳುವಳಿಕೆಯಿದ್ದ ಕಾಲದಲ್ಲಿಯೇ ಶ್ರೀಯವರು ಜನಪದ ಸಾಹಿತ್ಯದ ಬೇರೆ ಮಗ್ಗುಲುಗಳನ್ನೂ ಕುರಿತಂತೆ ತೋರುಗಂಭದ ಮಾತುಗಳನ್ನಾಡಿರುವುದು ಸ್ತುತ್ಯಾರ್ಹ. ಜನಪದ ಕಲೆ ಮತ್ತು ಸಾಹಿತ್ಯ, ಶ್ರಮ ಮತ್ತು ಆರಾಧನೆಯ ಹಿನ್ನೆಲೆಯಲ್ಲಿ ಹುಟ್ಟಿರುವಂಥದ್ದು. ಅದು ಎಂದೂ ಬದುಕಿನಿಂದ ಪ್ರತ್ಯೇಕಗೊಂಡು ಸಂಪೂರ್ಣ ಮನರಂಜನೆಗೆಂದೇ ಹುಟ್ಟಿಕೊಂಡದ್ದಲ್ಲ ಎಂಬುದನ್ನು ಶ್ರೀಯವರು ಗುರುತಿಸಿದ್ದಾರೆ. ಅಂದರೆ ಜನಪದ ಸಾಹಿತ್ಯದ ಸಂಗ್ರಹ, ಹಾಡುಗಾರಿಕೆ, ಪ್ರಚಾರ ಇದರ ಜೊತೆಗೇ ಅಧ್ಯಯನ, ಚಿಂತನೆಯ ದಿಕ್ಕೂ ತೆರೆದುಕೊಳ್ಳುತ್ತಿತ್ತು ಎಂಬುದು ಶ್ರೀಯವರ ಮಾತಿನ ಮೂಲಕ ಅರಿವಾಗುತ್ತದೆ.

ಇದೇ ಸಂದರ್ಭದಲ್ಲಿ ದ. ರಾ. ಬೇಂದ್ರೆಯವರು ಜನಪದ ಸಾಹಿತ್ಯವನ್ನು ಕುರಿತು ಗರತಿಯ ಹಾಡು ಕೃತಿಯಲ್ಲಿ ಪರಿಚಯ ಎಂಬ ಭಾಗದಲ್ಲಿ "ನನಗೆ ತಿಳಿದಮಟ್ಟಿಗೆ ಚನ್ನಮಲ್ಲಪ್ಪನವರು ವಿಜಾಪುರ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಹಳ್ಳಿಯ ಸಾಹಿತ್ಯದ ವಿಷಯವಾಗಿ ಮಾತನಾಡಿದುದೇ ಮೊದಲು. ಅವರ ಪುಟ್ಟ ನಿಬಂಧವು ಮುಂದೆ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಯಿತು. ಹೊಸಪೇಟೆಯ ಶ್ರೀ ಹನುಮಂತಗೌಡ ಮೊದಲಾದವರು ಲಾವಣಿಗಳ ಸಂದರ್ಭವನ್ನು ಆಗಾಗ ಎತ್ತಿ ಮಾತನಾಡಿದರೂ ಲಾವಣಿ ಸಾಂಗತ್ಯಗಳ ವಿಷಯವಾಗಿ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರು ಪರಿಷತ್ಪತ್ರಿಕೆಯಲ್ಲಿ ಬರೆದ ಸೊಗಸಾದ ಲೇಖನವೇ ಮಹತ್ವದ ಬರಹ. ಕಲಬುರ್ಗಿ, ಬೆಳಗಾವಿ ಮತ್ತು ಮೈಸೂರು ಈ ಮೂರು ಸಮ್ಮೇಳನಗಳಲ್ಲಿಯೂ ಪ್ರಮುಖವಾಗಿ ಶ್ರೀಮಾನ್ ಶ್ರೀಕಂಠಯ್ಯನವರ ಪ್ರೋತ್ಸಾಹದಿಂದಲೂ ಪ್ರೀತಿಗಾಗಿಯೂ ಜನಪದ ಸಾಹಿತ್ಯ ವಿಚಾರವನ್ನು ಕುರಿತು ಸಮ್ಮೇಳನದ ಸಭಾಸದರ ಸಮಕ್ಷಮದಲ್ಲಿ ಚರ್ಚಿಸುವ ಸಂಧಿ ನನಗೆ ದೊರೆಯಿತು. ಬೆಳಗಾವಿಯ ಸಮ್ಮೇಳನದಲ್ಲಿ ಶ್ರೀ ಮಾಸ್ತಿಯವರು ಈ ವಿಷಯವನ್ನು ಕುರಿತು ಮಾತನಾಡಿದರು. ಮುಂದೆ 'ಜಯಕರ್ನಾಟಕ' ಪತ್ರಿಕೆಯವರು ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಯತ್ನಗಳಿಗೆ ಪೋಷಣೆಯನ್ನೀಯಲು ಆ ಮಾಸಪತ್ರಿಕೆಯಲ್ಲಿ ಪ್ರತ್ಯೇಕವಾಗಿ ಪುಟಗಳನ್ನು ಕೊಡುತ್ತ ಬಂದರು. ಈ ಮಧ್ಯದಲ್ಲಿ ಪ್ರಹ್ಲಾದ ನರೇಗಲ್ಲರವರು ಕರ್ನಾಟಕ ಕಾಲೇಜು ಪತ್ರಿಕೆಯಲ್ಲಿ 'ವಾಸ್ತವ ಸಾಹಿತ್ಯ' ಎಂಬ ಲೇಖನವನ್ನೂ ಬೇಟಗೇರಿಯವರು ಪರಿಷತ್ ಪತ್ರಿಕೆಯಲ್ಲಿ 'ಹಳ್ಳಿಗರ ಹಾಡುಗಳು' ಎಂಬ ಸೋದಾಹರಣವಾದ ನಿತಾಂತ ಮನೋಹರವಾದ ನಿಬಂಧವೊಂದನ್ನು, ಮುಂಬಯಿಯ ಪ್ರಬೋಧಕ ಮಾಸಪತ್ರಿಕೆಯ ಸಂಪಾದಕರು ಹಿರಿಬರಹವೊಂದನ್ನು ಬರೆದು ಜನಪದ ಸಾಹಿತ್ಯ ಸಂಗ್ರಹದ ಕಾರ್ಯವನ್ನು ಎತ್ತಿ ಹಿಡಿದಿದ್ದಾರೆ. ಪ್ರಬುದ್ಧ ಕರ್ನಾಟಕ, ರಂಗಭೂಮಿ, ಕಥಾಂಜಲಿ ಮೊದಲಾದ ಪತ್ರಿಕೆಗಳಲ್ಲಿಯೂ ಜನಪದ ಸಾಹಿತ್ಯವು ತಲೆದೋರದೆ ಇಲ್ಲ. ಈ ಪ್ರಯತ್ನಗಳ ಪ್ರಥಮ ಫಲವೆಂದು ಚನ್ನಮಲ್ಲಪ್ಪನವರೂ

ಅವರ ಗೆಳೆಯರೂ ಪ್ರಮುಖತಃ ಸಂಗ್ರಹಿಸಿದ, ಸಂಪಾದಿಸಿದ ಜನಪದ ಗಾಥಾ ಸಂಹಿತೆಯನ್ನು ಕನ್ನಡಿಗರಿಗೆ ಕೊಡುವ ಸುಯೋಗವು ಉಂಟಾಗಿದೆ" ಎಂದಿದ್ದಾರೆ.

ಗರತಿಯ ಹಾಡು ಕೃತಿಗೆ ಬಿ.ಎಂ.ಶ್ರೀ.ರವರು, ಬೇಂದ್ರೆ, ಮಾಸ್ತಿಯವರು ಬರೆದಿರುವ ಮುನ್ನುಡಿ ಮತ್ತು ಹಾರೈಕೆ, ಆಶೀರ್ವಾದ ರೂಪದ ಮಾತುಗಳನ್ನೆಲ್ಲ ಗಮನಿಸಿದರೆ ಜನಪದ ಸಾಹಿತ್ಯದ ಹುಟ್ಟಿನ ಮೂಲ, ಜನಪದರ ನಡುವೆ ಅದು ಉಳಿದು ಬೆಳೆದುಕೊಂಡು ಬಂದದ್ದು ಮತ್ತು ಅಧ್ಯಯನದ ಅಗತ್ಯದ ಬಗ್ಗೆ ಕೊಟ್ಟ ಹೇಳಿಕೆಗಳು ಇಂದಿಗೂ ಪ್ರಸ್ತುತ ಹಾಗೂ ಸಮಂಜಸ ಎನಿಸುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿ ಬಿ.ಎಂ.ಶ್ರೀ., ಬೇಂದ್ರೆ, ಮಾಸ್ತಿ ಇವರೆಲ್ಲ ಶಿಷ್ಟ ಸಾಹಿತ್ಯಾಭ್ಯಾಸದ ಹಿನ್ನೆಲೆಯಲ್ಲಿ ಬಂದವರಾದರೂ, ಅವರಿಗೆ ಜನಪದರು ಮತ್ತು ಅವರ ಸಾಹಿತ್ಯದ ಬಗ್ಗೆ ಇದ್ದ ಭಾವನೆ ಮತ್ತು ಕಳಕಳಿ ಎಷ್ಟು ಉನ್ನತ ಮಟ್ಟದ್ದು ಎಂಬುದು ವ್ಯಕ್ತವಾಗುತ್ತದೆ. ಇಷ್ಟು ಹೊತ್ತಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರಂಥವರು ತಮ್ಮ ಗದ್ಯ ಬರವಣಿಗೆಯಲ್ಲಿ ಸಂಪೂರ್ಣವಾಗಿ ಹಳ್ಳಿಯ ಬದುಕನ್ನು ಪ್ರಬಂಧ ಮತ್ತು ಕಥೆ, ಕಾದಂಬರಿಗಳ ರೂಪದಲ್ಲಿ ಬರೆಯತೊಡಗಿದರು. ಗೊರೂರರ ಬರವಣಿಗೆ ಶಿಷ್ಟ ಮಾದರಿಯ ಸೃಜನಶೀಲ ಬರವಣಿಗೆಯಾದರೂ ಅದರ ತಿರುಳೆಲ್ಲ ಜನಪದ ಬದುಕೇ ಆಗಿದ್ದಿತು. ಹಾಗೆ ನೋಡಿದರೆ ಸಂಸ್ಕೃತ ಮತ್ತು ಇಂಗ್ಲಿಷ್‌ನ ಹಿನ್ನೆಲೆಯಲ್ಲಿ ಬಂದ ಗೊರೂರರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಖಾದಿಧಾರಿಗಳಾಗಿ ಕೊನೆಗೆ ಗ್ರಾಮೀಣ ಬದುಕನ್ನೇ ಬದುಕಿ ತಮ್ಮ ಬರವಣಿಗೆಯ ವಸ್ತುವನ್ನಾಗಿ ಜನಪದರ ಜೀವನ ಕ್ರಮವನ್ನೇ ಆರಿಸಿಕೊಂಡರು. ಹೀಗಾಗಿ ನವೋದಯ ಸಾಹಿತ್ಯದ ಪ್ರವರ್ಧಮಾನ ಕಾಲಕ್ಕೆ ಪುರಾಣ ಅಥವಾ ಪರಂಪರೆಯ ವಸ್ತು ಸಂಗತಿಗಳು ಕೃತಿಗಳಲ್ಲಿ ಎಷ್ಟು ಪ್ರಾಮುಖ್ಯತೆಯನ್ನು ಗಳಿಸಿದ್ದುವೋ ಜನಪದ ಸಂಗತಿಗಳನ್ನಾಧರಿಸಿದ ಕಥಾಸಂಗತಿ, ಪಾತ್ರ, ಸನ್ನಿವೇಶಗಳು ವಿಪುಲ ಸಂಖ್ಯೆಯಲ್ಲಿ ಸೃಷ್ಟಿಗೊಂಡವು.

ಕೇವಲ ಜನಪದ ವಿದ್ವಾಂಸರೇ ಅಲ್ಲದೆ 1950–60ರ ಸುಮಾರಿಗೆ ಕನ್ನಡದ ಎಲ್ಲ ಲೇಖಕರೂ ಗ್ರಾಮೀಣ ಸಾಹಿತ್ಯ ಮತ್ತು ಅದರ ಬೆಳವಣಿಗೆಯನ್ನು ಕುರಿತು ಆಡಿದ ಮಾತು, ನೀಡಿದ ಪ್ರೋತ್ಸಾಹ ಮಾತ್ರ ಅನನ್ಯವಾದುದು. 1943ರಲ್ಲಿ ಬಿ.ಎಂ.ಶ್ರೀ.ಯವರು ಎಲ್. ಗುಂಡಪ್ಪ ಅವರ 'ನಾಡಪದಗಳು' ಪುಸ್ತಕಕ್ಕೆ ಮುನ್ನುಡಿ ಬರೆದಿದ್ದರೂ ಅದು 1947ರ ಸ್ವಾತಂತ್ರ್ಯ ಗಳಿಕೆಯ ವರ್ಷದಲ್ಲೇ ಪ್ರಕಟವಾಯಿತು. ಇಲ್ಲಿಯೂ ಬಿ.ಎಂ.ಶ್ರೀ. ಅವರು ಜನಪದವನ್ನು ಕುರಿತಂತೆ ಸ್ಮರಣಾರ್ಹ ಮಾತುಗಳನ್ನು ಆಡಿರುತ್ತಾರೆ. ಆದರೆ ಶ್ರೀಯವರಿಂದ ಮುನ್ನುಡಿ ಬರೆಸಿಕೊಂಡ ಗ್ರಂಥ; ಅದು ಮೂರು ವರ್ಷಗಳ ನಂತರ ಪ್ರಕಟವಾಗಿ ಬರುವ ಹೊತ್ತಿಗೆ ಶ್ರೀಯವರು ತೀರಿಕೊಂಡಿದ್ದ ಸಂಗತಿಯನ್ನು ಸಂಗ್ರಹಕಾರ ಎಲ್. ಗುಂಡಪ್ಪನವರು–ಆರ್ದ್ರ ಮನಸ್ಸಿನಿಂದ ನೆನೆಯುತ್ತಾರೆ. ಹೀಗೆ ಕ್ರಮವಾಗಿ 1949ರಲ್ಲಿ ಕೆ. ಆರ್. ಲಿಂಗಪ್ಪನವರು 'ಮಾನೌಮಿ ಪದಗಳು' ಎಂಬ ಜನಪದ ಗೀತ ಸಂಕಲನವನ್ನು ಪ್ರಕಟಿಸಿದರು. ಈ ಹಿಂದೆಯೇ ಗಮನಿಸಿದಂತೆ ಕೆ. ಆರ್. ಲಿಂಗಪ್ಪನವರು ಜನಪದ ಗೀತೆಗಳನ್ನು ಸಂಗ್ರಹಿಸಿ ಅವುಗಳ ಅಧ್ಯಯನ ನಡೆಸಿದ್ದಕ್ಕಿಂತ ಗೀತೆಗಳನ್ನು ಕರ್ನಾಟಕದಾದ್ಯಂತ

ಹಾಡಿ ಜನಪ್ರಿಯಗೊಳಿಸಿದ್ದೇ ಹೆಚ್ಚು. ಅತ್ಯಂತ ಸುಶ್ರಾವ್ಯವಾಗಿ ಕೇಳುಗರ ಮನಮುಟ್ಟುವಂತೆ ಜನಪದ ತ್ರಿಪದಿಗಳನ್ನು ಹಾಡುತ್ತಿದ್ದ ಕೆ. ಆರ್. ಲಿಂಗಪ್ಪನವರು ಜನಪದ ಸಾಹಿತ್ಯ ಹಾಡುಗಳು, ತ್ರಿಪದಿಗಳು ಎಂದರೆ ಅವು ಅದೆಷ್ಟು ಭಾವುಕ ಸಂಗತಿಗಳನ್ನು ಒಳಗೊಂಡಿವೆ ಎಂಬುದನ್ನು ಅತ್ಯಂತ ವಿಸ್ತಾರವಾಗಿ ಬಿತ್ತರಿಸುತ್ತಿದ್ದರು.

* * *

ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ' ಗ್ರಂಥವೊಂದನ್ನು ಬಿಟ್ಟರೆ ತದನಂತರ ಜನಪದ ಸಂಗ್ರಹವೆಂದರೆ ಅದು ಕಾವ್ಯ ಪ್ರಕಾರ ಎಂಬಂತೆಯೇ ಆಯಿತು. ಜನಪದ ಕಥೆಗಳು ಗ್ರಾಮ ವಾತಾವರಣದಲ್ಲಿ ಅದೇ ಸ್ತ್ರೀಪುರುಷ ವಕ್ತೃಗಳಿಂದ ಅಸಂಖ್ಯಾತವಾಗಿ ಹೇಳಿಕೊಳ್ಳಲ್ಪಡುತ್ತಿದ್ದರೂ ಅದರ ಸಂಗ್ರಹ ಮತ್ತು ಅಧ್ಯಯನ ಆರಂಭವಾದದ್ದು ತುಂಬ ತಡವಾಗಿಯೇ. ವಿಚಿತ್ರ ಸಂಗತಿ ಎಂದರೆ ಪಾಶ್ಚಾತ್ಯ ಜಗತ್ತಿನಲ್ಲಿ ತುಂಬ ವ್ಯಾಪಕ ಅಧ್ಯಯನ ನಡೆಯುತ್ತಿದ್ದುದು ಪ್ರಪಂಚದಾದ್ಯಂತ ಹಬ್ಬಿರುವ ಜನಪದ ಕಥೆಗಳ ಬಗೆಗೇ ಎಂಬುದು ಕುತೂಹಲದ ಸಂಗತಿ. ಆದರೆ ಕರ್ನಾಟಕದ ವಿದ್ವಾಂಸರ ಮೇಲೆ ಪಾಶ್ಚಾತ್ಯ ಜನಪದ ಅಧ್ಯಯನಗಳ ಪ್ರಭಾವ ಆಗುವ ಮುನ್ನವೇ ನಮ್ಮ ನಾಡಿನ ವಿದ್ವಾಂಸರು ಗ್ರಾಮೀಣ ಸಾಹಿತ್ಯವೆಂದರೆ ಜನಪದ ಗೀತೆ ಎಂತಲೇ ಅಂದುಕೊಂಡಿದ್ದರು. ಇದರಿಂದ ಸ್ವಾತಂತ್ರ್ಯಾನಂತರ ಅನೇಕ ಜನ ವಿದ್ವಾಂಸರು ಕರ್ನಾಟಕದಾದ್ಯಂತ ಸಂಚರಿಸಿ ಜನಪದ ಗೀತೆಗಳನ್ನು ಸಂಗ್ರಹಿಸಿದರು. 1950–60ರ ಕಾಲವನ್ನು ಜನಪದ ಸಂಗ್ರಹದ ಉತ್ಸಾಹ ಕಾಲವೆಂದೂ, 70–80ರ ದಶಕಗಳನ್ನು ಒಂದು ಬಗೆಯಲ್ಲಿ ಜನಪದ ಗೀತೆಗಳ ಸಂಗ್ರಹದ ಸುಗ್ಗಿಯ ಕಾಲವೆಂದೂ ತಿಳಿಯಬಹುದಾಗಿದೆ. ಯಾವಾಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜನಪದವು ಅಧ್ಯಯನ ವಿಷಯವಾಯಿತೋ, ಅನಂತರ ಜನಪದ ಸಂಗ್ರಾಹಕರ ಸಮೂಹವೇ ಆ ಕಾರ್ಯದಲ್ಲಿ ತೊಡಗಿತು. ಇಷ್ಟು ಹೊತ್ತಿಗಾಗಲೇ ಯುವಕರಿಗೆ ಸಂಗ್ರಹಕಾರ್ಯದಲ್ಲಿ ಮಾರ್ಗದರ್ಶಕರಾಗುವಂತೆ ಹಿರಿಯರ ಒಂದು ಸಮೂಹವೇ ಇದ್ದಿತು. ಅಂಥ ಹಿರಿಯರಿಗೆ ಜನಪದ ಸಾಹಿತ್ಯ ಅಂದರೆ ಗೀತ ಪ್ರಕಾರವನ್ನು ನಿರಂತರ ಸಂಗ್ರಹಿಸಿ ಪ್ರಕಟಿಸುವುದೇ ಜವಾಬ್ದಾರಿಯ ಕೆಲಸವಾಗಿತ್ತು. ಅರವತ್ತರ ದಶಕದಲ್ಲಿ ಅಂದರೆ ಜನಪದ ಜಗತ್ತಿಗೆ ಯುವಕರು ಪ್ರವೇಶ ಮಾಡುವುದಕ್ಕೆ ಮುನ್ನ ಇದ್ದ ಹಿರಿಯ ತಲೆಮಾರಿನ ವಿದ್ವಾಂಸರೆಂದರೆ, ದಕ್ಷಿಣ ಕರ್ನಾಟಕದಲ್ಲಿ ಕ. ರಾ. ಕೃಷ್ಣಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ, ಹೆಚ್. ಎಲ್. ನಾಗೇಗೌಡ, ಜೀ. ಶಂ. ಪರಮಶಿವಯ್ಯ, ಪಿ. ಆರ್. ತಿಪ್ಪೇಸ್ವಾಮಿ, ಸ. ಚ. ಮಹದೇವನಾಯಕ ಹಾಗೆಯೇ ಉತ್ತರ ಕರ್ನಾಟಕದಲ್ಲಿ ಎಂ. ಎಸ್. ಲಠ್ಠೆ, ಬಿ. ಬಿ. ಹೆಂಡಿ, ಆರ್. ಸಿ. ಹಿರೇಮಠ, ಬಿ. ಎಸ್. ಗದ್ದಗೀಮಠರು ಪ್ರಮುಖರು. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಅಮೃತ ಸೋಮೇಶ್ವರರು ಕಂಡುಬರುತ್ತಾರೆ. ಇವರೆಲ್ಲರೂ ಆರಂಭಕಾಲಕ್ಕೆ ಜನಪದ ಗೀತ ಸಂಗ್ರಹಗಳನ್ನೇ ಪ್ರಕಟಿಸಿದರು.

ಕ. ರಾ. ಕೃಷ್ಣಸ್ವಾಮಿಯವರು ಚಿತ್ರದುರ್ಗದಿಂದ ಹಿಡಿದು ದಕ್ಷಿಣ ಕರ್ನಾಟಕದ ಭಾಗಗಳಲ್ಲೆಲ್ಲ ವ್ಯಾಪಕವಾಗಿ ಸಂಚರಿಸಿ ಐತಿಹಾಸಿಕ ಜನಪದ ಗೀತೆಗಳು, ಕಥನ ಗೀತೆಗಳು,

ಸಾಂಸಾರಿಕ ಗೀತೆಗಳು, ದೈವಸ್ತುತಿ ಪದಗಳನ್ನು ಸಂಗ್ರಹಿಸಿದರು. ಇವರು ಸಂಗ್ರಹಿಸಿ ಪ್ರಕಟಿಸಿದ ಗೀತೆಗಳಿಗೆ ಒಂದು ಆವರಣ ಒದಗಿಸುವಂತೆ ಪಿ. ಆರ್. ತಿಪ್ಪೇಸ್ವಾಮಿಯವರು ರೇಖಾ ಚಿತ್ರಗಳನ್ನು ಬರೆಯುತ್ತಿದ್ದುದು ಜನಪದದ ಪ್ರಕಟಣೆಯ ಪ್ರಚಾರದಲ್ಲಿ ಇವರಿಗಿದ್ದ ಆಸಕ್ತಿಯನ್ನು ಸೂಚಿಸುತ್ತದೆ.

ಪಿ. ಆರ್. ತಿಪ್ಪೇಸ್ವಾಮಿಯವರ ಪುಟ್ಟ ಪುಟ್ಟ ರೇಖಾಚಿತ್ರಗಳು ಕ.ರಾ.ಕೃ. ಸಂಗ್ರಹಿಸಿದ ಜನಪದ ಗೀತೆಗಳ ಜೀವಂತ ಭಾಗಗಳಾಗಿ ಸಾಕಾರಗೊಂಡಂತೆ ಇರುತ್ತಿದ್ದವು. ಎಚ್. ಎಲ್. ನಾಗೇಗೌಡ ಅವರು ಒಬ್ಬ ಅಧಿಕಾರಿಯಾಗಿ, ಸಂಸ್ಕೃತಿಪ್ರಿಯರೂ ಆಗಿದ್ದರು. ಅವರು ಭಾಷಾಂತರಿಸಿದ ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು; ಅವು ಒಂದು ಅರ್ಥದಲ್ಲಿ ಪಾಶ್ಚಾತ್ಯ ಪ್ರವಾಸಿಗಳು ಭಾರತೀಯ ರಾಜಕೀಯ ಜೀವನವನ್ನು ಕಾಣುವುದರ ಜೊತೆಗೆ ಇಲ್ಲಿ ಗ್ರಾಮೀಣರ ಬದುಕೂ ಕೂಡ ಹೇಗೆ ಸಾಗುತ್ತಿತ್ತು ಎಂಬುದನ್ನು ದಾಖಲಿಸಿರುತ್ತವೆ. ಹೀಗಾಗಿ ಭಾರತದ ಜನಪದ ಅಥವಾ ಸಾಮಾಜಿಕ ಜೀವನದ ನಿಜ ಸ್ವರೂಪ ತಕ್ಕಮಟ್ಟಿಗಾದರೂ ತಿಳಿದುಬರುವುದೇ ಪಾಶ್ಚಾತ್ಯ ಪ್ರವಾಸಿಗಳಿಂದ. ಇಂಥ ಸಂಪುಟಗಳ ಭಾಷಾಂತರದ ಹಿನ್ನೆಲೆಯಲ್ಲಿ ಎಚ್. ಎಲ್. ನಾಗೇಗೌಡರಿಗೆ ಆ ಬರೆಹಗಳು ಜನಪದರ ಜೀವನವನ್ನು ತೆರೆದು ಇರಿಸುವುದೂ ಒಂದು ಮುಖ್ಯ ಉದ್ದೇಶವಾಗಿದ್ದಿರಬಹುದು. ಇದೇನೆ ಇರಲಿ, ನಾಗೇಗೌಡರು ಆ ಕಾಲಕ್ಕೆ ರೆವಿನ್ಯೂ ಅಧಿಕಾರಿಯಾಗಿದ್ದುದಕ್ಕಿಂತಲೂ ಹೆಚ್ಚಾಗಿ ಜನಪದ ಪ್ರೇಮಿಯಾಗಿದ್ದರು. ಹೀಗಾಗಿ ಅವರು ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಸ್ಥಳಗಳಲ್ಲೆಲ್ಲ ಜನಪದ ವಸ್ತುಗಳ ಸಂಗ್ರಹದ ಜೊತೆಗೆ, ಸಾಹಿತ್ಯ ಸಂಗ್ರಹವನ್ನೂ ಕೈಗೊಂಡರು. ನಾಗೇಗೌಡರು ತಾವು ಬದುಕಿರುವವರೆಗೂ ಜನಪದ ಸಂಗೀತ, ಜನಪದ ಸಾಹಿತ್ಯ, ಜನಪದ ವಸ್ತುಗಳ ಸಂಗ್ರಹವನ್ನೇ ಕುರಿತು ಆಲೋಚಿಸಿದ್ದರ ಪರಿಣಾಮವಾಗಿ ಇಂದಿಗೂ ಬೆಂಗಳೂರು, ಮೈಸೂರು ಹೆದ್ದಾರಿಯ ರಾಮನಗರ ಸಮೀಪದಲ್ಲಿ ಜನಪದ ಲೋಕ ವಿಶಿಷ್ಟ ರೀತಿಯಲ್ಲಿ ಬೆಳೆದು ನಿಂತಿದ್ದು, ಅದು ಜನಪದ ಆಸಕ್ತರೆಲ್ಲರೂ ಭೇಟಿ ನೀಡುವ ಕೇಂದ್ರವಾಗಿರುತ್ತದೆ.

ನಾಗೇಗೌಡರ ಸಮಕಾಲೀನರೇ ಆಗಿ ಜಾನಪದ ಸಂಗ್ರಹಕ್ಕೆ ತೊಡಗಿದವರು ಮತಿಘಟ್ಟ ಕೃಷ್ಣಮೂರ್ತಿಯವರು. ಇವರು ಹಾಸನ ಜಿಲ್ಲೆಯವರಾದರೂ ಇವರ ಕ್ಷೇತ್ರ ಕಾರ್ಯ ನಡೆದುದು ಕರ್ನಾಟಕದ ವ್ಯಾಪ್ತಿಯಲ್ಲಿ. ಮಹಾತ್ಮ ಗಾಂಧಿಯವರ ಪ್ರಭಾವ ಇವರ ಮೇಲಾದುದರಿಂದ ಕೇವಲ ಗ್ರಾಮಜೀವನದ ಮೇಲೇ ಅಲ್ಲದೆ ಅದರ ಇನ್ನೊಂದು ಭಾಗವಾದ ಜನಪದ ಸಾಹಿತ್ಯ ಮತ್ತು ಕಲೆಯ ಮೇಲೂ ಇವರ ಪ್ರೀತಿ ಬೆಳೆದು ಅದರ ಸಂಗ್ರಹಕಾರ್ಯಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಈ ಕಾರಣದಿಂದ ಮತಿಘಟ್ಟ ಕೃಷ್ಣಮೂರ್ತಿಯವರು ಜೀವಮಾನವಿಡೀ ಗ್ರಾಮಗಳ ಮೇಲೆ ಪ್ರಯಾಣ ಮಾಡುತ್ತ ಸಾವಿರಾರು ಪುಟಗಳಷ್ಟು ಜನಪದ ಗೀತೆಗಳನ್ನು ಸಂಗ್ರಹ ಮಾಡಿದರು. ಮತ್ತೆ ಅವರೇ ಆ ಗೀತ ಸಂಗ್ರಹವನ್ನು ಪ್ರಕಟಿಸುವ ಸಾಹಸವನ್ನು ಮಾಡಿದರು. ಮೊದಲ ತಲೆಮಾರಿನ ವಿದ್ವಾಂಸರೆಲ್ಲರೂ ಅಂತರಂಗ ಪೂರ್ವಕವಾಗಿಯೇ ಜನಪದ ಕ್ಷೇತ್ರ ಕಾರ್ಯಕ್ಕೆ

ತೊಡಗಿಕೊಂಡರು. ಮತಿಘಟ್ಟ ಕೃಷ್ಣಮೂರ್ತಿ ಅವರು ಕೇವಲ ಸಂಗ್ರಹವೇ ಅಲ್ಲದೆ ತಾವೇ ಆಯಾ ಗೀತೆಗಳ ಮಟ್ಟುಗಳನ್ನು ಹಾಡುತ್ತ ಜನಪದ ಗೀತೆಗಳ ಮಹತ್ವವೇನು ಎಂಬುದನ್ನು ಜನಪದರಿಗೇ ಮನದಟ್ಟು ಮಾಡಲು ಪ್ರಯತ್ನಿಸಿದರು. ಉತ್ತರ ಕರ್ನಾಟಕದ ಕಡೆ ಇವರು ಹೆಚ್ಚು ಸಂಚಾರ ಮಾಡದಿದ್ದರೂ, ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಅಪಾರ ಸಂಖ್ಯೆಯಲ್ಲಿ ವೈವಿಧ್ಯಮಯ ಗೀತೆಗಳನ್ನು ಸಂಗ್ರಹಿಸಿರುತ್ತಾರೆ. ಕ.ರಾ.ಕೃ., ಮತಿಘಟ್ಟ ಕೃಷ್ಣಮೂರ್ತಿ, ನಾಗೇಗೌಡ ಇವರೆಲ್ಲರೂ ಆ ಸಂದರ್ಭದಲ್ಲಿ ಯಾರಿಂದಲೂ ಯಾವ ನೆರವನ್ನೂ ನಿರೀಕ್ಷಿಸದೆ ಜನಪದ ಕ್ಷೇತ್ರದಲ್ಲಿ ಕೆಲಸ ಮಾಡಿದರು.

ಇದೇ ಸಂದರ್ಭದಲ್ಲಿ ಎಲ್. ಆರ್. ಹೆಗಡೆಯವರು, ಎನ್. ಆರ್. ನಾಯಕ ಮತ್ತು ಶಾಂತಿನಾಯಕರು ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರರು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜನಪದ ಸಂಗ್ರಾಹಕರಾಗಿ, ಚಿಂತಕರಾಗಿ ಕೆಲಸ ಮಾಡಿದರು. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಬಾಳಿಗಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಎಲ್. ಆರ್. ಹೆಗಡೆ, ಹೊನ್ನಾವರದ ಮಂಜುನಾಥೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಎನ್. ಆರ್. ನಾಯಕ, ಹಾಗೆಯೇ ಮತ್ತೊಬ್ಬ ಕನ್ನಡ ಪ್ರಾಧ್ಯಾಪಕರೇ ಆಗಿದ್ದ ಅಮೃತ ಸೋಮೇಶ್ವರ ಇವರೆಲ್ಲರೂ ದಕ್ಷಿಣ ಕರ್ನಾಟಕದ ವಿದ್ವಾಂಸರಂತೆ ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕ ಜನಪದ ಕ್ಷೇತ್ರಕಾರ್ಯವನ್ನು ಕೈಗೊಂಡರು. ಆ ಪ್ರದೇಶದಲ್ಲಿ ದೊರಕಬಹುದಾದ ಜನಪದ ಸಾಹಿತ್ಯವನ್ನು ನಿರಂತರವಾಗಿ ಸಂಗ್ರಹಿಸುವ ಕಾಯಕವನ್ನು ತಮ್ಮ ಜೀವನ ಧ್ಯೇಯವನ್ನಾಗಿಸಿಕೊಂಡರು. ಬಿಡಿಗೀತೆಗಳು, ಕಥನಗೀತೆಗಳು, ಮಹಾಭಾರತ ಕಥನಗಳೆಲ್ಲವೂ ಇವರಿಂದ ಅಪಾರ ಸಂಖ್ಯೆಯಲ್ಲಿ ಪ್ರಕಟವಾದವು.

ಎಲ್. ಆರ್. ಹೆಗಡೆಯವರು ಸ್ವತಃ ಜನಪದ ವೈದ್ಯರಾಗಿದ್ದರು. ಆ ದಿಸೆಯಲ್ಲಿಯೂ ಅವರು ಗ್ರಂಥಗಳನ್ನು ಪ್ರಕಟಿಸಿರುತ್ತಾರೆ. ಇದೇ ಬಗೆಯ ಆಸಕ್ತಿಯನ್ನು ಎನ್. ಆರ್. ನಾಯಕರು ಮತ್ತು ಶಾಂತಿನಾಯಕ ಅವರು ತಳೆದವರಾಗಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಆಹಾರ, ಪಾನೀಯಗಳಿಂದ ಹಿಡಿದು ಜನಪದ ವೈದ್ಯದವರೆಗೆ ಅನೇಕ ಗ್ರಂಥಗಳನ್ನು ಪ್ರಕಟಿಸಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಪ್ರಾಧ್ಯಾಪಕ ಅಮೃತ ಸೋಮೇಶ್ವರರು ಎನ್. ಆರ್. ನಾಯಕರ ತಲೆಮಾರಿಗೇ ಸೇರಿದ ಜನಪದ ವಿದ್ವಾಂಸರಾಗಿದ್ದು ಅವರು ಆ ಪ್ರದೇಶದಲ್ಲಿ ದೊರಕುವ ತುಳು ಪಾಡ್ದನಗಳನ್ನು ಸಂಗ್ರಹಿಸಿ, ಅವುಗಳನ್ನಿಟ್ಟುಕೊಂಡು ಸೃಜನಶೀಲ ಕೃತಿಗಳನ್ನೂ ರಚಿಸಿರುತ್ತಾರೆ. ಶಿವರಾಮ ಕಾರಂತರು ತಮ್ಮ ವ್ಯಾಪಕ ಸಂಚಾರದ ಸಂದರ್ಭದಲ್ಲಿ ತುಳು ಪಾಡ್ದನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವಿಶೇಷ ಜನಪದ ಪ್ರಕಾರವೆನಿಸುವ ಯಕ್ಷಗಾನ ಇದರ ಬಗ್ಗೆ ವಿಶೇಷ ಕೆಲಸ ಮಾಡಿರುತ್ತಾರೆ. ಉಡುಪಿಯ ಎಂ.ಜಿ.ಎಂ. ಕಾಲೇಜಿನ ಕು. ಶಿ. ಹರಿದಾಸಭಟ್ಟರು ವೃತ್ತಿಯಲ್ಲಿ ಅರ್ಥಶಾಸ್ತ್ರಜ್ಞರಾದರೂ, ದಕ್ಷಿಣ ಕನ್ನಡ ಜಿಲ್ಲೆಯ ಜನಪದ ರಂಗಕಲೆಗಳ ಅಧ್ಯಯನಕ್ಕಾಗಿ ಒಂದು ಕೇಂದ್ರವನ್ನೇ ತೆರೆದು ಅದು ವಿಶ್ವದಾದ್ಯಂತ ಜನಪದ ವಿದ್ವಾಂಸರ ಗಮನ ಸೆಳೆಯುವಂತಾಯಿತು. ಅವರೆಲ್ಲರೂ ಈ ಕಲೆಗಳ ಅಧ್ಯಯನ ಕೇಂದ್ರಕ್ಕೆ ನೆರವು ನೀಡುವುದಲ್ಲದೆ ಅಲ್ಲಿಯೇ

ಅವರ ಆಶ್ರಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಲೆ, ತುಳು ಭಾಷೆಯ ಬಗ್ಗೆ ಕೆಲಸ ಮಾಡುವಂತಾದರು. ದಕ್ಷಿಣ ಕನ್ನಡ ಜಿಲ್ಲೆಗೆ ವಿಶೇಷ ಆಚರಣೆಯೆನಿಸುವ ಭೂತಾರಾಧನೆ, ತುಳು ಪಾಡ್ದನಗಳು, ಆಚರಣೆಗಳು ಹೀಗೆಲ್ಲ ಒಟ್ಟು ಆ ಪ್ರಾದೇಶಿಕ ಜನಪದ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದು, ಅದು ವಿಶ್ವವ್ಯಾಪಕತೆ ಪಡೆಯಲು ಸಹಾಯಕವಾಯಿತು. ಇಂಥದೆಲ್ಲ ಪ್ರೇರಣೆಗಳಿಗೆ ಉಡುಪಿಯಲ್ಲಿ ಕು. ಶಿ. ಹರಿದಾಸಭಟ್ಟರು ಆರಂಭಿಸಿದ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರವೇ ಕಾರಣವಾಯಿತೆನ್ನಬೇಕು. ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರದ ಇನ್ನೊಂದು ಮುಖ್ಯ ಸಾಧನೆ ಎಂದರೆ ಲಾರಿಹಾಂಕೋ ಅವರು ರಂಗಕಲೆಗಳ ಅಧ್ಯಯನ ಕೇಂದ್ರ ಮತ್ತು ದೇಶೀಯ ವಿದ್ವಾಂಸರಾದ ಬಿ. ಎ. ವಿವೇಕ ರೈ, ಕೆ. ಚಿನ್ನಪ್ಪಗೌಡ, ಎಸ್. ಎ. ಕೃಷ್ಣಯ್ಯ ಇವರೆಲ್ಲರ ಸಹಕಾರದಿಂದ ತುಳುಭಾಷೆಯ ಸಿರಿ ಮಹಾಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದು. ಇದು ಕು. ಶಿ. ಹರಿದಾಸರ ಭಟ್ಟರ ಸಾಧನೆಗಳಲ್ಲಿ ಕಿರೀಟಪ್ರಾಯವಾಯಿತು. ಇದೇನಿದ್ದರೂ ಕನ್ನಡ ಜನಪದದ ತೊಂಬತ್ತರ ದಶಕದ ಮಾತು. ಮತ್ತೆ ಕನ್ನಡ ಜನಪದದ ಮೊದಲ ತಲೆಮಾರಿನ ವಿದ್ವಾಂಸರ ಸಾಧನೆಯ ವಿವರಗಳಿಗೆ ಬರುವುದಾದರೆ ಉತ್ತರ ಕರ್ನಾಟಕದಲ್ಲಿ ನಡೆದ ಸಂಗ್ರಹ ಕಾರ್ಯವೇನೂ ಕಡಿಮೆ ಪ್ರಮಾಣದ್ದಲ್ಲ.

* * *

ವಿಶ್ವವಿದ್ಯಾನಿಲಯ – ಜಾನಪದ

1950ರ ಸುಮಾರಿನಲ್ಲೇ ಬಿ. ಎಸ್. ಗದ್ದಗೀಮಠ ಅವರು ಉತ್ತರ ಕರ್ನಾಟಕದಾದ್ಯಂತ ದೊರಕುವ ಅಮೂಲ್ಯ ಜನಪದ ಗೀತೆಗಳನ್ನೆಲ್ಲ ಸಂಗ್ರಹಿಸಿ ಪ್ರಕಟಿಸುವುದಲ್ಲದೆ ಅವುಗಳನ್ನು ಅಧ್ಯಯನಕ್ಕೂ ಒಳಪಡಿಸಿ ಕನ್ನಡ ಜನಪದ ಸಂಬಂಧ ಮೊದಲ ಪಿಹೆಚ್.ಡಿ. ಪದವಿಯನ್ನು ಪಡೆದರು. ಇವರೊಂದಿಗೆ ಬಿ. ಬಿ. ಹೆಂಡಿ, ಮಲ್ಲಿಕಾರ್ಜುನ ಶಿ. ಲಠ್ಠೆ, ಆರ್. ಸಿ. ಹಿರೇಮಠ, ಪಿ. ಧೂಲಾಸಾಹೇಬ ಇವರೆಲ್ಲರೂ ಉತ್ತರ ಕರ್ನಾಟಕದ ಮೊದಲ ತಲೆಮಾರಿನ ಜನಪದ ಅಧ್ಯಯನಕಾರರಾಗಿ ಕಂಡುಬರುತ್ತಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಿಷಯವೂ ವಿದ್ಯಾರ್ಥಿಗಳ ಅಧ್ಯಯನಕ್ಕೆ ದೊರಕಿದ ಮೇಲೆ ಅಲ್ಲಿಯ ಜಾನಪದ ವಿಭಾಗಕ್ಕೆ ಅಧ್ಯಾಪಕರಾಗಿ ಮೊದಲ ಬಾರಿಗೆ ನೇಮಕಗೊಂಡವರು ಜೀ. ಶಂ. ಪರಮಶಿವಯ್ಯನವರು. ಇಲ್ಲಿ ಜನಪದ ವಿಭಾಗ ಮತ್ತು ವಸ್ತುಸಂಗ್ರಹಾಲಯ ಆರಂಭವಾಗಲು ಕಾರಣರಾದವರು ದೇ. ಜವರೇಗೌಡರು. ಸ್ವತಃ ದೇಜಗೌ ಅವರು ತಮ್ಮ ಮನೆಯ ವಸ್ತುಗಳನ್ನು ತಂದಿಟ್ಟು ಮೈಸೂರು ವಿಶ್ವವಿದ್ಯಾನಿಲಯದ ಈಗಿನ ಜನಪದ ಮತ್ತು ಸಂಗ್ರಹಾಲಯವನ್ನು ಸ್ಥಾಪಿಸಿದರು. ಈ ಸಂಗ್ರಹಾಲಯಕ್ಕೆ ಕರ್ನಾಟಕದಾದ್ಯಂತ ಸಂಚರಿಸಿ ಜನಪದರ ಜೀವನಕ್ರಮಕ್ಕೆ ಸಂಬಂಧಿಸಿದ ವಸ್ತುಗಳನ್ನು ಶೇಖರಿಸಿ ತರುವ ಶ್ರಮವನ್ನು ತೆಗೆದುಕೊಂಡವರು ಚಿತ್ರದುರ್ಗ ಜಿಲ್ಲೆಯ

ಹರ್ತಿಕೋಟೆಯ ಪಿ. ಆರ್. ತಿಪ್ಪೇಸ್ವಾಮಿಯವರು. ಇವರು ವಸ್ತುಸಂಗ್ರಹಾಲಯದ ಮೇಲ್ವಿಚಾರಕರಾಗಿ ಕೆಲಸ ಮಾಡಿದವರು. ಹೀಗೆಯೇ ಜನಪದ ಅಧ್ಯಯನಕ್ಕೆ ನೆರವಾಗುವಂತೆ ದೇಜಗೌ ಅವರು ಆಗಲೇ 'ಜಾನಪದ ಅಧ್ಯಯನ' ಎಂಬ ಜಾನಪದ ವಿವರಗಳ ಬಹುಮುಖಿ ನೋಟವುಳ್ಳ ಒಂದು ಮಹತ್ವದ ಗ್ರಂಥವನ್ನು ಪ್ರಕಟಿಸಿದರು. ಅದೇ ವೇಳೆ 'ಜನಪದ' 'ಜಾನಪದ' ಎಂಬ ಎರಡು ಪದಗಳ ನಡುವಣ ವ್ಯತ್ಯಾಸ, ಅದರ ಸ್ವರೂಪ, ಅರ್ಥವನ್ನು ಕುರಿತು ಹಾ. ಮಾ. ನಾಯಕರು ಅರ್ಥಪೂರ್ಣ ಚರ್ಚೆಯನ್ನು ನಡೆಸಿ ಒಂದು ಪುಟ್ಟ ಪುಸ್ತಿಕೆಯನ್ನು 'ಜಾನಪದ ಸ್ವರೂಪ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದರು. ಮತ್ತು ಜಾನಪದ ವಿಭಾಗದ ಪ್ರಾಧ್ಯಾಪಕರಾಗಿದ್ದ ಜೀ.ಶಂ.ಪ. ಅವರು ತಮ್ಮ ವ್ಯಾಪಕ ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕರ್ನಾಟಕದ ಅನೇಕ ಬಗೆಯ ವೃತ್ತಿಗಾಯಕರನ್ನು ಗುರುತಿಸಿದ್ದಲ್ಲದೆ ಆ ಹಿನ್ನೆಲೆಯ ಕಥನಗಳ ಅಧ್ಯಯನ ವಿಶ್ಲೇಷಣೆ ಇರುವ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಎಂಬ ಸಂಶೋಧನ ಮಹಾಪ್ರಬಂಧವನ್ನು ಪ್ರಕಟಿಸಿದರು.

ಜೀ.ಶಂ.ಪ. ಅವರು ವೃತ್ತಿಗಾಯಕರ ಜೀವನ ಕ್ರಮ, ಆಚರಣೆಗಳು ಮತ್ತು ಅವರು ವ್ರತದಂತೆ ನಂಬಿ ಹಾಡಿಕೊಂಡು ಬಂದ ಕಾವ್ಯ ಕೃತಿಗಳನ್ನು ಕುರಿತು ಮಹಾ ಪ್ರಬಂಧವನ್ನು ಪ್ರಕಟಿಸಿದ್ದಲ್ಲದೆ ತದನಂತರದಲ್ಲಿ 'ವೃತ್ತಿಗಾಯಕರ ಕಾವ್ಯಗಳು' ಎಂಬ ಬೃಹತ್ ಜನಪದ ಕಾವ್ಯ ಗ್ರಂಥವನ್ನೂ ಪ್ರಕಟಿಸಿದರು. ಈ ಗ್ರಂಥವು ಕರ್ನಾಟಕದ ಜನಪದ ಕಥನ ಕಾವ್ಯ ಮಾದರಿಗಳನ್ನು ತಿಳಿಸಿಕೊಡುವ ಬೃಹತ್ ಕಾವ್ಯ ಸಂಕಲನವಾಗಿ ಜನಪದ ಕಾವ್ಯ ಪ್ರಕಟಣೆಯ ಹಾದಿಯಲ್ಲಿ ಒಂದು ಮೈಲಿಗಲ್ಲು ಎನಿಸುವಂತಿದೆ. ಜೀಶಂಪ ಅವರ ವೃತ್ತಿಗಾಯಕರ ಅಧ್ಯಯನ ಗ್ರಂಥ ಮತ್ತು ವೃತ್ತಿಗಾಯಕರ ಕಾವ್ಯಗಳು ಪ್ರಕಟವಾದುದು 1980ರ ಸುಮಾರಿನಲ್ಲಿಯೇ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ 1973ರಿಂದ ಜಾನಪದ ಐಚ್ಛಿಕ ವಿಷಯದ ಅಧ್ಯಯನ ಮತ್ತು ಜಾನಪದದಲ್ಲಿಯೇ ಸ್ನಾತಕೋತ್ತರ ಪದವಿ ತರಗತಿಗಳು ಆರಂಭವಾದ ಸಂದರ್ಭದಲ್ಲಿ ಅನೇಕ ಜನ ಸ್ನಾತಕೋತ್ತರ ಪದವಿಯನ್ನು ಪಡೆದ ವಿದ್ಯಾರ್ಥಿಗಳು ಹೊರಬಂದರು. ಅವರಲ್ಲಿ ಅನೇಕರು ಜನಪದ ಸಾಹಿತ್ಯ ಸಂಗ್ರಹವನ್ನು ಒಂದು ವ್ರತದಂತೆ ಕೈಗೊಂಡರು. ಆರಂಭದ ಹಿರಿಯ ತಲೆಮಾರಿನವರ ಮಾರ್ಗದರ್ಶನ ಮತ್ತು ಉತ್ಸಾಹವನ್ನು ಪಡೆದು ಕರ್ನಾಟಕದಾದ್ಯಂತ ಎರಡನೆಯ ತಲೆಮಾರಿನ ಯುವಕರು ಜನಪದ ಮಹಾಕಾವ್ಯಗಳು, ವೈವಿಧ್ಯಮಯ ಕಥನಗೀತೆಯ ಪ್ರಕಾರಗಳು ಮತ್ತು ಕಥೆಗಳನ್ನು ಸಂಗ್ರಹಿಸತೊಡಗಿದರು. ಈ ಮಧ್ಯೆ ಪಾಶ್ಚಾತ್ಯ ದೇಶಗಳಲ್ಲಿ ಜಾನಪದದ ಬಗ್ಗೆ ಯಾವ ಬಗೆಯ ಅಧ್ಯಯನ, ಚರ್ಚೆ, ವಿಶ್ಲೇಷಣೆ ನಡೆದಿದೆ ಎಂಬ ಅರಿವು ಕೂಡ ಎರಡನೆಯ ತಲೆಮಾರಿನ ವಿದ್ವಾಂಸರ ಗಮನಕ್ಕೆ ಬಂದದ್ದು ಗಮನಿಸಬೇಕಾದ ಸಂಗತಿ. ಈ ಕಾರಣದಿಂದ ಯುವ ವಿದ್ವಾಂಸರ ಸಂಗ್ರಹದ ಬಗೆಯಲ್ಲಿ ಅಧ್ಯಯನ ಮತ್ತು ವಿಶ್ಲೇಷಣೆಯಲ್ಲಿ ಹೊಸತನಗಳು ಹುಟ್ಟಿಕೊಂಡು ಜಾನಪದವನ್ನು ನೋಡುವ ದೃಷ್ಟಿಯೇ ಬದಲಾಯಿತು.

ಮೊದಲ ತಲೆಮಾರಿನ ವಿದ್ವಾಂಸರಿಗೆ ಜನಪದರ ಸಾಹಿತ್ಯ ಮಾತ್ರ ಮುಖ್ಯವಾಗಿತ್ತೇ ಹೊರತು ಅವರು ಅದನ್ನು ನಿರೂಪಿಸುವವರ ಜಾತಿಮತ, ಹಿನ್ನೆಲೆ, ಮನಸ್ಸು ಹಾಗೆ ಕಥೆ ಕಥನಗಳನ್ನು ಕಲಿತು ಹಾಡಲು ಒದಗಿ ಬಂದ ಪ್ರೇರಣೆ, ಕಲಿಸಿದವರು ಯಾರು ಎಂಬುದರ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ. ಆದರೆ ಎರಡನೆಯ ಹೊಸ ತಲೆಮಾರಿಗೆ ಜನಪದ ಸಾಹಿತ್ಯ ಮಾತ್ರವಲ್ಲದೆ ಒಟ್ಟು ಅದರ ಪರಿಸರವೇ ಮುಖ್ಯವಾಯಿತು. ಬೇರೆ ಪ್ರದೇಶದಲ್ಲಿ ಅದೇ ಗೀತೆಯ ಪಾಠಾಂತರ ದೊರಕುವುದಾದರೆ ಅದೂ ಕೂಡ ಇನ್ನೊಂದು ಭಿನ್ನಪಠ್ಯ ಎಂದು ಕರೆಸಿಕೊಂಡಿತು. ಪ್ರಾದೇಶಿಕವಾಗಿ ಪಠ್ಯಗಳು ಒಂದಕ್ಕಿಂತ ಇನ್ನೊಂದು ಹೇಗೆ ಭಿನ್ನ ಎಂದು ಗಮನಿಸುವ ಚಿಂತನೆಗಳು ಬೆಳೆದವು. ಈ ಕಾರಣವಾಗಿ ಒಂದೇ ಮಾದರಿಯ ಕಥನಗಳು ಕರ್ನಾಟಕದ ಬೇರೆ ಬೇರೆಯ ಭಾಗಗಳಲ್ಲೆಲ್ಲ ಸಂಗ್ರಹವಾದವು. ಆದರೆ ಆಯಾ ಪ್ರದೇಶಕ್ಕೆ ಸೀಮಿತವೆನಿಸುವ ಕಥನಗಳೂ ಅಸಂಖ್ಯಾತವಾಗಿ ಸಂಗ್ರಾಹಕರ ಗಮನಕ್ಕೆ ಬಂದವು.

* * *

ಜನಪದ ಕಾವ್ಯ ಕಥನಗಳು

ಎರಡನೆಯ ತಲೆಮಾರಿನ ಜನಪದ ಕಾವ್ಯ ಪ್ರಕಾರದ ಮುಖ್ಯ ಸಂಗ್ರಹ ಮತ್ತು ಶೋಧನೆ ಎಂದರೆ 'ಮಲೆಯ ಮಹದೇಶ್ವರನ ಜನಪದ ಮಹಾಕಾವ್ಯ' ಸಂಗ್ರಹ. ಈ ಆಡುಮಾತಿನ ಮಹಾಕಾವ್ಯದ ಸಣ್ಣಪುಟ್ಟ ಭಾಗಗಳು ಅಲ್ಲಲ್ಲಿ ಸಂಗ್ರಹಗೊಂಡಿದ್ದರೂ, ಸಮಗ್ರವಾಗಿ ಇದನ್ನು ಎಪ್ಪತ್ತರ ದಶಕದಲ್ಲಿ ಸಂಗ್ರಹಿಸಿ ಪ್ರಕಟಿಸಿದವರು ಪಿ. ಕೆ. ರಾಜಶೇಖರ ಅವರು. 1973ರಲ್ಲಿ ಪಿ. ಕೆ. ರಾಜಶೇಖರ ಅವರು ಸಂಗ್ರಹಿಸಿರುವ ಮಹಾಕಾವ್ಯ ಮಲೆಯ ಮಹದೇಶ್ವರನ ಕಥೆ ಬೇರೆ ಬೇರೆ ಎನ್ನುವಂಥ ಕಥಾನಕಗಳನ್ನು ಒಳಗೊಂಡು ಬೆಳೆದಿರುವಂಥದ್ದು. ಮಹದೇಶ್ವರನ ಭಕ್ತರೆನಿಸುವ ಕಂಸಾಳೆಗುಡ್ಡರು ಈ ಮಹಾಕಾವ್ಯದ ಭಾಗ ಭಾಗಗಳನ್ನು ದಿನಗಟ್ಟಲೆ ಹಾಡುವುದುಂಟು. ಆದರೆ ಜಾತ್ರೆಯ ಸಂದರ್ಭ ಬಿಟ್ಟರೆ ಈ ಮಹಾಕಥಾನಕವನ್ನು ಹಾಡುವವರು ಪುರುಷರೇ ಹೊರತು ಸ್ತ್ರೀಯರಲ್ಲ. ಈ ಹಿನ್ನೆಲೆಯಲ್ಲಿ ಮಹದೇಶ್ವರನನ್ನು ಕುರಿತಾದ ಈ ಕಥನಗಳ ಸೃಷ್ಟಿಯಲ್ಲಿ ಸ್ತ್ರೀಯರ ಪಾಲುಗೊಳ್ಳುವಿಕೆಗಿಂತ ಪುರುಷರ ಕೈಯ್ಯೇ ಮೇಲಾಗಿ ಒಟ್ಟು ಕಾವ್ಯಕಥನ ಪುರುಷ ಪರವಾಗಿಯೇ ಇರುವುದರ ಸೂಚನೆಗಳು ಕಂಡುಬರುತ್ತವೆ. ಇಂಥದೊಂದು ಮಹಾಕಾವ್ಯವನ್ನು 73ರ ಸುಮಾರಿನಲ್ಲಿಯೇ ಪಿ. ಕೆ. ರಾಜಶೇಖರ ಅವರು ಎರಡು ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸುವ ಸಾಹಸವನ್ನು ಯಶಸ್ವಿಯಾಗಿ ನೆರವೇರಿಸಿರುತ್ತಾರೆ. ಅಲ್ಲಿಂದ ಮೊದಲುಗೊಂಡು ಕನ್ನಡ ಜನಪದ ಪರಂಪರೆಯಲ್ಲಿ ಜನಪದ ಮಹಾಕಾವ್ಯ ಸಂಗ್ರಹ ಅಧ್ಯಯನ ಆರಂಭವಾದವೆಂತಲೇ ಹೇಳಬೇಕು. ಅದೇ ವೇಳೆ 'ಧರೆಗೆ ದೊಡ್ಡವರು' ಎಂಬ ಶೀರ್ಷಿಕೆಯಡಿ ಮಂಟೆಸ್ವಾಮಿ ಕಾವ್ಯವನ್ನು ತಮಂಪಮೂರ್ತಿಯವರು ಸಂಗ್ರಹಿಸಿ

ಪ್ರಕಟಿಸಿದರು. ಈ ಕಾಲಘಟ್ಟದಿಂದ ಮಂಟೇಸ್ವಾಮಿ ಮಹದೇಶ್ವರರನ್ನು ಕುರಿತಾದ ಅಧ್ಯಯನಗಳೂ ಆರಂಭವಾದವು.

ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದೊಳಗೆ ಏರ್ಪಟ್ಟ ಸಾಮಾಜಿಕ ಕ್ರಾಂತಿಯ ನಿಲುಗಡೆಯ ನಂತರ ಅದು ಮತ್ತೆ ಹದಿನೈದನೆಯ ಶತಮಾನದಲ್ಲಿ ಕರ್ನಾಟಕದ ಬೇರೆ ಬೇರೆಯ ಭಾಗಗಳಲ್ಲಿ ಜಾಗೃತಗೊಂಡಿತು. ಕಲ್ಯಾಣದಲ್ಲಿ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ ತಮ್ಮ ಸಂದರ್ಭದ ರಾಜಕಾರಣ ಮತ್ತು ಸಾಮಾಜಿಕ ಪರಂಪರೆಯೇ ಅಲ್ಲದೆ ಧರ್ಮದ ಮೂಲಭೂತ ಬದಲಾವಣೆಗೆ ಕಾರಣರಾದರು ಎನ್ನುವುದಾದರೆ ಮಹದೇಶ್ವರ, ಮಂಟೇಸ್ವಾಮಿ ಮುಂತಾದವರು ಜನಪದರ ಪುನರುಜ್ಜೀವನದ ಉತ್ಥಾನಕ್ಕೆ ಕಾರಣರಾದರು. ಕಲ್ಯಾಣದ ಶರಣರ ಉದ್ದೇಶಗಳನ್ನು ಇತರರು ಅತ್ಯಂತ ಕ್ರಿಯಾಶೀಲರೂಪದಲ್ಲಿ ಮುಂದುವರೆಸಿದರು. ಉತ್ತರದಿಂದ ದಕ್ಷಿಣ ಕರ್ನಾಟಕದ ಕತ್ತಲ ರಾಜ್ಯಕ್ಕೆ ಬಂದ ಮಂಟೇಸ್ವಾಮಿಯವರು ಇಲ್ಲಿಯ ಬುಡಕಟ್ಟು ಜನಗಳ ವ್ಯವಸಾಯ ಜೀವನವನ್ನು ಪುನರುಜ್ಜೀವಿಸಲು ಸಹಕರಿಸಿದರು. ಮಂಟೇಸ್ವಾಮಿ ತನ್ನ ಶಿಷ್ಯನಾದ ಸಿದ್ದಪ್ಪಾಜಿಗೆ ಹಲಗೂರು ಪಾಂಚಾಳರಿಂದ ಕಬ್ಬಿಣದ ಗಟ್ಟಿಯನ್ನು ತರುವಂತೆ ಆಜ್ಞಾಪಿಸಿರುತ್ತಾರೆ. ಹಲಗೂರು ಪಾಂಚಾಳರು ರೈತರ ನಿರಂತರ ಸಹಾಯಕ್ಕೆ ಬೇಕಾಗುವ ಕಬ್ಬಿಣವನ್ನು ಇನ್ನೊಬ್ಬರ ನೆರವಿಗೆ ಬಿಡದೆ ತಮ್ಮಲ್ಲಿಯೇ ಇರಿಸಿಕೊಂಡಿರುವುದನ್ನು ಬಿಡಿಸಿಕೊಂಡು ಬರಲು ಸಿದ್ದಪ್ಪಾಜಿ ತಾನು ಕಲಿತ ಪವಾಡವನ್ನೆಲ್ಲ ಮೆರೆಯುವುದರ ಮುಖ್ಯ ಪ್ರಸ್ತಾಪ ಮಂಟೇಸ್ವಾಮಿ ಕಥೆಯಲ್ಲಿ ಬರುತ್ತದೆ. ಸಾಮಾನ್ಯರ ನೆರವಿಗೆ ಬಂದ ಮಂಟೇಸ್ವಾಮಿಯನ್ನು ಜನಪದರು 'ಧರೆಗೆ ದೊಡ್ಡವರು' ಎಂದು ಕರೆದರು. ಅಂತೆಯೇ ಮಲೆಯ ಮಹದೇಶ್ವರನು ಒಬ್ಬ ಅಧ್ಯಾತ್ಮಿಯಾಗಿದ್ದು ಹುಲಿಯ ಮೇಲೆ ಸವಾರಿ ಮಾಡುವವನಾಗಿರುತ್ತಾನೆ. ಹುಲಿಯ ಮೇಲೆ ಕೂತ ಶರಣನಾದುದರಿಂದಲೇ ಈತ ಅಹಿಂಸಾ ಪ್ರತಿಪಾದಕನಾಗಿಯೂ ಕಾಣುತ್ತಾನೆ. ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸಿದಂತೆಯೂ ಕಥೆಯಿಂದಲೇ ತಿಳಿದುಬರುತ್ತದೆ.

ಮೈಸೂರಿನ ಚಾಮುಂಡೇಶ್ವರಿಯ ಮೋಹದಿಂದ ತಪ್ಪಿಸಿಕೊಂಡು ಮೂಡುದಿಕ್ಕಿನ ಅರಣ್ಯಗಳ ನಡುವೆ ನಡೆದು ಏಳುಮಲೆಯ ಆಚೆಯ ನಾಗಮಲೆಯಲ್ಲಿ ನೆಲೆಗೊಂಡನೆಂಬ ಕಥೆ ಈತನ ಜಂಗಮತತ್ವ, ಬ್ರಹ್ಮಚರ್ಯೆಯ ಸಾಧನೆ, ಅಧ್ಯಾತ್ಮದ ಹಿನ್ನೆಲೆಯನ್ನು ತಿಳಿಸುತ್ತದಲ್ಲದೆ ದುಷ್ಟನಿಗ್ರಹ ಶಕ್ತಿಯೂ ಈತನ ಮುಖ್ಯ ಗುಣವಾಗಿ ಜನಪದ ಮಹಾಕಾವ್ಯದಿಂದ ತಿಳಿದುಬರುತ್ತದೆ. ಅಂತೆಯೇ ಅದೇ ಕಾಲಕ್ಕೆ ದಕ್ಷಿಣ ಕರ್ನಾಟಕದಲ್ಲಿ ಪ್ರಮುಖ ವೈದ್ಯನಾಗಿ ಕಂಡುಬರುವವನು ನಂಜುಂಡೇಶ್ವರ. ಈಗಲೂ ದಕ್ಷಿಣ ಕರ್ನಾಟಕದ ಅಪಾರ ಸಂಖ್ಯೆಯ ಗ್ರಾಮೀಣರು ತಮ್ಮ ದೈಹಿಕ ಸಮಸ್ಯೆಗಳಿಗೆ ನಂಜುಂಡೇಶ್ವರನಿಗೆ ಹರಕೆ ಹೊರುತ್ತಾರೆ. ಹಾಗೆಯೇ ಬಿಳಿಗಿರಿರಂಗನ ಮೇಲೆ ಶೃಂಗಾರ ಪ್ರಧಾನ ಜನಪದ ಗೀತೆಗಳಿರುತ್ತವೆ. ವೈಷ್ಣವ ಧರ್ಮದ ಹಿನ್ನೆಲೆಯಲ್ಲಿ ಬರುವ ಬಿಳಿಗಿರಿರಂಗನ ಮೇಲಿನ ಜನಪದ ಗೀತೆ ಸಹಜವಾಗಿಯೇ ಶೃಂಗಾರ ಹಿನ್ನೆಲೆಯದು. ಶರಣ ಮಲೆಯ ಮಹದೇಶ್ವರನ ಗೀತೆ ಸ್ತ್ರೀಪಾತಿವ್ರತ್ಯದ ಹಿನ್ನೆಲೆಯ ಗೀತೆಯಾದರೆ, ಬಿಳಿಗಿರಿರಂಗನ ಗೀತೆ ಪಾತಿವ್ರತ್ಯದ ಎಲ್ಲೆಯನ್ನು ದಾಟಿ ಬದುಕನ್ನು ಪ್ರೀತಿ

ಮತ್ತು ಶೃಂಗಾರದ ಹಿನ್ನೆಲೆಯಲ್ಲಿ ನೋಡುವಂಥದ್ದು. ಹೀಗೆ ದಕ್ಷಿಣ ಕರ್ನಾಟಕದಲ್ಲಿ ಬರುವ ಮಹದೇಶ್ವರ, ಮಂಟೇಸ್ವಾಮಿ, ನಂಜುಂಡೇಶ್ವರ, ಬಿಳಿಗಿರಿರಂಗ ಈ ಸಂತರ ಕಥಾನಕಗಳು ಮತ್ತು ಅವುಗಳ ಆಶಯ ಒಂದೊಂದೂ ಬೇರೆ ಬೇರೆಯ ಉದ್ದೇಶವನ್ನು ಹೊಂದಿದವಾಗಿದ್ದು ಅವು ಸಮಾಜದ ಉದ್ಧಾರವನ್ನು ಮುಖ್ಯ ಗುರಿಯಾಗಿ ಹೊಂದಿರುವಂತೆ ಕೇಳಿಬರುತ್ತದೆ. ಮಂಟೇಸ್ವಾಮಿ, ಮಹದೇಶ್ವರರನ್ನು ಕುರಿತ ಜನಪದ ಮಹಾಕಾವ್ಯಗಳು, ನಂಜುಂಡ, ಬಿಳಿಗಿರಿರಂಗನನ್ನು ಕುರಿತ ಅಪಾರ ಸಂಖ್ಯೆಯ ಬಿಡಿಗೀತೆಗಳನ್ನು ನೀಲಗಾರ ಗುಡ್ಡರು, ದಕ್ಷಿಣ ಕರ್ನಾಟಕದಾದ್ಯಂತ ಹಾಡುತ್ತಾರೆ. ಹೀಗೆ ಹಾಡಲು ಅವರು ಆಯಾ ಸಂತರ ಕ್ಷೇತ್ರದಲ್ಲಿ ದೀಕ್ಷೆ ತೆಗೆದುಕೊಳ್ಳಬೇಕು. ಈ ಸಂತರು, ಸಂತರ ಮೇಲಿನ ಆರಾಧನೆಯ ವಿಧಿ ವಿಧಾನಗಳು ಮತ್ತು ಕಥನ ಗೀತೆಗಳನ್ನು ಒಳಗೊಂಡಂತೆ ಈಚಿನ ದಶಕಗಳಲ್ಲಿ ಸಮರ್ಪಕವಾಗಿ ಅಧ್ಯಯನ ನಡೆದದ್ದು ಮುಖ್ಯ ಸಾಧನೆಯಾಗಿರುತ್ತದೆ.

* * *

ಜನಪದ ಕಥೆ

ಕನ್ನಡ ಜಾನಪದ ಪರಂಪರೆಯಲ್ಲಿ ಜಾನಪದ ಅಧ್ಯಯನ ತಡವಾಗಿಯೇ ಆರಂಭವಾಯಿತೆಂಬುದನ್ನು ಈಗಾಗಲೇ ಗಮನಿಸಲಾಗಿದೆ. ಈ ಮೊದಲೇ ತಿಳಿಸಿದಂತೆ ಜಾನಪದವೆಂದರೆ ಗೀತ ಪ್ರಕಾರವೇ ಆಗಿದ್ದಿತು. ಜನಪದ ಕಥೆಗಳು ಹೆಚ್ಚು ಕಲ್ಪನಾತ್ಮಕವಾದರೆ, ಗೀತೆಗಳು ಬಹಳ ಭಾವುಕವಾದವು. ಕಲ್ಪನೆಗಿಂತಲೂ ಭಾವನಾತ್ಮಕ ಸಂಗತಿಗಳು ಮನಸ್ಸಿಗೆ ಬೇಗ ತಟ್ಟುವುದರಿಂದ ಆರಂಭ ಕಾಲದ ಜನಪದ ಸಂಗ್ರಾಹಕರು ಗೀತ ಪ್ರಕಾರಗಳ ಕಡೆಗೇ ಹೆಚ್ಚು ಗಮನ ಹರಿಸಿದರು. ಹೀಗಾಗಿ ಜನಪದ ಕಥೆಗಳೆಂದರೆ ಬಹಳ ಕಾಲ ಅಜ್ಜ ಅಜ್ಜಿಯರು ಮೊಮ್ಮಕ್ಕಳಿಗೆ ಹೇಳುವ ಕಥೆಗಳಾಗಿ ಉಳಿದಿದ್ದವು. ಆದರೆ ಭಾರತದಲ್ಲಿ ಜನಪದ ಕಥೆಗಳ ಪ್ರಕಾರವೇ ಅತ್ಯಂತ ಪ್ರಾಚೀನ. ಪೈಶಾಚಿಕ ಭಾಷೆಯಲ್ಲಿ ಹುಟ್ಟಿಕೊಂಡ ಗುಣಾಢ್ಯನ ಬೃಹತ್ಕಥೆಯೇ ಈಗಿರುವ ಎಲ್ಲ ಕಥೆ ಮತ್ತು ಜನಪದ ಕಥೆಗಳ ಮೂಲ ಎಂದು ಹೇಳಲಾಗುತ್ತದೆ. ಬೃಹತ್ಕಥೆ ಹುಟ್ಟುವುದಕ್ಕೆ ಮೊದಲು ಆ ಕಥೆಗಳು ಜನಪದರಲ್ಲಿ ಪ್ರಚಾರದಲ್ಲಿದ್ದಿರಬೇಕು. ಇದಕ್ಕೆ ಪೂರಕವಾಗಿ ಹೇಳಬಹುದಾದ ಮಾತೆಂದರೆ ಗುಣಾಢ್ಯ ಕೃತಿರಚನೆಯಲ್ಲಿ ಅನುಸರಿಸಿರುವುದು ಜನಪದ ಭಾಷೆ. ಇವನ ನಂತರ ಬೃಹತ್ಕಥೆಯ ಸಂಸ್ಕೃತ ರೂಪಗಳು ಸೋಮದೇವ, ಕ್ಷೇಮೇಂದ್ರ ಮತ್ತು ಬುಧಸ್ವಾಮಿ ಇವರುಗಳಿಂದ ಬೃಹತ್ಕಥಾ ಮಂಜರಿ, ಬೃಹತ್ಕಥಾ ಶ್ಲೋಕ ಸಂಗ್ರಹ ಇವು ಹುಟ್ಟಿಕೊಂಡವು.

ಸಂಸ್ಕೃತ ಪ್ರಚಲಿತ ಭಾಷೆಯಾದಂತೆ ಜನಸಮೂಹಕ್ಕೆ ಬೃಹತ್ಕಥೆಯನ್ನು ಸಂಸ್ಕೃತದಲ್ಲಿ ಓದುವ, ಕೇಳುವ ಆಸಕ್ತಿ ಹುಟ್ಟಿರಬೇಕು. ಹೀಗಾಗಿ ಸಂಸ್ಕೃತದಲ್ಲಿ ಒಂದಲ್ಲ ಮೂರು ಕೃತಿಗಳು ಹುಟ್ಟಿಕೊಂಡವು. ಬೃಹತ್ಕಥೆ ಜನಪ್ರಿಯ ಭಾಷೆಯಲ್ಲಿ ಹುಟ್ಟಿಕೊಳ್ಳುತ್ತಿರುವಂತೆ ಪೈಶಾಚಿಕ ಭಾಷೆಯ ಮೂಲಕೃತಿ ಭಾಷೆಯೊಡನೆ ಮರೆಯಾಗಿರಬೇಕು. ಸೋಮದೇವಾದಿಗಳ ಕೃತಿಗಳು ಎಷ್ಟರ ಮಟ್ಟಿಗೆ ಮೂಲವನ್ನು ಅನುಸರಿಸಿವೆ ಎಂಬುದು ಮೂಲಕೃತಿ

ಹಾಳಾಗಿರುವುದರಿಂದ ನಮಗೆ ತಿಳಿದುಬರುವುದಿಲ್ಲ. ಹಾಗೆಯೇ ಈ ಕೃತಿಗಳಲ್ಲಿ ಕಥೆ ಜನಪದ ಮೂಲದವು ಅಲ್ಲ ಎಂಬುದನ್ನು ತಿಳಿಯುವುದೂ ಕಷ್ಟ. ಬೃಹತ್ಕಥೆಯಂತೆಯೇ ಇನ್ನೊಂದು ಜಗತ್ಪ್ರಸಿದ್ಧ ಕೃತಿಯೆಂದರೆ ಪಂಚತಂತ್ರ. ಪ್ರಪಂಚದ ಬೇರೆ ಭಾಷೆಗಳಿಗೆ ಭಾಷಾಂತರವಾಗಿರುವ ಪಂಚತಂತ್ರ ಕೃತಿ ಒಂದು ಜನಪ್ರಿಯ ಕಥಾಕೋಶ. ಪಂಚತಂತ್ರವೇ ಕಥೆಗಳ ಉಗಮ. ಬದುಕಿನ ವಿಕಾಸ ಕುರಿತ ಅಧ್ಯಯನದ ಫಲವಾಗಿ ಜಗತ್ತಿನ ಎಲ್ಲ ಜನಪದ ಕಥೆಗಳಿಗೂ ಭರತಖಂಡವೇ ಉಗಮಸ್ಥಾನ ಎನ್ನುತ್ತಾರೆ ಥಿಯೋಡೋರ್ ಬೆನ್ಫೆ. ಈ ಮಾತನ್ನು ಪೂರ್ಣ ಒಪ್ಪಿಕೊಳ್ಳಲಾಗದಿದ್ದರೂ ಜನಪದ ಕಥೆಗಳ ಉಗಮ ಕೇಂದ್ರಗಳಲ್ಲಿ ಭಾರತವೂ ಒಂದು ಎಂಬುದನ್ನು ನಿರ್ವಿವಾದವಾಗಿ ಒಪ್ಪಿಕೊಳ್ಳಬಹುದು. ಜನಪದ ಕಥೆಗಳು ಮೂಲಭೂತವಾಗಿ ಮನುಷ್ಯನ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಗಳ ಸೃಷ್ಟಿಗಳಾಗಿದ್ದರೂ ಯಾವುದೇ ನಿಶ್ಚಿತ ಪ್ರದೇಶಕ್ಕೆ ಹಾಗೂ ಗೊತ್ತಾದ ಕಾಲಕ್ಕೆ ಅದನ್ನು ತಂದು ನಿಲ್ಲಿಸಿ ಹೇಳಲು ಸಾಧ್ಯವಿಲ್ಲ. ರಾಷ್ಟ್ರಕ್ಕೆ, ಜನಾಂಗಕ್ಕೆ, ಸಂಸ್ಕೃತಿಗೆ ಮತ್ತು ಭಾಷೆಗೆ ಅನುಗುಣವಾಗಿ ರೂಪಾಂತರಗೊಳ್ಳುವ ಈ ಕಥೆಗಳ ಉಗಮ, ವಿಕಾಸ ಮತ್ತು ಪ್ರಚಾರ ಇವು ಸುಲಭ ತೀರ್ಮಾನಕ್ಕೆ ಸಿಕ್ಕುವಂಥವಲ್ಲ. ಯಾವ ಕಾಲಕ್ಕೋ ಹುಟ್ಟಿ ಆರಂಭಗೊಂಡಿರುವ ಈ ಕಥೆಗಳ ಹೇಳುವಿಕೆ ಮತ್ತು ಕೇಳುವಿಕೆ ಇಂದು ಗ್ರಾಮಗಳಲ್ಲಿ ಜೀವಂತ ಕಲೆಯಾಗಿ ಉಳಿದುಕೊಂಡಿದೆ. ಅದ್ಭುತ ರಂಜನೆ ಇದರ ವೈಶಿಷ್ಟ್ಯ.

ಕಥೆ ಹೇಳುವಲ್ಲಿ ಕತೆಗಾರ ತನ್ನ ಪರಂಪರಾನುಗತ ಸಮಾಜದ ಕಟ್ಟುಪಾಡುಗಳನ್ನು, ನಂಬಿಕೆಗಳನ್ನು, ಸಂಪ್ರದಾಯಗಳನ್ನು ತನ್ನ ಕಥೆಗಳ ಮೂಲಕ ಕೇಳುಗರಿಗೆ ತಲುಪಿಸಿ ಅವುಗಳನ್ನು ಹಾಗೆಯೇ ಕಾಪಾಡಿಕೊಳ್ಳಲು ನೆರವಾಗುತ್ತಾನೆ. ಈ ದೃಷ್ಟಿಯಲ್ಲಿ ಕತೆಗಾರನ ಸಮಾಜದಲ್ಲಿ ಯಾವ ರೀತಿಯ ಕಟ್ಟುಪಾಡುಗಳು ಜೀವಂತವಾಗಿರಲು ಸಾಧ್ಯವೋ ಅಂಥವುಗಳೇ ಕತೆಗಾರನ ಕತೆಯಲ್ಲಿ ಮೈದೋರಲು ಸಾಧ್ಯವಾಗುತ್ತದೆ. ಕತೆಗಳ ಮಾದರಿ ಎಲ್ಲ ಬೇರೆ ದೇಶ, ಕಾಲಗಳಲ್ಲಿ ದೊರಕಬಹುದಾದರೂ ಆಯಾ ರೂಢಮೂಲ ಸಮಾಜದ ಚೌಕಟ್ಟಿನಲ್ಲಿಯೇ ನಿರೂಪಣೆ ಇರುತ್ತದೆ.

ಜನಪದ ಕಥೆಗಳ ಸ್ವಾರಸ್ಯ ಹೆಚ್ಚುವುದು ಕಥೆಗಾರ ಪ್ರತಿಭಾವಂತನಾಗಿದ್ದರೆ ಮಾತ್ರ. ಹೇಳುವವ ಅನನುಭವಿಯಾಗಿದ್ದು, ಆತನಿಗೆ ಬರೀ ಕಥಾ ವಸ್ತುವಿನ ಪರಿಚಯ ಇದ್ದರೆ ಅಲ್ಲಿ ಕಥೆ ಹೇಳುವಿಕೆ ಜೀವಂತ ಕಲೆಯಾಗಿ ಕೇಳಿಬರುವುದಿಲ್ಲ. ಕಥೆಗಾರ ಉಪಯೋಗಿಸುವ ಭಾಷೆ ಕೇವಲವಾದರೆ ಕಥೆ ಸ್ವಾರಸ್ಯ ಕಳೆದುಕೊಳ್ಳುತ್ತದೆ. ಆಗ ಕಥಾವಸ್ತು ಮಾತ್ರ ಸಂಗ್ರಹಕ್ಕೆ ದೊರಕಬಹುದು. ಕನ್ನಡ ಜನಪದ ಸಾಹಿತ್ಯ, ಕಾಲದಿಂದಲೂ ಕಿವಿಯಿಂದ ಕಿವಿಗೆ ತಾಗಿ ಬಂದ ಸಾಹಿತ್ಯ. ಬಾಯಿಂದ ಬಾಯಿಗೆ ತಲೆ ತಲಾಂತರದಿಂದಲೂ ಹರಿದುಕೊಂಡು ಬಂದಿರುವ ಈ ಸಾಹಿತ್ಯ ಇಂದು ಮೂಲರೂಪದಲ್ಲಿ ಉಳಿದಿರಲಾರದು. ಲಿಖಿತ ಸಾಹಿತ್ಯದ ಭಾಷೆಯಲ್ಲಿ ಪ್ರಾದೇಶಿಕ ಭೇದಗಳನ್ನು, ಕಾಲಿಕ ಸ್ಥಿತ್ಯಂತರಗಳನ್ನು ಗುರುತಿಸಬಹುದು. ಆದರೆ ಜನಪದ ಸಾಹಿತ್ಯ ಆಯಾ ಕಾಲದ ಆಡುನುಡಿಯನ್ನು ಮಾತ್ರ ಹೊಂದಿಸಿಕೊಂಡಿರು–ತ್ತದೆ. ಮೂಲ ಜನಪದ ಭಾಷೆ ಹೇಗಿದ್ದಿತು ಎಂದು ಹುಡುಕುವುದು ಸಾಧ್ಯವಿಲ್ಲದ ಕೆಲಸ.

ಒಬ್ಬ ಕತೆಗಾರನಿಂದ ಕತೆ ಹೇಳಿಸಿ ಕಲಿತುಕೊಂಡ ಇನ್ನೊಬ್ಬ ಕತೆಗಾರ ಹಿಂದೆ ಹೇಳಿಕೊಟ್ಟ ಕತೆಗಾರನಿಗಿಂತ ಚೆನ್ನಾಗಿ ಕಥೆಯನ್ನು ನಿರೂಪಣೆ ಮಾಡಬಹುದು. ಗ್ರಾಮ್ಯ ಭಾಷೆಯನ್ನು ಸಮರ್ಥವಾಗಿ ಬಳಸಬಹುದು. ಜನಪದ ಕಥೆಯ ವಿಚಾರಕ್ಕೆ ಮಾತ್ರ ಭಾಷೆ, ಕಥೆ ಹೇಳುವುದರಲ್ಲಿನ ವೈಶಿಷ್ಟ್ಯ ಕತೆಗಾರನಿಂದ ಕತೆಗಾರನಿಗೆ ಬದಲಾಗುತ್ತದೆ. ಆದರೆ ಪದ್ಯ ಅಥವಾ ಕಥನಗೀತೆಗಳ ವಿಚಾರಕ್ಕೆ ಹಾಗಾಗದು. ಛಂದಸ್ಸು, ನುಡಿಕಟ್ಟು, ಧಾಟಿ ಕೊಂಚಮಟ್ಟಿಗೆ ಉಳಿದುಕೊಂಡಿರುವ ಸಾಧ್ಯತೆ ಇರುತ್ತದೆ.

ಪಾಶ್ಚಾತ್ಯರು ಭಾರತದಲ್ಲಿ ಧರ್ಮಪ್ರಚಾರಕ್ಕಾಗಿ ಬಂದವರಲ್ಲಿ ಕೆಲವರು ಕನ್ನಡ ಸಾಹಿತ್ಯ ಸಂಸ್ಕೃತಿಗೆ ಸಂಬಂಧಪಟ್ಟಂತೆ ಅನನ್ಯ ಕೆಲಸಗಳನ್ನು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಮೇರಿ ಫ್ರೀರೆಯವರ 1860ರ 'Old Deccan Days'ನಲ್ಲಿ ಇರುವ ಕಥೆಗಳು ಕನ್ನಡಕ್ಕೇ ಸಂಬಂಧಿಸಿದವು ಎಂಬ ಅಭಿಪ್ರಾಯವಿದೆ. ಇದೇನಿದ್ದರೂ ಈಗಾಗಲೇ ತಿಳಿಸಿದಂತೆ ಕನ್ನಡ ಜನಪದ ಕಥೆಗಳ ಸಂಗ್ರಹ, ಅಧ್ಯಯನ ತುಂಬ ತಡವಾಗಿಯೇ ಆಯಿತು. 1930ರ ದಶಕದಲ್ಲಿ ಕನ್ನಡ ಜನಪದ ಗೀತ ಸಂಕಲನ ಪ್ರಕಟವಾದರೆ, ಜನಪದ ಕಥಾ ಸಂಕಲನ ಪ್ರಕಟವಾದದ್ದು 1967ರಲ್ಲಿ. ಮೈಸೂರು ವಿ.ವಿ.ಯಲ್ಲಿ ಜನಪದ ಕುರಿತಂತೆ ವಿದ್ವಾಂಸರಲ್ಲಿ ಅಧ್ಯಯನಕ್ಕೆ ತೆರೆಯಬೇಕೆಂಬ ಆಕಾಂಕ್ಷೆಗಳಿಗೆ ಮೊದಲೇ ಎಂ. ಎ. ಜಯಚಂದ್ರ ಅವರು 'ಜಾನಪದ ಕಥಾಮೃತ', 'ಕನ್ನಡ ಜನಪದ ಕಥೆಗಳು' ಎಂಬ ಎರಡು ಸಂಪುಟಗಳನ್ನು ಕ್ರಮವಾಗಿ 1967 ಮತ್ತು 1968ರಲ್ಲಿ ಪ್ರಕಟಿಸಿದರು.

ಅಪಾರ ಸಂಖ್ಯೆಯ ಜನಪದ ಕಥೆಗಳಿರುವ ಜಯಚಂದ್ರ ಅವರು ಸಂಗ್ರಹಿಸಿದ ಕಥೆಗಳ ಬೇರೆ ಬೇರೆ ಪಠ್ಯಗಳು ಕರ್ನಾಟಕದಾದ್ಯಂತ ದೊರೆಯುತ್ತವೆ. ಆದರೆ ಒಬ್ಬ ಮಹಿಳೆಯಿಂದ ಇಷ್ಟು ಪ್ರಮಾಣದಲ್ಲಿ ಜನಪದ ಕಥೆಗಳನ್ನು ಆಕೆ ಹೇಳಿದಂತೆಯೇ ಸಂಗ್ರಹಿಸಿ ಪ್ರಕಟಿಸಿದುದು ಕನ್ನಡ ಜನಪದ ಕಥೆಗಳ ಪ್ರಕಟಣೆಗೆ ಸೂಕ್ತ ಬುನಾದಿಯನ್ನೇ ಹಾಕಿದಂತಾಯಿತು. ಜಾಗತಿಕ ಮಟ್ಟದಲ್ಲಿ ಗಮನಿಸಿದರೆ ಮಾತ್ರ ಜನಪದ ಕಥೆಗಳ ಅಧ್ಯಯನಕ್ಕೆ ಕನಿಷ್ಠಪಕ್ಷ ಇನ್ನೂರು ವರ್ಷಗಳ ಇತಿಹಾಸವಾದರೂ ಇದೆ. 1856ರ ಸುಮಾರಿಗೆ ಹೊರಬಂದ ಗ್ರಿಮ್ ಸಹೋದರರ ಜನಪದ ಕಥೆಗಳ ಸಂಪುಟದಲ್ಲಿ ಆತ ಜಗತ್ತಿನಾದ್ಯಂತ ಹಬ್ಬಿರುವ ಜನಪದ ಕಥೆಗಳನ್ನು ಕುರಿತು ಅಧ್ಯಯನ ಮಾಡಿರುವುದು ಕಂಡುಬರುತ್ತದೆ. ಕಥೆಗಳೆಲ್ಲವೂ ಪುರಾಣದ ಒಡೆದ ಚೂರುಗಳು. ಪುರಾಣಗಳನ್ನು ಚೆನ್ನಾಗಿ ಅಧ್ಯಯನ ಮಾಡದ ಹೊರತು ಕಥೆಗಳು ಅರ್ಥವಾಗುವುದು ಕಷ್ಟ ಎಂಬ ಅಭಿಪ್ರಾಯ ಹತ್ತೊಂಬತ್ತನೆಯ ಶತಮಾನದ ಅಂತ್ಯದ ವೇಳೆಗೆ ಬಹುತೇಕ ವಿದ್ವಾಂಸರಲ್ಲಿ ಬಂದುಹೋಗಿತ್ತು. ಹತ್ತೊಂಬತ್ತನೆಯ ಶತಮಾನದಲ್ಲಿ ಆರಂಭಗೊಂಡ ತೌಲನಿಕ ಅಧ್ಯಯನಗಳ ಫಲವಾಗಿ ಜಾನಪದ ಕುರಿತು ಅನೇಕ ಸಿದ್ಧಾಂತಗಳು ಹುಟ್ಟಿಕೊಂಡವು. ಆದರೆ ಈ ಸಿದ್ಧಾಂತಗಳ ಅಧ್ಯಯನವಿರಲಿ, ಇದರ ಪರಿಚಯವಾದುದೇ ಮೈಸೂರು ವಿಶ್ವವಿದ್ಯಾನಿಲಯ ಕನ್ನಡದಲ್ಲಿ ಜಾನಪದವನ್ನು ಐಚ್ಛಿಕ ವಿಷಯವಾಗಿ ಆರಂಭಿಸಿದಾಗ. ಅಲ್ಲಿಂದ ಜನಪದ ಕಥೆಗಳ ಅಧ್ಯಯನವೂ ಆರಂಭವಾಯಿತು. ಹೀಗಾಗಿ 'ಧವಳಶ್ರೀ'

ಎಂಬ ಕಾವ್ಯನಾಮದಲ್ಲಿ ಎಂ. ಎ. ಜಯಚಂದ್ರ ಅವರು ಎರಡು ಜನಪದ ಕಥಾ ಸಂಪುಟಗಳನ್ನು ಪ್ರಕಟಿಸಿದ ನಂತರ ಮೈಸೂರು ವಿ. ವಿ. ನಿಲಯದ ಜಾನಪದ ವಿಭಾಗದ ಮೊದಲ ಜಾನಪದ ಪ್ರಾಧ್ಯಾಪಕರಾಗಿ ನೇಮಕಗೊಂಡ ಜೀ. ಶಂ. ಪರಮಶಿವಯ್ಯನವರು 1970ರಲ್ಲಿ 'ಕನ್ನಡ ಜನಪದ ಕಥೆಗಳು' ಎಂಬ ಸಂಕಲನವನ್ನು ಪ್ರಕಟಿಸಿದರು. ಇವರಿಗಿಂತಲೂ ಒಂದು ವರ್ಷ ಪೂರ್ವದಲ್ಲಿ 1969ರಲ್ಲಿ ರಾ. ಗೌ. ಅವರು 'ಕರ್ನಾಟಕ ಜನಪದ ಕಥೆಗಳು' ಎಂಬ ಸಂಕಲನ ತಂದರು. ಇದರಲ್ಲಿ ಅರವತ್ತಮೂರು ಕಥೆಗಳಿವೆ. ಕಥೆಗಳ ವಿಶೇಷವೆಂದರೆ ಇಲ್ಲಿ ಸಂಗ್ರಹಿಸಲ್ಪಟ್ಟಿರುವ ಕಥೆಗಳು ಯಾವ್ಯಾವ ವರ್ಗಕ್ಕೆ ಸೇರುತ್ತವೆ ಎಂಬುದನ್ನು ರಾಗೌ ಗುರುತಿಸುವ ಕೆಲಸ ಮಾಡಿದ್ದಾರೆ.

* * *

ಗಾದೆಗಳು

ಗಾದೆಗಳು ಜನಪದ ಸಾಹಿತ್ಯದ ಒಂದು ಮಹತ್ವದ ಪ್ರಕಾರ. ಜನಸಮೂಹಕ್ಕೆ ತಮ್ಮ ನಡುವಣ ಶಿಷ್ಟ ಸಾಹಿತ್ಯ ಪರಂಪರೆಯ ಮಹತ್ವ ಅರಿವಿಗೆ ಬಂದಿಲ್ಲದಿರಬಹುದು. ಆದರೆ ಗಾದೆಗಳ ಅರಿವು ಇಲ್ಲದೆ ಇರುವ ಜನಸಾಮಾನ್ಯರು ವಿರಳ. ಹೀಗಾಗಿ ಗಾದೆಗಳ ಬಗ್ಗೆ ಜಗತ್ತಿನಾದ್ಯಂತ ಒಂದೇ ಬಗೆಯ ಅರ್ಥ ಕೊಡುವ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಗಾದೆ ಎಂದೂ ಸುಳ್ಳು ಹೇಳುವುದಿಲ್ಲ ಎಂಬುದು ಜನರ ಹೇಳಿಕೆ. ಈ ಸಣ್ಣ ಸೂಕ್ತಿ ಬ್ರಹ್ಮಾಂಡದಷ್ಟೇ ವಿವೇಕವನ್ನು ಹೊತ್ತಿರುತ್ತದೆ ಎಂಬುದು ಗ್ರೀಸ್ ದೇಶದವರ ಹೇಳಿಕೆ. ಸ್ವೀಡನ್‌ನಲ್ಲಿರುವ ಪ್ರಸಿದ್ಧ ಸೂಕ್ತಿ 'ಮಾನವನ ಯೋಚನೆಯೇ ಗಾದೆಯಾಗಿ ಹೊಮ್ಮುತ್ತದೆ' ಎಂಬುದಾಗಿರುತ್ತದೆ. ಸ್ಪೇಯಿನ್ ಅವರ ಮಾತು ಹೀಗಿದೆ 'ನಿಜವಲ್ಲದ ಗಾದೆಯಿಲ್ಲ.' ಇಂಗ್ಲೆಂಡ್‌ನಲ್ಲಿ ಪ್ರಚಲಿತವಿರುವ ಮಾತು, ಎಲ್ಲರೂ ಹೇಳಿದ್ದು ನಿಜವಿರಲೇಬೇಕು ಎಂದಿದೆ. ಹಾಲೆಂಡ್‌ನಲ್ಲಿರುವ ಉಕ್ತಿಯಲ್ಲಂತೂ ಗಾದೆಗೊಂದು ವ್ಯಕ್ತಿರೂಪವನ್ನೇ ಕೊಡಲಾಗಿದೆ. ಮಲೆಯಾಳಂ ಭಾಷೆಯಲ್ಲಿ ಗಾದೆ ಸುಳ್ಳಾದಂದು ಹಾಲು ಹುಳಿಯಾಗುತ್ತದೆಂಬ ಮಾತಿದೆ. 'ಗಾದೆ ಬಲ್ಲವ ಜಗಳ ಬಿಡಿಸಬಲ್ಲ' ಎಂಬುದು ಆಫ್ರಿಕನ್ನರ ತಿಳಿವಳಿಕೆ.

ಗಾದೆ ವೇದಕ್ಕೆ ಸಮ, ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ ಎಂಬ ಎರಡು ವಿರುದ್ಧ ದಿಕ್ಕಿನ ಮಾತಿಗಿಂತ ಅತ್ಯಂತ ಸಹಜವಾದ ಮಾತಾಗಿರುವುದೆಂದರೆ 'ಗಾದೆಯೆಂಬುದು ಬೀದಿಯ ಜ್ಞಾನ' ಎನ್ನುವ ಮಾತು. ಗಾದೆಯ ಮಹತ್ವ ಹೇಳುವುದರಲ್ಲಿ ಇದು ಅತ್ಯಂತ ಸಮರ್ಪಕವಾದ ಮಾತು. ಜೊತೆಗೆ ಗಾದೆಯ ಸೃಷ್ಟಿ ಹೇಗಾಯಿತು ಎಂದು ಹೇಳುವುದು ಸಾಧ್ಯವಿಲ್ಲದ ಮಾತು. ಬಹುಶಃ ಪ್ರಾಚೀನ ಸಾಹಿತ್ಯವನ್ನು ಕೇಳಿಸಿಕೊಂಡ ಗ್ರಾಮೀಣ ಬುದ್ಧಿವಂತರ ಮನಸ್ಸು ಸಹ ಗಾದೆಗಳ ಸೃಷ್ಟಿಯಲ್ಲಿ ಕೆಲಸ ಮಾಡಿರಬೇಕು. ಮಾತುಕತೆಯ ಸಂದರ್ಭದಲ್ಲಿ ಮಾತಿಗೆ ಮಾತು, ಅನುಭವಕ್ಕೆ ಅನುಭವ ಮಥಿಸುತ್ತ ಗಾದೆಗಳು ಮಿಂಚಿನಂತೆ ಸೃಷ್ಟಿಯಾಗಿ, ಅವು ಅಲ್ಲೇ ಮಾಯವಾಗದೆ ಜನಗಳ ಬಾಯಲ್ಲಿ ಮತ್ತೆ ಮತ್ತೆ ಪ್ರಯೋಗಕ್ಕೆ ಒಳಪಟ್ಟು ಉಳಿದುಕೊಂಡಿರಬೇಕು. ಹೀಗೆ ಗಾದೆಗಳು ಬದುಕಿನ ಬವಣೆಗಳ ದಟ್ಟ ಮೋಡಗಳ ನಡುವೆ ಮಿಂಚಿನಂತೆ ಹುಟ್ಟಿ ಜ್ಞಾನದ ಬೆಳಕನ್ನು ನೀಡಿರುತ್ತವೆ. ಆ ಬೆಳಕಿನಡಿಯಲ್ಲಿ

ಮನುಷ್ಯಸಮೂಹ ತನ್ನ ಬದುಕಿನ ಭರವಸೆಯನ್ನು ಪಡೆದುಕೊಂಡಿದೆ. ಈ ಹಿನ್ನೆಲೆಯಲ್ಲೇ ಬಹಳ ಗೌರವದಿಂದಲೇ ಗಾದೆಯೆಂಬುದು ಬೀದಿಯ ಜ್ಞಾನ ಎಂಬ ಮಾತು ಸೃಷ್ಟಿಯಾಗಿರಬೇಕು.

ಗಾದೆಗಳು ಆಯಾ ಪ್ರದೇಶದ ಸಾಹಿತ್ಯದಂತೆ ಅಲ್ಲಿಗೇ ಸೀಮಿತವಾದುದಲ್ಲ. ಅವು ಎಲ್ಲೋ ಹುಟ್ಟಿ ಮತ್ತೆಲ್ಲೋ ಪ್ರಯಾಣ ಬೆಳೆಸಿ ಎಲ್ಲ ಕಡೆಯೂ ತಮ್ಮ ನೆಲೆಯನ್ನು ಕಂಡುಕೊಳ್ಳುವಂಥವಾಗಿರುತ್ತವೆ. ಇದರಿಂದ ಗಾದೆಗಳಲ್ಲಿ ಸಮಾನತೆ ಕಂಡುಬರುತ್ತದೆ. ಶ್ರೇಷ್ಠವೆನಿಸುವ ಒಂದು ಸಾಹಿತ್ಯ ಪ್ರಕಾರವನ್ನು ಮನುಷ್ಯ ಜಗತ್ತು ಬಹುಬೇಗ ಸ್ವೀಕರಿಸುತ್ತದೆ. ಇದಕ್ಕೆ ಉದಾಹರಣೆಯೆಂದರೆ ಬಹು ಸಣ್ಣ ಸ್ವರೂಪದ ಆದರೆ ಬಹುದೊಡ್ಡ ನೀತಿ ಹೇಳುವ ಭಾರತ ದೇಶದ ಪಂಚತಂತ್ರ ಕಥೆಗಳನ್ನು ಜಗತ್ತಿನ ಬಹುಭಾಗಗಳು ಸ್ವೀಕರಿಸಿವೆ. ಅನುಭವದ ಹಿನ್ನೆಲೆಯಲ್ಲಿ ಪ್ರಾಣಿ ಪ್ರಪಂಚ ಮತ್ತು ಮನುಷ್ಯ ಲೋಕದ ಸಂಬಂಧಗಳ ನಡುವೆ ಕಟ್ಟಿರುವ ಈ ಕಥೆಗಳು ಗಾದೆಗಳ ವಿಸ್ತೃತ ಕಥೆಗಳಿದ್ದಂತೆ. ಗಾದೆಗಳು ಮತ್ತು ಪಂಚತಂತ್ರದ ಪುಟ್ಟ ಕಥೆಗಳು ಅನುಭವದಾಳದ ಹಿನ್ನೆಲೆಯಲ್ಲಿಯೇ ಸೃಷ್ಟಿಯಾದಂಥವು. ಇವು ಕೇಳಲು ಆಕರ್ಷಕ, ಚಿಂತನೆಗೆ ಅರ್ಥಪೂರ್ಣ. ಅಂತೆಯೇ ಗಾದೆಗಳೂ ಸಹ ಅಲೆಮಾರಿ ಸಮೂಹದೊಡನೆ ಪ್ರಯಾಣ ಬೆಳೆಸಿವೆ. ಇದರಿಂದಲೇ ದೇಶದಾದ್ಯಂತ, ಜಗತ್ತಿನಾದ್ಯಂತ ಗಾದೆಗಳಲ್ಲಿ ಸಮಾನಭಾವ ಕಂಡುಬರುತ್ತದೆ. ಅವುಗಳ ಸ್ವರೂಪ, ಲಕ್ಷಣ ಮತ್ತು ವಿಶೇಷತೆ ವಿಶ್ವವ್ಯಾಪಿಯಾಗಿರುತ್ತದೆ.

ಕನ್ನಡದಲ್ಲಿ ಮುಳಿಯ ತಿಮ್ಮಪ್ಪಯ್ಯನವರು 1933ರಲ್ಲಿ ಪಂಪನ ಕೆಲವು ಗಾದೆಗಳನ್ನು ಕುರಿತು ಚರ್ಚಿಸಿರುತ್ತಾರೆ. ಹೆಚ್. ಎಸ್. ಅಚ್ಚಪ್ಪನವರು 1944ರಲ್ಲಿ 10,000 ಗಾದೆಗಳನ್ನು ಕನ್ನಡ ಕಾವ್ಯಗಳಿಂದ ಸಂಗ್ರಹಿಸಿರುತ್ತಾರೆ. ಇಲ್ಲಿ ಗಾದೆಗಳ ಜೊತೆಗೆ ಸಂಸ್ಕೃತ ಶ್ಲೋಕಗಳೂ ಸೇರಿಕೊಂಡಿವೆ. ಯಥಾವಿಧಿಯಾಗಿ ಕನ್ನಡದ ಎಲ್ಲ ಪ್ರಕಾರಗಳ ಆರಂಭಿಕ ಕೆಲಸವನ್ನು ಪಾಶ್ಚಾತ್ಯರು ಮಾಡಿದಂತೆಯೇ 1792ರಲ್ಲಿ ಅಬೆಡುಬೋಯಿಸ್ ಕ್ರೈಸ್ತ ಪಾದ್ರಿ ಸ್ಥಳೀಯ ಆಚರಣೆ ಸಂಪ್ರದಾಯ, ಆಚಾರ ವಿಚಾರಗಳ ಸಂಗ್ರಹದಲ್ಲಿ ಗಾದೆಗಳನ್ನು ಸಂಗ್ರಹಿಸಿರುತ್ತಾರೆ. 1843ರಲ್ಲಿ ಹರ್ಮನ್ ಮೊಗ್ಲಿಂಗ್ 'ಮಂಗಳೂರು ಸಮಾಚಾರ' ಎಂಬ ಕರಾವಳಿ ಪತ್ರಿಕೆಯನ್ನು ತಂದರು. ಇದರಲ್ಲಿ ಮೊಗ್ಲಿಂಗ್ ಕೆಲವು ಕನ್ನಡ ಗಾದೆಗಳನ್ನು ಪ್ರಕಟಿಸಿದ್ದಾರೆ. ಇದರಲ್ಲಿ 3600 ಗಾದೆಗಳು ಪ್ರಕಟವಾಗಿವೆ. ಡೆನಿಯಲ್ ಸ್ಯಾಂಡರ್‌ಸನ್ 1894ರಲ್ಲಿ ಕಥಾ ಸಂಗ್ರಹವನ್ನು ಪ್ರಕಟಿಸಿ ಅದರಲ್ಲಿ 411 ಗಾದೆಗಳನ್ನು ಸೇರಿಸಿರುತ್ತಾನೆ. 1874ರಲ್ಲಿ ಮಂಗಳೂರು ಬಾಸೆಲ್ ಮಿಷನ್‌ನವರು 'ಸಹಸ್ರ ಗಾಥಾಮೃತ ಕಳಶವು' ಎಂಬ ಗ್ರಂಥವನ್ನು ಪ್ರಕಟಿಸಿರುತ್ತಾರೆ. ಹಾಗೆಯೇ 1894ರಲ್ಲಿ ಕಿಟೆಲ್ಲರು ತಮ್ಮ ಇಂಗ್ಲಿಷ್-ಕನ್ನಡ ಅರ್ಥಕೋಶದಲ್ಲಿ 4260 ಗಾದೆಗಳನ್ನು ಸಂಗ್ರಹಿಸಿರುತ್ತಾರೆ. ಆದರೆ ಇಲ್ಲಿಯ ಸರಿ ಸುಮಾರು 325 ಗಾದೆಗಳು ಮೊಗ್ಲಿಂಗ್‌ನ ಸಂಗ್ರಹದಿಂದ ತೆಗೆದುಕೊಂಡವಾಗಿವೆ. ಇದೇ ವೇಳೆ ಬೆಳಗಾವಿಯ ಹನುಮಂತ ಗೋವಿಂದ ಜೋಷಿ ಎಂಬುವವರು 1894ರಲ್ಲಿ 52 ಪುಟಗಳ 'ಸಾಮತಿ ಸಂಗ್ರಹ' ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ.

1903ರಲ್ಲಿ ಮಂಗಳೂರು ಟ್ರಾಕ್ಟ್ ಡೆಪಾಸಿಟೆರಿಯವರು 32 ಪುಟಗಳ ನೂರು ಗಾದೆಗಳ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಇದರ ಸಂಪಾದಕರು ಕ್ರಿಸ್ತಾನುಜವತ್ಸ. 1911ರಲ್ಲಿ ಮೈಸೂರು ಕ್ರೌನ್ ಪ್ರೆಸ್ಸಿನವರು 66 ಪುಟಗಳ 'ನೂತನ ಸಹಸ್ರ ಗಾಥಾ ಕುಸುಮ ಮಂಜರಿ' ಪ್ರಕಟಿಸಿದ್ದು ಇದರ ಸಂಪಾದಕರು ಸಂಗಪ್ಪನವರು. ಇದರಲ್ಲಿ ಹಲ ಕೆಲವು ದೋಷಗಳಿವೆ ಎಂಬುದನ್ನು ಗುರುತಿಸಲಾಗಿದೆ. 1912ರಲ್ಲಿ ಬಾಸೆಲ್ ಮಿಷನ್ ಮತ್ತು ಟ್ರಾಕ್ಟ್ ಡೆಪಾಸಿಟೆರಿಯವರು 1500 ಗಾದೆಗಳ 'ಕರ್ನಾಟಕ ಲೋಕೋಕ್ತಿ ನಿಧಾನ' ಎಂಬ ಪುಸ್ತಕವನ್ನು ಪ್ರಕಟಿಸಿರುತ್ತಾರೆ. 1919ರಲ್ಲಿ ಇದೇ ಗಾದೆಗಳ ಗ್ರಂಥ ಪುನರ್‌ಮುದ್ರಣವಾಗಿ ಅದರಲ್ಲಿ ಇನ್ನಷ್ಟು ಗಾದೆಗಳು ಸೇರ್ಪಡೆಯಾಗಿವೆ. 1927ರಲ್ಲಿ ವಿರೂಪಾಕ್ಷ ಮಠದವರು ಸಾವಿರ ಗಾದೆಗಳ 'ಸಾವಿರ ಮಾತಿನ ಸರದಾರ' ಎಂಬ ಗಾದೆಗಳ ಸಂಕಲನವನ್ನು ಪ್ರಕಟಿಸಿ ಅದು 1933ರಲ್ಲಿ ಪುನಃ ಮುದ್ರಣವಾಯಿತು. 1933ರಲ್ಲಿ ಪ್ರಕಟವಾದ 'ಹುಟ್ಟಿದಹಳ್ಳಿ –ಹಳ್ಳಿಯಹಾಡು' ಮೂಲಕ ಅರ್ಚಕ ರಂಗಸ್ವಾಮಿಯವರ ಗ್ರಾಮ ಸುತ್ತಿನ 603 ಗಾದೆಗಳು ಸಂಗ್ರಹಗೊಂಡಿವೆ. ಹಾಗೆಯೇ 1927ರಲ್ಲಿ ಮತ್ತು 1937ರಲ್ಲಿ ದಂಡಿನಶಿವರದ ನರಸಿಂಹ ಮೂರ್ತಿಯವರು 'ಗಾದೆ ಮತ್ತು ನೀತಿ ರತ್ನಾಕರ' ಎಂದು ಎರಡು ಭಾಗಗಳಲ್ಲಿ ಪ್ರಕಟಿಸಿರುತ್ತಾರೆ. 1944 ಮತ್ತು 1947ರಲ್ಲಿ ಶೂಲಪಾಣಿ 169 ಗಾದೆಗಳ 'ಕೆಲವು ಕನ್ನಡ ಗಾದೆಗಳು' ಪುಸ್ತಕವನ್ನು ಪ್ರಕಟಿಸಿರುತ್ತಾರೆ.

1956ರಲ್ಲಿ ಕೃಷ್ಣಶಾಸ್ತ್ರಿ ಜಂಗಮಕೋಟೆ ಅವರು 'ಗಾದೆಗಳ ಭಂಡಾರ– ಮೊದಲನೆಯ ಭಾಗ' ಪ್ರಕಟಿಸಿರುತ್ತಾರೆ. ಅವರು ಸಂಗ್ರಹಿಸಿದ ಅನೇಕ ಗಾದೆಗಳಲ್ಲಿ ಹತ್ತು ಸಾವಿರ ಗಾದೆಗಳನ್ನು ಮಾತ್ರ ಹೊರತರುತ್ತಿರುವುದಾಗಿ ಹೇಳಿದ್ದಾರೆ. ಕೃಷ್ಣಶಾಸ್ತ್ರಿಗಳ ಗಾದೆಗಳ ಕೋಶದ ವಿಶೇಷವೆಂದರೆ ಗಾದೆಗಳನ್ನು ಅವುಗಳ ವಿಷಯವಾರು ಜೋಡಿಸಿ ಪ್ರಕಟಿಸಿರುತ್ತಾರೆ. ಈ ಗಾದೆಗಳ ಕೋಶದಲ್ಲಿ ಸಂಸ್ಕೃತದ ಹೇಳಿಕೆಗಳೂ ಸೇರಿಕೊಂಡಿವೆ. ಅಲ್ಲದೆ ಶಾಸ್ತ್ರಿಗಳು ಕೆಲವು ಗಾದೆಗಳಿಗೆ ವ್ಯಾಖ್ಯಾನವನ್ನೂ ಕೊಟ್ಟಿರುತ್ತಾರೆ. 1956ರಲ್ಲಿ ಪಡುವಾರಿ ಸುಬ್ಬಣ್ಣನವರು ಐದುನೂರು ಗಾದೆಗಳ 'ಗಾದೆಗಳ ಗುಚ್ಛ' ಪುಸ್ತಿಕೆಯನ್ನು ಕೇವಲ ಹದಿನೈದು ಪುಟಗಳಲ್ಲಿ ಪ್ರಕಟಿಸಿರುತ್ತಾರೆ.

1960ರಲ್ಲಿ ಹೋಮ ರಾಮಾರಾಧ್ಯರು 'ಗಾದೆಗಳ ಗೀತೆಗಳು' ಎಂದು ಕನ್ನಡ ಕವಿವಾಕ್ಯಗಳಲ್ಲಿ ಬರುವ ಗಾದೆಯ ರೂಪದ ವಾಕ್ಯಗಳನ್ನು ಸೇರಿಸಿ ಪ್ರಕಟಿಸಿರುತ್ತಾರೆ. ಹಾಗೆಯೇ ರಾಮಾರಾಧ್ಯರು 'ದೀಪನುಂಗೋ ಅತ್ತೆಗೆ ದೀವಟಿಗೆ ನುಂಗೋ ಸೊಸೆ' ಎಂಬ ಸಂಕಲನವನ್ನೂ ಪ್ರಕಟಿಸಿರುತ್ತಾರೆ. ವಿಷಯಾನುಗುಣವಾಗಿ ವಿಂಗಡಿಸಿ ಪ್ರಕಟಗೊಂಡಿರುವ ಈ ಗಾದೆಗಳ ಕೋಶ ಕನ್ನಡ ಗಾದೆಗಳ ಕೃತಿ ಮಾಲಿಕೆಯಲ್ಲೇ ಬಹುದೊಡ್ಡ ಸಂಕಲನವಾಗಿರುತ್ತದೆ. 1962ರಲ್ಲಿ ಎಂ. ಮರಿಯಪ್ಪಭಟ್ಟರು ಎಲ್ಲ ಭಾಷೆಗಳಲ್ಲೂ ಕಂಡುಬರುವ ಸಮಾನ ಆಶಯದ 467 ಗಾದೆಗಳನ್ನು ಹುಡುಕಿ ಪ್ರಕಟಿಸಿರುತ್ತಾರೆ.

1963ರಲ್ಲಿ ಟಿ. ವಿ. ವೆಂಕಟರಮಣಯ್ಯನವರು 'ಕನ್ನಡ ಗಾದೆಗಳ ಕೋಶ' ಪ್ರಕಟಿಸಿರುತ್ತಾರೆ. 4234 ಗಾದೆಗಳು ಇಲ್ಲಿ ಸೇರ್ಪಡೆಯಾಗಿರುತ್ತವೆ. ಈ ಸಂದರ್ಭದಲ್ಲಿ

ಮುಖ್ಯವಾಗಿ ಗಮನಿಸಬೇಕಾದ ಕೃತಿಗಳೆಂದರೆ ರಾಗೌ ಅವರ 'ನಮ್ಮ ಗಾದೆಗಳು' (1968) ಮತ್ತು 'ಕಿಟ್ಟೆಲ್ ಕೋಶದ ಗಾದೆಗಳು' (1969). 1972ರಲ್ಲಿ ಎಸ್. ವಿ. ಪರಮೇಶ್ವರ ಭಟ್ಟರು ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಗಳ ಗಾದೆಗಳನ್ನು 'ನೆನಪಿಗೆ ಬಂದ ಗಾದೆಗಳು' ಎಂಬ ಹೆಸರಿನಲ್ಲಿ ತಂದಿದ್ದಾರೆ. ಹಾಗೆಯೇ 1973ರಲ್ಲಿ ಸುಧಾಕರ ಅವರು ವ್ಯಾಪಕ ಸಂಗ್ರಹ ಕಾರ್ಯದ ಆಧಾರದ ಮೇಲೆ 'ನಮ್ಮ ಸುತ್ತಿನ ಗಾದೆಗಳು' ಎಂಬ ಗ್ರಂಥವನ್ನು ಚೌಡೇಗೌಡ ಬೀಡನಹಳ್ಳಿ ಅವರು 1973ರಲ್ಲಿ 'ಪ್ರಾದೇಶಿಕ ಗಾದೆಗಳು' ಕೃತಿಗಳನ್ನು ಪ್ರಕಟಿಸಿದ್ದಾರೆ. 1974ರಲ್ಲಿ ಎಂ. ಎಸ್. ಲಠ್ಠೆ ಮತ್ತು ಬಿ. ಬಿ. ಹೆಂಡಿ ಅವರು 1144 ಗಾದೆಗಳನ್ನು ಹೊರತಂದಿದ್ದಾರೆ. 1977ರಲ್ಲಿ ಕಾಳೇಗೌಡ ನಾಗವಾರ 'ಬೀದಿ ಮಕ್ಕಳು ಬೆಳೆದೋ' ಕೃತಿಯಲ್ಲಿ 1459 ಗಾದೆಗಳನ್ನು ಪ್ರಕಟಿಸಿರುತ್ತಾರೆ. 1980ರಲ್ಲಿ ಬಿ. ಎಸ್. ಕುಲಕರ್ಣಿ 1008 ಗಾದೆಗಳನ್ನು ಸಂಗ್ರಹಿಸಿ 'ಬೆತ್ತಲೆಗಾದೆಗಳು' ಎಂದು ಪ್ರಕಟಿಸಿರುತ್ತಾರೆ. 1987ರಲ್ಲಿ ಸುಧಾರ್ಥಿ ಅವರು 'ಹಬ್ಬದ ದಿನವೂ ಹಳೆಯ ಗಂಡನೇ' ಎಂಬ ಗಾದೆಗಳ ಸಂಕಲನವನ್ನು ಹೊರತಂದಿರುತ್ತಾರೆ.

ದೇಸೀಯ ವಿದ್ವಾಂಸರು 1930ರಿಂದ ಹಿಡಿದು 1990ರವರೆಗೆ ಮೂರು ಹಂತಗಳಲ್ಲಿ ಕರ್ನಾಟಕದಾದ್ಯಂತ ಆಯಾ ಪ್ರದೇಶಗಳಲ್ಲಿ ದೊರಕುವ ಗಾದೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದರೆ, ಹತ್ತೊಂಬತ್ತನೆಯ ಶತಮಾನದಲ್ಲಿ ಯಥಾವಿಧಿಯಾಗಿ ಪಾಶ್ಚಾತ್ಯ ವಿದ್ವಾಂಸರು ಕನ್ನಡ ಜಾನಪದ ಗೀತ ಪ್ರಕಾರಗಳಲ್ಲಿ ಕೆಲಸ ಮಾಡಿದಂತೆ ಗಾದೆಗಳನ್ನು ಕುರಿತಂತೆಯೂ ಕೆಲಸ ಮಾಡಿದರು. ಹಾಗೆ ಗಾದೆಗಳನ್ನು ಸಂಗ್ರಹಿಸಿ ಅವುಗಳನ್ನು ಪ್ರಕಟಿಸುವ ಪ್ರಯತ್ನ ಮಾಡಿದ ಅಬೆಡುಬೋಯಿಸ್, ಹರ್ಮನ್ ಮೊಗ್ಲಿಂಗ್, ವಾಲ್ಫ್, ಫರ್ಡಿನಂಡ್ ಕಿಟಲ್, ಶ್ರೀದಾಚ್‌ಇಮಾನ್ ಇವರೆಲ್ಲ ಪ್ರಾತಃಸ್ಮರಣೀಯರು. ಹೀಗೆ ಪಾಶ್ಚಾತ್ಯ ವಿದ್ವಾಂಸರು ಆರಂಭಿಸಿದ ಕೆಲಸವನ್ನು ಅನುಸರಿಸಿ ದೇಸೀಯ ವಿದ್ವಾಂಸರು ಗಾದೆಗಳನ್ನು, ಜನಪದರ ಆಡುಮಾತಿನ ಜ್ಞಾನವೆಂದು ತಿಳಿದು ಸಂಗ್ರಹಿಸಿ ಅವನ್ನು ವಿಷಯ ವಿಂಗಡಣೆಯ ಆಧಾರದ ಮೇಲೆ ವ್ಯವಸ್ಥಿತವಾಗಿ ಪ್ರಕಟಿಸಿದರು. ಇತ್ತೀಚಿನ ಒಂದೆರಡು ದಶಕದಲ್ಲಿ ಗಾದೆಗಳ ವಿಶ್ಲೇಷಣೆಯೂ ಕೂಡ ಅತ್ಯಂತ ಸಮರ್ಪಕವಾಗಿ ನಡೆದಿದೆ. ಎ. ಕೆ. ರಾಮಾನುಜನ್, ರಾ. ಗೌ., ಸುಧಾಕರ, ಕಾಳೇಗೌಡ ನಾಗವಾರ, ನಂ. ತಪಸ್ವೀಕುಮಾರ್, ತಿಪ್ಪೇರುದ್ರಸ್ವಾಮಿ ಈ ವಿದ್ವಾಂಸರೆಲ್ಲ ಗಾದೆಗಳ ತ್ರಿವಿಕ್ರಮ ಗುಣ, ಸ್ವರೂಪವನ್ನು ಸಮರ್ಪಕವಾಗಿ ವಿಶ್ಲೇಷಿಸಿ ಅದರ ಅರ್ಥವ್ಯಾಪ್ತಿಯೇನೆಂಬುದನ್ನು ಜನಸಮೂಹಕ್ಕೆ ಮನವರಿಕೆ ಮಾಡಿಕೊಟ್ಟರು. ಗಾದೆಗಳ ಸಂಗ್ರಹ ಬಹಳ ವ್ಯಾಪಕವಾಗಿ ಕರ್ನಾಟಕದಲ್ಲಿ ನಡೆದಿದ್ದರೂ ಅವುಗಳ ಲೋಕಮಾನ್ಯ ಗುಣವನ್ನು ಕುರಿತು ಹೆಚ್ಚು ಜನ ವಿದ್ವಾಂಸರು ಹೇಳಿದಂತಿಲ್ಲ. 1952ರಲ್ಲಿ ಎ. ಕೆ. ರಾಮಾನುಜನ್ ಅವರು ಗಾದೆಗಳ ಸಂಕ್ಷಿಪ್ತತೆ, ಅದರ ವ್ಯಾಖ್ಯೆಯನ್ನು ಕುರಿತಾಗಿ ಒಂದು ದೀರ್ಘ ಲೇಖನವನ್ನು ಬರೆದರು. ತದನಂತರ ಗಾದೆಗಳನ್ನು ಕುರಿತು ವಿಸ್ತೃತ ಚರ್ಚೆಯನ್ನು ನಡೆಸಿದವರು ರಾ. ಗೌ. ಅವರು.

* * *

ಯಕ್ಷಗಾನ – ಬಯಲಾಟ

ಕನ್ನಡ ಜನಪದ ಜೀವನ ಕ್ರಮದಲ್ಲಿ ಬಯಲಾಟ ಪ್ರಕಾರವು ಎಂದು ಆರಂಭವಾಯಿತೋ, ಅದರ ಕಾಲಘಟ್ಟವನ್ನು ನಿಗದಿಗೊಳಿಸಿ ಹೇಳುವುದು ಕಷ್ಟ. ಕನ್ನಡ ಲಿಖಿತ ಕಾವ್ಯ ಪರಂಪರೆಯ ಕಾಲವನ್ನು ಸಾಹಿತ್ಯ ಚರಿತ್ರೆಕಾರರು ಗುರುತಿಸುತ್ತಾರೆ. ಕನ್ನಡದ ಆದಿ ಅಲಂಕಾರ ಗ್ರಂಥವೆಂದು ಹೇಳುವ ಕವಿರಾಜಮಾರ್ಗದಲ್ಲಿಯೇ ಜನಪದ ಕಾವ್ಯ ಮತ್ತು ಬಯಲಾಟದ ಒಂದು ರೂಪವಿರಬಹುದಾದ ಹಗರಣದ ಪ್ರಸ್ತಾಪವಿದೆ. ಕರ್ನಾಟಕದಾದ್ಯಂತ ಪ್ರಚಲಿತವಿರುವ ರಾಮಾಯಣ, ಮಹಾಭಾರತಗಳು ಯಾವ ಕಾಲಕ್ಕೆ ಕನ್ನಡಿಗರ ನಡುವೆ ಪ್ರಚಾರಕ್ಕೆ ಬಂದವೋ ಹೇಳುವುದು ಅಶಕ್ಯ. ಪಂಪ, ಕುಮಾರವ್ಯಾಸರಿಂದಲೇ ಕನ್ನಡ ಜನಕ್ಕೆ ಮಹಾಭಾರತ ರಾಮಾಯಣಗಳು ಪ್ರಚಾರಕ್ಕೆ ಬರಲಿಲ್ಲ. ಅದಕ್ಕಿಂತ ಮೊದಲೇ ಈ ಎರಡು ಮುಖ್ಯ ಕಥಾನಕಗಳು ಕನ್ನಡ ಸಾಮಾನ್ಯ ಜನತೆಯ ನಡುವೆ ಪ್ರಚಾರದಲ್ಲಿದ್ದವು. ಇದರಿಂದ ಪಂಪ ಕುಮಾರವ್ಯಾಸರಿಬ್ಬರೇ ಕನ್ನಡದಲ್ಲಿ ರಾಮಾಯಣ ಮಹಾಭಾರತ ಕಥನಗಳ ಪ್ರಚಾರಕರಲ್ಲ ಎಂದು ತಿಳಿಯಬೇಕಾಗಿದೆ. ಹೀಗಾಗಿ ಕನ್ನಡದಲ್ಲಿ ಸಾವಿರ ವರ್ಷಗಳಿಗೂ ಮಿಕ್ಕಂತೆ ಅಥವಾ ಅದಕ್ಕಿಂತಲೂ ಹಿಂದಿನಿಂದ ಶೈವಪುರಾಣ ಕಥೆಗಳು, ರಾಮಾಯಣ ಮಹಾಭಾರತ ಕಥೆಗಳೂ ಬಯಲಾಟಗಳ ಮೂಲಕ ಭಾರತದಾದ್ಯಂತ ಸಂಚಾರ ಮಾಡಿವೆ. ಜನಪದರ ಕಲ್ಪನೆಯ ಮೂಲಕ ಅವರು ಕೇಳಿದ ರಾಮಾಯಣ ಮಹಾಭಾರತ ಕಥೆಗಳು ಬೇರೆ ಬೇರೆಯ ರೂಪ ತಾಳಿವೆ.

ಭಾರತದ ಬೇರೆಲ್ಲಾ ಭಾಷೆಗಳಂತೆ ಅವುಗಳ ಮಾರ್ಗಪರಂಪರೆಯಲ್ಲಿ ನಾಟಕಗಳು ಇಲ್ಲದಿದ್ದರೂ, ಜನಪದ ಪರಂಪರೆಯಲ್ಲಿ ಮಾತ್ರ ಬಯಲಾಟಗಳು ಯಥೇಚ್ಛವಾಗಿ ಕಂಡುಬರುತ್ತವೆ. ಈ ಮೊದಲೇ ಹೇಳಿದಂತೆ ಇವುಗಳಿಗೆ ಬಯಲಾಟದ ವಸ್ತುವನ್ನು ಒದಗಿಸಿದವೆಂದರೆ ಮೂಲ ಮಹಾಭಾರತ ರಾಮಾಯಣಗಳಿಂದ ಹುಟ್ಟಿಕೊಂಡು ಕರ್ಣಾಕರ್ಣಿಕೆಯಾಗಿ ಬಂದ ಕಥೆಗಳೇ! ಈ ಬಯಲಾಟಗಳಿಂದಾಗಿಯೇ ಭಾರತದಾದ್ಯಂತ ಶ್ರೀಸಾಮಾನ್ಯರ ನಡುವೆ ಎಲ್ಲ ಕಾವ್ಯ ಪುರಾಣಾದಿ ಕಥನಗಳು ವ್ಯಾಪಕ ಪ್ರಚಾರಕ್ಕೆ ಬಂದವು. ಅಲ್ಲದೆ ವಾಸ್ತುಶಿಲ್ಪ, ವರ್ಣಚಿತ್ರ ಪಟ್ಟಿಕೆಗಳ ಮೂಲಕವೂ ಪ್ರಚಾರಕ್ಕೆ ಬಂದವು. ಕನ್ನಡ ಶಿಷ್ಟ ಸಾಹಿತ್ಯ ಪರಂಪರೆಯೆಂದರೆ ಅದು ಕಾವ್ಯವೇ ಎಂದು ತಿಳಿಯಲಾಗಿದೆ. ಶ್ರೀಸಾಮಾನ್ಯರು ಈ ಪರಂಪರೆಯ ಕಾವ್ಯ ಕಥನಗಳನ್ನು ತಮಗೆ ಸಾಧ್ಯವಾದಂತೆ ಗಮಕ ಪರಂಪರೆಯಲ್ಲಿ ಕೇಳಿಸಿಕೊಂಡೇ ಬಂದಿದ್ದಾರೆ. ಆದರೆ ಜನಪದರು ಶಿಷ್ಟ ಕಾವ್ಯ ಕಥೆಗಳನ್ನು ಶ್ರವಣ ಮಾದರಿಯಲ್ಲಿ ಕೇಳಿಸಿಕೊಂಡದ್ದಕ್ಕಿಂತ ಚಾಕ್ಷುಷ ಬಗೆಯಲ್ಲೇ ನೋಡಿದ್ದು ಹೆಚ್ಚು. ಏಕೆಂದರೆ ಇದು ದುಡಿಮೆಯ ವರ್ಗ. ಇವರಿಗೆ ಸಾಹಿತ್ಯವೆಂದರೆ ಅದು ಕಲಾಮಾಧ್ಯಮವೇ. ಹಾಡುಗಾರಿಕೆಯನ್ನೂ ಸಹ ಕಾಯಕದೊಂದಿಗೆ ಇರುವ ಕಲೆ ಎಂತಲೇ ತಿಳಿದುಬಂದವರು. ಹಿಗೆ ಜನಪದರು ಸಾಗಿಸಿಕೊಂಡು ಬಂದ ಅನೇಕಾನೇಕ ಪ್ರಕಾರಗಳಲ್ಲಿ ಬಯಲಾಟವೂ ಒಂದು ಮುಖ್ಯ ಕಲಾಭಾಗವಾಗಿ ಉಳಿದುಬಂದಿದೆ.

ಕರ್ನಾಟಕದಲ್ಲಿ ಬಯಲಾಟ ಪ್ರಕಾರಗಳು ಪ್ರಾದೇಶಿಕ ಭಿನ್ನತೆಯನ್ನು ರೂಢಿಸಿಕೊಂಡು

ಬಂದಿವೆ. ನಾಟಕಕ್ಕಾಗಿ ಆಯ್ಕೆ ಮಾಡಿಕೊಳ್ಳುವ ವಸ್ತು ಒಂದೇ ಮೂಲದ್ದಾದರೂ ಪ್ರದರ್ಶಿಸುವ ಕ್ರಮ, ವೇಷಭೂಷಣ, ಸಂಗೀತ ಇವುಗಳಲ್ಲಿ ಕ್ವಚಿತ್ತಾದ ವ್ಯತ್ಯಾಸವಿದೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈ ಬಯಲಾಟ ಯಕ್ಷಗಾನ ಎಂದು, ಉತ್ತರ ಕರ್ನಾಟಕದ ಕಡೆ ಪಡುವಲಪಾಯವೆಂದು, ದಕ್ಷಿಣ ಕರ್ನಾಟಕದ ಕಡೆ ಈ ಆಟವನ್ನು ಮೂಡಲಪಾಯ-ವೆಂದು ಕರೆಯುತ್ತಾರೆ. ಈ ಪ್ರಭೇದಗಳಲ್ಲಿ ಒಳಭೇದಗಳಿರುತ್ತವೆ. ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟುಗಳಿದ್ದರೆ ಪಡುವಲಪಾಯದಲ್ಲಿ ಸಣ್ಣಾಟ, ದೊಡ್ಡಾಟವೆಂದಲ್ಲದೆ ಇನ್ನೂ ಅನೇಕ ಸಣ್ಣಪುಟ್ಟ ಆಟದ ಬಗೆಗಳಿರುತ್ತವೆ. ಈ ನಾಲ್ಕು ಪ್ರಕಾರಗಳೂ ಕಾವ್ಯ ಪುರಾಣಾದಿ ಮೂಲದವೆಂದರೂ ಅವುಗಳನ್ನು ಜನಪದರು ಎಂದೂ ಕೇವಲ ಮನರಂಜನೆಯ ಆಟಗಳು ಎಂದು ಭಾವಿಸಿದವರಲ್ಲ. ಧಾರ್ಮಿಕ ಹಿನ್ನೆಲೆಯಲ್ಲಿ ತಮ್ಮ ನೈತಿಕ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಇದು ಇರುವುದೆಂಬುದನ್ನು ಪರಿಭಾವಿಸಿಕೊಂಡು ಬಂದಿರುತ್ತಾರೆ. ಹಾಗೆ ಅವರು ಆಡಿಕೊಂಡು ಬಂದ ಬಯಲಾಟ ಪ್ರಕಾರಗಳು ಅವರ ಜೀವನ ಪಾಠಗಳಾಗಿ ಪರಿಣಮಿಸಿವೆ. ಬದುಕಿನ ನೀತಿ ಸಂಹಿತೆಗಳೂ ಕೂಡ.

ಪುರಾಣ ಮೂಲ ನಾಟಕಗಳಲ್ಲದೆ ಅಲ್ಲಲ್ಲಿ ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ಜನಪದರು ಉಳಿಸಿಕೊಂಡು ಬಂದಿದ್ದಾರೆ. ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಪರಂಪರೆಯಲ್ಲಿ ಇತಿಹಾಸ ಮತ್ತು ಸಾಮಾಜಿಕ ಸಂಬಂಧದ ನಾಟಕಗಳು ತುಂಬ ಕಡಿಮೆ. 'ಸಂಗ್ಯಾಬಾಳ್ಯಾ' ನಾಟಕ ಉತ್ತರ ಕರ್ನಾಟಕದ ಕಡೆ ಬೈಲಹೊಂಗಲ ಪ್ರದೇಶದಲ್ಲಿ ನಡೆದ ಘಟನೆಯಾದರೆ ಕುಮಾರರಾಮನ ಕಥನವೂ ರಾಯಚೂರು ಭಾಗದಲ್ಲಿ ಹದಿಮೂರನೇ ಶತಮಾನದಲ್ಲಿ ಜರುಗಿದ್ದು. ದಕ್ಷಿಣ ಭಾರತದ ಮೇಲಾಗುತ್ತಿದ್ದ ಮುಸ್ಲಿಮರ ದಾಳಿಯನ್ನು ತಡೆಯಲು ಹೋದ ಕುಮಾರರಾಮ ಹತನಾದ. ಅವನಿಗೆ ಶೌಚಗುಣಸಂಪನ್ನತೆಯ ಆಶಯ ಹಚ್ಚಿ ಕಾವ್ಯ ಕಥನವನ್ನು ಹೆಣೆಯಲಾಗಿದೆ. ಕರಿಭಂಟನ ಕಥೆಯೂ ಕೂಡ ಪುರಾಣ ಆಶಯಗಳನ್ನೊಳಗೊಂಡ ಐತಿಹಾಸಿಕ ಎಳೆಯ ಕಥೆ. ಈ ಮೂರು ಕಥನಗಳು ಉತ್ತರ ಕರ್ನಾಟಕದಲ್ಲಿ ಜನಪ್ರಿಯ ಬಯಲಾಟಗಳು. ತದನಂತರ ಇವು ದಕ್ಷಿಣ ಕರ್ನಾಟಕಕ್ಕೂ ಪ್ರವೇಶಿಸಿದವು. ಆದರೆ ಅತ್ಯಂತ ಸಾಂಪ್ರದಾಯಿಕ ಮಾದರಿಯ ಪೌರಾಣಿಕ, ಧಾರ್ಮಿಕ, ಯಕ್ಷಗಾನ ಕೃತಿಗಳನ್ನು ಆರಿಸಿಕೊಳ್ಳುವ ಕರಾವಳಿ ಜಿಲ್ಲೆಯ ಆಟಗಳಲ್ಲಿ ಸಾಮಾಜಿಕ, ಐತಿಹಾಸಿಕ, ಕಥಾನಕಗಳು ಕಡಿಮೆ.

ಮೂವತ್ತಕ್ಕೂ ಹೆಚ್ಚು ಬುಡಕಟ್ಟು ಸಮೂಹಗಳು ವಾಸಿಸುವ ಕರಾವಳಿ ಜಿಲ್ಲೆಗಳಲ್ಲಿ ಅದರದೇ ಹಿನ್ನೆಲೆಯ ಆರಾಧನೆ, ಆಚರಣೆ ಮತ್ತು ಕಲೆ ರೂಪುಗೊಂಡಿದೆ. ಇಲ್ಲಿ ಶಿಷ್ಟ ಮತ್ತು ಜನಪದ ಎನ್ನುವುದಕ್ಕಿಂತ ಜನಪದ ದೈವಗಳನ್ನೇ ಎಲ್ಲರೂ ಆರಾಧಿಸಿಕೊಂಡು ಬಂದಿರುತ್ತಾರೆ. ವ್ಯವಸಾಯ ಹಿನ್ನೆಲೆಯ ಆಚರಣೆಗಳು ಕಡಿಮೆ. ಘಟ್ಟ ಪ್ರದೇಶಗಳು ಅಪಾರವಾಗಿರುವುದರಿಂದ ಅಲ್ಲಿಯದೇ ಪ್ರತ್ಯೇಕ ಅರಣ್ಯ ಜೀವನ ರೂಪುಗೊಂಡಿರುತ್ತದೆ. ಹೀಗಾಗಿ ಸಾವಧಾನಕ್ಕಿಂತಲೂ ಅಬ್ಬರವೆನಿಸುವ ವೇಷ, ಹಾಡು, ಕುಣಿತ, ಸಂಗೀತವಿರುವ ಯಕ್ಷಗಾನ ಬಯಲಾಟ ಈ ಭಾಗದಲ್ಲಿ ಮೂಡಿಬಂದಿರುತ್ತದೆ. ಈ ಬಯಲಾಟಗಳಲ್ಲಿ

ಸಾಮಾಜಿಕ ಸಂಗತಿ ಅಥವಾ ಐತಿಹಾಸಿಕ ಹಿನ್ನೆಲೆಯ ವಸ್ತುವಿಗಿಂತ ರಾಮಾಯಣ ಮಹಾಭಾರತ ಇನ್ನಿತರ ಪುರಾಣ ಕಥೆಗಳೇ ಇಲ್ಲಿ ಹೆಚ್ಚು ಪ್ರಚಾರದಲ್ಲಿರುತ್ತವೆ.

ಧಾರ್ಮಿಕವೆನಿಸುವ, ಆರಾಧನಾಭಾವದ ಆಚರಣೆಗಳಲ್ಲಿ ಯಕ್ಷಗಾನ ಪ್ರದರ್ಶನಗಳು ಈ ಘಟ್ಟ ಪ್ರದೇಶದಲ್ಲಿ ನೆರವೇರುತ್ತವೆ. ಈಗಲೂ ಆ ಭಾಗದ ಯಕ್ಷಗಾನ ಮೇಳಗಳು ದೈವದ ಆಶ್ರಯದಲ್ಲಿಯೇ ದೊಡ್ಡ ತಂಡಗಳಾಗಿ ಉಳಿದುಕೊಂಡು ಬಂದಿವೆ. ಇಷ್ಟಾಗಿಯೂ ಧಾರ್ಮಿಕ ಹಿನ್ನೆಲೆಯ ಯಕ್ಷಗಾನ ಮೇಳಗಳು ಇಂದು ಅರ್ಥಮೂಲವೂ ಆಗಿ ಪರಿಣಮಿಸಿ, ಆ ಕಲೆಯನ್ನೇ ನಂಬಿಕೊಂಡು ಬದುಕಬಹುದಾದಷ್ಟು ಮೇಳಗಳು ತಮ್ಮ ಶ್ರೀಮಂತಿಕೆಯನ್ನು ಉಳಿಸಿಕೊಂಡಿವೆ. ಈ ಬಗೆಯ ಬೆಳವಣಿಗೆಯನ್ನು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಅಥವಾ ಮಧ್ಯ ಕರ್ನಾಟಕ ಬಯಲಾಟಗಳು ಕಂಡುಕೊಂಡಿಲ್ಲ. ಕೇವಲ ರಾಜಕೀಯ ಮೇಳಗಳಲ್ಲೋ, ಮೆರವಣಿಗೆಗಳಲ್ಲೋ, ವ್ಯಕ್ತಿಪ್ರತಿಷ್ಠೆಯ ಸಮಾರಂಭಗಳಲ್ಲೋ ಉತ್ತರ, ದಕ್ಷಿಣ ಕರ್ನಾಟಕದ ಕಲೆಗಳು ತಾತ್ಕಾಲಿಕವಾಗಿ ಪ್ರದರ್ಶನಗೊಳ್ಳುತ್ತವೆ. ಇದೀಗ ಈ ಪ್ರದರ್ಶನಗಳಿಗೆ ಧಾರ್ಮಿಕ ಅಥವಾ ಆಚರಣಾತ್ಮಕ ಹಿನ್ನೆಲೆಯೇನೂ ಉಳಿದಿರುವುದಿಲ್ಲ. ಆದರೆ ಕರಾವಳಿಯ ಯಕ್ಷಗಾನ ಪರಂಪರೆ ತನ್ನ ಎಲ್ಲ ಆಚರಣಾತ್ಮಕ, ಧಾರ್ಮಿಕ ಪಾವಿತ್ರ್ಯವನ್ನು ಉಳಿಸಿಕೊಂಡೂ ಸಹ ಅವು ದೇಶವಿದೇಶಗಳಲ್ಲಿ ಪ್ರದರ್ಶನಗಳನ್ನು ನೆರವೇರಿಸಿಕೊಂಡು ಬರುತ್ತಿರುವುದು ಪ್ರಶಂಸನೀಯ.

ಭಕ್ತಿ, ಆರಾಧನೆ, ಜ್ಞಾನ ಮತ್ತು ಮನರಂಜನೆಯ ಹಿನ್ನೆಲೆಯಲ್ಲಿದ್ದ ಜನಪದ ಕಲೆಗಳು ನಶಿಸುತ್ತ ಆ ಜಾಗದಲ್ಲಿ ಮಾಧ್ಯಮಗಳು ಮತ್ತು ಹಾಸ್ಯಗೋಷ್ಠಿಗಳ ಪ್ರಾಬಲ್ಯ ಹೆಚ್ಚುತ್ತಲಿರುವುದು ಇದೀಗ ಎಲ್ಲರೂ ಬಲ್ಲ ಸಂಗತಿಯಾಗಿದೆ. ಜನ ಬದಲಾದದ್ದು ಹೇಗೆ ಎಂದುಕೊಳ್ಳುವುದಾದರೆ ಸಾಮಾಜಿಕ ಸ್ಥಿತಿಗತಿ ಕಳೆದ ಶತಮಾನಗಳಿಗಿಂತ ಹೆಚ್ಚು ಅನುಕೂಲ ಸ್ಥಿತಿಯಲ್ಲಿದೆ. ಉದ್ಯೋಗ ಮತ್ತು ಅರ್ಥಗಳಿಕೆಯಲ್ಲಿ ವ್ಯಾಪಾರದ ಭಾವನೆ ಊರ್ಜಿತವಾಗುತ್ತಿದೆ. ವ್ಯವಸಾಯ ಮತ್ತು ಕೇವಲ ಆಹಾರ ಪದಾರ್ಥಗಳ ವಿನಿಮಯದ ಬದುಕಿನ ಹಿನ್ನೆಲೆಯಲ್ಲಿ ಹುಟ್ಟಿದ ಕಲೆಗಳ ಐಹಿಕ ಸಂಪತ್ತಿಗೆ ಹೆಚ್ಚು ಬೆಲೆ ಕೊಟ್ಟಿರಲಿಲ್ಲ. ಇದು ಭಾರತೀಯ ಜೀವನ ಕ್ರಮದ ಒಂದು ಪದ್ಧತಿಯಾಗಿದ್ದಿತು. ಆದರೆ ಕೈಗಾರಿಕೀಕರಣ ಮತ್ತು ಜಾಗತೀಕರಣದ ನಂತರ ವ್ಯಾಪಾರ ಮತ್ತು ಹಣ ಮುಖ್ಯವಾಗಿ ಭಕ್ತಿ, ಆರಾಧನೆ, ಜಾತ್ರೆಗಳು ಮತ್ತು ಅದರ ಭಾಗವೆನಿಸುವ ಜನಪದ ಕಲೆಗಳು ಕಳೆಗುಂದುತ್ತಲಿವೆ.

ಕರ್ನಾಟಕದಲ್ಲಿ ಜನಪದ ಕಲೆಗಳನ್ನು ಪ್ರಮುಖ ವಿಭಾಗಗಳಲ್ಲಿ ಅಳವಡಿಸಲಾಗದಷ್ಟು ವಿಪುಲ ಸಂಖ್ಯೆಯ ಕಲಾ ಪ್ರಕಾರಗಳಿವೆ. ದಕ್ಷಿಣ ಕರ್ನಾಟಕದಲ್ಲಿ ಅಪಾರ ಸಂಖ್ಯೆಯಲ್ಲಿರುವ ನೀಲಗಾರರು ಮತ್ತು ಕಂಸಾಳೆಯವರು ಉತ್ತರ ಕರ್ನಾಟಕದಲ್ಲಿಲ್ಲ. ಉತ್ತರ ಕರ್ನಾಟಕದಲ್ಲಿ ಸಮೃದ್ಧವಾಗಿ ದೊರಕುವ ಕಲ್ಗಿತುರಾ ಸವಾಲ್‌ಜವಾಬ್, ಸಣ್ಣಾಟ, ದೊಡ್ಡಾಟ, ರಾಧಾನಾಟ ಇತರ ಪ್ರಕಾರಗಳು ದಕ್ಷಿಣ ಕರ್ನಾಟಕದಲ್ಲಿಲ್ಲ.

ದಕ್ಷಿಣ ಕರ್ನಾಟಕದಲ್ಲಿ ಕಂಸಾಳೆ ಮತ್ತು ನೀಲಗಾರರ ಪರಂಪರೆಯ ಜನಪದ ಕಲೆಗಳು ಹೇರಳ ಇದ್ದು ಬಯಲಾಟ ಮಾತ್ರ ಕ್ವಚಿತ್ತಾಗಿರುತ್ತದೆ. ಮಧ್ಯ ಕರ್ನಾಟಕದ

ಶಿವಮೊಗ್ಗ, ಚಿತ್ರದುರ್ಗದಲ್ಲಿ ಡೊಳ್ಳು ಮೇಳ, ಕರಡಿಮಜಲು, ವೀರಭದ್ರನ ಕುಣಿತ, ಅಂಟಿಗೆ ಪಂಟಿಗೆ ಈ ಮುಂತಾದುವೇ ಅಲ್ಲದೆ ಹಗಲುವೇಷ, ಚೌಡಿಕೆ, ಚಿಟ್‌ಮೇಳ ಮುಖವೀಣೆ, ಗಂಟೆ ಬಾರಿಸಿಕೊಂಡು ಮನೆಮನೆಯ ಪೂರ್ವಜರ ಕಥೆ ಹೇಳಿಕೊಂಡು ತಿರುಗುವ ಹೆಳವರು, ಕರಪಾಲದವರು, ಕವಲೆತ್ತಿನವರು ಹೀಗೆ ಅಸಂಖ್ಯಾತ ಕಲಾವಿದರಿದ್ದಾರೆ. ನಗರ ಪ್ರದೇಶದವರ ಜೀವನ ತೀವ್ರಗತಿಯಲ್ಲಿ ಬದಲಾಗುತ್ತಿರುವ ಈ ಸನ್ನಿವೇಶದಲ್ಲಿ ಜನಪದ ಕಲೆಗಳು ಇಂದು ನಗೆಪಾಟಲಿಗೆ ಈಡಾಗುತ್ತಿವೆ.

ಬಯಲಾಟಗಳಿಗಿಂತಲೂ ಅತ್ಯಂತ ಪ್ರಾಚೀನ ಕಲೆ ತೊಗಲುಗೊಂಬೆ ಮತ್ತು ಸೂತ್ರದ ಗೊಂಬೆಯಾಟ. ಈ ಎರಡೂ ಪ್ರದರ್ಶಕ ಕಲೆಗಳ ಹಿನ್ನೆಲೆಯಲ್ಲಿ ಮಧ್ಯ ಕರ್ನಾಟಕದಲ್ಲಿ ಅನೇಕಾನೇಕ ಸಂಸಾರಗಳು ಅತ್ಯಂತ ಹೆಮ್ಮೆಯಿಂದ ಬದುಕಿದ್ದು, ಜನರ ಗೌರವಕ್ಕೆ ಪಾತ್ರವಾಗಿದ್ದು ಇಂದು ಆ ಕಲೆಯ ನಿರ್ವಹಣೆಯಿಂದ ಬದುಕು ಸಾಧ್ಯವಿಲ್ಲದಂತಾಗಿದೆ. ತೊಗಲು ಗೊಂಬೆ ಅಥವಾ ಸೂತ್ರದ ಗೊಂಬೆಗಳು ನಮ್ಮ ಕಾವ್ಯಪರಂಪರೆಯ ಕಥಾನಕಗಳನ್ನು ಜೀವಂತಗೊಳಿಸುವ ಸಾಧನಗಳಾಗಿದ್ದು, ಇಂದು ಅವು ಜೀವ ಕಳೆದುಕೊಂಡು ಸಂಗ್ರಹಾಲಯ ಸೇರುವ ವಸ್ತುಗಳಾಗಿಬಿಡುತ್ತಿವೆ. ಕರ್ನಾಟಕದ ಅರಣ್ಯ ಪ್ರದೇಶವೆನಿಸುವ ಕೊಡಗಿನಲ್ಲಿಯೂ ವ್ಯವಸಾಯದ ಹಿನ್ನೆಲೆಯಲ್ಲಿ ನಮ್ಮ ಎಲ್ಲ ಆಚರಣೆ, ಆರಾಧನೆ ಮತ್ತು ಕಲೆಗಳು ಬೆಳೆದುಬಂದಿರುವಂಥದಾಗಿದ್ದು, ಇದೀಗ ಕೈಗಾರಿಕಾ ಕಾರಣಗಳ ಹಿನ್ನೆಲೆಯಲ್ಲಿ ಯಂತ್ರ ಪ್ರಾಬಲ್ಯ ಹೆಚ್ಚುತ್ತಾ ಮನುಷ್ಯನ ಕೈಗಳಿಗೆ ಕೆಲಸ ಕಡಿಮೆಯಾಗುತ್ತಿದೆ.

ಜಗತ್ತಿನಾದ್ಯಂತ ಇಂದು ಜನಪದ ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಕುತೂಹಲಕರ ಅಧ್ಯಯನ ನಡೆಯುತ್ತಿದೆ ನಿಜ. ಜನಪದ ಪ್ರದರ್ಶಕ ಕಲೆಗಳ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯವನ್ನು ಅಧ್ಯಯನ ಮಾಡಬೇಕಾದ ನೆಲೆಯಲ್ಲಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡಿವೆ. ಆದರೆ ಭಾರತದಲ್ಲಿ ಇನ್ನೂ ಜನಪದ ಸಾಹಿತ್ಯ ಮತ್ತು ಕಲೆಯನ್ನು ಕುರಿತು ನಿಜವಾದ ಅಭಿಮಾನ ಮತ್ತು ಅಧ್ಯಯನ ಬೆಳೆದುಬಂದಿಲ್ಲ. ಜನಪದ ಕಲೆ ಅದು ಮುಂದೆಯೂ ಉಳಿದು ಬೆಳೆಯಬೇಕಾದ, ಬೇರೆ ಬೇರೆ ಸ್ವರೂಪ ತಾಳಬೇಕಾದ, ಯುವಕರು ಕಲಿತು ಬದುಕಬಹುದಾದ ಸಂಗತಿಯಾಗಿ ತೋರುತ್ತಿಲ್ಲ. ಜನಸಮೂಹ ಅಭಿಮಾನದಿಂದ, ಆರಾಧನೆಯಿಂದ ಭಕ್ತಿಯ ಹಿನ್ನೆಲೆಯಲ್ಲಿ ನೋಡುವವರೆಗೆ ಕಲೆ ತನ್ನದೇ ವಿಶಿಷ್ಟತೆ ಮತ್ತು ಶಕ್ತಿಯಿಂದ ನಿಂತಿತ್ತು. ಈಗ ಅದೇ ಜನಸಮೂಹದ ನಿರ್ಲಕ್ಷ್ಯದಿಂದ ಕೀಳರಿಮೆ ಮತ್ತು ಬಡತನವನ್ನು ಅನುಭವಿಸುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ಮಾಡಬಹುದಾದ ಮೊದಲ ಕೆಲಸವೆಂದರೆ ಕರ್ನಾಟಕದ ಯಾವ್ಯಾವ ಭಾಗದಲ್ಲಿ ಯಾವ್ಯಾವ ಬಗೆಯ ಜನಪದ ಕಲಾ ಪ್ರದರ್ಶನ ಕೊಡುವ ತಂಡಗಳು ಇವೆಯೋ ಅದನ್ನು ಮೊದಲು ಗಮನಿಸಬೇಕು. ಗಾಯಕರನ್ನು ಗಮನಿಸಬೇಕು. ಇಲ್ಲಿ ಇನ್ನೊಂದು ಮುಖ್ಯ ಸಂಗತಿ ಎಂದರೆ, ಕರ್ನಾಟಕದಲ್ಲಿ ಒಂದೇ ಕಲಾಪ್ರಕಾರವನ್ನು ನಂಬಿಕೊಂಡು ಬರುತ್ತಿರುವ ಅಸಂಖ್ಯಾತ ಕಲಾವಿದರಿದ್ದಾರೆ. ಇಂಥ ಸಮೂಹದಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಿ ಅವರಿಗೆ ತಕ್ಕ ಅನುಕೂಲಕರ ವಾತಾವರಣ ನಿರ್ಮಾಣ ಮಾಡಿ, ಅಲ್ಲಿ ಅವರ ಕಲೆಯನ್ನು ನಿಗದಿತ ಸಮಯದಲ್ಲಿ

ಪ್ರದರ್ಶಿಸುವಂತೆ ಮಾಡಬೇಕು. ಅದನ್ನು ಆಯಾ ಪ್ರದೇಶದ ಶ್ರೀಮಂತರು, ಆಸಕ್ತರು ಮತ್ತು ಸರ್ಕಾರ ನೋಡಿಕೊಳ್ಳುವಂತಾಗಬೇಕು. ತಾವು ನಂಬಿದ ಕಲೆಯಿಂದ ಬದುಕಬಹುದು ಎಂಬ ಭರವಸೆ ಬರುವುದಾದರೆ ಜನಪದ ಕಲೆಯ ಉತ್ತಮ ಭಾಗಗಳು ಬದುಕಿ ಉಳಿಯುವಂತಾಗುತ್ತದೆ. ಇದರಿಂದ ಜನಪದ ಕಲೆಗಳು ತಮ್ಮ ಆರಾಧನೆಯ ಹಿನ್ನೆಲೆಯನ್ನು ಕಳೆದುಕೊಂಡರೂ ಅವು ಮೂಲಸ್ವರೂಪದಲ್ಲಿ ಉಳಿಯುವ ಸಾಧ್ಯತೆ ಇರುತ್ತದೆ. ಎಲ್ಲ ಜನಪದ ಕಲೆಗಳ ಶ್ರೇಷ್ಠ ಕಲಾವಿದರನ್ನಾದರೂ ಬದುಕಿಸಿಕೊಳ್ಳುವ ಅಗತ್ಯ ಇಂದು ಇದೆ. ಇದಕ್ಕೆ ಮಾದರಿ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕಲಾವಿದರೇ. ಸರ್ಕಾರದ ಯಾವ ಪ್ರೋತ್ಸಾಹವೂ ಇಲ್ಲದೆ ಆ ಭಾಗದಲ್ಲಿ ಕಲಾವಿದರು ತಮ್ಮ ಜೀವನ ನಡೆಸುವಷ್ಟು ಸಮರ್ಥರಿರುತ್ತಾರೆ.

2005ರಲ್ಲಿ ಕರ್ನಾಟಕ ಸರ್ಕಾರ 'ಜಾನಪದ ಜಾತ್ರೆ' ಎಂಬ ಪ್ರಾಯೋಗಿಕ ಯೋಜನೆ ಹಾಕಿಕೊಂಡು ಜನಪದ ಕಲೆಗಳ ಹಿನ್ನೆಲೆಯ ಉತ್ತಮ ಕಲಾವಿದರ ಪ್ರದರ್ಶನಗಳನ್ನು ವಿಧಾನಸೌಧದಿಂದ ಆರಂಭಿಸಿ ಕರ್ನಾಟಕದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸುವ ವ್ಯವಸ್ಥೆ ಮಾಡಿತ್ತು. ಇದು ಮುಂದುವರೆಯುವುದಾದರೆ ಕಲಾವಿದರು ಈ ಪರಂಪರೆಯನ್ನು ತಮ್ಮದಾಗಿಸಿಕೊಂಡು ಅದರ ಬೇರೆ ಬೇರೆಯ ಸಾಧ್ಯತೆಗಳನ್ನು ಮುಂದೆಯೂ ಪ್ರದರ್ಶಿಸುತ್ತ ಹೋಗುವುದಾದರೆ, ಯಾವುದೇ ಜಾಗತೀಕರಣದ ಬದಲಾವಣೆಯ ನಡುವೆಯೂ ಪಾರಂಪರಿಕ ಜನಪದ ಕಲೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಂದು ವೇಳೆ ಕಲಾವಿದರಿಂದ ಈ ಜನಪದ ಕಲೆಗಳು ಕಳೆದುಹೋದರೆ ಅವನ್ನು ಮತ್ತೆ ನೆನಪಿಸಿಕೊಳ್ಳುವುದು ಸಾಧ್ಯವೇ ಆಗುವುದಿಲ್ಲ. ಹಳೆಯದನ್ನು ಕಳೆದುಕೊಂಡು ಹೊಸತರಲ್ಲೇ ಎಲ್ಲ ಸಂತೋಷ ಕಾಣುವುದು ಕಷ್ಟ. ಪರಂಪರೆಯನ್ನು ನೆನಪಿಸುವ ಸಂಗತಿಗಳು ಯಾವಾಗಲು ಹೆಚ್ಚು ಸಮಾಧಾನ, ಸಂತೋಷವನ್ನು ನೀಡುತ್ತವೆ. ಈ ಮಾತು ಜಾನಪದದ ಎಲ್ಲ ಸಾಹಿತ್ಯ ಮತ್ತು ಕಲಾ ಪ್ರಕಾರಕ್ಕೂ ಅನ್ವಯಿಸುತ್ತದೆ.

* * *

ಜಾಗತಿಕ ಜಾನಪದ

ಕನ್ನಡ ಜಾನಪದದ ಸಮಗ್ರತೆಯನ್ನು ಕುರಿತು 1970ರ ಸುಮಾರಿನಲ್ಲಿ ದೀರ್ಘ ಲೇಖನಗಳ ಒಂದು ಕೃತಿ ಬರೆದ ದೇಜಗೌ ಅವರು ಜಾನಪದದ ಸತ್ವವನ್ನು ಕುರಿತು ಅದು 'ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು' ಎಂದಿದ್ದಾರೆ. ಹಾಗೆ ನೋಡಿಕೊಂಡರೆ ಜಾನಪದವೆನ್ನುವುದು ಕೇವಲ ರಾಷ್ಟ್ರಮಟ್ಟದ್ದಲ್ಲ ಅದು ವಿಶ್ವವ್ಯಾಪಿಯಾದುದು ಎಂಬುದು ಜಗತ್ತಿನ ಜನಪದ ಕಥೆಗಳನ್ನು ಸ್ಟಿಥ್ ಥಾಂಸನ್ ಅವರು ಅಧ್ಯಯನ ಮಾಡಿ ಅದರ ವರ್ಗ ಮತ್ತು ಆಶಯಗಳ ಸಂಪುಟಗಳನ್ನು ಸಿದ್ಧಪಡಿಸಿದ ಮೇಲೆ ಎಲ್ಲ ವಿದ್ವಾಂಸರಿಗೂ ಅದರ ಲೋಕವ್ಯಾಪಕ ಗುಣ ಗಮನಕ್ಕೆ ಬಂದಿತು.

ದೇಜಗೌ ಅವರು ತಮ್ಮ ಲೇಖನದಲ್ಲಿ ಉಲ್ಲೇಖಿಸುವ ಮತ್ತೊಂದು ಸಂಗತಿಯೆಂದರೆ, ಆಫ್ರಿಕಾದ ಆದಿವಾಸಿಗಳ ಶಿಲ್ಪ ತನ್ನ ಕಲೆಗೆ ಸ್ಫೂರ್ತಿ ನೀಡಿತೆಂದು ಜಗತ್ಪ್ರಸಿದ್ಧ ಕಲಾಕಾರ ಪಿಕಾಸೋ ಹೇಳಿರುವುದನ್ನು ಪ್ರಸ್ತಾಪಿಸುತ್ತಾರೆ. ರಾಬರ್ಟ್ ಬರ್ನ್ಸ್ ಕೂಡ ಜಾನಪದ ಗೀತೆಗಳಿಂದ ಸ್ಫೂರ್ತಿ ಪಡೆದು ತಾನು ಭಾವಗೀತೆಗಳನ್ನು ರಚಿಸಿದ್ದಾಗಿ ಹೇಳಿಕೊಂಡಿದ್ದಾನೆ. ರವೀಂದ್ರನಾಥ ಠಾಗೋರರ ಸಾಹಿತ್ಯದ ಮೇಲೆ ಜಾನಪದ ಸಂಸ್ಕೃತಿಯ ಪ್ರಭಾವ ಸಾಕಷ್ಟು ಆಗಿದೆಯಲ್ಲದೆ ಅವರು ಜಾನಪದ ವಾಙ್ಮಯವನ್ನು ಸಂಗ್ರಹಿಸಿ ಸಂರಕ್ಷಿಸಿಡಬೇಕೆಂದು ತಮ್ಮ ಸುತ್ತಲಿನ ವಿದ್ವಾಂಸರಿಗೆ ಹೇಳುತ್ತಿದ್ದರಲ್ಲದೆ ಆ ವಿಷಯ ಕುರಿತು ಲೋಕ ಸಾಹಿತ್ಯವೆಂಬ ಗ್ರಂಥವನ್ನು ಪ್ರಕಟಿಸಿದರು.

ಮೇಲಿನ ಸಂಗತಿಗಳನ್ನೆಲ್ಲ ಹೇಳುವ ದೇಜಗೌ ಅವರು, ಪಾಶ್ಚಾತ್ಯ ದೇಶಗಳಲ್ಲಿ ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಹೇಗೆ ನಡೆಯಿತೆಂಬುದನ್ನು ಪ್ರಸ್ತಾಪಿಸುತ್ತಾರೆ. 1555ರಲ್ಲಿಯೇ ಅಲನ್ ಮ್ಯಾಗ್ನಸ್ ಎಂಬುವನು ಸ್ವೀಡನ್ನಿನ ಜನಪದ ವಾಙ್ಮಯದ ಹಿನ್ನೆಲೆಯಲ್ಲಿ ರೈತ ಜೀವನದ ವಿವರಣೆ ನೀಡಿದನು. ರಷ್ಯಾದಲ್ಲಿ 17ನೆಯ ಶತಮಾನದ ಆದಿಭಾಗದಲ್ಲಿಯೇ ಚಾರಿತ್ರಿಕ ಗೀತೆಗಳ ಮತ್ತು ಜಾನಪದ ಗೀತೆಗಳ ಸಂಗ್ರಹಗಳಾದವು. 1756ರಲ್ಲಿ ಜಿ. ಎನ್. ತೆಪ್ಲೋವ್ ಜನಪದ ಗೀತೆಗಳ ಸಂಕಲನವೊಂದನ್ನು ಸಂಪಾದಿಸಿದನು. 1778–1779ರ ಸಮಯದಲ್ಲಿ ಜರ್ಮನಿಯ ಗಾತ್‌ಫ್ರಿಡ್ ಹರ್ಡಲ್ ಎಂಬುವನು ಅನೇಕ ಜನಾಂಗಗಳ ಜಾನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ ನಂತರ ಯೂರೋಪಿನ ಉಳಿದ ರಾಷ್ಟ್ರಗಳಲ್ಲಿ ಜನಪದ ಸಂಗ್ರಹ ಕಾರ್ಯ ಉತ್ಸಾಹದಿಂದ ಆರಂಭಗೊಂಡಿತು.

1812–1815ರಲ್ಲಿ ಬಂದ ಗ್ರಿಮ್ ಸಹೋದರರ ಜನಪದ ಕಥಾ ಸಂಕಲನವಂತೂ ಅನೇಕ ಜನಪದ ಕಥೆಯ ಆಸಕ್ತರ ಕಣ್ಣು ತೆರೆಸಿ ಆಶ್ಚರ್ಯಚಕಿತರನ್ನಾಗಿ ಮಾಡಿತು. ಜನಪದವನ್ನು ಕುರಿತ ವೈಜ್ಞಾನಿಕ ವಿಧಾನಕ್ಕೆ ಒಂದು ತಳಪಾಯ ಹಾಕಿಕೊಟ್ಟಿತು. ಇದರೊಂದಿಗೆ ಈಗಾಗಲೇ ಹೇಳಿದಂತೆ ಭಾರತೀಯ ಸಂಸ್ಕೃತ ಭಾಷಾ ಸಾಹಿತ್ಯದ ಕಡೆ ಪಾಶ್ಚಾತ್ಯ ವಿದ್ವಾಂಸರ ಗಮನ ಹರಿದಾಗ, ಥಿಯೋಡೋರ್ ಬೆನ್ಫೆ ಪಂಚತಂತ್ರವನ್ನು ಪ್ರಕಟಿಸಿ ಕಥಾ ಪ್ರಪಂಚದ ಜಾಗತಿಕ ಕೊಳುಕೊಡೆಯ ಸಂಬಂಧ ವಿವರಿಸಿದಾಗ ಜನಪದ ಕಥಾ ಕ್ಷೇತ್ರದಲ್ಲಿ ಒಂದು ಹೊಸ ಶಕೆಯೇ ಆರಂಭವಾಯಿತು. ಈ ಬಗೆಯ ತೌಲನಿಕ ಜಾನಪದ ಅಧ್ಯಯನದ ಇನ್ನೊಂದು ಮುಖ್ಯ ಹೆಸರು ಫಿನ್‌ಲೆಂಡಿನ ಕಾರ್ಲ್ ಕ್ರೋಹ್ನ್. ಇಂಥ ಇನ್ನೂ ಅನೇಕ ವಿದ್ವಾಂಸರು ಜಗತ್ತಿನ ಜಾನಪದ ಅಧ್ಯಯನಕ್ಕಾಗಿ ತಮ್ಮ ಜೀವಮಾನವನ್ನೇ ಮುಡಿಪಾಗಿಟ್ಟರು.

ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಜನಪದ ಅಧ್ಯಯನಕ್ಕಾಗಿ ಅನೇಕ ಸಂಸ್ಥೆಗಳು ಜನ್ಮವೆತ್ತಿದವು. ಕರ್ನಾಟಕದಲ್ಲಿ ಅದು ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದಂತೆ, ಅಮೆರಿಕ, ಜರ್ಮನಿ, ಇಂಗ್ಲೆಂಡ್‌ನಲ್ಲಿಯೂ ಅದು ವಿಶ್ವವಿದ್ಯಾನಿಲಯದ ವಿದ್ವಾಂಸರ ಅಧ್ಯಯನದ ವಿಷಯವಾಯಿತು. ಅದೇ ಕೆಲವು ಪಾಶ್ಚಾತ್ಯ ವಿದ್ವಾಂಸರು ಭಾರತದಲ್ಲಿಯೂ ಕೂಡ ಜನಪದ ಕ್ಷೇತ್ರ ಮತ್ತು ಇಲ್ಲಿಯ ಆದಿವಾಸಿ ಅಥವಾ ಬುಡಕಟ್ಟು ಅಧ್ಯಯನಗಳನ್ನು ತೀವ್ರ

ಆಸಕ್ತಿಯಿಂದ ಕೈಗೊಂಡದ್ದನ್ನು ಇಲ್ಲಿ ನೆನೆಯಬಹುದಾಗಿದೆ. ಒಂದು ವೇಳೆ ಕಳೆದ ಶತಮಾನಗಳಲ್ಲಿ ಪಾಶ್ಚಾತ್ಯ ಮಾನವಶಾಸ್ತ್ರಜ್ಞರು ಭಾರತಕ್ಕೆ ಬಂದು ಇಲ್ಲಿ ಬುಡಕಟ್ಟು ಅಧ್ಯಯನಗಳನ್ನು ಆರಂಭಿಸದೇ ಹೋಗಿದ್ದರೆ ಇಲ್ಲಿ ಆ ವಿಭಾಗದ ಅಧ್ಯಯನವೇ ತೆರೆದುಕೊಳ್ಳುತ್ತಿರಲಿಲ್ಲವೆನಿಸುತ್ತದೆ.

ಹಾಗೆ ನೋಡಿದರೆ ಅರಣ್ಯ ಜನಾಂಗಗಳ ಅಧ್ಯಯನ ತುಂಬಾ ಪ್ರಯಾಸದ ಕೆಲಸ. ಅವರು ಗ್ರಾಮ ಅಥವಾ ನಗರ ಜೀವನದಿಂದಲೇ ದೂರವಾಗಿರುವಾಗ ವಿದ್ವಾಂಸರು, ಮಾನವಶಾಸ್ತ್ರಜ್ಞರು ಆ ಗುಂಪನ್ನು ಹೊಕ್ಕು ಅವರ ಆಚಾರವಿಚಾರಗಳನ್ನು ಕುರಿತು ವಿಷಯ ಸಂಗ್ರಹಿಸುವುದು, ಅಧ್ಯಯನ ಮಾಡುವುದು ಅತ್ಯಂತ ಕಠಿಣವಾದುದು. ತಮ್ಮ ಯಾವ ಸಂಗತಿಗಳನ್ನೂ ಆ ಸಮೂಹ ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಹೊರಗಿನದೆಲ್ಲವನ್ನೂ ಅವರು ಸಂಶಯದಿಂದಲೇ ಕಾಣುತ್ತಾರೆ. ಇಂಥ ವಾತಾವರಣ ದಲ್ಲಿಯೂ ಸಹ ಭಾರತದ ಅನೇಕಾನೇಕ ಬುಡಕಟ್ಟುಗಳನ್ನು ಅಧ್ಯಯನ ಮಾಡಿದ ಪಾಶ್ಚಾತ್ಯ ಮಾನವಶಾಸ್ತ್ರಜ್ಞರು ಆಗಿಹೋಗಿದ್ದಾರೆ. ವೆರಿಯರ್ ಎಲ್ವಿನ್ನರೇ ಆದಿಯಾಗಿ, ಜಿ. ಹೆಚ್. ಹಟ್ಟನ್, ಜೆ. ಪಿ. ಮಿಲ್ಸ್, ಸ್ಮಿಥ್, ಹೈಮನ್ ಡಾರ್ಫ್ ಇಂಥವರೆಲ್ಲ ಉತ್ತರ ಭಾರತದ ಬುಡಕಟ್ಟುಗಳಾದ ಅಂಗಾಮಿ, ನಾಗಾ, ಸೆಮಾ, ಅಗಾರಿಯಾ, ಮರಿಯಾ, ಗೋಂಡ್ ಈ ಸಮೂಹಗಳನ್ನು ಕುರಿತು ಅಧ್ಯಯನ ನಡೆಸಿರುತ್ತಾರೆ.

ಬುಡಕಟ್ಟುಗಳ ಭಾಷೆ, ಅವರ ಜೀವನ ಕ್ರಮ, ದೇವರ ಕಲ್ಪನೆ, ನ್ಯಾಯ ಪದ್ಧತಿ, ಜೀವನಾವರ್ತುಲದ ವಿವಿಧ ಸಂದರ್ಭದಲ್ಲಿ ಅವರು ಕೈಗೊಳ್ಳುವ ಕೆಲವು ಆಚರಣೆಗಳು, ಹುಟ್ಟು ಸಾವಿನ ಸಂದರ್ಭದ ವಿಧಿ ಕ್ರಿಯೆಗಳು, ಪ್ರಕೃತಿಯೊಂದಿಗೆ ತಾದಾತ್ಮ್ಯ ಇದನ್ನೆಲ್ಲ ಅಭ್ಯಾಸ ಮಾಡಿದ ನಂತರ, ಅರೆಬೆತ್ತಲೆಯಾಗಿ ಗುಡ್ಡಗಾಡು ಪ್ರದೇಶಗಳಲ್ಲಿ, ದಟ್ಟ ಅರಣ್ಯದಲ್ಲಿ ಇದ್ದು ಜೀವಿಸುವ ಆದಿವಾಸಿಗಳ ಜೀವನದಲ್ಲಿಯೂ ನಾಗರಿಕವೆನಿಸುವ ಉತ್ಕೃಷ್ಟ ಮೌಲ್ಯಗಳು ಪ್ರಚಲಿತದಲ್ಲಿವೆ ಎಂಬುದು ಗೊತ್ತಾಯಿತು. ತಂದೆ ಮಕ್ಕಳ ಸಂಬಂಧದಲ್ಲಿ, ಪತಿಪತ್ನಿಯರ ವಿಚಾರದಲ್ಲಿ ಇರಬೇಕಾದ ಪ್ರೇಮ, ಪ್ರಕೃತಿಯ ಮೇಲಿನ ವಿಶ್ವಾಸ, ಅದನ್ನು ಪ್ರೀತಿಸುವುದು, ಬುಡಕಟ್ಟಿನ ಹಿರಿಯರಲ್ಲಿ ಗೌರವ, ಸಾಹಸ ಪ್ರವೃತ್ತಿ, ಅಲೌಕಿಕ ಶಕ್ತಿಯ ಮೇಲಿನ ನಂಬಿಕೆಯಿಂದಾಗಿ ತಪ್ಪು ಮಾಡಲು ಹೆದರುವುದು ಇವೆಲ್ಲ ಬುಡಕಟ್ಟುಗಳ ಮುಖ್ಯ ಲಕ್ಷಣಗಳಾಗಿರುತ್ತವೆ.

ಈ ಎರಡು ಶತಮಾನಗಳಿಂದೀಚೆಗೆ ಸಾಮಾಜಿಕ ಮಾನವಶಾಸ್ತ್ರ ವಿಷಯಗಳ ಉಗಮದ ನಂತರ ನಾಗರಿಕ ಜಗತ್ತಿನ ಮನುಷ್ಯನ ಜೀವನ ಕ್ರಮವನ್ನು ಅರ್ಥ ಮಾಡಿಕೊಳ್ಳಬೇಕು; ಹಾಗೆ ಆಧುನಿಕರ ಜೀವನವನ್ನರಿಯಬೇಕಾದರೆ ಮೂಲನಿವಾಸಿಗಳ ನೆಲೆಗೆ ತಾವು ಹೋಗಬೇಕು ಎಂದಾಯಿತು. ಹೀಗೆ ಭಾರತವೂ ಒಳಗೊಂಡಂತೆ ಜಗತ್ತಿನ ಆದಿವಾಸಿಗಳ ಅಧ್ಯಯನ ಆರಂಭವಾಯಿತು. ಮಾನವಶಾಸ್ತ್ರಜ್ಞರು ವಿಶ್ವದ ನಾನಾ ಭಾಗದ ಬುಡಕಟ್ಟುಗಳ ಸ್ಥಿತಿಗತಿಗಳನ್ನು ಅವರ ಸಂಸ್ಕೃತಿಯ ಪ್ರತಿಯೊಂದು ಹಂತವನ್ನು ಶೋಧಿಸುತ್ತ ಹೋದಂತೆ, ಭಾರತದಲ್ಲಿಯೇ ಅಲ್ಲದೆ ಪ್ರಪಂಚದ ಎಲ್ಲ ಬುಡಕಟ್ಟುಗಳ ನಡುವೆ ಅನೇಕಾನೇಕ

ಸಾಮ್ಯತೆಗಳೂ ಕಂಡುಬಂದವು. ಅಂದರೆ ಮನುಷ್ಯನ ಹೋರಾಟದ ಕವಲುಗಳು ಬೇರೆ ಬೇರೆಯಾದರೂ ಅದರ ಮೂಲ ಬೇರು ಒಂದೇ ಎಂಬಂತಾಯಿತು.

ಅಮೆರಿಕ ಜಾನಪದ

'ಅಮೆರಿಕನ್ ಜಾನಪದ' ಎಂಬ ಈ ಕೃತಿಯಲ್ಲೇ ಟಿ. ಎನ್. ಕೃಷ್ಣರಾಜು ಅವರು 'ಆಫ್ರಿಕ ಖಂಡದ ಒಂದಿಷ್ಟು ಗಾದೆಗಳು' ಎಂಬ ಲೇಖನದ ಒಂದೆರಡು ಗಾದೆ ಮತ್ತು ಹೇಳಿಕೆಗಳನ್ನು ಗಮನಿಸಿದರೆ ಅವು ಮನುಷ್ಯ ಜಗತ್ತಿನ ಬದುಕಿನ ಕ್ರಮವನ್ನು ಹೇಳುವಂತಿದೆ. ಆ ಗಾದೆ 'ಎಲ್ಲರ ತಲೆಗಳೂ ಒಂದೇ, ಯೋಚನೆಗಳು ಬೇರೆ' ಎಂಬಂತಿದೆ. ಆದರೆ ಈ ಗಾದೆಯನ್ನು ಇನ್ನಷ್ಟು ಚಿಂತನೆಗೆ ಒಳಪಡಿಸಿದರೆ ಆಯಾ ಸಂದರ್ಭದ ಯೋಚನೆಗಳು ಬೇರೆ ಬೇರೆ ಇರಬಹುದು. ಆದರೆ ಅಂತರಂಗದಾಳದ ಅರಿಷಡ್ವರ್ಗಗಳು, ಅದರಂತೆ ನಡೆದುಕೊಳ್ಳುವುದು ಒಂದೇ ಇರುತ್ತದೆ. ಕೃಷ್ಣರಾಜು ಅವರು ಗಾದೆಗಳನ್ನು ಉಲ್ಲೇಖಿಸಿರುವಲ್ಲಿಯೇ ಮತ್ತೊಂದು ಹೇಳಿಕೆಯಿದೆ. ಅದನ್ನು ಅವರೇ ಇದು ಗಾದೆಯಲ್ಲ ಹೇಳಿಕೆ ಎಂದಿದ್ದಾರೆ. ಅದು ಹೀಗಿದೆ 'ಆಫ್ರಿಕಾಕ್ಕೆ ಬಂದ ಪಾದ್ರಿಗಳ ಕೈಯ್ಯಲ್ಲಿ ಬೈಬಲ್ ಇತ್ತು, ನಮ್ಮ ಕೈಯ್ಯಲ್ಲಿ ಭೂಮಿ ಇತ್ತು, ಕಣ್ಣು ಮುಚ್ಚಿ ಪ್ರಾರ್ಥಿಸೋಣ ಎಂದರು. ನಾವು ಕಣ್ಣು ತೆರೆದಾಗ ನಮ್ಮ ಕೈಯ್ಯಲ್ಲಿ ಬೈಬಲ್ ಇತ್ತು. ಅವರ ಕೈಯ್ಯಲ್ಲಿ ಭೂಮಿ ಇತ್ತು.' ಬಲ್ಲವರೆನಿಸಿಕೊಂಡವರು, ಬುದ್ಧಿವಂತರೆನಿಸಿಕೊಂಡವರು ಜಗತ್ತಿನಾದ್ಯಂತ ಸಂಚರಿಸುತ್ತ ಹೋದ ಪ್ರದೇಶಗಳಲ್ಲೆಲ್ಲ 'ಇದು ನಮ್ಮದೇ ದೇಶ, ಇಲ್ಲಿರುವ ನೀವು ಅಜ್ಞಾನಿಗಳು, ನಾವು ಹೇಳಿದಂತೆ ಕೇಳಬೇಕು, ನಮಗಾಗಿ ನೀವು ಯಾವಜ್ಜೀವವೂ ದುಡಿಯಬೇಕು' ಎಂದು ಹೇಳಿಕೊಂಡು ಬಂದ ವಲಸೆ ಮತ್ತು ಭೂ ಆಕ್ರಮಣದ ಇತಿಹಾಸವನ್ನೇ ಈ ಒಂದೆರಡು ವಾಕ್ಯ ಹೇಳುವಂತಿದೆ. ಇದಲ್ಲದೆ ಈ ಕೃತಿಯ ಬಹುತೇಕ ಲೇಖನಗಳು ತಾವು ಬುದ್ಧಿವಂತರು, ಸುಂದರಾಂಗರು, ದೃಢಕಾಯರು, ದೇಶ ಆಳಲು ಅರ್ಹರು ಅಂದುಕೊಂಡವರು, ಅದಲ್ಲದವರನ್ನು ಹೇಗೆ ಕಾಣುತ್ತಾರೆ ಎಂಬುದರ ಹಿನ್ನೆಲೆಯನ್ನೇ ಹೇಳುವಂತಿವೆ. ಯೂರೋಪಿಯನ್ನರು ಅಮೆರಿಕಾದಲ್ಲಿ ಬಂದು ನೆಲೆಸಿ ಅಲ್ಲಿನ ಮೂಲ ನಿವಾಸಿಗಳನ್ನು ಘಾಸಿಗೊಳಿಸಿದ್ದಲ್ಲದೆ ಅವರಿಗೆ ನೆಲೆ, ಬೆಲೆ ಇಲ್ಲದಂತೆ ಮಾಡಿದ್ದನ್ನು ಈ ಕೃತಿಯ ಎಲ್ಲ ಜನಪದ ಲೇಖನಗಳೂ ಒಂದಲ್ಲಾ ಒಂದು ರೀತಿಯಲ್ಲಿ ಅಥವಾ ಬೇರೆ ಬೇರೆ ಪ್ರಕಾರಗಳಲ್ಲಿ ಹೇಳುತ್ತವೆ. ಜಗತ್ತಿನ ಜನಪದದ ಅಂತರಂಗ ಬಹಿರಂಗದ ಮಾತುಗಳು, ಕಥೆಗಳು, ಗೀತೆಗಳು ಹೊರ ಹೊಮ್ಮುವುದು ಈ ಕ್ರಮದಲ್ಲೇ. ಕೃತಿಯ ಮೊದಲ ಲೇಖನ 'ಅಮೆರಿಕನ್ ಮೂಲನಿವಾಸಿಗಳ ಪರಂಪರೆಯ ಒಂದು ಅವಲೋಕನ' (ಮೂಲ ಇಂಗ್ಲಿಷ್ ಲೇಖಕರು: ಗುಂಡೂ ಶಂಕರ್, ಕನ್ನಡ ಅನುವಾದ: ಶ್ರೀಕಾಂತ್ ಬಾಬು) ಇದರಲ್ಲಿ '...ಸಾಧಾರಣವಾಗಿ ಯಾವುದೇ ದೇಶದ ಇತಿಹಾಸದ ಚಿತ್ರಣವನ್ನು ಅದರ ವಿಜೇತನು ನಿಯಂತ್ರಿಸುತ್ತಾನೆ. ಅದೇ ರೀತಿಯಲ್ಲಿ ಸ್ಥಳೀಯ ಅಮೆರಿಕನ್ನರ ಅಂದರೆ ಇಲ್ಲಿನ ಮೂಲನಿವಾಸಿಗಳ ಇತಿಹಾಸವು ಒಂದು ಯೂರೋಕೇಂದ್ರಿತ ನಿರೂಪಣೆಯ ಮೂಲಕ ನಂತರದ ಚಿಂತನೆಯಾಗಿ ಇದರಲ್ಲಿ

ಸ್ಥಳೀಯರ ಇತರ ದೃಷ್ಟಿಕೋನಗಳು ಕಳೆದುಹೋಗಿವೆ' ಎಂಬ ವಾಕ್ಯಗಳಿವೆ. ಇದರೊಂದಿಗೆ ಲೇಖನದ ಕೊನೆಯಲ್ಲಿ 'ಅಮೆರಿಕದ ಸಂವಿಧಾನವು ತನ್ನ ಎಲ್ಲ ನಾಗರಿಕರನ್ನು ಸಮಾನವಾಗಿ ಪರಿಗಣಿಸುವ ಉದಾತ್ತ ಉದ್ದೇಶವನ್ನು ಪ್ರತಿಪಾದಿಸುತ್ತದೆಯಾದರೂ, ದುರ್ದೈವವಶಾತ್ ಈ ದೇಶದ ಮೂಲನಿವಾಸಿಗಳು ತಮ್ಮದೇ ದೇಶದಲ್ಲಿ ತಮ್ಮ ಪಾತ್ರ ಮತ್ತು ನ್ಯಾಯಕ್ಕಾಗಿ ಹೋರಾಟವನ್ನು ಇನ್ನೂ ನಡೆಸುತ್ತಿದ್ದಾರೆ...' ಎಂಬ ವಾಕ್ಯಗಳು ಜಗತ್ತಿನ ಜನಪದ ಬದುಕನ್ನು ಹೇಳುತ್ತದೆ.

ಜಮೀನ್ದಾರನ ತೋಟದಲ್ಲಿ ದುಡಿದು ಬೆಳೆದದ್ದನ್ನೆಲ್ಲ ಅವನ ಪಾಲು ಮಾಡಿ, ತಾನು ಖಾಲಿ ಕೈಯಲ್ಲಿ ಕೂತ ದುಡಿಮೆಗಾರನ ಕಥೆಯನ್ನು ಈ ಮುಂದಿನ ಲೇಖನದಲ್ಲಿ ನೋಡಬಹುದು. ವಲಸೆಯ ದುಡಿಮೆಗಾರ ಎಲ್ಲಿಗೆ ಹೋದರೂ ಅವನ ರೂಪ, ಚಹರೆ, ಸ್ಥಿತಿಗತಿ ಬದಲಾಗುವುದೇ ಇಲ್ಲ ಎಂಬ ಕ್ರೂರ ಇತಿಹಾಸದ ಸಂಗತಿಗಳನ್ನು 'ಪ್ಲಾಂಟೇಶನ್ ಗುಲಾಮರ ಜಾನಪದ' ಇದರಲ್ಲಿರುವ (ಮೀರಾ ಪಿ. ಆರ್.) 'ನೀನೊಬ್ಬ ಕರಿಯ ಅನ್ನೋದನ್ನ ಮರೀಬೇಡ' ಎಂಬ ಕಥೆ ಮಾರ್ಮಿಕವಾಗಿ ಹೇಳುತ್ತದೆ.

ಅಮೆರಿಕನ್ ಜಾನಪದ ಈ ಕೃತಿಯ ಅನೇಕ ಆಶಯಗಳು, ಕಥೆಗಳು ದಕ್ಷಿಣ ಭಾರತದ ತಮಿಳು, ತೆಲುಗು, ಕನ್ನಡದ ಚಿನ್ನತಂಬಿ–ಪೆರಿಯತಂಬಿ, ಪಲ್ನಾಟಿ ವೀರುಲ ಕಥೆ, ಕೋಟಿ–ಚನ್ನಯ, ಕಾಡುಗೊಲ್ಲರ ಜುಂಜಪ್ಪ, ಮಂಟೇಸ್ವಾಮಿ ಕಥೆಗಳು ಹೇಳುತ್ತವೆ. ಇವರೆಲ್ಲರೂ ಸಾಮಾನ್ಯರಲ್ಲಿ ಸಾಮಾನ್ಯ ಜನಪದರೆನಿಸಿ ತಮ್ಮ ಹಕ್ಕುಗಳಿಗೋಸ್ಕರ ಹೋರಾಟ ಮಾಡಿದವರು. ಅಂಥ ಹೋರಾಟದಲ್ಲಿ ಮಡಿದು ತಮ್ಮ ಸುತ್ತಿನ ಅದೇ ದುಡಿಮೆಗಾರರ ಕಣ್ಣಲ್ಲಿ ವೀರರು, ಸಂತರು, ದೇವತೆಗಳೂ ಆಗಿ ಈ ಹೊತ್ತಿಗೂ ಆರಾಧನೆಗೆ ಒಳಗಾಗಿದ್ದಾರೆ. ಇವರ ಸುತ್ತ ಹರಡಿದ ನಂಬಿಕೆ, ಆಚರಣೆ, ಆರಾಧನೆಗಳು ಇದೀಗಲೂ ಜನಪದರ ಅಂತರಂಗಕ್ಕೆ ಧೈರ್ಯ ತುಂಬುತ್ತಲಿವೆ.

ಆಧುನಿಕ ಎನಿಸುವ 'ಜೋಳದ ಪೂರಿ ಜೇನುತುಪ್ಪ' ಎಂಬ ಲೇಖನದಲ್ಲಿಯೂ (ಲೇಖಕರು ಮೈ. ಶ್ರೀ. ನಟರಾಜ) ಕೂಡ ಕಳೆದುಹೋದ ದುರಂತಗಳನ್ನು ಇಂದಿಗೂ ನೆನೆಯುತ್ತ ಅದನ್ನು ನಾನಾ ಸನ್ನಿವೇಶಗಳಲ್ಲಿ ಪುನರಾವರ್ತನೆಯಾಗಿ ಹೇಳುವ ಅಮೆರಿಕ ಮೂಲ ನಿವಾಸಿಯೊಬ್ಬನ ಹಪಹಪಿಯನ್ನು ಕಾಣಬಹುದು. 'ನಯಾಗರಾ ಜಲಪಾತದ ಮೇಲಿನ ಒಂದು ಐತಿಹ್ಯ ಕತೆ'ಯೂ ಕೂಡ (ಲೇಖಕರು: ಆಹಿತಾನಲ, ನಾಗ ಐತಾಳ) ಕನ್ನಡದ ಸುಪ್ರಸಿದ್ಧ ಜನಪದ ಕಥನವಾದ 'ಕೆರೆಗೆ ಹಾರ'ದ ಕಥೆಯ ಒಂದು ಸೂಕ್ಷ್ಮ ಎಳೆಯನ್ನು ಹೊಂದಿದೆ ಎನಿಸುತ್ತದೆ. ಕೆರೆಗೆ ಹಾರದ ಭಾಗೀರಥಿಯ ಗಂಡ ದಂಡಿಗೋ, ವ್ಯಾಪಾರಕ್ಕೋ ಹೋಗಿದ್ದಾನೆ. ಅವನು ಬರುವುದು ಎಂದಿಗೋ. ಹಾಗಾಗಿ ಅವಳು ಮನೆಯಲ್ಲಿ ಅನಾಥಳು. ಅಂಥವಳನ್ನು ಮನೆಯ ಯಜಮಾನ ತಾನು ಊರಲ್ಲಿ ಕಟ್ಟಿಸಿದ ಕೆರೆಗೆ ಬಲಿ ಕೊಡಲು ನಿರ್ಧರಿಸುತ್ತಾನೆ. ಭಾಗೀರಥಿಗೆ ತಾನು ಸಾಯುವ ಗಳಿಗೆಯಲ್ಲಿ ಭೇಟಿ ಮಾಡಿದ ಎಲ್ಲರೂ 'ನೀನು ನಿನ್ನ ಹಣೆಬರೆಹವನ್ನು ಅನುಭವಿಸು' ಎಂಬಂತೆಯೇ ಮಾತನಾಡುತ್ತಾರೆ. ಅಥವಾ ಸಲಹೆ ನೀಡುತ್ತಾರೆ. ಹೀಗಾಗಿ ಅವಳು ಜಲಸಮಾಧಿ

ಯಾಗುತ್ತಾಳೆ. ಆದರೆ ನಯಾಗರ ಜಲಪಾತದ ಕಥೆ ದುರಂತವಾಗುವುದಿಲ್ಲ. ನಯಾಗರದಲ್ಲಿ ಬಿದ್ದು ಸಾಯಬೇಕೆಂದು ಬಂದ ವಿಧವೆ ಸಿಡಿಲು ದೇವತೆ ಹಿನೋವಿನ ಕಿರಿಯ ಮಗನನ್ನು ಮದುವೆಯಾಗಿ ಸುಖವಾಗಿರುತ್ತಾಳೆ. ಕನ್ನಡದ ಕೆರೆಗೆ ಹಾರ ಕಥನ ಗೀತೆ ದುರಂತವಾದರೆ, ಅದರ ಬೇರೆ ಬೇರೆಯ ಪಾಠಾಂತರಗಳಲ್ಲಿ ಸುಖಾಂತ್ಯ ಕಥನದ ಮುಂದುವರಿಕೆ ಇದೆ. ಇಲ್ಲಿ ನಾವು ಗಮನಿಸಬೇಕಾದದ್ದು, ಯಾವುದೋ ಒಂದು ಜಲಪಾತ, ಕೋಟೆ, ಭವ್ಯ ದೇವಾಲಯ, ನದಿಯ ತಿರುವು, ಸಮುದ್ರ ಈ ಭಾಗಗಳ ಮೇಲೆ ವೈವಿಧ್ಯಮಯ ಆಶಯದ ಜನಪದ ಕಥೆಗಳು ಜಗತ್ತಿನಾದ್ಯಂತ ಕಂಡುಬರುತ್ತವೆಂಬುದು ಮುಖ್ಯ ಸಂಗತಿ.

ಜಗತ್ತಿನ ಜಾನಪದವೆಂಬುದು ಮುಗ್ಧ ಜನಸಮೂಹ ವಲಸೆಯ ಕಷ್ಟಕ್ಕೆ ಸಿಕ್ಕಿಕೊಳ್ಳುವುದು, ಉಳ್ಳವರ ಕೈಯ್ಯ ಅಡಿಯಾಳುಗಳಾಗುವುದು, ಬದುಕಿನ ಸಂಕಟಗಳಿಗೆ ಸಿಲುಕುವುದು ಇಷ್ಟೆಲ್ಲದರ ನಡುವೆ ಇದರಿಂದ ಪಾರಾಗುವ ಬಗೆ ಹೇಗೆ ಎಂಬುದರ ಮಾರ್ಗಗಳನ್ನು ಹುಡುಕುತ್ತಲೇ ಅದನ್ನೆಲ್ಲ ಕಥೆ, ಹಾಡಾಗಿಸಿದ್ದಾರೆಂಬುದನ್ನು ಜಗತ್ತಿನಾದ್ಯಂತ ಕಾಣಬಹುದು. ಅಂಥದೊಂದು ಪದ್ಯವೂ ಕೂಡ ಈ ಗ್ರಂಥದಲ್ಲಿದ್ದು ಅದರ ಉದ್ಧರಣೆಯಿಂದಲೇ ಈ ಲೇಖನವನ್ನು ಕೊನೆಗೊಳಿಸಬಹುದೆನಿಸುತ್ತದೆ–

ವಿಶ್ವದಾದ್ಯಂತ, ಜಗದ ಉದ್ದಗಲದೊಳು
ಎಲ್ಲಿ ನೋಡಿದರಲ್ಲಿ, ಅಲ್ಲೆಲ್ಲ ಒಂದು ದಿನ
ಹೃದಯಾಂತರಾಳದಲಿ ದೃಢವಾಗಿ ನಂಬಿರುವೆ
ಒಂದಿಲ್ಲ ಒಂದು ದಿನ ಜೈಸುವೆವು ನಾವು ॥ *

(* 'ಹೋರಾಟಕ್ಕೆ ದನಿಯಾದ ಗೀತೆ', ಲೇಖಕಿ: ನಳಿನಿ ಮೈಯ– ಅನುವಾದ ಮೈ. ಶ್ರೀ. ನಟರಾಜ)

ಆಧಾರ ಗ್ರಂಥಗಳು

1. ಅರ್ಚಕ ಬಿ. ರಂಗಸ್ವಾಮಿ, 1933, ಹುಟ್ಟಿದಹಳ್ಳಿ–ಹಳ್ಳಿಯ ಹಾಡು (ಬಂಡಿಹೊಳೆ. ಕೆ. ಆರ್. ಪೇಟೆ ತಾ., ಮಂಡ್ಯ ಜಿಲ್ಲೆ.)
2. ಜವರೇಗೌಡ ದೇ. 1975, ಜಾನಪದ ಅಧ್ಯಯನ, ಡಿ. ವಿ. ಕೆ. ಪ್ರಕಾಶನ, ಮೈಸೂರು.
3. ಜವರೇಗೌಡ ದೇ. 1978, ಜನಪದ ಗೀತಾಂಜಲಿ, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ.
4. ತಪಸ್ವೀಕುಮಾರ್ ಎನ್., 1983, ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು.
5. ನಂಜಮ್ಮಣ್ಣಿ ಎಂ., 1974, ಸಾಮಾಜಿಕ ಮಾನವಶಾಸ್ತ್ರ, ಮೈಸೂರು.
6. ನಾಗೇಗೌಡ ಹೆಚ್. ಎಲ್., 1972 ಸೋಬಾನೆ ಚಿಕ್ಕಮ್ಮನ ಪದಗಳು, ಬೆಂಗಳೂರು.
7. ನಾಗೇಗೌಡ ಹೆಚ್. ಎಲ್., 1979 ವೆರಿಯರ್ ಎಲ್ವಿನ್ನರ ಗಿರಿಜನ ಪ್ರಪಂಚ (ಅನು), ಬೆಂಗಳೂರು.
8. ಪರಮಶಿವಯ್ಯ ಜೀ. ಶಂ., 1973, ಕನ್ನಡ ವೃತ್ತಿಗಾಯಕರ ಕಾವ್ಯಗಳು, ಬೆಂಗಳೂರು.

9. ಪರಮಶಿವಯ್ಯ ಜೀ. ಶಂ., 1981, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಮೈಸೂರು.
10. ಶಂಕರನಾರಾಯಣ ಟಿ. ಎನ್., 1982 ಕಾಡುಗೊಲ್ಲರ ನಂಬಿಕೆಗಳು ಮತ್ತು ಆಚರಣೆಗಳು, ಮೈಸೂರು.
11. ಹಲಸಂಗಿ ಗೆಳೆಯರು, 1935, ಗರತಿಯ ಹಾಡು, ಹಲಸಂಗಿ, ಬಿಜಾಪುರ.
12. ಅನಂತಕೃಷ್ಣ ಅಯ್ಯರ್, ಹೆಚ್. ವಿ. ನಂಜುಂಡಯ್ಯ, 1936, ದ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ಮೈಸೂರು.
13. ಥರ್ಸ್ಟನ್, ಎಡ್ಗರ್, 1909, ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಡೆಲ್ಲಿ.

❑



ಜಾನಪದ ಜಗುಲಿ

ಜಗದಗಲದ ವಿವಿಧ ದೇಶೀ ಸಂಸ್ಕೃತಿಗಳ

ಅರಿವು-ಮರೆವು

ಅಳಿವು-ಉಳಿವು

ನೋವು-ನಲಿವು

ಚೆಲುವು-ಚಿತ್ತಾರ

....ಇವುಗಳ ವಿಶಾಲ ಅದ್ಭುತ ಲೋಕಕ್ಕೊಂದು ಪುಟ್ಟ ಪಯಣ



①

ಅಮೆರಿಕನ್ ಮೂಲನಿವಾಸಿಗಳ ಪರಂಪರೆಯ ಒಂದು ಅವಲೋಕನ

ಮೂಲ ಇಂಗ್ಲಿಷ್: **ಗುಂಡೂ ಶಂಕರ್,** ಫ್ರೀಹೋಲ್ಡ್, ನ್ಯೂ ಜೆರ್ಸಿ
ಕನ್ನಡ ಅನುವಾದ: **ಶ್ರೀಕಾಂತ ಬಾಬು,** ಬ್ರಿಡ್ಜ್ ವಾಟರ್, ನ್ಯೂ ಜೆರ್ಸಿ

*

ಮೊದಲ ಮಾತು

ಅಮೆರಿಕದ ಇತಿಹಾಸವನ್ನು ಹೇಳುವ ಬಹುತೇಕ ಬರಹಗಳು 14 ಮತ್ತು 15ನೆಯ ಶತಮಾನಗಳಲ್ಲಿ ಯೂರೋಪಿನ ಪರಿಶೋಧಕರ ಆಗಮನದಿಂದ ಪ್ರಾರಂಭವಾಗುತ್ತವೆ ಮತ್ತು ಇದನ್ನು ಹೊಸ ಜಗತ್ತು ಅಥವಾ ದೇಶವೆಂದೇ ಉಲ್ಲೇಖಿಸಲಾಗುತ್ತದೆ. ಆದರೆ 14ನೆಯ ಶತಮಾನಕ್ಕೂ ಹಿಂದಿನ ಅಮೆರಿಕದ ಇತಿಹಾಸ, ಸಂಸ್ಕೃತಿ ಮತ್ತು ಭೌಗೋಳಿಕತೆಯ ಉಲ್ಲೇಖವು ಕೇವಲ ಔಪಚಾರಿಕವಾಗಿದ್ದು ಅವುಗಳ ವಿಶೇಷ ಮಾಹಿತಿಗಳನ್ನು ಸಾಮಾನ್ಯ ಜನರಿಗೆ ಮುಟ್ಟಿಸುವಲ್ಲಿ ವಿಫಲವಾಗಿದೆ. ಜನಪ್ರಿಯ ಸಂಸ್ಕೃತಿಯ ವಿಷಯದಲ್ಲೂ ಇದು ನಿಜ. ನಾನು ಭಾರತದಲ್ಲಿ ಬೆಳೆಯುತ್ತಿರುವಾಗ, ಆಗಿನ ಪ್ರಸಿದ್ಧ ಚಲನಚಿತ್ರಗಳಲ್ಲಿ ಸ್ಥಳೀಯ ಅಮೆರಿಕನ್ ಸಂಸ್ಕೃತಿಯ ಚಿತ್ರಣಗಳು ಅವರನ್ನು ಅನಾಗರಿಕರು ಎಂದು ಚಿತ್ರಿಸುವುದರ ಜೊತೆಗೆ ಯೂರೋಪಿಯನ್ನರು ಈ ಭೂಮಿಗೆ ತಂದ 'ನಾಗರಿಕತೆಯನ್ನು' ನಾಶ ಮಾಡಲು ಮುಂದಾಗಿದ್ದಾರೆಂದು ತೋರಿಸಲಾಗುತ್ತಿತ್ತು. ಹಾಲಿವುಡ್‌ನ ಹಳೆಯ ಜನಪ್ರಿಯ ಚಿತ್ರಗಳಲ್ಲಿ ಸ್ಥಳೀಯ ಅಮೆರಿಕನ್ನರ ಚಿತ್ರಣವು ವಿಶೇಷವಾಗಿ ಕಟುವಾದದ್ದು. ಕ್ರೂರ ಅನಾಗರಿಕರು ಪುರುಷರನ್ನು ಕೊಲ್ಲುವುದು, ಮಹಿಳೆಯರ ಮೇಲೆ ಅತ್ಯಾಚಾರ ಮಾಡುವುದು ಮತ್ತು ಸರಕು ಮತ್ತು ಆಸ್ತಿಯನ್ನು ಕದಿಯುವುದು, ಇತ್ಯಾದಿಗಳ ಚಿತ್ರಣದ ಮೂಲಕ ಸಾಮಾನ್ಯ ಜನರಿಗೆ ಅವರನ್ನು ಕುರಿತು ಕೆಟ್ಟ ಕಲ್ಪನೆಗಳನ್ನು ಮೂಡಿಸಲಾಗಿದೆ.

ಅಮೆರಿಕ ಇತಿಹಾಸದ ಜನಪ್ರಿಯ ನಿರೂಪಣೆಯು ಯೂರೋಪಿಯನ್ ವ್ಯಾಪಾರಿಗಳ ಆಗಮನದಿಂದ ಪ್ರಾರಂಭವಾಗಿ ನಂತರ ಯೂರೋಪಿನ ಧಾರ್ಮಿಕ ಕಿರುಕುಳದಿಂದ ಪಲಾಯನ ಮಾಡಿದ ಯಾತ್ರಿಕ ವಸಾಹತುದಾರರ ಕಥಾನಕವಾಗಿದೆ. ಇದರ ನಿರೂಪಣೆಯಂತೆ ಯೂರೋಪಿನ ಯಾತ್ರಿಕರು ಸರಳ ಮನಸ್ಸಿನ ಜನರು ವಾಸಿಸುತ್ತಿದ್ದ ಅಮೆರಿಕ ದೇಶಕ್ಕೆ ಬಂದರು ಮತ್ತು ಅವರೊಂದಿಗೆ ಶಾಂತಿಯಿಂದ ನೆಲೆಸಿ ಮತ್ತೆ ನಿಧಾನವಾಗಿ ಪಶ್ಚಿಮದ ಕಡೆ ಹರಡಿದರು. ಹೀಗೆ ಆಧುನಿಕ ಅಮೆರಿಕವು ಜನಿಸಿತೆನ್ನುವ ಸುಂದರ ಚಿತ್ರಣವನ್ನು ಕೊಡುತ್ತದೆ. ಸಾಧಾರಣವಾಗಿ ಯಾವುದೇ ದೇಶದ ಇತಿಹಾಸದ ಚಿತ್ರಣವನ್ನು ಅದರ ವಿಜೇತನು ನಿಯಂತ್ರಿಸುತ್ತಾನೆ. ಅದೇ ರೀತಿಯಲ್ಲಿ, ಸ್ಥಳೀಯ ಅಮೆರಿಕನ್ನರ ಅಂದರೆ ಇಲ್ಲಿನ ಮೂಲನಿವಾಸಿಗಳ ಇತಿಹಾಸವು ಒಂದು ಯೂರೋ-ಕೇಂದ್ರಿತ ನಿರೂಪಣೆಯ ಮೂಲಕ, ನಂತರದ ಚಿಂತನೆಯಾಗಿ ಇದರಲ್ಲಿ ಸ್ಥಳೀಯರ ಇತರ ದೃಷ್ಟಿಕೋನಗಳು ಕಳೆದುಹೋಗಿವೆ. ದುರದೃಷ್ಟಕ್ಕೆ ಇಂದಿಗೂ, ಅಮೆರಿಕ ದೇಶದ ನಿರೂಪಣೆಯು ರಾಜಕೀಯವಾಗಿ ಬಲಗೊಂಡಿದೆ ಮತ್ತು ಜನಪ್ರಿಯವಾಗಿದೆ. ಅಲ್ಲಲ್ಲಿ ಹಲ ಕೆಲವರಿಗೆ ಮೂಲನಿವಾಸಿಗಳ ಸಂಸ್ಕೃತಿ ಮತ್ತು ಅವರ ಇತಿಹಾಸದ ತಿಳುವಳಿಕೆ ಇದ್ದರೂ ಚರಿತ್ರೆಯಲ್ಲಿ ಅವರ ಕಥೆಯನ್ನು ಉದ್ದೇಶಪೂರ್ವಕವಾಗಿ ಮರೆಮಾಚಲಾಗಿದೆ.

ಅದೃಷ್ಟವಶಾತ್ ಕಳೆದ ಮೂವತ್ತು ವರ್ಷಗಳಲ್ಲಿ ಸ್ಥಳೀಯ ಅಮೆರಿಕನ್ ಸಂಸ್ಕೃತಿಗಳು ಗಂಭೀರ ಅಧ್ಯಯನದ ವಿಷಯಗಳಾಗಿವೆ. ಅಮೆರಿಕಾದ ಪ್ರಮುಖ ವಿಶ್ವವಿದ್ಯಾನಿಲಯಗಳು ಈಗ ಈ ವಿಷಯವನ್ನು ಅಧ್ಯಯನ ಮಾಡುವ ವಿಭಾಗಗಳನ್ನು ಸ್ಥಾಪಿಸಿವೆ, ಸ್ಥಳೀಯ ಅಮೆರಿಕನ್ ಸಾಹಿತ್ಯವು ಒಂದು ಗಂಭೀರ ವಸ್ತುವಾಗಿ ಅಧ್ಯಯನಕ್ಕೆ ಲಭ್ಯವಾಗಿದೆ. ಇದೇ ಸಮಯದಲ್ಲಿ ಸ್ಥಳೀಯ ಅಮೆರಿಕನ್ನರೂ ಕೂಡ ತಮ್ಮ ಹಕ್ಕುಗಳನ್ನು ಮತ್ತು ಬುಡಕಟ್ಟು ಜಮೀನುಗಳನ್ನು ರಕ್ಷಿಸಿಕೊಳ್ಳುವಲ್ಲಿ ಹೋರಾಟಕ್ಕೆ ಮುಂದಾಗಿದ್ದಾರೆ.

ಈ ಪ್ರಬಂಧವು ಅಮೆರಿಕದ ಇತಿಹಾಸವನ್ನು ವಿಭಿನ್ನವಾಗಿ ಮತ್ತು ಬಹಳ ಸಂಕ್ಷಿಪ್ತವಾಗಿ ಗಮನಿಸಿ ಸ್ಥಳೀಯ ಅಮೆರಿಕನ್ನರ ಮೇಲೆ ವಸಾಹತೀಕರಣದಿಂದಾದ ಪ್ರಭಾವಗಳ ದೃಷ್ಟಿಕೋನದ ಮೂಲಕ ಅವರ ನೈಜ ಇತಿಹಾಸವನ್ನು ಪ್ರಸ್ತುತಪಡಿಸಲು ಪ್ರಯತ್ನಿಸುತ್ತದೆ. ಈ ಪ್ರಬಂಧದಲ್ಲಿ ಮೂಲನಿವಾಸಿಗಳ ಇತಿಹಾಸದ ಕ್ಷಿಪ್ರ ಅವಲೋಕನ ಮಾಡಿ ನಂತರದ ಎರಡನೇ ಲೇಖನದಲ್ಲಿ, ಮೂಲನಿವಾಸಿಗಳ ಮೇಲೆ ಯೂರೋಪಿನ ವಲಸಿಗರು ಮತ್ತು ಯಾತ್ರಿಕರಿಂದಾದ ಪ್ರಭಾವಗಳನ್ನು ವಿವರಿಸುವ ಎರಡು ಜನಪ್ರಿಯ ಕಾದಂಬರಿಗಳನ್ನು ಪರಿಚಯಿಸುತ್ತೇನೆ. ಅತ್ಯಂತ ಅಗಾಧವಾದ ಪ್ರಸ್ತುತ ವಿಷಯದ ಮೇಲೆ ಒಂದು ಸಂಕ್ಷಿಪ್ತ ಪ್ರಬಂಧವು ಖಂಡಿತಾ ನ್ಯಾಯವನ್ನು ಒದಗಿಸಲಾರದು. ಆದರೆ ಈ ಪ್ರಯತ್ನದ ಮೂಲಕ ಅಮೆರಿಕದ ಮೂಲನಿವಾಸಿಗಳನ್ನು ಕುರಿತು ಓದುಗರ ಕುತೂಹಲವನ್ನು ಕೆರಳಿಸಿ ಇನ್ನೂ ಹೆಚ್ಚಿನ ಅಧ್ಯಯನ ಮಾಡಲು ಪ್ರೋತ್ಸಾಹಿಸುತ್ತದೆ ಮತ್ತು ಪ್ರಚೋದಿಸುತ್ತದೆಯೆಂದು ನಮ್ಮ ಕಳಕಳಿಯ ಭಾವನೆ!

ಅಮೆರಿಕದ ಮೂಲ ನಿವಾಸಿಗಳ ಇತಿಹಾಸದ ಒಂದು ಅವಲೋಕನ (ಕೆಲವು ನೈಜ ಸಂಗತಿಗಳು)

ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ಮೊದಲ ಯೂರೋಪಿಯನ್ನರು ಅಮೆರಿಕ ಖಂಡದಲ್ಲಿ ಬಂದಿಳಿಯುವ ಹೊತ್ತಿಗಾಗಲೇ, ಈ ಪ್ರದೇಶವು ಹಲವಾರು ಸಹಸ್ರಮಾನಗಳಿಂದ ವಿಕಸಿತವಾಗುತ್ತ, ವೈವಿಧ್ಯಮಯವಾದ ಮತ್ತು ವಿಶಾಲವಾದ ಭೂಪ್ರದೇಶವಾಗಿತ್ತು.

ಅಮೆರಿಕಾ ಖಂಡದಲ್ಲಿ ವಾಸಿಸುತ್ತಿದ್ದ ಜನರನ್ನು ಕುರಿತಾದ ಪುರಾತತ್ತ್ವ ಶಾಸ್ತ್ರದ ಪುರಾವೆಗಳು ಇತ್ತೀಚಿನ ವರ್ಷಗಳಲ್ಲಿ ಎರಡು ತಾಣಗಳಿಂದ ಬಂದಿವೆ. ಒಂದು ಉತ್ತರ ಅಮೆರಿಕದ ಪೆನ್ಸಿಲ್ವೇನಿಯಾದಿಂದ ಮತ್ತು ಇನ್ನೊಂದು ದಕ್ಷಿಣ ಅಮೆರಿಕಾದ ಚಿಲಿ ದೇಶದಿಂದ.

ಪಿಟ್ಸ್‌ಬರ್ಗ್, ಪೆನ್ಸಿಲ್ವೇನಿಯಾದಲ್ಲಿ ಸಿಕ್ಕ ಪುರಾವೆಗಳ ಪ್ರಕಾರ 19,000 ವರ್ಷಗಳ ಹಿಂದಿನ ವಾಸಸ್ಥಾನ, ಪರಿಕರಗಳು, ಮೂಳೆಗಳು, ಕ್ಯಾಂಪ್‌ಸೈಟ್‌ಗಳು ಮತ್ತು ವೈಯಕ್ತಿಕ ವಸ್ತುಗಳು, ಆರಂಭಿಕ ಕೃಷಿಯ ಸಾಮಗ್ರಿಗಳು ಪತ್ತೆಯಾಗಿವೆ. ಮತ್ತು ಮಾನವರು ಈ ಪ್ರದೇಶದಲ್ಲಿ 19,000 ವರ್ಷಗಳಿಂದ ಜೀವಿಸಿದ್ದಾರೆಂದು ಸಾಬೀತಾಗುತ್ತದೆ. ಚಿಲಿಯ ಮಾಂಟೆ ವರ್ಡೆನಲ್ಲಿ ಸುಮಾರು 19,000 ವರ್ಷಗಳ ಹಿಂದಿನ ಒಂದು ಸಂಪೂರ್ಣ ಗ್ರಾಮವನ್ನು ಪತ್ತೆಹಚ್ಚಲಾಗಿದೆ. ಹುಲ್ಲು-ನೀರಿನ ಪ್ರದೇಶದಲ್ಲಿ ಮುಳುಗಿದ್ದ ಈ ಗ್ರಾಮ ಒಂದು ರೀತಿಯಲ್ಲಿ ಸಂರಕ್ಷಿಸಲ್ಪಟ್ಟಿದ್ದು, ಅಲ್ಲಿ ಅನೇಕ ಸಾಮಗ್ರಿಗಳು ಲಭ್ಯವಾಗಿವೆ.

ಈ ಎರಡು ಆವಿಷ್ಕಾರಗಳು ಮತ್ತೊಂದು ಸಿದ್ಧಾಂತವನ್ನು ವಿವಾದಕ್ಕೆ ಒಳಪಡಿಸುತ್ತವೆ. 10,000 ವರ್ಷಗಳ ಹಿಂದೆ ಅಲಾಸ್ಕಾ ಮತ್ತು ರಷ್ಯಾ ದೇಶಗಳನ್ನು ಸೇರಿಸಿದ ಭೂ ಸೇತುವೆಯಾದ ಬೇರಿಂಗ್ ಜಲಸಂಧಿಯ ಮೂಲಕ ಈ ಖಂಡಕ್ಕೆ ಮಾನವರು ಏಷ್ಯಾದಿಂದ ಬಂದಿರಬಹುದು ಎನ್ನುವ ವಾದ ದೀರ್ಘಕಾಲದವರೆಗೆ ಒಪ್ಪಿಕೊಂಡಿದ್ದ ಸಿದ್ಧಾಂತವಾಗಿತ್ತು. ಆದ್ದರಿಂದ ಇದು ಹೇಗೆ ಸಾಧ್ಯ? ಅದಕ್ಕೂ ಮೊದಲು ಜನರು ಇಲ್ಲಿಗೆ ಬಂದಿದ್ದಾರೆಯೆ? ಹೇಗೆ? ಸಮುದ್ರದ ಮೂಲಕವೇ? 25,000 ವರ್ಷಗಳ ಹಿಂದೆ ಇತರ ಪ್ರವೇಶ ಮಾರ್ಗಗಳು ಇನ್ನೂ ಹೆಚ್ಚು ಇದ್ದಿರಬಹುದೇ? ಆನುವಂಶಿಕ (ಜೆನೆಟಿಕ್) ಸಂಶೋಧನೆಯ ಪ್ರಕಾರ ಇತಿಹಾಸಪೂರ್ವ ಮೂಲನಿವಾಸಿಗಳು ಏಷ್ಯನ್ ಮತ್ತು ಯುರೋಪಿಯನ್ ಜನಸಂಖ್ಯೆಯೊಂದಿಗೆ ಸಾಕಷ್ಟು ವಂಶವಾಹಿನಿ (ಡಿ.ಎನ್.ಎ.)ಗಳನ್ನು ಹಂಚಿಕೊಂಡಿರುವುದು ಕಾಣಬರುತ್ತದೆ. ಯೂರೋಪಿಯನ್ನರು ಏಷ್ಯಾಗೆ ವಲಸೆ ಹೋಗಿ ಅಲ್ಲಿನ ಜನಸಂಖ್ಯೆಯೊಂದಿಗೆ ಬೆರೆತು ನಂತರ ಪ್ರಾಚೀನ ಭೂಸೇತುವೆಗಳ ಮೂಲಕ ಅಮೆರಿಕ ಖಂಡಕ್ಕೆ ವಲಸೆ ಬಂದಿರಬಹುದು ಎನ್ನುವುದು ಈ ಸಿದ್ಧಾಂತವಾಗಿದೆ. ಭಾರತವನ್ನು ಹುಡುಕಲು ಹೋಗಿ ಅಮೆರಿಕವನ್ನು ಕಂಡುಹಿಡಿದು ಅಲ್ಲಿಯ ಜನರನ್ನು ಅಮೆರಿಕನ್ ಇಂಡಿಯನ್ಸ್ ಎಂದು ಕರೆದದ್ದು ಒಂದು ರೀತಿಯಲ್ಲಿ ಕಾಕತಾಳೀಯವಾಗಿ ನಿಜವಾಯಿತೆನ್ನಬಹುದು. ಏಕೆಂದರೆ ಇಲ್ಲಿನ ಜನರು ಮೂಲತಃ ಏಷ್ಯಾ ಮತ್ತು ಯೂರೋಪಿನಿಂದ ಬಂದ ಜನರೆಂದು ಡಿಎನ್‌ಎ ಪರೀಕ್ಷೆಗಳ ಮೂಲಕ ಸಿದ್ಧವಾಗಿದೆಯಲ್ಲವೆ?!

ನಮಗೆ ಅಮೆರಿಕದ ಕ್ಲೋವಿಸ್ ಸೈಟ್ನಿಂದ ಮೂಲನಿವಾಸಿಗಳ ಮೇಲೆ ಇನ್ನೂ ಹೆಚ್ಚು ವಿಷಯಗಳು ತಿಳಿದಿವೆ. ಕ್ಲೋವಿಸ್ ಸಂಸ್ಕೃತಿ ಇತಿಹಾಸಪೂರ್ವ ಸ್ಥಳೀಯ ಸಂಸ್ಕೃತಿಯಾಗಿದೆ. 1920 ಮತ್ತು 1930ರ ದಶಕಗಳಲ್ಲಿ ನ್ಯೂ ಮೆಕ್ಸಿಕೋದ ಕ್ಲೋವಿಸ್ ಬಳಿ ಸಿಕ್ಕ ವಿಭಿನ್ನ ಕಲ್ಲು ಉಪಕರಣಗಳು, ಅಲ್ಲಿನ ವಿಶಿಷ್ಟ ಮೂಳೆ ಮತ್ತು ದಂತದ ಉಪಕರಣಗಳಿಂದ ತಯಾರಿಸಿದವೆಂದು ನಿರೂಪಿಸಲ್ಪಟ್ಟಿದೆ. ಪುರಾತತ್ತ್ವಜ್ಞರ ಅತ್ಯಂತ ನಿಖರ ಪ್ರಸ್ತುತ ನಿರ್ಣಯಗಳು ಈ ರೇಡಿಯೊಕಾರ್ಬನ್ ಯುಗವು ಸರಿ ಸುಮಾರು 13,000ರಿಂದ 12,900 ಕ್ಯಾಲೆಂಡರ್ ವರ್ಷಗಳಿಗೆ ಸಮಾನವಾಗಿದೆ ಎಂದು ಸೂಚಿಸುತ್ತವೆ. ಕ್ಲೋವಿಸ್ ಜನರನ್ನು ಅಮೆರಿಕದ ಹೆಚ್ಚಿನ ಮೂಲನಿವಾಸಿಗಳ ಪೂರ್ವಜರೆಂದು ಪರಿಗಣಿಸಲಾಗಿದೆ. ಆದರೆ ಮೇಲೆ ತಿಳಿಸಿದ ಇತ್ತೀಚಿನ ಆವಿಷ್ಕಾರಗಳಿಂದ ಅದು ಈಗ ಅನುಮಾನಕ್ಕೆ ಒಳಗಾಗಿದೆ.

ಕಾಲಾನಂತರದಲ್ಲಿ, ನಾಗರಿಕತೆಯು ಹೆಚ್ಚು ಹೆಚ್ಚು ಆಧುನಿಕವಾಗಿ ಬೆಳೆಯಿತು. ಮೊದಲ ಯೂರೋಪಿಯನ್ ವಸಾಹತುದಾರರ ಆಗಮನದ ಹೊತ್ತಿಗೆ, ಧರ್ಮ, ಕೃಷಿ, ಪುರಾಣ ಎಲ್ಲವೂ ಅಭಿವೃದ್ಧಿಗೊಂಡಿದ್ದವು. ಹೆಚ್ಚಿನ ಜನ ಸಾಂದ್ರತೆಯುಳ್ಳ ಪ್ರದೇಶಗಳನ್ನು ಬೆಂಬಲಿಸಲು ಹೆಚ್ಚುವರಿ ಬೆಳೆಗಳನ್ನು ಆಧುನಿಕ ಕೃಷಿ ವಿಧಾನಗಳನ್ನು ಬಳಸಿ ಬೆಳೆಯಲಾಗುತ್ತಿತ್ತು. ಪುರಾತತ್ತ್ವ ಶಾಸ್ತ್ರದ ಸಂಶೋಧನೆಗಳ ಪ್ರಕಾರ ಯೂರೋಪಿನ ಯಾತ್ರಿಕರು ಅಮೆರಿಕಕ್ಕೆ ಬರುವುದಕ್ಕೂ ಹಲವು ಶತಮಾನಗಳ ಮುನ್ನವೇ ಉತ್ತಮವಾಗಿ ಸಂಘಟಿತವಾದ ದೊಡ್ಡ ಹಳ್ಳಿಗಳು ಮತ್ತು ನಗರಗಳ ರಚನೆಗಳಿದ್ದುದರ ಪುರಾವೆಗಳಿವೆ. ಉದಾಹರಣೆಗೆ, ಮಿಸಿಸ್ಸಿಪ್ಪಿಯ ಕಹೋಕಿಯಾ ಕಣಿವೆಯಲ್ಲಿ ಸುಮಾರು ಕ್ರಿಸ್ತಶಕ 700ರಿಂದ 1400ರವರೆಗೆ ಜನರು ವಾಸಿಸುತ್ತಿದ್ದುದು ಕಂಡುಬರುತ್ತದೆ. ಈ ಪ್ರದೇಶದ ಉತ್ತುಂಗ ಕಾಲವಾದ ಕ್ರಿ.ಶ. 1050ರಿಂದ 1200ರವರೆಗೆ ಈ ನಗರವು ಸುಮಾರು ಆರು ಚದರ ಮೈಲಿಗಳಷ್ಟಿದ್ದು ಸುಮಾರು ಹತ್ತರಿಂದ ಇಪ್ಪತ್ತು ಸಾವಿರ ಜನರು ಇಲ್ಲಿ ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ. 120ಕ್ಕೂ ಹೆಚ್ಚು ದಿಬ್ಬಗಳು ಕಾಲಕ್ರಮೇಣ ಕಟ್ಟಲ್ಪಟ್ಟವು. ಸಾಲು ಮನೆಗಳೂ, ದೊಡ್ಡ ದೊಡ್ಡ ಪ್ರಾಕಾರಗಳೂ ಇದ್ದವು ಮತ್ತು ನಗರದ ಸುತ್ತ ಇರುವ ಭೂಮಿಯನ್ನು ಕೃಷಿಗಾಗಿ ಬಳಸಲಾಗುತ್ತಿತ್ತು. ಕ್ರಿ.ಶ. 1200ರಲ್ಲಿ ಇಲ್ಲಿಯ ಅತಿ ದೊಡ್ಡ ನಗರದ ಜನಸಂಖ್ಯೆ ಸುಮಾರು 30,000 ಇದ್ದಿರಬಹುದೆಂದು ಅಂದಾಜು ಮಾಡುತ್ತಾರೆ. ಆನಂತರ ಇಷ್ಟು ದೊಡ್ಡ ನಗರಗಳು 19ನೆಯ ಶತಮಾನದವರೆಗೂ ಕಂಡ ದಾಖಲೆಗಳಿಲ್ಲ.

ಅಮೆರಿಕನ್ ಇಂಡಿಯನ್ ಬುಡಕಟ್ಟು ಜನರ ಸಮಾಜದ ಮತ್ತು ಆಡಳಿತ ವ್ಯವಸ್ಥೆ ಉತ್ತಮ ಮಟ್ಟದ್ದಾಗಿತ್ತು. ಈ ಮೂಲನಿವಾಸಿಗಳ ಸಮುದಾಯಗಳನ್ನು ಹಿರಿಯ ಮುಖಂಡರು ನಡೆಸುತ್ತಿದ್ದರು. ಹಿರಿಯ ನಾಯಕರು ಸತ್ತುಹೋದಲ್ಲಿ ಅವರ ಸ್ಥಾನವನ್ನು ಮತ್ತೊಬ್ಬ ಹಿರಿಯರಿಂದ ತುಂಬಲಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿದ್ದವು. ರಾಜನೀತಿ ಶಾಸ್ತ್ರದ ವಿದ್ವಾಂಸರಾದ ಜೀನ್ ಜಾಕ್ ರೂಸೋ (Jean Jacques Rousseau) ಅವರ ಪ್ರಕಾರ ಪ್ರಜಾಪ್ರಭುತ್ವದ ವ್ಯವಸ್ಥೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ

ಕಲ್ಪನೆಯ ಉದಯವಾದದ್ದು ಇಲ್ಲಿಯೇ. ಯೂರೋಪಿನ ವಲಸೆಗಾರರು ಈ ವ್ಯವಸ್ಥೆಯನ್ನು ಅಮೆರಿಕದ ಮೂಲನಿವಾಸಿಗಳಿಂದ ಕ್ರಿ.ಶ. 1500 – 1776ರ ಕಾಲದಲ್ಲಿ ತಿಳಿದುಕೊಂಡರು.

ಈಗಿನ ಅಮೆರಿಕ ದೇಶ ಯೂರೋಪಿನ ವಸಾಹತುದಾರರ ಆಗಮನದ ಸಮಯದಲ್ಲಿ ಸ್ಥಳೀಯ ಮೂಲನಿವಾಸಿಗಳ ಜಗತ್ತು ಆಗಿದ್ದು, ಯಾತ್ರಿಕರಿಂದ ಅವರ ಮೇಲಾದ ಪರಿಣಾಮಗಳನ್ನು ಇದೇ ಪುಸ್ತಕದಲ್ಲಿ ಮುಂದೆ 'ಐರೋಪ್ಯ ವಲಸೆಗಾರರ ಬರ್ಬರತೆಗೀಡಾದ ಅಮೆರಿಕದ ಮೂಲನಿವಾಸಿಗಳ ನೈಜ ಇತಿಹಾಸ' ಲೇಖನದಲ್ಲಿ ಲೇಖಕಿ ಮಾಧವಿ ರಾಜಗೋಪಾಲ್ ರಿಝಿಯೋ ವಿವರಿಸಿದ್ದಾರೆ. ಆದ್ದರಿಂದ ನಾನು ಮತ್ತೆ ಅವುಗಳನ್ನು ಇಲ್ಲಿ ವಿಸ್ತರಿಸುವುದಿಲ್ಲ. ಆದರೆ ವಲಸೆಗಾರರು ಒದಗಿಸಿದ ವಿಭಿನ್ನ ದೃಷ್ಟಿಕೋನವನ್ನು ಇಲ್ಲಿ ಅನ್ವೇಷಿಸುವುದು ಸೂಕ್ತವಾಗಿದೆ. ಯಾತ್ರಿಕರು ಮೂಲನಿವಾಸಿಗಳನ್ನು ವಿಭಿನ್ನವಾಗಿ ನೋಡುತ್ತ ಅವರನ್ನು ಅನಾಗರಿಕರೆಂದು ಜರಿದು, ತಮಗಿಂತ ಕೀಳಾಗಿರುವ ಇವರನ್ನು ಪಳಗಿಸಿ, ನಾಗರಿಕನ್ನಾಗಿಸಿ ತಮ್ಮ ದೇವರುಗಳ ಅಧೀನಕ್ಕೆ ತಂದು ಅವರಿಗೆ ನಾಗರಿಕತೆಯ ಬೆಳಕನ್ನು ನೀಡಿದರೆ ಅವರ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಬಹುದು ಎಂದು ಭಾವಿಸುತ್ತಾರೆ. ಯೂರೋಪಿಯನ್ನರು ಅಮೆರಿಕವನ್ನು ವಶಪಡಿಸಿಕೊಳ್ಳುವಲ್ಲಿ ಧರ್ಮವು ವಹಿಸಿದ ಮುಖ್ಯ ಪಾತ್ರವನ್ನು ಅವಶ್ಯವಾಗಿ ಗಮನಿಸಬೇಕು.

ಒಂದು ಪ್ರಮುಖವಾದ ವಿಷಯವೆಂದರೆ, ಅಮೆರಿಕದ ಆರಂಭಿಕ ಯೂರೋಪಿಯನ್ ಪರಿಶೋಧಕರು ಯೇಸು ಕ್ರಿಸ್ತನ ಬೋಧನೆಗಳನ್ನು ಇಲ್ಲಿ ಹರಡುವ ನಂಬಿಕೆಯಿಂದಲೇ ಇಲ್ಲಿಗೆ ಬಂದರು ಎನ್ನುವ ವಿಶೇಷ ಮಾಹಿತಿ. ಶಾಶ್ವತ ಪ್ರಭಾವ ಬೀರಿದ ಪರಿಶೋಧಕರು ಮುಖ್ಯವಾಗಿ ಇಂಗ್ಲಿಷರು ಮತ್ತು ಸ್ಪ್ಯಾನಿಷರು ಆಗಿದ್ದರೂ ಇತರ ದೇಶದವರೂ ಸಹ ಇದ್ದರು, ವಿಶೇಷವಾಗಿ ಫ್ರೆಂಚರು.

ಸ್ಪ್ಯಾನಿಷರಿಗಂತೂ, ತಮ್ಮ ಧಾರ್ಮಿಕ ನಂಬಿಕೆಯನ್ನು ಕ್ರೈಸ್ತೇತರರಿಗೆ ಕೊಂಡೊಯ್ಯುವ ಹೋರಾಟವು ಅವರ ದಂಡಯಾತ್ರೆ ಮತ್ತು ವಿಜಯಕ್ಕೆ ಒಂದು ಸಮರ್ಥನೆಯನ್ನು ಒದಗಿಸಿತು, ಮತ್ತು ಈ ವಿಜಯದ ಧರ್ಮವೇ ಅಮೆರಿಕದಲ್ಲಿ ಸ್ಪ್ಯಾನಿಷರ ವಿಸ್ತರಣೆಯ ಸಿದ್ಧಾಂತಕ್ಕೆ ಆಧಾರವಾಯಿತು. ಕ್ರಿಸ್ಟೋಫರ್ ಕೊಲಂಬಸ್ (1451 – 1506) ಮತ್ತು ಇತರ ಐಬೇರಿಯನ್ ಪರಿಶೋಧಕರು ಮತ್ತು 'ವಿಜಯಶಾಲಿಗಳು' ಕ್ರುಸೇಡರ್ ನಂಬಿಕೆಯ ಫಲಕಗಳಡಿಯಲ್ಲಿ 'ಸ್ಥಳೀಯ ಅನಾಗರಿಕರ' ಆತ್ಮಗಳನ್ನು ಉಳಿಸುವ ನೆಪದಲ್ಲಿ ಲಾಭಗಳಿಸುವ ಸ್ವಾರ್ಥ ಲಾಲಸೆಯನ್ನೂ ಸಾಧಿಸ ಬಯಸಿದರು.

ಉತ್ತರ ಅಮೆರಿಕಾದಲ್ಲಿ, ಲಾ ಫ್ಲೋರಿಡಾ (1565ರ ನಂತರ ಮತ್ತು ಪೂರ್ವ ಕರಾವಳಿಯುದ್ದಕ್ಕೂ 1570ರ ದಶಕದ ಆರಂಭದಲ್ಲಿ ಚೆಸಾಪೀಕ್ ಕೊಲ್ಲಿಗೆ), ನ್ಯೂಯೆವೊ ಮೆಕ್ಸಿಕೊ (1598ರ ನಂತರ), ಟೆಕ್ಸಾಸ್ (ರಿಯೊ ಗ್ರಾಂಡೆ ಉದ್ದಕ್ಕೂ, 1690ರ ದಶಕದ ಕೊನೆಯಲ್ಲಿ), ಪಿಮೆರಿಯಾ ಆಲ್ಟಾ (ಪ್ರಸ್ತುತ ದಕ್ಷಿಣ ಅರಿಝೋನಾ ಮತ್ತು ಉತ್ತರ ಸೋನೊರಾ – 1680ರ ದಶಕ) ಮತ್ತು ಕೊನೆಯದಾಗಿ ಕ್ಯಾಲಿಫೋರ್ನಿಯಾ (1770ರ ದಶಕ) ದಲ್ಲಿ ಕ್ರಿಶ್ಚಿಯನ್ ಧರ್ಮಪ್ರಚಾರಕರು (ಮಿಷನರಿಗಳು) ಕಾರ್ಯತತ್ಪರರಾಗಿದ್ದರು.

ಸ್ಪ್ಯಾನಿಷ್ ವಸಾಹತುಗಳಿಂದ ದೂರದಲ್ಲಿ, ಒಂಟಿ ಮಿಷನರಿಗಳು ಹೆಚ್ಚಾಗಿ ಪ್ರತಿಕೂಲ ಸ್ಥಳೀಯರೊಂದಿಗೆ ಕೆಲಸ ಮಾಡುತ್ತಿದ್ದರು. ಸಾಮಾನ್ಯವಾಗಿ ಗ್ರೇಟ್ ಪ್ಲೇನ್ಸ್ ಮತ್ತು ಪರ್ವತ ಬುಡಕಟ್ಟು ಜನಾಂಗ ಮತ್ತು ಬಲವಾದ ಯೋಧ ಜಾತಿಗಳನ್ನು ಹೊರತುಪಡಿಸಿ, ಮಿಷನರಿಗಳು ತಮ್ಮ ಪ್ರಯತ್ನಗಳನ್ನು ಜಡ ಕೃಷಿ ಬುಡಕಟ್ಟು ಜನಾಂಗದವರಾದ ನ್ಯೂ ಮೆಕ್ಸಿಕೋದ ಪ್ಯೂಬ್ಲೋಸ್, ಟೆಕ್ಸಾಸ್ ಮತ್ತು ಅರಿಝೋನಾದ ನದಿ ಮಾರ್ಗಗಳಲ್ಲಿ ಅರೆ-ಜಡ ಬುಡಕಟ್ಟು ಜನಾಂಗದವರ ಮೇಲೆ ಕೇಂದ್ರೀಕರಿಸಿದರು.

ಮತ್ತೊಂದೆಡೆ, ಆರಂಭಿಕ ಇಂಗ್ಲಿಷ್ ಪರಿಶೋಧಕರು ಧಾರ್ಮಿಕ ಕಿರುಕುಳದಿಂದ ಇಂಗ್ಲೆಂಡಿನಿಂದ ಪಲಾಯನ ಮಾಡುತ್ತಿದ್ದರು. ಈ ಯಾತ್ರಿಕರು ಇಂಗ್ಲೆಂಡ್‌ನಿಂದ ಹಾಲೆಂಡ್‌ಗೆ ಓಡಿಹೋದರು, ಮತ್ತು ನಂತರ ತಮ್ಮದೇ ಆದ ಸಾರ್ವಭೌಮ ದೇಶವನ್ನು ಸ್ಥಾಪಿಸಲು ಹಾಲೆಂಡ್‌ನಿಂದ ಪಲಾಯನ ಮಾಡಿದರು. ಅವರು 1620ರಲ್ಲಿ ನ್ಯೂ ಇಂಗ್ಲೆಂಡ್‌ನಲ್ಲಿ ಇಳಿಯುವಾಗ (ಅದಕ್ಕೆ ಸುಮಾರು ಐವತ್ತು ವರ್ಷಗಳ ಮೊದಲು ಫ್ರೆಂಚರು ಇಲ್ಲಿಗೆ ಬಂದಿಳಿದಿದ್ದರು), ದೇವರು ತಮ್ಮ ಸ್ವಂತ ಧರ್ಮವನ್ನು ಆಚರಿಸಲು ಈ ಭೂಮಿಯನ್ನು ನೀಡಿದ್ದಾನೆಂದು ಅವರು ಭಾವಿಸಿದರು.

ಇಂತಹ ಧಾರ್ಮಿಕ ಪರಿಶೋಧಕರು ಮತ್ತು ವಸಾಹತುದಾರರಿಗೆ, ಸ್ಥಳೀಯ ಅಮೆರಿಕನ್ನರನ್ನು ನಿಭಾಯಿಸುವ ಅವರ ವಿಧಾನವು ವಾಸ್ತವಿಕ ಮತ್ತು ನೈತಿಕ ಸಮಸ್ಯೆಗಳನ್ನು ಸೃಷ್ಟಿಸಿತು. ವಸಾಹತುದಾರರ ವಿಸ್ತರಣೆ ಮತ್ತು ಮೂಲನಿವಾಸಿಗಳ ಉಚ್ಚಾಟನೆಗಳನ್ನು ಸಮರ್ಥಿಸಿಕೊಳ್ಳಲು ಹೊಸ ಅಮೆರಿಕ ರಾಷ್ಟ್ರಕ್ಕೆ ನೈತಿಕತೆಯ ದೃಷ್ಟಿಯಿಂದ ಕೆಲವು ಸಮಸ್ಯೆಗಳು ಸೃಷ್ಟಿಯಾದವು. ಉದಾಹರಣೆಗೆ, 'ಹೊಸ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ನೇತಾರನಾಗಿ ಈ ವಿಶಿಷ್ಟ ಪ್ರಯೋಗವನ್ನು ಹೇಗೆ ಮಾಡಬಹುದು' ಎಂಬುದು. ಜಗತ್ತಿಗೆ ಪಾಠ ಹೇಳುವ ಮತ್ತು ತನ್ನ ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ಸ್ವತಃ ಹೆಮ್ಮೆಪಡುವ ಈ ರಾಷ್ಟ್ರಕ್ಕೆ ತಾವು ಮೂಲನಿವಾಸಿಗಳ ದೇಶವನ್ನು ಕಬಳಿಸಿ ಅವರ ಮೇಲೆ ಮಾಡಿದ ಹೇಯ ಕೃತ್ಯಗಳನ್ನು ನೈತಿಕವಾಗಿ ಸಮರ್ಥಿಸಿಕೊಳ್ಳಲು ಹೇಗೆ ತಾನೆ ಸಾಧ್ಯವಾದೀತು?

ಇದರ ಪ್ರಾಥಮಿಕ ರೂಪದಲ್ಲಿ, ಮೂಲ ದರ್ಶನದ ಕಲ್ಪನೆಯು ಮೂರು ಕೇಂದ್ರ ವಿಷಯಗಳನ್ನು ಆಧರಿಸಿದೆ.

1. **ಸದ್ಗುಣ** – ಅಮೆರಿಕದ ಜನತೆಯ ಮತ್ತು ಅದರ ವಿವಿಧ ಸಂಸ್ಥೆಗಳ ವಿಶಿಷ್ಟತೆಯ ಬಗ್ಗೆ ಅಮೆರಿಕನ್ನರಿಗಿರುವ ದೃಢವಾದ ನಂಬಿಕೆ (ಮುಖ್ಯವಾಗಿ, ಅವರ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಪ್ರಯೋಗದ ಪರಿಣಾಮದಿಂದ ಸಾಧಿಸಿದ ವಿಶಿಷ್ಟತೆ).
2. **ಧ್ಯೇಯ** – ಅಮೆರಿಕದ ಈ ಅತ್ಯುತ್ತಮ ವ್ಯವಸ್ಥೆಯನ್ನು ವಿಶ್ವದ ಇತರ ರಾಷ್ಟ್ರಗಳಿಗೆ ದಯಪಾಲಿಸುವುದು ಅಮೆರಿಕದ ಧ್ಯೇಯ ಎಂಬ ನಂಬಿಕೆ.
3. **ವಿಧಿ** – ಈ ಕೆಲಸವನ್ನು ಮಾಡುವ ಕರ್ತವ್ಯವನ್ನು ದೇವರು ಅಮೆರಿಕಕ್ಕೆ ವಹಿಸಿದ್ದಾನೆಂಬ ನಂಬಿಕೆ.

ಪರಿಶುದ್ಧತೆ ಮತ್ತು ಆದರ್ಶವಾದಗಳಿಂದ ಕೂಡಿದ್ದ ಅಂದಿನ ಈ ದೂರದೃಷ್ಟಿಯು ಆ ಕಾಲದಲ್ಲಿ ಒಂದು ಪ್ರಬಲ ಶಕ್ತಿಯಾಯಿತು. ಈ ಪರಿಕಲ್ಪನೆಯ ಶಕ್ತಿಯಿಂದಲೇ ಸ್ವಾತಂತ್ರ್ಯನಂತರದ ಅತ್ಯಂತ ಅಲ್ಪ ಅವಧಿಯಲ್ಲಿ ಅಮೆರಿಕದ ಒಕ್ಕೂಟವನ್ನು ಸಾಧಿಸಲು ಸಾಧ್ಯವಾಯಿತು. ಕವಿ ವಾಲ್ಟ್ ವಿಟ್ಮನ್, ಅಮೆರಿಕದ ಈ ಶಕ್ತಿಯನ್ನು ಕುರಿತು ಹೀಗೆ ಆಶಿಸುತ್ತಾರೆ– "ಶ್ರೇಷ್ಠವಾದ ಮತ್ತು ಅದ್ಭುತವಾದ ಹೊಸ ಜಗತ್ತಿನಲ್ಲಿ ಉದಾತ್ತವಾದ ಜನಾಂಗವನ್ನು ಸ್ಥಾಪಿಸುವ ಉದ್ದೇಶ ನಮ್ಮದಾಗಲಿ!"

ಆದರೆ ಈ ದೃಷ್ಟಿಯ ಸಾಕ್ಷಾತ್ಕಾರದಲ್ಲಿ ಹಲವಾರು ಸಮಸ್ಯೆಗಳಿದ್ದವು. ಸ್ವಾತಂತ್ರ್ಯ ನಂತರದ 1800ರ ಮಧ್ಯಭಾಗದಲ್ಲಾದ ಅನಗತ್ಯ ಮೆಕ್ಸಿಕನ್–ಅಮೆರಿಕನ್ ಯುದ್ಧವೂ ಸೇರಿದಂತೆ ಅಮೆರಿಕದ ಬಹುಪಾಲು ಚಿಂತನೆ ಮತ್ತು ನಡವಳಿಕೆಯಲ್ಲಿ ಈ ದೃಷ್ಟಿಕೋನ, ಮೇಲ್ನೋಟಕ್ಕೆ ಪ್ರಜಾಪ್ರಭುತ್ವವನ್ನು ಸಮರ್ಥಿಸುವಂತೆ ಕಂಡರೂ ಆದರ್ಶಗಳ ಸೋಗಿನಲ್ಲಿ ರಾಷ್ಟ್ರ ವಿಸ್ತರಣೆ, ನೈಸರ್ಗಿಕ ಸಂಪನ್ಮೂಲಗಳ ದುರುಪಯೋಗ ಮತ್ತು ಸ್ವಾರ್ಥಹಿತ ಸಾಧನೆಗಳಿಗಾಗಿ ದುರುಪಯೋಗಿಸಿಕೊಳ್ಳುವ ಸಾಧ್ಯತೆಗಳಿದ್ದವು. ಕೆಲವರು 'ನೀತಿವಂತನ ರಕ್ಷಾಕವಚದಲ್ಲಿರುವ ಖಳನಾಯಕ'ನೆಂದೂ ಸಹ ಅಮೆರಿಕವನ್ನು ಜರಿದರು. ಹತ್ತೊಂಬತ್ತನೆಯ ಶತಮಾನದಲ್ಲಿ ಅಮೆರಿಕಾದ ವಿಸ್ತರಣೆಯನ್ನು 'ಮ್ಯಾನಿಫೆಸ್ಟ್ ಡೆಸ್ಟಿನಿ' ಆಧಾರದ ಮೇಲೆ ಸಮರ್ಥಿಸಲಾಯಿತು. ಪಶ್ಚಿಮ ದಿಕ್ಕಿನೆಡೆಗೆ ವೇಗವಾಗಿ ನಡೆದ ಈ ವಿಸ್ತರಣೆಯಲ್ಲಿ ಸ್ಥಳೀಯ ಮೂಲನಿವಾಸಿಗಳಿಗೆ ಅಪಾರ ಹಾನಿಯುಂಟಾಯಿತು. ಅಪಾರ ಪ್ರಾಣಹಾನಿ ಕೂಡಾ ಆಯಿತು. ಸುಮಾರು 200 ವರ್ಷಗಳ ನಂತರ ಇಂದಿಗೂ ಸಹ ಈ ಬುಡಕಟ್ಟಿನ ಜನಾಂಗ ಚೇತರಿಸಿಕೊಂಡಿಲ್ಲ.

ಅಮೆರಿಕಾದ ಈ ದೃಷ್ಟಿಕೋನವನ್ನು ಅನೇಕ ವಿಧಗಳಲ್ಲಿ ಇತರ ದೇಶಗಳೊಂದಿಗೆ ಹೋಲಿಸಿದಾಗ ಈ ದೇಶ ತನ್ನ ಪ್ರಾಬಲ್ಯದ ಬಗ್ಗೆ ಹೇಗೆ ಯೋಚಿಸುತ್ತಿದೆ ಎನ್ನುವುದು ಕಂಡುಬರುತ್ತದೆ. ವಿಶ್ವನಾಯಕನಾಗಲು ಅಮೆರಿಕಾಗೆ ವಿಧಿಸಂಕಲ್ಪ (destiny)ವಿದೆ ಎಂಬ ಕಲ್ಪನೆಯಿಂದ ಕೈಗಾರಿಕಾ ಅಭಿವೃದ್ಧಿಯಲ್ಲಿ, ವಾಣಿಜ್ಯ ಚಟುವಟಿಕೆ, ಕಲೆ ಮತ್ತು ವಿಜ್ಞಾನ ಮತ್ತು ಬೌದ್ಧಿಕ ಸಾಧನೆಗಳಲ್ಲೂ ಸಹ ತಾನೇ ನಾಯಕನೆಂದು ಭಾವಿಸುತ್ತದೆ. ಹಾಗಾಗಿ ಈ ದೃಷ್ಟಿಯ ಪರಿಕಲ್ಪನೆ ತುಂಬಾ ಸಂಕೀರ್ಣವಾಗಿದೆ. ವಿಶ್ವಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದಯಪಾಲಿಸುವುದು ತನ್ನ ಧ್ಯೇಯ ಮತ್ತು ವಿಧಿಯೆಂದು ನಂಬಿರುವ ಅಮೆರಿಕಕ್ಕೆ ಇದು ತನ್ನ ರಾಜಕೀಯ ಸಿದ್ಧಾಂತದ ಮೇಲೆ ಪ್ರಭಾವ ಬೀರುವುದು ಸಹಜ.

ಇದರ ಪರಿಣಾಮಗಳು ಅಮೆರಿಕದ ಮೂಲನಿವಾಸಿಗಳ ಮೇಲೆ ವಿನಾಶಕಾರಿಯಾಗಿದ್ದುದನ್ನು ಕೆಲವು ಅಂಕಿ–ಅಂಶಗಳಿಂದ ಗಮನಿಸಬಹುದು. ಹದಿನೇಳನೇ ಶತಮಾನದ ತಿರುವಿನಲ್ಲಿರುವ ಮೂಲನಿವಾಸಿಗಳ ಸಂಖ್ಯೆ ಹತ್ತಿರ ಹತ್ತಿರ 2.1 ಮಿಲಿಯನ್ ಇದ್ದು ಹತ್ತೊಂಬತ್ತನೇ ಶತಮಾನದ ಅಂತ್ಯದ ವೇಳೆಗೆ, ಅವರ ಜನಸಂಖ್ಯೆಯು ಕೇವಲ 250,000ಕ್ಕೆ ಇಳಿದಿತ್ತು. ಇದಕ್ಕೆ ಕಾರಣ ಹಲವಾರು: ಯೂರೋಪಿನಿಂದ ಬಂದ ಹೊಸ ಸಾಂಕ್ರಾಮಿಕ ರೋಗಗಳು, ಅನಗತ್ಯ ನರಮೇಧ ಮತ್ತು ಹಲವು ಯುದ್ಧಗಳಿಂದ ಅವರ ಜನಸಂಖ್ಯೆ ಕ್ಷೀಣಿಸಿತ್ತು. ಸದ್ಯಕ್ಕೆ ಅಮೆರಿಕದ ಮೂಲನಿವಾಸಿಗಳ ಸಂಖ್ಯೆ ಸುಮಾರು 2.5 ಮಿಲಿಯನ್

ಆಗಿದ್ದು, ಅವರನ್ನು ಕ್ಯಾಲಿಫೋರ್ನಿಯಾ, ಅರಿಜೋನಾ, ಓಕ್ಲಹೋಮ, ಮಾಂಟಾನಾ ಮತ್ತು ಡಕೋಟಾ ರಾಜ್ಯಗಳಲ್ಲಿ ಕಾಣಬಹುದು. ಸ್ಥಳೀಯ ಮೂಲನಿವಾಸಿಗಳಿಗೆ ಅವರದೇ ಆದ ಆಡಳಿತ ಮತ್ತು ನ್ಯಾಯಾಂಗದ ವ್ಯವಸ್ಥೆಯಿದ್ದು, ಅವರು ಮುಖ್ಯ ವ್ಯವಸ್ಥೆಯಲ್ಲಿ ಪಾಲುದಾರರಲ್ಲ. ತಮ್ಮದೇ ನೆಲದಲ್ಲಿ ಪರಕೀಯರಂತೆ ವಾಸಿಸುತ್ತಿದ್ದಾರೆ. ಈ ಮೂಲನಿವಾಸಿಗಳ ಸಾಮಾನ್ಯ ಅವಸ್ಥೆ ಭೀಕರವಾಗಿದೆ; ಹೆಚ್ಚಿನ ನಿರುದ್ಯೋಗ, ಅತಿಯಾದ ಮದ್ಯಪಾನ, ಮಧುಮೇಹ ಮತ್ತು ಆತ್ಮಹತ್ಯೆ ಇತ್ಯಾದಿಗಳು ಅವರನ್ನು ಬಾಧಿಸುತ್ತಿವೆ. ಇವರು ಇಲ್ಲಿನ ಮುಖ್ಯವಾಹಿನಿಯ ಭಾಗವಾಗದೆ ಆಧುನಿಕ ಅಮೆರಿಕನ್ ಸಮಾಜದಲ್ಲಿ ಸಮಾನ ಮತ್ತು ಸುರಕ್ಷಿತ ಸ್ಥಳವನ್ನು ಹೊಂದಲು ತಮ್ಮ ಹೋರಾಟವನ್ನು ಇಂದಿಗೂ ಮುಂದುವರೆಸಿದ್ದಾರೆ.

ಅಮೆರಿಕದ ಈ ಸ್ವಾರ್ಥಪೂರಿತ ಕೃತ್ಯ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗಿ ಉಳಿದಿದೆ. ಸದರಿ ರಾಜಕಾರಣಿಗಳು ಅವರಿಗೆ ನ್ಯಾಯ ಒದಗಿಸಲು ಹೆಣಗಾಡುತ್ತಿದ್ದಾರೆ. 2004ರಲ್ಲಿ ಸೆನೆಟರ್ ಸ್ಯಾಮ್ ಬ್ರೌನ್ ಬ್ಯಾಕ್ ಒಂದು ಗೊತ್ತುವಳಿಯನ್ನು ಮಂಡಿಸಿದರು. ಅದರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದ ಸ್ವಾರ್ಥಪೂರಿತ ನಿಲುವುಗಳಿಂದ ಸ್ಥಳೀಯ ಮೂಲನಿವಾಸಿಗಳಿಗಾದ ಅನ್ಯಾಯಗಳಿಗಾಗಿ ಕ್ಷಮೆಯನ್ನು ಕೇಳಲಾಯಿತು. ಈ ಚರಿತ್ರಾರ್ಹ ಕ್ಷಮಾಕೇಳಿಕೆಯ ಗೊತ್ತುವಳಿಯನ್ನು ಅಧ್ಯಕ್ಷ ಬರಾಕ್ ಒಬಾಮ ಅವರು 2009ರಲ್ಲಿ ಸಹಿ ಹಾಕುವುದರ ಮೂಲಕ ಕಾನೂನನ್ನಾಗಿಸಿದರು.

ಅಮೆರಿಕದ ಅನೇಕ ವಿಚಾರವಾದಿಗಳು ಅಮೆರಿಕದ ಪ್ರಜಾಪ್ರಭುತ್ವದ ಸಂವಿಧಾನಕ್ಕೆ ಸ್ಥಳೀಯ ಮೂಲನಿವಾಸಿಗಳ ಸಮಾಜ ವ್ಯವಸ್ಥೆಯ ಪ್ರಭಾವ ನಿರ್ವಿವಾದವಾದುದೆಂದು ಭಾವಿಸುತ್ತಾರೆ. ವಿಪರ್ಯಾಸವೆಂದರೆ ಇದೇ ಸಂವಿಧಾನವೇ ಅವರ ಅನೇಕ ತೊಂದರೆಗಳಿಗೆ ಕಾರಣವಾಗಿದ್ದುದು! 1988ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್ ಒಂದು ಗೊತ್ತುವಳಿಯನ್ನು ಜಾರಿಗೊಳಿಸಿ, ಅಮೆರಿಕ ಸಂವಿಧಾನಕ್ಕೆ 'ಇರೋಕ್ವೋಯಿ'ಯ (ಸ್ಥಳೀಯ ನಿವಾಸಿಗಳ ಒಂದು ಪಂಗಡ) ಪ್ರಭಾವವನ್ನು ಗುರುತಿಸಿ ಗೌರವಿಸಿತು.

ಸಾರಾಂಶ

ಅಮೆರಿಕಾದ ಪೂರ್ವ ಸಮುದ್ರ ತೀರದ ಹದಿಮೂರು ವಸಾಹತುಗಳಲ್ಲಿ ಕೆಲವು ಯಾತ್ರಿಕರಿಂದ ಆರಂಭವಾದ ಅಮೆರಿಕ ದೇಶದ ಪ್ರಯೋಗ 400 ವರ್ಷಗಳಲ್ಲಿ, 50 ರಾಜ್ಯಗಳ ವಿಶಾಲ ದೇಶವಾಗಿ ಇಂದು ವಿಶ್ವದ ಮಹಾಶಕ್ತಿಯಾಗಿದೆ. ವಿಶ್ವದ ಅನೇಕ ರಾಷ್ಟ್ರಗಳ ಅಸೂಯೆಗೆ ಪಾತ್ರವಾಗಿರುವ ಈ ದೇಶದ ವಿಶಿಷ್ಟವಾದ ಪ್ರಜಾಪ್ರಭುತ್ವವು ಅದರ ಜನಸಂಖ್ಯೆಯ ಒಂದು ಭಾಗಕ್ಕೆ ಮಾತ್ರ ಕಾರ್ಯ ನಿರ್ವಹಿಸುತ್ತದೆ ಎಂದೆನಿಸುತ್ತದೆ. ಅಮೆರಿಕದ ಸಂವಿಧಾನವು ತನ್ನ ಎಲ್ಲ ನಾಗರಿಕರನ್ನು ಸಮಾನವಾಗಿ ಪರಿಗಣಿಸುವ ಉದಾತ್ತ ಉದ್ದೇಶವನ್ನು ಪ್ರತಿಪಾದಿಸುತ್ತದೆಯಾದರೂ ದುರ್ದೈವವಶಾತ್ ಈ ದೇಶದ ಮೂಲನಿವಾಸಿಗಳು ತಮ್ಮದೇ ದೇಶದಲ್ಲಿ ತಮ್ಮ ಪಾತ್ರ ಮತ್ತು ನ್ಯಾಯಕ್ಕಾಗಿ ಹೋರಾಟವನ್ನು ಇನ್ನೂ ನಡೆಸುತ್ತಿದ್ದಾರೆ!

ಈ ದೇಶವು ಯಾವಾಗಲೂ ತನ್ನನ್ನು 'ವಲಸಿಗರ ಭೂಮಿ'ಯೆಂದು ಹೆಮ್ಮೆಯಿಂದ ಕರೆದುಕೊಳ್ಳುತ್ತ ಅವರ ಮೂಲಕ ಇಲ್ಲಿ ಜೀವಂತವಾಗಿರುವ ವಿವಿಧ ಸಂಸ್ಕೃತಿಗಳು ಮತ್ತು ಜನರು ತನ್ನ ಶಕ್ತಿಯೆಂದು ತಿಳಿದಿದೆ. ಅಮೆರಿಕಾದ ಈ ಭದ್ರ ಅಡಿಪಾಯಕ್ಕೆ ಕಾರಣ ವಲಸಿಗರ ಪ್ರತಿಯೊಂದು ಅಲೆಯೂ ಈ ದೇಶಕ್ಕೆ ಬಂದಂತೆ ಅವರು ಇಲ್ಲಿ ತಳ ಊರಲು ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ ಮತ್ತು ಆ ಕಾರಣಕ್ಕಾಗಿ ಅವರು ಅಮೆರಿಕನ್ ಸಮಾಜದಲ್ಲಿ ಉತ್ತಮ ಸ್ಥಾನ ಮತ್ತು ಯಶಸ್ಸನ್ನು ಪಡೆಯುತ್ತಾರೆ. ಹೀಗೆ ವಿಶ್ವದಲ್ಲಿ ಅಮೆರಿಕವು ಹಾಲು-ಜೇನಿನ ನಾಡೆಂದು ಪ್ರಸಿದ್ಧಿಯಾಗಿ ಇಲ್ಲಿ ಕಷ್ಟಪಟ್ಟು ದುಡಿಯುವ ಜನರಿಗೆ ಪ್ರತಿಫಲ ಸಿಗುತ್ತದೆ ಮತ್ತು ಪ್ರತಿ ಪೀಳಿಗೆಯೂ ತನ್ನ ಹಿಂದಿನ ಪೀಳಿಗೆಗಿಂತ ಉತ್ತಮ ಮತ್ತು ದಕ್ಷವಾಗಿದೆಯೆಂಬ ದೃಢ ನಂಬಿಕೆಯಿದೆ.

ಆದರೂ, ಈ ನಂಬಿಕೆಯ ಸೃಷ್ಟಿಯಲ್ಲಿ ಹಿಂದಿನಿಂದಲೂ ಅನೇಕ ನ್ಯೂನತೆಗಳಿವೆ. ನಾವು ಈ ಮೊದಲೇ ನೋಡಿದಂತೆ, ಅಮೆರಿಕದ ಮೂಲ ಆದರ್ಶವು ದೇವತೆಯ ಚಿತ್ತವನ್ನು ಆಧರಿಸಿದೆ ಎಂದು ಸಹ ಹೇಳಲಾಗಿದೆ. ಗುಲಾಮಗಿರಿಯು ಅಮೆರಿಕದ ಮೂಲ ಪಾಪವೆಂದು (original sin) ಪರಿಗಣಿಸಲಾಗಿದೆ. (ಮೂಲಪಾಪದ ಪರಿಕಲ್ಪನೆ ಏನೆಂದರೆ ಮನುಷ್ಯನಿಗೆ ದೇವರನ್ನು ಧಿಕ್ಕರಿಸಿ ಕೆಟ್ಟ ಕೆಲಸಗಳನ್ನು ಮಾಡುವ ಹಂಬಲವಿರುತ್ತದೆ). ಈ ದೇಶದ ಸ್ಥಾಪನೆಯಲ್ಲಿ ಇದೊಂದೇ ಪಾಪವಲ್ಲ; ಮತ್ತೊಂದು ಪಾಪ, ಸ್ಥಳೀಯ ಮೂಲ ಅಮೆರಿಕನ್ನರನ್ನು ನಾಶಮಾಡಲು ಮಾಡಿದ ವ್ಯವಸ್ಥಿತ (ಕು) ಪ್ರಯತ್ನವೆಂದೂ ಸಹ ವಾದಿಸಬಹುದು.

ಇಂದು, ಮೂಲನಿವಾಸಿಗಳು ಈ ದೇಶದಲ್ಲಿ ತಮ್ಮ ಮೂಲಭೂತ ಉಳಿವಿಗಾಗಿ ಹೋರಾಡುತ್ತಿದ್ದಾರೆ. ಬಹುಪಾಲು ಆರ್ಥಿಕ ಸೂಚ್ಯಂಕಗಳ ಪ್ರಕಾರ ಈ ಜನಾಂಗದ ಸ್ಥಿತಿಯು ಹೀನಾಯವಾಗಿದೆ. ಅತಿ ಹೆಚ್ಚಿನ ನಿರುದ್ಯೋಗ, ಅತಿಯಾದ ಮದ್ಯಪಾನ, ಇತ್ಯಾದಿ. ಆದಾಗ್ಯೂ, ಈ ಜನಾಂಗದ ಜನಸಂಖ್ಯೆಯು ವೇಗವಾಗಿ ಬೆಳೆಯುತ್ತಿರುವುದನ್ನೂ ಗಮನಿಸಬಹುದು.

ಅಮೆರಿಕದ ಮೂಲನಿವಾಸಿಗಳ ಸಮುದಾಯಕ್ಕೆ ಸೇರಿದ ಬರಹಗಾರ ಡೇವಿಡ್ ಟ್ರ್ರೋಯರ್ ಅವರು ಒಂದು ಕಡೆ ಹೀಗೆ ಹೇಳುತ್ತಾರೆ "ಬಹುಪಾಲು ಮೂಲನಿವಾಸಿಗಳು ಉತ್ತರ ಅಮೆರಿಕಕ್ಕೆ ಆಗಮಿಸಿದವರ ದೀರ್ಘ ಸರಣಿಯಲ್ಲಿ ತಾವು ಮೊದಲಿಗರೆಂದು ಭಾವಿಸಿಲ್ಲ, ಬದಲಿಗೆ ತಮ್ಮನ್ನು ಇಲ್ಲೇ ಇದ್ದ ಸ್ಥಳೀಯರು ಎಂದೇ ತಿಳಿದಿದ್ದಾರೆ. ಆಧುನಿಕ ವಾಸ್ತವತೆಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ತಮ್ಮ ಬುಡಕಟ್ಟಿನ ಸ್ಥಳೀಯತೆಯ ಮೇಲಿನ ನಂಬಿಕೆ ಅವಶ್ಯವಾಗಿದೆ. 'ಮೂಲನಿವಾಸಿಗಳೂ ಸಹ ಇಲ್ಲಿಗೆ ಬಂದ ವಲಸಿಗರ ಒಂದು ಗುಂಪು ಮಾತ್ರ ಮತ್ತು ಅವರಿಗೆ ಈ ರಾಷ್ಟ್ರದ ಮೇಲೆ ಹೆಚ್ಚಿನ ಅಧಿಕಾರ ಅಥವಾ ನಿಯಂತ್ರಣವಿಲ್ಲ' ಎನ್ನುವುದೊಂದು ತಪ್ಪು ತಿಳಿವಳಿಕೆ. 'ನಾವು ಯಾವಾಗಲೂ ಇಲ್ಲೇ ಇದ್ದೇವೆ ಮತ್ತು ಈ ಸ್ಥಾನದ ಮೇಲೆ ನಮ್ಮ ನಿಯಂತ್ರಣವಿದೆ' ಎಂಬ ಸಾಂಸ್ಕೃತಿಕ ತಿಳುವಳಿಕೆಯನ್ನು ನಮೂದಿಸುವುದರಲ್ಲಿ ವಿಫಲರಾಗಿದ್ದಾರೆ."

ಟ್ರೂಯರ್ ಹೇಳುತ್ತಾರೆ "ನಮ್ಮ ಸಂಸ್ಕೃತಿಗಳು ಸತ್ತಿಲ್ಲ ಮತ್ತು ನಮ್ಮ ನಾಗರಿಕತೆಗಳು ನಾಶವಾಗಿಲ್ಲ." ಮತ್ತೊಂದು ಕಡೆ ಅವರು, "ಈ ಸಮುದಾಯವು ಇತಿಹಾಸವನ್ನು ನಿರ್ಮಿಸಲು ಮತ್ತು ಅದಕ್ಕೆ ಅರ್ಥವನ್ನು ನೀಡಲು ಮತ್ತು ಜೀವನವನ್ನು ರೂಪಿಸಲು ಇನ್ನೂ ಉಳಿದುಕೊಂಡಿದೆ" ಎಂದು ಹೇಳುತ್ತಾರೆ. ಅವರ ಪುಸ್ತಕವು ಅವರೇ ಹೇಳುವಂತೆ "ಇದು ದೇಶದಾದ್ಯಂತ ಇರುವ ಇತರ ಸಮುದಾಯಗಳು ಮತ್ತು ಬುಡಕಟ್ಟು ಜನಾಂಗದವರನ್ನು ಕುರಿತೂ ಆಗಿದೆ. ಏಕೆಂದರೆ ಈ ಜನಾಂಗಗಳು ತಮ್ಮ ಹತ್ಯಾಕಾಂಡಗಳಿಂದ ಬದುಕುಳಿದು ತಮ್ಮದೇ ಆದ ಇತಿಹಾಸಗಳನ್ನು ಮಾಡಿಕೊಂಡಿವೆ ಮತ್ತು ತನ್ಮೂಲಕ ಈ ದೇಶದ ಇತಿಹಾಸವನ್ನು ಪುನರ್ರಚಿಸಿವೆ."

ಕೊನೆಯ ಮಾತು

ಈ ಲೇಖನದಲ್ಲಿರುವ ಅಮೆರಿಕದ ಇತಿಹಾಸವನ್ನು ಕುರಿತ ಮಾಹಿತಿಗಳ ಆಧಾರವು ಪ್ರಮುಖವಾಗಿ, ಡೇವಿಡ್ ಟ್ರೂಯರ್ ಅವರ 'The Heartbreak of Wounded Knee' ಪುಸ್ತಕದಲ್ಲಿ ದೊರಕುತ್ತದೆ. (Wounded Knee ಎಂಬ ಕುಖ್ಯಾತ ಹತ್ಯಾಕಾಂಡದಲ್ಲಿ ಲಕೋಟಾ ಸೂ (Sioux) ಬುಡಕಟ್ಟಿನ 150 ಮೂಲನಿವಾಸಿಗಳು 1890ರಲ್ಲಿ ಅಮೆರಿಕದ ಸೈನ್ಯದಿಂದ ಹತ್ಯೆಗೊಳಗಾದರು. ಮೂಲನಿವಾಸಿಗಳ ಜೀವನದಲ್ಲಿನ ಹೆಸರಿಸದ ಗಡಿನಾಡಿನ ಅಂತ್ಯ ಮತ್ತು ಆಧುನಿಕ ಅಮೆರಿಕದ ಆರಂಭವೆಂದು ಪರಿಗಣಿಸಲಾದ ಈ ಘಟನೆಯನ್ನು ಅಮೆರಿಕದ ಒಂದು ಪ್ರಮುಖ ಘಟ್ಟವೆಂದು ಹೇಳಲಾಗುತ್ತದೆ). ಇತ್ತೀಚಿನ ಈ ಪುಸ್ತಕವು ಹೆಚ್ಚು ವಿಮರ್ಶಾತ್ಮಕ ಮೆಚ್ಚುಗೆಗೆ ಪಾತ್ರವಾಗಿದೆ. ಇದು ಅಮೆರಿಕನ್ ಮೂಲನಿವಾಸಿಗಳ ಸಮಸ್ಯೆಗಳ ಇತಿಹಾಸವಾಗಿದ್ದರೂ ಸಹ 'ಬುಡಕಟ್ಟು ಜನಾಂಗಗಳು ತಮ್ಮ ಸಂಸ್ಕೃತಿಗಳ ಅಸ್ತಿತ್ವ ಮತ್ತು ತಮ್ಮ ಸಂರಕ್ಷಣೆಗಾಗಿ ಮಾಡಿದ ತೀವ್ರವಾದ ಹೋರಾಟಗಳ ಅಭೂತಪೂರ್ವ ಸಂಪನ್ಮೂಲ ಮತ್ತು ಮರುಶೋಧನೆಯ ಕಥೆಯಾಗಿ ಅವರ ಇತಿಹಾಸವನ್ನು ಉನ್ನತಿಗೇರಿಸುತ್ತದೆ.' ಟ್ರೂಯರ್ ಅವರು ಮಿನಿಸೋಟದ ಓಜಿಬ್ವೆ ಬುಡಕಟ್ಟಿನ ಜನಾಂಗಕ್ಕೆ ಸೇರಿದವರು. ಹಲವಾರು ಪುಸ್ತಕಗಳ ಲೇಖಕರಾದ ಅವರು ದಕ್ಷಿಣ ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಕೊನೆಯದಾಗಿ, ಒಬ್ಬ ಅಮೆರಿಕನ್ ಪ್ರಜೆಯಾಗಿ ಮತ್ತು ಅದರ ಇತಿಹಾಸವನ್ನು ಆಸಕ್ತಿಯಿಂದ ಅಭ್ಯಾಸ ಮಾಡಿದ ನನಗೆ ಅನಿಸುವುದೇನೆಂದರೆ ಅಮೆರಿಕದ ಮೂಲನಿವಾಸಿಗಳು ಯಾವ ಅಪರಾಧವಿಲ್ಲದೇ ತಮ್ಮದೇ ನೆಲದಲ್ಲಿ ಉಪೇಕ್ಷೆಗೊಳಗಾಗಿರುವುದಷ್ಟೇ ಅಲ್ಲ, ಅವರ ಪರಂಪರೆ ಮತ್ತು ನೈಜ ಇತಿಹಾಸವನ್ನು ಮರೆಮಾಚಿ ಪ್ರಪಂಚಕ್ಕೆ ಅವರನ್ನು ಕುರಿತಾಗಿ ತಪ್ಪು ಮತ್ತು ತಿರುಚಿದ ಸತ್ಯವನ್ನು ತಿಳಿಸಲಾಗಿದೆ. ಡೇವಿಡ್ ಟ್ರೂಯರ್ ಮತ್ತು ಈ ಪಂಗಡಗಳ ನಾಯಕರು ಈಗ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವುದು ಸ್ವಾಗತಾರ್ಹ. ಇದನ್ನು ನಾವೆಲ್ಲರೂ ಪ್ರೋತ್ಸಾಹಿಸಿ ಬೆಂಬಲಿಸಬೇಕು.

ಆಧಾರ

* The Heartbreak of Wounded Knee, David Truer, Riverhead Books. 2019.

❑

(2)

ನಯಾಗರಾ ಜಲಪಾತದ 'Maid of the Mist' ಮೇಲಿನ ಒಂದು ಐತಿಹ್ಯ ಕತೆ (Legend)

ಆಹಿತಾನಲ (ನಾಗ ಐತಾಳ)

ಲಾಸ್ ಏಂಜಲೀಸ್, ಕ್ಯಾಲಿಫೋರ್ನಿಯಾ

*

ಅಮೆರಿಕದ ಜಾನಪದ (Folklore)

'ಜಾನಪದ'ವೆಂಬ ಶಬ್ದಕ್ಕೆ ಇಂಗ್ಲಿಷ್‌ನಲ್ಲಿ 'Folklore' ಎಂಬ ಸಮಾನಾರ್ಥ ಬರಬಹುದೆಂಬುದು ನನ್ನ ಅನಿಸಿಕೆ. ಈ ನಮ್ಮ ಭಾರತೀಯ 'Folklore'ಗಳು ಹೆಚ್ಚಾಗಿ ಪುರಾಣಕಥೆ ಆಧಾರಿತ, ವ್ಯಾಪಕವಾಗಿ ನಂಬಲಾದ 'myth' ಕತೆಗಳಾಗಿರುವುದನ್ನು ಗಮನಿಸಬೇಕು. ಪುರಾಣಕಥೆಗಳು, ಭಾರತೀಯ ಸಂಸ್ಕೃತಿಯಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿವೆ. ಅವು, 'ದಂತ'ಕತೆ, ಹಾಗೂ ಮಿಥ್ಯಗಳೆಂದು ತಿಳಿದಿದ್ದರೂ, ನಿರ್ದಿಷ್ಟ ಪುರಾವೆಗಳಿಲ್ಲದಿದ್ದರೂ, ನಾವು ಅವನ್ನು ಒಪ್ಪಿಕೊಂಡೇ ಬಂದಿರುತ್ತೇವೆ. ಅವು ನಮ್ಮ ಜನಜೀವನದಲ್ಲಿ ನಂಬುವಂಥ ಕತೆಗಳಾಗಿಯೇ ಬೆರೆತುಹೋಗಿವೆ. ಈ 'Folklore' (ಜಾನಪದ ಕತೆ)ಗಳಿಗೆ ಯಾವುದೇ ಒಬ್ಬನೇ ಕೃತಿಕಾರನಿಲ್ಲ, ಹಲವು ಕೃತಿಕಾರರಿಂದ ಹೆಣೆದವುಗಳಾಗಿರುತ್ತವೆ. ಅವು ಜನರ ಬಾಯಿಂದ ಬಾಯಿಗೆ ಹರಿದು ಬಂದು, ಪ್ರತೀ ಬಾರಿ ಪುನರಾವೃತ್ತಿಯಾದಾಗ ಬೇರೆ-ಬೇರೆ ಅತಿಮಾನುಷ (ಅತೀಂದ್ರಿಯ) ಶಕ್ತಿಗಳನ್ನು ಪಡೆದು ನಮ್ಮ ನಂಬಿಕೆಯನ್ನು ಹೆಚ್ಚಿಸಿ, ನಮಗೆ ರೋಮಾಂಚನವಾಗುವಂಥ ಲಕ್ಷಣಗಳನ್ನು ನೀಡುವ ಗುಣಗಳನ್ನು ಪಡೆಯುತ್ತವೆ. ಇಂತಹ ಕತೆಗಳು 'ದಂತ'ಕತೆಗಳೆಂದು ತಿಳಿದಿದ್ದರೂ, ನಮಗೆ ಪುರಾಣದಲ್ಲಿ ಸಂಪೂರ್ಣ ನಂಬಿಕೆ ಇರುವುದರಿಂದ, ಅವುಗಳಲ್ಲಿ ಚೂರೂ ಅಪನಂಬಿಕೆ ಇಲ್ಲ! ಅವು ಪುರಾಣ ಕತೆಗಳ ಒಂದು ವೈಶಿಷ್ಟ್ಯ! ಸತ್ಯ-ಮಿಥ್ಯಗಳೆರಡನ್ನು ಹೆಣೆದು ಹೊಸೆದ ಕತೆಗಳು 'ಜನಪದ'ಕ್ಕೆ ರೋಮಾಂಚಕಾರೀ ರೂಪವನ್ನು ಕೊಡುವಲ್ಲಿ ಬಹಳ ಯಶಸ್ವಿಯಾಗಿವೆ. ಇಂಥ ಕತೆಗಳು ಭಾರತೀಯ ಜನಪದಕ್ಕೆ ಸೀಮಿತವಾಗಿರದೆ,

ಅಮೆರಿಕದ 'Folklore'ಗಳಲ್ಲೂ ಹರಿದು ಬಂದಿದ್ದು, ಅಂತಹ ಹಲವಾರು ಕತೆಗಳನ್ನು ನಾವು ಸಾಹಿತ್ಯದಲ್ಲಿ ಕಾಣಬಹುದು. ಅಂಥ ಕತೆಯೊಂದನ್ನು ನಿಮ್ಮ ಗಮನಕ್ಕೆ ತರಲು ನಾನಿಲ್ಲಿ ಪ್ರಯತ್ನಿಸುತ್ತಿದ್ದೇನೆ.

ನಯಾಗರಾ ಜಲಪಾತದ 'Maid of the Mist' ಮೇಲಿನ ಒಂದು ಐತಿಹ್ಯ ಕತೆ

ಅಮೆರಿಕದಲ್ಲಿ ತುಂಬಾ ಜನಪ್ರಿಯವಾಗಿರುವ, ಜಗತ್ತಿನ ಅತ್ಯದ್ಭುತ ಪ್ರಾಕೃತಿಕ ಸೌಂದರ್ಯಕ್ಕೆ ಪ್ರಸಿದ್ಧವಾದ ಸ್ಥಳಗಳಲ್ಲಿ ಒಂದಾದ ನಯಾಗರಾ ಫಾಲ್ಸ್ (Niagara Falls)ಗೆ ಭೇಟಿ ಕೊಟ್ಟವರೆಲ್ಲ 'Maid of the Mist' ದೋಣಿಯಲ್ಲಿ ಸವಾರಿ ಮಾಡಿ, ಭೋರ್ಗರೆವ ಫಾಲ್ಸ್‌ನ ತಳದ ಸಮೀಪದವರೆಗೂ ಪಯಣಿಸಿ, ಒಂದು ಬಗೆಯ ಎದೆ ಝುಲ್ಲೆನ್ನುವ ರೋಮಾಂಚನ ಪಡೆಯುವ ವಿಷಯ ಎಲ್ಲರಿಗೂ ತಿಳಿದುದೇ! ಈ 'Maid of the Mist'ನ ಮೇಲೊಂದು ಜನಪದ ಕತೆ ಇರುವುದು ಹೆಚ್ಚಿನವರಿಗೆ ತಿಳಿದಿಲ್ಲ. ಆ ಕತೆಯ ವಿಚಾರವಾಗಿ ನಾನಿಲ್ಲಿ ತಿಳಿಸುವವನಿದ್ದೇನೆ. ಇದು, ತಲ–ತಲಾಂತರದಿಂದ ಬಾಯಿಂದ ಬಾಯಿಗೆ ಹರಿದು ಬಂದ ಅಮೆರಿಕದ ಮೂಲ folkore ಎಂದು ಹೇಳಲಾಗಿದೆ. 2014ರ 'Niagara Falls Reporter'ನಲ್ಲಿ ಇದು ವರದಿಯಾಗಿದೆ. ಈ ಕಥನ, Niagara fallsಗೆ ಒಂದು ಕುತೂಹಲಕಾರಿ ಹಾಗೂ ಅಪೂರ್ವ ಹಿನ್ನೆಲೆಯನ್ನು ಒದಗಿಸಿರುವುದನ್ನು ಗಮನಿಸಬೇಕು. 'Haudenosaunee' ಬುಡಕಟ್ಟಿನವರು ನಂಬಿಕೊಂಡು ಬಂದ ಮೂಲ myth (ದಂತ) ಕಥನ ಹೀಗಿದೆ.

ಇನ್ನೂ ಎಳೆಯ ವಯಸ್ಸಿನ ಒಬ್ಬಳು ವಿಧವೆ, ತನ್ನ ಯುವ ಪತಿಯ ಅಗಲುವಿಕೆಯಿಂದಾಗಿ ಜೀವನದಲ್ಲಿ ಜಿಗುಪ್ಸೆಗೊಂಡು, ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ, ಒಂದು ಕಿರುದೋಣಿಯಲ್ಲಿ (canoe) ನಯಾಗರಾ ನದಿಯಲ್ಲಿ ಹುಟ್ಟು ಹಾಕುತ್ತ ಜಲಪಾತ ಕೆಳಕ್ಕೆ ಧುಮುಕುವ ಸ್ಥಳದ ಕಡೆ ಹೊರಟಳು. ಮೊದಲಿಗೆ ಭಯವಾಗದಿದ್ದರೂ, ಜಲಪಾತ ಕೆಳಕ್ಕೆ ಧುಮುಕುವ ಸ್ಥಳ ಸಮೀಪಿಸುತ್ತಿದ್ದಂತೆ, ಅದರ ಭೋರ್ಗರೆವ ಆರ್ಭಟದ ಶಬ್ದ, ತಾನು ಮುಂದೆ ದೈಹಿಕ ನೋವಿನೊಡನೆ ಎದುರಿಸಬೇಕಾದ ಸಾವನ್ನು ಎಣಿಸಿ, ಅವಳಲ್ಲಿ ಭಯ ಮೂಡಿ ಬಂದು, ಅವಳ ಕೈ ನಡುಗಲು ಪ್ರಾರಂಭವಾಯ್ತು. ಆಗ, ಜಲಪಾತದ ಹಿಂದೆ ನೀರಿನಲ್ಲಿ ಮನೆ ಮಾಡಿದ, ಸಿಡಿಲುದೇವತೆ (God of Thunder) ಹಿನೋವಿನಲ್ಲಿ (Heno) ಅವಳು, ತನ್ನ ಧೈರ್ಯವನ್ನು ಕುಗ್ಗಿಸದೆ, ಸಾವನ್ನಪ್ಪುವ ಹೃದಯದ ಕಠಿಣತೆಯನ್ನು ದಯಪಾಲಿಸುವಂತೆ ಮೊರೆಯಿಟ್ಟಳು.

ನದಿಯ ರಭಸದ ತೀವ್ರತೆ ಹೆಚ್ಚುತ್ತಿದ್ದು, ದೋಣಿ ಜಲಪಾತವನ್ನು ಸಮೀಪಿಸುತ್ತಿದ್ದಂತೆ ಅವಳ ಧೈರ್ಯ ಕುಗ್ಗುತ್ತ ಬಂದು, ತಾನು ಉಪಯೋಗಿಸುತ್ತಿದ್ದ ಕಿರುದೋಣಿಯ ಹುಟ್ಟನ್ನು ಬಿಸುಟಳು. ದೋಣಿ ಜಲಪಾತದ ಪ್ರಪಾತಕ್ಕೆ ಧುಮುಕುತ್ತಿದ್ದಂತೆ, ಮೇಲಿನ ಆಕಾಶ ಮತ್ತು ಕೆಳಗಿನ ಜಲಪಾತ ಒಂದುಗೂಡಿದಂತೆ ಅವಳಿಗೆ ಭಾಸವಾಯ್ತು. ನದಿ

ನೀರಿನ ರಭಸ ಹೆಚ್ಚುತ್ತಿದ್ದು ಆ ರಭಸಕ್ಕೆ ದೋಣಿ ಅತ್ತ –ಇತ್ತ ಹೊರಳುತ್ತಿದ್ದಾಗ, ಅವಳು ಗಾಬರಿಗೊಂಡು, ದೋಣಿಯ ಅಂಚನ್ನು ಧೈರ್ಯಕ್ಕಾಗಿ ಭದ್ರವಾಗಿ ಹಿಡಿದುಕೊಳ್ಳಬೇಕಾಯ್ತು.

ಹಿನೋ ಆ ತರುಣಿಯ ಮೊರೆಯನ್ನು ಕೇಳಿ, ದೋಣಿ ಕೆಳಗೆ ಧುಮುಕುವ ಮುನ್ನ ಅವಳನ್ನು ತನ್ನ ತೆಕ್ಕೆಯಲ್ಲಿ ಹಿಡಿದು, ಜಲಪಾತದ ತಳದಲ್ಲಿರುವ ತನ್ನ ಮನೆಗೆ ಕೊಂಡೊಯ್ದು. ಅಲ್ಲಿ ಅವನೂ ಅವನ ಮಕ್ಕಳೂ ಅವಳ ಶುಶ್ರೂಷೆ ಮಾಡಿ, ಅವಳು ಚೇತರಿಸಿಕೊಳ್ಳುವಂತೆ ಮಾಡಿದರು. ಹಿನೋವಿನ ಮನೆಯಲ್ಲಿ ವಾಸಮಾಡುತ್ತ, ಅಲ್ಲಿ ಅವನ ಕಿರಿಯ ಮಗನ ಮೇಲೆ ಕ್ರಮೇಣ ಆಕೆಗೆ ಪ್ರೇಮ ಅಂಕುರಿಸಿ, ಅದು ಬೆಳೆಯುತ್ತ ಬಂದು, ಕೊನೆಯಲ್ಲಿ ಅವನನ್ನು ಅವಳು ಮದುವೆಯಾದಳು.

ಸಮಯ ಕಳೆದಂತೆ, ಆ ನೂತನ ದಂಪತಿಗಳಿಗೊಬ್ಬ ಮಗ ಹುಟ್ಟಿದ. ಆ ಕುಮಾರ ತನ್ನ ಅಜ್ಜ, God of Thunder - Heno ಹೋದಲ್ಲೆಲ್ಲ ಅವನನ್ನು ಹಿಂಬಾಲಿಸಿ, ಅಜ್ಜನಿಂದ ತಾನೂ God of Thunder ಆಗುವ ವಿದ್ಯಮಾನಗಳನ್ನೆಲ್ಲ ಕಲಿತ. ಆ ತರುಣಿ ಕೆಲಕಾಲ ಹಿನೋವಿನ ಜಲಪಾತದ ತಳದಲ್ಲಿ ತನ್ನ ಕುವರನ ಜೊತೆಯಲ್ಲಿ ಸುಖವಾಗಿ ಬಾಳಿದಳು. ಆದರೂ ತಾನು ಹಿಂದೆ ವಾಸಿಸುತ್ತಿದ್ದ ತನ್ನವರ, ಸಂಗಾತರ ಸ್ಮರಣೆ ಅವಳನ್ನು ಬಾಧಿಸುತ್ತಲೇ ಇದ್ದಿತ್ತು.

ಹೀಗಿರುತ್ತ, ಒಮ್ಮೆ, ನಯಾಗರಾ ನದಿಯಲ್ಲೊಂದು ವಿಷ ಕಾರುವ ದುಷ್ಟ ಹಾವೊಂದು ಕಾಣಿಸಿಕೊಂಡಿತು. ಅಲ್ಲಿನ ಪ್ರಜೆಗಳಿಗೆ ಎಲ್ಲಿಲ್ಲದ ಹಾನಿ ಕೊಡುತ್ತ, ಕೆಲವು ಪ್ರಜೆಗಳನ್ನು ಕೊಲ್ಲುತ್ತಿದ್ದು, ಅವರ ವಂಶವನ್ನೇ ನಾಶ ಮಾಡುವ ಉದ್ದೇಶವಿರುವ ಹಾವಿನ ವಿಷಯವನ್ನು ಹಿನೋ ಅವಳಿಗೆ ತಿಳಿಸಿದಾಗ, ಅವಳು ಗಾಬರಿಗೊಂಡುದಲ್ಲದೆ, ತನ್ನವರನ್ನು ಪುನಃ ನೋಡುವ ಹಂಬಲವನ್ನು ಹಿನೋವಿನಲ್ಲಿ ವ್ಯಕ್ತಪಡಿಸಿದಳು. ಒಂದು ಗಂಟೆಯ ಮಟ್ಟಿಗಾದರೂ ತಾನು ಹಿಂದೆ ವಾಸಿಸುತ್ತಿದ್ದ ಸ್ಥಳಕ್ಕೆ ಹಿಂದಿರುಗಿ, ಅಲ್ಲಿನ ಪ್ರಜೆಗಳಿಗೆ ಹಾವು ಮಾಡುತ್ತಿರುವ ಹಾನಿಯ ಬಗ್ಗೆ ಎಚ್ಚರ ಕೊಟ್ಟು, ಪುನಃ ವಾಪಾಸು ಬರುತ್ತೇನಾಗಿಯೂ, ಅದಕ್ಕಾಗಿ ಹಿನೋವಿನ ಸಹಾಯವನ್ನೂ ಕೋರಿದಳು. ಹಿನೋ ಅದಕ್ಕೊಪ್ಪಿ, ಆ ತರುಣಿಯನ್ನು ಜಲಪಾತದ ತಳದಿಂದ ಮೇಲಕ್ಕೆತ್ತಿ, ಅಲ್ಲಿ ಅವಳ ಹಿಂದಿನ ಸಂಗಾತಿಗಳ ಜೊತೆಗೆ ಅವಳಿದ್ದು, ಅವರಿಗೆ ಎಚ್ಚರ ಕೊಡುವಂತೆ ಸಹಾಯ ಮಾಡಿದ. ಅಲ್ಲಿನ ಪ್ರಜೆಗಳಿಗೆ ಅಲ್ಲಿಂದ ನದಿಯ ಹರಿಯುವಿಕೆಗೆ ವಿರುದ್ಧವಾದ ಇನ್ನೂ ಎತ್ತರದ ಸ್ಥಳಕ್ಕೆ ವಲಸೆ ಹೋಗಲು ಅವಳು ಸಲಹೆಯಿತ್ತಳು. ಪ್ರಜೆಗಳು ಹಾಗೆಯೇ ಮಾಡಿ, ಹಾವು ಮಾಡುವ ಹಾನಿಯಿಂದ ಹಲವರು ತಪ್ಪಿಸಿಕೊಂಡರು. ಹೀಗೆ ಅವಳು ತನ್ನವರನ್ನು ಹಾವಿನ ದುಷ್ಟ ನಡತೆಯಿಂದ ಪಾರುಮಾಡಿದೆನೆಂಬ ತೃಪ್ತಿ ಪಡೆದ ಮೇಲೆ, ಪುನಃ ಅವಳು ಹಿನೋವಿನ ಜೊತೆಗೆ ಅವನ ಮನೆಗೆ ವಾಪಸ್ಸು ಬಂದಳು.

ಆ ತರುಣಿ ಅಲ್ಲಿನ ಪ್ರಜೆಗಳನ್ನು ಎಚ್ಚರಿಸಿದ ವಿಚಾರವನ್ನು ತಿಳಿಯದೇ, ಸ್ವಲ್ಪ ದಿನಗಳ ಮೇಲೆ, ಆ ಹಾವು, ನಯಾಗರಾ ನದಿಗೆ ಅಲ್ಲಿನ ಜನರನ್ನು ಕೊಲ್ಲಲೆಂದು ಬಂದಾಗ, ಅಲ್ಲಿ ಜನರಿಲ್ಲದಿದ್ದುದ್ದನ್ನು ಗಮನಿಸಿ, ಹಲವು ಜನರು ನದಿಯ ಎತ್ತರ

ಭಾಗಕ್ಕೆ ವಲಸೆಗೆ ಹೋದುದನ್ನು ಗಮನಿಸಿ, ನದಿಯ ಹರಿವಿಗೆ ವಿರುದ್ಧ ದಿಕ್ಕಿನಲ್ಲಿ ತನ್ನ ದುಷ್ಟ ಕೆಲಸವನ್ನು ಮುಂದುವರಿಸಲು ಬುಸುಗುಟ್ಟುತ್ತ ಚಲಿಸಿತು. ಆ ವಿಷಸರ್ಪದ ಬುಸುಗುಟ್ಟನ್ನು ಕೇಳಿದ ಹಿನೋ, ಅದರ ಹೀನ ಕಾರ್ಯವನ್ನು ನಿಲ್ಲಿಸಲು, ಹಾವಿನ ಮೇಲೆ ತನ್ನ ಭಯಾನಕ ಮಿಂಚು ಹರಿಸಿ, ಅದನ್ನು ಸಾಯಿಸಿದ.

ಸತ್ತ ಆ ಹಾವಿನ ಶರೀರ ನದಿಯಲ್ಲಿ ತೇಲುತ್ತ–ತೇಲುತ್ತ, ಮೇಲೆ ಪ್ರವಾಹದ ಪ್ರಪಾತಕ್ಕೆ ಎದುರಾಗಿ ಅರ್ಧ ಚಂದ್ರಾಕೃತಿಯಲ್ಲಿ ನಿಂತಿತು. ಪರಿಣಾಮವಾಗಿ, ನದಿಯ ನೀರು ಉಕ್ಕಿ ಬಂದು, ಹಿನೋವಿನ ಮನೆಗೆ ತುಂಬಾ ಹಾನಿಯಾಗುವಂತೆ ಮಾಡಿತು. ಬದಲಾದ ಈ ಪರಿಸ್ಥಿತಿಯಿಂದ ಗಾಬರಿಗೊಂಡ ಹಿನೋ ತನ್ನ ಮನೆಯನ್ನು ಪ್ರವಾಹದಿಂದ ರಕ್ಷಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿ, ಅವನ ಮನೆ ಸಂಪೂರ್ಣ ನಾಶವಾಯ್ತು! ಆಗ ಸಿಡಿಲುದೇವತೆ ಹಿನೋ ತನ್ನ ಮಕ್ಕಳಿಗೆ ತನ್ನೊಡನೆ ಬರಲು ಆದೇಶ ಕೊಟ್ಟು, ಅವನ ಕಿರಿಯ ಮಗ ಮತ್ತು ಅವನ ಮಡದಿ–ಮಕ್ಕಳನ್ನೂ ಜಲಪಾತದ ತಳದಿಂದ ಮೇಲಿನ ಬಾನಿಗೆ ತಂದು, ಅಲ್ಲಿ ಅವರಿಗೊಂದು ಮನೆ ಮಾಡಿ, ಬಾನಿನಿಂದಲೇ ಅವರ ಕೆಳಗಿನ ಭೂಮಿಯ ಜನರ ಚಲನ–ವಲನಗಳನ್ನು ಗಮನಿಸುತ್ತ, ಜಲಪಾತದಿಂದಾಗಿ ಉತ್ಪತ್ತಿಯಾದ ಮಂಜಿನ ತುಂತುರುಗಳ ಮಧ್ಯದಿಂದ ಸಿಡಿಲು ಘರ್ಜನೆ ಮಾಡುವುದರ ಬದಲಾಗಿ, ಮುಗಿಲ ಮಧ್ಯದಿಂದಲೇ ಘರ್ಜನೆ ಮಾಡಲು ಆದೇಶ ನೀಡಿದ. ಆದರೂ, ಅವನ ಘರ್ಜನೆ ಜಲಪಾತದ ರಭಸದ ಪ್ರವಾಹದ ಪರಿಣಾಮವಾಗಿ ನಿರ್ಮಾಣವಾದ ಆವಿರೂಪದ ಮಂಜಿನ (Mist) ಮಧ್ಯದಿಂದಲೂ ಕೇಳಬಹುದು ಎಂಬ ನಂಬಿಕೆ ಇಂದಿಗೂ ಬೆಳೆದುಬಂದಿದೆ. ಅದಕ್ಕಾಗಿಯೇ ಈ ಕತೆಗೆ Maid of the Mist ಎಂಬ ಹೆಸರು ಬಂದಿರಬೇಕು!

ಇದೊಂದು ದಂತಕತೆಯಾದರೂ, ಬುಡಕಟ್ಟಿನವರ ಈ ಕಥೆ ತುಂಬಾ ಸ್ವಾರಸ್ಯಕರವಾಗಿದೆ. ಆದರೆ, ಈ ಕತೆಯಲ್ಲೊಂದು ಗಮನಿಸಬೇಕಾದ ವಿಷಯವೆಂದರೆ, ಜೀವನದಲ್ಲಿ ಜಿಗುಪ್ಸೆಗೊಂಡು, ಆತ್ಮಹತ್ಯೆಗೆ ಹೊರಟ ವಿಧವೆಯ ಹೆಸರು ಕಾಣಿಸದಿದ್ದುದು. ಇದಕ್ಕೇನಾದರೂ ಕಾರಣವಿದೆಯೇ? – ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಆದರೆ, ಮೂಲ ಬುಡಕಟ್ಟಿನಂತೆಯೇ ಇನ್ನೊಂದು ಬುಡಕಟ್ಟು, 'ಇರುಕೋಯಿ'ನ ಕಥನದ ಪ್ರಕಾರ, ಆತ್ಮಹತ್ಯೆಗೆಂದು ಹೊರಟ ಮೂಲ ಸಂತತಿಯ ವಿಧವೆಯ ಹೆಸರು ಲೆಲವಲ (Lelawala) ಎಂದು ತಿಳಿದುಬಂದಿದೆ. ಹಿಂದೆ ತಿಳಿಸಿದಂತೆ, ಜನಪದ ಕತೆಗಳಿಗೆ ಒಬ್ಬನೇ ಅಲ್ಲದೆ ಹಲವಾರು ಕರ್ತೃಗಳಿದ್ದು, ಅಂಥವರ ಬಾಯಿಂದ ಬಾಯಿಗೆ ಕತೆ ವರ್ಗವಾಗುತ್ತಾ ಪ್ರತೀ ಬಾರಿ ಪುನರಾವೃತ್ತಿಯಾದಂತೆ, ಬೇರೆ–ಬೇರೆ ಹೊಸ ವಿಷಯಗಳು ಸೇರಿಕೊಂಡು ಇನ್ನಷ್ಟು ಕುತೂಹಲ ಹೆಚ್ಚಿಸುವಂತೆ ಆಗುತ್ತದೆ. ಈ ಲೆಲವಲಾಳ ಹೆಚ್ಚಿನ ಕತೆಗಳ ವಿವರಗಳು ಹಿಂದೆ ತಿಳಿಸಿದ Haudenosaunee ಬುಡಕಟ್ಟಿನವರು ಬಣ್ಣಿಸಿದ ಕತೆಯೊಡನೆ ಹೋಲಿಸಿದಾಗ, ಹಲವು ಒಡಂಬಡಿಕೆಗಳು ಕಂಡುಬಂದರೂ, ಕೆಲವು ಸಣ್ಣ–ಪುಟ್ಟ ವಿವರಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು. ಲೆಲವಲಾಳ ಅತಿಮಾನುಷ ಸ್ಥಿತಿಯಿಂದಾಗಿ, ಅವಳು

ಸುಲಭವಾಗಿ ತನ್ನ ಹಿಂದಿನ ಸಂಗಾತಿಗಳನ್ನು ಸೇರುವ ಹಾಗಿರಲಿಲ್ಲ. ಆದರೆ, ಒಂದೇ ಬಾರಿ ಅವರನ್ನು ನೋಡಿ, ಅವರಿಗೆ ಎಚ್ಚರ ನೀಡುವ ಅವಕಾಶವನ್ನು ಹಿನೋ ನೀಡಿದ್ದ.

ಇವಿಷ್ಟು ದಂತಕತೆಯ ವಿವರ. 'Maid of the Mist' ದೋಣಿ ಸವಾರಿ, 1846ರಲ್ಲಿ ಪ್ರಾರಂಭವಾಯ್ತು ಎಂದು ತಿಳಿಯಲಾಗಿದೆ. ಮೇಲೆ ಬಣ್ಣಿಸಿದ ದಂತಕತೆ ಈ ಸವಾರಿಗೊಂದು ಕುತೂಹಲಕಾರೀ ಹಿನ್ನೆಲೆ ಕೊಟ್ಟಿದ್ದು, ಪ್ರಾಯಶಃ ಅದನ್ನು ತಮ್ಮ ಪ್ರಯೋಜನಕ್ಕಾಗಿ ಅದರ ಮಾಲೀಕರು ಉಪಯೋಗಿಸಿಕೊಂಡಿರಬೇಕು. ಆದರೆ, ಮುಂದೆ Maid of the Mistನ ಆಡಳಿತೆಯ ಮಾಲೀಕರು ಬೇರೊಂದು ಕತೆಯನ್ನು ಸೃಷ್ಟಿಸಿ, ಅದನ್ನು ಪ್ರಚಾರ ಮಾಡುವ ಪ್ರಯತ್ನ ಮಾಡಿದ್ದರೆಂದೂ ತಿಳಿದುಬಂದಿದೆ. ಒಂದು ನರಬಲಿಯಾಗಿತ್ತು ಎಂಬ ಒಂದು ಸುಳ್ಳು ಚಾರಿತ್ರಿಕ ಘಟನೆಯನ್ನು ಹಬ್ಬಿಸಿದ್ದರು ಎಂದು ಪ್ರತೀತಿ. ಈ ದಂತಕತೆಯನ್ನು ಓದಿದ ಮೇಲೆ ನನಗೆ, ನಮ್ಮ ಭಾರತೀಯ ಪೌರಾಣಿಕ ಕತೆಯೊಂದರ ನೆನಪಾಯ್ತು: ಶ್ರೀಕೃಷ್ಣ ಕಾಳಿಂಗ ಮರ್ದನ ಮಾಡಿದ ಕತೆ ನಮ್ಮ ಪುರಾಣದಲ್ಲಿ ಜನಪ್ರಿಯವಾದ ಕತೆಯಲ್ಲೊಂದು. ಶ್ರೀಕೃಷ್ಣ ಒಬ್ಬ ಪವಾಡಪುರುಷ. 'ಪರಿತ್ರಾಣಾಯ ಸಾಧೂನಾಂ, ವಿನಾಶಾಯ ಚ ದುಷ್ಕೃತಾಂ...' ಎಂಬುದು ಈ ಪವಾಡಪುರುಷನ ಕರ್ತವ್ಯ! ಈ ಕಾಳಿಂಗಸರ್ಪ, ಯಮುನಾ ನದಿಯ ತೀರದ ವೃಂದಾವನಲ್ಲಿ ಮನೆ ಮಾಡಿತ್ತು. ಅಲ್ಲಿಗೆ ಅದನ್ನು ವಿಷ್ಣುದೇವನ ವಾಹನನಾದ ಗರುಡ ಅಟ್ಟಿಸಿದ್ದನೆಂದು ನಂಬಲಾಗಿದೆ. ಗರುಡನೂ ಸರ್ಪಗಳೂ ಬದ್ಧವೈರಿಗಳು ಎಂಬುದು ನಮಗೆಲ್ಲ ತಿಳಿದ ವಿಷಯ.

ಹಿಂದೆ, ಮುನಿಗಳೊಬ್ಬರು ಗರುಡನಿಗೆ ವೃಂದಾವನದಲ್ಲಿ ಸಾವೊದಗುವುದೆಂದು ಶಾಪ ಕೊಟ್ಟಿದ್ದರು. ಈ ವಿಚಾರ ಕಾಳಿಂಗನಿಗೆ ತಿಳಿದಿತ್ತು. ಅದಕ್ಕಾಗಿಯೇ ಅವನು ರಾಮನಕಾ ದ್ವೀಪದಿಂದ ಯಮುನೆಯ ತೀರದ ವೃಂದಾವನಕ್ಕೆ ತನ್ನ ಸಂಸಾರ ಸಮೇತ ಬಂದು, ಅಲ್ಲೇ ಮನೆ ಮಾಡಿ, ಗರುಡನ ಅವಸಾನವನ್ನೇ ವೀಕ್ಷಿಸುವ ಹಂಬಲ ಹೊತ್ತು ಕಾದು ಕುಳಿತಿತ್ತು! ಯಮುನಾತೀರದಲ್ಲಿ ವಾಸ ಮಾಡುತ್ತ, ತನ್ನ ವಿಷವನ್ನು ನದಿಯ ನೀರಿನಲ್ಲಿ ಹರಡಿ, ನಿಷ್ಕಳಂಕ ಜನರ ಸಾವಿಗೆ ಕಾರಣವಾಗಿತ್ತು.

ಕಾಳಿಂಗಮರ್ದನ ಕಥನದ ಹಲವು ರೂಪಾಂತರಗಳು (versions) ಇವೆ. ಪ್ರತೀ ರೂಪಾಂತರಗಳಲ್ಲಿ ಕೆಲವು ಚಿಕ್ಕ-ಪುಟ್ಟ ವಿವರಗಳ ವ್ಯತ್ಯಾಸಗಳು ಕಂಡುಬಂದರೂ, ಮುಖ್ಯ ಸಂದೇಶ ಒಂದೇ ಆಗಿರುತ್ತದೆ.

ಒಮ್ಮೆ, ಶ್ರೀಕೃಷ್ಣ ತನ್ನ ಗೆಳೆಯರೊಡನೆ ಯಮುನಾತೀರದ ವೃಂದಾವನದಲ್ಲಿ ಚೆಂಡಾಟವಾಡುತ್ತಿದ್ದಾಗ, ಚೆಂಡು ಅಕಸ್ಮಾತ್ ಯಮುನೆಯ ನೀರಿಗೆ ಬಿತ್ತು. ಈ ಯಮುನಾ ನದಿಯ ನೀರು ಕಾಳಿಂಗನ ವಿಷದಿಂದಾಗಿ, ಕಲುಷಿತಗೊಂಡು, ಆ ವಿಷ ನೀರನ್ನು ಕಪ್ಪು ಮಾಡಿತ್ತು. ಬಾಲಕ ಕೃಷ್ಣ, ವಿಷಪೂರಿತ ನೀರಲ್ಲಿ ಬಿದ್ದ ಚೆಂಡನ್ನು ವಾಪಸ್ಸು ಪಡೆಯಲೆಂದು ನೀರಿಗೆ ಹಾರಿದ. ಆಗ ಅವನ ಗೆಳೆಯರೂ, ಸುತ್ತು-ಮುತ್ತಲಿನ ಗೋಪರೂ ಅವನಿಗೆ ಎಚ್ಚರ ನೀಡಿದರು. ಆದಾಗ್ಯೂ, ಕೃಷ್ಣ ಅದನ್ನು ಲೆಕ್ಕಿಸದೆ ಚೆಂಡು ಬಿದ್ದ ಕಡೆಗೆ ಧಾವಿಸಿದ. ಕೂಡಲೇ ನೀರಿನಾಳದಲ್ಲಿ ಅವಿತು ಕುಳಿತಿದ್ದ ಕಾಳಿಂಗ, ಮೇಲಕ್ಕೆ ಬಂದು, ತನ್ನ ದೇಹವನ್ನು

ಮುಟ್ಟಿ ಬಾಲಕ ಕೃಷ್ಣನ ಸುತ್ತ ಸುತ್ತಿ, ಅವನು ತಪ್ಪಿಸಿಕೊಳ್ಳಲಾರದಂತೆ ಬಿಗಿದಪ್ಪಿ, ಅವನನ್ನು ನೀರಿನಾಳಕ್ಕೆ ಒಯ್ಯು. ಇದನ್ನು ನೋಡಿ, ದಡದ ಮೇಲಿದ್ದ ಕೃಷ್ಣನ ಸಂಗಾತಿಯರೂ, ಇತರ ಗೋಪರೂ ಹಾಹಾಕಾರ ಮಾಡುತ್ತಿದ್ದರು. ಕೃಷ್ಣನ ಪ್ರಾಣ ಇನ್ನು ಉಳಿಯುವುದಿಲ್ಲ ಎಂಬ ದುಃಖ ಅವರೆಲ್ಲರನ್ನೂ ಬಾಧಿಸತೊಡಗಿತು.

ನೀರಿನಾಳದಲ್ಲಿ ಕಾಳಿಂಗನೊಡನೆ ಹೋರಾಡುತ್ತಿದ್ದ ಕೃಷ್ಣ, ತನ್ನ ದೇಹದಾಕಾರವನ್ನು ಹೆಚ್ಚಿಸಿಕೊಂಡ. ಆದರೂ ಕಾಳಿಂಗ ತನ್ನ ವಿಷಪೂರಿತ ಹಲ್ಲಿಂದ ಕಚ್ಚಲು ಪ್ರಾರಂಭಿಸಿದ. ಆದರೆ, ದೇವಾಂಶಸಂಭೂತ ಕೃಷ್ಣ ಅದರಿಂದ ತಪ್ಪಿಸಿಕೊಂಡು, ಕಾಳಿಂಗನೊಡನೆ ಇನ್ನಷ್ಟು ರಭಸದಿಂದ ಹೋರಾಟ ಮಾಡಲು ಪ್ರಾರಂಭಿಸಿದ. ಹೀಗೆ, ಬಹಳ ಹೊತ್ತು ಕಾದಾಟ ಮುಂದುವರಿದು, ಕೆಲವು ಸಮಯದ ಮೇಲೆ ಕಾಳಿಂಗ ಸುಸ್ತಾದ. ಬಲಯುಕ್ತನಾದ ತನ್ನ ಬಲವನ್ನೂ ಮೀರಿಸಿದ ಆ ಬಾಲಕ ಕೃಷ್ಣ, ತಾನೆಣಿಸಿದಂತೆ ಸಾಮಾನ್ಯ ಬಾಲಕನಲ್ಲ, ಅವನು ವಿಷ್ಣುವಿನ ಅವತಾರ ಎಂಬ ಅರಿವು ಆಗ ಕಾಳಿಂಗನಿಗೆ ಬಂತು. ಆಗ ತನ್ನ ತಪ್ಪನ್ನು ಒಪ್ಪಿ, ಆ ಅವತಾರ ಪುರುಷನಲ್ಲಿ ಕಾಳಿಂಗ ಕ್ಷಮೆ ಕೋರಿದ. ದಯಾಮಯ ಕೃಷ್ಣ, ಕಾಳಿಂಗನನ್ನು ಕ್ಷಮಿಸಿ, ಇನ್ನು ಮುಂದೆ ಜನರನ್ನು ಕಾಡಬಾರದೆಂದು ಆಜ್ಞಾಪಿಸಿ, ಹಾವನ್ನು ನೀರಿನಾಳಕ್ಕೆ ಅಟ್ಟಿಸಿ, ಮುಂದೆ ಮೇಲಕ್ಕೆ ಬಾರದಂತೆ ಕಾಳಿಂಗನಿಂದ ಆಶ್ವಾಸನೆ ಪಡೆದ. ಆದರೆ, ಕೃಷ್ಣ ಆ ದುಷ್ಟ ಕಾಳಿಂಗನನ್ನು ಕೊಂದು, ಜನರನ್ನು ರಕ್ಷಿಸಿದ– ಎಂಬ ರೂಪಾಂತರವೂ ಇದೆ. ಆದರೆ, ಇದರಿಂದ ಸಿಗುವ ಮುಖ್ಯ ಸಂದೇಶವೆಂದರೆ, ಜನರಿಗೆ ಕಾಳಿಂಗನ ಕಾಟ ತಪ್ಪಿದುದು.

ಕೃಷ್ಣ ಕಾಳಿಂಗನ ದುಷ್ಟ ವರ್ತನೆಯನ್ನು ತಪ್ಪಿಸಿದ ಕಥನದ ಹೆಚ್ಚಿನ ವಿವರಗಳನ್ನು, 'ಭಾಗವತ ಪುರಾಣ'ದ ಹದಿನಾರನೆಯ ಅಧ್ಯಾಯದ ಹತ್ತನೆಯ ಸರ್ಗದಲ್ಲಿ ಕಾಣಬಹುದು. ಈ ಕಥನ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಜೀವಂತವಾಗಿ ಉಳಿದಿದೆ. ದಂತಕತೆಯೆಂದು ತಿಳಿದಿದ್ದರೂ, ಪುರಾಣದ ಮೇಲಿನ ಅನನ್ಯ ನಂಬಿಕೆಯಿಂದಾಗಿ ಅದು ನಿಜಕತೆಯೆಂದೇ ನಾವೆಲ್ಲ ಒಪ್ಪಿಕೊಂಡು ಬಂದಿರುತ್ತೇವೆ.

ಸಮಾರೋಪ

ಅದೃಷ್ಟ ಅನ್ವೇಷಣೆಗಾಗಿಯೋ, ಮತ್ತಿನ್ಯಾವ ಕಾರಣಕ್ಕಾಗಿಯೋ, ಕಳೆದ ಶತಮಾನದ 60ರ ದಶಕದಿಂದ ಭಾರತೀಯರು ಅಮೆರಿಕಕ್ಕೆ ವಲಸೆ ಬಂದಿರುವ ವಿಚಾರ ಎಲ್ಲರಿಗೂ ತಿಳಿದುದೇ! ಹಾಗೆ ಬರುತ್ತ, ನಮ್ಮ ಭಾರತೀಯ ಸಂಸ್ಕೃತಿಯನ್ನೂ ನಾವು ಹೊತ್ತುಕೊಂಡೇ ಬಂದಿರುತ್ತೇವೆ. ಇಲ್ಲಿ ಬದುಕು ಮುಂದುವರಿಸುತ್ತ, ಅಮೆರಿಕದ ಸಮಾಜ ಮತ್ತು ಸಂಸ್ಕೃತಿಯೊಂದಿಗೆ ಬೆರೆಯಲು ಪ್ರಯತ್ನಿಸುತ್ತಿದ್ದೇವೆ. ಹಾಗಾಗಿ, ನಮ್ಮ ಸಂಸ್ಕೃತಿ ಮತ್ತು ಅಮೆರಿಕದ ಸಂಸ್ಕೃತಿ ಇವೆರಡರ ಹೋಲಿಕೆಯನ್ನು ನಾವೆಲ್ಲ ತಿಳಿಯುವುದು ಅನಿವಾರ್ಯವಾಗಿದೆ. ಪರಿಣಾಮವಾಗಿ, ಅಮೆರಿಕದ Folklore ಬಗ್ಗೆ ಪರಿಚಯ ಮಾಡಿಕೊಳ್ಳುವ ಅವಕಾಶ ನಮಗೆ ಸಿಕ್ಕಿದೆ. ನಯಾಗರಾ ಫಾಲ್ಸ್‌ನ Maid of the Mist

ಮೇಲಿನ ದಂತಕತೆ ಇದಕ್ಕೊಂದು ಉದಾಹರಣೆ. ಇಂತಹ ಹಲವಾರು ದಂತಕತೆಗಳು ಸಾಹಿತ್ಯದಲ್ಲಿ ದೊರಕುತ್ತವೆ. Princess Scargo, Davy Crocket, Johny Appleseed, Paul Bunyan and Babe the Blue Ox ಮೊದಲಾದುವು ಕೆಲವು ಉದಾಹರಣೆಗಳು. ಸತ್ಯ-ಮಿಥ್ಯಗಳ ಮಿಶ್ರದಿಂದ ಹೊಸೆದು ಬಂದ ಇಂತಹ ಜಾನಪದ ಕತೆಗಳು ಸಾಮಾಜಿಕ ಬದುಕಿನ ಮೇಲೆ ವಿಶಿಷ್ಟ ಪ್ರಭಾವ ಬೀರಿ, ಆಸಕ್ತಿ ಮೂಡಿಸಿವೆ. ಈ ನಿಟ್ಟಿನಲ್ಲಿ ಅಮೆರಿಕದ 'ಕನ್ನಡ ಸಾಹಿತ್ಯ ರಂಗ' ಅಮೆರಿಕದ Folklore ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಅವಕಾಶ ಒದಗಿಸಿಕೊಟ್ಟಿರುವುದು ಸ್ವಾಗತಾರ್ಹ!

ಕೃತಜ್ಞತೆಗಳು

ಅಮೆರಿಕದ ಈ Folkloreಗೆ ನನ್ನ ಗಮನ ಸೆಳೆದು, ಈ ಲೇಖನ ಬರೆಯಲು ಕಾರಣರಾದ ಶ್ರೀಮತಿ ನಳಿನಿ ಮೈಯರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು. ಹಾಗೆಯೇ ಇನ್ನೊಬ್ಬ ಗೆಳೆಯ, ಶ್ರೀನಿವಾಸ ಭಟ್ಟರು ನನಗೆ ಬೇರೆ-ಬೇರೆ ವಿಧದಲ್ಲಿ ಪ್ರೋತ್ಸಾಹ ನೀಡಿದ್ದಾರೆ. ಅವರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು.

❑

3

ಐರೋಪ್ಯ ವಲಸೆಗಾರರ ಬರ್ಬರತೆಗೀಡಾದ ಅಮೆರಿಕದ ಮೂಲ ನಿವಾಸಿಗಳ ನೈಜ ಇತಿಹಾಸ

ಮೂಲ ಇಂಗ್ಲಿಷ್: **ಮಾಧವಿ ರಾಜಗೋಪಾಲ್** ರಿಜ್ಜಿಯೋ, ಫಿಲೆಡೆಲ್ಫಿಯ, ಪೆನ್ಸಿಲ್ವೇನಿಯ
ಕನ್ನಡ ಅನುವಾದ: **ಶ್ರೀಕಾಂತ ಬಾಬು,** ಬ್ರಿಡ್ಜ್ ವಾಟರ್, ನ್ಯೂ ಜೆರ್ಸಿ

*

ಯೂರೋಪಿಯನ್ನರು ಉತ್ತರ ಅಮೆರಿಕಾಕ್ಕೆ ಬರುವ ಮೊದಲು ಮೂಲ ನಿವಾಸಿಗಳ (ಅಮೆರಿಕನ್ ಇಂಡಿಯನ್ನರ) ಜನಸಂಖ್ಯೆ ಸುಮಾರು 100 ಮಿಲಿಯನ್ ಆಗಿತ್ತು. ಸ್ಪೇನ್ ದೇಶದ ಯೋಧರು ತಮ್ಮ ಶಸ್ತ್ರಾಸ್ತ್ರಗಳ ಜೊತೆಗೆ ಹಲವು ರೋಗಗಳನ್ನೂ ಮತ್ತು ಅನೇಕ



ಅಮೆರಿಕಾದಲ್ಲಿ ಮೂಲನಿವಾಸೀ ಪಂಗಡಗಳ ವಾಸ್ತವ್ಯಗಳನ್ನು ತೋರಿಸುವ ಭೂಪಟ

ರೋಗಾಣುಗಳನ್ನು ಉತ್ತರ ಅಮೆರಿಕಕ್ಕೆ ತಂದು ಲಕ್ಷಾಂತರ ಜನರ ಪ್ರಾಣಹರಣ ಮಾಡಿದರು. ಹಾಗಾಗಿ 1492ರಲ್ಲಿ ಕೊಲಂಬಸ್‌ನಿಂದಾದ ಅಮೆರಿಕದ ಅನ್ವೇಷಣೆಯು ಮೂಲ ನಿವಾಸಿಗಳ ಹತ್ಯಾಕಾಂಡಕ್ಕೆ ಕಾರಣವಾಯಿತು.

ಯೂರೋಪಿನ ಯಾತ್ರಿಕರು (Pilgrims) ಉತ್ತರ ಅಮೆರಿಕಾದ ಮ್ಯಾಸಚ್ಯುಸೆಟ್ಸ್‌ಗೆ ಬರುವ ವೇಳೆಗಾಗಲೇ ಮೂಲನಿವಾಸಿಗಳ ಜನಸಂಖ್ಯೆ ರೋಗಗಳಿಂದ ಕ್ಷೀಣಿಸುತ್ತಿತ್ತು. ಖಾಲಿ ಆಗಿರುವ ಅಥವಾ ಇನ್ನೂ ಆಗುತ್ತಿರುವ ಅನೇಕ ಹಳ್ಳಿಗಳನ್ನು ಗಮನಿಸಿದ ಯಾತ್ರಿಕರು ಅವುಗಳನ್ನು ದೇವರೇ ಅವರಿಗೆ ಲೂಟಿ ಮಾಡಲು ದಯಪಾಲಿಸಿದ್ದಾನೆಂದು ಭಾವಿಸಿದರು. ದುರದೃಷ್ಟವಶಾತ್ ಅನೇಕ ಐತಿಹಾಸಿಕ ನಿರೂಪಣೆಗಳಲ್ಲಿ ಮೂಲನಿವಾಸಿಗಳ ಈ ನರಮೇಧಗಳನ್ನು ವಿವರಿಸಿಲ್ಲ. ಉತ್ತರ ಅಮೆರಿಕ ಖಂಡವು ಹಲವಾರು ರಾಷ್ಟ್ರಗಳನ್ನೊಳ-ಗೊಂಡು ಜನಭರಿತವಾಗಿತ್ತು. ಇಷ್ಟೊಂದು ದೊಡ್ಡ ಪ್ರದೇಶದಲ್ಲಿ ಯಾರೂ ಇರಲಿಲ್ಲವೆನ್ನುವ ತಪ್ಪು ಕಲ್ಪನೆ ಅನೇಕರಲ್ಲಿ ಇನ್ನೂ ಇರುವುದು ದುರದೃಷ್ಟಕರವೇ ಸರಿ.

ಕಳೆದ 500 ವರ್ಷಗಳಿಂದ ಮೂಲ ನಿವಾಸಿಗಳು, ಅವರಿರುವ ಪ್ರದೇಶಗಳು, ಅವರ ಭಾಷೆ ಮತ್ತು ಸಂಸ್ಕೃತಿಗಳು ಸತತ ಆಕ್ರಮಣಕ್ಕೆ ಒಳಗಾಗಿವೆ. ಅಮೆರಿಕ ಸರ್ಕಾರದ ಘೋಷಿತ ಗುರಿ ಏನು ಗೊತ್ತೆ? ಈ ಮೂಲನಿವಾಸಿಗಳ ಮಕ್ಕಳನ್ನು ಅವರ ಕುಟುಂಬ, ಭಾಷೆ ಮತ್ತು ಪರಂಪರೆಗಳಿಂದ ದೂರ ಮಾಡಿ ಅವರನ್ನು 'ನಾಗರಿಕ'ರನ್ನಾಗಿಸುವುದು! ಅಮೆರಿಕ ಸರ್ಕಾರದ 'ಪಶ್ಚಿಮ ದಿಕ್ಕಿನ ವಿಸ್ತರಣಾ' ಯೋಜನೆಯ ಏಕೈಕ ಉದ್ದೇಶ, ಮೂಲನಿವಾಸಿಗಳ ನರಮೇಧ ಮತ್ತು ಅವರ ಭೂಮಿಯನ್ನು ಕಸಿದುಕೊಳ್ಳುವ ಪ್ರಯತ್ನವೆಂದೇ ಹೇಳಬಹುದು.

1492ಕ್ಕಿಂತ ಮೊದಲು, ಕ್ರಿಸ್ಟೋಫರ್ ಕೊಲಂಬಸ್ ಕೆರಿಬಿಯನ್ ದ್ವೀಪಕ್ಕೆ ಕಾಲಿಟ್ಟಾಗ, ಉತ್ತರ ಅಮೆರಿಕಾದಲ್ಲಿ ಮಿಲಿಯನ್‌ಗಟ್ಟಲೆ ಮೂಲನಿವಾಸಿಗಳು ವಾಸಿಸುತ್ತಿದ್ದರು. ಭಾರತವನ್ನು ಹುಡುಕಿಕೊಂಡು ಹೊರಟ ಕೊಲಂಬಸ್, ಭಾರತವನ್ನು (ಇಂಡಿಯಾ) ಕಂಡುಕೊಂಡಿದ್ದ-ನೆಂದೇ ನಂಬಿದ್ದನು. ಆದ್ದರಿಂದ ಅವನ ಪಡೆಯವರು ಮೂಲ ನಿವಾಸಿಗಳನ್ನು 'ಇಂಡಿಯನ್ನರು' (Indians) ಎಂದು ಕರೆದರು. ಕೊಲಂಬಸ್ ಮತ್ತು ಅವನ ಸಿಬ್ಬಂದಿಗಳು ತಾವು ಎದುರಿಸಿದ ಮೂಲ ನಿವಾಸಿಗಳಿಗೆ ಸಾಕಷ್ಟು ಹಾನಿಯನ್ನುಂಟು ಮಾಡಿದರು.

ಸ್ಯಾನ್ ಸಾಲ್ವಡೋರ್ ಪ್ರಾಂತ್ಯದ ಸ್ಥಳೀಯ ನಿವಾಸಿಗಳು (ಟೈನೊಗಳು) ತಮ್ಮ ದೇಶದಲ್ಲಿ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಗಳ ಒಂದು ಸಂಕೀರ್ಣ ಸಂಸ್ಕೃತಿಯನ್ನು ಹೊಂದಿದ್ದರು. ಟೈನೊಗಳು ಜಲಸಂಪರ್ಕ ಮತ್ತು ಕೃಷಿಯಲ್ಲಿ ಪರಿಣತರಾಗಿದ್ದರು. ಅವರು ಕವನ, ಕಲೆ ಮತ್ತು ಸಂಗೀತದಲ್ಲಿ ಪರಿಣಿತರಾಗಿದ್ದರು. ಟೈನೊ ಜನರು ಕ್ಯಾರಿಬಿಯನ್ ಪ್ರಾಂತ್ಯದ ಮುಖ್ಯ ನಿವಾಸಿಗಳಾಗಿದ್ದರು. ಆದಾಗ್ಯೂ, ಕೊಲಂಬಸ್ ಟೈನೋಗಳನ್ನು ಅನಾಗರಿಕರೆಂದು ಕರೆದು ಹಲವರನ್ನು ಜೀತದಾಳುಗಳಾಗಿ ಮಾರಾಟ ಮಾಡಲು ಸ್ಪೇನ್‌ಗೆ ರವಾನಿಸಿದನು. 1550ರ ಹೊತ್ತಿಗೆ, ಹೆಚ್ಚಿನ ಟೈನೊಗಳು ಕೊಲಂಬಸ್ ಮತ್ತು ಅವರ ಸಿಬ್ಬಂದಿಗಳು ತಂದುಕೊಟ್ಟ ರೋಗಗಳಿಂದ ನಾಶವಾಗಿದ್ದರು.

ಯೂರೋಪಿಯನ್ನರು 'ನೂತನ ವಿಶ್ವ' ('ನ್ಯೂ ವರ್ಲ್ಡ್') ಕ್ಕೆ ಕಾಲಿಟ್ಟ ದಿನದಿಂದ ಸ್ಥಳೀಯರ ಭೂಮಿಯನ್ನು ಕಸಿದು ಅವರನ್ನು ಪಶ್ಚಿಮದತ್ತ ತಳ್ಳುವ ಪ್ರಕ್ರಿಯೆ 1607ರಲ್ಲಿ ಸ್ಥಾಪನೆಯಾದ ಜೇಮ್ಸ್ ಟೌನ್‌ನ ಇಂಗ್ಲಿಷ್ ವಸಾಹತು ಪ್ರದೇಶದೊಂದಿಗೆ ಪ್ರಾರಂಭವಾಯಿತು. ನಂತರ ಪ್ಲಿಮತ್ ವಸಾಹತು 1620ರಲ್ಲಿ ಸ್ಥಾಪಿಸಲ್ಪಟ್ಟಿತು. ಮ್ಯಾಸಚುಸೆಟ್ಸ್ ಬೇ ಕಾಲೋನಿ ಸ್ಥಾಪನೆಯಾದ ನಂತರ, ಮೇರಿಲ್ಯಾಂಡ್‌ನ ವಸಾಹತು 1632ರಲ್ಲಿ ಸ್ಥಾಪನೆಯಾಯಿತು. ನ್ಯೂ ಯಾರ್ಕ್ ಅನ್ನು 1644ರಲ್ಲಿ ಸ್ಥಾಪಿಸಲಾಯಿತು, ಮತ್ತು ಪೆನ್ಸಿಲ್ವೇನಿಯಾ ವಸಾಹತುವನ್ನು 1680ರಲ್ಲಿ ಸ್ಥಾಪಿಸಲಾಯಿತು.

ಮೊದಲ ಹದಿಮೂರು ಅಮೆರಿಕಾ ವಸಾಹತುಗಳು ಸ್ಥಾಪನೆಯಾಗುವ ಹೊತ್ತಿಗಾಗಲೇ ಮೂಲನಿವಾಸಿಗಳನ್ನು ಬಲಾತ್ಕಾರದಿಂದ ಸ್ಥಳಾಂತರಗೊಳಿಸಲಾಗಿತ್ತು. ಪೆನ್ಸಿಲ್ವೇನಿಯಾದ ಸಂಸ್ಥಾಪಕ ವಿಲಿಯಂ ಪೆನ್ ಮಾತ್ರ ಇದಕ್ಕೆ ಅಪವಾದವೆನ್ನುವಂತೆ ಲೆನ್ನಿ ಲೆನಪಿ ಮತ್ತು ಡೆಲವೇರ್ ಇಂಡಿಯನ್ನರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಗೌರವಿಸಿದ ಕೆಲವೇ ಕೆಲವರಲ್ಲಿ ಒಬ್ಬನಾಗಿದ್ದನು.

ಅಮೆರಿಕನ್ ಕ್ರಾಂತಿಯ ನಂತರ, ಹೊಸದಾಗಿ ರೂಪುಗೊಂಡ ಅಮೆರಿಕ ಸಂಯುಕ್ತ ಸಂಸ್ಥಾನ ಬೆಳೆಯಲು ಪ್ರಾರಂಭಿಸಿತು. ಅಮೆರಿಕನ್ ಸಂಯುಕ್ತ ಸಂಸ್ಥಾನದ ಪಶ್ಚಿಮ ದಿಕ್ಕಿನ ವಿಸ್ತರಣೆ 1803ರಲ್ಲಿ ಲೂಯಿಸಿಯಾನ ಖರೀದಿಯೊಂದಿಗೆ ಪ್ರಾರಂಭವಾಯಿತು. ಅಧ್ಯಕ್ಷ ಥಾಮಸ್ ಜೆಫರ್ಸನ್, ಲೂಯಿಸಿಯಾನ ಪ್ರದೇಶವನ್ನು ಫ್ರಾನ್ಸ್‌ನಿಂದ 15 ಮಿಲಿಯನ್ ಡಾಲರ್‌ಗೆ ಖರೀದಿಸಿದನು. ಆ ಪ್ರದೇಶದ ವಿಸ್ತೀರ್ಣ 828,000 ಚದರ ಮೈಲಿಗಳನ್ನು ಒಳಗೊಂಡಿತ್ತು. ಇದು ಮೂಲತಃ ಯುನೈಟೆಡ್ ಸ್ಟೇಟ್ಸ್‌ನ ಗಾತ್ರವನ್ನು ದ್ವಿಗುಣಗೊಳಿಸಿತು. ನೈಸರ್ಗಿಕ ಸಂಪನ್ಮೂಲಗಳಿಂದ ಸಮೃದ್ಧವಾದ ಈ ಭೂಮಿಯ ಸಂಪಾದನೆಯು ಉಳಿದ ಹೆಚ್ಚುವರಿ ಭೂಮಿಯನ್ನೂ ವಿಸ್ತರಿಸುವ ಯೋಜನೆ ಮಾಡಲು ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಇನ್ನೂ ಹೆಚ್ಚು ಪ್ರಚೋದಿಸಿತು.

1804ರಲ್ಲಿ ಅಧ್ಯಕ್ಷ ಥಾಮಸ್ ಜೆಫರ್ಸನ್, ಮೆರಿವೆದರ್ ಲೂಯಿಸ್ ಅನ್ನು ಪಶ್ಚಿಮದ ಪೆಸಿಫಿಕ್ ಮಹಾಸಾಗರ ಮತ್ತು ಮಿಸಿಸ್ಸಿಪಿ ನದಿಯನ್ನು ಸಂಪರ್ಕಿಸುವ ಜಲಮಾರ್ಗವನ್ನು ಕಂಡುಹಿಡಿಯಲು ನಿಯೋಜಿಸಿದನು. ಮೆರಿವೆದರ್ ಲೂಯಿಸ್ ಗಡಿನಾಡಿನ ವಿಲಿಯಂ ಕ್ಲಾರ್ಕ್ ಎನ್ನುವವನನ್ನು ತನ್ನೊಂದಿಗೆ ಕೆಲಸ ಮಾಡಲು ಕೇಳಿಕೊಂಡನು. ಅವರೊಂದಿಗೆ ಕೆಲಸ ಮಾಡಲು ಸ್ಯಾಕಜೂವಿಯಾ ಎಂಬ ಶೋಶೋನ್ (ಮೂಲನಿವಾಸಿ ಪಂಗಡ) ಮಹಿಳೆ ಸೇರಿಕೊಂಡಳು. ಅವಳು ತನ್ನ ಬೆನ್ನಿನ ಮೇಲೆ ಮಗುವನ್ನು ಕಟ್ಟಿಕೊಂಡು ಅನುವಾದಕಳಾಗಿ ಮತ್ತು ಮಾರ್ಗದರ್ಶಿಯಾಗಿ ಅವರಿಗೆ ಸಹಾಯ ಮಾಡಿದಳು. ಲೂಯಿಸ್ ಮತ್ತು ಕ್ಲಾರ್ಕರ ಈ ದಂಡಯಾತ್ರೆಯು ಪಶ್ಚಿಮ ಕರಾವಳಿಗೆ ಒಂದು ಮಾರ್ಗವನ್ನು ತೆರೆಯಿತು ಮತ್ತು ಈ ಮೂಲಕ ಚಲಿಸುವ ವಸಾಹತುಗಾರರಿಗೆ ಪಶ್ಚಿಮ ಪ್ರದೇಶಗಳು ಲಭ್ಯವಾದವು. 1850ರ ದಶಕದಲ್ಲಿ ಈ ಪ್ರದೇಶಗಳಲ್ಲಿ ಚಿನ್ನವನ್ನು ಕಂಡುಹಿಡಿದಾಗ, ನೆಜ್ ಪರ್ಸೆ ಮತ್ತಿತರ ಮೂಲನಿವಾಸಿ ರಾಷ್ಟ್ರಗಳ ಮೇಲೆ ಪೂರ್ವ ಭಾಗದ ಅಮೆರಿಕನ್ನರ

ಸಾಮೂಹಿಕ ಆಕ್ರಮಣಕ್ಕೆ ಅವಕಾಶ ಒದಗಿತು. 1900ರ ಹೊತ್ತಿಗೆ, ಈ ಎಲ್ಲ ಪ್ರದೇಶಗಳನ್ನು 'ಅಮೆರಿಕದ ಪಶ್ಚಿಮ' (American West) ಎಂದು ಕರೆಯಲಾಯಿತು.

ಈ ಆಕ್ರಮಣ ಮೂಲ ನಿವಾಸಿಗಳ ಮೇಲೆ ವಿನಾಶಕಾರಿ ಪರಿಣಾಮಗಳನ್ನು ಬೀರಿತು. ಆ ಪ್ರದೇಶಗಳೆಂದರೆ, ಕೋಮಾಂಚಿ, ಷೇಯಾನ್, ಕಿಯೋವಾ, ಅರಾಫೋ, ಸೂ ಮತ್ತು ಅಪಾಚಿ (Comanche, the Cheyenne, the Kiowa, the Araphoe, the Sioux, and the Apache). ಮೂಲನಿವಾಸಿಗಳು ಅಪ್ರತಿಮ ಯೋಧರಾಗಿದ್ದು, 1880ರವರೆಗೆ ಆಕ್ರಮಣಕಾರಿಗಳಿಂದ ನಡೆಯುತ್ತಿದ್ದ ಗಡಿನಾಡಿನ ವಿಸ್ತರಣೆಯನ್ನು ಪ್ರತಿರೋಧಿಸಿದರು. ಕೊಮಾಂಚಿ ಬೀಡಿನ ಗಡಿಯಲ್ಲಿ ಯುದ್ಧಕ್ಕೆ ಬಂದ ಸೈನ್ಯವನ್ನು ತಡೆ ಹಿಡಿದರು. ಕೋಮಾಂಚಿಯ ಕೊನೆಯ ಮುಖ್ಯಸ್ಥ ಕ್ವಾನಾ ಪಾರ್ಕರ್ ತನ್ನ ಭೂಮಿಯ ಮೇಲಿನ ಆಕ್ರಮಣಕ್ಕೆ ತೀವ್ರ ಪ್ರತಿರೋಧವನ್ನು ತಂದನು. ಅವನು ಅಂತಿಮವಾಗಿ ಸೋಲನ್ನನುಭವಿಸಿದಾಗ, ಪಶ್ಚಿಮದ ವಿಶಾಲವಾದ ಗಡಿನಾಡು ಪೂರ್ವ ಭಾಗದ ಆಕ್ರಮಣಕಾರರಿಗೆ ನೆಲೆಸಲು ದಕ್ಕಿತು.

ಮೂಲನಿವಾಸಿಗಳ ವಿರುದ್ಧದ ಅತ್ಯಂತ ಬರ್ಬರ ದಾಳಿಯೆಂದರೆ 'ಓಕ್ಲಹೋಮಾದ ಕಣ್ಣೀರಿನ ಜಾಡು (Trail of Tears in Oklahoma).' 1830ರ ದಶಕದಲ್ಲಿ ಆರಂಭವಾದ ಈ ಬರ್ಬರತೆಯಲ್ಲಿ ಅಧ್ಯಕ್ಷ ಆಂಡ್ರ್ಯೂ ಜಾಕ್ಸನ್ ಯುನೈಟೆಡ್ ಸ್ಟೇಟ್ಸ್ ಸುಪ್ರೀಂ ಕೋರ್ಟಿನ 'ಇಂಡಿಯನ್ ರಿಮೂವಲ್ ಆದೇಶ'ದಂತೆ ಚೆರೋಕೀ ಪಂಗಡದ ಸುಮಾರು 60,000 ಮೂಲ ನಿವಾಸಿಗಳನ್ನು ಬಲಾತ್ಕಾರದಿಂದ ಸ್ಥಳಾಂತರಿಸುವಂತೆ ಅಮೆರಿಕದ ಸೈನ್ಯಕ್ಕೆ ಆದೇಶಿಸಿದನು. ಈ ಕಣ್ಣೀರಿನ ಜಾಡಿನಲ್ಲಿ (Trail of Tears * ಟಿಪ್ಪಣಿ ನೋಡಿ) ಸುಮಾರು 3,000 ಜನರು ಸಾವನ್ನಪ್ಪಿದರು. ಮೂಲ ನಿವಾಸಿಗಳ ಮೇಲೆ ನಡೆಸಿದ ಅತಿರೇಕದ ದಾಳಿ ಮತ್ತು ಹತ್ಯೆಗಳಲ್ಲಿ ಸ್ಯಾಂಡ್ ಕ್ರೀಕ್, ವೂಂಡೆಡ್ ನೀ (Sand Creek, Wounded Knee) ಮತ್ತಿತರ ಸ್ಥಳಗಳು ಸೇರಿವೆ.

ಮೂಲ ನಿವಾಸಿಗಳ ಮೇಲೆ ಜರುಗಿದ ಅತ್ಯಾಚಾರಗಳ ಇತಿಹಾಸವನ್ನು ಅಳಿಸಲಾಗುವುದಿಲ್ಲ. ಅಮೆರಿಕ ಸಂಯುಕ್ತ ಸಂಸ್ಥಾನವು ಮೂಲನಿವಾಸಿ ರಾಷ್ಟ್ರಗಳ ಜನಾಂಗಗಳೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ನಿರ್ಲಜ್ಜೆಯಿಂದ ಮುರಿಯುತ್ತಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನವು ಉತ್ತರ ಅಮೆರಿಕದ ಖಂಡದಾದ್ಯಂತ ವಿಸ್ತರಿಸಲು, ಮೂಲನಿವಾಸೀ ಬುಡಕಟ್ಟು ಜನಾಂಗಗಳನ್ನು ತಮ್ಮ ಪೂರ್ವಜರ ತಾಯ್ನಾಡಿನಿಂದ ಅವರ ಅಭೀಷ್ಟೆಗಳಿಗೆ ವಿರುದ್ಧವಾಗಿ, ಬಲವಂತವಾಗಿ ಬೇರ್ಪಡಿಸಿ ಹಿಂಸಾತ್ಮಕವಾಗಿ ಸ್ಥಳಾಂತರಿಸಿತು.

ಅಮೆರಿಕ ಸಂಯುಕ್ತ ಸಂಸ್ಥಾನವು ಮೂಲನಿವಾಸಿಗಳ ಮಕ್ಕಳನ್ನು ಅವರ ಕುಟುಂಬಗಳಿಂದ ಪ್ರತ್ಯೇಕಿಸಿ ಅವರ ಸಂಸ್ಕೃತಿಯೊಂದಿಗಿನ ಸಂಪರ್ಕವನ್ನು ಬೇರ್ಪಡಿಸಲು ಪ್ರಯತ್ನಿಸಿತು. ಅನೇಕ ಮೂಲನಿವಾಸಿ ಮಕ್ಕಳನ್ನು ಅವರ ಕುಟುಂಬಗಳಿಂದ ಬಲವಂತವಾಗಿ ಪ್ರತ್ಯೇಕಿಸಿ ಬೋರ್ಡಿಂಗ್ ಶಾಲೆಗಳಲ್ಲಿ ವಾಸಿಸಲು ಕಳುಹಿಸಲಾಯಿತು. ಸರ್ಕಾರದ ಆದೇಶದಂತೆ

ಈ ಮೂಲನಿವಾಸಿ ಮಕ್ಕಳನ್ನು ನಾಗರಿಕರನ್ನಾಗಿಸುವುದಕ್ಕೆ ಅವರ ಸಂಸ್ಕೃತಿಯಿಂದ ಬೇರ್ಪಡಿಸುವುದು ಅವಶ್ಯಕವೆಂದು ಭಾವಿಸಲಾಗಿತ್ತು. ಈ ಮಕ್ಕಳು ಬೋರ್ಡಿಂಗ್ ಶಾಲೆಗಳಲ್ಲಿ ಅಭ್ಯಾಸ ಮಾಡಲು ತಮ್ಮ ವೇಷ, ಭಾಷೆ ಮತ್ತು ಪರಂಪರೆಗಳನ್ನು ತ್ಯಜಿಸಬೇಕಾಗಿತ್ತು. ಈ ಶಾಲೆಗಳಲ್ಲಿ ಅತ್ಯಂತ ಕ್ರೂರವಾದದ್ದು ಪೆನ್ಸಿಲ್ವೇನಿಯಾದ ಕಾರ್ಲೈಲ್ ಶಾಲೆ. ಅಲ್ಲಿಗೆ ಕಳುಹಿಸಲ್ಪಟ್ಟ ಅನೇಕ ಮಕ್ಕಳು ಮನೆಗೆ ಮತ್ತೆ ಬರಲಿಲ್ಲ. ಅಲ್ಲಿ ಜರುಗಿದ ಹಿಂಸಾತ್ಮಕ ಮತ್ತು ನಿರಾದರಣಾಮಯ ದುಷ್ಕೃತ್ಯಗಳಿಂದ ಆ ಮಕ್ಕಳು ಸಾವನ್ನಪ್ಪಿದರು. ಕಾರ್ಲೈಲ್ ಶಾಲೆ 1879ರಿಂದ 1918ರವರೆಗೆ ಕಾರ್ಯ ನಿರ್ವಹಿಸುತ್ತಿತ್ತು. ಸುಮಾರು ಇನ್ನೂರು ಮಕ್ಕಳು ಅಲ್ಲಿ ಸತ್ತರು. ಅದೇ ರೀತಿ ಇತರ ಬೋರ್ಡಿಂಗ್ ಶಾಲೆಗಳಲ್ಲಿ ಕೂಡ ಅಸಂಖ್ಯಾತ ಮಕ್ಕಳು ಸತ್ತರು.

ಅಮೆರಿಕದ ಮೂಲನಿವಾಸಿಗಳನ್ನು ಕುರಿತಾದ ನಿಜವಾದ ಇತಿಹಾಸವನ್ನು ಅಮೆರಿಕ ಸಂಯುಕ್ತ ಸಂಸ್ಥಾನವೇ ನಿರೂಪಿಸಿರುವ 'ಸ್ವಾತಂತ್ರ್ಯ ಮತ್ತು ನ್ಯಾಯ'ದ ದಾರಿದೀಪದಲ್ಲಿ ಗಮನಿಸಿದಾಗ, ನೈಜ ಇತಿಹಾಸಕ್ಕೂ ಮತ್ತು ಪ್ರಚಲಿತವಿರುವ ಇತಿಹಾಸಕ್ಕೂ ಹೊಂದಾಣಿಕೆ ಮಾಡಲು ಕಷ್ಟವಾಗುತ್ತದೆ. ಪ್ರಜಾಪ್ರಭುತ್ವದ ಪ್ರಯೋಗದಲ್ಲಿ ಅಮೆರಿಕದ ಕಳೆದ ಇನ್ನೂರು ನಲವತ್ತಾನ್ಲ್ಕು ವರ್ಷಗಳಲ್ಲಿ, ಒಂದು ಆಡಳಿತದಿಂದ ಮತ್ತೊಂದು ಆಡಳಿತಕ್ಕೆ ಯಶಸ್ವಿಯಾಗಿ ಮತ್ತು ಶಾಂತಿಯುತವಾಗಿ ಅಧಿಕಾರವು ವರ್ಗಾಯಿಸಲ್ಪಟ್ಟಿದೆ. ಇದೊಂದು ಗಮನಾರ್ಹ ಸಾಧನೆಯೇ ಸರಿ. ಆದರೂ ಸಹ, ಮೂಲನಿವಾಸಿಗಳ ನರಮೇಧದ ಇತಿಹಾಸವನ್ನು ಅಮೆರಿಕನ್ನರು ಗುರುತಿಸಬೇಕು ಮತ್ತು ಒಪ್ಪಿಕೊಳ್ಳಬೇಕು. ಯಾವುದೇ ಸಂಸ್ಕೃತಿಯ ನಿಜವಾದ ಇತಿಹಾಸವು ವ್ಯಾಪಕವಾದ ಮಾನವ ನಡವಳಿಕೆಯನ್ನು ಒಳಗೊಂಡಿರುತ್ತದೆ. ಯಾವುದೇ ದೇಶವಾಗಲಿ, ಅದರ ನೈಜ ಇತಿಹಾಸವನ್ನು ಗುರುತಿಸಲು ಮತ್ತು ಕಲಿಸಲು ಬಯಸಿದರೆ, ಒಳ್ಳೆಯದನ್ನೂ ಮತ್ತು ಕೆಟ್ಟದ್ದನ್ನೂ ಒಪ್ಪಿಕೊಳ್ಳಲು ಸಿದ್ಧವಿರಬೇಕು. ಆದ್ದರಿಂದ 'ಮೊದಲ ಜನ'ರ ಅಂದರೆ ಮೂಲನಿವಾಸಿ (ನೇಟಿವ್ ಅಮೆರಿಕನ್ಸ್) ಜನರ** (ಟಿಪ್ಪಣಿ ನೋಡಿ) ನೈಜ ಇತಿಹಾಸವನ್ನು ನೆನೆಯಬೇಕು ಮತ್ತು ಕಲಿಯಬೇಕು.

ಟಿಪ್ಪಣಿಗಳು

* The Trail of Tears was a series of forced relocations of approximately 60,000 Native Americans in the United States from their ancestral homelands in the Southeastern United States, to areas to the west of the Mississippi River that had been designated as Indian Territory. WIKIPEDIA

PERIOD	:	1831 - 1877
LOCATION	:	SOUTHEASTERN UNITED STATES
PERPETRATOR	:	FEDERAL GOVERNMENT OF THE UNITED STATES
ATTACK TYPE	:	POPULATION TRANSFER

MOTIVE : Acquisition of Native AMERICAN land east of the MISSISSIPPI RIVER

PARTICIPANTS : CHEROKEE, CHICKASAW, MUSCOGEE (CREEK) NATION, MORE

** ಮೂಲನಿವಾಸಿಗಳು, ತಮ್ಮನ್ನು ತಾವು 'ಮೊದಲ ಜನ' ಎಂದು ಕರೆದುಕೊಳ್ಳುತ್ತಿದ್ದರು.

ಆಧಾರ

1. https://www.si.edu/Museums/american-indian-museum
2. https://www.history.com/topics/native-american-history/native-american-cultures
3. http://nativeamericannetroots.net/diary/1497
4. https://en.wikipedia.org/wiki/Carlisle_Indian_Industrial_School
5. HTTPS://WWW.INQUIRER.COM/PHILLY/NEWS/ARMY-BEGINS-UNEARTHING-REMAINS-OF-CHILDREN-KILLED-AT-CARLISLE-INDIAN-SCHOOL-20170808.HTML

❑

4

ಜೋಳದ ಪೂರಿ ಜೇನುತುಪ್ಪ

ಮೈ. ಶ್ರೀ. ನಟರಾಜ
ಪೊಟೋಮೆಕ್, ಮೇರೀಲ್ಯಾಂಡ್

*

'ಲಕ್ರಾಸ್' ಎಂದರೆ ಹಾಕಿ, ಕ್ರಿಕೆಟ್ಟಿನಂತೆ ಒಂದು ಆಟದ ಹೆಸರು ಎಂದು ಮಾತ್ರ ಗೊತ್ತಿತ್ತು, ಆದರೆ ವಿಸ್ಕಾನ್ಸಿನ್ ಪ್ರಾಂತ್ಯದಲ್ಲಿ ಅದೇ ಹೆಸರಿನ ಊರೊಂದಿದೆ ಎಂದು ತಿಳಿದದ್ದು ಇವತ್ತಿನ ಮೀಟಿಂಗಿನಲ್ಲೇ. ಆ ಊರಿನಲ್ಲಿ ಓಬೀರಾಯನ ಕಾಲದ ಒಂದು ಅಣು ಸ್ಥಾವರವಿದೆ. ಅಮೆರಿಕದಲ್ಲಿ ಅಣುಶಕ್ತಿಯಿಂದ ವಿದ್ಯುತ್ತನ್ನು ಉತ್ಪಾದಿಸುವ ಕ್ರಿಯೆ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗ, ಸರ್ಕಾರವೇ ಕಟ್ಟಿಸಿದ್ದ ಒಂದು ಸಣ್ಣ ಪ್ರಮಾಣದ ಸ್ಥಾವರವದು. ಐವತ್ತು ಮೆಗಾವಾಟುಗಳಷ್ಟು ಶಕ್ತಿ ಉತ್ಪಾದಿಸುವ ಪುಟ್ಟ ಸ್ಥಾವರ. ಅದೀಗ ಸರ್ಕಾರದ ಕೈಯಿಂದ ಹಸ್ತಾಂತರಿತವಾಗಿ ಖಾಸಗೀ ಸಂಸ್ಥೆಯೊಂದರ ಆಡಳಿತದಲ್ಲಿತ್ತು. ಈ ಸ್ಥಾವರವನ್ನು ಕಟ್ಟುವಾಗ ಶೀತಲ ಗೋಪುರಕ್ಕೆ (ಕೂಲಿಂಗ್ ಟವರ್) ಬೇಕಾಗುವ ನೀರಿನ ಅನುಕೂಲಕ್ಕಾಗಿ ಮಿಸಿಸಿಪ್ಪಿ ನದಿಯ ದಡದಲ್ಲೇ ಕಟ್ಟಲಾಗಿತ್ತು. ನದಿಯ ಪಕ್ಕವಾದ್ದರಿಂದ ಇಕ್ಕೆಲಗಳಲ್ಲೂ ನೆಲಮಟ್ಟದಿಂದ ಕೆಳಗೆ ಸುಮಾರು 120 ಅಡಿ ಆಳದವರೆಗೂ ಹರಳಿಗೆ ಹರಳು ಅಂಟದ ಉದುರು ಮರಳು ತುಂಬಿಕೊಂಡಿತ್ತು. ಸ್ಥಾವರವನ್ನು ಉದುರು ಮರಳಿನ ಮೇಲೆ ಕಟ್ಟುವುದು ಸಾಧುವಲ್ಲವೆಂದು, 'ಎಚ್' ಆಕಾರದ ಛೇದವುಳ್ಳ ಉಕ್ಕಿನ ಕಂಬಗಳನ್ನು ಗೂಟಗಳಂತೆ ಜಡಿದು ಅಡಿಪಾಯವನ್ನು ತಯಾರಿಸಲಾಗಿತ್ತು. ಗೂಟಗಳ ತಲೆಗಳನ್ನೆಲ್ಲ ಸೇರಿಸಿ ನೆಲದ ಮಟ್ಟದಲ್ಲಿ ಸಿಮೆಂಟ್ ಕಾಂಕ್ರೀಟಿನ ಟೋಪಿಯೊಂದನ್ನು ಹೊದಿಸಿ ಅದರ ಮೇಲೆ ಕಬ್ಬಿಣದ ಸರಳುಗಳ ಹಂದರವನ್ನು ನಿರ್ಮಿಸಿ, ಕಾಂಕ್ರೀಟ್ ತುಂಬಿ ಕಂಬಗಳನ್ನು ನಿರ್ಮಿಸಿದ್ದರು. ಈ ಕಂಬಗಳ ಮೇಲೆ ದುಂಡನೆಯ ಚಂಡಿನಾಕಾರದಲ್ಲಿ ಕಟ್ಟಿದ ಸ್ಥಾವರ ಮೇಲ್ನೋಟಕ್ಕೆ ಒಂದು ನೀರಿನ ಟ್ಯಾಂಕಿನಂತೆ ಕಾಣುತ್ತಿತ್ತು. ಇವೆಲ್ಲ ನನಗೆ ಮೀಟಿಂಗಿನಲ್ಲಿ ಪ್ರಸ್ತುತಪಡಿಸಿದ ಫೋಟೊಗಳು ಮತ್ತು ನೀಲನಕ್ಷೆಗಳಿಂದ ದೊರೆತ ವಿವರಗಳು. ದಶಕಗಳ ಹಿಂದೆ ಕಟ್ಟಲ್ಪಟ್ಟ ಆ ಸ್ಥಾವರ 1980ರ ದಶಕದ ಕಟ್ಟುಪಾಡುಗಳಿಗೆ ಅನುಗುಣವಾಗಿರಲಿಲ್ಲ.

ಮರಳು ಕುಸಿದರೆ, ಸ್ಥಾವರ ಮಿಸಿಸಿಪ್ಪಿಯೊಳಗೆ ಬಿದ್ದು ರಂಪವಾಗಬಹುದಾದ ಅನುಮಾನವಿದ್ದುದರಿಂದ ಸ್ಥಾವರವನ್ನು ಮುಚ್ಚಬಾರದೇಕೆ ಎಂದು ಅಣುಶಕ್ತಿ ನಿಯಂತ್ರಣ ಆಯೋಗದವರು ಸ್ಥಾವರದ ಹಾಲೀ ಯಜಮಾನರಿಗೆ 'ಕಾರಣ ತೋರಿಸಿ' (ಶೋ-ಕಾಸ್) ಫರ್ಮಾನ್ ಹೊರಡಿಸಿದ್ದರು.

ಮರುದಿನವೇ ನಾನು ಶಿಕಾಗೋ ನಗರಕ್ಕೆ ಹಾರಿ ಅಲ್ಲಿ ನನ್ನೊಂದಿಗೆ ಕೆಲಸಮಾಡಲು ನಿಯುಕ್ತನಾಗಿದ್ದ ನಮ್ಮ ಕಂಪನಿಯ ಶಿಕಾಗೋ ಶಾಖೆಯ ಇಂಜಿನಿಯರನನ್ನು ಭೇಟಿ ಮಾಡಿ ಆತನೊಂದಿಗೆ ನನಗೆ ತಿಳಿದ ವಿವರಗಳನ್ನು ಹಂಚಿಕೊಂಡೆ. ರಾತ್ರಿ ಅಲ್ಲೇ ತಂಗಿದ್ದು ಮಾರನೆಯ ಬೆಳಿಗ್ಗೆ ನಾವಿಬ್ಬರೂ ಅಲ್ಲಿಂದ ಸುಮಾರು 250 ಮೈಲಿ ದೂರವಿರುವ ಲಕ್ರಾಸ್ ನಗರಕ್ಕೆ ಹಾರಿದೆವು. ಸರ್ಕಾರದ ಫರ್ಮಾನಿಗೆ ಜವಾಬು ಕೊಡಲು ಬೇಕಾದ ತಯಾರಿಗೆಂದು ನಾವು ನಡೆಸಬೇಕಾದ ಫೀಲ್ಡ್ ಟೆಸ್ಟ್ ಮತ್ತು ಲ್ಯಾಬ್ ಟೆಸ್ಟ್ ಮುಂತಾದ ವಿವರಗಳ ಬಗ್ಗೆ ಸ್ಥಾವರದ ಪದಾಧಿಕಾರಿಗಳೊಂದಿಗೆ ಮೀಟಿಂಗ್ ಮುಗಿಸುವ ಹೊತ್ತಿಗೆ ಸಂಜೆಯಾಗಿತ್ತು. ಲಕ್ರಾಸ್ ನಗರದಲ್ಲಿ ಸಂಜೆಯ ಭೋಜನಕ್ಕೆ ಮುನ್ನ ಅಲ್ಲಿನ ಪ್ರಸಿದ್ಧ ಬೀರ್ ಬ್ರೂವರಿ ನಡೆಸುವ ಒಂದು ಬಾರಿಗೆ ನಮ್ಮನ್ನು ಸ್ಥಾವರದ ಪ್ರಾಜೆಕ್ಟ್ ಮ್ಯಾನೇಜರ್ ಮತ್ತು ಚೀಫ್ ಇಂಜಿನಿಯರ್ ಕರೆದೊಯ್ದರು. ಆ ಬಾರಿನ ಹೆಸರು 'ಹ್ಯಾಬರ್‌ಡ್ಯಾಷೆರಿ' ಎಂದು. ಬೀರ್ ಕುಡಿಯುವ ಬಾರಿಗೆ ಅಂಥಾ ಹೆಸರನ್ನು ನಾನು ಕೇಳಿರಲಿಲ್ಲ. ಅಲ್ಲಿನ ವೈಶಿಷ್ಟ್ಯವೆಂದರೆ ಅವರು ಬ್ರೂ ಮಾಡುವ ಐದಾರು ಬಗೆಯ ಬೀರುಗಳ ಸ್ಯಾಂಪಲ್‌ಗಳನ್ನು ಸಣ್ಣ ಸಣ್ಣ ಬಾಟಲುಗಳಲ್ಲಿ ತಂದಿರಿಸಿ, ಜೊತೆಗೆ ತಿನ್ನಲು ಹುರಿದ ಕಡಲೆಕಾಯಿಯನ್ನು ಸಣ್ಣ ಕುಕ್ಕಿಗಳಲ್ಲಿ ತುಂಬಿಡುವರು. ಬಿಡಿಸಿದ ಕಡಲೆಕಾಯಿ ಸಿಪ್ಪೆಯನ್ನು ನೆಲದ ಮೇಲೆ ಬಿಸಾಡುವುದೇ ಅಲ್ಲಿನ ಪದ್ಧತಿ. ಸುಮಾರು ಒಂದು ಘಂಟೆಯೊಳಗೆ ಬಾರು ತುಂಬಿ ತುಳುಕುತ್ತಿತ್ತು. ಎತ್ತರದ ಸಂಗೀತ, ಜೊತೆಗೆ ನೆಲದ ಮೇಲೆ ಸುಮಾರು ಮೂರಂಗುಲ ಆಳದ ಕಡಲೆಕಾಯಿ ಸಿಪ್ಪೆ, ಅದರ ಮೇಲೆ ಕಾಲಿಟ್ಟು ನಡೆಯುವವರ ಕ್ರಂಚ್ ಕ್ರಂಚ್ ಸದ್ದು. ಸಿಪ್ಪೆಯನ್ನು ಬಾರು ಮುಚ್ಚಿದ ಮೇಲೇ ಗುಡಿಸಿ ಹಾಕುವುದಂತೆ. ಇವೆಲ್ಲ ನನ್ನ ನೆನಪಿನಲ್ಲಿ ಅಚ್ಚಳಿಯದೇ ಉಳಿಯಲು ಕಾರಣ, ಒಬ್ಬ ವಿಶಿಷ್ಟ ವ್ಯಕ್ತಿ. ಅವನ ಉದ್ದನೆಯ ಹೆಸರನ್ನು ನೆನಪಿಟ್ಟುಕೊಳ್ಳುವುದು ಕಷ್ಟ, 'ಸಾಗ್ವಿಲಿ ಸಂಕವಾಖನ್' ಅಂತಲೋ ಏನೋ. ಆದರೆ ನಮ್ಮ ಕ್ಲೈಂಟ್ ಹೇಳಿದ ಪ್ರಕಾರ, (ಅದು ತಪ್ಪೋ ಸರಿಯೋ ದೇವರೇ ಬಲ್ಲ) ಅವನ ಉದ್ದನೇ ಹೆಸರಿನ ಅರ್ಥ 'ಹಾರ್ಸ್ ಫೇಸ್, ಹಿ ರನ್ಸ್ ಫಾಸ್ಟ್' ('ಕುದುರೆ ಮುಖದವನು, ವೇಗವಾಗಿ ಓಡುತ್ತಾನೆ') ಎಂದು ಚೀಫ್ ಇಂಜಿನಿಯರ್ ವಿವರಿಸಿದ. ಆ ಕ್ಷಣದಿಂದ, ನನ್ನ ಮನಸ್ಸಿನಲ್ಲಿ ಅವನು ಎಂದೆಂದಿಗೂ 'ಹಯವದನ' ಎಂಬ ಹೆಸರಿನಿಂದಲೇ ಉಳಿದುಬಿಟ್ಟಿದ್ದಾನೆ!

ಆ ಗಲಾಟೆಯ ನಡುವೆ, ನಮ್ಮ ಮೇಜಿಗೆ ಎರಡು ಮೇಜುಗಳಾಚೆ ನನ್ನೆದುರಿಗೇ ಕುಳಿತಿದ್ದ ವ್ಯಕ್ತಿಯೊಬ್ಬನ ಕಡೆ ಸನ್ನೆ ಮಾಡಿ, ಸ್ಥಾವರದ ಪಿಎಂ ನನಗೆ ಅವನನ್ನು ತೋರಿಸಿ, 'ನೋಡು ಅವನೇ ನಮ್ಮ ಸ್ಥಾವರವನ್ನು ಮುಚ್ಚುವಂತೆ ಮಾಡಲು ಹೊರಟಿರುವ

ಖದೀಮ, ನಿನಗೆ ಅವನ ಪರಿಚಯ ಮುಂದೆ ಆಗೇ ಆಗುತ್ತದೆ, ನಮ್ಮ ಮುಂದಿನ ಸಾರ್ವಜನಿಕ ಸಭೆಯಲ್ಲಿ ಅವನನ್ನು ನೀನು ಎದುರಿಸಬೇಕಾಗುತ್ತದೆ, ಈಗಲಿಂದಲೇ ತಯಾರಾಗು' ಎಂದು ಚೇತಾವನಿ ಕೊಟ್ಟ. ಅವನ ವೇಷ ನನ್ನನ್ನು ಸೆರೆ ಹಿಡಿಯಿತು. ದಪ್ಪ ದಪ್ಪ ಮಣಿಗಳ ಮೂರು ಹಾರಗಳನ್ನು ತೊಟ್ಟಿದ್ದ, ಒಂದಕ್ಕಿಂತ ಮತ್ತೊಂದು ಉದ್ದ. ಬಣ್ಣ ಬಣ್ಣದ ಚೌಕಳಿಗಳ ಶರ್ಟು, ಕತ್ತಿನ ಗುಂಡಿ ಹಾಕಿದ್ದ. ಎಲ್ಲರೂ ಟೈ ಕಟ್ಟಿದರೆ ಆತ ಯಾವುದೋ ಪ್ರಾಣಿಯ, ಕಾಡೆಮ್ಮೆ ಇರಬಹುದು ದಪ್ಪನೆ ಕಪ್ಪು ಚರ್ಮವನ್ನು ಕಡ್ಡಿಗಾತ್ರಕ್ಕೆ ಸೀಳಿ ಚಚ್ಚೌಕ ವೈರಿನಂತೆ ಹದಮಾಡಿ ಹಲವಾರು ತರಹಾವರಿ ಗಂಟುಗಳಿಂದ ಅಲಂಕರಿಸಿ ಮಾಡಿದ ಎರಡೇ ಎಳೆಯ ಟೈ, ಅದನ್ನು ಸೇರಿಸಿ ಜೋಡಿಸಲು ಬೆಳ್ಳಿಯಂಥಾ ಲೋಹದ ಉಂಗುರ, ಅದರ ಮುಂಭಾಗದಲ್ಲಿ ಯಾವುದೋ ದೇವತೆಯಂತೆ ಕಾಣುವ ಚಿತ್ರ. ಉದ್ದನೇ ಕೂದಲನ್ನು ನಮ್ಮ ಹೆಂಗಸರು ಬಾಚಿ ಜಡೆ ಹಾಕುವಂತೆ ಒಳ್ಳೆಯ ಮೂರುಕಾಲಿನ ಜಡೆ ಹಾಕಿದ್ದ. ಹಣೆಯನ್ನು ಮುಚ್ಚುವ ಮಣಿಗಳ ಸರವನ್ನು ಹಿಂದಕ್ಕೆಳೆದು ಕೂದಲಿನ ಮೇಲೆ ಕಟ್ಟಿಕೊಂಡಿದ್ದ. ಹಣೆಪಟ್ಟಿಯ ಸುತ್ತ ಹಕ್ಕಿ ಪುಕ್ಕಗಳನ್ನು ಸಿಕ್ಕಿಸಿಕೊಂಡಿದ್ದ. ಇವನೇನು ಹಯವದನನೋ ಮಣಿವದನನೋ ಎಂದು ಮನಸ್ಸಿನಲ್ಲೇ ಲೆಕ್ಕ ಹಾಕುತ್ತಿದ್ದೆ. ಅಷ್ಟರಲ್ಲೇ ಅವನು ತನ್ನ ಸ್ಥಾನವನ್ನು ಬಿಟ್ಟು, ನಮ್ಮ ಮೇಜಿಗೆ ಬಂದು ಮುಂದೆ ನಿಂತು ಭಾರತೀಯ ಶೈಲಿಯಲ್ಲಿ ಕೈಮುಗಿದ. ಏನು ಮಾಡಬೇಕೆಂದು ತೋಚದೇ ನಾನೂ ಕೈಮುಗಿದೆ. ಸಂಪೂರ್ಣ ಹಳದಿಗಟ್ಟಿದ್ದ ಹಲ್ಲುಗಳನ್ನು ಬಿರಿದು, "ಯು ಆರ್ ದಿ ಟ್ರೂ ಇಂಡಿಯನ್, ದೀಸ್ ಕಚಡ ಗಯ್ಸ್ ಕಾಲ್ಡ್ ಅಸ್ ಇಂಡಿಯನ್ಸ್ ಬೈ ಮಿಸ್ಟೇಕ್" (ನೀನು ನಿಜವಾದ ಇಂಡಿಯನ್, ನಮ್ಮನ್ನು ತಪ್ಪುತಪ್ಪಾಗಿ ಈ 'ಕಚಡ' ಜನರು ಇಂಡಿಯನ್ಸ್ ಎಂದು ಕರೆದರು) ಎನ್ನುತ್ತಾ ಪಿಎಂ ಮತ್ತು ಚೀಫ್ ಇಂಜಿನಿಯರ್ ಕಡೆಗೆ ನೋಡಿ ಕಣ್ಣು ಹೊಡೆದು ಗಹಗಹಿಸಿ ನಕ್ಕ. ಮತ್ತೊಮ್ಮೆ ಅವನ ಹಳದಿ ಹಲ್ಲುಗಳು ಹೊಳೆದವು. ಅವನು ಹೇಳಿದ್ದೇನೋ ಸರಿ, ಆದರೆ 'ಕಚಡ' ಎಂಬ ಅಚ್ಚ ಕನ್ನಡ ಶಬ್ದ ಈ ರೆಡ್ ಇಂಡಿಯನ್ ಬಾಯಲ್ಲಿ? ಆಶ್ಚರ್ಯ! "ಏನೆಂದೆ? 'ಕಚಡ' ಎಂದೆಯಾ? ಅದು ನನ್ನ ಭಾಷೆಯ ಶಬ್ದ" ಎಂದಿದ್ದಕ್ಕೆ, 'ಕಚಡ' ಮೀನ್ಸ್ 'ವೈಟ್ ಮ್ಯಾನ್' ಎಂದು ಮತ್ತೊಮ್ಮೆ ಗಹಗಹಿಸಿದ, ಕನ್ನಡ ಶಬ್ದದ ಅರ್ಥವೂ ಅವನಿಗೆ ಗೊತ್ತಿದೆಯೋ ಎಂಬ ಅನುಮಾನವನ್ನುಂಟುಮಾಡುತ್ತ! ಅಷ್ಟರಲ್ಲೇ ಅವನ ಜೊತೆಯಲ್ಲಿದ್ದವ ನಮ್ಮ ಮೇಜಿನ ಬಳಿ ಬಂದು ಹಯವದನನಿಗೆ ಅವನ ಭಾಷೆಯಲ್ಲಿ ಏನೋ ಹೇಳಿ ಕರೆದೊಯ್ದ. ನಮ್ಮ ಪಿಎಂ ತನ್ನ ವಾಚ್ ನೋಡಿಕೊಂಡು, "ನಡೆಯಿರಿ, ನಮ್ಮ ರಿಸರ್ವೇಶನ್ ಎಂಟು ಗಂಟೆಗಿದೆ, ರೆಸ್ಟುರಾಂಟ್ ಇಲ್ಲಿಂದ ದೂರವೇನಿಲ್ಲ" ಎನ್ನುತ್ತ ನಮ್ಮನ್ನು ಹೊರಡಿಸಿದ.

ಮರುದಿನ ಬೆಳಿಗ್ಗೆ ನಾನು ನಮ್ಮೂರಿಗೆ ಹಿಂದಿರುಗಿ ನನ್ನ ಬಾಸ್ ಜೊತೆ ಮಾತಾಡಿ ಲಕ್ರಾಸ್ ಸ್ಥಾವರದ ಬಗ್ಗೆ ವಿವರಗಳನ್ನು ಕೊಟ್ಟೆ. ಅಣುಶಕ್ತಿ ನಿಯಂತ್ರಣ ಆಯೋಗದ ತಾಂತ್ರಿಕ ವರ್ಗ ಮತ್ತು ಅವರ ಸಲಹೆಗಾರರಾಗಿ ಬರುವ ತಂತ್ರಜ್ಞರೊಂದಿಗೆ ನಡೆಯುವ ಚರ್ಚೆಗೆ ತಯಾರಿ ಮಾಡಿಕೊಳ್ಳುವ ಜವಾಬ್ದಾರಿಯ ವಿಷಯದಲ್ಲಿ ಬಾಸ್ ನನಗೆ ಹಲವು

ಮಾಹಿತಿಗಳನ್ನು ಕೊಟ್ಟು, ನ್ಯುಕ್ಲಿಯರ್ ಲೈಸೆನ್ಸಿಂಗ್ ಸಮಿತಿಯ ಹಿಯರಿಂಗಿಗೆ ಸಂಬಂಧಪಟ್ಟಂತೆ ಏನೇನು ತಯಾರಿ ನಡೆಸಬೇಕೆಂದು ವಿವರಿಸಿದರು. ನನಗೆ ಸಲಹೆಗಾರರಾಗಿರಲು ಒಬ್ಬ ವಕೀಲ ಮತ್ತು ಇತರ ತಾಂತ್ರಿಕ ತಜ್ಞರನ್ನು ಹೆಸರಿಸಿ ಅವರ ಸಂಪರ್ಕದ ವಿವರಗಳನ್ನೂ ಒದಗಿಸಿದರು. ಮುಂದಿನ ಒಂದೆರಡು ತಿಂಗಳು ನಿರಂತರವಾಗಿ ನನ್ನ ತಯಾರಿ ಸಾಗಿತು. ನಮ್ಮ ಕಂಪನಿಯ ಶಿಕಾಗೋ ಶಾಖೆಯ ನನ್ನ ಸಹೋದ್ಯೋಗಿ – ಅದೇ ನನ್ನೊಡನೆ ಲಕ್ರಾಸ್ ಸ್ಥಾವರಕ್ಕೆ ಭೇಟಿ ಕೊಟ್ಟಿದ್ದವನು, ಆತ ಆಗಲೆ ಸ್ಥಾವರದ ಸುತ್ತಮುತ್ತ ನಡೆಸಬೇಕಿದ್ದ ಫೀಲ್ಡ್ ಟೆಸ್ಟ್ ಮತ್ತು ಅಲ್ಲಿಂದ ತೆಗೆದುಕೊಂಡ ಸ್ಯಾಂಪಲ್ಗಳ ಲ್ಯಾಬ್ ಟೆಸ್ಟ್ ಎಲ್ಲವನ್ನೂ ಮಾಡಿ ಮುಗಿಸಿ ನನಗೆ ಫಲಿತಾಂಶಗಳನ್ನು ಒದಗಿಸಿದ್ದ. ಸ್ಥಾವರದ ತಳಪಾಯದ ಇಂದಿನ ಪರಿಸ್ಥಿತಿ ಹೇಗಿದೆ, ಭೂಮಿಗೆ ಜಡಿದ ತಳಪಾಯದ ಗೂಟಗಳು ಒಳ್ಳೆಯ ಸ್ಥಿತಿಯಲ್ಲಿವೆಯೇ?, ಗೂಟಗಳ ಸುತ್ತಮುತ್ತ ಇರುವ ಮರಳಿನ ಸಾಂದ್ರತೆ ಏನು?, ಸ್ಥಾವರ ಕುಸಿಯುವುದೇ, ಇದ್ದಲ್ಲೇ ಗಟ್ಟಿಯಾಗಿ ನಿಲ್ಲುವುದೇ?, ಎಲ್ಲಕ್ಕಿಂತ ಮುಖ್ಯವಾಗಿ ಮಿಸಿಸಿಪ್ಪಿ ನದಿಯಲ್ಲಿ ನೆರೆ ಬಂದು ನೀರಿನ ಮಟ್ಟ ಇದ್ದಕ್ಕಿದ್ದಂತೆ ಉಕ್ಕಿ ಸ್ಥಾವರವನ್ನು ಹೊತ್ತ ಕಂಬಗಳು ಮುಳುಗಡೆಯಾಗುವವೇ?, ಭೂಕಂಪವಾದರೆ ಇಡೀ ಸ್ಥಾವರ ನಡುಗಿ ಕುಸಿದು ನೀರಿಗೆ ಬೀಳುವುದೇ?, ಇವೇ ಮುಂತಾದ ಪ್ರಶ್ನೆಗಳಿಗೆ ತಾಂತ್ರಿಕ ವಿಶ್ಲೇಷಣೆಗಳೊಂದಿಗೆ ಉತ್ತರಗಳನ್ನು ತಯಾರಿಸಿ ಪವರ್ ಪಾಯಿಂಟ್ ಪ್ರೆಸೆಂಟೇಶನ್ ತಯಾರು ಮಾಡಿಕೊಂಡೆ. ನಮ್ಮ ಕಂಪನಿಯ ವಕೀಲ, ಕಾನೂನು ಏನು ಹೇಳುತ್ತದೆ, ಕಾನೂನು ರೀತ್ಯಾ ಸರಕಾರಕ್ಕೆ ಸ್ಥಾವರವನ್ನು ಮುಚ್ಚಲು ಅವಕಾಶವಿದೆಯೇ, ನನ್ನ ವಾದದ ಸರಣಿ ಹೇಗಿರಬೇಕು ಮುಂತಾಗಿ ತಯಾರಿ ಕೊಟ್ಟ. "ಇದೊಂದು ಕೋರ್ಟ್ ಕೇಸ್ ಇದ್ದ ಹಾಗೆ, ನೀನು ಒಬ್ಬ ಸಾಕ್ಷಿ ಇದ್ದಂತೆ, ನಮ್ಮ ವಾದಗಳನ್ನು ಭದ್ರಪಡಿಸಲು ನಾನೂ ನಿನ್ನನ್ನು ಪ್ರಶ್ನಿಸುತ್ತೇನೆ. ಅಣು ಶಕ್ತಿ ನಿಯಂತ್ರಣ ಆಯೋಗದ ತಜ್ಞರು ಮತ್ತು ಸಲಹೆಗಾರರ ಸಹಾಯದೊಂದಿಗೆ ಆಯೋಗದ ವಕೀಲರು ನಿನ್ನನ್ನು ಪ್ರಶ್ನಿಸುತ್ತಾರೆ. ಪರ ವಿರೋಧ ವಾದಗಳ ನಂತರ ಲೈಸೆನ್ಸಿಂಗ್ ಸಮಿತಿಯವರು ಏನಾದರೂ ಪ್ರಶ್ನೆಗಳಿದ್ದರೆ ಎರಡೂ ಪಕ್ಷದವರನ್ನು ಕೇಳಿ ಅನುಮಾನಗಳನ್ನು ಪರಿಹರಿಸಿಕೊಂಡ ನಂತರವೇ ತೀರ್ಮಾನಕ್ಕೆ ಬರುವುದು" ಮುಂತಾಗಿ ವಿವರಿಸಿದ. ಪ್ರವಾಹ, ಭೂಕಂಪ, ಬಿರುಗಾಳಿ ಮುಂತಾದ ಪ್ರಕೃತಿಯ ಪ್ರಕೋಪದಿಂದ ಉಂಟಾಗುವ ವಿನಾಶಕಾರೀ ಶಕ್ತಿಗಳಿಂದ ಸ್ಥಾವರ ಸುರಕ್ಷಿತವಾಗಿರುವುದರ ಬಗ್ಗೆ ನನ್ನ ತಾಂತ್ರಿಕ ವಾದಗಳು ತರ್ಕಬದ್ಧವಾಗಿರಬೇಕು, ತಜ್ಞರು ಕೇಳಬಹುದಾದ ಪ್ರಶ್ನೆಗಳಿಗೆ ಆಧಾರಸಹಿತ ಸಮಾಧಾನ ಒದಗಿಸಬೇಕು. ಬಾಸ್ ಜೊತೆಗೆ ಹಲವು ಬಾರಿ ನನ್ನ ಪ್ರೆಸೆಂಟೇಶನ್ ಮಾಡಿ, ಹಿರಿಯರು ಸೂಚಿಸಿದ ಎಲ್ಲ ಸಲಹೆಗಳನ್ನೂ ಅಳವಡಿಸಿ ನನ್ನ ವಾದವನ್ನು ಸಿದ್ಧಪಡಿಸಿಕೊಂಡು ಬಾಸ್ ಜೊತೆ ಶಿಕಾಗೋಗೆ ಹಾರಿದ್ದಾಯಿತು. ಅಲ್ಲಿ ಮತ್ತೊಮ್ಮೆ ಶಿಕಾಗೋ ಶಾಖೆಯ ಸಹೋದ್ಯೋಗಿ ಮತ್ತು ಮರಳಿನ ಸ್ಯಾಂಪಲ್‌ಗಳನ್ನು ಪರೀಕ್ಷೆಗೆ ಒಡ್ಡಿದ್ದ ತಜ್ಞ, ಎಲ್ಲರೊಡನೆ ಚರ್ಚೆ ನಡೆಸಿ ಅದೇ ಸಂಜೆ ಲಕ್ರಾಸ್ ನಗರಕ್ಕೆ ಹಾರಿದೆವು.

ಲಕ್ರಾಸ್ ನಗರದ ಸಭಾಭವನವೊಂದರಲ್ಲಿ ಸಾರ್ವಜನಿಕ ಸಭೆ ಏರ್ಪಾಡಾಗಿತ್ತು. ಒಮ್ಮೆ ಕಣ್ಣು ಹಾಯಿಸಿದೆ, ಸಭೆಯಲ್ಲಿ ನೂರಕ್ಕೆ ಕಮ್ಮಿಯಿಲ್ಲದಷ್ಟು ಊರ ಜನ ಜಮಾಯಿಸಿದ್ದರು. ವೃತ್ತ ಪತ್ರಿಕೆಯವರು, ದೂರದರ್ಶನದವರು ಹಾಜರಿದ್ದರು. ಅಣು ಸ್ಥಾವರ ಗಟ್ಟಿಯಾಗಿರುವುದೇ, ಅದು ಕುಸಿದರೆ ಲಕ್ರಾಸ್ ನಗರದ ಪಾಡೇನು ಎಂಬ ಚಿಂತೆಯಿಂದ ಬಂದವರು ಕೆಲವರಾದರೆ, ಸ್ಥಾವರದ ಒಡೆಯರ ಶತ್ರುಪಕ್ಷದವರು ಒಂದಿಷ್ಟು ಜನ ಬಂದಿದ್ದಾರೆಂದು ತಿಳಿಯಿತು. ಈಗಿನ ಒಡೆಯರು ರಿಪಬ್ಲಿಕನ್ ಪಕ್ಷದವರೆಂದೂ ಇವರ ಪ್ರಭಾವ ಊರಿನಲ್ಲಿ ಅತಿಯಾಗಿದೆಯೆಂದೂ ಅವರನ್ನು ಮಟ್ಟಹಾಕಲು ಅವಕಾಶ ಹುಡುಕುತ್ತಿದ್ದ ಡೆಮೋಕ್ರ್ಯಾಟರಿಗೆ ಇದೊಂದು ಸದವಕಾಶವಾಗಿತ್ತೆಂದೂ, ಬೇಕೆಂತಲೆ ಸಭೆಯಲ್ಲಿ ತರಲೆ ಎಬ್ಬಿಸಬೇಕೆಂದೇ ಅವರು ಬಂದಿದ್ದರೆಂಬ ವಿಷಯ ತಿಳಿದಾಗ ನನಗೆ ಕೊಂಚ ಗಾಬರಿಯಾಯಿತು. ಇದೇನು ತಾಂತ್ರಿಕ ಸಂವಾದವೋ ರಾಜಕೀಯದ ದೊಂಬರಾಟವೋ ಎಂದು ಮನಸ್ಸಿನಲ್ಲಿ ಅಳುಕು ಶುರುವಾಯಿತು. ನನ್ನ ಮಂಡನೆಯ ತಾಂತ್ರಿಕ ತಳಪಾಯವನ್ನು ಪರೀಕ್ಷಿಸಲು ಬಂದಿದ್ದ ಅಣುಶಕ್ತಿ ನಿಯಂತ್ರಣ ಆಯೋಗದ ಸದಸ್ಯರು ಮತ್ತು ಅವರಿಗೆ ಸಲಹೆಗಾರರಾಗಿದ್ದ ತಾಂತ್ರಿಕ ತಜ್ಞರೂ ನನಗೆ ಪರಿಚಿತರೇ ಆಗಿದ್ದರು. ಹಲವು ತಾಂತ್ರಿಕ ಸಭೆಗಳಲ್ಲಿ, ಸಮ್ಮೇಳನಗಳಲ್ಲಿ ಅವರೊಂದಿಗೆ ಭುಜಗಳನ್ನು ಉಜ್ಜುವ ಸಂದರ್ಭಗಳು ಹಿಂದೆ ಒದಗಿದ್ದವು; ಅವರ ಪ್ರಶ್ನೆಗಳನ್ನು ನಿಭಾಯಿಸಬಲ್ಲೆನೆಂಬ ಆತ್ಮವಿಶ್ವಾಸ ನನಗಿತ್ತು.

ತಾಂತ್ರಿಕ ಸಭೆ ಶುರುವಾಯಿತು. ಒಂದು ಕಡೆ ಸ್ಥಾವರದ ಅಧಿಕಾರಿಗಳು, ಅವರ ಹಿಂಬದಿಯಲ್ಲಿ ನಾನು, ಮತ್ತೊಂದು ಬದಿಯಲ್ಲಿ ಅಣುಶಕ್ತಿ ಆಯೋಗದ ಲೈಸೆನ್ಸಿಂಗ್ ಹಿಯರಿಂಗ್ ಸಮಿತಿಯ ಮೂವರು ಸದಸ್ಯರು, ಅವರ ಹಿಂದೆ ಆಯೋಗದ ತಾಂತ್ರಿಕ ಸಿಬ್ಬಂದಿ ಮತ್ತು ಅವರ ಸಲಹೆಗಾರರು. ಎರಡೂ ಬದಿಯಲ್ಲಿ ಪೋಡಿಯಂ, ಎಲ್ಲರ ಹಿಂದೆ ದೊಡ್ಡ ತೆರೆ, ಮುಂದೆ ಮಧ್ಯದಲ್ಲಿ ಸ್ಲೈಡ್ ಪ್ರೊಜೆಕ್ಟರ್, ಪವರ್ ಪಾಯಿಂಟ್ ಪ್ರೆಸೆಂಟೇಶನ್ನಿಗೆ ಬೇಕಾದ ಅನುಕೂಲಗಳು ಸಿದ್ಧವಾಗಿದ್ದವು.

ಸರಿ, ಸಭೆ ಪ್ರಾರಂಭವಾಯಿತು. ಎಲ್ಲ ಪಾರ್ಟಿಗಳ ಕಡೆಯಿಂದ ಪ್ರತಿನಿಧಿಗಳು ಪೀಠಿಕಾರೂಪದಲ್ಲಿ ಹಲವು ಸಾಂಪ್ರದಾಯಿಕ ಮಾತುಗಳನ್ನಾಡಿದರು. ಎಲ್ಲರಿಗಿಂತ ಮೊದಲ ಮಂಡನೆ ಯಾರದ್ದು? ನಮ್ಮ ಹಯವದನರಾಯನ ಭಾಷಣ. ಅಲ್ಲಿಯವರೆಗೂ ನಾನು ಗಮನಿಸಿಯೇ ಇರಲಿಲ್ಲ. ಅದೇ ಬಣ್ಣಬಣ್ಣದ ಚೌಕಳಿಗಳ ಶರಟು, ಅದೇ ಕಾಡೆಮ್ಮೆ ಚರ್ಮದ ಟೈ. ಮಣಿಗಳ ಮೂರೆಳೆ ಕಂಠಹಾರ, ಹಣೆಯ ತುಂಬ ಸುತ್ತಿದ್ದ ಗಾಜಿನ ಮಣಿಗಳ ಹಾರ. ಮೈಕ್ರೋಫೋನ್ ಕೈಗೆತ್ತಿಕೊಂಡು ಕಣ್ಮುಚ್ಚಿ ನೆಲದ ಮೇಲೆ ಚಕ್ಕಳಮಕ್ಕಳ ಹಾಕಿ ಕುಳಿತುಬಿಟ್ಟ. ಬಾಯಿಂದ ಏನೇನೋ ಸದ್ದುಗಳನ್ನು ಮಾಡಿದ, ಮಧ್ಯೆಮಧ್ಯೆ ಹೇ–ಹೋ, ಹೋ–ಹ್ಯೆ, ಹಂ–ಹಃ ದಂತಹ ಮಂತ್ರಗಳನ್ನು ಉಚ್ಚರಿಸುತ್ತ, ಇದ್ದಕ್ಕಿದ್ದಂತೆ ಮಂದ್ರದಿಂದ ತಾರಕಕ್ಕೆ ಧ್ವನಿ ಏರಿಸುತ್ತ ಕುಳಿತಲ್ಲೇ ತೊಡೆಗಳನ್ನು ಕುಣಿಸುತ್ತ ಸುಮಾರು ಐದು ನಿಮಿಷ ಪ್ರಾರ್ಥನಾ ರೂಪದಲ್ಲಿ ಮೂಲನಿವಾಸಿಗಳ ಭಾಷೆಯಲ್ಲಿ ಸಮುದ್ರ, ನದಿ, ಬೆಟ್ಟ, ಮರ

ಆಕಾಶಗಳನ್ನು ಸ್ತುತಿಸಿ ಎದ್ದು ನಿಂತ. "ಪ್ರಿಯರೆ, ನಿಮಗೆಲ್ಲ ತಿಳಿದಿರುವಂತೆ, ಸುಮಾರು ಐವತ್ತು ಸಾವಿರ ವರ್ಷಗಳಿಂದ ಅಮೆರಿಕದ ಎಲ್ಲಾ ಭಾಗಗಳಲ್ಲೂ ಸುಖ ಶಾಂತಿಯಿಂದ ವಾಸಿಸುತ್ತಿದ್ದ ನಮ್ಮ ಜನ್ಮಭೂಮಿಯನ್ನು ಹಠಾತ್ತನೆ ಆಕ್ರಮಿಸಿದ 'ಕಚಡ' ಜನರು ನಮ್ಮ ಒಂದೊಂದೇ ಬುಡಕಟ್ಟಿನ ಜನರನ್ನು ನಿರ್ನಾಮ ಮಾಡಿದ ಚರಿತ್ರೆ ನಿಮ್ಮಲ್ಲಿ ಅನೇಕರಿಗೆ ಗೊತ್ತಿದೆಯೋ ಇಲ್ಲವೋ. ಹೊರಗಿಂದ ಬಂದ ಕಚಡ ಜನರನ್ನು ನಾವು ಅತಿಥಿಗಳೆಂದು ಆದರಿಸಿದೆವು, ಶಾಂತಿಯಿಂದ ಸಹಬಾಳ್ವೆ ನಡೆಸಲಿ ಎಂದು ಅವರೊಡನೆ ಸಹಕರಿಸಿದೆವು. ಆದರೆ ನಮಗೆ ಅವರು ಕೊಟ್ಟ ಪ್ರತಿಫಲವೇನು? ಒಂದೊಂದೇ ಬುಡಕಟ್ಟನ್ನು ಚಿತ್ರಹಿಂಸೆಗೆ ಗುರಿಪಡಿಸಿ ನಾಶ ಮಾಡಿದರು. ನಮ್ಮಲ್ಲಿಲ್ಲದ ರೋಗಗಳನ್ನು ಹರಡಿ ನಮ್ಮನ್ನು ಕೊಂದರು. ನಮ್ಮ ಮಕ್ಕಳನ್ನು ತಂದೆತಾಯಿಗಳಿಂದ ಬೇರ್ಪಡಿಸಿ ಕದ್ದೊಯ್ದರು. ನಮ್ಮ ವೇಷಭೂಷಣಗಳಿಂದ ಮಕ್ಕಳನ್ನು ವಂಚಿಸಿದರು. ಉದ್ದನೆಯ ಕೇಶರಾಶಿಯನ್ನು ಕತ್ತರಿಸಿ ತಮ್ಮನ್ನು ಅನುಕರಿಸುವಂತೆ ಮಾಡಿದರು. ..."

ಅವನ ಭಾಷಣ ಸಾಗುತ್ತಲೇ ಇತ್ತು, ನಿರ್ವಾಹಕ ಬಂದು ಅವನಿಗೆ ಒಂದು ಚೀಟಿ ಕೊಟ್ಟು ಹೋದ. ಅದನ್ನು ಓದದೇ ಅವನು ಪಕ್ಕಕ್ಕಿಟ್ಟು ಮುಂದುವರೆಸಿದ. "ನಮ್ಮ ಮಕ್ಕಳನ್ನು ಬೋರ್ಡಿಂಗ್ ಶಾಲೆಗಳಲ್ಲಿ ಸೇರಿಸಿ, ನಮ್ಮ ಭಾಷೆಯಲ್ಲಿ ಮಾತಾಡದಂತೆ ನಿರ್ಬಂಧ ಹಾಕಿದರು. ನಮ್ಮ ಆಹಾರವನ್ನು ತಿನ್ನದಂತೆ ಕಟ್ಟುಪಾಡುಗಳನ್ನು ವಿಧಿಸಿದರು. 'ನಿಮ್ಮನ್ನು ನಿಮ್ಮ ತಂದೆತಾಯಿಗಳು ಪ್ರೀತಿಯಿಂದ ಸಾಕುವ ಬದಲು, ಶಿಸ್ತಿನ ಹೆಸರಿನಲ್ಲಿ ನಿಮ್ಮನ್ನು ಕಠಿಣ ಶಿಕ್ಷೆಗಳಿಗೆ ಗುರಿಪಡಿಸಿ, ಹೊತ್ತುಹೊತ್ತಿಗೆ ಊಟ ಬಟ್ಟೆಗಳನ್ನು ಒದಗಿಸದೆ, ವಿದ್ಯಾಭ್ಯಾಸವನ್ನು ಮಾಡಿಸದೇ, ಬೀದಿ ಅಲೆಯುವಂತೆ ಮಾಡಿ ಕೊನೆಗೆ ಸಂಪೂರ್ಣವಾಗಿ ಕೈಬಿಟ್ಟಿದ್ದರು. ಆಗ ನೀವೆಲ್ಲ ಕುಡಿದು, ಮಾದಕವಸ್ತುಗಳನ್ನು ಸೇವಿಸಿ ಕಾಡಿನ ಮೂಲೆಗಳಲ್ಲಿ ಬಿದ್ದುಕೊಂಡಿದ್ದನ್ನು ಗಮನಿಸಿದ ಸರ್ಕಾರ ನಿಮ್ಮನ್ನು ವಶಕ್ಕೆ ತೆಗೆದುಕೊಂಡಿತು. ನಿಮ್ಮಂಥ ಅನಾಥರಿಗೆ, ಅಸಂಸ್ಕೃತರಿಗೆ, ಅನಾಗರಿಕರಿಗೆ, ಹೊಸ ಭಾಷೆ, ಹೊಸ ಉಡುಪು, ಹೊಸ ಸಂಸ್ಕೃತಿ, ಹೊಸ ನಾಗರಿಕತೆ ಕೊಡುತ್ತೇವೆ' ಎಂದು ಹೇಳಿ, ಎಲ್ಲ ಮಕ್ಕಳಿಗೂ ಹೊಸ ಹೆಸರುಗಳನ್ನು ಕೊಟ್ಟರು. ನಮ್ಮ ಸಂಸ್ಕೃತಿಯನ್ನು ನಾವೇ ದ್ವೇಷಿಸುವಂತೆ ಮಾಡಿದರು, ಈ ಕಚಡ ಜನ. ನನ್ನ ಅಜ್ಜ ಮತ್ತು ಅಪ್ಪ ಎಲ್ಲರು ಹೀಗೆ ತಮ್ಮ ಧರ್ಮವನ್ನು ತ್ಯಜಿಸುವಂತೆ ಮಾಡಿದ ಈ ಕಚಡ ಜನರ ಬಗ್ಗೆ ಏನೆಂದು ಹೇಳಲಿ?" ಆ ಸಮಯಕ್ಕೆ ನಿರ್ವಾಹಕನಿಂದ ಮತ್ತೊಂದು ಚೀಟಿ ಬಂದಾಗ, "ಹೆಚ್ಚಿನ ಸಮಯ ಇಲ್ಲವಾಗಿ, ಇವತ್ತಿನ ವಿಷಯಕ್ಕೆ ಬರುತ್ತೇನೆ" ಎನ್ನುತ್ತ ಪವರ್ ಪಾಯಿಂಟ್ ಶುರು ಮಾಡಿದನು.

ಹಯವದನ ಮಾಡಿದ ಭಾಷಣದ ಮೊದಲ ಭಾಗದಿಂದ ನಾನು ಕಂಗಾಲಾಗಿದ್ದೆ. ಮೂಲನಿವಾಸಿಗಳ ಬಗ್ಗೆ ಏನೇನೂ ತಿಳಿಯದಿದ್ದ ನನಗೆ ತುಂಬಾ ಅಚ್ಚರಿಯಾಯಿತು. ಇದ್ದಕ್ಕಿದ್ದಂತೆ ನಮ್ಮ ನಾಡಿನ ಬುಡಕಟ್ಟು ಜನಾಂಗಗಳ ನೆನಪಾಯಿತು. ಕಾಕನಕೋಟೆ, ಚಾಮರಾಜನಗರ ಮುಂತಾದ ಊರುಗಳ ಬಳಿ ನಾನು ನೋಡಿದ್ದ ಕೆಲವು ಆದಿವಾಸಿಗಳ ಚಿತ್ರಗಳು ಕಣ್ಮುಂದೆ ಸುಳಿದು ಹೋದವು. ಹಕ್ಕಿ ಶಾಸ್ತ್ರ ಹೇಳುವವರ ನೆನಪಾಯಿತು.

ಗಿಣಿಯೊಂದು ಹಲವು ಮಾಸಲು ಕಾಗದಗಳಲ್ಲಿ ಒಂದನ್ನು ತನ್ನ ಕೊಕ್ಕಿನಿಂದ ಆರಿಸಿಕೊಂಡು ಶಾಸ್ತ್ರದವನ ಕೈಗಿತ್ತು ತನ್ನ ಪಂಜರಕ್ಕೆ ಹಿಂದಿರುಗುವ ದೃಶ್ಯ. ತಲೆಯ ಮೇಲೆ ಕುಕ್ಕೆಯಲ್ಲಿ ಮಾರಮ್ಮನ ವಿಗ್ರಹ ಇಟ್ಟುಕೊಂಡು ಹಣೆತುಂಬ ಕುಂಕುಮವಿಟ್ಟ ಪೂಜಾರಿಯೊಬ್ಬ ಬಂದು ನಿಂತ. "ಮಾರ್ಯಮ್ಮ ಬಂದವಳೇ, ಪಿಲ್ಲ, ಪಿಲ್ಲ, ಪಿಲ್ಲ...ಊರು ಮಾರಿ ಕೇರಿ ಮಾರಿ ಅನಿಷ್ಟವನ್ನು ಕಳೆವ ಮಾರಿ...ಮಾರ್ಯಮ್ಮ ಬಂದವಳೇ ಪಿಲ್ಲ ಪಿಲ್ಲ ಪಿಲ್ಲ" ಎಂದು ಕುಣಿಯುತ್ತ ತಮಟೆಯ ಮೇಲೆ 'ಡ್ರೊಯ್ಯ-ಡ್ರೊಯ್ಯ, ಟರ್ರ-ಟರ್ರ' ಎಂದು ಬಡಿಯುವ ದೃಶ್ಯ ಕಣ್ಮುಂದೆ ಬಂದಿತು. "ಶುಭವಾಗುತೈತೆ, ಶುಭವಾಗುತೈತೆ" ಎಂದು ಬೆಳ್ಳಂಬೆಳಗ್ಗೆ 'ಕುಟಕುಟಾಕುಟ್ ಕಿಟಕಿಟಾಕಿಟ್ ಬುಡುಬುಡುಬುಡುಬುಡು' ಎಂದು ಪುಟ್ಟ ಡಮರುವಿನ ಮೇಲೆ ನರ್ತಿಸುವ ದಾರದ ಗಂಟುಗಳ ದೃಶ್ಯ, ಬುಡುಬುಡಿಕೆ ಬಾರಿಸುತ್ತ ಬರುತ್ತಿದ್ದ ವಿಭೂತಿ ತುಂಬಿದ ನಗುಮೊಗದವನ ನೆನಪಾಯ್ತು. ಕುಳ್ಳ ಜಾತಿಯ ಬಸವನ ಜೊತೆಗೆ ಕುಳ್ಳ ಜಾತಿಯ ಹಸು, ಬಸವನ ಪುಟ್ಟ ಪುಟ್ಟ ಕೊಂಬುಗಳಿಗೆ ಬೆಳ್ಳಿ ಟೋಪಿ, ಅದರ ತುದಿಯಲ್ಲಿ ಚೆಂಡು ಹೂವು, ಬಸವನ ಕತ್ತಿನ ತುಂಬ ಬಣಬಣ್ಣದ ಹಾರಗಳು, ಮೈಮೇಲೆ ಕೆಂಪಂಚಿನ ಮಗುಟ; ಹಸುವಿನ ಪುಟ್ಟಪುಟ್ಟ ಕೊಂಬಿಗೆ ಚಿನ್ನದಂತೆ ಹೊಳೆಯುವ ಹಿತ್ತಾಳೆ ಟೋಪಿ, ಕೊಂಬಿನ ತುದಿಗಳನ್ನು ಸೇರಿಸಿ ಕಟ್ಟಿದ್ದ ಚೆಂಡು ಹೂವಿನ ಹಾರ, ಹಸುವಿನ ಮೈಮೇಲೆ ಹಸಿರಂಚಿನ ಹಳದಿ ಸೀರೆ, ಓಲಗ ಡೋಲಿಗೆ ಅವಳಿಗಳಂತೆ ಕಾಣುವ ಇಬ್ಬರು ಹುಡುಗರು ಬಿಳಿ ಕಚ್ಚೆಪಂಚೆ ರುಮಾಲು ಹಣೆಗೆ ಮೂರು ನಾಮ ಬೇರೆ! ಮನೆಮನೆಯ ಮುಂದೆ ಸೀತಾ ಕಲ್ಯಾಣ! ಬಸವನ್ನ 'ಸೀತೆನ್ ಮದುವೆಯಾಗ್ತಿಯೇನ್ ರಾಮ' ಅಂದ್ರೆ 'ಹ್ಞೂ' ಎನ್ನುವಂತೆ ತಲೆಯನ್ನು ಮೇಲಿಂದ ಕೆಳಕ್ಕೆ ತೂಗುವುದು. ಹಸುವನ್ನು ಕೇಳಿದರೆ 'ಮದುವ್ಯಾಗ್ತೀಯೇನ್ ಸೀತಮ್ಮ ರಾಮನ?' ಅಂದ್ರೆ ನಾಚಿ ಕೊರಳನ್ನು ತಗ್ಗಿಸಿ ಮೌನ! ಮರುಕ್ಷಣದಲ್ಲೆ, ಒಬ್ಬ ಪೊಲೀಸ್ ಅಧಿಕಾರಿ ಇವರನ್ನೆಲ್ಲ ಸಾಲಾಗಿ ನಿಲ್ಲಿಸುತ್ತಿದ್ದಾನೆ, ಒಬ್ಬೊಬ್ಬರನ್ನೇ ಎತ್ತಿ ಪೊಲೀಸ್ ವಾಹನದಲ್ಲಿ ತುಂಬಿಕೊಂಡು ಹಾರಿಸಿಕೊಂಡು ಹೋಗುತ್ತಿದ್ದಾನೆ. ಇಂಥ ಬುಡಕಟ್ಟಿನ ಜನರನ್ನೆಲ್ಲ ಪೇಟೆಗೆ ಕರೆದುಕೊಂಡು ಹೋಗಿ, ಕ್ಷೌರ ಮಾಡಿಸಿ, ಪ್ಯಾಂಟು ಶರಟುಗಳನ್ನು ತೊಡಿಸಿ, ಹಣೆಯ ಕುಂಕುಮ, ವಿಭೂತಿಗಳನ್ನಳಿಸಿ, ಛಟೀರ್ ಎಂದು ಸದ್ದು ಮಾಡುವ ಹೊಸೆದ ಹಗ್ಗದ ಚಾಟಿಯನ್ನು ಕಿತ್ತೆಸೆದು ಅವರೆಲ್ಲರಿಗೂ ಇಂಗ್ಲಿಷ್ ಕಲಿಸಲು ಹೊರಟಿದ್ದಾನೆ. ಎಂಥ ವಿಚಿತ್ರ ದೃಶ್ಯವನ್ನು ನೋಡುತ್ತಿದ್ದೇನೆ? ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಮನಸ್ಸಿನಲ್ಲಿ ಸುಳಿದು ಮೈ ಬೆವರಲಾರಂಭಿಸಿದೆ. ಮುಂದಿನ ಭಾಷಣಗಳು ಊರ ಪ್ರಜೆಗಳ ಕಡೆಯಿಂದ ಹಲವರು ಮಾಡುತ್ತಿದ್ದರು. ನನಗೆ ಜೊಂಪು ಹತ್ತಿ ಎರಡು ಕ್ಷಣ ನಿದ್ದೆ ಹತ್ತಿರಬಹುದೇ? ನಾನು ಎದ್ದು ಹೋಗಿ ಜಲಬಾಧೆ ತೀರಿಸಿಕೊಂಡು ಒಂದಷ್ಟು ಗಾಳಿ ಕುಡಿದು ನೀರಿನ ಬಾಟಲಿಯೊಂದಿಗೆ ಹಿಂದಿರುಗಿದೆ.

ಊರಿನ ಜನರಲ್ಲಿ ಎಲ್ಲಿಲ್ಲದ ಭಯವನ್ನು ಸ್ಥಾವರದ ವಿರೋಧಿಗಳು ಹುಟ್ಟುಹಾಕಿದ್ದರು. ಸುಮಾರು ನಲವತ್ತು ವರ್ಷಗಳಿಂದ ಯಾವೊಂದು ತೊಂದರೆಯೂ ಇಲ್ಲದೇ ಆ ಪುಟ್ಟ ಸ್ಥಾವರ ಸುತ್ತಮುತ್ತಲ ಪ್ರದೇಶಕ್ಕೆ ವಿದ್ಯುತ್ತನ್ನು ಒದಗಿಸುತ್ತಾ ಬಂದಿತ್ತು. ಜನರ ಮನಸ್ಸಿನಲ್ಲಿದ್ದ

ಭಯವನ್ನು ನಿವಾರಿಸಲು ಸ್ಥಾವರದ ಪದಾಧಿಕಾರಿಗಳು ಯತ್ನಿಸಿದರು. ದಿನ ಒಂದಕ್ಕೆ ಸುಮಾರು ಐವತ್ತು ಸಾವಿರ ಡಾಲರ್‌ಗಳಷ್ಟು ವಿದ್ಯುತ್ ಆ ಘಟಕದಿಂದ ಸರಬರಾಜಾಗುತ್ತಿತ್ತು. ಹಳೆಯ ಕಾಲದ ತುಂಬ ಸರಳವಾದ ವಿನ್ಯಾಸದ ಆ ಘಟಕದ ದಿನನಿತ್ಯದ ಖರ್ಚು ಅತ್ಯಂತ ಕಡಿಮೆಯಾಗಿತ್ತು. ಸುಮಾರು ಐವತ್ತು ಪೂರ್ಣಾವಧಿಯ ಕೆಲಸಗಾರರು ಆ ಸ್ಥಾವರವನ್ನೇ ನೆಚ್ಚಿ ಬದುಕಿದ್ದರು. ಅವರಲ್ಲನೇಕರು ಸ್ಥಳೀಯ ರಾಜಕೀಯದಲ್ಲಿ ಸಕ್ರಿಯರಾಗಿದ್ದರು. ಕೆಲವೇ ತಿಂಗಳುಗಳಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಬೇಕಿತ್ತು. ಅಧಿಕಾರವನ್ನು ಕಳೆದುಕೊಂಡು ಕುಳಿತಿದ್ದ ಡೆಮೋಕ್ರ್ಯಾಟರು ವಿರೋಧಿಗಳನ್ನು ಎತ್ತಿಕಟ್ಟಿದ್ದರೆಂಬುದು ಸುಲಭವಾಗಿ ಗೊತ್ತಾಗುತ್ತಿತ್ತು. ತಾಂತ್ರಿಕ ವಿಷಯಗಳ ಮಂಡನೆ ಮಧ್ಯಾಹ್ನದ ಊಟದ ಬಿಡುವಿನ ನಂತರ ಎಂದು ಘೋಷಣೆಯಾದ ಮೇಲೆ ನಾವೆಲ್ಲ ಸ್ಯಾಂಡ್‌ವಿಚ್ ಮತ್ತು ಕೋಕ್ ಇಟ್ಟಿದ್ದ ಸ್ಥಳಕ್ಕೆ ಹೊರಟೆವು.

ತಾಂತ್ರಿಕ ವಿಷಯಗಳ ಮಂಡನೆ ಶುರುವಾಯಿತು. ನಾನು ಮಾಡಿಕೊಂಡಿದ್ದ ತಯಾರಿ ತುಂಬಾ ಉಪಯೋಗಕ್ಕೆ ಬಂದಿತು. ಒಂದೊಂದೇ ಅಂಶಗಳನ್ನು ತೆಗೆದುಕೊಂಡು ಸರಳವಾದ ಭಾಷೆಯಲ್ಲಿ ವಿವರಿಸಿದೆ. ಮೊಟ್ಟ ಮೊದಲನೆಯದಾಗಿ, ತಾಂತ್ರಿಕ ಪ್ರಶ್ನೆಗಳಿಗೆ ಉತ್ತರವಾಗಿ ನಾವು ನಡೆಸಿದ ಫೀಲ್ಡ್ ಟೆಸ್ಟಿಂಗ್ ಮತ್ತು ಲ್ಯಾಬ್ ಟೆಸ್ಟಿಂಗ್‌ಗಳ ಫಲಿತಾಂಶವನ್ನು ಮಂಡಿಸಿ, ನದಿಯ ಪಕ್ಕದಲ್ಲೇ ಇದ್ದರೂ, ಆಳಕ್ಕೆ ಹೋದಹೋದಂತೆ ಭೂಮಿಯಲ್ಲಿರುವ ಮರಳು ಸಾಂದ್ರವಾಗಿದೆ ಎಂಬುದನ್ನು ತೋರಿಸಿಕೊಟ್ಟೆ. ಭೂಮಿಯೊಳಕ್ಕೆ ಜಡಿದಿದ್ದ ಎಚ್ ಆಕಾರದ ಕಂಬಗಳು ಸುಸ್ಥಿತಿಯಲ್ಲಿವೆ ಎಂಬಂಶವನ್ನೂ ಮನವರಿಕೆ ಮಾಡಿಕೊಟ್ಟೆ. ಎಲ್ಲಕ್ಕಿಂತ ಮುಖ್ಯವಾಗಿ ಅತ್ಯಂತ ಅಪಾಯಕಾರಿಯಾದ ನೆರೆಯನ್ನು ಊಹಿಸಿಕೊಂಡರೂ ಅದು ತಳಪಾಯದ ಮಟ್ಟಕ್ಕಿಂತ ಮೇಲೇರಲು ಸಾಧ್ಯವಿಲ್ಲವೆಂಬುದನ್ನೂ ಲೆಕ್ಕಾಚಾರ ಮತ್ತು ಅಂಕಿಅಂಶಗಳ ಸಹಾಯದಿಂದ ಮನಗಾಣಿಸಿದೆ. ಹಾಗು, ವಿಸ್ಕಾನ್ಸಿನ್ ಪ್ರಾಂತ್ಯವು ಭೂಗರ್ಭ ಶಾಸ್ತ್ರಜ್ಞರ ಮತ್ತು ಭೂಕಂಪನ ಶಾಸ್ತ್ರಜ್ಞರ ಪ್ರಕಾರ ಅತ್ಯಂತ ಸ್ಥಿರವಾದ ಬೃಹದ್ ಶಿಲಾಕೋಶದ ಮೇಲೆ ಇರುವುದರಿಂದ ಉತ್ತರ ಅಮೆರಿಕದಲ್ಲೆ ಅತ್ಯಂತ ಕಡಿಮೆ ಕಂಪನ ಸಾಧ್ಯತೆಯನ್ನು ಹೊಂದಿದೆ, ಹಾಗಾಗಿ, ತಳಪಾಯಕ್ಕೆ ಭೂಕಂಪನದಿಂದಲೂ ಯಾವ ಕುಂದೂ ಇಲ್ಲ, ದಶಕಗಳ ಹಿಂದೆ ಕಟ್ಟಿದ್ದಾದರೂ ಸ್ಥಾವರ ಅದರ ವಯಸ್ಸಿಗೆ ತಕ್ಕಷ್ಟು ಮಜಬೂತಾಗೇ ಇದೆ. ಅದಕ್ಕೆ ಮಿಕ್ಕಿರುವ ಹತ್ತು ವರ್ಷಗಳ ಆಯುವನ್ನು ಅಣುಶಕ್ತಿ ಆಯೋಗವು ಕಡಿತಗೊಳಿಸಲು ಯಾವ ತಾಂತ್ರಿಕ ಆಧಾರವೂ ಇಲ್ಲವೆಂದು ವಾದಿಸಿ ಪ್ರಶ್ನೆಗಳಿಗೆ ಒಡ್ಡಿಕೊಂಡೆ.

ಆಯೋಗದ ತಾಂತ್ರಿಕ ತಜ್ಞರು ಕೇಳಿದ ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಕೊಟ್ಟೆ. ಮುಂಗಡವಾಗಿ ಅವರಿಗೆ ಲಿಖಿತ ತಾಂತ್ರಿಕ ವರದಿಗಳನ್ನು ಕೊಟ್ಟಾಗಿತ್ತಾದ್ದರಿಂದ ಅವರು ಹೆಚ್ಚು ಪ್ರಶ್ನೆಗಳನ್ನು ಕೇಳಲಿಲ್ಲ. ಬೆಳಗಿನ ಸಭೆಗೆ ಹಾಜರಾಗಿದ್ದ ಅನೇಕರು ಮಧ್ಯಾಹ್ನದ ಸಭೆಗೆ ಬಂದಿರಲಿಲ್ಲ. ದೂರದರ್ಶನದವರೂ ಮಾಯವಾಗಿದ್ದರು. ಲೈಸೆನ್ಸಿಂಗ್ ಬೋರ್ಡ್

ನವರು ಮತ್ಯಾರಾದರೂ ಪ್ರಶ್ನೆ ಕೇಳುವವರಿದ್ದಾರೆಯೇ ಎಂದಾಗ ಮುಂದೆ ಬಂದವರಲ್ಲಿ ಮೊದಲಿಗನೇ ನಮ್ಮ ಹಯವದನರಾಯ! ಪ್ರಶ್ನೆಗಳ ಸುರಿಮಳೆಯೇ ಆಯಿತು.

ಪ್ರ: ಸ್ಥಾವರದ ತಳಪಾಯದ ಸುತ್ತಮುತ್ತ ಇರುವ ಮರಳನ್ನು ಪರೀಕ್ಷಿಸಲು ಹೇಗೆ ಸಾಧ್ಯವಾಯಿತು? ಅಣು ಸ್ಥಾವರದ ಅಡಿಯಲ್ಲಿ ಹೋಗಿ ನೋಡಿದಿರಾ?

ಉ: ಇಲ್ಲ, ಅದು ಅಪಾಯದ ಕೆಲಸ. ಅದರ ಬದಲು ನಾವು ಈ ಘಟಕದ ಪಕ್ಕದಲ್ಲೇ ಇರುವ (ಈಗ ನಿಷ್ಕ್ರಿಯವಾಗಿರುವ) ಕಲ್ಲಿದ್ದಲಿನ ಘಟಕದ ಅಡಿಯಲ್ಲಿ ಪರೀಕ್ಷೆ ಮಾಡಲು ಸಾಧ್ಯವಾಯಿತು. ಆ ತಳಪಾಯದ ವಿನ್ಯಾಸವೂ ಅಣು ಘಟಕದಂತೇ ಇರುವುದರಿಂದ ಅದರ ತಳಪಾಯದಡಿ ಕೊರೆಯುವ ಯಂತ್ರದಿಂದ ಸ್ಯಾಂಪಲ್‌ಗಳನ್ನು ಶೇಖರಿಸಿ, ಪರೀಕ್ಷಿಸಿದೆವು, ಮಾಡಬೇಕಾದ ಟೆಸ್ಟ್‌ಗಳನ್ನೆಲ್ಲಾ ಮಾಡಿದ್ದೇವೆ. ನಮ್ಮ ಕ್ಷೇತ್ರಕಾರ್ಯವನ್ನು ಅಣುಶಕ್ತಿ ಆಯೋಗದ ತಾಂತ್ರಿಕ ಪ್ರತಿನಿಧಿಗಳು ವೀಕ್ಷಿಸಿ ಅಡ್ಡಿಯಿಲ್ಲವೆಂದು ಒಪ್ಪಿಗೆ ಕೊಟ್ಟಿದ್ದಾರೆ.

ಪ್ರ: ನೆಲವನ್ನು ಕೊರೆದು ಮೂರು ನಾಲ್ಕು ಅಂಗುಲದ ಸಣ್ಣ ಸ್ಯಾಂಪಲ್ಲನ್ನು ಹೊರತೆಗೆದು ಪರೀಕ್ಷಿಸಿಬಿಟ್ಟರೆ ತಳಪಾಯದ ಶಕ್ತಿ ಪರೀಕ್ಷೆ ಮಾಡಿದಂತಾಗುವುದೇ?

ಈ ಕೊರಮ ತನ್ನ ಹೋಮ್ ವರ್ಕ್ ಮಾಡಿಕೊಂಡೇ ಬಂದಿದ್ದಾನೆಂದು ತಿಳಿಯಿತು. ನಾನು ಸುದೀರ್ಘವಾದ ಉತ್ತರ ಕೊಡಲು ಹೊರಟಾಗ, ನಮ್ಮ ವಕೀಲ ಬಂದು, ಇವೆಲ್ಲಾ ಇಂಜಿನಿಯರುಗಳು ಉಪಯೋಗಿಸುತ್ತಾ ಬಂದಿರುವ ತಂತ್ರಗಳು, ಇದರ ಹಿಂದೆ ವರ್ಷಾನುಗಟ್ಟಲೆ ಇತಿಹಾಸ ಮತ್ತು ಅನುಭವಗಳು ದಾಖಲಾಗಿವೆ. ತಂತ್ರಜ್ಞರೆಲ್ಲ ಒಪ್ಪಿಕೊಂಡಿರುವ ವಿಧಾನಗಳ ಬಗ್ಗೆ ಪ್ರಶ್ನೆ ಕೇಳುವುದನ್ನು ತಡೆಯಬೇಕೆಂದು ಲೈಸೆನ್ಸ್ ಬೋರ್ಡನ್ನು ಪ್ರಾರ್ಥಿಸಿಕೊಂಡ. ಕೊನೆಗೆ ಹತಾಶನಾದ ಹಯವದನ ಮತ್ತೊಂದೇ ಮಾರ್ಗವನ್ನು ಹುಡುಕಿದ.

ಪ್ರ: ಈ ಘಟಕಕ್ಕೆ ಹಲವು ಮೈಲಿ ನದಿಯ ಕೆಳ ಹರಿವಿನ ದಿಕ್ಕಿನಲ್ಲಿ ಹೋ–ಚಂಕ್ ಮತ್ತು ಒನೀಡ ಇಂಡಿಯನ್ನರ ರಿಸರ್ವೇಶನ್ ಇರುವುದು ನಿಮಗೆ ಗೊತ್ತೇ?

ಉ: ಇಲ್ಲ.

ಪ್ರ: ರಿಸರ್ವೇಶನ್ ಎಂದರೆ ಏನೆಂದು ಗೊತ್ತೆ?

ಉ: ಸರಿಯಾಗಿ ಗೊತ್ತಿಲ್ಲ.

ಪ್ರಶ್ನೆಗಳ ಧಾಟಿ ತೆಗೆದುಕೊಳ್ಳುತ್ತಿರುವ ತಿರುವನ್ನು ನೋಡಿ ನಮ್ಮ ವಕೀಲ ಅಡ್ಡ ಬರಲು ಯತ್ನಿಸಿದರೂ ಗಮನಕೊಡದೇ ಆತ ಮುಂದುವರೆಸಿದ. ನಾನು ಹೇಳುತ್ತೇನೆ ಕೇಳು. ಇಡೀ ಉತ್ತರ ಅಮೆರಿಕಾ ಖಂಡ ನಮ್ಮ ನಾಡಾಗಿತ್ತು. ನೂರಾರು ಬುಡಕಟ್ಟಿನ ನಮ್ಮ ಬಂಧುಗಳು ಸಹಸ್ರಾರು ಸಂಖ್ಯೆಯಲ್ಲಿ ಇಲ್ಲಿ ಸುಖಶಾಂತಿಯಿಂದ ಬಾಳುತ್ತಿದ್ದರು. ಆದರೆ ಕಚಡ ಜನರ ಪ್ರವೇಶವಾದ ನಂತರ ನಮ್ಮ ನಾಡನ್ನು ನಮ್ಮಿಂದ ಮೋಸ ವಂಚನೆ ತಟವಟದಿಂದ ಕಸಿದುಕೊಂಡು ಇಡೀ ದೇಶವನ್ನು ತಮ್ಮದನ್ನಾಗಿಸಿಕೊಂಡರು. ಅನೇಕರನ್ನು ಕೊಂದರು, ಮಿಕ್ಕವರನ್ನು ಸಣ್ಣ ಸಣ್ಣ ಪ್ರದೇಶಗಳಲ್ಲಿ ಕೂಡಿಹಾಕಿ ನಮ್ಮ

ಸ್ವಾತಂತ್ರ್ಯವನ್ನು ಕಸಿದುಕೊಂಡರು. ನಮ್ಮನ್ನು ಅಂಕೆಯಲ್ಲಿಟ್ಟ ಪ್ರದೇಶಗಳೇ ರಿಸರ್ವೇಶನ್‌ಗಳು. ತಿಳಿಯಿತೇ? ಹೋಗಲಿ ಅಲ್ಲಾದರೂ ನಾವು ಸುಖಶಾಂತಿಯಿಂದ ಬಾಳಬಹುದೇ ಎಂದರೆ, ನಮ್ಮ ನದಿಗಳ ದಡದಲ್ಲಿ ವಿಷಪೂರಿತ ಅಣುಘಟಕಗಳನ್ನು ಕಟ್ಟಿದ್ದಾರೆ. ಘಟಕದ ತ್ಯಾಜ್ಯ ವಸ್ತುಗಳು ನಮ್ಮ ಪವಿತ್ರ ನದಿಗಳನ್ನು ಕಲುಷಿತಗೊಳಿಸುತ್ತಿವೆ. ಈ ನದಿಯ ನೀರನ್ನು ನಮ್ಮ ಮಕ್ಕಳು ಕುಡಿಯುತ್ತಾರೆ. ಈ ನದಿಯ ನೀರನ್ನು ನಾವು ವ್ಯವಸಾಯಕ್ಕೆ ಬಳಸುತ್ತೇವೆ. ನಮ್ಮ ದನಕರುಗಳು ಈ ನೀರನ್ನು ಕುಡಿಯುತ್ತವೆ. ಇನ್ನೂ ಸಹಸ್ರಾರು ವರ್ಷಗಳಷ್ಟು ಕಾಲ ವಿಕಿರಣ-ಚಟುವಟಿಕೆಯುಳ್ಳ ತ್ಯಾಜ್ಯಗಳು ನಮ್ಮನ್ನು ಕಾಡುತ್ತಲೇ ಕೊಲ್ಲುತ್ತಲೇ ಇರುತ್ತವೆ. ಈ ನದಿಯ ನೀರನ್ನು ಕುಡಿದ ಹಸುಗಳ ಹಾಲನ್ನು ನಮ್ಮ ಮಕ್ಕಳು ಕುಡಿಯುತ್ತಾರೆ. ಈ ನೀರನ್ನುಪಯೋಗಿಸಿ ಬೆಳೆದ ಮುಸುಕಿನ ಜೋಳವೇ ನಮ್ಮ ಮುಖ್ಯ ಆಹಾರ. ಈಗ ಹೇಳಿ, ನಮ್ಮ ಮಕ್ಕಳಿಗೆ ಮೊಮ್ಮಕ್ಕಳಿಗೆ ವಿಕಿರಣ ದೋಷದಿಂದ ಕ್ಯಾನ್ಸರ್ ಬರುವುದಿಲ್ಲವೆಂದು ನೀವು ಸಾಧಿಸಿ ತೋರಿಸಬಲ್ಲಿರಾ? ನಿಮಗೆ ಖಡಾಖಂಡಿತವಾಗಿ ಉತ್ತರ ಗೊತ್ತಿಲ್ಲದಿದ್ದರೆ, ಈ ಘಟಕವನ್ನು ಮುಚ್ಚದೇ ಬೇರೆ ಮಾರ್ಗವೇ ಇಲ್ಲ.

ನನಗೆ ಕಾಲುಗಳಲ್ಲಿ ಸ್ವಲ್ಪ ನಡುಕ ಕಂಡಂತೆ ಅನುಭವವಾಯಿತು. ಬಾಯಿ ಒಣಗುತ್ತಿತ್ತು. ಬಾಟಲಿನಿಂದ ಒಂದಿಷ್ಟು ನೀರು ಕುಡಿದು ಯತ್ನಿಸಿದೆ. ಮುಂದುವರೆಸಿದೆ.

"ಘಟಕ ಕುಸಿಯಬಹುದಾದ ಸಂಭವನೀಯತೆಯನ್ನು ನಾವು ಲೆಕ್ಕ ಹಾಕಬಲ್ಲೆವು. ನಮ್ಮಲ್ಲಿ ಕಂಪ್ಯೂಟರ್ ಮಾದರಿಗಳಿವೆ. ಒಂದು ವೇಳೆ ಅಪಘಾತವಾಗಿ ಘಟಕ ಕುಸಿದರೆ, ಎಷ್ಟು ತ್ಯಾಜ್ಯವಸ್ತುಗಳು ಮತ್ತಿತರ ಅಪಾಯಕಾರೀ ಇಂಧನಗಳು ನೀರಿನಲ್ಲಿ ಬೆರೆತು ಕರಗಿ ನೀರಿನಿಂದ ಮಣ್ಣು ಸೇರಿ ಭೂಮ್ಯಂತರ ಜಲದೊಂದಿಗೆ ಬೆರೆತು ನಿಮ್ಮ ರಿಸರ್ವೇಶನ್ ತಲುಪಲು ಎಷ್ಟು ಸಮಯ ಬೇಕು, ಎಂದು ನಾವು ಲೆಕ್ಕಾಚಾರ ಹಾಕಿದ್ದೇವೆ. ಅದಕ್ಕೆ ನೂರಾರು ವರ್ಷಗಳೇ ಬೇಕಾಗುವುವು. ಅದರಲ್ಲಿ ಎಷ್ಟು ಅಂಶ ಹಸುವಿನ ಹುಲ್ಲಿನಲ್ಲಿ ಸೇರಿ ಅದು ಕೊಡುವ ಹಾಲಿನಲ್ಲಿ ಬೆರೆಯುತ್ತದೆ ಎಂಬುದರ ಲೆಕ್ಕಾಚಾರವೂ ಸಾಧ್ಯ. ಅಂಥ ಹಸುವಿನ ಹಾಲನ್ನು ಎಷ್ಟು ವರ್ಷಗಳು ಎಷ್ಟು ಗ್ಯಾಲನ್ನುಗಳು ಕುಡಿದರೆ ಕ್ಯಾನ್ಸರ್ ಬರಬಹುದು ಮುಂತಾಗಿ ಲೆಕ್ಕ ಹಾಕಲು ನಮ್ಮಲ್ಲಿ ಗಣಕದ ಮಾದರಿಗಳಿವೆ. ಇಂಥ ಮ್ಯಾಥೆಮ್ಯಾಟಿಕಲ್ ಮಾಡೆಲ್‌ಗಳನ್ನು ಉಪಯೋಗಿಸಿ ವರ್ಷಕ್ಕೆ ಎಷ್ಟು ಜನರು ಕ್ಯಾನ್ಸರ್ನಿಂದ ಸಾಯಬಹುದು ಮುಂತಾಗಿ ಲೆಕ್ಕಹಾಕಿ, ಅಣು ಶಕ್ತಿ ಆಯೋಗವು ವಿಧಿಸಿರುವ ಮಾನದಂಡಗಳ ಮಿತಿಯಲ್ಲೇ ನಾವಿದ್ದೇವೆಂದು ನಾವಾಗಲೇ ತೋರಿಸಿದ್ದೇವೆ. ಆ ಬಗ್ಗೆ ನಿಮಗೆ ವಿವರಗಳು ಬೇಕಿದ್ದರೆ ಒದಗಿಸಲು ನಾವು ಸಿದ್ಧ" ಎಂದು ನನ್ನ ಮಾತನ್ನು ಮುಗಿಸಿದೆ.

ಹಯವದನನಿಗೆ ಸಮಾಧಾನವಾಗಲಿಲ್ಲ ಎಂದು ಆತನ ಮುಖದಿಂದಲೇ ಹೇಳಬಹುದಿತ್ತು. ನಮ್ಮ ರಿಸರ್ವೇಶನ್‌ಗೆ ಒಮ್ಮೆ ಭೇಟಿ ಕೊಡಿ, ಅಲ್ಲಿನ ಮಕ್ಕಳ ಆರೋಗ್ಯದ ಬಗ್ಗೆ ನಿಮಗೆ ಸತ್ಯ ಸಂಗತಿಯನ್ನು ತೋರಿಸುತ್ತೇನೆ. ಅದು ನಿಮ್ಮ ಮ್ಯಾಥೆಮ್ಯಾಟಿಕಲ್ ಮಾಡೆಲ್ಗಿಂತ ಹೆಚ್ಚು ವಿಶ್ವಸನೀಯ ಎಂದು ತನ್ನ ಮಾತನ್ನು ಮುಗಿಸಿದ. ಮರುದಿನದ ಸ್ಥಳೀಯ ಪತ್ರಿಕೆಗಳಲ್ಲಿ ನಮ್ಮ ಚಿತ್ರಗಳು ಪ್ರಕಟವಾಗಿದ್ದವು. ನಾನು-ಹಯವದನ ಅಕ್ಕಪಕ್ಕ

ನಿಂತಿರುವ ಚಿತ್ರ "ನ್ಯೂಕ್ಲಿಯರ್ ಪ್ಲ್ಯಾಂಟ್ ಲೈಕ್ಲಿ ಟು ಕಿಲ್ ಇನ್ಡಿಯನ್ಸ್ ಲಿವಿಂಗ್ ಇನ್ ರೆಸರ್ವೇಶನ್ಸ್" ಎಂದು ಡೆಮೋಕ್ರ್ಯಾಟಿಕ್ ಪಕ್ಷದ ಪತ್ರಿಕೆಯ ತಲೆಬರಹ. ಆದರೆ, ರಿಪಬ್ಲಿಕನ್ ಪಕ್ಷದ ಪತ್ರಿಕೆಯಲ್ಲಿ, "ನೂಕ್ಲಿಯರ್ ಪ್ಲ್ಯಾಂಟ್ ಸೇಫ್, ಕ್ಲೈಮ್ಸ್ ಯುಟಿಲಿಟಿ" ಎಂಬ ತಲೆಬರಹದಡಿ ನನ್ನ ಮತ್ತು ನಮ್ಮ ವಕೀಲನ ಚಿತ್ರ ಮಾತ್ರ ಇತ್ತು, ಹಯವದನ ಗಾಯಬ್ ಆಗಿದ್ದ!

ಸಂಜೆ ನಮ್ಮೆಲ್ಲರನ್ನೂ ಪ್ಲ್ಯಾಂಟ್ ಓನರ್ ಹ್ಯಾಬರ್ಡ್ಯಾಷೆರಿಗೆ ಕರೆದೊಯ್ದರು. ಅಲ್ಲಿ ಮತ್ತೆ ಕಡಲೆಕಾಯಿ ಪರಿಷೆ, ಜೊತೆಗೆ ಆರು ಬಗೆ ಬೀರುಗಳ ಪ್ರವಾಹ. ಎಲ್ಲರೂ ನನ್ನ ಪ್ರೆಸೆಂಟೇಶನ್ ಬಗ್ಗೆ ಮಾತಾಡುವವರೇ. ಪಿಎಂ ಬಹಳ ಖುಶಿಯಲ್ಲಿದ್ದ. ಅವನ ಕೆಲಸಕ್ಕೆ ಕೊನೇ ಪಕ್ಷ ಹತ್ತು ವರ್ಷ ಆಯುಸ್ಸು ವೃದ್ಧಿಯಾಗಿತ್ತು! ನಮ್ಮ ಬಾಸ್ ಬಹಳ ಖುಶಿಯಿಂದ ಕೈಕುಲುಕಿ ನನ್ನ ಪ್ರಮೋಶನ್ ಬಗ್ಗೆ ಮಾತಾಡಿದ್ದ. ಆದರೆ ಆಗಿದ್ದೇ ಬೇರೆ. ಒಟ್ಟಾರೆ ನಮ್ಮ ಕಂಪನಿ ಆ ವರ್ಷ ಏಟು ತಿಂದಿತ್ತು, ಅದರಲ್ಲೂ ನಮ್ಮ ಶಾಖೆ. ನಾನು ಕೆಲಸ ಹುಡುಕಬೇಕಾದ ಪರಿಸ್ಥಿತಿ ಬಂತು. ಆದದ್ದೆಲ್ಲ ಒಳಿತೇ ಆಯಿತು. ನಾನು ಕೆಲಸ ಹುಡುಕುತ್ತಿರುವುದು ತಿಳಿದದ್ದೇ ನನಗೆ ಮೂರು ನಾಲ್ಕು ಹೊಸ ಅವಕಾಶಗಳು ಕಂಡು ಬಂದವು. ಅಣುಶಕ್ತಿ ಆಯೋಗದ ತಂತ್ರಜ್ಞರಿಗೆ ನನ್ನ ಹಿನ್ನೆಲೆ ತುಂಬಾ ಮೆಚ್ಚುಗೆಯಾಗಿತ್ತು, ಅವರೇ ಕರೆದು ನನಗೆ ಕೆಲಸ ಕೊಟ್ಟಾಗ ನಾನು ಆಯೋಗದ ತಂತ್ರಜ್ಞರ ಗುಂಪಿನಲ್ಲಿ ಒಬ್ಬನಾದೆ.

* * *

ಸುಮಾರು ಹತ್ತು ವರ್ಷಗಳ ನಂತರ ನಾನು ಅರಿಝೋನಾ ಪ್ರಾಂತ್ಯದ ಟೂಸಾನ್ ನಗರದಲ್ಲಿ ನಡೆದ ಒಂದು ತಾಂತ್ರಿಕ ಸಮ್ಮೇಳನದಲ್ಲಿ ಒಂದು ಪೇಪರ್ ಪ್ರೆಸೆಂಟ್ ಮಾಡಲು ಹೋಗಿದ್ದೆ. ಸಂಜೆ ಹೋಟೆಲಿನ ಲಾಬಿಯಲ್ಲಿ ಮಿತ್ರರೊಂದಿಗೆ ಕುಳಿತಿದ್ದಾಗ ನನ್ನ ಮುಂದೆ ನಿಂತು ಕೈಮುಗಿದವನು ಯಾರೆಂದು ನೆನಪಿಸಿಕೊಳ್ಳಲು ಒಂದೆರಡು ನಿಮಿಷವೇ ಬೇಕಾಯಿತು. ಹಯವದನ ಎದುರಿಗೆ ಪ್ರತ್ಯಕ್ಷ! ಜಡೆಯ ಅರ್ಧ ಕೂದಲು ಬೆಳ್ಳಗಾಗಿದೆ. ನಾನು ಎದ್ದು ಕೈಮುಗಿದು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಮಾತಾಡಿದೆ. ಅದೇ ಹಳದಿ ಹಲ್ಲುಗಳನ್ನು ಪ್ರದರ್ಶಿಸಿದ. ಅದೇ ಸ್ನೇಹಮಯಿ ಮುಖ, ಮೋಡಿ ಮಾಡುವ ಮಾತು ಮತ್ತು ನಗೆ. ಲಕ್ರಾಸ್ ನಂತರ ಎಲ್ಲಿ ಹೋದೆ ಎಂದೆಲ್ಲ ವಿಚಾರಿಸಿದ. ಕಳೆದ ಹತ್ತು ವರ್ಷಗಳ ಕತೆಯನ್ನೆಲ್ಲಾ ಕೇಳಿದ, ತನ್ನ ಕತೆಯನ್ನೂ ಒಂದಿಷ್ಟು ಹೇಳಿದ. "ನೋಡು, ತಮ್ಮ, ನೀನು ಮಾಡಿದ ಪ್ರೆಸೆಂಟೇಶನ್ ಕಾರಣ ಆ ಅಣು ಘಟಕಕ್ಕೆ ಮತ್ತೆ ಹತ್ತು ವರ್ಷ ಲೈಫ್ ಎಕ್ಸ್ಟೆನ್ಷನ್ ಕೊಟ್ಟರು. ಮೊನ್ನೆ ತಾನೆ ಘಟಕವನ್ನು ಮುಚ್ಚಿಹಾಕಿದರು, ನಾನು ಈಗ ಪಶ್ಚಿಮಕ್ಕೆ ಬಂದುಬಿಟ್ಟೆ. ಬೇರೆ ಬೇರೆ ಬುಡಕಟ್ಟಿನ ಇಂಡಿಯನ್ ಜನಾಂಗದ ಹಿತರಕ್ಷಣೆಗಾಗಿ ಕಚಡ ಜನರ ಸರ್ಕಾರದೊಂದಿಗೆ ಕಾದಾಡುವುದೇ ನನ್ನ ಜೀವನದ ಧ್ಯೇಯವಾಗಿದೆ. ನಾಳೆ ಇಲ್ಲೇ ಹತ್ತಿರದಲ್ಲಿರುವ ಟೊಹೋನೋ ಇಂಡಿಯನ್ ರಿಸರ್ವೇಶನ್ನಿಗೆ ಹೋಗುತ್ತಿದ್ದೇನೆ,

ನಿನಗೇನೂ ಕೆಲಸವಿಲ್ಲದಿದ್ದರೆ ನೀನೂ ಜೊತೆಗೆ ಬಾ" ಎಂದು ಆಹ್ವಾನಿಸಿದ. ನನ್ನ ಪೇಪರ್ ಪ್ರೆಸೆಂಟೇಶನ್ ಹಿಂದಿನ ದಿನವೇ ಮುಗಿದಿತ್ತು, ಕೇಳಲೇಬೇಕಾದ ಪೇಪರ್‌ಗಳು ಯಾವುವೂ ಇರಲಿಲ್ಲ. ತಪ್ಪಿಸಿಕೊಂಡರೆ ಅಂಥಾ ನಷ್ಟವೇನೂ ಕಾಣಲಿಲ್ಲ, ಒಪ್ಪಿಕೊಂಡೆ.

ಅವತ್ತು ಭಾನುವಾರವಾಗಿತ್ತು, ತನ್ನ ಕಾರಿನಲ್ಲೇ ನನ್ನನ್ನೂ ಕರೆದೊಯ್ದ. 'ನಿನ್ನ ಹೆಸರು ಗಜಾನನ್ ಜೋಶಿ' ಎಂದು ಲಕ್ರಾಸ್‌ನಲ್ಲಿ ತಿಳಿದ ಮೇಲೆ, ಆ ಹೆಸರಿನ ಅರ್ಥವೇನೆಂದು ಮತ್ತೊಬ್ಬ ಇಂಡಿಯನ್ ಗೆಳೆಯನ, (ಅಂದರೆ ಟ್ರೂ ಇಂಡಿಯನ್ ಎಂದು ಕಣ್ಣು ಹೊಡೆದ) ಕೇಳಿ ತಿಳಿದುಕೊಂಡೆ. ನೀನು ಆನೆ ಮುಖದವನು! ಎಂದು ಗಹಗಹಿಸಿ ನಕ್ಕ. ಯಾವ ಕೆಲಸ ಮಾಡಬೇಕಾದರೂ ನಿನ್ನನ್ನು ಪೂಜಿಸದೇ ಮುಂದುವರೆಯುವ ಹಾಗಿಲ್ಲ, ಅಲ್ಲವೇ? ಎಂದು ನನ್ನತ್ತ ನೋಡಿ ಬೀಗಿದ. ಎಲಾ ಇವನೆ! "ನೋಡು, ತಮ್ಮ, ನಾನು ಕುದುರೇ ಮುಖ, ನೀನು ಆನೆ ಮುಖ, ಪರಸ್ಪರ ಸಾವಿರಾರು ಮೈಲಿ ದೂರದಲ್ಲಿ ನಮ್ಮ ಜನಾಂಗಗಳು ಹತ್ತಾರು ಸಾವಿರ ವರ್ಷ ಬಾಳಿ ಬದುಕಿದವರು, ನಾವಿಬ್ಬರೂ ಒಂದು ರೀತಿ ನೆಂಟರು, ನಮ್ಮ ಮೂಲ ಒಂದೇ ಇದ್ದಿರಬಹುದೇ ಎಂದು ನಾನು ತಲೆಕೆಡಿಸಿಕೊಂಡಿದ್ದೇನೆ" ಎಂದು ಸ್ವಲ್ಪ ಗಂಭೀರನಾದ. ನಮ್ಮ ಬಣ್ಣ ಕಂದು, ಅವನದು ಸ್ವಲ್ಪ ಕೆಂಪು ತುಂಬಿದ ಕಂದು. ಅವನ ನಂಬಿಕೆಗಳಿಗೂ ನಮ್ಮ ನಂಬಿಕೆಗಳಿಗೂ ಸಾಮ್ಯವಿದೆಯಷ್ಟೆ, ಅವನ ಮಾತಿನಲ್ಲಿ ಸತ್ಯವಿದೆ ಎನ್ನಿಸಿತು. ಸುಮ್ಮನಿದ್ದೆ. ದಾರಿ ಉದ್ದಕ್ಕೂ ಅವನೇ ಮಾತಾಡಿದ. ಯಾಕಿಮಾ ಇಂಡಿಯನ್ಸ್ ಬಗ್ಗೆ ಹೇಳಿದ, ಶೊಶೋನಿಗಳ ಬಗ್ಗೆ ತಿಳಿಸಿದ, ಅಲ್ಗಾನ್‌ಕ್ವಿನ್, ಹೋಪಿ, ಇನ್ನು ಏನೇನೋ ಹೆಸರುಗಳು. ಅವರ ಧರ್ಮ, ಅವರ ಸೃಷ್ಟಿಕರ್ತನಾದ ಸೂರ್ಯದೇವ, ಅವರ ದೃಷ್ಟಿಯಲ್ಲಿ ಸೃಷ್ಟಿಯ ಕಲ್ಪನೆ, ಒಂದಲ್ಲ ಎರಡಲ್ಲ. ಅಷ್ಟರಲ್ಲಿ ರಿಸರ್ವೇಶನ್ ಸಿಕ್ಕಿತು. ಒಂದು ಹಟ್ಟಿಯಂಥ ಮನೆಯಲ್ಲಿ ಹತ್ತಾರು ಮಕ್ಕಳು ಸಿಂಬಳ ಸುರಿಸಿಕೊಂಡು ಬೆತ್ತಲೆ ಓಡಾಡುತ್ತಿದ್ದವು. ಇವನನ್ನು ಕಂಡೊಡನೆ ಕೆಲವರು ಒಳಗೆ ಓಡಿದವು, ಇನ್ನು ಕೆಲವು ಇವನನ್ನು ಮುತ್ತಿಕೊಂಡವು. ಎಲ್ಲರಿಗೂ ಚಾಕೊಲೇಟ್ ಹಂಚಿ ಮುದ್ದಾಡಿದ. ಪಕ್ಕದ ಹಟ್ಟಿಯ ಮುಂದೆ ಒಂದು ವಯಸ್ಸಾದ ಹೆಂಗಸು ದೊಡ್ಡದೊಂದು ಬಾಣಲೆಯಲ್ಲಿ ಎಣ್ಣೆ ತುಂಬಿ ಕಾಯಿಸುತ್ತಿದ್ದಳು. ಅವಳಿಗೆ ಏನೋ ತನ್ನ ಭಾಷೆಯಲ್ಲಿ ಹೇಳಿದ, ಅವಳು ಒಳಗೆ ಹೋಗಿ ಕಲಸಿಟ್ಟ ಮುಸುಕಿನಜೋಳದ ಹಿಟ್ಟನ್ನು ತಂದು ಕಲ್ಲಿನ ಮೇಲೆ ನಾದಿದಳು. ದೊಡ್ಡ ಲಟ್ಟಣಿಗೆಯಿಂದ ಇಡೀ ಬಾಣಲೆಯಷ್ಟು ಅಗಲದ ಪೂರಿಗಳೆರಡನ್ನು ಅರೆದು ಎಣ್ಣೆಯಲ್ಲಿ ಕರಿದಳು. ಅಷ್ಟು ದೊಡ್ಡದಾಗಿ ಉಬ್ಬಿಕೊಂಡ ಪೂರಿಯನ್ನು ನಾನೆಂದೂ ನೋಡಿರಲಿಲ್ಲ. ಹೊಟ್ಟೆಯೂ ಹಸಿದಿತ್ತು. ಅಗಲದ ಮಣ್ಣಿನ ತಟ್ಟೆಯೊಂದರಲ್ಲಿ ಉಬ್ಬಿದ ಪೂರಿಯನ್ನಿಟ್ಟು ಅದನ್ನು ಕೈಯಿಂದ ಅಮುಕಿ ಅದರ ಮೇಲೆ ಒಂದಿಷ್ಟು ಜೇನು ತುಪ್ಪವನ್ನು ಸುರಿದು ನನ್ನ ಕೈಯಿಗೊಂದು ಅವನ ಕೈಯಿಗೊಂದು ಕೊಟ್ಟಳು. ಅಲ್ಲೇ ಮಲಗಿದ್ದ ಭಾರೀ ಮರದ ದಿಮ್ಮಿಯೊಂದರ ಮೇಲೆ ಇಬ್ಬರೂ ಪಕ್ಕಪಕ್ಕ ಕುಳಿತು ಪೂರಿಯನ್ನು ಜೇನಿನಲ್ಲಿ ಅದ್ದಿಕೊಂಡು ಸವಿದೆವು. ಆಹಾ, ಅದೊಂದು ಮರೆಯಲಾಗದ ಅನುಭವ. ದುಡ್ಡು ಕೊಡಲು ಮುಂದಾದಾಗ

ಅವನು ತಡೆದ, ಅವರಿಗೆ ನೋವಾಗುತ್ತದೆ, ಬೇಡ ಎಂದು ಹೇಳಿ ತಪ್ಪಿಸಿದ. ಪೂರಿ ತಿಂದು ನೀರು ಕುಡಿದು ಅಲ್ಲೇ ಮುಂದೆ ಇದ್ದ ಒಂದು ಸಣ್ಣ ಎಕ್ಸಿಬಿಷನ್ ನಂಥ ಗಿಫ್ಟ್ ಶಾಪ್‌ಗೆ ಭೇಟಿ ಕೊಟ್ಟೆವು. ಅಲ್ಲಿ ಪ್ರದರ್ಶಿಸಿದ್ದ ಅನೇಕ ವಸ್ತುಗಳಲ್ಲಿ ಕೆಲವು ಮಾರಾಟಕ್ಕೂ ಇದ್ದವು. ಕೈಯಲ್ಲಿ ಹೆಣೆದ ಒಂದು ಸೊಗಸಾದ ಬುಟ್ಟಿ, ಜೊಂಡಿನಂಥ ಹುಲ್ಲನ್ನು ಒಣಗಿಸಿ, ಪಳಗಿಸಿ ಮಾಡಿದ್ದು. ಸಹಜವಾಗೇ ಬೇರೆ ಬೇರೆ ಬಣ್ಣಗಳಿರುವ ಆ ಜೊಂಡುಗಳಿಂದ ಮಾಡಿದ ತಟ್ಟೆಯಂಥಾ ಬುಟ್ಟಿ ವರ್ಷಗಟ್ಟಲೆಯಾದರೂ ಏನೂ ಆಗುವುದಿಲ್ಲ. ಒಂದರಂತೆ ಇನ್ನೊಂದಿರುವುದಿಲ್ಲ. ಅಂಥಾ ಸುಂದರ ರಂಗವಲ್ಲಿಯಂಥ ವಿನ್ಯಾಸಗಳು. ಒಂದೆರಡು ಕೊಂಡುಕೊಂಡೆ. ಅವೇನೂ ಅಗ್ಗವಾದುವಲ್ಲ. ಈಗ ತಿಳಿಯಿತು ನಮ್ಮ ಕುದುರೆ ಮುಖದ ಸ್ವಾರಸ್ಯ, ಮೊದಲು ಎರಡಡಿ ವ್ಯಾಸದ ಪೂರಿ + ಜೇನು, ನಂತರ ಗಿಫ್ಟ್ ಶಾಪ್, ನೂರು ಡಾಲರಿಗೆ ಕಮ್ಮಿಯಿಲ್ಲದಂತೆ ಒಂದು ಸಣ್ಣ ವಹಿವಾಟು. ಅವನಿಗೆ ಕಮೀಶನ್ ಎಷ್ಟೋ? ಹೋಟೆಲಿಗೆ ಹಿಂದಿರುಗುವ ವೇಳೆಗೆ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಅವನಿಗೂ ಕೆಲಸವಿತ್ತು, ನನಗೂ; ನಂನಮ್ಮ ಕೊಠಡಿಗಳಿಗೆ ಹಿಂದಿರುಗಿದೆವು.

* * *

ಅಮೆರಿಕದ ವಾಯವ್ಯದಲ್ಲಿರುವ ವಾಶಿಂಗ್‌ಟನ್ ಪ್ರಾಂತ್ಯದ ಹ್ಯಾನ್‌ಫರ್ಡ್ ನಗರದ ಬಳಿ ಒಂದು ರಹಸ್ಯ ಸ್ಥಳದಲ್ಲಿ, ಎರಡನೇ ಮಹಾಯುದ್ಧದ ಸಮಯದಲ್ಲಿ ಅಣು ಬಾಂಬುಗಳಿಗಾಗಿ ಪ್ಲುಟೋನಿಯಮ್ ಉತ್ಪಾದಿಸುವ ಒಂದು ಯೋಜನೆಯಿಂದಾಗಿ ಸಾಕಷ್ಟು ಅಪಾಯಕಾರೀ ತ್ಯಾಜ್ಯವಸ್ತುಗಳ ಸಂಗ್ರಹವಾಗಿದೆ. ಅದರಲ್ಲೂ ದ್ರವರೂಪದಲ್ಲಿರುವ ವಿಕಿರಣ ಕಲುಷಿತ ತ್ಯಾಜ್ಯಗಳನ್ನು ನೆಲದ ಮಟ್ಟಕ್ಕಿಂತ ಕೆಳಗೆ ಉಕ್ಕಿನ ಟ್ಯಾಂಕುಗಳಲ್ಲಿ ಶೇಖರಿಸಿಡಲಾಗಿದೆ. ತುಂಬಾ ವರ್ಷಗಳ ಹಿಂದೆ ಕಟ್ಟಿದ ಕಾರಣ ಹಲವು ಟ್ಯಾಂಕುಗಳು ತುಕ್ಕು ಹಿಡಿದು, ಅಲ್ಲಲ್ಲಿ ಸೀಳಿ, ಅಪಾಯಕಾರೀ ದ್ರವಗಳನ್ನು ಭೂಮಿಯೊಳಕ್ಕೆ ಸೋರಲು ಬಿಡುತ್ತಿವೆ. ಅಂಥ ತ್ಯಾಜ್ಯಗಳು ಒಂದಿಲ್ಲ ಒಂದು ದಿನ ಹತ್ತಿರದಲ್ಲಿ ಹರಿಯುವ ಕೊಲಂಬಿಯಾ ನದಿಯನ್ನು ಸೇರುವ ಭಯ ಇದ್ದೇ ಇದೆ. ತ್ಯಾಜ್ಯವಸ್ತುಗಳ ನಿರ್ವಹಣೆ ಈಗ ಎನರ್ಜಿ ಇಲಾಖೆಯಡಿ ಇದ್ದು ಅದರ ಮೇಲ್ವಿಚಾರಣೆ ಅಣು ಶಕ್ತಿ ನಿಯಂತ್ರಣ ಆಯೋಗದಡಿ ಬರುತ್ತದೆ. ಎನರ್ಜಿ ಇಲಾಖೆಯ ಮೀಟಿಂಗಿಗಾಗಿ ನಾನು ಅಲ್ಲಿಗೆ ಹೋಗಿದ್ದಾಗ ಮತ್ತೆ ನನಗೆ ಹಯವದನನ ದರ್ಶನವಾಯಿತು. ಆದರೆ, ಕ್ಯೂ-ಕ್ಲಿಯರೆನ್ಸ್ ಇಲ್ಲದವರನ್ನು ಆ ಗೌಪ್ಯ ಸ್ಥಳಗಳ ಒಳಕ್ಕೆ ಬಿಡುತ್ತಿರಲಿಲ್ಲವಾಗಿ ಅವನನ್ನು ಹೊರಗೇ ತಡೆದು ಕೂರಿಸಿದ್ದರು. ಒಳಗೆಲ್ಲ ಸಮೀಕ್ಷೆ ನಡೆಸಿ ಹೊರಬಂದ ಮೇಲೆ ನಡೆದ ಮೀಟಿಂಗಿನಲ್ಲಿ ಅವನೂ ಭಾಗಿಯಾದ. ಯಾಕಿಮ ಇಂಡಿಯನ್ ನೇಶನ್ ಅನ್ನು ಪ್ರತಿನಿಧಿಸಲು ಬಂದಿದ್ದ. ಅವನ ಕೂದಲು ಪೂರ್ತಿ ಬೆಳ್ಳಗಾಗಿತ್ತು, ಮುಖದಲ್ಲಿ ಸ್ವಲ್ಪ ಸುಕ್ಕು ಕಾಣಿಸುತ್ತಿತ್ತು. ಓಪನಿಂಗ್ ಸ್ಟೇಟ್‌ಮೆಂಟ್ಸ್ ಮಾಡುವಾಗ ಅವನು ಎನರ್ಜಿ ಇಲಾಖೆಯ ಸಿಬ್ಬಂದಿಯ ಮೇಲೆ ಕಿಡಿಕಾರಿದ. "ಇಪ್ಪತ್ತೋ ಇಪ್ಪತ್ತೈದೋ ವರ್ಷಗಳ ಕೆಳಗೆ ಈ ದೇಶಕ್ಕೆ ಬಂದಿರುವ, ಸಾವಿರಾರು ಮೈಲಿ ದೂರದಲ್ಲಿ

ಜನಿಸಿದ ಇಂಡಿಯನ್ಸ್‌ಗೆ ದೊರಕುವ ಸೆಕ್ಯೂರಿಟಿ ಕ್ಲಿಯರೆನ್ಸ್, ಐವತ್ತು ಸಾವಿರ ವರ್ಷದ ಇತಿಹಾಸವುಳ್ಳ ಈ ದೇಶದ ಮೂಲನಿವಾಸಿಗಳ ವಂಶಜನಾದ ನನಗೆ ಏಕೆ ದೊರಕುತ್ತಿಲ್ಲ? ನನ್ನನ್ನು ಒಳಗೆ ಹೋಗಲು ಅಪ್ಪಣೆ ಕೊಡಲು ನಿರಾಕರಿಸಿದ್ದು ಸಾಧುವೇ?" ಎನ್ನುತ್ತ ನನ್ನ ಕಡೆ ನೋಡಿದ. ನನ್ನ ಮುಖ ಕೆಂಪಾಯಿತು, ಆಗ ನಾನೂ ಒಬ್ಬ 'ರೆಡ್-ಇಂಡಿಯನ್'ನಂತೆ ಕಂಡಿರಬಹುದು. ನಾನು ಮುಂಗಡ ಬರೆದು ಕೇಳಿಕೊಂಡಿರಲಿಲ್ಲವೆಂದು ಕುಂಟುನೆವ ಕೊಟ್ಟಿದ್ದೀರಿ ಎಂದು ಬುಸುಗುಟ್ಟಿ ಕುಳಿತ. ಅವತ್ತಿನ ಮೀಟಿಂಗಿನಲ್ಲಿ ನಡೆದದ್ದೆಲ್ಲ ಮಾಮೂಲಿ ಬಿ.ಎಸ್. ಬಿಟ್ಟರೆ ಅಂಥ ಮಹತ್ವದ ಚರ್ಚೆಗಳೇನೂ ಆಗಲಿಲ್ಲ. ಸಂಜೆ ನಾವಿಳಿದುಕೊಂಡಿದ್ದ ಹೊಟೆಲಿನ ಲಾಬಿಯಲ್ಲೇ ಅವನು ಸಿಕ್ಕು ಅದೂ ಇದೂ ಮಾತಾಡಿದರೂ ಟೂಸಾನ್‌ನಲ್ಲಿ ಸುಮಾರು ಹತ್ತು ವರ್ಷಗಳ ಹಿಂದೆ ಜೋಳದ ಪೂರಿ ಕೊಡಿಸಿದ್ದಾಗ ಇದ್ದ ಆತ್ಮೀಯತೆ ಕಾಣಲಿಲ್ಲ. ಐದಾರು ವರ್ಷಗಳ ಕೆಳಗೆ ನ್ಯೂ ಮೆಕ್ಸಿಕೋದ ಆಲ್ಬುಕರ್ಕಿಯಲ್ಲೂ ಸಿಕ್ಕಿದ್ದ. ಆವಾಗಲೂ ಚೆನ್ನಾಗೇ ನಡೆದುಕೊಂಡಿದ್ದ. ಇವತ್ತು ಏಕೋ ಮತ್ತೆ ಮತ್ತೆ ದವಡೆ ಮುಟ್ಟಿಕೊಳ್ಳುತ್ತಿದ್ದ ಅವನನ್ನು ಕೇಳಿದೆ, ಏನಪ್ಪ ಹಲ್ಲಿನ ತೊಂದರೆಯೇ? ಅದಕ್ಕವನು ಬಾಯಿ ಬಿಟ್ಟ, ಮೇಲಿನ ಸಾಲಿನ ಹಲ್ಲುಗಳು ಹಲವು, ಕೆಳಗಿನ ಸಾಲಿನಲ್ಲಿ ಹಲವು ಮಾಯವಾಗಿದ್ದವು. 'ಆನೇ ಮುಖದವನೇ, ಹಲ್ಲುನೋವಿಂದ ಒದ್ದಾಡಿಕೊಂಡು ಬಂದೆ, ಹೊರಗೆ ಕೂರಿಸಿ ಅವಮಾನ ಮಾಡಿದರು' ಎಂದು ಗೊಣಗಿದ. 'ನೀನೂ ನನ್ನಂತೆ ಬೆಳಗಾಗೆದ್ದು ಗಣೇಶನಿಗೆ ನಮಸ್ಕಾರ ಹಾಕಿ ಬಂದಿದ್ದರೆ ನಿನಗೂ ಪ್ರವೇಶ ದೊರಕುತ್ತಿತ್ತೇನೋ' ಎಂದಾಗ ಹಗುರವಾಗಿ ನಕ್ಕ. ಆಮೇಲೆ, ಅವನು ಅವನ ದಾರಿ ಹಿಡಿದ, ನಾವೆಲ್ಲ ಊಟಕ್ಕೆ ಹೊರಟೆವು.

ಕೆಲ ವರ್ಷಗಳ ನಂತರ ಮತ್ತೆ ಅವನನ್ನು ಕಾಣುವ ಯೋಗ ಬಂತು. ಪಶ್ಚಿಮದಲ್ಲಿರುವ ನೆವಾಡ ಪ್ರಾಂತ್ಯದಲ್ಲಿ ಒಂದು ರಹಸ್ಯ ಪ್ರದೇಶವಿದೆ, ಅಲ್ಲೇ ಮೊದಲ ಅಣುಬಾಂಬಿನ ಪರೀಕ್ಷೆ ನಡೆದ ಸ್ಥಳ, ಮತ್ತು ಇನ್ನೂ ಅನೇಕ ಪರೀಕ್ಷೆಗಳು ದಶಕಗಟ್ಟಲೆ ನಡೆದ ಸ್ಥಳ. ದಶಕಗಳ ಹಿಂದೆ ನಡೆದ ಅಣು ಬಾಂಬಿನ ಸ್ಫೋಟದ ಪರೀಕ್ಷೆಯಿಂದ ಉಂಟಾದ ದೊಡ್ಡದೊಂದು ಕ್ರೇಟರ್ ಇನ್ನೂ ವಿಕಿರಣ ಕ್ರಿಯೆಯಿಂದ ಮುಕ್ತವಾಗಿಲ್ಲ. ಆ ಸ್ಥಳಕ್ಕೆ ಭೇಟಿ ಕೊಡುವಾಗಲೂ ನಮ್ಮ ಹಯವದನನಿಗೆ ಕ್ಲಿಯರೆನ್ಸ್ ಕೊಡದೇ ಹೋದದ್ದು ನೋಡಿ ನನಗೂ ಅವನ ಮೇಲೆ ಅನುಕಂಪ ಬಂತು. ಅಲ್ಲಿಂದ ಹಿಂದಿರುಗಿದ ನಂತರ ನಡೆದ ಸಾರ್ವಜನಿಕ ಮೀಟಿಂಗಿನಲ್ಲಿ ಮತ್ತೆ ಅವನ ಭೇಟಿ ಆಯಿತು. ಈ ಬಾರಿ ಅವನು ಪಯೂಟೆ, ಶೊಶೋನಿ, ಮತ್ತು ನಾವಹೋ ಇಂಡಿಯನ್ ಟ್ರೈಬ್ಸ್‌ಗಳ ಪ್ರತಿನಿಧಿಯಾಗಿ ದಯಮಾಡಿಸಿದ್ದ. ನೆವಾಡ ಅಣು ಪರೀಕ್ಷಾ ಪ್ರದೇಶದ ಬಳಿ ಇರುವ 'ಯಕ್ಕ' ಬೆಟ್ಟದಡಿ ಒಂದು ಸುರಂಗವನ್ನು ಅಗೆದು, ಅಲ್ಲೊಂದು ಭೂಮ್ಯಂತರ್ಗತ ಉಗ್ರಾಣವನ್ನು ಕಟ್ಟಿ, ಅಮೆರಿಕದಲ್ಲಿ ಇದುವರೆಗೆ ಶೇಖರವಾಗಿರುವ ಅಣುತ್ಯಾಜ್ಯಗಳನ್ನೆಲ್ಲ ಭೂಗತಮಾಡಿ ಒಪ್ಪ ಮಾಡಬೇಕೆಂಬುದು ಎನರ್ಜಿ ಇಲಾಖೆಯ ಉದ್ದೇಶ. ಅಂಥ ಒಂದು ಬೆಟ್ಟದಡಿಯ ಅಣು-ತ್ಯಾಜ್ಯ-ಉಗ್ರಾಣದ ವಿನ್ಯಾಸದ ಸಮೀಕ್ಷೆ ನಡೆಸುವುದು ಅಣು ಶಕ್ತಿ ಆಯೋಗದ

ಕೆಲಸ. ಅದರ ನಿಮಿತ್ತ ಲಾಸ್ ವೇಗಸ್ ನಗರದಲ್ಲಿ ನಡೆದ ಲೆಕ್ಕವಿಲ್ಲದಷ್ಟು ಮೀಟಿಂಗುಗಳಲ್ಲಿ ಭಾಗವಹಿಸಲು ಹಯವದನರಾಯ ತಪ್ಪದೇ ಹಾಜರಾಗುತ್ತಿದ್ದ. ಪ್ರತಿ ಮೀಟಿಂಗಿನಲ್ಲೂ ಒಂದೇ ರಾಗದಲ್ಲಿ, ಒಂದೇ ಪಲ್ಲವಿಯನ್ನು ಒಂದೇ ತಾಳದಲ್ಲಿ ಹಾಡಲು ಅವನು ಬಂದೇ ಬರುತ್ತಿದ್ದ. ನಿಯಮದ ಪ್ರಕಾರ ಅವನಿಗೆ ಆದಿಯಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಮಾತಾಡಲು ಅವಕಾಶ ಕಲ್ಪಿಸುತ್ತಿದ್ದರು. ಆದಿಯಲ್ಲಿ ಚಕ್ಕಳಮಕ್ಕಳ ಹಾಕಿ ಕುಳಿತು ಅವನ ಮಂತ್ರಪಠಣ ಮಾಡಿ ಪವಿತ್ರ ನದಿಗಳನ್ನು, ಬೆಟ್ಟಗಳನ್ನು, ಆಕಾಶ ಮತ್ತು ಭೂಮಿಯನ್ನು ವಂದಿಸಿ ಸೂರ್ಯದೇವನಿಗೆ ಕೈಮುಗಿದು ಕೂರುವುದನ್ನು ಅವ ಮುಂದುವರೆಸಿದ್ದ. ಮಧ್ಯದಲ್ಲಿ ಏನಾದರೊಂದು ಪ್ರಶ್ನೆ ಕೇಳಿ ಉತ್ತರವನ್ನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದ. ಕೊನೆಯಲ್ಲಿ, ಅವನ ಸಮಾರೋಪ ಭಾಷಣದ ಸಾರಾಂಶ ಎಲ್ಲರಿಗೂ ಕಂಠಪಾಠವಾಗಿತ್ತು. "ಸುಮಾರು ಎಪ್ಪತ್ತೋ ಎಂಬತ್ತೋ ಸಾವಿರ ಟನ್ನುಗಳಷ್ಟು ತ್ಯಾಜ್ಯವಸ್ತುಗಳನ್ನು ಭೂಮಿಯಡಿ ಹುದುಗಿಸಿಟ್ಟು ಲಾಸ್ ವೇಗಸ್ ನಗರವನ್ನು ಕಬಳಿಸಹೊರಟಿದ್ದೀರಾ? ಹತ್ತಿರದಲ್ಲೆ ಅಗ್ನಿಪರ್ವತಗಳಿವೆ ಗೊತ್ತೆ? ಅವುಗಳು ಬೆಂಕಿ ಉಗಳಿದರೆ ನೇರ ಯಕ್ಕ ಬೆಟ್ಟದ ನಿಮ್ಮ ಸುರಂಗದ ದ್ವಾರವನ್ನು ತಲುಪಿ, ನೇರ ಉಗ್ರಾಣದೊಳಕ್ಕೇ ಹರಿದು, ಅಲ್ಲಿ ಸಂಗ್ರಹಿಸಿರುವ ತ್ಯಾಜ್ಯದ ಪೆಟ್ಟಿಗೆಗಳನ್ನು ಕರಗಿಸಿ, ದೊಡ್ಡದೊಂದು ಸ್ಫೋಟ ಸಂಭವಿಸುತ್ತದೆ. ಅದೇ ಸಮಯದಲ್ಲಿ ಭೂಕಂಪವು ಆಗೇ ಆಗುತ್ತದೆ. ನೀವು ಹೂತಿಡುವ ಅಪಾಯಕಾರೀ ತ್ಯಾಜ್ಯ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಲಾಸ್ ವೇಗಸ್ ನಗರದ ಕೆಸೀನೋಗಳಲ್ಲಿ ಜೂಜಾಡುತ್ತಿರುವ ಹತ್ತಾರು ಸಹಸ್ರ ಮಂದಿ ಕ್ಷಣಾರ್ಧದಲ್ಲಿ ಸತ್ತುಬೀಳುವುದನ್ನು ತಪ್ಪಿಸಲು ಸಾಧ್ಯವೇ? ಉಗ್ರಾಣಕ್ಕೆ ತ್ಯಾಜ್ಯವಸ್ತುಗಳನ್ನು ಕೊಂಡೊಯ್ಯುವ ರೈಲ್ವೆ ವ್ಯಾಗನ್ನುಗಳು ಅಪಘಾತಕ್ಕೆ ಒಳಗಾದರೆ ಸುತ್ತಮುತ್ತಲ ಜನರೆಲ್ಲಾ ಸಾಯದೇ ಇರುವರೇ?" ಇವೇ ಮುಂತಾದ ಪ್ರಶ್ನೆಗಳನ್ನು ಸುರಿಸಿ, ಸುತ್ತಲೂ ನೋಡುತ್ತಿದ್ದ. ಎಲ್ಲರೂ ದಂಗಾಗುತ್ತಿದ್ದರು, ಎನರ್ಜಿ ಇಲಾಖೆಯವರು ಮಾತ್ರ ಇವನ ಭಾಷಣದಿಂದ ಕೊಂಚವೂ ವಿಚಲಿತರಾದಂತೆ ಕಾಣುತ್ತಿರಲಿಲ್ಲ. ತಾಂತ್ರಿಕ ತಜ್ಞರು ಪ್ರಸ್ತುತಪಡಿಸುತ್ತಿದ್ದ ಕಂಪ್ಯೂಟರ್ ಮಾದರಿಗಳ ಲೆಕ್ಕಾಚಾರದ ಫಲಿತಾಂಶವನ್ನು ಅವನು ನಗೆಗೀಡುಮಾಡುತ್ತಿದ್ದ.

ಎನರ್ಜಿ ಇಲಾಖೆಯ ಒಂದು ಮೀಟಿಂಗ್ ಅಣುಶಕ್ತಿ ನಿಯಂತ್ರಣ ಆಯೋಗದಲ್ಲಿ ನಡೆದಾಗ ಹಯವದನ ಅಲ್ಲಿಗೆ ಹಾಜರಾದ. ಪ್ರವೇಶದ್ವಾರದಲ್ಲಿ ಸೆಕ್ಯೂರಿಟಿ ಗಾರ್ಡುಗಳ ಬಳಿ ತನ್ನ ಹೆಸರನ್ನು ನೋಂದಾಯಿಸಿ ನನಗೆ ಕರೆ ಮಾಡಿಸಿದ. ನಾನು ಆತನಿಗೆ ಎಸ್ಕಾರ್ಟ್ ಆಗಿ ಕಾನ್ಫರೆನ್ಸ್ ರೂಮಿಗೆ ಅವನನ್ನು ಕರೆತರಲು ಹೋದಾಗ ಅಚ್ಚರಿ ಕಾದಿತ್ತು! ಹಯವದನನ ಜಡೆ ಮಾಯವಾಗಿ ಕ್ರಾಪ್ ಮಾಡಿಸಿದ್ದ. ಗಡ್ಡ ಮೀಸೆ ಒಂದೂ ಇರಲಿಲ್ಲ. ಮೂರೆಳೆ ಮಣಿಸರವಾಗಲೀ ಹಣೆಗೆ ಸುತ್ತಿದ್ದ ಮಣಿಗಳ ಬ್ಯಾಂಡಾನ ಮತ್ತು ಅದಕ್ಕೆ ಸಿಕ್ಕಿಸಿದ್ದ ಹಕ್ಕಿ ಪುಕ್ಕಗಳು ಒಂದೂ ಇರಲಿಲ್ಲ. ಮೂರು-ತುಂಡಿನ ಸೂಟ್ ಧರಿಸಿದ್ದ. ಅಚ್ಚ ಬಿಳಿ ಶರ್ಟು. ಇಷ್ಟಾದರೂ ತನ್ನ ಕಾಡೆಮ್ಮೆ ಚರ್ಮದ ಟೈ ಮಾತ್ರ ಅವನ ಕತ್ತಿನ ಸುತ್ತ ರಾರಾಜಿಸುತ್ತಿತ್ತು. ನನ್ನ ನೋಡಿ ನಕ್ಕು ಹಲ್ಲು ಕಿರಿದ. ಹಳದಿ ಹಲ್ಲುಗಳೆಲ್ಲ ಮಾಯವಾಗಿ

ಅಚ್ಚ ಬಿಳುಪಿನ ಹೊಸ ಹಲ್ಲುಗಳು ಹೊಳೆದವು! ನೀಲಿ ಬಣ್ಣದ ಕ್ಯೂ ಕ್ಲಿಯರೆನ್ಸ್ ಬ್ಯಾಡ್ಜ್ ಅವನ ಜೋಬಿನ ಮೇಲೆ ಕ್ಲಿಪ್ ಸಮೇತ ನೇತಾಡುತ್ತಿತ್ತು. ಅದನ್ನು ಮುಟ್ಟಿ ನೋಡಿದೆ, 'ಸೇಕ್ರೆಡ್ ಸನ್' (ಪವಿತ್ರ ಸೂರ್ಯ) ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡಿದ್ದ. 'ನಾನೀಗ ಅಮೆರಿಕ ಸರ್ಕಾರದ ಬ್ಯೂರೋ ಆಫ್ ಇಂಡಿಯನ್ ಅಫೇರ್ಸ್‌ನಲ್ಲಿ ವೆಲ್‌ಫೇರ್ ಫಾರ್ ನೇಟಿವ್ ಅಮೆರಿಕನ್ಸ್ ಎಂಬ ವಿಭಾಗಕ್ಕೆ ನಿರ್ದೇಶಕ. ಈ ನನ್ನ ನೀಲಿ ಬ್ಯಾಡ್ಜಿನ ಸಹಾಯದಿಂದ ಸರ್ಕಾರದ ಯಾವ ರಹಸ್ಯ ಪ್ರದೇಶಕ್ಕೆ ಬೇಕಾದರೂ ಹೋಗಬಹುದು. ಮುಂದಿನ ಬಾರಿ ನಾವಿಬ್ಬರೂ ಒಂದೇ ಮೀಟಿಂಗಿನಲ್ಲಿ ಭೇಟಿ ಮಾಡಿದರೆ, ನನ್ನನ್ನು ಹೊರಗೆ ಕೂರಿಸಲು ಯಾರಿಗೂ ಸಾಧ್ಯವಿಲ್ಲ ಎಂದು ಗಹಗಹಿಸಿ ನಕ್ಕ. ವೇಷ ಬದಲಾದರೂ ವ್ಯಕ್ತಿ ಬದಲಾಗಿಲ್ಲವೆಂದು ಅನ್ನಿಸಿತಾದರೂ ಏನೋ ವಿಚಿತ್ರವೆನ್ನಿಸಿತು. ಅವನು ನಕ್ಕರೂ ನಾನು ನಗಲಿಲ್ಲ. ಇಬ್ಬರೂ ಕಾನ್ಫರೆನ್ಸ್ ಹಾಲಿಗೆ ನಡೆದೆವು. "ಇಲ್ಲಿಯವರೆಗೆ ನಾವು ಮಾಡಿರುವ ಮುನ್ನಡೆಯ ಬಗ್ಗೆ ಮಾತಾಡಲು ಬಂದಿದ್ದೇನೆ" ಎಂದು ಮತ್ತೊಮ್ಮೆ ಕೊಚ್ಚಿದ.

ಅಣು ಶಕ್ತಿ ನಿಯಂತ್ರಣ ಆಯೋಗದ ಔಟ್‌ರೀಚ್ ವಿಭಾಗ, ಎನರ್ಜಿ ಇಲಾಖೆಯ ಜೊತೆ ಸೇರಿ ನಡೆಸುವ ಮೀಟಿಂಗಿಗೆ ಭಾಷಣಕಾರನಾಗಿ ಹಯವದನ, ಕ್ಷಮಿಸಿ, ಸೇಕ್ರೆಡ್ ಸನ್ ಆಹ್ವಾನಿತನಾಗಿ ಬಂದಿದ್ದ. ಹೆಚ್ಚು ಸಭಿಕರಿಲ್ಲದ ಸಣ್ಣ ಮೀಟಿಂಗ್ ಅದಾಗಿತ್ತು. ಕೆಲವೇ ಔಪಚಾರಿಕ ಘೋಷಣೆಗಳಾದ ನಂತರ ಪವಿತ್ರ ಸೂರ್ಯ ತನ್ನ ಪ್ರಭೆಯನ್ನು ಬೀರಿದ. ಈಗ ಅಮೆರಿಕದಲ್ಲಿ ಒಟ್ಟಾರೆ ಎಷ್ಟು ಇಂಡಿಯನ್ ಟ್ರೈಬ್ಸ್ ಇವೆ, ಅವುಗಳ ಜನಸಂಖ್ಯೆ ಎಷ್ಟೆಷ್ಟು, ಅವುಗಳಲ್ಲಿ ಎಷ್ಟು ಬುಡಕಟ್ಟುಗಳಿಗೆ ಸಂಪೂರ್ಣ ಸಾರ್ವಭೌಮತ್ವದ ಸ್ಟೇಟಸ್ ಇದೆ, ಅಂಥಾ 'ರಾಷ್ಟ್ರ'ಗಳು ಯಾವುವು, ಎಲ್ಲೆಲ್ಲಿವೆ, ಮುಂತಾದ ವಿವರಗಳ ಅಂಕಿ ಅಂಶಗಳನ್ನು ಸ್ಪಷ್ಟವಾಗಿ ಪ್ರಸ್ತುತಪಡಿಸಿದ. ಬೇರೆ ಬೇರೆ ಬುಡಕಟ್ಟಿನ ಜನರ ಸಂಸ್ಕೃತಿ, ಭಾಷೆ, ವೇಷಭೂಷಣ ಮುಂತಾದ ವಿವರಗಳನ್ನು ಚಿತ್ರಗಳಸಹಿತ ಪ್ರಸ್ತುತ ಪಡಿಸಿದ. ಅಮೆರಿಕ ಸರ್ಕಾರ ಕಟ್ಟಿಸಿರುವ ಪುಸ್ತಕಾಲಯಗಳು, ಆರೋಗ್ಯ ಘಟಕಗಳು, ವ್ಯಾಯಾಮಶಾಲೆಗಳು, ಪ್ರಾಥಮಿಕ ಶಾಲೆಗಳು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿಶ್ವವಿದ್ಯಾನಿಲಯಗಳಲ್ಲಿ ಸರಕಾರದ ವಿದ್ಯಾರ್ಥಿವೇತನಕ್ಕೆ ಇರುವ ಅವಕಾಶ, ಮುಂತಾಗಿ ವಿವರಿಸಿದ. ಪ್ರತಿ ರಾಷ್ಟ್ರಕ್ಕೂ ಅವರವರ ಸಂವಿಧಾನವಿದೆ, ಸರಕಾರದಿಂದ ಪ್ರತಿ ಪ್ರಜೆಗೂ ತಿಂಗಳು ತಿಂಗಳು ಖರ್ಚಿಗೆ ಹಣ, ಬ್ಯಾಂಕಿಂಗ್ ವ್ಯವಹಾರದ ಅನುಕೂಲ, ಮುಂತಾದ ಸವಲತ್ತುಗಳ ಬಗ್ಗೆ ಮಾಹಿತಿ ಕೊಟ್ಟ. ಹಣ ವಸೂಲು ಮಾಡಲು ಯಾರನ್ನು ಹೇಗೆ ಸಂಪರ್ಕಿಸಬೇಕು, ಇವೇ ಮುಂತಾದ ವಿವರಗಳನ್ನು ಕೊಟ್ಟು ತನ್ನ ಕಛೇರಿಯಲ್ಲಿ ಎಲ್ಲಾ ಮೂಲನಿವಾಸಿಗಳಿಗೂ ಸದಾ ಸ್ವಾಗತವಿದೆ ಎಂಬ ಮಾತಿನೊಂದಿಗೆ ತನ್ನ ಪ್ರಸ್ತುತಿಯನ್ನು ಮುಗಿಸಿದ.

ಮೀಟಿಂಗ್ ಮುಗಿದ ನಂತರ ಸೇಕ್ರೆಡ್ ಸನ್‌ನನ್ನು ನಮ್ಮ ಕೆಫೆಟೇರಿಯಾದಲ್ಲಿ ಲಂಚಿಗೆ ಕರೆದೊಯ್ದೆ. ನಾವಿಬ್ಬರೂ ಮೊದಲು ಭೇಟಿಯಾಗಿದ್ದು 1980ರ ಆಸುಪಾಸಿನಲ್ಲಿ, ವಿಸ್ಕಾನ್ಸಿನ್ ಪ್ರಾಂತ್ಯದ ಲಕ್ರಾಸ್ ನಗರದಲ್ಲಿ. ಆನಂತರ, ಐದಾರು ವರ್ಷಗಳಿಗೊಮ್ಮೆ

ದೇಶದ ನಾನಾ ನಗರಗಳಲ್ಲಿ, ನಾನಾ ಸಮ್ಮೇಳನಗಳಲ್ಲಿ ಸಂಧಿಸಿದ್ದೇವೆ. ನಮ್ಮ ಕೆಫೆಟೇರಿಯದ ಸಪ್ಪೆ ಲಂಚು ತಿನ್ನುವಾಗ ಟೊರೊನ್ಟೋ ರಿಸರ್ವೇಶನ್ ಬಳಿ ನಾವಿಬ್ಬರೂ ತಿಂದ ಜೋಳದ ಪೂರಿ + ಜೇನುತುಪ್ಪವನ್ನು ಇಬ್ಬರೂ ನೆನೆದು ನ್ಯಾಸ್ಟಾಲ್ಜಿತರಾದೆವು. ನನಗೆ ತಡೆಯಲಾಗಲಿಲ್ಲ, ಒದ್ದೆ ಕಣ್ಣುಗಳನ್ನು ಒರೆಸಿಕೊಳ್ಳುತ್ತ ಕೇಳಿದೆ, "ಅಯ್ಯಾ ಹಯವದನ, ಕ್ಷಮಿಸು, ನನಗೆ ಆ ಹೆಸರೇ ಹೆಚ್ಚು ಪ್ರಿಯ, ಈ ಕಚಡ ಜನರನ್ನು ಆ ಪಾಟಿ ಶಪಿಸುತ್ತಿದ್ದ ನೀನು ಹೇಗೆ ಇದ್ದಕ್ಕಿದ್ದಂತೆ 'ಬಿಳಿಗಾನ ಲಕೋಟ' ಆಗಿಬಿಟ್ಟೆ?" ಎಂದು ಕೇಳಿದೆ. ಅವನು ಬೆಚ್ಚಿದಂತೆ ಕಾಣಿಸಿತು. "ಏನಂದೆ? 'ಬಿಳಿಗಾನ ಲಕೋಟ!' ವೈಟ್ ಮ್ಯಾನ್ಸ್ ಫ್ರೆಂಡ್! ಎಲ್ಲಿಂದ ಕಲಿತೆ? ನಾವಹೊ ಭಾಷೆ!" ಎಂದು ಬೆನ್ನಿಗೊಂದು ಪ್ರೀತಿಯ ಗುದ್ದನ್ನು ಗುದ್ದಿದ. "ನಾವು ಹಿಂದೊಮ್ಮೆ ಮಾತಾಡಿದ್ದು ನೆನಪಿದೆಯೇ, ಗೆಳೆಯ? ಅಮೆರಿಕದ ಮೂಲನಿವಾಸಿಗಳಿಗೂ ಭಾರತೀಯರಿಗೂ ಏನೋ ಸಂಬಂಧ ಇದ್ದೇ ಇರಬೇಕು. ಈಗ ನೋಡು, ಕಚಡ ಎಂಬುದು ಅಚ್ಚ ಕನ್ನಡ ಶಬ್ದ, ಹಾಗೆ ಬಿಳಿ ಅನ್ನುವುದೂ ಅಚ್ಚ ಕನ್ನಡ ಶಬ್ದ. ಒಂದಿಷ್ಟು ಸಂಶೋಧನೆ ಮಾಡಲು ಹೊರಟಾಗ ನನಗೆ ಸಿಕ್ಕ ಒಂದೆರಡು ಶಬ್ದಗಳು ಭಾರತೀಯ ಭಾಷೆಗಳ ಶಬ್ದಗಳೇ ಅನ್ನಿಸಿದವು." ಅವನು ಇನ್ನೂ ಅಚ್ಚರಿಪಡುತ್ತಿರುವಾಗಲೇ ಕೇಳಿದೆ, "ನೀನು ಬಿಳಿಯರ ಮಿತ್ರನಾದದ್ದು ಹೇಗೆ, ಏಕೆ ವಿವರಿಸು," ಎಂದು. ಅವನು ಗಂಭೀರನಾದ, ಒಂದು ದೊಡ್ಡ ಉಸಿರು ಬಿಟ್ಟ. "ನೋಡು ತಮ್ಮ, ನನ್ನ ಜೀವನದ ಮೂರು ನಾಲ್ಕು ದಶಕಗಳನ್ನು ನಿರರ್ಥಕವಾದ ಕದನದಲ್ಲಿ ಕಳೆದೆ. ಅದರಿಂದ ನಮ್ಮ ಜನಕ್ಕೆ ಯಾವ ಉಪಯೋಗವೂ ಆಗಲಿಲ್ಲ. ನಮ್ಮ ಜನರೇ ನನಗೆ ಸಹಾಯ ಮಾಡಲಿಲ್ಲ. ಒಬ್ಬಂಟಿಗನಾಗಿ ಎಷ್ಟು ವರ್ಷ ಸೆಣೆಸಬಹುದು, ಹೇಳು? ನಮ್ಮ ಇಡೀ ಸಂಸ್ಕೃತಿಯನ್ನೇ ನಾಶಮಾಡಿ, ಕೊಡಬಾರದ ಹಿಂಸೆ ಕೊಟ್ಟು ನಮ್ಮ ಕುಲವೇ ನಶಿಸಿಹೋದ ಮೇಲೆ, ನನ್ನಂಥ ಒಬ್ಬಿಬ್ಬರು ಏನು ತಾನೆ ಮಾಡಲಾದೀತು? 'ಇಫ್ ಯು ಕ್ಯಾಂಟ್ ಬೀಟ್ ದೆಮ್, ಜಾಯಿನ್ ದೆಮ್' ಎಂಬ ಮಾತು ಕೇಳಿರಬಹುದು. ನನ್ನ ವೇಷ-ಭೂಷಣ, ಮಣಿ ಸರಗಳು, ಪುಕ್ಕಗಳು, ನೀಳಕೇಶ ಎಲ್ಲವನ್ನೂ ತ್ಯಜಿಸಬೇಕಾಯಿತು. ನನ್ನ ಕಾಡೆಮ್ಮೆ ಚರ್ಮದ ಟೈ ಒಂದೇ ಇಂದಿನ ನನಗೂ ಅಂದಿನ ಕುದುರೇಮುಖನಿಗೂ ನಡುವೆ ಉಳಿದಿರುವ ನಂಟಿನ ಗಂಟು" ಎನ್ನುತ್ತ ಇದೋ ನೋಡು ಎಂದು ಟೈನಲ್ಲಿರುವ ಎರಡು ಗಂಟುಗಳನ್ನು ಪ್ರೀತಿಯಿಂದ ನೇವರಿಸಿದ. ಇಬ್ಬರೂ ಸುಮ್ಮನಾದೆವು.

"ನನ್ನ ಮಾತಿನಿಂದ ನೀನು ನಿರಾಶನಾಗಿರುವೆಯೆಂದು ನನಗೆ ಗೊತ್ತು, ಆದರೂ ಹೇಳುತ್ತೇನೆ ಕೇಳು. ಸರ್ಕಾರದ ಯಾವೊಂದು ನಿರ್ಧಾರವನ್ನೂ ಬದಲಾಯಿಸಲು ನನ್ನ ಕೈಲಿ ಆಗಲಿಲ್ಲ. ಆದರೆ, ಈಗ, ನನ್ನ ವಾರ್ಷಿಕ ವಹಿವಾಟು 25 ಮಿಲಿಯನ್ ಡಾಲರುಗಳು, ಕೇವಲ ನನ್ನ ಒಂದು ವಿಭಾಗದ್ದು. ಬುಡಕಟ್ಟಿನ ಜನಾಂಗಗಳಿಗೆ ಉಪಯುಕ್ತವಾದ ಕೆಲಸವನ್ನು ಮಾಡುತ್ತಿದ್ದೇನೆಂದು ನನಗೆ ಸಮಾಧಾನವಿದೆ. ಈ ಕೆಲಸವನ್ನು ಮೊದಲೇ ಏಕೆ ಮಾಡಲಿಲ್ಲವೆಂದು ತಲೆ ಚೆಚ್ಚಿಕೊಂಡಿದ್ದೇನೆ, ಬೆಟರ್ ಲೇಟ್ ದ್ಯಾನ್ ನೆವರ್" ಎಂದು ವಿಷಾದದ ನಗೆಯೊಂದನ್ನು ನಕ್ಕು ಎದ್ದು ನಿಂತ. "ಮುಂದಿನ ಮೀಟಿಂಗಿನಲ್ಲಿ

ಯಾವುದಾದರೂ ನಗರದಲ್ಲಿ ಸಿಕ್ಕೋಣ" ಅಂದ. ಅದಕ್ಕೆ, ನಾನು, ಇಲ್ಲಪ್ಪ, ನಾನು ಅಮೆರಿಕದ ಅಣುಶಕ್ತಿ ನಿಯಂತ್ರಣ ಆಯೋಗದಿಂದ ಮುಂದಿನ ತಿಂಗಳು ನಿವೃತ್ತನಾಗುತ್ತಿದ್ದೇನೆ. ಇದು ಪ್ರಾಯಶಃ ನಮ್ಮ ಗುಡ್ ಬೈ ಎಂದು ಕೈ ಕುಲುಕಿದೆ. ಅವನು ಕೈಮುಗಿದು, 'ಎಲ್ಲೈ ಗಜಮುಖನೇ, ಮುಂದೇನು ಮಾಡಬೇಕೆಂದಿರುವೆ' ಎಂದು ಕೇಳಿದ. 'ನೇಟಿವ್ ಅಮೆರಿಕನ್ ಪೊಯೆಟ್ರಿ ಓದಿ ಕೆಲವನ್ನು ನನ್ನ ಮಾತೃಭಾಷೆಗೆ ಅನುವಾದಿಸಬೇಕೆಂದಿದ್ದೇನೆ' ಎಂದೆ. ಅವನ ಕಣ್ಣುಗಳು ಹೊಳೆದವು. "ಹೌದೇ?" ನೀನೆ ಧನ್ಯ! ನಾನು ಪ್ರತಿ ನಿತ್ಯ ಆನೆಮೊಗದ ಗಣೇಶನಿಗೆ ಕೈಮುಗಿಯದೇ ನನ್ನ ಯಾವ ಕೆಲಸವನ್ನೂ ಪ್ರಾರಂಭಿಸುವುದಿಲ್ಲ ಎಂದು ಅತ್ಯಂತ ಪ್ರೀತಿಯಿಂದ ಬಿಗಿದಪ್ಪಿದ. ಆ ತಬ್ಬುಗೆಯಲ್ಲಿ ಎಂಥ ಬಿಗಿ, ನಾನು ನಲುಗಿಹೋದೆ! ಹೊರಬಾಗಿಲವರೆಗೆ ಜೊತೆಯಲ್ಲೇ ಹೋಗಿ ಕಳಿಸಿ ಬಂದೆ.

❑

5

ಕೆನಡಾದ ದೇಶೀ ಕಲೆಗಳು ಮತ್ತು ಭಾರತೀಯ ಸಂವೇದನೆಗಳು

ರಾಗು ಕಟ್ಟಿನಕೆರೆ, ಮಾರ್ಕಮ್, ಕೆನಡಾ

*

ಪೀಠಿಕೆ

ಜಾನಪದ, ದೇಶೀ, ಮಾರ್ಗ ಮತ್ತು ಶಾಸ್ತ್ರ ಈ ವರ್ಗೀಕರಣಗಳ ಅರ್ಥವನ್ನು ಉತ್ತರ ಕೆನಡಾದ ಐರೋಪ್ಯ ಮತ್ತು ಆರ್ಕಟಿಕ್ ವಲಯದ ಮೂಲಜನರಾದ ಇನ್ಯೂಟ್, ಕ್ರೀ, ಅನಿಶ್ನಾಬಿ, ಕಲಾಲ್ಲಿತ್ ಮತ್ತು ಮೇಟಿಸ್ ಇತ್ಯಾದಿ ಸಮುದಾಯದ ಜನರ ಕಲೆಗಳಿಗೆ ಅನ್ವಯಿಸುವ ಮತ್ತು ಭಾರತೀಯ ಸಂವೇದನೆಗಳಿಗೆ ಇರುವ ಸಾಮ್ಯವನ್ನು ಕಂಡುಕೊಳ್ಳುವ ಪ್ರಯತ್ನ ಇದು. ಜಾನಪದ ಎಂದೊಡನೆ ಪರಿಷ್ಕೃತ ಅಲ್ಲದ ಎಂಬಿತ್ಯಾದಿ ಸೀಮಿತ ಅರ್ಥವನ್ನು ಗ್ರಹಿಸುವ ಅಭ್ಯಾಸ ಇದೆ. ಜಾನಪದವನ್ನು ಜನಾಂಗಕ್ಕೆ ತಾಳೆ ಹಾಕಿ ಜನಾಂಗದ ಅಧ್ಯಯನದ ಅಂಗವಾಗಿ ನೋಡುವುದು ಐರೋಪ್ಯ ಅಧ್ಯಯನಕಾರರಿಗೆ (ethnomusicology) ರೂಢಿಯಾಗಿದೆ. ಇವೆಲ್ಲ ಸರಿಯಲ್ಲ. ಹಾಗಾಗಿ ಇಲ್ಲಿನ ಸ್ಥಳೀಯ ಕಲೆಗಳನ್ನು ಭಾರತೀಯ ಕಲಾಮೀಮಾಂಸೆಯ, ನಾಟ್ಯಶಾಸ್ತ್ರದ ದೃಷ್ಟಿಯಿಂದ ನೋಡಿದರೆ, ಜಟಿಲತೆಯ ಗೋಜಲು ಕಳೆದು ಹೊಸ ಅರ್ಥ ಹೊಳೆಯಬಹುದು. ಹಾಗೆಯೇ ಈ ದೃಷ್ಟಿ, ಮೂಲಜನರು ತಮ್ಮನ್ನು ನೋಡುವ ದೃಷ್ಟಿಗೆ ವಿರುದ್ಧವಾಗಿಯೂ ಇರಬಾರದು. ಇದು ಇನ್ನೂ ಮಾಡಲು ಬಾಕಿ ಇರುವ ಸಂಶೋಧನೆಯ ಮತ್ತು ಸಾಹಿತ್ಯದ ಕೆಲಸ. ಹಾಗಾಗಿ ಇಲ್ಲಿ ಪ್ರಾರಂಭಿಕವಾಗಿ ಆದಷ್ಟು ಸರಳವಾಗಿ ಮೂಲಜನರ ಕಲೆಯ ಹಿನ್ನೆಲೆಯಲ್ಲಿ ಒಂದು ಮಿತಿಯಲ್ಲಿ ವಿಚಾರ ಮಾಡಿದ್ದೇನೆ. ಈ ದಿಕ್ಕಿನಲ್ಲಿ ಮುಂದಾಗುವ ಕೆಲಸಕ್ಕೆ ಪೂರಕವಾಗಲಿ ಎನ್ನುವ ಆಸೆ.



ಅರ್ಥ– ಬಳಕೆ

ಜನಪದ ಎಂದರೆ ಜನರ ಸ್ಥಾನ, ಜನರ ನಡೆ ಇರುವ, ಜನರಿರುವ ಪ್ರದೇಶ, ದೇಶ ಎನ್ನುವ ಅರ್ಥ. ಇದರಲ್ಲಿ ಜನ ಎಂದರೆ ಸಹಜವಾಗಿರುವ ಜನ. ಪದ ಎಂದರೆ ಅವರ ಸ್ಥಾನ. ಜನಪದಕ್ಕೆ ಸಂಬಂಧಿಸಿದ್ದು ಜಾನಪದ. ಅಂದರೆ ಜನ ಸಹಜವಾಗಿ ಬಳಸುವುದೆಲ್ಲ ಜಾನಪದ. ಸ್ವಾಭಾವಿಕವಾದ್ದು, ಬುದ್ಧಿಪೂರ್ವಕವಾದ ಕೃತ್ರಿಮಕ್ಕೆ, ಕೃತಕ ವ್ಯವಸ್ಥೆಗೆ ಆಸ್ಪದ ಇಲ್ಲದ್ದು ಎಂಬ ಅರ್ಥ. ಜನ – ಜನನೇ, ಪ್ರಸವೇ, ಅಂದರೆ ಹುಟ್ಟಿನಿಂದ, ಪದ ಗತೌ ಅಂದರೆ ಗತಿ, ಸ್ಥಾನ, ಚಲನ ಇರುವ, ಎಂಬ ಎರಡು ಧಾತುಗಳಿಂದ ಜನ–ಪದ ಶಬ್ದ ಆಗಿದೆ. ಆದರೆ ಈ ಶಬ್ದದ ವ್ಯುತ್ಪತ್ತಿಯ ಬಗ್ಗೆ ಈ ಲೇಖನಕ್ಕಾಗಿ ವಿದ್ವಾನ್ ಶ್ರೀ ಉಮಾಕಾಂತ ಭಟ್ಟರಲ್ಲಿ ಕೇಳಿದಾಗ ಅವರು ಜನ ಮತ್ತು ಪದ ಶಬ್ದ ಒಟ್ಟಿಗೆ ಇರುವುದರಿಂದ, ಜನ್ಯತೇ ಇತಿ ಜನಃ ಎಂದೂ ಗತಿ ಎಂದರೆ ಜ್ಞಾನ ಎಂದೂ ಬಳಸಿ. ಅರ್ಥ ಹುಡುಕುವುದು ಬೇಕಾಗುವುದಿಲ್ಲ ಎಂದರು. ಪದಮುಂಜ ಇದ್ದಾಗ ಶಬ್ದದ ಉದ್ದೇಶವೂ ಅದಲ್ಲ, ಜನರ ಸ್ಥಾನ ಎಂಬ ಅರ್ಥ ಗ್ರಹಿಕೆ ಸಾಕಾಗುತ್ತದೆ, ಜನ ಎಂದರೆ ಸಹಜವಾಗಿರುವ ಜನ, ಜನಪದಕ್ಕೆ ಸಂಬಂಧಿಸಿದ್ದು ಜಾನಪದ (ಜನಪದೇಷು ಭವಂ) ಎಂದು ಅವರು ತಿಳಿಸಿ ಈ ಲೇಖನಕ್ಕೆ ಮಾಹಿತಿ ಸಲಹೆ ಒದಗಿಸಿದ್ದಾರೆ. ಅಂದರೆ, ಜನಪದ ಎಂಬ ಪದಮುಂಜ (ಫ್ರೇಸ್) ವನ್ನು ಜನ ಮತ್ತು ಪದ ಎಂಬ ಎರಡು ಪದಗಳಾಗಿ ವಿಂಗಡಿಸದೇ 'ಕಾಂಪೌಂಡ್

ವರ್ಡ್' ಆಗಿ ಅರ್ಥೈಸಬೇಕು. ಬಿಡಿಸಿ ಅರ್ಥೈಸಿದರೆ, ಹುಟ್ಟು ಮತ್ತು ಜ್ಞಾನ ಎಂಬ ಪದಗಳಿಂದ ಅರ್ಥ ಹುಡುಕಬೇಕಾಗುತ್ತದೆ. ಅದು ತಪ್ಪು ದಾರಿಗೆ ಎಳೆಯುತ್ತದೆ. ಅದರ ಬದಲು ಎರಡನ್ನೂ ಸೇರಿಸಿದರೆ, ಜನರು ಇರುವ ದೇಶದ ಸಾಹಿತ್ಯ, ಸಂಗೀತ ಸಂಸ್ಕೃತಿ ಎಲ್ಲವನ್ನೂ ಒಳಗೊಳ್ಳುವ, ರಂಜಿಸುವ 'ದೇಶೀ' ಎಂಬ ವಿಶಾಲವಾದ ಅರ್ಥ ಬರುತ್ತದೆ, ಈ ವ್ಯಾಖ್ಯಾನಕ್ಕೆ 'ಸಂಗೀತರತ್ನಾಕರ'ದ ವ್ಯಾಖ್ಯಾನವನ್ನು ಬಳಸಬಹುದು. ಹಾಗೂ, ಸಾಹಿತ್ಯದಲ್ಲಿ ದೇಶೀ ಮತ್ತು ಮಾರ್ಗ ಎಂಬ ವಿಂಗಡನೆಗೂ ಈ ರೀತಿ ಅರ್ಥೈಸುವುದು ಸರಿಯಾಗುತ್ತದೆ. ಏಕೆಂದರೆ, ಈ ಅರ್ಥ, ಕಲೆಗಳಿಗೆ ಸೀಮಿತವಾದ್ದಲ್ಲ. ಸಂಪೂರ್ಣ ಸಂಸ್ಕೃತಿಗೆ ಅನ್ವಯ ಆಗುವಂತಾದ್ದು. ಕಲೆಗಳಿಗೆ ಇದನ್ನು ಬಳಸಿದ್ದು ಇತ್ತೀಚೆಗೆ, ಬಹಳ ಹಿಂದೆ ಅಲ್ಲ. ಬಹಳ ಹಿಂದಿನಿಂದ ಇದಕ್ಕೆ ಬಳಕೆಯಾಗುತ್ತಿರುವ ಶಬ್ದ 'ದೇಶೀ' ಎಂದು. ಭಾರತೀಯ ಸಂಗೀತದ ಲಕ್ಷಣ ಗ್ರಂಥಗಳಲ್ಲಿ ಸ್ಥಳೀಯ ಎಂಬ ಅರ್ಥದಲ್ಲಿ ದೇಶೀ ಎಂಬ ಪದವನ್ನು ಬಳಸಿದ್ದಾರೆ. ಜಾನಪದ ಎಂಬ ಶಬ್ದವನ್ನು ಬಳಸಿಲ್ಲ. 'ದೇಶೇ ದೇಶೇ ಜನಾನಾಂ ಯದ್ರುಚ್ಯಾ ಹೃದಯರಂಜಕಮ್' – ಶಾರ್ಙ್ಗದೇವನ ಸಂಗೀತರತ್ನಾಕರ (ಸ್ಥಳೀಯವಾದ ಜನರನ್ನು ರಂಜಿಸುವುದು ದೇಶೀ).

ಹೆಚ್ಚಿನ ನಿಯಮ ಕಟ್ಟಳೆ ಇರುವ ವ್ಯವಸ್ಥೆಗೆ ಶಾಸ್ತ್ರದಲ್ಲಿ ಮಾರ್ಗ ಎಂಬ ಹೆಸರು. ಮಾರ್ಗ ಎಂಬ ಭಾರತ ಕಲೆಗಳ ವಿಭಾಗ ಈಗ ಇಲ್ಲವಾಗಿದೆ. ಕರ್ನಾಟಕಿ, ಯಕ್ಷಗಾನ, ಉತ್ತಾರಾದಿ ಇವನ್ನೆಲ್ಲ ಶಾಸ್ತ್ರಗಳಲ್ಲಿ ದೇಶೀ ಸಂಗೀತ ಎಂಬ ವಿಭಾಗಕ್ಕೆ ಸೇರಿಸಲಾಗಿದೆ. ದೇಶೀಯಲ್ಲೂ ನಿಯಮ ಹಲವಿದೆ ಆದರೆ ಅವು ಸಹಜವಾಗಿ ಪ್ರಾಕೃತಿಕವಾಗಿವೆ. ದೇಶೀ ಎಂಬ ಪದದಲ್ಲಿ ಕನಿಷ್ಠ, ಗರಿಷ್ಠ ಎಂಬುದಿಲ್ಲ. ಎಲ್ಲ ಸ್ಥಳೀಯ ಕಲೆ, ವಸ್ತುವಿಷಯಗಳು ಇದರಡಿಯೇ ಬರುತ್ತವೆ. ಇದು ದೇಶೀ ಮತ್ತು ಜಾನಪದದ ಮೂಲ ಅರ್ಥದ ಹರಹು.

ಇನ್ನು 'Folk' ಎನ್ನುವ ಆಂಗ್ಲ ಪದವೂ ಹತ್ತೊಂಬತ್ತನೆಯ ಶತಮಾನದಲ್ಲಿ ಕಲೆಯ ವಿಭಾಗವಾಗಿ ಬಳಕೆಗೆ ಬಂದಿದ್ದು. ಅದು ಜೆರ್ಮ್ಯಾನಿಕ್ ಮೂಲದ 'volk' ಎಂಬುದರಿಂದ ಹುಟ್ಟಿ, ಹಳೆಯ ಇಂಗ್ಲಿಷ್ನಲ್ಲಿ 'floc' ಆಗಿದೆ. ಡಚ್ ಮತ್ತು ಜರ್ಮನ್ನಲ್ಲಿ volk ಎಂದೇ ಇದೆ. Volkswagen ಕಾರ್ ಇಲ್ಲವೇ, ಅದೂ ಜನರಗಾಡಿ ಎಂದರ್ಥ! Folk ಎಂಬ ಪದಕ್ಕೆ ಸಂವಾದಿ ಅಥವಾ ಸಮಾನ ಅರ್ಥದ ಪದವಾಗಿ ಜಾನಪದ ಎಂದು ಇತ್ತೀಚೆಗೆ ಬಳಕೆಯಾಗುತ್ತಿದೆ. Folk ಪರಿಷ್ಕೃತವಾಗಿ ಮುಖ್ಯ ವಾಕ್ಕಿಗೆ ಬರುತ್ತದೆ ಎನ್ನುವುದು ಐರೋಪ್ಯರ ನಂಬಿಕೆಗಳಲ್ಲಿ ಒಂದು. ಪರಿಷ್ಕೃತವಾಗುತ್ತದೆ ಎನ್ನಬೇಕಾದರೆ ಪರಿಷ್ಕೃತವಾಗಿಲ್ಲ, ಪರಿಷ್ಕರಣೆ ಬೇಕು, ಏನೋ ನ್ಯೂನತೆ ಇದೆ ಎಂದೂ ನಂಬಬೇಕಾಗುತ್ತದೆ. ಈ ನಂಬಿಕೆಗೆ ಕಾರಣ, ಎಲ್ಲವೂ ಬೆಳವಣಿಗೆಯ ದಿಕ್ಕಿಗೇ ಹೋಗುತ್ತವೆ ಎನ್ನುವ ಪಾಶ್ಚಾತ್ಯರ ನಂಬಿಕೆ. ಆದರೆ ಇತಿಹಾಸವನ್ನು ನೋಡಿದರೆ ಅದು ಹಾಗೇ ಆಗುವುದೇನೂ ಇಲ್ಲ. ಕಲೆಗಳು ಕಾಲಕ್ರಮದಲ್ಲಿ ಕ್ಷೀಣವಾದ್ದು, ಇಲ್ಲವಾದ್ದು ಇದೆಯಲ್ಲ! ಕರ್ನಾಟಕದ ದೇವದಾಸಿ ನೃತ್ಯ, ಆಸ್ಟ್ರೇಲಿಯಾದ ಮೂಲವಾಸಿಗಳ ಸಂಗೀತ ಹೀಗೆ ಅನೇಕ ಕಲೆಗಳು ನಷ್ಟವಾಗಿವೆ. ದೊಡ್ಡಾಟ ಕ್ಷೀಣವಾಗಿದೆ. ಇನ್ನು ಉತ್ತಮವಾಗಿರುವ ಎಷ್ಟೋ ಗೀತೆಗಳನ್ನು ಕನಿಷ್ಠ ಎಂದು

ಪರಿಗಣಿಸಿ ಮೂಲೆಗುಂಪು ಮಾಡಿದ್ದಿದೆ. ಉದಾಹರಣೆಗೆ ಎಷ್ಟೋ ಕಳೆದುಹೋಗಿವೆ ಎಂದುಕೊಂಡಿದ್ದ ಕನ್ನಡದ ಛಂದಸ್ಸುಗಳು, ರಾಗಗಳು, ತಾಳಗಳು, ಯಕ್ಷಗಾನದ ಪದಗಳಲ್ಲಿ ಗುರುತಿಸಲ್ಪಟ್ಟಿವೆ. ಈ ಕೆಲಸ ಮಾಡಿದವರು ಇತ್ತೀಚೆಗೆ ತೀರಿಕೊಂಡ ಕನ್ನಡದ ಶ್ರೇಷ್ಠ ಛಂದೋವಿದರಾದ ಡಾ. ನಾರಾಯಣ ಶೆಟ್ಟರು. ಅವರ ಕೃತಿ 'ಯಕ್ಷಗಾನ ಛಂದೋಂಬುಧಿ'ಯನ್ನು ಇಲ್ಲಿ ನೆನೆಯಲೇಬೇಕು. ಡೊಳ್ಳು ಇತ್ಯಾದಿ ಕುಣಿತಗಳಲ್ಲಿ ತಾಳದ ಕೆಲವು ಮೂಲ ರೂಪಗಳನ್ನು ಈ ಲೇಖಕರೇ ಗುರುತಿಸಿ ದಾಖಲಿಸಿದ್ದಾರೆ. ಹಾಗಾಗಿ ಕಲೆ ಇಂದಿರುವ ರೂಪ ನಿಮ್ನ ಆಗಿರಬಹುದು. ಹಿಂದೆ ಚಂದ ಇದ್ದಿರಲೂಬಹುದು. ಇಂದೇ ಚಂದ ಇದ್ದರೂ ನಾವು ಅದನ್ನು ಕಾಣಲು ವಿಫಲರಾಗಿರಬಹುದು. ಉದಾಹರಣೆಗೆ ಕನ್ನಡದಲ್ಲಿ ಅತಿಹೆಚ್ಚು ಸಾಹಿತ್ಯ ಇರುವುದು ಯಕ್ಷಗಾನದಲ್ಲಿ. ಯಾವ ಕಾವ್ಯದಲ್ಲೂ ಇರದ ಅತಿ ಹೆಚ್ಚು ಛಂದೋವೈವಿಧ್ಯ ಇರುವುದು ಯಕ್ಷಗಾನದಲ್ಲಿ. ಆದರೂ ಯಕ್ಷಗಾನದ ಕವಿಗಳ ಸಾಹಿತ್ಯ ಶಿಷ್ಟವಲ್ಲವೆಂದೇ ಇಂದಿಗೂ ಪರಿಗಣಿಸಲ್ಪಟ್ಟಿದೆ. ಈ ಅರ್ಥದಲ್ಲಿ folk ಎನ್ನುವ ಪದದ ಬಳಕೆ ಮತ್ತು ಅದೇ ಅರ್ಥದಲ್ಲಿ ಈಗ ಕನ್ನಡದಲ್ಲಿ ಬಳಕೆಯಲ್ಲಿರುವ ಜಾನಪದ ಎಂಬ ಪದ ಎಲ್ಲ ಕಲೆಗಳಿಗೂ ಅಷ್ಟು ಸರಿ ಹೊಂದುವುದಿಲ್ಲ. ಮೇಲೆ ಹೇಳಿದಂತೆ ಜಾನಪದ ಶಬ್ದದ ಮೂಲ ಅರ್ಥ folk ಎನ್ನುವುದಲ್ಲ. ಇದು ಉತ್ತರ ಕೆನಡಾದ ಮೂಲಜನರ ಸಂಗೀತಕ್ಕೂ ಹೇಗೆ ಅನ್ವಯವಾಗುತ್ತದೆ ಎಂದು ಇಲ್ಲಿ ನೋಡೋಣ. ಸ್ಥಳೀಯ ಕಲೆಗಳಿಗೆ ಶಾಸ್ತ್ರಗಳಲ್ಲಿ ಇರುವಂತೆ ಮೂಲಜನರ ಕಲೆಗೂ ದೇಶೀ ಕಲೆ ಎಂದು ಇಲ್ಲಿ ಕರೆಯುತ್ತೇನೆ. ಅಂದರೆ ಕೆನಡಾಕ್ಕೆ ಸ್ಥಳೀಯವಾದ್ದು ಎಂಬ ಅರ್ಥದಲ್ಲಿ. ಇದರಲ್ಲಿ ಕತೆ ಹೇಳುವುದು, ಹಾಡಿನಲ್ಲಿ ಕತೆ ಹೀಗೆಲ್ಲ ಇರುವವನ್ನು ಮಾತಿನ ಸಾಹಿತ್ಯ ಎಂದು ಗ್ರಹಿಸೋಣ. ಅವೂ ದೇಶೀ ಕಲೆಗಳೇ. ದಿನನಿತ್ಯದ ಪರಿಕರಗಳಲ್ಲಿ ಕಲಾಪೂರ್ಣತೆ, ಪೂಜೆ, ನಂಬಿಕೆಗೆ ಸಂಬಂಧಿಸಿದ ವಸ್ತು, ಸಾಹಿತ್ಯವೂ ದೇಶೀ ಕಲೆಯೆಂದೆ ಗಣಿಸಬಹುದು. ಕಲೆಗೂ ಜೀವನಕ್ಕೂ ಎಷ್ಟು ದೂರ ಕಡಿಮೆ ನೋಡಿ!

ಈಗ ಉತ್ತರ ಕೆನಡಾದ ಮೂಲವಾಸಿಗಳಾದ ಇನ್ಯೂಟ್ ಜನರಲ್ಲಿ ಈ folk ಎನ್ನುವುದಕ್ಕೆ ಅರ್ಥ, ಜಾನಪದ ಎಂಬ ಕನ್ನಡದಲ್ಲಿನ ಕಲ್ಪನೆಯಂತೆಯೇ ಇದೆಯೇ ಎಂದು ನೋಡೋಣ. ಇನ್ಯೂಟ್ ಎಂದರೆ ಅವರ ಇನುಕ್ಟಿಟುಟ್ ಭಾಷೆಯಲ್ಲಿ 'ಜನ' ಎಂದರ್ಥ. ಇನುಕ್ ಎಂದರೆ ಇನ್ಯೂಟ್ ಪಂಗಡದವರು, ನಾವು ಕನ್ನಡದವರನ್ನು ಕನ್ನಡಿಗ ಎನ್ನುವಂತೆ. ಇವರು ತೀರ ಉತ್ತರದ ಆರ್ಕಟಿಕ್ನಲ್ಲಿ ಇರುವವರು. ಇಲ್ಲಿನ ಕ್ರೀ, ಅನಿಶ್ನಾಬಿ ಇತ್ಯಾದಿ ಸಮುದಾಯಗಳು ಸ್ವಲ್ಪ ಕೆನಡಾದ ಕೆಳಭಾಗದಲ್ಲಿನ ಜನರು. ಈ ಎಲ್ಲ ಸಮುದಾಯಗಳ ಭಾಷೆ ಮತ್ತು ಸಂಸ್ಕೃತಿಯಲ್ಲಿ ವ್ಯತ್ಯಾಸ ಇದೆ. ಭಾರತದಲ್ಲಿ ವ್ಯತ್ಯಾಸಗಳ ನಡುವೆಯೂ ಸಾಮ್ಯತೆ, ಏಕತೆಗಳು ಇರುವಂತೆ ಇಲ್ಲಿ ಈ ಸಮುದಾಯಗಳ ನಡುವೆ ಏಕತೆ ಇದೆ. ಆ ಅರ್ಥದಲ್ಲಿ ಎಲ್ಲ ಮೂಲ ಜನರನ್ನು ಒಂದಾಗಿ ಪರಿಗಣಿಸಿ ಮುಂದುವರೆಯೋಣ. ಇನ್ಯೂಟ್ ಜನರಲ್ಲಿ 'ಸನಾಕ್' ಎಂದರೆ ಕೈಯ್ಯಲ್ಲಿ ಮಾಡಿದ ಕರಕುಶಲ ವಸ್ತುಗಳು. 'ನೂನಾಷ್ಕಟಿಗೀಟ್'' ಎಂದರೆ ತಮ್ಮ ಜನ. ಹಾಡುವುದು ಅಥವಾ

ಪೂಜೆಯ ಹಾಡು 'ಟುಟ್ಸಿಯಕ್.' ಹಾಡು ಕೂಡಿಡುವವನಿಗೆ (ಸಂಗ್ರಹಕಾರನಿಗೆ) 'ನೀನಾಗುಡ್' ಎಂದು ಹೇಳುತ್ತಾರೆ. ಕಥೆ ಹೇಳುವವ 'ಊನಿಕ್ಕೌಸಿಕ್.' ಸಾಂಪ್ರದಾಯಿಕ ತಿಳುವಳಿಕೆಗೆ 'ಕ್ವಾಜಿಮಾಜಾಟುಕಾಂಗಿಟ್.' ಬೇರೆ ಬೇರೆ ನೃತ್ಯಕ್ಕೆ ಬೇರೆ ಬೇರೆ ಹೆಸರು. ನೃತ್ಯ ಎಂಬ ಸ್ವತಂತ್ರ ಪದದ ಬಳಕೆಯೂ ಕಾಣುವುದಿಲ್ಲ (ಕೋಮಿಕ್, ಆಲ್ಲುಅಸಿಯಕ್ ಇತ್ಯಾದಿ). ಹೀಗೆ ಗಮನಿಸಿದಾಗ ಹೊಳೆಯುವುದು, ಜಾನಪದ ಎನ್ನುವ ಕಲ್ಪನೆ ಮೂಲಜನರಲ್ಲಿ ಇಲ್ಲ. ಬೇರೆ ಬೇರೆ ವಿಚಾರಕ್ಕೆ ಬೇರೆ ಬೇರೆ ಹೆಸರು. ಎಲ್ಲವೂ ಜೀವನದ ಅಂಗ. ಎಲ್ಲವೂ ಜನರದೆ! ಅದನ್ನು ಹಾಗೆ ಹೀಗೆಂದು ಜಾನಪದ ಎಂದು ವಿಭಾಗ ಮಾಡುವುದು, ಅಧ್ಯಯನ ಮಾಡುವವರು ಅಷ್ಟೆ. ಹಾಗಾಗಿ ಶಾಸ್ತ್ರಗಳಲ್ಲಿ ಬಳಸಿದ ದೇಶೀ ಎನ್ನುವ ಪದ ಸ್ಥಳೀಯ ಎನ್ನುವ ಅರ್ಥದಲ್ಲಿ ಇಲ್ಲಿಗೂ ಎಲ್ಲಿಗೂ ಅನ್ವಯ ಆಗುತ್ತದೆ ಎಂದುಕೊಳ್ಳಬಹುದು.

ಉತ್ತರ ಕೆನಡಾದ ದೇಶೀ ಸಂಗೀತ–ಸಾಹಿತ್ಯ

ಐರೋಪ್ಯ ವಲಸಿಗರು ಮತ್ತು ಮೂಲ ಇನ್ಯೂಟ್ ಜನರ ದಿನ ನಿತ್ಯದ ಬಳಕೆಗೆ ಮಾಡಿಕೊಂಡ, ಬರೆದುಕೊಂಡ, ವ್ಯಾಪಾರ ವಹಿವಾಟುಗಳಿಂದ ಹೊರಗೆ ಉಳಿದ, ಹಾಡು ಶೇಡಿಗಳನ್ನು ಇಲ್ಲಿನವರು 'ದೇಶೀ' (folk) ಎಂದು ಗಣಿಸುವುದು. ಇಲ್ಲಿನ ದೇಶೀ ಎಂದರೆ ಬರಿ ಇನ್ಯೂಟ್ ಜನರದ್ದಲ್ಲ. ಇಂದೂ, ಹಿಂದೆಯೂ ಐರೋಪ್ಯರ ಮನೆಬಳಕೆಯ ಹಾಡುಗಳು ಇದ್ದವು. ಕೆನಡಾದ ಬಲ್ಲಾಡ್ಗಳು ಮತ್ತು ಕಡಲಗೀತೆಗಳು (Ballads and Sea Song) ಎಂಬವನ್ನು ಹೆಲೆನ್ ಕ್ರೈಗ್ಟನ್ ಎಂಬಾಕೆ ಸಂಗ್ರಹ ಮಾಡಿ 1932ರಲ್ಲಿ ಪ್ರಕಟಿಸಿದರು. ಮುಂದೆ 'ಫೋಕ್ ರಾಕ್' ಎನ್ನುವ ಪ್ರಭೇದವೂ ರಾಕ್ ಪ್ರೇರಣೆಯಿಂದ ಹುಟ್ಟಿಕೊಂಡಿತು (ಸಂಗ್ರಹ: ಗ್ಯಾರಿ ಕ್ರಿಸ್ಟಾಲ್).

ಮೂಲ ಜನರ ಸಂಗೀತ ಸಾಹಿತ್ಯವನ್ನು ಗಮನಿಸೋಣ. ಸಂಗೀತ ಎನ್ನುವುದಕ್ಕೆ 'ನಿಪ್ಷಯೂಟ್' ಎಂಬ ಪದವನ್ನು ಇಲ್ಲಿನ ಮೂಲ ಜನರು ಕೆಲವರು ಬಳಸುತ್ತಾರಂತೆ. ಆದರೆ ಮೇಲೆ ಹೇಳಿದಂತೆ ಕಲೆಗಳಿಗೆಲ್ಲ ಬೇರೆ ಬೇರೆ ಹೆಸರೇ ಹೊರತು ಮ್ಯೂಸಿಕ್ ಎಂಬ ಅರ್ಥದಲ್ಲಿ ಬಳಸುವ ಸಂಗೀತ ಎಂಬ ಪದ ಹೆಚ್ಚಿನ ಮೂಲಜನರಲ್ಲಿ ಇಲ್ಲ. ಸಂಗೀತವೇ ಕೆನಡಾದ ಮೂಲಜನರಲ್ಲಿ ಇಲ್ಲ ಎಂದೆಲ್ಲ ಐರೋಪ್ಯರು ಘೋಷಿಸಿದ್ದು ಉಂಟಂತೆ! ಭಾರತೀಯ ಶಾಸ್ತ್ರದಲ್ಲೂ ಸಂಗೀತ ಎನ್ನುವುದಕ್ಕೆ ಅರ್ಥ ಬೇರಿದೆ ಎಂದು ಈಗಾಗಲೇ ಅನೇಕರು ಹೇಳಿದ್ದಾರೆ.

'ಗೀತಂ ವಾದ್ಯಂ ತಥಾ ನೃತ್ತಂ ತ್ರಯಂ ಸಂಗೀತಮುಚ್ಯತೇ'

– ಶಾರ್ಙ್ಗದೇವನ ಸಂಗೀತರತ್ನಾಕರ.

ಭಾರತೀಯರಲ್ಲೂ ಹಾಡು, ವಾದ್ಯ, ನೃತ್ಯ ಇವು ಮೂರೂ ಇದ್ದಾಗ ಮಾತ್ರ ಸಂಗೀತ ಎಂದು ಕರೆಯಲ್ಪಡುತ್ತದೆ ಎನ್ನುವ ಲಕ್ಷಣಕಾರನ ಮಾತು, ಯಕ್ಷಗಾನ ಇತ್ಯಾದಿ ಜನಕ್ಕೆ ಹತ್ತಿರವಾದ ರಂಗ ಕಲೆಗಳಲ್ಲಿ ಜೀವಂತ ಕಾಣುತ್ತದೆ. ಅಂದರೆ ನೃತ್ಯವಿಲ್ಲದ

ಹಾಡನ್ನು ಸಂಗೀತ ಎಂದು ಶಾಸ್ತ್ರಗಳು ಕರೆದಿಲ್ಲ. ಅಂದರೆ ನಮ್ಮ ಶಾಸ್ತ್ರಗಳಲ್ಲಿ ಇರುವ ಸಂಗೀತದ ಕಲ್ಪನೆ ಜನಜೀವನದಲ್ಲಿ ಇದ್ದ ಕಲ್ಪನೆಗಳಿಗೆ ಹೊಂದುವಂತಾದ್ದು. ಬರಿ ಹಾಡುವುದಕ್ಕೆ ಕನ್ನಡದಲ್ಲಿ ಪದ ಹೇಳುವುದು ಎಂದು ಕರೆಯುತ್ತಾರೆ. ಇದು ಐರೋಪ್ಯರ ಮ್ಯೂಸಿಕ್ ಕಲ್ಪನೆಗಿಂತ ಭಿನ್ನವಾದ್ದು. ಅದೇ ರೀತಿ ಕೆನಡಾದ ಇನ್ಯೂಟ್ ಜನರ ಕಲ್ಪನೆಯೂ ಭಾರತೀಯ ಮತ್ತು ಐರೋಪ್ಯ ಕಲ್ಪನೆಗಳೆರಡಕ್ಕಿಂತ ಭಿನ್ನವಾದದ್ದು. ಕಥೆ ಹೇಳುವ 'ಊನಿಕ್ಕೌಸಿಕ್,' ಕುಶಲ ಕಲೆ 'ಸನಾಕ್,' ಗುನುಗುಡುವ 'ಕಟಾಜ್ಜಾಕ್' ಹೀಗೆ ಹಾಡಿನ ಸಂಗೀತದ ಪ್ರಕಾರಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು ಇಲ್ಲಿನ ಮೂಲ ಜನರ ಕ್ರಮ.

ಅರ್ಥವಿರುವ ಸಣ್ಣ ಸಣ್ಣ ಹಾಡುಗಳನ್ನು, ಗಂಭೀರವಾದ ಧ್ವನಿಮಾಡುವ, ಟೊಳ್ಳು ಮಾಡಿದ ಮರಕ್ಕೆ ಚರ್ಮ ಕಟ್ಟಿ, ಢಕ್ಕೆ, ನಗಾರಿಯಂತೆ ಧ್ವನಿ ಬರುವಂತೆ ಬಾರಿಸುತ್ತಾ ಹೇಳುವುದು ಪಾರಮಾರ್ಥಿಕಕ್ಕೆ ಸಂಬಂಧಿಸಿದ ಪೂಜಾ ವಿಧಿಗಳಲ್ಲಿ. ನೇರವಾಗಿ ಊದುವ ಕೊಳಲು, ಎಮ್ಮೆ ಅಥವಾ ಜಿಂಕೆ ಚರ್ಮದಲ್ಲಿ ಕಲ್ಲ ಹರಳು ತುಂಬಿ ಮಾಡಿದ ರ್‍ಯಾಟಲ್ (ಈ ಗಿಲಿಗಿಚ್ಚಿಗೆ ಶಿಶಿಕೋಯಿಸ್ ಎಂದು ಹೆಸರು), ಚರ್ಮವಾದ್ಯ ಇವನ್ನೆಲ್ಲ ಬಳಸಿ ಹಾಡು ಹಾಡುವುದು ಸಾರ್ವಜನಿಕರಿಗಾಗಿ. ಇಲ್ಲಿ ಭಾಷೆಯ ದೃಷ್ಟಿಯಿಂದ ಅರ್ಥವಿರುವ ಶಬ್ದಗಳನ್ನು ಬಳಸದೆ (ಉದಾಹರಣೆಗೆ ತನನ, ನನನ, ತೋಂ ನೋಂ, ಇತ್ಯಾದಿ) ಮಾಡುವ ಆಲಾಪನೆ ಇತ್ಯಾದಿಯೂ ಇದೆ. ಹೀಗೆ ಪೂಜಾ ಸಂಗೀತ ಮತ್ತೆ ಮನೋರಂಜನೆಗೆ ಇವು ಎರಡು ಮೂಲಜನರಲ್ಲಿ ಇರುವ ಮುಖ್ಯವಾದ ಸಂಗೀತದ ಪ್ರಭೇದಗಳು. ಭಾರತೀಯ ಸಾಮವೇದದ ಪಠಣವನ್ನು ಮತ್ತು ಮಂತ್ರಗಳನ್ನು ಇಲ್ಲಿನ ಪೂಜಾವಿಧಿಯ ಸಂಗೀತಕ್ಕೆ ನೇರವಾಗಿ ಹೋಲಿಸಲಾಗದಿದ್ದರೂ ವೈಚಾರಿಕ ಸಾಂದರ್ಭಿಕ ಸಾಮ್ಯತೆ ಇದೆ ಎನ್ನಬಹುದು.

ಇನುಕ್ಟಿಟುಟ್ ಎಂಬುದು ಕೆನಡಾದ ಇನ್ಯೂಟ್ ಮೂಲಜನರ ಭಾಷೆ. ಈ ಭಾಷೆಯಲ್ಲಿ 'ಕಟಾಜ್ಜಾಕ್' ಎಂದು ಕರೆಯುವ ಒಂದು ಸಂಗೀತ ಇದೆ. ಇದು ಗಂಟಲಿನಲ್ಲಿ ಗುನುಗುವ, ಗೊಂಯ್ಗುರಿಯುವ (ಗುಂಯ್ಗುಟ್ಟುವ) ಸಂಗೀತ. ಇದರಲ್ಲಿ ಪದಗಳಿಲ್ಲ, ಲಯ ತಾಳಗಳಿವೆ, ಧಾಟಿ ಇದೆ, ಛಂದೋಲಯಗಳಿವೆ. ಇಲ್ಲಿ ಅರ್ಥವಿರದ ಧ್ವನಿಯೇ ಮುಖ್ಯ. ನಮ್ಮಲ್ಲಿನ ಸರಿಗಮಕ್ಕೂ ಸ್ವರಸ್ಥಾನ ತಿಳಿಸುವುದು ಬಿಟ್ಟು ಬೇರೆ ಅರ್ಥವಿಲ್ಲ ತಾನೇ.? ಇದನ್ನು ಹೆಚ್ಚಾಗಿ ಹೆಂಗಸರೇ ಹಾಡುವುದು ಕ್ರಮ. ಇಬ್ಬಿಬ್ಬರು ಜೊತೆಯಾಗಿ ಹಾಡುವುದೂ ಇದೆ. ಕನ್ನಡ ಸಮೂಹ ಗೀತೆಗಳಲ್ಲಿ ಹೆಂಗಸರು ಸರುಗೂಡುವ (ದನಿಗೂಡಿಸುವ) ಕ್ರಮ ಇದೆ. ಇದಕ್ಕೆ ಅಷ್ಟೇ ಸಾಮ್ಯ. ಇದು ವಿಶಿಷ್ಟವಾದ್ದು. ಕೇವಲ ಗಂಟಲ ಗುರುಗುಡಿತದಿಂದ ಹಲವಾರು ಭಾವನೆ, ಅಭಿನಯದ ಮೂಲಕ ಕಥೆ ಹೀಗೆಲ್ಲ ಮಾಡುವುದೂ ಇದೆ. ಇದು ಬೇರೆಡೆ ಇಲ್ಲದ ವಿಶೇಷ ಸಂಗೀತ.

'ಪಿಸಿಟ್' ಎಂದರೆ ಕಥೆ ಹೇಳುವ ಹಾಡು. ಇದರಲ್ಲಿ ಸಂಪ್ರದಾಯ ಇತಿಹಾಸ ಎಲ್ಲವೂ ಸೇರಿ ಇದು ಒಂದು ರೀತಿಯ ಪುರಾಣದ ಹಾಡು ಆಗುತ್ತದೆ. ನಮ್ಮಲ್ಲಿ ಕನ್ನಡದ ಗೋವಿನ ಹಾಡು, ಸತ್ಯವಾನ ಸಾವಿತ್ರಿ, ಗಜೇಂದ್ರ ಮೋಕ್ಷ ಹಾಡಿನ ತೆರ.

ಕನ್ನಡದ ಲಾವಣಿಗಳೂ, ಕೋಲಾಟದ ಡೊಳ್ಳಿನ ಪದಗಳೂ ಕಥೆ ಹೇಳುವುದಿದೆ. ಆಂಗ್ಲರ ಬಲ್ಲಾಡ್ ಎನ್ನುವ ಕಥೆ ಹೇಳುವ ಹಾಡಿನ ಕ್ರಮವೂ ಇದೇ. ಇದರಲ್ಲಿ ಶಿಶುಗೀತೆಗಳೂ ಇವೆ. ಆಶ್ಚರ್ಯ ಎಂದರೆ ಇವುಗಳ ಹಾಡಿನ ಕ್ರಮ ನಮ್ಮ ಜೋಗುಳದ ಹಾಡಿಗೆ ಬಲು ಸಮೀಪ ಇದೆ ಎನ್ನಿಸುತ್ತದೆ. 'ಅಯಯ' ಎಂದರೆ ತಮಟೆಯ ಜೊತೆ ಹಾಡುವ ಆತ್ಮ ಕಥನದ ಹಾಡು. ಇದು ಪ್ರತಿಯೊಬ್ಬರಿಗೂ ಒಂದು ತಮ್ಮದೇ ಆದ ಹಾಡು. ಎಂತಹ ಚಂದ ಅಲ್ಲವೇ? ನಮಗೆ ಹೆಸರಿದ್ದ ಹಾಗೆ ಹಾಡೂ ಒಂದು! ಇದರಲ್ಲಿ ನಮ್ಮಲ್ಲಿ 'ತಂದಾನಿ ತಾನೋ' ಬಳಸುವ ಹಾಗೆ, 'ಅಯಾ ಅಯಾಯಾ' ಎಂಬ ಬಳಕೆ ಇದೆ. ಆ ವೂ ಆ ಯೀ ಎಂದು ಸಾಮವೇದದ ಪಠಣದಲ್ಲೂ ಇದೆಯಲ್ಲ! ಪೆಟ್ಟು 1 2 3 4 ಎಂದು ಸಾಗುತ್ತಿರುತ್ತದೆ. ಇದರಲ್ಲಿ 2 ಪೆಟ್ಟು 3 ಪೆಟ್ಟು ಹೀಗೆ ಬೇರೆ ಬೇರೆ ಆದರೂ, ಲಯ ಯಕ್ಷಗಾನದ ಏಕತಾಳಕ್ಕೆ ಹೊಂದುತ್ತದೆ. ಸಾಹಿತ್ಯದಲ್ಲಿ ಅಂಶ ಛಂದಸ್ಸಿನ ಗುಣ ಕಾಣಿಸುತ್ತದೆ. ಇವಿಯುಟೀಟ್ ಎಂದು ಹಾಡುವ ಕ್ರಮ ಒಂದು. ಇದರಲ್ಲಿ ಎದುರಿನವರ ಅಣಕವೇ ಪ್ರಧಾನ. ದೊಡ್ಡವರು ಸಿಟ್ಟು ಮಾಡಿಕೊಳ್ಳುವಂತಿಲ್ಲ, ಸಿಟ್ಟನ್ನು ಅಣಕಿನ ಮೂಲಕ ತೋಡಿಕೊಳ್ಳಬೇಕೆಂಬ ಸಂಪ್ರದಾಯ.

ಕನ್ನಡಿಗರಲ್ಲಿ 'ಜರೆದು ಹಾಡುವುದು' ಎಂಬ ಕ್ರಮ ಇದೆ. ಇದು ಉತ್ತರ ಭಾರತದಲ್ಲೂ ಇದೆ. ಹೆಚ್ಚಾಗಿ ಮದುವೆ ಸಮಯದಲ್ಲಿ ದಿಬ್ಬಣವನ್ನು ಮದುಮಗನನ್ನು ಸೊಟ್ಟಮೋರೆಯವ ಓರೆಮೂಗಿನವ ಎಂದೆಲ್ಲ ಅಣಕಿಸುವ ಹಾಸ್ಯದ ಸನ್ನಿವೇಶ ಇದೆ. ಈ ಮೂಲಜನರ ಕ್ರಮವೂ ಅದೇ ಒಂದು ರೀತಿ. ಈ ರೀತಿಯ ಮೌಖಿಕ ಪರಂಪರೆ ಭಾರತೀಯರಿಗೆ ಹೊಸತಲ್ಲ. ವೇದ ವೇದಾಂಗಗಳು, ಇತಿಹಾಸ, ಶಾಸ್ತ್ರ ಪುರಾಣಗಳು ಭಾರತದಲ್ಲಿ ಮೌಖಿಕವಾಗಿಯೇ ಉಳಿದವು. ಮೌಖಿಕ ಕ್ರಮವೇ ಉತ್ಕೃಷ್ಟ ಕ್ರಮ ಎಂದು ನಮ್ಮ ಪೂರ್ವಜರ ಮತ. ಆಗ ಸಂಪ್ರದಾಯದ ಅಂಶಗಳು ಜೀವಂತ ಪರಂಪರೆಯಾಗಿ ನುಡಿಯಲ್ಲಿ ಅಷ್ಟೇ ಅಲ್ಲದೇ ನಡೆಯಲ್ಲೂ ಉಳಿಯುತ್ತದೆ ಎನ್ನುವ ಆಶಯ. ಅದು ಇನ್ಯೂಟ್ ಜನರಲ್ಲೂ ಎದ್ದು ಕಾಣುತ್ತದೆ. ಅವರಲ್ಲಿ ಅದರ ಬಗ್ಗೆ ಹೆಮ್ಮೆಯೂ ಇದೆ.

ಕತೆಗಳು – ಮಾತು ಸಾಹಿತ್ಯ

ವಿಶ್ವದ ಅತ್ಯಂತ ಪ್ರಾಚೀನ ಸಾಹಿತ್ಯ ಬರೆದಿಟ್ಟದ್ದಲ್ಲ; ಕಂಠಪಾಠ ಮಾಡಿ ಉಳಿಸಿದ ಸುಮಾರು ಏಳೆಂಟು ಸಾವಿರ ವರ್ಷಗಳು ಹಳತಾದ ವೇದಗಳು. ಬರೆದವು ಎಷ್ಟೋ ನಷ್ಟವಾಗಿವೆ. ಹೀಗೆಯೇ ಇಲ್ಲಿನ ಮೂಲಜನರ ಸಾಹಿತ್ಯ ಮಾತಿನಲ್ಲೇ ಉಳಿದು ಬಂದಿದೆ! ಮಾತು–ಕತೆ, ಮಾತೇ ಕತೆ! ಆದರೆ ಚಿತ್ರದಲ್ಲಿ ಬರೆಯುವುದು ಇತ್ತು. ಕಲ್ಲು, ದಿನನಿತ್ಯದ ವಸ್ತುಗಳ ಮೇಲೆ ಚಿತ್ರದ ಮೂಲಕ ಸಂದೇಶದ ದಾಖಲಾತಿ ಇತ್ತು. ಸುಮಾರು 1840ರಲ್ಲಿ ಕೆನಡಾದ ಮೂಲಜನರ ಭಾಷೆಗಳಿಗೆ ಜೇಮ್ಸ್ ಈವಾನ್ಸ್ ಎಂಬಾತ ಲಿಪಿಯನ್ನು ಸಿದ್ಧಪಡಿಸಿದ. ಇದನ್ನು ಭಾರತದ ಬರವಣಿಗೆಯ ಕ್ರಮವನ್ನು ಮತ್ತು ದೇವನಾಗರಿ ಲಿಪಿ ವ್ಯವಸ್ಥೆಯನ್ನು ಆಧರಿಸಿ ಜೇಮ್ಸ್ ಈವಾನ್ಸ್ ಸಿದ್ಧಪಡಿಸಿದನೆಂದೂ, ಆತ ಅಕ್ಷರ ಪದ್ಧತಿ (alphasyllabary)


ಕಲಿತಿದ್ದನೆಂದೂ ಹಲವು ವರ್ಷಗಳ ಹಿಂದೆ ನಾನು ಸಂಶೋಧಿಸಿ ಕಂಡುಕೊಂಡೆ. ಇನ್ಯೂಟರ ಬರವಣಿಗೆಯೂ ಅಕ್ಷರ ಕ್ರಮದಲ್ಲೇ ಇದೆ. ಇದು ಹೆಚ್ಚಿನವರಿಗೆ ಗೊತ್ತಿಲ್ಲ, ಹಾಗಾಗಿ ಇಲ್ಲಿ ಉಲ್ಲೇಖಿಸಿದ್ದೇನೆ (ವಿಕಿಪೀಡಿಯಾದಲ್ಲಿ ಈ ಮಾಹಿತಿ ಈಗ ಲಭ್ಯ). ಅವರಲ್ಲಿ 3 ಸ್ವರ ಮತ್ತು 14 ವ್ಯಂಜನಗಳು ಬಳಕೆಯಲ್ಲಿವೆ. ಈ ಬರಹ ಈಗ ಇನ್ಯೂಟರಲ್ಲಿ ಬಳಕೆಯಲ್ಲಿದೆ. ಆದರೆ ಮೌಖಿಕ ಪರಂಪರೆ ಹೋಗಿಲ್ಲ, ಈಗಲೂ ಪ್ರಚಲಿತದಲ್ಲಿಯೇ ಇದೆ. ಭಾಷೆಯಲ್ಲಿ ವಾಕ್ಯಸಂಧಿ ಇದೆ. ಅಂದರೆ ಕನ್ನಡದಲ್ಲಿ ಶಬ್ದಗಳು ಸಂಧಿಸುವಂತೆ ಇನುಕ್ಟಿಟುಟ್‌ನಲ್ಲಿ ವಾಕ್ಯಗಳು ಸಂಧಿಸುತ್ತವೆ! ಇದು ಸಂಸ್ಕೃತದಲ್ಲೂ ಒಂದು ರೀತಿಯಾಗಿ ಇದೆ. ಅಂದರೆ ಕೆನಡಾದ ಮೂಲಜನರ ಭಾಷೆ ಬಹಳ ಬಲಿಷ್ಠವಾಗಿದೆ. ಸುಮಾರು 150ಕ್ಕೂ ಹೆಚ್ಚು ಮೂಲಜನರ ಸಮುದಾಯಗಳಿವೆ – ಪ್ರತಿ ಸಮುದಾಯದಲ್ಲೂ ನೂರಾರು ಕಥೆಗಳು ಬಾಯಿಂದ ಬಾಯಿಗೆ ಸಾವಿರಾರು ವರ್ಷಗಳಿಂದ ಹರಿದುಬಂದಿವೆ. ಈ ಕಥೆಗಳ ಸಂಖ್ಯೆ ದಿಗ್ಭ್ರಮೆ ಆಗುವಷ್ಟು ಇವೆ ಎಂತಾದರೆ ಅವುಗಳ ವೈವಿಧ್ಯತೆಯನ್ನು ಮತ್ತು ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಬಹುದು.

ರಾಮಾಯಣ, ಮಹಾಭಾರತದಲ್ಲಿ ಇರುವಂತೆ ನೂರಾರು ಪಾತ್ರಗಳು, ವ್ಯಕ್ತಿ ವಿಶೇಷಗಳು ಮೂಲಜನರಲ್ಲಿ ಮೌಖಿಕವಾಗಿ ಬಂದ ಕಥೆಗಳಲ್ಲಿ ಇವೆ. ಮಾನವ ಸಂವೇದನೆಗಳ ಅನುಭವದ ಸಾಮ್ಯತೆ ಎಲ್ಲೆಡೆ ಇದೆ ಎನ್ನುವುದಕ್ಕೆ ಇಲ್ಲಿಯೂ ದೇವರು, ರಾಕ್ಷಸರು, ಭೂತ ಪಿಶಾಚಿಗಳು, ವೀರರು ವೀರರಮಣಿಯರು ಹೀಗೆಲ್ಲ ಇದ್ದಾರೆ. ಅದು ಅವರ ಇತಿಹಾಸದ ವ್ಯಕ್ತಿತ್ವಗಳು ಆಗಿದ್ದರೂ ಆಗಿರಬಹುದು. ಆದರೆ ಈ ಎಲ್ಲ ಪಾತ್ರಗಳು ಒಂದೇ ಕಥೆಯಲ್ಲಿರದೇ ಹಲವಾರು ಬೇರೆ ಬೇರೆ ಕಥೆಗಳಲ್ಲಿ ಒಂದೊಂದರಂತೆ ಇರುತ್ತವೆ. ಉದಾಹರಣೆಗೆ ಕ್ರೀ ಸಮುದಾಯದ ಕಥೆಗಳಲ್ಲಿ 'ಕಿಸೆಮನಿಟೊ' ಸೃಷ್ಟಿಕರ್ತ ಬ್ರಹ್ಮ ಅಥವಾ ಗ್ರೇಟ್ ಸ್ಪಿರಿಟ್ –ಪರಮಾತ್ಮ. 'ವೆಸಾಕೆಚಕ್' ಎಂಬ ಸಜ್ಜನ ಬ್ರಹ್ಮನ ಮಗ. 'ವಿಟಿಕೋ' ಒಬ್ಬ ನರಭಕ್ಷಕ ರಾಕ್ಷಸ, 'ಮಿಮೆಕ್ವೆಸಿವ್' ನೀರಿನ ಭೂತಗಳು. ಅವಕ್ಕೆ ನಮ್ಮಲ್ಲಿ ಭೂತಕ್ಕೆ ಆದಂತೆ ಹಣ್ಣು ಕಾಯಿ ಪೂಜೆ ಎಲ್ಲ ಆಗಬೇಕು, ಇಲ್ಲದಿದ್ದರೆ ಕೈಕೊಟ್ಟಾವು! ಇನುಕರ ಕಥೆಯಲ್ಲಿ 'ಅಗುಂಟ' ಪರಮೋಚ್ಚ ದೇವರು, 'ಸಿಲಾ' ವಾಯುದೇವ, 'ಪುಕಿಮ್ನ' 'ಇಸರ್‍ರತ್ಯೈಟ್ಸೋಕ್' ಎಂಬಿತ್ಯಾದಿ ಸ್ತ್ರೀದೈವಗಳು, 'ಸೆಡ್ನ' ಜಲಪ್ರಾಣಿದೈವ, 'ಟಟ್ಕಿಮ್' ಚಂದ್ರದೇವ, 'ನುನಮ್' ಭೂಮಿದೇವಿ, 'ತಪಸುಮ' ಯಮದೇವ, 'ಸೆಕಿನೆಕ್' ಸೂರ್ಯದೇವಿ. ಇದರಲ್ಲಿ ಸೆಡ್ನಾ ಬಹಳ ಖ್ಯಾತೆ. ಆಕೆ ದೇವತೆ ಅಲ್ಲ. ಸೆಡ್ನಾ ಎಂಬುದು ಕ್ರೈಸ್ತ ಪಾದ್ರಿಗಳು ಇಟ್ಟ ಹೆಸರು. 'ನುಲಿಯಯುಕ್' ಅಥವಾ 'ಟಲುಲಿಯಕ್' ಎನ್ನುವುದು ಆಕೆಯ ಸರಿಯಾದ ಹೆಸರು. ಆಕೆ ಜಲಕನ್ಯೆಯಾಗಿ ಸೋಬೇಟೆ (ಕೆರೆಬೇಟೆ) ದೊರಕಿಸಿ ಕೊಡುವ ಒಡತಿ, ದೈವ (ಭೂತ). ಹೀಗೆ ಕಥೆಗಳಲ್ಲಿ ಪಾತ್ರಗಳ ಜೊತೆಯಲ್ಲಿಯೇ ಇತಿಹಾಸ, ನೀತಿ ಕಲಿಕೆ ಎಲ್ಲ ಸಮಾಗಮವಾಗಿದೆ. ನಮ್ಮಲ್ಲಿ ಗುಮ್ಮ, ಗುಡುಗುಮ್ಮ ಇದ್ದಂತೆ ವಿಟಿಕೋನನ್ನು ನೆನೆದರೆ ಮಕ್ಕಳಿಗೆ ಹೆದರಿಕೆ! ಭಾರತದ ಇತಿಹಾಸ ಪುರಾಣಗಳ ನಾವು ಊಹಿಸಬಹುದಾದ ಉದ್ದೇಶವೇ ಇಲ್ಲಿಯೂ ಕಾಣುತ್ತದೆ. ಇವು ಮನೋರಂಜಕವಾಗಿಯೂ ಇವೆ. ಒಂದು

ರೀತಿಯಲ್ಲಿ ನೋಡಿದರೆ ಭಾರತೀಯ ಪುರಾಣಗಳಿಗಿಂತ ಭಿನ್ನವಾಗಿ ಅತಿಮಾನುಷವಾಗಿವೆ. ದೇವತೆಯರೇ ಹೆಚ್ಚು. ಮೇಲಿನ ದೇವರು ಕಾಡೆಮ್ಮೆಯ ಆತ್ಮ. ಎಮ್ಮೆಯ ದೇಹದ ಮೂಲಕ ಆಹಾರ ಕೊಟ್ಟು ತಮ್ಮನ್ನು ಬದುಕಿಸುವ ದಿವ್ಯ ಶಕ್ತಿ ಎಂಬ ನಂಬಿಕೆ. ಇಲ್ಲಿ ನಮಗೆ ಭಾರತೀಯರ ನಿರಾಕಾರ ಬ್ರಹ್ಮ ನೆನಪಾದರೆ, ಅದಕ್ಕೆ ಒಂದು ರೀತಿಯ ಸಾಮ್ಯ ಕಂಡರೆ ತಪ್ಪಿಲ್ಲ. ಆದರೆ ಎರಡೂ ಬೇರೆ ಬೇರೆ.

ಉತ್ತರ ಕೆನಡಾದ ದೇಶೀ ಕರಕುಶಲ-ಸಾಹಿತ್ಯ

ಜಾನಪದ ಎಂಬುದರ ಅರ್ಥ ಬರಿ ಹಾಡು ಕಥೆಗೆ ಸಂಬಂಧಿಸಿದ್ದಲ್ಲ ಎಂದು ಈಗಾಗಲೆ ಗಮನಿಸಿದ್ದಾಗಿದೆ. ಅದು ಸ್ಥಳೀಕರಿಗೆ ಸಂಬಂಧಿಸಿದ ಎಲ್ಲದೂ. ಇದರಲ್ಲಿ ಬಟ್ಟೆ ಬರೆ, ಬಣ್ಣ, ವೇಷ ದಿರಿಸು, ವಾದ್ಯ, ಬೇಟೆಯ ಆಯುಧ, ಇತ್ಯಾದಿ ಸಾಧನಗಳಲ್ಲಿನ ಕುಸುರಿ ಮತ್ತು ಕಲಾತ್ಮಕತೆಯಲ್ಲಿ ವಿಶೇಷ ಇವೆಲ್ಲ ಇವೆ. ಕನ್ನಡನಾಡಿನಲ್ಲಿ ಸಹ್ಯಾದ್ರಿಯಲ್ಲಿ ಬೆಳೆಯುವ ಬೆತ್ತದಿಂದ ಬುಟ್ಟಿಯನ್ನು ಮಾಡಿದರೆ ಕೆನಡಾದಲ್ಲಿ ಬರ್ಚ್ ಮರದ ಚಕ್ಕೆಯಿಂದ ಬುಟ್ಟಿ ಮಾಡುತ್ತಾರೆ. ಈ ಬರ್ಚ್ ಎಂಬ ಮರ ಸಪೂರ, ಗಟ್ಟಿಯಲ್ಲ. ಇದರ ತೊಗಟೆಯ ಒಳಮೈಯ್ ತುಂಬಾ ನಯ. ಅದರ ಮೇಲೆ ಸುಂದರವಾದ ಕೆತ್ತನೆ ಕೊರೆಯುವುದು ಎಲ್ಲ ಇದೆ. ಮೂಸ್ ಎಂಬ ದೊಡ್ಡ ಜಿಂಕೆಗೆ ಸಾಮ್ಯದ ಪ್ರಾಣಿಯ ಚಿತ್ರವೋ, ಹೂವೋ ಏನೋ ಒಂದು. ಬರ್ಚ್ ಬುಟ್ಟಿಯನ್ನು ನೋಡಿದಾಗ ಕನ್ನಡ ನಾಡಿನ ಹಸೆ ಚಿತ್ತಾರ ನೆನಪಾಗುತ್ತದೆ. ಬೆತ್ತದ ಬುಟ್ಟಿಗೆ ಕೆಮ್ಮಣ್ಣು ಹಚ್ಚಿ, ಜೇಡಿ ಮಣ್ಣಿನ ಬಿಳಿ ಚಿತ್ತಾರ. ಚಿತ್ರದ ಮೂಲ ಅಂಶಗಳು ಮತ್ತು ಶೈಲಿ ಬೇರೆ. ಆದರೆ ಅದೇ ಬುಟ್ಟಿ ಅದರ ಮೇಲೆ ಒಂದು ಚಿತ್ರ ಎಂಬುದರಲ್ಲಿ ಸಾಮ್ಯ ಅಷ್ಟೆ.




ಬರ್ಚ್ ಮರದ ತೊಗಟೆಯ ಬುಟ್ಟಿ



ಬೆತ್ತದ ಬುಟ್ಟಿಯ ಮೇಲೆ ಕನ್ನಡಿಗರ ಹಸೆ ಚಿತ್ತಾರ

ಈ ಚಿತ್ತಾರ ಕೇವಲ ಬುಟ್ಟಿಗಳಿಗಷ್ಟೇ ಸೀಮಿತ ಅಲ್ಲ. ಬಟ್ಟೆ, ಸಂಗೀತವಾದ್ಯ, ದೋಣಿ, ಬತ್ತಳಿಕೆ ಹೀಗೆ ಎಲ್ಲ ಕಡೆ ಬರೆಯುತ್ತಾರೆ. ಕಲ್ಲಿನ ಮೇಲೂ ಚಿತ್ತಾರ ಬರೆದು ಮುಂದಿನ ಪೀಳಿಗೆಗೆ ತಾವು ಕಂಡಿದ್ದನ್ನು ಅನುಭವಿಸಿದ್ದನ್ನು ಹೇಳಿಕೊಡುವ ಪ್ರಯತ್ನವೂ ಕಾಣುತ್ತದೆ. ಉತ್ತರ ಅಮೇರಿಕಾದ ಅನೇಕ ಕಡೆ ಇರುವ ಪೆಟ್ರೋಗ್ಲಿಫ್ ಅಥವಾ ಶಿಲಾ ವಿನ್ಯಾಸಗಳನ್ನು ಶಿಕ್ಷಾಶಿಲೆಗಳು ಎಂದು ಮೂಲಜನರು ಕರೆಯುತ್ತಾರೆ (ಕಿನೂಮಾಗೆವಾಪ್ಕಕೊಂಗ್). ಇವು ಸುಮಾರು 1000 ವರ್ಷದ ಹಿಂದಿನವು.



ಪೀಟರ್ಬರೋ (ಆಂಟೇರಿಯೋ, ಕೆನಡ) ಹತ್ತಿರದ ಶಿಲಾವಿನ್ಯಾಸ ಮತ್ತು ಕೆಲವು ದೇಶೀ ಚಿಹ್ನೆಗಳು

ಪೆಟ್ರೋಗ್ಲಿಫ್ ಪಾರ್ಕ್ನಲ್ಲಿ ಇರುವ ಇಲ್ಲಿನ ಮೂಲ ಓಜಿಬ್ವ ಜನರಲ್ಲಿ ಇದರ ಬಗ್ಗೆ ಮಾತಾಡಿದಾಗ ಅನೇಕ ಆಶ್ಚರ್ಯಕಾರಕ ವಿಷಯಗಳು ಹೊರಬಂದವು. ಅನಿಶ್ನಾಬಿಮೊವಿನ್ ಎಂಬ ಉಪಭಾಷೆ ಮಾತಾಡುವ ಇವರಿಗೆ ಈ ಶಿಕ್ಷಾಶಿಲೆಗಳು ಪವಿತ್ರ ಸ್ಥಾನ. ಇಲ್ಲಿ ಹಿರಿಯರು ಬಂದು ಇವನ್ನು ವಿವರಿಸಿ ಕಲಿಸುವ ಕ್ರಮ ಇದೆಯಂತೆ. ಆಮೆ, ಮಗು ಹುಟ್ಟುವುದು, ಚಕ್ರ ಇವಕ್ಕೆಲ್ಲ ಗೂಢಾರ್ಥ ಇದೆ. ಪೂರ್ವ ಹುಟ್ಟಿನ ಪ್ರತೀಕವಾದರೆ ಪಶ್ಚಿಮ ಮುಪ್ಪು, ಉತ್ತರ ಸ್ವರ್ಗ, ಹೀಗೆ. ಆಮೆ ಭೂಮಿತಾಯಿಯ ಸಂಕೇತ (ಕೂರ್ಮಾವತಾರ ನೆನಪಿಸಿಕೊಳ್ಳಿ), ದೀರ್ಘಾಯು ಸೃಷ್ಟಿಯ ಸಂಕೇತ, ಸ್ವಸ್ತಿಕ, ನಾಲ್ಕುಕಾಲ, ಜೀವನದ ನಾಲ್ಕು ಹಂತ ಮತ್ತು ನಾಲ್ಕು ದಿಕ್ಕಿನ ಸಂಕೇತ. ಕೆಂಪು ಬಣ್ಣ ಹುಟ್ಟಿನ ಸಂಕೇತ, ಅರಿಶಿಣ ಬೆಳವಣಿಗೆ, ಕಪ್ಪು ಪ್ರಬುದ್ಧತೆ ಮತ್ತು ಬಿಳಿ ಸಾವು. ಈ ಬಣ್ಣದ ಅರ್ಥ ಬಹಳ ವಿಭಿನ್ನವಾದ್ದು. ಅಲ್ಲಿ "ಕೆಲವು ತಾಮ್ರದ ಪಾತ್ರೆಗಳಿವೆ ಯಾಕೆ?" ಎಂದು ಕೇಳಿದಾಗ ಭಾರತೀಯ ಪೂಜೆಯಂತೆ ಓಜಿಬ್ವ ಜನರು ತಾಮ್ರದ ಪಾತ್ರೆ, ನೀರು ಉಪಯೋಗಿಸಿ ಹಣ್ಣು ಅರ್ಪಿಸಿ ಈ ಶಿಕ್ಷಾಶಿಲೆಗಳ ಬಳಿ ಪೂಜೆ ಮಾಡುವುದು ತಿಳಿಯಿತು. ನೀರು

ಅವರಿಗೆ ಪವಿತ್ರವಾದದ್ದು. ಪೂಜೆಗೆ ತಾಮ್ರದ ಪಾತ್ರೆಯೇ ಆಗಬೇಕು. ಎಷ್ಟು ಸಾಮ್ಯ ಎಂದು ಆಶ್ಚರ್ಯವಾಯಿತು. ಹೀಗೆ ಇದು ಮೂಲಜನರ ನಂಬಿಕೆ ಮತ್ತು ದೇಶೀ ಕರಕುಶಲ ಕಲೆಗಳ ಬಗ್ಗೆ ಒಂದು ಮೇಲ್ನೋಟ.

ಸಮನ್ವಯ

ಇಷ್ಟೆಲ್ಲ ಇದ್ದರೂ, ಮೂಲ ಕೆನಡಾದ ಜನರ ಭಾಷೆಯಲ್ಲಿ, ಸಂಗೀತ, ಕಲೆ ಎನ್ನುವುದಕ್ಕೆ ಪ್ರತ್ಯೇಕ ಶಬ್ದವೇ ಇಲ್ಲದ್ದರಿಂದ ಅವರಲ್ಲಿ ಜೀವನದಲ್ಲಿ ಕಲಾತ್ಮಕತೆ ಇದೆ, ಆದರೆ ಕಲೆ ಎಂಬುದಾಗಿ ಪ್ರತ್ಯೇಕ ಇಲ್ಲ ಎಂದು ಐರೋಪ್ಯ ಸೌಂದರ್ಯಶಾಸ್ತ್ರಜ್ಞ-ಮಾನವಶಾಸ್ತ್ರಜ್ಞರು (aesthetic anthropology) ಘೋಷಿಸಿಯೂ ಆಗಿದೆ! ಆದರೆ ಜಾನಪದ ಎಂಬ ಶಬ್ದ ಇಲ್ಲದಿದ್ದರೂ ಅವರದೆಲ್ಲವೂ ಜಾನಪದ folklore, folk music ಎಂಬ ಅರ್ಥದಲ್ಲಿ ಘೋಷಿಸಿಯಾಗಿದೆ! ಈ ವೈರುಧ್ಯ ಪ್ರಾಮಾಣಿಕವಾಗಿ ಅಧ್ಯಯನ ಮಾಡುವವರದ್ದಲ್ಲ. ಸ್ಟೀವನ್ ಲ್ಯೂತೋಲ್ಡ್ (Steven Leuthold) ನಂತಹ ಅಧ್ಯಯನಕಾರರು ಇದನ್ನು ಪ್ರಶ್ನಿಸಿ ಐರೋಪ್ಯರ ದೃಷ್ಟಿಕೋನ ತಪ್ಪೆಂದು ಬೇರೆ ಬೇರೆ ಸಂಸ್ಕೃತಿಗಳು ಕಲೆಯನ್ನು ನೋಡುವ ಅನುಭವಿಸುವ ರೀತಿ ಬೇರೆಂದು ವಾದಿಸಿದ್ದಾರೆ. ನಾಟ್ಯಶಾಸ್ತ್ರದಲ್ಲೂ ಗ್ರಾಮ್ಯ ನಡವಳಿಕೆ ನಾಟಕವನ್ನು ಹಾಳುಮಾಡುತ್ತದೆ ಎಂಬ ಕಲ್ಪನೆ ಇದೆ! ಆದರೆ ನಂತರ ಕಾಲಕ್ರಮದಲ್ಲಿ ಭಾರತದಲ್ಲೂ ಹಳ್ಳಿಗಾಡಿನ ಅನುಭವಗಳ ಅರ್ಥ ಆಗಿ ಶಾಸ್ತ್ರಗಳು, ಲಕ್ಷಣ ಗ್ರಂಥಗಳು ದೇಶೀ ಎಂಬ ವಿಭಾಗದಲ್ಲಿ ಸಾಮಾನ್ಯರ ಕಲೆಗಳಿಗೆ ಸೂಕ್ತ ಗೌರವಯುತ ಸ್ಥಾನ ಕಲ್ಪಿಸಿವೆ ಎನ್ನಿಸುತ್ತದೆ. ಉದಾಹರಣೆಗೆ, ಸಂಗೀತ ಶಾಸ್ತ್ರಗಳಲ್ಲಿ ಇರುವ ನಿಯಮಗಳೆಲ್ಲ ಉತ್ಕೃಷ್ಟವಾದ ದೇಶೀ ಗೀತೆಗಳಲ್ಲಿ ಸ್ವಾಭಾವಿಕವಾಗಿ ಇರುವ ಅಂಶಗಳೇ ಆಗಿವೆ. ಹಾಗಾಗಿ, ಕೆನಡಾದ ಮೂಲಜನರ ಜೀವನದ ಕಲಾತ್ಮಕತೆಯನ್ನೇ ಕಲೆಯಾಗಿ ಬೆಳೆಸಿ ಅನುಭವಿಸುವ ವಿಷಯದಲ್ಲಿ ಶಾಸ್ತ್ರಗಳಲ್ಲಿ ಇರುವ ದೇಶೀ ಎಂಬ ಕಲ್ಪನೆ ನನಗೆ ಸಂವಾದಿಯಾಗಿ ಕಾಣುತ್ತದೆ. ಕಲೆ ಎಂಬುದು ಜನಜೀವನದಿಂದ ಬೇರೆಯಾಗಿ ಇರಬೇಕಿಲ್ಲ ಎನ್ನುವುದು ದೇಶೀ ಎಂಬ ಶಾಸ್ತ್ರದ ಕಲ್ಪನೆಯಲ್ಲಿ ಅಂತರ್ಗತವಾಗಿದೆ. ಹಾಗಾಗಿ ಆ ದೃಷ್ಟಿಯಿಂದ ಮತ್ತು ಭಾರತೀಯ ದೇಶೀ ವಸ್ತು-ವಿಷಯಗಳ ಅನುಭವದ ದೃಷ್ಟಿಯಿಂದ ಕೆನಡಾದ ಮೂಲಜನರನ್ನು ನೋಡಿದಾಗ ಅಶಾಸ್ತ್ರೀಯ ಅಥವಾ ಗ್ರಾಮ್ಯ ಎಂಬ ವಿಸಂಗತಿಗಳು ಮಾಯವಾಗುತ್ತವೆ. ಕೆನಡಾದ ಮೂಲಜನರ ಸೌಂದರ್ಯ ಶಾಸ್ತ್ರದಲ್ಲಿ ಎರಡು ಬಹು ಮುಖ್ಯವಾದ ಅಂಶಗಳಿವೆ ಎಂದು ಸ್ಟೀವನ್ ಲ್ಯೂತೋಲ್ಡ್ ಹೇಳುತ್ತಾರೆ. ಒಂದನೆಯದು ತಾವಿರುವ ಸ್ಥಳವನ್ನು ಪವಿತ್ರ ಎಂದೂ, ಸ್ಥಳಕ್ಕಂಟಿ ಏನೋ ವಿಶೇಷ ಸಂವೇದನೆಯನ್ನೂ ಬಂಧನವನ್ನೂ ಎಲ್ಲದರಲ್ಲೂ ತೋರುವುದು, ಎರಡನೆಯದು, ಅಧ್ಯಾತ್ಮವನ್ನು ಪ್ರಕೃತಿಯಲ್ಲೇ ಅರ್ಥೈಸಿಕೊಳ್ಳುವುದು. ಇವು ಎರಡೂ ಭಾರತೀಯ ತತ್ವಶಾಸ್ತ್ರದಲ್ಲೂ (ದರ್ಶನಗಳು) ಬಹಳ ಮುಖ್ಯ ಎನಿಸುವಂತಾದ್ದು- ಲೌಕಿಕದಲ್ಲಿ ಪುಣ್ಯಭೂಮಿ ಎಂಬ ಕಲ್ಪನೆ ಮತ್ತು

ಈ ಪೂರ್ಣ ಅಸ್ತಿತ್ವವೇ (ಪ್ರಕೃತಿ) ಪರಬ್ರಹ್ಮ ವಸ್ತುವೆಂಬ ಸಿದ್ಧಾಂತ. ಭಾರತೀಯ ಸೌಂದರ್ಯಶಾಸ್ತ್ರಕ್ಕೆ ಭಾರತೀಯ ದರ್ಶನಗಳು ತಳಹದಿ ಎಂದು ಖ್ಯಾತ ವಿದ್ವಾಂಸರಾದ ಮೈಸೂರು ಹಿರಿಯಣ್ಣನವರು (ಅವರ Art Experience ಪುಸ್ತಕ ನೋಡಿ) ತೋರಿಸಿದ್ದನ್ನು ಗಮನಿಸಿದಾಗ ಭಾರತೀಯರ ಸೌಂದರ್ಯಶಾಸ್ತ್ರಕ್ಕೂ ಕೆನಡಾದ ಮೂಲಜನರ ಸೌಂದರ್ಯಪ್ರಜ್ಞೆಗೂ ಸಾಮ್ಯ ಇರುವುದು ಕಾಣುತ್ತದೆ. ಈ ಸಾಮ್ಯ ದರ್ಶನದಲ್ಲೂ ಇದೆ ಎಂದರೆ ತಪ್ಪಾಗಲಾರದು. ಇದನ್ನು ಸರಳವಾಗಿ ಹೇಳಬೇಕೆಂದರೆ, ವಸ್ತು, ಕ್ಷೇತ್ರಗಳ ಪಾವಿತ್ರ್ಯ ಮತ್ತು ಪ್ರಕೃತಿಯ ಆರಾಧನೆ ಇವುಗಳ ವಿಚಾರದಲ್ಲಿ ಎರಡೂ ಸಂಸ್ಕೃತಿಗಳಿಗೆ ಸಾಮ್ಯ ಇದೆ.

ಅಮೇರಿಕಾದ ಮೂಲ ಜನ ಇಂಕಾ, ಮಾಯಾ ಮೊದಲಾದ ಮಹಾನಾಗರಿಕತೆಗಳನ್ನು ಕಟ್ಟಿದ, ವಿಜೃಂಭಣೆಯಿಂದ ಮೆರೆದ ಜನ ಎನ್ನುವುದನ್ನು ಮರೆಯಬಾರದು. ಜಗತ್ತಿನ ಜನರ ಹೊಟ್ಟೆ ತುಂಬಿಸುವ ಈಗಿರುವ ಜೋಳ, ಆಲೂ ಹೀಗೆ ಅನೇಕ ತಳಿಗಳನ್ನು ಕಂಡುಹಿಡಿದವರು. ಅಮೇರಿಕಾದ ಸುಮಾರು 25 ಶೇಕಡಾ ಔಷಧಿಗಳಲ್ಲಿ ಮೂಲಜನರು ಬಳಸುತ್ತಿದ್ದ ಔಷಧೀ ವಸ್ತುಗಳಿವೆ ಎಂಬ ಅಂದಾಜಿದೆ. ಹೀಗಿರುವಾಗ ಈಗಿರುವ ಅವರ ಕಲೆಗಳು ಹಿಂದೆ ಇನ್ನೂ ಉಚ್ಛ್ರಾಯದಲ್ಲಿ ಇದ್ದಿರಬಹುದು. ಇವೆಲ್ಲದರಲ್ಲೂ ಭಾರತಕ್ಕೆ ಸಾಮ್ಯ ಇದೆ. ಕೆನಡಾದ ಮೂಲಜನರ ಜೀವನದ ಅಂಶಗಳಲ್ಲಿ ನಮ್ಮಲ್ಲಿಲ್ಲದ ಎಷ್ಟೋ ಹೊಸತೂ ಇದೆ, ಅದಕ್ಕೆ ಸಂವಾದಿಯಾದದ್ದೂ ಇದೆ, ಅದೇ ತೆರನಾದ್ದು ಇದೆ. ಅದನ್ನು ಜನ ಸಂಪ್ರದಾಯದ ದೃಷ್ಟಿಯಿಂದ, ಭಕ್ತಿಯಿಂದ, ಜೀವಂತ ಪರಂಪರೆಯಾಗಿ ನೋಡುವುದೂ ಕಾಣುತ್ತದೆ. ಇವನ್ನೆಲ್ಲ ಚಿಂತಿಸಿ ನಾವು ಕಲೆಗಳಿಗೆ ಗರಿಮೆಯನ್ನೂ, ಕಲಾವಿದರಿಗೆ ಮತ್ತು ಪರಂಪರೆಗೆ ಸ್ವಾತಂತ್ರ್ಯವನ್ನೂ ಕಲ್ಪಿಸಬೇಕಾಗುತ್ತದೆ. ಲೂಯೀಸ್ ರಿಯಾಲ್ ಎನ್ನುವ ಮೇಟೀ ಜನರ ಹಕ್ಕಿಗೆ ಹೋರಾಡಿ ಜೀವ ಕೊಟ್ಟಾತ ಆಡಿದ ಮಾತೊಂದಿದೆ: "Life, without the dignity of an intelligent being, is not worth having." (ಬುದ್ಧಿಮತ್ತೆಗೆ ಗೌರವ ಸಲ್ಲದಿದ್ದಲ್ಲಿ ಜೀವನವನ್ನು ಪಡೆದೂ ಪ್ರಯೋಜನವಿಲ್ಲ). ನಿಮ್ನ, ಕನಿಷ್ಠ ಎಂಬ ಹಣೆಪಟ್ಟಿ ಇಲ್ಲದೆ, ಎಲ್ಲಾ ರೀತಿಯ ಎಲ್ಲಾ ಗುಣಮಟ್ಟದ ಕಲೆಗಳಲ್ಲಿ ತೊಡಗಿಸಿಕೊಳ್ಳುವ ಸ್ವಾತಂತ್ರ್ಯ, ಉತ್ಸಾಹ ಎಲ್ಲ ಜನರಿಗೂ ದಕ್ಕುವಂತಾಗಬೇಕು. ಜಾನಪದ ಎಂದರೆ ಭೂಮಿಗಂಟಿದ, ಕೃತಕವಲ್ಲದ, ಉತ್ಕೃಷ್ಟವಾದ ಜನಜೀವನದ ಅಂಶಗಳು, ನಿಮ್ನವಾದವಲ್ಲ ಎನ್ನುವ ಭಾವನೆ ಸ್ಥಾಪನೆ ಆಗಬೇಕು. ಆಗ ವಸ್ತುನಿಷ್ಠವಾಗಿ ದೇಶೀ ವ್ಯವಸ್ಥೆಯ ಒಳ್ಳೆಯ ಗುಣಗಳನ್ನು ಗ್ರಹಣಮಾಡಲು, ಅನುಭವಿಸಲು ಅವಕಾಶ ಉಂಟಾಗುತ್ತದೆ.

ಆಧಾರ

1. ಇನ್ಯೂಟ್ ನಿಘಂಟು: (a) https://tusaalanga.ca/glossary?l=T,
2. http://www.labradorvirtualmuseum.ca/english-inuttut.htm

3. Indegenous perspectives on contemporary native art:
https://digit alrepository.unm.edu/cgi/viewcontent. cgi? article =1036& context= educ_llss_etds
4. Indegenous Peoples in Canada - The Canadian Encyclopedia
5. ಅನೇಕ ಸಂಶೋಧನೆ ಮತ್ತು ವಿವರಗಳನ್ನು ಹಲವಾರು ಮೂಲಗಳಿಂದ ಸಂಗ್ರಹಿಸಿ ಪರಿಷ್ಕರಿಸಿದೆ.

Picture Credits

1. Picture of a Chippewa boy and some symbols: https://www.warpaths2peacepipes.com
2. Birch basket: https://homeandaway.gallery
3. Hase Basket: https://hasiruvasi.com
4. Petroglyphs: https://www.ancient-origins.net
5. Glyphs:https://www.legendsofamerica.com
6. http://www.groseducationalmedia.ca/petroglyphs

❑

6

ಮೂಲನಿವಾಸಿಗಳ ಮೇಲೆ ಯುರೋಪಿನ ವಲಸೆಗಾರರ ಮತ್ತು ಯಾತ್ರಿಕರ ಪ್ರಭಾವ: ಸಾಹಿತ್ಯದಲ್ಲಿ ಪ್ರತಿಧ್ವನಿ

ಮೂಲ ಇಂಗ್ಲಿಷ್: **ಗುಂಡೂ ಶಂಕರ್**, ಫ್ರೀಹೋಲ್ಡ್, ನ್ಯೂ ಜೆರ್ಸಿ
ಕನ್ನಡಕ್ಕೆ: **ಶ್ರೀಕಾಂತ್ ಬಾಬು**, ಬ್ರಿಡ್ಜ್ ವಾಟರ್, ನ್ಯೂ ಜೆರ್ಸಿ

*

ಪ್ರವೇಶಿಕೆ

ಈ ಲೇಖನದಲ್ಲಿ ಅಮೆರಿಕಾದ ಮೂಲನಿವಾಸಿಗಳ ನಂಬಿಕೆಗಳು, ಪುರಾಣಗಳು ಮತ್ತವರ ಜೀವನ ಚಿತ್ರಣವನ್ನು ಪ್ರಸ್ತುತ ಸಾಹಿತ್ಯದಲ್ಲಿ ನೋಡುವ ಪ್ರಯತ್ನವನ್ನು ಮಾಡಲಾಗಿದೆ. ನನ್ನ ವಿಚಾರವನ್ನು ಪ್ರಸ್ತುತಪಡಿಸಲು ನಾನು ಎರಡು ಕಾದಂಬರಿಗಳನ್ನು ಆರಿಸಿಕೊಂಡಿದ್ದೇನೆ.

ಮೊದಲನೆಯದು ಅಮೆರಿಕಾದ ಬರಹಗಾರ್ತಿ ಲೂಯಿಸ್ ಎರ್ಡ್ರಿಚ್ (Louise Erdrich) ಅವರ, 'ದಿ ನೈಟ್ ವಾಚ್‌ಮನ್ (The Nightwatchman)' ಮತ್ತು ಎರಡನೆಯ ಕಾದಂಬರಿ, ಯಾವುದೇ ಪರಿಚಯದ ಅಗತ್ಯವಿಲ್ಲದ ಕೊಲಂಬಿಯಾದ ಪ್ರಸಿದ್ಧ ಸಾಹಿತಿ ಗೇಬ್ರಿಯಲ್ ಗಾರ್ಸಿಯಾ ಮಾರ್ಕೆಸ್ (Gabriel Garcia Marquez) ಅವರ 'ಒನ್ ಹಂಡ್ರೆಡ್ ಯಿಯರ್ಸ್ ಆಫ್ ಸಾಲಿಟ್ಯೂಡ್' (One Hundred Years of Solitude). ನಾನು ಸಂಕ್ಷಿಪ್ತವಾಗಿ ಪ್ರತಿ ಕಾದಂಬರಿಯ ವಿವರಣೆ, ಮತ್ತು ಬರಹಗಾರರ ದೃಷ್ಟಿಕೋನವನ್ನು ಚಿತ್ರಿಸುವ ಕೆಲವು ಗಮನಾರ್ಹ ಅಂಶಗಳನ್ನು ಚರ್ಚಿಸಿ ಸ್ಥಳೀಯ ಪುರಾಣ ಮತ್ತು ಸ್ಥಳೀಯ ಜನರ ಮೇಲೆ ಹೊರಗಿನವರ ಶಕ್ತಿಗಳ ಪ್ರಭಾವವನ್ನು ನಿಮ್ಮ ಗಮನಕ್ಕೆ ತರಲು ಯತ್ನಿಸುತ್ತೇನೆ.

ಲೂಯಿಸ್ ಎರ್ಡ್ರಿಚ್ ಅವರ ನೈಟ್‌ವಾಚ್‌ಮನ್

ಕ್ಯಾರೆನ್ ಲೂಯಿಸ್ ಎರ್ಡ್ರಿಚ್ ಅವರು ಜೂನ್ 7, 1954ರಂದು ಮಿನಿಸೋಟ ರಾಜ್ಯದ ಲಿಟಲ್ ಫಾಲ್ಸ್‌ನಲ್ಲಿ ಜನಿಸಿ ಉತ್ತರ ಡಕೋಟಾದ ವಾಹ್‌ಪೆಟನ್‌ನಲ್ಲಿ ಏಳು

ಮಕ್ಕಳಲ್ಲಿ ಹಿರಿಯವಳಾಗಿ ಬೆಳೆದರು. ಅವರ ತಂದೆ ಜರ್ಮನ್-ಅಮೆರಿಕನ್ ಮತ್ತು ತಾಯಿ ಅರ್ಧ ಫ್ರೆಂಚ್-ಅರ್ಧ ಒಜಿಬ್ವೆ ಆಗಿದ್ದರು. ಒಜಿಬ್ವೆಗಳನ್ನು ಚಿಪ್ಪೆವಾ ಎಂದೂ ಕರೆಯುತ್ತಾರೆ, ಇದು ಆರು ಸ್ಥಳೀಯ ಅಮೆರಿಕನ್ ಬುಡಕಟ್ಟು ಜನಾಂಗಗಳಲ್ಲಿ ಒಂದಾಗಿದ್ದು, ಇವರು ಅನೀಶಿನಾಬೆ ('ಮೂಲ ಜನರು') ಪಂಗಡಕ್ಕೆ ಸೇರಿದವರು. ಎರ್ಡ್ರಿಚ್ ಅವರ ಪೋಷಕರು ಇಬ್ಬರೂ ಬ್ಯೂರೋ ಆಫ್ ಇಂಡಿಯನ್ ಅಫೇರ್ಸ್ ಬೋರ್ಡಿಂಗ್ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಅವರ ಅಜ್ಜ ಪ್ಯಾಟ್ರಿಕ್ ಗೌರ್ನಿಯ ಅನೇಕ ವರ್ಷಗಳು ಟರ್ಟಲ್ ಮೌಂಟನ್ (ಆಮೆಬೆಟ್ಟ/ಕೂರ್ಮಗಿರಿ) ಚಿಪ್ಪೆವಾ ಬುಡಕಟ್ಟಿನ ಅಧ್ಯಕ್ಷರಾಗಿದ್ದರು. ಪ್ಯಾಟ್ರಿಕ್ ಗೌರ್ನಿಯ ಅವರ ಅನುಭವದ ಆಧಾರದ ಮೇಲೆ ಲೂಯಿಸ್ ಅವರು ಈ ಪುಸ್ತಕವನ್ನು ಬರೆದಿದ್ದಾರೆ.

ಕ್ಯಾರೆನ್ ಲೂಯಿಸ್ ಎರ್ಡ್ರಿಚ್ ಬರೆದದ್ದು ಹದಿಮೂರು ಕಾದಂಬರಿಗಳು, ಮೂರು ಕವನ ಸಂಕಲನಗಳು, ಕಾಲ್ಪನಿಕವಲ್ಲದ ಮೂರು ಪುಸ್ತಕಗಳು, ಡಝನ್‌ಗಟ್ಟಲೆ ಸಣ್ಣ ಕಥೆಗಳು ಮತ್ತು ಐದು ಮಕ್ಕಳ ಪುಸ್ತಕಗಳು. (ಈ ಪುಸ್ತಕಗಳಲ್ಲಿ ಲೇಖಕಿ ತನ್ನನ್ನು ತಾನೇ ವಿವರಿಸಿಕೊಂಡಿದ್ದಾರೆ). ಅವರನ್ನು ಮೂಲನಿವಾಸಿ ಅಮೆರಿಕನ್ ಬರಹಗಾರ್ತಿ ಎಂದು ವರ್ಗೀಕರಿಸಲಾಗಿದ್ದರೂ, ಅನೇಕ ವಿಮರ್ಶಕರು ಅವರ ಕೆಲಸವನ್ನು ವಿಲಿಯಂ ಫಾಕ್ನರ್ ಮತ್ತು ಗೇಬ್ರಿಯಲ್ ಗಾರ್ಸಿಯಾ ಮಾರ್ಕೆಸ್ ಅವರ ಕೃತಿಗಳಿಗೆ ಹೋಲಿಸಿದ್ದಾರೆ. ಗೋಜಲಿನ ವಂಶವೃಕ್ಷಗಳು (Tangled Family Trees), ಅವರ ಕುಹರದ ಕೌಶಲ್ಯ (Ventriloquist Skills) ಮತ್ತು ಅವರ ಅಗಾಧ ಕಲ್ಪನಾ ಶಕ್ತಿಗಳಿಗಾಗಿ ಅವರನ್ನು ಫಾಕ್ನರ್‌ನೊಡನೆ ಗುರುತಿಸುತ್ತಾರೆ ಹಾಗೂ 'ಮಾಂತ್ರಿಕ ವಾಸ್ತವಿಕತೆ'ಯ (Magical Realism) ಕಾರಣದಿಂದ ಅವರನ್ನು ಗಾರ್ಸಿಯಾ ಮಾರ್ಕೆಸ್‌ನೊಂದಿಗೂ ಹೋಲಿಸುತ್ತಾರೆ.

ಎರ್ಡ್ರಿಚ್ ಅವರ ವೃತ್ತಿಜೀವನವನ್ನು 'ವರ್ಣಭೇದ ನೀತಿಯ ವಿರುದ್ಧದ ಪ್ರತಿರೋಧದ ಕ್ರಿಯೆ, ದ್ವೇಷ ಮತ್ತು ಭಾವನಾತ್ಮಕ ಪ್ರಭೇದಗಳು, ಮತ್ತು ಬಿಳಿಯ ಅಮೆರಿಕದ ಅಜ್ಞಾನದ ನಿಷ್ಪಾಪ ಶಕ್ತಿ'ಗಳ ಮೂಲಕ ಗುರುತಿಸಬಹುದು. ಅವರು ತಮ್ಮ ಶಕ್ತಿಯುತ ಬರಹದ ಪುಸ್ತಕಗಳಲ್ಲಿ, ಮೂಲನಿವಾಸಿಗಳ ಜೀವನ, ಇತಿಹಾಸಗಳು ಮತ್ತು ಕಥೆಗಳನ್ನು ಚಿತ್ರಿಸಿದ್ದಾರೆ. ಅಮೆರಿಕದಲ್ಲಿ ವಾಸಿಸುವ 320 ಮಿಲಿಯನ್ ಸಾಧಾರಣ ಅಮೆರಿಕನ್ನರಿಗೆ ಅರಿವಿಲ್ಲದ ಸ್ಥಳೀಯ ಮೂಲನಿವಾಸಿಗಳ ಬದುಕಿನ ಜಗತ್ತನ್ನು ಚಿತ್ರಾತ್ಮಕವಾಗಿ ವಿವರಿಸಿದ್ದಾರೆ.

ಈ ಕಾದಂಬರಿಯ ಕಥಾವಸ್ತುವು 20ನೇ ಶತಮಾನದ ಮಧ್ಯದಲ್ಲಿ ಅವರ ಅಜ್ಜ, ಪ್ಯಾಟ್ರಿಕ್ ಗೌರ್ನಿಯ ಅವರು ಚಿಪ್ಪೆವಾ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದಾಗ ಬರೆದ ಪತ್ರಗಳ ಸಂಗ್ರಹವನ್ನು ಆಧರಿಸಿದೆ. ಆ ದಿನಗಳಲ್ಲಿ ಈ ಬುಡಕಟ್ಟು ಜನಾಂಗವು ತನ್ನ ಉಳಿವಿಗಾಗಿ ಸರ್ಕಾರದ ವಿರುದ್ಧ ಹೋರಾಟ ನಡೆಸುತ್ತಿತ್ತು. ಸರಕಾರದ ಬೆದರಿಕೆಗಳು ಕಾನೂನುಬದ್ಧವಾಗಿದ್ದರೂ ಹಿಂದಿನ ಅನೇಕ ಯೋಜನೆಗಳಂತೆ ಬುಡಕಟ್ಟಿಗೆ ವಿನಾಶಕಾರಿಯಾಗಿತ್ತು. 1953ರಲ್ಲಿ ಅಮೆರಿಕದ ಚುನಾಯಿತ ಪ್ರತಿನಿಧಿಗಳ ಸದನವು ಹಲವಾರು ಬುಡಕಟ್ಟು ಜನಾಂಗದವರನ್ನು ತ್ವರಿತವಾಗಿ 'ಕೇಂದ್ರ ಸರ್ಕಾರದ

ಮೇಲ್ವಿಚಾರಣೆಯಿಂದ ಮುಕ್ತಗೊಳಿಸಬೇಕು' ಎಂದು ಘೋಷಿಸುವ ನಿರ್ಣಯವನ್ನು ಅಂಗೀಕರಿಸಿತು. ಈ ವಿಮೋಚನೆಯ 'ಉದಾರ' ಭರವಸೆಯ ಹಿಂದೆ ಅಡಗಿದ್ದ ಸರ್ಕಾರದ ನಿಜವಾದ ದುರಾಲೋಚನೆಯ ಯೋಜನೆ ಏನಾಗಿತ್ತೆಂದರೆ, ಈ ಹಿಂದಿನ ಎಲ್ಲ ಒಪ್ಪಂದಗಳನ್ನು ಏಕಪಕ್ಷೀಯವಾಗಿ ರದ್ದುಪಡಿಸಿ, ಬುಡಕಟ್ಟು ಜನಾಂಗದವರ ಹಕ್ಕುಗಳನ್ನು ಸಾರಾಸಗಟಾಗಿ ಕೊನೆಗೊಳಿಸುವುದು ಮತ್ತು ಶತಮಾನಗಳ ಜನಾಂಗೀಯ ನೀತಿಗಳಿಂದ ಈಗಾಗಲೇ ಬಡವರಾಗಿರುವ ಸ್ಥಳೀಯ ಮೂಲನಿವಾಸಿಗಳನ್ನು ಸರಕಾರದ ರಕ್ಷಣೆಯಿಂದ ತೆಗೆದುಹಾಕುವುದು.

ಕ್ಯಾರೆನ್ ಲೂಯಿಸ್ ಎರ್ಡ್ರಿಚ್‌ನ ಈ ಪುಸ್ತಕ ಅವರ ಇತರ ಪುಸ್ತಕಗಳಿಗಿಂತ ಹೆಚ್ಚು ರಾಜಕೀಯ ವಸ್ತುವನ್ನೊಳಗೊಂಡಿದ್ದು ವಾಷಿಂಗ್ಟನ್ ಡಿ.ಸಿ. ಪ್ರವಾಸವನ್ನು ಸಹ ಒಳಗೊಂಡಿದೆ. ಅವರ ಇತರ ಕಾದಂಬರಿಗಳ ಕಥಾವಸ್ತುಗಳೆಲ್ಲ ಮೂಲನಿವಾಸಿಗಳ ಮೀಸಲು ವಾಸ ಸ್ಥಾನಗಳನ್ನು (Reservations) ಕುರಿತದ್ದಾಗಿವೆ. ಆದರೆ ಇದೊಂದು ರಾಜಕೀಯ ಕಾದಂಬರಿಯಾಗಿದ್ದು ಬುಡಕಟ್ಟು ಜನಾಂಗದಲ್ಲಿನ ಸಾಮಾನ್ಯ ಜೀವನಕಥೆಯ ಜೊತೆಗೆ ಬಾಹ್ಯ ಬಿಳಿಯ ಅಮೆರಿಕನ್ನರೊಡನೆ ಅವರಿಗಿದ್ದ ಸಂಬಂಧಗಳೂ ಸೇರಿವೆ. ಅಮೆರಿಕದ ಶಾಸಕಾಂಗ, ಮೂಲನಿವಾಸಿಗಳ ಹಕ್ಕುಗಳ ನಿರ್ಮೂಲನೆಯ ಬೆದರಿಕೆ ಹಾಕಿದ್ದರೂ, ಕಾದಂಬರಿಯ ಕಥೆಯು 'Turtle Mountain Indian Reservation' ನಲ್ಲಿ ವಾಸಿಸುವ ಜನರ ಮೇಲೆ ಕೇಂದ್ರೀಕರಿಸಿದೆ. (ಕಾದಂಬರಿಯ ಆರಂಭದಲ್ಲಿ ಒಂದು ಪಾತ್ರವು "Law can't take my Indian out of me" – 'ಕಾನೂನು ನನ್ನ ಮೂಲನಿವಾಸಿತ್ವವನ್ನು ಎಂದಿಗೂ ಕಸಿದುಕೊಳ್ಳಲಾಗದು' ಎಂದು ಹೆಮ್ಮೆಪಡುತ್ತದೆ). ಅಲ್ಲಿ ವಾಸವಾಗಿದ್ದ ಹೆಚ್ಚಿನ ಮೂಲನಿವಾಸಿಗಳಿಗೆ ತಮ್ಮ ಜೀವನೋಪಾಯ ಮಾಡುವುದು, ಕುಟುಂಬವನ್ನು ಒಟ್ಟಿಗೆ ಹಿಡಿದಿಟ್ಟುಕೊಳ್ಳುವುದು, ಇತ್ಯಾದಿಗಳು ಮುಖ್ಯವಾಗಿದ್ದವೇ ವಿನಹ 1500 ಮೈಲಿ ದೂರದಲ್ಲಿರುವ ಬಿಳಿಯ ರಾಜಕಾರಣಿಗಳು ತಂದೊಡ್ಡುವ ನಿರ್ಣಯಗಳಾಗಿರಲಿಲ್ಲ.

ಆದರೆ ಈ ಕಾದಂಬರಿಯ ಬುಡಕಟ್ಟು ಮುಖಂಡ ಥಾಮಸ್ ವಾಝ್ಯಾಷ್ಕ್ ಶಾಸಕಾಂಗದ ಅಪಾಯವನ್ನು ಮೊದಲೇ ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುತ್ತಾನೆ. ಈ ಥಾಮಸ್‌ನದು, ಎರ್ಡ್ರಿಚ್‌ನ ಅಜ್ಜನನ್ನು ಆಧರಿಸಿದ ಪಾತ್ರ. ಅವನು ತಮ್ಮ Reservationನ ಮೊದಲ ಉತ್ಪಾದನಾ ಘಟಕದಲ್ಲಿದ್ದ ಒಂದು ಆಭರಣಗಳ ಬೇರಿಂಗ್ ಕಾರ್ಖಾನೆಯಲ್ಲಿ ರಾತ್ರಿ ಕಾವಲುಗಾರನಾಗಿ ಒಬ್ಬಂಟಿಯಾಗಿ ಕೆಲಸ ಮಾಡುತ್ತಿರುತ್ತಾನೆ. ಅವನ ಯೋಚನಾ ಲಹರಿಗಳು ಎರ್ಡ್ರಿಚ್‌ನ ಪುಟಗಳಲ್ಲಿ ಆಧುನಿಕ ವಾಸ್ತವಿಕತೆ (Modern Realism) ಮತ್ತು ಸ್ಥಳೀಯ ಆಧ್ಯಾತ್ಮಿಕತೆಗಳು ಸಾಮರಸ್ಯದಿಂದ ಬೆರೆಯುತ್ತ, ಕಥೆಯೂ ಬೆಳೆಯುತ್ತ ಸಾಗುತ್ತದೆ. ಅವನ ರಾತ್ರಿಯ ಪಹರೆಯ ಸುತ್ತುಗಳ ಮಧ್ಯೆ ಅವನ ಮತ್ತು ಅವನ ಬೋರ್ಡಿಂಗ್ ಶಾಲಾ ದಿನಗಳ ನೆನಪಿನ ಒಂದು ಹಳೆಯ ಭೂತದೊಂದಿಗೆ ಅವನ ಸಂವಾದ ನಡೆಯುತ್ತಿರುತ್ತದೆ. ಈ ಭೂತವು ಆಗಾಗ್ಗೆ ಅನಿರೀಕ್ಷಿತವಾಗಿ ಆಗಮಿಸುತ್ತ ಅಲ್ಲಿನ ಯಂತ್ರೋಪಕರಣಗಳ ಮೇಲೆ ಕುಳಿತು ಅವನೊಡನೆ ಸಂಭಾಷಿಸುತ್ತಿರುತ್ತದೆ.

ಇವುಗಳೆಲ್ಲದರ ನಡುವೆ ಥಾಮಸ್ ತನ್ನ ಸ್ಥಳೀಯ ಮತ್ತು ರಾಷ್ಟ್ರೀಯ ರಾಜಕಾರಣಿಗಳಿಗೆ ರಾತ್ರಿ ಹೊತ್ತು ಪತ್ರಗಳನ್ನು ಬರೆಯುತ್ತಿರುತ್ತಾನೆ. ಕಾಂಗ್ರೆಸ್ಸಿನ ಯೋಜನೆಯಿಂದ ನಾಶವಾಗಲಿರುವ ತನ್ನ ಬುಡಕಟ್ಟಿನ ರಕ್ಷಣೆಗೆ ಪರಿಣಾಮಕಾರಿಯಾಗಿ ಸಹಾಯ ಮಾಡಬಹುದಾದ ವ್ಯಾಪಾರೀ ಮುಖಂಡರು, ವಿದ್ವಾಂಸರು ಮತ್ತಿತರರಿಗೂ ಪತ್ರಗಳನ್ನು ಬರೆಯಲು ಪ್ರಯತ್ನಪಡುತ್ತಿರುತ್ತಾನೆ.

"ನಾವು ಸಿಡುಬು, ಕ್ಷಯರೋಗ, 1918ರ ಸಾಂಕ್ರಾಮಿಕ ಫ್ಲೂ, ಇತ್ಯಾದಿ ರೋಗ-ರುಜಿನಗಳಿಂದ ಮತ್ತು ನಮ್ಮ ಮೇಲೆ ನಡೆದ ಹಲವಾರು ಯುದ್ಧಗಳಲ್ಲಿ ಬಳಸಲಾದ ಶಸ್ತ್ರಾಸ್ತ್ರಗಳಾದ ವಿಂಚೆಸ್ಟರ್ ಪುನರಾವರ್ತಿತ ರೈಫಲ್, ಹಾಚ್ಕಿಸ್ ಗನ್ (Winchester repeating rifle, the Hotchkiss gun) ಗಳೆಲ್ಲವನ್ನೂ ಎದುರಿಸಿ ಬದುಕುಳಿದಿದ್ದೇವೆ" ಥಾಮಸ್ ಯೋಚಿಸುತ್ತಾನೆ. ಆದರೆ ಈಗ ಈ ಕಾಂಗ್ರೆಸ್ಸಿನ ಅಪಾಯದ ಕೆಲವೇ ಪದಗಳ ಸಂಗ್ರಹದಿಂದ ನಾಶವಾಗಲಿದ್ದೇವೆ. ಆದರೆ ಅವನು ಅದರ ವಿರುದ್ಧ ಹೋರಾಡಲು ದೃಢ ನಿಶ್ಚಯ ಹೊಂದಿದ್ದಾನೆ. ಹೀಗೆ ಈ ಕಾದಂಬರಿಯ ಕಥೆಯು ಅಧ್ಯಾಯದಿಂದ ಅಧ್ಯಾಯಕ್ಕೆ ಥಾಮಸ್ ಕೆಲಸದಲ್ಲಿರುವಾಗ ಮತ್ತು ಕನಸು ಕಾಣುತ್ತಿರುವಾಗ ಅವನ ಸಮುದಾಯ, ಅವನ ಸ್ನೇಹಿತರ ಮತ್ತು ಸಂಬಂಧಿಗಳ ಜೀವನವನ್ನು ಎಳೆ-ಎಳೆಯಾಗಿ ವಿವರಿಸುತ್ತಾ ಹೋಗುತ್ತದೆ. ನಾವು ಹೊಸ ಹೊಸ ಪಾತ್ರಗಳನ್ನು ಮತ್ತು ಅವುಗಳ ಪರಸ್ಪರ ಸಂಬಂಧಗಳೊಂದಿಗೆ ತಮ್ಮದೇ ಹಾದಿಯಲ್ಲಿ ಪ್ರಯಾಣಿಸುವುದನ್ನೂ ಕಾಣುತ್ತೇವೆ.

ಕಾದಂಬರಿಯಲ್ಲಿ ಬರುವ ಒಂದು ಪಾತ್ರ ಒಬ್ಬ ಬಿಳಿಯ ಅಮೆರಿಕನ್, ಲಾಯ್ಡ್ ಬಾರ್ನ್ಸ್‌ನದು. ಇವನು ಮೀಸಲು ಪ್ರದೇಶದ ಒಂದು ಸಮುದಾಯದಲ್ಲಿ ಗಣಿತದ ಪಾಠವನ್ನು ಮಾಡುತ್ತಿರುತ್ತಾನೆ ಮತ್ತು ಒಂದು ವ್ಯಾಯಾಮ ಶಾಲೆಯನ್ನೂ ಸಹ ನಡೆಸುತ್ತಿರುತ್ತಾನೆ. ಇವನಿಗೆ ತಾನು ಅಲ್ಲಿ ಹೊರಗಿನವನೆಂದು ತಿಳಿದಿದ್ದರೂ ಸಹ ತಾನೂ ಅವರಲ್ಲಿ ಒಬ್ಬನಂತೆ ಇರಲು ಹೆಣಗಾಡುತ್ತಿರುತ್ತಾನೆ. ಲೇಖಕಿ ಎರ್ಡ್ರಿಚ್ ಇಲ್ಲಿ ಈ ಸಮುದಾಯದ ಚಿಂತನೆಯ ಒಂದು ಒಳನೋಟವನ್ನು ಕೊಡುತ್ತಾರೆ. ಥಾಮಸ್ ವಾಝೂಷ್ಕ್ ಒಬ್ಬ ಒಳ್ಳೆಯ ಸ್ನೇಹಿತ ಮತ್ತು ಕರುಣಾಮಯಿ. ಬಾರ್ನ್ಸ್ ತಾನು ಪಿಕ್ಸಿಯನ್ನು ಮದುವೆಯಾದರೆ ತಾನೂ ಕೂಡ ಇಂಡಿಯನ್ ಸಮುದಾಯಕ್ಕೆ ಸೇರಿದವನಾಗುತ್ತಾನೆಂದು ಹೇಳಲು, ಥಾಮಸ್ "ಇಲ್ಲ, ನೀನು ಆ ರೀತಿಯ ಮೂಲಕ ನಮ್ಮಲ್ಲಿ ಒಬ್ಬನಾಗಲು ಸಾಧ್ಯವಿಲ್ಲ. ಆದರೆ ನಾವು ನಿಮ್ಮನ್ನು ಹಾಗೆಯೇ ಇಷ್ಟಪಡುತ್ತೇವೆ" ಎಂದು ಹೇಳುತ್ತ ಪ್ರೇಮ ಶೋಕದಿಂದ ದುಃಖಿತನಾದ ಬಾರ್ನ್ಸ್‌ನನ್ನು ಸಮಾಧಾನಪಡಿಸುತ್ತಾನೆ.

ವುಡ್ ಮೌಂಟನ್ ಎಂಬ ಯುವಕ ಬಾರ್ನ್ಸ್‌ನ ಮಾಜಿ ವಿದ್ಯಾರ್ಥಿ. ಈಗ ಅವನು ಒಬ್ಬ ಅತ್ಯುತ್ತಮ ಬಾಕ್ಸಿಂಗ್ ಪಟುವಾಗಿರುತ್ತಾನೆ. ಒಂದಾನೊಂದು ದಿನ ಅವನು ಮದ್ಯಪಾನ ಮತ್ತಿತರ ದುರಭ್ಯಾಸಗಳಿಂದ ದೂರ ಇರಲು ಸಾಧ್ಯವಾದರೆ ಒಬ್ಬ ಪ್ರಸಿದ್ಧ ಬಾಕ್ಸರ್ ಆದಾನು! ಅಲ್ಲಿ ಒಂದು ಸಮಸ್ಯೆ ಉದ್ಭವಿಸುತ್ತದೆ. ತರಬೇತುದಾರ (ಬಾರ್ನ್ಸ್) ಮತ್ತು ಬಾಕ್ಸರ್ (ವುಡ್ ಮೌಂಟನ್) ಇಬ್ಬರೂ ಕಾದಂಬರಿಯ ನಾಯಕಿ, ಪ್ಯಾಟ್ರಿಸ್

ಪರಾಂಟಿಯೊ 'ಪಿಕ್ಸೀ'ಳನ್ನು ಪ್ರೀತಿಸುತ್ತಾರೆ. ಪಿಕ್ಸೀ ಒಬ್ಬ ಚತುರೆ ಮತ್ತು ಆತ್ಮವಿಶ್ವಾಸವುಳ್ಳ, ಧೈರ್ಯವಂತ ಯುವತಿ ಆಗಿದ್ದಳು ಮತ್ತು ಅವಳಿಗೆ ಇವರಿಬ್ಬರಲ್ಲೂ ಆಸಕ್ತಿಯಿರಲಿಲ್ಲ.

ಕಥೆಯಲ್ಲಿ ಇಂಥಹ ಆಕರ್ಷಕ ಪ್ರಣಯ ಸನ್ನಿವೇಶವನ್ನು ಸೃಷ್ಟಿಸಿದ ಕ್ಯಾರೆನ್ ಲೂಯಿಸ್ ಎರ್ಡ್ರಿಚ್ ಅವರು ಒಂದು ಅದ್ಭುತ ಹಾಸ್ಯವನ್ನೂ ಈ ಪ್ರೇಮ ಕಥೆಯಲ್ಲಿ ಹೆಣೆದಿದ್ದಾರೆ! ಇಬ್ಬರು ಗಂಡು ಪ್ರೇಮಿಗಳು ಪಿಕ್ಸೀ ಮೇಲಿನ ಪ್ರೇಮದ ಆತಂಕದಲ್ಲಿ ಹತಾಶರಾಗಿದ್ದರೆ, ಅವಳಿಗೆ ಈ ವಿಷಯಗಳ ಮೇಲೆ ಕಾಲ ಕಳೆಯಲು ವ್ಯವಧಾನವಿರಲಿಲ್ಲ. ಹಾಗಾಗಿ ಇವರಿಬ್ಬರ ಬಗ್ಗೆ ಅವಳಿಗೆ ತಿರಸ್ಕಾರವಿತ್ತು. ಕೇವಲ ಹತ್ತೊಂಬತ್ತು ವರ್ಷಗಳ ಚಿಕ್ಕ ಪ್ಯಾಟ್ರಿಸ್‌ಗೆ ತನ್ನದೇ ಆದ ಅನೇಕ ಗಂಭೀರ ಕಾಳಜಿಗಳಿದ್ದವು. ಮನೆಯಲ್ಲಿ ತಾಯಿಯ, ಚಿಕ್ಕ ತಮ್ಮನ ಮತ್ತು ಕುಡುಕ ಅಪ್ಪನ ರಕ್ಷಣೆಯ ಹೊರೆ ಅವಳ ಹೆಗಲ ಮೇಲಿತ್ತು. ಈ ನಡುವೆ ಒಂದು ತಿಂಗಳ ಹಿಂದೆ ಮಿನಿಯಾಪೊಲಿಸ್‌ಗೆ ಹೋಗಿದ್ದ ಅವಳ ಸಹೋದರಿ ವೇರಾಳಿಂದ ಯಾವುದೇ ಸಮಾಚಾರ ಬರದೆ ಎಲ್ಲರೂ ಆತಂಕಗೊಂಡಿದ್ದರು. ಪ್ಯಾಟ್ರಿಸ್‌ನ ಚಿಕ್ಕಪ್ಪನಿಗೆ ವೇರಾ ತೊಂದರೆಯಲ್ಲಿರುವಂತೆ ಕನಸಾಗುತ್ತದೆ. ಪ್ಯಾಟ್ರಿಸ್‌ಗೆ ಅವಳನ್ನು ಅಲ್ಲಿ ಹೋಗಿ ಹುಡುಕಿ ಮನೆಗೆ ತರುವ ಜವಾಬ್ದಾರಿ ಬೀಳುತ್ತದೆ. ಮೂಲನಿವಾಸಿಗಳು ತಮ್ಮ ಕನಸುಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುವುದನ್ನು ಈ ಪುಸ್ತಕದಲ್ಲಿ ಹಲವಾರು ಕಡೆ ಗಮನಿಸಬಹುದು. ಅವರ ಸಂಪ್ರದಾಯದಲ್ಲಿ ಕನಸುಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಕ್ರಿಮಿನಲ್ ಭೂಗತ ಲೋಕದ ಭಯಾನಕ ಚಿತ್ರಗಳ ಪರಿಚಯವನ್ನೂ ಈ ಪುಸ್ತಕವು ಓದುಗನಿಗೆ ಮಾಡಿಸುವ ಮೂಲಕ ಕಥೆಯನ್ನು ವಿಸ್ತರಿಸುತ್ತದೆ. Turtle Mountain Indian Reservation ನನ್ನು ಎಂದಿಗೂ ಬಿಟ್ಟಿರದ ನಿಷ್ಕಪಟ ಹದಿಹರೆಯದ, ಪ್ಯಾಟ್ರಿಸ್ ದೊಡ್ಡ ನಗರದ ವಂಚಕರು ಮತ್ತು ತಲೆಹಿಡುಕರಿಗೆ (ಪಿಂಪ್‌ಗಳಿಗೆ) ಸುಲಭವಾಗಿ ಬಲಿಯಾಗಬಹುದೆಂದು ತೋರಿದರೂ ಅವಳು ತನ್ನ ಸಹೋದರಿಯ ಅನ್ವೇಷಣೆಗಾಗಿ ಪಡುವ ಪ್ರಯತ್ನಗಳು ಓದುಗನ ಸರಳ ಮತ್ತು ತ್ವರಿತ ಪರಿಹಾರದ ನಿರೀಕ್ಷೆಗಳನ್ನು ಸುಳ್ಳಾಗಿಸುತ್ತವೆ. ಕಥೆಯ ದೃಶ್ಯಗಳು ವಿಲಕ್ಷಣ ಹಾಸ್ಯದಿಂದ ಹಠಾತ್ತನೆ ಹೇಳಲಾಗದ ಭಯಾನಕತೆಗೆ ಬದಲಾಗುತ್ತ ಓದುಗನ ಕಾತುರತೆಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ಲೇಖಕಿ ಎರ್ಡ್ರಿಚ್ ಅವರು ಇದನ್ನು ಮೂಲಭೂತವಾಗಿ ಚಿಪ್ಪೆವಾ ವರ್ತನೆ ಎಂದು ಸೂಚಿಸುತ್ತಾರೆ, "ಅಲ್ಲಿನ ಅಪರಿಚಿತತೆಯು ಹಾಸ್ಯಮಯ ಮತ್ತು ಅಪಾಯಕರ ಸನ್ನಿವೇಶವನ್ನು ಸೃಷ್ಟಿಸಿ, ನೀವು ನಗಲೂಬಹುದು ಅಥವಾ ಅಳಲೂಬಹುದು."

ಈ ಸನ್ನಿವೇಶವನ್ನು ಗಮನಿಸಿ. Turtle Mountain Indian Reservationನ ಉಳಿವು ಒಂದು ಐತಿಹಾಸಿಕ ದಾಖಲೆಯ ವಿಷಯವಾಗಿದೆ; ಆದರೆ, ಕಾದಂಬರಿಯಲ್ಲಿ ಪ್ಯಾಟ್ರಿಸ್ ಮತ್ತು ಅವಳ ಸಹೋದರಿಯ ಬದುಕುಳಿಯುವ ಭರವಸೆ ಇನ್ನೂ ಇಲ್ಲ. ಆದರೆ ಲೇಖಕಿ ಎರ್ಡ್ರಿಚ್ ಆ ಗೂಢತೆಯನ್ನು (ಸಸ್ಪೆನ್ಸನ್ನು) ಬಳಸಿಕೊಳ್ಳುವುದಿಲ್ಲ. ಇಲ್ಲಿ ನಿರೂಪಕನ ದೃಷ್ಟಿ ಹೆಚ್ಚು ಕೋಮಲ ಮತ್ತು ವಿಸ್ತಾರವಾಗಿ ಇಡೀ ಸಮುದಾಯವನ್ನು

ತಲುಪುತ್ತದೆ. ಕಥೆಯು ಒಂದು ಸರಳ ರೇಖೆಯಂತೆ ಗೂಢ ಕುತೂಹಲವನ್ನು ತಣಿಸುವುದಿಲ್ಲ. ಅವಳು ನಿರೀಕ್ಷಿತ ಪಥವನ್ನು ಬಿಟ್ಟು ಹೆಚ್ಚು ಮಾನವೀಯ ಮಾರ್ಗವನ್ನನುಸರಿಸುತ್ತಾಳೆ. ಅವರ ಪಾತ್ರಗಳಂತೆ, ಓದುಗರಾದ ನಾವು ಕೂಡ ಮನಸ್ಸು-ಮುರಿದು ಆಸೆಗಳೆಲ್ಲ ಬರಿದಾದಾಗ ಕೊಚ್ಚಿ ಬರುವ ಹುಚ್ಚುನಗೆಯನ್ನು ನಗುತ್ತೇವೆ.

ಎರ್ಡ್ರಿಚ್ ಅವರು ಬಿಳಿಯರ ಪ್ರಪಂಚವನ್ನು ಮೀಸಲು ಪ್ರದೇಶದಲ್ಲಿರುವವರ ಜೀವನದೊಂದಿಗೆ ಅನೇಕ ಸೂಕ್ಷ್ಮ ರೀತಿಯಲ್ಲಿ ಹೋಲಿಸುತ್ತಾರೆ. ಮೂಲನಿವಾಸಿಗಳು ಅನಾರೋಗ್ಯಕ್ಕೆ ಒಳಗಾದರೆ, ಅವರು ಸರಳವಾದ ನಿಯಮಗಳನ್ನು ಬಳಸಿಕೊಂಡು ಅದರ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಅದೇನೆಂದರೆ 'ಬಿಳಿಯ ಮನುಷ್ಯರ ರೋಗಗಳಿಗೆ ಬಿಳಿಯ ಮನುಷ್ಯರು ಕೊಡುವ ಔಷಧಿಗಳನ್ನು ತೆಗೆದುಕೊಳ್ಳಬೇಕು' ಮತ್ತಿತರ ಕಾಯಿಲೆಗಳಿಗೆ ಸ್ಥಳೀಯ ಮದ್ದುಗಳೊಂದಿಗೆ ಚಿಕಿತ್ಸೆ ಮಾಡಿಕೊಳ್ಳುವುದು. ಮಾರ್ಮನ್ ಬೋಧಕನೊಮ್ಮೆ ಮೂಲನಿವಾಸಿಗಳನ್ನು ಮತಾಂತರಗೊಳಿಸಲು ಪ್ರಯತ್ನಿಸಿದಾಗ ಆ ಬೋಧಕನಿಗೆ "ನಮಗೆ ನಮ್ಮ ಬುಡಕಟ್ಟಿನ ಧರ್ಮದ ಬಗ್ಗೆ ಹೆಮ್ಮೆಯಿದೆ ಮತ್ತು ಸಂತೋಷವಾಗಿದ್ದೇವೆ. ಈ ವಿಶ್ವದಲ್ಲಿ ನಮಗಿರುವ ಸ್ಥಾನಕ್ಕಾಗಿ ನಾವು ಕೃತಜ್ಞರಾಗಿದ್ದೇವೆ" ಎಂದು ಹೇಳುತ್ತಾರೆ. ಮೂಲ ನಿವಾಸಿಗಳ ಸ್ಥಳೀಯ ಪುರಾಣಗಳು ಮತ್ತು ನಂಬಿಕೆಗಳು ವಿಪುಲವಾಗಿವೆ. ಅವರ ಕಥೆಗಳನ್ನು ಇಂಗ್ಲೀಷಿಗಿಂತ ಅವರದೇ ಚಿಪ್ಪೆವಾ ಭಾಷೆಯಲ್ಲಿ ಕೇಳುವುದು ಉತ್ತಮ. ಅವರ ಹಲ-ಕೆಲವು ನಂಬಿಕೆಗಳಂತೆ, ಮುಟ್ಟಾದ ಮಹಿಳೆ ಅಡುಗೆ ಬೇಯಿಸಿದರೆ ಅನಾರೋಗ್ಯಕ್ಕೆ ಒಳಗಾಗುತ್ತಾಳೆ. ಕುಟುಂಬದಲ್ಲಿ ಯಾರಾದರೂ ಸತ್ತಾಗ ಮಾತ್ರ ಮಹಿಳೆಯ ಕೂದಲನ್ನು ಕತ್ತರಿಸಬೇಕು. ಸ್ಥಳೀಯ ಮೂಲನಿವಾಸಿಗಳಿಗೆ ರಾತ್ರಿಯ ಆಕಾಶದಲ್ಲಿ ನಕ್ಷತ್ರಗಳನ್ನು ತಮ್ಮ ಭಾಷೆಯ ಹೆಸರುಗಳಿಂದ ಗುರುತಿಸಿದಾಗ ರಾತ್ರಿ ಹೆಚ್ಚು ಖುಷಿ ನೀಡುತ್ತದೆ. ಅದೇ ನಕ್ಷತ್ರಗಳನ್ನು ಶಾಲೆಯಲ್ಲಿ ಬಿಳಿಯರಿಂದ ಕಲಿತ ಹೆಸರುಗಳಲ್ಲಿ ಗುರುತಿಸಿದಾಗ ಅವರಿಗೆ ಅವು ಅಷ್ಟು ಹತ್ತಿರವೆನಿಸುವುದಿಲ್ಲ ಮತ್ತು ಅನ್ಯವೆನಿಸುತ್ತವೆ. ಈ ಕೆಲವು ಪುರಾಣ ಕಥೆಗಳು ಮತ್ತು ನಂಬಿಕೆಗಳು ನಾವೆಲ್ಲರೂ ಕೇಳಿ ಬೆಳೆದ ಭಾರತೀಯ ಪುರಾಣಗಳನ್ನು ಹೋಲುತ್ತವೆಯಲ್ಲವೆ? ಉದಾಹರಣೆಗೆ ಸ್ಯಾಟರ್ನ್, ವೀನಸ್‌ಗಳಿಗಿಂತ ಶನಿ, ಶುಕ್ರ ಇತ್ಯಾದಿ ಗ್ರಹಗಳು ನಮ್ಮ ಭಾವನೆಗಳಿಗೆ ಸಮೀಪವೆನಿಸುತ್ತವೆ. ಹೀಗೆ ನಮಗೆ ಸ್ಥಳೀಯ ಮೂಲ ನಿವಾಸಿಗಳು ನಮ್ಮ ರಕ್ತಸಂಬಂಧಿಗಳಿರಬಹುದೆಂಬ ಅನುಮಾನ ಸಹ ಮೂಡುತ್ತದೆ!

ಇಂದೂ ಸಹ ಮೂಲನಿವಾಸಿಗಳ ಸ್ಥಳದ ಮೇಲೆ ದಾಳಿಗಳು ಮುಂದುವರೆದಿವೆ. ಲೂಯಿಸ್ ಎರ್ಡ್ರಿಚ್ ಅವರು ತಮ್ಮ ಪುಸ್ತಕದ ಹೊರ ಹೊದಿಕೆಯಲ್ಲಿ ಟ್ರಂಪ್ ಆಡಳಿತವು ಇತ್ತೀಚೆಗೆ ವಾಂಪಾನಾಗ್ ಅನ್ನು ಕೊನೆಗೊಳಿಸಲು ಪ್ರಯತ್ನಿಸಿದೆಯೆಂದು ನೆನಪಿಸುತ್ತ "ನಮ್ಮ ತೀರಗಳಿಗೆ ಯಾತ್ರಿಕರನ್ನು ಸ್ವಾಗತಿಸಿದ ಮೊದಲ ಬುಡಕಟ್ಟು ಜನಾಂಗವಿದು. ಥ್ಯಾಂಕ್ಸ್ ಗಿವಿಂಗ್ ಹಬ್ಬದ ಪದ್ಧತಿಯನ್ನು ಆರಂಭಿಸಿದವರೂ ಇವರೇ" ಎಂದಿದ್ದಾರೆ. ಇಂದಿಗೂ ಸಹ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಅವರ ನೆಲದಲ್ಲಿ ಪೈಪ್‌ಲೈನ್‌ಗಳ ನಿರ್ಮಾಣ ಮುಂದುವರಿದಿದೆ ಮತ್ತು ನ್ಯಾಯಾಲಯಗಳಲ್ಲಿ ತಮ್ಮ ನ್ಯಾಯಕ್ಕಾಗಿ ಹೋರಾಡುತ್ತಿದ್ದಾರೆ.

ಅಂತಿಮ ವಿಶ್ಲೇಷಣೆಯಲ್ಲಿ ದುಃಖ, ಹೋರಾಟ ಮತ್ತು ಸರ್ಕಾರದ ವಂಚನೆಯ ಮಧ್ಯದಲ್ಲಿ ಈ ಮೂಲನಿವಾಸಿ ಜನಾಂಗವು ಕಷ್ಟಪಟ್ಟು ಗೆದ್ದು ಬದುಕುಳಿಯುವಿಕೆಯಲ್ಲಿ ಈ ಪುಸ್ತಕವು ಭರವಸೆಯನ್ನು ಹೊರಸೂಸುತ್ತದೆ. 450 ಪುಟಗಳ ಈ ಪುಸ್ತಕವನ್ನು ಓದಿ ಮುಗಿಸಿದ ಓದುಗನನ್ನು ಅದರಲ್ಲಿನ ಜೀವಂತ ಪಾತ್ರಗಳು ಬಹಳ ಕಾಲ ಕಾಡುವುದರಲ್ಲಿ ಸಂಶಯವಿಲ್ಲ.

ಶತಮಾನಗಳಿಂದ ಅನೇಕ ಆಘಾತಗಳನ್ನು ಕಂಡಿರುವ ಈ ಸಮುದಾಯಕ್ಕೆ ಎರ್ಡ್ರಿಚ್ ಅವರು ಉತ್ತಮ ಭವಿಷ್ಯದ ಸಂದೇಶವನ್ನು ಕೊಡುತ್ತಾರೆ. ನಾವೂ ಕೂಡ ಈ ಮೂಲನಿವಾಸಿ ಸಮುದಾಯವನ್ನು ಹುರಿದುಂಬಿಸೋಣ!

ಗೇಬ್ರಿಯಲ್ ಗಾರ್ಸಿಯಾ ಮಾರ್ಕೆಸ್ ಅವರ–'ಒಂದು ನೂರು ವರ್ಷಗಳ ಏಕಾಂತ'

1966ರಲ್ಲಿ, ಗೇಬ್ರಿಯಲ್ ಗಾರ್ಸಿಯಾ ಮಾರ್ಕೆಸ್ ಅವರು 'ಒನ್ ಹಂಡ್ರೆಡ್ ಯಿಯರ್ಸ್ ಆಫ್ ಸಾಲಿಟ್ಯೂಡ್' ಅನ್ನು ಬರೆದರು, ಅವರು ಈ ಪುಸ್ತಕದ ಹಸ್ತಪ್ರತಿಯನ್ನು ಕೇವಲ 18 ತಿಂಗಳಲ್ಲಿ ಮುಗಿಸಿದರು. ಕೆಲಸವಿಲ್ಲದೆ ಮನೆಯಲ್ಲಿದ್ದ ಅವರು ತಮ್ಮನ್ನು ಈ ಪುಸ್ತಕಕ್ಕೆ ಸಂಪೂರ್ಣವಾಗಿ ತೊಡಗಿಸಿಕೊಂಡರು, ಅವರ ಪತ್ನಿ, ಸ್ನೇಹಿತರು ಮತ್ತು ವರ್ತಕರಿಂದ ಸಾಲ ಮಾಡಿ ಮನೆಯನ್ನು ನಡೆಸುತ್ತಿದ್ದಳು. ಈ ಪುಸ್ತಕವು ಕೆಲವೇ ವರ್ಷಗಳಲ್ಲಿ ಅತ್ಯಂತ ಯಶಸ್ವಿಯಾಗಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿ, ಅಂತಿಮವಾಗಿ 1982ರಲ್ಲಿ ಲೇಖಕನಿಗೆ ನೊಬೆಲ್ ಪ್ರಶಸ್ತಿಯನ್ನು ಗಳಿಸಿಕೊಟ್ಟು ಅಪಾರ ಖ್ಯಾತಿ ಮತ್ತು ಸಂಪತ್ತನ್ನು ಒದಗಿಸಿತು. ವಿಶ್ವದ ಒಂದಲ್ಲಾ ಒಂದು ಸ್ಥಳದಲ್ಲಿ ಈ ಜನಪ್ರಿಯ ಪುಸ್ತಕ ಇಂದಿಗೂ ಮುದ್ರಣದಲ್ಲಿರುವಂತೆ ತೋರುತ್ತದೆ. ಲೇಖಕ ಎ. ಎನ್. ಪ್ರಸನ್ನ ಅವರು 'ನೂರು ವರ್ಷಗಳ ಏಕಾಂತ'ವೆನ್ನುವ ಇದರ ಕನ್ನಡ ಅನುವಾದವನ್ನು ಮಾಡಿದ್ದಾರೆ.

ಈ ಪುಸ್ತಕದಲ್ಲಿ ಲೇಖಕ ಮಾರ್ಕೆಸ್ ಸ್ಥಳೀಯರ ದೃಷ್ಟಿಯಿಂದ ಲ್ಯಾಟಿನ್ ಅಮೇರಿಕನ್ ಇತಿಹಾಸವನ್ನು ನಮಗೆ ಪರಿಚಯಿಸುತ್ತಾರೆ. ನಮಗೆ ತಿಳಿದಂತೆ ಕ್ರಿ.ಶ. 1500ರಿಂದ ಲ್ಯಾಟಿನ್ ಅಮೆರಿಕದ ಇತಿಹಾಸವು ಮೊದಲು ಸ್ಪಾನಿಷರ ಮತ್ತು ನಂತರ ಅಮೆರಿಕದ ಆಕ್ರಮಣಗಳ ಮತ್ತು ವಿಜಯಗಳ ಇತಿಹಾಸವಾಗಿದೆ. ಈ ಕಾದಂಬರಿಯು ಮ್ಯಾಕೊಂಡೊ ಎನ್ನುವ ಒಂದು ಕಾಲ್ಪನಿಕ ಪಟ್ಟಣದ ಕಥೆಯಾಗಿ ಪ್ರಾರಂಭಿಸುತ್ತದೆ (ಮ್ಯಾಕೊಂಡೊ ಎನ್ನುವುದು ಒಂದು ಯುಟೋಪಿಯಾ ಅಥವಾ ಸ್ವರ್ಗದ ಹುಡುಕಾಟದಲ್ಲಿರುವ ಪಟ್ಟಣ). ಹೋಸೆ ಅರ್ಕಾಡಿಯೊ ಬುವೆಂಡಿಯಾ ಎನ್ನುವವನೇ ಇದರ ಕಥಾನಾಯಕ. ಮಾರ್ಕೆಸ್ ಅವರು ಈ ಸ್ಥಳವನ್ನು ಮೊದಲ ಪ್ಯಾರಾಗ್ರಾಫ್‌ನಲ್ಲೇ ಹೀಗೆ ವಿವರಿಸುತ್ತಾರೆ "ಈ ಪಟ್ಟಣವನ್ನು ತಿಳಿ ನೀರಿನ ನದಿಯ ದಡದ ಮೇಲೆ ನಿರ್ಮಿಸಲಾಗಿದೆ. ಈ ತಿಳಿ ನೀರ ಬುಡದ ಹಾಸಿಗೆಯಲ್ಲಿನ ಅಗಾಧವಾದ ಮತ್ತು ನಯವಾದ ಬಿಳಿಯ ಕಲ್ಲುಗಳು ಇತಿಹಾಸಪೂರ್ವ ಮೊಟ್ಟೆಗಳಂತೆ ಕಾಣುತ್ತಿದ್ದವು. ಆದರೆ ಈಗಿನ ಪ್ರಪಂಚವು ಎಷ್ಟು ಇತ್ತೀಚಿನದು ಎಂದರೆ ಅನೇಕ ವಸ್ತುಗಳಿಗೆ ಹೆಸರುಗಳೇ ಇಲ್ಲ, ಮತ್ತು ಅವುಗಳನ್ನು ಪ್ರಸ್ತಾಪಿಸಲು ಅವುಗಳತ್ತ

ಸೂಚಿಸುವುದು ಅಗತ್ಯವಿತ್ತು." ಮಾರ್ಕೆಸ್ ಅವರ ದೃಷ್ಟಿಯಲ್ಲಿ, ಸಹಸ್ರಾರು ವರ್ಷಗಳಿಂದ ವಾಸಿಸುತ್ತಿದ್ದ ಇಲ್ಲಿನ ನಿವಾಸಿಗಳು ಅಲ್ಲಿನ ಪ್ರಕೃತಿಯಷ್ಟೇ ಸರಳ, ಸುಂದರ, ಶಾಂತ ಮತ್ತು ಮುಗ್ಧರಾಗಿದ್ದವರು. ಹೊರಗಿನವರ ಆಕ್ರಮಣಗಳಿಂದ ಹೇಗೆ ಅವರ ಜೀವನ, ಭಾಷೆ, ಸಂಸ್ಕೃತಿಗಳ ನಾಶದ ಜೊತೆಗೆ ತಮ್ಮ ಸ್ಮೃತಿಯನ್ನೂ ಕಳೆದುಕೊಂಡರು ಎನ್ನುವುದು ಅವರ ಕಳಕಳಿ.

ಈ ಪುಸ್ತಕವು ಬುವೆಂಡಿಯಾ ಕುಟುಂಬದ ಇತಿಹಾಸವಾಗಿದೆ. ಬುವೆಂಡಿಯಾ ಕುಟುಂಬದ ಇತಿಹಾಸವು ಐದು ತಲೆಮಾರುಗಳ ಮೇಲೆ ಕೇಂದ್ರೀಕರಿಸುತ್ತದೆ. 19ನೇ ಶತಮಾನದ ಆರಂಭದಲ್ಲಿ ಹೋಸೆ ಅರ್ಕಾಡಿಯೊ ಬುವೆಂಡಿಯಾ ಮತ್ತು ಅವರ ಪತ್ನಿ ಉರ್ಸುಲಾ ಅವರು ದಕ್ಷಿಣ ಅಮೆರಿಕಾದ ಒಂದು ಸ್ಥಳದಲ್ಲಿ ತಿಳಿನೀರಿನ ನದಿಯ ಮೇಲೆ ಮ್ಯಾಕೊಂಡೊ ಎನ್ನುವ ಗ್ರಾಮವನ್ನು ಸ್ಥಾಪಿಸಿದರು. ಬುವೆಂಡಿಯಾಗೆ ಈ ಪ್ರದೇಶದ ಭೌಗೋಳಿಕತೆಯ ಬಗ್ಗೆ ಏನೂ ತಿಳಿದಿರಲಿಲ್ಲ. ಅವನಿಗೆ ನಕ್ಷೆಗಳು ಮತ್ತು ದಿಕ್ಸೂಚಿಗಳ ಬಗ್ಗೆ ತುಂಬಾ ಆಸಕ್ತಿಯಿರುತ್ತದೆ, ಆದರೆ ಅವನು ಎಲ್ಲಿದ್ದಾನೆ ಎನ್ನುವುದು ಅವನಿಗೆ ಮಾತ್ರ ಅರ್ಥವಾಗಿತ್ತು ಎನ್ನಬಹುದು.

ಉರ್ಸುಲಾಳ ಪಾತ್ರ ಪ್ರಾಯೋಗಿಕ ಸಹಿಷ್ಣುತೆ ಮತ್ತು ದೃಢತೆಯ ವ್ಯಕ್ತಿತ್ವವಾಗಿದೆ. ಅವಳು ಬಟ್ಟೆ ಮತ್ತು ಪದಾರ್ಥಗಳ ತುಣುಕುಗಳನ್ನು ಸರಿಪಡಿಸುತ್ತಾಳೆ ಮತ್ತು ವಿಪತ್ತುಗಳ ನಂತರ ಮನೆಯನ್ನು ಸ್ವಚ್ಛಗೊಳಿಸುತ್ತಾಳೆ. ಅವಳು ತನ್ನ ಮಕ್ಕಳು ಪ್ರೌಢರಾಗಿ ದೊಡ್ಡವರಾಗಿದ್ದರೂ ಅವಳೇ ಮುಂದಿನ ಹಲವಾರು ಸಂತತಿಗಳನ್ನು ಬೆಳೆಸುತ್ತಾಳೆ ಮತ್ತು ಅವಳು 114ನೇ ವಯಸ್ಸಿನವರೆಗೆ ಆರೋಗ್ಯವಾಗಿ ಮತ್ತು ಬಲವಾಗಿ ಇನ್ನೂ ಉಳಿದಿದ್ದಾಳೆ. ಅವಳ ವಯಸ್ಸು ನಿಜವಾಗಿ 114 ಅಥವಾ 122 ಇರಬಹುದೇ ಎಂಬುದು ಯಾರಿಗೂ ಖಚಿತವಾಗಿ ತಿಳಿದಿಲ್ಲ!

ಬುವೆಂಡಿಯಾ ವಂಶಸ್ಥರಿಗೆ ಆದರ್ಶ ಮತ್ತು ವಾಸ್ತವತೆಗಳ ಸಂಪೂರ್ಣ ತಿಳುವಳಿಕೆ ಇತ್ತೆಂಬುದು ಅವರ ಜೀವನದಿಂದ ತಿಳಿದುಬರುತ್ತದೆ. ಬುವೆಂಡಿಯಾ ವಂಶದಲ್ಲಿ ಪುರುಷರೆಲ್ಲಾ ಆರ್ಕಾಡಿಯೊ ಅಥವಾ ಆರೆಲಿಯಾನೊ ಎಂದು ಹೆಸರಿಸಲ್ಪಟ್ಟಿದ್ದರು. ಅವರು ಸಮುದ್ರಗಳಿಗೆ ಹೋಗುತ್ತಿದ್ದರು, ಕ್ರಾಂತಿಗಳಲ್ಲಿ ಭಾಗವಹಿಸುತ್ತಿದ್ದರು, ಜಿಪ್ಸಿಗಳನ್ನು ಅನುಸರಿಸುತ್ತಿದ್ದರು ಅಥವಾ ಅವರ ಸಹೋದರಿಯರನ್ನೋ, ಚಿಕ್ಕಮ್ಮನನ್ನೋ ಪ್ರೀತಿಸುತ್ತಿದ್ದರು. ಒಟ್ಟಿನಲ್ಲಿ ಅವರೆಲ್ಲರೂ ಕುಟುಂಬದ ಯಶಸ್ಸು ಮತ್ತು ಸಂಪತ್ತನ್ನು ಹೆಚ್ಚಿಸಿದರು. ಅವರ ವಂಶದ ಹೆಂಗಸರೂ ಸಹ ಪುರುಷರಿಗಿಂತ ಕಡಿಮೆಯಾಗಿರಲಿಲ್ಲ. ಆದರ್ಶಗಳ ಮುಗ್ಧತೆಯಲ್ಲಿ ಖಿನ್ನತೆಯುಂಟಾದಾಗ ಒಬ್ಬಳು ಮಣ್ಣನ್ನು ತಿಂದರೆ, ಇನ್ನೊಬ್ಬಳು ತನ್ನ ಪ್ರೇಮಿ ಆತ್ಮಹತ್ಯೆ ಮಾಡಿಕೊಂಡನೆಂದು ಒಲೆಯಲ್ಲಿ ತನ್ನ ಕೈಯನ್ನು ಸುಟ್ಟುಕೊಂಡು ಅದರ ಮೇಲೆ ಕಪ್ಪು ಬಟ್ಟೆಯನ್ನು ಜೀವನವೆಲ್ಲ ಧರಿಸುತ್ತ ತನ್ನ ಅಖಂಡ ಪ್ರೇಮವನ್ನು ತೋರಿಸುತ್ತಾಳೆ, ಮಗದೊಬ್ಬಳು 'Remedios the Beauty' ತುಂಬಾ ಮುಗ್ಧಳಾಗಿದ್ದು, ಹಿತ್ತಲಿನಲ್ಲಿ ಬಟ್ಟೆ ಮಡಿಸುವಾಗ ಹಾಗೇ ಸ್ವರ್ಗಕ್ಕೆ ಏರುತ್ತೇನೆಂದು ಭಾವಿಸುತ್ತಾಳೆ.

ವಾಸ್ತವ ಬದುಕಿನ ವಿವಿಧ ಕಠಿಣ ಮತ್ತು ಪರಿಚಿತ ಅಂಶಗಳು ಅವರ ಜಗತ್ತಿನಲ್ಲೂ ಕೂಡ ಸಾರ್ವಕಾಲಿಕವಾಗಿ ಬಂದೊರಗಿದರೂ ಅವುಗಳಿಗೆ ಅವರ ಪ್ರತಿಕ್ರಿಯೆ ವಿಭಿನ್ನವಾಗಿರುತ್ತದೆ. ಜನನ, ಸಾವು, ಯುದ್ಧ, ಅನಾರೋಗ್ಯ, ಹವಾಮಾನ, ಇತ್ಯಾದಿಗಳಿಗೆ ಬುವೆಂಡಿಯಾಗಳು ಪ್ರತಿಕ್ರಿಯಿಸುವ ಮತ್ತು ಅವುಗಳನ್ನು ವಿವರಿಸುವ ವಿಧಾನ ಹೊರಗಿನವರಿಗೆ ಅವಾಸ್ತವ ಅಥವಾ ಅಸಾಂಪ್ರದಾಯಿಕವೆಂದು ತೋರುತ್ತದೆ. ಕೆಲ ಉದಾಹರಣೆಗಳೆಂದರೆ, ಮ್ಯಾಕೊಂಡೊ ಬೇಸಿಗೆಯಲ್ಲಿ ತುಂಬಾ ಬಿಸಿಯಾಗುತ್ತದೆ. ಆಗ ಪುರುಷರು ಮತ್ತು ಮೃಗಗಳು ಹುಚ್ಚರಾಗುತ್ತಾರೆ ಮತ್ತು ಪಕ್ಷಿಗಳು ಮನೆಗಳ ಮೇಲೆ ದಾಳಿ ಮಾಡುತ್ತವೆಯೆಂದು ಭಾವಿಸುತ್ತಾರೆ. ಸುದೀರ್ಘ ಮಳೆಯು ಕೇವಲ ವಾರಗಳಲ್ಲ, ನಾಲ್ಕು ವರ್ಷ ಹನ್ನೊಂದು ತಿಂಗಳು ಮತ್ತು ಎರಡು ದಿನಗಳು ಸುರಿಯುತ್ತದೆ ಎಂದು ನೆನಪಿಸಿಕೊಳ್ಳಲಾಗುತ್ತದೆ. ಒಂದು ವೇಳೆ ಪ್ಲೇಗ್ ಈ ಪ್ರದೇಶದಲ್ಲಿ ಪ್ರವೇಶಿಸಿದರೆ, ಅದು ಸಾಮಾನ್ಯ ಕೊಲೆಗಾರನಷ್ಟೇ ಅಲ್ಲ, ಅದೊಂದು 'ನಿದ್ರಾಹೀನತೆಯ ಪ್ಲೇಗ್,' ಅಂದರೆ ಕ್ರಮೇಣ ಜನರು ಎಲ್ಲವನ್ನೂ ಮರೆತುಬಿಡುತ್ತಾರೆ. ಅತ್ಯಂತ ಸಾಮಾನ್ಯವಾದ ವಸ್ತುಗಳ ಉಪಯೋಗಗಳನ್ನೂ ಮತ್ತು ಹೆಸರುಗಳನ್ನು ಮರೆತುಬಿಡುತ್ತಾರೆ. ಈ ರೀತಿಯ ಮರೆವಿನ ಸಂಕಷ್ಟವನ್ನು ಎದುರಿಸಲು, ಗ್ರಾಮಸ್ಥರು ಕುರ್ಚಿಗಳು ಮತ್ತು ಗಡಿಯಾರಗಳನ್ನು ಲೇಬಲ್ ಮಾಡಿ ಮತ್ತು ಹಸುವಿನ ಮೇಲೆ ಒಂದು ಗುರುತಿನ ಚಿಹ್ನೆಯೊಂದಿಗೆ "ಇದು ಹಸು, ಪ್ರತಿದಿನ ಬೆಳಿಗ್ಗೆ ಇದು ಹಾಲನ್ನು ಉತ್ಪಾದಿಸುತ್ತದೆ. ಅದನ್ನು ಕರೆದು, ಕುದಿಸಿ ಕಾಫಿಯೊಂದಿಗೆ ಬೆರೆಸಿ ಕಾಫಿಯನ್ನು ತಯಾರಿಸಬೇಕು" ಎಂದು ಬರೆದಿಟ್ಟಿರುತ್ತಾರೆ.

ಮ್ಯಾಕೊಂಡೊ ಪಟ್ಟಣದ ಜನರ ಸ್ವರ್ಗದ ಈ ಹುಡುಕಾಟಕ್ಕೆ ಮೊದಲ ಆಕ್ರಮಣ 'ನಿದ್ರಾಹೀನತೆಯ ಪ್ಲೇಗ್' ಮೂಲಕ ಶೀಘ್ರದಲ್ಲೇ ಅಡಚಣೆಯಾಗುತ್ತದೆ. ಪ್ಲೇಗ್ ರೋಗವನ್ನು ಮ್ಯಾಕೊಂಡೊ ಪಟ್ಟಣಕ್ಕೆ ಮೊದಲು ಬ್ಯುಂಡಿಯಾಸ್, ಕ್ಯಾಟೌರ್ ಮತ್ತು ವಿಸಿಟಿಯಾಟ್‌ನ ಮೂಲನಿವಾಸಿ ಸೇವಕರು ತರುತ್ತಾರೆ. ಇವರು ಅಮೆರಿಕನ್ ಇಂಡಿಯನ್ಸ್ ಅಥವಾ ಮೂಲನಿವಾಸಿ ಜನಸಂಖ್ಯೆಯ ಸಾಂಕೇತಿಕ ವ್ಯಕ್ತಿ-ಚಿತ್ರಣವಾಗಿದ್ದಾರೆ. ಈ ಜನಾಂಗವೇ ಸ್ಪೇನ್ ಸೈನಿಕರಿಂದ ಸೋತು ಹಣ್ಣಾಗಿ ಹಿಂದಿನದೆಲ್ಲವನ್ನೂ ಮರೆತಿದ್ದಾರೆ. ಸಾಮಾನ್ಯವಾಗಿ ಪ್ಲೇಗ್ ಅನ್ನು ರಾಜಕೀಯ ಮತ್ತು ಸಾಮಾಜಿಕ ನೆನಪುಗಳ ನಾಶಕ್ಕೆ, ಭಾಷೆಯ, ಸಂಸ್ಕೃತಿಯ ಮತ್ತು ವಾಸ್ತವಿಕತೆಯ ನಾಶಕ್ಕೆ ಸಂಕೇತಿಸಲಾಗುತ್ತದೆ. ಪ್ಲೇಗ್ ಕಾಯಿಲೆಯಿಂದ ಮ್ಯಾಕೊಂಡೊ ನಿವಾಸಿಗಳು ಎಲ್ಲವನ್ನೂ ಮರೆತುಹೋಗುವಂತೆ ಮಾಡಿ, ಅವರು ಎಲ್ಲಾ ವಸ್ತುಗಳನ್ನು ಲೇಬಲ್ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಅವುಗಳ ಉದ್ದೇಶಗಳನ್ನೂ ವಿವರಿಸುತ್ತಾರೆ. ಹೀಗೆ ಅವರು ಬರವಣಿಗೆಯ ಮೂಲಕ ತಮ್ಮ ಸ್ಮರಣೆಯನ್ನೂ ಹಿಂದಿನ ನೆನಪುಗಳನ್ನೂ ಉಳಿಸಿಕೊಳ್ಳಲು ಯತ್ನಿಸುತ್ತಾರೆ.

ಮ್ಯಾಕೊಂಡೊ ಪಟ್ಟಣದ ಆಂತರಿಕ ಹುಡುಕಾಟದಲ್ಲಿ ಅದು ಹೇಗೆ ಹೊರಗಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿತೆಂದು ತಿಳಿಯುವುದರ ಮೂಲಕ ಅದರ ಮೇಲಾದ ಎರಡನೇ ಆಕ್ರಮಣವನ್ನು ಗಮನಿಸಬಹುದು. ಪ್ರಪಂಚದ ಇತರ ಭಾಗಗಳೊಂದಿಗೆ

ಹೆಚ್ಚಿದ ಸಂವಹನ ಮತ್ತು ಸಂಪರ್ಕಗಳ ಮೂಲಕ ನಗರದ ನಾಗರಿಕತೆಯು ಬೆಳೆಯುತ್ತದೆ. ಥಿಯೇಟರ್, ಮನೆ ಮನೆಗೆ ವಿದ್ಯುತ್ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಳು ಮತ್ತು 'ಬನಾನ ಕಂಪನಿ'ಯ ಆಗಮನಕ್ಕೆ ಅನುಕೂಲವಾಗುವಂತೆ ತಯಾರಾದ ರೈಲುಮಾರ್ಗ, ಇತ್ಯಾದಿಗಳ ಮೂಲಕ ನಾಗರಿಕತೆಯ ಆಗಮನ ಮ್ಯಾಕೊಂಡೊವಿನಲ್ಲೂ ಗೋಚರಿಸುತ್ತದೆ. ಆದರೆ ಈ ಎಲ್ಲ ಸಂಗತಿಗಳು ವಸ್ತು-ವಿಪುಲತೆಯ, ತೋರಿಕೆಯ, ಮೋಸದ ಕೃತಕ ವೈಭವವನ್ನು ತೋರ್ಪಡಿಸುತ್ತವೆ. ಅಮೆರಿಕಾದ ಬನಾನ ಕಂಪನಿಯ ಆಗಮನವು ಮ್ಯಾಕೊಂಡೊ ಮತ್ತು ಅದರ ನಿವಾಸಿಗಳ ಪತನಕ್ಕೆ ಕಾರಣವಾಗುತ್ತದೆ. ಈ ಪತನದಿಂದಾದ ವಿನಾಶವನ್ನು ಬನಾನ ಕಂಪೆನಿಯ ಕಾರ್ಮಿಕರ ಹತ್ಯಾಕಾಂಡದಲ್ಲಿ ಸಾಂಕೇತಿಕವಾಗಿ ಗುರುತಿಸಬಹುದು.

ಮ್ಯಾಕೊಂಡೊದಲ್ಲಿ ಬನಾನ ಕಂಪನಿಯು ನಡೆಸಿದ ಶೋಷಣೆ ಲ್ಯಾಟಿನ್ ಅಮೆರಿಕಾದಲ್ಲಿ ಇಪ್ಪತ್ತನೇ ಶತಮಾನದಲ್ಲಿ ಆಧುನಿಕತೆಯ ಸೋಗಿನಲ್ಲಿ ವಿದೇಶೀಯರಿಂದಾದ ಶೋಷಣೆಯ ಒಂದು ಉದಾಹರಣೆ ಮಾತ್ರ. ಆ ಶತಮಾನದಲ್ಲಿ ವಿದೇಶಿ ಹೂಡಿಕೆದಾರರಿಂದ ಆರಂಭವಾದ ಕಬ್ಬು, ಕಾಫಿ, ಪೆಟ್ರೋಲಿಯಂ, ಮತ್ತಿತರ ಪ್ರಮುಖ ಲಾಭೋತ್ಪಾದಕ ಕೈಗಾರಿಕೆಗಳು ಕೃತಕ ಉತ್ಕರ್ಷದ (artificial inflation) ಪರಿಸ್ಥಿತಿಗಳನ್ನು ಸೃಷ್ಟಿಸಿದವು. ಇದರಿಂದ ಹೆಚ್ಚಿದ ವೇತನಗಳ ಮೂಲಕ ಉಂಟಾದ ಇತರ ಪ್ರಲೋಭಕ ಅನಿಸಿಕೆಗಳಿಂದ ಪ್ರಗತಿ ಮತ್ತು ಆಧುನೀಕರಣದ ವಾತಾವರಣವನ್ನುಂಟುಮಾಡಿತು. ಇದರಿಂದ 'ಹೊಸ ಸಾಮಾಜಿಕ ಪರಿಸ್ಥಿತಿಗಳು ಉದ್ಭವಿಸಿ ಉತ್ತೇಜಕ, ವಿಭಿನ್ನ ಮತ್ತು ಹೊಸ ಸಾಧ್ಯತೆ'ಗಳನ್ನು ಸೂಚಿಸಿದವು. ಅದೇ ರೀತಿ ಮ್ಯಾಕೊಂಡೊದಲ್ಲೂ ಸಹ ಬನಾನ ಕಂಪನಿಯ ಆಗಮನವು ಹೊಸತನ್ನು ತರುತ್ತದೆ. ಸ್ಥಳೀಯರು ವಿದೇಶೀಯ ಅಮೆರಿಕನ್ನರೊಂದಿಗೆ ಅದರಲ್ಲೂ ಅವರ ಮಕ್ಕಳೊಂದಿಗೆ ಸ್ನೇಹ ಬೆಳೆಸಲು ಮಾಡಿಕೊಂಡ ಸಾಮಾಜಿಕ ಬದಲಾವಣೆಗಳು ಎದ್ದು ಕಾಣುವಂತಹುದು. ಆದಾಗ್ಯೂ ಅಲ್ಲಿನ ಸಮಾಜವು ಶ್ರೇಣೀಕರಿಸಲ್ಪಟ್ಟು ಅಮೆರಿಕನ್ನರು ತಮ್ಮದೇ ಕೋಟೆಯೊಳಗಿನ ಕ್ವಾರ್ಟರ್ಸ್‌ಗಳಲ್ಲಿ ವಾಸಿಸುತ್ತಿದ್ದರು ಮತ್ತು ಅವರಿಗೆ ಸ್ಥಳೀಯ ಸಮಾಜದ ಅಭಿವೃದ್ಧಿ ಅಥವಾ ಆಧುನೀಕರಣದಲ್ಲಿ ಯಾವ ಆಸಕ್ತಿಯೂ ಇರಲಿಲ್ಲ (ಇಂದಿಗೂ ಸಹ ಉತ್ತರ ಅಮೆರಿಕಾವು ದಕ್ಷಿಣದಿಂದ ಗಮನಾರ್ಹ ಪ್ರಮಾಣದ ಆಹಾರ ಮತ್ತು ಹಣ್ಣುಗಳನ್ನು ಆಮದು ಮಾಡಿಕೊಳ್ಳುತ್ತದೆ. ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ರಫ್ತು ಮಾಡುವ ಕಾರಣ ಅಲ್ಲಿನ ಸ್ಥಳೀಯರಿಗೆ ಕಡಿಮೆ ಗುಣಮಟ್ಟದ ಪದಾರ್ಥಗಳು ಸಿಗುತ್ತವೆ.)

ಬನಾನ ಕಾರ್ಮಿಕರ ಹತ್ಯಾಕಾಂಡದ ಬಗ್ಗೆ ಗಾರ್ಸಿಯಾ ಮಾರ್ಕೆಸ್ ಅವರು 1928ರಲ್ಲಿ ಕೊಲಂಬಿಯ ದೇಶದ ಸಿಯಾನಗಾ ಪಟ್ಟಣದಲ್ಲಿ ಸರ್ಕಾರಿ ಪಡೆಗಳು ಮತ್ತು ಯುನೈಟೆಡ್ ಫ್ರೂಟ್ ಕಂಪನಿಯ ಕಾರ್ಮಿಕರ ನಡುವೆ ನಡೆದ ನೈಜ ಘಟನೆಗಳ ಆಧಾರಗಳನ್ನೇ ತಮ್ಮ ಪುಸ್ತಕದಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಕಾರ್ಮಿಕರು ಆ ಪಟ್ಟಣದ ರೈಲು ನಿಲ್ದಾಣದ ಬಳಿಯ ಚೌಕದಲ್ಲಿ ಒಟ್ಟುಗೂಡಿದರು ಮತ್ತು ಅವರು ಸರ್ಕಾರಿ

ಪಡೆಗಳು ಬಂದಾಗ ಚದುರಲು ನಿರಾಕರಿಸಿದಾಗ ಅವರ ಮೇಲೆ ಗುಂಡು ಹಾರಿಸಲಾಯಿತು. ಈ ಘಟನೆಯ ನಂತರ 'ಮೌನದ ಪಿತೂರಿ' (conspiracy of silence)ಯ ಮೂಲಕ ಘಟನೆಯ ನೈಜ ಸಂಗತಿಗಳನ್ನು, ವಿಶೇಷವಾಗಿ ಸತ್ತವರ ಸಂಖ್ಯೆಯನ್ನು ಗುಟ್ಟಾಗಿಡಲಾಯಿತು. ಮಾರ್ಕೆಸ್ ಅವರು ತಮ್ಮ ಕಥೆಯ ಆವೃತ್ತಿಯಲ್ಲಿ, ವಿವರಗಳನ್ನು ಉತ್ಪ್ರೇಕ್ಷಿಸುವಾಗ ಸಾಮಾನ್ಯವಾಗಿ ತಿಳಿದಿರುವ ಸಂಗತಿಗಳ ಮೂಲ ಅಂಶಗಳಿಗೆ ನಿಷ್ಠರಾಗಿದ್ದು ವಿವರಗಳನ್ನು ಸಂಪೂರ್ಣವಾಗಿ ನಂಬಬಹುದಾದ ಶೈಲಿಯಲ್ಲಿ ಬನಾನ ಕಂಪನಿಯ ಕ್ರಮಗಳನ್ನು ಉತ್ಪ್ರೇಕ್ಷಿಸುತ್ತಾರೆ. ಮ್ಯಾಕೊಂಡೋನ ಈ ಹತ್ಯಾಕಾಂಡದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನ ಸಾಯುತ್ತಾರೆ. ಸಾಕ್ಷಿಗೆಂದು ಉಳಿಯುವವರು ಹೋಸೆ ಆರ್ಕಾಡಿಯೊ ಸೆಗುಂಡೋ ಮತ್ತು ಒಂದು ಸಣ್ಣ ಮಗು ಮಾತ್ರ. ಅವನ ಸೋದರಳಿಯ ಆರೆಲಿಯಾನೊ ಬಾಬಿಲೋನಿಯಾನನ್ನು ಹೊರತುಪಡಿಸಿದಂತೆ ಸತ್ತವರ ಕುಟುಂಬಗಳೂ ಸೇರಿದಂತೆ ಬೇರೆ ಯಾರೂ ಸಹ ಹೋಸೆ ಆರ್ಕಾಡಿಯೊ ಸೆಗೊಂಡೋ ಹೇಳುವ ಹತ್ಯಾಕಾಂಡದ ಕಥೆಯನ್ನು ನಂಬುವುದಿಲ್ಲ! ಏಕೈಕ ನಂಬಿಕೆಯುಳ್ಳವನಾಗುಳಿದ ಆರೆಲಿಯಾನೊ, "ಹತ್ಯಾಕಾಂಡದ ನಂತರದ ಸ್ಮೃತಿಯ ನಿಗ್ರಹ ಮತ್ತು ಮ್ಯಾಕೊಂಡೊನ ಅವನತಿಗಳ ನಡುವಿನ ಸಂಬಂಧವನ್ನು ತೋರಿಸುವ ಏಕೈಕ ಕೇಂದ್ರ ವ್ಯಕ್ತಿಯಾಗುತ್ತಾನೆ."

ಹತ್ಯಾಕಾಂಡದ ನಂತರ, ಬನಾನ ಕಂಪನಿಯ ಪಟ್ಟಣದ ಮೇಲೆ ಪ್ರವಾಹ ಉಂಟಾಗುತ್ತದೆ ಮತ್ತು ಅದು ಸುಮಾರು ಐದು ವರ್ಷಗಳವರೆಗೆ ಇರುತ್ತದೆ. ಆ ಸಮಯದಲ್ಲಿ ಪಟ್ಟಣವು ಕೊಳೆಯುತ್ತದೆ ಮತ್ತು ನಂತರ ತನ್ನ ಪ್ರಾಚೀನ ಸ್ಥಿತಿಗೆ ಮರಳುತ್ತದೆ. ಸಸ್ಯವರ್ಗ ಮತ್ತು ಕೀಟಗಳು ಆಕ್ರಮಿಸಿ ಎಲ್ಲವನ್ನೂ ಸ್ವಾಧೀನಪಡಿಸಿಕೊಳ್ಳುತ್ತವೆ. ಹೀಗೆ ಕಾಲ್ಪನಿಕ ಪಟ್ಟಣವಾದ ಮ್ಯಾಕೊಂಡೊಗೆ ದುಃಖದಾಯಕ ಅಂತ್ಯವಾಗುತ್ತದೆ. ಏಕೆಂದರೆ ಇದೇ ಮ್ಯಾಕೊಂಡೊನ ಮೊದಲ ನಿವಾಸಿಗಳು ತಮ್ಮದೇ ಆದ ಕಾಲ್ಪನಿಕ 'ರಾಮರಾಜ್ಯ'ವನ್ನು ಹುಡುಕಲು ಹೊರಟಿದ್ದನ್ನು ನೆನೆಯಬಹುದು.

ಮಾರ್ಕೆಸ್ ಅವರು ಸಮಾಜವಾದಿ ಕ್ರಾಂತಿಯು, ಅಭಿವೃದ್ಧಿಗೆ, ವಿಶೇಷವಾಗಿ ಲ್ಯಾಟಿನ್ ಅಮೆರಿಕದ ಅಭಿವೃದ್ಧಿಗೆ ಅತ್ಯುತ್ತಮ ಮಾರ್ಗವಾಗಿದೆಯೆಂದು ನಂಬುತ್ತಾರೆ. ಇದರ ಮೂಲಕ ಅವರು ಜನರಲ್ಲಿ ಬೇರೂರಿಸುವ ಸಂಸ್ಕೃತಿ ಮತ್ತು ಸರ್ಕಾರದ ಮಹತ್ವವನ್ನು ಗುರುತಿಸುತ್ತಾರೆ. ಆದರೆ ಹಿಂಸಾಚಾರದ ಅವರ ಅನುಭವಗಳು ಸಮಾನತೆ ಮತ್ತು ಸ್ವಾತಂತ್ರ್ಯವನ್ನು ತರಲು ಹಿಂಸಾತ್ಮಕ ಕ್ರಾಂತಿಯ ಅಗತ್ಯವನ್ನು ಅನುಮಾನಿಸುವಂತೆ ಮಾಡುತ್ತವೆ. ಗಾರ್ಸಿಯಾ ಮಾರ್ಕೆಸ್ ಅವರು ಲ್ಯಾಟಿನ್ ಅಮೆರಿಕನ್ ಪ್ರದೇಶಗಳ ಅಭಿವೃದ್ಧಿಯನ್ನು ಹೊರಗಿನ ವ್ಯವಸ್ಥೆಗಳಾದ ಪ್ರಜಾಪ್ರಭುತ್ವವಾಗಲೀ ಅಥವಾ ಸೋವಿಯತ್ ಕಮ್ಯುನಿಸಂ ಮಾದರಿಯಾಗಲೀ ನಿರ್ಬಂಧಿಸಬಾರದು ಎಂದು ಪ್ರತಿಕ್ರಿಯಿಸಿದ್ದಾರೆ. ಈ ಪ್ರದೇಶಗಳು ತಮ್ಮದೇ ಆದ ರೀತಿಯಲ್ಲಿ ವಿಕಾಸಗೊಳ್ಳಬೇಕು ಎಂದು ಅಭಿಪ್ರಾಯಪಡುತ್ತಾರೆ. ಅವರ ಕಾದಂಬರಿ ಈ ಚಿಂತನೆಯನ್ನು ಸೂಕ್ಷ್ಮ ರೀತಿಯಲ್ಲಿ ಪ್ರತಿಬಿಂಬಿಸುತ್ತದೆಯಾದರೂ ಅದು ಅಷ್ಟು ಸ್ಪಷ್ಟವಾಗಿಲ್ಲ. ಅವರ ಅಂತಿಮ ಕಾಳಜಿ ಮಾನವ ಹಕ್ಕುಗಳ ಪ್ರಚಾರ ಮತ್ತು

ಎಲ್ಲರ ಶಾಂತಿಯುತ ಅಸ್ತಿತ್ವವಾಗಿತ್ತು. (ಕ್ಯೂಬಾದ ವಿವಾದಾತ್ಮಕ ಕ್ರಾಂತಿಕಾರಿ ನಾಯಕ ಫಿಡೆಲ್ ಕ್ಯಾಸ್ಟ್ರೋನೊಂದಿಗೆ ಮಾರ್ಕೆಸ್‌ಗೆ ದೀರ್ಘಕಾಲದ ಸ್ನೇಹವಿತ್ತು.)

ಮಾರ್ಕೆಸ್ ಹೀಗೆ ಲ್ಯಾಟಿನ್ ಅಮೆರಿಕನ್ ಇತಿಹಾಸದ ಬಗ್ಗೆ ತಮ್ಮ ದೃಷ್ಟಿಕೋನವನ್ನು ವ್ಯಾಖ್ಯಾನಿಸಿದ್ದಾರೆ. ವಿದೇಶೀ ಶಕ್ತಿಗಳಿಂದ, ಮೊದಲು ಸ್ಪೇನ್ ಮತ್ತು ನಂತರ ಅಮೆರಿಕನ್ನರಿಂದ ಪುನರಾವರ್ತಿತ ವಿಜಯಗಳ ಇತಿಹಾಸದಲ್ಲಿ ಪಾಲುಗಾರರಾಗಿದ್ದರೂ ಇಲ್ಲಿನ ಜನರಿಗೆ ಆ ವಿಜಯಗಳು ಮತ್ತೆ ಮತ್ತೆ ಆಸೆ, ನಿರೀಕ್ಷೆಗಳನ್ನು ಮೂಡಿಸಿದರೂ ಕೇವಲ ದುಃಖ, ನಿರಾಸೆ, ಶಕ್ತಿಹೀನತೆ ಮತ್ತು ಅಂತಿಮವಾಗಿ ಅವರ ವಿನಾಶಕ್ಕೆ ಕಾರಣವಾಯಿತೆಂದು ವಿಷಾದಿಸುತ್ತಾರೆ.

ಅವರ ದೃಷ್ಟಿಯಲ್ಲಿ, ಇತರ ಅನೇಕರು ಲ್ಯಾಟಿನ್ ಅಮೆರಿಕದ ಕಥೆಯನ್ನು ಹೇಳಿದ್ದಾರೆ, ಆದರೆ ನಿಜವಾದ ಕಥೆ ಸ್ವತಃ ಅಲ್ಲಿನ ಜನರಿಂದಲೇ ಬರಬೇಕು. 1982ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಸ್ವೀಕರಿಸುವಾಗ ಅವರು ಹೇಳಿದಂತೆ, "ಕವಿಗಳು ಮತ್ತು ಭಿಕ್ಷುಕರು, ಸಂಗೀತಗಾರರು ಮತ್ತು ಪ್ರವಾದಿಗಳು, ಯೋಧರು ಮತ್ತು ಕಿಡಿಗೇಡಿಗಳು. ನಮ್ಮ ಸಾಂಪ್ರದಾಯಿಕ ವಿಧಾನಗಳ ಕೊರತೆಯು ಕಾರಣ ನಮ್ಮ ಜೀವನವನ್ನು ನಂಬಲರ್ಹವಾಗುವಂತೆ ತಿಳಿಸಲು ನಮಗೆ ಸ್ವಲ್ಪ ಕಲ್ಪನೆಯ ಅಗತ್ಯವಿದೆ. ಇದೇ, ನನ್ನ ಸ್ನೇಹಿತರೇ, ನಮ್ಮ ಏಕಾಂತದ ತಿರುಳು."

ಮಾರ್ಕೆಸ್ ಅವರ ಬರವಣಿಗೆಯ ಮೇಲೆ ಪ್ರಮುಖ ಪ್ರಭಾವ ಬೀರಿದ್ದು ಅವರ ಅಜ್ಜಿ ಎಂದು ಹೇಳಿದ್ದಾರೆ. ಅವರ ಅಜ್ಜಿ ಮೂಢನಂಬಿಕೆಯುಳ್ಳ ಮಹಿಳೆಯಾಗಿದ್ದು ಅವರು ಅದ್ಭುತವಾದ ಮತ್ತು ಸಾಮಾನ್ಯವಾದ ಕಥೆಗಳನ್ನು ಸಮಾನ ನಂಬಿಕೆ ಮತ್ತು ವಿಶ್ವಾಸಗಳಿಂದ ಹೇಳುವವಳು. ಅವಳ ಕಥೆ ಹೇಳುವ ಶೈಲಿಯು ಗಾರ್ಸಿಯಾ ಮಾರ್ಕೆಸ್ ಮೇಲೆ ಗಾಢ ಪ್ರಭಾವ ಬೀರಿತು. ಕೆಲ ವರ್ಷಗಳ ನಂತರ ಅವರು ಒಂದು ಸಂದರ್ಭದಲ್ಲಿ "ನಿಮಗೆ ನಂಬಿಸುವ ಸಾಮರ್ಥ್ಯವಿದ್ದಲ್ಲಿ ಏನನ್ನಾದರೂ ಹೇಳಿ ನಿಭಾಯಿಸಬಹುದು. ಇದು ನನ್ನ ಅಜ್ಜಿ ನನಗೆ ಕಲಿಸಿದ ಪಾಠ" ಎಂದು ಹೇಳಿ ಅವರ ಅಜ್ಜಿಯ ಮೇಲೆ ಅವರಿಗಿದ್ದ ಪ್ರೀತಿ – ಗೌರವವನ್ನು ತೋರಿಸುತ್ತಾರೆ. ಒಬ್ಬ ಓದುಗನಿಗೆ, ಆಧುನಿಕ ಲ್ಯಾಟಿನ್ ಅಮೆರಿಕದ ಕಥೆಯನ್ನು ಹೇಳಲು ಈ ಬರಹಗಾರ ತನ್ನ ಜಾನಪದ ಪುರಾಣ ಕಥೆಗಳನ್ನು ಉಪಯೋಗಿಸಿಕೊಳ್ಳುವುದರ ಮೂಲಕ ವಿದೇಶೀ ಪ್ರಭಾವಗಳಿಂದ ನಾಶವಾದ ಸಂಸ್ಕೃತಿಯೊಂದು ತನ್ನದೇ ಆದ ಇತಿಹಾಸವನ್ನು ಹೇಗೆ ಮರು ವ್ಯಾಖ್ಯಾನಿಸಬಹುದು ಎಂದೂ ನಿರೂಪಿಸಿದ್ದಾನೆಂದೆನಿಸುತ್ತದೆ!

ಮುಕ್ತಾಯ

ಕವಯಿತ್ರಿ ಮತ್ತು ಕಾದಂಬರಿಕಾರ್ತಿಯಾದ ಲೂಯೀಸ್ ಎರ್ಡ್ರಿಚ್ ಅಮೆರಿಕದ ಪ್ರಮುಖ ಬರಹಗಾರ್ತಿ. ಹಲವು ಪ್ರಶಸ್ತಿಗಳನ್ನು ಪಡೆದುಕೊಂಡ ಆಕೆ 2020ರಲ್ಲಿ ಪ್ರಕಟಿಸಿದ 'ದಿ ನೈಟ್ ವಾಚ್ಮನ್' ಕಾದಂಬರಿ ಅಮೆರಿಕಾ ಸಾಹಿತ್ಯದ ಒಂದು ಪ್ರಮುಖ ಮೈಲಿಗಲ್ಲು.

ಎರ್ಡ್ರಿಚ್‌ರನ್ನು ಮೂಲನಿವಾಸಿಗಳ ಇತಿಹಾಸ ಮತ್ತು ಕಥೆಗಳ ಬರಹಗಾರರಲ್ಲಿ ಬಹಳ ಪ್ರಮುಖ ಹಾಗೂ ಅಧಿಕೃತರು ಎಂದು ಪರಿಗಣಿಸುತ್ತಾರೆ. ಅದಕ್ಕೆಂದೇ ಈ ಲೇಖನವನ್ನು ಅವರ ಪುಸ್ತಕದ ಮೇಲೆ ಆಧರಿಸಿದ್ದೇನೆ. 'ದಿ ನೈಟ್ ವಾಚ್ಮನ್' ಕೃತಿಗೆ 2021ರ ಪ್ರತಿಷ್ಠಿತ 'ಪುಲಿಟ್ಜರ್' ಪ್ರಶಸ್ತಿ ದೊರಕಿದೆ ಎಂಬುದು ಇಲ್ಲಿ ಉಲ್ಲೇಖಾರ್ಹವಾದ ವಿಷಯ.

1967ರಲ್ಲಿ ಪ್ರಕಟವಾದ ಕೊಲಂಬಿಯಾ ದೇಶದ ಗೇಬ್ರಿಯಲ್ ಗಾರ್ಸಿಯಾರ ಕಾದಂಬರಿ ವಿಶ್ವ ಸಾಹಿತ್ಯದ ಮಹೋನ್ನತ ಕೃತಿಗಳಲ್ಲೊಂದು ಎಂದು ಪರಿಗಣಿಸಲಾಗಿದೆ. ಲ್ಯಾಟಿನ್ ಅಮೆರಿಕಾ ಸಾಹಿತ್ಯದ ಪ್ರಾತಿನಿಧಿಕ ಕೃತಿ ಇದು ಎನ್ನಬಹುದು. ಈ ಎರಡು ವಿಶಿಷ್ಟ ಪುಸ್ತಕಗಳ ಸಮೀಕ್ಷೆಯ ಮೂಲಕ ಈ ಲೇಖನದಲ್ಲಿ, ಅಮೆರಿಕಾದ ಮೂಲನಿವಾಸಿಗಳ ನಂಬಿಕೆಗಳು, ಪುರಾಣಗಳು ಮತ್ತವರ ಜೀವನ-ಚಿತ್ರಣವನ್ನು ಪ್ರಸ್ತುತ ಸಾಹಿತ್ಯದಲ್ಲಿ ನೋಡುವ ಪ್ರಯತ್ನವನ್ನು ಮಾಡಲಾಗಿದೆ.

ಆಧಾರ

1. The Night Watchman, Louise Erdrich, Harper Collins, 2020.
2. One Hundred Years of Solitude, Gabriel Garcia Marquez. English Translation by Gregory Rabassa, Harper Perennial Classics, 1970 (original in 1967).

❑

7

ಕೆನಡಾದ ಮೂಲ ನಿವಾಸಿಗಳು

ಸಿಮ್ ಮೂರ್ತಿ, ಟೊರಾಂಟೊ, ಕೆನಡ

*

ಪೀಠಿಕೆ

ಇತ್ತೀಚಿನ ಜನಗಣತಿಯ ಪ್ರಕಾರ ಕೆನಡಾ ದೇಶದ ಜನಸಂಖ್ಯೆಯು 37 ಮಿಲಿಯನ್ ಅನ್ನು ಮುಟ್ಟಿದೆ. ಅದರಲ್ಲಿ ಇಲ್ಲಿನ ಮೂಲ ನಿವಾಸಿಗಳ ಜನಸಂಖ್ಯೆ 1.6 ಮಿಲಿಯನ್‌ನಷ್ಟು ಎಂದು ಅಂದಾಜಿಸಿದ್ದಾರೆ. ಮೂಲ ನಿವಾಸಿ ಜನರನ್ನು 'ಇಂಡಿಯನ್ಸ್,' 'ಮೇಟೀಸ್' ಮತ್ತು 'ಇನುವಿಟ್' ಎಂದು ಮೂರು ಪಂಗಡಗಳಾಗಿ ಗುರುತಿಸುತ್ತಾರೆ.

ಇಂಡಿಯನ್ಸ್

ಮೊದಲನೆಯ ಪಂಗಡವನ್ನು 'ಕೆನೇಡಿಯನ್ ಇಂಡಿಯನ್ಸ್' ಎಂದೋ, ಅಥವಾ 'ಕೆನೇಡಿಯನ್ ಅಬಾರಿಜಿನಲ್ಸ್' ಎಂದೋ ಕರೆಯಬಹುದು. 17, 18ನೆಯ ಶತಮಾನಗಳಲ್ಲಿ ಸಮುದ್ರಯಾನಗಳಿಂದ ಹೊಸ ಮಾರ್ಗಗಳನ್ನು ಕಂಡುಹಿಡಿದ ಯೂರೋಪಿನ ಅನ್ವೇಷಣಕಾರರು ಮತ್ತು ವಲಸೆಗಾರರೂ ಇಲ್ಲಿನ ಮೂಲ ನಿವಾಸಿಗಳೊಡನೆ ತುಪ್ಪಳ ವ್ಯಾಪಾರ ಮಾಡುತ್ತಿದ್ದರು. ಆಗ ಅವರೊಡನೆ ಮಾಡಿಕೊಂಡ ಒಪ್ಪಂದಗಳು ಇಂದಿಗೂ ಕೆನಡಾ ಸರ್ಕಾರದವರು ಜಾರಿಯಲ್ಲಿ ಇಟ್ಟಿದ್ದಾರೆ. ಅಂತಹ ಕಾನೂನುಗಳಲ್ಲಿ ಬಳಸಿರುವ 'ಇಂಡಿಯನ್' ಪದವು ಈಗಲೂ ಜಾರಿಯಲ್ಲಿದೆ. ಇತ್ತೀಚೆಗೆ ಅವರನ್ನು 'ಪ್ರಥಮ ರಾಷ್ಟ್ರೀಯರು' ಅಥವಾ 'ಫಸ್ಟ್ ನೇಷನ್ಸ್' ಎಂದು ಸಂಬೋಧಿಸುತ್ತಾರೆ. ಸುಮಾರು 980,000 ಮಂದಿ ಇರುವ ಇವರು ಕೆನಡಾ ದೇಶದ ಎಲ್ಲಾ ಪ್ರಾಂತ್ಯಗಳಲ್ಲೂ ನೆಲಸಿರುತ್ತಾರೆ. ಕೆನಡಾ ಸರ್ಕಾರದವರು ಇವರನ್ನು 634 ಬುಡಕಟ್ಟುಗಳಾಗಿ ಒಪ್ಪಂದಗಳ ಮೂಲಕ ಗುರುತಿಸಿರುತ್ತಾರೆ. ಆಂಟೋರಿಯೊ ಪ್ರದೇಶದ ಮಹಾ ಸರೋವರಗಳ ತೀರದ ಇಂಡಿಯನ್ ಜನರನ್ನು ಅಲ್‌ಗಾವ್‌ಕ್ವಿನ್, ಇರೊಕ್ವಾ ಎಂದೂ, ಅಟ್ಲಾಂಟಿಕ್ ಸಮುದ್ರ ತೀರದಲ್ಲಿರುವ ಇಂಡಿಯನ್‌ರನ್ನು ಮಿಕ್‌ಮ್ಯಾಕ್, ಅಲ್‌ಗಾವ್‌ಕ್ವಿನ್ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಪಶ್ಚಿಮದಲ್ಲಿ ಪೆಸಿಫಿಕ್ ಸಮುದ್ರದ ವ್ಯಾಂಕೂವರ್ ದ್ವೀಪ ಮತ್ತು ಬ್ರಿಟಿಷ್ ಕೊಲಂಬಿಯ ಸಮುದ್ರ ತೀರ ಪ್ರದೇಶದಲ್ಲಿರುವ ಇಂಡಿಯನ್ ಜನರನ್ನು ಹೈದ, ಸ್ಲೇವಿ ಎಂದು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. 'ಹೈದ' ಬುಡಕಟ್ಟಿನವರು ಮರಗಳ ಮೇಲೆ ತಮ್ಮ ಕಥೆ, ಅವರ ಚಾರಿತ್ರಿಕ ಘಟನೆಗಳು, ಪ್ರಾಣಿಗಳು, ಮುಂತಾದವುಗಳನ್ನು ಕೆತ್ತುತ್ತಾರೆ. ಈ ಕೆತ್ತನೆಗಳನ್ನು 'ಟೋಟೆಮ್ ಪೋಲ್'ಗಳೆಂದು ಕರೆಯುತ್ತಾರೆ. ಕೆಂಪು ದೇವದಾರು ಮರಗಳ ದಿಮ್ಮಿಗಳನ್ನು ಉಪಯೋಗಿಸಿ ಕಂಭಗಳನ್ನು, ದೊಡ್ಡ ಸ್ತಂಭಗಳನ್ನು ಕೆತ್ತಿ ಅದರ ಮೇಲೆ ಪೌರಾಣಿಕ ಘಟನೆಗಳನ್ನು, ಬುಡಕಟ್ಟಿನ ಮುಖ್ಯಸ್ಥರನ್ನು ಪ್ರತಿನಿಧಿಸುವ ಮುಖವಾಡಗಳನ್ನು ಸುಂದರವಾಗಿ ಕೆತ್ತುತ್ತಾರೆ. 'ಟೋಟೆಮ್ ಪೋಲ್' ಎಂಬುದನ್ನು ಕನ್ನಡದಲ್ಲಿ 'ಸಂದೇಶ ಸ್ತಂಭ' ಎಂದು ಕರೆಯಬಹುದು. ಇದಕ್ಕೆ ಸಂಬಂಧಪಟ್ಟ ಒಂದು ಕಥೆ ಹೀಗಿದೆ.

ಮೊದಲನೆಯ 'ಸಂದೇಶ ಸ್ತಂಭ'

('ದಿ ಫಸ್ಟ್ ಟೋಟೆಮ್ ಪೋಲ್' ಎಂಬ ಹೈದ ಜನಪದ ಕಥೆ: ಇದನ್ನು ಬರೆದವರು ರೋಸ್ ಬೆಲ್ ಎಂಬಾಕೆ.)

ಒಂದಾನೊಂದು ಕಾಲದಲ್ಲಿ ಯಾನ್ ಎಂಬ ಹಳ್ಳಿಯಲ್ಲಿ ಸ್ಟಾತ್ ಎಂಬ ಹುಡುಗನು ತನ್ನ ತಂದೆ ಆನೊವಾಟ್ ಮತ್ತು ತಾಯಿ ಕೂನ್‌ಜಾಟ್ ಅವರೊಡನೆ ಆಟವಾಡಿಕೊಂಡು ಬೆಳೆಯುತ್ತಿದ್ದನು. ಕೂನ್‌ಜಾಟ್ ಮತ್ತು ಸ್ಟಾತ್ ಹದ್ದಿನ (ಈಗಲ್) ಬುಡಕಟ್ಟಿನವರು. ತಂದೆ ಆನೊವಾಟ್ ಡೊಂಬಕಾಗೆ (ರೇವನ್) ಬುಡಕಟ್ಟಿನವನು.

ಒಂದು ದಿನ ಆನೊವಾಟ್ ತನ್ನ ದೋಣಿಯಲ್ಲಿ ಎಲ್ಲಾದರೂ ತೂತುಗಳಿವೆಯೇನೋ ಎಂದು ಪರೀಕ್ಷಿಸುತ್ತಿದ್ದನು. ಸ್ಟಾತ್ ತಂದೆಗೆ ಸಹಾಯ ಮಾಡುತ್ತಿದ್ದನು. ಎಲ್ಲಾ ಸರಿಯಾಗಿದೆ ಎಂದು ಖಚಿತ ಮಾಡಿಕೊಂಡು ಆನೊವಾಟ್ ದೋಣಿಯನ್ನು ನೀರಿಗೆ ತೆಗೆದುಕೊಂಡು ಹೊರಟಾಗ ಸ್ಟಾತ್ "ನಾನೂ ನಿನ್ನೊಡನೆ ಬರುತ್ತೇನೆ" ಎಂದು ಕೇಳಿದನು. ತಂದೆಗೆ ಸಂತೋಷವಾಯಿತು. "ಬಾ" ಎಂದು ಕರೆದುಕೊಂಡು ಹೋದನು. ನೀರಿನಲ್ಲಿ ಅಷ್ಟು ದೂರ ಹೋದ ನಂತರ ದೋಣಿಯಲ್ಲಿ ಇನ್ನೇನೂ ತೂತುಗಳಿಲ್ಲ ಎಂದು ಖಚಿತವಾದ ಮೇಲೆ ಸೂರ್ಯ ಮುಳುಗುವ ಹೊತ್ತೂ ಆಯಿತು ಎಂದು ಆನೊವಾಟ್ ವಾಪಸ್ಸು ಹೊರಟಾಗ, ಸ್ಟಾತ್ "ಅಪ್ಪಾ, ಇಲ್ಲಿ ನೋಡು" ಎಂದು ನೀರಿನಲ್ಲಿ ಏನನ್ನೋ ತೋರಿಸಿದನು. ತಂದೆ, ಮಗ ಇಬ್ಬರಿಗೂ ನೀರಿನಲ್ಲಿ ತಮ್ಮ ಊರನ್ನೇ ನೋಡಿದ ಹಾಗೆ ಅನ್ನಿಸಿತು. "ಈ ಊರು ಬಹಳ ಚೆನ್ನಾಗಿದೆ. ಇದರಲ್ಲಿ ಅನೇಕ ಉದ್ದವಾದ ಸ್ತಂಭಗಳಿವೆ. ಸ್ತಂಭಗಳ ಮೇಲೆ ಕೆತ್ತಿರುವ ಕರಡಿ, ತಿಮಿಂಗಲ, ನಕ್ಷತ್ರ ಮೀನು, ಏಡಿಕಾಯಿ, ಲೋಳೆಮೀನು, ಮುಂತಾದ ಪ್ರಾಣಿಗಳ ಚಿತ್ರಗಳು ಬಹು ಸುಂದರವಾಗಿವೆ. ನಮ್ಮ ಊರಲ್ಲೂ ಇಂತಹ ಸ್ತಂಭಗಳಿದ್ದರೆ ಎಲ್ಲರೂ ನೋಡಬಹುದು" ಎಂದು ಆನೊವಾಟ್ ಹೇಳಿದನು. ಈಗ ಇದನ್ನು ಯಾರಿಗೂ ಹೇಳುವುದು ಬೇಡ. ಹೇಳಿದರೆ ಯಾರೂ ನಂಬುವುದಿಲ್ಲ ಎಂದು ಮನೆ ಸೇರಿದರು. ಕೆಲವು ದಿನದ ತರುವಾಯ ತಮ್ಮ ಊರಿಗೆ ಹತ್ತಿರವಿದ್ದ ಕಾಡು ಪ್ರದೇಶಕ್ಕೆ ಹೋಗಿ ಅಲ್ಲಿ

ಉದ್ದವಾದ ಸೀಡರ್ ಮರವನ್ನು ಹುಡುಕಿದರು. ಅದರ ಮೇಲೆ ಕರಡಿ, ತಿಮಿಂಗಲ, ಹದ್ದು, ಡೊಂಬಕಾಗೆ, ನಕ್ಷತ್ರಮೀನು, ಲೋಳೆ ಮೀನು, ಏಡಿಕಾಯಿ, ಮುಂತಾದ ಚಿತ್ರಗಳನ್ನು ಕೆತ್ತಿದರು. ಎಲ್ಲವೂ ಮುಗಿದ ಮೇಲೆ ಆನೊವಾಟ್ ತನ್ನ ಸೋದರ, ಸೋದರಿಯರು, ಅಜ್ಜಿ, ತಾತ, ಎಲ್ಲಾ ಸಂಬಂಧಿಕರು ಹೀಗೆ ಎಲ್ಲರನ್ನೂ ಕರೆದು ತೋರಿಸಿದನು. ಎಲ್ಲರೂ ಚೆನ್ನಾಗಿದೆ ಎಂದು ಪ್ರಶಂಸಿದರು. ಇನ್ನು ಯಾನ್ ಹಳ್ಳಿಯ ಜನರನ್ನು ಕರೆದು ಅವರ ಸಹಾಯದಿಂದ ಆ ಸ್ತಂಭವನ್ನು ತಮ್ಮ ಊರಿಗೆ ಸಾಗಿಸಿ, ನದಿಯ ತೀರದಲ್ಲಿ ಎಲ್ಲರಿಗೂ ಕಾಣುವಂತೆ ಸ್ಥಾಪಿಸಿದರು. ಎಲ್ಲರೂ ಹಾಡು, ಕುಣಿತ, ಕುಡಿತಗಳಿಂದ ದೀರ್ಘ ಕಾಲ ಸಂತೋಷದ ಸಮಾರಂಭವನ್ನು ಆಚರಿಸಿ ಸೂರ್ಯೋದಯದ ವೇಳೆಗೆ ತಮ್ಮ ತಮ್ಮ ಮನೆ ಸೇರಿದರು.

ಈ ಪಾರಂಪರಿಕ ಕಲೆಯನ್ನು ಇಂದಿಗೂ ಕೆಲವು ಕಲಾಕಾರರು ಬೆಳೆಸಿಕೊಂಡು ಬಂದಿದ್ದಾರೆ. ಬಿಲ್ ರೀಡ್ ಎಂಬ ಹೈದ ಕಲಾವಿದ ಅಂತಾರಾಷ್ಟ್ರೀಯ ಖ್ಯಾತಿ ಹೊಂದಿರುವ ಶಿಲ್ಪಿ, ಕಲಾವಿದ, ಮತ್ತು ಬರಹಗಾರ. ಅವನ ಕೃತಿಗಳನ್ನು ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಪ್ರದರ್ಶನ ಮಾಡಿದ್ದಾರೆ. ನೋರ್ವಾಲ್ ಮರಿಸ್ಸೋ ಎಂಬ ಇಂಡಿಯನ್ ಪ್ರಖ್ಯಾತ ಚಿತ್ರ ಕಲಾವಿದನ ವರ್ಣರಂಜಿತ ಚಿತ್ರಗಳನ್ನು ಪ್ರಖ್ಯಾತ ಚಿತ್ರಕಾರ ಪಿಕಾಸೋನ ಚಿತ್ರಗಳಿಗೆ ಹೋಲಿಸುತ್ತಾರೆ.

ಮೊದಲ ಜೋಳದ ಬೆಳೆ

(ಇಂಡಿಯನ್ ಜನರ ಮತ್ತೊಂದು ಕಥೆ)

ಅನೇಕ ವರ್ಷಗಳ ಹಿಂದೆ ಫಲಭರಿತವಾದ ಅಲ್‌ಗಾವ್ ಕ್ವಿನ್ ದೇಶದಲ್ಲಿ ವುನ್ಸ್ ಎಂಬುವನು ತನ್ನ ಹೆಂಡತಿ ಮತ್ತು ಮಕ್ಕಳೊಡನೆ ವಾಸವಾಗಿದ್ದನು. ಬಡವನಾದರೂ ಅವನು ದಯಾಳು. ಯಾವಾಗಲೂ ಮಹಾಚೈತನ್ಯಕ್ಕೆ (ಸೃಷ್ಟಿಕರ್ತ) ಮಣಿದು ತೃಪ್ತಿಯಿಂದ ಇರುತ್ತಿದ್ದನು. ಅವನ ಹಿರಿಯ ಮಗ ವುಂಜ್ ತಂದೆಯಂತೆಯೇ, ಮೃದು ಸ್ವಭಾವದಿಂದ ಎಲ್ಲರನ್ನೂ ಸೇವಿಸಬೇಕು ಎಂಬ ಮನೋವೃತ್ತಿಯುಳ್ಳವನು. ಹಲವು ವರ್ಷಗಳ ನಂತರ ವುಂಜ್ ಪ್ರಾಯಕ್ಕೆ ಬಂದಾಗ ಎಲ್ಲಾ ಯುವಕರಂತೆಯೇ ಉಪವಾಸ ವ್ರತವನ್ನು ಆಚರಿಸಲು ಪ್ರಾರಂಭಿಸಿದನು. ಉಪವಾಸ ಮಾಡುವಾಗ ಯಾವುದೇ ಅಡ್ಡಿಗಳಿರದಂತೆ ವುನ್ಸ್ ಮಗನಿಗೋಸ್ಕರ ಒಂದು ಪ್ರತ್ಯೇಕ ಕೊಠಡಿಯನ್ನು ನಿರ್ಮಿಸಿದನು. ವುಂಜ್ ಮೊದಲನೆಯ ದಿನ ಉಪವಾಸ ಮಾಡಿ, ನಂತರ ಹೊರಗೆ ಹೋಗಿ ಏನೇನು ಬೆಳೆಯುತ್ತಿದೆ ಎಂದು ನೋಡಿದನು. ಅನೇಕ ಗಿಡ ಮರಗಳನ್ನು ಕಂಡು, ಇಂತಹ ಭೂಮಿಯಲ್ಲಿ ಜನರಿಗೆ ಉಪಯೋಗವಾಗುವಂತಹ ಪೈರು ಏನಾದರೂ ಬೆಳೆಯಬಹುದೇನೋ ಎಂದು ಆಲೋಚಿಸುತ್ತಿದ್ದನು. ಮಹಾಚೈತನ್ಯವೇ ಇದಕ್ಕೆಲ್ಲಾ ಕಾರಣ ಎಂದು ತನ್ನ ವ್ರತವನ್ನು ಮೂರು ದಿನಗಳು ಆಚರಿಸಿದ ನಂತರ ಒಬ್ಬ ಆಗಂತುಕನು ಬಂದು "ನನ್ನೊಡನೆ ನೀನು ಹೋರಾಡು. ಇದು ಮಹಾಚೈತನ್ಯದ ಸಂದೇಶ" ಎಂದನು. ಅವನೊಡನೆ ಹೋರಾಡುವುದು

ಉಪವಾಸದಿಂದ ಕೃಶನಾಗಿದ್ದ ವುಂಜ಼ನಿಗೆ ಸುಲಭವಾಗಿರಲಿಲ್ಲ. ಸ್ವಲ್ಪ ಹೋರಾಡಿದ ಮೇಲೆ ಆಗಂತುಕನೇ "ಈ ದಿನಕ್ಕೆ ಇಲ್ಲಿಗೆ ನಿಲ್ಲಿಸೋಣ. ನಾಳೆ ಪುನಃ ಬರುತ್ತೇನೆ" ಎಂದು ಹೊರಟುಹೋದನು.

ಮರುದಿನ ಅದೇ ಸಮಯಕ್ಕೆ ಸರಿಯಾಗಿ ಆಗಂತುಕನು ಬಂದು ಹೋರಾಡಲು ಕರೆದನು. ಉಪವಾಸದಿಂದ ಕೃಶನಾಗಿದ್ದ ವುಂಜ಼್ ತುಂಬಾ ಸುಸ್ತಾಗಿದ್ದರೂ ಮಹಾ ಚೈತನ್ಯದ ಆದೇಶ ಎಂದು ಉತ್ಸಾಹದಿಂದ, ಧೈರ್ಯದಿಂದ ಹೋರಾಡಿದನು. ಸ್ವಲ್ಪ ಹೊತ್ತು ಯುದ್ಧ ಮಾಡಿದ ಮೇಲೆ ಆಗಂತುಕ ಮತ್ತೆ "ಇವತ್ತಿಗೆ ಹೋರಾಡಿದ್ದು ಸಾಕು, ನಾಳೆ ನಮ್ಮ ಯುದ್ಧದ ಕಡೆಯ ದಿನ, ಮತ್ತು ನಿನ್ನ ಉಪವಾಸದ ಏಳನೆಯ ದಿನ, ನಾಳೆ ಮತ್ತೆ ಬರುತ್ತೇನೆ" ಎಂದು ಹೇಳಿ ಹೊರಟುಹೋದನು. ಹೀಗೆ ಏಳು ದಿನಗಳ ಉಪವಾಸ ಮುಗಿದ ಮೇಲೆ ವುನ್ಫ್ ಮಗನಿಗೋಸ್ಕರ ಸ್ವಲ್ಪ ತಿಂಡಿ ತಂದು "ವುಂಜ಼್, ನೀನು ಉಪವಾಸದಿಂದ ಕೃಶನಾಗಿದ್ದೀಯೆ. ಇದನ್ನು ತಿನ್ನು" ಎಂದು ಆ ಆಹಾರವನ್ನು ಕೊಟ್ಟನು. ಆಗ ವುಂಜ಼್, "ಅಪ್ಪ, ನಾನು ಆಗಂತುಕನ ನಿರೀಕ್ಷೆಯಲ್ಲಿದ್ದೇನೆ. ಅದುವರೆಗೂ ನಾನು ಏನೂ ಸೇವಿಸುವುದಿಲ್ಲ" ಎಂದನು. ಆಗಂತುಕನು ಬಂದ ಮೇಲೆ ಅವನೊಡನೆ ಹೋರಾಡಿ, ಅವನನ್ನು ಕೊಂದು ಅವನ ದೇಹವನ್ನು ಆ ಫಲವತ್ತಾದ ಭೂಮಿಯಲ್ಲೇ ಹೂತನು. ಆ ನಂತರವೇ ತಂದೆ ಕೊಟ್ಟ ತಿಂಡಿ ತೀರ್ಥಗಳನ್ನು ಸೇವಿಸಿದನು. ಹಲವು ವಾರಗಳ ನಂತರ ಬಿಸಿಲು ಕಾಲದ ಅಂತ್ಯದಲ್ಲಿ, ವುಂಜ಼್ ತನ್ನ ತಂದೆಯೊಡನೆ ಆಗಂತುಕನ ದೇಹವನ್ನು ಹೂತಿದ್ದ ಜಾಗಕ್ಕೆ ಹೋದನು. ಅಲ್ಲಿ ಹುಲುಸಾದ ಜೋಳದ ತೆನೆಗಳನ್ನು ನೋಡಿದರು. ಅಂದಿನಿಂದ ಜೋಳ ಬೆಳೆಯುವುದನ್ನು ಅಲ್‌ಗಾವ್ ಕ್ವಿನ್ ಬುಡಕಟ್ಟಿನ ಜನರೆಲ್ಲರೂ ಕಲಿತರು.

ಇಂಡಿಯನ್ ಜನರ ಪ್ರಪಂಚದ ಸೃಷ್ಟಿಯ ಕಥೆ

ಇದು ಅನಿಶಿನಾಬೆ ಎಂಬ ಬುಡಕಟ್ಟಿನವರ ಕಥೆ. ಪ್ರಾರಂಭದಲ್ಲಿ ಪ್ರಾಣಿಗಳೇ ಪ್ರಪಂಚವನ್ನು ಆಳುತ್ತಿದ್ದವು. ಒಬ್ಬರಿಗೊಬ್ಬರು ಅನ್ಯೋನ್ಯವಾಗಿಯೇ ಇರುತ್ತಿದ್ದರು. ಯಾವುದೋ ಸಂದರ್ಭದಲ್ಲಿ ಮನಸ್ತಾಪ ಬಂದು ಒಬ್ಬರನ್ನೊಬ್ಬರು ಸಹಿಸಲಾರದೆ ಹೊಡೆದಾಡುವುದಕ್ಕೆ ಶುರುಮಾಡಿದರು. ಸೃಷ್ಟಿಕರ್ತ, 'ಕೀಚಿ ಮನೀಟೊ' ಇವರಿಗೆ ಬುದ್ಧಿ ಕಲಿಸಬೇಕು ಎಂದು ಮನಸ್ಸು ಮಾಡಿದ. ತನ್ನ ಮಗನಂತೆ ಇದ್ದ ವಿಸಕಜೆಕ್‌ನನ್ನು ಕರೆದು ನಾನು ಈಗ ನೀರಿನ ಪ್ರವಾಹ ಬರುವ ಹಾಗೆ ಮಳೆ ಸುರಿಸುತ್ತೇನೆ. ಎಲ್ಲಾ ಪ್ರಾಣಿಗಳೂ ಅದರಲ್ಲಿ ಕೊಚ್ಚಿ ಹೋಗುತ್ತವೆ. ನೀನು ಒಂದು ದೋಣಿಯಲ್ಲಿ ಹಲವಾರು ಜೋಡಿ ಪ್ರಾಣಿಗಳನ್ನು ರಕ್ಷಿಸಿ ಸಮುದ್ರಕ್ಕೆ ಕರೆದುಕೊಂಡು ಹೋಗು' ಎಂದನು. ಇತ್ತ ಜಗತ್ತೆಲ್ಲವೂ ಆ ಮಳೆಯ ಪ್ರವಾಹದಲ್ಲಿ ಕೊಚ್ಚಿಹೋಗಿ ನಿರ್ನಾಮವಾಯಿತು. ವಿಸಕಜೆಕ್ ರಕ್ಷಿಸಿದ ಜೋಡಿ ಪ್ರಾಣಿಗಳು ಮಾತ್ರ ಉಳಿದವು. ಹಡಗಿನಲ್ಲಿ ಸಮುದ್ರದ ಮೇಲೆ ತೇಲಿ ಬಂದ ಪ್ರಾಣಿಗಳನ್ನು ಕುರಿತು "ಇನ್ನು ಮಳೆ ನಿಂತಿದೆ, ನಾವು ನೆಲದ ಮೇಲೆ ಹೋಗುವ ಮುಂಚೆ ಪ್ರತಿಯೊಂದು

ಪ್ರಾಣಿಯೂ ಪಕ್ಷಿಯೂ ಸಮುದ್ರದ ತಳಕ್ಕೆ ಹೋಗಿ ಒಂದು ಹಿಡಿ ಮಣ್ಣನ್ನು ತರಬೇಕು" ಎಂದು ಹೇಳಿದ. ಅದರಂತೆ ಬಾತು, ಕೊಕ್ಕರೆ, ಆಟರ್, ಬೀವರ್ ಮುಂತಾದ ಎಲ್ಲಾ ಪ್ರಾಣಿ/ಪಕ್ಷಿಗಳು ಸಮುದ್ರದಲ್ಲಿ ಮುಳುಗಿ ಒಂದೊಂದು ಹಿಡಿ ಮಣ್ಣನ್ನು ತಂದವು. ಕೊನೆಯದಾಗಿ ಮಸ್ಕರಾಟ್ ಪ್ರಾಣಿಯು ಮಣ್ಣನ್ನು ತಂದು ಆಮೆಯ ಬೆನ್ನ ಮೇಲೆ ಅದನ್ನು ಹೇರಿಸಿ ಭೂಮಿಗೆ ರವಾನಿಸಿತು. ಅಂದಿನಿಂದ ಉತ್ತರ ಅಮೆರಿಕ ಖಂಡವು ಸೃಷ್ಟಿಯಾಯಿತು.

ಇನ್ನೂ ಕೆಲವು ವಿವರಗಳು

ಹೀಗೆ ಕೆನಡಾ ದೇಶದ 10 ಪ್ರಾಂತ್ಯಗಳಲ್ಲೂ ಇಂಡಿಯನ್ ಜನರು ನೆಲಸಿದ್ದಾರೆ. ಉತ್ತರ ಅಕ್ಷಾಂಶ 60 ಡಿಗ್ರಿಯಿಂದ ಉತ್ತರಕ್ಕೆ ಆರ್ಕಟಿಕ್ ಸಮುದ್ರಕ್ಕೆ ಹರಿಯುವ ಮೆಕಿನ್‌ಜೀ ನದಿಯ ತೀರದಲ್ಲಿ ವಾಸಿಸುವ ಇಂಡಿಯನ್ ಜನರನ್ನು ಡೆನಿ ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಇಂಡಿಯನ್ನರು ಬಹಳ ಮಂದಿ ಇರುವುದರಿಂದಲೂ, ಬ್ರಿಟಿಷ್ ರಾಜರ ಹೆಸರಿನಲ್ಲಿ ಮಾಡಿಕೊಂಡ ಒಪ್ಪಂದಗಳಿಂದಲೂ ಇವರಿಗೆ ಭೂಮಿ–ಕಾಣಿ, ಮತ್ತು ಇತರೇ ಅನೇಕ ಸೌಕರ್ಯಗಳೂ ಸಿಗುತ್ತವೆ. ಈ ಇಂಡಿಯನ್ ಪಂಗಡಗಳು ಒಂದೊಂದೂ ಬೇರೆ ಬೇರೆ ರೀತಿಯಾಗಿವೆ. ಒಂದೊಂದು ಬುಡಕಟ್ಟಿನ ಭಾಷೆಯೂ ಒಂದೊಂದು. ಅವರ ಸಂಸ್ಕೃತಿಯೂ ಬೇರೆ ಬೇರೆ. ಹೀಗೆ ತಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಪ್ರತಿ ಬ್ಯಾಂಡ್, ಎಂದರೆ ಬುಡಕಟ್ಟಿನ ಮುಖ್ಯಸ್ಥರನ್ನು ಚೀಫ್ ಎಂದು ಕರೆಯುತ್ತಾರೆ. ಹೆಂಗಸರೂ ಚೀಫ್ ಆಗಬಹುದು.

ಕೆನಡಾ ದೇಶದಲ್ಲಿ ಖನಿಜಸಂಪತ್ತು ಯಾವ ಪ್ರದೇಶದಲ್ಲಿ ಸಿಕ್ಕುತ್ತೋ ಅಲ್ಲಿನ ಬುಡಕಟ್ಟಿನವರ ಜೊತೆ ಸರ್ಕಾರದವರೋ ಅಥವಾ ಖಾಸಗಿ ಸಂಸ್ಥೆಯವರೋ ಸಮಾಲೋಚನೆ ಮಾಡಿ ಅವರ ಸಹಕಾರದಿಂದ ಆ ಖನಿಜದ ಉತ್ಪತ್ತಿ ಮಾಡುವುದು ಸಾಧ್ಯವಾಗುತ್ತದೆ. ಕೆಲವು ಬುಡಕಟ್ಟಿನವರು ಕೆನಡಾ ಸರ್ಕಾರದ ಅನುಮತಿ ಪಡೆದು, ಕೆಸಿನೋ (ಜೂಜು ಕೇಂದ್ರ) ಮುಂತಾದ ಲಾಭದಾಯಕ ವ್ಯಾಪಾರ ಸಂಸ್ಥೆಗಳನ್ನು ನಡೆಸುತ್ತಾರೆ. ಇಂಡಿಯನ್ ಜನರು ಇರುವ ಪ್ರದೇಶವನ್ನು 'ರಿಸರ್ವ್' ಎಂದು ಕರೆಯುತ್ತಾರೆ. ಆಯಾ ಬ್ಯಾಂಡಿನವರು ಆಯಾ ರಿಸರ್ವ್ ಪ್ರದೇಶದಲ್ಲಿ ತಮ್ಮ ಆಡಳಿತವನ್ನು ನಡೆಸಬಹುದು. ಈ ವ್ಯವಸ್ಥೆ ನೂರಾರು ವರ್ಷಗಳಿಂದಲೂ ನಡೆದು ಬಂದಿದೆ. ಆ ರಿಸರ್ವ್ ಪ್ರದೇಶಗಳಲ್ಲಿ ನೀರಿನ ಸರಬರಾಜು, ರಸ್ತೆ ನಿರ್ಮಾಣ, ವಿದ್ಯುಚ್ಛಕ್ತಿ ಸರಬರಾಜು, ಚರಂಡಿ ವ್ಯವಸ್ಥೆ, ಇವೆಲ್ಲವೂ ಆಯಾ ಬ್ಯಾಂಡಿನವರಿಗೇ ಸೇರಿದ್ದು. ಇದು ಅನೇಕ ವೇಳೆ ಅಷ್ಟು ಸಮರ್ಪಕವಾಗಿರಲಾರದು. ಕೆನಡಾ ದೇಶದ ಮೂಲಭೂತ ವ್ಯವಸ್ಥೆ (ಇನ್ಫ್ರಾಸ್ಟ್ರಕ್ಚರ್) ಜಗತ್ತಿನಲ್ಲಿ ಉತ್ತಮ ಶ್ರೇಣಿಯಲ್ಲಿದೆ. ರಿಸರ್ವ್ ಪ್ರದೇಶದಲ್ಲಿರುವ ಸೌಕರ್ಯಗಳು ಯಾವ ರೀತಿಯಲ್ಲೂ ಕೆನಡಾ ದೇಶದ ಸೌಕರ್ಯಗಳ ಸಮಕ್ಕೆ ಬರಲಾರವು. ಆ ಕಾರಣದಿಂದ ಇಂಡಿಯನ್ ರಿಸರ್ವ್ ದೇಶವನ್ನು 'ಥರ್ಡ್ ವರ್ಲ್ಡ್' ದೇಶ ಎನ್ನುತ್ತಾರೆ.

ಇಂಡಿಯನ್ ಜನರ ಶಾಲೆ ಮತ್ತು ವಿದ್ಯಾಭ್ಯಾಸದ ಬಗ್ಗೆ ಎರಡು ಮಾತು ಹೇಳಬೇಕು. ಸುಮಾರು 150 ವರ್ಷಗಳ ಹಿಂದೆ ಕೆನಡ ದೇಶದ ನಾಯಕರು ಈ ಇಂಡಿಯನ್ ಜನರ ಸಂಸ್ಕೃತಿಯನ್ನು ಅವಗಣಿಸಿ ಮಕ್ಕಳನ್ನು ತಾಯಿ, ತಂದೆಗಳಿಂದ ದೂರ ಮಾಡಿ ರೆಸಿಡೆನ್ಷಿಯಲ್ ಶಾಲೆಗಳನ್ನು ಸ್ಥಾಪಿಸಿದರು. ಶಾಲೆಗಳನ್ನು ನಡೆಸಲು ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಚರ್ಚುಗಳ ಆಡಳಿತಗಳಿಗೆ ವಹಿಸಿಕೊಟ್ಟರು. ಸುಮಾರು ವರ್ಷಗಳ ನಂತರ ಬಯಲಿಗೆ ಬಂದ ವಿಷಯಗಳಿಂದ ಈ ಪದ್ಧತಿ ಅಪಮಾನಕರವಾದ ವಿಷಯವಾಗಿ ಪರಿಣಮಿಸಿದೆ. ಶಾಲೆಯ ಅಧಿಕಾರಿಗಳು ಈ ಬಾಲಕ, ಬಾಲಿಕೆಯರನ್ನು ಲೈಂಗಿಕವಾಗಿ ದುರುಪಯೋಗ ಮಾಡಿಕೊಂಡು, ಹೀನಾಯವಾಗಿ ವರ್ತಿಸಿದ್ದಾರೆ. ಕೆನಡಾ ದೇಶದ ಹಿಂದಿನ ಪ್ರಧಾನ ಮಂತ್ರಿ ಶ್ರೀ ಸ್ಟೀಫನ್ ಹಾರ್ಪರ್ ಅವರು ಪಾರ್ಲಿಮೆಂಟಿನಲ್ಲಿ ವಿಷಾದ ಸೂಚಿಸಿ ಕ್ಷಮಾಪಣೆ ಯಾಚಿಸಿದ್ದಾರೆ. ಆಗಿನ ವಿದ್ಯಾರ್ಥಿಗಳು ಇಂದು ವಯಸ್ಕರೂ, ವೃದ್ಧರೂ ಆಗಿದ್ದಾರೆ. ಅವರಿಗೆ ಸರ್ಕಾರದವರು ಪ್ರಾಯಶ್ಚಿತ್ತ ಹಣ ಕೊಡುತ್ತಿದ್ದಾರೆ. ಈಗ ಆ ರೆಸಿಡೆನ್ಷಿಯಲ್ ಶಾಲಾ ವ್ಯವಸ್ಥೆಯನ್ನು ರದ್ದುಮಾಡಿದ್ದಾರೆ.

ಮೇಟೀಸ್ ಪಂಗಡ

ಎರಡನೆಯ ಪಂಗಡವನ್ನು ಮೇಟೀಸ್ ಎಂದು ಕರೆಯುತ್ತಾರೆ. ಇವರು ಕೆನಡಾ ದೇಶಕ್ಕೆ ಕಳೆದ ಶತಮಾನಗಳ ಹಿಂದೆ ವಲಸೆ ಮತ್ತು ಅನ್ವೇಷಣೆಗೆ ಬಂದ ಐರೋಪ್ಯ ನಿವಾಸಿಗಳು. ಅದರಲ್ಲೂ ಹೆಚ್ಚು ಫ್ರೆಂಚ್ ಜನರ ಮತ್ತು ಸ್ಥಳೀಯ ಮೂಲನಿವಾಸಿಗಳ ಸಂಬಂಧದಿಂದ ಹುಟ್ಟಿದವರು. ಮೇಟೀಸ್ ಎಂದು ಕರೆಸಿಕೊಳ್ಳುವ ಜನರು ಸುಮಾರು 600,000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮ್ಯಾನಿಟೋಬ, ಸಸ್ಕಚೆವಾನ್, ಪ್ರಾಂತ್ಯಗಳಲ್ಲಿ ನೆಲಸಿದ್ದಾರೆ. ಕೆನಡಾ ದೇಶದ ರಾಜ್ಯಾಂಗ ತಯಾರು ಮಾಡಿದಾಗ ಲೂಯಿಸ್ ರಿಯಾಲ್ ಎಂಬ ಮೇಟೀಸ್ ನಾಯಕನು ಕೆನಡಾ ದೇಶದ ಆಳ್ವಿಕೆಯನ್ನು ಪ್ರತಿಭಟಿಸಿದನು. ಕೆನಡಾ ದೇಶದ ಅಧಿಕಾರಿಗಳು ಲೂಯಿಸ್ ರಿಯಾಲನ್ನು ವಿಚಾರಣೆ ಮಾಡಿ ಗಲ್ಲಿಗೇರಿಸಿದರು. ಆ ತರುವಾಯ ಮೇಟೀಸ್ ಜನರು ಇತರೆ ಮೂಲನಿವಾಸಿಗಳಂತೆ ಕೆನಡಾ ದೇಶದ ಪ್ರಜೆಗಳಾಗಿದ್ದಾರೆ.

ಕಡವೆಗಳ (ಮೂಸ್) ಬೇಟೆ
(ಒಂದು ಮೇಟೀಸ್ ಕಥೆ)

ಒಂದಾನೊಂದು ಕಾಲದಲ್ಲಿ ಒಂದು ದಿನ ಕಡವೆ ಸಂಸಾರವು ತಮ್ಮ ಗುಹೆಯಲ್ಲಿ ಅಗ್ಗಿಷ್ಟಿಕೆಯ ಸುತ್ತಲೂ ಕೂತಿದ್ದಾಗ ಮುಂಬಾಗಿಲಿನಿಂದ ಒಂದು ಹೊಗೆಸೊಪ್ಪಿನ ಚುಂಗಾಣಿ ಪೈಪು ತೇಲುತ್ತಾ ಬಂದಿತು. ಅಪ್ಪ ಕಡವೆಗೆ ಅನುಭವ ಇತ್ತು. ಆ ಚುಂಗಾಣಿ ಹೋಗಲಿ ಎಂದು ಸುಮ್ಮನೆ ಕುಳಿತಿತ್ತು. ಅಮ್ಮ ಕಡವೆಯೂ ಹತ್ತಿರ ಬಂದ ಚುಂಗಾಣಿಯನ್ನು ಮುಟ್ಟಲಿಲ್ಲ. ಚುಂಗಾಣಿ ಎಲ್ಲಾ ಕಡವೆಗಳನ್ನೂ ದಾಟಿ ಚಿಕ್ಕ ಕಡವೆಯ ಹತ್ತಿರ ಹೋಯಿತು. ಚಿಕ್ಕ ಕಡವೆ ಚುಂಗಾಣಿಯನ್ನು ಹಿಡಿದು ಅದರಲ್ಲಿದ್ದ ತಂಬಾಕನ್ನು ಸೇದಿತು. ಅಪ್ಪ ಕಡವೆ

"ನೋಡು ನೀನು ಮಾಡಿದ್ದು, ಬೇಟೆಗಾರ ಮನುಷ್ಯರು ಬೇಟೆಗೆ ಮುಂಚೆ ಚುಂಗಾಣಿ ತಂಬಾಕನ್ನು ಸೇದುತ್ತಾರೆ. ಇದು ಅವರು ಕಳುಹಿಸಿದ ಚುಂಗಾಣಿ. ಈಗ ಬೇಟೆಗಾರರು ನಮ್ಮನ್ನು ಕೊಲ್ಲಲು ಬರುತ್ತಾರೆ" ಎಂದಿತು. ಚಿಕ್ಕ ಕಡವೆ "ನಾನು ಜೋರಾಗಿ ಓಡಬಲ್ಲೆ" ಎಂದಿತು. ಮಾರನೆಯ ದಿನ ಕಡವೆ ಪ್ರಾಣಿಗಳು ತಮ್ಮ ಆಹಾರವನ್ನು ಹುಡುಕಿಕೊಂಡು ತಮ್ಮ ಗುಹೆಯನ್ನು ಬಿಟ್ಟು ಹೊರಟವು. ಕಾಡಿನ ಅಂಚಿನಲ್ಲಿ ಬೇಟೆಗಾರರನ್ನು ವಾಸನೆಯಿಂದ ಕಂಡುಹಿಡಿದು ವೇಗವಾಗಿ ಓಡಲು ಪ್ರಾರಂಭಿಸಿದವು. ಆಗತಾನೇ ಸಾಕಷ್ಟು ಹಿಮ ಬಿದ್ದಿತ್ತು. ಚಿಕ್ಕ ಕಡವೆ ವೇಗವಾಗಿ ಓಡಲು ಶುರು ಮಾಡಿತು. ಆದರೆ ಬೇಟೆಗಾರರಿಗೆ ಹಿಮದಲ್ಲಿ ಓಡುವ ಚರ್ಮದ ಬೂಟುಗಳಿದ್ದವು. ಕೊನೆಗೆ ಚಿಕ್ಕ ಕಡವೆ ಬೇಟೆಗಾರರ ಹೊಡೆತಕ್ಕೆ ಸಿಕ್ಕಿ ಸತ್ತಿತು. ಬೇಟೆಗಾರರು ಚುಂಗಾಣಿ ಸೇದಿದ್ದಕ್ಕೆ ಧನ್ಯವಾದ ಹೇಳಿದರು. ಅದರ ದೇಹವನ್ನು ನಾಜೂಕಾಗಿ ನೋಡಿಕೊಂಡು ತಮ್ಮ ಆಹಾರವಾಗಿ ಸಿಕ್ಕಿದ್ದಕ್ಕೆ ವಂದಿಸಿ ಅದರ ದೇಹಕ್ಕೆ ಗೌರವ ತೋರಿದರು.

ಇನುವಿಟ್ ಪಂಗಡ

ಮೂರನೆಯ ಪಂಗಡವನ್ನು ಇನುವಿಟ್ ಎಂದು ಕರೆಯುತ್ತಾರೆ. ಇನುವಿಟ್ ಜನರನ್ನು ಎಸ್ಕಿಮೋ ಎಂದೂ ಕರೆಯಬಹುದು. ಇವರು ಈ ದೇಶದ ಉತ್ತರ ಭಾಗಗಳಲ್ಲಿ ವಾಸಿಸುತ್ತಾರೆ. ಅದರಲ್ಲಿ ಅಕ್ಷಾಂಶ 60 ಡಿಗ್ರಿ ಉತ್ತರ ರೇಖೆಯಿಂದ 82 ಡಿಗ್ರಿ ಉತ್ತರ ರೇಖೆಯವರೆಗೂ ಇರುವ ಪ್ರದೇಶವನ್ನು 'ಯೂಕಾನ್,' 'ನಾರ್ತ್‌ವೆಸ್ಟ್ ಟೆರಿಟರಿ' ಮತ್ತು 'ನೂನವುಟ್' ಎಂದು ಮೂರು ಪ್ರಾಂತ್ಯಗಳಾಗಿ ವಿಂಗಡಿಸಿದ್ದಾರೆ.

ನಾರ್ತ್‌ವೆಸ್ಟ್ ಟೆರಿಟರಿ ಪ್ರದೇಶದ ಪಶ್ಚಿಮ ಭಾಗದಲ್ಲಿ ಹರಿಯುವ ಮೆಕೆನ್ಜಿ ನದಿಯು ಕೆನಡಾ ದೇಶದ ಅತ್ಯಂತ ಉದ್ದವಾದ ನದಿ. ಇದು ಕೆನಡಾದ ರಾಕಿ ಬೆಟ್ಟಗಳಲ್ಲಿ ಹುಟ್ಟಿ 3500 ಕಿ.ಮೀ. ಹರಿದು ಆರ್ಕಟಿಕ್ ಸಮುದ್ರವನ್ನು ಸೇರುತ್ತದೆ. ಅದರ ಆಸುಪಾಸು ಮರಗಳು ಬೆಳೆಯುವ ದೇಶದಲ್ಲಿ ಡೆನಿ ಎಂಬ ಇಂಡಿಯನ್ ಜನರು ವಾಸಿಸುತ್ತಾರೆ. ಅದರ ಪೂರ್ವಕ್ಕೆ, ಎಂದರೆ ಉತ್ತರ ಅಕ್ಷಾಂಶ 60ನೆ ಡಿಗ್ರಿಯಿಂದ ಉತ್ತರ ಅಕ್ಷಾಂಶ 82 ಡಿಗ್ರಿವರೆಗೂ ಹರಡಿರುವ ಪ್ರದೇಶವನ್ನು 'ನೂನವುಟ್' ಎಂದು ಕರೆಯುತ್ತಾರೆ. 'ನೂನವುಟ್' ಪ್ರದೇಶವು ಇನುವಿಟ್ ಜನರ ಆಳ್ವಿಕೆಯಲ್ಲಿದೆ.

ಇದು ಪರ್ಮಾಫ್ರಾಸ್ಟ್ ಎಂಬ ಪ್ರದೇಶ. ಅಲ್ಲಿ ಯಾವ ಗಿಡ, ಮರ, ಸಸ್ಯಗಳೂ ಬೆಳೆಯಲಾರವು. ವರ್ಷದ ಪೂರ್ತಿ ಹಿಮ, ಚಳಿ, ಇರುವ ವಾತಾವರಣದಲ್ಲಿ ನೆಲವೂ ಹೆಪ್ಪುಗಟ್ಟಿ, ಭೂಮಿ ತೇವವಾಗೇ ಇರುತ್ತೆ. ಇದನ್ನು ಮಸ್ಕೆಗ್ ಭೂಮಿ ಎಂದು ಕರೆಯುತ್ತಾರೆ. ಅಂತಹ ಪ್ರದೇಶದಲ್ಲಿ ಇನುವಿಟ್ ಮೂಲನಿವಾಸಿಗಳು ಸುಮಾರು 3000 ವರ್ಷಗಳಿಂದಲೂ ನೆಲಸಿದ್ದಾರೆ.

ಎಸ್ಕಿಮೋ ಜನರು ಶೀತವಲಯದ ಇತರೇ ರಾಷ್ಟ್ರಗಳಲ್ಲೂ ಇದ್ದಾರೆ. ಗ್ರೀನ್‌ಲ್ಯಾಂಡ್, ರಷ್ಯಾ ದೇಶದ ಸೈಬೀರಿಯ, ಅಮೆರಿಕಾದ ಅಲಾಸ್ಕ, ಮುಂತಾದ ಶೀತವಲಯದ ಪ್ರದೇಶಗಳಲ್ಲಿ

ವಾಸಿಸುತ್ತಾರೆ. ಇವರು ಎಲ್ಲಿದ್ದರೂ 'ಎಸ್ಕಿಮೋ ಅಲುವಿಟ್' ಎಂಬ ಭಾಷೆಯನ್ನು ಬಳಸುತ್ತಾರೆ. ಎಲ್ಲಾ ಎಸ್ಕಿಮೋ ಜನರೂ ಮೊಂಗೋಲಾಯಿಡ್ ಬುಡಕಟ್ಟಿಗೆ ಸೇರಿದವರು. ಎಸ್ಕಿಮೋ ಜನರು ಎಲ್ಲಿದ್ದರೂ ಅವರ ಸಂಸ್ಕೃತಿ ಹೆಚ್ಚೂ ಕಡಿಮೆ ಒಂದೇ. ಹಲವು ಇನುವಿಟ್ ಜನರು ಆರ್ಕಟಿಕ್ ಸಮುದ್ರತೀರದಲ್ಲಿ ನೆಲಸಿರುತ್ತಾರೆ. ಅವರು ಸಮುದ್ರದಲ್ಲಿ ತಮ್ಮ ದೋಣಿಯಲ್ಲಿ ಹೋಗಿ ಸಿಗುವ ಸೀಲ್, ವಾಲ್ರಸ್, ತಿಮಿಂಗಿಲ, ಮುಂತಾದ ಪ್ರಾಣಿಗಳನ್ನು ಹಿಡಿದು ಕೊಂದು ತಿನ್ನುತ್ತಾರೆ. ಅದರ ಚರ್ಮವನ್ನು ಉಡುಪಾಗಿ ಉಪಯೋಗಿಸುತ್ತಾರೆ. ನಾಯಿಗಳು ಎಳೆಯುವ ಜಾರುಬಂಡಿ (ಡಾಗ್ ಸ್ಲೇ) ಗಳನ್ನು ಉಪಯೋಗಿಸಿ ಪ್ರಯಾಣ, ಬೇಟೆಗಳಿಂದ ಜೀವನ ನಡೆಸುತ್ತಾರೆ. ಇತ್ತೀಚೆಗೆ ಸ್ನೋ ಮೊಬಿಲ್ ಎಂಬ ಪೆಟ್ರೋಲ್ ಸ್ಕೂಟರನ್ನು ಉಪಯೋಗಿಸುತ್ತಾರೆ. ಇಂತಹ ವಾತಾವರಣದಲ್ಲಿ ಜಿಂಕೆಯ ಜಾತಿಗೆ ಸೇರಿದ ಕ್ಯಾರಿಬೂ ಎಂಬ ನಾಲ್ಕು ಕಾಲಿನ ಪ್ರಾಣಿ ವಾಸಿಸುತ್ತದೆ. ಹಿಂಡು ಹಿಂಡಾಗಿ ವಾಸ ಮಾಡುವ ಈ ಕ್ಯಾರಿಬೂ ಪ್ರಾಣಿಯನ್ನು ಬೇಟೆಯಾಡಿ ಅದರ ಮಾಂಸವನ್ನು ಆಹಾರವಾಗಿ ಉಪಯೋಗಿಸುತ್ತಾರೆ. ಅವರು ಹಸಿ ಮಾಂಸವನ್ನು ತಿನ್ನುವುದಿಲ್ಲ. ಮಾಂಸವನ್ನು ಒಣಗಿಸಿ ತಿನ್ನುತ್ತಾರೆ. ಅದರ ಚರ್ಮವನ್ನು ಉಣ್ಣೆಯ ಹಾಗೆ ಬೆಚ್ಚಗೆ ಇರುವ ಉಡುಪಾಗಿ ಉಪಯೋಗಿಸುತ್ತಾರೆ.

ಸಾವಿರಾರು ವರ್ಷಗಳಿಂದ ವಿಪರೀತವಾದ ಹವಾಮಾನ ವೈಪರೀತ್ಯಗಳಿಗೆ ಹೊಂದಿಕೊಂಡೇ ಈ ಜನ ಕಷ್ಟದಿಂದ ಜೀವನ ನಡೆಸುತ್ತಿದ್ದರು. ಈಗ ಜಾಗತಿಕ ತಾಪಮಾನದ ಏರಿಕೆಯಿಂದ ಸಮುದ್ರತೀರದ ಸವೆತ, ಪರ್ಮಾಫ್ಲಾಸ್ಟ್ ಕರಗುತ್ತಿರುವುದರಿಂದ ಅವರ ಮನೆಗಳ ಅಡಿಪಾಯಗಳು ಕುಸಿಯುತ್ತಿರುವುದು ಮತ್ತು ಆರ್ಕಟಿಕ್ ಸಮುದ್ರದಲ್ಲಿ ತಾಪಮಾನ ಹೆಚ್ಚುತ್ತಿರುವುದರಿಂದ ಹಿಮದ ಮೇಲ್ಪಾವಣಿ ಬಹಳ ತೆಳುವಾಗಿದ್ದು ಅದರ ಮೇಲೆ ನಿಂತು ಸೀಲ್‌ಗಳನ್ನು ಬೇಟೆಯಾಡುವುದು ಸಾಧ್ಯವಾಗದೆ ಇರುವುದು, ಇವೆಲ್ಲದರಿಂದ ಕಂಗೆಟ್ಟುಹೋಗುತ್ತಿದ್ದಾರೆ. ಆತ್ಮಹತ್ಯೆಗಳೂ ಹೆಚ್ಚುತ್ತಿವೆ. ಪ್ರಪಂಚದ ಮುಂದುವರೆದ ದೇಶಗಳೆಲ್ಲ ಸೇರಿ ಪರಿಸರ ರಕ್ಷಣೆ ಮಾಡಬೇಕು ಮತ್ತು ಮಾಲಿನ್ಯವನ್ನು ತಡೆಯಬೇಕು. ಆಗ ಇವರ ಜೀವನ ಉತ್ತಮಗೊಳ್ಳುತ್ತದೆ.

ಉಪಸಂಹಾರ

ಕೆನಡಾ ದೇಶದಲ್ಲಿ ಸುಮಾರು 1.6 ಮಿಲಿಯನ್ ಜನಸಂಖ್ಯೆಯಿರುವ ಮೂಲನಿವಾಸಿಗಳ ಮುಖ್ಯ ಮೂರು ಪಂಗಡಗಳಾದ 'ಇಂಡಿಯನ್ಸ್,' 'ಮೇಟೀಸ್' ಮತ್ತು 'ಇನುವಿಟ್' ಜನಾಂಗದ ಸ್ಥೂಲ ಪರಿಚಯವನ್ನು ಮಾಡಿಕೊಟ್ಟು ಅವರಲ್ಲಿ ಪ್ರಚಲಿತವಿರುವ ಹಲವು ಜಾನಪದ ಕಥೆಗಳನ್ನು ಪ್ರಸ್ತುತಪಡಿಸಲಾಗಿದೆ. ಒಟ್ಟಿನಲ್ಲಿ ಒಮ್ಮೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಶ್ರೀಮಂತವಾಗಿದ್ದ ಜನಾಂಗವಾಗಿದ್ದ ಇವರು ಹೊರಗಿನಿಂದ ಬಂದ ವಲಸೆಗಾರರ ಅಧೀನವಾಗಿ ತಮ್ಮ ಭಾಷೆ, ಸಂಸ್ಕೃತಿ ಮತ್ತು ಜೀವನಶೈಲಿಗಳನ್ನು ಕಳೆದುಕೊಂಡ ನತದೃಷ್ಟರು.

❑

8

ಹಾರಿ ಹೋದವರು

ಶಶಿಕಲಾ ಚಂದ್ರಶೇಖರ್
ಬಾಯ್ಡ್ಸ್, ಮೇರೀಲ್ಯಾಂಡ್

*

ಆ ಜನರು ಹಕ್ಕಿಯಂತೆ ಹಾರುತ್ತಿದ್ದರು. ಹೌದು... ಹಿಂದೆ ಒಂದಾನೊಂದು ಕಾಲದಲ್ಲಿ ಆಫ್ರಿಕಾದ ಹಲವಾರು ಜನರಿಗೆ ಜಾದೂ ಗೊತ್ತಿತ್ತು. ಅವರು ಅದೃಶ್ಯವಾದ ಏಣಿ ಹತ್ತಿದ ಹಾಗೆ ಗಾಳಿ ಏರಿ ಸವಿಸ್ತಾರವಾದ ನಭಕ್ಕೆ ಜಿಗಿಯಬಲ್ಲವರಿದ್ದರು. ಆ ನೀಲಿ ನಭದ ಹಿನ್ನೆಲೆಯಲ್ಲಿ ಕಪ್ಪಾಗಿ ಹೊಳೆವ ತಮ್ಮ ರೆಕ್ಕೆಗಳನ್ನು ಬೀಸುತ್ತಾ ಕಾಡು, ನಾಡು, ಗಿರಿ, ಶಿಖರ ಮತ್ತು ನದಿಗಳ ಮೇಲೆ ಹಾರಾಡುತ್ತಿದ್ದರು.

ಹೀಗಿರುವಾಗ ಒಂದು ದಿನ ಆ ನಾಡಿನಲ್ಲಿದ್ದ ಅದೆಷ್ಟೋ ಜನರನ್ನು ಜೀತದ ಸೆರೆಯಾಳುಗಳಾಗಿ ಹಿಡಿದುಬಿಟ್ಟರು. ಹೌದೌದು ಲೆಕ್ಕಕ್ಕಿಲ್ಲದಷ್ಟು ಜನರನ್ನು! ಹಿಡಿದವರು ಬಿಳೀ ಚರ್ಮದವರು. ದೂರ ದೂರದ ದೇಶಗಳಲ್ಲಿ ದುಡಿತಕ್ಕಾಗಿ ಕಾನುಗಳ (ಪ್ಲಾಂಟೇಷನ್) ಬಿಳಿ ಮಾಲೀಕರಿಗಿವರನ್ನು ಮಾರಲು. ಹಾರಲು ಗೊತ್ತಿದ್ದ ಜನರು ತಂತಮ್ಮ ರೆಕ್ಕೆಗಳನ್ನು ಕಳಚಿದರು, ಹಾವು ಪೊರೆ ಕಳಚಿದಂತೆ. ಏಕೆಂದರೆ ಸಮುದ್ರ ದಾಟಿ ಭಾರೀ ದೂರದ ಖಂಡಕ್ಕೆ ಪ್ರಯಾಣ ಹೊರಟ, ಜೀತದಾಳುಗಳಿಂದ ತುಂಬಿದ್ದ ಹಡಗಿನಲ್ಲಿ ದಟ್ಟವಾದ ಸಂದಣಿ. ಇಕ್ಕಟ್ಟಾದ ಜಾಗ. ಗೊತ್ತಲ್ಲಾ ...ಹಡಗನ್ನು ಸೆರೆಯಾಳುಗಳಿಂದ ತುಂಬಿ ತುರುಕಿಬಿಟ್ಟಿದ್ದರು.

ದೀರ್ಘಕಾಲದ ಪ್ರಯಾಣ. ಅದೆಷ್ಟೋ ಹಗಲು, ಅದೆಷ್ಟೋ ರಾತ್ರಿಗಳ ಪ್ರಯಾಣ. ಅವರೆಲ್ಲಾ ಸಂಕಟದಿಂದ ತೊಳಲಿ ಬಳಲಿದರು. ಸಮುದ್ರದ ದೈತ್ಯ ಅಲೆಗಳ ಏರು ಇಳಿತಕ್ಕೆ ಅಸ್ವಸ್ಥರಾದರು. ಕಡಲ ಬೇನೆಯಿಂದ ಬಸವಳಿದು ಕಂಗೆಟ್ಟರು. ಯಾವಾಗ ಆಫ್ರಿಕಾದ ನೆಲದಿಂದ ನೌಕೆ ದೂರ ಸಾಗತೊಡಗಿತೋ, ಉಸಿರಾಟಕ್ಕೆ ಆಫ್ರಿಕದ ಗಾಳಿ – ಸಿಹಿಗಾಳಿ ಸಿಗದಾಯಿತೋ ಆಗ ಆ ಜನ ಹಾರಾಟವನ್ನು ಮರೆತರು. ನೆಲ, ನೀರು, ಗಾಳಿ,

ಕಾಡು, ಹಾಡು, ರೀತಿ, ನೀತಿ, ನಂಟು, ಸ್ವಾತಂತ್ರ್ಯ ಮತ್ತು ಮೂಲ ಅಸ್ತಿತ್ವ ಈ ಎಲ್ಲದರಿಂದ ವಂಚಿತರಾದ ಅವರ ಮನಸ್ಸಿನಿಂದ ಹಾರಾಟದ ಜಾದೂ ಶಕ್ತಿ ಮಾಸಿತು.

ಜೀತದ ನಾಡಿಗೆ ಬಂದವರ ಪಾಡು ಪಾಡಲ್ಲ. ಅವರ ಸ್ಥಿತಿ ವರ್ಣಿಸಲೂ ಆಗದಷ್ಟು ಯಾತನಾಮಯ. ಹಗಲಿರುಳೂ ಮೈಮುರಿಯುವ ದುಡಿತ, ನಡು ನಡುವೆ ಬೆನ್ನ ಮೇಲೆ ಚಬಕಿನ ಹೊಡೆತ. ಮಾಲೀಕನ ಮನೆಯ ಪ್ರಾಣಿಗಳಿಗೆ ತೋರುವ ದಯೆಯೂ ಈ 'ಕಪ್ಪು' ಜನರ ಜೀವಕ್ಕಿಲ್ಲ. ಅವಕ್ಕಿಂತಲೂ ನಿಕೃಷ್ಟ ಬದುಕು. ಈ ದಾರುಣ ಪರಿಸ್ಥಿಯಿಂದ ತಪ್ಪಿಸಿಕೊಳ್ಳದಂತೆ ಕಾಲಿಗೆ ಗುಂಡು ಸರಪಳಿ. ತಪ್ಪಿಸಿಕೊಳ್ಳುವ ಪ್ರಯತ್ನಪಟ್ಟವರಿಗೆ ಬಾರುಕೋಲಿನಿಂದ ಬಾಸುಂಡೆ ಬರುವಂತಹ ಹೊಡೆತ. ಹಾಗೋ ಹೀಗೋ ಹೇಗೋ ತಪ್ಪಿಸಿಕೊಂಡು ಹೊರಟವರ ಎಳೆತರಲು ಬೇಟೆನಾಯಿಗಳ ಬಳಕೆ. ಕೊರಳೊತ್ತಿ ಉಸಿರುಗಟ್ಟಿಸಿ ಕೊಲ್ಲುವ ಶಿಕ್ಷೆ. ಈ ಯಾವ ಕ್ರೌರ್ಯವನ್ನೂ ಮಾಲೀಕ ಸಮರ್ಥಿಸಿಕೊಳ್ಳಬೇಕಾದ ಅಗತ್ಯ ಇಲ್ಲಾ ಎನ್ನುವ ಧೂರ್ತತೆ ಅವರದ್ದು. ಪಾಪದ ಜೀವಿಗಳನ್ನು ಖರೀದಿ ಮಾಡಿದ್ದರಲ್ಲಾ!?

ಮಾಲೀಕರು ಕುಟುಂಬದ ಸದಸ್ಯರನ್ನು ಬೇರ್ಪಡಿಸಿದರು; ಅಪ್ಪನನ್ನು ಎಳೆದೊಯ್ದು ಮತ್ತೊಬ್ಬ ಬಿಳಿ ಮಾಲೀಕನಿಗೆ ಮಾರಿದರು. ಬೆಳೆದ ಮಕ್ಕಳನ್ನು ಅಮ್ಮಂದಿರಿಂದ ಕಿತ್ತು ವಿಲೇವಾರಿ ಮಾಡಿಬಿಟ್ಟರು. ಅವರ ಸ್ವಂತದ ಭಾಷೆಗಳಲ್ಲಿ ಸಂಭಾಷಿಸದಂತೆ ತಡೆದರು. ಅವರ ಭಾಷೆ ಹೊರಬರದಂತೆ ಗಂಟಲಲ್ಲೇ ಹೊಸಕಿ ಹಾಕಿದರು. ಒಬ್ಬರಿಗೊಬ್ಬರು ಗುಂಪು ಕೂಡಿ ಮಾತಾಡುವುದನ್ನು ನಿರ್ಬಂಧಿಸಿದರು. ಒಂಟಿ ಬದುಕು ನಿಃಸಹಾಯಕ ಸ್ಥಿತಿ. ಗೋಳು ಗೋಳಾಯ್ತು ಇಡೀ ಜನಾಂಗದ ಬದುಕು.

ಒಂದು ಮಾತು, ಏನಂದರೆ ಹಾರಬಲ್ಲ ಜನ ತಮ್ಮ ರೆಕ್ಕೆಗಳನ್ನು ಕಳಚಿಕೊಂಡಿದ್ದರೂ, ಅವರಲ್ಲಿ ಹಾರುವ ಜಾದೂ ಉಳಿದುಕೊಂಡಿತ್ತು. ಆದರೆ ಈ ನೆಲದಲ್ಲಿ ಅವರ ಶಕ್ತಿಯನ್ನು ಒಳಗಡಗಿಸಿಕೊಂಡಿದ್ದರು. ಕಾಲಾಂತರದಲ್ಲಿ ಆಫ್ರಿಕಾದ ಬೇರೆ ಬೇರೆ ಪ್ರಾಂತ್ಯಗಳಿಂದ ಜೀತಕ್ಕಾಗಿ ಸೆರೆಯಾಳಾಗಿ ಕರೆತಂದ ಜನರೆಲ್ಲರೂ ಇವರಂತೆಯೇ ಕಾಣುತ್ತಿದ್ದರು. ಆಕಾರ, ಬಣ್ಣ, ಚಹರೆ – ತದ್ರೂಪಿಗಳು. ನೋಡಿದವರಿಗೆ ಯಾವ ವ್ಯತ್ಯಾಸವೂ ಕಾಣದು. ಯಾರು ಹಾರಬಲ್ಲವರು, ಯಾರು ಹಾರಲಾರದವರು ಎಂದು ವಿಭಜಿಸಿ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಸೆರೆ ಹಿಡಿಯಲ್ಪಟ್ಟ ಜನರಲ್ಲಿ ಇದ್ದವರೆಂದರೆ, ಒಬ್ಬ ಅಜ್ಜ– ಟೋಬಿ ಹಾಗು ಎತ್ತರದ ನಿಲುವಿನ, ದೀನ ಮುಖದ ಯುವತಿ ಒಲಘ್ಯೂಮಿ.

ಒಲಘ್ಯೂಮಿ ಪುಟ್ಟ ಮಗುವಿನ ತಾಯಿ. ಸೆರೆ ಸಿಗುವ ಮೊದಲು ಅವಳೂ ರೆಕ್ಕೆ ಇದ್ದವಳೇ. ಇಂದು ರೆಕ್ಕೆ ಕಳಚಿದ ಅವಳು ಭಯಗ್ರಸ್ತ ಜೀತದಾಳು. ಅವಳ ಸ್ಥಿತಿ ಹೀನಾತಿಹೀನ. ಅವರಿದ್ದ ಈ ಕಾನಿನಲ್ಲಿ ಸೂರ್ಯ ಹುಟ್ಟುವ ಗಳಿಗೆಯಿಂದ ಮುಳುಗುವವರೆಗೆ ಜೀತದಾಳುಗಳಿಗೆ ಮೈಮುರಿತದ ದುಡಿತ. ಜೀತದಾಳುಗಳ ಯಜಮಾನ 'ಧಣಿ' ಎಂದು ಕರೆಯಿಸಿಕೊಳ್ಳುವವ. ನಿರ್ದಯಿ. ಅವನೊಬ್ಬ ಗಟ್ಟಿ ಜೇಡಿ ಮಣ್ಣಿನ ದೊಡ್ಡ ಗುಡ್ಡೆ; ಕಾಸಿ ಹೊಯ್ದಿಟ್ಟ ಕಬ್ಬಿಣದ ಗುಂಡು; ಕಲ್ಲುಬಂಡೆ ಅಂತಹವನು. ತುಸು ಕೂಡ ಎದ್ದು

ಅಲುಗಾಡಲೊಲ್ಲದವನು. ಅವನು ನೇಮಕಾತಿ ಮಾಡಿದ 'ಮೇಲುಸ್ತುವಾರಿ' ನಡೆಸುವವ ಕುದುರೆ ಮೇಲೆ ಕುಳಿತು ಜಮೀನಿನ ಉದ್ದಗಲಕ್ಕೂ ಚಲಿಸುತ್ತಾ ಜೀತದಾಳುಗಳ ಕೆಲಸದ ಗತಿಯ ಮೇಲೆ ನಿಗಾ ಇಡುತ್ತಿದ್ದ. ಅವರ ಕೆಲಸದ ಗತಿ ನಿಧಾನವಾದಲ್ಲಿ ಅವರೆಡೆ ಬೊಟ್ಟು ಮಾಡಿ ತೋರಿಸುತ್ತಾನೆ. ಚಾಟಿ ಹಿಡಿದು ಚಲಿಸುವ 'ಚಾಲಕ' ಕ್ಷಣಾರ್ಧದಲ್ಲಿ ಚಾಟಿ ಬೀಸಿ ಅವರನ್ನು ಬಾರಿಸುತ್ತಾನೆ. ಚರ್ಮ ಹರಿದು ಸೀಳಿ ಮಾಂಸ ಹೊರ ತೋರುವಂತಹ ಹೊಡೆತ. ನೋವಿಂದ ನರಳುತ್ತಾ ಮತ್ತೆ ಬೀಳಬಹುದಾದ ಏಟಿಗೆ ಹೆದರಿ ಅವರುಗಳು ಕೆಲಸದ ವೇಗ ಹೆಚ್ಚಿಸಲೇಬೇಕಿತ್ತು. ಮತ್ತೆ ಬೇರಿನ್ನೇನನ್ನಾದರೂ ಮಾಡಬಲ್ಲ ಆಯ್ಕೆ ಏನಿತ್ತು?

ಒಲಘ್ಯೂಮಿ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಗುದ್ದಲಿಯಿಂದ ಕಳೆ ತೆಗೆಯುತ್ತಿದ್ದಳು. ಮಗು ಮಲಗಿತ್ತು. ಅವಳು ಕೆಲಸ ಮುಂದುವರೆಸಿದ್ದಂತೆ, ಹಸಿದ ಮಗು ಮಿಸುಕಾಡತೊಡಗಿತು. ಮಿಸುಕಾಟ ಅಳುವಿಗೆ ತಿರುಗಿತು. ಹಸಿವು ಹೆಚ್ಚಾದಂತೆ ಮಗು ದೊಡ್ಡ ಗಂಟಲಲ್ಲಿ ರಚ್ಚೆ ಹಿಡಿದು ಅಳತೊಡಗಿತು. ಅವಳು ಕೆಲಸ ನಿಲ್ಲಿಸಿ, ಮಗುವಿಗೆ ಉಣಿಸುವಂತಿರಲಿಲ್ಲ. ರಮಿಸುವಂತಿರಲಿಲ್ಲ. ಮುದ್ದಿಸಿ ಸಂತೈಸುವಂತಿರಲಿಲ್ಲ. ಪಾಪ!! ಜೀತದಾಳು ಅವಳು. ಇದನರಿಯದ ಮಗು ಹಸಿವಿನ ಸಂಕಟದಿಂದ ತಾರಕ ಸ್ವರದಲ್ಲಿ ಅಳು ಮುಂದುವರೆಸಿತ್ತು

"ಅದರ ಬಾಯ್ಮುಚ್ಚಿಸು" ಎಂದು ಕನಲಿ ಮೇಲ್ವಿಚಾರಕ ಕಿರುಚುತ್ತಿದ್ದ, ಮಗುವಿನ ಕಡೆ ಬೆಟ್ಟು ತೋರಿಸುತ್ತಾ. ಒಲಘ್ಯೂಮಿ ಮೈ ಮುದುರಿಗೊಂಡು ಬಗ್ಗಿ ಮುಖ ಕೆಳಹಾಕಿದಳು. ಚಾಟಿ ಬೀಸಿ ಹೊಡೆಯುವವನ ಕಣ್ತಪ್ಪಿಸುವ ಪ್ರಯತ್ನ ಅವಳದು. 'ಛಟಾರ್' ಬೀಸಿದ ಚಾಟಿಯ ಏಟು ಮಗುವಿಗೂ ತಗುಲಿತು. ಬಿದ್ದ ಏಟಿಗೆ ಮಗು ನೋವಿನಿಂದ ಚೀರಿತು. ಒಲಘ್ಯೂಮಿ ನೆಲಕ್ಕೆ ಬಿದ್ದಳು. ಅಜ್ಜ ಟೋಬಿ ಹತ್ತಿರದಲ್ಲೇ ಇದ್ದ. ಅವಳ ಸಹಾಯಕ್ಕೆ ಧಾವಿಸಿದ.

ನಿರ್ಬಲವಾದ ಅವಳ ಶರೀರ ನೇರವಾಗಿ ನಿಲ್ಲಲಾರದೆ ತಟ್ಟಾಡಿತು. ಸೂರ್ಯನ ಬಿರು ಬಿಸಲಿಗೆ ಸುಟ್ಟಿದ್ದ ಅವಳ ಮುಖ ಕಂತಿತ್ತು. ಕಣ್ಣುಗಳಲ್ಲಿ ನೋವು ಮಡುಗಟ್ಟಿತ್ತು. ಮಗು ಅತ್ತೇ ಅಳುತ್ತಿತ್ತು ಉಸಿರುಗಟ್ಟಿ. "ಹಾಳು ಬಾಳು... ಮರುಕ ತೋರೋ," ಅವಳು ಹಾಗೆಂದಿರಬಹುದು. ಅವಳ ಆ ಪದಗಳು ಕೇಳಿಯೂ ಕೇಳದಂತೆ ಗಾಳಿಯಲ್ಲಿ ಬೆರೆತು ಹೋದವು. ದುಃಖತಪ್ತ ಒಲಘ್ಯೂಮಿ ಹಸಿದಿದ್ದಳು. ಬಳಲಿ ಬೆಂಡಾಗಿದ್ದಳು. ನಿಲ್ಲಲಾರದೆ ಅಲ್ಲೇ ಬದುವಿನ ಮೇಲೆ ಕುಳಿತಳು.

"ಏಳೇ ಕರೀ ಮುಸುಡಿ" ಎಂದು ಕ್ರೂರವಾದ ಸ್ವರದಲ್ಲಿ ಒದರಿದ ಮೇಲ್ವಿಚಾರಕ ಒಲಘ್ಯೂಮಿಯ ಕಡೆ ಕೈ ಮಾಡಿ ತೋರುತ್ತಾ, ತತ್‌ಕ್ಷಣದಲ್ಲಿ 'ಛಟೀರ್' ಚಾಟಿಯ ಚೂಪು ಹುರಿಯ ಕುಣಿಕೆ ಒಲಘ್ಯೂಮಿ ಕಾಲುಗಳನ್ನು ಸುತ್ತುವರೆದಿತ್ತು. ಆ ಹೊಡೆತಕ್ಕೆ ಅವಳ ಬಟ್ಟೆ ಹರಿದು ಚಿಂದಿಯಾಯ್ತು. ಕಾಲಿಗಾದ ಸೀಳುಗಾಯದಿಂದ ರಕ್ತ ಹರಿದು ನೆಲಕ್ಕೆ ಚಲ್ಲಿತು. ಅವಳು ಮೇಲೇಳುವ ಸ್ಥಿತಿಯಲ್ಲಿರಲಿಲ್ಲ. ಒಲಘ್ಯೂಮಿ ಮತ್ತವಳ ಹಸುಳೆಗೆ ಸಹಾಯ ಮಾಡಲು ಅಲ್ಲಿದ್ದವನೊಬ್ಬನೇ ಒಬ್ಬ– ಅಜ್ಜ ಟೋಬಿ.

"ಈಗ...ಈಗಿಂದೀಗ. ಕಾಲ ಮೀರುವ ಮುನ್ನ...." ದುಃಖಿಸಿ ಬಿಕ್ಕುತ್ತಾ "ಈಗಲೇ ಅಜ್ಜಾ," ಎಂದಳು ಒಲಫ್ಯೂಮಿ.

"ಹೌದು ಮಗಳೇ, ಹೊರಡುವ ಸಮಯ ಬಂದಿದೆ" ಅಜ್ಜ ಟೋಬಿ ಉತ್ತರಿಸಿದ. "ಹೊರಡು ಮಾಡುವುದೇನೆಂದು –ಹೇಗೆಂದು ನಿನಗೇ ತಿಳಿದಿದೆ ಹೊರಡಿನ್ನು. ತಡ ಮಾಡಬೇಡ."

ಅಜ್ಜ ಟೋಬಿ ತನ್ನೆರಡು ಕೈಯನ್ನು ಅವಳೆಡೆಗೆ ಚಾಚಿ ನೆಲದಿಂದ ಅವಳನ್ನು ಆಕಾಶಕ್ಕೆ ಎತ್ತುವಂತೆ ಮೇಲೆ ಏರಿಸಿದ. "ಕುಂ.. ಯಾಲೀ.. ಕುಂ ಬುಬಾ....ಹೋಂಲಿ ಹೋಂ ಕುಮ್‌ಬೀ..." ಹೀಗೇ ಮತ್ತಷ್ಟು ಜಾದೂ ಪದಗಳನ್ನು ಬಿರಬಿರನೆ ನಿಟ್ಟುಸಿರ ನಡುವೆ ಪಿಸುಮಾತುಗಳಲ್ಲಿ ಪಠಿಸತೊಡಗಿದ. ಹದಿವಯದ, ಪುಟ್ಟ ಮಗುವಿನ ತಾಯಿ ಒಲಫ್ಯೂಮಿ ಒಂದು ಹೆಜ್ಜೆಯನ್ನೆತ್ತಿ ಗಾಳಿಯಲ್ಲಿಟ್ಟಳು. ಅದರ ಹಿಂದೆ ಮತ್ತೊಂದು ಹೆಜ್ಜೆ... ಮೊದಮೊದಲು ತಡವರಿಸಿ ಹೋಯ್ದಾಡಿದಳು. ಬೆನ್ನಿಗಿದ್ದ ಮಗುವನ್ನು ಎತ್ತಿ ತೋಳುಗಳಲ್ಲಿ ಬಿಗಿಯಾಗಿ ಅವುಚಿಕೊಂಡಳು. ಆ ಗಳಿಗೆ ಅನಿರ್ವಚನೀಯ ಮಂತ್ರಶಕ್ತಿ ಅವಳ ಮೈ ತುಂಬಿತು. ಅವಳೊಳಗೆ ಅಡಗಿದ್ದ ಆಫ್ರಿಕಾದ ರಹಸ್ಯ ಜಾದೂ ಪುಟಿದು ಮೇಲೆದ್ದಿತು. ಗಾಳಿಯಲ್ಲಿ ಸ್ವಚ್ಛಂದವಾಗಿ ಮೇಲೆ ಹಾರತೊಡಗಿದಳು – ಹಕ್ಕಿಯ ಗರಿಯಷ್ಟೇ ಹಗುರವಾಗಿ. ಮೇಲ್ವಿಚಾರಕ ಕಿರುಚಿ ಒದರಾಡುತ್ತಾ ಅವಳ ಹಿಂದೆ ಕುದುರೆ ದೌಡಾಯಿಸಿದ. ಒಲಫ್ಯೂಮಿ ಬೇಲಿಯ ದಾಟಿ, ಕಾಡಿನ ಮೇಲೇರಿ ಹಾರಿದಳು. ಉದ್ದುದ್ದದ ಮರಗಳಿಗಾಗಲೀ, ಎತ್ತರದ ಶಿಖರಗಳಿಗಾಗಲೀ ಅವಳನ್ನು ಅಡ್ಡಿಪಡಿಸಲಾಗಲಿಲ್ಲ. ಕಡೆಗೆ ಆ ಮೇಲ್ವಿಚಾರಕನಿಗೂ!

ಮರುದಿನ– ರಣ ರಣ ಬಿಸಿಲು. ನೆಲ ಅಗೆಯುತ್ತಿದ್ದ ಯುವ ಜೀತದಾಳೊಬ್ಬ ಬಿಸಿಲಿನ ಝಳಕ್ಕೆ ತಲೆ ತಿರುಗಿ ಬಿದ್ದ. ಬಿದ್ದವನಿಗೆ ಎಂದಿನಂತೆ ಬಿತ್ತು ಚಾಟಿಯಿಂದ ಹೊಡೆತ. ಅಜ್ಜ ಟೋಬಿ ಬಿದ್ದವನ ಬಳಿ ಬಂದವನೇ ಬಿದ್ದವನ ಜೊತೆಗೆ ಮಾತನಾಡಿದ. ಆಫ್ರಿಕಾದ ಪ್ರಾಚೀನ ಪದಗಳು. ಅವನು ಹಿಂದೆಂದೋ ಕೇಳಿದ, ಆದರೆ ಎಂದೂ ಪೂರ ನೆನಪಿನಲ್ಲಿ ಉಳಿಯದ ಮಸುಕಾದ ಪದ ಗುಪ್ಪೆಗಳು. ಈಗಲೂ ಅವು ಕಿವಿಗೆ ಬಿದ್ದ ತಕ್ಷಣ ಅವನಿಗೆ ಅವು ಮರೆತೇಹೋದವು. ಆದರವು ಅವನ ಒಡಲಾಳಕ್ಕಿಳಿದವು. ಅವನು ಛಕ್ಕನೆದ್ದು ಗಾಳಿಯಲ್ಲುರುಳಿ ಕಪ್ಪು ಹೊಳಪಿನ ರೆಕ್ಕೆಯನ್ನು ಬೀಸಿ ಆಕಾಶದಲ್ಲಿ ಹಾರತೊಡಗಿದ. ಕೆಲ ಗಳಿಗೆಯಲ್ಲೇ ದೂರ ದೂರ ಹಾರಿ ದಿಗಂತದಲ್ಲಿ ಮರೆಯಾಗಿಹೋದ. ಅಷ್ಟರಲ್ಲೇ ಇನ್ನೊಬ್ಬ, ಅವನ ನಂತರ ಮತ್ತೊಬ್ಬ, ಬಿಸಿಲಿನ ಧಗೆಗೆ ನೆಲಕ್ಕೊರಗಿದರು. ಅಜ್ಜ ಟೋಬಿ ಅಲ್ಲಿದ್ದ – ಅವರಿಗಿದ್ದ. "ಅಯ್ಯೋ" ಎನ್ನುತ್ತಾ ಅಜ್ಜ ಟೋಬಿ ಅವರತ್ತ ಧಾವಿಸಿದ. ಕೈಯನ್ನು ಅವರೆಡೆಗೆ ಚಾಚಿ ನೆಲದಿಂದ ಅವರನ್ನು ಆಕಾಶಕ್ಕೆ ಎತ್ತುವಂತೆ ಕೈ ಏರಿಸಿದ. "ಕುಂ.. ಯಾಲೀ..ಕುಂ ಬುಬಾ....ಹೋಂಲಿ ಹೋಂ ಕುಮ್‌ಬೀ..." ಹೀಗೇ ಮತ್ತಷ್ಟು ಜಾದೂ ಪದಗಳನ್ನು ಬಿರಬಿರನೆ ನಿಟ್ಟುಸಿರ ನಡುನಡುವೆ ಪಿಸುಮಾತುಗಳಲ್ಲಿ ಗುಣಗುಣಿಸತೊಡಗಿದನು. ಅವರೂ ಬೀಸುತ್ತಿದ್ದ ಬಿಸಿ ಗಾಳಿ ಏರಿ, ಮೇಲ್ವಿಚಾರಕನ ನೆತ್ತಿಯ ಮೇಲೆಯೇ ಹಾರಿ ಮರೆಯಾಗಿಹೋದರು.

"ಹಿಡಿಯಿರಿ ಆ ಮುದುಕನನ್ನು," ಕಿರುಚಿದ ಮೇಲ್ವಿಚಾರಕ "ಅವನು ಒದರಿದ ಮಂತ್ರಗಳನ್ನು ನಾನೇ ಕೇಳಿಸಿಕೊಂಡೆ. ಹಿಡಿಯಿರಿ ಆ ಮುದುಕನನ್ನು." ಈ ಗದ್ದಲ ಕೇಳಿದ ಧಣಿ ಹೊರಗೋಡಿ ಬಂದ. ಚಾಟಿ ಚಾಲಕ, ಚಾಟಿ ಸುರುಳಿಯಿಂದ ಕುಣಿಕೆ ಹಾಕಿ ಟೋಬಿಯನ್ನು ಕಟ್ಟಿಹಾಕಿ ಬಂಧಿಸಲು ಸಿದ್ಧನಾಗಿದ್ದ. ಯಜಮಾನ, ಅಜ್ಜ ಟೋಬಿಯನ್ನು ಕೊಂದೇ ಬಿಡಬೇಕೆಂದು ಸೊಂಟಪಟ್ಟಿಯಿಂದ ತುಪಾಕಿಯನ್ನು ಕೈಗೆತ್ತಿಕೊಂಡ. ಅಜ್ಜ ಟೋಬಿ ತಲೆ ಓರೆಮಾಡಿ ಅವರನ್ನು ನೋಡುತ್ತಾ ನಗತೊಡಗಿದ. "ಹಹ್ಹ....ಆಆಹ್ಹ...ನಾನ್ಯಾರು ಎಂದು ಗೊತ್ತಿಲ್ವಾ?" ಅವರ ಮುಖಕ್ಕೆ ನೇರವಾಗಿ "ನಿಮ್ಮ ಕಾನಿನಲ್ಲಿ ಜೀತ ಮಾಡುವವರು ನಾವ್ಯಾರೆಂದು ನಿಮಗೆ ಗೊತ್ತಿಲ್ವಾ?" ಅಜ್ಜ ಟೋಬಿ ನುಡಿದ "ನಾವು! ಹಾರಲು ಬಲ್ಲವರು." ಪ್ರಾಚೀನ ಗೂಢ, ಗಾಢ ಭರವಸೆಯ ಪದಗಳನ್ನು ಮಣಮಣಿಸತೊಡಗಿದ ಅಜ್ಜ ಟೋಬಿ. ಚಾಟಿಯ ಭಯದಡಿಯಲ್ಲಿ ಥರಗುಟ್ಟುತ್ತಾ ಬದುಕಿದ್ದ; ಸುತ್ತಮುತ್ತ ನಿಂತಿದ್ದ ಎಲ್ಲಾ ಜೀತದ ಸೆರೆಯಾಳುಗಳನ್ನು ಉದ್ದೇಶಿಸಿ ಹೇಳತೊಡಗಿದ. "ಕುಂ..ಯಾಲೀ..ಕುಂ ಬುಬಾ....ಹೋಂಲಿ ಹೋಂ ಕುಮ್‌ಬೀ..."

ಎಲ್ಲೆಲ್ಲೂ ಹಾಹಾಕಾರ. ಇಲ್ಲಿಯವರೆಗೆ ಬಾಗಿ ಬೆಂಡಾಗಿದ್ದ ಬೆನ್ನುಗಳು ನೇರವಾದವು. ಬೆನ್ನ ಹುರಿ ನೇರಾಗಿ ಸೆಟೆಸಿ ನಿಂತರು ಅವರು; ಹಾರಬಲ್ಲ, ಇದುವರೆಗೂ ಜೀತದಾಳುಗಳು ಎಂದೆನಿಕೊಂಡ ಅವರು ಎದ್ದು ನೇರವಾಗಿ ನಿಂತರು. ಅವರೆಲ್ಲರ ಕೈ ಬೆಸೆದುಕೊಂಡವು. ಬೆಸೆದ ಕೈಗಳಿಂದ ವೃತ್ತವೊಂದನ್ನು ರಚಿಸಿ ಹಾಡಲಾರಂಭಿಸುವರೇನೋ ಎನಿಸಿತು. ಆದರವರು ಹಾಡಲಿಲ್ಲ. ನಿಂತ ನಿಲುವಿನಲ್ಲಿ ಗಾಳಿ ಏರಿದರು. ಅಲೌಕಿಕವಾದ ಭವ್ಯ ನೀಲಿ ಸ್ವಚ್ಛಂದ ಆಕಾಶದ ಹಿನ್ನೆಲೆಯಲ್ಲಿ ಹಿಂಡು ಹಿಂಡಾಗಿ ಹಾರಿದರು. ಮಿರುಗು ಕಪ್ಪು ಹಕ್ಕಿಗಳಂತೆ....ಕಪ್ಪು ನೆರಳುಗಳಂತೆ!

ನೆಲದ ಗಡಿ ಮೀರಿ ಹಾರಿದರು, ಲೋಕದ್ಯಾವ ಪರಿವೆಯೇ ಇರದೆ ಹಾರಿದರು. ಕಾನಿನ ಮೇಲೆತ್ತರಕ್ಕೆ, ಜೀತದ ನಾಡಿನ ಗಡಿ ದಾಟಿ; ಜೀತದ ಸಂಕೋಲೆಯ ಹರಿದು ಹಾರಿದರು; ತಮ್ಮ ಸ್ವತಂತ್ರ ಗೂಡಿನೆಡೆಗೆ. ವೃದ್ಧ ಟೋಬಿ – ಅಜ್ಜ ಟೋಬಿ ಅವರೆಲ್ಲರ ಹಿಂದೆ ಹಾರಿದ, ಅವರೆಲ್ಲರ ರಕ್ಷಕನಾಗಿ– ಅವರ ಮೇಲ್ವಿಚಾರಕನಾಗಿ. ಈಗವನು ನಗುತ್ತಲೂ ಇರಲಿಲ್ಲ, ಅಳುತ್ತಲೂ ಇರಲಿಲ್ಲ. ಅವನ ದೃಷ್ಟಿ ಕೆಳಗೆ ಕಾನಿನಲ್ಲಿ ಉಳಿದ, ಹಾರಲಾರದೆ ನಿಂತಿದ್ದ ಜೀತದಾಳುಗಳ ಮೇಲಿತ್ತು.

"ನಮ್ಮನ್ನೂ ನಿನ್ನ ಜೊತೆಗೆ ಕರೆದೊಯ್ಯಿ." ಅವರ ಕಣ್ಣುಗಳಲ್ಲಿ ಆ ಕೂಗಿತ್ತು. ಆ ಕೂಗು ಬಾಯಿಂದ ಆಚೆ ಬರಲಾರದೆ ಗಂಟಲಲ್ಲೇ ಉಡುಗಿತ್ತು, ಶಿಕ್ಷೆಗೆ ಹೆದರಿ. ಅಜ್ಜ ಟೋಬಿಗೆ ಅವರನ್ನೆಲ್ಲರನ್ನು ಜೊತೆಗೆ ಕರೆದೊಯ್ಯಲು ಆಗಲಿಲ್ಲ. ಅವರಿಗೆಲ್ಲಾ ಜಾದೂ ಕಲಿಸಲು ಅವನಿಗೆ ಸಮಯ ಇರಲಿಲ್ಲ. ಅವರೆಲ್ಲಾ ಅವರವರ ಸರದಿಗಾಗಿ, ಅವಕಾಶಕ್ಕಾಗಿ ಕಾಯಬೇಕಿತ್ತು.

"ವಿದಾಯ" ಎಂದು ಹೇಳಿ ಅಜ್ಜ ಟೋಬಿ ಹಾರಿ ಹೋದ. ಹಾರಲಾರದೆ ಜೀತದ ನೆಲದಲ್ಲೇ ಉಳಿದ ಪಾಪದ ಜನ ಅವರೆಲ್ಲಾ ಹಾರಿ ಹೋದ ದಿಕ್ಕನ್ನೇ ನೋಡುತ್ತಾ ನಿಂತಿದ್ದರು. ನಂಬಲೂ ಆಗದೆ, ನಂಬದೆ ಇರಲೂ ಆಗದೆ ಮೇಲ್ವಿಚಾರಕನೆಂದ "ಹಾರಿ

ಹೋದರು...ಹಾಗೆನ್ನುತ್ತಾರೆ." ಜೀತದಾಳುಗಳ ಮಾಲೀಕ "ಇದೆಲ್ಲಾ ಸುಳ್ಳು, ಕಣ್ಣುಕಟ್ಟು, ತಂತ್ರ" ಎಂದ. ಚಾಟಿ ಚಾಲಕ ಯಾವ ಮಾತೂ ಆಡದೆ ಗಪ್ಪಂತ ತೆಪ್ಪಗಿದ್ದ.

ಹಾರಲಾರದೆ ಜೀತದ ನಾಡಿನಲ್ಲೇ ಉಳಿದುಹೋದ ಜೀತದಾಳುಗಳು ಅವರ ಮಕ್ಕಳಿಗೆ, ಅವರು ಅವರ ಮಕ್ಕಳಿಗೆ, ಅವರ ಮಕ್ಕಳು ಅವರವರ ಮಕ್ಕಳಿಗೆ......ಹೀಗೆ ತಲೆಮಾರುಗಳಿಂದ ತಲೆಮಾರಿಗೆ ಈ ಕಥೆ ಮುಟ್ಟಿಸಿದರು. ಮುಂದೊಂದು ದಿನ ಜೀತ ಮುಕ್ತರಾಗಿ ಸ್ವತಂತ್ರವಾಗಿ ತಮ್ಮ ಮನೆಗಳಲ್ಲಿ ಕುಳಿತು, ಅವರ ಮುಂದಿನ ಪೀಳಿಗೆಯ ತಂತಮ್ಮ ಮಕ್ಕಳಿಗೆ ಪ್ರೀತಿಯಿಂದ ತಮ್ಮ ಪೂರ್ವಜರು ಜೀತದ ಸಂಕೋಲೆ ಬಿಡಿಸಿಕೊಂಡು ಜೀತಮುಕ್ತರಾದ ಈ ಸ್ವಾತಂತ್ರ್ಯದ ಕಥೆಯನ್ನು ಹೇಳಿದರು. ಹೀಗೆ ಬಾಯಿಂದ ಬಾಯಿಗೆ ಹರಿದು ಬಂದ ಈ ಕಥೆಯನ್ನು ಈಗ ನಾನು ನಿಮಗೆ ಹೇಳಿದೆ.

ಟಿಪ್ಪಣಿ

ಅದುಮಿಟ್ಟ ಜೀವ ಯಾವಾಗಲೂ ಅಲ್ಲಿಂದ ಹಾರಿ ಹೋಗುವ ಕನಸನ್ನು ಕಾಣುತ್ತಿರುತ್ತದೆ. ಆ ಕನಸಿಗೆ ಕಲ್ಪನೆಯ ರೆಕ್ಕೆಯೊಡೆದು, ಗಾಯಗೊಂಡ ಚೇತನಕ್ಕೆ ಮುಲಾಮು ಹಚ್ಚಿದಂತೆ ಆಫ್ರಿಕನ್ ಅಮೆರಿಕನ್ನರ ಹಲವಾರು ಜನಪದ ಕಥೆಗಳಿಗೆ ಹುಟ್ಟಾಗಿ, ಮೂಲ ವಸ್ತುವಾಗಿವೆ. ತನ್ನ ಜಾಣತನ ಮೆರೆದು ದಬ್ಬಾಳಿಕೆಯ ಬಿಳೀ ಮಾಲೀಕರಿಂದ ಸ್ವಾತಂತ್ರ್ಯ ಗಿಟ್ಟಿಸಿಕೊಳ್ಳುವವ, ಜಾದೂ ಮಾಡಿ ಮಾಲೀಕನನ್ನು ಒಲಿಸಿಕೊಂಡವ, ಹರ ಸಾಹಸ ಮಾಡಿ ಕಾನಿನ ಮೇಲ್ವಿಚಾರಕನ ಕಣ್ಣು ತಪ್ಪಿಸಿ ಓಡಿಹೋಗಿ ಬದುಕು ಕಟ್ಟಿಕೊಂಡವರು, ಜೀತದ ಉರುಳನ್ನು ತಪ್ಪಿಸಿಕೊಳ್ಳಹೊರಟವರಿಗೆ ತಮ್ಮ ತಮ್ಮ ಕೊರಳನ್ನು ಒತ್ತೆ ಇಟ್ಟು ಸಹಾಯ ಮಾಡಿದವರು, ಇವರೆಲ್ಲಾ ಈ ಕಥೆಗಳಲ್ಲಿನ ಪಾತ್ರಧಾರಿಗಳು. ಈ ಗುಂಪಿಗೆ ಸೇರಿದ ಎಲ್ಲಾ ಕಥೆಗಳ ಜೀವ ದ್ರವ್ಯ: ಜೀತದ ಗಡಿ ದಾಟಿ ಸ್ವಾತಂತ್ರ್ಯದೆಡೆ ಹಾರಿ ಹೋಗುವ ಹಂಬಲ. ಹಾರುವ ಗಳಿಗೆಗಳಿಗಾಗಿ ಕಾಯುವ ಆಶಯ.

ಅಂತಹದೇ ಒಂದು ಜನಪದ ಕಥೆ 'ಹಾರಿ ಹೋದವರು.' ತಲೆಮಾರಿನಿಂದ ತಲೆಮಾರಿಗೆ ರವಾನಿಸಲ್ಪಟ್ಟ ಈ ಜನಪದ ಕಥೆಯ ಧ್ವನಿ, ನಮ್ಮಲ್ಲಿ ನಿಜಕ್ಕೂ ಜನರು ಹಾರಬಲ್ಲರು; ಹೌದು ಆಗಸದಲ್ಲಿ ಹಾರಿದರು ಕೂಡ, ಎಂಬ ದೃಶ್ಯ ನಮ್ಮ ಕಣ್ಮುಂದೆ ಮೈದಾಳಿ, ಮನಸ್ಸನ್ನು ನಂಬಿಸಿ ಸಮಾಧಾನದ ನಿಟ್ಟುಸಿರು ಸರಾಗವಾಗಿ ಹೊರಬರುವಂತೆ ಮಾಡುತ್ತದೆ. ಈ ಕಥೆಯ ಜಾದೂ ಎಂತಹದೆಂದರೆ, ನಮ್ಮ ಪಕ್ಕೆಗಳಿಂದ ರೆಕ್ಕೆ ಮೂಡಿ ನಾವೂ ಆಕಾಶ ಏರಿ, ಗಿರಿ-ಗಹ್ವರ-ಕಾನುಗಳ ಮೇಲೆ ಒಲಫ್ಯೂಮಿಯ ಹಿಂದಾಗಿ, ಟೋಬಿ ಅಜ್ಜನ ಮುಂದಾಗಿ ಹಾರಿದಂತೆನಿಸುವುದು.

ಮೂಲ ಎಲ್ಲಿಯದೆಂದು ಗೊತ್ತಿಲ್ಲದೇ ಹೆಸರು ಏನೆಂದು ತಿಳಿಯದೇ ಎಂದೋ ಕೇಳಿ ಮೆಚ್ಚಿದ್ದ ಹಾಗು ನನ್ನಲ್ಲಿ ಉಳಿದಿದ್ದ ಈ ಕಥೆ ಮತ್ತೆ ಪ್ರಕಟಿತ ರೂಪವಾಗಿ ಪುಸ್ತಕವೊಂದರಲ್ಲಿ ದೊರೆತಿದ್ದು ಅಚಾನಕ ಮತ್ತು ಸುಹೃದ್ಯ.

ಆಧಾರ

* **ಪುಸ್ತಕದ ಹೆಸರು:** 'ದ ಪೀಪಲ್ ಕುಡ್ ಫ್ಲೈ', : ವರ್ಜೀನಿಯ ಹ್ಯಾಮಿಲ್ಟನ್. ❑

೯

'ಎಸ್ಕಿಮೊ' ಅಲ್ಲ, ಇವರು 'ಇನ್ಯುಯಿಟ್ಸ್!'

ತ್ರಿವೇಣಿ ಶ್ರೀನಿವಾಸರಾವ್
ಆರೋರ, ಇಲಿನಾಯ್

*

'ಎಸ್ಕಿಮೊ'ಗಳೆಂದು ಚಿರಪರಿಚಿತವಾಗಿರುವ ಈ ಜನಾಂಗ 'ಇನ್ಯುಯಿಟ್'ಗಳೆಂದು ಪುನರ್ನಾಮಕರಣಕ್ಕೆ ಒಳಗಾಗಿದೆ. ಯಾಕೆಂದರೆ, 'ಎಸ್ಕಿಮೊ' ಎಂಬ ಪದವನ್ನು ಈಗ ಬಳಸುವಂತಿಲ್ಲ. ಇದು ಅವಹೇಳನಕಾರಿ ಶಬ್ದವಾಗಿದ್ದು 'ಹಸಿಮಾಂಸ ಭಕ್ಷಕ' ಎಂಬ ಅರ್ಥ ಈ ಪದಕ್ಕಿದೆ. ಆ ಹೆಸರಿನಿಂದ ಇವರನ್ನು ಕೆನಡಾದ 'ಆಲ್ಗೋಂಕ್ವಿನ್ ಇಂಡಿಯನ್ನರು' ಕರೆಯುತ್ತಿದ್ದರಂತೆ. ಈಗ 'ಇನ್ಯುಯಿಟ್' ಎಂದು ಕರೆಯುವುದು ಬಳಕೆಯಲ್ಲಿದೆ. 'ಅಮೆರಿಕನ್ ಎಸ್ಕಿಮೊ'ಗಳಿಗೆ ಇನ್ಯುಯಿಟ್ಗಳೆಂದೂ ಏಷ್ಯನ್ ಎಸ್ಕಿಮೊಗಳಿಗೆ ಯುಯಿಟ್ಗಳೆಂದೂ ಹೆಸರು. 'ಇನ್ಯುಯಿಟ್' ಅಥವಾ 'ಯುಯಿಟ್' ಎಂದರೆ ಮನುಷ್ಯ ಎಂದು ಅರ್ಥ.

ಪೂರ್ವದಲ್ಲಿ ಗ್ರೀನ್ ಲ್ಯಾಂಡ್ ಮತ್ತು 'ಲ್ಯಾಬ್ರಡಾರ್'ಗಳಿಂದ ಹಿಡಿದು ಪಶ್ಚಿಮದಲ್ಲಿ ಬೇರಿಂಗ್ ಸಮುದ್ರದವರೆಗೂ 'ಇನ್ಯುಯಿಟ್' ಜನಾಂಗ ಪಸರಿಸಿದೆ. ಹಡ್ಸನ್ ಕೊಲ್ಲಿ ಮತ್ತು ದಕ್ಷಿಣ ಅಲಾಸ್ಕದ ಮೂಲನಿವಾಸಿಗಳಾದ ಇವರು ಕಾಲಕ್ರಮದಲ್ಲಿ ಪೂರ್ವ ಮತ್ತು ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ಹಬ್ಬಿದರು. ಹಡ್ಸನ್ ಕೊಲ್ಲಿ, ಬಾಫಿನ್ ಕೊಲ್ಲಿ ಮತ್ತು ಆರ್ಕ್‌ಟಿಕ್ ಮಹಾಸಾಗರದ ನಡುವೆ ಇರುವ ದೊಡ್ಡ ಅಮೆರಿಕದ ದ್ವೀಪದಲ್ಲಿ ಇನ್ಯುಯಿಟ್ಸ್ ವಾಸಿಸುತ್ತಾರೆ. ಪ್ರಪಂಚ ಜನಾಂಗಗಳ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಈ ಜನರ ಸಂಸ್ಕೃತಿ, ಭಾಷೆ ಮತ್ತು ಭೌತಿಕ ಲಕ್ಷಣಗಳು ಇತ್ತೀಚಿನವರೆಗೂ ಈ ವಿಸ್ತಾರ ಪ್ರದೇಶದ ಉದ್ದಕ್ಕೂ ಒಂದೇ ರೀತಿಯಾಗಿದ್ದವು. ಇಷ್ಟೊಂದು ವಿಸ್ತಾರವಾದ ಭೂಪ್ರದೇಶವನ್ನು ಇವರು ಆವರಿಸಿಕೊಂಡಿದ್ದರೂ ಇವರ ಸಂಖ್ಯೆ ಅರುವತ್ತು ಸಾವಿರವನ್ನೂ ಮೀರಿಲ್ಲದಿರುವುದು ಆಶ್ಚರ್ಯಕರ. ಯಾವ ಕಾಲದಲ್ಲೂ ಇವರ ಸಂಖ್ಯೆ ಇದಕ್ಕಿಂತ ಹೆಚ್ಚಿರಲಿಲ್ಲವೆಂದು ಹೇಳಲಾಗಿದೆ. ಇತರ ಭೂಭಾಗಗಳ ಜನರಿಂದ ಬಳುವಳಿಯಾಗಿ ಬಂದ ಸಿಡುಬು,

ದಡಾರ, ಇನ್ಫ್ಲುಯೆಂಝಾಗಳಿಂದ ಬಹಳ ಮರಣಗಳು ಸಂಭವಿಸಿದವು. ಈಗ ಅವರ ಜನಸಂಖ್ಯೆ ಹೆಚ್ಚುತ್ತಿದೆ.

ಇಗ್ಲೂ – ಇದು 'ಇನ್ಯುಯಿಟ್ಸ್' ನಿವಾಸ

ಇನ್ಯುಯಿಟ್ಸ್ ವಾಸ ಮಾಡುವ ಮನೆಗಳು ವಿಶಿಷ್ಟವಾಗಿರುತ್ತವೆ. ಬೇಸಗೆಯಲ್ಲಿ 'ಸೀಲ್' ಅಥವಾ ಜಿಂಕೆಯ ಚರ್ಮದ ಗುಡಾರಗಳಲ್ಲಿ ಇವರ ವಾಸ. ಆದರೆ ಇವರ ಚಳಿಗಾಲದ ಮನೆಗಳು ಬಗೆಬಗೆಯಾಗಿರುತ್ತವೆ. ಪಶ್ಚಿಮ ಆರ್ಕಟಿಕ್ ಪ್ರದೇಶದಲ್ಲಿರುವ ನದಿಗಳು ತಮ್ಮ ಪ್ರವಾಹದಲ್ಲಿ ಮರದ ದಿಮ್ಮಿಗಳನ್ನು ಹೊತ್ತು ತರುವುದರಿಂದ, ಅಲ್ಲಿನ ಇನ್ಯುಯಿಟ್ಸ್ ಅವನ್ನು ಉಪಯೋಗಿಸಿಕೊಂಡು ಮರದ ಹಲಗೆಗಳಿಂದ ಮನೆಗಳನ್ನು ಕಟ್ಟಿಕೊಂಡು ಅವುಗಳ ಚಾವಣಿಗಳ ಮೇಲೆ ಹುಲ್ಲು ಬೆಳೆಸುತ್ತಾರೆ. ಮರದ ದಿಮ್ಮಿಗಳು ದೊರಕದೆ ಇರುವ ಪ್ರದೇಶದಲ್ಲಿ ಕಲ್ಲಿನಿಂದ ಮನೆ ಕಟ್ಟಿ ತಿಮಿಂಗಿಲದ ಮೂಳೆಗಳಿಂದ ಮೇಲ್ಛಾವಣಿ ನಿರ್ಮಿಸುತ್ತಾರೆ. ಕೆನಡಾದ ಇನ್ಯುಯಿಟ್ಸ್, ಗಟ್ಟಿಯಾದ ಮಂಜಿನ ಗಡ್ಡೆಯ ತುಂಡುಗಳನ್ನು ಇಟ್ಟಿಗೆಗಳಂತೆ ಒಂದರ ಮೇಲೊಂದು ಇಟ್ಟು ಗೋಳಾಕಾರದ ಮನೆಗಳನ್ನು ನಿರ್ಮಿಸುತ್ತಾರೆ. ಇದಕ್ಕೆ 'ಇಗ್ಲೂ' ಎಂದು ಹೆಸರು. ನೆಲಕ್ಕೆ ಹಿಮಸಾರಂಗದ ಚರ್ಮ ಹಾಸುವುದರಿಂದ ಬೆಚ್ಚಗಿರುತ್ತದೆ. ಬೇಸಗೆಯಲ್ಲಿ ಮಂಜು ಕರಗಿ ಹರಿದ ಪ್ರವಾಹ ಮನೆಯೊಳಗೆ ನುಗ್ಗುವ ಮುನ್ನವೇ ಇದನ್ನು ಬಿಟ್ಟು ಚರ್ಮದ ಗುಡಾರಕ್ಕೆ ಹೊರಟುಹೋಗುತ್ತಾರೆ. ಪ್ರಾಣಿಯ ಕೊಬ್ಬನ್ನೋ ಯಾವುದಾದರೂ ಇಂಧನದ ಕಲ್ಲನ್ನೋ ಉರಿಸಿ ದೀಪ ಮಾಡಿಕೊಳ್ಳಲಾಗುತ್ತದೆ. ಆಹಾರ ಬೇಯಿಸಲೂ ಇದು ಉಪಯುಕ್ತ.

ಉಡುಗೆ–ತೊಡುಗೆ

ಸಾಮಾನ್ಯವಾಗಿ, ಬೇಸಗೆಯಲ್ಲಿ ಅವರು ಸೀಲ್ ಮತ್ತು ಮೀನಿನ ಚರ್ಮದಿಂದ ಬಟ್ಟೆಗಳನ್ನು ಮಾಡಿಕೊಳ್ಳುತ್ತಾರೆ. ಚಳಿಗಾಲದಲ್ಲಿ ಶೀತದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ದಪ್ಪನೆಯ ಜಿಂಕೆಯ ಚರ್ಮದ ಅಥವಾ 'ಕ್ಯಾರಿಬೂ' ಪ್ರಾಣಿಯ ತುಪ್ಪಳದಿಂದ ಸಿದ್ಧಪಡಿಸಿದ ಉಡುಗೆಗಳನ್ನು ಧರಿಸುತ್ತಾರೆ. ಚಲ್ಲಣ, ಮೇಲಂಗಿ, ಟೋಪಿ ಮತ್ತು ಪಾದರಕ್ಷೆ – ಇವು 'ಇನ್ಯುಯಿಟ್'ಗಳ ಸಾಮಾನ್ಯ ಉಡುಗೆ. ಸ್ತ್ರೀ ಪುರುಷರಿಗೆ ಉಡುಗೆ ತೊಡುಗೆಯಲ್ಲಿ ಹೆಚ್ಚು ವ್ಯತ್ಯಾಸವೇನೂ ಕಾಣಬರುವುದಿಲ್ಲ. ಸ್ತ್ರೀಯರ ಉಡುಪನ್ನು ಪುರುಷರ ಉಡುಪಿಗಿಂತ ಸ್ವಲ್ಪ ಭಿನ್ನವಾದ ವಿನ್ಯಾಸದಲ್ಲಿ ಹೊಲಿಯಲಾಗಿರುತ್ತದೆ ಅಷ್ಟೆ. ದಿರಿಸಿಗೆ ಒಂದರ ಮೇಲೊಂದರಂತೆ ತುಪ್ಪಳಗಳ ಎರಡು ಪದರಗಳಿರುತ್ತವೆ. ಶರೀರದ ಶಾಖವನ್ನು ಕಾಪಾಡಿಕೊಳ್ಳಲು ಇದು ಒಳ್ಳೆಯ ಮಾರ್ಗ. ಮೊದಲನೆಯ ಪದರದಲ್ಲಿ ತುಪ್ಪಳದ ಭಾಗ ಮೈಗೆ ಅಂಟಿಕೊಂಡಂತೆಯೂ, ಎರಡನೆಯ ಪದರದಲ್ಲಿ ತುಪ್ಪಳದ ಭಾಗ ಹೊರಭಾಗಕ್ಕೆ ಬರುವಂತೆಯೂ ಹೊಲಿದಿರುತ್ತಾರೆ. ಆಭರಣ ಧರಿಸುವುದನ್ನು, ಅದಕ್ಕಿಂತ ಹೆಚ್ಚಾಗಿ ತಮ್ಮ ಮುಖಕ್ಕೆ ಹಚ್ಚೆ ಹುಯ್ಯಿಸಿಕೊಳ್ಳುವುದನ್ನು ಹೆಂಗಸರು ಬಹಳ ಇಷ್ಟಪಡುತ್ತಾರೆ.

ಜೀವನ ವಿಧಾನ

ಭೌಗೋಳಿಕ ಅಂಶಗಳು ಮಾನವನ ಜನಜೀವನವನ್ನು ಹೇಗೆ ರೂಪಿಸುತ್ತವೆ ಎಂಬುದಕ್ಕೆ ಇನ್ಯುಯಿಟ್ಸ್ ಉತ್ತಮ ನಿದರ್ಶನ. ಇವರು ವರ್ಷದ ಮುಕ್ಕಾಲು ಪಾಲು ಹಿಮದಲ್ಲೇ ವಾಸಿಸುವ ಛಲಗಾರರು, ಕುಶಲಮತಿಗಳು. ಇಲ್ಲಿನ ಪರಿಸರಕ್ಕೆ ತಕ್ಕಂತೆ ಇವರು ಅಶನ, ವಸನ, ವಸತಿಗಳನ್ನು ಹೊಂದಿಸಿಕೊಳ್ಳುವುದು ಅನಿವಾರ್ಯ. ವ್ಯವಸಾಯವನ್ನು ನಂಬಿ ಜೀವಿಸಲು ಸಾಧ್ಯವಿಲ್ಲ. ಹಿಮ ಸಾರಂಗ (ರೇಯ್ನ್ ಡಿಯರ್), ಸೀಲ್, ಕರಡಿ, ತಿಮಿಂಗಿಲ ಮತ್ತು ಕಡಲುಸಿಂಹ (ವಾಲ್ರಸ್)ಗಳಿಂದ ಪಡೆಯುವ ಮಾಂಸವನ್ನು ಸಂಪೂರ್ಣವಾಗಿ ಜೀವನ ನಿರ್ವಹಣೆಗೆ ಅವಲಂಬಿಸಬೇಕಾಗುತ್ತದೆ. ಬೆಂಕಿ ಸಿಗದಾಗ ಇವರು ಒಣಗಿದ ಅಥವಾ ಹಿಮದಲ್ಲಿ ಹೆಪ್ಪುಗಟ್ಟಿಸಿದ ಆಹಾರವನ್ನು ತಿನ್ನುತ್ತಾರೆ. ಅನಿವಾರ್ಯವಾದಾಗ ಮಾತ್ರ, ಇಷ್ಟವಿಲ್ಲದಿದ್ದರೂ ಹಸಿಮಾಂಸ ಭಕ್ಷಿಸಬೇಕಾಗುತ್ತದೆ.

ಈ ಪ್ರಾಣಿಗಳನ್ನು ಬೇಟೆಯಾಡುವುದು ಇವರ ಮುಖ್ಯ ಕಸುಬು. ಎರಡು ಹಲಗೆಗಳನ್ನು ಸೇರಿಸಿ ರಚಿಸಿದ ಕಯಾಕ್ ಎಂಬ ದೋಣಿಯಲ್ಲಿ ಕುಳಿತು ಇವರು ಜಲಚರಗಳನ್ನು ಹಿಡಿಯುತ್ತಾರೆ. ಸೀಲ್ ದ್ವಿಚರ ಪ್ರಾಣಿ. ಅದು ತಾನು ಬೇಟೆಯಾಡಲು ನೀರಿಗಿಳಿದಿದ್ದಾಗ, ಉಸಿರಾಡಲು ತಲೆಯೆತ್ತುವುದನ್ನೇ ಇವರು ಕಾಯುತ್ತಿದ್ದು ಅದರ ಮೇಲೆ ಮೊನಚಾದ ಆಯುಧ ಎಸೆದು ಅದನ್ನು ಕೊಲ್ಲುತ್ತಾರೆ. ಈ ಮೊನಚಾದ ಆಯುಧಗಳು ಹೆಪ್ಪುಗಟ್ಟಿದ ನೀರಿನಲ್ಲಿ ಹೂತುಹೋಗದಿರುವಂತೆ ಅವುಗಳಿಗೆ ಗಾಳಿ ತುಂಬಿದ ಸಣ್ಣ ಸಣ್ಣ ಚರ್ಮದ ಚೀಲಗಳನ್ನು ಕಟ್ಟಿರುತ್ತಾರೆ. ಚಳಿಗಾಲದಲ್ಲಿ ಹತ್ತಾರು ಸಂಸಾರಗಳ ಜನ ಒಂದೆಡೆ ಸೇರಿ ಬೇಟೆಯಾಡುವುದೂ, ವಸಂತ ಋತುವಿನಲ್ಲಿ ಪ್ರಾಣಿಗಳನ್ನು ಹುಡುಕಿಕೊಂಡು ದೂರ ಹೋಗುವುದೂ ಇವರ ಅಭ್ಯಾಸ. ಚದುರಿದ್ದ ಸಂಸಾರಗಳೆಲ್ಲ ಚಳಿಗಾಲ ಬರುವುದರೊಳಗಾಗಿ ಒಂದುಗೂಡುತ್ತವೆ. ಪ್ರತಿ ವರ್ಷವೂ ಇವರದು ಇದೇ ಪರಿಪಾಠ. ಭೂಮಿಯ ಮೇಲಿನ ಪ್ರಾಣಿಗಳನ್ನು ಬೇಟೆಯಾಡಲು ಬಿಲ್ಲು, ಬಾಣ ಮತ್ತು ಚರ್ಮದ ಬಲೆಗಳನ್ನು ಉಪಯೋಗಿಸುತ್ತಾರೆ. ಬೇಟೆಯ ಕಾಲದಲ್ಲಿ ಜೊತೆಯಲ್ಲಿ ಬರುವ ನಾಯಿಗಳು ನೆಲದಲ್ಲಿ ಹೂತುಕೊಂಡ ಪ್ರಾಣಿಗಳನ್ನು ಹುಡುಕಲು ಬಹಳ ಸಹಾಯ-ಮಾಡುತ್ತವೆ.

ಕಠಿಣವಾದ ಹವಾಮಾನದಿಂದಾಗಿ ಅವರ ಜೀವನವು ಕಷ್ಟಕರವಾಗಿರುತ್ತದೆ, ಅವರದ್ದೇ ಆದ ಮೂಢನಂಬಿಕೆಗಳಿಂದ ಜೀವನವನ್ನು ಮತ್ತಷ್ಟು ಕಷ್ಟ ಮಾಡಿಕೊಂಡಿದ್ದಾರೆ. ಮಾಟ ಮಂತ್ರಗಳಿಂದ ರೋಗಗಳು ಗುಣವಾಗುವುದೆಂದು ನಂಬುತ್ತಾರೆ. ಬೇಟೆ, ಮೀನುಗಾರಿಕೆ, ಅಡುಗೆ ಅಥವಾ ಬಟ್ಟೆಯ ವಿಧಾನ ಎಲ್ಲವೂ ನಿಗದಿತ ರೀತಿಯಲ್ಲಿಯೇ ಇರಬೇಕು ಎನ್ನುವ ಕಟ್ಟುನಿಟ್ಟಿನ ನಿಯಮಗಳಿವೆ.

ಸಾಮಾಜಿಕ ಪದ್ಧತಿ

ಇನ್ಯುಯಿಟ್ಸರಲ್ಲಿ ಸುವ್ಯವಸ್ಥಿತ ಸಾಮಾಜಿಕ ಪದ್ಧತಿಗಳೇನೂ ಇದ್ದಂತೆ ಕಾಣಬರುವುದಿಲ್ಲ. ಬಲಿಷ್ಠ ವ್ಯಕ್ತಿಯನ್ನು ಹಳ್ಳಿಯ ಮುಖಂಡನೆಂದು ಪರಿಗಣಿಸುತ್ತಿದ್ದರೂ ಅವನ ಮಾತಿಗೆ

ಅಷ್ಟೇನೂ ಬೆಲೆಯಿರುತ್ತಿರಲಿಲ್ಲ. ಹಳ್ಳಿಯ ಭೂಮಿ ಎಲ್ಲರಿಗೂ ಸೇರಿತ್ತು. ಏಕಸ್ವಾಮ್ಯವಿರಲಿಲ್ಲ. ಯಾವನಾದರೂ ಒಬ್ಬನಿಗೆ ಒಂದು ದಿನ ಬೇಟೆ ಸಿಗದಿದ್ದರೆ ಅವನಿಗೂ ಅವನ ಸಂಸಾರಕ್ಕೂ ಆಹಾರ ಒದಗಿಸುವುದು ಇತರರ ಕರ್ತವ್ಯವಾಗಿತ್ತು. ಬೇಟೆ ಮತ್ತು ಮೀನುಗಾರಿಕೆ ಪುರುಷರ ಮುಖ್ಯ ಕೆಲಸ. ಅಡುಗೆ ಮಾಡುವುದೂ ಬಟ್ಟೆ ಹೊಲಿಯುವುದೂ ಸ್ತ್ರೀಯರ ಕರ್ತವ್ಯ. ಈ ಶ್ರಮ ವಿಭಜನೆಯಿಂದಾಗಿ ಪರಸ್ಪರ ಅವಲಂಬನೆ ಅನಿವಾರ್ಯವಾಗಿತ್ತು. ಆದ್ದರಿಂದ ವಿಧುರರೂ ವಿಧವೆಯರೂ ಮದುವೆಯಾಗುತ್ತಿದ್ದರು. ಮದುವೆಯ ಚೌಕಟ್ಟಿನೊಳಗೆ ಏಕಪತಿತ್ವ ಮತ್ತು ಏಕಪತ್ನಿತ್ವವೇ ಮಾನ್ಯವಾಗಿತ್ತು. ವೃದ್ಧರನ್ನೂ ಅನಾಥರನ್ನೂ ಅವರ ಬಂಧುಗಳು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಇವರು ಶಾಂತಿಪ್ರಿಯರು, ವಿಧೇಯರು, ಸತ್ಯಸಂಧರು, ಕಷ್ಟಸಹಿಷ್ಣುಗಳು. ವಿರಾಮ ಕಾಲದಲ್ಲಿ ಸಂಗೀತ, ನೃತ್ಯ ಹಾಗೂ ಮನೋರಂಜನೆಯ ಆಟಗಳಲ್ಲಿ ನಿರತರಾಗುತ್ತಿದ್ದರು.

ಧಾರ್ಮಿಕ

ಬಹಳಷ್ಟು ಜನ ಕ್ರೈಸ್ತರಾಗಿದ್ದಾರಾದರೂ ಇವರು ತಮ್ಮ ಹಳೆಯ ಮತೀಯ ನಂಬಿಕೆಗಳನ್ನು ಉಳಿಸಿಕೊಂಡಿದ್ದಾರೆ. ಇವು ಅಮೆರಿಕನ್ ಇಂಡಿಯನ್ ಜನರ ನಂಬಿಕೆಗಳನ್ನು ಹೋಲುತ್ತವೆ. ಜೀವ-ನಿರ್ಜೀವ ವಸ್ತುಗಳಲ್ಲೆಲ್ಲ ಆತ್ಮನಿರುತ್ತಾನೆಂಬುದು ಇವರ ಮುಖ್ಯ ನಂಬಿಕೆ. 'ತೋನರ್ಸುಕ್' ಶ್ರೇಷ್ಠ ದೇವತೆ. ಇವನ ಆಶ್ರಯದಲ್ಲಿ 'ತೋನರ್ಸ್ತ್' ಎಂಬ ಇತರ ಅಧಿದೇವತೆಗಳಿರುತ್ತಾರೆ. ಆಹಾರಗಳನ್ನು ಕೊಡುವ ಸ್ತ್ರೀ ದೇವತೆಯಾದ 'ಸೆಡ್ನ' ಸಮುದ್ರದಲ್ಲಿ ವಾಸಿಸುತ್ತಾಳೆಂದು ನಂಬಿಕೆ. 'ಈ ದೇವತೆ ಸಮುದ್ರದಲ್ಲಿ ಅಲೆಗಳನ್ನು ಸೃಷ್ಟಿಸುತ್ತಾಳೆ. ಕುಲದ ಕಟ್ಟಳೆಗಳನ್ನು ಮುರಿದವರಿಗೆ ಬೇಟೆಯಲ್ಲಿ ಸಮುದ್ರ ಪ್ರಾಣಿಗಳು ಸಿಗದಂತೆ ಮಾಡುವವಳು. ಸಮುದ್ರ ಪ್ರಾಣಿಗಳೆಲ್ಲ ಈಕೆಯ ಕೈಬೆರಳುಗಳು. ಆದ್ದರಿಂದ ಈ ಸಮುದ್ರದೇವತೆಯ ಕೋಪಕ್ಕೆ ಯಾರೂ ಗುರಿಯಾಗದಂತೆ ನೋಡಿಕೊಳ್ಳುವುದು ಪುರೋಹಿತ (ಅಂಗಕಾಕ್)ನ ಕರ್ತವ್ಯ.

ಇನ್ಯುಯಿಟ್‌ಗಳ ಕೆಲವು ಕುಲಗಳ ಜನ ಮನುಷ್ಯನ ದೇಹದಲ್ಲಿ ಎರಡು ಆತ್ಮಗಳಿವೆಯೆಂದು ಭಾವಿಸುತ್ತಾರೆ. ದೇಹಿಯ ಮರಣಾನಂತರ ಈ ಆತ್ಮಗಳಲ್ಲೊಂದು ಆಕಾಶಕ್ಕೋ ಪಾತಾಳಕ್ಕೋ ಹೋಗಿ ಅಲ್ಲಿ ವಾಸಿಸುವ ಇತರ ಆತ್ಮಗಳನ್ನು ಸೇರುತ್ತದೆ. ಮತ್ತೊಂದು ಆತ್ಮ ದೇಹದಲ್ಲಿಯೇ ಉಳಿದಿರುತ್ತದೆ: ಅಥವಾ ತಾತ್ಕಾಲಿಕವಾಗಿ ಇನ್ನೊಂದು ಎಳೆ ಮಗುವಿನ ಶರೀರಕ್ಕೆ ಹೋಗುತ್ತದೆ. ಕಣ್ಣಿಗೆ ಕಾಣುವ ಪ್ರತಿಯೊಂದು ವಸ್ತುವಿಗೂ ಒಬ್ಬ ದೇವತೆಯುಂಟು. ಅದರ ಸಹಾಯವಿಲ್ಲದೆ ಆ ವಸ್ತು ತಮಗೆ ದೊರೆಯಲಾರದೆಂಬುದು ನಂಬಿಕೆ. ಆದ್ದರಿಂದ ಪ್ರತಿಯೊಂದು ದೇವತೆಯನ್ನೂ ಒಂದಲ್ಲ ಒಂದು ಬಗೆಯಿಂದ ಸಂತುಷ್ಟಿಗೊಳಿಸುವುದೇ ಇವರ ಆದ್ಯ ಕರ್ತವ್ಯ. ಇದಕ್ಕಾಗಿ ಅವರು ಪುರೋಹಿತನ ನೆರವು ಪಡೆಯುತ್ತಿದ್ದರು. ಈತನಿಗೆ ದೇವತೆಗಳೊಡನೆ ಮಾತನಾಡುವ ಶಕ್ತಿಯಿದೆಯೆಂದು ನಂಬಲಾಗಿತ್ತು. ಆದ್ದರಿಂದ ಪುರೋಹಿತನಿಗೆ ಸಮಾಜದಲ್ಲಿ ಮುಖ್ಯ ಸ್ಥಾನವಿತ್ತು. ಈ

ಜನರನ್ನು ಕ್ರೈಸ್ತಧರ್ಮಕ್ಕೆ ಪರಿವರ್ತಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಹೀಗೆ ಪರಿವರ್ತನೆಯಾಗದವರು ತಮ್ಮ ಮತ ಧರ್ಮಗಳನ್ನು ಈಗಲೂ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ.

ಕಲೆ

ಪ್ರಾಚೀನ ಬೇರಿಂಗ್ ಸಮುದ್ರದ ಇನ್ಯುಯಿಟ್ಸ್ ಪ್ರಾಗಿತಿಹಾಸಕಾಲದಿಂದ ಉತ್ತಮ ಕಲಾಕೃತಿಗಳನ್ನು ಸೃಷ್ಟಿಸಿದ್ದಾರೆ. ಓಕ್ವಿಕ್, ಪುನಕ್, ಸೇಂಟ್ ಲಾರೆನ್ಸ್ ಮುಂತಾದ ಕಡೆಗಳಲ್ಲಿ ನಡೆದ ಉತ್ಖನನಗಳು ಈ ಕಲಾವಿಶೇಷಗಳನ್ನು ಬೆಳಕಿಗೆ ತಂದಿವೆ. ಈಟಿಗಾಳಗಳು, ಒರೆಯುವ ಆಯುಧಗಳು, ಚಾಕುಗಳ ಹಿಡಿಗಳು ಮತ್ತು ಮೀನು ಹಿಡಿಯಲು ಉಪಯೋಗಿಸುವ ಬೆಂಡುಗಳು – ಇವುಗಳ ಮೇಲೆ ವಿವಿಧ ಆಕಾರಗಳ ಕೆತ್ತನೆಯ ಕೆಲಸಗಳನ್ನು ಮಾಡಲಾಗಿದೆ. ಇವುಗಳಲ್ಲಿ ಕೆಲವು ವಿವಿಧ ಪ್ರಾಣಿಗಳ ಚಿತ್ರಗಳೆಂಬುದು ಸುಲಭವಾಗಿ ಗೊತ್ತಾಗುತ್ತದೆ. ದಂತದ ಈಟಿಗಾಳಗಳ ಮೇಲೆ ಕೆತ್ತಲಾಗಿರುವ ಪ್ರಾಣಿಗಳ ಚಿತ್ರಗಳು ಬಹು ನಾಜೂಕಾಗಿವೆ. ಈ ಕಾಲದ ಚಿತ್ರಗಳಲ್ಲಿ ಹಕ್ಕಿಗಳು ಹೆಚ್ಚಾಗಿ ಕಂಡುಬರುತ್ತವೆ.

ಅಲಾಸ್ಕ ಇನ್ಯುಯಿಟ್ಟರ ಉನ್ನತ ಮಟ್ಟದ ಕಲೆಯನ್ನು ನೃತ್ಯದಲ್ಲಿ ಬಳಸಲಾಗುವ ವಿವಿಧ ವರ್ಣಗಳ ಮುಖವಾಡಗಳಲ್ಲಿ ಕಾಣಬಹುದು. ಕ್ಯಾರಿಬೂ ಪ್ರಾಣಿಯ ಚರ್ಮವನ್ನು ಆಕಾರಕ್ಕೆ ತಕ್ಕಂತೆ ಕತ್ತರಿಸಿ, ವಿವಿಧ ಬಣ್ಣಗಳನ್ನೂ ಪಕ್ಷಿಯ ಗರಿಗಳನ್ನೂ ಬಳಸಿ ಮುಖವಾಡಗಳನ್ನು ತಯಾರಿಸುತ್ತಿದ್ದರು. ಮರದಿಂದ ಮಾಡಿದ ಮುಖವಾಡಗಳೂ ಬಳಕೆಯಲ್ಲಿದ್ದುವು. ಶಿಲ್ಪಗಳಲ್ಲಿ ಮುಖಲಕ್ಷಣಗಳೂ ಉಡುಗೆ ತೊಡುಗೆಗಳೂ ಅವರ ನಿಜಜೀವನವನ್ನು ಪ್ರತಿಬಿಂಬಿಸುತ್ತವೆಯೆಂಬುದು ಗಮನಾರ್ಹ. ಆದಿಮಾನವ ಕಲೆಯಲ್ಲಿ ಇನ್ಯುಯಿಟ್ಸ್ ಕಲೆಯ ಸ್ಥಾನ ವಿಶಿಷ್ಟವಾದದ್ದು.

ಸಾವು ಮತ್ತು ಅಂತ್ಯಕ್ರಿಯೆಗಳ ಸುತ್ತ

ಇನ್ಯುಯಿಟ್ ಜನರು ಬದುಕಿನ ಕೊನೆ ತಲುಪಿದ, ಅನುತ್ಪಾದಕರೆಂದು ಪರಿಗಣಿಸಲಾದ ವೃದ್ಧರನ್ನು ಹಿಮದ ಮೇಲೆ ಇರಲು ಬಿಟ್ಟು ಅಥವಾ ಮನೆಯಿಂದ ಹೊರಹಾಕಿ ಶೀತದಿಂದ ಸಾಯಗೊಡುತ್ತಾರೆ ಎಂಬ ಒಂದು ಸಾಮಾನ್ಯ ನಂಬಿಕೆ ಇಂದಿಗೂ ಜನಜನಿತವಾಗಿದೆ. ದುಡಿಯಲು ಅಶಕ್ತನಾದ ವೃದ್ಧನನ್ನು ಕಾಡಿಗೆ ಒಯ್ದು ಬಿಟ್ಟುಬರುವುದು ಅಥವಾ ವೃದ್ಧಾಪ್ಯದ ಬಾಧೆಯಿಂದ ಮುಕ್ತನಾಗಲು ಸ್ವತಃ ಆ ವ್ಯಕ್ತಿಯೇ ಸಮುದಾಯದ ಕಿರಿಯರಲ್ಲಿ ತನ್ನನ್ನು ಕೊಲ್ಲುವಂತೆ ಕೋರಿ, ಸಾವನ್ನಪ್ಪುವ ಪದ್ಧತಿಗಳು ಇತ್ತೆಂಬ ನಂಬಿಕೆಗಳು ಪ್ರಚಲಿತದಲ್ಲಿವೆ.

ಬಹುಶಃ ಈ ಕಲ್ಪನೆ, 'ಟಾಪ್ ಆಫ್ ದಿ ವರ್ಲ್ಡ್' (1950) ಸಾಹಿತ್ಯ ಕೃತಿಯಿಂದ, ಅಥವಾ 'ದಿ ಸಾವೇಜ್ ಇನೋಸೆಂಟ್ಸ್' (1959) ಎಂಬ ಜನಪ್ರಿಯ ಚಲನಚಿತ್ರದಿಂದ ಹುಟ್ಟಿಕೊಂಡಿರಬಹುದು. ಆದರೆ, ಈ ನಂಬಿಕೆ ನಿಜವೆನ್ನಲು ಅಷ್ಟೇನೂ ಆಧಾರಗಳಿಲ್ಲ.

ಬರಗಾಲವನ್ನು ಹೊರತುಪಡಿಸಿ 'ಸೆನಿಸೈಡ್' ಅಪರೂಪವಾಗಿತ್ತು ಎನ್ನುವ ವಾದಗಳೂ ಇವೆ. 1939ರಲ್ಲಿನ 'ಇನ್ಯುಯಿಟ್ ಸೆನಿಸೈಡ್' ಕೊನೆಯ ಪ್ರಕರಣವೆಂದು ನಂಬಲಾಗಿದೆ. ಈ ರೀತಿಯ ಅಮಾನವೀಯ ಆಚರಣೆಗಳು ನಿಜಕ್ಕೂ ಜಾರಿಯಲ್ಲಿದ್ದಿದ್ದೇ ಆದಲ್ಲಿ, ಇನ್ಯುಯಿಟ್ ಪಂಗಡ ಎದುರಿಸುತ್ತಿದ್ದ ಆರ್ಥಿಕ ಸಾಮಾಜಿಕ ಅಸಮಾನತೆಗಳ ಘೋರ ವಾಸ್ತವವನ್ನು ಊಹಿಸಿಕೊಳ್ಳಬಹುದಾಗಿದೆ.

'ಇನ್ಯುಯಿಟ್' ಜನಾಂಗದ ಜನಪದ ಕತೆಗಳು

ಪ್ರತಿ ಸಮುದಾಯವೂ ತನ್ನದೇ ಆದ ಸಾಂಸ್ಕೃತಿಕ ಸೊಗಡನ್ನು ಹೊಂದಿರುವಂತೆಯೇ ಇನ್ಯುಯಿಟ್ ಜನಾಂಗ ಕೂಡ ವಿಶಿಷ್ಟವಾದ ಜನಪದವನ್ನು ತನ್ನದಾಗಿಸಿಕೊಂಡಿದೆ. ಈ ಜನರಲ್ಲಿ ಮೌಖಿಕ ಸಾಹಿತ್ಯ ಮತ್ತು ಕಥೆ ಹೇಳುವ ಸುದೀರ್ಘ ಪರಂಪರೆಯೇ ಇದೆ. ನಾಗರಿಕತೆ ಬೆಳೆದು ಸಾಹಿತ್ಯವನ್ನು ಬರೆದು ದಾಖಲಿಸುವ ಪದ್ಧತಿ ಪ್ರಾರಂಭವಾಗುವ ಮೊದಲು ತಲೆಮಾರಿನಿಂದ ತಲೆಮಾರಿಗೆ ಈ ಕಥೆಗಳು ಮೌಖಿಕ ರೂಪದಲ್ಲಿ ವರ್ಗಾವಣೆಯಾಗುತ್ತಾ ಬಂದಿವೆ. ಭಾಷೆ, ನಂಬಿಕೆ, ಸಂಪ್ರದಾಯ, ಸಂಸ್ಕೃತಿಯನ್ನು ಅವರು ಹೀಗೆಯೇ ಉಳಿಸಿಕೊಂಡು ಬಂದಿದ್ದಾರೆ. ತಮ್ಮಲ್ಲಿ ಹೇರಳವಾಗಿದ್ದ ದಂತಕತೆಗಳು ಮತ್ತು ಇತಿಹಾಸವನ್ನು ಕಥೆ ಹೇಳುವ ಮೂಲಕವೇ ಜೀವಂತವಾಗಿರಿಸಿಕೊಂಡಿರುವುದು ಕಂಡುಬರುತ್ತದೆ. ಪ್ರತಿಯೊಂದು ಧರ್ಮ, ಮತ, ಮತ್ತು ಜನಾಂಗ ಭೂಮಿಯಲ್ಲಿ ಮಾನವನ ಉಗಮದ ಬಗ್ಗೆ ತನ್ನದೇ ನಂಬಿಕೆ, ಸಿದ್ಧಾಂತಗಳನ್ನು ಹೊಂದಿವೆ, ಅದರಂತೆ ಇನ್ಯುಯಿಟ್ಸ್ ಜನರು 'ರೇವನ್' ಎನ್ನುವ ಕಾಗೆಯು ಈ ಭೂಮಿಯಲ್ಲಿ ಮೊದಲ ಮಾನವನನ್ನು ಸೃಜಿಸಿತು ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಆ ನಂಬಿಕೆಗಳು ಅವರ ಜನಪದ ಕತೆಗಳಲ್ಲಿ ವ್ಯಕ್ತವಾಗುತ್ತವೆ.

ಇನ್ಯುಯಿಟ್ ಜನಾಂಗಕ್ಕೆ ಸೇರಿದ ಕೆಲವು ಜನಪದ ಕತೆಗಳು ಇಲ್ಲಿವೆ:

'ಮೊದಲ ಮಾನವ' ಹೇಗಾದ?

ಭೂಮಿಯ ಮೇಲೆ ಜೀವಿಗಳು ಇಲ್ಲದ ಕಾಲವದು. ಕಡಲ ತೀರದಲ್ಲಿ ಒಂದು ದೊಡ್ಡ ಬಟಾಣಿ ಬಳ್ಳಿ ಬೆಳೆಯಿತು. ಈ ಬಟಾಣಿ ಕಾಯಿಯಲ್ಲಿ ಮೊದಲ ಮಾನವ ನಾಲ್ಕು ದಿನಗಳ ಕಾಲ ಮುರುಟಿಕೊಂಡಿದ್ದು ಮೆಲ್ಲನೆ ತಲೆ ಎತ್ತಲು ಶುರುಮಾಡಿದ. ಐದನೇ ದಿನ ಕಾಲು ಚಾಚಿದ. ಆಗ ಬಟಾಣಿ ಕಾಯಿಯ ಹೊರಕವಚ ಹರಿದು ಬಿದ್ದಿತು. ಅದರೊಳಗಿದ್ದ ಮಾನವ ಹೊರಗೆ ಬಂದು ನೆಲದಲ್ಲಿ ಬಿದ್ದ. ನಂತರ ಎದ್ದು ನಿಂತ. ಅವನೇ ಈ ಭೂಮಿಯ ಮೊದಲ ಮಾನವನಾದ!

ಅವನಿಗೆ ತನ್ನಂತೆ ಇರುವ ಬೇರೆ ಯಾರೂ ಕಾಣಿಸಲಿಲ್ಲ. ತಾನು ಏನು ಮಾಡಬೇಕೆಂದು ತಿಳಿಯದೆ ಸುತ್ತಲೂ ನೋಡಿದ. ಸಾವಧಾನವಾಗಿ ತನ್ನನ್ನೊಮ್ಮೆ ನೋಡಿಕೊಂಡ. ತನ್ನ ಕೈಗಳನ್ನು ಅತ್ತಿತ್ತ ಆಡಿಸಿದ. ಅರೆ! ಅವನಿಗೆ ಇನ್ನಿಲ್ಲದ ಆಶ್ಚರ್ಯವಾಯಿತು. ತನಗೆ

ಕೈಗಳನ್ನು ಅತ್ತಿತ್ತ ಚಲಿಸಲು ಆಗುತ್ತಿದೆ! ಅದೇ ರೀತಿ ಅವನು ತನ್ನ ಕುತ್ತಿಗೆ ಮತ್ತು ಕಾಲುಗಳನ್ನು ಕುತೂಹಲದಿಂದ ಅತ್ತಿತ್ತ ಆಡಿಸಿದ. "ಅರೆರೆ! ಅದೂ ತನ್ನಿಂದ ಸಾಧ್ಯವಾಗುತ್ತಿದೆಯಲ್ಲ!" ಎಂದು ಸಂತಸಗೊಂಡ.

ಅವನು ಒಮ್ಮೆ ಹಿಂದೆ ತಿರುಗಿ ನೋಡಿದ. ತಾನು ಹೊರಬಂದ ಬಟಾಣಿ ಕಾಯಿಯ ಸಿಪ್ಪೆಯು ಬಳ್ಳಿಯ ಮೇಲೆ ಇನ್ನೂ ನೇತಾಡುತ್ತಿತ್ತು. ಆ ಬಳ್ಳಿಯ ಮೇಲೆ ಒಂದು ರಂಧ್ರವಿರುವುದು ಕಾಣಿಸಿತು. ಅವನು ಆ ರಂಧ್ರದ ಮೂಲಕ ಒಳಗೆ ಹೋಗಿ, ಅವನಂತೆ ಇನ್ನೂ ಯಾರಾದರೂ ಅಲ್ಲಿದ್ದಾರೆಯೋ ಎಂದು ನೋಡಿದ. ಹೀಗೆ ನೋಡನೋಡುತ್ತಾ ತಾನು ಇಳಿದ ಕಡೆಯಿಂದ ಬಹಳ ದೂರಕ್ಕೆ ಹೋಗುತ್ತಿರುವುದು ತಿಳಿಯಿತು. ಅಲ್ಲಿಯ ನೆಲವು ತುಂಬಾ ಮೃದುವಾಗುತ್ತಿರುವುದು ಅವನ ಅನುಭವಕ್ಕೆ ಬಂದಿತು. ಅವನ ಪಾದಗಳ ಕೆಳಗೆ ಏನೋ ಚಲಿಸುತ್ತಿರುವಂತೆ ಕಂಡಿತು.

ಸ್ವಲ್ಪ ಹೊತ್ತಿನ ನಂತರ ಅವನಿಗೆ ಹೊಟ್ಟೆಯಲ್ಲಿ ಏನೋ ಒಂದು ರೀತಿಯ ಸಂಕಟವಾಯಿತು. ತನ್ನ ಪಾದದ ಬಳಿ ಇರುವ ಸಣ್ಣ ಕೊಳದಿಂದ ಬಾಯಿಗೆ ನೀರು ಹಾಕಿಕೊಳ್ಳಲು ಕೆಳಗೆ ಇಳಿದನು. ಆ ತಂಪಾದ ನೀರು ಹೊಟ್ಟೆಗಿಳಿದು ಅವನಿಗೆ ಹಿತವೆನಿಸಿತು. ಮೇಲೆ ನೋಡಿದಾಗ, ದೊಡ್ಡ ಕಪ್ಪು ವಸ್ತುವೊಂದು ಅವನ ಕಣ್ಣಿಗೆ ಬಿದ್ದಿತು. ಅದು ಹಾರುತ್ತಾ ಹಾರುತ್ತಾ ಮುಂದೆ ನಿಂತು, ಅವನ ಕಡೆಗೆ ನೋಡಿತು.

ಆ ಕಪ್ಪು ವಸ್ತುವೆಂದರೆ, 'ರೇವನ್' ಎಂದು ಕರೆಯಲಾಗುವ ಒಂದು ದಿವ್ಯ ಕಾಗೆ. ಈ ಕಾಗೆ ಮುಖವಾಡ ಧರಿಸಿದಾಗ ಕಾಗೆಯಾಗಿಯೂ, ಮುಖವಾಡ ತೆರೆದಾಗ ಮನುಷ್ಯನಾಗಿಯೂ ರೂಪಾಂತರವಾಗುವ ಮಾಯಾ ಕಾಗೆ! ಅದು ನಿಂತ ಕೂಡಲೇ ತನ್ನ ಒಂದು ರೆಕ್ಕೆಯನ್ನು ಮೇಲಕ್ಕೆತ್ತಿ, ಅದರ ಕೊಕ್ಕನ್ನು ತಲೆಯ ಮೇಲ್ಭಾಗಕ್ಕೆ ತಳ್ಳಿತು. ಅನಂತರ ಅದು ಮನುಷ್ಯನಾಗಿ ಬದಲಾಯಿತು. ತನ್ನ ಮುಖವಾಡವನ್ನು ತೆಗೆಯುವ ಮೊದಲು, ರೇವನ್ ಮನುಷ್ಯನನ್ನು ದಿಟ್ಟಿಸಿ ನೋಡಿ ಕೇಳಿದ–

"ಯಾರು ನೀನು? ಎಲ್ಲಿಂದ ಬಂದೆ? ನಾನು ನಿನ್ನಂತಹ ಏನನ್ನೂ, ಯಾರನ್ನೂ ಈವರೆಗೆ ನೋಡೇ ಇಲ್ಲ! ಅಲ್ಲದೆ, ನೀನೂ ಕೂಡ ನನ್ನಂತೆಯೇ ಇದ್ದೀಯ, ನಿನ್ನನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ."

"ನಾನು ಬಟಾಣಿ ಕಾಯಿಯಿಂದ ಬಂದೆ" ಎಂದ ಆ ನವಮಾನವ ತಾನು ಹೊರಬಂದ ಆ ಗಿಡವನ್ನು ಅವನಿಗೆ ತೋರಿಸಿದನು.

"ಆಹ್! ಆ ಬಳ್ಳಿಯನ್ನು ನಾನೇ ತಯಾರಿಸಿದ್ದು, ಆದರೆ ನೀನು ಎಂದಾದರೂ ಅದರಿಂದ ಹೊರಬರಬಲ್ಲೆ ಎಂದು ನನಗೆ ತಿಳಿದಿರಲಿಲ್ಲ. ಅದಿರಲಿ, ನೀನು ಏನಾದರೂ ತಿಂದಿರುವೆಯಾ?" ಎಂದು ರೇವನ್ ಆ ನವಮಾನವನನ್ನು ಕೇಳಿದ.

"ನಾನು ಒಂದು ಕೊಳದಲ್ಲಿ ತಂಪಾದ, ನಯವಾದ ಏನನ್ನೋ ಸೇವಿಸಿದೆ"

"ಆಹಾ! ನೀನು ನೀರು ಕುಡಿದಿದ್ದೀಯಾ, ಈಗ ನನಗಾಗಿ ಸ್ವಲ್ಪ ಹೊತ್ತು ಕಾಯುತ್ತಿರು" ಎಂದ ರೇವನ್, ಮುಖವಾಡವನ್ನು ತನ್ನ ಮುಖದ ಮೇಲೆ ಎಳೆದುಕೊಂಡು ಮತ್ತೆ

ಹಕ್ಕಿಯಾಗಿ ಆಕಾಶದಲ್ಲಿ ಹಾರಿ ಕಣ್ಮರೆಯಾದ. ನವಮಾನವ ಅವನಿಗಾಗಿ ಕಾಯುತ್ತಿದ್ದ. ನಾಲ್ಕು ದಿನಗಳ ಅನಂತರ ರೇವನ್ ಹಿಂದಿರುಗಿದ. ಬರುವಾಗ ಅವನು ನಾಲ್ಕು ಹಣ್ಣುಗಳನ್ನು ತಂದಿದ್ದ. ರೇವನ್ ತನ್ನ ಮುಖವಾಡವನ್ನು ತೆಗೆದುಹಾಕಿ ಮನುಷ್ಯಾಕಾರ ತಾಳಿದ. ಅವನು ಎರಡು ಸಾಲ್ಮನ್ ಬೆರ್ರಿಗಳು ಮತ್ತು ಎರಡು ಹೀಥ್ ಬೆರ್ರಿ ಹಣ್ಣುಗಳನ್ನು ತಂದಿದ್ದನು. ಅವುಗಳನ್ನು ಹಿಡಿದು ರೇವನ್ ಹೇಳಿದ–

"ನೀನು ತಿನ್ನಲೆಂದು ಇವುಗಳನ್ನು ಸೃಷ್ಟಿಸಿದ್ದೇನೆ. ಇವುಗಳು ಭೂಮಿಯ ಮೇಲೆ ಇನ್ನು ಮೇಲೆ ಸಮೃದ್ಧವಾಗಿ ಸಿಗುತ್ತವೆ. ಈಗ ನೀನು ಇವುಗಳನ್ನು ತಿನ್ನು."

ನವಮಾನವ ಹಣ್ಣುಗಳನ್ನು ತೆಗೆದುಕೊಂಡು ಒಂದೊಂದಾಗಿ ಬಾಯಲ್ಲಿ ಇಟ್ಟುಕೊಂಡ. ಅವನ ಹಸಿವು ತಣಿಯಿತು. ಹೊಟ್ಟೆ ತುಂಬಿ, ಸುಖವಾದ ಭಾವನೆ ಅವನನ್ನು ಆವರಿಸಿತು. ನಂತರ ರೇವನ್ ಮನುಷ್ಯನನ್ನು ಸಮೀಪದ ಒಂದು ಸಣ್ಣ ಹಳ್ಳಕ್ಕೆ ಕರೆದುಕೊಂಡು ಹೋದನು. ನೀರಿನ ಅಂಚಿಗೆ ಹೋಗಿ ಎರಡು ಜೇಡಿಮಣ್ಣಿನ ತುಂಡುಗಳನ್ನು ತಂದು ಅದನ್ನು ಕುರಿಯ ರೂಪದಲ್ಲಿ ಅಚ್ಚಿಗೆ ಹಾಕಿದನು. ಅದು ಒಣಗುವವರೆಗೂ ಅವುಗಳನ್ನು ಕೈಯಲ್ಲಿ ಹಿಡಿದು, ನಂತರ ಮಾನವನನ್ನು ಕರೆದು ತಾನು ಮಾಡಿದ್ದನ್ನು ತೋರಿಸಿದನು.

"ಅವು ತುಂಬಾ ಸುಂದರವಾಗಿವೆ" ಎಂದ ಮಾನವ.

"ಈಗ ಸ್ವಲ್ಪ ಹೊತ್ತು ನಿನ್ನ ಕಣ್ಣುಗಳನ್ನು ಮುಚ್ಚಿಕೋ" ಎಂದ ರೇವನ್.

ಮಾನವ ತನ್ನ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡ ಕೂಡಲೇ ರೇವನ್ ತನ್ನ ಮುಖವಾಡವನ್ನು ತೆಗೆದು ನಾಲ್ಕು ಬಾರಿ ರೆಕ್ಕೆಗಳನ್ನು ಅಚ್ಚಿನಲ್ಲಿದ್ದ ರೂಪಗಳ ಮೇಲೆ ಬೀಸಿದನು. ಆ ಕುರಿಗಳಿಗೆ ಜೀವ ಬಂದು, ಪೂರ್ಣ ಬೆಳೆದು ದಷ್ಟಪುಷ್ಟವಾದ ಪರ್ವತದ ಕುರಿಗಳು ಅಲ್ಲಿ ಕಂಡವು. ಆಗ ರೇವನ್ ತನ್ನ ಮುಖವಾಡವನ್ನು ಎತ್ತಿ ಹೇಳಿದ, "ನೋಡು! ಬೇಗ ನೋಡು!" ಕುರಿಗಳು ಜೀವತುಂಬಿ ಪುಟಿಯುತ್ತಿರುವುದನ್ನು ನೋಡಿ ಮಾನವ ಸಂತೋಷದಿಂದ ಕೂಗಿಕೊಂಡ.

ಅನಂತರ, ರೇವನ್ ಮತ್ತೆ ಎರಡು ಪ್ರಾಣಿಗಳಿರುವ ಅಚ್ಚುಗಳನ್ನು ತಯಾರಿಸಿ, ಅವು ಇನ್ನೂ ಸ್ವಲ್ಪ ಹಸಿ ಇರುವಾಗ ಅವುಗಳಿಗೆ ಜೀವ ಬರುವಂತೆ ಮಾಡಿದ. ಆ ಪ್ರಾಣಿಗಳು ಕಂದು ಮತ್ತು ಬಿಳಿಬಣ್ಣದಿಂದ ಕೂಡಿದ ಹಿಮಸಾರಂಗ (Reindeer) ಗಳಾಗಿದ್ದವು.

"ಇವೂ ತುಂಬಾ ಆಕರ್ಷಕವಾಗಿವೆ" ಎಂದು ಮಾನವ ಮೆಚ್ಚುಗೆ ವ್ಯಕ್ತಪಡಿಸಿದನು. "ಹೌದು, ಆದರೆ ಇವುಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದಿಲ್ಲ" ಎಂದು ರೇವನ್ ಹೇಳಿ, ಒಂದು ಜೊತೆ ಕಾಡು ಜಿಂಕೆಯನ್ನು ತಯಾರಿಸಿದ. ಅವುಗಳಿಗೆ ಜೀವ ನೀಡುವ ಮೊದಲು ಅವುಗಳ ಹೊಟ್ಟೆಯ ಭಾಗವನ್ನು ಮಾತ್ರ ಒಣಗಿಸಿದ. ಉಳಿದ ಭಾಗ ಹಸಿಯಾಗಿಯೇ ಉಳಿಯಿತು. ಹಾಗಾಗಿ ಇಂದಿಗೂ ಕಾಡುಜಿಂಕೆಯ ಹೊಟ್ಟೆಯ ಭಾಗ ಮಾತ್ರ ಬಿಳಿಯಾಗಿರುತ್ತದೆ.

"ಈ ಪ್ರಾಣಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತಯಾರಿಸಲಾಗಿದೆ. ಏಕೆಂದರೆ, ಜನರ ಆಹಾರಕ್ಕಾಗಿ ಇವುಗಳು ಬೇಕು, ತಮ್ಮ ಆಹಾರಕ್ಕಾಗಿ ಇವುಗಳನ್ನು ಭೂಮಿಯ ಜನರು ಕೊಲ್ಲುತ್ತಿರುತ್ತಾರೆ" ಎಂದನು ರೇವನ್.

ಭೂಮಿಗೆ ಬಂದ 'ಮೊದಲ ಹೆಣ್ಣು' ಮತ್ತು ಇನ್ನಿತರ ಪ್ರಾಣಿ, ಪಕ್ಷಿಗಳು

ಮೊದಲ ಪುರುಷ ಭೂಮಿಗೆ ಬಂದು ಕೆಲದಿನಗಳಾಗಿದ್ದವಷ್ಟೆ 'ರೇವನ್' ಎನ್ನಲಾಗುವ ಸೃಷ್ಟಿಕರ್ತ ಕಾಗೆಗೆ ಅವನಿಗೆ ಒಬ್ಬಳು ಸಂಗಾತಿಯನ್ನು ಕೊಡಬೇಕೆನ್ನಿಸಿತು. ರೇವನ್, ತನ್ನಿಂದ ಸೃಷ್ಟಿಯಾಗಿರುವ ಆ ಪುರುಷಾಕೃತಿಯನ್ನು ಹೋಲುವ ಇನ್ನೊಂದು ಆಕಾರವನ್ನು ಸೃಜಿಸಿದ. ನದಿಯಂಚಿನಲ್ಲಿ ಬೆಳೆದಿರುವ ಹುಲ್ಲಿನಿಂದ ಆ ಹೊಸ ಬೊಂಬೆಗೆ ತಲೆಗೂದಲುಗಳು ತಯಾರಾದವು. ಆ ಮಣ್ಣಿನ ಬೊಂಬೆ ಒಣಗಿದ ಅನಂತರ ತನ್ನ ರೆಕ್ಕೆಗಳನ್ನು ಅದರ ಮೇಲೆ ಬೀಸಿದ. ರೇವನ್ ತಾನು ಮಾಡುವ ಬೊಂಬೆಗಳಿಗೆ ಜೀವ ತುಂಬುವುದೇ ಹಾಗೆ! ರೇವನ್ ಬೀಸಿದ ರೆಕ್ಕೆಗಳ ಸ್ಪರ್ಶವಾದೊಡನೆ ಸುಂದರಿಯಾದ ಯುವತಿಯೊಬ್ಬಳು ಜೀವ ತಳೆದು ಮೊದಲ ಪುರುಷನ ಪಕ್ಕದಲ್ಲಿ ಬಂದು ನಿಂತಳು. "ಇವಳೇ ನಿನ್ನ ಜೊತೆಗಾತಿ" ರೇವನ್ ಹೇಳಿದ.

ರೇವನ್ ಒಣಗಿದ ಪಾಚಿ ಹುಲ್ಲಿನಿಂದ ಅವರಿಗೆ ಮೆತ್ತನೆಯ ಹಾಸಿಗೆಯನ್ನು ತಯಾರಿಸಿ ಕೊಟ್ಟ. ಅವರು ಆ ಹಾಸಿಗೆಯ ಮೇಲೆ ಬೆಚ್ಚಗೆ ಮಲಗುತ್ತಿದ್ದರು. ರೇವನ್ ನದಿಯಿಂದ ಅವರಿಗೆ ಬಗೆಬಗೆಯ ಮೀನುಗಳನ್ನು ತಿನ್ನಲು ತಂದುಕೊಡುತ್ತಿದ್ದ. ಸ್ಟಿಕ್ಲೆಬ್ಯಾಕ್ಸ್, ಗ್ರೇಲಿಂಗ್ಸ್ ಮತ್ತು ಕರಿ ಮೀನುಗಳನ್ನು ಅವರ ಹಸಿವು ತಣಿಸಲೆಂದು ಸೃಷ್ಟಿ ಮಾಡಿದ. "ಈ ಮೀನುಗಳೆಲ್ಲಾ ತಿನ್ನಲು ಬಹಳ ರುಚಿ. ನೀವು ನೀರಿನ ಸಮೀಪದಲ್ಲಿ ವಾಸವಿದ್ದರೆ ನಿಮ್ಮ ಆಹಾರಕ್ಕೆ ಆಗುವಷ್ಟು ಮೀನುಗಳು ದೊರೆಯುತ್ತವೆ" ಎಂದು ರೇವನ್ ಅವರಿಗೆ ತಿಳಿಸಿದನು. ನೀರಿನಲ್ಲಿ ಚಟುವಟಿಕೆಯಿಂದ ಚುರುಕಾಗಿ ಇರುವ ಮೀನುಗಳಂತೆ, ಭೂಮಿಯ ಮೇಲೂ ಲವಲವಿಕೆ ತುಂಬಲು ಅವನು ಮೂಗಿಲಿಗಳನ್ನು (shrewmice) ಮಾಡಿದ.

ಆಮೇಲಿನ ಹಲವು ದಿನಗಳವರೆಗೆ ರೇವನ್ ಕಾಗೆಗೆ ಬಿಡುವಿಲ್ಲದಂತೆ ಪ್ರಾಣಿಗಳನ್ನು ಸೃಷ್ಟಿಸುವುದೇ ಕೆಲಸವಾಯಿತು. ವಿವಿಧ ಪ್ರಾಣಿಗಳನ್ನು ಮಾಡಿದ. ಇನ್ನಷ್ಟು ಮೀನುಗಳಿಗೆ ಜೀವ ನೀಡಿದ. ನೆಲಹಕ್ಕಿಗಳು ಬಂದವು. ಪ್ರತಿ ಬಾರಿ ತಾನು ಹೊಸ ನಿರ್ಮಾಣ ಮಾಡಿದಾಗಲೂ ಅದರ ಬಗ್ಗೆ ಪುರುಷನಿಗೆ ರೇವನ್ ತಿಳಿಸಿ ಹೇಳುತ್ತಿದ್ದ.

ಇದಾದ ಬಳಿಕ ರೇವನ್ ಆಕಾಶಕ್ಕೆ ಹಾರಿದ. ನಾಲ್ಕು ದಿನ ಕಳೆದ ಮೇಲೆ ಪುರುಷ ಮತ್ತು ಅವನ ಸಂಗಾತಿಗೆ ಸ್ಯಾಮನ್ ಮೀನುಗಳನ್ನು ತೆಗೆದುಕೊಂಡು ಬಂದ. ಅವನಿಗೆ ಕೆರೆಗಳು ಮತ್ತು ಸರೋವರಗಳು ನೀರಸವಾಗಿ ಕಾಣಿಸಿದವು. ಹಾಗಾಗಿ ಆ ಶೂನ್ಯವನ್ನು ತುಂಬಲು ಕೀಟಗಳನ್ನು ಮಾಡಿ ಅವುಗಳನ್ನು ನೀರಿನ ಮೇಲೆ ಹಾರುವಂತೆ ಮಾಡಿದ. 'ಮಸ್ಕ್ರಾಟ್‌ಗಳು ಮತ್ತು ನೀರು ನಾಯಿಗಳು' (muskrats and beavers) ಆಗಲೇ ಬಂದವು.

“ಈ ಹಾರುವ ಜೀವಿಗಳಿಂದ ಈ ಜಗತ್ತು ಸುಂದರವಾಗಿದೆ. ಈ ‘ಮಸ್ಕ್ರಾಟ್’ ಚರ್ಮವನ್ನು ನೀವು ಬಟ್ಟೆಗೆ ಬಳಸಬಹುದು. ಮತ್ತೆ, ಈ ನೀರುನಾಯಿ ಇದೆಯಲ್ಲಾ, ತುಂಬಾ ಚಾಣಾಕ್ಷಮತಿ. ಅದನ್ನು ನುರಿತ ಮೀನುಗಾರರು ಮಾತ್ರ ಹಿಡಿಯಲು ಸಾಧ್ಯ. ಅದು ನೀರಿನ ಝರಿ ಇರುವಲ್ಲಿ ವಾಸಿಸುತ್ತದೆ. ಗಟ್ಟಿಮುಟ್ಟಾದ ಮನೆಯನ್ನು ತನಗಾಗಿ ನಿರ್ಮಿಸಿಕೊಳ್ಳುತ್ತದೆ. ನೀವು ಅದನ್ನು ನೋಡಿಕೊಂಡು, ಅದೇ ಮಾದರಿಯಲ್ಲಿ ನಿಮಗಾಗಿ ಒಂದು ಮನೆ ಕಟ್ಟಿಕೊಳ್ಳಲು ಕಲಿಯಿರಿ” ಎಂದು ರೇವನ್ ಮೊದಲ ಪುರುಷನಿಗೆ ಉಪದೇಶಿಸಿದ.

ಆ ಜೋಡಿಗೆ ಒಂದು ಪುಟ್ಟ ಮಗು ಜನಿಸಿತು. ಹುಟ್ಟಿದ ಮೂರನೆಯ ದಿನವೇ ಆ ಮಗು ಬೆಳೆದು ನಿಂತಿತು. ರೇವನ್ ಮುಂದುವರೆದು, ಕರಡಿಯನ್ನು ಮಾಡಿದ. ಮನುಷ್ಯರನ್ನು ಹೆದರಿಸಲೆಂದು ಒಂದು ಪ್ರಾಣಿ ಇರಬೇಕೆಂದು ಕರಡಿಯನ್ನು ಸೃಷ್ಟಿಸುವುದು ಅವನ ಉದ್ದೇಶವಾಗಿತ್ತು. ಆದರೆ, ಆ ಭೀಕರ ರೂಪದ ಕರಡಿಯನ್ನು ನೋಡಿ ಅವನಿಗೇ ಭಯವಾಯಿತು.

“ನೀನು ಆ ಪ್ರಾಣಿಯಿಂದ ದೂರವಿರುವುದು ಒಳ್ಳೆಯದು. ಅದರ ತಂಟೆಗೆ ಹೋದರೆ ನಿನ್ನನ್ನು ಹರಿದು ತಿಂದುಹಾಕುತ್ತದೆ” ಎಂದು ನವಮಾನವನಿಗೆ ಮತ್ತೆ ಕೆಲವು ಸೂಚನೆಗಳನ್ನೂ ನೀಡಿದ–

“ನೀವು ಸೀಲ್ ಮೀನುಗಳನ್ನು ತಿನ್ನಬಹುದು. ಅದರ ಚರ್ಮವನ್ನು ಬಟ್ಟೆಗೆ, ಆಯುಧಕ್ಕಾಗಿ ಬಳಸಬಹುದು. ಆದರೆ ಜಿಂಕೆಯ ಸಂಖ್ಯೆ ಹೆಚ್ಚಳವಾಗುವವರೆಗೆ ಅವುಗಳನ್ನು ಕೊಲ್ಲಲು ಹೋಗಬಾರದು.”

ಆ ಜೋಡಿಗೆ ಇನ್ನೂ ಒಂದು ಮಗು ಹುಟ್ಟಿತು. ಈ ಬಾರಿ ಅದು ಹೆಣ್ಣಾಗಿತ್ತು. ಹುಟ್ಟಿದ ಮರುದಿನವೇ ಆ ಪುಟ್ಟ ಹುಡುಗಿ ನಡೆಯಲು ಕಲಿತಳು. ಮೂರನೆಯ ದಿನ ಅವಳು ಬೆಳೆದು ವಯಸ್ಕಳಾದಳು. ಆ ದಿನಗಳಲ್ಲಿ ಜನರು ಬೇಗಬೇಗ ಬೆಳೆದು, ಭೂಮಿಯ ಜನಸಂಖ್ಯೆ ಹೆಚ್ಚಲು ಕಾರಣರಾದರು.

ಅತಿಥಿ

ಒಂದೂರಿನಲ್ಲಿ ಒಬ್ಬ ಮುದುಕಿ ತನ್ನ ಮೊಮ್ಮಗನ ಜೊತೆಯಲ್ಲಿ ವಾಸವಾಗಿದ್ದಳು. ಆಕೆಯೋ ಬಲು ಕೆಟ್ಟ ಹೆಂಗಸು. ಇತರರಿಗೆ ಕೆಡುಕು ಮಾಡುವುದರಲ್ಲಿ ಮಹಾ ನಿಪುಣೆ. ಸದಾ ಅದರಲ್ಲೇ ತೊಡಗಿರುತ್ತಿದ್ದಳು. ಅದರಿಂದ ಅವಳಿಗೆ ಏನು ಸಂತೋಷ ಸಿಗುತ್ತಿತ್ತೋ ದೇವರೇ ಬಲ್ಲ. ಇಷ್ಟರ ಮೇಲೆ ಆಕೆಗೆ ಮಾಟ ಮಂತ್ರವೂ ಗೊತ್ತಿತ್ತು. ಆ ವಿದ್ಯೆಯನ್ನು ಬಳಸಿಕೊಂಡು ಜನರಿಗೆಲ್ಲ ತೊಂದರೆ ಕೊಡುತ್ತಿದ್ದಳು.

ಒಮ್ಮೆ ಅಪರಿಚಿತನೊಬ್ಬ ಆ ಊರಿಗೆ ಬಂದ. ಅವನು ಮುದುಕಿಯ ನೆರೆಮನೆಯಲ್ಲಿ ತನ್ನ ಸ್ನೇಹಿತನನ್ನು ನೋಡಲು ಬಂದಿದ್ದ. ಅವನು ಉತ್ತಮ ಬೇಟೆಗಾರನಾಗಿದ್ದನು. ಮರುದಿನ ಬೆಳಿಗ್ಗೆ ತನ್ನ ಆತಿಥೇಯನೊಂದಿಗೆ ಕಾಡಿಗೆ ಹೋಗಿ ದೊಡ್ಡ ಬೇಟೆಯಾಡಿಕೊಂಡು

ಬಂದ. ಅವನಿಗೆ ಭಾರಿ ಗಾತ್ರದ ಮಾಂಸವೇ ಸಿಕ್ಕಿತ್ತು. ಮುದುಕಿಗೆ ಹೇಗೋ ಈ ವಿಷಯ ತಿಳಿಯಿತು. ತನ್ನ ಮನೆಯಲ್ಲಿ ಅವಳಿಗೆ ತಿನ್ನಲು ಸ್ವಲ್ಪವೇ ಮಾಂಸವಿದ್ದಿದ್ದು ಅವಳ ಸಂಕಟವನ್ನು ಹೆಚ್ಚಿಸಿತು. ಅವಳಿಗೂ ನೆರೆಮನೆಯ ಅತಿಥಿ ಹೊತ್ತು ತಂದಿದ್ದ ರುಚಿಯಾದ ಮಾಂಸವನ್ನು ತಿನ್ನುವ ಆಸೆಯಾಯಿತು. ಹಾಗಾಗಿ, ಅವಳು ಸ್ನೇಹಿತನ ಮನೆಗೆ ಬಂದಿದ್ದ ಅತಿಥಿಯನ್ನು ಕೊಲ್ಲಲು ನಿರ್ಧರಿಸಿದಳು.

ಅವಳು ಅದಕ್ಕೊಂದು ಉಪಾಯ ಮಾಡಿದಳು. ಅಪರಿಚಿತನನ್ನು ತನ್ನ ಮನೆಗೆ ರಾತ್ರಿಯ ಭೋಜನಕ್ಕೆಂದು ಆಹ್ವಾನಿಸಲು ನಿರ್ಧರಿಸಿದಳು. ಅವನಿಗೆ ಉಣಬಡಿಸಲೆಂದು ತೋಳ ಮತ್ತು ಮನುಷ್ಯನ ಮೆದುಳಿನ ಮಾಂಸವನ್ನು ಬೆರೆಸಿ ಸೂಪ್ ತಯಾರಿಸಿದಳು. ಅದು ಅತ್ಯಂತ ವಿಷಕಾರಿಯಾದ ಆಹಾರವೆಂದೂ ಅದನ್ನು ತಿಂದ ಮನುಷ್ಯರು ಬದುಕಿ ಉಳಿಯುವುದು ಅಸಾಧ್ಯವೆಂದೂ ಆ ಘಾಟಿ ಮುದುಕಿಗೆ ಗೊತ್ತಿತ್ತು.

ತನ್ನ ಮೊಮ್ಮಗನನ್ನು ಕರೆದು, "ಅತಿಥಿಯನ್ನು ನಯವಾದ ಮಾತುಗಳಿಂದ ಮರುಳುಗೊಳಿಸಿ ನಮ್ಮ ಮನೆಗೆ ಕರೆದು ತಾ. ಅವನ ಜೊತೆ ಸೌಜನ್ಯದಿಂದ ನಡೆದುಕೊ. ಆದರೆ ನಾನು ಅವನಿಗಾಗಿ ಯಾವ ಅಡುಗೆ ತಯಾರಿಸಿದ್ದೇನೆಂದು ಮಾತ್ರ ಹೇಳಬೇಡ" ಎಂದು ಸೂಚನೆ ಕೊಟ್ಟಳು.

ಆಕೆಯ ಮೊಮ್ಮಗ ಮುಗ್ಧನಾಗಿದ್ದ. ಅಜ್ಜಿಯ ಆದೇಶದಂತೆಯೇ ಆ ಹುಡುಗ ಪಕ್ಕದ ಗುಡಿಸಲಿಗೆ ಹೋಗಿ ಹೇಳಿದ, "ಮಾನ್ಯ ಅತಿಥಿಗಳೇ, ನನ್ನ ಅಜ್ಜಿಯು ನಿಮ್ಮನ್ನು ಭೋಜನಕ್ಕೆ ಬರಲು ಹೇಳಿದ್ದಾಳೆ. ಅವಳು ನಿಮಗಾಗಿ ಮಾಡಿಟ್ಟಿರುವ ತೋಳ ಮತ್ತು ಮನುಷ್ಯನ ಮೆದುಳುಗಳಿಂದ ಮಾಡಿರುವ ಸೂಪಿನ ಬಗ್ಗೆ ಮಾತ್ರ ನಿಮಗೆ ಹೇಳಬಾರದು ಎಂದು ನನಗೆ ತಾಕೀತು ಮಾಡಿದ್ದಾಳೆ. ಆದ್ದರಿಂದ, ಈ ಗುಟ್ಟನ್ನು ನಾನು ನಿಮಗೆ ಹೇಳುವುದಿಲ್ಲ" ಎಂದು ಹೇಳಿಬಿಟ್ಟ. ಅತಿಥಿಗೆ ಮುದುಕಿಯ ಕುತಂತ್ರ ತಿಳಿಯಿತು. ತನ್ನಲ್ಲಿ ತಾನು ಒಂದು ಕ್ಷಣ ಯೋಚಿಸಿ– "ಸರಿ, ನಾನು ಬರುತ್ತೇನೆ ಎಂದು ನಿನ್ನ ಅಜ್ಜಿಗೆ ಹೇಳು" ಎಂದ.

ಅದರಂತೆ ಆತ ಮುದುಕಿಯ ಮನೆಗೆ ಬಂದ. ಮುದುಕಿ ಅವನನ್ನು ನೋಡಿ ಬಹಳ ಸಂತೋಷಗೊಂಡಂತೆ ನಟಿಸಿದಳು. ಅವರು ಊಟದ ಮೇಜಿನೆದುರು ಕುಳಿತರು. ಮುದುಕಿಯು ಒಂದು ದೊಡ್ಡ ಬೋಗುಣಿಯ ತುಂಬ ಸೂಪ್ ತಂದು ಅವನ ಮುಂದೆ ಇಟ್ಟಳು. ಅತಿಥಿಯು ಮುದುಕಿಗೆ ಗೊತ್ತಾಗದಂತೆ ತನ್ನ ಪಾದಗಳ ನಡುವೆ ಒಂದು ಬಟ್ಟಲನ್ನು ನೆಲದ ಮೇಲೆ ಇಟ್ಟನು. ಮುಂದಿನ ಹಲ್ಲುಗಳು ಬಿದ್ದುಹೋಗಿರುವುದರಿಂದ ತನ್ನ ಕೈಯನ್ನು ಬಾಯಿಯ ಮುಂದೆ ಇಟ್ಟುಕೊಂಡಿದ್ದೇನೆಂದು ಹೇಳಿ, ಅದಕ್ಕಾಗಿ ಬಾರಿಬಾರಿಗೂ ಕ್ಷಮೆ ಯಾಚಿಸುತ್ತಿದ್ದ. ಪ್ರತಿಬಾರಿ ಸೂಪ್ ತುಂಬಿದ್ದ ಚಮಚವನ್ನು ಬಾಯಿಯ ಬಳಿ ತೆಗೆದುಕೊಂಡು ಹೋಗಿ ಅದನ್ನು ತಿನ್ನದೆ, ಆ ಸೂಪನ್ನು ತನ್ನ ಪಾದದ ಬಳಿಯಿದ್ದ ಬಟ್ಟಲಿಗೆ ಸುರಿದುಕೊಳ್ಳುತ್ತಿದ್ದ. ಅತಿಥಿಯು ಹೀಗೆ ತೋರಿಕೆಯ ಊಟ ಮಾಡಿ ಮುಗಿಸಿದ.

ಅನಂತರ, "ನೀವು ನನಗೆ ಇಷ್ಟು ರುಚಿಕರವಾದ ಭೋಜನ ನೀಡಿದ್ದೀರಿ. ಆತಿಥೇಯರಿಗೆ ಏನಾದರೂ ಆಹಾರದ ಉಡುಗೊರೆ ನೀಡುವುದು ನಮ್ಮ ಕುಲದ ಸಂಪ್ರದಾಯವಾಗಿದೆ. ನಾನು ನಿಮಗಾಗಿ ಒಂದು ಅಪರೂಪದ ಆಹಾರವನ್ನು ತಂದಿದ್ದೇನೆ. ಅದನ್ನು ನಿಮಗೆ ಕೊಡುತ್ತಿದ್ದೇನೆ. ದಯವಿಟ್ಟು ಸ್ವೀಕರಿಸಿ. ಆದರೆ ಇದನ್ನು ಒಂದೇ ಬಾರಿಗೆ ತಿಂದು ಮುಗಿಸಬೇಕು. ಇಲ್ಲದಿದ್ದರೆ ಅದರ ರುಚಿ ಹಾಳಾಗುತ್ತದೆ" ಎಂದು ವಿನಯದಿಂದ ಹೇಳಿದನು.

ಜಾಣ ಅತಿಥಿಯು ಆ ಮಾಟಗಾತಿ ಮುದುಕಿಗೆ ತನ್ನ ಬಟ್ಟಲಿನಲ್ಲಿ ಸಂಗ್ರಹವಾಗಿದ್ದ ಸೂಪ್ ಕುಡಿಯಲು ಕೊಟ್ಟನು. ಮುದುಕಮ್ಮ ತಾನೇ ತಯಾರಿಸಿದ ವಿಷಕಾರಿ ಸೂಪ್ ಸವಿದ ಮರುಕ್ಷಣವೇ ಕುಸಿದುಬಿದ್ದಳು. ಅವಳ ಜೀವ ಹಾರಿಹೋಯಿತು.

ಗಾನ ಮಂದಿರದ ಭೂತ

ಅದೊಂದು ಹಳ್ಳಿ. ಅಲ್ಲಿಯ ಒಂದು ಮನೆಯನ್ನು ಹಾಡು, ನೃತ್ಯಗಳೊಂದಿಗೆ ಔತಣ ಏರ್ಪಡಿಸಲು ಮಾತ್ರ ಬಳಸಲಾಗುತ್ತಿತ್ತು. ಭೂತವೊಂದು ಆ ಮನೆಯ ಮಾಲೀಕನಾಗಿ ಸದಾ ಅಲ್ಲಿರುತ್ತಿತ್ತೆಂದು ನಂಬಲಾಗಿತ್ತು. ಒಮ್ಮೆ ಒಬ್ಬ ಮಹಿಳೆ ಆ ಅಗೋಚರ ಆತ್ಮದ ಬಗ್ಗೆ ಬಹಳ ಕುತೂಹಲ ಬೆಳೆಸಿಕೊಂಡಿದ್ದಳು. ಅದನ್ನು ಸಮಯ ಸಿಕ್ಕಾಗ ನೋಡಬೇಕೆಂದು ಬಯಸುತ್ತಿದ್ದಳು. ಆದರೆ ಅದನ್ನು ನೋಡಲು ಪ್ರಯತ್ನಿಸಿದ್ದೇ ಆದರೆ ಘೋರ ಅನಾಹುತ ಕಾದಿದೆ ಎಂದು ಆ ಗ್ರಾಮಸ್ಥರು ಅವಳಿಗೆ ಎಚ್ಚರಿಕೆಯನ್ನು ನೀಡಿದ್ದರು.

ಆದರೆ ಅವಳಿಗೆ ತನ್ನ ಕುತೂಹಲವನ್ನು ಅದುಮಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಒಂದು ರಾತ್ರಿ ಚೆನ್ನಾಗಿ ಕತ್ತಲು ಆವರಿಸಿತ್ತು. ಹಾಗಾಗಿ, ಗ್ರಾಮಸ್ಥರಿಗೆ ಅವಳು ಆ ಮನೆಯನ್ನು ಪ್ರವೇಶಿಸಿದ್ದು ತಿಳಿಯಲಿಲ್ಲ. ಆಗ ಅವಳು ಆ ಮನೆಯನ್ನು ಹೊಕ್ಕಳು. ಅಗೋಚರ ಶಕ್ತಿಯಾಗಿದ್ದ ಅಲ್ಲಿದ್ದ ಮಾಲೀಕನನ್ನು ಉದ್ದೇಶಿಸಿ ಹೇಳಿದಳು–

"ಎಲವೋ ಭೂತವೇ, ನೀನು ಈ ಮನೆಯಲ್ಲಿರುವುದು ನಿಜವೇ ಆಗಿದ್ದರೆ ಹೊರಗೆ ಬಾ! ನೀನು ಹೇಗಿರುವೆ ಎಂದಾದರೂ ನೋಡೋಣ."

ಅವಳ ಮಾತಿಗೆ ಉತ್ತರ ಬರಲಿಲ್ಲ. ಕತ್ತಲೆಯಾಗಿದ್ದ ಕಾರಣ ಅವಳ ಕಣ್ಣಿಗೆ ಯಾರೂ ಕಾಣಿಸಲಿಲ್ಲ. ಅವಳು ಉತ್ಸಾಹದಿಂದ ಕಿರುಚಿದಳು–

"ಇಲ್ಲಿ ಭೂತವೂ ಇಲ್ಲ. ಪ್ರೇತವೂ ಇಲ್ಲ. ಯಾರೂ ನಾನಿದ್ದಲ್ಲಿಗೆ ಬರುವುದೂ ಇಲ್ಲ!" ಅವಳು ಹೀಗೆ ಕಿರುಚಿದ ಮರುಕ್ಷಣವೇ ಪಿಸುಮಾತೊಂದು ಕೇಳಿಬಂದಿತು–

"ನೋಡು, ನೋಡು, ಇಲ್ಲಿದ್ದೀನಿ ನಾನು..."

ಅವಳಿಗೆ ಯಾರೂ ಕಾಣಿಸಲಿಲ್ಲ. ಹಾಗಾಗಿ ಕೇಳಿದಳು. "ಎಲ್ಲಿದ್ದೀಯಾ ನೀನು? ನಿನ್ನ ಪಾದಗಳು ಎಲ್ಲಿವೆ?"

"ಇಲ್ಲಿವೆ ನೋಡು! ಇಲ್ಲಿವೆ ನೋಡು!" ಅಗೋಚರ ವಾಣಿ ನುಡಿಯಿತು.

"ನಿನ್ನ ಕಾಲಿನ ಮುಂಭಾಗ ಎಲ್ಲಿವೆ?" ಅವಳು ನಂಬದವಳಂತೆ ಮತ್ತೆ ಕೇಳಿದಳು.

"ಇಲ್ಲಿವೆಯಲ್ಲಾ, ನೋಡು, ನೋಡು!" ಮತ್ತೆ ಆ ದನಿ ಹೇಳಿತು.

ಅವಳ ಕಣ್ಣಿಗೆ ಏನೂ ಕಾಣುತ್ತಿರಲಿಲ್ಲ. ಆದರೂ ಅವಳು ಆ ಪಿಸುದನಿಯ ಒಡೆಯನ ಅಸ್ತಿತ್ವವನ್ನು ಖಚಿತಪಡಿಸಿಕೊಳ್ಳಲು ಅವನನ್ನು ಮುಟ್ಟಿ ನೋಡಲು ಬಯಸಿದಳು. ಆಗ ಅವನ ಇರುವಿಕೆ ಅವಳ ಅರಿವಿಗೆ ಬಂದಿತು. ಅವನ ಕೈಗಳನ್ನು ಮುಟ್ಟಿದಳು. ಅವನ ಮಂಡಿಗಳನ್ನು ಮುಟ್ಟಿದಳು. ಅವನು ಮಂಡಿಯೂರಿ ನಿಂತಿರುವುದನ್ನು ಕಂಡಳು. ಆದರೂ, ಅವಳಿಗೆ ಸಮಾಧಾನವಾಗಲಿಲ್ಲ. ಮತ್ತಷ್ಟು ಖಚಿತಪಡಿಸಿಕೊಳ್ಳುವವಳಂತೆ ಕೇಳಿದಳು–

"ನಿನ್ನ ಸೊಂಟ ಎಲ್ಲಿದೆ? ನಿಮ್ಮ ಭುಜಗಳು ಎಲ್ಲಿವೆ? ನಿನ್ನ ಕುತ್ತಿಗೆ ಎಲ್ಲಿದೆ?"

ಅವಳ ಪ್ರಶ್ನೆಗಳಿಗೆಲ್ಲಾ ಪ್ರತಿ ಬಾರಿ ಆ ದನಿಯು ತಾಳ್ಮೆಯಿಂದ ಉತ್ತರಿಸುತ್ತಿತ್ತು.

"ಇದೋ ಕುತ್ತಿಗೆ ಇಲ್ಲಿದೆ, ಸೊಂಟ ಇಲ್ಲಿದೆ, ನನ್ನ ಭುಜಗಳನ್ನು ನೋಡುವೆಯಾ? ಅವೂ ಇಲ್ಲಿ ಇವೆ. ನೋಡು..."

ಅಲ್ಲಿಗೂ ಸುಮ್ಮನಾಗದೆ ಅವಳು, "ಹಾಗಾದರೆ, ನಿನ್ನ ತಲೆ ಎಲ್ಲಿದೆ?" ಎಂದು ಕೇಳಿದಳು.

"ನನ್ನ ತಲೆಯೇ? ಇದೋ ಇಲ್ಲಿದೆ... ಇಲ್ಲಿದೆ" ಎಂದು ಅದು ಗೊಗ್ಗರು ದನಿಯಲ್ಲಿ ಸ್ವಲ್ಪ ಒರಟಾಗಿಯೇ ಹೇಳಿತು.

ಆ ಹಠಮಾರಿ ಮಹಿಳೆ ಅಷ್ಟಕ್ಕೆ ಸುಮ್ಮನಾಗದೆ ಆ ದನಿ ಸೂಚಿಸಿದ ಕಡೆ ಹೋಗಿ ತಲೆಯನ್ನು ಮುಟ್ಟಿದಳು. ಆ ಕ್ಷಣವೇ ಧೊಪ್ಪೆಂದು ಕುಸಿದುಬಿದ್ದು ಸತ್ತುಹೋದಳು. ಆ ಅಗೋಚರ ಜೀವಿಗೆ ಎಲುಬುಗಳಾಗಲೀ ಕೂದಲುಗಳಾಗಲೀ ಇರಲಿಲ್ಲ.

ಆಧಾರ

1. A Treasury of Eskimo Tales'
   Author: Clara Keern Bayliss, Published: 1922
   Publisher: Thomas Y. Crowell Company, USA.
2. Inuit or Eskimo: Which name to use?
3. https://www.uaf.edu/anlc/resources/inuit_or_eskimo.php
4. http://www.theinitialjourney.com/features/eskimos-old-age/
5. Wikipedia: https://en.wikipedia.org/wiki/Eskimo/ – ಕನ್ನಡ/ಆಂಗ್ಲ ವಿಕಿಪೀಡಿಯಾ ಪುಟಗಳು.

❑

10

ಅಮೇರಿಕಾ – ಭಾರತ ಜಾನಪದದ ಸಾಮ್ಯತೆ

ಅನಿಲ್ ದೇಶಪಾಂಡೆ
ಪ್ಯಾಲಟೈನ್ ಉಪನಗರ, ಶಿಕಾಗೋ, ಇಲಿನಾಯ್

*

ಎಳ್ಳ ಅಮವಾಸಿಯ ದಿನ, ಸವಾರಿ ತಟ್ಟಿಯ ಬಂಡಿಯಲ್ಲಿ ಕುಳಿತು, ಘಲ್ ಘಲ್ ಅಂತ ಶಬ್ದ ಮಾಡೊ ಎತ್ತಿನ ಕೊರಳಾಗಿನ ಗಂಟಿ ಜೊತಿಗೆ ಬರಲಾರದ ಹಾಡ ಗುಣಗುಣಿಸ್ತಾ ಹೊಲಕ್ಕ ಹೊಂಟಾಗ, ನನಗ ಕಾಣೊ ಎಡ – ಬಲದ ದೃಶ್ಯಗಳೆಲ್ಲ ಏನೋ ಒಂದು ಕಥಿ ಹೇಳ್ತಾವ ಅಂತ ಅನಸ್ತಿತ್ತು. ಬಂಡಿ ನಡೆಸೊ ಗಂಗಪ್ಪ, ನಮಗ ಬಂಡಿ ಒಳಗ ಜಗಾ ಆಗಲಿ ಅಂತ ತಾನು ನೊಗದ ಮ್ಯಾಲೆ ಕೂತುಕೊಳ್ಳಂವ. ಬಂಡಿ ಒಳಗ ಕೂತ ನನಗ ಅವನ ತಲಿಮ್ಯಾಲಿ ಬಂಗಾರದ ಬಣ್ಣದ ಪಟಗಾನೂ (ರುಮಾಲು) ಆ ದೃಶ್ಯದೊಳಗ ಸೇರಿ ಏನೋ ಒಂದ ತರಹದ ಕಣ್ಣಿಗೆ ಕಟ್ಟೊಹಂಗ ಚಿತ್ರ ಮೂಡೋದ. ಇವತ್ತಿಗೂ ಆ ಚಿತ್ರಾ, ನನ್ನ ಕಣ್ಣ ಪರದಾದ ಮ್ಯಾಲೆ ಇನ್ನೂ ಹಂಗ ಉಳದಾದ. ಮನಸ್ಸಿಗೆ ಉಲ್ಲಾಸ ಆಗಿ, "ಗಂಗಪ್ಪ ಏನಾರ ಹಾಡು ಹಾಡೊ" ಅಂದ್ರ, ಒಂದ ಸ್ವಲ್ಪಾನು ನಾಚಿಕೊಳ್ಳದ ಜಾನಪದಾ ಹಾಡುವನು. ಆ ಹಾಡಿನೊಳಗ ಏನೋ ಒಂದ ಕಥಿ ಇರೋದು. ಆ ಹಾಡ ಕೇಳ್ತ, ಕಥಿಯನ್ನ ಊಹೆ ಮಾಡ್ತಾ ಸಾಗಿದರ, ಎಂಟು ಮೈಲಿ ದೂರದ ದಾರಿ ಸವೆದದ್ದು ಗೊತ್ತಾಗುತ್ತಿರಲಿಲ್ಲ. ನನಗ 'ಜಾನಪದ' ಅಂದ್ರ ನೆನಪಾಗೂದು ಈ ಮೇಲಿನ ಸನ್ನಿವೇಶ. ಆ ದೃಶ್ಯ ಮತ್ತು ಧ್ವನಿಯಲ್ಲಿ ಏನೋ ಒಂದು ಹಿತ ಅದ. ಯಾವಾಗಲೂ, ಬೇಕು ಬೇಕು ಅನ್ನಿಸೋ ಸಂಗತಿ. ನಾ ಊರು ಬಿಟ್ಟಮ್ಯಾಲೆ ಎಷ್ಟೊಂದ ಸಿನೆಮಾ, ನಾಟಕ, ಮ್ಯೂಸಿಕ್, ಡಾನ್ಸ, ಮನೋರಂಜನೆ ಕಾರ್ಯಕ್ರಮಗಳನ್ನ ನೋಡಿನಿ. ಆದರ ಆ ಜಾನಪದದ ಮಜಾನೆ ಬ್ಯಾರೆ. ಅದರೊಳಗ ಏನೋ ಒಂದ ಅಂಟಿಕೊಳ್ಳೊ ಗುಣ ಅದ. ಎಣ್ಣೀಹಂಗ ಜಿಡ್ಡ್ ಅಲ್ಲ, ಆದ್ರ ಒಂದ ಥರ ಗಂಧದ ಎಣ್ಣಿಹಂಗ, ಜಿಡ್ಡ್ ಇರೋದಿಲ್ಲ ಅದರ ಸುಗಂಧ ಇರ್ತದ. ಒಂದ ರೀತಿ 'ರೊಟ್ಟಿ ತುಪ್ಪಾ, ಚಟ್ನಿ, ಹೋಳಗಿ, ಬೆಣ್ಣಿ...' ಹೊಲದಾಗ ಕೂತ

ತಿಂದಹಾಂಗ! ಆ ಸೊಬಗ ಬ್ಯಾರೆ! ಊರ ಬಿಟ್ಟ ಇಪ್ಪತ್ತೈದು ವರುಷ ಆದರೂ ಮನಸ್ಸು ಇನ್ನೂ ಆ ರುಚಿನ ಮರೆತಿಲ್ಲ. ಚಿಕಾಗೊ ಮನೆಯೊಳಗ ಪಿತ್ತಲನಾಗ ಒಂದಿಷ್ಟು ಗಿಡಾ ಗಂಟಿ ಬೆಳಸಿ, ನೆನಪಾದಾಗೊಮ್ಮೆ, ಅಲ್ಲೆ ಕುಳಿತು ಊಟಾಮಾಡಿ ಚಟ ತೀರಿಸಿಕೋಳ್ಳತೀನಿ. ರೊಟ್ಟಿ, ಹೋಳಿಗಿಗೆ ಇರೊ ರುಚಿನ ಬ್ಯಾರೆ. ಪಿಜ್ಜಾ, ಬರ್ಗರ್ ರುಚಿನ ಬ್ಯಾರೆ! ನಾ ಎರಡೂ ಬಯಸಂವಾ. ಹಳೆ ಬೇರು ಹೊಸ ಚಿಗುರು ಅಂದಹಂಗ!

ಹಂಗ ಅಂದರ 'ಅಮೇರಿಕಾದಾಗ ಜಾನಪದ ವಾತಾವರಣ ಅಥವ ಜಾನಪದ ಸಾಹಿತ್ಯ ಇಲ್ಲ ಏನ?' ಅನ್ನೊ ಪ್ರಶ್ನೆ ಬರ್ತದ. ಹಂಗೇನ ಇಲ್ಲ. ಜನ ಇದ್ದಲ್ಲೆ ಜಾನಪದಾ ಇರೋದಾ ಅಲ್ಲೇನು? ಇಲ್ಲೆ ಅಮೇರಿಕಾದಗ ಅದಕ್ಕ Folklore ಅಂತ ಕರಿತಾರ. ಇಲ್ಲಿನೂ Folklore ಹಾಡು, ಕಥಿಗಳು, ನಾಟಕ ಎಲ್ಲ ಬಹಳ ಅವ. ಅಷ್ಟೆ ಯಾಕ, ನಮ್ಮ ದೇಶದಾಗನ ಹಂಗ (ಭಾರತದ್ ಹಂಗ) ಹರದ ಹಂಚಿಲ್ಲ. ಎಲ್ಲಾನೂ ಒಂದ ಕಡೆ ಲೈಬ್ರರಿನಾಗ ಮತ್ತ ಇಂಟರ್ನೆಟ್ಟಾಗ ಸಿಗೊ ಹಂಗ ವ್ಯವಸ್ಥಾ ಮಾಡ್ಯಾರ. ಮಾಡರ್ನ ಕಾಲದಾಗ ಜಾನಪದ ಸಾಹಿತ್ಯ ರಚನಾ ಮಾಡೊದು ಕಡಿಮೆ ಆಗ್ಯದ. ನಮ್ಮ ಭಾರತಾಗೂ ಇದ ಪರಸ್ಥಿತಿ ಅಲ್ಲೇನು? ಟಿವಿ, ಸಿನೇಮಾ ಬಂದಮ್ಯಾಲೆ Folklore ಬರೆಯವ್ರೂ ಇಲ್ಲ, ಕೇಳವ್ರೂ ಇಲ್ಲ! ಈಗಂತೂ ತಲ್ಯಾಗಿನ ಜಾಣತನ ಎಲ್ಲಾ ಕೈಯಾಗ (ಸ್ಮಾರ್ಟ್ ಫೋನ್ನಾಗ) ಬಂದಬಿಟ್ಟದ. ಇನ್ನ ಜಾನಪದ ಯಾರ ಕೇಳಬೇಕ? ಆದ್ರ 'ಜಾನಪದ' ಅಂತ ನಾ ಗೂಗಲ್ ಮಾಡಿದ್ದು ಈ ಸ್ಮಾರ್ಟ್ ಫೋನ್ನ್ಯಾಗ! ಹಂಗಾಗಿ ಇದಕ ಜಾಸ್ತಿ ಬಯ್ಯೊ ಹಂಗೂ ಇಲ್ಲ, ಯಾಕಂದರ ನಾವು ಅದರ ಹಂಗಿನ್ಯಾಗ ಇದ್ದಿವಿ! ಜಗತ್ತಿನೊಳಗ ಎಲ್ಲಾರಿಗೂ ಆಗಿದ್ದ ನಮಗ್ ಆಗ್ತದ, ಎಲ್ಲಾ ಕಡಿ ಇದ್ದಹಂಗ ಇಲ್ಲಿನೂ ಬದಲಾವಣೆ ಆಗ್ಯದ. ಭಾರತದಾಗಂತೂ ಟಿವಿ, ಸ್ಮಾರ್ಟ್ ಫೋನ್ ಹಾವಳಿ ಇನ್ನೂ ಹೆಚ್ಚ ಅದ.

ಈ ಟಿವಿ, ಸಿನೇಮಾ, ಕರೆಂಟ್ ಯಾವುದೂ ಇಲ್ಲದ ಕಾಲ ಒಂದಿತ್ತು, ಇಲ್ಲಿ, ಅಮೇರಿಕಾದಾಗ ಮನೋರಂಜನೆಗಾಗಿ ಇಲ್ಲಿಯವರೂ ಹಾಡು- ಹರಿಕಥಿ (ಹರಿಕಥಿ ಅಂದ್ರ ಹರಿ ಕಥಿನಾ ಅಲ್ಲ, ಅಂಥಾವ ದೊಡ್ಡ ಕಥಿಗಳು), ಕುಣಿತ, ಸಣ್ಣ ಕಥಿ, ನಾಟಕ ಸಾಕಷ್ಟು ಸೃಷ್ಟಿ ಮಾಡ್ಯಾರ. ಇಲ್ಲಿ ಜಾನಪದನ್ನ ಎರಡು ಭಾಗದಾಗ ತಿಳಕಬಹುದು. 'ಅಮೇರಿಕಾದ ಆದಿವಾಸಿಗಳು ರಚಿಸಿದ ಜಾನಪದ' ಮತ್ತು ಹದಿನಾರನೆ ಶತಮಾನದ ನಂತರ ವಲಸೆ ಬಂದ 'ಯೂರೋಪಿಯನ್ನರು ರಚಿಸಿದ ಜಾನಪದ.' ಆದಿವಾಸಿಗಳು ರಚಿಸಿದ ಜಾನಪದ ಸಾಹಿತ್ಯದ ಒಳಗ ಪ್ರಾಣಿ, ಪಕ್ಷಿ, ದೆವ್ವ, ರಾಕ್ಷಸ, ಕಾಡಿನಲ್ಲಿ ಹೋರಾಡುವ ಅತಿಮಾನುಷ ಶಕ್ತಿ ಉಳ್ಳ ನಾಯಕರ ಕುರಿತ ಸಂಗತಿಗಳು ಹೆಚ್ಚು. ಅವು ಪದ್ಯ ಅಥವಾ ಕಥಿ ರೂಪದಲ್ಲಿ ಹೆಚ್ಚು ಪ್ರಚಲಿತ. ಅಮೇರಿಕಾದ ಮೂಲನಿವಾಸಿಗಳದು ಬೇಟೆ ಮತ್ತು ಬೇಸಾಯ ಮುಖ್ಯ ಕಸಬು. ಅರಣ್ಯ ಪ್ರದೇಶದಲ್ಲಿ ಅವರ ಜೀವನಾ. ಬೇಟೆಗೆ ಹೋದವರು ಕಾಡಲ್ಲಿ ನಡೆದ ಸಾಹಸ ಸಂಗತಿಗಳನ್ನು ಅಥವ ಕಂಡ ಕೌತುಕಗಳನ್ನು ಹಾಡಿನ ರೂಪದಾಗ ಇಲ್ಲ ಅಂದ್ರ, ಕಥಿ ಕಟ್ಟಿ ಹೇಳುವರು. ಇದಲ್ಲದ ಕಾಡುಪ್ರಾಣಿಗಳನ್ನು ಕಥೆಯೊಳಗ ನಾಯಕರಾಗಿ ಮಾಡಿ ಅನೇಕ ಕಥೆಗಳನ್ನು ಹೆಣೆದಿರುವದನ್ನು ಕಾಣಬಹುದು.

ಭಾರತದಲ್ಲಿರುವ ಹಂಗ ಇಲ್ಲೂ ತೋಳ, ನರಿಗಳ ಕಥೆಗಳು ಹೇರಳವಾಗಿವೆ. 'Native American Trickster' ಸರಣಿ ಕಥೆಗಳು, ಭಾರತದ ಜಾತಕ ಕಥೆಗಳನ್ನು, ಕರಟಕ - ದಮನಕ, ಠಕ್ಕ ನರಿಯ ಕಥೆಗಳನ್ನ ಹೋಲುತಾವ. ಇದರರೊಳಗೂ ಬಹಳಷ್ಟು ನೀತಿ ಕಥೆಗಳು ಬರ್ತಾವ. ನಮ್ಮಲ್ಲಿರೊ 'ಪುಣ್ಯಕೋಟಿಯ' ಕಥೆಗಳಂತೆ. Trickster ಎಂದು ಕರೆಯಿಸಿಕೊಳ್ಳುವ 'ನರಿ' ಅದರ ಅನ್ವರ್ಥ ನಾಮವಾಗಿದೆ. ಈ ಜಾಣ (ಅಥವ ಕಪಟ) ನರಿಯು ಎಂಥದೆ ಕಠಿಣ ಪರಿಸ್ಥಿತಿಯಲ್ಲಿ ತನ್ನ ಜಾಣತನದಿಂದ ಗೆಲುವು ಸಾಧಿಸತ್ತದ. ಅಂಥದೊಂದು ಕಥಿ ಇಲ್ಲಿದೆ:

ಕಿಲಾಡಿ ನರಿ

ಬಹಳ ಹಿಂದ, ಅಂದರ, ಇನ್ನೂ ಭೂಮಿ ಮ್ಯಾಲ ಮನುಷ್ಯ ಓಡಾಡೊದು ಕಡಿಮೆ ಇದ್ದಾಗ, ಅಷ್ಟು ಹಿಂದ, ಒಂದು ಅಟ್ಟಂಬಾರ ಅರಣ್ಯ (ದಟ್ಟವಾದ ಕಾಡು) ಇತ್ತು. ಅಲ್ಲಿ ಒಂದು ದೊಡ್ಡ ಮತ್ತು ಕೆಟ್ಟ ಬುದ್ಧಿಯ ರಾಕ್ಷಸ ಮನಿ ಮಾಡಿಕೊಂಡಿತ್ತು. ಸಿಕ್ಕ ಸಿಕ್ಕ ಪ್ರಾಣಿಗಳನ್ನು ಲೆಕ್ಕ ಇಲ್ಲದ ತಿನ್ನುತ್ತಿತ್ತು. ಅದು ಈ ಕಿಲಾಡಿ ನರಿಯ ಅನೇಕ ಗೆಳೆಯರನ್ನು ಕಬಳಿಸಿತ್ತು. ಹೀಂಗಾಗಿ ಈ ನಮ್ಮ ನರಿಗೆ ಹೇಂಗಾದರೂ ಮಾಡಿ ರಾಕ್ಷಸನ ಮ್ಯಾಲೆ ಸೇಡು ತೀರಿಸಿಕೋಳ್ಳಬೇಕು ಅನ್ನೋ ಛಲ. ಒಂದು ದಿವಸ ಕಿಲಾಡಿ ನರಿ ಉಪಾಯ ಮಾಡಿತು. ದೂರದಾಗಿರೊ ಬೆಟ್ಟಕ್ಕೆ ಹೋಗಿ ತುಟ್ಟ ತುದಿವರೆಗೆ ಏರಿತು. ಅಲ್ಲೆ ಇದ್ದ ದೊಡ್ಡ ಬಂಡಿ ಕಲ್ಲಿಗೆ ತನ್ನನ್ನ ತಾನು ಹಗ್ಗಾ ತೊಗಂಡು ಕಟ್ಟಿಕೊಂಡಿತು. ಅಲ್ಲೇ ಮ್ಯಾಲ ನಿಂತಗೊಂಡು ರಾಕ್ಷಸನಿಗೆ ಕೂಗಿ ಹೇಳಿತು "ಬಾರಲೆ, ನೀ ಗಂಡಸ ಆಗಿದ್ದರ ನನ್ನ ತಿನ್ನ ಬಾ" ಅಂತ ಕರೀತು, ಚಾಲೆಂಜ ಮಾಡಿತು. ಆ ರಾಕ್ಷಸ ದೂರದ ನರಿಯನ್ನ ನೋಡಿ ನಕ್ಕಿತು. "ನಾನೇನ ಬರೊ ಮಗ ಅಲ್ಲ, ನಿನ್ನ ಎಳ್ಕೋತಿನಿ ತಡಿ" ಅಂತ ಮನಸಿನ್ಯಾಗ ಅನ್ಕೊಂಡು, ದೊಡ್ಡದಾಗಿ ಬಾಯಿ ತಗದು ಜೋರ್‌ನಾಗಿ ಉಸರ ಎಳಕೊಂಡಿತು. ಹಾದ್ಯಾಗಿದ್ದ ಗಿಡ-ಗಂಟಿ, ಕಲ್ಲು-ಮಣ್ಣು ಬಂದು ರಾಕ್ಷಸದ ಬಾಯಿಯೊಳಗ ಬಿದ್ರೂ, ನರಿ ಮಾತ್ರ ಬರ್ಲಿಲ್ಲ. ನರಿ ಅಲ್ಲೇ ಬೆಟ್ಟದ ಮ್ಯಾಲ ನಕ್ಕೊತ ನಿಂತಿತ್ತು. ಅದನ್ನ ನೋಡಿ ರಾಕ್ಷಸಗ ಅವಮಾನ ಆಯ್ತು. ಆ ನರಿ, ಸುಪರ್ ಮ್ಯಾನ್‌ನ ಹಂಗ ಟೊಂಕದಮ್ಯಾಲೆ ಕೈ ಇಟಗೊಂಡು ದೊಡ್ಡ ಬಂಡೆಯ ಕಾಲಿಗೆ ಆಸರೆಮಾಡಿಕೋಂಡ ನಿಂತಿತ್ತು. ರಾಕ್ಷಸ ಜೋರಾಗಿ ಕಾಲನ್ನು ಅಪ್ಪಳಿಸಿ ಬೆಟ್ಟ ಅಲ್ಲಾಡಿಸೊದಕ್ಕ ಪ್ರಯತ್ನ ಮಾಡಿದ. ಆದರ ನರಿ ಹಾಂಗ ನಗುತಾ ನಿಂತಿತ್ತು. ಆವಾಗ ರಾಕ್ಷಸ ಒಂದ ಉಪಾಯ ಮಾಡಿದ. "ಏ ನಾನು ಸೋತೆ, ನಾವಿಬ್ರು ಗೆಳೆಯೊರಾಗಿ ಇರೊಣ, ಇವತ್ತ ನಮ್ಮ ಮನಿಗೆ ಊಟಕ್ಕ ಬಾ" ಅಂತ ರಾಕ್ಷಸ ನರಿಗೆ ಔತಣ ಕೊಟ್ಟ. ನರಿ ಅವನ ಅಪ್ಪನಷ್ಟ ಶ್ಯಾಣ್ಯಾ. "ಆಯ್ತಪ ಬರ್ತಿನಿ, ಆದ್ರ ಒಂದು ಶರತ್ತು" ಅಂತ ಹೇಳ್ತು. ಶರತ್ತು ಏನಪಾ ಅಂದ್ರ "ನನಗ ನಿನ್ನ ಹೊಟ್ಟಿಯೊಳಗ ಹೋಗಿ, ಅಲ್ಲಿ ಹೆಂಗ ಅದ ಅಂತ ನೋಡಬೇಕು ಅಂತ ಆಸಿ. ನನಗ ನೀ, ನಿನ್ನ ಹೊಟ್ಟಿಯೊಳಗ ಹೋಗಾಕ ಬಿಡಬೇಕು." ರಾಕ್ಷಸಗ ಖುಷಿನೋ ಖುಶಿ. 'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದೂ

ಹಾಲು ಅನ್ನ' ಅಂದಹಂಗ ಆಯ್ತು. ರಾಕ್ಷಸ ಒಪಿಗೊಂಡ. ನರಿ ಬಾಯಿ ಒಳಗ ಹೊದಮ್ಯಾಲೆ ಬಾಯಿ ಮುಚಿಗೋಂಡ ಕೂತರ ಆಯ್ತು ಅಂದಕೊಂಡ. ಆದ್ರ ನರಿ ರಾಕ್ಷಸನ ಬಾಯಿ ಒಳಗ ಹೋಗುವಾಗ ಚಿಮಣಿ ಎಣ್ಣಿ, ಬೆಂಕಿ ಕಡ್ಡಿ ಒಯ್ದಿತ್ತು. ಅದು ಸೀದಾ ಹೊಟ್ಟಿಯೊಳಗ ಹೋಗೊ ಬದಲು, ಮೊದಲು ರಾಕ್ಷಸನ ಹೃದಯಕ್ಕ ಹೋತು. ಅಲ್ಲಿ ಬೆಂಕಿ ಹಾಕತು. ಅಲ್ಲಿಂದ ಸೀದಾ ರಾಕ್ಷಸನ ಹೊಟ್ಟಿಯೊಳಗ ಬಂದ. ಅಲ್ಲಿ ನೋಡಿದ್ರ ನರಿಯ ಎಲ್ಲ ಗೆಳೆಯರು ನಡಗುತ್ತಾ ನಿಂತಾರ! ಇತ್ತಲಾಗ ಹೃದಯದಾಗ ಬೆಂಕಿ ಬಿದ್ದದ್ದಕ್ಕ ರಾಕ್ಷಸ ದೊಡ್ಡದಾಗಿ ಬಾಯಿ ತಗದು, ಜೋರಾಗಿ ಅಳೊದಕ್ಕ ಶುರುವು ಮಾಡಿದ. ಇದ ಸರಿಯಾದ ಸಮಯಾ ಅಂತ ಹೇಳಿ, ನರಿ ರಾಯ ತನ್ನ ಎಲ್ಲ ಗೆಳೆಯರನ್ನ ಕರೆದುಕೊಂಡು ಹೊರಗ ಓಡಿ ಬಂತು. ಆ ರಾಕ್ಷಸ ನಾಲ್ಕು ತುಂಡುಗಳಾಗಿ ನಾಲ್ಕು ದಿಕ್ಕುಗಳಿಗೆ ಬಿದ್ದ. ಅವೇ ನಾಲ್ಕು ಬೇರೆ ಬೇರೆ ಆದಿವಾಸಿ ಜನಾಂಗ ಆದವು. ಇದು 'Native American Trickster' ಕಥಾ ಸರಣಿಯ ಒಂದು ಕಥಿ.

ಈ ಕಥಿ ಓದುವಾಗ, ನನಗೆ ನನ್ನ ಅಜ್ಜಿ ಹೇಳುತ್ತಿದ್ದ ರಾಕ್ಷಸನ ಕಥೆಗಳ ನೆನಪಾಯ್ತು. ಅಜ್ಜಿಯ ಪಕ್ಕದಾಗ ಮಲಗಿದ ನಾನು ಕಥಿಯಲ್ಲಿ ಮೈ ಮರೆತು ದೊಡ್ಡದಾಗಿ ಬಾಯಿ ತೆರೆದು ಕೇಳುವಾಗ, ಕಥೆ ಮುಗಿದ ನಂತರ ಅಜ್ಜಿ ನನ್ನ ತಲೆಗೆ ಮೆತ್ತಗೆ ತಟ್ಟಿ "ನೀನ್ಯಾಕ್ ಆ ರಾಕ್ಷಸ ತಗದಹಂಗ ಬಾಯಿ ತಗದೀ" ಎನ್ನುತ್ತ ತನ್ನ ಬೊಚ್ಚು ಬಾಯಿ ತೆಗೆದು ನಗತ್ತಿತ್ತು.

ಇದೆ ತರಹದ ಇನ್ನೊಂದು 'How Coyote Stole Fire' ಕಥೆಯೊಳಗ ಬುದ್ಧಿವಂತ ನರಿಯು 'ಅಗ್ನಿ ಪುರುಷ'ರಿಂದ ಬೆಂಕಿಯನ್ನು ಹೆಂಗ ಕಳವುಮಾಡಿ ಮಾನವರಿಗೆ ಬೆಂಕಿಯನ್ನು ತಂದುಕೊಟ್ಟು ಸಹಾಯ ಮಾಡಿತು ಅಂತ ಹೇಳ್ತಾರ! ಆವಾಗಿನಿಂದ ಮಾನವನು ಬೆಂಕಿ ಉಪಯೋಗಿಸದ ಕಲತನಂತ! ಈ ಪ್ರಯತ್ನದಾಗ ನರಿಗೆ ಸಹಾಯಕ್ಕಾಗಿ ಅಳಿಲು (ಇಣಚಿ), ಚಿಪ್ಮಂಕ್ ಇತ್ಯಾದಿ ಪ್ರಾಣಿಗಳು ಬೆಂಕಿಯನ್ನು ಹೊತ್ತುತರುವದಕ್ಕ ಸಹಾಯ ಮಾಡುತ್ತವೆ. ಅದಕ್ಕಾಗಿ ಅವುಗಳ ಬೆನ್ನ ಮೇಲೆ ಈಗಲೂ ಬರೆ ಮೂಡಿದೆ, ಬಾಲವು ಸೆಟೆದು ನಿಂತಿದೆ ಅಂತೆ. ಈ ಕಥೆಯು ನಮ್ಮ ರಾಮನ ಕಥೆ 'ಅಳಿಲು ಸೇವೆ' ನೆನಪಿಸುವದಿಲ್ಲವೆ?

ಈಗ ಹೇಳಿ ನಮ್ಮಲ್ಲಿ ಇರುವ ಜಾನಪದ ಕಥೆಗಳಿಗೂ ಮತ್ತು ಅಮೆರಿಕನ್ನರ Folkloreಗಳಿಗೂ ಸಾಮ್ಯತೆ ಇದೆ ಅಲ್ಲವೆ. ಭಾಷಾ ಬೇರೆ ಇರಬಹುದು, ಮನುಷ್ಯ ಭಾವನೆಗಳು ಸಮಾನ! ಇಂತಹ ಇನ್ನೂ ಅನೇಕ ಸುಂದರವಾದ 'Native American Trickster' ಸರಣಿ ಕಥೆಗಳು, ನೀಳ್ಗತೆಗಳು ಇವೆ. ನೇಟೀವ್ ಅಮೆರಿಕನ್ನರಲ್ಲಿ ಸಾಕಷ್ಟು ಕಥೆಗಳು ಬಾಯಿಂದ ಬಾಯಿಗೆ ಪದ್ಯ ರೂಪದಲ್ಲಿ, ಗದ್ಯ ರೂಪದಲ್ಲಿ ನಮ್ಮ ಲಾವಣಿ ಪದಗಳಂತೆ ಜಾನಪದ ಸಾಹಿತ್ಯವಾಗಿ ಬೆಳೆದು ಬಂದಿವೆ. 'IKTOMI' ಎನ್ನುವ ಜೇಡರ ಹುಳುವಿನ ಕಥೆಗಳು ಕೂಡ ಅನೇಕ ಅಮೇರಿಕನ್ ಜನಾಂಗಗಳಲ್ಲಿ ಪ್ರಚಲಿತವಾಗಿವೆ. 'Iktomi and Rabbit Boy,' 'Iktomi and the Ducks,' ಇತ್ಯಾದಿ. ಅಮೆರಿಕಾದ Folkloreನಲ್ಲಿ ಪ್ರಾಣಿ, ಪಕ್ಷಿಗಳ ಆಧಾರಿತ ಕಥೆಗಳಂತೆ ದೆವ್ವ ಭೂತಗಳ ಕಥೆಗಳು ಬಹಳ

ಕಂಡುಬರುತ್ತವೆ. ಬಹುಶಃ ರಾತ್ರಿಯ ಕತ್ತಲಿನ ಮತ್ತು ಕಾಡಿನ ವಾತಾವರಣದಿಂದಾಗಿ ದೆವ್ವ ಭೂತಗಳ ಕಥೆಗಳು ಹುಟ್ಟಿರಬಹುದು.

ಭಾರತಲ್ಲಿ ಕೂಡ ನಾನು ಚಿಕ್ಕವನಿರುವಾಗ, ಇನ್ನೂ ಊರಿಗೆ ಕರೆಂಟ್ (ದೀಪ) ಬರುವದಕ್ಕಿಂತ ಮುಂಚೆ, ರಾತ್ರಿ ಹೆಚ್ಚು ಕರಾಳವಾಗಿ ಕಾಣುತ್ತಿತ್ತು. ಏನೊ ಅವ್ಯಕ್ತ ಭಯ. ಕತ್ತಲೆ ಇದ್ದೆಡೆ ನೋಡುವದಕ್ಕೂ ಹೆದರಿಕೆ. ಆ ಕತ್ತಲೆಯಲ್ಲೇ ದೆವ್ವಗಳಿರುವದು ಅಲ್ಲವೆ? ಆಗ ನಮ್ಮ ಊರಿನೊಳಗ 'ಕೊಳ್ಳಿ ದೆವ್ವಗಳು,' 'ಸಾಮಾನ್ಯ ದೆವ್ವಗಳು' (generic), ಶಾಲೆಯ ಮೂಲೆಯ ಕೋಣೆಯಲ್ಲಿ ಇರುವ 'ಏಳು ಮಕ್ಕಳ ತಾಯಿ ದೆವ್ವ'(customized one), ಹೀಗೆ ನಾನಾ ವಿಧದ ವಿಚಿತ್ರ ದೆವ್ವಗಳು. ಪ್ರತಿ ದೆವ್ವದ ವರ್ತನೆ ಬೇರೆ ಬೇರೆ. ಅದರಲ್ಲಿ ಕೆಲವು ಒಳ್ಳೆಯ ನಡತೆ ದೆವ್ವಗಳು, ಕೆಲವು ಕಿಲಾಡಿ ದೆವ್ವಗಳು, ಇನ್ನೂ ಕೆಲವು ಕ್ರೂರಿ ದೆವ್ವಗಳು. ಒಂದೇ, ಎರಡೇ ನೂರಾರು ಕಥೆಗಳು. ದೆವ್ವಗಳನ್ನು ಕಂಡವರು ಕಡಿಮೆ. ಕೇಳಿ ತಿಳಿದವರೆ ಹೆಚ್ಚು! ಇದೆ ತರಹದ ಅನೇಕ ದೆವ್ವದ ಕಥೆಗಳು ಅಮೇರಿಕಾದ ಜಾನಪದದಲ್ಲಿ ಹಾಸುಹೊಕ್ಕಾಗಿವೆ. 'Aunty Greenleaf and the White Deer,' 'Arkansas Traveler,' 'The Dog Boy,' 'White Horse,' 'Bloody Mary,' 'Ghost Train,' ಇತ್ಯಾದಿ. ಇದಲ್ಲದೆ ಎಲ್ಲ ಐವತ್ತೂ ರಾಜ್ಯಗಳಲ್ಲಿ ಅನೇಕ ದಂತ ಕಥೆಗಳು ಅಮೇರಿಕೆಯ ಜಾನಪದ ಸಾಹಿತ್ಯವನ್ನು ಸಮೃದ್ಧಗೊಳಿಸಿವೆ. ದಂತ ಕಥೆಗಳಲ್ಲಿ ನನಗೆ ರೋಚಕ ಅನ್ನಿಸಿರುವ ಕಥೆಗಳೆಂದರೆ; 'Wendigo — The Frostbitten Monster,' 'A Gift from Saint Nicholas,' 'Attack of the Mammoth,' ಮುಂತಾದವು. ತುಂಬಾ ರೋಚಕ ಅನ್ನಿಸಿದ್ದ ಇನ್ನೂ ಒಂದು ಕಥೆ, ಇದು ವನದೇವತೆಯ ಪ್ರೇಮ ಕಥೆ. ಭಾರತಲ್ಲಿ ಕೇಳಿರುವಂತಹದ್ದೆ. ಇದನ್ನು ಓದಿದಾಗ 'Déjàvu' ಆದ ಅನುಭವ ತರುವಂತಹದು. 'Guardian of Yosemite,' ಇದು ಕ್ಯಾಲಿಫೋರ್ನಿಯಾದ ಯೊಸೆಮಿಟಿ ಕಣಿವೆಯ ಮಿಯೋವಾಕ್ ಪಂಗಡದ ಜನಾಂಗದಲ್ಲಿ ಪ್ರಚಲಿತ ಕಥೆ. ಹೇಗೆ ಮಾನವನ ಪ್ರಕೃತಿಪ್ರೇಮ ಗಾಢವಾಗಿ ಅನುರಾಗಕ್ಕೆ ಮಿಳಿತವಾಯಿತು ಎನ್ನುವದರ ಬಗೆಗೆ.

ಯೋಸೆಮಿಟಿಯ ರಕ್ಷಕಿ (Guardian of Yosemite)

ತೈಸಿಯಾಕಾ (Tisayaca) ಎನ್ನುವ ವನದೇವತೆ ಯೊಸೆಮಿಟಿ ವನವನ್ನು ಕಾಪಾಡುತ್ತಿದ್ದಳು. ಆ ಸುಂದರವಾದ ವನಕ್ಕೆ ಹೆಚ್ಚಾಗಿ ಒಳ್ಳೆಯ ಜನರೇ ಭೇಟಿ ಕೊಡೋರು. ಅದು ಆಕೀಗೂ ಸಂಭ್ರಮ ಮತ್ತು ತೃಪ್ತಿ ಕೊಟ್ಟಿತ್ತು. ತೃಪ್ತಿ ಇದ್ದಲ್ಲಿ ಸಂತೋಷ ಇರತದ ಅಲ್ಲೇನು? ಹಂಗಾಗಿ ಇಡೀ ವನಾ ಅನ್ನೋದು ಆನಂದದಿಂದ ಸಮೃದ್ಧಿಯಾಗಿ ಬೆಳೆದಿತ್ತು. ಈ ಸಂತೋಷದಾಗ ಕೆಲವೊಮ್ಮೆ ತೈಸಿಯಾಕಾ ಒಳ್ಳೆಯ ಜನರ ಕಣ್ಣಿಗೆ ಮಳೆಬಿಲ್ಲಿನ ಹಂಗ ಕ್ಷಣಕಾಲ ಕಾಣಿಸಿಕೊಳ್ಳುತ್ತಿದ್ದಳು, ಅದನ್ನ ಕಂಡವರು ಸಂಭ್ರಮದಿಂದ ತಮ್ಮ ಜೀವನದ ಸಾಧನೆ ಎಂಬಂತೆ ಕಥಿ ಮಾಡಿ ವರ್ಣಿಸುವರು. ಒಂದು ದಿನ ತೈಸಿಯಾಕಾಳ ಕಣ್ಣಿಗೆ ಒಬ್ಬ ಸ್ಫುರದ್ರೂಪಿ ಯುವಕ ಕಂಡ. ಅವನ ಹೆಸರು ತುಟೊಕಾನುಲಾ (Tutokanula).

ಅವನು ಅಲ್ಲಿ ಬೇಟೆಗಾಗಿ ತನ್ನ ಜನರೊಡನೆ ಬಂದಿದ್ದ. ಅವರೆಲ್ಲರಲ್ಲಿ ಅವನದು ಪ್ರತ್ಯೇಕವಾಗಿ ಎದ್ದು ತೋರೋ ವ್ಯಕ್ತಿತ್ವ, ಕಟ್ಟುಮಸ್ತಾದ ಆಸಾಮಿ. ಅವನನ್ನು ಕಂಡು ವನದೇವತೆ ಮೈಮರೆತಳು. ತನ್ನನ್ನೆ ತಾನು ತೋರಿದಳು, ಬಹುಶಃ ಮೈಮರೆತದ್ದಕ್ಕ ಸ್ವಲ್ಪ ಜಾಸ್ತಿ ಹೊತ್ತು ತೋರಿದಳೇನೋ? ಆ ಕ್ಷಣದಾಗ ಮಿಂಚಿ ಮಾಯವಾದ ಆಕೀನ್ನ ನೋಡಿ ತುಟೊಕಾನುಲಾ ಬೆರಳ ಕಚ್ಚಿಕೊಂಡ. ಬಂಗಾರ ಬಣ್ಣದ ಅವಳ ಮುಂಗುರಳ ನೋಡಿ ಮರುಳಾದ. ಆಕಿನ್ನ ಮುಟ್ಟಬೇಕು ಅಂತ ಕೈಚಾಚಿದ. ನಾಚಿ ನೀರಾದ ಚೆಲುವಿ ತೈಸಿಯಾಕಾ, ಜಿಂಕೆಹಂಗ ಜಿಗಿದು ಮಾಯವಾದಳು. ವನದಾಗ ಮತ್ತೇ ಆಕಿನ್ನ ನೋಡದಕ್ಕ ತುಟೊಕಾನುಲಾ ಇನ್ನಿಲ್ಲದಹಂಗ ಹುಡುಕಾಡಿದ. ಅವಳಿಗಾಗಿ ಕಾಯಕೊತಾ ಅನ್ನ ನೀರ ಎಲ್ಲಾ ಬಿಟ್ಟ ವನದಾಗ ಇದ್ದಬಿಟ್ಟಾ. ಸ್ವಲ್ಪ ದಿನ ಕಳದಮ್ಯಾಲ ಬ್ಯಾಸರ ಮಾಡಿಕೊಂಡ. ವಾಪಸು ಊರಿಗೆ ಹೋದ. ಅವನ ಹಿಂದನಾ ವನದ ಜೀವನಾ ಹೋದಂಗಾಗಿ, ಯೊಸೆಮಿಟಿ ವನದಾಗ ಉಸರ ಇಲ್ಲದ ಹಂಗಾತು. ಎಲ್ಲಾ ಗಿಡಾ ಗಂಟಿ ಅವನ ವಿರಹದ ಬೆಂಕ್ಯಾಗ ಬೆಂದು ಸೊರಗಿದವು. ಹಕ್ಕಿ ಹಾಡೋದ ಬಿಟ್ಟವು, ನದಿ ಹರಿಯೋದ ಬಿಟ್ತು, ನರಿ ಕೂಗೋದ ಬಿಟ್ತು. ಹಿಂಗ ಒಂದು ವರ್ಷ ಉರುಳಿತು!

ಸ್ವಲ್ಪ ದಿನಗಳಾದ ನಂತರ ತೈಸಿಯಾಕಾಳಿಗೆ ತುಟೊಕಾನುಲಾನನ್ನು ನೋಡಬೇಕು ಅಂತ ಆಸೆ ಆಯ್ತು. ವನದಾಗ ಬಂದ ನೊಡ್ತಾಳ, ವನ ಎಲ್ಲ ಬಾಡಿಹೋಗ್ಯದ! ಅವಳಿಗೆ ತನ್ನ ತಪ್ಪಿನ ಅರಿವಾಗಿ ದುಃಖಪಟ್ಟು, ತುಟೊಕಾನುಲಾ ಬಂದಾನು ಅಂತ ಕಾದಳು. ಅಲ್ಲೇ ಇರುವ ದೊಡ್ಡ ಬಂಡೆಯ ಮ್ಯಾಲ ಮಣಕಾಲೂರಿ ಭಗವಂತನಲ್ಲಿ ದಿನಾ ಬೇಡಿಕೋಂಡಳು. “ನನ್ನಿಂದ ತಪ್ಪಾತು ಶಿವ, ಎಲ್ಲಾನು ಮೊದ್ಲ ಇದ್ದಂಗ ಮಾಡೂ, ತುಟೊಕಾನುಲಾ ಬರೊಹಂಗ ಮಾಡು” ಅಂತ ಭಕ್ತಿಯಿಂದ ಕೇಳಿಕೊಂಡಳು. ಆ ಕ್ಷಣಕ್ಕಾಗಿ ಕಾಯುತ್ತಿದ್ದನೇನೊ ಅನ್ನುಹಂಗೆ ಭಗವಂತ, ವನದಲ್ಲಿ ಮತ್ತೇ ಜೀವ ತುಂಬಿದ. ವನ ಅರಳಿತು, ಸುಮನವೂ ಅರಳಿತು. ಬೆಟ್ಟದಾಗಿಂದ ಹರಿದ ನೀರು ವನವನ್ನು ಮತ್ತೇ ಹಚ್ ಹಸರು ಮಾಡಿತು. ಈ ವಿಷಯ ತಿಳದು ಊರಾಗಿನ ಮಂದಿ ವನಕ್ಕ ಬರೋದಕ್ಕ ಶುರು ಮಾಡಿದರು. ತುಟೊಕಾನುಲಾಗ ಮತ್ತೇ ಆಸೆ ಹುಟ್ಟಿತು. ಅವನೂ ಬಂದ. ಸುಂದರಬನ ಕಂಡ. ಫಲ ಪುಷ್ಪಗಳ ಸಂಭ್ರಮಾನೂ ಕಂಡ, ಅಲ್ಲೇ ಹೊಸದಾಗಿ ನಿರ್ಮಿತವಾದ ಒಂದು ಸುಂದರವಾದ ಜಲಪಾತದ ಅಡಿಯಲ್ಲಿ ಮೈಯಲ್ಲ ಕಣ್ಣಾಗಿಸಿ ತೈಸಿಯಾಕಾ ಬಂದಾಳು ಅಂತ ಕಾಯುತ್ತ ಕುಳಿತ. ಅಲ್ಲೇ ದೂರದಾಗ ಇದನೆಲ್ಲ ನೋಡುತ್ತಿದ್ದ ವನದೇವತೆಗೆ ಖುಶಿನೋ ಖುಶಿ, ತೈಸಿಯಾಕಾಗ ಇನ್ನು ತಡೆಯೊಕ ಆಗಲಿಲ್ಲ. ಮೆಲ್ಲ ಮೆಲ್ಲನೆ ಬಂದು ಜಲಪಾತದ ಧುಮುಕುವ ನೀರನ್ನ ತಗೊಂಡು ಪನ್ನೀರಾಗಿಸಿ ಅವನಿಗೆ ಸಿಂಪಡಿಸಿದಳು. ಮತ್ತೇ ಅವನ ಕಣ್ಣಿಗೆ ಕಾಣಿಸಿಕೊಂಡಳು. ಈ ಬಾರಿ ತುಟೊಕಾನುಲಾ ತಡಮಾಡಲಿಲ್ಲ. ತಟ್ಟನೆ ಕೈ ಚಾಚಿದವ ಹಾಂಗೆ ಗಟ್ಟಿಯಾಗಿ ಹಿಡಿದುಬಿಟ್ಟ. ಅವಳೂ ಅವನನ್ನು ಅಪ್ಪಿಕೊಂಡಳು, ಒಪ್ಪಿಕೊಂಡಳು. ಇದನೆಲ್ಲವ ನೋಡುತ್ತಿದ್ದ ಜಲಪಾತ ನಾಚಿ ನೀರಾಗಿ, ನೋಡಿಯೂ ನೋಡದಹಂಗ ನಟಿಸಿ ಇನ್ನಷ್ಟೂ ಲಗುಬಗೆಯಿಂದ ಹರಿದು

ಹೋತು. ಅವರ ಪ್ರೇಮ ಅಲ್ಲೇ ಅರಳಿ ಅದೇ ಜಲಪಾತದ ಮ್ಯಾಲೆ ಎರಡು ಕಾಮನ ಬಿಲ್ಲು ಮೂಡಿದವು. ಈಗ ಆ ಜಲಪಾತಕ್ಕೆ 'Bridal Veil Falls' ಎಂದು ಕರಿತಾರ. ಈಗಲು ಒಳ್ಳೆಯ ಬಿಸಿಲು ದಿನದಂದು ಆ ಎರಡೂ ಕಾಮನ ಬಿಲ್ಲುಗಳು ಅಲ್ಲೇ ಕಾಣತಾವು. ಹೇಗಿದೆ ಈ ಪ್ರೇಮಕಥೆ? ನಾಯಕ ನಾಯಕಿಯರ ಹೆಸರು ಬದಲಾಯಿಸಿದರೆ ಅಪ್ಪಟ ಭಾರತದ ಪ್ರಣಯ ಕಥೆ ಅನ್ನಿಸುವದಿಲ್ಲವೆ? ಈ ತರಹದ ಅನೇಕ ಅಮೇರಿಕ ಜಾನಪದ ಕಥೆಗಳು ಮತ್ತು ನಮ್ಮ ಭಾರತದ ಜಾನಪದ ಸಾಹಿತ್ಯದಲ್ಲಿ ಸಾಮ್ಯತೆ ಕಂಡುಬರುತ್ತದೆ. ಜನ ಇದ್ದಲ್ಲಿ ಜಾನಪದ, ಸೃಜನಶೀಲತೆ ಹುಟ್ಟಿ ಕಥೆಗಳಿಗೆ, ಕಾವ್ಯಗಳಿಗೆ, ನಾಟಕಗಳಿಗೆ ಗ್ರಾಸ ಒದಗಿಸುತ್ತವೆ. ಹಾಗೆ ನೋಡಿದರೆ ಜಗತ್ತಿನಾದ್ಯಂತ ಜಾನಪದ ಹರಡಿ ತಣ್ಣೆಳಲನ್ನು ಸೃಷ್ಟಿಸಿದೆ. ಆದರೆ ಈ ನಾಗಾಲೋಟದ ಬದುಕಿನಲ್ಲಿ ಆ ನೆರಳಿನಲ್ಲಿ ವಿಶ್ರಮಿಸಲು, ಆನಂದಿಸಲು ಸಮಯ ಮಾಡಿಕೊಳ್ಳಬೇಕು.

ಹದಿನಾರನೆಯ ಶತಮಾನದಿಂದ ಈಚೆಗೆ, ಯೂರೋಪಿಯನ್ನರು ಅಮೇರಿಕೆಗೆ ಬಂದು ನೆಲಸಿದ ಮೇಲೆ ಜಾನಪದ ಸಾಹಿತ್ಯ ಹೊಸ ತಿರುವನ್ನು ಪಡೆಯಿತು. ಈ ಜಾನಪದದಲ್ಲಿಯೂ, ಕಾವ್ಯ, ಕಥೆ, ನೀಳ್ಗತೆ, ನಾಟಕ, ನೃತ್ಯ, ಸಂಗೀತ ಹೇರಳವಾಗಿದೆ. ಅದಕ್ಕೆ ಪೂರಕವಾಗಿ ಅನೇಕ ನಾಟಕ ಕಂಪನಿಗಳು ಉದಯಿಸಿದವು. 'American folklore theater,' 'Northern Sky Theater Amphitheater,' 'Walker Bay Theater,' ಹೀಗೆ ಹಲವು ಉದಾಹರಣೆಗಳು. ಅಮೇರಿಕಾದ ಕ್ರಾಂತೀಯ ಸಮರ (Revolutionary War) ಸಮಯದಲ್ಲಿ ಜಾನಪದ ಸಾಹಿತ್ಯಕ್ಕೆ ರಾಜಕೀಯ ಘಟನೆಗಳು, ನಾಯಕರುಗಳು ವಿಷಯಗಳನ್ನು ಒದಗಿಸಿದವು. ಅನೇಕ ಜಾನಪದ ಕಥೆಗಳಲ್ಲಿ `George Washington,' 'Patrick Henry,' 'Betsy Ross,' 'Molly Pitcher,' ಇವರನ್ನು ಕುರಿತ ದಂತ ಕಥೆಗಳು ಹುಟ್ಟಿಕೊಂಡವು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಜಾನಪದ ಸಾಹಿತ್ಯದಲ್ಲಿ ಇದೇ ತರಹದ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಈ ರೀತಿಯಿಂದ ಅಮೇರಿಕಾ ಮತ್ತು ಭಾರತದ ಜಾನಪದ ಸಾಮ್ಯತೆಯನ್ನು ದೃಢೀಕರಿಸಬಹುದು. ಬಹುಶಃ ಇದು ಜಗತ್ತಿನಾದ್ಯಂತ ಒಂದೆ ತರಹದ ವಿದ್ಯಮಾನ (Phenomenon) ಇರಬಹುದು!!.

ಆಧಾರ

1. Introduction to Native American Trickster Tales.
2. Indigenous Peoples' Literature.
3. Legendary Native American Figures – Iktomi.
4. American Indian Trickster Tales (Myths and Legends) Paperback.

❑

11

ಹೋರಾಟಕ್ಕೆ ದನಿಯಾದ ಜನಪದ ಗೀತೆ

ನಳಿನಿ ಮೈಯ
ಡೇರಿಯನ್, ಇಲಿನಾಯ್

*

ಅಮೆರಿಕಾದ ಇತಿಹಾಸದಲ್ಲಿ ಉದ್ದಕ್ಕೂ ಜನಜೀವನದಲ್ಲಿ ಗೀತೆಯೊಂದು ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿದೆ, ಹಾಗೂ ಆ ಜನಪದ ಗೀತೆ ಇಂದಿಗೂ ಪ್ರಸ್ತುತವಾಗಿದೆ ಎಂದರೆ ನಿಮಗೆ ಆಶ್ಚರ್ಯವೆನ್ನಿಸಬಹುದು. ಹೌದು, ಅಂತಹ ಒಂದು ಗೀತೆ ಇದೆ. ಅದೇ 'ವಿ ಶಲ್ ಓವರ್ಕಮ್'– We shall Overcome. ಈ ಗೀತೆ ಕಣ್ಣೀರಾಗಿ, ಬೆವರಾಗಿ, ರಕ್ತವಾಗಿ ಅಮೆರಿಕಾದ ಮಣ್ಣಿನಲ್ಲಿ ಸೇರಿಹೋಗಿದೆ. ಚರ್ಚುಗಳಲ್ಲಿ, ಚಳುವಳಿಗಳಲ್ಲಿ, ಜೈಲುಗಳಲ್ಲಿ, ಸಭೆಗಳಲ್ಲಿ, ಏಕಾಂತದಲ್ಲಿ, ಗುಂಪಿನಲ್ಲಿ ಮತ್ತೆ ಮತ್ತೆ ಪ್ರತಿಧ್ವನಿಸಿದ ಗೀತೆ ಇದು. ಇದು ಹುಟ್ಟಿದ್ದು ಕರಿಯ ಗುಲಾಮರು ದುಡಿಯುತ್ತಿದ್ದ ದಕ್ಷಿಣ ರಾಜ್ಯಗಳ ಹತ್ತಿಯ ಹೊಲಗಳಲ್ಲಿಯಾದರೂ ಮುಂದೆ ವಿಶ್ವದಾದ್ಯಂತ ಶೋಷಿತರ ತಲ್ಲಣಗಳನ್ನು ಹತ್ತಿಕ್ಕುವ ಗೀತೆಯಾಗಿ ಇದು ಪ್ರಖ್ಯಾತವಾಯಿತು.

ಗೀತೆಯ ಉಗಮ

19ನೆಯ ಶತಮಾನದಲ್ಲಿ ದಕ್ಷಿಣದ ಗುಲಾಮಗಿರಿಯನ್ನು ತಪ್ಪಿಸಿಕೊಂಡು ಉತ್ತರಕ್ಕೆ ಓಡಿ ಬಂದ ಧೀರ, ಸಾಹಸಿ ಫ್ರೆಡರಿಕ್ ಡಗ್ಲಾಸ್ ಕರಿಯ ಗುಲಾಮರ ಸಂಗೀತದ ಬಗ್ಗೆ ಹೀಗೆ ಹೇಳುತ್ತಾರೆ– "The songs were prayers and complaints of souls boiling over with the bitterest anguish. Every tone a testimony against slavery and a prayer to God for delivery from chains." (ಗುಲಾಮಗಿರಿಯ ಕರಾಳ ಮುಷ್ಟಿಯಲ್ಲಿ ನೊಂದು ಬೆಂದ ಜೀವಗಳ ಕಡು ದುಃಖದ ಮೊರೆಯಾಗಿ ಹೊಮ್ಮಿದವು ಈ ಗೀತೆಗಳು. ಒಂದೊಂದು ಸೊಲ್ಲು ಕೂಡ ಗುಲಾಮಗಿರಿಯ ವಿರುದ್ಧ

ಸಂತ್ರಸ್ತ ದನಿಯ ಪ್ರಾರ್ಥನೆ. ಅದರ ಸಂಕೋಲೆಗಳಿಂದ ಮುಕ್ತಿ ನೀಡೆಂಬ ಅತಿ ದೈನ್ಯ ಮನವಿ.)

1863ರಲ್ಲಿ ಜನವರಿ ಒಂದರಂದು ಅಮೆರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರು ಕರಿಯರು ಗುಲಾಮಗಿರಿಯಿಂದ ಮುಕ್ತರು ಎಂದು 'Emancipation Proclamation' ಘೋಷಿಸಿದರು. ಆದರೂ 1865ರಲ್ಲಿ ಅಮೆರಿಕದ ಅಂತರ್ಯುದ್ಧ (ಸಿವಿಲ್ ವಾರ್) ಮುಗಿಯುವವರೆಗೂ ಎಷ್ಟೋ ಕಡೆ ಗುಲಾಮಗಿರಿ ಇನ್ನೂ ಜಾರಿಯಲ್ಲಿತ್ತು. ಗುಲಾಮಗಿರಿಯಿಂದ ಮುಕ್ತರಾದ ಮೇಲೆ ಕೂಡ ಬಡತನ, ನಿರುದ್ಯೋಗ, ಬಿಳಿಯರ ದುರಹಂಕಾರದಿಂದ ಕರಿಯರ ಬಾಳು ನರಕಸದೃಶವಾಗಿತ್ತು. ಅಂತಹ ಸಮಯದಲ್ಲಿ ಸಂಗೀತ ಅವರ ಧೈರ್ಯವನ್ನು ಕಾಪಾಡಿಕೊಳ್ಳುವ ಸಾಧನವಾಗಿ, ಕಷ್ಟದ ಕಡಲನ್ನು ದಾಟಿಸುವ ಹರಿಗೋಲಾಗಿ ಚರ್ಚುಗಳಲ್ಲಿ ಬಳಕೆಯಾಗುತ್ತಿತ್ತು. ಇಂತಹ ಒಂದು ಗೀತೆ 'I'll be alright someday.' ಈಗ ಹಾಡುವ 'We shall Overcome' ಹಾಡಿಗೆ ರಾಗ, ತಾಳದಲ್ಲಿ ಹತ್ತಿರವಾದದ್ದು. ಕೆಲವು ವಿದ್ವಾಂಸರ ಪ್ರಕಾರ ಈ 'I'll be alright' ಹಾಡು ಮುಂಚೆ ಗುಲಾಮರು ಹಾಡುತ್ತಿದ್ದ 'No more auction block for me' ಹಾಡಿನಿಂದ ಬಂದಿದ್ದು. Auction block ಅಂದರೆ ಗುಲಾಮರನ್ನು ಮಾರುವ ಹರಾಜು ಕಟ್ಟೆ. ಆ ಹಾಡು ಈಗ ಧಾರ್ಮಿಕ ಚೌಕಟ್ಟಿನಲ್ಲಿ ಚರ್ಚುಗಳಲ್ಲಿ I'll be alright ಅಂತ ಶುರುವಾಗಿ ಮುಂದೆ I'll overcome; I'll be like him (Jesus) ಮುಂತಾದ ನುಡಿಗಳನ್ನು ಸೇರಿಸಿ ಹಾಡಲಾಗುತ್ತಿತ್ತು.

ಇದೇ ಸಮಯದಲ್ಲಿ 1850ರಲ್ಲಿ ಗುಲಾಮಗಿರಿಯಲ್ಲಿ ಹುಟ್ಟಿದ ಚಾರ್ಲ್ಸ್ ಟಿಂಡ್ಲೆ ಎಂಬಾತ ಚಿಕ್ಕಂದಿನಲ್ಲಿ ದಿನವೆಲ್ಲ ಬೆನ್ನು ಮುರಿಯುವ ಹಾಗೆ ದುಡಿದರೂ ರಾತ್ರಿ ಯಾರಿಗೂ ತಿಳಿಯದಂತೆ ತಾನೇ ಓದಲು ಕಲಿತು ಮುಂದೆ ಚರ್ಚಿನಲ್ಲಿ ಪಾದ್ರಿಯಾದ. ಅವನೂ 1903ರಲ್ಲಿ 'I'll overcome Some Day' ಎಂಬ ಒಂದು ಹಾಡನ್ನು ಬರೆದ. ಅವನಿಗೆ ಈ ಮುಂಚೆ ಹಾಡುತ್ತಿದ್ದ I'll be alright Someday ಗೀತೆ ಸ್ಫೂರ್ತಿ ನೀಡಿತ್ತೋ ಇಲ್ಲವೋ ತಿಳಿಯದು. ಅಂತೂ ಈ ಎರಡು ಹಾಡುಗಳು ಮುಂದೆ ವಿಶ್ವವಿಖ್ಯಾತವಾದ 'We shall Overcome' ಹಾಡಿನ ಮೂಲ ಗೀತೆಗಳಾಗಿದ್ದವು ಎಂದು ಹೇಳಬಹುದು.

ಜನಪದ ಗೀತೆ ಎಂದರೆ ಏನು? ಕಡಲು ಮೊರೆದಂತೆ, ಗಾಳಿ ಬೀಸಿದಂತೆ ತಂತಾನೆ ಉಕ್ಕುವ ಗೀತೆ. ಅದರ ಮೂಲ ಕರ್ತೃ ಯಾರೆಂದು ಯಾರಿಗೂ ತಿಳಿಯದು. ಮೂಲ ಕೃತಿಗೆ ಬದ್ಧವಾಗಿರಬೇಕೆಂಬ ಯಾವ ನಿಯಮವೂ ಇಲ್ಲ. ಮೌಖಿಕವಾಗಿ ತಲೆತಲಾಂತರ ಹರಿದು ಬಂದ ಈ ಗೀತೆಗಳನ್ನು ಬರೆದಿಡಬೇಕಾದ ಪ್ರಮೇಯವೇ ಇಲ್ಲ. ಒಂದು ಬಾಯಿಂದ ಇನ್ನೊಂದು ಬಾಯಿಗೆ ಹೋದಂತೆ ಎಷ್ಟೋ ರೂಪಾಂತರಗೊಳ್ಳುವುದೂ ಉಂಟು. ಇಲ್ಲೂ ಆಗಿದ್ದು ಹಾಗೇ. ಕಾಲ ಕಳೆದಂತೆ ಅಲ್ಲೊಂದು ನುಡಿ ಸೇರಿತು, ಇಲ್ಲಿ ರಾಗವೇ ಬದಲಾಯಿತು. ಕೆಲವರು ನಿಧಾನವಾಗಿ ಹಾಡಿಕೊಂಡರೆ ಇನ್ನು ಕೆಲವರು ಜೋರಾಗಿ ಕೈ ಚಪ್ಪಾಳೆ ತಟ್ಟಿ ಎರಡನೇ ಮತ್ತು ಮೂರನೇ ಕಾಲದಲ್ಲಿ ಹಾಡಿದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಇಂತಹ ಎಷ್ಟೋ ಹಾಡುಗಳನ್ನು ಕರಿಯರ ಚರ್ಚುಗಳಲ್ಲಿ ಹಾಡುತ್ತಿದ್ದರು. ಅವನ್ನು 'spirituals' ಅಥವಾ 'gospels' ಅಂತ ಕರೆಯುತ್ತಿದ್ದರು. ಸಮಯಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಂಡು ಕೈ ಅಥವಾ ಕಾಲಿನಲ್ಲಿ ತಾಳ ಹಾಕಿಕೊಂಡು ಗುಂಪಿನಲ್ಲಿ ಹಾಡುವ ಈ ಹಾಡುಗಳು ಎಲ್ಲರಲ್ಲೂ ಹುಮ್ಮಸ್ಸು ಉಕ್ಕೇರಿಸುತ್ತಿದ್ದವು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಚರ್ಚುಗಳು ಕರಿಯರ ಮುಖ್ಯವಾದ ಸಾಂಸ್ಕೃತಿಕ, ಸಾಮಾಜಿಕ ತಳಗಟ್ಟಾಗಿದ್ದವು. ಇಲ್ಲಿ ಸ್ವಚ್ಛಂದವಾಗಿ ಒಬ್ಬರೊಡನೊಬ್ಬರು ಬೆರೆತು, ಪರಸ್ಪರ ಬೆಂಬಲ ನೀಡಿ, ಒಟ್ಟಿಗೆ ಹಾಡಿ ಬಡತನದ ದಾರುಣ ಜೀವನದಲ್ಲೂ ಹೊಸ ಹುರುಪನ್ನು ಪಡೆಯುತ್ತಿದ್ದರು. ಇಂತಹ ವಾತಾವರಣದಲ್ಲಿಯೇ 'ವಿ ಶಲ್ ಓವರ್ಕಮ್' ಗೀತೆ ತನ್ನ ಬಾಲ್ಯವನ್ನು ಕಳೆಯಿತು.

ಚಳುವಳಿಗಳಲ್ಲಿ ಧ್ಯೇಯ ಗೀತೆಯಾಗಿ...

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಎಷ್ಟೋ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ತಮ್ಮದೇ ಸಂಘಗಳನ್ನು 'ಲೇಬರ್ ಯೂನಿಯನ್' ಅಂತ ಶುರು ಮಾಡಿಕೊಂಡರು. ಈ ಯೂನಿಯನ್ನುಗಳು ಕಾರ್ಮಿಕರು ಒಗ್ಗಟ್ಟಿನಲ್ಲಿ ಮಾಲಿಕರಿಗೆ ತಮ್ಮ ಬೇಡಿಕೆಗಳನ್ನು ಸಲ್ಲಿಸಲು ಅನುಕೂಲವಾಗುತ್ತಿತ್ತು. ಎಲ್ಲರೂ ಸೇರಿ ತಾವು ಕೆಲಸ ಮಾಡುವ ಜಾಗದ ಎದುರು ನಿಂತು ಕೈ ಕೈ ಹಿಡಿದುಕೊಂಡು ಯಾರೂ ಒಳಗೆ ಹೋಗದಂತೆ ತಡೆಯುತ್ತಿದ್ದರು. ದೊಡ್ಡ ದೊಡ್ಡ ಪ್ಲಕಾರ್ಡು-ಫಲಕಗಳನ್ನು ಹಿಡಿದು ಯಾಕಾಗಿ ಮುಷ್ಕರ ಹೂಡಲಾಗಿದೆ ಅಂತ ಅದರ ಮೇಲೆ ಬರೆಯುತ್ತಿದ್ದರು. ತಮ್ಮ ಬೇಡಿಕೆ ಪೂರೈಸುವವರೆಗೂ ಯಾವುದೇ ಕೆಲಸ ಮುಂದುವರಿಯದಂತೆ ಮಾಡುತ್ತಿದ್ದರು. ಇಂತಹ ಸಮಯದಲ್ಲಿ ತಮ್ಮ ಆತ್ಮಸ್ಥೈರ್ಯ ಕುಂದದಂತೆ ಮಾಡಲು ಎಲ್ಲರೂ ಜೋರಾಗಿ ಹಾಡುತ್ತಿದ್ದರು. ಉಳಿದ ಹಾಡುಗಳ ಜೊತೆ 'I will Overcome' ಕೂಡ ಅಲ್ಲಿ ಸೇರಿತು. ಯಾರೋ ಒಬ್ಬ ಕಾರ್ಮಿಕ ಅದನ್ನು 'We will Overcome' ಅಂತ ಬದಲಾಯಿಸಿ ಹಾಡಲು ಶುರು ಮಾಡಿದ. ಎಲ್ಲರೂ ಸೇರಿ ಹಾಗೆಯೇ ಹಾಡಿದರು. ಒಮ್ಮೆಲೆ ಈ ಹಾಡು ವೈಯಕ್ತಿಕ ನೆಲೆಯನ್ನು ದಾಟಿ ಸಾರ್ವತ್ರಿಕ ನೆಲೆಯನ್ನು ತಲುಪಿತ್ತು!

1909ರಲ್ಲಿ ಅಲಬಾಮಾದಲ್ಲಿ ನಡೆದ ಕಲ್ಲಿದ್ದಲ ಗಣಿಗಾರಿಕೆಯ ಕಾರ್ಮಿಕರು ನಡೆಸಿದ ಮುಷ್ಕರದಲ್ಲಿ ಈ ಹಾಡು ಬಳಕೆಯಾಗಿತ್ತು. ಆ ವೇಳೆಯಲ್ಲಿ ಹಂಚಲಾದ ಕರಪತ್ರಗಳಲ್ಲಿ "ನಾವು ಪ್ರತಿ ಮೀಟಿಂಗನ್ನೂ 'We will Overcome' ಪ್ರಾರ್ಥನೆಯೊಂದಿಗೆ ಶುರು ಮಾಡಲಿದ್ದೇವೆ. ಕಳೆದ ವರ್ಷವೂ ಮೀಟಿಂಗಿನಲ್ಲಿ ಇದನ್ನು ಹಾಡಿದ್ದೆವು" ಎಂದು ಬರೆಯಲಾಗಿತ್ತು. ಇದೇ ಮೊದಲ ಬಾರಿ ಪ್ರಿಂಟ್ ನಲ್ಲಿ 'We shall Overcome' ಹಾಡಿನ ಉಲ್ಲೇಖ ಕಾಣಿಸಿಕೊಂಡಿದ್ದು! ಆಗ ಇದ್ದ ರೂಲ್ಸ್ ಪ್ರಕಾರ ಕರಿಯ ಕಾರ್ಮಿಕರು ಹಾಗೂ ಬಿಳಿಯ ಕಾರ್ಮಿಕರು ಪ್ರತ್ಯೇಕ ಗುಂಪುಗಳಲ್ಲಿ ಕುಳಿತಿರುತ್ತಿದ್ದರಾದರೂ ಪ್ರಾರ್ಥನೆ ಹಾಡನ್ನು ಎಲ್ಲರೂ ಒಕ್ಕೊರಲಿನಲ್ಲಿ ಹಾಡಿದರು. ಆ ಹಾಡಿನಿಂದ ವಿದ್ಯುತ್

ಸಂಚಾರವಾದಂತಾಗಿ ಎಲ್ಲರಲ್ಲೂ ದೃಢ ನಿರ್ಧಾರ ಅವುಡುಗಚ್ಚಿ ನಿಂತಿತ್ತು. ಕಡೆಗೂ ಮಾಲಿಕರು ಅವರ ಬೇಡಿಕೆಯನ್ನು ಮನ್ನಿಸಿ ಪಗಾರ ಜಾಸ್ತಿ ಮಾಡಿದರು. 1945ರಲ್ಲಿ ದಕ್ಷಿಣ ಕ್ಯಾರೊಲಿನಾದಲ್ಲಿ 'ಅಮೆರಿಕನ್ ಟೊಬ್ಯಾಕೊ ಕಂಪನಿ'ಯ ಕಾರ್ಮಿಕರು ಮುಷ್ಕರ ಹೂಡಿದರು. ಅಲ್ಲಿಯೂ ಪಿಕೆಟ್ ಲೈನುಗಳಲ್ಲಿ 'We will Overcome' ಹಾಡಿದರು. ಅಲ್ಲಿಯೂ ಕಾರ್ಮಿಕರು ಗೆದ್ದರು!

1932ರಲ್ಲಿ ಟೆನಿಸಿಯಲ್ಲಿ ವೆಸ್ಟ್ ಮತ್ತು ಹಾರ್ಟನ್ ಎಂಬ ಇಬ್ಬರು ಬಿಳಿಯರು ತಮ್ಮ ಕರಿಯ ಸೋದರರಿಗೆ ಸಹಾಯ ಮಾಡಲೆಂದು 'ಹೈಲ್ಯಾಂಡರ್ ಫೋಕ್ ಸ್ಕೂಲ್' ಶುರು ಮಾಡಿದರು. ಅಲ್ಲಿ ಯೂನಿಯನ್ ಶುರು ಮಾಡುವುದು ಹೇಗೆ, ಯೂನಿಯನ್ ಚುನಾವಣೆ ಹೇಗೆ ನಡೆಯಬೇಕು, ಮುಷ್ಕರ ಹೂಡುವುದು ಹೇಗೆ, ಹೊಸ ಸದಸ್ಯರನ್ನು ಸೇರಿಸುವುದು ಹೇಗೆ ಮುಂತಾದ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟದ ಬಗ್ಗೆ ಎಲ್ಲವನ್ನೂ ಕಮ್ಮಟಗಳಲ್ಲಿ ಹೇಳಿಕೊಡುತ್ತಿದ್ದರು. ಇಂತಹ ಕೆಲಸಗಳು ನಡೆಯಬೇಕಾದರೆ ಸಂಗೀತ ಎಷ್ಟು ಮುಖ್ಯ ಅಂತ ಗೊತ್ತಿದ್ದ ಅವರು ಅಲ್ಲಿಯೂ We will Overcome ಹಾಡು ಹೇಳಿ ಕೊಡುತ್ತಿದ್ದರು. ಅಲ್ಲಿದ್ದ ಝಿಲ್ಫಿಯಾ ಎಂಬಾಕೆ ಮುಂದೆ ಪ್ರಸಿದ್ಧ ಸಂಗೀತಗಾರನಾದ ಪೀಟ್ ಸೀಗರ್‌ಗೆ ಈ ಹಾಡು ಹೇಳಿಕೊಟ್ಟಳು. ಆತ ಅದಕ್ಕೆ ಸ್ವಲ್ಪ ಬದಲಾವಣೆಗಳನ್ನು ಮಾಡಿ ತಾಳಕ್ಕೆ ಅಳವಡಿಸಿ ಬ್ಯಾಂಜೊ ಜೊತೆ ಹಾಡಿದಾಗ ಒಮ್ಮೆಲೇ ಈ ಹಾಡು ಪ್ರಸಿದ್ಧವಾಯಿತು. We will overcome ಅಂತ ಇದ್ದಿದ್ದನ್ನು We shall Overcome ಅಂತ ಬದಲಾವಣೆ ಮಾಡಿದವನು ಅವನೇ ಅಂತ ಹೇಳುತ್ತಾರೆ. ಹೀಗೆ ದಕ್ಷಿಣ ರಾಜ್ಯಗಳ ಚರ್ಚುಗಳಲ್ಲಿದ್ದ ಶ್ರೀಮಂತ ಸಂಗೀತದ ಹಿನ್ನೆಲೆಯ ಮುಂದೆ ಅಮೆರಿಕಾದ civil rights (ನಾಗರಿಕ ಹಕ್ಕುಗಳ) ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. 1950ರವರೆಗೂ We shall Overcome ಕೆಲವೇ ಕೆಲವು ಹೋರಾಟಗಾರರಿಗೆ, ಕ್ರಾಂತಿಕಾರರಿಗೆ ಮಾತ್ರ ಗೊತ್ತಿದ್ದ ಹಾಡಾಗಿತ್ತು.

ನಾಗರಿಕ ಹಕ್ಕುಗಳ ಹೋರಾಟದಲ್ಲಿ ಕ್ರಾಂತಿಗೀತೆ

1950ರ ದಶಕದಲ್ಲಿ ಅಮೆರಿಕಾದಲ್ಲಿ ನಾಗರಿಕ ಹಕ್ಕುಗಳಿಗಾಗಿ ಹೋರಾಟದ ಜ್ವಾಲೆ ದೇಶದಾದ್ಯಂತ ಹರಡಿತ್ತು. ಆ ವೇಳೆಗೆ ಗುಲಾಮಗಿರಿಯನ್ನು ತೊಡೆದು ಸುಮಾರು ಒಂದು ಶತಮಾನವೇ ಆಗುತ್ತಾ ಬಂದಿದ್ದರೂ ದಕ್ಷಿಣ ರಾಜ್ಯಗಳಲ್ಲಿ ಕರಿಯರ ಸ್ಥಿತಿ ಶೋಚನೀಯವಾಗಿತ್ತು. ಬಸ್ಸುಗಳಲ್ಲಿ ಬಿಳಿಯರು ಮುಂದಿನ ಸೀಟುಗಳಲ್ಲಿ ಹಾಗೂ ಕರಿಯರು ಹಿಂದಿನ ಸೀಟುಗಳಲ್ಲಿ ಕೂರಬೇಕಾಗಿತ್ತು. ಬಿಳಿಯರಿಗೂ ಕರಿಯರಿಗೂ ಪ್ರತ್ಯೇಕವಾದ ಶೌಚಾಲಯಗಳಿದ್ದವು. ದಾಹವಾದಾಗ ನೀರು ಕುಡಿಯಲು ನಗರದ ಎಲ್ಲೆಡೆ ನಲ್ಲಿಗಳಿದ್ದರೂ ಬಿಳಿಯರು ಉಪಯೋಗಿಸುವ ನಲ್ಲಿಯ ಬಳಿ ಕರಿಯರು ಹೋಗುವಂತಿರಲಿಲ್ಲ. ಚುನಾವಣೆಗಳಲ್ಲಿ ಕರಿಯರು ವೋಟು ಹಾಕಲು ಹೋದರೆ "ನೀವು ವೋಟು ಹಾಕುವಂತಿಲ್ಲ." ಎಂದು ವಾಪಸ್ಸು ಕಳಿಸುತ್ತಿದ್ದರು.

ಹೀಗಿರುವಾಗ 1955ರಲ್ಲಿ ಅಲಬಾಮಾದಲ್ಲಿ ರೋಸಾ ಪಾರ್ಕ್ ಎಂಬ ಕರಿಯಳು ಒಮ್ಮೆ ಬಸ್ಸಿನಲ್ಲಿ ಮುಂದಿನ ಸೀಟಿನಲ್ಲೇ ಕುಳಿತು ಪ್ರಯಾಣಿಸುತ್ತಿದ್ದಳು. ಕಂಡಕ್ಟರ್ ಅವಳಿಗೆ ಹಿಂದಿನ ಸೀಟಿಗೆ ಹೋಗೆಂದರೂ ಮುಂದಿನ ಸೀಟಿನಲ್ಲೇ ಹಟ ಹಿಡಿದು ಕುಳಿತಳು. ಆಗ ಅವಳನ್ನು ಬಸ್ಸಿನಿಂದ ಆಚೆ ದಬ್ಬಿದರು. (ನಮ್ಮ ಗಾಂಧಿಯವರೂ ಹೀಗೇ ದಕ್ಷಿಣ ಆಫ್ರಿಕಾದಲ್ಲಿ ರೈಲಿನಲ್ಲಿ ಸ್ಥಳಾಂತರ ಮಾಡಲು ನಿರಾಕರಿಸಿ ಹಟ ಮಾಡಿ ಹೊರಗೆ ದಬ್ಬಿಸಿಕೊಂಡಿದ್ದು ನೆನಪಾಗುತ್ತಿದೆ!) ಒಂದು ಘಟನೆ ಹೇಗೆ ಮುಂದೆ ನಾಡಿನ ಭವಿಷ್ಯವನ್ನೇ ಹೊಸ ಲೇಖನಿಯಲ್ಲಿ ಬರೆಯುತ್ತದಲ್ಲ! ಅನ್ನಿಸಿಬಿಡುತ್ತದೆ. ಇಲ್ಲಿಯೂ ರೋಸಾ ಪಾರ್ಕ್ ಎಂಬ ಮಹಿಳೆಯನ್ನು ಬಸ್ಸಿನಿಂದ ಆಚೆ ತಳ್ಳಿದ ಸುದ್ದಿ ಎಲ್ಲೆಡೆ ಹರಡಿ ಕರಿಯರೆಲ್ಲರೂ ಇನ್ನು ಮುಂದೆ ತಮಗೆ ಸಮಾನತೆ ಸಿಕ್ಕುವವರೆಗೂ ಬಸ್ಸಿನಲ್ಲಿ ಪ್ರಯಾಣ ಮಾಡುವುದಿಲ್ಲವೆಂದು ಬಹಿಷ್ಕಾರ ಹಾಕಿದರು. ತಕ್ಷಣ ಈ ಸುದ್ದಿ ದೇಶದಲ್ಲಿ ಎಲ್ಲೆಲ್ಲೂ ಹರಡಿ ಉಳಿದೆಲ್ಲ ಕರಿಯರ ಆತ್ಮಾಭಿಮಾನ ಜಾಗೃತವಾಯಿತು. ಮಾರ್ಟಿನ್ ಲೂಥರ್ ಕಿಂಗ್, ರಾಲ್ಫ್ ಅಬರ್ನಾತಿ ಮುಂತಾದ ಮುಖಂಡರು ಅಹಿಂಸೆ, ಅಸಹಕಾರ ಚಳುವಳಿ ನಡೆಸಲು ತೀರ್ಮಾನ ಮಾಡಿದರು. (ಮಾರ್ಟಿನ್ ಲೂಥರ್ ಕಿಂಗ್ ತನಗೆ ಗಾಂಧಿ ಆದರ್ಶಪ್ರಾಯರು ಎಂದು ಹೇಳಿಕೊಂಡಿದ್ದಾರೆ.) ಈ ಮುಂಚೆ ಕಾರ್ಮಿಕರ ಹಕ್ಕುಗಳ ಹೋರಾಟಕ್ಕಾಗಿ ತರಬೇತಿ ನೀಡುತ್ತಿದ್ದ ಹೈಲ್ಯಾಂಡರ್ ಫೋಕ್ ಸ್ಕೂಲ್ ಈಗ ನಾಗರಿಕ ಹಕ್ಕುಗಳ ಹೋರಾಟಕ್ಕೆ ತರಬೇತಿ ನೀಡುತ್ತಿತ್ತು. ಆ ಶಾಲೆಯ ಇಪ್ಪತ್ತೈದನೆಯ ವಾರ್ಷಿಕೋತ್ಸವಕ್ಕಾಗಿ ಅಲ್ಲಿಗೆ ಬಂದಿದ್ದ ಮಾರ್ಟಿನ್ ಲೂಥರ್ ಕಿಂಗ್ ಮೊಟ್ಟ ಮೊದಲ ಬಾರಿಗೆ ಈ ಹಾಡು ಕೇಳಿ ಮಂತ್ರಮುಗ್ಧರಾದರು. ಆ ವೇಳೆಗೆ ಅಲ್ಲಿದ್ದ ಗೈ ಕಾರವಾನ್ ಎಂಬ ಇನ್ನೊಬ್ಬ ಸಂಗೀತಗಾರ ಕೂಡ ಇಷ್ಟಪಟ್ಟು ಅದನ್ನು ಕಲಿತು ಪ್ರಚಾರ ಮಾಡಿದರು.

ಈ ಹೈಲ್ಯಾಂಡರ್ ಫೋಕ್ ಸ್ಕೂಲ್ ಕಂಡರೆ ಎಷ್ಟೋ ಬಿಳಿಯರಿಗೆ ಆಗುತ್ತಿರಲಿಲ್ಲ. ಪೂರ್ವಗ್ರಹ ಪೀಡಿತ ಪೊಲೀಸರಿಗೂ ಅಷ್ಟೆ. ಹೀಗಿರುತ್ತಾ ಒಮ್ಮೆ ರಾತ್ರಿ ಇದ್ದಕ್ಕಿದ್ದಂತೆ ಪೋಲೀಸರು ಅಲ್ಲಿ ದಾಳಿ (raid) ಮಾಡಿದರು. ಆಗ ತಾನೆ ಶಿಬಿರ ಮುಗಿದಿತ್ತು. ಜನ ಜಮಾಯಿಸಿದ್ದರು. ಪೊಲೀಸರು ಬೇಕೆಂದೇ ವಿದ್ಯುಚ್ಛಕ್ತಿ ತೆಗೆದುಹಾಕಿ ಕತ್ತಲಿನಲ್ಲಿ ಎಲ್ಲೆಲ್ಲೂ ಸಾಮಾನುಗಳನ್ನು ಅಸ್ತವ್ಯಸ್ತ ಕೆಡವಿ ಏನೋ ಹುಡುಕುತ್ತಿರುವಂತೆ ಮಾಡುತ್ತಿದ್ದರು. ಆಗ ಎಲ್ಲರೂ ಕೈ ಕೈ ಹಿಡಿದು We shall Overcome ಹಾಡಲು ಶುರು ಮಾಡಿದರು. ಅಲ್ಲೇ ಇದ್ದ ಹುಡುಗಿಯೊಬ್ಬಳು 'We are not afraid' ಎಂಬ ನುಡಿಯನ್ನು ಸೇರಿಸಿದಳು. ಎಲ್ಲರೂ ಆ ನುಡಿಯನ್ನು ಹಾಡಿದರು. ಆ ಕತ್ತಲಿನಲ್ಲಿ ಈ ವೃಂದಗಾನ ಎಲ್ಲಿಲ್ಲದ ಛಲ, ಸ್ಫೂರ್ತಿಯನ್ನು ಅವರಲ್ಲಿ ತುಂಬಿತ್ತು. ಒಬ್ಬ ಪೊಲೀಸಿನವನೂ "ನೀವು ಯಾಕೆ ಇಷ್ಟು ಜೋರಾಗಿ ಹಾಡಬೇಕು?" ಅಂತ ಸುಸ್ತಾಗಿ ಕೇಳಿದನಂತೆ. ಎಲ್ಲರೂ ಮತ್ತಷ್ಟು ಜೋರಾಗಿ ಹಾಡಿದರು. ಪೊಲೀಸರು ಜಾಗ ಖಾಲಿ ಮಾಡಿದಾಗ ಸಂಗೀತದಲ್ಲಿ ಎಂತಹ ಶಕ್ತಿ ಇದೆ! ಅಂತ ಎಲ್ಲರಿಗೂ ಮನದಟ್ಟಾಗಿತ್ತು. ಕ್ರಮೇಣ ಈ ಹಾಡು ನಾಗರಿಕ ಹಕ್ಕುಗಳ ಹೋರಾಟದ ಕ್ರಾಂತಿ ಗೀತೆಯಾಗಿ ಮೊದಲು ದಕ್ಷಿಣದಲ್ಲಿ ಆಮೇಲೆ ಇಡೀ ದೇಶದಲ್ಲಿ ಹಬ್ಬಿತ್ತು. ನಾಗರಿಕ

ಹಕ್ಕುಗಳ ಹೋರಾಟದ ಈ ಕೆಳಗಿನ ಎಲ್ಲ ಪ್ರಮುಖ ಘಟನೆಗಳಲ್ಲೂ 'ವಿ ಶಲ್ ಓವರ್ಕಮ್' ಹಾಡು ಮುಖ್ಯ ಪಾತ್ರ ವಹಿಸಿತ್ತು.

1961ರ ಸ್ವಾತಂತ್ರ್ಯ ಯಾತ್ರೆಗಳು

'ಬಸ್ಸುಗಳಲ್ಲಿ, ಹೋಟಲುಗಳಲ್ಲಿ ಯಾವುದೇ ಸಾರ್ವಜನಿಕ ಸೇವೆಗಳಲ್ಲಿ ಪ್ರತ್ಯೇಕತೆ ನಿಷಿದ್ಧ' ಅಂತ ಕಾನೂನು ಬಂದ ಮೇಲೂ ದಕ್ಷಿಣ ರಾಜ್ಯಗಳಲ್ಲಿ ಅದನ್ನು ಗಾಳಿಗೆ ತೂರಿ ಎಲ್ಲ ಕಡೆ ಪ್ರತ್ಯೇಕತೆ ಜಾರಿಯಲ್ಲಿತ್ತು. 1961ರಲ್ಲಿ ಈ 'ಫ್ರೀಡಮ್ ರೈಡರ್ಸ್'– ಸ್ವಾತಂತ್ರ್ಯ ಯಾತ್ರಿಗಳ ಕಾರ್ಯಕ್ರಮವನ್ನು ನಾಗರಿಕ ಹಕ್ಕುಗಳ ಹೋರಾಟದ ಅಂಗವಾಗಿ ಹಮ್ಮಿಕೊಂಡರು. ಉತ್ತರ ರಾಜ್ಯಗಳಿಂದ ಬಿಳಿಯರು, ಕರಿಯರು ಒಟ್ಟೊಟ್ಟಿಗೆ ಕುಳಿತು ಬಸ್ಸಿನಲ್ಲಿ ದಕ್ಷಿಣ ರಾಜ್ಯಗಳಿಗೆ ಪ್ರಯಾಣ ಮಾಡುತ್ತಿದ್ದರು. ದಾರಿಯುದ್ದಕ್ಕೂ 'ವಿ ಶಲ್ ಓವರ್‌ಕಮ್' ಮುಂತಾದ ಗೀತೆಗಳನ್ನು ಹಾಡುತ್ತಿದ್ದರು. ದಕ್ಷಿಣದ ರಾಜ್ಯಗಳಿಗೆ ಹೋದ ತಕ್ಷಣ ಅವರ ಮೇಲೆ ಬಿಳಿಯರ ಗುಂಪು ಹಲ್ಲೆ ಮಾಡುತ್ತಿತ್ತು. ಪೊಲೀಸರು ಏನೂ ಮಾಡದೆ ಸುಮ್ಮನೆ ನಿಂತಿರುತ್ತಿದ್ದರು. ಹಲವಾರು ವರ್ಷ ಈ ಫ್ರೀಡಮ್ ರೈಡರ್ಸ್ ಕಾರ್ಯಕ್ರಮ ನಡೆದು ದಕ್ಷಿಣದಲ್ಲಿ ಬಿಳಿಯರ ದೌರ್ಜನ್ಯ, ಕರಿಯರ ಕಷ್ಟ ಕಾರ್ಪಣ್ಯಗಳು ಇಡೀ ದೇಶಕ್ಕೆ ತಿಳಿಯುವಂತೆ ಮಾಡಿತು.

1963ರಲ್ಲಿ ಕೆಲಸಗಳಿಗಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ, 'ವಾಷಿಂಗ್ಟನ್ ಚಲೋ' ಆಂದೋಳನ (March on Washington for jobs and freedom in 1963)

ಮಾರ್ಟಿನ್ ಲೂಥರ್ ಕಿಂಗ್ 'ನನ್ನದೊಂದು ಕನಸಿದೆ' ಭಾಷಣ ಮಾಡಿದ್ದು ಇಲ್ಲೇ. ಉದ್ಯೋಗ, ವಸತಿ ಸೌಕರ್ಯ, ವಿದ್ಯಾಭ್ಯಾಸ ಮುಂತಾದವುಗಳಲ್ಲಿ ಸಮಾನ ಅವಕಾಶಗಳಿಗಾಗಿ ಆಗ್ರಹ. ಇಲ್ಲಿ 250,000 ಜನ ಸೇರಿದ್ದರು!

1964ರ 'ಸ್ವತಂತ್ರ ಬೇಸಿಗೆ' – (Freedom summer in 1964) ಮತ್ತು 1965ರ ಸೆಲ್ಮಾದಿಂದ ಮಾಂಟ್ಗಮರಿಗೆ ಕಾಲ್ನಡಿಗೆ Selma to Montgomery March in 1965

ಈ ಮೇಲಿನ ಎರಡು ಸಮಾವೇಶಗಳು ಕರಿಯ ಮತದಾರರನ್ನು ನೋಂದಾಯಿಸಲು ಹಮ್ಮಿಕೊಂಡಿದ್ದು. ದಕ್ಷಿಣ ರಾಜ್ಯಗಳ ಜನಸಂಖ್ಯೆಯಲ್ಲಿ ಕರಿಯರು 50%ಗಿಂತ ಜಾಸ್ತಿ ಇದ್ದರೂ ಮತದಾರರ ನೋಂದಣಿಯಲ್ಲಿ ಅವರ ಸಂಖ್ಯೆ ಕೇವಲ 2% ಇತ್ತು. ವೋಟು ಹಾಕುವುದಿರಲಿ, ವೋಟರ್ ರಿಜಿಸ್ಟ್ರೇಶನ್ (ಮತದಾರರ ನೋಂದಣಿ) ಮಾಡುವುದಕ್ಕೂ ತಡೆಯೊಡ್ಡುತ್ತಿದ್ದರು. ಆ ಬಗ್ಗೆ ಜಾಗೃತಿ ಮೂಡಿಸಲು ಹಮ್ಮಿಕೊಂಡ ಯೋಜನೆಗಳು ಇವು.

ಇಂತಹ ಎಷ್ಟೋ ಸಮಾವೇಶಗಳಲ್ಲಿ ಸಾವಿರಾರು ಜನ ಒಟ್ಟು ಸೇರುತ್ತಿದ್ದರು– ಬಿಳಿಯರೂ ಸೇರಿ. ಕಾರ್ಯಕರ್ತರು ಈ ಪ್ರತಿಭಟನೆಗಳಲ್ಲಿ ಸಕ್ರಿಯರಾಗಿದ್ದಾಗ ಯಾವ ಗಳಿಗೆಯಲ್ಲಾದರೂ ಹಿಂಸೆ ಭುಗಿಲೇಳುತ್ತದೆ ಎಂಬ ಅರಿವಿದ್ದೂ ಹಿಮ್ಮೆಟ್ಟದೆ ಕೆಲಸ ಮಾಡಿದರು. Ku klux clan (ಕರಿಯರ ಮೇಲೆ ಹಲ್ಲೆ ಮಾಡಿ ಹಿಂಸಾಚಾರ ನಡೆಸುವ ಬಿಳಿಯರ

ಹಿರಿಮೆಯ ಸಂಘ – white supremacy group) ದಿಂದ ಹಿಡಿದು ಪೊಲೀಸರವರೆಗೂ ಯಾರು ಬೇಕಾದರೂ ಅವರ ಮೇಲೆ ದಾಳಿ ಮಾಡಬಹುದಾಗಿತ್ತು, ಮಾಡಿದರು ಕೂಡ. ರಕ್ತ ಹರಿದಿತ್ತು, ಮೂಳೆ ಮುರಿದಿತ್ತು. ಜನರನ್ನು ಪಶುಗಳಂತೆ ಜೈಲಿಗೆ ಅಟ್ಟಲಾಗಿತ್ತು. ಆದರೆ ಪ್ರತಿಭಟನೆಕಾರರ ನಿರ್ಧಾರ, ಛಲವನ್ನು ಹತ್ತಿಕ್ಕಲು ಯಾರಿಗೂ ಸಾಧ್ಯವಿರಲಿಲ್ಲ. ಎಲ್ಲೆಲ್ಲೂ ಹಾಡುವುದು ಅತಿ ಮುಖ್ಯವಾಗಿತ್ತು– ಒಳ್ಳೆಯ ಕಾಲದಲ್ಲೂ, ಕೆಟ್ಟ ಕಾಲದಲ್ಲೂ. ಒಬ್ಬ ಕಾರ್ಯಕರ್ತರು ಹೇಳಿದಂತೆ 'ಸಾಮಾನ್ಯ ಮೀಟಿಂಗ್‌ಗಳೇ ಆಗಲಿ, ಆತಂಕ, ತಲ್ಲಣವನ್ನು ಮೂಡಿಸುವ ಕೆಟ್ಟ ಘಟನೆಗಳೇ ಆಗಲಿ ಸಂಗೀತ ನಮ್ಮನ್ನು ಕೈ ಹಿಡಿದು ನಡೆಸುತ್ತಿತ್ತು.'

ಕ್ರಮೇಣ ಪ್ರತ್ಯೇಕತೆಗೆ ಸಂಬಂಧಿಸಿದ ಎಲ್ಲ ನಿಯಮಗಳೂ ಕುಸಿದುಬಿದ್ದು ಸಮಾನತೆ, ನ್ಯಾಯಗಳ ಹೊಸ ಕಾನೂನುಗಳು ಬಂದವು. ಆಗಸ್ಟ್ 5, 1965ರಂದು ಅಧ್ಯಕ್ಷ ಲಿಂಡನ್ ಜಾನ್ಸನ್ 'voting rights act'ಗೆ ಸಹಿ ಹಾಕಿದರು. ಈ ಕಾಯಿದೆ ಪ್ರಕಾರ ಯಾವ ಪ್ರಜೆಯನ್ನೂ ಜಾತಿ, ಬಣ್ಣ ಹಾಗೂ ಜನಾಂಗದ ಆಧಾರದ ಮೇಲೆ ಮತ ಹಾಕದಂತೆ ತಡೆಯುವ ಹಾಗಿಲ್ಲ. ಆ ದಿನ ರೇಡಿಯೊದಲ್ಲಿ ಪ್ರಸಾರವಾದ ಭಾಷಣದಲ್ಲಿ ಅಧ್ಯಕ್ಷ ಲಿಂಡನ್ ಜಾನ್ಸನ್ "ಕರಿಯರು ಮಾತ್ರವಲ್ಲ, ನಾವೆಲ್ಲರೂ ಅನ್ಯಾಯ, ಧರ್ಮಾಂಧತೆ ಎಂಬ ಪಿಡುಗುಗಳನ್ನು ಮೆಟ್ಟಿ ನಿಲ್ಲಬೇಕಿದೆ ಮತ್ತು ನಾವು ಇದನ್ನು ಜಯಿಸುತ್ತೇವೆ, And we shall overcome" ಅಂದರು. ಅದನ್ನು ಕೇಳಿದ ಮಾರ್ಟಿನ್ ಲೂಥರ್ ಕಿಂಗ್ ಅವರ ಕಣ್ಣುಗಳು ತುಂಬಿ ಬಂದವು. ಇಡೀ ಅಮೆರಿಕಾಗೆ ಒಂದು ಅದ್ಭುತ ವಿಜಯದ ಅಮೃತ ಘಳಿಗೆಯಾಗಿತ್ತು ಅದು!

ಮುಂದಿನ ದಿನಗಳಲ್ಲಿ...

1960ರಲ್ಲೇ ಪೀಟ್ ಸೀಗರ್ 'ವಿ ಶಲ್ ಓವರ್ಕಮ್' ಹಾಡಿಗೆ ಹಕ್ಕುಗಳನ್ನು ಕಾಯ್ದಿರಿಸಿ ಅದರ ಮಾನ್ಯತೆಯನ್ನು ಆಫ್ರಿಕನ್–ಅಮೆರಿಕನ್ ಗಾಸ್ಪೆಲ್ ಹಾಡುಗಾರಿಕೆ ಮತ್ತು ನಾಗರಿಕ ಹಕ್ಕುಗಳ ಹೋರಾಟಕ್ಕೆ ಕೊಟ್ಟರು. ಅದರಿಂದ ಬಂದ ದುಡ್ಡನ್ನು ಶೋಷಿತರ ಸೇವೆ ಮಾಡುವ ಸಂಘ, ಸಂಸ್ಥೆಗಳಿಗೆ ಹೋಗುವಂತೆ ವ್ಯವಸ್ಥೆ ಮಾಡಿದರು. 1968ರಲ್ಲಿ ಮಾರ್ಟಿನ್ ಲೂಥರ್ ಕಿಂಗ್‌ನ ಹತ್ಯೆಯಾದ ಮೇಲೆ ಕ್ರಮೇಣ ನಾಗರಿಕ ಹಕ್ಕುಗಳ ಹೋರಾಟ ಹಿಂದೆ ಸರಿಯಿತು. ಆ ಸಮಯಕ್ಕೆ ವಿಯೆಟ್ನಾಮ್ ಯುದ್ಧ ದೇಶದಲ್ಲಿ ದೊಡ್ಡ ಆತಂಕದ ಅಲೆಗಳನ್ನು ಎಬ್ಬಿಸುತ್ತಿತ್ತು. ಯುದ್ಧವನ್ನು ಪ್ರತಿಭಟಿಸಿ ಮಾಡಿದ ಅನೇಕ ಪ್ರತಿಭಟನೆ ಮತ್ತು ಸತ್ಯಾಗ್ರಹಗಳಲ್ಲಿ ಈ ಹಾಡನ್ನು ಹಾಡಿದರು. 1973ರಲ್ಲಿ ವಿಯೆಟ್ನಾಮ್ ಯುದ್ಧ ಕೊನೆಗೊಳ್ಳುವ ವೇಳೆಗೆ ಈ ಹಾಡು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ದಾಟಿತ್ತು. ಅಲ್ಲದೆ ಅಮೆರಿಕದಿಂದ ಹೊರಗೆ ಇನ್ನೂ ಅನೇಕ ರಾಷ್ಟ್ರಗಳ ಹೋರಾಟಗಳಲ್ಲಿ ಈ ಹಾಡು ತನ್ನ ಛಾಪನ್ನು ಒತ್ತಿತ್ತು.

ಪೀಟ್ ಸೀಗರ್ ಆಸ್ಟ್ರೇಲಿಯಾ, ಇಂಡಿಯಾ, ಟ್ಯಾಂಜ಼ಾನಿಯ, ಕೆನ್ಯ, ಇಸ್ರೇಲ್ ಮುಂತಾದ ಹಲವು ದೇಶಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಾಗ ಈ ಹಾಡನ್ನು ಹಾಡಿದರು. ಯೂರೋಪಿನಲ್ಲಂತೂ ಜನ ಮುಂಚಿತವಾಗಿ ಈ ಹಾಡು ಕಲಿತಿದ್ದು ಅವರ ಜೊತೆಗೆ ದನಿಗೂಡಿಸಿ ಹಾಡಿದರು. ದೇಶ, ಭಾಷೆಗಳ ಗಡಿಯನ್ನು ಮೀರಿ ಈ ಹಾಡು ಜನಪ್ರಿಯತೆ ಗಳಿಸಿತ್ತು. ಪ್ರಪಂಚದ ಮೂಲೆ ಮೂಲೆಗಳಲ್ಲಿ ಎಲ್ಲೆಲ್ಲಿ ಸಮಾನ ಹಕ್ಕುಗಳಿಗಾಗಿ, ಶಾಂತಿ, ನ್ಯಾಯಕ್ಕಾಗಿ ಹೋರಾಟ ನಡೆಯಿತೋ ಅಲ್ಲೆಲ್ಲ ಈ ಹಾಡನ್ನು ಹಾಡಲಾಗುತ್ತಿತ್ತು.

ದಕ್ಷಿಣ ಆಫ್ರಿಕಾದಲ್ಲಿ ಕರಿಯರು ಹಾಗೂ ಬಿಳಿಯರನ್ನು ಪ್ರತ್ಯೇಕಿಸುವ ಕಾನೂನುಗಳು 1994ರವರೆಗೂ ಜಾರಿಯಲ್ಲಿದ್ದವು. 1966ರಲ್ಲಿ ಅಮೆರಿಕಾದಿಂದ ಸೆನೆಟರ್ ರಾಬರ್ಟ್ ಕೆನೆಡಿ ಅಲ್ಲಿಗೆ ಹೋದಾಗ ಕಾರಿನ ಸೂರಿನ ಮೇಲೆ ನಿಂತು ಎಲ್ಲರೂ ಈ ಹಾಡನ್ನು ತನ್ನ ಜೊತೆಯಾಗಿ ಹಾಡುವಂತೆ ಪ್ರೇರೇಪಿಸಿದ್ದರು. ಕೊನೆಗೂ ಅಲ್ಲಿ ಪ್ರತ್ಯೇಕತೆ ಕೊನೆಗೊಂಡು ಎಷ್ಟೋ ವರ್ಷಗಳಾದ ಮೇಲೆ ಅಲ್ಲಿಯ ಕರಿಯ ಪಾದ್ರಿ ನೊಬೆಲ್ ಪ್ರಶಸ್ತಿ ವಿಜೇತ ಡೆಸ್ಮಂಡ್ ಟುಟು ಹಿಂದಿನ ದಿನಗಳನ್ನು ಮೆಲುಕು ಹಾಕುತ್ತಾ ಹೇಳಿದ ಮಾತು "We shall overcome is not about eliminating an enemy. It is about winning over a friend." (ಶತ್ರುವನ್ನು ನಿರ್ನಾಮ ಮಾಡುವ ಹಾಡಲ್ಲ, ಇದು ಮಿತ್ರನನ್ನು ಗೆಲ್ಲುವ ಹಾಡು.)

1971ರಲ್ಲಿ ಭಾರತದ ಸಹಕಾರದೊಂದಿಗೆ ಮುಂಚೆ ಪೂರ್ವ ಪಾಕಿಸ್ತಾನವಾಗಿದ್ದ ಬಾಂಗ್ಲಾ ದೇಶ ಸ್ವಾತಂತ್ರ್ಯ ಹೋರಾಟ ನಡೆಸಿದಾಗ ಇದರ ಬಂಗಾಳಿ ಅನುವಾದ 'ಏಕ್ ದಿನ್ ಸೂರ್ಜ್ಯೇರ್ ಭೋರ' (ಒಂದು ದಿನ ಸೂರ್ಯ ಖಂಡಿತ ಹುಟ್ಟುತ್ತಾನೆ) ಹಾಡಿದರು. ಉತ್ತರ ಕೊರಿಯ, ಬೈರೂಟ್ ಮುಂತಾದಲ್ಲಿ ಹೋರಾಟ ನಡೆಯುವಾಗ ಈ ಹಾಡು ಹಾಡಿದ್ದಾರೆ. ಅಮೆರಿಕದಲ್ಲಿ ಮಾರ್ಟಿನ್ ಲೂಥರ್ ಕಿಂಗನ ಸ್ನೇಹಿತರೊಬ್ಬರು, ಕರಿಯರ ಹೋರಾಟದ ಕಾರ್ಯಕರ್ತರು "ನಾವು ಚಂದ್ರನಲ್ಲಿ ಹೋಗಿ ಇಳಿದರೆ ಅಲ್ಲೂ ಪುಟ್ಟ ಪುಟ್ಟ ಹಸಿರು ಜನ ಕೈ ಕೈ ಹಿಡಿದು ಈ ಹಾಡು ಹಾಡಿದರೆ ಆಶ್ಚರ್ಯವಿಲ್ಲ" ಅಂತ ಜೋಕ್ ಮಾಡುತ್ತಿದ್ದರು. ಸಾಮಾಜಿಕ ಹೋರಾಟಕ್ಕೆ ಮಾತ್ರವಲ್ಲದೆ ವೈಯಕ್ತಿಕವಾಗಿಯೂ ಸಂಕಷ್ಟದ ಸಮಯದಲ್ಲಿ ಆತ್ಮಸ್ಥೈರ್ಯ ತಂದುಕೊಳ್ಳಲು ಜನ ಈ ಹಾಡು ಹಾಡಿದ್ದೂ ಇದೆ. ಲ್ಯುಕೀಮಿಯಾ ರೋಗಗ್ರಸ್ತ ಮಕ್ಕಳ ತಂದೆ ತಾಯಂದಿರು ತಾವು ಈ ಹಾಡು ಹಾಡಿಕೊಂಡು ಧೈರ್ಯ ತಂದುಕೊಂಡ ಬಗ್ಗೆ ಹೇಳಿದ್ದಾರೆ.

2001ರ ಸೆಪ್ಟೆಂಬರಿನಲ್ಲಿ ಉಗ್ರರು ನ್ಯೂಯಾರ್ಕಿನಲ್ಲಿ ಅವಳಿ ಕಟ್ಟಡಗಳನ್ನು ಕುಸಿಯುವಂತೆ ಮಾಡಿ ಸಾವಿರಾರು ಜನ ಸಾವನ್ನಪ್ಪಿದಾಗ ಅಮೆರಿಕಾದ 'ಎನ್‌ಬಿಸಿ' ವಾಹಿನಿಯಲ್ಲಿ ಪ್ರತಿ ಗಂಟೆಗೊಮ್ಮೆ ಈ ಹಾಡು ಹಾಕಿದರು. ಕರಿಯರ ಹೋರಾಟದ ಸಂಕೇತವಾದ ಈ ಹಾಡಿನ ಸಾರ್ಥಕತೆ ಎದ್ದು ಕಂಡಿದ್ದು ವಿಶ್ವವೇ ಸಾಕ್ಷಿಯಾದಂತೆ ಬರಾಕ್ ಒಬಾಮಾ 2008ರ ಚುನಾವಣೆಯಲ್ಲಿ ಗೆದ್ದು ಅಮೆರಿಕಾದ ಅಧ್ಯಕ್ಷನಾದಾಗ!

ಯಾವ ದೇಶದಲ್ಲಿ ಕೇವಲ ನೂರೈವತ್ತು ವರ್ಷಗಳ ಕೆಳಗೆ ಕರಿಯರು ಗುಲಾಮರು ಮಾತ್ರರಾಗಿದ್ದರೋ ಆ ದೇಶದ ಅತ್ಯುನ್ನತ ಗೌರವಾನ್ವಿತ ಹುದ್ದೆಗೆ ಕರಿಯನೊಬ್ಬ ಚುನಾಯಿತನಾಗಿದ್ದ! ಮತಗಣನೆ ಮುಗಿದು ಒಬಾಮಾ ಗೆದ್ದರೆಂದು ತಿಳಿದಾಗ ಅವರು ಅಭಿಮಾನಿಗಳನ್ನು ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ್ದು ನಮ್ಮ ಶಿಕಾಗೋದ ಗ್ರ್ಯಾಂಟ್ ಪಾರ್ಕ್ನಲ್ಲಿ! ವಿಶಾಲ ಪಾರ್ಕಿನ ತುಂಬ ಸಾವಿರಾರು ಕರಿಯ, ಬಿಳಿಯ ಮತ್ತಿತರ ಬಣ್ಣಗಳ ಜನ ತುಂಬಿದ್ದರು! ಒಬಾಮಾ, ಪತ್ನಿ ಪುತ್ರಿಯರ ಸಮೇತ ವೇದಿಕೆಯ ಮೇಲೆ ಬಂದಾಗ ಕರತಾಡನ ಎಷ್ಟು ಹೊತ್ತಾದರೂ ನಿಲ್ಲಲಿಲ್ಲ. ಎಲ್ಲರ ಕಣ್ಣುಗಳಲ್ಲೂ ಆನಂದಬಾಷ್ಪ! ಅಲ್ಲಿ ನಿಂತಿದ್ದವರ ಪೈಕಿ ಪ್ರಸಿದ್ಧ ಟಿವಿ ನಿರೂಪಕಿ ಓಪ್ರಾ ವಿನ್‌ಫ್ರೀ, ರಾಜಕೀಯ ಧುರೀಣ ಜೆಸ್ಸೀ ಜ್ಯಾಕ್ಸನ್ ಮುಂತಾದ ಕರಿಯ ಗಣ್ಯರಿದ್ದರು. ಎಲ್ಲರ ಕಣ್ಣಲ್ಲೂ ಧಾರಾಕಾರ ನೀರು! ನಾನು ಕೆಲಸ ಮಾಡುತ್ತಿದ್ದ ಜಾಗದಲ್ಲಿ ನನ್ನ ಎಲ್ಲ ಕರಿಯ, ಬಿಳಿಯ ಸಹೋದ್ಯೋಗಿಗಳಲ್ಲೂ ಏನೋ ಧನ್ಯತೆಯ ಭಾವ! ಅಮೆರಿಕಾದ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲು!

ಸಮಾರೋಪ

ಈಗ ಅಮೆರಿಕಾದಲ್ಲಿ ಜನಾಂಗೀಯ ತಾರತಮ್ಯ ಇಲ್ಲವೆಂದು ಹೇಳುವಂತಿಲ್ಲ. ಕಪ್ಪು ವರ್ಣದ ಜನರ ಮೇಲೆ ಪೊಲೀಸರ ದೌರ್ಜನ್ಯ, ಅಸಮಾನತೆ, ಅನ್ಯಾಯ ಎಲ್ಲ ಮುಂಚಿನಷ್ಟು ಇಲ್ಲವಾದರೂ ಕೆಳಮಟ್ಟದಲ್ಲಿ ಈಗಲೂ ಇವೆ. ಕಾರಣವಿಲ್ಲದೆ ಅಥವಾ ಕ್ಷುಲ್ಲಕ ಕಾರಣಕ್ಕಾಗಿ ಕಪ್ಪು ವರ್ಣೀಯ ತರುಣರನ್ನು ಇದ್ದಕ್ಕಿದ್ದಂತೆ ಕೊಲೆ ಮಾಡುವ ಪೊಲೀಸ್ ದೌರ್ಜನ್ಯವಂತೂ ಲೆಕ್ಕವಿಲ್ಲದಷ್ಟು ನಡೆಯುತ್ತಿದೆ. 2020ನೇ ಇಸವಿಯಲ್ಲಿ ಜಾರ್ಜ್ ಫ್ಲಾಯ್ಡ್ ಎಂಬ ಕರಿಯನ ಕೈಗಳನ್ನು ಹಿಂದುಗಡೆ ಕಟ್ಟಿ ಕೋಳ ಹಾಕಿ ಬೋರಲಾಗಿ ಕೆಳಗೆ ಕೆಡವಿ ಅವನ ಕತ್ತಿನ ಮೇಲೆ ಭದ್ರವಾಗಿ ಮಂಡಿಯೂರಿ ಕುಳಿತು ಆತ ಉಸಿರು ಕಟ್ಟಿ ಸಾಯುವಂತೆ ಮಾಡಿದ ಪೊಲೀಸ್ ಕ್ರೌರ್ಯ ದಾರಿಹೋಕನೊಬ್ಬನ ಫೋನ್ ವೀಡಿಯೊದಲ್ಲಿ ಸೆರೆ ಆಯಿತು. ಈ ಘಟನೆ ಅಮೆರಿಕಾ ಮಾತ್ರವಲ್ಲ ಇಡೀ ವಿಶ್ವದಲ್ಲೇ ಕರಿಯರ ಪರಿಸ್ಥಿತಿಯ ಬಗ್ಗೆ ಜಾಗೃತಿಯನ್ನು ಮೂಡಿಸಿತು. ಅಮೆರಿಕಾದ ಹಲವು ನಗರಗಳಲ್ಲಿ ಕರಿ, ಬಿಳಿ ಮತ್ತೆಲ್ಲ ಬಗೆಯ ಬಣ್ಣದ ಜನರು ಆ ಬಗ್ಗೆ ಪ್ರತಿಭಟನೆ ನಡೆಸಿ 'Black lives matter' ಚಳುವಳಿಯಲ್ಲಿ ಪಾಲ್ಗೊಂಡರು. ಪ್ರಚಾರ ಪಡೆದ ಈ ಒಂದು ಘಟನೆಯ ರೀತಿಯಲ್ಲಿ ಇನ್ನೆಷ್ಟೋ ಕರಿಯ ತರುಣರು ಪೊಲೀಸ್ ದೌರ್ಜನ್ಯಕ್ಕೆ ಸಿಕ್ಕಿ ಪ್ರಾಣ ಕಳೆದುಕೊಂಡಿದ್ದಾರೆ ಎಂಬ ಅರಿವು ಎಲ್ಲರಿಗೂ ಇತ್ತು. ಅಮೆರಿಕಾದಲ್ಲಿ 'ವಿ ಶಲ್ ಓವರ್ಕಮ್' ಗೀತೆಯನ್ನು ಹಾಡುವ ಕಾಲ ಇನ್ನೂ ಮುಗಿದಿಲ್ಲ ಎಂದು ಸಾಬೀತಾಗಿತ್ತು.

ಎಲ್ಲ ದೇಶಗಳಲ್ಲೂ ವಿಧವಿಧವಾದ ರೀತಿಯಲ್ಲಿ ಒಂದಲ್ಲ ಒಂದು ಬಗೆಯ ತಾರತಮ್ಯ ಇದ್ದೇ ಇರುತ್ತದೆ. ಹಾಗೆಯೇ ಅನ್ಯಾಯದ ವಿರುದ್ಧ ಹೋರಾಟಗಳೂ ಮುಂದುವರಿಯುತ್ತವೆ.

ಎಲ್ಲದರಲ್ಲೂ ಸಂಗೀತ ಮನುಷ್ಯನ ಕಷ್ಟ-ಸುಖಗಳ ಅಭಿವ್ಯಕ್ತಿಯಾಗಿ, ಬೆಂಬಲವಾಗಿ ಜೊತೆ ನೀಡುತ್ತದೆ. 'ವಿ ಶಲ್ ಓವರ್ಕಮ್' ಭರವಸೆಯ ಬೆಳಕು ನೀಡುವ, ಆತ್ಮಸ್ಥೈರ್ಯವನ್ನು ಬಡಿದೆಬ್ಬಿಸುವ ಗೀತೆ. ವಿಶ್ವದಾದ್ಯಂತ ಮಿಲಿಯನ್‌ಗಟ್ಟಲೆ ಜನ ಸಹಮಾನವನಿಗಾಗಿ ಕೈ ಚಾಚಿದಾಗ, ತನ್ನ ಒಳಗನ್ನು ತೋಡಿಕೊಂಡಾಗ ಈ ಗೀತೆ ಜೊತೆ ನೀಡಿದೆ. ಪ್ರೀತಿ, ಶಾಂತಿ, ಸಮಾನತೆಯ ಭವ್ಯ ಭವಿತವ್ಯದ ಆಶ್ವಾಸನೆ ಈ ಗೀತೆ- 'ವಿ ಶಲ್ ಓವರ್ಕಮ್'.

We shall Overcome

We shall overcome, we shall overcome
We shall overcome someday
Oh, deep in my heart I do believe
We shall overcome some day

We are not afraid, we are not afraid
We are not afraid today
Oh, deep in my heart I do believe
We shall overcome some day

We shall stand together, we shall stand together
We shall stand together-now
Oh, deep in my heart I do believe
We shall overcome some day

The truth will make us free; the truth will make us free
The truth will make us free some day
Oh, deep in my heart I do believe
We shall overcome some day

The whole wide world around, the whole wide world around
The whole wide world around some day
Oh, deep in my heart I do believe
We shall overcome some day

ಈಸುವೆವು! ಸೈಸುವೆವು!! ಜೈಸುವೆವು ನಾವು!!!
(ಕನ್ನಡ ಭಾವಾನುವಾದ: **ಮೈ. ಶ್ರೀ. ನಟರಾಜ**)

ಕಷ್ಟಗಳನೆದುರಿಪೆವು ಜಯವ ಸಾಧಿಪೆವು
ಒಂದಿಲ್ಲ ಒಂದು ದಿನ ಜೈಸುವೆವು ನಾವು
ಹೃದಯಾಂತರಾಳದಲಿ ದೃಢವಾಗಿ ನಂಬಿರುವೆ
ಜೈಸಿಯೇ ತೀರುವೆವು ಒಂದು ದಿನ ನಾವು ॥1॥

ಭಯಪಡೆವು ನಾವು, ಪಡೆವು ಭಯ ನಾವು
ಇಂದೆಮಗೆ ಭಯವಿಲ್ಲ ಎನ್ನುವೆವು ನಾವು
ಹೃದಯಾಂತರಾಳದಲಿ ದೃಢವಾಗಿ ನಂಬಿರುವೆ
ದಾಂಟಿಯೇ ದಾಂಟುವೆವು ಒಂದು ದಿನ ನಾವು ॥2॥

ಒಟ್ಟಾಗಿ ನಿಲ್ಲುವೆವು, ನಿಲ್ವೆವೊಟ್ಟಾಗಿ
ಇಂದೀಗ ನಿಲ್ಲುವೆವು ಒಟ್ಟಾಗಿ ನಾವು
ಹೃದಯಾಂತರಾಳದಲಿ ದೃಢವಾಗಿ ನಂಬಿರುವೆ
ಸಾಧಿಪೆವು ಗೆಲುವನು ಒಂದು ದಿನ ನಾವು ॥3॥

ಸತ್ಯವೇ ಬಿಡಿಸುವುದು, ಬಿಡಿಸುವುದು ದಾಸ್ಯ
ಕೊಡಿಸುವುದು ಒಂದು ದಿನ ನಮಗೆ ಸ್ವಾತಂತ್ರ್ಯ
ಹೃದಯಾಂತರಾಳದಲಿ ದೃಢವಾಗಿ ನಂಬಿರುವೆ
ಗಳಿಸಿಯೇ ಗಳಿಸುವೆವು ಬಿಡುಗಡೆಯ ನಾವು ॥4॥

ವಿಶ್ವದಾದ್ಯಂತ, ಜಗದ ಉದ್ದಗಲದೊಳು
ಎಲ್ಲಿ ನೋಡಿದರಲ್ಲಿ, ಅಲ್ಲೆಲ್ಲ ಒಂದು ದಿನ
ಹೃದಯಾಂತರಾಳದಲಿ ದೃಢವಾಗಿ ನಂಬಿರುವೆ
ಒಂದಿಲ್ಲ ಒಂದು ದಿನ ಜೈಸುವೆವು ನಾವು ॥5॥

ಆಧಾರ

* Stuart, Stotts, “We shall Overcome – A song that changed the world” Clarion Books, 2010.

❑

12

ಉಸಿರುಗಟ್ಟಿದವರ ಸುಡುಸುಯ್ಲು ಕಥೆ

ವೈಶಾಲಿ ಹೆಗಡೆ,
ಬಾಸ್ಟನ್, ಮ್ಯಾಸಚೂಸೆಟ್ಸ್

*

ಪೀಠಿಕೆ

ಇಂದಿನ ಜನಜೀವನ ನಾಳಿನ ಜನಪದ. ಅದು ಯಾವುದೇ ನೆಲದ ಜೀವಧಾರೆಯ ಹದ. ಅದರಲ್ಲೂ ಅಮೆರಿಕಾದ ಸಂಸ್ಕೃತಿಯನ್ನು ಜಾನಪದ ಎಂದು ಅವಲೋಕಿಸಿದರೆ ಇಲ್ಲಿನ ಸಂಕೀರ್ಣ ವಲಸೆ ಇಲ್ಲಿನ ಮೂಲನಿವಾಸಿಗಳ ಜನಪದದೊಂದಿಗೆ ಮಿಳಿತಗೊಂಡು ಕಾಲಕಾಲಕ್ಕೆ ವಿಕಸಿತಗೊಳ್ಳುತ್ತ ಸಾಗಿದೆ. ಮೂಲನಿವಾಸಿಗಳ ಜಾನಪದ ಇತಿಹಾಸಕ್ಕೆ ಅದರದ್ದೇ ಒಂದು ದೈವಿಕ ಇತಿಹಾಸವೂ, ಪ್ರಕೃತಿ ಆರಾಧನೆಯ ಪುರಾಣ ಕತೆಗಳೂ ಇವೆ. ಆ ನಂತರ ಇಲ್ಲಿನ ಜಾನಪದಕ್ಕೆ ಅತಿ ಮುಖ್ಯ ಕೊಡುಗೆ ಎಂದರೆ, ಬಿಳಿಯ ಯೂರೋಪಿಯನ್ ವಸಾಹತುಗಾರರು ಆಫ್ರಿಕಾದಿಂದ ಎಳೆತಂದ ಮೂಲನಿವಾಸಿಗಳದ್ದು. ಕಪ್ಪು ವರ್ಣೀಯರನ್ನು ಗುಲಾಮರಾಗಿ ಎಳೆತಂದ ಕಾಲದ್ದು. ಅವರು ತಮ್ಮ ಜೊತೆಗೆ ತಂದ ಕತೆಗಳು, ನಂಬಿಕೆಗಳು ತಮ್ಮ ಯಾತ್ರೆಯ ಯಾತನೆಯೊಂದಿಗೆ ಹೊಸ ಕತೆಗಳಾಗುತ್ತಾ ಅಮೆರಿಕಾದ ಮಣ್ಣಿನ ಸಾಹಿತ್ಯವಾಗಿ ಹೊಮ್ಮಿವೆ. ಇವು ಸುಮಾರು 18 ಮತ್ತು 19ನೇ ಶತಮಾನದಲ್ಲಿ ತಮ್ಮ ತಮ್ಮೊಳಗೆ ಕತೆ ಹೇಳುವ/ಕೇಳುವ ಮೂಲಕ ಹುಟ್ಟಿಕೊಂಡ ಸಾಹಿತ್ಯಲೋಕ. ಇಲ್ಲಿನ ಇತಿಹಾಸವನ್ನಾಗಲೀ, ಜಾನಪದವನ್ನಾಗಲೀ ಗುಲಾಮರ ಇತಿಹಾಸವನ್ನು ಒಳಗೊಳ್ಳದೆ ಹೇಳುವುದು ಸಾಧ್ಯವೇ ಇಲ್ಲ.

ಆಫ್ರಿಕನ್-ಅಮೆರಿಕನ್ನರ ಜಾನಪದ

ಹದಿನೇಳನೇ ಶತಮಾನದಲ್ಲಿ ಗುಲಾಮರು ಅಮೆರಿಕಾ ಎಂಬ ಹೊಸನೆಲಕ್ಕೆ ಕಾಲಿಟ್ಟಾಗ ಅವರು ತಮ್ಮೊಂದಿಗೆ ತಂದಿದ್ದು ಅಲ್ಲಿನ ಬುಡಕಟ್ಟು ಜನಾಂಗಗಳ ಬಾಯಿಂದ

ಬಾಯಿಗೆ ಹರಡುವ ಕಥಾಲೋಕವೆಂಬ ಮೌಖಿಕ ಸಂಪ್ರದಾಯ ಅಥವಾ ಜಾನಪದ. ಆ ಜಾನಪದ ಲೋಕದ ಪಾತ್ರಗಳು, ನೀತಿಗಳು ಮುಂದೆ ಅಮೆರಿಕಾದ ನೆಲದ ಅನುಭವದೊಂದಿಗೆ ಬದಲಾಗುತ್ತ ಬಂದವು. ಉದಾಹರಣೆಗೆ ಮೂಲಕಥೆಯಲ್ಲಿ ಮೋಸಗಾರ ನರಿ ಆಫ್ರಿಕನ್ ಜಾಕಲ್ ಇದ್ದಿದ್ದು ಮುಂದೆ ಅಮೆರಿಕನ್ ಫಾಕ್ಸ್ ಆಯಿತು. ಟಾರ್ಟಾಯ್ಸ್ ಇದ್ದಿದ್ದು ಟರ್ಟಲ್ ಆಯ್ತು. ಆದರೆ ಕಥೆಯ ಮೂಲ ಹಂದರ ಬದಲಾಗಲಿಲ್ಲ. ಇನ್ನು ಅವರ ನೀತಿಕಥೆಗಳು ತಮ್ಮ ಮುಂದಿನ ಪೀಳಿಗೆಗೆ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳುವ, ಹೊಸದೊಂದು ನೆಲದಲ್ಲಿ ಹೊಸದೊಂದು ದಬ್ಬಾಳಿಕೆಯಲ್ಲಿ ತಮ್ಮತನವನ್ನು ಮರೆಯದೆ, ಕಳೆದುಕೊಳ್ಳದೆ ಕಾಪಾಡಿಕೊಳ್ಳುವ ತಂತ್ರವಾಗಿತ್ತು.

ಗುಲಾಮರ ಮಾಲೀಕರು ಅಥವಾ ಹಿಡುವಳಿದಾರರು ಆಫ್ರಿಕಾದಿಂದ ಅವರು ತಂದ ಮೂಲ ಭಾಷೆ, ಸಂಸ್ಕೃತಿ, ಸಂಪ್ರದಾಯಗಳನ್ನು ಹತ್ತಿಕ್ಕತೊಡಗಿದರು. ಆಗ ಗುಲಾಮರು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡಿದ್ದು ತಮ್ಮ ಜಾನಪದ ಸಂಸ್ಕೃತಿಯನ್ನು. ಹೊಲಗಳಲ್ಲಿ ಹಾಡುವುದರ ಮೂಲಕ, ಕೇರಿಗಳಲ್ಲಿ ಸಂಜೆ ಕತೆ ಹೇಳುವುದರ ಮೂಲಕ ಒಳಸಂಕಟಕ್ಕೊಂದು ಹೊರದಾರಿ ಕಂಡುಕೊಂಡರು. ಗುಲಾಮೀ ಕಾಲದ ಕತೆಗಳಲ್ಲಿ ಬಹುತೇಕ ಇಂದಿನವರು ಕಾಣಬಯಸುವ ವರ್ಣನೀತಿ ತಾರತಮ್ಯ ಎಂದೆಲ್ಲ ಈಗಿನ ಭಾವನೆಗೆ, ಭಾಷೆಯ ಹಿಡಿತಕ್ಕೆ ಸಿಗುವ ಸಾಹಿತ್ಯವಿಲ್ಲ. ಬದಲಿಗೆ ಅದರಲ್ಲಿ ಅಂದಿನ ಜನ ಅಂದಿನ ಕಾಲಘಟ್ಟದಲ್ಲಿ ಬಳಸಿದ ಭಾಷೆ, ಭಾವನೆ, ಜನಜೀವನವಿದೆ.

ಆಫ್ರಿಕನ್ – ಅಮೆರಿಕನ್ನರ ಜಾನಪದವನ್ನು ಸ್ಥೂಲವಾಗಿ 7 ಪ್ರಕಾರಗಳಲ್ಲಿ ವಿಂಗಡಿಸಬಹುದು.

1. ಮೂಲ ಆಫ್ರಿಕಾದ ಕತೆಗಳು

ಬಹು ಜನಪ್ರಿಯ 'ಅನಾನ್ಸಿ ಸ್ಪೈಡರ್' ಕತೆಗಳನ್ನು ಮೂಲ ಆಫ್ರಿಕಾದ ಕತೆಗಳೆಂದು ಹೇಳಬಹುದು. ಅನಾನ್ಸಿ ಜೇಡದ ಕತೆಗಳು ಇಲ್ಲಿ ಈಗ ಸ್ಪೈಡರ್ ಸ್ಟೋರೀಸ್ ಎಂದೇ ಬಹು ಪ್ರಸಿದ್ಧವಾಗಿವೆ. ಅನಾನ್ಸಿ ಜೇಡ ಆಕಾಶದೆತ್ತರಕ್ಕೆ ಬಲೆಯನ್ನು ಹೆಣೆಯುತ್ತಾ ಮೇಲಕ್ಕೆ ಹತ್ತಿ ಹೋಗಿ ಆಕಾಶ ದೇವತೆಯಿಂದ ಭೂಮಿಯ ಮಕ್ಕಳಿಗಾಗಿ ಕತೆಗಳನ್ನು ಇಳಿಸಿ ತರಲು ಹೊರಡುತ್ತದೆ. ಅಲ್ಲಿ ತಲುಪಿ ಕತೆಗಳನ್ನು ಕೇಳಿದಾಗ ಆಕಾಶ ದೇವರು ಜೇಡಕ್ಕೆ ಕತೆಗಳನ್ನು ತೆಗೆದುಕೊಂಡು ಹೋಗಲು ಕೊಡುವುದಿಲ್ಲ. ಜೇಡ ಹೇಗೆ ಬಗೆಬಗೆಯ ಉಪಾಯ ಹೂಡಿ ಆಕಾಶದೇವನ ಮನೆಯಿಂದ ಭೂಮಿಗೆ ಕತೆಗಳನ್ನು ತರುವಲ್ಲಿ ಯಶಸ್ವಿಯಾಗುತ್ತದೆ ಎಂಬುದು ಮೂಲ ಅನಾನ್ಸಿ ಜೇಡರ ಕತೆಗಳ ಸಾರ. ಮುಂದೆ ಇದೆ ಹಂದರದಲ್ಲಿ ಹಲವರು ಹಲವು ಬಗೆಯಲ್ಲಿ ಅನಾನ್ಸಿ ಜೇಡದ ಸಾಹಸ ಕತೆಗಳನ್ನು ಹೆಣೆದುಕೊಂಡು ಹೋಗಿದ್ದರಿಂದ ಈ 'ಸ್ಪೈಡರ್ ಸ್ಟೋರೀಸ್' ಎಂಬುದು ಆಫ್ರಿಕನ್ ಕತೆಗಳ ದೃಷ್ಟಾಂತವಾಗಿ ಹೋಯಿತು. ಈ ಕತೆಗಳು ಅಮೆರಿಕಾದ ನೆಲದಲ್ಲಿಯೂ ಇಲ್ಲಿನ ಆಫ್ರಿಕನ್ ಅಮೆರಿಕನ್ ಮಕ್ಕಳ ಕನಸು, ಸಾಹಸಕ್ಕನುಗುಣವಾಗಿ ಬೆಳೆಯುತ್ತಾ ಹೋಗಿವೆ.

2. ಯುಕ್ತಿಯಿಂದ ಗೆಲ್ಲುವ ಉಪಾಯದ ಯಾತ್ರೆಯ ಕತೆಗಳು

ಈ ವಿಭಾಗದಲ್ಲಿ ಬರುವ ಪಾತ್ರಗಳು ಬಹಳವಾಗಿ ಎರಡು ಬಗೆಯ ಮೋಸಗಾರರು, ಒಂದು ಖೂಳ ದುಷ್ಟ ಮೋಸಗಾರರು. ಇನ್ನೊಂದು ಜಾಣ್ಮೆಯ ಉಪಾಯದಿಂದ ಮೋಸಗಾರರನ್ನೇ ಮೋಸಗೊಳಿಸಿ ಗೆಲ್ಲುವ ಸಾಹಸೀ ಕಥಾವೀರರು. ಈ ಚೌಕಟ್ಟಿನಲ್ಲಿ 'ಬ್ರೆರ್ ರಾಬಿಟ್' ಕತೆಗಳನ್ನು ಉದಾಹರಿಸಬಹುದು. ಅನಾನ್ಸಿ ಜೇಡರ ಕತೆಗಳು ಕೂಡ ಮುಂದೆ ಈ ವಿಭಾಗಕ್ಕೆ ಸರಿಹೊಂದುವಂತೆ ಬೆಳೆದುಬಂದು ಒಂದು ಬಗೆಯಲ್ಲಿ ಸೀಮೋಲ್ಲಂಘನೆಯಾದ ಕತೆಗಳೆಂದು ಹೇಳಬಹುದು. ಈ ಉಪಾಯದ ಜಾಣ್ಮೆಯ ಕತೆಗಳಲ್ಲಿ ಲಘುಹಾಸ್ಯದ ಬಳಕೆಯಿರುತ್ತದೆ. ಓದುಗರಿಗೆ ಶಕ್ತಿಯುತ ದುಷ್ಟನೆದುರು ಯುಕ್ತಿಯಿಂದ ಪಾರಾಗುವ ಅಬಲ ಮುಖ್ಯಪಾತ್ರದ ಬಗ್ಗೆ ಹೆಮ್ಮೆಯೂ ಖುಷಿಯೂ ಆಗುವಂತ ಮನರಂಜನೆಯ ಕಥಾವಿಧಾನವಿರುತ್ತದೆ. ಸಮಾಜದ ಶಕ್ತಿಯುತರು ಉಳಿದವರನ್ನು ಶೋಷಣೆಗೊಳಪಡಿಸುವ ನಿತ್ಯಜೀವನದ ಘಟನೆಗಳಾಧಾರಿತ ಕತೆಗಳಾಗಿವೆ ಇವು. ಇಂಥ ಸಂದರ್ಭಗಳಲ್ಲಿ ಯುಕ್ತಿಯಿಂದ ಗೆಲ್ಲುವ ಕಥಾನಾಯಕ ಮನರಂಜನೆಯೊಂದಿಗೆ ಭರವಸೆಯನ್ನೂ ಮೂಡಿಸುವವನಾಗಿರುತ್ತಾನೆ. ಹಾಗಾಗಿಯೇ 'ಬ್ರೆರ್ ರಾಬಿಟ್' ಕತೆಗಳು ಆಫ್ರಿಕನ್ ಅಮೆರಿಕನ್ ಜಾನಪದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಈ ವಿಭಾಗದ ಎಲ್ಲ ಕತೆಗಳೂ ಗೆಲುವಿನ ಕತೆಗಳೇ ಆಗಿಲ್ಲ. ಉಪಾಯ ಸದಾ ಮಾರ್ಮಿಕವಾಗಿರಬೇಕೆಂದೇ ಇಲ್ಲ. ಉದಾಹರಣೆಗೆ, 'ಮಾಟಗಾತಿ ಹೆಣ್ಣು' ಎಂಬ ಕತೆಯಲ್ಲಿ, ಗುಲಾಮನೊಬ್ಬ ತನ್ನ ಮಾಲೀಕ ತನ್ನನ್ನು ಇನ್ನೊಂದು ತೋಟಕ್ಕೆ ಕಳಿಸುವುದನ್ನು ತಪ್ಪಿಸಿಕೊಳ್ಳಲು ತನ್ನ ಹೆಂಡತಿಗೆ ತನ್ನನ್ನು ಮರವಾಗಿಸಿಬಿಡುವಂತೆ ಮಾಟ ಮಾಡಲು ಹೇಳುತ್ತಾನೆ. ಆತ ಅಲ್ಲಿಯೇ ಮರವಾಗಿ ಹೋಗಿ ತೋಟದಿಂದ ತನ್ನ ಹೆಂಡತಿ ಮಕ್ಕಳಿಂದ ದೂರವಾಗುವುದನ್ನು ತಪ್ಪಿಸಿಕೊಳ್ಳುತ್ತಾನೆ. ಆದರೆ ಕೊನೆಗೆ ಊರಿನ ಸಾಮಿಲ್ ಒಂದು ದಿಮ್ಮಿಯಾಗಿಸಲು ಆ ಮರವನ್ನೇ ಆಯ್ದುಕೊಳ್ಳುತ್ತದೆ. ಈ ಕತೆಯಲ್ಲಿ ಗುಲಾಮಗಿರಿಯ ದಾರುಣ ವಿಡಂಬನೆಯಿದೆ. ತಮ್ಮ ಪರಿಸ್ಥಿತಿಗೆ ಅಂತ್ಯವೇ ಕಾಣದ ಒಂದು ಹತಾಶೆಯಿದೆ. 'ತಪ್ಪಿಸಿಕೊಂಡರೂ ಎಷ್ಟು ದಿನ?!' ಎಂಬಂಥ ಮೂಕ ಪ್ರಶ್ನೆಯಿದೆ.

3. ಎಲ್ಲ ಕಷ್ಟಗಳನ್ನು ಗೆದ್ದು ಮುನ್ನುಗ್ಗುವ ಸಾಹಸಿಗರ ಕತೆಗಳು

ಈ ಯುಕ್ತಿಯ ಅಥವಾ ಟ್ರಿಕ್ಸ್ಟರ್ ಕಥೆಗಳು ಮುಂದೆ 'ಜಾನ್' ಕತೆಗಳಾಗಿ ಪ್ರಾಣಿಗಳಿಂದ ಮನುಷ್ಯರ ಕತೆಗಳಾಗಿ, ಈ ಅಶಕ್ತ ಜೀವಿಗಳು ಸಮಾಜದ ಸಶಕ್ತ ದುಷ್ಟರ ವಿರುದ್ಧ ಗೆಲ್ಲುವ ಕತೆಗಳಾಗಿ ವಿಕಾಸಗೊಂಡವು. ಸಾಂಕೇತಿಕ ಪ್ರಾಣಿಗಳ ಜೊತೆಜೊತೆಗೆ ಭಯದ ಪೊರೆಯಿಂದ ಹೊರಬಂದ ಸಮಾಜ ಮನುಷ್ಯರೂಪೀ ಕಥಾನಾಯಕನನ್ನೂ ಸೃಷ್ಟಿಸಿತು.

4. ಲಘು ಹಾಸ್ಯದ ಮನರಂಜನೆಯ ಕತೆಗಳು

ಈ ವಿಭಾಗದಲ್ಲಿ ಬಹಳಷ್ಟು ಮಿಳಿತ ಸಂಸ್ಕೃತಿಗಳ ಕತೆಗಳ ಪ್ರಭಾವವಿದೆ. ಅಮೆರಿಕಾದ

ಮೂಲನಿವಾಸಿ ಬುಡಕಟ್ಟು ಕತೆಗಳು ಆಫ್ರಿಕಾದ ಕತೆಗಳೊಂದಿಗೆ ತಳಕು ಹಾಕಿಕೊಂಡಂತ ಛಾಯೆಗಳಿವೆ. ಇಲ್ಲೊಂದು ಕತೆ ಹೀಗಿದೆ:

ಒಂದೂರಲ್ಲಿ ಊರಿನ ಹೊರಗೆ ಮೂವರು ಸುಂದರ ಹುಡುಗಿಯರಿರುತ್ತಾರೆ. ಆ ಊರಿನ ಮೊಲಕ್ಕೆ ಆ ಹುಡುಗಿಯರನ್ನು ಮಾತನಾಡಿಸುವ ಆಸೆ ಹುಟ್ಟಿ, ತನ್ನ ಜೊತೆ ಧೈರ್ಯಕ್ಕೆ ಬರಲು ತೋಳವೊಂದನ್ನು ಕೇಳುತ್ತೆ. ತೋಳ ಸರಿ ಎಂದು ಮೊಲದ ಜೊತೆ ಹೊರಟು ಇಬ್ಬರೂ ಸೇರಿ ಆ ಹುಡುಗೀರ ಮನೆಗೆ ಬರುತ್ತಾರೆ. ಆ ಹುಡುಗಿಯರಿಗೆ ತೋಳ ಹೆಚ್ಚು ಇಷ್ಟವಾಗಿ ಅದರ ಜೊತೆ ತುಂಬಾ ಹರಟುತ್ತಾರೆ. ಮೊಲ ಮಿಕಿಮಿಕಿ ಮುಖ ನೋಡುತ್ತಾ ಕೂತುಕೊಳ್ಳುತ್ತೆ. ಹೇಗಾದರೂ ಪರಿಸ್ಥಿತಿ ನಿಭಾಯಿಸಬೇಕೆಂದುಕೊಂಡು, ಹೊರಡುವ ಸಮಯದಲ್ಲಿ ಸ್ವಲ್ಪ ಅಲ್ಲೇ ನಿಂತು ಹುಡುಗಿಯೊಬ್ಬಳಿಗೆ 'ನಿಮಗೆ ಗೊತ್ತಿಲ್ಲ, ಆದರೆ ನೀವೀಗ ಇಷ್ಟೊತ್ತು ಚಂದವಾಗಿ ಮಾತಾಡಿಟ್ಟದ್ದು ನನ್ನ ಹಳೆಯ ಕುದುರೆಯ ಜೊತೆ' ಎಂದು ಹೇಳುತ್ತೆ. ಅವಳು, 'ಸಾಧ್ಯವೇ ಇಲ್ಲ ನೀನು ಸುಳ್ಳು ಹೇಳುತ್ತಿರುವೆ' ಎಂದಾಗ, 'ನೋಡುತ್ತಿರು, ನಾಳೆ ಅದರ ಮೇಲೆ ಸವಾರಿ ಮಾಡಿಕೊಂಡು ನಿಮ್ಮ ಮನೆಗೆ ಬರುತ್ತೇನೆ. ಆಗ ಗೊತ್ತಾಗುತ್ತೆ ನಿಮಗೆಲ್ಲ' ಎಂದು ಮೊಲ ಹೊರಬೀಳುತ್ತೆ. ಮರುದಿನ ತೋಳಕ್ಕೆ ಆ ಹುಡುಗಿಯರ ಮನೆಗೆ ಹೋಗಬೇಕೆಂದು ಬಯಕೆಯಾಗಿ ಮೊಲಕ್ಕೆ ಕೇಳಲು ಬಂದರೆ, ಮೊಲ 'ಅಯ್ಯೋ ಸಿಕ್ಕಾಪಟ್ಟೆ ಮೈ ಹುಷಾರಿಲ್ಲ' ಎಂದು ನಾಟಕ ಹೂಡುತ್ತೆ. 'ಒಂದು ಕೆಲಸ ಮಾಡೋಣ. ನೀನು ನನ್ನನ್ನು ಹೊತ್ತುಕೊಂಡು ಹೋಗು. ನನಗೆ ನಡೆಯಲು ಸಾಧ್ಯವೇ ಇಲ್ಲ' ಎಂದು ತೋಳನನ್ನು ನಂಬಿಸಿ 'ಹಾಗೆ ಕುಳಿತರೆ ಹಿಡಿತ ಸಿಗದು, ನಿನ್ನ ಮೇಲೊಂದು ಗೋಣಿ ತಾಟು ಹಾಕಿ ಕುಳಿತುಕೊಳ್ಳುತ್ತೇನೆ' ಎನ್ನುತ್ತೆ. ಮತ್ತೆ 'ಅಯ್ಯೋ ಹಿಡುಕೊಳ್ಳೋದು ಹೇಗೆ ನೀ ಓಡುವಾಗ' ಎನ್ನುತ್ತಾ ಅದಕ್ಕೆ ಮೂಗುದಾಣ ಕಟ್ಟುತ್ತೆ. ಹೀಗೆ ತೋಳವನ್ನು ಸವಾರಿ ಮಾಡಲು ಸಿದ್ಧತೆ ನಡೆಸಿ ಹತ್ತಿಕೊಂಡು ಬರುತ್ತೆ. ಇನ್ನೇನು ಆ ಹುಡುಗಿಯರ ಮನೆ ಬಂತು ಎನ್ನುವಾಗ ನೆಟ್ಟಗೆ ಕುಳಿತು ಸವಾರಿ ನಡೆಸಿ ಅವರು ಕಿಟಕಿಯಲ್ಲಿ ತನ್ನನ್ನು ನೋಡಿದ್ದನ್ನು ಖಾತ್ರಿ ಪಡಿಸಿಕೊಂಡು ಸವಾರಿ ಮಾಡಿದಂತೆ ನಟಿಸಿಕೊಂಡು ಬಾಗಿಲವರೆಗೆ ಬರುತ್ತೆ. ಅಯ್ಯೋ ಆ ಹುಡುಗಿಯರು ನಿನ್ನನ್ನು ನೋಡಿದರು. 'ಈಗ ಮೇಲೆ ಹೋದರೆ ನಿನ್ನ ಬಗ್ಗೆ ಅಪಾರ್ಥ ಮಾಡಿಕೊಂಡಾರು, ಇಲ್ಲೇ ಇರು' ಎಂದು ನಂಬಿಸಿ ಅಲ್ಲೇ ತೋಳವನ್ನು ಹೊರನಿಲ್ಲಿಸಿ ತಾನು ಒಳಹೋಗಿ ಹುಡುಗಿಯರೊಡನೆ ಹರಟಿ ಬರುತ್ತೆ. ಈ ಕತೆ ಮುಂದುವರಿದು ಕೊನೆಗೆ ಮೊಲ ಮುಂದೆ ಉಪಾಯದಿಂದ ಆಸೆಬುರುಕ ತೋಳವನ್ನು ಕುದುರೆಯ ಬಾಲವೊಂದಕ್ಕೆ ಕಟ್ಟಿ ಕೊಲ್ಲುವುದರೊಂದಿಗೆ ಮುಗಿಯುತ್ತೆ. ಇಲ್ಲಿ ತಮಾಷೆಯ ವಿಷಯವೆಂದರೆ, ಹುಡುಗಿಯರು ಮನುಷ್ಯರೇ ಆಗಿದ್ದು, ತೋಳ ಶಕ್ತಿಶಾಲಿ ಬಿಳಿಯನೊಬ್ಬನನ್ನೂ ಮೊಲ ಬರೀ ಯುಕ್ತಿಯಿಂದ ಮಾತ್ರ ಬದುಕಬಲ್ಲ ಸ್ವಲ್ಪ ತಪ್ಪಿದರೂ ತೋಳದ ಬಾಯಿಗೆ ಬಲಿಯಾಗಬೇಕಾದ ಕರಿಯನನ್ನೂ ಸೂಚಿಸುತ್ತೆ. ಹುಡುಗಿಯರನ್ನು ಮನುಷ್ಯರನ್ನಾಗಿಸಿದ್ದರೂ ಹುಡುಗ ಪಾತ್ರಗಳು ಪ್ರಾಣಿಯಾಗಿರುವುದರಲ್ಲಿ ಎದುರಿಗೆ ಮುಕ್ತವಾಗಿ ಹೇಳಿಕೊಂಡರೆ ಪ್ರಾಣ ಕಳೆದುಕೊಳ್ಳಬೇಕಾದ ಭಯವಿರುವುದರಿಂದ

ಅಂದಿನ ಬಹುತೇಕ ಕತೆಗಳಲ್ಲಿ ಹೀಗೆ ಪ್ರಾಣಿಗಳ ಮನುಷ್ಯರೊಂದಿಗಿನ ಒಡನಾಟದ ಕತೆಗಳಿವೆ. ಸೂಚ್ಯವಾಗಿ ಹೇಳಬೇಕಾದದ್ದನ್ನು ಇಂಥ ಕಾಲ್ಪನಿಕ ಪಾತ್ರಗಳ ಮೂಲಕ ಹೇಳುವ ಹೆಣಿಕೆಗಳಿವೆ.

5. ನೀತಿ ಕತೆಗಳು

ಇಲ್ಲಿನ ಕತೆಗಳು ಬಹಳಷ್ಟು ನಮ್ಮ ನೀತಿಕತೆಗಳಿಗೆ ಹೋಲುತ್ತವೆ. ಕೆಂಪು ಪುಕ್ಕದ ಕತೆಯಂತೂ ನಮ್ಮ ಬಂಗಾರದ ಮೊಟ್ಟೆಯಿಡುವ ಕೋಳಿಯ ಕತೆಯಂತಿದೆ. ಒಂದೂರಲ್ಲಿ ಒಂದು ಗಂಡ ಹೆಂಡತಿ ಇರುತ್ತಾರೆ. ಅವರು ಅತೀವ ಬಡವರು. ಸದಾ ಹಸಿವೆಯಲ್ಲೇ ನರಳುತ್ತಿರುವವರು. ಅವನ ಬೇಟೆಯ ಕೌಶಲ್ಯ ಕೂಡ ಅಷ್ಟಕ್ಕಷ್ಟೇ. ಅವ ದಿನವೂ ಕಾಡಿಗೆ ಹೋದರೂ ಹೆಚ್ಚೆಂದರೆ ಪುಟ್ಟ ಹಕ್ಕಿಯೊಂದನ್ನಷ್ಟೇ ಹೊಡೆದು ತರುತ್ತಿದ್ದ. ಒಂದು ದಿನ ಹೀಗೆ ಕಾಡಿಗೆ ಹೋದಾಗ, ಒಂದು ಪುಟ್ಟ ಕೆಂಪು ಪುಕ್ಕದ ಹಕ್ಕಿಯನ್ನು ಹೊಡೆಯಲೆತ್ನಿಸಿದಾಗ, ಆ ಹಕ್ಕಿ ಮಾತಾಡುತ್ತದೆ. "ದಯವಿಟ್ಟು ಹೊಡೆಯಬೇಡ, ನಿನಗೆ ದಿನಾಲೂ ಒಂದು ಕೆಂಪು ಪುಕ್ಕ ಕೊಡುತ್ತೇನೆ, ನಿನ್ನ ಬಡತನವೆಲ್ಲ ನೀಗುತ್ತೆ, ಹಸಿವೆಯೆಲ್ಲ ಕಳೆಯುತ್ತೆ" ಎಂದು ಹಕ್ಕಿ ಹೇಳುತ್ತದೆ. "ಇಕೋ ಈ ಪುಕ್ಕ ತೆಗೆದುಕೊಂಡು ಹೋಗಿ ಬೇಯಿಸು, ಮತ್ತೆ ನಾಳೆ ಬಾ" ಎಂದು ಹೇಳಿ ಉದುರಿಸಿದ ಆ ಒಂದು ಕೆಂಪು ಪುಕ್ಕ ಹಿಡಿದು ಗಂಡ ಮನೆಗೆ ಬರುತ್ತಾನೆ. ಹೆಂಡತಿ ಆ ಪುಕ್ಕ ನೋಡಿ ಚೆನ್ನಾಗಿ ಬೈಯುತ್ತಲೇ, "ನಿನಗೆ ತಲೆ ಕೆಟ್ಟಿದೆಯೇ, ಪುಕ್ಕ ಹೇಗೆ ಊಟವಾಗಲು ಸಾಧ್ಯ? ಹಕ್ಕಿಯನ್ನು ಹೊಡೆದು ತಂದಿದ್ದರೆ ಬೇಯಿಸಿ ತಿನ್ನಬಹುದಿತ್ತು" ಎನ್ನುತ್ತಾ ಆ ಪುಕ್ಕ ಪಾತ್ರೆಯಲ್ಲಿ ಹಾಕಿದಾಗ ಪಾತ್ರೆ ತುಂಬ ಊಟ ತಯಾರು! ದಿನವೂ ಆತ ಕಾಡಿಗೆ ಹೋಗುವುದು, ಆಕೆ ಒಂದು ಪುಕ್ಕ ಬೇಯಿಸುವುದು ನಡೆದು, ಅವರ ಹಸಿವೆಯೆಲ್ಲ ಕಳೆಯತೊಡಗಿ, ಆಕೆಗೆ ಅತಿಯಾಸೆ ಆಗತೊಡಗಿತು. ಆ ಹಕ್ಕಿಯನ್ನು ಹೊಡೆ, ಒಂದು ಪುಕ್ಕದಿಂದ ಏನು ಲಾಭ? ಆ ಹಕ್ಕಿ ನಮ್ಮೊಡನಿದ್ದರೆ ದಿನವೂ ಮೂರು ನಾಲ್ಕು ಪುಕ್ಕ ಬೇಯಿಸಬಹುದು, ಬಗೆಬಗೆಯ ಭಕ್ಷ್ಯ ತಯಾರಿಸಬಹುದು ಎಂದು ಪೀಡಿಸತೊಡಗಿದಳು. ಆತ ಅವಳ ಮಾತು ಕೇಳಲಿಲ್ಲ. ಒಂದು ದಿನ ಅವನು ಕಾಡಿಗೆ ಹೊರಟಾಗ ಮೆಲ್ಲನೆ ಹಿಂಬಾಲಿಸಿ ಹೋಗಿ ಹಿಂದಿನಿಂದ ಕವಣೆ ಹೊಡೆದು ಹಕ್ಕಿಯನ್ನು ಕೊಂದುಬಿಟ್ಟಳು. ಲಗುಬಗೆಯಿಂದ ಅದನ್ನು ಮನೆಗೆ ತಂದು ಪರಪರ ಪುಕ್ಕ ಹರಿದು ಬೇಯಿಸಿದರೆ ಅದು ಭಕ್ಷ್ಯವಾಗಿ ಬದಲಾಗಲೇ ಇಲ್ಲ. ಅವಳ ಅತಿಯಾಸೆಯಿಂದಾಗಿ ಮತ್ತೆ ಹಸಿವು ಬಡತನ ಮರಳಿ ಬಂತು. ಇಂಥ ಜಾಗತಿಕ ಛಾಯೆಯ, ಮನುಷ್ಯ–ಸಹಜ ನೈತಿಕ ನಡತೆಗೆ ಒತ್ತು ನೀಡುವ ನೀತಿಕಥೆಗಳು ಕೂಡ ಇವರ ಜಾನಪದದಲ್ಲಿ ಕಂಡುಬರುತ್ತದೆ.

6. ಆತ್ಮ, ಭೂತ ಪಿಶಾಚಿಗಳ ಕತೆಗಳು

ಇನ್ನು ಭೂತಾರಾಧನೆ, ಆತ್ಮ, ಇತ್ಯಾದಿ ಅತಿಮಾನವ ಶಕ್ತಿಗಳ ಬಗೆಗಿನ ಕತೆಗಳಲ್ಲಿ

ಬಹುತೇಕ ತಮ್ಮೆಲ್ಲ ನೋವಿನಿಂದ ಅವ್ಯಕ್ತ ಶಕ್ತಿಯೊಂದು ಕಾಯುತ್ತದೆ, ಇಲ್ಲವೇ ತಮ್ಮೆಲ್ಲ ನೋವಿಗೆ ಯಾವುದೊ ಕೆಟ್ಟ ಶಕ್ತಿಯ ದೃಷ್ಟಿ ಕಾರಣವೋ ಎಂಬಂತ ಕಾರಣ ಹುಡುಕುವ ಕತೆಗಳಂತೆ ತೋರುತ್ತವೆ. ಇವು ಎಲ್ಲ ಜಾನಪದಗಳಂತೆ ಭಯ, ಅವ್ಯಕ್ತ ಅರ್ಥವಾಗದ ಹಲವು ನೈಸರ್ಗಿಕ ಆಗುಹೋಗುಗಳ ತರ್ಕಕ್ಕೆ ಮೀರಿದ ಘಟನೆಗಳ ಸಮರ್ಥನೆಯೆಂಬಂತೆ ಇರುವ ಭೂತ ಪಿಶಾಚಿಗಳ ಕತೆಗಳು. ಅತೀಂದ್ರಿಯ ಶಕ್ತಿಗಳ ಕತೆಗಳು, ಮಾಟಗಾತಿ ಕತೆಗಳು, ಕೆಟ್ಟ ಆತ್ಮ, ಒಳ್ಳೆಯ ಆತ್ಮ ಇತ್ಯಾದಿ ಆತ್ಮಗಳ ಕತೆಗಳು ಈ ವಿಭಾಗದಲ್ಲಿ ಬರುತ್ತವೆ. ಕೆರೆಬಿಯನ್ ಮೂಲದ ಜನಪ್ರಿಯ ಕತೆಯೊಂದರಲ್ಲಿ ಗುಲಾಮಗಿರಿಗೆ ಒಳಗಾದ ಮಹಿಳೆಯೊಬ್ಬಳು, ಅತೀಂದ್ರಿಯ ಶಕ್ತಿಯ ಕಾಡುಹಂದಿಯೊಂದನ್ನು ಮದುವೆಯಾಗುತ್ತಾಳೆ. ಅದು ಆಕೆಯನ್ನು ವಿವಿಧ ರೋಗಗಳಿಂದ ಪಾರು ಮಾಡುತ್ತದೆ. ಇದು ತಲೆಮಾರುಗಳಿಂದಲೂ ಕೆರೆಬಿಯನ್ ಗುಲಾಮರ ಸಾಂಸ್ಕೃತಿಕ ಕತೆಯಾಗಿ ದಾಟಿ ಬಂದಿದೆ.

7. ಗುಲಾಮರು ಮತ್ತವರ ಮಾಲೀಕರ ಕತೆಗಳು

ಅಂದಿನ ಗುಲಾಮಗಿರಿಯ ಕತೆಗಳು ಇಂದಿನ ರೇಸಿಸಂ ವ್ಯಾಖ್ಯಾನಕ್ಕೆ ಸಂಪೂರ್ಣ ಹೊಂದುವುದಿಲ್ಲ. ಅವು ಬಹುತೇಕವಾಗಿ ಆ ತಾರತಮ್ಯವನ್ನು ಒಪ್ಪಿಕೊಂಡಂತಿರುವ ಆದರೆ ಕಷ್ಟಗಳಿಂದ ಬಿಡುಗಡೆ ಬಯಸುವ ಕತೆಗಳು. ಅವು ನಮ್ಮಲ್ಲಿಯ ಬಹಳಷ್ಟು ಜಾನಪದ ದಲಿತ ಕತೆಗಳನ್ನು ನೆನಪಿಸುತ್ತವೆ. ಈ ಪ್ರಕಾರ ಮುಂದೆ ಬೆಳೆದು ಒಂದು ಬಂಡಾಯದ ಹಾದಿಯಲ್ಲಿ ಮಾರ್ಪಾಡಾಗಿದ್ದು ಕಂಡುಬರುತ್ತದೆ. 1865ರಲ್ಲಿ ಗುಲಾಮಗಿರಿಯನ್ನು ನಿಷೇಧಿಸಲಾಗಿ, ಜಾನಪದ ಕತೆಗಳಲ್ಲಿ ಬರುವ ಪ್ರಾಣಿಗಳ ಪಾತ್ರಗಳು ಬಹಳಷ್ಟು ಕತೆಗಳಲ್ಲಿ ಮನುಷ್ಯರಾಗಿ, ಹೀರೋಗಳಾಗಿ ಬದಲಾದವು. ಇದೊಂದು ಆಫ್ರಿಕನ್ ಅಮೆರಿಕನ್ ಜಾನಪದದ ಮಹತ್ತರ ಬೆಳವಣಿಗೆ ಎಂದೇ ಹೇಳಬಹುದು. ಉದಾಹರಣೆಗೆ ಅಲ್ಲಿಯವರೆಗೂ ಅವರ ಕತೆಗಳಲ್ಲಿ ಬರುತ್ತಿದ ಬ್ರೆರ್ ರಾಬಿಟ್ ಎಂಬ ಚಾಣಾಕ್ಷ ಮೊಲ ಮುಂದೆ ಅಷ್ಟಾಗಿ ಕಾಣಿಸಿಕೊಳ್ಳಲಿಲ್ಲ, ಬದಲಿಗೆ ಅದು ಜಾನ್ ಎಂಬ ಫ್ರೀ ಬ್ಲಾಕ್ ಅಥವಾ ಸ್ವತಂತ್ರ ಕಪ್ಪು ವರ್ಣೀಯ ಯುವಕ ತನ್ನ ಹಳೆಯ ಹಿಡುವಳಿದಾರರನ್ನು ಗೆಲ್ಲುವ ದಿಕ್ಕು ತಪ್ಪಿಸುವ ಚಾಣಾಕ್ಷ ವ್ಯಕ್ತಿಯಾಗಿ ಬದಲಾಯಿತು. ಈ ಜಾನ್ ಕತೆಗಳು ಹಾಗೆ ನೋಡಿದರೆ ಅದೇ ಮೊಲದ ಕತೆಗಳು. ಒಂದು ದೃಷ್ಟಿಯಲ್ಲಿ ಸ್ವತಂತ್ರವಾದರೂ ಹಳೆಯ ಹಿಡುವಳಿದಾರರನ್ನು ಇನ್ನೂ ತಪ್ಪಿಸಿಕೊಂಡೇ ಬದುಕಬೇಕಾದ ವಿಪರ್ಯಾಸದ ಕತೆಗಳು!

ಹೀಗೆ ಬಹಳಷ್ಟು ಆಫ್ರಿಕನ್ ಅಮೆರಿಕನ್ ಜಾನಪದ ಕತೆಗಳಲ್ಲಿ ಅಸಮಾನತೆಯನ್ನು ಸಾರುವ ಕಥಾಹಂದರವಿದೆ. ಮೊಲ, ಬೆಕ್ಕು, ಕರಡಿ ಇತ್ಯಾದಿ ಪ್ರಾಣಿಗಳೆಲ್ಲ ನಮ್ಮ ಪಂಚತಂತ್ರದ ಕಥಾಪಾತ್ರಗಳಂತೆ ಒಂದು ಸಿದ್ಧಾಂತದ ರೂಪಕವಾಗಿ ಬರುತ್ತವೆ. ಒಂದು ಇಡೀ ಸಮಾಜ ತಾವು ಹೇಗೆ ಅನ್ಯಾಯವಾಗಿ ದೌರ್ಜನ್ಯಕ್ಕೊಳಗಾಗಿ ಬದುಕುತ್ತಿದೆ ಎಂಬುದನ್ನು ಕತೆಗಳ ಮೂಲಕ ಸೂಚ್ಯವಾಗಿ ತಿಳಿಸುತ್ತವೆ. ಹೀಗೆ ಈ ಬಗೆಯ ಕತೆಗಳಲ್ಲಿ, ರೂಪಕವಾಗಿ ಪ್ರಾಣಿ ಪಕ್ಷಿಗಳೆಲ್ಲ ಸೂಚ್ಯವಾಗಿ ಬರುವುದಕ್ಕೂ ಒಂದು ಕಾರಣವಿದೆ. ಕರಿಯರಿಗೆ ಬಿಳಿಯರ

ವಿರುದ್ಧ ದನಿ ಎತ್ತಿದರೆ ಆಗುವ ಅಪಾಯ ಎಷ್ಟಿತ್ತೆಂದರೆ ಇಂಥ ಸೂಚ್ಯ ಕತೆಗಳು ತಮ್ಮ ನೋವನ್ನು ಹಂಚಿಕೊಳ್ಳಲು, ಆ ನೋವಿನ ವಿರುದ್ಧ ದನಿ ಎತ್ತಲು ಅನಿವಾರ್ಯವಾಗಿದ್ದವು. ಮನುಷ್ಯ ಪಾತ್ರಗಳನ್ನು ಇಂಥ ಕತೆಗಳಲ್ಲಿ ಬಳಸಿಕೊಂಡರೂ ಪ್ರಾಣಾಪಾಯವಾಗಬಹುದೆಂಬ ಹೆದರಿಕೆ ಇತ್ತು. ಅದು ಸುಪ್ತವಾಗಿ ಇಂಥ ದೌರ್ಜನ್ಯದ ಬಗೆಗಿನ ಅರಿವು ಮೂಡಿಸುವ ಪ್ರಯತ್ನವೂ ಆಗಿತ್ತು. ಅಷ್ಟೇ ಅಲ್ಲದೆ ಈ ಮೌಖಿಕ ಪರಂಪರೆ ಅವರಲ್ಲಿ ತಮ್ಮ ಮಾಲೀಕರ ಅಧಿಪತ್ಯಕ್ಕೆ ಒಳಪಡದ, ತಮ್ಮದೇ ಆದ ಒಂದು ಸಮಾಜಕ್ಕೆ ಸೇರಿದ ಭಾಗ ಎಂಬಂತ ಅನುಭವ ಕೊಡುವ ಚಟುವಟಿಕೆಯಾಗಿತ್ತು. ಇದು ಯಾರ ಹಸ್ತಕ್ಷೇಪವಿಲ್ಲದ ತಮ್ಮದೇ ಖಾಸಗೀ ಲೋಕ ಎಂಬ ಆಪ್ತ ಭಾವ ನೀಡುತ್ತಿತ್ತು.

ಈ ಜನಪದ ಪರಂಪರೆಯನ್ನೇ ಅವರು ಬಹಳಷ್ಟು ಬಾರಿ ಸುಪ್ತ ಸಂದೇಶ ರವಾನಿಸಲು, ಸ್ಥಳ, ಸಮಯ, ಗುಪ್ತ ಸಮಾಲೋಚನೆ ಇತ್ಯಾದಿಗಳನ್ನು ಹಾಡು, ಕತೆಗಳ ಮೂಲಕ ತಲುಪಿಸುವುದರ ಮೂಲಕ ಮುಂದೆ ಸಂಘಟನೆಗಳನ್ನ ಆರಂಭಿಸಲು ಬಳಸಿಕೊಂಡರು. ಈ ಹಾಡು ಕತೆಗಳ ಜಾನಪದ ಲೋಕ ಅಮೆರಿಕಾದ ಸಿವಿಲ್ ವಾರ್ (ಅಂತರ್ಯುದ್ಧ) ಸಮಯದಲ್ಲಿ ಬಹು ಮುಖ್ಯ ಪಾತ್ರ ವಹಿಸಿದೆ. ಗುಲಾಮರ ಜಾನಪದ ಬರೀ ಆಫ್ರಿಕನ್ ಅಮೆರಿಕನ್ ಸಾಹಿತ್ಯಕ್ಕಷ್ಟೇ ಅಲ್ಲ, ಅಮೆರಿಕನ್ ಸಾಹಿತ್ಯಲೋಕಕ್ಕೇ ಒಂದು ಮುಖ್ಯ ಮೈಲಿಗಲ್ಲು. ಮೌಖಿಕ ಪರಂಪರೆಯ ಅಸ್ತಿತ್ವದ ದಾಖಲೆ ಹದಿನೇಳನೇ ಶತಮಾನದಲ್ಲೇ ಇದ್ದರೂ ಅದನ್ನು ಲಿಖಿತವಾಗಿ ಹತ್ತೊಂಬತ್ತನೇ ಶತಮಾನದವರೆಗೂ ಯಾರೂ ದಾಖಲಿಸಿರಲಿಲ್ಲ. ಅದೇ ತಾನೇ ಜಾನಪದ? ಬಾಯಿಂದ ಬಾಯಿಗೆ ಹರಡುವ ಕರ್ತೃ ಯಾರೆಂದು ತಿಳಿಯದ ಸಾಹಿತ್ಯ ಲೋಕ! ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಪತ್ರಕರ್ತ ಜೋಯೆಲ್ ಶಾಂಡ್ಲರ್ ಹ್ಯಾರಿಸ್ ಮೊಟ್ಟಮೊದಲ ಬಾರಿಗೆ 'Uncle Remus, His Songs and His Sayings: The Folk-lore of the Old Plantation (1880)' ಪ್ರಕಟಿಸಿದ. ಅದು ಆಫ್ರಿಕನ್ ಅಮೆರಿಕನ್ ಜಾನಪದ ಸಾಹಿತ್ಯದ ಮೊದಲ ದಾಖಲಿತ ಕೃತಿ.

ಸಾಹಿತ್ಯವೊಂದೇ ಅಲ್ಲ, ಜಾನಪದವೆಂದರೆ ಸಂಗೀತ ಕೂಡ

ಆಫ್ರಿಕನ್ ಅಮೆರಿಕನ್ ಜಾನಪದ ಸಂಗೀತವಿಲ್ಲದಿದ್ದರೆ ಆಧುನಿಕ ಪಾಶ್ಚಾತ್ಯ ಸಂಗೀತದ ದಿಕ್ಕೇ ಬದಲಾಗಿರುತ್ತಿತ್ತು. ಇಂದು ನಾವು ಬಹುವಾಗಿ ಸಂಭ್ರಮಿಸುವ ಹಿಪ್-ಹಾಪ್, ಜಾಝ್, ರಾಪ್ ಸಂಗೀತಗಳೆಲ್ಲ ಹುಟ್ಟುತ್ತಲೇ ಇರಲಿಲ್ಲ. ಇವೆಲ್ಲದರ ಮೂಲ ಹುಡುಕಿದರೆ, ಅದು ಗುಲಾಮಗಿರಿಗೆ ಒಳಗಾಗಿ ಬಂದವರ ನೋವಿನ ಹಾಡುಗಳಲ್ಲಿದೆ. ಕತೆಗಳಂತೆಯೇ ಜಾನಪದ ಸಂಗೀತ ಕೂಡ ಬಹುಮಟ್ಟಿಗೆ ಹೋರಾಟದ ಬದುಕನ್ನು ಬಿಂಬಿಸುವ ಗೀತಗುಚ್ಛಗಳಾಗಿದ್ದವು. ಹತ್ತಿಯ ಹೊಲದಲ್ಲಿ ದುಡಿಯುವಾಗ ಒಟ್ಟಾಗಿ ಹಾಡಿಕೊಳ್ಳುವ ಸಂಗೀತವಿರುವಂತಹ, ಸಬಲೀಕರಣ ಮತ್ತು ಪರಿಶ್ರಮವೇ ಜೀವಾಳವಾದ ಸಂದೇಶವಿರುವ ಸಾಲುಗಳ ಹಾಡುಗಳಾಗಿದ್ದವು. ಈ ಹಾಡುಗಳಲ್ಲಿ ಒಂದು ಮುಖ್ಯ ಪ್ರಕಾರ ಅಥವಾ ಶೈಲಿ

ಎಂದರೆ 'ಕರೆ ಮತ್ತು ಪ್ರತಿಕ್ರಿಯೆ' ರೀತಿಯವು. ಅಂದರೆ ಹಾಡುಗಳಲ್ಲಿ ಒಬ್ಬ ಹಾಡುಗಾರ ಅಥವಾ ಒಂದು ಗುಂಪು ಒಂದು ಸಂಗತಿಯನ್ನೋ, ನೋವನ್ನೋ, ಸಮಸ್ಯೆಯನ್ನೋ, ಯೋಜನೆಯೊಂದನ್ನೋ ಹೇಳಿಕೊಂಡರೆ, ಅದಕ್ಕೆ ಪ್ರತಿಕ್ರಿಯೆಯಾಗಿ ಇನ್ನೊಬ್ಬರು ಅಥವಾ ಇನ್ನೊಂದು ಗುಂಪು ಹಾಡುಕಟ್ಟಿ ಉತ್ತರ ಕೊಡುತ್ತಾ ಹಾಡುವುದು. ಈ ವಿಧಾನಗಳಲ್ಲಿ ಬಹಳಷ್ಟು ಬಾರಿ ಸಂಘಟನೆ, ಚಳುವಳಿ, ನೋವಿಗೆ ಪರಿಹಾರ, ಸಾಂತ್ವನ ಹೀಗೆ ಹಲವು ಬಗೆಯ ಸಂದೇಶಗಳು ರವಾನೆಯಾಗುತ್ತಿದ್ದವು. ಇದು ಬಿಟ್ಟರೆ ಈಗ ನಾವು ಗಾಸ್ಪೆಲ್ ಎಂದು ಕರೆಯುವ ಶೈಲಿಯ ದೇವರ ಮೇಲಿನ ಅಧ್ಯಾತ್ಮದ ಗೀತಗಳು. ಇಂದು ಸಮಾಜ, ಜನಜೀವನ, ಸಂಸ್ಕೃತಿಗಳನ್ನು ಮೀರಿ ದೇಶಭಾಷೆಗಳ ಗಡಿ ದಾಟಿ, ಹೋರಾಟದ ಬದುಕಿನವರೆಲ್ಲ ಗುರುತಿಸಿಕೊಳ್ಳುವ ಹಾಡುಗಳಾದ, 'We Shall Overcome', 'I Shall Not Be Moved' ಮತ್ತು 'Amazing Grace' ಈ ಜಾನಪದ ಜಗತ್ತಿನಿಂದಲೇ ಬಂದಂಥವು. ಸಿವಿಲ್ ವಾರ್ ಮುಗಿದ ನಂತರ ಗುಲಾಮ ಗಿರಿಯ ನಿರ್ಮೂಲನಕ್ಕೆ ಕಾನೂನು ಬಂದು ಅವರೆಲ್ಲ ಸ್ವತಂತ್ರವಾದ ನಂತರ, ಹತ್ತಿಯ ಹೊಲಗಳ ಕಬ್ಬಿಣದ ಸಂಕೋಲೆ ಕಳಚಿ ಹೊರಬಿದ್ದ ಕಪ್ಪು ವರ್ಣೀಯ ಸಮುದಾಯ ಉತ್ತರದ ನಗರಗಳೆಡೆಗೆ ಪ್ರಯಾಣ ಬೆಳೆಸಿತು. ಸ್ವತಂತ್ರ ಬದುಕನ್ನು ಹುಡುಕಿ ಹೊರಟ ಮಂದಿ ಹೋರಾಟದ ಹಾದಿಯನ್ನು ಮರೆಯಲಿಲ್ಲ. ತಮ್ಮೊಂದಿಗೆ ತಮ್ಮ ಸಂಗೀತವನ್ನೂ ಹೊತ್ತು ತಂದರು. 'ಫೋಕ್-ಬ್ಲೂಸ್' ಎಂದು ಕರೆಸಿಕೊಂಡ ಆಗಿನ ಹಾಡುಗಳು ಅವೇ ಮುಂದೆ ಪ್ರಸಿದ್ಧ 'ಬ್ಲೂಸ್ ಮ್ಯೂಸಿಕ್' ಪ್ರಕಾರವಾಗಿ ಹೊರಹೊಮ್ಮಿತು. ಈ ಸಂಗೀತ ಮೂಲದಲ್ಲಿ ಖಿನ್ನತೆ, ಆಂದೋಲನ, ನೋವು, ತುಮುಲಗಳ ಸಾಲುಗಳ ಕತೆಯನ್ನು ಹೇಳುವುದರಿಂದಾಗಿ ಅದಕ್ಕೆ ತಕ್ಕ ಭಾವಗಳನ್ನು ಉದ್ದೀಪಿಸುವ ರಾಗ ಸಂಯೋಜನೆ, ವಾದ್ಯಗಳ ಜತೆಯಿಂದಾಗಿ ಈ ಸಂಗೀತಕ್ಕೆ 'ಬ್ಲೂಸ್' ಎಂಬ ಹೆಸರು ಬಂದಿದೆ. ಅಂತೆಯೇ ಈ ಸಂಗೀತ ಕೇಳುಗರನ್ನು ಆಳವಾಗಿ ತಟ್ಟುತ್ತದೆ. ಇಂಥ ಬ್ಲೂಸ್ ಸಂಗೀತ ಮುಂದೆ ಜಾಗತಿಕವಾಗಿ ಸಂಗೀತ ಕ್ಷೇತ್ರವನ್ನು ಬುಡಮೇಲು ಮಾಡಿದ ಅಮೆರಿಕಾದ ಪ್ರಸಿದ್ಧ 'ರಾಕ್ ಎಂಡ್ ರೋಲ್' ಪ್ರಕಾರಕ್ಕೆ ಬಹಳಷ್ಟು ಕೊಡುಗೆ ಕೊಟ್ಟಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು.

ಆಫ್ರಿಕನ್ ಅಮೆರಿಕನ್ನರು ಸಿವಿಲ್ ರೈಟ್ ಚಳುವಳಿ ಮುಗಿಸಿ ಸ್ವತಂತ್ರರಾದರೂ ಸ್ವಾತಂತ್ರ್ಯ ಎಂಬುದು ಅವರ ಮಟ್ಟಿಗೆ ಇಂದಿಗೂ ಸಂಪೂರ್ಣ ದಕ್ಕಿಲ್ಲ. ಹಲವು ಬಗೆಯ ಅಸಮಾನತೆಯನ್ನು ಈ ಸಮಾಜ ಎದುರಿಸುತ್ತಲೇ ಬಂದಿದೆ. ಅಂತೆಯೇ ಅವರ ಜಾನಪದ ಲೋಕ ಕಾಲದಿಂದ ಕಾಲಕ್ಕೆ ಬದಲಾಗುತ್ತ ಸಾಗಿದೆ. ಹಾಗೆ ಹುಟ್ಟಿಕೊಂಡಿದ್ದು ಎಪ್ಪತ್ತರ ದಶಕದ ಹಿಪ್-ಹಾಪ್ ಸಂಗೀತ. ಪುರಾತನ ಆಫ್ರಿಕನ್ ವಾದ್ಯಗಳನ್ನು ಬಳಸಿಕೊಂಡು ಸಮಕಾಲೀನ ನೃತ್ಯಕ್ಕೆ ಹೊಂದಿಸಿಕೊಂಡ ಆಡುಮಾತಿನಲ್ಲಿ ಭಾವಗಳನ್ನು, ಹತಾಶೆಯನ್ನು ಹೇಳಿಕೊಳ್ಳುವ ಸಂಗೀತಪ್ರಕಾರವಿದು. ಇದೊಂದು ಬಗೆಯಲ್ಲಿ ಹತಾಶೆಯ ಆಚರಣೆ. ತಮ್ಮ ಹತಾಶೆಗಳಿಗೆ ಪರಿಹಾರವಿಲ್ಲದಾಗ ಹುಟ್ಟಿಕೊಂಡ ನವ ಜಾನಪದ ಶೈಲಿ. ಸಂಗೀತದ ಅಭಿವ್ಯಕ್ತಿಯ ಸಂಭ್ರಮದ ಹೊಸ ಕವಲು. ಇದು ಇನ್ನೂ ಮುಂದುವರೆದು ಈಗಿನ

ರಾಪ್ ಸಂಗೀತವಾಗಿ ಹೊಮ್ಮಿದೆ. ಇದರಲ್ಲಿ ಅಸಮಾನತೆ, ಬಡತನ, ಘೆಟ್ಟೋ ಸಂಸ್ಕೃತಿ, ಕ್ರೌರ್ಯ, ದೌರ್ಜನ್ಯ, ಮಾದಕ ದ್ರವ್ಯಗಳಿಂದಾಗುವ ಅಪಾಯ, ವ್ಯಸನ, ಒಂಟಿ ತಾಯಂದಿರ ಕಷ್ಟದ ಜೀವನ ಇತ್ಯಾದಿ ಆಧುನಿಕ ಸಮಸ್ಯೆಗಳ ನೋವಿದೆ. ಈ ಹಾಡು, ಸಂಗೀತಕ್ಕೆ ಸ್ಪಷ್ಟ ಕೃತಿಕಾರ ಯಾರು ಎಂಬ ದಾಖಲೆ ಇದ್ದರೂ ಮೂಲ ಬೇರು ಇರುವುದು ಹದಿನೇಳನೇ ಶತಮಾನದ ಜಾನಪದ ಸಂಗೀತ ಮತ್ತು ಸಾಹಿತ್ಯದಲ್ಲಿ. ಹಾಗಾಗಿ ಇವನ್ನು ಆಧುನಿಕ ಸಂಗೀತವೆಂದು ಪರಿಗಣಿಸಿದರೂ ಆಫ್ರಿಕನ್-ಅಮೆರಿಕನ್ ಜಾನಪದವನ್ನು ಅವಲೋಕಿಸುವಾಗ ಇವನ್ನು ಹೊರತುಪಡಿಸಲಾಗದು.

ದೌರ್ಭಾಗ್ಯವೆಂದರೆ ಈ ನೋವು ಯಾತನೆಯ ಕತೆಗಳು, ಹಾಡುಗಳು ಇಂದಿಗೂ ಮತ್ತೆ ಮತ್ತೆ ಮರುಕಳಿಸುತ್ತಲೇ ಇವೆ

1866, ಜೂನ್ 19ರಂದು ಟೆಕ್ಸಾಸ್‌ನ ಕೊನೆಯ ಗುಲಾಮರು ಸ್ವತಂತ್ರಗೊಂಡ ದಿನ 'ಜೂನ್ ಟೀಂತ್' ಎಂದು ಗುರುತಿಸಲ್ಪಡುತ್ತದೆ. ಅಂತಹ ಐತಿಹಾಸಿಕ ದಿನ ರಾಷ್ಟ್ರೀಯ ದಿನವಾಗಲು ಶತಮಾನಕ್ಕೂ ಹೆಚ್ಚು ಕಾಲ ಬೇಕಾಯಿತು. ಈ ವರ್ಷ ಕೊನೆಗೂ ಜೂನ್ ಟೀಂತ್ ದಿನವನ್ನು ರಾಷ್ಟ್ರೀಯ ರಜಾ ದಿನಗಳಲ್ಲೊಂದಾಗಿ ಗುರುತಿಸಲಾಯಿತು. ಅದಕ್ಕೆ ಬಹುಮುಖ್ಯ ಕಾರಣ ಈಗ ನಡೆಯುತ್ತಿರುವ ಆಧುನಿಕ ನಾಗರಿಕ ಚಳುವಳಿ 'ಬ್ಲಾಕ್ ಲೈವ್ಸ್ ಮ್ಯಾಟರ್' ಜನಾಂದೋಲನ ಎಂದೇ ಹೇಳಬಹುದು. ಯಾಕೆಂದರೆ ಗುಲಾಮಗಿರಿ ಮುಗಿದರೂ ಕರಿಯರ ಮೇಲಿನ ಕ್ರೌರ್ಯ 1866ರಲ್ಲಿ ಮುಗಿಯಲಿಲ್ಲ. ಮೇ 31, 1921 ಅಮೆರಿಕಾದ ಇತಿಹಾಸದಲ್ಲೊಂದು ಕರಾಳ ದಿನ. ಸಮೃದ್ಧವಾಗಿ ಅಭಿವೃದ್ಧಿ ಹೊಂದುತ್ತಿದ್ದ ಪ್ರಗತಿಯ ಹಾದಿಯಲ್ಲಿ ನಡೆಯುತ್ತಿದ್ದ ಆಫ್ರಿಕನ್ ಅಮೆರಿಕನ್ ಸಮುದಾಯವೊಂದನ್ನು, ಅಲ್ಲಿನ ಸಾವಿರಾರು ಮನೆಗಳನ್ನು ಉಗ್ರಗಾಮಿ ಬಿಳಿಯರ ಗುಂಪೊಂದು ಸುಟ್ಟು ಕರಕಲಾಗಿಸಿದ ದಿನ. ನೂರಾರು ಜನರನ್ನು ಸಜೀವ ದಹಿಸಿದ ದಿನ.

ಟಲ್ಸಾ ಎಂಬುದು ಅಮೆರಿಕಾದ ದಕ್ಷಿಣ ರಾಜ್ಯಗಳಲ್ಲಿ ಒಂದಾದ ಒಕ್ಲಾಹೊಮಾದ ಪ್ರಮುಖ ನಗರ. ಇಲ್ಲಿನ ಶ್ರೀಮಂತ ಕರಿಯ ಉದ್ಯಮಿ ಓ. ಡಬ್ಲ್ಯೂ. ಗಾರ್ಲೀ, 1906ರಲ್ಲಿ ಸುಮಾರು 40 ಎಕರೆ ಜಮೀನು ಖರೀದಿಸಿ ಅದನ್ನು ಗ್ರೀನ್‌ವುಡ್ ಎಂದು ನಮೂದಿಸಿ ಹೊಸ ಕ್ರಾಂತಿ ಆರಂಭಿಸಿದ. ಕರಿಯರಿಂದ ಕರಿಯರಿಗಾಗಿ ನಿರ್ಮಿತ ನಗರವೊಂದನ್ನು ಕಟ್ಟಿದ. ಅಂಗಡಿ ಮುಂಗಟ್ಟುಗಳು, ರೆಸ್ಟೋರೆಂಟುಗಳು, ಕ್ಲಬ್, ಸಲೂನ್, ಈಜುಕೊಳ, ವ್ಯವಸ್ಥಿತ ಶಾಲೆ, ಬ್ಯಾಂಕು, ಹೋಟೆಲು, ಹೀಗೆ ವಿಧವಿಧದ ವ್ಯವಹಾರ ವಹಿವಾಟು ಆರಂಭವಾದವು. ಸ್ವಂತ ಪತ್ರಿಕೆಗಳಿಂದ ಹಿಡಿದು ಹಣ ಹೂಡಿಕೆಯವರೆಗೆ ಒಬ್ಬರನ್ನೊಬ್ಬರು ಎತ್ತಿ ಬೆನ್ನು ತಟ್ಟುವ ಸ್ವಾವಲಂಬೀ ಸಮಾಜವಾಗಿ ಗ್ರೀನ್‌ವುಡ್ ಬೆಳೆದಿತ್ತು. ಹಾಗೆಂದು ಬರೀ ಶ್ರೀಮಂತರಷ್ಟೇ ಅಲ್ಲದೆ ಚಿಕ್ಕಪುಟ್ಟ ಕೆಲಸ ಮಾಡುವ ದೈನಂದಿನ ಕೆಲಸಗಾರರು, ಕೂಲಿಕಾರರು, ಕಾರ್ಮಿಕರಿಗೂ ಅಲ್ಲಿ ಜಾಗವಿತ್ತು. ಹಾಗಾಗಿ ಹೊರಗಡೆ ದುಡಿಯುವ ಅಲ್ಲಿನ ಸಮುದಾಯದವರೂ ಸಹ ತಮ್ಮ ಹಣವನ್ನು ಗ್ರೀನ್ವುಡ್‌ನಲ್ಲಿ ವಿನಿಯೋಗಿಸುತ್ತಿದ್ದರು.

ಆ ಪುಟ್ಟ ನಗರ ಸಂಪದ್ಭರಿತವಾಗುತ್ತ ಅಲ್ಲಿನ ಕರಿಯರ ಸಮಾಜವನ್ನು ಅವರ ಜೀವನಶೈಲಿಯನ್ನು ಪ್ರಗತಿಪರವಾಗಿಸುತ್ತ ಸಾಗಿತು. ಆದರೆ ಒಕ್ಲಾಹೊಮಾ ಒಂದು ಬಿಳಿಯರ ಮತ್ತು ಕರಿಯರ ಪ್ರತ್ಯೇಕತೆಯನ್ನು ಉಗ್ರವಾಗಿ ಪ್ರತಿಪಾದಿಸುವ ರಾಜ್ಯವಾಗಿತ್ತು. ಸಮಾನ ಹಕ್ಕುಗಳಿಗಾಗಿ ಕರಿಯರ ಹೋರಾಟ ನಡೆದೇ ಇತ್ತು. ಗ್ರೀನ್ವುಡ್ ಸಮುದಾಯದ ಸಂಪತ್ತು, ಮೇಲುಸ್ತರದ ಸಾಮಾಜಿಕ ಜೀವನ ಶೈಲಿ ಸುತ್ತಲಿನ ಬಿಳಿಯರ ಕಣ್ಣುರಿಗೆ ಕಾರಣವಾಗಲು ಬಹಳ ದಿನ ಹಿಡಿಯಲಿಲ್ಲ. ತಮ್ಮ ಸಮಸಮವಾಗಿ ಬೆಳೆಯುವ ಕರಿಯರ ಪ್ರಗತಿ ಬಿಳಿಯರಿಗೆ ಸಹಿಸಲಾಗಲಿಲ್ಲ. ವಿಶಾಲ ಮನೆ, ಆವರಣ, ಉದ್ಯಾನ, ಪೀಠೋಪಕರಣ, ಆಭರಣ, ಆಧುನಿಕ ಶೈಲಿಯ ಪಾತ್ರೆಪಗಡೆ, ಉಪಕರಣಗಳನ್ನೆಲ್ಲ ಇಟ್ಟುಕೊಂಡು ಬದುಕುತ್ತಿರುವ ಕರಿಯ ಸಮಾಜವನ್ನು ಕಂಡ ಬಿಳಿಯರ ಮತ್ಸರಕ್ಕೆ ಎಣೆಯಿರಲಿಲ್ಲ. ಅವರ ಭಾವವೆಂದರೆ 'ಈ ಜನ ಹೀಗೆ ಬದುಕಲು ಅರ್ಹರಲ್ಲ!' ತಮ್ಮ ಪ್ರಾಬಲ್ಯದೊಳಗೆ ಬದುಕದೇ ಒಂದು ಕಾಲದಲ್ಲಿ ತಮ್ಮ ಅಧೀನರಾಗಿದ್ದ ಸಮಾಜವೊಂದು ತನ್ನ ಸ್ವಂತ ಕಾಲ ಮೇಲೆ ನಿಂತು ಬೆಳೆಯುತ್ತಿದ್ದುದನ್ನು ಬಿಳಿಯ ಸಮಾಜಕ್ಕೆ ಸಹಿಸಲೇ ಆಗಲಿಲ್ಲ. ರಾಜ್ಯದ ಆಡಳಿತವೂ ಕರಿಯರನ್ನು ಹೊರಗಿಟ್ಟೇ ಇತ್ತು. ಮತ ಚಲಾಯಿಸುವ ಹಕ್ಕು ಕೂಡ ಇರಲಿಲ್ಲ. ಲಿಂಚಿಂಗ್ (ಯಾವುದೇ ವಿಚಾರಣೆಗೆ ಆಸ್ಪದ ಕೊಡದೆ ಎಲ್ಲರೆದುರೇ ಬಹಿರಂಗವಾಗಿ ನೇಣು ಹಾಕುವುದು/ಶಿಕ್ಷೆ ನೀಡುವುದು) ಪ್ರಕರಣಗಳು ಬೆಳೆಯತೊಡಗಿದವು. ಕರಿಯರ ಮೇಲಿನ ದೌರ್ಜನ್ಯಗಳು ಹೆಚ್ಚಾಗತೊಡಗಿದವು. 1919ರ ಬೇಸಿಗೆಯನ್ನು ಕೆಂಪು ಬೇಸಿಗೆಯೆಂದು ಕರೆಯುತ್ತಾರೆ. ದೇಶದಾದ್ಯಂತ ಹಲವು ನಗರಗಳಲ್ಲಿ ಕರಿಯರ ವಿರುದ್ಧದ ದೌರ್ಜನ್ಯ ನಡೆದವು. ಪಾತಕದ ಘಟನೆಗಳು ಕರಿಯರ ಸಮಾಜವನ್ನು ಅಧೀರಗೊಳಿಸ ತೊಡಗಿತ್ತು. ಕರಿಯರು ತಮ್ಮ ಸುರಕ್ಷತೆಗಾಗಿ ಆಯುಧಗಳನ್ನು ಇಟ್ಟುಕೊಳ್ಳತೊಡಗಿದರು. ಅಲ್ಲಿಂದ ಹೆಚ್ಚುತ್ತಲೇ ಹೋದ ಜನಾಂಗೀಯ ದ್ವೇಷ 1921ರಲ್ಲಿ ಭುಗಿಲೆದ್ದಿತು. ಹದಿನೇಳರ ಬಿಳಿ ಹುಡುಗಿಯೊಬ್ಬಳು ಹತ್ತೊಂಬತ್ತರ ಕರಿ ಹುಡುಗನೊಬ್ಬನ ಮೇಲೆ ಅತ್ಯಾಚಾರದ ಆರೋಪ ಹೊರಿಸಿದಳು. ಕೋರ್ಟಿನ ಕಾರ್ಯಾಚರಣೆಗೂ ಅವಕಾಶ ಕೊಡದೆ ಆತನನ್ನು ತಮಗೊಪ್ಪಿಸುವಂತೆ ಬಿಳಿಯರ ಗುಂಪೊಂದು ಕೋರ್ಟಿಗೆ ಬಂದು ಧಾಂಧಲೆ ಎಬ್ಬಿಸಿತು. ಇದನ್ನು ತಿಳಿದು ಅಲ್ಲಿಗೆ ರಕ್ಷಣೆಗೆಂದು ಬಂದ ಕರಿಯರ ಗುಂಪಿಗೆ ಉತ್ತರವಾಗಿ ಸಾವಿರಾರು ಬಿಳಿಯರು ಮದ್ದು ಗುಂಡು, ಬಂದೂಕುಗಳೊಡನೆ ಹಾಜರಾದರು. ಅಲ್ಲಿಂದ ಅಟ್ಟಾಡಿಸಿಕೊಂಡು ಗ್ರೀನ್‌ವುಡ್‌ಗೆ ನುಗ್ಗಿ ಇಡೀ ಊರನ್ನು ಸುಟ್ಟು ಕರಕಲಾಗಿಸಿ ಲೂಟಿ ಮಾಡಿ, ದೋಚಿ ಹೊತ್ತೊಯ್ದು ತಮ್ಮ ಮತ್ಸರ ಹೊರ ಹಾಕಿ ತೀರಿಸಿಕೊಂಡರು. ಮೊದಲೇ ಬಿಳಿಯರ ಪರವಾಗಿದ್ದ ಸರಕಾರ ಯಾವ ಸಹಾಯಕ್ಕೂ ಬರಲಿಲ್ಲ. ಒಂದಿನಿತೂ ಬೆಂಬಲ ಸಿಗದೇ ಬಲಿಯಾದ ಟಲ್ಸಾದ ಕರಿಯರಿಗೆ ನ್ಯಾಯ ಕೊಡಿಸುವವರೇ ಇರಲಿಲ್ಲ. ಅಂದು ಕರಕಲಾದ ಆ ಕಪ್ಪು ಗೋಡೆಯ ಬೀದಿ ಮತ್ತೆಂದೂ ಆ ಹಂತಕ್ಕೆ ಶ್ರೀಮಂತವಾಗಿ ಬೆಳೆಯಲೇ ಇಲ್ಲ.

ಪೊಲೀಸ್ ದೌರ್ಜನ್ಯ ಮತ್ತು 'ಬ್ಲಾಕ್ ಲೈವ್ಸ್ ಮ್ಯಾಟರ್' ಚಳುವಳಿ

ಇಂಥ ಮುಖ್ಯ ಮಾರಣಹೋಮಗಳಲ್ಲದೆ ಅಮೆರಿಕಾದ ಇತಿಹಾಸದಲ್ಲಿ ನಿನ್ನೆ ಮೊನ್ನೆಯವರೆಗಿನ ಪೊಲೀಸ್ ದೌರ್ಜನ್ಯದ ಕೊಲೆಗಳವರೆಗೂ ನಡೆದ ಹತ್ಯೆಗಳಿಗೆ ಲೆಕ್ಕವಿಲ್ಲ. ಸದಾ ಪ್ರತಿಭಟಿಸುತ್ತಲೇ ಬಂದಿರುವ ಜನಾಂದೋಲನವೇ ಇಲ್ಲಿನ ನಿತ್ಯವೂ ಮಾರ್ಪಾಡಾಗುತ್ತಿರುವ ಕರಿಯರ ಜಾನಪದ! ಶತಶತಮಾನಗಳ ಕರಿಯರ ಹೋರಾಟ ಬಿಸಿಯುಸಿರನ್ನು ಬಸಿಯುತ್ತಲೇ ಬಂದಿದೆ. ನೆತ್ತರಲ್ಲಿ ಅದ್ದಿದ ಸಾಲುಗಳ ಮತ್ತೆ ಮತ್ತೆ ಹೊಸೆಯುತ್ತಲೇ ಬಂದಿದೆ. ಇಂದಿನ ಅಮೆರಿಕಾದ ಪ್ರಚಲಿತ ವಿದ್ಯಮಾನ ಮತ್ತೆ ಇಂದನ್ನು ನಾಳಿನ ಜನಪದವಾಗಿಸಲು ಹೊರಟಿದೆ.

ಗುಲಾಮಗಿರಿ ಮುಗಿದಿದೆ, ದಾಸ್ಯದ ಜೀವನ ಈಗಿಲ್ಲ, ಆದರೆ ಸಮಾಜದ ಮುಖ್ಯವಾಹಿನಿಯಿಂದ ಇಂದಿಗೂ ಅವರು ಪ್ರತ್ಯೇಕವೇ ಆಗಿ ಉಳಿದಿದ್ದಾರೆ. ಇಲ್ಲಿನ ವ್ಯವಸ್ಥೆ ಹಂತಹಂತವಾಗಿ ಅವರ ಏಳಿಗೆಯನ್ನು ನಿಷ್ಕ್ರಿಯವಾಗಿಸಲು ಹವಣಿಸುತ್ತದೆ. ಅಂತರ್ಗತವಾಗಿ ಹರಿಯುವ ಪ್ರತ್ಯೇಕತೆಯ ಮನೋಭಾವ ಇನ್ನೂ ಹೋಗಿಲ್ಲ. ತಾವೇ ಶ್ರೇಷ್ಠರೆಂಬ ಬಿಳಿಯ ಸಮಾಜದ ಮೇಲರಿಮೆಯ ಗುಂಗಿಗೆ ಒಳಗೊಂಡ ಆಧುನಿಕ ವಲಸಿಗರೂ ಕೂಡ ಕರಿಯರ ಮೇಲಿನ ದೌರ್ಜನ್ಯವನ್ನು 'ನಂಗ್ಯಾಕೆ ಉಸಾಬರಿ' ಎಂಬಂತೆ ಕಣ್ಣು ತಪ್ಪಿಸಿಕೊಂಡು ಓಡಾಡುತ್ತಾರೆ. ಈಗ ಹಲವು ಸೌಕರ್ಯಗಳಿದ್ದರೂ ಕೂಡ ಬ್ರೇನ್‌ವಾಷ್‌ಗೊಂಡ ವ್ಯವಸ್ಥೆಯಲ್ಲಿ ಹೇಗೆ ಸರಿಯಾಗಿ ಕಾರ್ಯಗತಗೊಳ್ಳಬೇಕಿತ್ತೋ ಅದು ಆಗುತ್ತಿಲ್ಲ; ಯಾರಿಗೆ ತಲುಪಬೇಕಿತ್ತೋ, ತಲುಪುತ್ತಿಲ್ಲ.

ಆಫ್ರಿಕನ್ ಅಮೆರಿಕನ್ ಸಮಾಜ ಪೂರ್ವಗ್ರಹಕ್ಕೆ ತುತ್ತಾಗಿ ಅವರ ಸಮುದಾಯಗಳು ಪೊಲೀಸರ ಹಾವಳಿಗೆ ತತ್ತರಿಸುತ್ತಿವೆ. ಪುಟ್ಟ ಮಕ್ಕಳೂ ಕೂಡ ಭಯಬೀಳುವಂತಾಗಿದೆ. ಕರಿಯರ ಏಳಿಗೆಯನ್ನು ಸಹಿಸದ 'ಇವರು ಅರ್ಹರಲ್ಲ, ಸರಿಯಾದ ಪಾಠ ಕಲಿಸಬೇಕಿದೆ' ಎಂಬಂಥ ಊಳಿಗಮಾನ್ಯ ಮನೋಭಾವವೇ ಬಿಳಿಯ ಪೊಲೀಸರನ್ನು ಕರಿಯರ ಚಿಕ್ಕಪುಟ್ಟ ಅಪರಾಧಗಳನ್ನು ಉಗ್ರವಾಗಿ ಶಿಕ್ಷಿಸುವಂತೆ ಪ್ರೇರೇಪಿಸುತ್ತಿದೆ. ಅನ್ಯಾಯವಾಗಿ ಮೈಕಲ್ ಬ್ರೌನ್‌ನನ್ನ ಕೊಂದ ಬಿಳಿಯ ಪೊಲೀಸನಿಗೆ ಶಿಕ್ಷೆ ಕೂಡ ಆಗಿಲ್ಲ. ಸಿಗರೇಟುಗಳನ್ನು ಪ್ಯಾಕೆಟ್ ಬದಲಿಗೆ ಬಿಡಿಬಿಡಿಯಾಗಿ ಮಾರುತ್ತಿದ್ದ (ಅಮೆರಿಕಾದಲ್ಲಿ ಬಿಡಿ ಸಿಗರೇಟುಗಳನ್ನು ಮಾರುವುದು ಕಾನೂನುಬಾಹಿರ) ಎರಿಕ್ ಗಾರ್ನರ್‌ನನ್ನ ಕುತ್ತಿಗೆ ಮೆಟ್ಟಿ ಕೊಂದ ಘಟನೆ ಯಾವ ರೀತಿಯಲ್ಲಿ ನೋಡಿದರೂ ಹೀನಾಯ. ಪೊಲೀಸ್ ದೌರ್ಜನ್ಯವಷ್ಟೇ ಅಲ್ಲ, ಬಿಳಿಯ ಸಮಾಜದ ಅಂತರ್ಗತ ಜನಾಂಗೀಯ ದ್ವೇಷದ ಇರುವಿನ ದಾಖಲೆ! ಮೈಕಲ್ ಬ್ರೌನ್ ಘಟನೆಯಿಂದ ಆರಂಭವಾದ ಪ್ರತಿಭಟನೆ ಅಲ್ಲಲ್ಲಿ ತುಂಡು ಘಟನೆಗಳಾಗಿಯೇ ನಡೆದುಕೊಂಡು ಬಂದಿತ್ತು. ಗಲಭೆ, ದೊಂಬಿ, ಇತ್ಯಾದಿಗಳ ಹೆಸರಲ್ಲಿ ಕರಿಯರ ಪ್ರತಿಭಟನೆಗಳನ್ನು ಹತ್ತಿಕ್ಕುವ ಪ್ರಯತ್ನ ನಡೆದೇ ಇತ್ತು. ಕಳೆದ ವರ್ಷವಷ್ಟೇ ನಡೆದ ಜಾರ್ಜ್ ಫ್ಲಾಯ್ಡ್‌ನ ಹೃದಯವಿದ್ರಾವಕ ಸಾವು, ಅಮೆರಿಕಾದ ಕರಿಯರ 'ಬ್ಲಾಕ್ ಲೈವ್ಸ್ ಮ್ಯಾಟರ್' ಚಳುವಳಿಗೆ ಹೊಸ ಆಯಾಮ ನೀಡಿತು. ಇಡೀ ದೇಶ ಇಂಥದ್ದೊಂದು

ಕ್ರೌರ್ಯದ ವಿರುದ್ಧ ದನಿಯೆತ್ತಿ ಒಂದಾಯಿತು. ಅವನ ಬಳಿಯಿದ್ದ ಇಪ್ಪತ್ತು ಡಾಲರ್ ಖೋಟಾ ನೋಟಾಗಿರಬಹುದು ಎಂಬ ಸಂಶಯದ ಮೇಲೆ ಹಿಡಿದು, ಒಂಬತ್ತು ನಿಮಿಷಗಳ ಕಾಲ ಮೊಣಕಾಲಿಂದ ಕುತ್ತಿಗೆ ಮೆಟ್ಟಿ ಕುಳಿತು, ಉಸಿರುಗಟ್ಟುತ್ತಿದೆ ಎಂದು ಅಂಗಲಾಚಿದರೂ ಕೇಳದೆ ಕೊಂದ ಡೆರೆಕ್ ಚಾವಿನ್ ಎಂಬ ಬಿಳಿಯ ಪೊಲೀಸನ ತಣ್ಣನೆಯ ಕ್ರೌರ್ಯಕ್ಕೆ ಜಗತ್ತು ಮೂಕಸಾಕ್ಷಿಯಾಯಿತು. ಮನೆಯಲ್ಲಿ ಪ್ರಿಯಕರನೊಟ್ಟಿಗೆ ಏಕಾಂತದಲ್ಲಿದ್ದ ನಿರಾಯುಧಳಾಗಿದ್ದ ಬ್ರಿಯಾನ್ ಟೇಲರ್‌ಳನ್ನು ಗುಂಡಿನ ಸುರಿಮಳೆ ಸುರಿಸಿ ಕೊಂದ ರಾಕ್ಷಸೀ ನೆತ್ತರ ದಾಹವನ್ನು ಅಮೆರಿಕಾ ಅವಡುಗಚ್ಚಿ ನೋಡಿತು.

ಆತ್ಮಸಾಕ್ಷಿ ಸತ್ತ ಸಮಾಜ ಕೊನೆಗೂ ಆಕಳಿಸುತ್ತ ಎಚ್ಚೆತ್ತುಕೊಳ್ಳುತ್ತಿದೆ

ಪೊಲೀಸರ ದೌರ್ಜನ್ಯದ ತನಿಖೆಯಾಗುತ್ತಿದೆ. ಹೊಸ ಕಾನೂನುಗಳ ಅವಲೋಕನವಾಗುತ್ತಿದೆ. ಪೊಲೀಸರ ತರಬೇತಿಯ ನೀತಿಗಳಲ್ಲಿ ಬದಲಾವಣೆಯಾಗುತ್ತಿದೆ. ಕಪ್ಪುವರ್ಣೀಯರ ಸಮಾಜದ ಪುನರುದ್ಧಾರಕ್ಕೆ ಆಮೂಲಾಗ್ರ ಬದಲಾವಣೆಗಳ ಮೂಡಿಸಲು ಇಂದಿನ ಯುವಜನತೆ ಪಣತೊಟ್ಟು ಎದ್ದು ನಿಂತಿದೆ. ಆದರೆ, ಬೆನ್ನಲ್ಲೇ ಬಿಳಿಯರ ಶ್ರೇಷ್ಠತೆಯ ಹುಚ್ಚು ಬಯಕೆ ಕೂಡ ಹೆಡೆಯಾಡಿಸುತ್ತಲೇ ಹರಿಯುತ್ತಿದೆ. ಹೊಸ ಬರವಣಿಗೆ, ಕತೆ ಕಾವ್ಯಗಳ ಸೃಷ್ಟಿಯಾಗುತ್ತಿದೆ. ಅರಿವಿನ ಹರವು ವಿಸ್ತರಿಸುತ್ತಿದೆ. ಆದರೆ ಪ್ರಶ್ನೆಯೆಂದರೆ, ಮತ್ತೆ ಅವೇ ನೋವುಗಳನ್ನು ಹೊಸದೊಂದು ಪ್ರಕಾರದಲ್ಲಿ ಆಫ್ರಿಕನ್ ಅಮೆರಿಕನ್ ಸಮಾಜ ಬರೆಯಬೇಕೆ? ಈ ಎರಡು ಶತಮಾನಗಳಲ್ಲಿ ನಾವೇನೂ ಕಲಿತೇ ಇಲ್ಲವೇ? ಅಂದಿನ ಆಫ್ರಿಕನ್ ಅಮೆರಿಕನ್ನರ ಜಾನಪದ ಕತೆಗಳಲ್ಲಿ ಗುಲಾಮರ ನೋವಿನ ಕೂಗಿತ್ತು. ಮಾಲೀಕರ ಛಡಿ ಏಟಿಗೆ ಬಿರುಬೆನ್ನನ್ನು ಕೊಟ್ಟ ಸಂಗತಿಗಳ ಹಾಡುಗಳಿದ್ದವು. ನಾಳಿನ ಅವರ ಜಾನಪದದಲ್ಲಿ ಬಹುಶಃ ಪೊಲೀಸರ ದೌರ್ಜನ್ಯಕ್ಕೆ ಒಳಗಾಗಿ ಪ್ರಾಣತೆತ್ತವರ ಬಗೆಗಿನ ಪುರಾಣಗಳಿರಬಹುದು. ಹಿಂದೊಮ್ಮೆ ಮರಕ್ಕೆ ನೇತು 'ಲಿಂಚ್' ಆದ ಅಮಾಯಕರ ಕತೆಗಳಿದ್ದರೆ, ನಾಳಿನ ಪುಟಗಳಲ್ಲಿ ಗುಂಡಿಗೆಯಲ್ಲಿ ಗುಂಡುನಾಟಿ ಮರಗಟ್ಟಿ ಹೋದವರ ಮೊರೆತವಿರಬಹುದು. 'ಚೋಕ್ ಹೋಲ್ಡ್' ಪಟ್ಟಿನಲ್ಲಿ ಗಟ್ಟಿ ಒತ್ತುವ ದ್ವೇಷದ ಅಡಿಯಲ್ಲಿ ಉಸಿರಾಡಲಾಗದವರ ಗೋಗರೆತವಿರಬಹುದು. 'ಐ ಕ್ಯಾಂಟ್ ಬ್ರೀದ್' ಎನ್ನುತ್ತಲೇ ಪ್ರಾಣ ಬಿಟ್ಟ ಜಾರ್ಜ್ ಫ್ಲಾಯ್ಡ್, ಯಾಕೆ ಸಾಯುತ್ತಿದ್ದೇನೆ ಎಂದು ಅರಿವಿಲ್ಲದೆ ಪೊಲೀಸರ ಗುಂಡುಗಳಿಗೆ ಎದೆಕೊಟ್ಟ ಬ್ರಿಯಾನ ಟೇಲರ್ ಎಲ್ಲ ನಾಳಿನ ಅಮೆರಿಕಾದ ಕರಿಯರ ಜಾನಪದ ಕತೆಗಳ ಪಾತ್ರಗಳಾಗುವುದರಲ್ಲಿ ಆಶ್ಚರ್ಯವಿಲ್ಲ. ಇಂದಿನ 'ಬ್ಲಾಕ್ ಲೈವ್ಸ್ ಮ್ಯಾಟರ್' ಚಳುವಳಿ ಸಿವಿಲ್ ವಾರ್ ಮುಗಿದ ನೂರಾ ಐವತ್ತು ವರ್ಷಗಳ ತರುವಾಯ ಮತ್ತೆ ಅದೇ ಅನ್ಯಾಯದ ವಿರುದ್ಧದ ಹಳೆ ಹೋರಾಟಗಳನ್ನೇ ಕೈಗೆತ್ತಿಕೊಳ್ಳತೊಡಗಿದೆ. ಆಕ್ರೋಶದ ದಾರಿ ಹಿಡಿದಿದೆ. ಹೊಸ ಹಾಡುಗಳು ಹುಟ್ಟಿಕೊಳ್ಳುತ್ತಿವೆ. ರೂಪಕಗಳೇ ತುಂಬಿದ ಕತೆಗಳ ಉಗಮವಾಗುತ್ತಿದೆ. ಹೊಸದೊಂದು ಜಾನಪದ ಲೋಕ ಮತ್ತೆ ಹಳೆಯ ನೋವುಗಳನ್ನು ಕೆದಕುತ್ತಿದೆ. ಈಗ ಮತ್ತೊಮ್ಮೆ ಬ್ರೆರ್ ರಾಬಿಟ್ ಮೊಲ ಬಿಳಿಯ ಪೊಲೀಸ್ ನರಿಯನ್ನು ತಪ್ಪಿಸಿಕೊಳ್ಳುತ್ತ ಚಾಣಾಕ್ಷ ರೀತಿಯಲ್ಲಿ ಹೊಲದ ಬದಲು ರಸ್ತೆ ದಾಟಬೇಕಾಗುತ್ತದೆ.

ಮುಕ್ತಾಯ

ನನಗೆ ಕಂಬಾರರು ಹೇಳಿದ ಒಂದು ಮಾತು ನೆನಪಾಗುತ್ತಿದೆ. "ಒಂದು ದೇಶದ ಜಾನಪದದ ಅಧ್ಯಯನ ಅಲ್ಲಿನ ಎಲ್ಲ ಶಾಲೆಗಳಲ್ಲಿ ಪಠ್ಯವಾಗಬೇಕು" ಎಂದು. ಇದು ನಿಜಕ್ಕೂ ಇಂದಿನ ಅಗತ್ಯ. ಯಾಕೆಂದರೆ ಇಂದಿನ ಸಮಾಜಕ್ಕೆ ತಾನು ಎಲ್ಲಿಂದ ಬಂದಿದ್ದೇನೆ ಎಂಬುದರ ಅರಿವಿರಬೇಕು. ಆಗ ಅದು ತನ್ನ ಸಂಸ್ಕೃತಿಯ ಒಳ್ಳೆಯದನ್ನು ಉಳಿಸಿಕೊಂಡು, ಕೆಟ್ಟದ್ದನ್ನು ಕಳಚಿಕೊಂಡು ಹಳೆಯದನ್ನು ಉಳಿಸಿಕೊಂಡೇ ಹೊಸತಾಗಲು ಸಾಧ್ಯ. ಇತಿಹಾಸ ಎಂಬುದು ಹೊಸದಾಗಿ ಓದಿ ಬರೆದವರ ಪುಸ್ತಕಗಳಲ್ಲಿಲ್ಲ. ಅದು ಜಾನಪದ ಲೋಕದ ಸಂಗೀತದ ಗುನುಗಿನಲ್ಲಿದೆ. ಕತೆಗಳ ಸಾಲುಗಳ ನಡುವೆ ಹೇಳದೆ ಬಿಟ್ಟ ನಿಶ್ಶಬ್ದದಲ್ಲಿದೆ. ಆಕ್ರಂದನವನ್ನು ಕೇಳಿಸಿಕೊಳ್ಳದ ಮನಸ್ಸಿಗೆ, ಆಂದೋಲನವನ್ನು ಅರಿಯದ ಬುದ್ಧಿಗೆ ತನ್ನ ಆನಂದದಲ್ಲಿ ಇತರರ ಪಾಲು ಎಷ್ಟಿದೆ ಎಂಬುದು ಎಂದಿಗೂ ಅರಿವಾಗಲಾರದು. ದೇಶಗಳ ಗಡಿ ಮೀರಿದ ಇಂದಿನ ಜಾಗತೀಕರಣದ ಯುಗದಲ್ಲಿ, ಇಂದಿನ ಜನಜೀವನ ನಾಳಿನ ಜನಪದವಾಗುವಾಗ ಅಲ್ಲಿ ನೋವಿನ ಎಳೆ ಕಮ್ಮಿ ಇರಲಿ. ಇನ್ನೊಬ್ಬನ ನಿಟ್ಟುಸಿರು ಸುಡುಬೆಂಕಿಯಾಗುವ ಮುನ್ನ ನಮ್ಮೆದೆಯಲ್ಲಿ ಪ್ರೀತಿಯ ತೆರೆಯೊಂದು ಏಳಲಿ. ದೇಶ ದೇಶಗಳ ಹಳೆಯ ಕತೆಗಳ ಓದು ನಮಗೆ ಹೊಸ ಕತೆಗಳ ದಿಕ್ಕು ಬದಲಿಸುವತ್ತ ಪ್ರೇರೇಪಿಸಲಿ. ಉಸಿರುಗಟ್ಟಿಸುವ ಹುನ್ನಾರದಲ್ಲೇ ಇರುವ ಈ ಲೋಕದಲ್ಲಿ ಯಾರ ಗಂಟಲೂ ಬಿಗಿಯದಿರಲಿ. ಆ ಕಂಠದಿಂದ ಹೊಮ್ಮುವ ಹಾಡುಗಳಲ್ಲಿ ಹೊಸ ಇಂಚರದ ಹಾರೈಕೆಯಿರಲಿ.

ಆಧಾರ

1. https://www.amazon.com/dp/0803724519?tag=sho-links-20&ascsubtag=[artid|2134.a.23725992[src|[ch|[lt|
2. https://www.nypl.org/blog/2017/02/01/10-african-and-african-american-folktales-celebrate-black-history-month
3. https://en.wikipedia.org/wiki/African-American-Folktales.

❑

(13)

ಅಮೇರಿಕನ್ ಇಂಡಿಯನ್ ಕಥೆ – ವಿಚಾರಣೆ

ವಿಶ್ವನಾಥ್ ಹುಲಿಕಲ್
ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ

*

ಅದೊಂದು ಪ್ರಸ್ಥಭೂಮಿಯ ಶರತ್ಕಾಲದ ರಾತ್ರಿ. ಶಂಖಾಕಾರದ ಗುಡಿಸಲಿನ ತಡಿಕೆಗಳು ತಂಗಾಳಿಗೆ ಹೊಯ್ದಾಡುತ್ತಿದ್ದವು. ಆಕಾಶದ ಒಂದು ದೊಡ್ಡ ನಕ್ಷತ್ರ ಆ ಗುಡಿಸಲಿನ ತಡಿಕೆಗಳ ನಡುವೆ ಇಣುಕಿದಾಗ, ಡಕೋಟ ಗುಂಪಿನ ಇಬ್ಬರು ಆದಿವಾಸಿಗಳು ಮಾತನಾಡುತ್ತ ಕುಳಿತಿರುವುದು ಕಂಡುಬಂದಿತು. ಆ ನಕ್ಷತ್ರದ ಕಿರಣಗಳು, ನಯವಾದ ಹುಲ್ಲಿನ ಹಾಸುಗೆಯ ಮೇಲೆ ಕುಳಿತು ಮಾದಕ ಪಾನೀಯವನ್ನು ಸೇವಿಸುತ್ತಿರುವ, ಇಪ್ಪತ್ತರ ಹರೆಯದ ಯುವತಿಯನ್ನು ಅಪ್ಪಿಕೊಂಡವು. ಆ ಗುಡಿಸಲಿನ ಇನ್ನೊಂದು ಕಡೆ, ತನ್ನ ಕಂಬಳಿಯನ್ನು ಹೊದ್ದುಕೊಂಡು ಕುಳಿತಿರುವ ಅಜ್ಜಿ ಇದ್ದಳು. ಅಲ್ಲಿಯವರೆಗೆ ಮಲಗಿಕೊಂಡಿದ್ದ ಅಜ್ಜಿ, ಕಥೆ ಹೇಳುವ ಹುಮ್ಮಸ್ಸಿನಲ್ಲಿ ಎದ್ದು ಕುಳಿತಳು.

“ಮೊಮ್ಮಗಳೇ, ದಂತಕಥೆಯ ಪ್ರಕಾರ ದೊಡ್ಡ ನಕ್ಷತ್ರಗಳು ಅತಿರಥ ಮಹಾರಥಿ-ಗಳಿಂದಾಗಿವೆ. ಸಣ್ಣ ನಕ್ಷತ್ರಗಳು ಸುಂದರ ತರುಣ ವೀರರಿಂದಾಗಿವೆ” ಎಂದು ಅಜ್ಜಿ ನಡುಗುವ ಧ್ವನಿಯಿಂದ ಹೇಳಿದಳು. “ಈಗ ತಡಿಕೆಯೊಳಗಿನಿಂದ ಇಣುಕುತ್ತಾ ಬಂದ ಈ ಕಿರಣಗಳು ನನ್ನ ತಾತನದು” ಎಂದು ತರುಣಿ ಅಂದಳು. ಅವಳ ಕೋಮಲ ಧ್ವನಿ ಆ ಗುಡಿಸಲಿನ ಕತ್ತಲೆಯ ಮೂಲಕ ಹಾಯ್ದು, ಮಧ್ಯದಲ್ಲಿರುವ ಒಲೆಯ ಬೂದಿಯನ್ನು ಸವರಿಕೊಂಡು, ಹಲ್ಲಿಲ್ಲದ, ಅನ್ಯಮನಸ್ಕಳಾಗಿ ಮೂಕಳಾಗಿ ಕುಳಿತ ಅಜ್ಜಿಯ ಕಿವಿಯನ್ನು ತಲುಪಿತು. ಅದು ಧುತ್ತೆಂದು ಅವಳ ಅಜ್ಜಿಯ ತಾರುಣ್ಯದ ಕಾಲಘಟ್ಟಕ್ಕೆ ಬಂದು ತಲುಪಿಸಿತು. ಅಜ್ಜಿ ಉತ್ತರಿಸಿದಳು:

ನಾನು ಈಗ ಮತ್ತೆ ತರುಣಿಯಾಗಿದ್ದೀನಿ! ಈ ದಿನ, ನಿನ್ನ ತಾತ ಸಾವನ್ನಪ್ಪಿದ ದಿನ. ಇದೊಂದು ದೊಡ್ಡ ಕಥೆ; ನಿಜ ಹೇಳಲೇ? ನಿನಗೆ ಇಬ್ಬರು ತಾತಂದಿರು ಇದ್ದರು.

ಅವರಿಬ್ಬರೂ ಅವಳಿ-ಜವಳಿ ತರಹ ಇದ್ದರು; ಆದರೆ ಅಣ್ಣ-ತಮ್ಮ ಆಗಿರಲಿಲ್ಲ. ಅವರಿಬ್ಬರೂ ಜೀವದ ಗೆಳೆಯರಾಗಿದ್ದರು. ಒಬ್ಬರನ್ನೊಬ್ಬರು ಬಿಟ್ಟು ಇರುತ್ತಿರಲಿಲ್ಲ! ಅದುವರೆವಿಗೆ ಅವರು ಪ್ರತಿಯೊಂದನ್ನೂ (ಒಳ್ಳೆಯದು ಹಾಗೂ ಕೆಟ್ಟದ್ದನ್ನು) ಹಂಚಿಕೊಂಡು ಅನುಭವಿಸುತ್ತಿದ್ದರು. ಆದರೆ ಚೆಲುವೆಯಾದ ನನ್ನನ್ನು ಹಂಚಿಕೊಳ್ಳಬೇಕಾಗಿ ಬಂದ ಆ ಸಂದರ್ಭ, ಅವರನ್ನು ಕೋಪಾವೇಶಕ್ಕೆ ತಳ್ಳಿತು. ಅಂತಹ ಪ್ರಕ್ಷುಬ್ಧ ಸ್ಥಿತಿಯಲ್ಲಿ ಚಿಕ್ಕವ, ತನ್ನ ಆಪ್ತ ಸ್ನೇಹಿತನನ್ನು ಕೊಂದುಹಾಕಿಬಿಟ್ಟ!

ಆಗ ಆ ಮುದುಕಿಯ ಸ್ವರ ಗದ್ಗದವಾಯಿತು. ಬಾಗಿದ ಭುಜವನ್ನು ಅಲ್ಲಿಂದಿಲ್ಲಿಗೆ ಓಲಾಡಿಸುತ್ತಾ, ಅಸಹಾಯಕ ಉದ್ಗಾರಗಳನ್ನು ಹೊರಹಾಕಿದಳು. ಗತಕಾಲದ ದುರ್ದೈವದ ದಿನಗಳು ನೆನಪಿಗೆ ಬಂದು, ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿದಳು. ಕಾರ್ಮೋಡ ಅಲ್ಲೆಲ್ಲಾ ವ್ಯಾಪಿಸಿತು. ಅವಳ ಕಿವಿಯಲ್ಲಿ ಪಶ್ಚಿಮ ದಿಕ್ಕಿನ ಚಂಡಮಾರುತ ಆರ್ಭಟಿಸಿತು. ಅದರಿಂದ ತಪ್ಪಿಸಿಕೊಳ್ಳಲು ಅವಳು ತಲೆ ಬಾಗಿಸಿದರೆ, ಗುಡುಗಿನ ಹಕ್ಕಿಗಳು ಅವಳ ಮೇಲೆ ಎರಗಿದವು. "ಅಯ್ಯೋ, ಅಯ್ಯೋ" ಎಂದು ಆ ಹಲ್ಲಿಲ್ಲದ ಮುದುಕಿ ಆರ್ತನಾದ ಮಾಡಿದಳು. ಮರುದಿನದ ಬೆಳಿಗ್ಗೆಯ ಸೂರ್ಯನ ಹೊಂಬಣ್ಣದ ಕಿರಣಗಳು ಜನರನ್ನು ಮುದಗೊಳಿಸಿದರೂ, ಆ ಕಾಲದ ಚಂಡಮಾರುತದ ಆರ್ಭಟದಲ್ಲಿ ಮುದುಕಿಯ ನೆನಪು ಸಿಲುಕಿಕೊಂಡಿತು.

ಮುದುಕಿ ತನ್ನ ಕಥೆಯನ್ನು ಮುಂದುವರೆಸಿದಳು

"ಕೊಲೆಯಾದ ವ್ಯಕ್ತಿಯ ಗೋರಿಯ ಬಳಿಯಿಂದ, ಒಬ್ಬ ಓಲೇಕಾರ ನಮ್ಮ ಗುಡಿಸಿಲಿಗೆ ಆತುರಾತುರವಾಗಿ ಬಂದ. ಅವನು ಹೇಳಿದ ಭಯಾನಕ ಕಥೆಯನ್ನು ಕೇಳಿ, ನನ್ನ ಹೃದಯ ಎಷ್ಟೊಂದು ವೇಗವಾಗಿ ಬಡಿದುಕೊಳ್ಳುತ್ತಿತ್ತು!" ಆ ಓಲೇಕಾರ ನನ್ನ ತಂದೆಯ ಬಳಿ ಕುಳಿತುಕೊಂಡು ಚುಟ್ಟವನ್ನು ಸೇದತೊಡಗಿದ. ಏದುಸಿರು ಬಿಡುತ್ತಲೇ ಹೇಳತೊಡಗಿದ: "ಕೊಲೆಯಾದವನು ತನ್ನ ತಂದೆಯ ಒಬ್ಬನೇ ಮಗ." ನಾನು ಈ ಕೊಲೆಯಲ್ಲಿ ಕೊಲೆಗಾರನ ಜೊತೆ ಶಾಮೀಲು ಆಗಿರುವೆನೋ ಎಂಬಂತೆ, ಶಂಕಿತನಾದ ಕಣ್ಣುಗಳಿಂದ ಅವನು ನನ್ನೆಡೆಗೆ ದೃಷ್ಟಿ ಬೀರಿದ. ನನ್ನ ತಂದೆ ಆ ಚುಟ್ಟಾದ ಸುವಾಸನೆಯ ಹೊಗೆಯನ್ನು ಆಘ್ರಾಣಿಸುತ್ತಾ ಕುಳಿತಿದ್ದ. ದುಂಡುಕಣ್ಣಿನ ಓಲೇಕಾರ ನನ್ನ ತಂದೆಯನ್ನು ಕೇಳಿದ, "ಗೆಳೆಯಾ, ನೀನೂ ಸೇದುವೆಯೇನು?" ಒಪ್ಪಿಗೆ ನೀಡಿದ ನನ್ನ ತಂದೆಗೆ, ತನ್ನ ಚುಟ್ಟವನ್ನು ಕೊಟ್ಟ.

ಅನೇಕ ದಮ್ಮುಗಳನ್ನು ಎಳೆದುಕೊಂಡು ಬಿಟ್ಟ ಹೊಗೆಯಿಂದ ನನ್ನ ಮತ್ತು ನನ್ನ ತಂದೆಯ ಮಧ್ಯೆ ಮೋಡ ನಿರ್ಮಾಣವಾಯಿತು. ಆ ನೀಲಿ ಹೊಗೆಯ ಮಧ್ಯೆಯೂ ನಾನು ಓಲೇಕಾರನ ಹೊಳೆಯುತ್ತಿರುವ ಕಪ್ಪನೆಯ ಕಣ್ಣುಗಳನ್ನು ನೋಡಿದೆ. ಕೊಲೆಗೈದ ನನ್ನ ಪ್ರಿಯತಮನಿಗೆ ಮುಂದೇನು ಗತಿ ಎಂದು ಕೇಳಲು ಮಾತು ನನ್ನ ನಾಲಿಗೆಯ ತುದಿಯವರೆಗೆ ಬಂದಿತ್ತು. ಆದರೆ ನಾನು ಬಾಯಿ ತೆಗೆದರೆ, ಅಳಲು ಆರಂಭಿಸುವೆನೇನೋ ಎಂದು ಹೆದರಿಕೊಂಡು ಸುಮ್ಮನಿದ್ದೆ. ಆಗ ನಮ್ಮ ತಂದೆ ಅದೇ ಪ್ರಶ್ನೆಯನ್ನು ಕೇಳಿದರು.

ಅದಕ್ಕೆ ಓಲೇಕಾರ ಹೇಳಿದ: "ನಮ್ಮ ಬುಡಕಟ್ಟು ಜನಾಂಗದ ನಾಯಕ ಮತ್ತು ಪಂಚಾಯತಿಯ ಸದಸ್ಯರು ಈಗಾಗಲೇ ಮಾತನಾಡಿಕೊಂಡಿದ್ದಾರೆ. ಕೊಲೆಗಡುಕನನ್ನು ಹಾಗೇ ಬಿಟ್ಟರೆ, ನಮ್ಮ ಕ್ಷೇಮಕ್ಕೆ ಧಕ್ಕೆಯಾಗುವುದು ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ನಮ್ಮ ಜನಾಂಗದ ಯಾರೊಬ್ಬರನ್ನೂ ಕೊಂದವ ನಮ್ಮ ವೈರಿಯೇ ಸರಿ, ಅವನಿಗೆ ತಕ್ಕ ಶಿಕ್ಷೆ ಆಗಲೇಬೇಕು."

"ನನ್ನ ತಲೆ ಪಟಪಟ ಎಂದು ಹೊಡೆದುಕೊಂಡಿತು!" ಆಗ ಒಬ್ಬ ನಮ್ಮ ಗುಡಿಸಲಿನ ಮುಂದೆ ಹಾದು ಹೋದ. ಆ ಅಶ್ವಾರೋಹಿ ದೂತ ಗಟ್ಟಿಯಾಗಿ ಪ್ರಕಟಣೆಯನ್ನು ಸಾರಿದ: "ಕೇಳ್ರಪ್ಪೋ ಕೇಳಿ! ಒಂದು ಭಯಾನಕ ಘಟನೆ ನಡೆದುಹೋಗಿದೆ. ಅಣ್ಣ ತಮ್ಮಂದಿರಂತಿದ್ದ ಇಬ್ಬರು ಗೆಳೆಯರು ಒಂದು ಹೆಣ್ಣಿನ ಸಲುವಾಗಿ ಜಗಳವಾಡಿದ್ದಾರೆ. ಅದರ ಪರಿಣಾಮವಾಗಿ ಒಬ್ಬ ಬೆಟ್ಟದ ಮೇಲೆ ಕೊಲೆಯಾಗಿ ಗೋರಿಯನ್ನು ಸೇರಿದ್ದಾನೆ. ಆದರೆ ಅವನ ಕೊಲೆಪಾತಕ ತನ್ನ ಗುಡಿಸಿಲಿನಲ್ಲಿ ನಿರ್ಭೀತಿಯಿಂದ ಕುಳಿತಿದ್ದಾನೆ. ನಮ್ಮ ಬುಡಕಟ್ಟು ಜನಾಂಗದ ನಾಯಕರು ಹೀಗೆ ನಿರ್ಧರಿಸಿದ್ದಾರೆ." "ನಮ್ಮ ಜನಾಂಗದ ಯಾರೊಬ್ಬರನ್ನು ಕೊಂದವನು, ನಮ್ಮೆಲ್ಲರ ವೈರಿಯಾಗುತ್ತಾನೆ. ಆದ್ದರಿಂದ ಅವನ ವಿಚಾರಣೆ ಆಗಲೇಬೇಕು. ಕೊಲೆಯಾದ ವ್ಯಕ್ತಿಯ ತಂದೆಯೇ ಕೊಲೆಗಡುಕನಿಗೆ ಯಾವ ಶಿಕ್ಷೆ ಆಗಬೇಕೆಂದು ನಿರ್ಧರಿಸಲಿ. ಅವನು ನಿಜವಾಗಿ ನೊಂದಿದ್ದಾನೆ, ಹಾಗೂ ಅವನಿಗೆ ಮಾತ್ರ ಕೊಲೆಗಡುಕನ ಮೇಲೆ ರೊಚ್ಚು ತೀರಿಸಿಕೊಳ್ಳಲು ಮತ್ತು ತಕ್ಕುದಾದ ಶಿಕ್ಷೆ ಕೊಡುವ ಅಧಿಕಾರವಿದೆ."

"ಬನ್ನಿ, ಒಂದು ಕಾಲದಲ್ಲಿ ತನ್ನ ಮಗನ ಆಪ್ತ ಸ್ನೇಹಿತನಾಗಿದ್ದ ಅವನ ಮೇಲೆ ಎಂತಹ ನಿರ್ಣಯವನ್ನು ಆ ತಂದೆ ನೀಡುತ್ತಾನೆಂಬುದನ್ನು ನೋಡಲು ನೀವೆಲ್ಲರೂ ಬನ್ನಿ. ನಿರಂಕುಶವಾಗಿದ್ದ ಕುದುರೆಗೆ ಈಗ ತಾನೇ ಜೀರಕುಣಿಕೆಯನ್ನು ಹಾಕಲಾಗಿದೆ. ಈ ಕೊಲೆಗಾರ ಅದನ್ನು ಏರಿ, ಹುಚ್ಚು ಕೂಗಾಟ ಮಾಡುತ್ತಿರುವ ಆ ಕುದುರೆಯನ್ನು ಮಣಿಸಿ, ಅದನ್ನು ಸವಾರಿ ಮಾಡುತ್ತಾ ಬರಬೇಕು. ಈ ಗ್ರಾಮದ ಪ್ರಜೆಗಳಾದ ನೀವೆಲ್ಲರೂ ಶೋಕಗ್ರಸ್ತ ಕುಟುಂಬದ ಹಟ್ಟಿಯ ಅಭಿಮುಖವಾಗಿ ಎರಡು ಸಾಲಿನಲ್ಲಿ ನಿಲ್ಲಿರಿ. ಈ ಎರಡು ಸಾಲಿನ ಮಧ್ಯೆ ಅವನು ಅಶ್ವಾರೂಢನಾಗಿ ಬರಲಿ. ಹೊರಗಡೆ ವೃತ್ತದಿಂದ ಕುದುರೆಯನ್ನು ಏರಿ ಅವನು, ಕುದುರೆಯನ್ನು ಸವಾರಿ ಮಾಡುತ್ತಾ ಮಧ್ಯದ ಗುಡಿಸಲಿಗೆ ಬರಬೇಕು. ಇಷ್ಟು ದೂರದ ಮಾರ್ಗಮಧ್ಯದಲ್ಲಿ ಅವನು ಕುಳಿತುಕೊಂಡೇ ಸವಾರಿ ಮಾಡಿಕೊಂಡು, ಮಧ್ಯದ ಗುಡಿಸಲಿಗೆ ತಲುಪಿದರೆ, ಅವನಿಗೆ ಜೀವದಾನ ನೀಡಲಾಗುತ್ತದೆ. ಅವನೇನಾದರೂ ಆ ಹುಚ್ಚು ಕುದುರೆಯಿಂದ ಕೆಳಗೆ ಬಿದ್ದರೆ, ಅವನಿಗೆ ಮರಣದಂಡನೆ ಶತಃಸಿದ್ಧ!"

ಹೀಗೆಂದು ಹೇಳಿ, ಆ ದೂತನ ಮಾತು ಮುಕ್ತಾಯವಾಯಿತು. ಈ ಘೋಷಣೆ ಇಡೀ ಗ್ರಾಮೀಣ ಜನತೆಯನ್ನು ಸ್ತಬ್ಧಗೊಳಿಸಿತು. ಎಲ್ಲರೂ ಓಡಿ ಬಂದು ಆ ಮಧ್ಯದ ಗುಡಿಸಲಿನ ಮುಂದೆ ಎರಡು ಸಾಲಿನಲ್ಲಿ ನೆರೆದರು. ಹೆಣ್ಣುಮಕ್ಕಳು ಅಳುತ್ತಾ ವಿಚಾರಣಾ ದಾರಿಗೆ ಆಗಮಿಸಿದರು. ಆ ವೃತ್ತಾಕಾರದ ಪಾಳೆಯದ ದನಿಗುಂದಿದ ಆರ್ತನಾದ ಸಹಿಸಲು ಅಸಾಧ್ಯವಾಗಿತ್ತು. ಕಂಬಳಿಯಿಂದ ಮುಖವನ್ನು ಮುಚ್ಚಿಕೊಂಡೇ ನಾನು ಆ ಜನಜಂಗುಳಿಯ

ಜೊತೆಗೇ ಓಡಿಹೋಗಿ, ನಮ್ಮ ಹಳ್ಳಿಯ ಹೊರಗಣ ವೃತ್ತದಲ್ಲಿರುವ ಮೈದಾನದಲ್ಲಿ ನಿಂತುಕೊಂಡೆ. ಅಷ್ಟು ಹೊತ್ತಿಗೆ ಗಂಭೀರವದನರಾದ ಜನರು, ಆ ಸಾರ್ವಜನಿಕ ವಿಚಾರಣೆಯ ದಾರಿಯ ಉದ್ದಕ್ಕೂ ಎರಡು ಸಾಲುಗಳಲ್ಲಿ ನಿಂತುಕೊಂಡಿದ್ದರು. ಆಗ ಇಬ್ಬರು ಬಲಶಾಲೀ ಪುರುಷರು ಉನ್ಮತ್ತ ಅಶ್ವವನ್ನು ಕರೆದುಕೊಂಡು ಬಂದರು; ಆ ಕುದುರೆ ತನ್ನ ಬಾಯಿಯಿಂದ ಬಿಳಿಯ ನೊರೆಯನ್ನು ಸೋರಿಸುತ್ತಾ, ಜೋರಾಗಿ ಕೆನೆಯುತ್ತಾ, ನಿರಂಕುಶವಾಗಿ ವರ್ತಿಸುತ್ತಾ, ಹಿಂಗಾಲ ಮೇಲೆ ನಿಂತುಕೊಂಡಿತು. ಖಿನ್ನಮನಸ್ಕನಾಗಿ, ಏಕಾಂಗಿಯಾಗಿ ಆ ಕುದುರೆಯನ್ನು ನೋಡುತ್ತಾ ನಿಂತ ನನ್ನ ಪ್ರಿಯತಮನನ್ನು ನೋಡಿ, ನನಗೆ ಕರುಳು ಕಿತ್ತು ಬಂತು. "ಕುದುರೆಯಿಂದ ಬೀಳಬೇಡ! ನಿನ್ನ ಜೀವವನ್ನು ಉಳಿಸಿಕೊಂಡು, ನನ್ನ ಪ್ರಾಣವನ್ನೂ ಉಳಿಸು!" – ನನ್ನ ಎದೆಯಲ್ಲಿನ ಆರ್ತನಾದ, ಪದಗಳಾಗಿ ನನ್ನ ಬಾಯಿಯಿಂದ ಹೊರಬೀಳಲೇ ಇಲ್ಲ.

ಕ್ಷಣಮಾತ್ರದಲ್ಲಿ ಅವನು ಮಿಂಚಿನ ವೇಗದಲ್ಲಿ ಆ ಭಯಗ್ರಸ್ತ ಕುದುರೆಯನ್ನು ಏರಿದ; ಅದನ್ನು ಎರಡು ಕಡೆಗಳಲ್ಲೂ ಹಿಡಿದುಕೊಂಡಿದ್ದ ಬಲಾಢ್ಯರು, ತಮ್ಮ ಹಿಡಿತವನ್ನು ಸಡಿಲಗೊಳಿಸಿದರು. ತತ್ ಕ್ಷಣವೇ ಆ ಉನ್ಮತ್ತ ಕುದುರೆ ತನ್ನ ಎರಡು ಮೂಗಿನ ಹೊಳ್ಳೆಗಳನ್ನು ಅರಳಿಸಿ, ಬಿಲ್ಲಿನಿಂದ ಬಿಟ್ಟ ಬಾಣದಂತೆ ತನ್ನ ಗುರಿಯತ್ತ ನೆಗೆಯಿತು. ತನ್ನೆಲ್ಲ ಶಕ್ತಿಯನ್ನು ಕ್ರೋಡೀಕರಿಸಿ ಅವನು, ಆ ಕುದುರೆಯನ್ನು ನಿಯಂತ್ರಿಸಿ, ಹಳ್ಳಿಯ ಮಧ್ಯದ ಗುಡಿಸಿಲಿನೆಡೆಗೆ ಓಡಿಸುತ್ತಿದ್ದ. ಕುದುರೆ ಧುತ್ತೆಂದು ನಿಂತುಬಿಟ್ಟಿತು. ಆಗ ಕುದುರೆ ಸವಾರ ಮುಂದೆ ಮುಗ್ಗರಿಸಿದ, ಆದರೆ ಶತಪ್ರಯತ್ನ ಮಾಡಿ, ಕುದುರೆಯಿಂದ ಬೀಳುವುದನ್ನು ತಪ್ಪಿಸಿಕೊಂಡ. ಆಗ ಆ ಹುಚ್ಚು ಕುದುರೆ ಜೋರಾಗಿ ಕೆನೆಯುತ್ತಾ ತನ್ನ ಮುಂದಿನ ಕಾಲುಗಳನ್ನು ಮೇಲೆತ್ತಿ ಗಗನಕ್ಕೆ ಜಿಗಿಯಿತು. ಅದರ ರಭಸಕ್ಕೆ, ಸಾಲಿನಲ್ಲಿ ನಿಂತಿದ್ದ ಜನರು ಹಿಂದಕ್ಕೆ ಸರಿದರು. ಕುದುರೆ ಬುಸುಗುಟ್ಟುತ್ತಾ ನಿರ್ಭೀತವಾಗಿ ಮುಂದೆ ಓಡಿತು.

"ಕುದುರೆ ಭಯಂಕರವಾಗಿದೆ. ತನ್ನ ಭೀಕರವಾದ ಕಣ್ಣುಗಳಿಂದ, ಬಾಗಿದ ಬೆನ್ನಿನಿಂದ, ಅದು ಆಕಾಶಕ್ಕೆ ಜಿಗಿಯುತ್ತಿದೆ. ನನಗೆ ಅವನು ಬೀಳುವುದನ್ನು ನೋಡಲಾಗಲಿಲ್ಲ, ಕೂಡಲೇ ನನ್ನ ಕಣ್ಣುಗಳನ್ನು ಮುಚ್ಚಿಕೊಂಡೆ." ಆಗ ಆ ಗುಂಪಿನ ಪುರುಷರ ಮತ್ತು ಮಹಿಳೆಯರ ಕೊರಳುಗಳಿಂದ ಒಂದು ಗಟ್ಟಿಯಾದ ಕೂಗು ಹೊರಹೊಮ್ಮುತ್ತದೆ. ನಾನು ಕಣ್ತೆರೆದು ನೋಡುತ್ತೇನೆ: ಆ ಕುದುರೆಯನ್ನು ಮಣಿಸಿಯಾಗಿದೆ! ಮಧ್ಯದ ಗುಡಿಸಿಲಿನ ಮುಂದೆ ನನ್ನ ಪ್ರಿಯತಮ ಅಟ್ಟಹಾಸದಿಂದ ಇಳಿಯುತ್ತಾನೆ. ಬೆವರನ್ನು ಸುರಿಸುತ್ತಾ, ಸುಸ್ತಾಗಿ ನಡುಗುವ ಕಾಲುಗಳಿಂದ, ಬಾಲ ಅಲ್ಲಾಡಿಸುವ ನಾಯಿಯಂತೆ ಆ ಕುದುರೆ ಯಜಮಾನನ ಪಕ್ಕದಲ್ಲಿ ನಿಂತಿದೆ. ಆ ಗುಡಿಸಲಿನ ಮುಂಭಾಗದ ತಡಿಕೆಯ ಸಮೀಪದಲ್ಲಿ, ದುಃಖತಪ್ತ (ಕೊಲೆಯಾದ ವ್ಯಕ್ತಿಯ) ತಂದೆ, ತಾಯಿ ಮತ್ತು ತಂಗಿಯರು ಕುಳಿತಿದ್ದಾರೆ. ಆಗ ಹತ್ಯೆಯಾದವನ ಅಪ್ಪ ಎದ್ದು ನಿಲ್ಲುತ್ತಾನೆ. ಎರಡು ಅಡಿ ಮುಂದೆ ಬಂದು, ತನ್ನ ಒಬ್ಬನೇ ಮಗನನ್ನು ಕೊಂದವನ ಕೈಕುಲುಕುತ್ತಾನೆ. ಅವನ ಕೈಗಳನ್ನು ತನ್ನ ಕೈಯಲ್ಲಿ ಹಿಡಿದುಕೊಂಡೇ ಕರುಣಾಪೂರಿತ ಧ್ವನಿಯಿಂದ, "ನನ್ನ ಮಗನೇ" ಎಂದು ಹೇಳಿ ಕಣ್ಣೀರು

ಸುರಿಸುತ್ತಾನೆ. ನೆರೆದ ಜನಜಂಗುಳಿಯಿಂದ ಆಶ್ಚರ್ಯಕರ ಗುಜುಗುಜು ಮಾತು, ಧುತ್ತೆಂದು ಹೊರಹೊಮ್ಮುತ್ತದೆ.

ಭುಜಕ್ಕೆ ಸಮನಾಗಿ ಕತ್ತರಿಸಿದ ಕೇಶರಾಶಿಯ, ಊದಿದ ಕಣ್ಣುಗಳುಳ್ಳ, ಬಲಿಯಾದವನ ಅಮ್ಮ ಎದ್ದು ನಿಲ್ಲುತ್ತಾಳೆ. ಬಾಗಿಲಿನ ಬಳಿ ನಿಂತಿರುವ ತರುಣನ ಬಳಿ ಧಾವಿಸಿ ಬಂದು, ಅವನ ಬಲಗೈಯನ್ನು ಹಿಡಿದುಕೊಳ್ಳುತ್ತಾಳೆ. "ಓ ನನ್ನ ಮಗನೇ!" ಎಂದು ಸಂಬೋಧಿಸುತ್ತಾ ಅವನನ್ನು ಸ್ವಾಗತಿಸುತ್ತಾಳೆ. ಮಗನೇ ಎಂದು ಹೇಳುವಷ್ಟರಲ್ಲಿ ಅವಳ ಧ್ವನಿ ಗದ್ಗದಿತವಾಗಿ, ಅವಳು ಅಳಲು ಪ್ರಾರಂಭಿಸುತ್ತಾಳೆ.

ಅಲ್ಲಿ ನೆರೆದ ಯುವಪೀಳಿಗೆಯ ಕಣ್ಣುಗಳು ಆಗ, ಆ ಗುಡಿಸಲಿನ ಜವ್ವನೆಯ ಕಡೆ ತಿರುಗುತ್ತವೆ. ಆಕೆ ಅಲುಗಾಡುತ್ತಿಲ್ಲ. ತಲೆಬಾಗಿಸಿ ನಿಶ್ಚಲಳಾಗಿ ಕುಳಿತಿದ್ದಾಳೆ. ಆಗ ಅವಳ ಅಪ್ಪ ಅವಳನ್ನು ಉದ್ದೇಶಿಸಿ ಹೇಳುತ್ತಾನೆ. "ನನ್ನ ಮುದ್ದಿನ ಮಗಳೇ, ಈ ವೀರನಿಗೆ ಹಸ್ತಲಾಘವವನ್ನು ನೀಡು. ಇವನು ನಿನ್ನ ಅಣ್ಣನ ಬಹುಕಾಲದ ಗೆಳೆಯ. ಇಂದಿನಿಂದ ಇವನೂ ನಿನಗೆ ಅಣ್ಣನಂತೆಯೇ!" ಆಗ ಆ ತರುಣಿ ಎದ್ದು ನಿಲ್ಲುತ್ತಾಳೆ. ತನ್ನ ನೀಳವಾದ ಕೈಯನ್ನು ಚಾಚುತ್ತಾ, ಆಕ್ರಂದನ ಮಾಡುತ್ತಾ, ನಡುಗುವ ತುಟಿಗಳಿಂದ ಹೇಳುತ್ತಾಳೆ: "ಅಣ್ಣಾ!" ಅಲ್ಲಿಗೆ ಆ ಕೊಲೆಯ ವಿಚಾರಣೆ ಮುಗಿಯುತ್ತದೆ.

"ಅಜ್ಜೀ!" ಹುಲ್ಲಿನ ಹಾಸಿಗೆಯ ಮೇಲೆ ಕುಳಿತ ಹುಡುಗಿ, "ಇದು ನಿಜವೇ?!" ಎಂದು ಗಟ್ಟಿಯಾಗಿ ಕೇಳಿದಳು. ಮಮತೆಯಿಂದ ಅಜ್ಜಿ ಉತ್ತರಿಸಿದಳು: "ಹೌದು, ಇದೆಲ್ಲಾ ನಿಜ. ನಮ್ಮ ವೈವಾಹಿಕ ಜೀವನದ ಹದಿನೈದು ವರ್ಷಗಳಲ್ಲಿ ನಮ್ಮ ಮನೆಗೆ ಅನೇಕ ಕುದುರೆಗಳು ಬಂದು ಹೋದವು. ಆದರೆ ಈ ಓಹಿಯೇಶ ಕುದುರೆ ಮಾತ್ರ ಸದಾಕಾಲ ನಮ್ಮ ಕುಟುಂಬದೊಂದಿಗೆ ಸೇರಿಕೊಂಡಿತ್ತು. ಕೊನೆಗೆ ನಿನ್ನ ಅಜ್ಜ ಸತ್ತ ದಿನದಂದು ಅವನ ಸಮಾಧಿಯ ಬಳಿ ಆ ಕುದುರೆಯನ್ನು ಸಾಯಿಸಿಬಿಟ್ಟರು."

ಯಾವ ರೀತಿ ಆಕಾಶದಲ್ಲಿನ ನಕ್ಷತ್ರಪುಂಜಗಳು ಸಂಚರಿಸಿ ರಾತ್ರಿಯನ್ನು ಪರಾಕಾಷ್ಠತೆಗೆ ತಲುಪಿಸುತ್ತವೆಯೋ, ಅದೇ ರೀತಿ ಆ ಡಕೋಟಾ ಅಜ್ಜಿ ಆ ದಿನದ ಸಮಾಧಿ ಕ್ರಿಯೆಯ ಬಗ್ಗೆ ವಿವರಣೆಯನ್ನು ನೀಡಲು ಕತೆಯ ತುತ್ತತುದಿಯನ್ನು ತಲುಪಿದಳು. "ನನ್ನ ಮುದ್ದಿನ ಮೊಮ್ಮಗಳೇ, ಈ ಗುಟ್ಟಿನ ಜೊತೆಗೇ ನಾನು ಇಷ್ಟು ದೀರ್ಘಕಾಲ ಜೀವಿಸಿದ್ದೇನೆ. ಆ ರಾತ್ರಿ ನಡೆದ ರಹಸ್ಯವನ್ನು ನಾನು ನಿನಗೆ ತಿಳಿಸಲೇಬೇಕು. ಇದನ್ನು ಅರ್ಥಮಾಡಿಕೊಳ್ಳುವಷ್ಟು ನೀನು ದೊಡ್ಡವಳಾಗಿದ್ದೀಯ."

"ನಮ್ಮ ಊರಿನ ಜಾಣವೈದ್ಯರು ನನಗೆ ಹೇಳುತ್ತಿದ್ದರು: ಓಹಿಯೇಶ ಕುದುರೆಯನ್ನು ಅದರ ಯಜಮಾನನ ಜೊತೆಗೇ ಕಳುಹಿಸಿ ನಾನು ಒಳ್ಳೆಯ ಕೆಲಸ ಮಾಡಿದೆ. ನಿಮ್ಮ ತಾತನ ಪ್ರೇತಾತ್ಮ, ಬಹುಶಃ ಆ ಕುದುರೆಯನ್ನು ಬಯಸುತ್ತಿರಬೇಕು. ಹೀಗಾಗಿ, ಆ ಕುದುರೆಯನ್ನು ಅವನ ಜೊತೆಗೇ ಕಳುಹಿಸಿದ್ದರಿಂದ, ನಿಮ್ಮ ತಾತನ ಆತ್ಮಕ್ಕೆ ಜೊತೆಗಾರ ಸಿಕ್ಕಂತಾಗಿ, ಅವರಿಬ್ಬರೂ ಮುಂದಿನ ಸ್ಥಳಕ್ಕೆ ಒಟ್ಟಿಗೆ ಹೋಗುವಂತಾಯಿತು" ಇಷ್ಟು ಹೇಳಿ ಅಜ್ಜಿ ತನ್ನ ಮಾತನ್ನು ಮುಗಿಸಿದಳು. ಆ ರಾತ್ರಿಯ ನಿಶ್ಶಬ್ದ ಸ್ಥಿತಿಯಲ್ಲಿ, ಮೊಮ್ಮಗಳ ದೀರ್ಘ ಉಸಿರಾಟವೂ ಆ ಪ್ರಶಾಂತ ವಾತಾವರಣವನ್ನು ಕಲಕಿತ್ತು.

"ಈ ಕತ್ತಲಲ್ಲಿ ನಾನು ಸ್ವಗತದಂತೆ ಮಾತಾಡುತ್ತಿದ್ದೇನೆ. ಈ ಹುಡುಗಿ, ನಾನು ಹೇಳಿದ ಈ ಪವಿತ್ರ ಕಥೆಯನ್ನು ತನ್ನ ಮನಸ್ಸಿಗೆ ತಂದುಕೊಳ್ಳುತ್ತಾಳೆಂದು ನನ್ನ ನಂಬಿಕೆ" ಎಂದು ಅಳುಬುರುಕ ಧ್ವನಿಯಲ್ಲಿ ಅಜ್ಜಿ ಹೇಳಿದಳು. ಪರಿಮಳ ಸೂಸುವ ಆ ಹುಲ್ಲಿನ ಹಾಸಿಗೆಯನ್ನು ಅಪ್ಪಿಕೊಂಡು, ಮೊಮ್ಮಗಳು ನಿದ್ದೆಗೆ ಜಾರಿ, ಇನ್ನೊಂದು ಕನಸನ್ನು ಕಾಣಹತ್ತಿದಳು. ಆ ಪ್ರಸ್ಥಭೂಮಿಯ ಗುಡಿಸಲಿನ ಮೇಲೆ ಆಕಾಶದ ನಕ್ಷತ್ರ ಪುಂಜಗಳು ಪ್ರೀತಿಪೂರ್ವಕವಾಗಿ ತಮ್ಮ ತಂಪು ಕಿರಣಗಳ ಸ್ನಾನವನ್ನು ಮಾಡಿಸುತ್ತಿದ್ದವು.

ಆಧಾರ

ಆಂಗ್ಲ ಮೂಲ ಕಥೆ: The Trial Path

ಆಂಗ್ಲ ಮೂಲ ಕೃತಿ: American Indian Stories

ಆಂಗ್ಲ ಮೂಲ ಕರ್ತೃ: Zitkala-Sa

ಪ್ರಕಾಶಕರು: The Rio Grande Press, Inc. Glorieta, New Mexico, 1976.

❑

14

ಆಮಿಶ್ ಸಮುದಾಯದ ಸಂಕ್ಷಿಪ್ತ ಇತಿಹಾಸ ಮತ್ತು ಪರಂಪರೆ

ಉಮಾ ವೆಂಕಟೇಶ್
ಸ್ಟೇಟ್ ಕಾಲೇಜ್, ಪೆನ್ಸಿಲ್ವೇನಿಯ

*

ಪೀಠಿಕೆ

ಆಮಿಶ್ ಜನಾಂಗದ ಪೂರ್ವಾಪರ, ಅವರ ಆರಂಭ, ಇತಿಹಾಸ, ಸಂಸ್ಕೃತಿಗಳ ಬಗ್ಗೆ ಬೇಕಾದಷ್ಟು ಮಾಹಿತಿ ಲಭ್ಯವಿದೆ. 'ಪೆನ್ಸಿಲ್ವೇನಿಯಾ ಜರ್ಮನ್' ಎಂದು ಕರೆಯಲ್ಪಡುವ ಇವರು, ಮೂಲತಃ ಸ್ವಿಸ್ ಜರ್ಮನ್ ಮೂಲದ ಸಾಂಪ್ರದಾಯಿಕ ಕ್ರಿಶ್ಚಿಯನ್ ಚರ್ಚ್ ಸದಸ್ಯತ್ವದ ಒಂದು ಪಂಥಕ್ಕೆ ಸೇರಿದವರು. ಸರಳ ಜೀವನ, ಸಾದಾ ಉಡುಪು-ತೊಡಪು, ಅಹಿಂಸಾ ತತ್ವದ ಪ್ರಬಲ ಅನುಯಾಯಿಗಳಾದ ಆಮಿಶ್ ಜನಾಂಗ, ಒಂದು ದೃಢವಾದ ನೈತಿಕ ಮತ್ತು ಧರ್ಮಶಾಸ್ತ್ರೀಯ ನಿಲುವನ್ನು ಹೊಂದಿರುವ ಸಮುದಾಯವಾಗಿದೆ. ಆಧುನಿಕ ತಂತ್ರಜ್ಞಾನ, ಜೀವನಶೈಲಿಗಳನ್ನು ವಿರೋಧಿಸುವ ಇವರು, ತಮ್ಮ ಧಾರ್ಮಿಕ ನಿಲುವುಗಳಿಗೆ ಅಡ್ಡಿ ಬರುವ ಯಾವುದೇ ಆಧುನಿಕ ವಿಧಿವಿಧಾನಗಳನ್ನು ತಮ್ಮ ಜೀವನಶೈಲಿಯಲ್ಲಿ ಅನುಗೊಳಿಸಲು ಒಪ್ಪುವುದಿಲ್ಲ. ತಮ್ಮ ಚರ್ಚಿನಿಂದ ಬಹಿಷ್ಕೃತರಾದ ಸದಸ್ಯರ ಜೊತೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳುವುದನ್ನು ತಿರಸ್ಕರಿಸುತ್ತಾರೆ. ಇಂತಹ ಕಟುನಂಬಿಕೆ ಮತ್ತು ಕಟ್ಟಾ ಸಂಪ್ರದಾಯವಾದಿಗಳಾದ ಇವರ ಇತಿಹಾಸವೂ ಕೂಡಾ ಅತ್ಯಂತ ಆಸಕ್ತಿದಾಯಕವಾಗಿದೆ.

ಆರಂಭ

ಸುಮಾರು 280 ವರ್ಷಗಳ ಹಿಂದೆ ಯೂರೋಪಿನಲ್ಲಿ ಉಗಮವಾದ ಆಮಿಶ್ ಪಂಥ ಇಂದು ತಮ್ಮ ತಾಯ್ನಾಡಿನ ಪ್ರದೇಶದಲ್ಲಿ ಕಣ್ಮರೆಯಾಗಿದ್ದರೂ, ಹೊಸ

ಪ್ರಪಂಚವೆನಿಸಿದ ಉತ್ತರ ಅಮೆರಿಕೆಯಲ್ಲಿ ಗಮನಾರ್ಹವಾಗಿ ಉಳಿದುಕೊಂಡಿದೆ. ಸಂಸ್ಕೃತಿಯ ರಚನೆಯಲ್ಲಿ ಧರ್ಮ ಮತ್ತು ಭೌಗೋಳಿಕತೆ ಪ್ರಮುಖ ಪಾತ್ರವನ್ನು ವಹಿಸುತ್ತಲೇ ಬಂದಿವೆ. ಯೂರೋಪಿನಲ್ಲಿ ನಡೆದ ಧಾರ್ಮಿಕ ಸುಧಾರಣೆಯ ಸಮಯದಲ್ಲಿ, ಪ್ರಾಟೆಸ್ಟೆಂಟ್ ಚರ್ಚುಗಳ ಜೊತೆಗೆ ನಡೆದ ಸಂಘರ್ಷದಲ್ಲಿ ಆನಾಬ್ಯಾಪ್ಟಿಸ್ಟ್ ಎನ್ನುವ ಧಾರ್ಮಿಕ ಸಂಘ ಜನ್ಮ ತಳೆಯಿತು. ಬ್ಯಾಪ್ಟಿಸಮ್ ಎನ್ನುವುದು, ಒಂದು ವ್ಯಕ್ತಿಯನ್ನು ನೀರಿನಲ್ಲಿ ಮುಳುಗಿಸಿ ಪವಿತ್ರಗೊಳಿಸುವ ಒಂದು ದೀಕ್ಷಾಸ್ನಾನ, ಮತ್ತು ಕ್ರೈಸ್ತಮತದ ಚರ್ಚಿಗೆ ವ್ಯಕ್ತಿಯನ್ನು ಸೇರಿಸಿಕೊಳ್ಳುವ ಒಂದು ಧಾರ್ಮಿಕ ವಿಧಿ. ಕ್ರೈಸ್ತಮತದ ಅನೇಕ ಪಂಥಗಳಲ್ಲಿ, ಮಗುವಿನ ನಾಮಕರಣದ ಸಮಯದಲ್ಲಿ ಈ ಧಾರ್ಮಿಕ ವಿಧಿಯನ್ನು ನೆರವೇರಿಸಲಾಗುತ್ತದೆ. 16ನೆ ಶತಮಾನದ ಆರಂಭದಲ್ಲಿ, ಪಶ್ಚಿಮ ಯೂರೋಪಿನಲ್ಲಿ ಭುಗಿಲೆದ್ದಿದ್ದ ರಾಜಕೀಯ ಮತ್ತು ಆರ್ಥಿಕ ಅಳಲುಗಳು ಸಮಾಜವನ್ನು ತೊಂದರೆಗೀಡಾಗಿಸಿತ್ತು. ರೈತಾಪಿ ಜನಗಳು ದಾರಿದ್ರ್ಯದಲ್ಲಿ ಮುಳುಗಿದ್ದು, ಪಟ್ಟಣದ ಶ್ರೀಮಂತ ವ್ಯಾಪಾರಿ ಹಾಗೂ ಕುಶಲಕರ್ಮಿಗಳು ಕೊಬ್ಬಿದ್ದರು. ವಿದ್ವಾಂಸರು ಮತ್ತು ಅಸಮಾಧಾನಿಗಳಾಗಿದ್ದ ವಿದ್ಯಾರ್ಥಿಗಳು, ಸಮಾಜದಲ್ಲಿ ಬೇರೂರಲಾರಂಭಿಸಿದ್ದ ಭ್ರಷ್ಟಾಚಾರವನ್ನು ತೀವ್ರವಾಗಿ ಖಂಡಿಸಲು ಪ್ರಾರಂಭಿಸಿದ್ದರು. ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸಮಾಜವನ್ನು ಒಂದುಗೂಡಿಸಲು ಸಮರ್ಥವಾಗಿದ್ದ ಏಕೈಕ ಸಂಸ್ಥೆಯೆನಿಸಿದ್ದ ಚರ್ಚಿನ ಪಾದ್ರಿಗಳಿಗೆ ವಿಶೇಷ ಅಧಿಕಾರ ಮತ್ತು ಸವಲತ್ತುಗಳಿದ್ದವು. ಹಾಗಾಗಿ ಚರ್ಚಿನ ವಿರುದ್ಧ ವ್ಯಕ್ತಪಡಿಸುವ ಯಾವುದೇ ಭಿನ್ನಾಭಿಪ್ರಾಯಗಳು ಸಮಾಜ ಹಾಗೂ ಪ್ರಭುತ್ವದ ದೃಷ್ಟಿಯಲ್ಲಿ ಅಪರಾಧವೆನಿಸಿದ್ದವು. ಆದರೆ, ಇದೇ ಸಮಯದಲ್ಲಿ ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸದ ರೋಮನ್ ಕ್ಯಾಥೋಲಿಕ್ ಚರ್ಚ್ ಯೂರೋಪಿನ ಹಲವು ಪ್ರದೇಶಗಳಲ್ಲಿ ನೈತಿಕವಾಗಿ ಹಾಗೂ ರಾಜಕೀಯವಾಗಿ ತನ್ನ ಅಧಿಕಾರವನ್ನು ಕಳೆದುಕೊಳ್ಳಲಾರಂಭಿಸಿದಾಗ, ಹಲವಾರು ಸನ್ಯಾಸಿಗಳು ಈ ಚರ್ಚುಗಳ ವಿರುದ್ಧ ಸುಧಾರಣೆಗಳನ್ನು ತರಲು ಪ್ರಾರಂಭಿಸಿದರು. ಮಾರ್ಟಿನ್ ಲೂಥರ್ ಎನ್ನುವ ಕ್ರೈಸ್ತ ಪಾದ್ರಿ ಪ್ರಾರಂಭಿಸಿದ ಈ ಸುಧಾರಣೆ ಹಾಗೂ ಪ್ರಾಟೆಸ್ಟೆಂಟ್ ಧರ್ಮದ ಸ್ಥಾಪನೆ ಯೂರೋಪಿನಲ್ಲೆಲ್ಲಾ ಹರಡಲಾರಂಭಿಸಿತು. ಈ ಸುಧಾರಣೆಗಳು ಎಲ್ಲೆಡೆ ಜನಪ್ರಿಯವಾದಾಗ, ಕಡೆಯಲ್ಲಿ ರೋಮಿನ ಪೋಪನ್ನು ತಮ್ಮ ಸಾಮಾಜಿಕ ವ್ಯವಸ್ಥೆಯಿಂದ ಹೊರಹಾಕಿ, ಆ ಅಧಿಕಾರವನ್ನು ಸ್ಥಳೀಯ ಮ್ಯಾಜಿಸ್ಟ್ರೇಟ್ ಅಥವಾ ರಾಜನಿಗೆ ವರ್ಗಾಯಿಸಿದರು. ಆರಂಭದಲ್ಲಿ ಈ ಸುಧಾರಣೆಗಳು ಆಕರ್ಷಕವಾಗಿ ಕಂಡುಬಂದರೂ, ಕ್ರಮೇಣ ಹಲವಾರು ತರುಣ ಪೀಳಿಗೆಯ ಭಿನ್ನಮತೀಯರಿಗೆ ಇದು ಸಹನವಾಗಲಿಲ್ಲ. ಇವರಿಗೆ ಸಣ್ಣ ಕೂಸುಗಳನ್ನು ಬ್ಯಾಪ್ಟಿಸಮ್ ಧಾರ್ಮಿಕ ವಿಧಿಗೆ ಒಳಪಡಿಸುವುದು ಇಷ್ಟವಿರಲಿಲ್ಲ. ಕೇವಲ ವಯಸ್ಕರು ಮಾತ್ರ ಈ ಧಾರ್ಮಿಕ ಆಚರಣೆಗೆ ಅರ್ಹರು, ಎಂದು ಹೇಳಿ ತಮ್ಮ ಹೊಸ ಆಲೋಚನಾ ಪಂಥಕ್ಕೆ ಆನಬಾಪ್ಟಿಸಮ್ ಎಂಬ ಹೆಸರಿಟ್ಟು, ತಮ್ಮನ್ನು ತಾವು ಆನಬ್ಯಾಪ್ಟಿಸ್ಟ್ (Anabaptists) ಎಂದು ಕರೆಯಲಾರಂಭಿಸಿದರು.

ಸಂಘರ್ಷಗಳು

ಇವರ ಜನಪ್ರಿಯತೆಯನ್ನು ತಿರಸ್ಕರಿಸಿದ ಕೌನ್ಸಿಲ್, ಈ ಪಂಥದವರನ್ನು ಸೆರೆಗೆ ತಳ್ಳಿ, ಹೆದರಿಸಿ ನಂತರ ಗಡೀಪಾರು ಮಾಡಲು ಶುರುಮಾಡಿತು. ಈ ರೀತಿ ಗಡೀಪಾರಾದ ಆನಬಾಪ್ಟಿಸ್ಟ್ ಗುಂಪಿನವರು ಯೂರೋಪಿನ ಇತರ ದೇಶಗಳಾದ ಜರ್ಮನಿ, ಆಸ್ಟ್ರಿಯಾ, ಹಾಲೆಂಡ್ ಮತ್ತು ರಷ್ಯಾ ದೇಶಗಳಿಗೆ ವಲಸೆ ಹೋಗಿ, ತಮ್ಮನ್ನು ಬೆನ್ನಟ್ಟಿದ್ದ ಕಿರುಕುಳದಿಂದ ತಪ್ಪಿಸಿಕೊಳ್ಳುವ ಸಲುವಾಗಿ, ರಹಸ್ಯವಾಗಿ ಸಭೆಗಳನ್ನು ನಡೆಸುತ್ತಾ, ಹಾಗೂ ಹೀಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದರು. ಇವರು ಹೀಗೆ ಹೆಣಗಾಡುತ್ತಿರುವಾಗಲೇ, ಇವರ ರಕ್ಷಣೆಗೆ ಬಂದ ವ್ಯಕ್ತಿ, ಮೆನ್ನೋ ಸಿಮನ್ಸ್ (Menno Simons) ಎಂಬ ಒಬ್ಬ ಡಚ್ ಕ್ಯಾಥೋಲಿಕ್ ಪಾದ್ರಿ. ಇವನು, 1545ರಲ್ಲಿ ತನ್ನ ಬೆಂಬಲವನ್ನು ಸಾರ್ವಜನಿಕಗೊಳಿಸಿ, ಈ ಪಂಥಕ್ಕೆ ಸೇರಿಕೊಂಡ. ಈ ಮೆನ್ನೋ ಸಿಮನ್ಸನ ಪಾತ್ರ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ, 1545ರಲ್ಲಿ ಈ ಆನಬಾಪ್ಟಿಸಮ್ ಆಂದೋಲನವನ್ನು ಇವನ ಹೆಸರಿನೊಂದಿಗೆ ಸೇರಿಸಿ, ಈ ಪಂಥವನ್ನು 'ಮೆನ್ನೋನೈಟ್ಸ್' ಎಂದು ಕರೆಯಲಾರಂಭಿಸಿದರು. 17ನೆಯ ಶತಮಾನದ ಅಂತ್ಯದ ವೇಳೆಗೆ ಮೆನ್ನೋನೈಟ್ಸ್ ಸಮಾಜದಲ್ಲಿ ಗೌರವ, ಆದರಗಳನ್ನು ಗಳಿಸಲಾರಂಭಿಸಿದ್ದರು. ಆದರೂ ಸ್ವಿಟ್ಜರ್ಲ್ಯಾಂಡಿನಲ್ಲಿ ಇವರಿಗೆ ಅಧಿಕಾರಿ ವರ್ಗದವರಿಂದ ಕಿರುಕುಳ ನಡೆದೇ ಇತ್ತು. ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲೂ ಸುಧಾರಣೆಗಳನ್ನು ತಂದ ಜಾಕೋಬ್ ಅಮ್ಮಾನ್ (Jacob Ammann) ಇವರಲ್ಲಿ ಪ್ರಮುಖನಾದವನು ಎಂದು ಗುರ್ತಿಸಲಾಗಿದೆ. ಇವನ ಅನುಯಾಯಿಗಳು ತಮ್ಮನ್ನು ತಾವು 'ಅಮ್ಮನ್ ಶ್' ಎಂದು ಕರೆದುಕೊಂಡರು. ಅಂತಿಮವಾಗಿ ಇದು 'ಆಮಿಶ್' ಎನ್ನುವ ಹೆಸರಿಗೆ ಬದಲಾಯಿಸಿತು. 18ನೆಯ ಶತಮಾನದಲ್ಲಿ, ಸ್ವಿಟ್ಜರ್ಲ್ಯಾಂಡಿಗೆ ಹತ್ತಿರವಾಗಿದ್ದ, ಫ್ರಾನ್ಸ್ ದೇಶದ ಉತ್ತರ ಭಾಗದಲ್ಲಿ, ಆಲ್ಸಾಚಿಯ ಹತ್ತಿರ ಒಂದು ಹಳ್ಳಿಯಲ್ಲಿ ನೆಲಸಿದ್ದ ಈ ಅಮ್ಮಾನ್ ಮತ್ತು ಅವನ ಪಂಥದವರನ್ನು, ಮತ್ತೊಮ್ಮೆ ಫ್ರಾನ್ಸಿನ ದೊರೆ 16ನೆ ಲೂಯಿಸ್, ಸ್ಥಳೀಯ ಅಧಿಕಾರಿಗಳ ಮೇಲೆ ಒತ್ತಡ ಹೇರಿ, ಈ ಪಂಥದವರನ್ನು ಆಲ್ಸಾಚಿಯಿಂದ ಹೊರಹಾಕಬೇಕೆಂದು ಆಜ್ಞಾಪಿಸಿದನು. 1693ರಲ್ಲಿ ಸ್ವಿಟ್ಜರ್ಲ್ಯಾಂಡಿನ ಆಸುಪಾಸಿನಲ್ಲಿ ಒಂದು ಸಣ್ಣ ಪಂಥವೆನಿಸಿದ್ದ ಆಮಿಶ್ ಜನಾಂಗ, ಅಲ್ಲಿಯ ರಾಜಕೀಯ, ಸಾಮಾಜಿಕ ಕಿರುಕುಳಗಳಿಂದ ಬೇಸತ್ತು, ಯೂರೋಪಿನ ಇತರ ದೇಶಗಳು ಮತ್ತು ಉತ್ತರ ಅಮೆರಿಕೆಯೆಡೆಗೆ ವಲಸೆ ಹೊರಟರು. 1700ರ ನಂತರ ಆಮಿಶ್ ಪಂಥದವರನ್ನು ಉತ್ತರ ಅಮೆರಿಕೆ ಬಲವಾಗಿ ತನ್ನತ್ತ ಆಕರ್ಷಿಸಿತು. ನೂತನ ಪ್ರಪಂಚಕ್ಕೆ ವಲಸೆ ಹೋಗುವ ಪ್ರತೀಕ್ಷೆಯಿಂದ ಆಮಿಶ್ ಜನಾಂಗವೂ ತಪ್ಪಿಸಿಕೊಳ್ಳಲಾಗಲಿಲ್ಲ. ಅಟ್ಲಾಂಟಿಕ್ ಸಮುದ್ರದ ಪ್ರಲೋಭನೆ ಅದೆಷ್ಟು ಪ್ರಬಲವಾಗಿತ್ತೆಂದರೆ, ಈ ಪ್ರಯಾಣದಲ್ಲಿದ್ದ ಅನಿಶ್ಚಿತತೆ, ಬಿರುಗಾಳಿ, ರೋಗ ರುಜಿನಗಳು ಮತ್ತು ಸಾವುಗಳಂತಹ ಅಪಾಯಗಳಿದ್ದಾಗ್ಯೂ, ಎಲ್ಲಾ ಮೆನ್ನೋನೈಟ್ಸ್ ಜನಾಂಗದವರಿಗೂ ವಾಸ್ತವವಾಗಿ, ಅಮೆರಿಕದ ಪೆನ್ಸಿಲ್ವೇನಿಯಾ ಪ್ರಾಂತ್ಯ ಒಂದು ಬಲವಾದ ಆಕರ್ಷಣೆ ಹಾಗೂ ವಲಸಿಗ ತಾಣವೆನಿಸಿತ್ತು.

ಬೆಳವಣಿಗೆ

1681ರಲ್ಲಿ ವಿಲಿಯಮ್ ಪೆನ್ ಎನ್ನುವ ಇಂಗ್ಲಿಷ್ ಪ್ರಜೆಗೆ, ಪೆನ್ಸಿಲ್ವೇನಿಯಾದಲ್ಲಿ ವಸಾಹತುವೊಂದನ್ನು ಸೃಷ್ಟಿಸಲು, ರಾಜರಿಂದ ಭೂಮಿ ಅನುದಾನವೊಂದು ದೊರೆತಿತ್ತು. 'Religious Society of Friends (Quakers)' ಎನ್ನುವ ಧಾರ್ಮಿಕ ಪಂಥದ ಸದಸ್ಯನಾಗಿದ್ದ ವಿಲಿಯಮ್ ಪೆನ್, ಧಾರ್ಮಿಕ ಸಹಿಷ್ಣುತೆಯುಳ್ಳ ವಸಾಹತುವೊಂದನ್ನು ನಿರ್ಮಿಸುವ ಉದ್ದೇಶದಿಂದ, ಅಲ್ಪಸಂಖ್ಯಾತ ಧಾರ್ಮಿಕ ಪಂಥದ ವಲಸಿಗರಿಗೆ, ಪೆನ್ಸಿಲ್ವೇನಿಯಾದಲ್ಲಿ ಬಂದು ನೆಲಸಬಹುದೆಂದು ಜಾಹಿರಾತು ನೀಡಿದ್ದ. ಈ ಗುಂಪಿಗೆ ಮೊರೋವಿಯನ್ನರು, ಮೆನ್ನೋನೈಟ್ಸ್, ಡನ್ಕರ್ಸ್, ಆಮಿಶ್ ಜನಾಂಗದವರನ್ನು ಸೇರಿಸಿದ್ದರು. 1737ರಲ್ಲಿ Charming Nancy ಎನ್ನುವ ನೌಕೆಯಲ್ಲಿ ಫಿಲಡೆಲ್ಫಿಯಾಕ್ಕೆ ಬಂದಿಳಿದ ಆಮಿಶ್ ಜನಾಂಗದ 21 ಕುಟುಂಬಗಳನ್ನು ದಾಖಲೆ ಇರುವ ಮೊದಲ ತಂಡವೆಂದು ಗುರ್ತಿಸಲಾಗಿದೆ. ಮುಂದೆ 3 ದಶಕಗಳ ಕಾಲ ಸುಮಾರು 100 ಆಮಿಶ್ ಕುಟುಂಬಗಳು ಯೂರೋಪ್ ಬಿಟ್ಟು ಪೆನ್ಸಿಲ್ವೇನಿಯಾಕ್ಕೆ ವಲಸೆ ಬಂದರು. ಆರ್ಥಿಕವಾಗಿ ಆಮಿಶ್ ಹೆಚ್ಚು ಸ್ವಾವಲಂಬಿಗಳಾಗಿದ್ದರೆಂಬುದು ತಿಳಿಯುತ್ತದೆ. ಇವರ ಜೊತೆಗೆ ಸುಮಾರು 80,000 ಜರ್ಮನ್ ಭಾಷೆ ಮಾತನಾಡುವ ಯೂರೋಪಿಯನ್ ಜನಾಂಗದವರು ವಲಸೆ ಬಂದಿದ್ದರು. ಹಾಗಾಗಿ ಇಂಗ್ಲೀಷ್ ನೋಡುಗರು ಕ್ಷಿಪ್ರವಾಗಿ ಇವರನ್ನೆಲ್ಲಾ 'ಪೆನ್ಸಿಲ್ವೇನಿಯಾ ಡಚ್' ಎಂದು ವರ್ಗೀಕರಿಸಿದರು. ಕ್ರಮೇಣ ಆಮಿಶ್ ಸಮುದಾಯ ತಮ್ಮದೇ ಆದ ಆಡುಭಾಷೆಯನ್ನು ಬೆಳೆಸಿಕೊಂಡು, ಇತರ ಪದ್ಧತಿಗಳು ಹಾಗೂ ಜಾನಪದ ಜೀವನಶೈಲಿಗಳಿಂದ ನೆರೆಹೊರೆಯ ಸಮುದಾಯಕ್ಕಿಂತ ಭಿನ್ನವಾದ ಜನಾಂಗವೆನಿಸಿದ್ದರು. ಮೊದಲನೆಯ ಆಮಿಶ್ ವಸಾಹತು ಪೆನ್ಸಿಲ್ವೇನಿಯಾದ ಇಂದಿನ ಬರ್ಕ್ಸ್ ಪ್ರಾಂತದಲ್ಲಿ ಪ್ರಾರಂಭವಾಯಿತು. ಆರಂಭಿಕ ವಲಸಿಗರು ಬರ್ಕ್ಸ್ ಪ್ರಾಂತ್ಯದಲ್ಲಿ ಭೂಮಿಯನ್ನು ಖರೀದಿಸಿದ್ದರು. ಆಮಿಶ್ ಜನಾಂಗದಲ್ಲಿದ್ದ ಹಲವಾರು ಸಾಮಾನ್ಯ ಅಡ್ಡ ಹೆಸರುಗಳೆಂದರೆ ಫಿಶರ್, ಹೆರ್ಶ್‌ಬರ್ಗರ್, ಹೆಟ್ಲರ್, ಹೋಕ್ಸ್ಟೆಲ್ಲರ್, ಕಾಫ್ಮನ್, ಕಿಂಗ್, ಲಾಂಟ್ಜ್, ಮಿಲ್ಲರ್, ಟ್ರೋಯರ್, ಯೋಡರ್ ಮತ್ತು ಝುಗ್ ಎಂದು ತಿಳಿದುಬರುತ್ತದೆ. ಮುಂದೆ ಲ್ಯಾಂಕೆಸ್ಟರ್ ಪ್ರಾಂತ್ಯದಲ್ಲಿ ಇತರ ಆಮಿಶ್ ಕುಟುಂಬಗಳು ಜಮೀನನ್ನು ಖರೀದಿಸಿ ಅಲ್ಲಿ ಮತ್ತೊಂದು ಸಣ್ಣ ಸಮುದಾಯವನ್ನು ಊರ್ಜಿತಗೊಳಿಸಿದರು. ಲ್ಯಾಂಕೆಸ್ಟರ್ ಪ್ರಾಂತ್ಯದಲ್ಲಿರುವ ಆಮಿಶ್ ಸಮುದಾಯ ಅಮೆರಿಕೆಯಲ್ಲೇ ಅತ್ಯಂತ ದೊಡ್ಡ ಆಮಿಶ್ ಸಮುದಾಯವಾಗಿದ್ದರೂ, 19ನೆಯ ಶತಮಾನದ ಹೊತ್ತಿಗೆ, ಇವರು ಇತರ ಪ್ರಾಂತ್ಯಗಳಿಗೂ ತಮ್ಮ ವಾಸ್ತವ್ಯವನ್ನು ವಿಸ್ತರಿಸಿದ್ದರು. 1700ರ ಅಂತ್ಯದ ವೇಳೆಗೆ, ಹಲವಾರು ಆಮಿಶ್ ಕುಟುಂಬಗಳು ನೆರೆಯ ರಾಜ್ಯಗಳಾದ ವರ್ಜೀನಿಯಾ, ಮತ್ತು ನಾರ್ತ್ ಕರೋಲೈನಾಗಳಿಗೆ ವಲಸೆ ಹೋದರು. ಈ ರಾಜ್ಯಗಳ ಆಮಿಶ್ ಕುಟುಂಬಗಳ ನಡುವೆ ವಿವಾಹ ಸಂಬಂಧಗಳಿದ್ದವು.

ತಮ್ಮ ಪ್ರಾಚೀನ ಸಂಸ್ಥೆಗಳ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಅಚಲವಾದ ನಂಬಿಕೆಯಿದ್ದ ಆಮಿಶ್, ತಮ್ಮ ಹೊಸ ವಸಾಹತುಗಳಲ್ಲೂ ಅದನ್ನೇ ಮುಂದುವರೆಸಿದರಲ್ಲದೇ, ಆರ್ಥಿಕ

ಸ್ವ-ಸಹಾಯದ ಬಲದ ಮೇಲೆ ತಮ್ಮ ಧರ್ಮದ ಆಚರಣೆಯನ್ನು ಮುಂದುವರೆಸಿದರು. ಆಮಿಶ್ ಚರ್ಚುಗಳಲ್ಲಿ ಬ್ಯಾಪ್ಟಿಸಮ್, ಧರ್ಮೋಪದೇಶ, ಮದುವೆ ಮತ್ತು ಇತರ ಧಾರ್ಮಿಕ ವಿಧಿಗಳನ್ನು ನಿಯತವಾಗಿ ನಡೆಸುವುದು ಶುರುವಾಯಿತು. ಭಾನುವಾರದ ಚರ್ಚ್ ಧಾರ್ಮಿಕ ವಿಧಿಯ ಜೊತೆಗೆ, ಆಮಿಶ್ ಜನಗಳ ದೈನಂದಿನ ಜೀವನದಲ್ಲೂ ಧರ್ಮ ಬಹಳ ಪ್ರಮುಖವಾದ ಪಾತ್ರ ವಹಿಸುತ್ತಾ ಬಂದಿದೆ. ಬಹುತೇಕ ಆಮಿಶ್ ಕುಟುಂಬಗಳು ವೃತ್ತಿಯಲ್ಲಿ ವ್ಯವಸಾಯ ನಡೆಸಿದರೂ, ಗಿರಣಿ, ಚರ್ಮ ಹದಮಾಡುವಿಕೆ, ನಾಟಿ ವೈದ್ಯಕೀಯ ಹೀಗೆ ಹಲವು ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಲ್ಯಾಂಕೆಸ್ಟರ್ ಪ್ರಾಂತ್ಯದಲ್ಲಿ, ಗೋಧಿ ಇವರು ಬೆಳೆಯುತ್ತಿದ್ದ ಮುಖ್ಯ ಧಾನ್ಯವಾಗಿತ್ತು. ನಂತರ ಸೇಬು, ಅಗಸೆ ಬೀಜಗಳನ್ನೂ ಬೆಳೆಯಲಾರಂಭಿಸಿದ ಇವರು, ಸೇಬಿನ ಹಣ್ಣಿನಿಂದ ಸೈಡರ್ ಪಾನೀಯವನ್ನು ಭಟ್ಟಿ ಇಳಿಸುವ ಕಾರ್ಯದಲ್ಲೂ ಪರಿಣತಿ ಹೊಂದಿದ್ದಾರೆ. ಆಮಿಶ್ ಜನಾಂಗದಲ್ಲಿ ವಿಧವೆಯರಿಗೆ ಅವರ ಮಕ್ಕಳು ತಾವು ಹೊಲದಲ್ಲಿ ಬೆಳೆದ ಕಾಳುಕಡ್ಡಿ ತರಕಾರಿಗಳನ್ನು ಯಥೇಚ್ಛವಾಗಿ ಒದಗಿಸುವ ಪದ್ಧತಿಯಿದೆ. ಆಮಿಶ್ ಸಮುದಾಯ ಅಮೆರಿಕೆಗೆ ಸ್ವತಂತ್ರ ಜನಾಂಗವಾಗಿ ವಲಸೆ ಬಂದರಲ್ಲದೇ, ತಮ್ಮ ದಕ್ಷತೆಯಿಂದ ತಮ್ಮ ವೃತ್ತಿಯನ್ನು ನಡೆಸಿಕೊಂಡು ಹೋಗುವ ಸ್ವಾತಂತ್ರ್ಯ ಪಡೆದಿದ್ದರು. ಅವರೆಂದೂ ಗುಲಾಮಿ ಪದ್ಧತಿಯನ್ನು ಅನುಮೋದಿಸಲಿಲ್ಲ. ಆಮಿಶ್ ಜನಾಂಗ ಗುಲಾಮರನ್ನು ತಮ್ಮ ಕುಟುಂಬ ಅಥವಾ ಹೊಲಗಳಲ್ಲಿ ಕೆಲಸಕ್ಕೆಂದು ಇಟ್ಟುಕೊಂಡ ಯಾವ ದಾಖಲೆಗಳೂ ಇಲ್ಲ. ಆಡಂಬರದ ಉಡುಪು- ತೊಡುಪುಗಳು, ಮನೆಯ ಪೀಠೋಪಕರಣಗಳು ಮತ್ತು ಶ್ರೀಮಂತ ಆಭರಣಗಳನ್ನು ಯಾವಾಗಲೂ ತಿರಸ್ಕರಿಸುತ್ತಲೇ ಬಂದಿರುವ ಆಮಿಶ್ ಸಮುದಾಯ ನಿಜಕ್ಕೂ ಒಂದು ಅನನ್ಯ ಪಂಥವೆನ್ನಬಹುದು. ಪೆನ್ಸಿಲ್ವೇನಿಯಾದ ಗಡಿ ಪ್ರದೇಶಗಳಲ್ಲಿ ವಸಾಹತುಗಾರರಾಗಿದ್ದ ಆಮಿಶ್, ಮುಂದೆ ಪ್ರಾಂತ್ಯವಾರು ರಾಜಕೀಯ ಕಲಹಗಳಲ್ಲೂ ಭಾಗಿಯಾಗಬೇಕಾಯಿತು. ಫ್ರೆಂಚ್ ಮತ್ತು ಇಂಗ್ಲಿಷ್ ನಡುವೆ ನಡೆದ ಮುಖ್ಯ ಕಾಳಗಗಳಲ್ಲಿ, ಪೆನ್ಸಿಲ್ವೇನಿಯಾ ಒಂದು ಪ್ರಮುಖ ರಣಭೂಮಿಯಾಗಿತ್ತು. ಆಗ ನಡೆದ ಹಿಂಸಾಚಾರಗಳಿಂದ ತಪ್ಪಿಸಿಕೊಳ್ಳಲಾಗದ ಆಮಿಶ್ ಕುಟುಂಬಗಳೂ ಕೂಡಾ ಸಾವು-ನೋವುಗಳನ್ನು ಅನುಭವಿಸಿದರು. ಅಹಿಂಸೆಯ ಪಾಲಕರಾದ ಆಮಿಶ್ ಜನಾಂಗ, ಈ ಕದನಗಳಿಂದ ತಮ್ಮನ್ನು ದೂರವಿಟ್ಟು ವಿನಾಯತಿ ನೀಡಬೇಕೆಂದು ವಿನಂತಿಸಿಕೊಂಡಿದ್ದರು. 1776ರಲ್ಲಿ ನಡೆದ ಹೊಸ ಯುದ್ಧವೊಂದು, ಆಮಿಶ್ ಜನಾಂಗದ ಚರ್ಚುಗಳನ್ನು ಕಠಿಣ ಪರೀಕ್ಷೆಗೆ ಒಳಪಡಿಸಿತ್ತು. ಫ್ರೆಂಚ್ ಸೇನಾನಾಯಕರ ಆದೇಶದ ಮೇರೆಗೆ, ಆಮಿಶ್ ಸಮುದಾಯದ ಕುಟುಂಬದ ಮೇಲೆ ಸ್ಥಳೀಯ ಇಂಡಿಯನ್ ಜನಾಂಗ ನಡೆಸಿದ ಹಲ್ಲೆಗಳಲ್ಲಿ, ಆ ಕುಟುಂಬದ ಸದಸ್ಯರು ತೀವ್ರವಾಗಿ ಗಾಯಗೊಂಡಿದ್ದರು. ಆದರೂ ಯಾವ ರೀತಿಯ ಶಸ್ತ್ರಾಸ್ತ್ರಗಳನ್ನು ಬಳಸದೆ, ಅವರ ಸೆರೆಯಲ್ಲಿದ್ದ ಕಥೆ ಇಂದಿಗೂ ಆಮಿಶ್ ಜನಾಂಗದ ಕುಟುಂಬಗಳಲ್ಲಿ ಮನೆಮಾತಾಗಿದೆ. ಮುಂದೆ ಇವಾಂಜಲಿಕಲ್ ಪುನರುಜ್ಜೀವನ ತತ್ವಗಳು, ಆಮಿಶ್ ಚರ್ಚುಗಳಿಗೆ ಬಲವಾದ ಸವಾಲೆಸೆದರೂ, ತಮ್ಮ ನಂಬಿಕೆ ಮತ್ತು ವಿಶ್ವಾಸಗಳನ್ನು ಪ್ರಚಾರ ಮಾಡಲು ತಿರಸ್ಕರಿಸಿದ ಆಮಿಶ್ ಸಮುದಾಯ,

ಮೋಕ್ಷವನ್ನು ತಮ್ಮ ರೀತಿಯಲ್ಲೇ ಪಡೆಯುವ ದೀಕ್ಷೆ ತೊಟ್ಟಿದ್ದರು. ಆಗಾಗ್ಗೆ ನಡೆಯುತ್ತಿದ್ದ ಯುದ್ಧಗಳು ಅವರ ಚರ್ಚುಗಳಲ್ಲಿ ಸದಸ್ಯರ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಿತಲ್ಲದೇ, ಆಮಿಶ್ ಜನಾಂಗದ ಅನನ್ಯತೆಗೆ ಧಕ್ಕೆಯನ್ನುಂಟುಮಾಡಿತು. ಈಗಿನ ವಂಶಾವಳಿಯ ಅಧ್ಯಯನಗಳ ಪ್ರಕಾರ, ಯಾವ ಆಮಿಶ್ ಕುಟುಂಬವೂ ಕೂಡಾ ತಮ್ಮ ಎಲ್ಲಾ ಮಕ್ಕಳನ್ನು ಉಳಿಸಿಕೊಳ್ಳಲಾಗದೆ ಹೋದರು. ಅಮೆರಿಕೆಯ ಸ್ವಾತಂತ್ರ್ಯಕ್ರಾಂತಿ, ಇವರೆಲ್ಲರ ಭವಿಷ್ಯವನ್ನು ಅನಿಶ್ಚಿತಗೊಳಿಸಿತ್ತು.

19ನೆಯ ಶತಮಾನದ ಹೊತ್ತಿಗೆ, ಆಮಿಶ್ ಜನಾಂಗದ ಜನಸಂಖ್ಯೆ ಉತ್ತರ ಅಮೆರಿಕೆಯಲ್ಲಿ 1000ಕ್ಕಿಂತ ಕಡಿಮೆ ಇದ್ದಿತು. ಪೆನ್ಸಿಲ್ವೇನಿಯಾದ ಆಮಿಶ್ ವಸಾಹತುಗಳಲ್ಲಿ ಇವರ ಜೀವನ ವರ್ಧಿಸಿ, ಇವರು ಏಳಿಗೆ ಹೊಂದಿದ್ದಂತೂ ನಿಜ. ಬಹುಶಃ, ಶೇಕಡ 40ರಷ್ಟು ಆರಂಭಿಕ ಆಮಿಶ್ ಪೀಳಿಗೆಯವರು, ತಮ್ಮ ಹಳೆಯ ಸಂಪ್ರದಾಯವಾದಿ ಜೀವನಶೈಲಿಯನ್ನೇ ಮುಂದುವರೆಸಿದ್ದರು. ಪುನರುಜ್ಜೀವನ ತತ್ವಗಳು ತರುಣ ಪೀಳಿಗೆಯವರನ್ನು ಅವರ ಹಿಂದಿನ ಪೀಳಿಗೆಯ ನಂಬಿಕೆ ವಿಶ್ವಾಸಗಳಿಂದ ದೂರಕ್ಕೆ ಸೆಳೆಯಲಾರಂಭಿಸಿದ್ದವು. 19ನೆಯ ಶತಮಾನದಲ್ಲಿ ಅಮೆರಿಕೆಗೆ ಬಂದಿಳಿದಿದ್ದ, ಸುಮಾರು 3,000 ಹೊಸ ಆಮಿಶ್ ಜನ, ಕೇವಲ ಪೆನ್ಸಿಲ್ವೇನಿಯಾ ಒಂದೇ ಅಲ್ಲ, ಅಮೆರಿಕೆಯ ಇತರ ರಾಜ್ಯಗಳಾದ ನ್ಯೂ ಯಾರ್ಕ್, ಒಹಾಯೋ, ಮಿಸ್ಸೂರಿ, ಅಯೋವಾ, ಇಲಿನಾಯ್, ಲೂಯಿಸಿಯಾನಾ, ಇಂಡಿಯಾನಾ, ಮತ್ತು ಕೆನಡಾದ ಆಂಟೋರಿಯೋ ಪ್ರಾಂತಗಳಲ್ಲೂ ನೆಲಸಿದರು. ಇವರೆಲ್ಲರ ನಡುವೆ ಉತ್ತಮವಾದ ಸೌಹಾರ್ದತೆ ಇತ್ತು. 19ನೆಯ ಶತಮಾನದಲ್ಲಿ ಅಮೆರಿಕೆಗೆ ವಲಸೆ ಬಂದ ಆಮಿಶ್ ಜನಾಂಗ ಉತ್ತಮ ಸಂಚಾರಿಗಳೆನಿಸಿದ್ದರು. ಬೆಳೆಯುತ್ತಿದ್ದ ಆರ್ಥಿಕ ಬೆಳವಣಿಗೆಯ ಉತ್ತಮ ಲಾಭ ಪಡೆದು, ಎಲ್ಲೆಂದರಲ್ಲಿ ಅಲ್ಲಿಗೆ ಸಂಚರಿಸಿ ಜಮೀನುಗಳನ್ನು ಖರೀದಿಸಿ, ಇಲ್ಲವೇ ಗುತ್ತಿಗೆಗೆ ತೆಗೆದುಕೊಂಡು ಬೇಸಾಯವನ್ನು ಮಾಡುತ್ತಿದ್ದರು. ಅಮೆರಿಕೆಯ ಇತರ ರಾಜ್ಯಗಳಲ್ಲಿ ಚದುರಿದ್ದ ಆಮಿಶ್ ಕುಟುಂಬಗಳು, ಅಂದು ಪ್ರವರ್ಧಮಾನದಲ್ಲಿದ್ದ ರೈಲು ಸಂಚಾರದ ಉತ್ತಮ ಸೌಲಭ್ಯವನ್ನು ಉಪಯೋಗಿಸಿಕೊಂಡು ತಮ್ಮ ಕುಟುಂಬಗಳೊಡನೆ ಉತ್ತಮವಾದ ಸಂಬಂಧಗಳನ್ನು ಕಲ್ಪಿಸಿಕೊಂಡಿದ್ದರು. ಅನೇಕ ಆಮಿಶ್ ತರುಣರು ಸಾಹಸ ಜೀವನವನ್ನರಸಿ, ಕ್ಯಾಲಿಫೋರ್ನಿಯಾ ಕಡೆಗೂ ಸಂಚರಿಸಿ ಅಲ್ಲಿಯ ಚಿನ್ನದ ಗಣಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಬ್ರಿಟಿಶ್ ಕೊಲಂಬಿಯಾ, ಮಾಂಟಾನಾ, ಐಡಾಹೋ ರಾಜ್ಯಗಳಲ್ಲೂ ಬೀಡು ಬಿಟ್ಟಿದ್ದ ಆಮಿಶ್ ನಿಜಕ್ಕೂ ಸಾಹಸಿಗಳೇ! ತಮ್ಮ ನೆರೆಹೊರೆಯವರೊಂದಿಗೆ ಸ್ನೇಹ-ಸೌಹಾರ್ದತೆಯಿಂದ ವರ್ತಿಸುತ್ತಿದ್ದ ಆಮಿಶ್ ಜನಾಂಗ, ಸಹಿಷ್ಣುತೆಯ ಸಾಕಾರದಂತಿದ್ದರು. ಸ್ಥಳೀಯ ಇಂಡಿಯನ್ ಜನಾಂಗದವರು, ಆಮಿಶ್ ಜನಗಳನ್ನು ಗೌರವದಿಂದ ಕಾಣುತ್ತಿದ್ದರಂತೆ. ಆಮಿಶ್ ಚರ್ಚುಗಳು ಶಿಸ್ತನ್ನು ಕುಟುಂಬದಲ್ಲಿ ಕಟ್ಟುನಿಟ್ಟಾಗಿ ಅಳವಡಿಸಲು ಆಗ್ರಹಿಸುತ್ತಿದ್ದರು. ಮಕ್ಕಳ ತಪ್ಪು ನಡವಳಿಕೆಗೆ ಅವರ ತಂದೆತಾಯಿಯರನ್ನು ತರಾಟೆಗೆ ತೆಗೆದುಕೊಂಡು ದಂಡಿಸುತ್ತಿದ್ದ ಪರಿಪಾಠವಿತ್ತು. ಕೇವಲ ವಯಸ್ಕರನ್ನು ಬ್ಯಾಪ್ಟಿಸಮ್

ಧಾರ್ಮಿಕ ವಿಧಿಗೆ ಒಳಪಡಿಸುತ್ತಿದ್ದ ಇವರ ಚರ್ಚಿನಲ್ಲಿ ಮಕ್ಕಳು ಮತ್ತು ಹದಿಹರಯದವರನ್ನು ಸೇರಿಸುತ್ತಿರಲಿಲ್ಲ. ತಂದೆ ತಾಯಿಯರ ಅನುಮತಿ ಇಲ್ಲದೆ ಮಕ್ಕಳು ಯಾವ ಕಾರ್ಯವನ್ನೂ ನಡೆಸುವಂತಿರಲಿಲ್ಲ. ಅವರ ಉಡುಗೆ-ತೊಡುಗೆಗಳು ಸಾಂಪ್ರದಾಯಿಕವಾಗಿರಬೇಕು, ನೂತನ ಉಡುಪುಗಳನ್ನು ಮಕ್ಕಳಿಗೆ ತೊಡಿಸುವುದನ್ನು ಚರ್ಚ್ ಒಪ್ಪುತ್ತಿರಲಿಲ್ಲ. ಹದಿಹರಯದ ಪ್ರಣಯ ವ್ಯವಹಾರಗಳನ್ನೂ ಅನುಮೋದಿಸುತ್ತಿರಲಿಲ್ಲ; ಈ ವ್ಯವಹಾರಗಳು ತಂದೆತಾಯಿಯರ ಕಣ್ಣೆದುರಿನಲ್ಲಿ ನಡೆದು, ಅದನ್ನು ಅವರು ತಡೆಯದಿದ್ದಲ್ಲಿ, ಚರ್ಚ್ಗಳು ಆ ಮಾತಾಪಿತೃಗಳನ್ನು ದಂಡಿಸುವ ಸ್ವಾತಂತ್ರ್ಯವನ್ನು ಹೊಂದಿದ್ದವು. ಹಾಗಾಗಿ ಆಮಿಶ್ ಸಮುದಾಯದಲ್ಲಿ, ಕುಟುಂಬಗಳ ವ್ಯವಹಾರಗಳಲ್ಲಿ ತಂದೆತಾಯಿಗಳಿಗಿಂತ, ಚರ್ಚುಗಳು ಹೆಚ್ಚಿನ ಅಧಿಕಾರ ಹೊಂದಿದ್ದವು.

19ನೆಯ ಶತಮಾನದ ಆರಂಭದಲ್ಲಿ, ಅಮೆರಿಕೆಯಲ್ಲಿ ಜರಗುತ್ತಿದ್ದ ತೀವ್ರವಾದ ಸಾಂಸ್ಕೃತಿಕ ಬದಲಾವಣೆಗಳು ಆಮಿಶ್ ಜನಾಂಗವನ್ನು ತಟ್ಟದೆ ಇರಲಿಲ್ಲ. ಜನಸಾಮಾನ್ಯರಲ್ಲಿ ಹೆಚ್ಚುತ್ತಿದ್ದ ವರಮಾನವು, ಜನಗಳ ಉಡುಪು, ಮತ್ತು ಜೀವನ ಶೈಲಿಯ ಮೇಲೆ ತನ್ನ ಪರಿಣಾಮವನ್ನು ಬೀರುತ್ತಿತ್ತು. ಮೊಳೆಯುತ್ತಿದ್ದ ಕೊಳ್ಳುಬಾಕತನ ಅಮೆರಿಕನ್ ಸಮಾಜವನ್ನು ಆವರಿಸುತ್ತಿದ್ದ ಸಮಯ.

ಈ ಬದಲಾವಣೆ ಆಮಿಶ್ ಸಮುದಾಯದ ಮೇಲೂ ತನ್ನ ಗಾಢವಾದ ಪರಿಣಾಮ ಬೀರಲಾರಂಭಿಸಿತು. ಆಕರ್ಷಕ ಶೈಲಿಯ ಉಡುಗೆ-ತೊಡುಗೆ, ಮನೆಯ ಪೀಠೋಪಕರಣ, ನೂತನ ಕುದುರೆಗಾಡಿಗಳು ಆಮಿಶ್ ಜನಗಳನ್ನೂ ತನ್ನ ಜಾಲದಲ್ಲಿ ಹಿಡಿದಿಡಲು ಪ್ರಾರಂಭಿಸಿತು. ಸರಳ ಮತ್ತು ಸಾದಾ ಕ್ರಿಶ್ಚಿಯನ್ ಜೀವನ ಶೈಲಿಯನ್ನು ಮಾತ್ರ ತನ್ನ ಸದಸ್ಯತ್ವಕ್ಕೆ ಬೋಧಿಸುತ್ತಿದ್ದ ಚರ್ಚಿನ ಪಾದ್ರಿಗಳು, ತಮ್ಮ ಸಮುದಾಯದ ತರುಣ ಪೀಳಿಗೆಯನ್ನು ಈ ದಿಶೆಯಲ್ಲಿ ನಡೆಸಲು ತಿಂಗಳುಗಟ್ಟಲೆ ಅವರಿಗೆ ಉಪದೇಶ ನೀಡಲಾರಂಭಿಸಿದರು. ಆದರೆ, ಬದಲಾಗುತ್ತಿದ್ದ ಅಮೆರಿಕನ್ ಸಮಾಜವು ಆಮಿಶ್ ಸಮುದಾಯವನ್ನು ಪ್ರಗತಿಪರ ನೂತನ ಚಿಂತನೆ ಮತ್ತು ಸಂಪ್ರದಾಯವಾದಿ ಗುಂಪುಗಳಾಗಿ ವಿಭಜಿಸಿತು. ಆಧುನಿಕ ಶಾಲಾ ಶಿಕ್ಷಣವನ್ನು ತಿರಸ್ಕರಿಸುತ್ತಿದ್ದ ಸಂಪ್ರದಾಯವಾದಿಗಳನ್ನು ಎದುರಿಸಿ, ಪ್ರಗತಿಪರರು ತಮ್ಮ ಮಕ್ಕಳನ್ನು ಭಾನುವಾರದ ಶಾಲೆಗಳಿಗೆ ಕಳಿಸಲಾರಂಭಿಸಿದರು. ಪ್ರಗತಿಪರರು ದುಬಾರಿ ಕುದುರೆಗಾಡಿಗಳಲ್ಲಿ ಸವಾರಿ ಮಾಡುವುದನ್ನು ಅನುಮೋದಿಸಿದರೆ, ಸಂಪ್ರದಾಯಿಗಳು ಅದನ್ನು ಸಂಪೂರ್ಣವಾಗಿ ಬಹಿಷ್ಕರಿಸಿದರು. ಪ್ರಗತಿಪರ ದಳದ ಸುಧಾರಣೆಗಳು ಅಷ್ಟಕ್ಕೇ ನಿಲ್ಲಲಿಲ್ಲ. ನಿಧಾನವಾಗಿ ಹಲವಾರು ಆಧುನಿಕ ಸಲಕರಣೆಗಳನ್ನು ಬಳಸಲಾರಂಭಿಸಿದಾಗ, ಈ ಎರಡೂ ಪಂಗಡಗಳ ನಡುವಿನ ಭಿನ್ನಾಭಿಪ್ರಾಯಗಳು ಆಳವಾಗಿ, ವೈಮನಸ್ಯ ಉಂಟಾಯಿತು. ಕಡೆಯಲ್ಲಿ ಇಬ್ಬರ ನಡುವೆ ಹಾಗೂ ಹೀಗೂ ಸಂಧಾನವಾಗಿತ್ತು. ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತಿದ್ದ ಆಮಿಶ್ ಜನಾಂಗ ಸರ್ಕಾರಗಳು ಕಿರುಕುಳ ಕೊಡುವ ದಳ್ಳಾಳಿಗಳು ಎನ್ನುತ್ತಿದ್ದರು. ಸರ್ಕಾರಿ ಅಧಿಕಾರ, ನ್ಯಾಯಮಂಡಲಿಯ ಸೇವೆ ಮತ್ತು ಮತದಾನವನ್ನು ಸಂಪೂರ್ಣವಾಗಿ

ಬಹಿಷ್ಕರಿಸಿದ್ದರು. ಆದಾಗ್ಯೂ, ಹಲವು ಪ್ರಗತಿಪರ ಚಿಂತನೆಯ ಆಮಿಶ್ ಸದಸ್ಯರು ಕೇವಲ ಪಟ್ಟಣಗಳಲ್ಲಿ ಸೌಲಭ್ಯಗಳ ಮೇಲ್ವಿಚಾರಣೆ, ಬಡವರ ಸೇವೆ ಮತ್ತು ಶಾಲೆಗಳು, ಆದಾಯತೆರಿಗೆ ವಿಭಾಗಗಳಲ್ಲಿ ಮಾತ್ರ ಕೆಲಸ ಮಾಡುತ್ತಿದ್ದರು. ಹಿಂದೆ, ಅಬ್ರಹಾಮ್ ಲಿಂಕನ್‌ರ ಅಧ್ಯಕ್ಷ ಚುನಾವಣೆಯನ್ನು ಬೆಂಬಲಿಸಿದ್ದ ಆಮಿಶ್ ಸಮುದಾಯ, ಗುಲಾಮಿ ಪದ್ಧತಿಯನ್ನು ವಿರೋಧಿಸುತ್ತಿದ್ದ ಲಿಂಕನ್ ನಿಲುವನ್ನು ಬೆಂಬಲಿಸಿತ್ತು. 19ನೆಯ ಶತಮಾನದ ಕಡೆಯ ಅವಧಿಯಲ್ಲಿ ಆಮಿಶ್ ಮೆನ್ನೋನೈಟ್ ಸಮುದಾಯದವರು ಇನ್ನೂ ತಮ್ಮ ಚರ್ಚುಗಳನ್ನು ನಿರ್ಮಿಸಿ ಅವನ್ನು ಬೆಳೆಸುವುದರಲ್ಲೇ ನಿರತರಾಗಿದ್ದರು. ರಾಜ್ಯಗಳ ಸರ್ಕಾರಗಳು ಬ್ಯಾಂಕ್, ವಿಶ್ವವಿದ್ಯಾಲಯ ಮತ್ತು ವ್ಯಾಪಾರಿ ಸಂಸ್ಥೆಗಳನ್ನು ವ್ಯವಸ್ಥಿತಗೊಳಿಸುತ್ತಿದ್ದಾಗ, ದಾನ-ದತ್ತಿಗಳ ಸಂಸ್ಥೆಗಳು ಒಳ-ನಗರಗಳ ವಸಾಹತುಗಳನ್ನು ನಿರ್ಮಿಸಲಾರಂಭಿಸಿದ್ದರು. ಈ ಹೊಸ ಬೆಳವಣಿಗೆಯ ಕಾರ್ಯಗಳ ಪ್ರಭಾವ ಆಮಿಶ್ ಚರ್ಚುಗಳಿಗೂ ತಟ್ಟಿ, ಅವರೂ ಕೂಡಾ ತಮ್ಮದೇ ಆದ ವಿದ್ಯಾ ಸಂಸ್ಥೆಗಳನ್ನು ಕಟ್ಟಲಾರಂಭಿಸಿದ್ದರು.

ಹೀಗೆ ಪ್ರಗತಿಪರ ಹಾದಿಯಲ್ಲಿ ಮುನ್ನಡೆಯುತ್ತಾ ಆಮಿಶ್ ಜನಾಂಗ ಪಬ್ಲಿಕ್ ಶಾಲೆಗಳು, ಸ್ಥಳೀಯ ಪ್ರಾಥಮಿಕ ಶಾಲೆಗಳ ದೈನಂದಿನ ವ್ಯವಹಾರಗಳಲ್ಲೂ ಭಾಗವಹಿಸಲಾರಂಭಿಸಿದ್ದರು. ಕ್ರಮೇಣ ಆಮಿಶ್ ಸಮುದಾಯದ ಸದಸ್ಯರು ಶಾಲೆಗಳಲ್ಲಿ ಶಿಕ್ಷಕರಾಗಿ ದುಡಿಯಲಾರಂಭಿಸಿದರು. ಉನ್ನತ ಶಿಕ್ಷಣವನ್ನು ಅಷ್ಟಾಗಿ ಪ್ರೋತ್ಸಾಹಿಸದ ಆಮಿಶ್, ಕ್ರಮೇಣ ಪ್ರಾಥಮಿಕ ಶಾಲೆಯ ನಂತರದ ಶಿಕ್ಷಣಕ್ಕೆ ಬೆಂಬಲ ನೀಡಿದ್ದು ಕಂಡುಬರುತ್ತದೆ. ಲೌಕಿಕ ಜ್ಞಾನಕ್ಕೆ ಆಮಿಶ್ ಜನ ಅಷ್ಟಾಗಿ ಬೆಲೆ ಕೊಡುತ್ತಿರಲಿಲ್ಲ. ಆದಾಗ್ಯೂ, 20ನೆಯ ಶತಮಾನದ ಅಂತ್ಯದ ವೇಳೆಗೆ, ಆಮಿಶ್ ಸಮುದಾಯದ ತರುಣರು ಗಣನೀಯ ಸಂಖ್ಯೆಯಲ್ಲಿ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ದಾಖಲಾತಿಯಾಗಿದ್ದರು. 20ನೆಯ ಶತಮಾನದ ವೇಳೆಗೆ, ಆಮಿಶ್ ಸಮುದಾಯಗಳ ನಡುವೆ ಸೌಹಾರ್ದತೆ ಮತ್ತು ಸಹಕಾರಗಳು ಹೆಚ್ಚಿದವು. ಇಷ್ಟಾದರೂ, ತರುಣ ಪೀಳಿಗೆ ಮತ್ತು ಹಿರಿಯರ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಅನೇಕ ಸ್ಥಳಗಳಲ್ಲಿ ಆಮಿಶ್ ಮೆನ್ನೋನೈಟ್ಸ್, ಇತರ ಮೆನ್ನೋನೈಟ್ಸ್ ಪಂಥದವರಿಗಿಂತ ಹೆಚ್ಚು ಸಂಪ್ರದಾಯವಾದಿಗಳಾಗಿದ್ದು, ಇನ್ನೂ ಹಳೆಯ ರೀತಿಯ ಉಡುಪು ಧರಿಸುತ್ತಾ, ಗಡ್ಡವನ್ನು ನೀಳವಾಗಿ ಬೆಳೆಸುತ್ತಿದ್ದರು. ತಮ್ಮ ಆಚಾರಗಳಿಗೆ ಅಡ್ಡಿ ಬಂದವರನ್ನು ಬಹಿಷ್ಕರಿಸುವ ಸಂಪ್ರದಾಯವನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸುತ್ತಲೇ ಇದ್ದರು. ಪ್ರಗತಿಪರ ಆಮಿಶ್ ತರುಣರಿಗೆ ವಿದ್ಯಾಸಂಸ್ಥೆಗಳು, ಆಧುನಿಕ ವ್ಯಾಪಾರ ವ್ಯವಹಾರಗಳ ಬಗ್ಗೆ ಒಲವು ಬೆಳೆಯುತ್ತಿತ್ತು. ಸಂಪ್ರದಾಯವಾದಿ ಮತ್ತು ಪ್ರಗತಿಪರರ ನಡುವೆ ಸ್ಥಳೀಯವಾಗಿ ಒಗ್ಗಟ್ಟು ಸ್ವಲ್ಪಮಟ್ಟಿಗಿದ್ದರೂ, ಸಂಘರ್ಷಗಳೂ ನಡೆಯುತ್ತಿದ್ದವು. ಉತ್ತರ ಅಮೆರಿಕೆಯಲ್ಲಿ ಆಮಿಶ್ ಮೆನ್ನೋನೈಟ್ಸ್ ತಮ್ಮ ಸಮುದಾಯವನ್ನು ಬೆಳೆಸುತ್ತಿದ್ದ ಕಾಲದಲ್ಲಿ, ಯೂರೋಪಿನಲ್ಲಿ ಆಮಿಶ್ ಮೆನ್ನೋನೈಟ್ಸ್ ಸಮುದಾಯ ಹೆಚ್ಚೂ ಕಡಿಮೆ ನಶಿಸಿಹೋಯಿತು.

'ನಾವು ದೃಢಸಂಕಲ್ಪವುಳ್ಳವರು, ಎಲ್ಲಾ ವಿಷಯಗಳಲ್ಲೂ ಮತ್ತು ಪರಿಸ್ಥಿತಿಯಲ್ಲೂ ಸರಳತೆ ಮತ್ತು ಏಕರೂಪತೆಗಾಗಿ ಶ್ರಮಿಸುತ್ತೇವೆ' ಎನ್ನುವುದು ಸಂಪ್ರದಾಯವಾದಿ ಆಮಿಶ್

(Old Order Amish) ಜನಗಳ ಮೂಲ ತತ್ವವಾಗಿತ್ತು. 20 ಮತ್ತು 21ನೆಯ ಶತಮಾನದಲ್ಲೂ, ಸಾದಾ ಉಡುಪು ಧರಿಸುವ ಈ ತಂಡದ ಸದಸ್ಯರು, ಇಂದಿಗೂ ಉನ್ನತ ಶಿಕ್ಷಣವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಈಗಲೂ ಇವರು ಕಾರು, ರೈಲು, ವಿಮಾನಗಳಲ್ಲಿ ಪ್ರಯಾಣಿಸುವುದಿಲ್ಲ. 'ಬಗ್ಗಿ' ಎಂದು ಕರೆಯಲ್ಪಡುವ ತಮ್ಮ ಕುದುರೆಗಾಡಿಗಳಲ್ಲಿ ಕುಳಿತು ಪ್ರಯಾಣಿಸುವ ದೃಶ್ಯವನ್ನು ಪೆನ್ಸಿಲ್ವೇನಿಯಾದ ಲ್ಯಾಂಕೆಸ್ಟರ್ ಪಟ್ಟಣದಲ್ಲಿ ಕಾಣಬಹುದು. ವೈಯಕ್ತಿಕ ಸಂಪರ್ಕ ಮತ್ತು ಭೇಟಿಗಳ ಮೂಲಕ ತಮ್ಮ ಸಮುದಾಯದೊಡನೆ ಸಂಬಂಧವನ್ನು ನಿಭಾಯಿಸುತ್ತಿದ್ದಾರೆ. ಇಷ್ಟೆಲ್ಲಾ ಬದಲಾವಣೆಗಳ ನಡುವೆಯೂ, 20ನೆಯ ಶತಮಾನ ಆಮಿಶ್ ಸಮುದಾಯದ ಪಾಲಿಗೆ ಬಹಳ ಕ್ರಿಯಾತ್ಮಕವಾಗಿತ್ತು. ಎರಡನೆಯ ಮಹಾಯುದ್ಧದ ನಂತರ ಅಮೆರಿಕನ್ನರು ತಮ್ಮ ದೃಷ್ಟಿಯನ್ನು ದೇಶದತ್ತ ಹರಿಸಲು ಶುರುಮಾಡಿದ್ದರು. ಅಮೆರಿಕೆಯ ಪಟ್ಟಣಗಳು ಬೆಳೆಯುತ್ತಿದ್ದ ವಿರಾಮ ಸಮಯ ಮತ್ತು ಪ್ರವಾಸಿಗರ ಡಾಲರುಗಳಲ್ಲಿ ತಮ್ಮ ತಮ್ಮ ಪಾಲನ್ನು ಬಾಚಿಕೊಳ್ಳುವ ಪ್ರಯತ್ನದಲ್ಲಿದ್ದರು. ಪೆನ್ಸಿಲ್ವೇನಿಯಾ ರಾಜ್ಯದ ವಾಣಿಜ್ಯ ವಿಭಾಗ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಜಾಹಿರಾತೊಂದನ್ನು ಸಿದ್ಧಪಡಿಸಿ, ಅದರಲ್ಲಿ ಆಮಿಶ್ ಜನಗಳು ಪ್ರಯಾಣಿಸುವ 'ಬಗ್ಗಿ ಕುದುರೆಗಾಡಿಯ' ಚಿತ್ರವನ್ನು ಸೇರಿಸಿ, ಅದಕ್ಕೆ 'ಪೆನ್ಸಿಲ್ವೇನಿಯಾದ ಸರಳ-ಸಾದಾ ಜನ' ಎನ್ನುವ ಶೀರ್ಷಿಕೆ ಕೊಟ್ಟರು. ಈ ಜಾಹಿರಾತಿನಲ್ಲಿ ನೇರವಾಗಿ ಆಮಿಶ್ ಜನರನ್ನು ಪ್ರಸ್ತಾಪಿಸದಿದ್ದರೂ, ಅದು ಸ್ಪಷ್ಟವಾಗಿ ಸಾಂಪ್ರದಾಯಿಕ ಜನಗಳು ಕುಟುಂಬದ ಪ್ರತಿಯೊಂದು ಪ್ರವಾಸದಲ್ಲೂ ಭಾಗಿಯಾಗ-ಬೇಕೆನ್ನುವ ಮಾತನ್ನು ಪರೋಕ್ಷವಾಗಿ ಸೂಚಿಸುತ್ತಿತ್ತು. ಮಹಾಯುದ್ಧಾನಂತರದ ಜಾಹಿರಾತುಗಳು, ನಿರ್ಮಾಣವಾಗುತ್ತಿದ್ದ ಅಂತರರಾಜ್ಯ ಹೆದ್ದಾರಿಗಳು, ಪರಮಾಣು ಸ್ಥಾವರಗಳು, ಟೆಲಿವಿಶನಿನಂತಹ ಮನೋರಂಜನಾ ಸಾಧನಗಳು, ಈ ಸಮುದಾಯದ ನಿಲುವು, ಧಾರ್ಮಿಕ ಸಿದ್ಧಾಂತಗಳನ್ನು ಅಲುಗಾಡಿಸಿದ್ದವು. ಇಂತಹ ಸಂಪ್ರದಾಯೀ ಆಮಿಶ್ ವಸಾಹತಿನಲ್ಲಿ ವ್ಯವಸಾಯ ಮಾಡುತ್ತಾ ತನ್ನ ಜೀವನ ಕಳೆಯುತ್ತಿದ್ದ ಜಾನಥನ್ ಫಿಶರನ ಮನಸ್ಸಿನಲ್ಲಿ, ಪ್ರಪಂಚವನ್ನು ಸುತ್ತಾಡಬೇಕೆಂಬ ಬಲವಾದ ಆಕಾಂಕ್ಷೆಯಿತ್ತು. 1908ರಲ್ಲೇ ಹಡಗಿನಲ್ಲಿ ಯೂರೋಪಿಗೆ ಪ್ರವಾಸ ಹೋಗಿದ್ದ ಫಿಶರ್, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಸ್ವಿಟ್ಝರ್ಲ್ಯಾಂಡ್, ಡೆನ್ಮಾರ್ಕ್, ಹಾಲೆಂಡ್ ದೇಶಗಳಲ್ಲಿ ಸುತ್ತಿ ಬಂದಿದ್ದನು. ವಾಪಸ್ಸಾದ ನಂತರ, ಸುಮಾರು 346 ಪುಟಗಳ ಪುಸ್ತಕವನ್ನು 'A Trip to Europe and Facts Gleaned on the Way' ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದ. ಅವನ ಈ ಪುಸ್ತಕದಲ್ಲಿ ಹಳೆಯ ಮತ್ತು ತರುಣ ಪೀಳಿಗೆಯರಿಬ್ಬರಿಗೂ ಆಸಕ್ತಿಪೂರ್ಣವಾದ ವಿಷಯಗಳಿದ್ದವು.

21ನೆಯ ಶತಮಾನದಲ್ಲಿ ಈ ಸಮುದಾಯದ ತರುಣ ಪೀಳಿಗೆಯವರು, ತಮ್ಮ ಕುಟುಂಬದವರನ್ನು ಭೇಟಿಮಾಡಲು ರೈಲುಗಳಲ್ಲಿ ಪ್ರಯಾಣಿಸುತ್ತಾರೆ. ಇತರ ರಾಜ್ಯಗಳಲ್ಲಿರುವ ಆಮಿಶ್ ಸಮುದಾಯದ ವಸಾಹತುಗಳಲ್ಲಿ ಕೆಲಸಗಳಿಸಿ ಅಲ್ಲಿ ಒಂದೆರಡು ವರ್ಷಗಳು ನೆಲೆಸುವ ತರುಣ ಪೀಳಿಗೆ ತಮ್ಮ ಸ್ನೇಹಿತರು ಮತ್ತು ಪರಿಚಿತರೊಂದಿಗೆ ಅವರ ಸಂಪರ್ಕದ

ವಿವರಗಳನ್ನು ತಮ್ಮ ಆಟೋಗ್ರಾಫ್ ಪುಸ್ತಕಗಳಲ್ಲಿ ದಾಖಲೆ ಇಡುವ ಪದ್ಧತಿ ಇದೆ. ಮದುವೆಗಳು ಹಾಗೂ ಇತರ ಸಮಾರಂಭಗಳಲ್ಲಿ ನಡೆಯುವ ಆಚರಣೆಗಳು ಸಾಂಪ್ರದಾಯಿಕ ಆಮಿಶ್ ಸಮುದಾಯದಲ್ಲಿ ನಡೆಯುವ ವಿಶೇಷ ಆಚರಣೆಗಳು. ಇಂದಿಗೂ ಐಶಾರಾಮದ ಖರ್ಚು-ವೆಚ್ಚಗಳನ್ನು ತ್ಯಜಿಸಲು ಪ್ರಯತ್ನಿಸುವ ಆಮಿಶ್ ಜನಾಂಗದಲ್ಲಿ, ಎಲ್ಲೋ ಕೆಲವರು ಹಾಲಿಡೇ ಗ್ರೀಟಿಂಗ್ಸ್ ಕಾರ್ಡ್ ಮತ್ತು ಕ್ರಿಸ್ಮಸ್ ಟ್ರೀಯನ್ನು ಅಲಂಕರಿಸಿ ಸಂಭ್ರಮಿಸುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ದೈನಂದಿಕವಾಗಿ ಹೊಲ, ತೋಟಗಳಲ್ಲಿ ಶ್ರಮಿಸುವ ಇವರು, ವರಮಾನಕ್ಕಾಗಿ ಡೈರಿ, ಹಸು, ಕುರಿ ಮತ್ತು ಕೋಳಿ ಸಾಕಣೆಯನ್ನೂ ನಡೆಸುತ್ತಾರೆ. ಮನೆಯ ಹೆಂಗಸರ ದಿನಗಳು ಅಡುಗೆ, ಬಟ್ಟೆ ಒಗೆಯುವ, ಹೊಲೆಯುವ ಕೆಲಸಗಳಲ್ಲೇ ಕಳೆಯುತ್ತದೆ. ಹವಾಮಾನದ ತೀವ್ರತೆಗಳು, ಆರ್ಥಿಕ ಅನಿಶ್ಚಿತತೆಗಳ ನಡುವೆ ಸೇರಿರುವ ಇವರ ಶ್ರಮದಾಯಕ ಜೀವನದಲ್ಲಿ ವಿವಿಧ ವಿನೋದಾವಳಿಗಳಿಗೆ ಅವಕಾಶ ಕಡಿಮೆ. ಸಾಮಾನ್ಯವಾಗಿ ಆಧುನಿಕ ಉಪಕರಣಗಳನ್ನು ಬಳಸದ ಆಮಿಶ್ ರೈತರು, ಈಗ ನೂತನ ವ್ಯವಸಾಯ ತಾಂತ್ರಿಕ ಸಲಕರಣೆಗಳಾದ ಹುಲ್ಲಿನ ಮೆಕ್ಯಾನಿಕಲ್ ಲೋಡರುಗಳು, ಧಾನ್ಯ ಕುಯಿಲು ಯಂತ್ರಗಳು ಹಾಗೂ ಧಾನ್ಯ ಬಡಿಯುವ ಸಲಕರಣೆಗಳನ್ನು ಉಪಯೋಗಿಸು-ತ್ತಿದ್ದಾರೆ.

ಬಹುತೇಕ ಅಮೆರಿಕನ್ ಜನತೆ ಆಮಿಶ್ ಸಮುದಾಯವನ್ನು ಒಂದು ಹಳೆಯ ಸಂಪ್ರದಾಯಕ್ಕೆ ಜೋತುಬಿದ್ದ ಅವೈಜ್ಞಾನಿಕ ಮತ್ತು ಐತಿಹಾಸಿಕ ನಾಡಾಡಿ ಸಮುದಾಯವೆಂದು ಹಾಸ್ಯ ಮಾಡಿದರೂ, ದೇಶದ ಪತ್ರಿಕೆಗಳು ಮತ್ತು ಮಾಧ್ಯಮದವರು ಇವರನ್ನು ನಿಪುಣ ರೈತರೆಂದು ಹಾಡಿ ಹೊಗಳುತ್ತಾರೆ. ಆಮಿಶ್ ಸಂಪ್ರದಾಯವಾದಿಗಳ ದೃಷ್ಟಿಯಲ್ಲಿ, ಸಾಂಪ್ರದಾಯಿಕ ಜೀವನಕ್ರಮವು ಒಂದು ವಿಶಿಷ್ಟವಾದ ವಿಶ್ವ ದೃಷ್ಟಿಕೋನ ಮತ್ತು ಮೌಲ್ಯಗಳ ಗುಚ್ಛದ ಒಂದು ಅಭಿವ್ಯಕ್ತಿಯಾಗಿದೆ, ಹಾಗಾಗಿ ಅವರು ಕೊಳ್ಳುಬಾಕತನದ ಕಡೆಗೆ ವಾಲುತ್ತಿರುವ ಆಧುನಿಕ ತಂತ್ರಜ್ಞಾನಗಳನ್ನು ಆಧರಿಸಿದ ಜೀವನಶೈಲಿಯನ್ನು ನಿಷೇಧಿಸುತ್ತಾರೆ. ವ್ಯಕ್ತಿಸ್ವಾತಂತ್ರ್ಯವೇ ಪರಮ ಪ್ರಧಾನವಾದದ್ದು; ವ್ಯಕ್ತಿಗಳ ಸ್ವಾಯತ್ತತೆಯಿಂದಲೇ ಮಾನವ ಜೀವನ ಶ್ರೀಮಂತವಾಗಲು ಸಾಧ್ಯ ಎನ್ನುವುದೇ ಸಂಪ್ರದಾಯವಾದಿ ಆಮಿಶ್ ಜನಗಳ ಜೀವನ ದೃಷ್ಟಿ. ಎರಡು ಮಹಾಯುದ್ಧಗಳಲ್ಲೂ ಭಾಗವಹಿಸದೆ ತಮ್ಮ ಅಹಿಂಸೆಯ ನಿಯಮಗಳನ್ನು ಪಾಲಿಸಿದ್ದ ಆಮಿಶ್ ತರುಣರು, ಇಂದಿಗೂ ಅಮೆರಿಕೆಯ ಸೇನೆಯಲ್ಲಿ ಭರ್ತಿಯಾಗಲು ಒಪ್ಪುವುದಿಲ್ಲ. ತಮ್ಮ ವಸಾಹತುಗಳ ನೆರೆಹೊರೆಯಲ್ಲಿ ಹೊಸ ಶಾಲೆಗಳ ಕಟ್ಟಡದ ನಿರ್ಮಾಣಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಲೇ ಇರುತ್ತಾರೆ.

2006ರಲ್ಲಿ ಪೆನ್ಸಿಲ್ವೇನಿಯಾದಲ್ಲಿ ಇವರ ಶಾಲೆಗೆ ನುಗ್ಗಿ ಸುಮಾರು ಹತ್ತು ಹುಡುಗಿಯರನ್ನು ತನ್ನ ಗುಂಡಿನಿಂದ ಘಾಸಿಗೊಳಿಸಿದ್ದ ಪ್ರಕರಣವು, ಅಹಿಂಸೆಯ ಪ್ರವಾದಿಗಳಾದ ಆಮಿಶ್ ಸಮುದಾಯವನ್ನು ಅಲ್ಲೋಲಕಲ್ಲೋಲಗೊಳಿಸಿತ್ತು. ಆದರೂ, ಈ ಅಪರಾಧಗೈದ ತರುಣನ ಕುಟುಂಬಕ್ಕೆ ತಮ್ಮ ಸಾಂತ್ವನ ನೀಡಿದ್ದ ಇವರ ಸಹಿಷ್ಣುತೆ, ಇಂದಿನ ಸಮಾಜದಲ್ಲಿ ಬಹಳ ಅಪರೂಪದ ವಿಷಯ. ಮರಗೆಲಸದಲ್ಲಿ ಅತ್ಯಂತ ನಿಷ್ಣಾತರಾದ

ಆಮಿಶ್ ಜನರಿಗೆ, ಈಗ ಆಧುನಿಕ ಮರಗೆಲಸದ ಉಪಕರಣಗಳನ್ನು ಉಪಯೋಗಿಸಲು ಅವರ ಚರ್ಚಿನ ಅನುಮತಿಯಿದೆ. ಅಮೆರಿಕನ್ ಸಮಾಜದಲ್ಲಿ ಆಮಿಶ್ ಜೀವನ ಶೈಲಿಯ ಬಗ್ಗೆ ಹೆಚ್ಚುತ್ತಿರುವ ಆಸಕ್ತಿ, ಆಮಿಶ್ ವಸಾಹತುಗಳನ್ನು ಪ್ರವಾಸಿಗರ ಆಕರ್ಷಣೆಯಾಗಿಸಿದೆ. ಆಮಿಶ್ ಜನಜೀವನವನ್ನಾಧರಿಸಿ ಬರೆದ ಪುಸ್ತಕಗಳು, ನಿರ್ಮಿಸಿದ ಚಲನಚಿತ್ರಗಳು ಜನಪ್ರಿಯವಾಗುತ್ತಿವೆ. ಪೆನ್ಸಿಲ್ವೇನಿಯಾದ ಲ್ಯಾಂಕೆಸ್ಟರ್ ಪ್ರಾಂತದಲ್ಲಿರುವ ಆಮಿಶ್ ವಸಾಹತುಗಳು, ಮಧ್ಯಮವರ್ಗದ ಪ್ರವಾಸಿಗರಿಗೆ, ಅವರ ಜೀವನಶೈಲಿಯ ಬಗ್ಗೆ ಇರುವ ಕುತೂಹಲವನ್ನು ತಣಿಸುವ ಗಮ್ಯಸ್ಥಾನಗಳಾಗಿವೆ. 21ನೆಯ ಶತಮಾನದ ಆರಂಭದ ವೇಳೆಗೆ, ಸುಮಾರು 11 ಮಿಲಿಯನ್ ಪ್ರವಾಸಿಗರು ಪ್ರತಿ ವರ್ಷ ಪೆನ್ಸಿಲ್ವೇನಿಯಾ, ಒಹಾಯೋ ಮತ್ತು ಇಂಡಿಯಾನಾ ರಾಜ್ಯಗಳಲ್ಲಿರುವ ಆಮಿಶ್ ಸಮುದಾಯಗಳಿಗೆ ಹಿಂಡುಹಿಂಡಾಗಿ ಬಂದಿದ್ದರು. ಇತ್ತೀಚೆಗೆ ಆಮಿಶ್ ಕುರಿತಾದ ಬ್ರಾಡ್ವೇ ಸಂಗೀತ ನಾಟಕಗಳ ಪ್ರದರ್ಶನಗಳೂ ಕೂಡಾ ಯಶಸ್ವಿಯಾಗಿ ನಡೆಯುತ್ತಿದ್ದು, ಆಮಿಶ್ ಜೀವನ ಕುರಿತಾದ ಈ ಪ್ರದರ್ಶನಗಳಲ್ಲಿ ಅವರ ಚರ್ಚುಗಳ ಬಗ್ಗೆ ಟೀಕೆಗಳಿದ್ದರೂ ಅದನ್ನು ಯಾರೂ ಆಕ್ಷೇಪಿಸುತ್ತಿಲ್ಲ. 2004 ಮತ್ತು 2012ರಲ್ಲಿ 'Amish in the City, Breaking Amish, Amish Mafia' ಎನ್ನುವ ರಿಯಾಲಿಟಿ ಶೋಗಳಲ್ಲಿ ಆಮಿಶ್ ಜನಾಂಗದವರ ಬಗ್ಗೆ ಹಾಸ್ಯಭರಿತ ಕಾರ್ಯಕ್ರಮಗಳನ್ನು ಪ್ರಸಾರಿಸಿದ್ದರೂ, ಅದರ ಬಗ್ಗೆ ಯಾವ ಗಂಭೀರವಾದ ಆಕ್ಷೇಪಣೆಗಳೂ ಏಳಲಿಲ್ಲ. ಈ ಟಿವಿ ಶೋಗಳಿಂದ ಸದಾ ದೂರವಾಗಿರುವ ಆಮಿಶ್ ಹಿರಿಯ ತಲೆಗಳಿಗೆ ಈ ವಿಷಯ ತಿಳಿಯದು. ಆದರೂ, ಈ ಸುದ್ದಿ ಅವರನ್ನು ತಲುಪಿದಾಗ, ತಮ್ಮ ಹೆಸರಿನಲ್ಲಿ ಮಾಧ್ಯಮ ಮತ್ತು ಮನೋರಂಜನೆಯ ವ್ಯಾಪಾರಗಳು ಹೆಸರು ಮತ್ತು ದುಡ್ಡು ಸಂಪಾದಿಸುತ್ತಿರುವುದು ಸ್ವಲ್ಪವೂ ಇಷ್ಟವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ. ಈ ಎಲ್ಲಾ ಒತ್ತಡಗಳ ನಡುವೆಯೂ, ಆಮಿಶ್ ಸಮುದಾಯದ ಸಂಖ್ಯೆ ವರ್ಧಿಸುತ್ತಲೇ ಇದೆ. ಆಮಿಶ್ ಕುರಿತಾಗಿ ಹೊರಬರುವ ಪತ್ರಿಕೆಗಳಲ್ಲಿ, ಅವರನ್ನು ಕುರಿತಾದ ವಿಶ್ವಾಸಾರ್ಹ ಲೇಖನಗಳು ಪ್ರಕಟವಾಗುತ್ತಿವೆ. ತಮ್ಮ ಇತಿಹಾಸ ಮತ್ತು ಪರಂಪರೆಯನ್ನು ವಿಸ್ತರಿಸಿ ಹೇಳುವ ಕಾರ್ಯಕ್ರಮಗಳಿಗೆ ಆಮಿಶ್ ಸಮುದಾಯದ ಬೆಂಬಲವಿದೆ. ಅನೇಕ ಪೀಳಿಗೆಗಳಿಂದ ಪ್ರಚಲಿತವಾಗಿರುವ ಸಮುದಾಯ-ದೊಳಗಿನ ಮದುವೆಗಳ ಕಾರಣ, ಇಂದು ಇವರ ಸಮುದಾಯದಲ್ಲಿ ಅನೇಕ ಬಗೆಯ ಅನುವಂಶೀಯ ರೋಗಗಳು ಕಂಡುಬರುತ್ತವೆ. ಆದರೆ, ಇತ್ತೀಚೆಗೆ ವೈದ್ಯಕೀಯ ನೆರವು ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಕ್ಲಿನಿಕಲ್ ಟ್ರಯಲ್ ಪ್ರಯೋಗಗಳಲ್ಲಿ ಭಾಗಿಯಾಗಿ, ಈ ಸಮಸ್ಯೆಗೆ ಪರಿಹಾರ ಪಡೆಯಲು ಯತ್ನಿಸುತ್ತಿರುವ ಆಮಿಶ್ ಸಮುದಾಯ ನಿಧಾನವಾಗಿ ವೈಜ್ಞಾನಿಕ ಪ್ರಪಂಚಕ್ಕೆ ಕಾಲಿಡುತ್ತಿದ್ದಾರೆ.

ಆಮಿಶ್ ಜನಾಂಗ ಭೂತಕಾಲದ ಅವಶೇಷಗಳೋ, ಇಲ್ಲಾ ಪ್ರಪಂಚದ ಬಗ್ಗೆ ಎಲ್ಲರೂ ಮರೆತ ವಿಷಯಗಳನ್ನು ತಿಳಿದಿದ್ದು, ಅದನ್ನು ಪೋಷಿಸುವ ವಿವೇಕಿಗಳೋ! ಇದು ಚರ್ಚೆಗೆ ಅರ್ಹವಾದ ವಿಷಯ.

ಆಧಾರ

1. Pennsylvania Folk Art of Samuel Plank by James and Vivian Bonson, Jeannine Boring, Joan Conrad & William Dancy, 1994.
2. Pennsylvania Folk Art of Samuel Plank by James and Vivian Bonson, Jeannine Boring, Joan Conrard & William Dancy ,1994.
3. A History of Amish a book by Steven M Nolt, Third Edition , 2015.

❑

15

ಬ್ರೆಝಿಲ್: ಇತಿಹಾಸ, ಸಂಸ್ಕೃತಿ, ಮತ್ತು ಜಾನಪದ ಸೊಗಡು

ತಳಿ ನಂಜಪ್ಪ ರಾಜಶೇಖರ

ಕ್ಲೆಮೆಂಟನ್, ನ್ಯೂ ಜೆರ್ಸಿ

*

ಬ್ರೆಝಿಲ್ (ಫೆಡರೇಟಿವ್ ರಿಪಬ್ಲಿಕ್ ಆಫ್ ಬ್ರೆಝಿಲ್) ದಕ್ಷಿಣ ಅಮೆರಿಕ ಖಂಡದ ಅತ್ಯಂತ ವೈವಿಧ್ಯಮಯ ಮತ್ತು ಅನನ್ಯ ಸಂಸ್ಕೃತಿಯ ದೇಶ ಎನ್ನಬಹುದು. ಇದು ದಕ್ಷಿಣ ಅಮೆರಿಕದ ಅರ್ಧದಷ್ಟು ಭೂಭಾಗವನ್ನು ಹೊಂದಿದ್ದು, ವಿಸ್ತೀರ್ಣದಲ್ಲಿ ವಿಶ್ವದ ಐದನೇ ಅತಿ ದೊಡ್ಡ ರಾಷ್ಟ್ರ. ಬ್ರೆಝಿಲ್ ಅಟ್ಲಾಂಟಿಕ್ ಮಹಾಸಾಗರದ 4,600 ಮೈಲಿ (7,400 ಕಿ.ಮೀ.) ಕರಾವಳಿಯನ್ನು ಹೊಂದಿದ್ದು, ಚಿಲಿ ಮತ್ತು ಈಕ್ವೆಡಾರ್ ದೇಶಗಳನ್ನು ಹೊರತುಪಡಿಸಿ ಮತ್ತೆಲ್ಲ ದಕ್ಷಿಣ ಅಮೆರಿಕಾದ ದೇಶಗಳೊಂದಿಗೆ (ಯುರುಗ್ವೆ, ಅರ್ಜೆಂಟೀನಾ, ಪರಾಗ್ವೆ, ಬೊಲಿವಿಯಾ, ಪೆರು, ಕೊಲಂಬಿಯಾ, ವೆನೆಝುವೆಲ್ಲ, ಗಯಾನಾ, ಸುರಿನಾಮ್ ಮತ್ತು ಫ್ರೆಂಚ್ ಗಯಾನಾ) ಒಳನಾಡಿನ ಗಡಿಗಳನ್ನು ಹಂಚಿಕೊಂಡಿದೆ. ದಕ್ಷಿಣ ಅಮೆರಿಕದಲ್ಲಿ ಪೋರ್ಚುಗೀಸ್ ಅನ್ನು ರಾಷ್ಟ್ರಭಾಷೆಯಾಗಿ ಹೊಂದಿರುವ ಏಕೈಕ ರಾಷ್ಟ್ರ ಬ್ರೆಝಿಲ್! ಈ ಅನನ್ಯ ರಾಷ್ಟ್ರ ಬ್ರೆಝಿಲ್‌ನ ಇತಿಹಾಸ, ಸಂಸ್ಕೃತಿ, ಮತ್ತು ಜನಪದ ವೈಶಿಷ್ಟ್ಯಗಳನ್ನು ಪರಿಚಯ ಮಾಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಇತಿಹಾಸ ಪೂರ್ವದ ಬ್ರೆಝಿಲ್

ಅಮೆಝಾನ್ ಅರಣ್ಯ ಪ್ರದೇಶ ಮತ್ತು ಅಮೆಝಾನ್ ನದೀ ತೀರದ ಪ್ರದೇಶಗಳಲ್ಲಿ ಸುಮಾರು 12,000 (ಕ್ರಿ.ಪೂ. 9000) ವರ್ಷಗಳ ಹಿಂದೆಯೇ ಮೂಲನಿವಾಸಿಗಳ ಇರುವಿಕೆಯನ್ನು ಪಳೆಯುಳಿಕೆಗಳ ಆಧಾರದಿಂದ ದೃಢೀಕರಿಸಲಾಗಿದೆ. ಅನೇಕ ಮಾನವಶಾಸ್ತ್ರಜ್ಞರು ಮತ್ತು ಪುರಾತತ್ತ್ವತಜ್ಞರು ಸುಮಾರು 8000 ವರ್ಷಗಳ ಹಿಂದಿನ ನಾಗರಿಕತೆಗಳ ಅವಶೇಷಗಳು ಏಷ್ಯಾದಿಂದ ಸಾಮೂಹಿಕ ವಲಸೆಯನ್ನು ಕೈಗೊಂಡ

ಜನರ ಗುಂಪಿಗೆ ಸೇರಿವೆ ಎಂದು ಹೇಳುತ್ತಾರೆ. ಸುಮಾರು 7000 ವರ್ಷಗಳ ಹಿಂದೆ, ಸ್ಥಳೀಯ ನಿವಾಸಿಗಳ ನೆಲೆ ಮತ್ತು ಜೀವನ ವಿಧಾನಗಳಿಗನುಗುಣವಾಗಿ ಎರಡು ಗಂಪುಗಳನ್ನು ಗುರುತಿಸಲಾಗಿದೆ. ವಿಶಾಲ ಎಲೆಗಳ ಮರಗಳಿಂದ ಕೂಡಿರುವ ದಟ್ಟ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದ 'ಹುಮೈಟ' ಜನಾಂಗ ಮತ್ತು ದಕ್ಷಿಣ ಕರಾವಳಿ ತೀರದಲ್ಲಿ ಜೀವಿಸುತ್ತಿದ್ದ 'ಸಾಂಬ್ರಾಕ್ವಿ' ಜನಾಂಗ.

4000 ವರ್ಷಗಳ ಹಿಂದೆ ರಿಯೊ ಡಿಜನ್ಯೆರೊ ಮತ್ತು ಎಸ್ಪಿರಿಟೊ ಸ್ಯಾಂಟೊ ಸಾಗರ ತೀರದಲ್ಲಿ ನೆಲೆಸಿದ ಜನಾಂಗ ಬೇಟೆಯಿಂದ ಆಹಾರ ಸಂಗ್ರಹಿಸುವುದರ ಜೊತೆಗೆ, ಗಿಡ-ಮರಗಳಿಂದ ಆಹಾರ ಸಂಗ್ರಹಣೆ ಮಾಡುವುದನ್ನು ಕಲಿತಿದ್ದರು ಎಂಬುದನ್ನು ಪುರಾವೆಗಳು ಸೂಚಿಸುತ್ತವೆ. ಆದರೆ ಸಹಸ್ರಾರು ವರ್ಷಗಳ ನಂತರ ಕ್ರಿ.ಶ. 16ನೇ ಶತಮಾನದಲ್ಲಿ ವಲಸೆ ಬಂದು ನೆಲೆಸಿದ ಪೋರ್ಚುಗೀಸರು ಎಲ್ಲಾ ಸ್ಥಳೀಯ ಜನರನ್ನು ಮೂಲನಿವಾಸಿಗಳು (ಅಮೆರಿಕನ್ ಇಂಡಿಯನ್ಸ್) ಎಂದೇ ಗುರುತಿಸಿದ್ದಾರೆ. ಈ ಮೂಲನಿವಾಸಿಗಳು ಬಹುಪಾಲು ಅಲೆಮಾರಿ ಬುಡಕಟ್ಟು ಜನಾಂಗದವರಾಗಿದ್ದು, ಅವರು ಬೇಟೆ, ಮೀನುಗಾರಿಕೆ, ಸಂಗ್ರಹಣೆ ಮತ್ತು ವಲಸೆ ಕೃಷಿಯಲ್ಲಿ ತೊಡಗಿದ್ದರು. ಈ ಬುಡಕಟ್ಟಿನ ಜನಾಂಗದವರಲ್ಲಿ ನರಭಕ್ಷಕ ಚಾಳಿಯೂ ಸಾಮಾನ್ಯವಾಗಿತ್ತು. 16ನೇ ಶತಮಾನದಲ್ಲಿದ್ದ ಸುಮಾರು 20 ಲಕ್ಷ ಸಂಖ್ಯೆಯಲ್ಲಿದ್ದ ಮೂಲನಿವಾಸಿಗಳು, 21ನೇ ಶತಮಾನದ ಹೊತ್ತಿಗೆ 3 ಲಕ್ಷಕ್ಕಿಳಿದು, ಈಗ ಸುಮಾರು 200 ಬುಡಕಟ್ಟುಗಳಲ್ಲಿ ಹಂಚಿ ಹೋಗಿದ್ದಾರೆ. 2007ರ ಬ್ರೆಜಿಲ್ ಸರ್ಕಾರದ ಮೂಲನಿವಾಸಿಗಳ ವಿಭಾಗದ ವರದಿಯ ಪ್ರಕಾರ ಇತರೆ ಬುಡಕಟ್ಟುಗಳ ಸಂಪರ್ಕವಿಲ್ಲದ 67 ಪ್ರತ್ಯೇಕ ಬುಡಕಟ್ಟುಗಳು ಬ್ರೆಜಿಲ್‌ನ ಒಳಭಾಗದಲ್ಲಿ ಹಂಚಿಹೋಗಿವೆ. ವಿಶ್ವದಲ್ಲಿ ಇತರ ಬುಡಕಟ್ಟುಗಳ ಸಂಪರ್ಕವಾಗಲಿ, ಇತರೆ ನಾಗರಿಕತೆಗಳ ಸಂಪರ್ಕವಾಗಲೀ ಇಲ್ಲದೆ ಇರುವ ಅತ್ಯಂತ ಹೆಚ್ಚು ಬುಡಕಟ್ಟುಗಳು ಇರುವ ದೇಶ ಬ್ರೆಜಿಲ್!

ಪೋರ್ಚುಗೀಸರ ಬ್ರೆಜಿಲ್‌ನ ಅನ್ವೇಷಣೆ

ಮಾರ್ಚ್ 9, 1500ರಂದು ಪೋರ್ಚುಗೀಸ್ ದೊರೆಯ ಆಣತಿಯಂತೆ 13 ಹಡಗುಗಳು ಮತ್ತು ಸುಮಾರು 1200 ನಾವಿಕರ ನೌಕಾಪಡೆ ಪೆಡ್ರೊ ಅಲ್ವಾರೆಸ್ ಕ್ಯಾಬ್ರಾಲ್‌ನ ನೇತೃತ್ವದಲ್ಲಿ ಈ ಹಿಂದೆ ವಾಸ್ಕೊ ಡಿ ಗಾಮ ಕಂಡುಹಿಡಿದಿದ್ದ ಮಾರ್ಗದಲ್ಲಿ ಭಾರತ ತಲುಪುವ ಉದ್ದೇಶದಿಂದ, ಪೋರ್ಚುಗಲ್‌ನ ಲಿಸ್ಬನ್‌ನ ನೌಕಾತಾಣದಿಂದ ಹೊರಟಿತು. ಮಾರ್ಗಮಧ್ಯದಲ್ಲಿ ಸದ್ಯದ ಗಾಳಿ ಮತ್ತು ನೀರಿನ ಹರಿವಿನ ಸೆಳೆತದಿಂದ ನಿಗದಿಗಿಂತಲೂ ಹೆಚ್ಚಿನ ನೈಋತ್ಯ ದಿಕ್ಕಿನಲ್ಲಿ ಸಾಗಿತು. ಹೀಗೆ ಕೊಂಚ ದಿಕ್ಕುತಪ್ಪಿ ಸಾಗಿದ ನೌಕಾಪಡೆ ಅಟ್ಲಾಂಟಿಕ್ ಸಾಗರ ಹೊಕ್ಕು, ಏಪ್ರಿಲ್ 22, 1500ರಂದು ಬ್ರೆಜಿಲ್ ಪ್ರದೇಶದ ಪೋರ್ಟೋ ಸೆಗುರೊ (ಈಗಿನ ಸಾಲ್ವಡೋರ್ ಮತ್ತು ರಿಯೋಡಿಜೆನ್ಯೆರೊ ನಡುವೆ) ತೀರದಲ್ಲಿ ಲಂಗರು ಹಾಕಿತು. ಇದನ್ನೇ ಪೋರ್ಚುಗೀಸರು ಬ್ರೆಜಿಲ್ ಪ್ರದೇಶವನ್ನು ಅಧಿಕೃತವಾಗಿ ಕಂಡುಹಿಡಿದ ದಾಖಲೆ ಎಂದು ಬಹುಪಾಲು ಇತಿಹಾಸಜ್ಞರು ಒಪ್ಪಿಕೊಂಡಿರುವ ಸಂಗತಿ.

ಅಲ್ಲಿನ ಸ್ಥಳೀಯ ಮೂಲನಿವಾಸಿಗಳು, ಇನ್ನೂ ಶಿಲಾಯುಗದಲ್ಲಿ ಬದುಕುತ್ತಿದ್ದು, ಅಲೆಮಾರೀ ಬೇಟೆಗಾರರು ಮತ್ತು ಮೀನುಗಾರರಾಗಿ ವಾಸಿಸುತ್ತಿದ್ದರು. ಈ ಪೋರ್ಚುಗೀಸ್ ನೌಕಾದಳದ ಅಧಿಕೃತ ಬರಹಗಾರ ಪೆರೋ ವಾಜ್ ಡಾ ಕ್ಯಾಮಿನ್ಹಾ ಈ ಹೊಸ ಪ್ರದೇಶ ಮತ್ತು ಜನಾಂಗದ ಬಗ್ಗೆ ದೊರೆ ಮ್ಯಾನುಯೆಲ್ ಅವರಿಗೆ ಬರೆದ ಪತ್ರವನ್ನು ಬ್ರೆಝಿಲ್‌ನ ಜನನ ಪ್ರಮಾಣಪತ್ರ (birth certificate) ಎಂದು ಕರೆಯುತ್ತಾರೆ. ಅವನು ದಾಖಲಿಸಿರುವಂತೆ, ಇದೊಂದು ವಿಶಾಲವಾದ, ಫಲವತ್ತಾದ ಭೂಮಿಯನ್ನು ಹೊಂದಿರುವ, ಮಕ್ಕಳಂತಹ ಬೆತ್ತಲೆ ಅನಾಗರಿಕರು ವಾಸಿಸುವ ಪ್ರದೇಶ. ಪುರುಷರು ತಮ್ಮ ದೇಹಕ್ಕೆ ಕೆಂಪು ಮತ್ತು ಕಪ್ಪು ಬಣ್ಣಗಳನ್ನು ಬಳಿದುಕೊಂಡಿರುತ್ತಾರೆ. ಮಹಿಳೆಯರು ಆಕರ್ಷಕವಾಗಿದ್ದು, ಪೃಷ್ಠದ ಮತ್ತು ತೊಡೆಯ ಮೇಲೆ ಕಪ್ಪು ಬಣ್ಣವನ್ನು ಬಳಿದುಕೊಂಡಿದ್ದು, ದೇಹದ ಉಳಿದ ಭಾಗಗಳು ಬೆತ್ತಲೆಯಾಗಿರುತ್ತವೆ. ಕ್ಯಾಬ್ರಾಲ್ ಕಂಡುಹಿಡಿದ ಬ್ರೆಝಿಲ್ ಪ್ರದೇಶದ ಹೆಚ್ಚಿನ ಪರಿಶೀಲನೆಯ ಉದ್ದೇಶದಿಂದ 1501ರಲ್ಲಿ ಗೋನ್ಸಾಲೋ ಕೊಯ್ಲೋ ಎಂಬುವನ ನೇತೃತ್ವದಲ್ಲಿ ಮತ್ತೊಂದು ನೌಕಾಪಡೆಯು ಬ್ರೆಝಿಲ್ ಕರಾವಳಿಯ ಸುಮಾರು 2000 ಮೈಲುಗಳಷ್ಟು ಪ್ರದೇಶವನ್ನು ಪರಿಶೋಧಿಸಿ ನಂತರದ ವ್ಯವಸ್ಥಿತ ಪೋರ್ಚುಗೀಸ್ ವಸಾಹತುಗಾರಿಕೆಗೆ ದಾರಿ ಮಾಡಿಕೊಟ್ಟಿತು.

ಈ ಪೋರ್ಚುಗೀಸರು ತಮ್ಮ ಜೊತೆಗೇ ತಂದ ಸಿಡುಬು, ದಡಾರ, ಕ್ಷಯ ಮುಂತಾದ ರೋಗಗಳಿಗೆ ಮೂಲನಿವಾಸಿಗಳಿಗೆ ನಿರೋಧಕ ಶಕ್ತಿ ಇಲ್ಲದುದರಿಂದ ಲಕ್ಷಾಂತರ ಜನರು ಸಾವನ್ನಪ್ಪಿದ್ದಲ್ಲದೆ, ನೂರಾರು ಬುಡಕಟ್ಟುಗಳು ಸಂಪೂರ್ಣವಾಗಿ ನಿರ್ನಾಮವಾದವು. ಪೋರ್ಚುಗೀಸರು ಮತ್ತು ಸ್ಥಳೀಯ ಜನರ ನಡುವಿನ ಕಾದಾಟಗಳು ಸಹ ಸಾಕಷ್ಟು ಮೂಲನಿವಾಸಿಗಳ ಸಾವಿಗೆ ಕಾರಣವಾದುವು. ನಂತರ ಫ್ರೆಂಚ್ ಮತ್ತು ಸ್ಪ್ಯಾನಿಷ್ ಪಡೆಗಳು ಬ್ರೆಝಿಲ್ ಪ್ರದೇಶದ ಆಕ್ರಮಣಕ್ಕೆ ನಡೆಸಿದ ಹೋರಾಟವನ್ನು ಪೋರ್ಚುಗೀಸರು ತಮ್ಮ ನೌಕಾಪಡೆಯ ಬಲದಿಂದ ದಿಟ್ಟವಾಗಿ ಎದುರಿಸಿ ಬ್ರೆಝಿಲ್ ಅನ್ನು ತಮ್ಮ ವಶದಲ್ಲೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಈ ಪ್ರದೇಶದಲ್ಲಿ ಕಂಡುಬಂದ ವರ್ಣದ್ರವ್ಯ (dye) ಸಂಪತ್ತಿನ ಪಾವ್-ಬ್ರಸಿಲ್ (pau-brasil) ಎಂಬ ಅರಣ್ಯ ವೃಕ್ಷದ ಲಾಭದಾಯಕ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಸಾಧಿಸಿ ಪೋರ್ಚುಗೀಸ್ ತನ್ನ ವಸಾಹತು ಸ್ಥಾಪಿಸುವ ಪ್ರಯತ್ನವನ್ನು ಮುಂದುವರಿಸಿತು. ಈ ಪಾವ್-ಬ್ರಸಿಲ್ ವೃಕ್ಷವೇ ಇಲ್ಲಿನ ಪ್ರದೇಶಕ್ಕೆ 'ಬ್ರೆಝಿಲ್' ಎಂಬ ಹೆಸರು ಬರಲು ಕಾರಣ ಎಂದು ಪುರಾವೆಗಳಿಂದ ತಿಳಿದುಬರುತ್ತದೆ. ಬ್ರೆಝಿಲ್ ಎಂಬ ಹೆಸರಿನ ಉಲ್ಲೇಖ ಮೊದಲು 1506-1509ರ ನಡುವೆ ಕಂಡುಬಂದಿದ್ದು, 1516ರಲ್ಲಿ ಪೋರ್ಚುಗಲ್‌ನ ದೊರೆ ಈ ಪ್ರದೇಶದ ಆಡಳಿತಕ್ಕೆ ಗವರ್ನರ್ ನೇಮಕ ಮಾಡಿ ಹೊರಡಿಸಿದ ಆಜ್ಞೆಯಲ್ಲಿ ದಾಖಲಾಗಿರುವಂತೆ ಬ್ರೆಝಿಲ್ ಎಂಬ ಹೆಸರು ಅಧಿಕೃತವಾಗಿ ನಾಮಕರಣಗೊಂಡ ವಿವರಣೆ ಇದೆ.

ಆಫ್ರಿಕ ಮತ್ತು ಯೂರೋಪಿಯನ್ನರ ವಲಸೆ

ಈ ಪಾವ್-ಬ್ರಸಿಲ್ ಮರಗಳ ಉದ್ಯಮದಲ್ಲಿ ತೊಡಗಿದ ಪೋರ್ಚುಗೀಸರು ಆರಂಭದಲ್ಲಿ ಮೂಲನಿವಾಸಿಗಳನ್ನು ಗುಲಾಮರನ್ನಾಗಿ ದುಡಿಸಿಕೊಳ್ಳಲು ಪ್ರಯತ್ನಿಸಿದರು. ಕ್ರಮೇಣ, ಅರಣ್ಯ ಪ್ರದೇಶಗಳನ್ನು ಹುಡುಕಲು ಒಳನಾಡಿಗೆ ಹೋಗಬೇಕಾದ ಅಗತ್ಯದಿಂದ ಪಾವ್-ಬ್ರಸಿಲ್ ವ್ಯಾಪಾರ ಲಾಭದಾಯಕವಾಗದೆ ಆಕರ್ಷಣೆಯನ್ನು ಕಳೆದುಕೊಂಡಿತು. ತೆರವುಗೊಳಿಸಿದ ಜಮೀನುಗಳಲ್ಲಿ ಇತರೆ ಲಾಭದಾಯಕ ಬೆಳೆಗಳ, ಮುಖ್ಯವಾಗಿ ಕಬ್ಬಿನ ಬೆಳೆಯ ಉದ್ಯಮಕ್ಕೆ ತೊಡಗಿದರು. ಇದಕ್ಕೆ ಬೇಕಾದ ಕಾರ್ಮಿಕರ ಸಮಸ್ಯೆಗೆ ಪರಿಹಾರವಾಗಿ ಆಫ್ರಿಕದಿಂದ ಗುಲಾಮರನ್ನು ವಲಸೆ ತಂದರು. 1550ರ ಸುಮಾರಿಗೆ ಪೋರ್ಚುಗೀಸರು ಪಶ್ಚಿಮ ಆಫ್ರಿಕಾದ ಮತ್ತು ಮಧ್ಯ ಆಫ್ರಿಕಾದ ಘಾನಾ, ಬೆನಿನ್, ನೈಜೀರಿಯಾ, ಅಂಗೋಲಾ, ಕಾಂಗೋ ಮತ್ತು ಮೊಜಾಂಬಿಕ್ ದೇಶಗಳಿಂದ ಲಕ್ಷಾಂತರ ಜನರನ್ನು ವಲಸೆ ತಂದು ಗುಲಾಮರನ್ನಾಗಿ ದುಡಿಸಿಕೊಂಡರು. ನಂತರ ಕಾಫಿ ತೋಟಗಾರಿಕೆಯನ್ನು ಪ್ರಾರಂಭಿಸಿ, 19ನೇ ಶತಮಾನದ ಹೊತ್ತಿಗೆ ಬ್ರೆಜ಼ಿಲ್ ಅನ್ನು ವಿಶ್ವದಲ್ಲೇ ಅತಿ ಹೆಚ್ಚು ಕಾಫಿ ಬೆಳೆಯುವ ದೇಶವನ್ನಾಗಿಸಿದರು. ಪೋರ್ಚುಗೀಸರು ಬ್ರೆಜ಼ಿಲ್ ಪ್ರದೇಶವನ್ನು ಆಕ್ರಮಿಸಿದ ಮೊದಲ ಅನೇಕ ದಶಕಗಳ ಕಾಲ ಈ ಪ್ರದೇಶದ ಹಕ್ಕನ್ನು ಕಾಯ್ದುಕೊಳ್ಳಲು ಇತರೆ ಯೂರೋಪಿಯನ್ ದೇಶದವರಿಂದ ಪ್ರಮುಖವಾಗಿ ಫ್ರಾನ್ಸ್ ಮತ್ತು ಸ್ಪೈನ್ ದೇಶಗಳೊಂದಿಗೆ ಆಗಾಗ ಘರ್ಷಣೆಯನ್ನು ಎದುರಿಸಬೇಕಾಗಿತ್ತು. ತಮ್ಮ ಸ್ವಾಮ್ಯವನ್ನು ಕಾಪಾಡಿಕೊಳ್ಳಲು, ಪೋರ್ಚುಗೀಸರು ತಮ್ಮ ವಶದಲ್ಲಿದ್ದ ಬ್ರೆಜ಼ಿಲ್ ಪ್ರದೇಶಕ್ಕೆ ಇತರೆ ಯೂರೋಪಿಯನ್ ದೇಶದವರ ವಲಸೆಯನ್ನು 19ನೇ ಶತಮಾನದವರೆಗೂ ನಿಷೇಧಿಸಿದ್ದರು.

18ನೇ ಶತಮಾನದಲ್ಲಿ ಬ್ರೆಜ಼ಿಲ್‌ನ ಒಳನಾಡಿನ ಪ್ರದೇಶದಲ್ಲಿ ಚಿನ್ನದ ಖನಿಜ ಸಂಪತ್ತು ಪತ್ತೆಯಾದ ನಂತರ ಪೋರ್ಚುಗೀಸರ ಆಸಕ್ತಿ ಗರಿಗೆದರಿ ಗಣಿಗಾರಿಕೆ ಉದ್ಯಮದಲ್ಲಿ ಪಾಲುದಾರರಾಗಲು ಅಪಾರ ಸಂಖ್ಯೆಯಲ್ಲಿ ಬ್ರೆಜ಼ಿಲ್‌ಗೆ ವಲಸೆ ಬರಲು ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿ ವಜ್ರ ಖನಿಜ ಸಂಪತ್ತೂ ಪತ್ತೆಯಾಗಿ ಪೋರ್ಚುಗೀಸರ ವಲಸೆಗೆ ಮತ್ತಷ್ಟು ಪುಷ್ಟಿ ನೀಡಿತು. 1808ರಲ್ಲಿ, ನೆಪೋಲಿಯನ್‌ನ ಆಕ್ರಮಣದಿಂದ ತಪ್ಪಿಸಿಕೊಳ್ಳಲು ಪೋರ್ಚುಗಲ್ ದೊರೆ ಬ್ರಿಟಿಷರ ಬೆಂಬಲ ಪಡೆದು ಬ್ರೆಜ಼ಿಲ್‌ಗೆ ಪಲಾಯನ ಮಾಡಿ, ರಿಯೊ ಡಿ ಜನ್ಯೆರೊ ನಗರವನ್ನು ಪೋರ್ಚುಗೀಸ್ ಪ್ರಾಂತ್ಯಗಳ ಸರ್ಕಾರದ ಕೇಂದ್ರವನ್ನಾಗಿ ಮಾಡಿಕೊಂಡನು. 1821ರಲ್ಲಿ ಪೋರ್ಚುಗಲ್‌ನ ದೊರೆ ಬ್ರೆಜ಼ಿಲ್ ತೊರೆದು ಮತ್ತೆ ಪೋರ್ಚುಗಲ್‌ಗೆ ಹಿಂತಿರುಗಿದಾಗ, ಅವನ ಮಗ ಪೆಡ್ರೊ ರಾಜಪ್ರತಿನಿಧಿಯಾಗಿ ಬ್ರೆಜ಼ಿಲ್‌ನಲ್ಲೇ ಉಳಿದುಕೊಂಡನು. ಒಂದು ವರ್ಷದ ನಂತರ, ಪೆಡ್ರೊ ಬ್ರೆಜ಼ಿಲ್ ಅನ್ನು ಪೋರ್ಚುಗಲ್‌ನಿಂದ ಪ್ರತ್ಯೇಕವಾಗಿಸುವ ಹೋರಾಟ ನಡೆಸಿ, ಸಾಂವಿಧಾನಿಕ ರಾಜಪ್ರಭುತ್ವವನ್ನು ಸ್ಥಾಪಿಸಿ, ಸ್ವತಂತ್ರ ಬ್ರೆಜ಼ಿಲ್‌ನ ಚಕ್ರವರ್ತಿ ಪೆಡ್ರೊ ಎಂದು ಅಧಿಕಾರ ವಹಿಸಿಕೊಂಡನು.

19ನೇ ಶತಮಾನದ ಉತ್ತರಾರ್ಧದಲ್ಲಿ, ಗುಲಾಮಗಿರಿಯನ್ನು ಕಾನೂನುಬದ್ಧವಾಗಿ ರದ್ದುಗೊಳಿಸುವ ಜೊತೆಗೆ ಪೋರ್ಚುಗಲ್ ಮಾತ್ರವಲ್ಲದೆ ಬೇರೆ ಯೂರೋಪಿಯನ್

ಮತ್ತು ಇತರ ದೇಶಗಳಿಂದ ವಲಸಿಗರಿಗೆ ಬ್ರೆಝಿಲ್ ತೆರೆದುಕೊಂಡಿತು. 1930ರ ಹೊತ್ತಿಗೆ, ಪ್ರಮುಖವಾಗಿ ಪೋರ್ಚುಗಲ್, ಇಟಲಿ, ಸ್ಪೈನ್, ಮತ್ತು ಜಪಾನ್ ದೇಶಗಳಿಂದಲ್ಲದೆ, ಇತರೆ 60 ರಾಷ್ಟ್ರಗಳಿಂದ 30 ಲಕ್ಷಕ್ಕೂ ಹೆಚ್ಚು ವಲಸಿಗರು ಬ್ರೆಝಿಲ್‌ಗೆ ವಲಸೆ ಬಂದು ನೆಲೆಸಿದರು. ಇತ್ತೀಚಿನ ಜನಗಣತಿಯ ಪ್ರಕಾರ 2020ರಲ್ಲಿ ಬ್ರೆಝಿಲ್‌ನ ಜನಸಂಖ್ಯೆ 21 ಕೋಟಿಗಿಂತಲೂ ಅಧಿಕವಾಗಿದ್ದು, ಶೇ. 44ರಷ್ಟು ಬಿಳಿಯರು, ಶೇ. 47ರಷ್ಟು ಮಿಶ್ರತಳಿಯವರು, ಶೇ. 8ರಷ್ಟು ಕರಿಯರು ಮತ್ತು ಮೂಲನಿವಾಸಿಗಳು ಶೇ. 1ಕ್ಕಿಂತಲೂ ಕಡಿಮೆ ಎಂದು ತಿಳಿದುಬರುತ್ತದೆ.

ಕ್ಯಾಥೊಲಿಕ್ ಧರ್ಮದ ಪ್ರಭಾವ ಬ್ರೆಝಿಲ್‌ನ ಸಂಸ್ಕೃತಿ, ನಂಬಿಕೆಗಳು ಮತ್ತು ಸಂಸ್ಥೆಗಳಲ್ಲಿ ಆಳವಾಗಿ ಆವರಿಸಿದೆ. ಹದಿನಾರನೇ ಶತಮಾನದಲ್ಲಿ ಪೋರ್ಚುಗೀಸ್‌ನ ಆಗಮನದ ಜೊತೆಯಲ್ಲೇ ಕ್ಯಾಥೊಲಿಕ್ ಧರ್ಮವೂ ಬ್ರೆಝಿಲ್‌ನ ಅವಿಭಾಜ್ಯ ಅಂಗವಾಯಿತು. 1500ರಿಂದ 1889ರವರೆಗೆ ಕ್ಯಾಥೊಲಿಕ್ ಧರ್ಮವು ಬ್ರೆಝಿಲ್‌ನ ಅಧಿಕೃತ ರಾಜ್ಯ ಧರ್ಮವಾಗಿತ್ತು. ಬ್ರೆಝಿಲ್ ವಿಶ್ವದ ಅತಿ ದೊಡ್ಡ ರೋಮನ್ ಕ್ಯಾಥೊಲಿಕ್ ರಾಷ್ಟ್ರವಾಗಿದ್ದು, 1940ರಲ್ಲಿ ಶೇ. 95ರಷ್ಟಿದ್ದ ರೋಮನ್ ಕ್ಯಾಥೊಲಿಕರ ಜನಸಂಖ್ಯೆ 2020ರ ಹೊತ್ತಿಗೆ ಶೇ. 60ರಷ್ಟಾಗಿದೆ. ಕ್ಯಾಥೊಲಿಕ್ ಧರ್ಮದ ಹೆಗ್ಗುರುತಾಗಿ 'ಕ್ರೈಸ್ಟ್ ದಿ ರಿಡೀಮರ್' ಎಂಬ ಬೃಹತ್ ಪ್ರತಿಮೆ ರಿಯೊ ಡಿ ಜನ್ಯೆರೊದ ಕೊರ್ಕೊವಾಡೋ ಪರ್ವತದ ಉತ್ತುಂಗದಲ್ಲಿ ರಾರಾಜಿಸುತ್ತಿದೆ. ಈ ಪ್ರತಿಮೆಯು ಅದರ 8 ಮೀಟರ್ (26 ಅಡಿ) ಪೀಠವನ್ನು ಹೊರತುಪಡಿಸಿ, 30 ಮೀಟರ್ (98 ಅಡಿ) ಎತ್ತರವಿದ್ದು, ತೋಳುಗಳು 28 ಮೀಟರ್ (92 ಅಡಿ) ಅಗಲದಲ್ಲಿ ಚಾಚಿಕೊಂಡಿವೆ.

ಬ್ರೆಝಿಲ್ ಸಂಸ್ಕೃತಿ

ಬ್ರೆಝಿಲ್‌ಗೆ ಆಗಮಿಸಿದ ಆಫ್ರಿಕನ್ನರು ತಮ್ಮ ಗುಲಾಮಗಿರಿಯ ಜೊತೆಗೆ, ಅವರ ಸಂಗೀತ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನೂ ತಂದರು. ಅವರ ಸಾಂಸ್ಕೃತಿಕ ಸಂಪ್ರದಾಯಗಳು ಅನಿವಾರ್ಯವಾಗಿ ಪೋರ್ಚುಗೀಸ್, ಇತರೆ ಯೂರೋಪಿಯನ್ ದೇಶಗಳ ಮತ್ತು ಮೂಲನಿವಾಸಿಗಳ ಪದ್ಧತಿಗಳೊಂದಿಗೆ ಬೆರೆತು, ತನ್ನದೇ ಆದ ವಿಶಿಷ್ಟ, ವೈವಿಧ್ಯಮಯ, ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಹೊಂದಿರುತ್ತದೆ.

ಈ ವಿಭಿನ್ನ ಸಂಸ್ಕೃತಿಗಳ ಮಿಲನದಿಂದ ಆಧುನಿಕ ಬ್ರೆಝಿಲಿಯನ್ ಜೀವನ ವಿಧಾನದಲ್ಲಿ ಒಂದು ವಿಶಿಷ್ಟ ಸಂಯೋಜನೆಯನ್ನು ಕಾಣಬಹುದು. ಆದರೂ ಪೋರ್ಚುಗೀಸ್ ಜೀವನಶೈಲಿಯ ಪ್ರಭಾವ ಬ್ರೆಝಿಲ್‌ನ ಸಂಯುಕ್ತ ಸಂಸ್ಕೃತಿಯಲ್ಲಿ ಎದ್ದು ನಿಲ್ಲುತ್ತದೆ. ಬ್ರೆಝಿಲಿಯನ್ನರು ತಮ್ಮ ಭಾಷೆ, ಅವರ ಮುಖ್ಯ ಧರ್ಮ ಮತ್ತು ಅವರ ಹೆಚ್ಚಿನ ಪದ್ಧತಿಗಳನ್ನು ಪೋರ್ಚುಗೀಸರಿಂದ ಪಡೆದುಕೊಂಡರು. ಬ್ರೆಝಿಲ್‌ನ ಮೂಲನಿವಾಸಿಗಳ ಭಾಷೆಯಾದ ಟುಪೆ-ಗೌರಾನಾ ಸಹ ಬ್ರೆಝಿಲ್‌ನ ಪೋರ್ಚುಗೀಸ್ ಭಾಷೆಯ ಮೇಲೆ ಸತತವಾಗಿ ಪ್ರಭಾವ ಬೀರುತ್ತ ಬಂದಿದೆ. ಅಮೆಝಾನ್ ಜಲಾನಯನ ಪ್ರದೇಶದಲ್ಲಿ ಬ್ರೆಝಿಲಿಯನ್

ಸಂಸ್ಕೃತಿಗೆ ಮೂಲನಿವಾಸಿಗಳ ಕೊಡುಗೆಗಳು ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತವೆ. ಬ್ರೆಜಿಲಿಯನ್ ಜೀವನ ವಿಧಾನದ ಮೇಲೆ ಆಫ್ರಿಕಾದ ಪ್ರಭಾವ ಈಶಾನ್ಯ ಮತ್ತು ರಿಯೊಡಿಜನೈರೊ ನಡುವಿನ ಕರಾವಳಿಯಲ್ಲಿ ಪ್ರಬಲವಾಗಿದೆ. ಅವುಗಳಲ್ಲಿ ಸಾಂಪ್ರದಾಯಿಕ ಆಹಾರಗಳು, ಧರ್ಮಗಳು ಮತ್ತು ಜನಪ್ರಿಯ ಸಂಗೀತ ಮತ್ತು ನೃತ್ಯ, ವಿಶೇಷವಾಗಿ ಸಾಂಬಾ ನೃತ್ಯ ಸೇರಿವೆ. ಯೂರೋಪ್ ಮತ್ತು ಉತ್ತರ ಅಮೆರಿಕಾದ ವಾಣಿಜ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳೂ ಬ್ರೆಜಿಲಿಯನ್ನರ ಸಾಂಸ್ಕೃತಿಕ ವಿಕಸನದಲ್ಲಿ ಪ್ರಭಾವ ಬೀರಿವೆ. ಹಲವಾರು ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳ ಹೊರತಾಗಿಯೂ, ಬ್ರೆಜಿಲಿಯನ್ನರು ತಮ್ಮ ಆಚರಣೆಗಳು ಮತ್ತು ಕಲಾಪ್ರಕಾರಗಳಲ್ಲಿ ಅಪರಿಮಿತ ಉತ್ಸಾಹ ಮತ್ತು ಸೃಜನಶೀಲತೆಗಳಿಂದ ಭಾಗವಹಿಸಿ ವಿಶ್ವದ ಗಮನ ಸೆಳೆದಿದ್ದಾರೆ.

ಅತ್ಯಂತ ಪ್ರಸಿದ್ಧ ಬ್ರೆಜಿಲಿಯನ್ ಸಂಪ್ರದಾಯವೆಂದರೆ ಕಾರ್ನಿವಲ್. 1830ರ ದಶಕದಲ್ಲಿ ಪೋರ್ಚುಗೀಸ್ ಸಂಪ್ರದಾಯದ ಮುಂದುವರಿಕೆಯಾಗಿ 'ಲೆಂಟ್' ಪ್ರಾರಂಭವಾಗುವ ಹಿಂದಿನ ದಿನವನ್ನು ಬ್ರೆಜಿಲ್‌ನಲ್ಲಿ ಆಚರಿಸುವುದು ಪ್ರಾರಂಭವಾಯಿತು. ಲೆಂಟ್ ಎನ್ನುವುದು ಈಸ್ಟರ್ ಹಬ್ಬದ ತಯಾರಿಗಾಗಿ ರೋಮನ್ ಕ್ಯಾಥೊಲಿಕರು 'ತ್ಯಾಗ ಮತ್ತು ಇಂದ್ರಿಯನಿಗ್ರಹ'ದ ಪರಿಪಾಠವನ್ನು 40 ದಿನಗಳು ಆಚರಿಸುವ ಸಂಪ್ರದಾಯ. ಈ ಲೆಂಟ್ ಹಿಂದಿನ ದಿನದ ಆಚರಣೆಯೇ ಈಗಿನ 3 ರಿಂದ 7 ದಿನಗಳ ಕಾಲ ನಡೆಯುವ ಅದ್ದೂರಿ ಕಾರ್ಯಕ್ರಮ 'ಕಾರ್ನಿವಲ್.' ಇದು ಬ್ರೆಜಿಲ್‌ನ ಬಹುಪಾಲು ಎಲ್ಲ ಪಟ್ಟಣಗಳಲ್ಲೂ ಅತ್ಯಂತ ಉತ್ಸಾಹ ಮತ್ತು ಸಡಗರದಿಂದ ಆಚರಿಸಲ್ಪಡುತ್ತದೆ. ಕಾರ್ನಿವಲ್‌ನಲ್ಲಿ ಬೀದಿ ಸಂಗೀತ, ನೃತ್ಯ, ವೇಷಭೂಷಣಗಳು, ಮತ್ತಿತರ ವೈವಿಧ್ಯಮಯ ಮನರಂಜನೆಯ ಕಾರ್ಯಕ್ರಮಗಳು ಕೂಡಿರುತ್ತವೆ. ಈ ಪ್ರದರ್ಶನದ ವೈವಿಧ್ಯತೆ ಮತ್ತು ವಿಸ್ತಾರ ಕ್ರಮೇಣ ವಿಕಸನಗೊಂಡು, 20ನೇ ಶತಮಾನದ ಹೊತ್ತಿಗೆ ಬ್ರೆಜಿಲ್‌ನ ಅತ್ಯಂತ ಜನಪ್ರಿಯ ಮತ್ತು ಹುರುಪಿನ ಸಂಪ್ರದಾಯವಾಗಿ ವಿಶ್ವದ ಗಮನ ಸೆಳೆಯಲು ಪ್ರಾರಂಭಿಸಿತು. ಈಸ್ಟರ್‌ಗೆ 40 ದಿನಗಳ ಮೊದಲು ನಡೆಯುವ ಈ ವಾರ್ಷಿಕ ಸಂಭ್ರಮದಲ್ಲಿ ಬ್ರೆಜಿಲ್‌ನ ಎಲ್ಲ ಜನಾಂಗದವರೂ ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಾರೆ. ಇದೊಂದು ಬ್ರೆಜಿಲ್ ದೇಶದ ವೈಶಿಷ್ಟ್ಯತೆಯನ್ನು ಪ್ರತಿಬಿಂಬಿಸುವ ಅವಿಸ್ಮರಣೀಯ ಆಚರಣೆಯಾಗಿ ಬೆಳೆದು ಬಂದಿದೆ. ಈ ಕಾರ್ನಿವಲ್‌ನ ಮತ್ತೊಂದು ಅಧಿಕೃತ ವಿಶೇಷ, ಸಾವಿರಾರು ಗೈರೇಟಿಂಗ್ (ಪರಿಭ್ರಮಿಸುವ) ನರ್ತಕ-ನರ್ತಕಿಯರು ಆಫ್ರಿಕನ್ ಸಂಗೀತದ (ಲಯಬದ್ಧ ತಾಳಕ್ಕೆ) ಬೀಟ್‌ಗೆ ಸಾಂಬಾ ನೃತ್ಯದಲ್ಲಿ ಭಾಗವಹಿಸುವುದು. ಸಾಂಬಾ ಕಾರ್ನಿವಲ್‌ನ ಅಧಿಕೃತ ಸಂಗೀತ ಮತ್ತು ನೃತ್ಯ ಮಾತ್ರವಲ್ಲ, ಬ್ರೆಜಿಲ್‌ನಲ್ಲಿರುವ ಆಫ್ರಿಕನ್ನರ ಭಾಷಾ ಅವಶೇಷವೂ ಆಗಿದೆ. ಸಾಂಬಾ ಎಂಬ ಪದದ ಅರ್ಥ ನೃತ್ಯ ಮಾಡುವುದರ ಮೂಲಕ ಆಫ್ರಿಕನ್ ದೈವೀಶಕ್ತಿಗಳನ್ನು ಆಹ್ವಾನಿಸುವುದು.

ಆಫ್ರೋ-ಬ್ರೆಜಿಲಿಯನ್ನರ ಸಾಂಸ್ಕೃತಿಕ ಪ್ರಭಾವವು ಕಾರ್ನಿವಲ್‌ನಿಂದ ಮುಖ್ಯವಾಹಿನಿಯ ಪಾಪ್ ಸಂಸ್ಕೃತಿಗೆ ಸ್ಥಿರವಾಗಿ ವಿಸ್ತರಿಸಿದೆ. 1959ರಲ್ಲಿ ಗ್ರೀಕ್ ದಂತಕಥೆ ಆರ್ಫೀಯಸ್ ಮತ್ತು ಯೂರಿಡೈಸ್ ಅನ್ನು ಆಧರಿಸಿದ ಬ್ಲ್ಯಾಕ್ ಆರ್ಫೀಯಸ್ ಎಂಬ

ಚಲನಚಿತ್ರ ಬಿಡುಗಡೆಯಾಯಿತು. ಈ ಚಿತ್ರ ಕಾರ್ನಿವಲ್ ಸಮಯದ ರಿಯೊ ಡಿ ಜನ್ಯೆರೊ ನಗರದ ಫಾವೆಲಾ (ಕೊಳೆಗೇರಿ ನಿವಾಸಿಗಳು) ಜನರ ಜೀವನದ ಮೇಲೆ ಬೆಳಕು ಚೆಲ್ಲಿತು. ಆಫ್ರೋ-ಬ್ರೆಝಿಲಿಯನ್ ಆಧ್ಯಾತ್ಮಿಕತೆ, ಇಂದ್ರಿಯಲೋಲುಪತೆ, ಮತ್ತು ಕಾವ್ಯಾತ್ಮಕ ಭಾವನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರೀಕರಣ ಮಾಡಲಾಗಿದೆ. ರಿಯೊ ನಗರದ ಫಾವೆಲಾಗಳ ಶಕ್ತಿಶಾಲಿ ನಿರೂಪಣೆಯಿಂದ ಈ ಚಿತ್ರವು ಆಫ್ರೋ-ಬ್ರೆಝಿಲಿಯನ್ನರ ಜೀವನವನ್ನು ಇತರೆ ದೇಶಗಳ ಚಲನಚಿತ್ರ ಪ್ರೇಕ್ಷಕರ ಗಮನಕ್ಕೆ ತಂದಿತು. ಬ್ರೆಝಿಲ್‌ನ ಹೊರಗಿನ ಪ್ರೇಕ್ಷಕರಿಗೆ, ದಕ್ಷಿಣ ಅಮೆರಿಕಾದಲ್ಲಿ ವಾಸಿಸುವ ಕಪ್ಪು ಜನರ ಬಗ್ಗೆ ಅರಿವು ಮೂಡಿಸಿದ ಪ್ರಥಮ ಚಲನಚಿತ್ರ ಎನಿಸಿಕೊಂಡಿದೆ ಬ್ಲ್ಯಾಕ್ ಆರ್ಫೀಯಸ್. ಎಲ್ಲಾ ಕಪ್ಪು ನಟರೇ ಪಾತ್ರ ವಹಿಸಿರುವ ಈ ಚಿತ್ರವು ಅಂತಾರಾಷ್ಟ್ರೀಯ ಯಶಸ್ಸನ್ನು ಗಳಿಸಿತು. ಅತ್ಯುತ್ತಮ ವಿದೇಶಿ ಭಾಷಾ ಚಲನಚಿತ್ರಕ್ಕಾಗಿ ಆಸ್ಕರ್ ಪ್ರಶಸ್ತಿ ಮತ್ತು ಕೇನ್ಸ್ ಫಿಲ್ಮ್ ಫೆಸ್ಟಿವಲ್ ಪ್ರಶಸ್ತಿ ಎರಡನ್ನೂ ಗೆದ್ದುಕೊಂಡಿತು. 1959ರ ನಂತರದ ಹಾಲಿವುಡ್ ಚಲನಚಿತ್ರಗಳಲ್ಲಿ ಆಫ್ರಿಕನ್ ಅಮೆರಿಕನ್ನರ ಜೀವನದ ನಿರೂಪಣೆಯ ಮೇಲೆ ಬ್ಲ್ಯಾಕ್ ಆರ್ಫೀಯಸ್ ಚಿತ್ರ ಬೀರಿರುವ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು. ಕಳೆದ ಐವತ್ತು ವರ್ಷಗಳಲ್ಲಿ ಸಿಟಿ ಆಫ್ ಗಾಡ್ ಮತ್ತು ಫಾವೆಲಾ ರೈಸಿಂಗ್ ಮುಂತಾದ ಅನೇಕ ಬ್ರೆಝಿಲಿಯನ್ ಚಲನಚಿತ್ರಗಳು ಆಫ್ರೋ-ಬ್ರೆಝಿಲಿಯನ್ನರ ಗೋಚರತೆಯನ್ನು ಹೆಚ್ಚಿಸಿವೆ.

ಬ್ರೆಝಿಲ್ ಜಾನಪದ

ಪುರಾಣಗಳು, ದಂತಕಥೆಗಳು, ಜಾನಪದ ಕಥೆಗಳು, ನಂಬಿಕೆಗಳು ಮತ್ತು ಪದ್ಧತಿಗಳು ಸಾಮಾನ್ಯವಾಗಿ ಬಾಯಿಮಾತಿನ ಮೂಲಕ ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ರವಾನೆಯಾಗುತ್ತವೆ. ಈ ಕಥೆಗಳಲ್ಲಿ ಐತಿಹಾಸಿಕ ಘಟನೆಗಳ ಸಡಿಲವಾದ ಛಾಪನ್ನು ಸಹ ಕಾಣಬಹುದು, ಪೌರಾಣಿಕ ಪಾತ್ರಗಳ ಮೂಲಕ ನೀತಿಪಾಠ ಅಥವ ಎಚ್ಚರಿಕೆಯ ಮಾತುಗಳೂ ಸಂಯೋಜಿಸಲ್ಪಟ್ಟಿರುತ್ತವೆ. ಬ್ರೆಝಿಲ್ನಲ್ಲಿ ಬೇಟೆಗಾರ ಅಲೆಮಾರು ಬುಡಕಟ್ಟು ಜನಾಂಗದ ಮೂಲನಿವಾಸಿಗಳು ಪೋರ್ಚುಗೀಸರ ಆಕ್ರಮಣಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಲೂ ವಾಸವಿದ್ದರು. ಈ ಮೂಲನಿವಾಸಿಗಳ ದಂತಕಥೆಗಳು ಅನೇಕ ತಲೆಮಾರುಗಳ ಮೂಲಕ ಹಾದು ಬಂದಿದ್ದು ಸಾಕಷ್ಟು ಬದಲಾವಣೆಗಳನ್ನು ಕಂಡಿವೆ. ಕ್ರಮೇಣ 16ನೇ ಶತಮಾನದಿಂದೀಚೆಗೆ ಆಫ್ರಿಕನ್ ಗುಲಾಮರು, ಪೋರ್ಚುಗೀಸ್ ಮತ್ತು ಇತರೆ ಯೂರೋಪಿಯನ್ನರ ಜಾನಪದ ಕಥೆಗಳ ಪ್ರಭಾವ ಈ ಮೂಲನಿವಾಸಿಗಳ ದಂತಕಥೆಗಳಲ್ಲಿ ಬೆಸೆದುಕೊಂಡಿವೆ. ಆಧುನಿಕ ಸಂಪ್ರದಾಯಗಳು ಹಳೆಯ ಜಾನಪದ ದೊಂದಿಗೆ ಬೆರೆತು, ಹೊಸ ಮತ್ತು ಹೆಚ್ಚು ಪ್ರಸ್ತುತ ಕಥೆಗಳಾಗಿ ವಿಕಸನಗೊಳ್ಳುತ್ತಲೇ ಹೋಗುತ್ತಿವೆ. ಬ್ರೆಝಿಲಿಯನ್ ಜಾನಪದದಲ್ಲಿ ಸಾಕಷ್ಟು ಜನಪ್ರಿಯ, ಆಸಕ್ತಿದಾಯಕ, ರಂಜನೀಯ ಪಾತ್ರಗಳನ್ನು ಕಾಣಬಹುದು. ಅವುಗಳಲ್ಲಿ ಈ ಕೆಳಗಿನ ಕೆಲವು ಉದಾಹರಣೆಗಳ ಮೂಲಕ ಬ್ರೆಝಿಲ್‌ನ ಜಾನಪದ ಸೊಗಡನ್ನು ಓದುಗರಿಗೆ ಪರಿಚಯಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ:

ಸಾಸಿ ಪೆರೇರ (Saci Pererê)

ಒಂಟಿ ಕಾಲಿನ, ಪೈಪ್ ಧೂಮಪಾನ ಮಾಡುವ, ಮಾಂತ್ರಿಕ ಕೆಂಪು ಟೋಪಿ ಧರಿಸುವ, ಕಪ್ಪು ಹುಡುಗ. ಇವನು ತನ್ನ ಟೋಪಿಯ ಮಾಂತ್ರಿಕ ಪ್ರಭಾವದಿಂದ ಬಯಸಿದಾಗ ಕಣ್ಮರೆಯಾಗುವ ಅಥವಾ ಕಾಣಿಸಿಕೊಳ್ಳುವ ಶಕ್ತಿಯನ್ನು ಹೊಂದಿರುತ್ತಾನೆ. ಇವನೊಬ್ಬ ಅಪಾಯಕಾರಿ ಕೇಡಿಗ ಅಥವಾ ಕಿರಿಕಿರಿ ಉಂಟುಮಾಡುವ ಪ್ರಾಣಿ ಎಂದು ಸಾಮಾನ್ಯ ಜನರ ನಂಬಿಕೆ. ಆದರೆ ಇವನನ್ನಾಗಲೀ, ಇವನ ಟೋಪಿಯನ್ನಾಗಲೀ ಹಿಡಿದವರಿಗೆ ಅವರು ಬಯಸಿದ ಉಡುಗೊರೆ ಕೊಡುತ್ತಿದ್ದ. ಅವನ ಟೋಪಿ ಮಾತ್ರ ದುರ್ವಾಸನೆಯಿಂದ ಕೂಡಿದ್ದು, ಅದನ್ನು ಹಿಡಿದವರು ಆ ದುರ್ವಾಸನೆಯನ್ನು ತಮ್ಮಿಂದ ಬಿಡುಗಡೆ ಮಾಡಿಕೊಳ್ಳಲು ಎಂದಿಗೂ ಸಾಧ್ಯವಿಲ್ಲ ಎನ್ನುತ್ತಾರೆ.

ಬೋಯಿಟಾಟ (Boitatá)

ಬ್ರೆಝಿಲ್‌ನ ಟೂಪಿ ಜನಾಂಗದ ಮೂಲನಿವಾಸಿಗಳಿಂದ ಹುಟ್ಟಿಕೊಂಡ ಪಾತ್ರ. ಈ ಪದದ ಅರ್ಥ 'ಬೆಂಕಿಯ ಸರ್ಪ.' ದಂತಕಥೆಯ ಪ್ರಕಾರ, ಒಂದಾನೊಂದು ಕಾಲದಲ್ಲಿ, ಬಹು ದೀರ್ಘ ಕಾಲ ಸೂರ್ಯನ ಬೆಳಕಿಲ್ಲದೆ ಕತ್ತಲೆ ಆವರಿಸಿಕೊಂಡಿತ್ತು. ಇದರಿಂದ ಮಹಾಪೂರವಾಗಿ ಅಸಂಖ್ಯಾತ ಮಾನವರು, ಪ್ರಾಣಿ ಪಕ್ಷಿಗಳು ನಾಶಹೊಂದಿದವು. ಈ ವೇಳೆ ಒಂದು ಗುಹೆಯಲ್ಲಿ ಅಡಗಿಕೊಂಡಿದ್ದ ದೈತ್ಯಾಕಾರದ ಅನಕೊಂಡ ಹೆಬ್ಬಾವು ಹಸಿವು ತಡೆಯಲಾರದೆ ಗುಹೆಯಿಂದ ಹೊರಬಂದಾಗ ಕತ್ತಲೆಯಲ್ಲಿ ಸತ್ತವರ ಹೊಳೆಯುತ್ತಿದ್ದ ಕಣ್ಣುಗಳು ಮಾತ್ರ ಕಾಣಿಸುತ್ತಿದ್ದು, ಕಣ್ಣುಗಳನ್ನೇ ತಿನ್ನಲು ಪ್ರಾರಂಭಿಸಿತು. ಹಾವು ಈ ರುಚಿಕರವಾದ, ಹೊಳೆಯುವ ಕಣ್ಣುಗಳನ್ನು ಹೆಚ್ಚು ಹೆಚ್ಚು ತಿನ್ನುತ್ತಿದ್ದಂತೆ, ಅದರ ದೇಹವು ಹೊಳೆಯಲಾರಂಭಿಸಿತು. ಆದರೆ ಕಣ್ಣುಗಳನ್ನು ಮಾತ್ರ ತಿನ್ನುತ್ತಿದ್ದುದರಿಂದ ಅದರ ದೇಹವು ದಿನೇದಿನೇ ದುರ್ಬಲಗೊಂಡು, ಕೊನೆಗೆ ನಾಶವಾಯಿತು. ಮರಣದ ನಂತರ, ಅದರ ದೇಹದಲ್ಲಿ ಸಂಗ್ರಹಿಸಿಕೊಂಡಿದ್ದ ಬೆಳಕೆಲ್ಲಾ ಹೊರಬಂದು ಕವಿದಿದ್ದ ಕತ್ತಲನ್ನು ಹೋಗಲಾಡಿಸಿತು. ಅಂತೂ ಕತ್ತಲಿನ ಕರಾಳ ದಿನಗಳು ಮುಗಿದವು. ಹೀಗೆ ನಾಶವಾದ ಅನಕೊಂಡ ಹಾವು ಬೋಯಿಟಾಟ ಎಂಬ ದೆವ್ವವಾಗಿ ಇಂದಿಗೂ ಅಮೆಝಾನ್ ಪ್ರದೇಶದ ಕಾಡುಗಳಲ್ಲಿ ಎರಡು ಪ್ರಜ್ವಲಿಸುವ, ಉರಿಯುವ ಕಣ್ಣುಗಳಂತೆ ಕಾಣಿಸಿಕೊಳ್ಳುತ್ತ ರಾತ್ರಿಯಲ್ಲಿ ಹಾರಾಡುತ್ತಿರುತ್ತದೆಯಂತೆ.

ಇಯಾರ (Iara)

ಇದು ಬ್ರೆಝಿಲ್‌ನ ಮೂಲನಿವಾಸಿ ಟುಪಿ ಜನಾಂಗದ ಪುರಾಣದಲ್ಲಿ ಕಾಣುವ ಇಮುಪಿಯಾರ ಎಂಬ ದೈತ್ಯ ಮೀನು ಹಾಗೂ ಯೂರೋಪಿಯನ್ ಪುರಾಣಗಳಲ್ಲಿ ಕಾಣುವ ಮತ್ಸ್ಯಕನ್ಯೆ ಇವುಗಳ ಸಂಯೋಜನೆಯಿಂದ ಬೆಳೆದು ಬಂದ ಪಾತ್ರ ಎಂದು ನಂಬಲಾಗಿದೆ. ಇಯಾರ ಟುಪಿ ಜನಾಂಗದ ತುಂಬಾ ಶ್ರಮಜೀವಿ ಹಾಗೂ ಧೈರ್ಯಶಾಲಿ ಹೆಂಗಸು ಎಂದು ಹೆಸರು ಮಾಡಿದ್ದಳು. ಇದರಿಂದ ಅಸೂಯೆಗೊಂಡ ಅವಳ ಜನಾಂಗದ

ಕೆಲವರು ಒಟ್ಟಾಗಿ ಒಂದು ರಾತ್ರಿ ಅವಳ ಮೇಲೆರಗಿ ಕೊಲ್ಲಲು ಪ್ರಯತ್ನಿಸಿದರು. ಆದರೆ ಇಯಾರ ಧೈರ್ಯದಿಂದ ಹೋರಾಡಿ ತನ್ನನ್ನು ರಕ್ಷಿಸಿಕೊಂಡಿದ್ದಲ್ಲದೆ ಅವಳ ಮೇಲೆರಗಿ ಬಂದವರನ್ನು ಕೊಲ್ಲುತ್ತಾಳೆ. ಇದರಿಂದ ಸಿಟ್ಟಿಗೆದ್ದ ಜನಾಂಗದ ಇತರೆ ಯುವಕರು ಇವಳ ಮೇಲೆ ದಾಳಿ ಮಾಡಲು ಯತ್ನಿಸಿದಾಗ, ಇಯಾರ ಗಾಬರಿಗೊಂಡು ಕಾಡಿಗೆ ಓಡುತ್ತಾಳೆ. ಆದರೆ ಆ ಯುವಕರು ಇಯಾರಳ ಬೆನ್ನಟ್ಟಿ ಹಿಡಿದು ಕೊಂದು ಅಮೆಝಾನ್ ಸೇರುವ ಉಪನದಿಯೊಂದರಲ್ಲಿ ಎಸೆಯುತ್ತಾರೆ. ನದಿಯಲ್ಲಿನ ಮೀನುಗಳು ಇವಳ ದೇಹವನ್ನು ದಡ ತಲುಪಿಸುತ್ತವೆ. ಆಗ ಹುಣ್ಣಿಮೆ ಚಂದ್ರನ ಬೆಳಕಿನ ಪ್ರಭೆಯಿಂದ ಇವಳು ನೀಳ ಕೂದಲಿನ, ಹಸಿರು ಕಣ್ಣಿನ ಮತ್ಸ್ಯಕನ್ಯೆಯಾಗಿ ಪರಿವರ್ತನೆಗೊಳ್ಳುತ್ತಾಳೆ. ತನಗಾದ ಅನ್ಯಾಯಕ್ಕೆ ಪ್ರತೀಕಾರವಾಗಿ, ಇಯಾರ ನದಿ ತೀರಕ್ಕೆ ಬರುವವರಿಗೆ ಆಮಿಷ ಒಡ್ಡಿ ಅವರನ್ನು ಕೊಲ್ಲಲು ಯತ್ನಿಸುತ್ತಾಳೆ.

ಕಾರ್ಪೋ–ಸೆಕೊ (Corpo-Seco)

ಇದೊಂದು ನಡೆದಾಡುವ ಶವ. ಈ ಮನುಷ್ಯನು ಜೀವಂತನಾಗಿದ್ದಾಗ ತೀರಾ ದುಷ್ಟನಾಗಿದ್ದನು. ದುಷ್ಟತನವನ್ನು ಸಹಿಸಲಾರದ ಇವನ ತಾಯಿ 'ನೀನು ಸತ್ತು ಒಣಗು' ಎಂದು ಶಪಿಸುತ್ತಾಳೆ. ಈ ಶಾಪದಿಂದ, ಸತ್ತ ನಂತರ ಅವನ ದೇಹವನ್ನು ಹೂಳಿದರೆ, ಭೂಮಿಯು ಅವನ ದೇಹವನ್ನು ತಿರಸ್ಕರಿಸಿ ಹೊರಕ್ಕೆ ಉಗುಳುತ್ತದೆ. ಹೀಗಾಗಿ ಇವನ ಕೊಳೆತ ದೇಹ ಊರಿನ ಬಯಲು ಪ್ರದೇಶಗಳಲ್ಲಿ ಚೀರಾಡುತ್ತ ಅಲೆಯುತ್ತಿರುತ್ತದೆ. ರಾತ್ರಿ ಹೊತ್ತು ಒಂಟಿಯಾಗಿ ಸಿಕ್ಕವರನ್ನು ಹಿಡಿದು ಅವರ ರಕ್ತವನ್ನು ಹೀರಿಕೊಳ್ಳುತ್ತದೆ. ಬೈಬಲ್ಲಿನಲ್ಲಿ ಉಲ್ಲೇಖಿಸಿರುವ ತೀರ್ಪಿನ ದಿನದವರೆಗೂ (judgement day) ಈ ಪ್ರೇತವು ಇದೇ ಸ್ಥಿತಿಯಲ್ಲಿ ತಿರುಗಾಡುತ್ತಿರುತ್ತದೆ ಎಂದು ಕಥೆಯು ಕಾಲಾಂತರದಲ್ಲಿ ಬದಲಾವಣೆಯನ್ನು ಕಂಡಿದೆ.

ಬೊಟೊ ಎನ್ಕಾಂಟಾಡೊ (Boto Encantado)

ಇದು ಕೊಳಕು ದೇಹದ, ಕೊಬ್ಬಿದ, ಕುರೂಪದ ಹಂದಿಮೀನು (ಡಾಲ್ಫಿನ್). ಸಣ್ಣ ದೋಣಿಗಳನ್ನು ಸುಲಭವಾಗಿ ತಿರುಚಿ ಹಾಕಬಲ್ಲ ಸಾಮರ್ಥ್ಯ ಉಳ್ಳದ್ದು. ಇದರ ಕಣ್ಣುಗಳನ್ನು ನೇರವಾಗಿ ನೋಡಿದವರಿಗೆ ಕೆಟ್ಟ ಕನಸುಗಳು ಕಾಡುತ್ತವೆ. ಆದರೆ ಈ ಕುರೂಪದ ಹಂದಿ ಮೀನು ಬೋಟೊ ರಾತ್ರಿ ವೇಳೆ ಸುಂದರ ಪುರುಷನಾಗಿ ರೂಪಾಂತರಗೊಂಡು ನೃತ್ಯಕೂಟ ಅಥವಾ ಮದ್ಯಕೂಟದ ಸ್ಥಳಗಳಿಗೆ ಭೇಟಿ ನೀಡಿ ಆಕರ್ಷಕ ಯುವತಿಯರನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳುತ್ತದೆ. ಈ ಸುಂದರ ಪುರುಷನ ವೇಷದಲ್ಲಿರುವಾಗ ಬೋಟೊ ಒಂದು ಟೋಪಿ, ನಡುಪಟ್ಟಿ, ಮತ್ತು ಬಿಳಿ ಬೂಟುಗಳನ್ನು ಧರಿಸಿದ್ದು, ಒಂದು ಕತ್ತಿಯನ್ನು ಸಹ ಹೊಂದಿರುತ್ತಾನೆ. ಈ ಪರಿಕರಗಳೆಲ್ಲ ನದಿಗಳಲ್ಲಿ ಜೀವಿಸುವ ವಿವಿಧ ಕೀಟಗಳು ಎಂಬ ನಂಬಿಕೆ ಇಲ್ಲಿನ ಸ್ಥಳೀಯರಲ್ಲಿ.

ಕ್ಯುರುಪಿರ (Curupira)

ಕುಬ್ಜ ಮನುಷ್ಯನನ್ನು ಹೋಲುವ, ತಿರುಚಿದ ಪಾದ ಮತ್ತು ಹೊಳೆಯುವ ಕೆಂಪು / ಕಿತ್ತಳೆ ಬಣ್ಣದ ಕೂದಲನ್ನು ಹೊಂದಿರುವ ಜೀವಿ. ಬ್ರೆಜ಼ಿಲ್‌ನ ಕಾಡುಗಳಲ್ಲಿ ವಾಸಿಸುವ ಈತ ತನ್ನ ತಿರುಚಿದ ಪಾದಗಳ ಹೆಜ್ಜೆ ಗುರುತಿನಿಂದ ಕಳ್ಳ ಬೇಟೆಗಾರರ ದಿಕ್ಕು ತಪ್ಪಿಸಿ ಕಾಡು ಪ್ರಾಣಿಗಳನ್ನು ರಕ್ಷಿಸುತ್ತಾನೆ.

ಮ್ಯಾಪಿಂಗುವಾರಿ (Mapinguari) – (ಗರ್ಜಿಸುವ ಪ್ರಾಣಿ ಅಥವಾ ಭಯಂಕರ ಪ್ರಾಣಿ)

ಇದೊಂದು ಮಂಗನ ಮೂತಿಯ, ವಿಶಾಲ ಪಾದದ, ಮೈತುಂಬ ದಟ್ಟ ಕೂದಲಿನ, ದಪ್ಪ ಚರ್ಮದ, ಹೊಟ್ಟೆಯ ಮಧ್ಯಭಾಗದಲ್ಲಿ ಎರಡನೇ ಬಾಯಿ ಹೊಂದಿರುವ, ದುರ್ವಾಸನೆ ಬೀರುವ, ದೈತ್ಯಾಕಾರದ ಪ್ರಾಣಿ. ಇದು ಅಕ್ರಮವಾಗಿ ಕಾಡನ್ನು ನಾಶ ಮಾಡುವವರ ಮೇಲೆರಗಿ ಅರಣ್ಯ ರಕ್ಷಣೆ ಮಾಡುತ್ತದೆಂದು ಪ್ರತೀತಿ.

ಕ್ಯಾಬೆಚ ಸಾಟಾನಿಕಾ (Cabeça Satânica)

ಈ ಹೆಸರಿನ ಅರ್ಥ ಸೈತಾನನ ತಲೆ. ಇದು ಯೂರೋಪಿಯನ್ ಮೂಲದ ಬ್ರೆಜ಼ಿಲ್‌ನ ಜನಪದ ಕಥೆಯಲ್ಲಿ ಬರುವ ಅಲೆದಾಡುವ ತಲೆ. ತನ್ನ ದೇಹವನ್ನು ಭೂಮಿಯಲ್ಲಿ ಕರಗಿಸಿ, ತಲೆಯ ಉದ್ದ ಕೂದಲನ್ನು ಹರಡಿ ಕಣ್ಣುಗಳನ್ನು ದೊಡ್ಡದಾಗಿ ಅರಳಿಸಿಕೊಂಡು, ರಾತ್ರಿಯ ವೇಳೆ ಅರಣ್ಯದಲ್ಲಿ ಒಬ್ಬಂಟಿಯಾಗಿ ಅಲೆದಾಡುವವರ ಕಡೆ ಕುಚೇಷ್ಟೆಯ ನಗು ಬೀರುತ್ತ ಜಿಗಿಯುತ್ತದೆ.

ಅಲೆಮೋವಾ (Alemoa)

ಇದೊಂದು ಫರ್ನಾಂಡೊ ಡಿ ನೊರೊನ್ಹಾ ದ್ವೀಪದಲ್ಲಿರುವ ಹೊಂಬಣ್ಣದ ಜರ್ಮನ್ ಮಹಿಳೆಯ ಭೂತ ಎಂಬ ನಂಬಿಕೆ. ಇವಳು ಪುರುಷರನ್ನು ಆಕರ್ಷಿಸಿ ಸೆಳೆದು ನಂತರ ಅವರನ್ನು ಸಾವಿಗೆ ದೂಡುತ್ತಾಳೆ.

ಉಪಸಂಹಾರ

ಬ್ರೆಜ಼ಿಲ್‌ನ ಜಾನಪದ ಲೋಕದ ಬಗ್ಗೆ ಬರೆಯುವ ಉದ್ದೇಶದಿಂದ ಪ್ರಾರಂಭವಾದ ಲೇಖನ ಇದು. ಆದರೆ ವಿಷಯ ಸಂಗ್ರಹಣದ ಮೊದಲ ಹಂತದಲ್ಲೇ ಈ ದೇಶದ ಪೂರ್ವೇತಿಹಾಸ, ಪೋರ್ಚುಗೀಸರ ಆಕ್ರಮಣ, ಆಫ್ರಿಕ ಮತ್ತು ಇತರೇ ದೇಶಗಳ ವಲಸಿಗರ ಪ್ರಭಾವ ಇವೆಲ್ಲ ಬ್ರೆಜ಼ಿಲ್‌ನ ಸಂಸ್ಕೃತಿ ಮತ್ತು ಜಾನಪದ ಕಲೆಯ ಮೂಲಕ್ಕೆ ಮತ್ತು ಬೆಳವಣಿಗೆಗೆ ಪೂರಕ ಸಾಮಗ್ರಿಗಳೆಂಬ ಅರಿವಾಯಿತು. ಹಾಗಾಗಿ ಬ್ರೆಜ಼ಿಲ್‌ನ ಸಮಗ್ರ ಸಾಂಸ್ಕೃತಿಕ ಚಿತ್ರಣವನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವ ಲೇಖನವಾಗಿ ಓದುಗರಿಗೆ ತಲುಪಿದೆ. ಈ ಲೇಖನದ ಬಗ್ಗೆ ಸಹೃದಯ ಓದುಗರ ಪ್ರತಿಕ್ರಿಯೆಗೆ ಆದರದ ಸ್ವಾಗತ.

ಆಧಾರ

1. A Study of The Country Brazil: https://www.brazil.org.za/index.html
2. https://www.huffpost.com/entry/afro-brazilian-history-be_b_452877
3. https://www.ancient-origins.net/history-famous-people/pedro-alvares-cabral-navigator-brazil-portuguese-0010143
4. https://en.wikipedia.org/wiki/Indigenous_peoples_in_Brazil
5. https://www.britannica.com/place/Brazil/Settlement-patterns
6. https://en.wikipedia.org/wiki/Football_in_Brazil
7. https://www.toptenz.net/10-figures-brazilian-folklore-dont-want-meet.php

❑

16

ಪ್ಲಾಂಟೇಷನ್ ಗುಲಾಮರ ಜಾನಪದ

ಮೀರಾ ಪಿ. ಆರ್.

ಎಡಿಸನ್, ನ್ಯೂ ಜೆರ್ಸಿ

*

ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ 17 ಮತ್ತು 18ನೇ ಶತಮಾನಗಳಲ್ಲಿ ಪ್ರಚಲಿತವಿದ್ದ ಗುಲಾಮಗಿರಿಯ ಆಚರಣೆ, ಈ ದೇಶದ ಚರಿತ್ರೆಯಲ್ಲಿ ಈಗ ಒಂದು ಕಪ್ಪು ಚುಕ್ಕೆಯಾಗಿಯೇ ಪರಿಗಣಿಸಲ್ಪಟ್ಟಿದೆ. ಆ ಕಾಲದಲ್ಲಿ ಇಲ್ಲಿನ ದಕ್ಷಿಣ ರಾಜ್ಯಗಳಲ್ಲಿದ್ದ ಪ್ಲಾಂಟೇಷನ್‌ಗಳಲ್ಲಿ, ಆಫ್ರಿಕಾದಿಂದ ಬಲವಂತದಿಂದ ಕೊಂಡು ತಂದ ಅಥವಾ ಅಪಹರಿಸಿ ತಂದ ಮಿಲಿಯನ್‌ಗಟ್ಟಲೆ ಸಂಖ್ಯೆಯ ಕಪ್ಪು ಜನರಿದ್ದರು. ಬಹುತೇಕ ಇವರೆಲ್ಲರೂ ಆ ಪ್ಲಾಂಟೇಷನ್‌ಗಳಲ್ಲಿ ಗುಲಾಮರಾಗಿ ದುಡಿಯುತ್ತಿದ್ದರು. ಗುಲಾಮಗಿರಿಯಲ್ಲೇ ಬದುಕನ್ನು ಸವೆಸಿದ ಈ ಕೆಲಸಗಾರರ ನಡುವಿನಲ್ಲಿ ಹುಟ್ಟಿಕೊಂಡ ಜಾನಪದ ವೈವಿಧ್ಯಮಯವಾಗಿದೆ. ಪ್ಲಾಂಟೇಷನ್ ಗುಲಾಮರ ಕೆಲವು ಜಾನಪದ ಕಥೆಗಳನ್ನು ಓದುವ ಮೊದಲಿಗೆ ಗುಲಾಮಗಿರಿಯ ಪೂರ್ವೇತಿಹಾಸ ಮತ್ತು ಅಮೆರಿಕಾದಲ್ಲಿದ್ದ ಕಪ್ಪು ಜನರ ಗುಲಾಮಗಿರಿಯ ಕಡೆಗೆ ಒಂದು ಸಂಕ್ಷಿಪ್ತ ನೋಟ ಹರಿಸಬಹುದು.

ಗುಲಾಮಗಿರಿಯ ಕಥೆಯೆಂದರೆ, ಉಳ್ಳವರು ಮತ್ತು ಇಲ್ಲದವರ ನಡುವಿನ ರಾಜಕೀಯದ ಕಥೆ. ಇಲ್ಲಿ ಉಳ್ಳವರೆಂದರೆ ಶ್ರೀಮಂತರೇ ಆಗಬೇಕೆಂದಿಲ್ಲ. ಹಣ ಉಳ್ಳವರಷ್ಟೇ ಅಲ್ಲದೆ, ಭಾಷೆಯ ಮೇಲೆ ಹತೋಟಿ ಹೊಂದಿದವರು, ಆಳುವ ವರ್ಗದ ರಾಜಕೀಯ ಪ್ರಾಬಲ್ಯ ಹೊಂದಿದವರು, ಆಯಾ ಕಾಲದ ಧರ್ಮ–ಸಂಸ್ಕೃತಿಗಳಲ್ಲಿ ಮೇಲ್ಮೆಯ ಸ್ಥಾನ ಪಡೆದಿದ್ದವರು, ವ್ಯಾಪಾರ ವ್ಯವಹಾರಗಳಲ್ಲಿ ಮೇಲುಗೈ ಇದ್ದವರು, ಹಾಗೆ ಮೇಲ್ಮೆ ಹೊಂದಿಲ್ಲದವರ ಮೇಲೆ ನಿರಂತರವಾಗಿ ಎಲ್ಲಾ ದೇಶ ಕಾಲಗಳಲ್ಲೂ ದಬ್ಬಾಳಿಕೆ ನಡೆಸಿದ್ದಾರೆ, ಒಂದಲ್ಲ ಒಂದು ರೀತಿಯಲ್ಲಿ ಅವರನ್ನು ಗುಲಾಮರಾಗಿ ನಡೆಸಿಕೊಂಡಿದ್ದಾರೆ. ಕುಟುಂಬ ರಾಜಕೀಯದ ಒಳಗೂ ಗುಲಾಮಗಿರಿಯ ನೆರಳಿದೆ. 'ಗುಲಾಮಗಿರಿ' ಎಂಬ ಶಬ್ದದ

ವಿಸ್ತರಣೆ ತುಂಬಾ ದೊಡ್ಡದು. ಆದರೆ ಈ ಲೇಖನದಲ್ಲಿ ಬಂದಿರುವ 'ಗುಲಾಮಗಿರಿ' ಎಂದರೆ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಒಂದು ಸರಕಿನ ಹಾಗೆ ಮಾರುವ, ಕೊಳ್ಳುವ ಮತ್ತು ಹೊಂದುವ ಕುರಿತಾದದ್ದು. ಈ ಪಿಡುಗು ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ಎಲ್ಲಾ ದೇಶ ಮತ್ತು ಸಂಸ್ಕೃತಿಗಳಲ್ಲೂ ಅಸ್ತಿತ್ವದಲ್ಲಿತ್ತು. ಹಾಗೆ ಗುಲಾಮರಾಗಿ ಕೊಂಡವರನ್ನು ಅವರ ಇಚ್ಛೆಗೆ ವಿರುದ್ಧವಾಗಿ, ಯಾವ ವರಮಾನವನ್ನೂ ನೀಡದೆ ಅಥವಾ ಅತ್ಯಂತ ಕನಿಷ್ಠವಾದ ವರಮಾನದಲ್ಲಿ, ಬರ್ಬರವಾಗಿ ಮತ್ತು ಬಲವಂತವಾಗಿ ದುಡಿಸಿಕೊಳ್ಳಲಾಗುತ್ತಿತ್ತು. ದುಡಿಮೆಗಷ್ಟೇ ಅಲ್ಲದೆ ಅವರನ್ನು ಬೇಕೆಂದ ಹಾಗೆಲ್ಲಾ ಬಳಸಿಕೊಳ್ಳಲಾಗುತ್ತಿತ್ತು. ಬೇರೆ ಬೇರೆ ಸ್ವರೂಪ ಮತ್ತು ಹೆಸರುಗಳಲ್ಲಿ ಎಲ್ಲಾ ಕಾಲದಲ್ಲಿಯೂ ಇದ್ದ ಈ ವ್ಯವಸ್ಥೆ ಇಂದಿನ, ನಾವು 'ಆಧುನಿಕ'ವೆಂದು ಕರೆಯುತ್ತಿರುವ ಈ ಕಾಲದಲ್ಲಿಯೂ ಇದೆ. ಆಯಾ ದೇಶ ಮತ್ತು ಕಾಲಗಳ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿಗಳಿಗನುಗುಣವಾಗಿ ಅಲ್ಲಲ್ಲಿನ ಗುಲಾಮರ ಸ್ಥಿತಿಗತಿಗಳಲ್ಲಿ ಕೂಡ ವ್ಯತ್ಯಾಸವಿತ್ತು ಮತ್ತು ಇದೆ.

ಮಾನವ ಜನಾಂಗ ಬೇಟೆಯಾಡಿಯೇ ಬದುಕುತ್ತಿದ್ದ 'ಹಂಟರ್-ಗ್ಯಾದರರ್' ಕಾಲದಲ್ಲಿ ಇರದಿದ್ದ ಈ ಗುಲಾಮಗಿರಿಯ ಕಲ್ಪನೆ ಆ ನಂತರದ ಶ್ರೇಣೀಕರಣಗೊಂಡ ಸಾಮಾಜಿಕ ವ್ಯವಸ್ಥೆಯ ಜೊತೆಗೇ ಬೆಳೆದುಬಂದಿದೆ ಎನ್ನಲಾಗಿದೆ. ಯಾವಾಗ ಮನುಷ್ಯರು ಅಲೆಮಾರಿತನವನ್ನು ಬಿಟ್ಟು ಗುಂಪುಗಳಾಗಿ ಬಣ, ಬುಡಕಟ್ಟು, ರಾಜ್ಯಗಳೆಂಬ ವ್ಯವಸ್ಥೆ ಮಾಡಿಕೊಂಡು ಒಟ್ಟಿಗೆ ಬದುಕಲಾರಂಭಿಸಿದರೋ ಅಂದಿನಿಂದಲೂ ಈಗ ನಾವು 'ಗುಲಾಮಗಿರಿ' ಎಂಬ ಹೆಸರಿನಿಂದ ಕರೆಯುವ ವ್ಯವಸ್ಥೆಯೊಂದು ರೂಪುಗೊಂಡಿರಬಹುದು. ಗುಂಪಿಗೊಬ್ಬ ನಾಯಕ ಅಥವಾ ರಾಜ ಮತ್ತು ಅವನ ಕೈ ಕೆಳಗೆ ವಿವಿಧ ಶ್ರೇಣಿಯಲ್ಲಿ ವಿವಿಧ ಕೆಲಸಗಳನ್ನು ನಿರ್ವಹಿಸುವ ಜನರಿರುವ ವ್ಯವಸ್ಥೆಯ ಆರಂಭಿಕ ಕಾಲದಲ್ಲೇ ಈ ಪದ್ಧತಿಯು ಅಸ್ತಿತ್ವದಲ್ಲಿದ್ದಿದ್ದು ತಿಳಿದುಬಂದಿದೆ. ಪ್ರಾಚೀನ ಮೆಸಪೊಟೋಮಿಯಾ (ಕ್ರಿ.ಪೂ. –3500) ಸಂಸ್ಕೃತಿಯಲ್ಲೇ ಗುಲಾಮಗಿರಿ ಅತ್ಯಂತ ಸುವ್ಯವಸ್ಥಿತವಾಗಿ ಬೆಳೆದು ಬಂದಿದ್ದಕ್ಕೆ ಸಾಕ್ಷಿಗಳಿವೆ.

ಅಮೆರಿಕಾ ಖಂಡವು ಅಸ್ತಿತ್ವದಲ್ಲಿ ಇರುವುದೇ ಉಳಿದ ಭೂಭಾಗಗಳಿಗೆ ಗೊತ್ತಿರದಿದ್ದ ಕಾಲದಲ್ಲಿ ಯೂರೋಪ್, ಮಧ್ಯ ಪ್ರಾಚ್ಯ, ಏಷ್ಯಾ ಮುಂತಾದೆಡೆಗಳಲ್ಲಿ ಗುಲಾಮಗಿರಿಯ ವ್ಯಾಪಾರ ಯಥೇಚ್ಛವಾಗಿ ನಡೆಯುತ್ತಿತ್ತು. ಮುಂದೆ ಯೂರೋಪಿನ ಬಹುಭಾಗಗಳು ಕ್ರಿಶ್ಚಿಯನ್ ಆಗಿ ಬದಲಾಗುತ್ತಲೂ ಕ್ರಿಶ್ಚಿಯನ್ ಮತ್ತು ಮುಸ್ಲಿಂ ದೇಶಗಳ ನಡುವಣ ನಾನಾ ಕಾರಣಗಳಿಂದಾಗಿ ಹೆಚ್ಚಿದ ಹಗೆತನದ ಕಾರಣದಿಂದಲೂ ಗುಲಾಮಗಿರಿಯ ವ್ಯಾಪಾರಕ್ಕಾಗಿ ಯೂರೋಪಿಯನ್ನರು ಇನ್ನೂ ದೂರ ದೂರದ ಭೂಭಾಗಗಳನ್ನು ಆಧರಿಸಬೇಕಾಗಿ ಬಂತು. 16ನೇ ಶತಮಾನದ ವೇಳೆಗಾಗಲೇ ಆಫ್ರಿಕಾದ ಗುಲಾಮರು ಬೇರೆಲ್ಲಾ ಜನಾಂಗ ಮತ್ತು ಧಾರ್ಮಿಕ ಹಿನ್ನೆಲೆಯುಳ್ಳ ಗುಲಾಮರ ಜಾಗವನ್ನು ತುಂಬಿಸಿ ಆಗಿತ್ತು.

ಆಫ್ರಿಕಾದಿಂದ ಗುಲಾಮರನ್ನು ಕೊಂಡು ತರುವಾಗ ಯೂರೋಪಿಯನ್ನರು ಮುಖ್ಯವಾಗಿ ಆಫ್ರಿಕಾದ ಒಳನಾಡಿಗೆ ಕಾಲಿಡುತ್ತಿರಲಿಲ್ಲ. ದಟ್ಟ ಅರಣ್ಯಗಳಲ್ಲಿದ್ದ ಮೃಗ, ವಿಷಜಂತುಗಳ ಭಯವಲ್ಲದೆ ಈ ಕಾಡುಗಳಲ್ಲಿದ್ದ ಬುಡಕಟ್ಟು ಮನುಷ್ಯರಿಂದಲೂ ಕೊಲ್ಲಲ್ಪಡುವ ಭಯ ಅವರಿಗಿತ್ತು. ಆಫ್ರಿಕಾದಲ್ಲೇ ಒಂದು ಬುಡಕಟ್ಟು ಅಥವಾ ಬಣದಿಂದ ಯೂರೋಪಿಯನ್ನರಿಗೆ ಮಾರಲಿಕ್ಕೆಂದೇ ಇನ್ನೊಂದು ಬಣದವರು ಜನರನ್ನು ಅಪಹರಿಸುವುದಿತ್ತು. ಹೀಗೆ ಬೇರೆ ಬಣಗಳಿಂದ ಅಪಹರಿಸಲ್ಪಟ್ಟ ಅಥವಾ ತಮ್ಮದೇ ಬಣದಲ್ಲಿ ವಿವಿಧ ಕಾರಣಗಳಿಗಾಗಿ ಶಿಕ್ಷೆ ಅನುಭವಿಸುತ್ತಿದ್ದ ಜನರನ್ನು ಆಫ್ರಿಕನ್ನರೇ ಕಡಲಂಚಿಗೆ ಬರುತ್ತಿದ್ದ ಯೂರೋಪಿಯನ್ ಮಾರಾಟಗಾರರಿಗೆ ಮಾರುತ್ತಿದ್ದರು. ತಮ್ಮವರಿಂದಲೇ ಹೀಗೆ ಮಾರಲ್ಪಟ್ಟ ಅಥವಾ ಅಪಹರಿಸಲ್ಪಟ್ಟ ಕಪ್ಪು ಜನರು ಯೂರೋಪಿನ ಹಲವು ದೇಶಗಳಿಗೆ ತೆರಳಿ ಗುಲಾಮರಾಗಿ ಬಾಳಬೇಕಾಯಿತು. ಮುಂದೆ ಕ್ರಿಸ್ಟೋಫರ್ ಕೊಲಂಬಸ್ ಅಮೆರಿಕಾ 'ಕಂಡುಹಿಡಿದಾದ' ಮೇಲೆ, ಈ ಹೊಸ ಜಗತ್ತಿನಲ್ಲೂ ಮೊದಲಿಗೆ ದಕ್ಷಿಣ ಅಮೆರಿಕಾ ಮತ್ತು ಕೆರೆಬಿಯನ್ ದ್ವೀಪಗಳಲ್ಲಿ ಕಬ್ಬು ಬೆಳೆಯುವ, ಸಕ್ಕರೆ ಪರಿಷ್ಕರಿಸುವ ಕೆಲಸಕ್ಕಾಗಿಯೇ ಮೊದಲೆಂದೂ ಕಂಡರಿಯದ ಸಂಖ್ಯೆಯಲ್ಲಿ ಆಫ್ರಿಕಾದಿಂದ ಕೊಂಡು ತಂದ ಅಥವಾ ಕದ್ದು ತಂದ ಗುಲಾಮರು ಹೊಸ ಜಗತ್ತಿಗೆ ಕಾಲಿರಿಸಬೇಕಾಯ್ತು.

ಭಾರತಕ್ಕೆ ಹೊಸ ದಾರಿಯನ್ನು ಕಂಡುಹಿಡಿಯಲೆಂದು ಹೊರಟ ಕೊಲಂಬಸ್, 1492ರಲ್ಲಿ ಫ್ಲೋರಿಡಾ ತೀರ ಪ್ರದೇಶದ ಬಹಾಮಾಸ್ ಗುಂಪಿನ ಸಾನ್ ಸಾಲ್ವಡಾರ್ ದ್ವೀಪವನ್ನು ಕಂಡುಹಿಡಿಯುವವರೆಗೆ ಹೀಗೊಂದು ನೆಲವಿರುವುದೇ ಉಳಿದ ಭೂಮಂಡಲದಲ್ಲಿ ಯಾರಿಗೂ ತಿಳಿದಿರಲಿಲ್ಲ. ಕೊಲಂಬಸ್‌ಗಿಂತ ಸುಮಾರು 15,000 ವರ್ಷಗಳಷ್ಟು ಹಿಂದೆ ಏಷ್ಯಾದಿಂದ ಅಮೆರಿಕಾ ಖಂಡಕ್ಕೆ ವಲಸೆ ಬಂದಿದ್ದವರು ಎನ್ನಲಾದ ಜನ ಇಲ್ಲಿನ ನಿವಾಸಿಗಳಾಗಿದ್ದರು. ವಿವಿಧ ಭಾಷೆಗಳನ್ನಾಡುತ್ತ, ವೈವಿಧ್ಯಮಯ ಸಂಸ್ಕೃತಿಗಳಲ್ಲಿ ಹಲವು ಬಣ, ಬುಡಕಟ್ಟುಗಳಾಗಿ ಈಗಿನ ಕೆನಡಾ, ಉತ್ತರ ಮತ್ತು ದಕ್ಷಿಣ ಅಮೆರಿಕಾದ ವಿವಿಧೆಡೆಗಳಲ್ಲಿ ನೆಲೆಗೊಂಡಿದ್ದವರಿವರು. ಅಕ್ಟೋಬರ್ 12, 1492ರಂದು ಕೊಲಂಬಸ್‌ನ ನೌಕೆ, ಸಾನ್ ಸಾಲ್ವಡಾರ್ ದ್ವೀಪದಲ್ಲಿ ಭೂಸ್ಪರ್ಶ ಮಾಡುತ್ತಿದ್ದಂತೆ ಅಲ್ಲಿಯವರೆಗಿನ ಜಗತ್ತಿನ ನಕ್ಷೆ ಬದಲಾಯಿತು. ಈ ವಿಸ್ತಾರವಾದ ಹೊಸ ನೆಲದ ಅನಂತ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳಲು, ತಮ್ಮ ತಮ್ಮ ದೇಶಗಳನ್ನು ವಿಶ್ವದ ವ್ಯಾಪಾರ ವ್ಯವಹಾರಗಳಲ್ಲಿ ಬಲಿಷ್ಠವಾಗಿಸಲು ಸಾಲಾಗಿ ಯೂರೋಪಿನ ವಿವಿಧ ಭಾಗಗಳಿಂದ ಜನರು ಈ ಹೊಸ ಜಗತ್ತಿಗೆ ಕಾಲಿಡತೊಡಗಿದರು.

ಯೂರೋಪಿಯನ್ನರಿಂದ ಕೊಂಡು ತಂದ ಮೊದಮೊದಲ ಆಫ್ರಿಕನ್ನರು, ದಕ್ಷಿಣ ಅಮೆರಿಕಾದ ಗುಲಾಮರ ಮಾರುಕಟ್ಟೆಗಳಲ್ಲಿ ಮತ್ತೆ ಮಾರಾಟಗೊಂಡು ದಕ್ಷಿಣ ಅಮೆರಿಕಾ, ಮಧ್ಯ ಅಮೆರಿಕಾ ಮತ್ತು ಉತ್ತರ ಅಮೆರಿಕಾದ ದಕ್ಷಿಣ ರಾಜ್ಯಗಳಿಗೆ ತಮ್ಮ ಒಡೆಯರ ಬಳಿ ಕೆಲಸ ಮಾಡಲು ತೆರಳುತ್ತಿದ್ದರು. ದಕ್ಷಿಣ ಅಮೆರಿಕಾ ಅಥವಾ ಲ್ಯಾಟಿನ್ ಅಮೆರಿಕಾದಲ್ಲಿ ಹೆಚ್ಚಿನ ಸಂಖ್ಯೆಯ ಗುಲಾಮರು ಕಬ್ಬಿನ ಪ್ಲಾಂಟೇಷನ್‌ಗಳಲ್ಲಿ ದುಡಿಯುತ್ತಿದ್ದರು. ಇದಲ್ಲದೆ

ತಂಬಾಕು, ಅಕ್ಕಿ, ಹತ್ತಿ, ಮುಸುಕಿನ ಜೋಳ ಮತ್ತು ಹಣ್ಣುಗಳನ್ನು ಬೆಳೆಯುವಲ್ಲಿಯೂ ಆಫ್ರಿಕನ್ ಕಪ್ಪು ಜನರು ಗುಲಾಮರಾಗಿದ್ದರು. ಉತ್ತರ ಅಮೆರಿಕಾದಲ್ಲಿದ್ದ ಗುಲಾಮರ ಸ್ಥಿತಿಗತಿಗಳಿಗಿಂತಲೂ ದಕ್ಷಿಣ ಅಮೆರಿಕಾ ಮತ್ತು ಕೆರೇಬಿಯನ್ ದ್ವೀಪಗಳಲ್ಲಿದ್ದ ಗುಲಾಮರ ಸ್ಥಿತಿ ಅತ್ಯಂತ ಕಠಿಣವಾಗಿಯೂ ಶೋಚನೀಯವಾಗಿಯೂ ಇತ್ತು. ಉತ್ತರ ಅಮೆರಿಕಾದ ಪ್ಲಾಂಟೇಷನ್‌ಗಳಲ್ಲಿ ದುಡಿಯುತ್ತಿದ್ದ ಗುಲಾಮರ ಸಾಮಾನ್ಯ ಜೀವಿತಾವಧಿಯಷ್ಟೇ ಅಲ್ಲ, ಅವರಲ್ಲಿ ಹುಟ್ಟುವ ಮಕ್ಕಳ ಸಂಖ್ಯೆಯೂ ಹೆಚ್ಚಿತ್ತು. ಹೀಗಾಗಿ ಬಹಳಷ್ಟು ಜನ ಆಫ್ರಿಕನ್ ಗುಲಾಮರು ದಕ್ಷಿಣ ಅಮೆರಿಕಾದಿಂದ ಹೇಗೂ ತಪ್ಪಿಸಿಕೊಂಡೋ ಅಥವಾ ತಮ್ಮ ಒಡೆಯರಿಂದ ಸ್ವಾತಂತ್ರ್ಯವನ್ನು ದೊರಕಿಸಿಕೊಂಡೋ ಉತ್ತರ ಅಮೆರಿಕಾಗೆ ಓಡಿ ಬರುತ್ತಿದ್ದರು.

ಅಂದ ಮಾತ್ರಕ್ಕೆ ಉತ್ತರ ಅಮೆರಿಕಾದಲ್ಲಿ ಗುಲಾಮರ ಸ್ಥಿತಿ ಬಹಳ ಚೆನ್ನಾಗಿತ್ತು ಎಂದೇನೂ ಅಲ್ಲ. ಉತ್ತರ ಅಮೆರಿಕಾದ ಪ್ಲಾಂಟೇಷನ್‌ಗಳಲ್ಲಿ ಗುಲಾಮರಾಗಿ ದುಡಿಯುತ್ತಿದ್ದ ಆಫ್ರಿಕಾ ಮೂಲದ ಕಪ್ಪು ಜನರ ಜೀವನ ದುರ್ಭರವಾಗಿಯೇ ಇತ್ತು. 1607–1776ರವರೆಗೂ ಅಮೆರಿಕಾ ಹದಿಮೂರು ಕಾಲೊನಿಗಳಾಗಿ ಬ್ರಿಟನ್ನಿನ ವಸಾಹತು ದೇಶವಾಗಿದ್ದಾಗಲೂ ನಂತರ 1776ರಲ್ಲಿ ಸ್ವತಂತ್ರವಾದ ಮೇಲೂ ಇಲ್ಲಿದ್ದ ಆಫ್ರಿಕನ್ ಮೂಲದ ಕರಿಯ ಗುಲಾಮರ ಜೀವನದಲ್ಲಿ ಏನೂ ಬದಲಾಗಲಿಲ್ಲ. ಅಂದಿನ ಅಮೆರಿಕಾದ ದಕ್ಷಿಣ ರಾಜ್ಯಗಳಾಗಿದ್ದ ಮೇರಿಲ್ಯಾಂಡ್, ವರ್ಜೀನಿಯಾ, ನಾರ್ತ್ ಕ್ಯಾರೋಲಿನಾ, ಸೌತ್ ಕ್ಯಾರೋಲೀನಾ ಮತ್ತು ಜಾರ್ಜಿಯಾಗಳಲ್ಲಿದ್ದ ದೊಡ್ಡ ದೊಡ್ಡ ಪ್ಲಾಂಟೇಷನ್‌ಗಳಲ್ಲಿ ಕಪ್ಪು ಜನರು ಗುಲಾಮರಾಗಿ ದುಡಿಯುತ್ತಿದ್ದರು. ಅಮೆರಿಕಾ ದೇಶವು ಕಾಲಾಂತರದಲ್ಲಿ ದೊಡ್ಡದಾಗಿ ಬೆಳೆದಂತೆಲ್ಲ ಉತ್ತರದ ಫ್ರೀ ಸ್ಟೇಟ್ಸ್‌ಗಳ (ಸ್ವತಂತ್ರ ರಾಜ್ಯಗಳ) ಹಾಗೆಯೇ ದಕ್ಷಿಣದ ಕೃಷಿ ಆಧಾರಿತ ಸ್ಲೇವ್ ಸ್ಟೇಟ್ಸ್‌ಗಳ (ಗುಲಾಮರುಳ್ಳ ರಾಜ್ಯಗಳ) ಸಂಖ್ಯೆಯೂ ಬೆಳೆಯಿತು. ಈ ದಕ್ಷಿಣ ರಾಜ್ಯಗಳಲ್ಲಿದ್ದ ಫಲವತ್ತಾದ ಭೂಮಿ ಮತ್ತು ಅನುಕೂಲಕರ ಹವಾಮಾನವು ಕೃಷಿಗಾಗಿ ಹೇಳಿ ಮಾಡಿಸಿದ್ದಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ವಾಣಿಜ್ಯ ಬೆಳೆಗಳಾಗಿ ಹತ್ತಿ, ಕಬ್ಬು, ತಂಬಾಕು, ಅಕ್ಕಿ, ಇಂಡಿಗೋ ಮತ್ತಿತರ ಬೆಳೆಗಳನ್ನು ಬೆಳೆಸುತ್ತಿದ್ದ ಈ ರಾಜ್ಯಗಳಲ್ಲಿ ಕಷ್ಟಸಹಿಷ್ಣುಗಳಾಗಿ ಬಿಡುವಿಲ್ಲದೆ ದುಡಿಯುವ ಜನರ ಅಗತ್ಯ ಸದಾಕಾಲವೂ ಇತ್ತು. ಈ ಅಗತ್ಯಕ್ಕಾಗಿ ಮನುಷ್ಯರನ್ನು ಬಳಸಿಕೊಂಡು ಅವರ ಬದುಕನ್ನು ದುರ್ಭರವಾಗಿಸಿದ್ದು ಮಾತ್ರ ಹೇಯಕರ.

ಪ್ಲಾಂಟೇಷನ್‌ಗಳಲ್ಲಿ ಸಾಮಾನ್ಯವಾಗಿ ಆಫ್ರಿಕನ್ ಮೂಲದ ಜನ ಹೊತ್ತು ಮೂಡುವುದರಿಂದ ತೊಡಗಿ ಕತ್ತಲಾಗುವವರೆಗೂ ದುಡಿಯಬೇಕಿತ್ತು. ಇದಲ್ಲದೆ ಒಡೆಯರ ಮನೆಯಲ್ಲಿ ಕೆಲಸ ಮಾಡುವ ಗುಲಾಮರೂ ಇರುತ್ತಿದ್ದರು. ಈ ಗುಲಾಮರನ್ನು ನೋಡಿಕೊಳ್ಳುವ ಮೇಲ್ವಿಚಾರಕರಿದ್ದು ಅವರ ಕೈಕೆಳಗೆ 'ಡ್ರೈವರ್' ಎಂಬ ಹೆಸರಿನಲ್ಲಿ ಕರೆಯುತ್ತಿದ್ದ ಬಿಳಿ, ಕಪ್ಪು ಅಥವಾ ಮಿಶ್ರಜನಾಂಗದ ಸಮುದಾಯದವರು ಇರುತ್ತಿದ್ದರು. ಈ ಡ್ರೈವರ್‌ಗಳಿಗೆ ಉಳಿದೆಲ್ಲ ಕೆಲಸಗಾರರ ಮೇಲೂ ಕಣ್ಣಿಟ್ಟು ಅವರು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುವಂತೆ, ನಡುವೆ ಬಿಡುವು ತೆಗೆದುಕೊಳ್ಳದಂತೆ ನೋಡಿಕೊಳ್ಳುವ

ಹೊಣೆ ಇತ್ತು. ಕೆಲಸ ನಿರ್ವಹಿಸುವಲ್ಲಿ ಚ್ಯುತಿ ಬಂದರೆ ಕೆಲಸಗಾರರಿಗೆ ಚಾವಟಿಯಿಂದ ಹೊಡೆಯುವ ಕೆಲಸ ಈ ಡ್ರೈವರ್‌ಗಳದ್ದಾಗಿದ್ದಿತು. ಒಡೆಯ, ಒಡತಿ ಮತ್ತು ಕುಟುಂಬದವರ ದೊಡ್ಡ ಮನೆ, ಮೇಲ್ವಿಚಾರಕರ ಸಣ್ಣ ಮನೆ ಮತ್ತು ಉಳಿದೆಲ್ಲ ಕೆಲಸಗಾರರಿರುತ್ತಿದ್ದ ಜೋಪಡಿಯಂತಾ ಮರದ ಕ್ಯಾಬಿನ್‌ಗಳು ಪ್ಲಾಂಟೇಷನ್‌ಗಳಲ್ಲಿರುತ್ತಿದ್ದವು. ಎಲ್ಲೋ ಕೆಲವು ಪ್ಲಾಂಟೇಷನ್‌ಗಳಲ್ಲಿ ಒಳ್ಳೆಯವರೆನಿಸಿದ ಒಡೆಯರಿದ್ದಲ್ಲಿ ದುಡಿಯುತ್ತಿದ್ದ ಗುಲಾಮರ ಸ್ಥಿತಿ ಸ್ವಲ್ಪವಾದರೂ ಉತ್ತಮವಾಗಿದ್ದರೂ ಹೆಚ್ಚಿನಂಶ ಎಲ್ಲಾ ಪ್ಲಾಂಟೇಷನ್‌ಗಳಲ್ಲೂ ಗುಲಾಮರ ದುಡಿಮೆ, ವೈಯಕ್ತಿಕ ಜೀವನ ಎಲ್ಲವೂ ಅತ್ಯಂತ ಕಷ್ಟಕರವಾಗಿದ್ದಿತು. ಒಂದು ಪ್ಲಾಂಟೇಷನ್ನಿನಿಂದ ಇನ್ನೊಂದು ಪ್ಲಾಂಟೇಷನ್ನಿಗೆ ಗುಲಾಮರು ಮಾರಲ್ಪಡುತ್ತಿದ್ದಿದ್ದೂ ಇದ್ದಿದ್ದರಿಂದ ಅವರಿಗೆ ತಮ್ಮ ಸ್ವತಃ ಕುಟುಂಬ, ಮಕ್ಕಳು, ಉಳಿದ ಪರಿವಾರದೊಂದಿಗೆ ಜೀವನ ಪೂರ್ತಿ ಕಳೆಯುವ ಸ್ವಾತಂತ್ರ್ಯವೂ ಇರಲಿಲ್ಲ.

ಇದರ ಜೊತೆಗೇ ಅಮೆರಿಕಾ ಸಂಯುಕ್ತ ಸಂಸ್ಥಾನದ ಚರಿತ್ರೆಯನ್ನು ನೋಡಿದರೆ, ಇಲ್ಲಿ ಮೊದಲಿನಿಂದಲೂ 'ಫ್ರೀ ನೀಗ್ರೋ' ಅಥವಾ 'ಫ್ರೀ ಬ್ಲ್ಯಾಕ್' ಎಂದೇ ಕರೆಯಲ್ಪಡುತ್ತಿದ್ದ ಗುಲಾಮರಲ್ಲದ, ಸ್ವತಂತ್ರರಾದ ಕಪ್ಪು ಜನರೂ ಇದ್ದರು. ಇಂತಹವರಲ್ಲಿ ಹುಟ್ಟಿನಿಂದಲೂ ಸ್ವತಂತ್ರರಾಗಿದ್ದವರಲ್ಲದೆ, ಮೊದಲು ಗುಲಾಮರಾಗಿದ್ದು ನಂತರ ಸ್ವಾತಂತ್ರ್ಯ ಗಳಿಸಿಕೊಂಡಿದ್ದವರೂ ಸೇರಿದ್ದರು. 17ನೇ ಶತಮಾನದಲ್ಲಿಯೇ ನಾವಿಕರಾಗಿಯೋ ಅಥವಾ ಹಡಗಿನಲ್ಲಿ ಇತರ ಕೆಲಸಗಾರರಾಗಿಯೋ ಬಂದ ಹಲವು ಕಪ್ಪು ಜನರು ಅಮೆರಿಕಾ ತಲುಪಿದ ಮೇಲೂ ತಮ್ಮದೇ ಕೆಲಸಕಾರ್ಯಗಳನ್ನು ಸಂಪಾದಿಸಿ ಮಾಡುತ್ತಾ ಸ್ವತಂತ್ರವಾಗಿಯೇ ಇದ್ದರು. ಇವರ್ಯಾರೂ ಅಪಹರಿಸಿ ಅಥವಾ ಕೊಂಡು ತಂದವರಾಗಿರಲಿಲ್ಲ. ಇದಲ್ಲದೆ ಮೊದಲೇ ಒಪ್ಪಂದ ಮಾಡಿಕೊಂಡು ಇಂತಿಷ್ಟು ಅವಧಿಯ ಇಂತಿಷ್ಟು ಕೆಲಸಕ್ಕೆಂದೇ ಆಫ್ರಿಕಾ ಮತ್ತು ಯೂರೋಪಿನ ಹಲವು ಭಾಗಳಿಂದ ಬಂದಿದ್ದ ಕಪ್ಪು ಜನರೂ ತಮ್ಮ ಕರಾರಿನ ಅವಧಿ ಮುಗಿದ ನಂತರ ಸ್ವತಂತ್ರರೆನಿಸುತ್ತಿದ್ದರು. ಇವರಷ್ಟೇ ಅಲ್ಲದೆ, ದಕ್ಷಿಣ ರಾಜ್ಯಗಳ ಪ್ಲಾಂಟೇಷನ್‌ಗಳಲ್ಲಿ ಮತ್ತು ತಮ್ಮ ಒಡೆಯರ ಮನೆಗಳಲ್ಲಿ ಗುಲಾಮರಾಗಿ ಕೆಲಸ ಮಾಡುತ್ತಿದ್ದ ಹಲವರು ಕೂಡ ಕಾಲಾಂತರದಲ್ಲಿ ತಮ್ಮ ಒಡೆಯರಿಂದಲೇ ಸ್ವತಂತ್ರಗೊಂಡು ಬೇರೆ ಕೆಲಸ ಮಾಡುತ್ತಲೋ ಅಥವಾ ಸ್ವತಃ ಭೂಮಿ ಕೊಂಡು ವ್ಯವಸಾಯ ಮಾಡುತ್ತಲೋ ಜೀವಿಸುತ್ತಿದ್ದರು. ಇಂತಹವರ ಪ್ಲಾಂಟೇಷನ್‌ಗಳಲ್ಲೂ ಕಪ್ಪು ಜನರೇ ಗುಲಾಮರಾಗಿ ತಮ್ಮ ಕಪ್ಪು ಒಡೆಯನ ಸ್ವತ್ತಾಗಿ ದುಡಿಯಬೇಕಾಗುತ್ತಿತ್ತು.

ಆಗಿನ ಅಮೆರಿಕಾದಲ್ಲಿ ಎಲ್ಲೆಡೆಯೂ ಒಂದು ಕಾಲದವರೆಗೂ ಗುಲಾಮಗಿರಿ ಎನ್ನುವುದು ಇದ್ದರೂ ಉತ್ತರ ಭಾಗದ ಅಮೆರಿಕಾದಲ್ಲಿ ಬಹು ಬೇಗನೆ ಈ ಪಿಡುಗು ಇಲ್ಲವಾಗಿ ಅಲ್ಲಿನ ಕಪ್ಪು ಜನರು ಸ್ವತಂತ್ರರೆನಿಸಿದ್ದರು. ದಕ್ಷಿಣದ ಕೃಷಿ ಪ್ರಧಾನ ರಾಜ್ಯಗಳಲ್ಲಿ ದೊಡ್ಡ ದೊಡ್ಡ ಪ್ಲಾಂಟೇಷನ್, ನೆಡುತೋಪು ಅಥವಾ ಎಸ್ಟೇಟುಗಳಲ್ಲಿ ಕೆಲಸಗಾರರ ಅಗತ್ಯವಿದ್ದು ಇಲ್ಲೆಲ್ಲಾ ಗುಲಾಮಗಿರಿ ಚಾಲ್ತಿಯಲ್ಲಿತ್ತು. ಉತ್ತರದ ರಾಜ್ಯಗಳಿಂದ ಸ್ವತಂತ್ರರೆನಿಸಿದ್ದ

ಕಪ್ಪು ಜನರನ್ನು ಅಪಹರಿಸಿ ತಂದು ದಕ್ಷಿಣ ರಾಜ್ಯಗಳ ಪ್ಲಾಂಟೇಷನ್‌ಗಳಲ್ಲಿ ಗುಲಾಮರಾಗಿಸುವ ಜಾಲವೂ ಇತ್ತು.

ಗುಲಾಮಗಿರಿ ಚಾಲ್ತಿಯಲ್ಲಿದ್ದ ದಕ್ಷಿಣದ ಪ್ರಾಂತ್ಯಗಳನ್ನು 'ಸ್ಲೇವ್ ಸ್ಟೇಟ್ಸ್' ಎಂದೂ ಗುಲಾಮಗಿರಿಯನ್ನು ವಿರೋಧಿಸಿದ್ದ ಉತ್ತರದ ಪ್ರಾಂತ್ಯಗಳನ್ನು 'ಫ್ರೀ ಸ್ಟೇಟ್ಸ್' (ಗುಲಾಮರಿಗೆ ಸ್ವಾತಂತ್ರ್ಯ ಕೊಟ್ಟಿದ್ದ ಪ್ರಾಂತ್ಯಗಳು) ಎಂದೂ ಕರೆಯುತ್ತಿದ್ದರು. ಫ್ರೀ ಸ್ಟೇಟ್ಸ್‌ಗಳಲ್ಲಿದ್ದ 'ಫ್ರೀ ಬ್ಲ್ಯಾಕ್' ಜನರ ಹಾಗೆಯೇ ಸ್ಲೇವ್ ಸ್ಟೇಟ್ಸ್ ಎನಿಸಿದ್ದ ಪ್ರಾಂತ್ಯಗಳಲ್ಲೂ 'ಫ್ರೀ ಬ್ಲ್ಯಾಕ್ಸ್' (ಸ್ವತಂತ್ರ ಕಪ್ಪು ಜನರು) ಇದ್ದರೂ ಉತ್ತರದ ಪ್ರಾಂತ್ಯಗಳಲ್ಲಿ ಅವರ ಪರಿಸ್ಥಿತಿ ಹೆಚ್ಚು ಸಹನೀಯವಾಗಿತ್ತು. ಸ್ಲೇವ್ ಸ್ಟೇಟ್ಸ್‌ಗಳಲ್ಲಿ ಸ್ವತಂತ್ರರೆನಿಸಿದ್ದ ಕಪ್ಪು ಜನರ ಕುರಿತಂತೆ ಅಲ್ಲಿನ ಸಮಾಜದಲ್ಲಿ ಅಸಹನೆ ಇತ್ತು.

1865ರ ಡಿಸೆಂಬರ್‌ನಲ್ಲಿ ಗುಲಾಮಗಿರಿ ಎನ್ನುವುದು ಅಮೆರಿಕಾದಲ್ಲಿ ಸಂಪೂರ್ಣವಾಗಿ ನಿಷೇಧಿಸಲ್ಪಡುವವರೆಗೂ ಈ 'ಫ್ರೀ ಬ್ಲಾಕ್' ಎನ್ನುವ ಶಬ್ದದ ಬಳಕೆ ಸಾಮಾನ್ಯವಾಗಿದ್ದಿದ್ದು, ನಂತರದ ಸಂದರ್ಭದಲ್ಲಿ ಅದು ಅನಗತ್ಯವೆನಿಸಿದ ಕಾರಣ ಕೈಬಿಡಲಾಯಿತು.

ಸಾಂಸ್ಕೃತಿಕ ಸಂಕರ ಮತ್ತು ನೂತನ ಆಫ್ರೋ-ಅಮೆರಿಕನ್ ಸಂಸ್ಕೃತಿಯ ಉಗಮ

ಆಫ್ರಿಕಾದಿಂದ ಅಮೆರಿಕಾ ದೇಶಕ್ಕೆ ಬಂದ ಕಪ್ಪು ಜನರು ತಮ್ಮೊಂದಿಗೆ ತಮ್ಮ ತಾಯ್ನಾಡಿನಿಂದ ಹೊತ್ತು ತಂದ ಸಂಗೀತ, ಜಾನಪದ, ಭಾಷಾ ವೈವಿಧ್ಯ, ಅಡುಗೆ ಇವೆಲ್ಲವುಗಳಿಂದ ಅಮೆರಿಕನ್ ಸಂಸ್ಕೃತಿಯನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಿದ್ದಾರೆ. ಆಫ್ರಿಕಾದ ಬೇರೆ ಬೇರೆ ಭಾಗಗಳಿಂದ ಇಲ್ಲಿಗೆ ಬಂದ ಕಪ್ಪು ಜನರಿಗೆ, ಮೊದಲಿನಿಂದಲೂ ಅಮೆರಿಕಾ ದೇಶವಾಸಿಗಳಾಗಿದ್ದ ಇಲ್ಲಿನ ಮೂಲನಿವಾಸಿಗಳ ಜೊತೆಗೂ ಹೊರಗಿನಿಂದ ಬಂದ ಯೂರೋಪಿಯನ್ ದೇಶಗಳಿಂದ ಬಂದವರೊಂದಿಗೂ ಸಂಪರ್ಕ ಒದಗಿತು. ಈ ಸಂದರ್ಭದಲ್ಲಿ ಹಲವು ಬಗೆಯ ಸಾಂಸ್ಕೃತಿಕ ಸಂಕರವು ತಾನಾಗಿಯೇ ಸಹಜವಾಗಿ ಸಂಭವಿಸಿ, ಮತ್ತೆ ಕೆಲವು ಹೇರಲ್ಪಟ್ಟು ತಮ್ಮ ಮೂಲ ಸಂಸ್ಕೃತಿಗಿಂತ ಭಿನ್ನವಾದ ಹೊಸ ಬಗೆಯ ಸಂಸ್ಕೃತಿಯೊಂದು ಇಲ್ಲಿನ ಕಪ್ಪು ಜನರದ್ದಾಗಿ ಕಾಲಾಂತರದಲ್ಲಿ ಬೆಳೆದುಬಂತು. ಪರಂಪರಾನುಗತ ಸಂಸ್ಕೃತಿಯೊಂದು ಹೊಸ ಸಂಪರ್ಕ, ಸಂದರ್ಭಗಳಲ್ಲಿ ಮಿಳಿತವಾಗಿ ಹೊಸದೇ ಆಗಿ ರೂಪುಗೊಂಡ ಭಿನ್ನ, ಶ್ರೀಮಂತ ಸಂಸ್ಕೃತಿಯೊಂದು ಅಮೆರಿಕಾ ಸಂಯುಕ್ತ ಸಂಸ್ಥಾನದ ಕಪ್ಪು ಜನರದ್ದಾಯಿತು.

ಆಫ್ರಿಕಾ ಖಂಡದಿಂದ ಬಲವಂತವಾಗಿ ಹೊತ್ತು ತಂದು ಗುಲಾಮರನ್ನಾಗಿಸಿದ ಕಪ್ಪು ಜನರೆಲ್ಲರೂ ಒಂದೇ ಹಿನ್ನೆಲೆಯಿಂದ ಬಂದವರಾಗಿರಲಿಲ್ಲ. ಯೂರೋಪಿಯನ್ ಜನರು ಎಲ್ಲಾ ಕಪ್ಪು ಜನರನ್ನೂ ಒಟ್ಟಾಗಿ 'ಆಫ್ರಿಕನ್' ಎಂದು ಕರೆದರೂ ಸ್ವತಃ ಕಪ್ಪು ಜನರು ತಮ್ಮನ್ನು ತಾವು ಬೇರೆ ಬೇರೆ ಭಾಷೆಯ, ಬುಡಕಟ್ಟಿನ, ವಂಶ ಪರಂಪರೆಯ, ಬಣಗಳ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳುತ್ತಿದ್ದರು. ತಮ್ಮದೇ ಹಿನ್ನೆಲೆಯಿಂದ ಬಂದವರಲ್ಲದವರನ್ನು ಅವರು ಕಪ್ಪು ಜನರಾಗಿದ್ದರೂ ವಿದೇಶೀಯರೆಂದು ಗುರುತಿಸುತ್ತಿದ್ದಿದ್ದೂ

ಉಂಟು. 'ಆಫ್ರಿಕನ್' ಎನ್ನುವ ಹೆಸರಂತೂ ಅವರಿಗೆ ಸಂಪೂರ್ಣ ಅಪರಿಚಿತವಾದ ಶಬ್ದವಾಗಿತ್ತು.

ಅಮೆರಿಕಾದಲ್ಲಿರುವ ಕಪ್ಪು ಜನರ ಜಾನಪದದಲ್ಲಿ ತಾವು ಬಿಟ್ಟು ಬಂದ ತಾಯ್ನಾಡಿನಿಂದ ತಂದ ಹಾಡು, ಕಥೆ, ನಂಬಿಕೆ, ನುಡಿಗಟ್ಟುಗಳ ಕುರುಹುಗಳು ಹೇರಳವಾಗಿ ಸಿಗುತ್ತವೆ. ಅದಲ್ಲದೆ ಕಾಲಾಂತರದಲ್ಲಿ ಬೇರೆ ಬೇರೆ ಜನಾಂಗಗಳ ಸಂಸ್ಕೃತಿ, ಭಾಷೆಗಳ ಸಂಪರ್ಕದಲ್ಲಿ ಇಲ್ಲಿಯೇ ಹುಟ್ಟಿದ ಬ್ಲ್ಯಾಕ್ ಜಾನಪದವೂ ಇದೆ. ಪ್ಲಾಂಟೇಷನ್ನಿನ ದುರ್ಭರ ಜೀವನದ ಸಂದರ್ಭದಲ್ಲಿ ಆ ಪರಿಸ್ಥಿತಿಯ ಪರಿಣಾಮವಾಗಿಯೇ ಹುಟ್ಟಿಕೊಂಡ ಜನಪದ ಹಾಡು, ಕಥೆಗಳೂ ಇವೆ. ಇಂಥ ಹಲವು ಕಥೆಗಳಲ್ಲಿ ಕೆಲವು ದುಃಖಾಂತವಾಗಿ ಮುಗಿದರೆ ಇನ್ನು ಕೆಲವು ಹೊಸ ಬದುಕು ತೆರೆದುಕೊಳ್ಳುವ ಭರವಸೆಯಲ್ಲಿ ಹುಟ್ಟಿಕೊಂಡ ಕಥೆಗಳು. ಇಂಥಾ ಭರವಸೆಯ ಕಥೆಗಳಲ್ಲಿ ಮುಖ್ಯವಾದ ಒಂದು ಎಳೆಯೆಂದರೆ ಗುಲಾಮನೊಬ್ಬ ಹೇಗೋ ತನ್ನ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡು ಗುಲಾಮಗಿರಿಯಿಂದ ಹೊರಬಿದ್ದು ಹೊಸ ಬದುಕಿನ ಕಡೆಗೆ ನಡೆಯುವುದು. ಇಲ್ಲಿರುವ ಎರಡು ಜಾನಪದ ಕಥೆಗಳಲ್ಲಿ ಅಂತಹ ಸುಖಾಂತವಿದ್ದರೆ, ಮೂರನೆಯ ಕಥೆಯು ತನ್ನ ಪಾಡಿನಿಂದ ತಪ್ಪಿಸಿಕೊಳ್ಳಲಾಗದ ದುಃಖದಲ್ಲಿಯೇ ಕೊನೆಗೊಳ್ಳುತ್ತದೆ. ನಾಲ್ಕನೆಯ ಕಥೆಯಲ್ಲಿ ಆಳುವ ವರ್ಗ ಶೋಷಿತರ ಭಾಷೆಯ ಮೇಲೂ ನಡೆಸುವ ರಾಜಕೀಯದ ಕುರಿತಂತೆ ಒಂದು ಸೂಕ್ಷ್ಮ ಅವಲೋಕನವು ವಿಡಂಬನಾತ್ಮಕವಾಗಿ ನಿರೂಪಿತವಾಗಿದೆ.

ಜಾನ್ ಎಂಬ ಹೆಸರಿನ ಗುಲಾಮ ಮತ್ತು ಅವನ ಒಡೆಯನ ಕಥೆಗಳು ಪ್ಲಾಂಟೇಷನ್ನಿನ ಕೆಲಸಗಾರರ ನಡುವೆಯೇ ಹುಟ್ಟಿಕೊಂಡ ಅಲ್ಲಿನ ಜಾನಪದ ಕಥೆಗಳು. ಈ ಸರಣಿಯ ಎಲ್ಲಾ ಕಥೆಗಳಲ್ಲೂ ಗುಲಾಮನ ಹೆಸರು ಜಾನ್ ಅಥವಾ ಅದಕ್ಕೆ ಸಂವಾದಿಯಾದ ಇನ್ನೊಂದು ಸಾಮಾನ್ಯವಾದ ಹೆಸರೇ ಇರುತ್ತದೆ. ಈ ಕಥೆಗಳಲ್ಲಿ ಬರುವ ಈ ಗುಲಾಮ ಬಹಳಷ್ಟು ಬಾರಿ ಜಾಣನೂ ವಿನೋದಮಯಿಯೂ ಆಗಿರುತ್ತಾನೆ. ತನ್ನ ಮಾತುಗಾರಿಕೆ, ಬುದ್ಧಿವಂತಿಕೆ, ಕಲ್ಪನಾಶಕ್ತಿಯನ್ನು ಉಪಯೋಗಿಸಿಕೊಂಡು, ತನ್ನ ಒಡೆಯನನ್ನು ಮಂಗ ಮಾಡಿಬಿಡುವ ಚತುರ ಇವನು. ಬಹಳಷ್ಟು ಕಥೆಗಳಲ್ಲಿ ಈ ಜಾನ್ ತನ್ನ ಒಡೆಯನಿಂದ ಬಿಡುಗಡೆ ಪಡೆದು, ಸ್ವತಂತ್ರನಾಗುವಲ್ಲಿಗೆ ಕಥೆ ಮುಗಿಯುತ್ತದೆ. ಈ ಬಿಡುಗಡೆಯನ್ನು ಪಡೆಯಲು ಅವನು ಅನುಸರಿಸುವ ಮಾರ್ಗದಲ್ಲಿ ಶೌರ್ಯ, ವಿನೋದ, ಸುಳ್ಳು, ಮೋಸ ಯಾವುದಿದ್ದರೂ ನಡೆಯುತ್ತದೆ. ತಮ್ಮ ಕೆಲಸದ ಬಿಡುವಿನಲ್ಲಿ, ಕೆಲಸ ಮುಗಿಸಿದ ನಂತರ ತಮ್ಮ ಜೋಪಡಿಗಳಲ್ಲಿ ಕೆಲಸಗಾರರು ಒಬ್ಬರಿಗೊಬ್ಬರು ಮಾತನಾಡುತ್ತಲೇ ಕಟ್ಟಿದ ಈ ಕಥೆಗಳಲ್ಲಿ ಬರುವ ಜಾನ್, ಬಹಳಷ್ಟು ಬಾರಿ ಬಿಡುಗಡೆಯ ಭರವಸೆಯನ್ನು ಆ ಕಷ್ಟ ಜೀವಿಗಳ ಎದೆಯಲ್ಲಿ ಆ ಕ್ಷಣಕ್ಕಾದರೂ ಹುಟ್ಟಿಸಿ ಅವರ ಕಷ್ಟವನ್ನು ಹಗುರ ಮಾಡುವ ಅವರಂತಹವನೇ ಆದ ಇನ್ನೊಂದು ಜೀವ. ಇದಕ್ಕೆ ವಿರುದ್ಧವಾಗಿ, ಬಿಡುಗಡೆ ಪಡೆಯುವ ತನ್ನ ಯತ್ನದಲ್ಲಿ ಸಫಲನಾಗದೆ, ತೊಂದರೆ ಅನುಭವಿಸುವ ಜಾನ್ ಕೂಡ ಇದೇ ಸರಣಿಯ ಕೆಲವು ಕಥೆಗಳಲ್ಲಿ ಕಾಣಿಸುತ್ತಾನೆ. ಈ ಕಥೆಗಳೆಲ್ಲಾ ಒಬ್ಬರು ಇನ್ನೊಬ್ಬರಿಗೆ

ಹೇಳುತ್ತಾ ಅಲ್ಲಲ್ಲಿ ಬದಲಾಗುತ್ತಾ ಬೆಳೆದಂತವು. ನಂತರದಲ್ಲಿ ವಿಶೇಷ ಆಸಕ್ತಿಯಿಂದ ಸಂಗ್ರಹಗಾರರು ಸಂಗ್ರಹಿಸಿದಂತಹವು. ಈ ಸರಣಿಯ ಕೆಲವು ಕಥೆಗಳು ಇಲ್ಲಿವೆ.

ನಗಿಸಿ ಬಿಡುಗಡೆಯಾದವ (ಕಥೆ 1)

ತಮ್ಮ ಬುದ್ಧಿಶಕ್ತಿಯನ್ನೂ ಹಾಸ್ಯಪ್ರವೃತ್ತಿಯನ್ನೂ ಉಪಯೋಗಿಸಿಕೊಂಡು, ವಿಪರೀತವಾಗಿ ದುಡಿಯುವುದನ್ನು ತಪ್ಪಿಸಿಕೊಳ್ಳುತ್ತಿದ್ದಂತಾ ಕೆಲವರು ಗುಲಾಮರಿರುತ್ತಿದ್ದರು. ಇಂಥವರು ತಮ್ಮ ಒಡೆಯರನ್ನು ಬಿಡುವಿರದಂತೆ ನಗಿಸುತ್ತಾ ಅವರ ಮನರಂಜಿಸುತ್ತ, ಒಂದೋ ಕೆಲಸವೇ ಮಾಡದೆ ಅಥವಾ ಎಲ್ಲೋ ಒಂದಿಷ್ಟು ಹಗುರವಾದಂತಾ ಕೆಲಸಗಳನ್ನಷ್ಟೇ ಮಾಡುತ್ತಾ ದಿನದೂಡುತ್ತಿದ್ದರು.

ನೆಹೆಮಿಯಾ ಎಂಬ ಹೆಸರಿನವನೊಬ್ಬ ಇಂಥಾ ಕೆಲಸಗಳ್ಳನೂ, ಜಾಣನೂ ಆದ ಗುಲಾಮನಾಗಿದ್ದ. ಅವನು ಒಬ್ಬರಾದ ಮೇಲಿನ್ನೊಬ್ಬರಂತೆ, ಎಷ್ಟೆಷ್ಟೋ ಒಡೆಯರ ಕೈಕೆಳಗೆ ಗುಲಾಮನಾಗಿದ್ದರೂ ಯಾರಿಂದಲೂ ಅವನಿಂದ ಸರಿಯಾಗಿ ಕೆಲಸ ತೆಗೆಸಲು ಸಾಧ್ಯವೇ ಆಗಿರಲಿಲ್ಲ. ತನ್ನ ಯಜಮಾನನ ಪ್ರತಿ ಪ್ರಶ್ನೆಗೂ ಅಥವಾ ಬೈಗುಳಕ್ಕೂ ಬದಲಾಗಿ ಚಮತ್ಕಾರಿಕವಾಗಿ ಏನೋ ಒಂದು ಹೇಳಿ ನಗಿಸಿ, ಆ ಒಡೆಯ ತನ್ನ ಅರಿವಿಗೂ ಬರದೆ ಸುಮ್ಮನಾಗಿಬಿಡುವಂತೆ ಮಾಡಿಬಿಡುತ್ತಿದ್ದ. ಇಂಥಾ ಕೆಲಸಗಳ್ಳನನ್ನು ಸಂಭಾಳಿಸಲಾಗದೆ ಕಡೆಗೊಮ್ಮೆ ಅವನ ಯಜಮಾನ ಅವನನ್ನು ಬೇರೊಬ್ಬನಿಗೆ ಮಾರಿಬಿಡುತ್ತಿದ್ದ. ಹೀಗಾಗಿಯೇ ನೆಹೆಮಿಯಾ ಒಬ್ಬರಾದ ಮೇಲೊಬ್ಬರಂತೆ ಹಲವಾರು ಒಡೆಯರ ಕೈಕೆಳಗೆ ಗುಲಾಮನಾಗಿದ್ದ.

ಈ ಕೆಲಸಗಳ್ಳನ ಕಥೆಗಳೆಲ್ಲಾ ದಕ್ಷಿಣ ಟೆಕ್ಸಾಸ್‌ನಲ್ಲಿದ್ದ ಡೇವಿಡ್ ವಾರ್ಟನ್ ಎಂಬ ಒಬ್ಬ ಕ್ರೂರಿ ಭೂಮಾಲೀಕನ ಕಿವಿಗೆ ಒಂದೊಂದಾಗಿ ಬಂದು ಬಿದ್ದವು. 'ನನ್ನ ಕೈಗೆ ಸಿಗ್ಲಿ ಆ ರ್‍ಯಾಸ್ಕಲ್, ಅದು ಹ್ಯಾಗೆ ಕೆಲ್ಸ ತಪ್ಪಿಸ್ತಾನೋ ನೋಡೇಬಿಡ್ತೀನಿ' ಎಂದು ಡೇವಿಡ್ ಹೇಳುತ್ತಿದ್ದ. ಕಡೆಗೊಮ್ಮೆ ನೆಹೆಮಿಯಾ ಕೆಲಸಕ್ಕಿದ್ದ ಯಜಮಾನನಲ್ಲಿಗೆ ಹೋಗಿ ಚೆನ್ನಾಗಿ ಚೌಕಾಸಿ ಮಾಡಿ, ಈ ಕೆಲಸಗಳ್ಳನನ್ನು ತಾನಿರುವಲ್ಲಿಗೆ ಕೊಂಡು ತಂದ. ಹಾಗೆ ನೆಹೆಮಿಯಾನನ್ನು ಕೊಂಡು ತಂದ ದಿನವೇ ಡೇವಿಡ್ ಅವನಿಗೆ,

"ಏಯ್, ನೀನಿವತ್ತು ಹತ್ತಿ ಹೊಲಕ್ಕೆ ಹೋಗಿ, 400 ಪೌಂಡ್ ಹತ್ತಿ ಬಿಡಿಸಿ ತರ್ಬೇಕು, ತಿಳೀತಾ?" ಎಂದು ಜೋರು ಮಾಡಿದ. ಅದಕ್ಕೆ ಉತ್ತರವಾಗಿ ನೆಹೆಮಿಯಾ,

"ಅಯ್ಯಾ, ಆಯ್ತು ಬುಡಿ ನನ್ನೊಡೆಯಾ ಅದ್ಕೇನಂತೆ" ಅಂದವನೇ ಜೊತೆಗೆ,

"ನಾನೀಗ ನೀವು ನಗಾಡೋ ಹಂಗ್ ಮಾಡಿದ್ರೆ, ಇವತ್ತೊಂದ್ ಜಿನ ನನ್ ಕೆಲ್ಸಕ್ಕ್ ರಜಾ ಕೊಡ್ತೀರ ಅಲ್ವರಾ?" ಅಂತ ನಗುನಗುತ್ತಾ ಕೇಳಿದ.

ಅಲ್ಲಿಯವರೆಗೂ ಮನಸಾರೆ ನಕ್ಕು ಗೊತ್ತೇ ಇಲ್ಲದ ಆ ಕ್ರೂರಿ ಯಜಮಾನ ಜಂಭದಿಂದ,

"ಓ ಹಾಗೋ...ಒಂದ್ಕೆಲ್ಸ ಮಾಡಣಾ. ನೀನ್ ಏನಾದ್ರು ನಾನು ನಗೋ ಹಾಗೆ ಮಾಡಿದ್ರೆ... ಇವತ್ತಷ್ಟೇ ಅಲ್ಲ ನೀನು ಇನ್ಯಾವತ್ತೂ ಕೆಲ್ಸ ಮಾಡ್ಬೇಕಾಗಿಲ್ಲ.

ಗುಲಾಮಗಿರಿಯಿಂದಾನೇ ನಿನ್ನ ಬಿಡುಗಡೆ ಮಾಡ್ಬಿಡ್ತೀನಿ ಕಣಯ್ಯಾ. ಅದ್ ಹೆಂಗ್ ನಗಿಸ್ತೀಯೋ ನಗ್ಸು" ಎಂದು ಆಹ್ವಾನ ಕೊಟ್ಟೇ ಬಿಟ್ಟ.

"ಸರಿ ಬುಡಿ ಮತ್ತೆ" ಅಂದವನೇ ಖುಷಿಯಾಗಿ ಆ ಗುಲಾಮ ತನ್ನ ಯಜಮಾನನಿಗೆ "ಅಂದ್‌ಹಂಗೆ ಒಡೆಯಾ, ನೀವು ನೋಡಕ್ ಒಳ್ಳೆ ರಾಜ್ಕುಮಾರ ಇದ್ದಂಗಿದೀರಿ, ತುಂಬಾ ಚೆಂದಾಗಿದೀರಿ" ಅಂದ.

"ಸರಿ ಸರಿ, ಅದೇನೋ ಸರಿ. ಆದ್ರೆ ನೀನೂ ಹಾಗೇ ನೋಡಕ್ಕೆ ಚೆನ್ನಾಗಿದೀಯ ಅಂತ ಹೇಳೋಕ್ಕಾಗ್ತು ನೋಡು" ಎಂದು ಯಜಮಾನ ಇವನ ಕಾಲು ಎಳೆಯೋಕ್ಕೆಂದು ಹೇಳಿದ.

ಅದಕ್ಕೆ ಉತ್ತರವಾಗಿ ನೆಹೆಮಿಯಾ ಹೇಳಿದ, "ಅಯ್ಯಾ ಅದ್ಯಾಕ್ ಯೋಳಕ್ಕಾಗ್ದು? ಈಗ ನಾನ್ ನಿಮ್ಗೆ ಯೋಳ್‌ದಂಗೆ ಸುಮ್ಕೆ ಒಂದ್ ಸಲ ಸುಳ್ಳೇಳಿದ್ರೆ ಆಯ್ತು, ಅಷ್ಟೇಯಾ. ಎಲ್ಲಿ ಯೋಳಿ ನೋಡವಾ" ಅಂದ.

ಇವನ ಮಾತು ಕೇಳಿದ ಆ ಯಜಮಾನ ಎಷ್ಟೇ ಕಷ್ಟಪಟ್ಟು ತಡೆಯ-ಬೇಕೆಂದುಕೊಂಡರೂ ಆಗದೆ ಕಿಸಕ್ಕೆಂದು ನಕ್ಕುಬಿಟ್ಟ. ಸರಿ, ನಕ್ಕ ಮೇಲೆ ಇನ್ನೇನು? ಅವನಾಡಿದ ಮಾತಿನಂತೆ ಆ ಗುಲಾಮನನ್ನು ಗುಲಾಮಗಿರಿಯಿಂದಲೇ ಬಿಡುಗಡೆ ಮಾಡಬೇಕಾಯ್ತು. ಹೀಗೆ ನೆಹೆಮಿಯಾ ತನ್ನ ಒಡೆಯನನ್ನು ನಗಿಸಿ, ತನ್ನ ಸ್ವಾತಂತ್ರ್ಯ ಸಂಪಾದಿಸಿಕೊಂಡ.

ಟಿಪ್ಪಣಿ: ಈ ಕಥೆಯಲ್ಲಿ ಬರುವ ಜಾನ್ ತನ್ನ ಸ್ವಾತಂತ್ರ್ಯವನ್ನು ತಮಾಷೆಯಾಗಿ ಸುಳ್ಳು ಹೇಳುವ ಮೂಲಕ ಗಳಿಸಿಕೊಂಡುಬಿಡುತ್ತಾನೆ. ಹಾಸ್ಯ, ವಿನೋದದ ಹಾಗೆಯೇ ಗುಲಾಮರ ಕಥೆಗಳಲ್ಲಿ ಸುಳ್ಳು ಕೂಡ ಕಷ್ಟದಿಂದ ತಮ್ಮನ್ನು ಪಾರು ಮಾಡುವ ಸಾಧನವಾಗಿ ಮತ್ತೆ ಮತ್ತೆ ಕಾಣಿಸಿಕೊಂಡಿದೆ. ಈ ಕಥೆಯಲ್ಲಿ ಬರುವ ಸ್ಥಳ ಮತ್ತು ವ್ಯಕ್ತಿಗಳು ಹೆಸರುಗಳು ಕಥೆಗೆ ನೈಜತೆಯ ಅಥವಾ ಸಂಭಾವ್ಯತೆಯ ಮುದ್ರೆಯನ್ನು ಒತ್ತಿ, ಕಥೆ ಕೇಳುವವರಿಗೆ ಈ ಕಥೆ ನಿಜವಾಗಿಯೂ ನಡೆದದ್ದೇ ಎಂಬ ಭಾವನೆ ಬರುವಂತೆ ಮಾಡಲಾಗಿದೆ.

ನೀನೊಬ್ಬ ಕರಿಯ ಅನ್ನೋದನ್ನ ಮರೀಬೇಡ (ಕಥೆ 2)

ಜಾನ್ ಎಂಬ ಹೆಸರಿನ ಕರಿಯ ಗುಲಾಮನೊಬ್ಬನಿದ್ದ. ಅವನಿಗೊಬ್ಬ ಒಡೆಯ. ಒಡೆಯನ ಪರಿವಾರದಲ್ಲಿ ಅವನ ಹೆಂಡತಿ, ಒಡತಿ ಮತ್ತು ಅವರಿಬ್ಬರಿಗೆ ಇಬ್ಬರು ಮಕ್ಕಳು ಇದ್ದರು. ಒಮ್ಮೆ ಎಂದಿನ ಹಾಗೆ ಜಾನ್ ತನ್ನ ಪಾಡಿಗೆ ತಾನು ಹೊಲದಲ್ಲಿ ದುಡಿಯುತ್ತಿದ್ದಾಗ ಯಾರೋ ಚೀರಾಡಿದ್ದು ಅವನಿಗೆ ಕೇಳಿಸಿತು. ಶಬ್ದ ಬಂದ ದಿಕ್ಕಲ್ಲಿ ಹೋಗಿ ನೋಡಿದರೆ, ಅಲ್ಲೊಂದು ಕೊಳದಲ್ಲಿ ದೋಣಿಯಲ್ಲಿ ಕುಳಿತು ತನ್ನ ಒಡೆಯನ ಇಬ್ಬರೂ ಮಕ್ಕಳೂ ಚೀರಾಡುತ್ತಿದ್ದರು. ದೋಣಿ ನಡೆಸುತ್ತಿದ್ದ ಹುಟ್ಟು ನೀರಲ್ಲಿ ಹೇಗೋ ಬಿದ್ದುಬಿಟ್ಟಿತ್ತು ಮತ್ತು ಆ ದೋಣಿ ನಿಯಂತ್ರಣವಿಲ್ಲದೆ ಈಗಲೋ ಆಗಲೋ ಮೊಗಚಿಕೊಳ್ಳುವಂತೆ ತೂಗಾಡುತ್ತಿತ್ತು. ಜಾನ್ ಓಡಿ ಹೋಗಿ ತನ್ನ ಒಡೆಯ ಮತ್ತು ಒಡತಿಗೆ ವಿಷಯ ತಿಳಿಸಿದ. ವಿಷಯ

ತಿಳಿದಿದ್ದೇ ಒಡತಿ ದುಃಖದಿಂದ ಅಳತೊಡಗಿದಳು. ಜೊತೆಗೇ "ಅಯ್ಯೋ, ಮಕ್ಕಳಿಬ್ಬರೂ ಸತ್ತುಹೋದರೆ ಗತಿ ಏನು? ನಮಗೆ ಮತ್ತೆ ಮಕ್ಕಳಾಗುವ ಹಾಗೂ ಇಲ್ಲ" ಎಂದೆಲ್ಲ ಪ್ರಲಾಪಿಸಿದಳು. ಒಡೆಯ ಅವಳನ್ನು ಸಮಾಧಾನಿಸಿ ಸುಮ್ಮನಾಗಿಸಿದ. ಮತ್ತೆ ಅವರೆಲ್ಲರೂ ಬೇಗ ಬೇಗನೆ ಕೊಳದ ಬಳಿ ಬಂದು, ದಂಡೆಯಗುಂಟ ನಡೆಯುತ್ತಾ ಮಕ್ಕಳಿದ್ದ ದೋಣಿ ಕಾಣುತ್ತಿರುವಲ್ಲಿಗೆ ಬಂದರು. ಜಾನ್ ತನ್ನ ಕಾಲಿನಲ್ಲಿದ್ದ ಶೂ ಕಳಚಿದವನೇ ಈಜುತ್ತಾ ಹೋಗಿ ಆ ದೋಣಿ ತಲುಪಿ, ಕಷ್ಟದಿಂದ ಮಕ್ಕಳ ಸಮೇತ ದೋಣಿಯನ್ನು ದಡಕ್ಕೆ ತಂದ. ಮಕ್ಕಳು ಈಗ ಕ್ಷೇಮವಾಗಿ ಮನೆ ತಲುಪಿದರು. ಮಕ್ಕಳಿಗೆ ಬಂದ ಗಂಡಾಂತರ ತಪ್ಪಿದ್ದಕ್ಕೆ ಎಲ್ಲರಿಗೂ ತುಂಬಾ ಸಂತೋಷವಾಗಿತ್ತು. ಆ ಸಂತೋಷದಲ್ಲಿ ಒಡೆಯ ಜಾನ್‌ಗೆ ಅವನ ಗುಲಾಮಗಿರಿಯಿಂದ ಬಿಡುಗಡೆ ಕೊಡುವುದಾಗಿ ಹೇಳಿದ. ಆದರೆ ಅದಕ್ಕೊಂದು ಷರತ್ತನ್ನೂ ವಿಧಿಸಿದ್ದ! ಆ ವರ್ಷವೆಲ್ಲಾ ಚೆನ್ನಾಗಿ ದುಡಿದು, ಹೊಲದಲ್ಲಿ ಒಳ್ಳೆ ಬೆಳೆ ತೆಗೆದು ಒಡೆಯನ ಕಣಜ ತುಂಬಿದ್ದೇ ಆದಲ್ಲಿ, ಜಾನ್ ಸ್ವತಂತ್ರನಾಗಬಹುದಿತ್ತು. ಕಣಜ ತುಂಬುವುದು ಅಷ್ಟು ಸುಲಭವಲ್ಲವೆಂದು ಗೊತ್ತಿದ್ದ ಕಾರಣದಿಂದಲೇ ಆ ಭೂ ಮಾಲೀಕ ಈ ಷರತ್ತನ್ನು ವಿಧಿಸಿದ್ದ. ಜಾನ್‌ನಂತಾ ಗುಲಾಮನನ್ನು ಅಷ್ಟು ಸುಲಭವಾಗಿ ಕಳೆದುಕೊಳ್ಳುವುದು ಅವನಿಗೆ ಬೇಕಿರಲಿಲ್ಲ.

ಸರಿ, ಈಗ ಜಾನ್ ಎಂದಿಗಿಂತಲೂ ಕಷ್ಟಪಟ್ಟು ದುಡಿದ. ಅವನ ದುಡಿಮೆ ಘೋರ ತಪಸ್ಸಿನಂತಿತ್ತು. ವರ್ಷದ ಕೊನೆಗೆ ಒಡೆಯನ ಕಣಜ ತುಂಬಿ ಅಲ್ಲಿ ಜಾಗ ಇಲ್ಲದಕ್ಕೆ ಮನೆಯೊಳಗೂ ಬಂದ ಬೆಳೆಯನ್ನು ದಾಸ್ತಾನು ಮಾಡಬೇಕಾಗುವಷ್ಟು ಒಳ್ಳೆಯ ಬೆಳೆ ಬಂದಿತು.

ಕೊಟ್ಟ ಮಾತಿನಂತೆ ಒಡೆಯ ಈಗ ಜಾನ್‌ನನ್ನು ಬಿಡುಗಡೆ ಮಾಡಬೇಕಾಯ್ತು. ಅವನು ದುಃಖದಿಂದಲೇ ಜಾನ್‌ಗೆ ಹೇಳಿದ, "ನಿನ್ನಷ್ಟು ಚೆನ್ನಾಗಿ ಕೆಲಸ ಮಾಡುವ ಕರಿ ಗುಲಾಮನನ್ನು ಕಳೆದುಕೊಳ್ಳೋಕೆ ನನಗೆ ಚೂರೂ ಮನಸ್ಸಿಲ್ಲ. ಆದರೇನು ಮಾಡೋದು? ನಿನಗೆ ಮಾತು ಕೊಟ್ಟಾಗಿದೆ, ಅದನ್ನ ಮುರೀಲಾರೆ. ನಿನ್ನನ್ನ ಈಗಿಂದೀಗಲೇ ಬಿಡುಗಡೆಗೊಳಿಸಿದೀನಿ" ಇಷ್ಟು ಹೇಳಿದ ಒಡೆಯ ತನ್ನ ಮನೆಯೊಳಗೆ ಹೋಗಿ, ತನ್ನ ಹಳೆಯದೊಂದು ಸೂಟನ್ನು ಜಾನ್‌ಗೆ ತನ್ನ ಪ್ರಯಾಣದಲ್ಲಿ ತೊಡಲು ತಂದುಕೊಟ್ಟ. ಆ ಹಳೆಯ ಸೂಟನ್ನು ತೊಟ್ಟ ಜಾನ್ ಕಡೆಯ ಬಾರಿಗೆ ತನ್ನ ಒಡೆಯನ ಮನೆಯವರಿಂದ ಬೀಳ್ಕೊಳ್ಳಲು ಬಂದ. ಮಕ್ಕಳಿಬ್ಬರೂ ಜಾನ್ ಹೊರಟುನಿಂತಾಗ ಬಿಕ್ಕಿ ಬಿಕ್ಕಿ ಅತ್ತರು. ಅವರೊಟ್ಟಿಗೆ ಒಡತಿಯೂ ಅತ್ತಳು. ಜಾನ್ ತನ್ನ ಬಳಿ ಇದ್ದ ಬಟ್ಟೆಯ ಗಂಟನ್ನು ಒಂದು ಕೋಲಿನ ತುದಿಗೆ ಕಟ್ಟಿ, ಆ ಕೋಲನ್ನು ಹೆಗಲಲ್ಲಿ ಹೊತ್ತು ನಡೆದೇಬಿಟ್ಟ.

ಹೀಗೆ ಅವರೆಲ್ಲರಿಂದ ಬೀಳ್ಕೊಂಡು ಜಾನ್ ತನ್ನ ದಾರಿ ಹಿಡಿಯುತ್ತಿದ್ದ ಹಾಗೇ, ಒಡೆಯ ಅವನಿಗೆ ಕೂಗಿ ಹೇಳಿದ,

"ಜಾನ್, ಮಕ್ಕಳಿಬ್ಬರೂ ನಿನ್ನನ್ನು ತುಂಬಾ ಪ್ರೀತಿಸ್ತಾರೆ ಕಣೋ..." ಜಾನ್ ನಡೆಯುತ್ತಲೇ ಕೂಗಿ ಉತ್ತರಿಸಿದ,

"ಹೌದು ಒಡೆಯಾ.."

"ನನಗೂ ನೀನಂದ್ರೆ ತುಂಬಾ ಪ್ರೀತಿ ಜಾನ್"

"ಹೌದು ಒಡೆಯಾ..."

"ನಿನ್ನ ಒಡತಿಗೂ ನೀನಂದ್ರೆ ಇಷ್ಟ"

"ಹೌದು ಒಡೆಯಾ..."

"ಒಂದು ಮಾತ್ರ ನೆನಪಿಟ್ಕೋ...ನೀನೊಬ್ಬ ಕರಿಯ.."

"ಹೌದು ಒಡೆಯಾ..."

ಹೀಗೆ ಜಾನ್ ಒಂದೇ ಸಮ ನಡೆಯುತ್ತಾ ಆ ರಸ್ತೆಯ ಕೊನೆಯಂಚಿನಲ್ಲಿ ತಿರುಗಿ ಕಡೆಗೊಮ್ಮೆ ಕಣ್ಣಿಂದ ಮರೆಯಾಗುವವರೆಗೂ ಆ ಒಡೆಯ ಕೂಗುತ್ತಲೇ ಇದ್ದ,

"ಜಾನ್, ಓ... ಜಾನ್, ನೀನಂದ್ರೆ ಮಕ್ಕಳಿಗೆ ತುಂಬಾ ಪ್ರೀತಿ. ನನಗೂ, ಒಡತಿಗೂ, ನೀನಂದ್ರೆ ತುಂಬಾ ಪ್ರೀತಿ"

ಜಾನ್ ಕೂಡ ಮಾರುತ್ತರವನ್ನು ಕೂಗಿ ಹೇಳುತ್ತಲೇ ಇದ್ದ,

"ಹೌದು ಒಡೆಯಾ...."

"ಆದ್ರೆ.. ನೀನೊಬ್ಬ ಕರಿಯ ಅನ್ನೋದನ್ನ ಮಾತ್ರ ಮರೀಬೇಡ್ವೋ.."

ಒಡೆಯ ಹೀಗೆ ಜಾನ್‌ನನ್ನು ಕೂಗಿ ಕೂಗಿ ಕರೆಯುತ್ತಾ ಅವನು ಹಿಂದಿರುಗಿ ಬಂದುಬಿಡಬಹುದೇನೋ ಎಂದು ಸುಮ್ಮನೆ ಕಾದಿದ್ದೇ ಬಂತು. ಜಾನ್ ಪ್ರತಿ ಸಲವೂ ತನ್ನ ಒಡೆಯನಿಗೆ "ಹೌದು ಒಡೆಯಾ..." ಎಂದು ಉತ್ತರವನ್ನು ಕೊಡುತ್ತಲೇ ಹಿಂದೆ ತಿರುಗಿಯೂ ನೋಡದೆ, ತನ್ನ ಬಟ್ಟೆಗಂಟು ಸಿಕ್ಕಿಸಿದ ಕೋಲನ್ನು ಹೆಗಲ ಮೇಲೆ ಹೊತ್ತು ಕೆನಡಾದ ಕಡೆಗೆ ಕಾಲು ಹಾಕಿದ.

ಟಿಪ್ಪಣಿ: ಕೆಲವು ಭೂಮಾಲೀಕರಿಗೆ ತಾವು ಸಾಕಿದ ಪ್ರಾಣಿಗಳ ಮೇಲೆ ಇದ್ದಂತಹದ್ದೇ ಮಮತೆ ಮತ್ತು ಒಡೆತನದ ಸಮ್ಮಿಶ್ರ ಭಾವನೆಯೇ ತಮ್ಮ ಗುಲಾಮರ ಮೇಲೂ ಇದ್ದಿದ್ದನ್ನು ಈ ಕಥೆ ಪ್ರಸ್ತಾಪಿಸುತ್ತದೆ. ಈ ಕಥೆಯಲ್ಲಿ ಬರುವ ಜಾನ್ ತನ್ನ ಒಡೆಯನಿಗೂ ಅವನ ಮನೆಯವರಿಗೂ ಪ್ರಿಯನಾದ ವ್ಯಕ್ತಿಯಾಗಿದ್ದರೂ, ಅವರ ಕ್ಷೇಮಕ್ಕಾಗಿ ತನ್ನನ್ನು ಎಂತಹ ಕಷ್ಟದಲ್ಲಿ ಸಿಲುಕಿಸಿಕೊಂಡರೂ ಕಡೆಯಲ್ಲಿ 'ನೀನು ಕರಿಯ ಎನ್ನೋದನ್ನು ಮರಿಯಬೇಡ್ವೋ' ಎಂಬ ಮಾತನ್ನು ಕೇಳಿಸಿಕೊಳ್ಳಬೇಕಾಗುತ್ತದೆ. ತನ್ನ ಸ್ಥಿತಿಯ ಸಂಪೂರ್ಣ ಅರಿವಿದ್ದ ಕಾರಣಕ್ಕೇ ಈ ಕಥೆಯ ಜಾನ್ ಒಡೆಯನ ಪ್ರೀತಿಗೆ ಕರಗದೆ, ತನ್ನ ಪಾಡಿಗೆ ತಾನು ಉತ್ತರದ ಕಡೆಗೆ, ಸ್ವಾತಂತ್ರ್ಯದ ಕಡೆಗೆ ಹೆಜ್ಜೆ ಹಾಕುತ್ತಾನೆ.

ಮೋಜೋ (ಕಥೆ 3)

ಮೊದಲಿನಿಂದಲೂ ಹಾಗೇ, ಬಿಳಿ ಮನುಷ್ಯ ಯಾವಾಗಲೂ ಕರಿಯ ವ್ಯಕ್ತಿಗಿಂತ ಬಹಳವೇ ಮುಂದಿದ್ದ. ಗುಲಾಮನಾಗಿದ್ದ ಕರಿಯ ಜಾನ್‌ನನ್ನು ಅವನ ಒಡೆಯ ಇನ್ನಿಲ್ಲದಂತೆ ಹಿಂಸಿಸುತ್ತಿದ್ದ. ಸದಾ ಕಾಲವೂ ಜಾನ್ ತನ್ನ ಒಡೆಯನಿಂದ ಚಾಟಿ ಏಟು ತಿನ್ನಬೇಕಾಗುತ್ತಿತ್ತು.

ಜಾನ್‌ಗೆ ಯಾರೋ ಹೇಳಿದರು, 'ಒಂದು ಮೋಜೋ ತೆಗೆದುಕೊಂಡುಬಿಡು. ಅದು ನಿನ್ನ ಜೊತೆ ಇರುವವರೆಗೂ ಯಾರೂ ನಿನ್ನ ಮೇಲೆ ಚಾಟಿ ಬೀಸುವ ಹಾಗಿಲ್ಲ' ಎಂದು.

ತನ್ನ ಒಡೆಯನ ಹೊಲದ ಅಂಚಿನಲ್ಲೇ ಇದ್ದ ಮಂತ್ರವಾದಿಯೊಬ್ಬನ ಮನೆಗೆ ತೆರಳಿದ ಜಾನ್ ತನಗೊಂದು ಮೋಜೋ ಮಾಡಿಕೊಡುವಂತೆ ಮಂತ್ರವಾದಿಯನ್ನು ಕೇಳಿದ. ಮಂತ್ರವಾದಿ ಹೇಳಿದ, "ನನ್ನ ಬಳಿ ಮೂರು ಮೋಜೋಗಳಿವೆ. ಮೊದಲನೆಯದು ಚೆನ್ನಾಗಿದೆ, ಎರಡನೆಯದು ಇನ್ನೂ ಚೆನ್ನಾಗಿದೆ ಮತ್ತು ಮೂರನೆಯದು ಈ ಎರಡಕ್ಕಿಂತಲೂ ಚೆನ್ನಾಗಿದೆ."

ಜಾನ್ ಕೇಳಿದ "ಈ ಮೊದಲನೆ ಮೋಜೋ ಹ್ಯಾಗೆ ಕೆಲಸ ಮಾಡತ್ತೆ?"

ಮಂತ್ರವಾದಿ ಹೇಳಿದ, "ಕೇಳು ಹೇಳ್ತೀನಿ, ಈ ಮೊದಲ್ನೇ ಮೋಜೋ ಬೇಕೆಂದಾಗ ನಿನ್ನನ್ನ ರೂಪಾಂತರ ಮಾಡತ್ತೆ. ಮೊದಲು ಮೊಲವಾಗಿ, ನಂತರ ಗೌಜಲಕ್ಕಿ ಆಗಿ, ಅದೂ ಆದ ಮೇಲೆ ಹಾವಾಗಿ ನೀನು ಪರಿವರ್ತನೆ ಆಗಿಬಿಡಬಹುದು".

ಉಳಿದೆರಡು ಮೋಜೋಗಳ ಬಗ್ಗೆ ಹೆಚ್ಚು ಯೋಚಿಸದೆ ಜಾನ್, ಆ ಮೊದಲನೇ ಮೋಜೋವನ್ನೇ ಮಂತ್ರವಾದಿಯಿಂದ ಕೊಂಡು ಹೊರಟ. ಮಾರನೇ ದಿನ ಬೆಳಗ್ಗೆ ಜಾನ್ ಹಾಸಿಗೆ ಬಿಟ್ಟು ಏಳದೆ ತುಂಬಾ ಹೊತ್ತು ಮಲಗಿಯೇ ಇದ್ದ. ಒಂಬತ್ತು ಗಂಟೆಯಷ್ಟು ಹೊತ್ತಿಗೆ ಒಡೆಯ ಬಂದವನೇ, "ಜಾನ್, ಎಲ್ಲಿ ಹಾಳಾಗ್‌ಹೋಗಿದೀಯೋ?... ಎದ್ದು ಈಗಲೇ ಕೆಲ್ಸಕ್ಕೆ ನಡಿ. ಮೊದಲು ಆಲೂಗಡ್ಡೆ ಉಳುಮೆ ಮಾಡಿ, ಆಮೇಲೆ ಹಸುವಿನ ಹಾಲು ಕರೆದು, ಎಲ್ಲಾ ಕೆಲಸ ಮುಗಿದ ಮೇಲೆ ಮನೆಗೆ ಹೋಗುವೆಯಂತೆ. ಇವತ್ತು ಭಾನುವಾರ, ಮರೆತುಹೋಯ್ತಾ ಹ್ಯಾಗೆ?" ಎಂದು ಅಬ್ಬರಿಸಿದ.

ಜಾನ್ ಜೋಪಡಿಯೊಳಗಿಂದಲೇ ಕೂಗಿ ಹೇಳಿದ, "ಅಯ್ಯೋ ತೊಲಗೋಗು ಅತ್ಲಾಗೆ. ಬಂದ್ಬುಟ್ಟ ಕರ್ಯಾಕೆ. ನಾನು ಯಾವ್ ಕೆಲ್ಸಾನೂ ಮಾಡಾಕಿಲ್ಲ"

ಒಡೆಯನಿಗೆ ಆಶ್ಚರ್ಯ ಆಯಿತು. "ಏಯ್, ಯಾರ ಹತ್ರ ಮಾತಾಡ್ತಿದೀಯ ಗೊತ್ತೇನೋ? ನಾನು ಕಣೋ, ನಿನ್ ಧಣಿ" ಎಂದ.

ಜಾನ್ ಉತ್ತರಿಸಿದ, "ಅಯ್ಯೋ ಗೊತ್ತದೆ, ಓಗು ಸುಮ್ಗೆ. ನಿನ್ ಕೈಕೆಳ್ಗೆ ನಾನು ಇನ್ಮೇಲೆ ದುಡಿಯಾಕಿಲ್ಲ" ಒಡೆಯನಿಗೆ ಸಿಟ್ಟು ಬಂತು. "ಹಾಗಂತೀಯಾ, ಆಯ್ತು ಆಯ್ತು, ಬರ್ತೀನಿ ಇರು. ಚಾಟಿ ಕೈಗೆತ್ಕೊಂಡ್ ಬರ್ತೀನಿ. ಆಮೇಲೆ ಮಾತಾಡು" ಎಂದವನೇ ಚಾಟಿ ತರಲು ತನ್ನ ಮನೆಯ ಕಡೆ ನಡೆದ.

ಮನೆಗೆ ಹೋದ ಬಳಿಕ ಆ ಒಡೆಯ, ಚಾಟಿ ಬದಲಿಗೆ ಪಿಸ್ತೂಲನ್ನೇ ತೆಗೆದುಕೊಂಡು, "ಈ ಜಾನ್ ಇದಾನಲ್ಲ, ನನಗೇ ಎದುರುತ್ತರ ಕೊಡುವಷ್ಟು ಉದ್ಧಟನಾಗಿದಾನೆ. ಇವತ್ತು ಅವನಿಗೆ ಸರಿಯಾಗಿ ಒಂದು ಗತಿ ಕಾಣಿಸಿಯೇ ಬರ್ತೀನಿ" ಎಂದು ತನ್ನ ಹೆಂಡತಿಗೆ ತಿಳಿಸಿ ಮತ್ತೆ ಜಾನ್ ಮನೆಗೆ ಬಂದ.

ಬಂದವನೇ ಜಾನ್‌ನನ್ನು "ಏಯ್, ಈಗ ಬಾರೋ ಹೊರಗೆ" ಎಂದು ಕೂಗಿ ಕರೆದ.

ಜಾನ್ ಮೊದಲಿನ ಹಾಗೆಯೇ ಬಾಗಿಲು ತೆರೆಯದೆ ಒಳಗಿನಿಂದಲೇ, "ನಾನು ಬರಾಕಿಲ್ಲ ಅಂತ ಆಗ್ಲೇ ಯೋಳ್ಲಿಲ್ವಾ? ಓಗಯ್ಯ ಸುಮ್ಗೆ" ಎಂದುಬಿಟ್ಟ.

ಸಿಟ್ಟಿನಿಂದ ಕುದಿಯುತ್ತಾ ಈಗ ಒಡೆಯ ಜಾನ್ ಇದ್ದ ಜೋಪಡಿಯ ಬಾಗಿಲು ಮುರಿದು ಒಳಗೆ ಹೋದ. ಒಡೆಯನನ್ನು ನೋಡಿದ ಜಾನ್ ತನ್ನ ಬಳಿ ಇದ್ದ ಮೋಜೋವನ್ನು ಕೈಯಲ್ಲಿ ಹಿಡಿದು "ನೆಗಿ ನೆಗಿ ನೆಗಿ" ಎಂದು ಮಂತ್ರವಾದಿ ಹೇಳಿಕೊಟ್ಟಂತೆ ಮಂತ್ರವನ್ನು ಹೇಳಿದ್ದೇ ತಡ ಮೊಲವಾಗಿ ಪರಿವರ್ತನೆ ಹೊಂದಿ ಮೊಲದಂತೆಯೇ ನೆಗೆಯುತ್ತಾ ಬಾಗಿಲಿನ ಆಚೆಗೆ ಹಾರಿ ಓಡತೊಡಗಿದ! ಆ ಮೊಲ ಮಿಂಚಿನ ವೇಗದಲ್ಲಿ ಓಡುತ್ತಾ ಕಣ್ಮರೆಯಾಯ್ತು. ಆ ಒಡೆಯನ ಬಳಿಯೂ ಒಂದು ಮೋಜೋ ಇತ್ತು! ಒಡೆಯ ತನ್ನ ಮೋಜೋ ಕೈಯಲ್ಲಿ ಹಿಡಿದು, "ನಾನೀಗ ಬೇಟೆ ನಾಯಿಯಾಗ್ತೀನಿ" ಎಂದಿದ್ದೇ ತಡ ಬೇಟೆ ನಾಯಿಯಾಗಿ ಪರಿವರ್ತನೆಯಾದ.

ಸರಿ ಮೊಲವನ್ನು ಅಟ್ಟಿಸಿಕೊಂಡು ಹೋದ ಬೇಟೆನಾಯಿ ಕ್ಷಣಾರ್ಧದಲ್ಲೇ ಆ ಮೊಲವನ್ನ ಸಮೀಪಿಸಿಬಿಟ್ಟಿತು.

ಈಗ ಜಾನ್ 'ಇಲ್ಲಿಂದ ಮೊದಲು ನಾನು ತಪ್ಪಿಸಿಕೊಳ್ಳಬೇಕು' ಅಂದುಕೊಂಡ. ಅವನು ಹಾಗಂದುಕೊಳ್ಳುತ್ತಿದ್ದಂತೆಯೇ ಗೌಜುಗಲ ಹಕ್ಕಿಯಾಗಿ ಪರಿವರ್ತನೆಯಾದ. ಮೊಲವಾಗಿ ನೆಲದ ಮೇಲೆ ಓಡುತ್ತಿದ್ದುದು ಈಗ ಗೌಜಲಕ್ಕಿ ಆಗಿ ನೆಲ ಬಿಟ್ಟು ಆಕಾಶಕ್ಕೇರಿ ಹಾರತೊಡಗಿತು. ಈಗ ಜಾನ್, 'ಸದ್ಯ ಇನ್ನು ಭಯವಿಲ್ಲ, ತಪ್ಪಿಸಿಕೊಂಡೆ' ಅಂದುಕೊಂಡ. ಆದರೆ ಅವನ ಒಡೆಯ ಈಗ ಒಂದು ದೊಡ್ಡ ಗಿಡುಗನಾಗಿ ಪರಿವರ್ತನೆ ಹೊಂದಿ ಇವನ ಹಿಂದೆಯೇ ಹಾರಿ ಬಂದ. ಗೌಜಲಕ್ಕಿಯ ಮೇಲೆ ಈ ಗಿಡುಗ ಸಿಡಿಗುಂಡಿನ ಹಾಗೆ ಗಾಳಿಯಲ್ಲೇ ಹಾರಿ ಬಂದು ಬಿದ್ದಿತು. ಮತ್ತೆ ಜಾನ್, 'ನಾನೀಗ ಹಾವಾಗುವೆ' ಅಂದುಕೊಂಡು, ಹಾಗಂದುಕೊಂಡ ಮರುಗಳಿಗೆಯೇ ಹಾವಾಗಿ ದೊಪ್ಪನೆ ಆಕಾಶದಿಂದ ನೆಲಕ್ಕೆ ಬಿದ್ದು ಸರ ಸರನೆ ಹರಿಯುತ್ತಾ ತಲೆ ತಪ್ಪಿಸಿಕೊಳ್ಳಲು ನೋಡಿದ.

ಈಗ ಅವನ ಒಡೆಯ 'ನಾನೀಗ ದೊಡ್ಡ ಬಡಿಗೆಯಾಗಿ, ಈ ಹಾವನ್ನು ಬಡಿದು ಕೊಲ್ತೀನಿ' ಅಂದುಕೊಳ್ಳುತ್ತಲೇ ದೊಡ್ಡ ಬಡಿಗೆಯಾಗಿ ಮಾರ್ಪಾಡಾದ.

ಟಿಪ್ಪಣಿ: ಒಡೆಯ ಬಡಿಗೆಯಾಗಿ ಮಾರ್ಪಾಡಾಗುವಲ್ಲಿಗೆ ಕಥೆ ಮುಗಿದುಹೋಗುತ್ತದೆ. ನಂತರ ಏನಾಯಿತೆಂದು ಹೇಳಬೇಕಾಗಿಯೇ ಇಲ್ಲ. ಮೋಜೋ ಎನ್ನುವುದು ಆಫ್ರಿಕನ್ ಅಮೆರಿಕನ್ ಸಮುದಾಯದ ಹೂಡೂ (ಅಥವಾ ವೂಡೂ) ಸಾಧನೆಯ ಮಂತ್ರ ತಂತ್ರ ಶಕ್ತಿಗಳಲ್ಲೊಂದು. ದುಷ್ಟ ಶಕ್ತಿಗಳಿಂದ ಸಂರಕ್ಷಿಸಿಕೊಳ್ಳಲು, ಸಮೃದ್ಧಿ ತರಲು ಮುಂತಾದ ಕಾರಣಗಳಿಗಾಗಿ ಪಶ್ಚಿಮ ಆಫ್ರಿಕಾದ ಜನ ಹೀಗೆ ಮೋಜೋ ಬಳಸುತ್ತಿದ್ದಿದ್ದು ಇದರ ಮೂಲ. ಅಲ್ಲಿಂದ ಬಂದವರು ಕಟ್ಟಿದ ಹಲವಾರು ಕಥೆಗಳಲ್ಲಿ ಹೀಗೆ ಮೋಜೋ ಕಾಣಿಸಿಕೊಂಡಿದೆ. ಈ ಕಥೆಯ ಮೊದಲ ಸಾಲಿನಲ್ಲೇ ಕರಿಯ ಮನುಷ್ಯನ ಮೇಲೆ ಬಿಳಿಯ ಮನುಷ್ಯನಿಗಿದ್ದ ಪ್ರಾಬಲ್ಯದ ಪ್ರಸ್ತಾಪವಿದೆ. ಕಥೆ ಮುಂದುವರಿಯುತ್ತಾ ಗುಲಾಮ ಮತ್ತು ಒಡೆಯ ಅದೆಷ್ಟು ಬಾರಿ ರೂಪಾಂತರಗೊಂಡರೂ ಕಡೆಗೆ ಒಡೆಯನ ಕೈಯೇ ಮೇಲಾಗಬೇಕಾಗುತ್ತದೆ ಅನ್ನುವ ನಿಟ್ಟುಸಿರಿನೊಂದಿಗೆ ಕೊನೆಯಾಗುತ್ತದೆ.

ಮೊದಲ ಕಪ್ಪು ಮನುಷ್ಯ (ಕಥೆ 4)

ಈ ದೇಶಕ್ಕೆ ಕೊಂಡು ತಂದ ಮೊಟ್ಟ ಮೊದಲ ಕಪ್ಪು ಮನುಷ್ಯನ ಹೆಸರು ಜಾನ್. ಅವನಿಗೆ ಇಲ್ಲಿಯ ವಿಚಾರಗಳು ಏನೆಂದರೆ ಏನೂ ಗೊತ್ತಿರಲಿಲ್ಲ, ಆದರೆ ಯಾರಾದರೂ ಅವನಿಗೆ ಏನಾದರೂ ತಿಳಿಸಿ ಒಮ್ಮೆ ಹೇಳಿಬಿಟ್ಟರೆ, ಅವನು ಅದನ್ನು ಎಂದಿಗೂ ಮರೆಯುತ್ತಿರಲಿಲ್ಲ. ಒಬ್ಬ ಬಿಳಿ ಮನುಷ್ಯ ಅವನನ್ನು ಕೊಂಡು, ತನ್ನ ಎಸ್ಟೇಟಿಗೆ ಕರೆದುಕೊಂಡು ಬಂದ.

ಜಾನ್ ತನಗೆ ತಿಳಿಯದ ಎಲ್ಲವನ್ನೂ ಅದು ಏನೆಂದು ಒಡೆಯನನ್ನೇ ಕೇಳಿ ಕೇಳಿ ತಿಳಿದುಕೊಳ್ಳುತ್ತಿದ್ದ. ಎಸ್ಟೇಟಿಗೆ ಬಂದ ಜಾನ್, ತನ್ನನ್ನು ಕೊಂಡುಕೊಂಡ ಬಿಳಿ ಮನುಷ್ಯನ ಜೊತೆಗೆ ಅವನ ಮನೆಗೆ ಹೋದ. ಅವನು ಆ ತರಹದ ಮನೆಯನ್ನು ಮೊದಲೆಂದೂ ನೋಡಿರದ ಕಾರಣ, ಮನೆಯನ್ನು ತೋರಿಸುತ್ತಾ "ಅದೇನು?" ಎಂದು ಕೇಳಿದ. ಅದಕ್ಕೆ ಆ ಬಿಳಿ ಒಡೆಯ ತಮಾಷೆಗೆಂದು, "ಇದು ನನ್ನ ಸಾಮ್ರಾಜ್ಯ" ಎಂದು ಹೇಳಿದ. ಸರಿ, ಮನೆಯೊಳಗೆ ಹೋದ ನಂತರ ಅಲ್ಲಿದ್ದ ಬೆಂಕಿಗೂಡನ್ನು ನೋಡಿದ ಜಾನ್, "ಇದೇನು?" ಎಂದು ಕೇಳಿದ. ಒಡೆಯ ಅವನಿಗೆ, "ಇದು ನನ್ನ ಜ್ವಾಲಾಕ್ಷೇತ್ರ" ಎಂದ. ಆ ಬೆಂಕಿಗೂಡಿನ ಮೇಲೆ ಮನೆಯ ಬೆಕ್ಕು ಮಲಗಿತ್ತು. ಅದೇನೆಂದು ಜಾನ್ ಕೇಳಿದಾಗ ಒಡೆಯ "ಅದು ನನ್ನ ಗುಂಡು ತಲೆ" ಅಂದುಬಿಟ್ಟ. ಇಷ್ಟು ಹೊತ್ತಿಗೆ ಒಡೆಯನಿಗೆ ಏನೂ ಗೊತ್ತಿರದ ಈ ಜಾನ್‌ಗೆ ಏನು ಬೇಕಾದರೂ ಹೇಳಿ ಮಜಾ ತೆಗೆದುಕೊಳ್ಳಬಹುದು ಅನಿಸಿಬಿಟ್ಟಿತ್ತು.

ಸರಿ, ಇಬ್ಬರೂ ಮೆಟ್ಟಿಲು ಹತ್ತಿ ಮಹಡಿಗೆ ಹೋದರು. ಮೆಟ್ಟಿಲುಗಳಿಗೆ 'ಸ್ವರ್ಗ ಸೋಪಾನ' ಎಂದು ಕರೆಯುತ್ತಾರೆಂದು ಒಡೆಯ ಜಾನ್‌ಗೆ ತಿಳಿಸಿಕೊಟ್ಟ. ಮಹಡಿಯ ಕೋಣೆಯಲ್ಲಿ ಒಡೆಯ ತನ್ನ ಕಾಲುಗಳನ್ನು ಎತ್ತರಿಸಿ ಇಟ್ಟುಕೊಂಡು ವಿಶ್ರಾಂತಿ ಪಡೆಯಲು ಉಪಯೋಗಿಸುವ ಸಣ್ಣ ಕಾಲ್ಮಣೆಯೊಂದಿತ್ತು. ಅದೇನೆಂದು ಜಾನ್ ಕೇಳಿದಾಗ ಒಡೆಯ "ಅದು ನನ್ನ ಸುಖಪುಷ್ಪ ಸುಪ್ಪತ್ತಿಗೆ" ಎಂದು ಹೇಳಿ ನಕ್ಕ. ಅವರಿಬ್ಬರೂ ಕೆಳಗೆ ಇಳಿದು ಬಂದು ಅಂಗಳಕ್ಕೆ ಹೋದರು. ಅಂಗಳದ ಒಂದು ಮೂಲೆಯಲ್ಲಿ ಒಂದು ಕೊಟ್ಟಿಗೆಯಂತಾ ಲಾಯವಿತ್ತು. ಆ ಲಾಯವನ್ನು, "ಅದು ನನ್ನ ಸಾಮ್ರಾಜ್ಯದಲ್ಲಿರುವ ದಿಬ್ಬ" ಎಂದು ಒಡೆಯ ಜಾನ್‌ಗೆ ತಿಳಿಸಿದ. ಲಾಯದೊಳಗಿದ್ದ ಕತ್ತೆಯನ್ನು ತೋರಿಸಿ, "ಅದೊಂದು ಭೂತ, ಅದರ ಹೆಸರು ಜುಲೈ" ಎಂದು ಹೇಳಿಕೊಟ್ಟ. ಹೀಗೆ ಒಟ್ಟಿನಲ್ಲಿ ಯಾವ್ಯಾವುದಕ್ಕೋ ಏನೇನೋ ಕರೆಯುತ್ತಾರೆಂದು ವಿನೋದವಾಗಿ ತಪ್ಪು ತಪ್ಪೇ ಹೇಳಿಕೊಡುತ್ತಾ ಜಾನ್ ಅದನ್ನು ಗಮನವಿಟ್ಟು ಕೇಳಿಸಿಕೊಳ್ಳುವಾಗ ಮುಸಿ ಮುಸಿ ನಗುತ್ತಾ ಖುಷಿಪಟ್ಟ.

ಕೆಲವು ದಿನಗಳ ಬಳಿಕ ಒಮ್ಮೆ, ಒಡೆಯ ಮಹಡಿ ಮೇಲಿನ ತನ್ನ ಕೋಣೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಕೆಳಗೆ ಜಾನ್ ಬೀಡಿ ಸೇದಬೇಕೆಂದು ಅಂದುಕೊಂಡ. ಬೀಡಿ ಹಚ್ಚಿಕೊಳ್ಳಲು ಅಲ್ಲೇ ಇದ್ದ ಬೆಂಕಿಗೂಡಿನಿಂದ ಕಟ್ಟಿಗೆಯ ಚೂರೊಂದರಿಂದ ಬೀಡಿಗೆ ಬೆಂಕಿ ಸೋಕಿಸುತ್ತಿರುವಾಗ ಬೆಂಕಿಯ ಕಿಡಿಗಳು ಹಾರಿ ಅಲ್ಲೇ ಮಲಗಿದ್ದ ಬೆಕ್ಕಿಗೆ ಅದು ತಗುಲಿತು. ಗಾಬರಿಯಾದ ಬೆಕ್ಕು ಅಡ್ಡಾದಿಡ್ಡಿಯಾಗಿ ಓಡಿದ್ದೇ ಗಾಳಿಯಲ್ಲಿ ಆ

ಕಿಡಿಗಳು ಹತ್ತಿಕೊಂಡು ಬೆಕ್ಕಿನ ಮೈಗೆ ಬೆಂಕಿ ತಗುಲಿಬಿಟ್ಟಿತು. ಬೆಂಕಿಯ ಉರಿ ತಾಳಲಾರದೆ ಇನ್ನಷ್ಟು ಹೆದರಿ ಅಂಗಳಕ್ಕೆ ಓಡಿ ಹೋದ ಬೆಕ್ಕು ಅಲ್ಲಿರುವ ಲಾಯದೊಳಗೆ ಹೊಕ್ಕುಬಿಟ್ಟಿತು. ಆ ಲಾಯದಲ್ಲಿ ಹುಲ್ಲು, ಹಿಂಡಿಗಳನ್ನು ಪೇರಿಸಿದ್ದಲ್ಲಿಗೆ ಓಡಿದ ಬೆಕ್ಕು, ಆ ಒಣ ಹುಲ್ಲಿನ ರಾಶಿಯಲ್ಲಿ ಬಿದ್ದು ಒದ್ದಾಡುತ್ತಾ ಬೆಂಕಿ ಆರಿಸಿಕೊಳ್ಳಲು ನೋಡಿತು. ಈಗಂತೂ ಲಾಯದಲ್ಲಿದ್ದ ಒಣ ಹುಲ್ಲು, ಹಿಂಡಿ ಎಲ್ಲಕ್ಕೂ ಬೆಂಕಿ ತಗುಲಿ ಎಲ್ಲವೂ ಹೊತ್ತಿ ಉರಿಯತೊಡಗಿತು. ಅಲ್ಲಿ ಕಟ್ಟಿ ಹಾಕಿದ್ದ ಕತ್ತೆ ಗಾಬರಿಯಿಂದ ನೆಗೆದಾಡುತ್ತಾ ದೊಡ್ಡದಾಗಿ ಬಾಯಿ ಬಿಡುತ್ತಾ ಒದ್ದಾಡುತ್ತಿತ್ತು. ಕತ್ತೆಯ ಹಾರಾಟದಿಂದಾಗಿ ಅದರ ಸುತ್ತಲೂ ಹುಲ್ಲು ಹಿಂಡಿಗಳೂ ಮೇಲೂ ಕೆಳಗೂ ಹಾರಾಡುತ್ತಿದ್ದವು. ಜಾನ್ ಕಣ್ಣಿಗಂತೂ ಇದು ಆ ಕತ್ತೆ ತನ್ನ ಬಾಯಿ ತೆರೆದು ಹುಲ್ಲು, ಹಿಂಡಿಗಳನ್ನೆಲ್ಲಾ ನುಂಗುತ್ತಿರುವ ಹಾಗೆ ಕಾಣಿಸಿತು.

ಒಡೆಯನ ಮನೆಯೊಳಗೆ ಓಡಿಹೋದ ಜಾನ್ ಮಹಡಿಯ ಮೇಲೆ ಹೋದ. ಅಲ್ಲಿ ಒಡೆಯ ಹಾಸಿಗೆಯಲ್ಲಿ ಮಲಗಿ, ತನ್ನೆರಡು ಕಾಲನ್ನೂ ಕಾಲ್ಮಣೆಯ ಮೇಲಿಟ್ಟುಕೊಂಡು, ಕಣ್ಣು ಮುಚ್ಚಿಕೊಂಡು ವಿಶ್ರಮಿಸುತ್ತಿರುವುದು ಕಣ್ಣಿಗೆ ಬಿತ್ತು. ಜಾನ್ ಒಡೆಯನನ್ನು ನಿದ್ದೆಯಿಂದ ಏಳಿಸುತ್ತಾ "ಒಡೆಯಾ ಕಣ್ಣು ಬಿಡು...ನಿನ್ನ ಸುಖಪುಷ್ಪ ಸುಪ್ಪತ್ತಿಗೆಯಿಂದ ಎದ್ದು ಸ್ವರ್ಗ ಸೋಪಾನವನ್ನ ಇಳಿದು ಬಾ" ಎಂದು ಕಿರುಚಿ ಹೇಳಿದ. ಗಾಬರಿಯಿಂದ ಕಣ್ಣು ಬಿಟ್ಟ ಒಡೆಯನಿಗೆ ಜಾನ್ ಮುಂದುವರಿದು ಹೇಳಿದ, "ನಿನ್ನ ಜ್ವಾಲಾಕ್ಷೇತ್ರದಿಂದ ಹೊರಟ ಬೆಂಕಿ ನಿನ್ನ ಗುಂಡು ತಲೆಯನ್ನು ಸುಟ್ಟುಬಿಡ್ತು. ಬೆಂಕಿಯಿಂದ ತಪ್ಪಿಸಿಕೊಳ್ಳಲು ದಿಬ್ಬಕ್ಕೆ ಓಡಿಹೋದ ಗುಂಡು ತಲೆ ಇಡೀ ದಿಬ್ಬಕ್ಕೇ ಬೆಂಕಿ ಹಚ್ಚಿಬಿಡ್ತು. ಅಲ್ಲಿದ್ದ ನಿನ್ನ ಜುಲೈ ಭೂತವಂತೂ ಸಿಕ್ಕಲೆಲ್ಲ ಬಾಯಿ ಹಾಕುತ್ತಾ ಎಲ್ಲವನ್ನೂ ತಿಂದುಹಾಕ್ತಿದೆ!"

ಇನ್ನೂ ನಿದ್ದೆಗಣ್ಣಲ್ಲೇ ಇದ್ದ ಒಡೆಯನಿಗೆ ಇವನು ಹೇಳಿದ್ದೊಂದೂ ತಿಳಿಯಲಿಲ್ಲ. ಹಾಸಿಗೆಯಲ್ಲೇ ಹೊರಳುತ್ತಾ "ಅದೇನು ಹೇಳ್ತಿದೀಯೋ ಜಾನ್? ಸರಿಯಾಗಿ ಹೇಳೋ" ಎಂದ. ಜಾನ್ ಇನ್ನೊಮ್ಮೆ ತಾನು ಹೇಳಿದ್ದನ್ನೇ ಹೇಳಿದ. ಒಡೆಯನಿಗೆ ಆಗಲೂ ಏನೂ ಅರ್ಥವಾಗದೆ ಇನ್ನೂ ಒಮ್ಮೆ ಹೇಳುವಂತೆ ಕೇಳಿದ. ಸರಿ ಜಾನ್ ಹೇಳಿದ್ದನ್ನೇ ಹೇಳುವುದು ಒಡೆಯನಿಗೆ ಏನೂ ಅರ್ಥವಾಗದೆ ಮತ್ತೆ ಕೇಳುವುದು – ಇದೇ ಮತ್ತೆ ಮತ್ತೆ ಪುನರಾವರ್ತನೆಯಾಯಿತು.

ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿ ಹೈರಾಣಾದ ಜಾನ್ ಕೊನೆಗೊಮ್ಮೆ ಹೇಳಿದ, "ಅಯ್ಯೋ ಒಡ್ಯಾ ಸರಿಯಾಗಿ ಕೇಳಿಸ್ಕೋ...ನಿನ್ನ ಕಾಲ್ಮಣೆಯಿಂದ ಕಾಲು ತೆಗೆದು ಹಾಸಿಗೆಯಿಂದ ಎದ್ದು ಬೇಗ ಮೆಟ್ಟಲಿಳಿದು ಕೆಳಗೆ ಬಾ. ಅಕಸ್ಮಾತ್ತಾಗಿ ನಿನ್ನ ಬೆಕ್ಕಿಗೆ ನಾನು ಬೆಂಕಿ ತಗುಲಿಸಿಬಿಟ್ಟೆ. ಅದು ಓಡಿಹೋಗಿ ಕೊಟ್ಟಿಗೆ ಸೇರಿಬಿಡ್ತು. ಈಗ ಆ ಬೆಕ್ಕು ಕೊಟ್ಟಿಗೆಯಲ್ಲಿರೋ ಎಲ್ಲಕ್ಕೂ ಬೆಂಕಿ ತಗುಲಿಸ್ತಿದೆ ಮತ್ತು ನಿನ್ನ ಕತ್ತೆ ಎಲ್ಲಕ್ಕೂ ಬಾಯಿ ಹಾಕಿ ನುಂಗ್ತಿದೆ."

ಟಿಪ್ಪಣಿ: ಭಾಷೆಯ ಮೇಲಿನ ಒಡೆತನದ ಕುರಿತಾದ ಕಥೆ ಇದು. ಏನೂ ತಿಳಿಯದ ಮಗುವಿನಂತೆ ಹೊಸ ಲೋಕಕ್ಕೆ ಬರುವ ಜಾನ್ ಎಂಬ ಹೆಸರಿನ ಗುಲಾಮನಿಗೆ ಅವನ

ಒಡೆಯನೇ ಮಾತು ಕಲಿಸುತ್ತಾನೆ. ಜಾನ್‌ನ ಲೋಕದಲ್ಲಿ ಆವರೆಗೂ ಇರದಿದ್ದ ಮತ್ತು ಇದ್ದೂ ಬೇರೆ ಹೆಸರಿನೊಂದಿಗೆ ಗುರುತಿಸಿಕೊಂಡಿದ್ದ ಎಲ್ಲವನ್ನೂ ಈಗ ಅವನ ಒಡೆಯ ಇನ್ನೊಂದೇ ಭಾಷೆಯಲ್ಲಿ ಅವನಿಗೆ ಪರಿಚಯಿಸಬೇಕಾಗಿರುತ್ತದೆ. ಹಾಗೆ ಪರಿಚಯಿಸುವಾಗ ಸಂವಹನಕ್ಕೆಂದೇ ಬಳಸುವ ಸಾಧನವಾದ ಭಾಷೆಯನ್ನು ಒಡೆಯ, ತಮಾಷೆಯ ಹೆಸರಿನಲ್ಲಿ ಕುಹಕದಿಂದ, ಅವಜ್ಞೆಯಿಂದ, ಉಡಾಫೆಯಿಂದ ಬಾಯಿಗೆ ಬಂದಂತೆಲ್ಲ ತಪ್ಪು ತಪ್ಪಾಗಿ ವಸ್ತು ವಿಷಯಗಳನ್ನು ಹೆಸರಿಸಿ ಹೇಳಿಕೊಡುತ್ತಾನೆ. ಕಡೆಯಲ್ಲಿ ಈ ಕುಹಕವೇ ತನಗೆ ತಿರುಗುಬಾಣವಾಗಿ, ಆದ ತುರ್ತನ್ನೂ ಅರಿಯಲಾಗದೆ ಒದ್ದಾಡುವಾಗ, ಜಾನ್ ತಾನೇ ಸರಿಯಾದ ಭಾಷೆಯಲ್ಲಿ ಎಲ್ಲವನ್ನೂ ಸರಳವಾಗಿ ವಿವರಿಸಿ ಹೇಳಬೇಕಾಗುತ್ತದೆ. ಹಾಗೆ ಆದಾಗಲೇ ನಮಗೂ ಜಾನ್ ತನ್ನ ಒಡೆಯನ ನಿರ್ದೇಶನವನ್ನು ಪಾಲಿಸುತ್ತಿದ್ದ ಹಾಗೆಯೇ ತನ್ನ ಪಾಡಿಗೆ ತಾನು ಎಲ್ಲವನ್ನೂ ಗಮನಿಸುತ್ತಾ ಕಲಿಯುತ್ತಾ ಸರಿಯಾದ ಭಾಷೆ ತಿಳಿದಿದ್ದಿದ್ದೂ ಗೊತ್ತಾಗುತ್ತದೆ.

ಉಪಸಂಹಾರ

ಗುಲಾಮಗಿರಿಯೆಂಬುದು ಈಗ ನ್ಯಾಯಬಾಹಿರವೆನಿಸಿದ್ದರೂ ಅಲ್ಲಲ್ಲಿ ಅದು ಇಂದಿಗೂ ಇದ್ದೇ ಇದೆ. ಸಾರಿಗೆ ಸಂಪರ್ಕಗಳಲ್ಲಿ ಹೆಚ್ಚಿದ ಆಧುನಿಕ ಯುಗದ ಅನುಕೂಲಗಳಿಂದ ಮಾನವ ಕಳ್ಳ ಸಾಗಣೆ ಎನ್ನುವುದು ಎಂದಿಗಿಂತಲೂ ಸುಲಭ ಸಾಧ್ಯವಾಗಿರುವುದು ಈ ಕಾಲದ ದೊಡ್ಡ ದುರಂತಗಳಲ್ಲೊಂದು. ಒತ್ತಾಯಪೂರ್ವಕ ಕೆಲಸ, ಸೈನ್ಯ ಸೇರ್ಪಡೆ, ಬಾಲ್ಯವಿವಾಹ, ಲೈಂಗಿಕಶೋಷಣೆ, ಮುಂತಾದವುಗಳಿಗಾಗಿ ಚಿಕ್ಕ ಮಕ್ಕಳನ್ನೂ ಕೂಡ ಅಪಹರಿಸಿ ಸಾಗಣೆ ಮಾಡುವುದಷ್ಟೇ ಅಲ್ಲದೆ ಇತರ ದುರುದ್ದೇಶಗಳಿಗಾಗಿ ಮಾನವ ಕಳ್ಳಸಾಗಾಣಿಕೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಏಶ್ಯಾದ ಬಹುಭಾಗಗಳು, ಅರಬ್ ದೇಶಗಳು, ಪಶ್ಚಿಮ ಆಫ್ರಿಕಾಗಳಷ್ಟೇ ಅಲ್ಲದೆ ಪ್ರಪಂಚದಾದ್ಯಂತ ಈ ಪಿಡುಗು ಇಂದಿಗೂ ಜೀವಂತವಾಗಿಯೇ ಇದೆ.

ಆಧಾರ

1. J. Frank Dobie, ed., Tone the Bell Easy, 14-15 (ಕಥೆ – 1)
2. Member Youse "A Nigger!" from Zora Neale Hurston, Mules and Men (ಕಥೆ – 2)
3. Richard Dorson, ed., American Negro Folktales, 141-42 (ಕಥೆ- 3)
4. Zora Neale Hurston, Mules and Men, 79-80 (ಕಥೆ – 4)

❑

(17)

ಡಿಯಾನಳ ಸಂಕಲ್ಪ

ಉಮಾ ವೆಂಕಟೇಶ್
ಸ್ಟೇಟ್ ಕಾಲೇಜ್, ಪೆನ್ಸಿಲ್ವೇನಿಯ

*

ಪೀಠಿಕೆ

ಪ್ರಪಂಚದ ಹಲವು ಹತ್ತು ದೇಶಗಳ ಸಂಸ್ಕೃತಿಯನ್ನು ತನ್ನ ವಿಶಾಲವಾದ ಭೂಗೋಳದಲ್ಲಿ ತುಂಬಿಸಿಕೊಂಡು ವೈವಿಧ್ಯತೆಯನ್ನು ಮೆರೆಯುವ ಅಮೆರಿಕೆಯಂತಹ ದೇಶದಲ್ಲಿ ಕಾಣಸಿಗುವ ಸಮುದಾಯಗಳು ಬಹಳ ವಿಶಿಷ್ಟವಾದವು ಎನ್ನುವುದರಲ್ಲಿ ಸಂದೇಹವಿಲ್ಲ. ಸುಮಾರು ಮೂರು ಶತಮಾನಗಳಿಂದ ಇಲ್ಲಿಗೆ ವಲಸೆ ಬಂದಿರುವ ನೂರಾರು ಸಮುದಾಯಗಳಲ್ಲಿ ಒಂದಾದ 'ಆಮಿಶ್' ಎನ್ನುವ ಜನಾಂಗ ನಿಜಕ್ಕೂ ಅನನ್ಯವಾದದ್ದು. ನೀಳವಾದ ಗಡ್ಡ ಬೆಳೆಸಿ ಉದ್ದದ ನಿಲುವಂಗಿ ತೊಟ್ಟ ಪುರುಷರು, ಅಳ್ಳಕವಾದ ಲಂಗ, ತಲೆಗೆ ಬಿಳಿಯ ಟೋಪಿಯಂತಹ ಕವಚ, ಗೌನಿನ ಮೇಲೆ ಬಿಳಿಯ ಏಪ್ರನ್ ಧರಿಸುವ ಮಹಿಳೆಯರನ್ನು ಯಾವುದೇ ಸಮುದಾಯದ ಜನಗಳ ಗುಂಪಿನಲ್ಲೂ ತಕ್ಷಣವೇ ಗುರ್ತಿಸಬಹುದು. ಈ ಜನಾಂಗಕ್ಕೆ ಆಧುನಿಕ ತಂತ್ರಜ್ಞಾನದ ಸಲಕರಣೆಗಳನ್ನು ಉಪಯೋಗಿಸುವ ಮನಸ್ಸಿಲ್ಲವಂತೆ; ಆದಷ್ಟು ಸರಳ ರೀತಿಯಲ್ಲಿ ಜೀವನ ನಡೆಸಿಕೊಂಡು ಹೋಗುತ್ತಿರುವ ಈ ಜನಾಂಗದವರು, ತಮ್ಮದೇ ಆದ 'ಬಗ್ಗಿ' (Buggy) ಎಂದು ಕರೆಯಲ್ಪಡುವ ಕುದುರೆಗಾಡಿಗಳಲ್ಲಿ ಪ್ರಯಾಣ ಮಾಡುತ್ತಾರೆ. 90ರ ದಶಕದಲ್ಲಿ ನಾನು ಬ್ರಿಟನ್ನಿನಲ್ಲಿದ್ದಾಗ, 1985ರಲ್ಲಿ ನಿರ್ಮಾಣವಾಗಿ ಬಿಡುಗಡೆಯಾಗಿದ್ದ 'Witness' ಎನ್ನುವ (ಕ್ರೈಮ್ ಥ್ರಿಲ್ಲರ್) ಹಾಲಿವುಡ್ ಚಲನಚಿತ್ರದಲ್ಲಿ, ಮೊದಲ ಬಾರಿಗೆ ಇವರನ್ನು ನೋಡಿದ್ದೆ. ಆ ಸಿನಿಮಾದಲ್ಲಿ ಆಮಿಶ್ ಸಮುದಾಯದ ಜನ-ಜೀವನ, ಅವರ ಜೀವನಶೈಲಿ, ಸಂಸ್ಕೃತಿಯನ್ನು ಆದಷ್ಟುಮಟ್ಟಿಗೆ ನಿಖರವಾಗಿ ತೋರಿಸುವ ಪ್ರಯತ್ನ ಮಾಡಿದ್ದಾರೆ. ಆ ಸಿನಿಮಾ ನೋಡುವಾಗ ಆಮಿಶ್ ಜನಾಂಗವೆಂಬ ಸಮುದಾಯವಿದೆ ಎನ್ನುವ ವಿಷಯ

ನನಗೆ ಮೊದಲ ಬಾರಿ ಗೊತ್ತಾಯಿತು. ಈ ಜನಗಳ ಬಗ್ಗೆ ಆಗ ನನಗೆ ಆಸಕ್ತಿ ಮೂಡಿದ್ದರೂ, ಅವರ ಬಗ್ಗೆ ಹೆಚ್ಚಿನದೇನನ್ನೂ ತಿಳಿಯುವ ಅವಕಾಶ ಬರಲಿಲ್ಲ.

ಮುಂದೆ 2016ರಲ್ಲಿ ನಮ್ಮ ವಾಸ್ತವ್ಯ ಬ್ರಿಟನ್ನಿನಿಂದ ಅಮೆರಿಕೆಯ ಪೆನ್ಸಿಲ್ವೇನಿಯಾಕ್ಕೆ ವರ್ಗಾವಣೆಯಾಯಿತು. ಪೆನ್ಸಿಲ್ವೇನಿಯಾ ರಾಜ್ಯದಲ್ಲಿ ಆಮಿಶ್ ಜನಾಂಗದ ದೊಡ್ಡ ಸಮುದಾಯವಿದೆ. ಹಾಗಾಗಿ, ಈ ಜನಗಳನ್ನು ಪ್ರತ್ಯಕ್ಷವಾಗಿ ನೋಡುವ ಮತ್ತು ಅವರ ಬಗ್ಗೆ ತಿಳಿದುಕೊಳ್ಳುವ ಅವಕಾಶ ಸಿಕ್ಕಿತು. ನಾವಿರುವ ಸ್ಟೇಟ್ ಕಾಲೇಜ್ ಎನ್ನುವ ಸಣ್ಣ ಊರಿನಲ್ಲೂ, ಪ್ರತಿ ಶನಿವಾರದಂದು ನಡೆಯುವ ಸಂತೆಯಲ್ಲಿ, ಆಮಿಶ್ ಜನಗಳು ತಾವು ಬೆಳೆದ ತರಕಾರಿ ಹಣ್ಣುಗಳನ್ನು ಮಾರಾಟ ಮಾಡುತ್ತಾರೆ. ಅಲ್ಲಿ ಮೊದಲ ಬಾರಿಗೆ ಅವರನ್ನು ಪ್ರತ್ಯಕ್ಷವಾಗಿ ಕಂಡಾಗ ನನ್ನ ನೆನಪಿನಲ್ಲಿ ಅವರ ಬಗ್ಗೆ ಇದ್ದ ಕಲ್ಪನೆ ಹೆಚ್ಚೂ ಕಡಿಮೆ ನಿಜವಾಗಿತ್ತು. ಒಮ್ಮೆ, ಲ್ಯಾಂಕೆಸ್ಟರ್ ಪಟ್ಟಣದ ಹೊರವಲಯದಲ್ಲಿ ಅವರ 'ಬಗ್ಗಿ' ಕುದುರೆಗಾಡಿಗಳ ಸಾಲುಸಾಲೇ ರಸ್ತೆಯಲ್ಲಿ ಹೋಗುವುದನ್ನು ನೋಡಿದಾಗ, ನನಗೆ ಯಾವುದೋ ಸಿನಿಮಾದಲ್ಲಿ ನಡೆಯುವ ದೃಶ್ಯವೋ ಎನ್ನಿಸಿತು. ನನ್ನ ಜೊತೆಯಲ್ಲಿದ್ದ ಸಹೋದ್ಯೋಗಿಗಳಿಂದ ಅವರ ಬಗ್ಗೆ ದೊರೆತ ಮಾಹಿತಿಗಳು ಈ ಜನಾಂಗದ ಬಗ್ಗೆ ನನಗೆ ಈಗಾಗಲೇ ಇದ್ದ ಕುತೂಹಲವನ್ನು ಮತ್ತೊಮ್ಮೆ ಕೆರಳಿಸಿದವು. ಆಮಿಶ್ ಜನರ ಬಗ್ಗೆ ಇಲ್ಲಿನ ಸ್ಥಳೀಯರಿಂದ ದೊರೆತ ಮಾಹಿತಿಯಲ್ಲಿ ಎಲ್ಲವೂ ಸಕಾರಾತ್ಮಕವಾಗಿರಲಿಲ್ಲ. ಈ ಜನಾಂಗದಲ್ಲೂ ಅನೇಕ ಸಾಮಾಜಿಕ ಸಮಸ್ಯೆಗಳಿವೆ ಎನ್ನುವುದು ತಿಳಿಯಿತು. ದಿನದಿನಕ್ಕೂ ಬದಲಾಗುತ್ತಿರುವ ಆಧುನಿಕ ಜನಜೀವನ, ತಂತ್ರಜ್ಞಾನ ಪ್ರಗತಿಗಳು ಈ ಜನಾಂಗದ ಜೀವನ ಶೈಲಿಯ ಮೇಲೆ ಬಹಳಷ್ಟು ಪರಿಣಾಮ ಬೀರಿದ್ದು, ಇದರಿಂದ ಪ್ರಭಾವಿತರಾದ ಇವರ ತರುಣ ಪೀಳಿಗೆಗೆ ತಮ್ಮ ಸಾಂಪ್ರದಾಯಿಕ ಜೀವನ ಶೈಲಿ ಹಿಡಿಸದೆ ಸಮುದಾಯ ತೊರೆದು ಪಲಾಯನ ಮಾಡುವ ಪ್ರವೃತ್ತಿ ಶುರುವಾಗಿದೆ. ಸ್ಥಳೀಯ ಅಮೆರಿಕನ್ ಜನ ಇವರ ಬಗ್ಗೆ ವಿನೋದಮಯವಾಗಿ ಮಾತಾಡುವುದನ್ನೂ ಕೇಳಿದ್ದೇನೆ. ಅವರ ಪ್ರಕಾರ ಆಮಿಶ್ ಜನತೆ ಆಧುನಿಕ ಜೀವನ ಶೈಲಿ ತಿರಸ್ಕರಿಸಿದ್ದಾರೆ ಎನ್ನುವ ವಿಷಯ ನಿಜಕ್ಕೂ ಹುರುಳಿಲ್ಲದ ಅಸಂಬದ್ಧತೆ. ತಾವು ಬೆಳೆದ ತರಕಾರಿ-ಹಣ್ಣುಗಳನ್ನು ಇತರರ ವಾಹನಗಳಲ್ಲಿ ತುಂಬಿಸಿ ಅದನ್ನು ಮಾರುಕಟ್ಟೆಗೆ ಕೊಂಡೊಯ್ಯುವ ಇವರು ಆಧುನಿಕತೆಯಿಂದ ಹೇಗೆ ದೂರವಿದ್ದಾರೆ? ಇದು ಒಂದು ರೀತಿಯಲ್ಲಿ ವಿರೋಧಾತ್ಮಕವಲ್ಲವೇ! ಎನ್ನುವುದು ಸ್ಥಳೀಯರ ವಾದ. ಅದೇನೇ ಇರಲಿ, ಈ ಸಮುದಾಯ ಕುಶಲಕಲೆ, ಕೈಕಸುಬು, ವ್ಯವಸಾಯ ಮತ್ತು ತೋಟಗಾರಿಕೆಯಲ್ಲಿ ನಿಷ್ಣಾತರು ಎನ್ನುವುದು ನಿಜ. ಇವರು ತಯಾರಿಸಿದ ಮರದ ಪೀಠೋಪಕರಣಗಳು ಬಲು ಸೊಗಸು.

ಆಮಿಶ್ 'ಪೆನ್ಸಿಲ್ವೇನಿಯಾ ಜರ್ಮನ್' ಎಂದು ಕರೆಯಲ್ಪಡುವ ಒಂದು ಸಂಪ್ರದಾಯವಾದಿ ಕ್ರೈಸ್ತ ಮತದ ಗುಂಪು. ತಮ್ಮ ಸರಳ ಜೀವನ, ಸಾದಾ ಉಡುಪು-ತೊಡಪು, ಅಹಿಂಸಾ ತತ್ವದ ಪ್ರಬಲ ಪರವಾದಿಗಳಾದ ಆಮಿಶ್ ಜನಾಂಗದವರು ಮಹಾ ಪಾಪಭೀರುಗಳು. ವಿಧೇಯತೆ ಮತ್ತು ಶಿಸ್ತು ಇವರ ಪಂಥದ ತಳಪಾಯ. ತಮ್ಮ

ಚರ್ಚಿನಿಂದ ಬಹಿಷ್ಕೃತರಾದ ಸದಸ್ಯರ ಜೊತೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಲು ಬಯಸುವುದಿಲ್ಲ. ಕಟ್ಟಾ ಸಂಪ್ರದಾಯವಾದಿಗಳಾದ ಇವರ ಇತಿಹಾಸವೂ ಕೂಡಾ ಅತ್ಯಂತ ಆಸಕ್ತಿದಾಯಕವಾಗಿದೆ. 18ನೆಯ ಶತಮಾನದಲ್ಲಿ ತಮ್ಮ ತಾಯ್ನಾಡಾದ ಯೂರೋಪಿನಲ್ಲಿ ಉದ್ಭವವಾದ ಸಾಮಾಜಿಕ ಮತ್ತು ರಾಜಕೀಯ ಕಿರುಕುಳಗಳಿಂದ ಬೇಸತ್ತು, ನೂತನ ಪ್ರಪಂಚವೆನಿಸಿದ್ದ ಉತ್ತರ ಅಮೆರಿಕೆಗೆ ವಲಸೆ ಬಂದ ಆಮಿಶ್ ಸಮುದಾಯ, ಪೆನ್ಸಿಲ್ವೇನಿಯಾದಲ್ಲಿರುವ ಬರ್ಕ್ಸ್ ಪ್ರಾಂತ್ಯದಲ್ಲಿ, ವಿಶಾಲವಾದ ಅಪಲೇಶಿಯನ್ ಪರ್ವತಗಳ ತಪ್ಪಲಲ್ಲಿರುವ ಸುಂದರ ಮತ್ತು ಶಾಂತವಾದ ಕಣಿವೆಗಳಲ್ಲಿ ನೆಲಸಿದರು. ವ್ಯವಸಾಯದಲ್ಲಿ ನಿಷ್ಣಾತರಾದ ಆಮಿಶ್, ಮುಂದೆ ಮರಗೆಲಸ, ಚರ್ಮ ಹದಮಾಡುವಿಕೆ, ಗಿರಣಿ, ನಾಟಿ ವೈದ್ಯ, ಸೈಡರ್ ಪಾನೀಯವನ್ನು ಭಟ್ಟಿ ಇಳಿಸುವ ಕಾರ್ಯಗಳಲ್ಲೂ ಕುಶಲರೆನಿಸಿದರು. ಆಮಿಶ್ ಕುಟುಂಬಗಳ ಮೇಲೆ ಪೂರ್ಣ ಅಧಿಕಾರವಿರುವ ಅವರ ಸಂಪ್ರದಾಯವಾದಿ ಚರ್ಚುಗಳು, ಉನ್ನತ ಶಿಕ್ಷಣ, ಸೇನೆಯ ಸೇವೆ, ಮತ್ತು ಆಧುನಿಕ ಜೀವನಶೈಲಿಯ ಕೊಳ್ಳುಬಾಕತನಗಳನ್ನು ತೀವ್ರವಾಗಿ ವಿರೋಧಿಸುತ್ತವೆ. 19 ಮತ್ತು 20ನೆಯ ಶತಮಾನದಲ್ಲಿ, ಅವರ ತರುಣ ಪೀಳಿಗೆಯ ಚಿಂತನೆ, ಅಮೆರಿಕನ್ ಸಮಾಜದಲ್ಲಾದ ಬದಲಾವಣೆಗಳತ್ತ ಹೊರಳಿದಾಗ ಆಮಿಶ್ ಸಮುದಾಯ ಸಮಾಜ ಪ್ರಗತಿಪರ ಮತ್ತು ಸಂಪ್ರದಾಯವಾದಿ ಗುಂಪುಗಳಾಗಿ ವಿಭಜನೆಯಾಯಿತು.

ಬಹುತೇಕ ಅಮೆರಿಕನ್ ಜನತೆ ಇಂದಿಗೂ ಆಮಿಶ್ ಸಮುದಾಯವನ್ನು ಒಂದು ಅವೈಜ್ಞಾನಿಕ ಮತ್ತು ನಾಡಾಡಿ ಸಮುದಾಯವೆಂದು ಹಾಸ್ಯ ಮಾಡಿದರೂ, ದೇಶದ ಪತ್ರಿಕೆಗಳು ಮತ್ತು ಮಾಧ್ಯಮದವರು ಇವರನ್ನು ನಿಪುಣ ರೈತರೆಂದು ಹಾಡಿ ಹೊಗಳುತ್ತಾರೆ. ಇಂದಿಗೂ, ಹಳೆಯ ಜರ್ಮನ್ ಉಪಭಾಷೆಯಲ್ಲಿ ಮಾತನಾಡುವ ಆಮಿಶ್ ಸಮುದಾಯವು, ಸ್ವದೇಶಿ ಮತ್ತು ವಿದೇಶಿ ಪ್ರವಾಸಿಗರಿಗೆ ಒಂದು ಆಸಕ್ತಿಪೂರ್ಣ ಜನಾಂಗವೆನಿಸಿದ್ದಾರೆ. ಇತ್ತೀಚೆಗೆ ಆಮಿಶ್ ಕುರಿತಾದ ಲೇಖನಗಳು, ಕಥೆ ಕಾದಂಬರಿಗಳು ಪ್ರಕಟವಾಗುತ್ತಿವೆ. ಆಮಿಶ್ ಬಗ್ಗೆ ಬರೆದ ಕಾಲ್ಪನಿಕ ಪ್ರಕಾರದ ಕಥೆಗಾರರಲ್ಲಿ ಮೊದಲಿಗಳೆನ್ನಿಸಿಕೊಂಡ ವಾಂಡಾ ಇ. ಬ್ರುನ್ಸ್ಟೆಟ್ಟರ್ ಎಂಬ ಲೇಖಕಿ ಇದುವರೆಗೂ ಸುಮಾರು 90 ಪುಸ್ತಕಗಳನ್ನು ಬರೆದಿದ್ದಾಳೆ. ಈಕೆಯ ಪುಸ್ತಕಗಳು ನ್ಯೂ ಯಾರ್ಕ್ ಟೈಮ್ಸಿನ ಅತ್ಯಂತ 'ಜನಪ್ರಿಯ ಪುಸ್ತಕ ಪ್ರಶಸ್ತಿ' ವಿಜೇತರ ಪಟ್ಟಿಯಲ್ಲಿವೆ. ಈಕೆಯ ಪತಿ ಪೆನ್ಸಿಲ್ವೇನಿಯಾ ಡಚ್ ಕುಟುಂಬಕ್ಕೆ ಸೇರಿದವರು. ಹಾಗಾಗಿ, ಈಕೆಯ ಪುಸ್ತಕಗಳಲ್ಲಿ ಆಮಿಶ್ ಸಮುದಾಯದ ಜೀವನಶೈಲಿಯ ಬಗ್ಗೆ ಕಂಡುಬರುವ ವಿವರಣೆಗಳು ಬಹಳ ಮಟ್ಟಿಗೆ ವಾಸ್ತವಕ್ಕೆ ಹತ್ತಿರವಾಗಿದ್ದು, ಅದನ್ನು ಆಮಿಶ್ ಜನರೂ ಕೂಡಾ ಮೆಚ್ಚಿಕೊಂಡಿದ್ದಾರೆ. ತನ್ನ ಆಮಿಶ್ ಸ್ನೇಹಿತರು ಮತ್ತು ಬಂಧುಗಳನ್ನು ಸಂದರ್ಶಿಸಿದಾಗ, ಅವರ ಸರಳತೆ ಮತ್ತು ಶಾಂತ ಮನೋಭಾವಗಳಿಗೆ ಮಾರುಹೋಗುವ ವಾಂಡಾ, ಅವರ ವಿಧೇಯತೆ, ಶಿಸ್ತು ಮತ್ತು ಶಾಂತ ಜೀವನಶೈಲಿಗಳ ಬಗ್ಗೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ನಾನು ಆಯ್ದುಕೊಂಡ ಕಥೆ ಪೆನ್ಸಿಲ್ವೇನಿಯಾದ ದೊಡ್ಡ ಕಣಿವೆ ಅಥವಾ ಬಿಗ್ ವ್ಯಾಲಿಯಲ್ಲಿ ನೆಲೆಸಿರುವ ಆಮಿಶ್

ಸಂಪ್ರದಾಯವಾದಿ ಸಮುದಾಯದ ಜನರನ್ನು ಕುರಿತಾದ ಒಂದು ಸಮಕಾಲೀನ ವಸ್ತು ವಿಷಯವನ್ನು ಒಳಗೊಂಡಿದೆ.

ಡಿಯಾನಾಳ ಸಂಕಲ್ಪ

ಡಿಯಾನಾ ಸ್ಪೈಖರ್ ಪೆನ್ಸಿಲ್ವೇನಿಯಾದಲ್ಲಿರುವ ಬೆಲ್ವಿಲ್ಲ್ ಎಂಬ ಸಣ್ಣ ಪಟ್ಟಣದಲ್ಲಿ ತನ್ನ 5 ವರ್ಷದ ಮಗ ಆಬ್ನರ್ ಮತ್ತು ತಂದೆಯೊಂದಿಗೆ ವೈಟ್ ಟಾಪ್ ಆಮಿಶ್ ಸಮುದಾಯದಲ್ಲಿ ಸರಳ ಜೀವನ ನಡೆಸುತ್ತಿರುವ ಒಬ್ಬ ತರುಣ ವಿಧವೆ. ಒಂದು ವರ್ಷದ ಹಿಂದೆ ರಿಪೇರಿ ಮಾಡುತ್ತಿದ್ದಾಗ, ಆಕಸ್ಮಿಕವಾಗಿ ಮನೆಯ ಮೇಲ್ಛಾವಣಿಯ ಮೇಲಿಂದ ಕೆಳಕ್ಕೆ ಬಿದ್ದು ದುರ್ಮರಣಕ್ಕೆ ತುತ್ತಾಗಿದ್ದ ಅವಳ ಪತಿ ಸೈಮನ್ನಿನ ದುರಂತ ಸಾವು ಅವಳ ಜೀವನವನ್ನು ಅಲ್ಲೋಲಕಲ್ಲೋಲಗೊಳಿಸಿತ್ತು. ಗಂಡ ಸತ್ತ ಒಂದು ತಿಂಗಳ ನಂತರ ಡಿಯಾನಾಳ ತಾಯಿಯೂ ಸತ್ತಾಗ, ಅವಳ ಪ್ರಪಂಚವೇ ಕುಸಿದಿತ್ತು. ಅವಳ ತಂದೆ, ತನ್ನ ಪತ್ನಿಯ ಸಾವಿನಿಂದ ಕಂಗಾಲಾದಾಗ, ತನ್ನ ಮನೆ ಮಾರಿ ತಂದೆಯ ಜೊತೆಗೆ ಇರಲಾರಂಭಿಸಿದ ಡಿಯಾನಾ, ತಂದೆಗೆ ಮನೆಕೆಲಸಗಳಲ್ಲಿ ಸಹಕಾರ ನೀಡುತ್ತಿದ್ದಳು. ಜೊತೆಗೆ ತಂದೆಯ ಹಲಗೆ ತಯಾರಿಕೆಯ ಕೆಲಸದಿಂದ ಬರುತ್ತಿದ್ದ ಉತ್ತಮ ಆದಾಯ ಅವಳಿಗೆ ಆರ್ಥಿಕವಾಗಿ ಸಹಕಾರಿಯಾಗಿತ್ತು. ಹುಟ್ಟಿನಿಂದಲೇ 'ಡೌನ್ ಸಿಂಡ್ರೋಮ್' (ಬುದ್ಧಿ ಮಾಂದ್ಯತೆ) ಎನ್ನುವ ಅನುವಂಶೀಯ ರೋಗಲಕ್ಷಣಗಳನ್ನು ಹೊಂದಿದ್ದ ಆಬ್ನರ್, ಒಬ್ಬ ವಿಶೇಷ ಗಮನದ ಅಗತ್ಯವಿರುವ ಮಗು. ಇಂದಿಗೂ, ಆಮಿಶ್ ಸಮುದಾಯಗಳಲ್ಲಿ ನಡೆಯುವ ಒಳ–ಮದುವೆಗಳ ಫಲವಾಗಿ, ಹಲವಾರು ಆನುವಂಶಿಕ ರೋಗಗಳು ಈ ಸಮುದಾಯವನ್ನು ಕಾಡುತ್ತಿವೆ. ಕೇವಲ ಕೆಲವೇ ಇಂಗ್ಲಿಷ್ ಪದಗಳ ಬಳಕೆ ಗೊತ್ತಿದ್ದ ಆಬ್ನರ್, ಡಿಯಾನಳ ಜೀವನದ ಏಕಮಾತ್ರ ಆಸಕ್ತಿಯೆನಿಸಿದ್ದ. ಸ್ವೆಟರ್ ಹೆಣಿಗೆ, ಕ್ವಿಲ್ಟ್ ಮತ್ತು ಇತರ ಉಡುಪುಗಳನ್ನು ತಯಾರಿಸುತ್ತಾ ತಮ್ಮ ಜೀವನಕ್ಕೆ ಅಗತ್ಯವಾದ ಹಣ ಗಳಿಸಲು ಯತ್ನಿಸುವ ಡಿಯಾನಾ, ಸಂಪ್ರದಾಯವಾದಿ ಆಮಿಶ್ ಸಮುದಾಯದ ಒಬ್ಬ ವಿಶಿಷ್ಟ ಯುವತಿ ಎನ್ನಬಹುದು. ವಾರದ ಸಂತೆಯಲ್ಲಿ ತಾನು ಹೆಣೆದ ಕ್ವಿಲ್ಟ್‌ಗಳು ಮತ್ತು ಇತರ ಸಾಧನಗಳನ್ನು ಮಾರುವ ಸಲುವಾಗಿ ಎಲ್ಲವನ್ನೂ ಸಿದ್ಧಪಡಿಸಿಕೊಂಡು, ಕುದುರೆಗಾಡಿಯಲ್ಲಿ ಎಲ್ಲವನ್ನೂ ಸಾಗಿಸಿ, ಗಾಡಿಯನ್ನೂ ಚಲಾಯಿಸುತ್ತಾ ಮಗನನ್ನು ಜೊತೆಯಲ್ಲಿ ಕರೆದೊಯ್ಯುವ ಡಿಯಾನಾಳ ಜೀವನ ಹೂವಿನ ಹಾಸಿಗೆಯೇನಲ್ಲ. ಬಹುಶಃ ಆಮಿಶ್ ಸಮುದಾಯದ ಸಂಪ್ರದಾಯಿ ಕುಟುಂಬದ ಎಲ್ಲಾ ಮಹಿಳೆಯರ ಜೀವನವೂ ಹೆಚ್ಚೂ ಕಡಿಮೆ ಹೀಗೇ ಇರುವ ಪರಿಸ್ಥಿತಿಯನ್ನು ಅವರ ವಸತಿಗಳಲ್ಲಿ ಕಾಣಬಹುದು.

ಸಂತೆಯಲ್ಲಿ ತನ್ನ ಮೇಜಿನ ಮೇಲೆ ಎಲ್ಲವನ್ನೂ ಸಿದ್ಧಪಡಿಸುವ ತರಾತುರಿಯಲ್ಲಿದ್ದ ಡಿಯಾನಾಳ ಕೈಕಾಲಿಗೆ ತೊಡರುತ್ತಾ ಅವಳ ಲಂಗವನ್ನೆಳೆಯಲು ಪ್ರಾರಂಭಿಸಿದ್ದ ಅವಳ 5 ವರ್ಷದ ಮಗ ಆಬ್ನರನನ್ನು ಹಾಗೂ ಹೀಗೂ ಪುಸಲಾಯಿಸಲು ಪ್ರಯತ್ನಿಸುತ್ತಿದ್ದಳು. ಗಂಭೀರ ಗ್ರಾಹಕರು ಸ್ವಲ್ಪ ಮುಂಚಿತವಾಗಿ ಬರುವ ರೂಢಿ ಗೊತ್ತಿದ್ದ ಡಿಯಾನಾಳ

ಗಮನ ಅದರ ಕಡೆಗಿತ್ತು. ಕೇವಲ ಒಂದು ವರ್ಷದ ಹಿಂದೆ ಗಂಡ ಸತ್ತಾಗ, ನೋವಿನ ಆ ಪರಿಸ್ಥಿತಿಯಲ್ಲಿ ಅವರಿಬ್ಬರ ಒಳ್ಳೆಯ ಸ್ನೇಹಿತನಾಗಿದ್ದ ಎಲ್ಮರ್ ಯೋಡರ್, ಅವಳಿಗೆ ಒತ್ತಾಸೆಯಾಗಿ ನಿಂತು ಆಗಾಗ ಮನೆಗೆ ಬರುತ್ತಿದ್ದನಲ್ಲದೇ, ಪುಟ್ಟ ಆಬ್ನರ್ ಜೊತೆ ಆಟವಾಡುತ್ತಾ ಅವನ ಪ್ರೀತಿಯನ್ನೂ ಗಳಿಸಿದ್ದ. ಎಲ್ಮರ್ ಯೋಡರ್ ಮತ್ತು ಸೈಮನ್ ಬಾಲ್ಯ ಸ್ನೇಹಿತರು. ಈಗ ಎಲ್ಮರ್ ಮತ್ತು ಆಬ್ನರ್ ನಡುವೆ ಬೆಳೆಯುತ್ತಿದ್ದ ನೂತನ ಬಾಂಧವ್ಯದಿಂದ ಡಿಯಾನಾಳಿಗೆ ಮನೆಗೆಲಸದಲ್ಲಿ ಪುರುಸೊತ್ತು ಸಿಕ್ಕು, ಕ್ವಿಲ್ಟ್ ತಯಾರಿಕೆಗೆ ಸಮಯ ಸಿಕ್ಕುತ್ತಿತ್ತು. ಸಂತೆಯಲ್ಲಿ ಎಲ್ಲರನ್ನು ನೋಡಿ ಕೇಕೆಹಾಕಿ ನಕ್ಕು ನಲಿಯುತ್ತಿದ್ದ ಮಗನ ಸಂತೋಷದಲ್ಲಿ ಭಾಗಿಯಾದ ಡಿಯಾನಾಳ ಹೊಟ್ಟೆ ಹಸಿವಿನಿಂದ ಚುರುಗುಟ್ಟುತ್ತಿತ್ತು. ಸಂತೆಯ ಭೋಜನದ ಗಾಡಿಗಳಿಂದ ಮೇಲೇರುತ್ತಿದ್ದ ಹದವಾಗಿ ಸಂಸ್ಕರಿಸಿ ಹುರಿದ ಮಾಂಸ, ಸಂಬಾರ ಪದಾರ್ಥಗಳ ಹಿತವಾದ ವಾಸನೆ ಅವಳ ಹಸಿವನ್ನು ಮತ್ತಷ್ಟು ಕೆರಳಿಸಿತ್ತು.

ಸಂತೆಯಲ್ಲಿ ನಡೆಯುತ್ತಿದ್ದ ಸುತ್ತುಮುತ್ತಲ ಚಟುವಟಿಕೆಗಳಿಂದ ಸಂತುಷ್ಟನಾಗಿದ್ದ ಆಬ್ನರ್ ಅಲ್ಲಿ ಬರುತ್ತಿದ್ದ ನಾಯಿಯನ್ನು ಕಂಡು ಉದ್ವೇಗದಿಂದ "ಹುಂಡ್ಲಿ" ಎಂದು ಕೂಗು ಹಾಕಿದ. ಆ ನಾಯಿ ಹಿಡಿದಿದ್ದ ಅದರ ಒಡತಿ ಅಂಧಳೆಂದು ಗೊತ್ತಾದಾಗ, ಡಿಯಾನಾ ದೃಷ್ಟಿಯಿಲ್ಲದ ಜೀವನ ವ್ಯರ್ಥ ಮತ್ತು ಊಹಿಸಲಸಾಧ್ಯ ಎಂದು ನಿಟ್ಟುಸಿರಿಟ್ಟಳು. ಇಂದು ಎಲ್ಮರ್ ಸಂತೆಗೆ ಬಂದರೆ ಅವನನ್ನು ಸಂಜೆಯ ಊಟಕ್ಕೆ ಕರೆಯಬಹುದಾಗಿತ್ತು ಎಂದುಕೊಳ್ಳುತ್ತಾ, ಸತ್ತ ಪತಿಯ ಬಗ್ಗೆ ಚಿಂತಿಸಲಾರಂಭಿಸಿದಳು. ಎತ್ತರವಾಗಿ ನೀಳಕಾಯ ಹೊಂದಿದ್ದ ಗಂಡ ಸೈಮನ್ನಿನ ತಲೆಗೂದಲು ಹೊಂಬಣ್ಣವಾಗಿತ್ತು. ಶ್ರಮಜೀವಿ ಸೈಮನ್ ತಮ್ಮ ಸಮುದಾಯದ ಪರಂಪರೆಯ ಮರಗೆಲಸದ ಉದ್ಯೋಗದಲ್ಲಿ, ಹೆಂಡತಿ ಮಗನನ್ನು ಚೆನ್ನಾಗೇ ಪೋಷಿಸುತ್ತಿದ್ದ. ಅವನ ಸಾವಿನ ನಂತರ, ಈಗ ಮನೆಯ ಎಲ್ಲಾ ಜವಾಬ್ದಾರಿ ಡಿಯಾನಾ ತಲೆ ಮೇಲಿತ್ತು. ಅಂದಿನ ಸಂತೆಯಲ್ಲಿ ಗಳಿಸಿದ ಹಣದಲ್ಲಿ ಮುಂದಿನ ವಾರ ಮಗನ ಹುಟ್ಟುಹಬ್ಬಕ್ಕೆ ಒಳ್ಳೆಯ ಬಟ್ಟೆ ಕೊಳ್ಳಬೇಕೆಂದು ಅಂದುಕೊಳ್ಳುತ್ತಿದ್ದಾಗಲೇ, ಇಂಗ್ಲಿಷ್ ಗ್ರಾಹಕಿಯೊಬ್ಬಳು ಅವಳು ಹೆಣೆದಿದ್ದ ಕ್ವಿಲ್ಟನ್ನು ಪ್ರಶಂಸಿಸಿ ಅದನ್ನು ಕೊಳ್ಳಲು ಮುಂದಾದಳು. ಅಷ್ಟರಲ್ಲೇ 'ಡ್ಯಾಡಿ' ಎಂದು ಆಬ್ನರ್ ಕೂಗಿದಾಗ, ತಿರುಗಿ ನೋಡಿದ ಡಿಯಾನಾ ಕಣ್ಣಿಗೆ ಎಲ್ಮರ್ ಬಿದ್ದ. ಕಂದು ಬಣ್ಣದ ಹೊಳಪಾದ ಕೂದಲ ಎಲ್ಮರನನ್ನು ಡ್ಯಾಡಿ ಎಂದು ಕರೆದ ಆಬ್ನರನ ನಡವಳಿಕೆ ಅವಳಿಗೆ ಹೊಸದಾಗಿ ಕಂಡುಬಂತು. ಒಂದೇ ಸಮುದಾಯದಲ್ಲಿ ಬೆಳೆಯುತ್ತಿದ್ದ ಎಲ್ಮರ್, ಸೈಮನ್ ಮತ್ತು ಡಿಯಾನ ನಡುವೆ ಸ್ನೇಹವಿತ್ತು. ಆದರೆ, ತನ್ನ ಹದಿಹರಯದ ದಿನಗಳಲ್ಲೇ ಡಿಯಾನಾಳನ್ನು ಗಾಢವಾಗಿ ಪ್ರೀತಿಸುತ್ತಿದ್ದ ನಾಚಿಕೆ ಸ್ವಭಾವದ ಎಲ್ಮರ್, ತನ್ನ ಭಾವನೆಗಳನ್ನು ಎಂದೂ ಯಾರ ಮುಂದೂ ವ್ಯಕ್ತಪಡಿಸಲಿಲ್ಲ. ಮುಂದೆ ಸೈಮನ್ ಜೊತೆಗೆ ಡಿಯಾನಾಳ ಗೆಳೆತನ ಶುರುವಾದಾಗ, ಎಲ್ಮರ್ ತನ್ನ ಪ್ರೀತಿಯನ್ನು ಭದ್ರವಾಗಿ ಮುಚ್ಚಿಡಬೇಕಾಯಿತು. ಅವರಿಬ್ಬರ ಮದುವೆಯಾದಾಗ, ಎಲ್ಮರ್ ತನ್ನ ಹೃದಯದಲ್ಲೆದ್ದ ಅನಪೇಕ್ಷಿತ ಭಾವನೆಗಳನ್ನು ಮುಚ್ಚಿಡಲು ಬಹಳ ಕಷ್ಟಪಡಬೇಕಾಯಿತು.

ಆದರೆ ತಮ್ಮ ನಡುವಿದ್ದ ಸ್ನೇಹಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಲು, ಅವರಿಬ್ಬರ ಅನ್ಯೋನ್ಯತೆಗೆ ತನ್ನ ಸಹಕಾರ ನೀಡುತ್ತಾ ಬಂದಿದ್ದ. ಸಮಯ ಕಳೆದಂತೆ, ಎಲ್ಮರ್ ಅವರಿಬ್ಬರ ಬಾಂಧವ್ಯವನ್ನು ಸ್ವೀಕರಿಸಿದನಲ್ಲದೆ, ಅವರ ಮಗ ಆಬ್ನರ್ ಹುಟ್ಟಿದಾಗ ಅವನ ಚಿಕ್ಕಪ್ಪನ ಸ್ಥಾನವನ್ನೂ ವಹಿಸಿದ್ದ. ಅವರ ಮನೆಯಲ್ಲಿ ನಡೆಯುತ್ತಿದ್ದ ಎಲ್ಲಾ ವಿಶೇಷವಾದ ಸಮಾರಂಭಗಳಲ್ಲೂ ಭಾಗವಹಿಸುತ್ತಿದ್ದ ಎಲ್ಮರನಿಗೆ, ಡಿಯಾನಾಳಂತಹ ಮತ್ತೊಬ್ಬ ಹುಡುಗಿ ತನಗೆ ಸಿಗುವ ಸಂಭಾವ್ಯತೆ ಕಡಿಮೆ ಎನ್ನಿಸಿತ್ತು. ತನಗೆ ಬ್ರಹ್ಮಚಾರಿಯ ಪಟ್ಟವೇ ಖಚಿತ ಎಂದು ಸುಮ್ಮನಾಗಿದ್ದ.

ಎಲ್ಮರ್ ಕುದುರೆಗೆ ಲಾಳ ಹೊಡೆಯುವ ಮತ್ತು ಕುದುರೆ ಸಂಬಂಧಿ ಕಾರ್ಯಗಳಲ್ಲಿ ಕುಶಲನಾಗಿದ್ದ. ಈ ವೃತ್ತಿಯಲ್ಲಿ ಅವನಿಗಿದ್ದ ಆದಾಯದಲ್ಲಿ ಅವನ ಜೀವನ ಸುಸೂತ್ರವಾಗಿ ಸಾಗಿತ್ತು. ಸ್ವಂತ ಮನೆ ಮತ್ತು ಕುದುರೆ ಲಾಯದ ಒಡೆಯನಾಗಿದ್ದ ಎಲ್ಮರ್ ತನ್ನ ತಂದೆ-ತಾಯಿ ಜೊತೆಯಲ್ಲಿ ಇರದೆ, ಕೇವಲ ವಾರಾಂತ್ಯದಲ್ಲಿ ಅವರನ್ನು ಭೇಟಿ ಮಾಡಲು ಹೋಗುತ್ತಿದ್ದ. ಅವನ ಸೋದರಿ ಮತ್ತು ಸೋದರರು ಮದುವೆಯಾಗಿ ತಮ್ಮ ಮಕ್ಕಳೊಂದಿಗೆ ಸಂಸಾರ ನಡೆಸುತ್ತಾ ಸುಖವಾಗಿದ್ದರು. ಈಗ ಸೈಮನ್ ಸತ್ತ ನಂತರ, ಅವನ ಮನದಲ್ಲಿ ಡಿಯಾನ ಬಗ್ಗೆ ಇದ್ದ ಮಧುರ ಭಾವನೆಗಳು ಮತ್ತೊಮ್ಮೆ ಗರಿ ಕೆದರಲಾರಂಭಿಸಿದ್ದವು. ಸಂತೆಯಲ್ಲಿ ಎಲ್ಮರ್‌ನನ್ನು ಕಂಡೊಡನೆ ತನ್ನನ್ನು ಕುದುರೆ ಸವಾರಿಗೆ ಕರೆದೊಯ್ಯಬೇಕೆಂದು ಆಬ್ನರ್ ಒತ್ತಾಯಪಡಿಸಿದಾಗ, ಡಿಯಾನಾ ಅವನನ್ನು ನಯವಾಗಿ ಗದರಿದಳು. ಆದರೆ, ಎಲ್ಮರ್ ಕೂಡಲೆ ಮಗುವನ್ನು ತನ್ನ ಕತ್ತಿನ ಮೇಲೆ ಕೂರಿಸಿಕೊಂಡು ಕುದುರೆಯಂತೆ ಕುಕ್ಕುಲೋಟದಲ್ಲಿ ಓಡುತ್ತಾ ಅವನನ್ನು ಸಂತೆಯಲ್ಲೆಲ್ಲಾ ತಿರುಗಾಡಿಸಿದ. ಅಂದು ಸಂಜೆ ಡಿಯಾನಾಳ ಮನೆಗೆ ಹೋಗಿ ಊಟಕ್ಕೆ ಹೋದಾಗ, ಹೇಗಾದರೂ ಅವಳ ಮುಂದೆ ತನ್ನ ಮನದ ಭಾವನೆಗಳನ್ನು ವ್ಯಕ್ತಪಡಿಸುವ ವಿಚಾರ ಅವನ ಮನದಲ್ಲಿ ಸುಳಿಯಲಾರಂಭಿಸಿತ್ತು. ಅವಳೇನಾದರೂ ಒಪ್ಪಿದರೆ, ತಮ್ಮಿಬ್ಬರ ಮದುವೆಗೆ ಹೆಚ್ಚು ಕಾಯಬೇಕಿಲ್ಲ ಎಂದು ಲೆಕ್ಕಾಚಾರ ಹಾಕಿದ. ರೀಡ್ಸ್ ವಿಲ್ಲಿನಲ್ಲಿದ್ದ ತನ್ನ ಮನೆಯಲ್ಲಿ ಎಲ್ಮರ್ ಸ್ನಾನ ಮಾಡುತ್ತಾ ಸಂಜೆ ಡಿಯಾನಾಳ ಮುಂದೆ ಹೇಳಲಿರುವ ಮಾತುಗಳನ್ನು ತಾಲೀಮು ಮಾಡುವಾಗ, ಅವನ ನಾಯಿ ಫ್ರೆಕಲ್ ಅವನ ಕಾಲು ಮೂಸುತ್ತಾ ತನ್ನ ಪ್ರೀತಿ ವ್ಯಕ್ತಪಡಿಸಿತು. ಅಂದು ಸಂಜೆ ಡಿಯಾನಾ ಮನೆಗೆ ಬಂದಾಗ ಅಂಗಳದಲ್ಲಿ ಒಗೆದ ಬಟ್ಟೆಗಳನ್ನು ಮಡಿಸಿಡುತ್ತಿದ್ದ ಅವಳನ್ನು ಕಂಡು, ತಾನು ಬಹಳ ಮುಂಚಿತವಾಗಿ ಬಂದೆನೋ ಎಂದು ಸಂಕೋಚವಾಯಿತು. ಮನೆಕೆಲಸದಲ್ಲಿ ಅವಳಿಗಿದ್ದ ಒಪ್ಪಓರಣಗಳನ್ನು ಕಂಡು, ಅವಳನ್ನು ಮದುವೆಯಾದರೆ ತಾನು ನಿಜಕ್ಕೂ ಅದೃಷ್ಟಶಾಲಿ ಎಂದುಕೊಂಡ. ಅವಳ ಸುಂದರವಾದ ಮುಖವನ್ನೇ ನೋಡುತ್ತಾ ಮನೆಯೊಳಕ್ಕೆ ನಡೆದ ಎಲ್ಮರನ ಕೈ ಮತ್ತು ಮುಖಗಳು ಬೆವರಿದ್ದವು. ಊಟವಾದ ನಂತರ ಅವಳ ತಂದೆಯ ಜೊತೆ ಒಂದೆರಡು ಮಾತನಾಡಿದ ಎಲ್ಮರ್, ಅಡುಗೆ ಮನೆಯಲ್ಲಿ ಪಾತ್ರೆಗಳನ್ನು ತೊಳೆಯುತ್ತಿದ್ದ ಡಿಯಾನಾಳನ್ನು ಮಾತನಾಡಿಸಲು ಪ್ರಯತ್ನಿಸಿದ. ಆಬ್ನರ್ ಮತ್ತು ಅವಳ ತಂದೆ ಮಲಗುವ ಸಿದ್ಧತೆಯಲ್ಲಿದ್ದಾಗ, ಡಿಯಾನಾ

"ನಾವಿಬ್ಬರೂ ನಡುಮನೆಯಲ್ಲಿ ಮಾತನಾಡೋಣ" ಎಂದಳು. ಬಹಳ ಸರಳವಾದ ಪೀಠೋಪಕರಣಗಳಿದ್ದ ಆ ಮನೆಯಲ್ಲಿ ಸಂಪ್ರದಾಯವಾದಿ ಆಮಿಶ್ ಕುಟುಂಬದ ಎಲ್ಲಾ ಲಕ್ಷಣಗಳೂ ಇದ್ದವು. ಅಲ್ಲೇ ಇದ್ದ ಕುರ್ಚಿಯ ಮೇಲೆ ಕುಳಿತಿದ್ದ ಡಿಯಾನಾ ಕಣ್ಣುಮುಚ್ಚಿ ಗೋಡೆಗೆ ಒರಗಿದ್ದಂತೆ ಹಾಗೇ ನಿದ್ದೆಹೋಗಿದ್ದಳು. ತನ್ನ ಮನದ ಮಾತುಗಳನ್ನು ಹೇಳುವ ಅವಕಾಶ ಸಿಕ್ಕದ್ದಿದ್ದಕ್ಕಾಗಿ ನಿಟ್ಟುಸಿರಿಟ್ಟ ಎಲ್ಮರ್, ಸದ್ದಿಲ್ಲದೆ ಅಲ್ಲಿಂದ ಕಾಲ್ತೆಗೆದ.

ಆಬ್ನರನ ಹುಟ್ಟಿದ ಹಬ್ಬದಂದು ವಾರದ ಸಂತೆಗೆ ಹೋಗದೆ ಮಗನ ಜನ್ಮದಿನದ ಪಾರ್ಟಿಗೆ ವಿಶೇಷವಾದ ಉಪಹಾರ ಮತ್ತು ಕೇಕ್ ತಯಾರಿಸುವುದರಲ್ಲಿ ನಿರತಳಾದಳು. ಅವಳ ಸೋದರರ ಕುಟುಂಬದ ಜೊತೆಗೆ ಎಲ್ಮರನಿಗೂ ಸಂಜೆಯ ಪಾರ್ಟಿಗೆ ಆಹ್ವಾನವಿತ್ತು. ಪಾರ್ಟಿಯ ದಿನ ಅತ್ಯಂತ ಸಂಭ್ರಮದಿಂದ ಮನೆಯಲ್ಲೆಲ್ಲಾ ಓಡಾಡಿ ಹಾವಳಿ ನಡೆಸಿದ್ದ ಆಬ್ನರನನ್ನು ನೋಡಿದ ಡಿಯಾನಾಳಿಗೆ, ತನ್ನ ಮಗ ನಿಜಕ್ಕೂ ಒಂದು ವಿಶೇಷವಾದ ಮಗು ಎನ್ನಿಸಿದರೂ, ಡೌನ್ ಸಿಂಡ್ರೋಮಿನಂತಹ ಆನುವಂಶಿಕ ರೋಗದ ಅಪಾಯವು ಕುಟುಂಬದಲ್ಲಿರುವಾಗ, ಎರಡನೆಯ ಮಗುವಿನ ಬಗ್ಗೆ ಯೋಚಿಸುವುದರಲ್ಲಿ ಅರ್ಥವಿಲ್ಲ ಎಂದು ನಿಟ್ಟುಸಿರಿಟ್ಟಳು. ಈ ಆನುವಂಶಿಕ ರೋಗವಿದ್ದವರಿಗೆ ಆಯಸ್ಸು ಕಡಿಮೆ, ಓದು ಬರಹ ಕಲಿಯುವ ಗತಿ ನಿಧಾನ, ಜೊತೆಗೆ ಹೃದಯ, ಶ್ವಾಸಕೋಶ ಮತ್ತು ಮೂತ್ರಕೋಶ ಸಂಬಂಧೀ ಸಮಸ್ಯೆಗಳು ಹುಟ್ಟಿಕೊಳ್ಳುವ ಸಾಧ್ಯತೆಗಳು ಹೆಚ್ಚು ಎನ್ನುವ ವಿಚಾರವನ್ನು ಅವಳ ಡಾಕ್ಟರುಗಳು ತಿಳಿಸಿದ್ದರು. ಸಂಜೆಯ ಪಾರ್ಟಿಯಲ್ಲಿ ಊಟದ ನಂತರ ಡಿಯಾನಾಳ ಕುಟುಂಬದವರು ಬೇಗನೆ ಹೊರಟರು. ಆಬ್ನರನಿಗೆ ಹುಟ್ಟುಹಬ್ಬದ ಉಡುಗೊರೆಯಾಗಿ ತಾನೇ ಕೆತ್ತಿ ಮಾಡಿದ್ದ ಕುದುರೆಗಾಡಿಯನ್ನು ಕೊಟ್ಟಾಗ ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಡಿಯಾನಾಳ ತಂದೆ ಆಬ್ನರನನ್ನು ಮಲಗುವ ಕೋಣೆಗೆ ಕರೆದೊಯ್ದಾಗ, ಇದೇ ಸಮಯವೆಂದು ಚುರುಕಾಗಿ ಅವಳ ಮುಂದೆ ಕುರ್ಚಿಯೊಂದನ್ನು ಎಳೆದು ಕುಳಿತ ಎಲ್ಮರ್, ಧೈರ್ಯ ಮಾಡಿ ಗಂಟಲನ್ನೊಮ್ಮೆ ಸರಿಪಡಿಸಿಕೊಂಡು "ಡಿಯಾನಾ ನಾನು ನಿನ್ನನ್ನು ಬಹಳವಾಗಿ ಪ್ರೀತಿಸುತ್ತೇನೆ, ನೀನು ನನ್ನನ್ನು ಮದುವೆಯಾಗುವೆಯಾ" ಎಂದು ಪ್ರಸ್ತಾಪವಿಟ್ಟನು. ಅದನ್ನು ಕೇಳಿದೊಡನೆ ಒಂದು ಕ್ಷಣ ತನ್ನ ಕೈಗಳನ್ನೇ ದಿಟ್ಟಿಸಿ ನೋಡುತ್ತಿದ್ದ ಡಿಯಾನಾ, ಮೆಲ್ಲಗೆ ತಲೆಯೆತ್ತಿ "ಎಲ್ಮರ್, ನಿನ್ನ ಪ್ರಸ್ತಾಪ ನನಗೆ ಒಪ್ಪಿಗೆ" ಎಂದಾಗ ಅವಳ ಕದಪುಗಳು ಕೆಂಪಾಗಿದ್ದವು. "ಹಾಗಾದರೆ ಏಪ್ರಿಲ್ ತಿಂಗಳಲ್ಲಿ ಮದುವೆಯಾಗೋಣವೇ?" ಎಂದಾಗ, ಆರು ತಿಂಗಳಲ್ಲಿ ಮದುವೆಯ ಸಿದ್ಧತೆಗಳನ್ನು ಮುಗಿಸುವುದು ಕಷ್ಟ, ಆದರೆ ನನ್ನ ಮದುವೆಗೆ ಹೊಸ ಗೌನನ್ನು ತಯಾರಿಸುವಷ್ಟು ಸಮಯವಿದೆ, ನನಗೆ ಒಪ್ಪಿಗೆ ಎಂದಾಗ ಎಲ್ಮರನಿಗೆ ಸ್ವರ್ಗಕ್ಕೆ ಮೂರೇ ಗೇಣು ಎನ್ನಿಸಿತು.

ಇಬ್ಬರೂ ತಮ್ಮ ಮದುವೆಯ ವಿಷಯವನ್ನು ತಮ್ಮ ಕುಟುಂಬದವರಿಗೆ ತಿಳಿಸಿದಾಗ, ಅವರೆಲ್ಲರ ಒಪ್ಪಿಗೆ ಸಿಕ್ಕಿ, ಅವರ ಸಂತೋಷ ದ್ವಿಗುಣವಾಯಿತು. ತನ್ನ ಮಗನ ಅಂಗವಿಕಲತೆಯನ್ನು ಕಂಡೂ, ಅವನನ್ನು ಮನಸಾರೆ ಸ್ವೀಕರಿಸಿ ತನ್ನನ್ನು ಮದುವೆಯಾಗಲು ಮುಂದೆ ಬಂದಿದ್ದ ಎಲ್ಮರನ ಬಗ್ಗೆ ಡಿಯಾನಾಳ ಹೃದಯದಲ್ಲಿ ಹೊಸ ಗೌರವ ಮೂಡಿತು.

ಮದುವೆಯ ಸಿದ್ಧತೆಗಳ ಜೊತೆಗೆ, ಆಬ್ನರನನ್ನು ಮದುವೆಯ ನಂತರ ಉದ್ಭವವಾಗುವ ಹೊಸ ಬದಲಾವಣೆಗಳಿಗೆ ಸಿದ್ಧಗೊಳಿಸುವ ಕೆಲಸವೂ ಸೇರಿತ್ತು. ಎಲ್ಮರ್, ತನ್ನ ಕುದುರೆಗಾಡಿಯಲ್ಲಿ ಕುಳಿತು, ರೀಡ್ಸ್ ವಿಲ್ಲಿನಿಂದ ಬೆಲ್ವಿಲ್ ಕಡೆಗೆ ಮಧ್ಯಾಹ್ನದ ಭೋಜನಕ್ಕೆಂದು ತನ್ನ ಕುದುರೆಗಾಡಿಯಲ್ಲಿ ಸವಾರಿ ಮಾಡುತ್ತಾ ನಡೆದಿದ್ದ ಅವನ ಕಣ್ಣುಗಳು, ಸುತ್ತಲೂ ಇದ್ದ ದೊಡ್ಡ ಕಣಿವೆಯ ಸೌಂದರ್ಯವನ್ನು ಆಸ್ವಾದಿಸುತ್ತಿತ್ತು. ಗ್ರೀಷ್ಮ ಋತು ಕಾಲಿಟ್ಟಿದ್ದರಿಂದ ಉಜ್ವಲ ವರ್ಣದ ಮರದೆಲೆಗಳು ಕಣಿವೆ ಮತ್ತು ಪರ್ವತಗಳನ್ನು ಮತ್ತಷ್ಟು ಹೊಳಪುಗೊಳಿಸಿದ್ದವು. ತನ್ನ ಮಗನನ್ನು ಡಾಕ್ಟರ್ ಬಳಿಗೆ ತಪಾಸಣೆಗೆ ಕರೆದೊಯ್ದಿದ್ದ ಡಿಯಾನಾ, ಮಧ್ಯಾಹ್ನದ ಭೋಜನಕ್ಕೆಂದು ಬೆಲ್ ವಿಲ್ಲಿನಲ್ಲಿದ್ದ, ಟೇಸ್ಟ್ ಆಫ್ ವ್ಯಾಲಿ ರೆಸ್ಟೋರೆಂಟಿಗೆ ಕರೆದೊಯ್ದು, ಅಲ್ಲಿನ ಕುದುರೆಗಾಡಿ ಪಾರ್ಕಿಂಗ್ ಜಾಗದಲ್ಲಿ ಗಾಡಿ ನಿಲ್ಲಿಸಿ ಒಳಹೊಕ್ಕಳು. ಅದೇ ಸಮಯಕ್ಕೆ ಎಲ್ಮರನೂ ಅಲ್ಲಿಗೆ ಬಂದಾಗ, ಆಬ್ನರ್ ಆನಂದದಿಂದ ಅವನನ್ನು ಡ್ಯಾಡಿ ಎಂದು ಕರೆಯಲಾರಂಭಿಸಿದ. ಎಲ್ಲರೂ ಒಟ್ಟಾಗಿ ಸ್ಯಾಂಡ್ವಿಚ್ ತಿಂದು ಕಾಫಿ ಕುಡಿದರು. ಎಲ್ಮರ್ ಮನದಲ್ಲಿ ಡಿಯಾನಾ ತನ್ನನ್ನು ಪ್ರೀತಿಸುತ್ತಾಳೆಯೇ? ಅಥವಾ ಕೇವಲ ಆಬ್ನರನ ಭವಿಷ್ಯಕ್ಕಾಗಿ ಈ ಮದುವೆಗೆ ಒಪ್ಪಿದಳೇ ಎನ್ನುವ ಪ್ರಶ್ನೆ ತಲೆ ಎತ್ತಿದರೂ, ಮದುವೆಯ ನಂತರ ಎಲ್ಲವೂ ಸರಿಹೋಗುತ್ತದೆ ಎಂದುಕೊಂಡು ಸುಮ್ಮನಾದನು.

ಅಕ್ಕಪಕ್ಕದ ಕುಟುಂಬಗಳ ಕುದುರೆ ಲಾಯಗಳಲ್ಲಿದ್ದ ಎಲ್ಲಾ ಕುದುರೆಗಳ ಕಾಲಿಗೆ ಲಾಳ ಹೊಡೆಯುವ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದ ಎಲ್ಮರ್, ಎಲ್ಲರಿಗೂ ಬಹಳ ಅಚ್ಚುಮೆಚ್ಚಿನ ಅಶ್ವಪಾಲಕನೆನಿಸಿದ್ದ. ಎಲ್ಮರ್ ಅವನ ಪರಿಚಯದ ಮ್ಯಾಗ್ವಯರ್ ಎಂಬ ಇಂಗ್ಲಿಷ್ ಕುಟುಂಬದ ಕುದುರೆಯ ಕಾಲಿಗೆ ಲಾಳ ಹೊಡೆಯಲು ಹೋಗಿದ್ದ. ಆಮಿಶ್ ಕುಟುಂಬಗಳು 'ಬಗ್ಗಿ' ಕುದುರೆಗಾಡಿಯಲ್ಲೇ ಏಕೆ ಸವಾರಿ ಮಾಡುತ್ತಾರೆ ಎಂದು ಮ್ಯಾಗ್ವಯರನ ಕಿರಿಯ ಮಗ ಅವನನ್ನು ಪ್ರಶ್ನಿಸಿದನು. ಅವನಿಗೆ ಆಮಿಶ್ ಚರ್ಚಿನ ನಿಯಮಗಳ ಬಗ್ಗೆ ತಿಳಿಸುತ್ತಾ, ಮೋಟಾರ್ ವಾಹನಗಳನ್ನು ಚಲಾಯಿಸುವ ಅಧಿಕಾರ ನಮ್ಮ ಚರ್ಚ್ ನಮಗೆ ನೀಡಿಲ್ಲ, ಹಾಗಾಗಿ ಬಗ್ಗಿ ಕುದುರೆ ಗಾಡಿಯೇ ನಮ್ಮ ಸವಾರಿಯ ಸಾಧನ ಎಂದು ವಿವರಿಸಿದನು. ಡಿಯಾನಾಳ ಬಳಿ ಇದ್ದ ಹೊಲಿಗೆ ಯಂತ್ರವೂ ಕೂಡಾ ಹಸ್ತಚಾಲಿತವಾಗಿದ್ದು, ಅದು ಅವಳ ಅಜ್ಜಿಯಿಂದ ಅವಳಿಗೆ ಬಳುವಳಿಯಾಗಿ ಬಂದಿತ್ತು.

ಮದುವೆಯ ನಂತರ ತನ್ನ ತಂದೆಯನ್ನು ತನ್ನ ಜೊತೆ ಕರೆದೊಯ್ಯುವ ಇಚ್ಛೆಯನ್ನು ಡಿಯಾನಾ ವ್ಯಕ್ತಪಡಿಸಿದಾಗ, ಅವಳ ತಂದೆ ರೂಫಸ್ ನಯವಾಗೇ ನಿರಾಕರಿಸಿ, ತನ್ನ ಕೈಯಲ್ಲಿ ದುಡಿಯುವ ಶಕ್ತಿ ಕಡಿಮೆಯಾದ ನಂತರ ಅವಳ ಜೊತೆಗೆ ಇರುತ್ತೇನೆ ಎನ್ನುವ ನಿರ್ಧಾರ ತಿಳಿಸಿದನು. ಚಳಿಗಾಲ ಕಾಲಿಟ್ಟಿತ್ತು. ಡಿಯಾನಾ ಮತ್ತು ಎಲ್ಮರ್ ತಮ್ಮ ದಿನಚರಿಯಲ್ಲಿ ನಿರತವಾಗಿದ್ದರು. ಕುದುರೆಗೆ ಲಾಳ ಹೊಡೆಯುವ ಕೆಲಸವನ್ನು ತನ್ನ ಚಿಕ್ಕಪ್ಪ ಜೇಮ್ಸ್ ಹತ್ತಿರ ಕಲಿತಿದ್ದ ಎಲ್ಮರ್, ತನ್ನ 18ನೆಯ ವಯಸ್ಸಿಗೆ ಆ ಕೆಲಸದಲ್ಲಿ ನಿಪುಣತೆ ಗಳಿಸಿದ್ದ. ಆದರೆ ಆ ಕೆಲಸದಲ್ಲಿದ್ದ ಹಲವಾರು ಅಪಾಯಗಳ ಬಗ್ಗೆ ಅವನ ತಾಯಿಗೆ ಭಯವಿತ್ತು. ಆದರೆ ಆ ಅಪಾಯಗಳ ಅರಿವಿದ್ದ ಎಲ್ಮರ್, ಯಾವಾಗಲೂ

ಎಚ್ಚರಿಕೆ ವಹಿಸುತ್ತಾ ತನ್ನ ವೃತ್ತಿಯನ್ನು ಮುಂದುವರೆಸಿದ್ದನು. ಕುದುರೆ ಲಾಳಗಾರನಿಗೆ ಶಕ್ತಿ, ಸಹಿಷ್ಣುತೆ ಮತ್ತು ಕುದುರೆಗಳ ಮನಸ್ಸನ್ನು ಅರಿಯುವ ಚಾತುರ್ಯ ಬಹು ಮುಖ್ಯ. ನಾಲ್ಕು ಗಂಟೆಗಳ ಕುದುರೆ ಲಾಳದ ಕೆಲಸ, ಎಂಟು ಗಂಟೆಗಳ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಸಮಾನವಾದದ್ದು. ಈ ಕೆಲಸ ಶ್ರಮದಾಯಕವಾದ್ದರಿಂದ, ಬೆನ್ನಿನ ಮಾಂಸಖಂಡಗಳು ಬಲವಾಗಿರಬೇಕು. ಆದ್ದರಿಂದ, ಎಲ್ಮರ್ ತನ್ನ ದೇಹವನ್ನು ವ್ಯಾಯಾಮದ ಮೂಲಕ ಗಟ್ಟಿಗೊಳಿಸಿದ್ದ. ಡಿಯಾನಾ ಮತ್ತು ಆಬ್ನರನ್ನು ವಾರದ ಸಂತೆಯ ನಂತರ ಮೈಕೆಲ್ ರೆಸ್ಟೋರೆಂಟಿನಲ್ಲಿ ಮಧ್ಯಾಹ್ನದ ಭೋಜನದ ಸಮಯಕ್ಕೆ ಭೇಟಿಯಾಗುತ್ತೇನೆ ಎಂದಿದ್ದ. ಹಾಗಾಗಿ ಅಂದು ಬೆಳಿಗ್ಗೆ ತನ್ನ ಕುದುರೆ ಬಗ್ಗಿಯನ್ನು ಚಲಾಯಿಸುತ್ತಾ, ಎರಡು ಕುದುರೆಗಳಿಗೆ ಲಾಳ ಹೊಡೆಯುವ ಕಾರ್ಯವಿದ್ದುದ್ದರಿಂದ ಅದನ್ನು ಮುಗಿಸಲು ಬಿಶಪ್ ಹೆನ್ರಿ ಅವರ ಕೊಟ್ಟಿಗೆಯ ಕಡೆಗೆ ಹೊರಟ.

ಇತ್ತ ಡಿಯಾನಾ ತನ್ನ ಮಗ ಆಬ್ನರನೊಂದಿಗೆ ಸಂತೆ ಮುಗಿದ ಕೂಡಲೆ, ಅವನನ್ನು ಕೂಡಿಸಿಕೊಂಡು ತನ್ನ ಕುದುರೆ ಬಗ್ಗಿಯನ್ನು ಚಲಾಯಿಸುತ್ತಾ ಮೈಕೆಲ್ ರೆಸ್ಟೋರೆಂಟ್ ತಲುಪಿದ್ದಳು. ಮಗನಿಗೆ ಹಸಿವಾದರೆ ಅವನ ಸಿಡಿಮಿಡಿ ಶುರುವಾಗುತ್ತದೆ ಎಂದು ಗೊತ್ತಿದ್ದ ಡಿಯಾನಾ, ಅವನಿಗೆ ಹಾಲು ಮತ್ತು ಚೀಸ್ ಸ್ಯಾಂಡ್‌ವಿಚ್ ಕೊಡಿಸಿ, ತಾನು ಮಾತ್ರಾ ಎಲ್ಮರ್ ಬರುವತನಕ ಕಾಯುತ್ತಿದ್ದಳು. ಇತ್ತ ಎಲ್ಮರ್, ಹೆನ್ರಿ ಅವರ ಕೊಟ್ಟಿಗೆಯಲ್ಲಿ, ಅವರ ಒಂದು ಕುದುರೆಗೆ ಲಾಳ ಹೊಡೆಯುವುದನ್ನು ಸುಸೂತ್ರವಾಗಿ ಮುಗಿಸಿದ್ದ. ಅವರ ಎರಡನೆಯ ಕುದುರೆಯ ಮುಂಗಾಲುಗಳ ಗೊರಸಿಗೆ ಲಾಳ ಹೊಡೆದ ನಂತರ, ಅದರ ಹಿಂಗಾಲುಗಳನ್ನು ಸ್ವಚ್ಛಗೊಳಿಸಿ ಲಾಳ ಹೊಡೆಯಲು ತಯಾರಿ ನಡೆಸಿದ್ದ. ಅದೇ ಸಮಯಕ್ಕೆ ಬಿಶಪ್ ಹೆನ್ರಿಯ ನಾಯಿ ಅಲ್ಲಿಗೆ ಬಂದು ಜೋರಾಗಿ ಬೊಗಳುತ್ತಾ ಕುದುರೆಯ ಹಿಂದು ಮುಂದೆ ಓಡಾಡಲು ಪ್ರಾರಂಭಿಸಿತು. ಕುದುರೆಗೆ ಇದು ಸ್ವಲ್ಪವೂ ಇಷ್ಟವಾಗಲಿಲ್ಲ. ಸಿಟ್ಟಿಗೆದ್ದ ಕುದುರೆ ಜೋರಾಗಿ ಕೆನೆಯುತ್ತ ತನ್ನ ಎರಡೂ ಹಿಂಗಾಲುಗಳನ್ನೆತ್ತಿ ಒಮ್ಮೆ ಜೋರಾಗಿ ಒದೆಯಿತು. ಮಿಂಚಿನ ವೇಗದಲ್ಲಿ ಅನಿರೀಕ್ಷಿತವಾಗಿ ನಡೆದ ಈ ಘಟನೆಗೆ ಪ್ರತಿಕ್ರಿಯಿಸಲಾಗದ ಎಲ್ಮರ್ ತಲೆಗೆ ಬಲವಾದ ಪೆಟ್ಟು ಬಿದ್ದು ಅವನು ಪ್ರಜ್ಞೆ ತಪ್ಪಿದನು. ಕ್ಷಣಾರ್ಧದಲ್ಲಿ ಅವನ ಪ್ರಪಂಚವೇ ಬದಲಾಯಿತು.

ರೆಸ್ಟೋರೆಂಟಿನಲ್ಲಿ ಕಾಯುತ್ತಿದ್ದ ಡಿಯಾನಾ ಎಷ್ಟು ಹೊತ್ತಾದರೂ ಎಲ್ಮರ್ ಬರದಿದ್ದನ್ನು ಕಂಡು ತಳಮಳಗೊಳ್ಳುತ್ತಿದ್ದಾಗ, ರಸ್ತೆಯಲ್ಲಿ ಪೊಲೀಸ್ ಮತ್ತು ಆಂಬ್ಯುಲೆನ್ಸ್ ವಾಹನಗಳ ಸೈರನ್ ಕೇಳಿಸಿತು. ಅದನ್ನು ಕೇಳಿದ ಡಿಯಾನಾಳಿಗೆ ಕಳೆದ ವರ್ಷ ಅದೇ ರಸ್ತೆಯಲ್ಲಿ ನಡೆದ ಅಪಘಾತದಲ್ಲಿ ಆಮಿಶ್ ಕುದುರೆ ಬಗ್ಗಿಯ ಸವಾರರು ಸತ್ತಿದ್ದು ನೆನಪಾಗಿ, ಅವಳ ಹೃದಯ ತಲ್ಲಣಗೊಂಡಿತು.

ಅಷ್ಟರಲ್ಲೇ ರೆಸ್ಟೋರೆಂಟಿಗೆ ಬಂದ ಇಬ್ಬರು ನಡುವಯಸ್ಕ ಇಂಗ್ಲಿಷ್ ದಂಪತಿಗಳು, ಬಿಶಪ್ ಹೆನ್ರಿ ಅವರ ಕೊಟ್ಟಿಗೆಯಲ್ಲಿ ಒಬ್ಬ ಆಮಿಶ್ ಕುದುರೆ ಲಾಳಗಾರನಿಗೆ ಕುದುರೆ ಒದ್ದ ಫಲವಾಗಿ ಬಲವಾದ ಗಾಯಗಳಾಗಿವೆ ಎಂದು ಬಿತ್ತರಿಸಿದಾಗ ಡಿಯಾನಾ ನಡುಗಿದಳು.

ತಕ್ಷಣವೇ ಏನೂ ಮಾಡಲು ತೋಚದೆ ಯೋಚಿಸುತ್ತಿದ್ದಾಗ, ರೆಸ್ಟೋರೆಂಟಿನ ಪಾರ್ಕಿಂಗ್ ಜಾಗದಲ್ಲಿ ಅವಳ ಗೆಳತಿ ಮತ್ತು ಅವಳ ಮಗಳು ಕಣ್ಣಿಗೆ ಬಿದ್ದಾಗ ಅವಳಿಗೆ ಸ್ವಲ್ಪ ಜೀವ ಬಂತು. ಆಬ್ನರನನ್ನು ಅವರ ಜೊತೆಗೆ ಬಿಟ್ಟು, ತನ್ನ ಕುದುರೆ ಬಗ್ಗಿಯನ್ನು ಚಲಾಯಿಸುತ್ತಾ, ಮನದಲ್ಲೇ ಎಲ್ಮರನ ಪ್ರಾಣಕ್ಕೆ ಅಪಾಯವಾಗದಿದ್ದರೆ ಸಾಕು ಎಂದು ದೇವರನ್ನು ಪ್ರಾರ್ಥಿಸುತ್ತಾ ಬಿಶಪ್ ಹೆನ್ರಿ ಅವರ ಕೊಟ್ಟಿಗೆಯತ್ತ ನಡೆದಳು. ತನ್ನ ಬಳಿ ಮೊಬೈಲ್ ಫೋನ್ ಇದ್ದಿದ್ದರೆ ಎಲ್ಮರನ ಕುಟುಂಬದವರಿಗೆ ಫೋನ್ ಮಾಡಿ ತಿಳಿಸಬಹುದಾಗಿತ್ತು ಎಂದು ಕೈ ಕೈ ಹಿಸುಕಿಕೊಂಡಳು. ಸಂಪ್ರದಾಯಿ ಆಮಿಶ್ ಚರ್ಚಿನವರು, ತಮ್ಮ ಜನಗಳಿಗೆ ಫೋನ್ ಉಪಯೋಗಿಸಲು ಸಮ್ಮತಿ ನೀಡುವುದಿಲ್ಲ. ಸೈಮನ್ ಸತ್ತ ನೋವಿನ ನೆನಪು ಇನ್ನೂ ಮಾಗಿರಲಿಲ್ಲ. ಅಂತಹ ಘಟನೆ ಮತ್ತೊಮ್ಮೆ ಮರುಕಳಿಸದಿರಲಿ ಎನ್ನುತ್ತಾ, ಬಿಶಪ್ ಅವರ ಹೆಂಡತಿಯನ್ನು ನಡೆದ ಘಟನೆಯ ಬಗ್ಗೆ ಕೇಳಿದಾಗ, ಆಕೆ ನಡೆದದ್ದನ್ನು ವಿವರಿಸುತ್ತಾ, ಕುದುರೆ ಬಲವಾಗಿ ಒದ್ದಿರುವುದರಿಂದ ಎಲ್ಮರನ ತಲೆಯ ಬುರುಡೆ ಒಡೆದು ಅವನು ಸತ್ತಿರಬಹುದು ಎಂದಾಗ, ಡಿಯಾನಾಳಿಗೆ ಉಸಿರುಗಟ್ಟಿದಂತಾಯ್ತು.

ಬಿಶಪ್ ಹೆಂಡತಿ "ಪ್ಯಾರಾ ಮೆಡಿಕಲ್ ತಂಡ ಅವನಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ಸ್ವಲ್ಪ ತಡಿ" ಎಂದಾಗ, ಡಿಯಾನಾ "ಅದು ಸಾಧ್ಯವೇ ಇಲ್ಲ, ನಾನೀಗಲೇ ಅವನನ್ನು ನೋಡಬೇಕು" ಎನ್ನುತ್ತಾ ಕೊಟ್ಟಿಗೆ ಕಡೆಗೆ ದೌಡಾಯಿಸಿದಳು. ಅಲ್ಲಿ ಸ್ಟ್ರೆಚರಿನ ಮೇಲೆ ಮಲಗಿದ್ದ ಎಲ್ಮರನ ಮುಖವೆಲ್ಲಾ ರಕ್ತಸಿಕ್ತವಾಗಿ, ಅವನು ಕಣ್ಣು ಮುಚ್ಚಿದ್ದನು. ಆದರೆ ಅವನಿನ್ನೂ ಉಸಿರಾಡುತ್ತಿದ್ದದ್ದನ್ನು ನೋಡಿದ ಡಿಯಾನಾಳು ಮನದಲ್ಲೇ ಅವನ ಸ್ಥಿತಿ ಆಸ್ಪತ್ರೆಯಲ್ಲಿ ಚಿಕಿತ್ಸೆಯ ನಂತರ ಉತ್ತಮಗೊಳ್ಳುತ್ತದೆ ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡಳು. ಎಲ್ಮರನ ತಂದೆ ತಾಯಿ ಮತ್ತು ಕುಟುಂಬದವರಿಗೆ ವಿಷಯ ತಿಳಿಸಲು ಮುಂದಾದ ಬಿಷಪ್, ಡಿಯಾನಾಳ ಗೆಳತಿಗೂ ವಿಷಯ ತಿಳಿಸಿ ಆಬ್ನರನ್ನು ಸಂಜೆಯತನಕ ಅವರ ಬಳಿಯೇ ಇಟ್ಟುಕೊಳ್ಳಬೇಕೆಂದು ತಿಳಿಸಲು ಹೊರಟರು. ಲೂಯಿಸ್ ಟೌನಿನ ಆಸ್ಪತ್ರೆಯ ವೈಟಿಂಗ್ ರೂಮಿನಲ್ಲಿ, ಎಲ್ಮರನ ಕುಟುಂಬದವರಿಗೆ ಸಮಾಧಾನ ಹೇಳಲು ಪ್ರಯತ್ನಿಸಿದ ಡಿಯಾನಾ, ಅವರ ದುಃಖವನ್ನು ನೋಡಲಾಗದೆ ಮರುಗಿದಳು. ಕೆಲವೇ ಗಂಟೆಗಳಲ್ಲಿ ಅವರ ಜೀವನ ತಲೆಕೆಳಗಾಗಿತ್ತು. ಆಸ್ಪತ್ರೆಯಲ್ಲಿ ಪ್ರಜ್ಞೆ ಬಂದ ನಂತರ ಎಚ್ಚೆತ್ತ ಎಲ್ಮರ್ ತನ್ನ ಮುಂದೆ ನಿಂತ ಡಾಕ್ಟರ್ ಮತ್ತು ನರ್ಸುಗಳ ಧ್ವನಿ ಕೇಳಿ ತನಗೇನಾಯಿತು ಎನ್ನುವುದನ್ನು ಜ್ಞಾಪಿಸಿಕೊಳ್ಳಲು ಯತ್ನಿಸಿದ. ಡಾಕ್ಟರ್ ಅವನಿಗಾದ ಅಪಘಾತದ ಬಗ್ಗೆ ವಿವರಿಸುತ್ತಿದ್ದಾಗ, ಎಲ್ಮರನಿಗೆ ಅವರ ಧ್ವನಿ ಕೇಳುತ್ತಿತ್ತೇ ಹೊರತು, ಯಾರ ಮುಖವೂ ಕಾಣಿಸುತ್ತಿರಲಿಲ್ಲ. ಎಲ್ಲವೂ ಅಂಧಕಾರಮಯವಾಗಿತ್ತು. ಬಹುಶಃ ಅಲ್ಲಿ ಲೈಟ್ ಹಾಕಿಲ್ಲವೆಂದು ತಿಳಿದು, ನರ್ಸಿಗೆ ಲೈಟ್ ಇಲ್ಲವೇ ಎಂದಾಗ, ಡ್ಯೂಟಿ ಡಾಕ್ಟರ್ "ಕುದುರೆ ಬಲವಾಗಿ ಅವನ ತಲೆಗೆ ಒದ್ದಾಗ, ಅವನ ಮೆದುಳಿನಲ್ಲಿರುವ ದೃಷ್ಟಿಯ ನರಕ್ಕೆ ಪೆಟ್ಟಾಗಿ, ಅವನು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದಾನೆ" ಎಂದರು. ಅದನ್ನು ಕೇಳಿದ ಎಲ್ಮರ್ "ನೋ ನೋ, ಇದು ಸುಳ್ಳು" ಎಂದು ಜೋರಾಗಿ ಚೀರಿದನು. ಆಸ್ಪತ್ರೆಯಲ್ಲಿದ್ದಾಗ ಡಿಯಾನಾಳ ಧ್ವನಿಯನ್ನೂ ಕೇಳಲು

ಎಲ್ಮರ್ ಇಷ್ಟಪಡಲಿಲ್ಲ. ಅಂಧಕಾರದಲ್ಲಿ ಮುಳುಗಿದ್ದ ತನ್ನ ಮನಸ್ಸಿನ ಭಾವನೆಗಳನ್ನು ಯಾರೊಡನೆಯೂ ವ್ಯಕ್ತಪಡಿಸಲು ಇಚ್ಛಿಸದ ಎಲ್ಮರ್ ಸಂಪೂರ್ಣವಾಗಿ ಕುಗ್ಗಿ ಹೋಗಿದ್ದನು. ಅವನ ತಂದೆತಾಯಿ ಅವನನ್ನು ತಮ್ಮೊಡನೆ ಕರೆದೊಯ್ಯುವುದಾಗಿ ತಿಳಿಸಿದರು. ಅದಕ್ಕೆ ವಿರೋಧ ವ್ಯಕ್ತಪಡಿಸಿದಾಗ, ಅವನ ತಾಯಿ ಅವನನ್ನು ಗದರಬೇಕಾಯಿತು. ಡಿಯಾನ ಹಲವು ಬಾರಿ ಆಸ್ಪತ್ರೆಗೆ ಹೋಗಿದ್ದಾಗ, ತಾನು ಅವನನ್ನೇ ಮದುವೆಯಾಗುತ್ತೇನೆ ಎಂದಾಗ, ಅದನ್ನು ತಿರಸ್ಕರಿಸುತ್ತಾ "ನಾನೀಗ ಒಬ್ಬ ಅಂಗವಿಕಲ, ನನ್ನ ಹೆಂಡತಿ ಮಕ್ಕಳನ್ನು ಸಾಕುವ ಶಕ್ತಿಯಿಲ್ಲ, ನಿನಗೆ ಜೀವನದಲ್ಲಿ ನನಗಿಂತ ಉತ್ತಮನಾದವವನ್ನು ವರಿಸುವ ಅರ್ಹತೆ ಇದೆ. ನನ್ನನ್ನು ಮರೆತುಬಿಡು, ದಯವಿಟ್ಟು ಬಲವಂತ ಮಾಡಬೇಡ" ಎಂದು ಖಡಾಖಂಡಿತವಾಗಿ ಹೇಳಿ ಅವಳನ್ನು ಹೊರಗೆ ಕಳಿಸಿದ್ದ.

ಆಸ್ಪತ್ರೆಯಿಂದ ಮರಳಿ ತಂದೆತಾಯಿಯ ಜೊತೆ ಇದ್ದಾಗ, ತನ್ನ ಕೋಣೆಯನ್ನು ಬಿಟ್ಟು ಹೊರಬರಲು ನಿರಾಕರಿಸುತ್ತಿದ್ದ ಎಲ್ಮರನ ಮನಸ್ಸನ್ನು ಮುದಗೊಳಿಸುವ ಅವನ ಕುಟುಂಬದವರ ಪ್ರಯತ್ನಗಳು ವಿಫಲಗೊಂಡಿದ್ದವು. ಪ್ರಾಣ ಸ್ನೇಹಿತನ ಹೆಂಡತಿಯನ್ನು ಮದುವೆಯಾಗುವ ತನ್ನ ಆಕಾಂಕ್ಷೆಗೆ ಸಿಕ್ಕ ಶಿಕ್ಷೆ ಇರಬೇಕು ಎಂದು ಅವನ ಮನಸ್ಸು ಪದೇಪದೇ ಅವನನ್ನು ಚುಚ್ಚಲಾರಂಭಿಸಿತ್ತು. ಅವಳನ್ನು ಮರೆಯುವ ಪ್ರಯತ್ನ ನಡೆಸಿದ್ದ ಎಲ್ಮರ್ ತನ್ನ ಧ್ಯಾನವನ್ನು ಬೇರೆಡೆಗೆ ಹೊರಳಿಸಲು ಯತ್ನಿಸುತ್ತಿದ್ದ. ಸ್ವಾನುಕಂಪದಲ್ಲಿ ಮುಳುಗಿದ್ದ ಅವನ ಮನಸ್ಸಿನಲ್ಲಿ ಸಕಾರಾತ್ಮಕವಾದ ಒಂದು ಆಲೋಚನೆಯೂ ಸುಳಿಯುತ್ತಿರಲಿಲ್ಲ. ಅವನ ತಂದೆತಾಯಿ ಅವನನ್ನು ನಿಧಾನವಾಗಿ ಮನೆಯಲ್ಲಿ ಓಡಾಡಲು ಪ್ರಾರಂಭಿಸಿದರೆ, ಕಾಲಕ್ರಮೇಣ ಎಲ್ಲವೂ ಸರಿಹೋಗುತ್ತದೆ ಎಂದು ಪದೇಪದೇ ಹೇಳುತ್ತಿದ್ದಾಗ ಅವರ ಮೇಲೆ ಸಿಡುಕುತ್ತಿದ್ದ. ನಿರಾಶರಾದ ಅವನ ತಂದೆತಾಯಿ ಕಡೆಗೆ ಚರ್ಚಿನ ಪಾದ್ರಿ ಬಿಶಪ್ ಹೆನ್ರಿ ಅವರನ್ನು ಬುದ್ಧಿ ಹೇಳಲು ಕರೆಸಿದ್ದರು. ಬಿಶಪ್ ಕೊಟ್ಟ ಉಪದೇಶವನ್ನು ಕೇಳಿ ಸಿಟ್ಟಾದ ಎಲ್ಮರ್, ಅವರ ನಾಯಿಯಿಂದಾದ ಈ ಘಟನೆಗೆ ಅವರೆ ಜವಾಬ್ದಾರಿ. ನಿಮ್ಮ ನಾಯಿಯನ್ನು ಹೊರಹಾಕಿ ಎಂದು ಸಿಟ್ಟಿಗೆದ್ದನು. ಹೀಗೆ ದಿನಗಳು ಉರುಳುತ್ತಿದ್ದಾಗ, ಒಮ್ಮೆ ಡಿಯಾನಾ ತನ್ನ ಮಗ ಆಬ್ನರನನ್ನು ಕರೆತಂದಿದ್ದಳು. ಅವರ ಜೊತೆ ಮಾತನಾಡಲು ನಿರಾಕರಿಸಿದಾಗ, ಆಬ್ನರ್ ಅಸಮಾಧಾನಗೊಂಡು ಅಳಲಾರಂಭಿಸಿದ. ಅವತ್ತಿನಿಂದ ಡಿಯಾನಾ ಅಲ್ಲಿಗೆ ಬರುವುದನ್ನು ನಿಲ್ಲಿಸಿದ್ದಳು. ಅವನ ತಂದೆ ಒಂದು ದಿನ ಅವನನ್ನು ಬಲವಂತವಾಗಿ ಕೊಟ್ಟಿಗೆಗೆ ಕರೆದೊಯ್ದು, ಅಲ್ಲಿನ ಸುತ್ತಮುತ್ತಲಿನ ಜಾಗವನ್ನು ನಿಧಾನವಾಗಿ ಪರಿಚಯ ಮಾಡಿಸಲು ಪ್ರಯತ್ನಿಸಿದ್ದರು. ಮೊದಲಲ್ಲಿ ಅವನು ಪ್ರತಿಭಟಿಸಿದರೂ, ಕ್ರಮೇಣ ಅವನ ಆತ್ಮವಿಶ್ವಾಸ ಹೆಚ್ಚಿತು. ಕೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು, ಸುತ್ತಮುತ್ತಲ ಶಬ್ದಗಳನ್ನು ಕೇಳುತ್ತಾ ತಾನಿರುವ ಸ್ಥಳ ಯಾವುದು ಎನ್ನುವುದನ್ನು ಮನದಟ್ಟು ಮಾಡಿಕೊಳ್ಳತೊಡಗಿದನು. ಕಣ್ಣಿನ ದೃಷ್ಟಿ ಇಲ್ಲದ ವ್ಯಕ್ತಿಗೆ, ಅವನ ಇತರ ಇಂದ್ರಿಯಗಳು ತೀಕ್ಷ್ಣವಾಗಿ ಕೆಲಸ ಮಾಡುತ್ತವೆ ಎನ್ನುವ ಮಾತು ನಿಜವೆನ್ನಿಸಿತು. ತಂದೆಯ ಮಾತುಗಳಿಗೆ ಹಲವೊಮ್ಮೆ ಸಿಟ್ಟಾದರೂ, ನಿಧಾನವಾಗಿ ಕೊಟ್ಟಿಗೆಯಲ್ಲಿ ಅವರ ಸಹಕಾರದಿಂದ ಕುದುರೆಗಳ ದಿನವಹಿ ತಾಲೀಮಿನ

ಕಾರ್ಯಗಳನ್ನು ನಿಭಾಯಿಸಲಾರಂಭಿಸಿದ ಎಲ್ಮರ್, ಕಡೆಗೊಮ್ಮೆ ಲೂಯೀಸ್ ಟೌನಿನಲ್ಲಿದ್ದ ನ್ಯೂ ವಿಶನ್ ಸೆಂಟರಿನಲ್ಲಿ ಅಂಧವಿಕಲತೆಯನ್ನು ನಿಭಾಯಿಸುವ ಕೌಶಲ್ಯಗಳನ್ನು ಕಲಿಯಲು ಸಮ್ಮತಿಸಿದ. ಈ ಮಧ್ಯೆ ಡಿಯಾನಳ ಮಗ ಆಬ್ನರ್ ಪ್ರತಿದಿನವೂ ಎಲ್ಮರನ ಬಗ್ಗೆ ಕೇಳುತ್ತಿದ್ದ. ಎಲ್ಮರನನ್ನು ಬಹುವಾಗಿ ಹಚ್ಚಿಕೊಂಡಿರುವ ತನ್ನ ಮಗನಿಗೆ ಅವನನ್ನು ಮರೆಯಲು ಸಾಧ್ಯವಿಲ್ಲ ಎಂದು ಗೊತ್ತಿದ್ದ ಡಿಯಾನಾ, ಅವನನ್ನು ಮದುವೆಗೆ ಒಪ್ಪಿಸುವುದಾದರೂ ಹೇಗೆ ಎಂದು ಯೋಚಿಸುತ್ತಿದ್ದಳು. ಸೈಮನ್ ಸತ್ತಾಗ ಎಲ್ಮರ್ ನೀಡಿದ ಸಹಾಯ ಮತ್ತು ಸಹಕಾರಗಳನ್ನು ಡಿಯಾನಾ ಮರೆತಿರಲಿಲ್ಲ. ಹೇಗಾದರೂ ಮಾಡಿ, ಎಲ್ಮರನಿಗೆ ಹೊಸದಾದ ಕೆಲಸ ಮಾಡುತ್ತಾ, ಫಲದಾಯಕ ಜೀವನವನ್ನು ನಡೆಸಲು ಸಾಧ್ಯ ಎನ್ನುವುದನ್ನು ಮನದಟ್ಟು ಮಾಡಿಸಲೇಬೇಕು ಎನ್ನುವ ನಿರ್ಧಾರ ತೆಗೆದುಕೊಂಡ ಡಿಯಾನಾಳಿಗೆ, ತನ್ನ ಮೇಲೆ ಅವನಿಗಿರುವ ಪ್ರೀತಿ ಕಡಿಮೆಯಾಗಿದೆ ಎನ್ನುವ ಮಾತನ್ನು ನಂಬಲು ಸಿದ್ಧಳಿರಲಿಲ್ಲ.

ದಿನಗಳು ಕಳೆದಂತೆ, ಕ್ರಮೇಣ ಎಲ್ಮರನ ಆತ್ಮವಿಶ್ವಾಸ ದಿನದಿನಕ್ಕೂ ಹೆಚ್ಚುತ್ತಿತ್ತು. ತಂದೆತಾಯಿಗಳ ಮನೆಯ ಸುತ್ತುಮುತ್ತಲಿನ ವಾತಾವರಣದಲ್ಲಿ ಈಗ ಧೈರ್ಯವಾಗಿ ಓಡಾಡುತ್ತಾ, ಕೊಟ್ಟಿಗೆಯಲ್ಲಿ ತಂದೆಗೆ ನೆರವಾಗುತ್ತಿದ್ದ ಎಲ್ಮರ್, ಕಡೆಗೊಮ್ಮೆ ತನ್ನ ಸ್ವಂತ ಮನೆಗೆ ವಾಪಸ್ಸಾಗುವ ನಿರ್ಧಾರ ಮಾಡಿದ. ಕ್ರಿಸ್ಮಸ್ ವೇಳೆಗೆ ಮರದಲ್ಲಿ ಹಕ್ಕಿ ಗೂಡುಗಳನ್ನು ಮಾಡಿ, ವಾರದ ಸಂತೆಯಲ್ಲಿ ಮಾರಬಹುದೆಂದು ತಂದೆ ಸಲಹೆ ನೀಡಿದಾಗ, ಅದನ್ನು ತೆಗೆದುಹಾಕದೆ, ಪ್ರಯತ್ನಿಸಬಹುದು ಎಂದ ಎಲ್ಮರ್, ಹಿಂಜರಿಕೆಯಿಂದ ಜೀವನವನ್ನು ವ್ಯರ್ಥಗೊಳಿಸುವ ಆಲೋಚನೆಯನ್ನು ದೂರ ಮಾಡಿದ್ದನು. ಅದೇ ಸಮಯದಲ್ಲಿ ಡಿಯಾನಾ ಮನೆಯಲ್ಲಿ ಕ್ರಿಸ್ಮಸ್ ಸಂತೆಯಲ್ಲಿ ತಾನು ಅದುವರೆಗೆ ಹೊಲೆದಿದ್ದ ಕ್ವಿಲ್ಟ್‌ಗಳನ್ನು ಮಾರಿ ಹೆಚ್ಚು ಹಣ ಸಂಪಾದಿಸುವ ಯೋಚನೆಯಲ್ಲಿದ್ದಳು. ಎಲ್ಮರ್ ತಮ್ಮನ್ನು ದೂರ ಮಾಡಿದ್ದಾನೆಂದು ಮನ ನೊಂದಿದ್ದ ತಾಯಿ ಮಗ ಇಬ್ಬರೂ ನಿರಾಶರಾಗಿದ್ದರು. ಎಲ್ಮರ್ ದೃಷ್ಟಿ ಕಳೆದುಕೊಂಡಿರುವುದು ನಿಜಕ್ಕೂ ಒಂದು ದುರಂತ, ಆದರೆ ಇಡೀ ಪ್ರಪಂಚದಲ್ಲಿ ಅವನೊಬ್ಬನೇ ಅಂಧನಲ್ಲ. ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಒಂದರಲ್ಲಿ, ಅಂಧರು ತಮ್ಮ ವಿಕಲತೆಯೊಂದಿಗೆ ಸ್ವಲ್ಪ ಹೊಂದಿಕೆ ಮಾಡಿಕೊಂಡರೆ, ಅವರ ಅಭಿರುಚಿಗೆ ಅನುಸಾರವಾಗಿ ಹೊಸ ಕೌಶಲ್ಯಗಳನ್ನು ಕಲಿತು, ಜೀವನವನ್ನು ಸಾಗಿಸಬಹುದು ಎಂದು ಓದಿದ್ದ ಡಿಯಾನಾಳಿಗೆ, ಎಲ್ಮರ್ ಮುಂದೊಂದು ದಿನ ಆ ದಾರಿಯಲ್ಲಿ ನಡೆದು, ತನ್ನನ್ನು ಮದುವೆಯಾಗ ಬಹುದೇದೋ ಎನ್ನುವ ಭರವಸೆ ಇನ್ನೂ ಜೀವಂತವಾಗಿತ್ತು. ತಂದೆಯ ಸಲಹೆಯಂತೆ, ಎಲ್ಮರ್ ಮರದ ಹಕ್ಕಿಯ-ಗೂಡುಗಳನ್ನು ತಯಾರಿಸಿ, ತಾಯಿಯೊಂದಿಗೆ ಅದನ್ನು ಸಂತೆಯಲ್ಲಿ ಮಾರಲು ಹೋಗಿದ್ದ. ಯಾವುದಾದರೂ ಮಗು ನಗುವ ಸದ್ದು ಕೇಳಿದರೆ, ಅದು ಆಬ್ನರ್ ಇರಬಹುದೇ ಎಂದು ಯೋಚಿಸುತ್ತಿದ್ದ ಎಲ್ಮರನ ಮನದಲ್ಲಿ ಇನ್ನೂ ಆ ಮಗುವಿನ ಬಗ್ಗೆ ಬಹಳ ಪ್ರೀತಿ ವಿಶ್ವಾಸಗಳು ಜಾಗೃತವಾಗಿದ್ದವು. ಅಷ್ಟರಲ್ಲೇ ಅವನ ಮೇಜಿನ ಬಳಿ ಬಂದ ಗ್ರಾಹಕರೊಬ್ಬರು, ಅವನು ಮಾಡಿದ್ದ ಮರದ ಹಕ್ಕಿಗೂಡುಗಳನ್ನು

ಕೊಳ್ಳಲು ಆಶಯ ವ್ಯಕ್ತಪಡಿಸಿದಾಗ ಅವನ ಯೋಚನೆಯ ಸರಪಳಿ ಅಲ್ಲಿಗೆ ತುಂಡಾಯಿತು. ಅವನ ಗ್ರಾಹಕಿ ತನ್ನ ತಂದೆ ರೇಮಂಡ್ ತನ್ನ ಪೀಠೋಪಕರಣಗಳ ಅಂಗಡಿಯಲ್ಲಿ ಕೆಲಸಮಾಡಲು ಒಬ್ಬ ಸಹಾಯಕನನ್ನು ಹುಡುಕುತ್ತಿದ್ದಾರೆ ಎಂದು ತಿಳಿಸಿ, ಆ ಕೆಲಸಕ್ಕೆ ಅವನು ಅರ್ಹನಾದ ವ್ಯಕ್ತಿ ಎಂದಾಗ, ಎಲ್ಮರ್ ಅವನನ್ನು ಹೋಗಿ ಭೇಟಿ ಮಾಡಲು ನಿಶ್ಚಯಿಸಿದ. ಚಳಿಗಾಲದ ಶೀತ ಮತ್ತು ಜ್ವರದಿಂದ ನರಳುತ್ತಿದ್ದ ಡಿಯಾನಾ, ಆ ದಿನದ ಸಂತೆಯಲ್ಲಿರಲಿಲ್ಲ. ತನ್ನದೇ ಆದ ಕ್ವಿಲ್ಟ್ ಅಂಗಡಿಯೊಂದನ್ನು ತೆರೆಯುವ ಆಕಾಂಕ್ಷೆ ಹೊಂದಿದ್ದ ಡಿಯಾನಾ, ಅದಕ್ಕೆ ಕಡಿವಾಣ ಹಾಕಿ, ಬಡತನ ತನ್ನ ಬೆಂಬಿಡದು ಎಂದು ತನ್ನ ಅದೃಷ್ಟವನ್ನು ಹಳಿದುಕೊಂಡು ಸುಮ್ಮನಾದಳು.

ರೇಮಂಡ್ ರೆನ್ನೋನ ಪೀಠೋಪಕರಣದ ಅಂಗಡಿಯಲ್ಲಿ, ಮರವನ್ನು ಉಜ್ಜುವ ಅರೆಕಾಲದ ನೌಕರಿ ಸಂಪಾದಿಸಿದ ಎಲ್ಮರ್, ತನ್ನ ತಂದೆತಾಯಿಯರ ಮನದಲ್ಲಿ ಆಸೆಯ ಮೊಳಕೆಯನ್ನು ಬಿತ್ತಿದ್ದ. ಆದರೆ ಅಂಗಡಿಯ ಕೆಲಸಕ್ಕೆ ಹೋಗಲು ತನ್ನ ಕೈಯಲ್ಲಿ ಕುದುರೆಗಾಡಿ ಚಲಾಯಿಸಲು ಸಾಧ್ಯವಿಲ್ಲದ್ದರಿಂದ ಎಲ್ಮರ್, ಗಾಡಿ ಚಲಾಯಿಸಲು ಡ್ರೈವರ್ ಒಬ್ಬನನ್ನು ಗೊತ್ತುಮಾಡಿಕೊಳ್ಳಬೇಕಾಯಿತು. ಅದು ಅವನ ಮನಸ್ಸಿಗೆ ಅಷ್ಟು ಒಗ್ಗದ ಮಾತಾದರೂ, ಪ್ರತಿ ದಿನ ಕೆಲಸಕ್ಕೆ ಹೋಗಿ ಹಣ ಸಂಪಾದಿಸುವ ಅವಕಾಶವೊಂದು, ಅವನ ಹೃದಯದ ಆಶಾ ಕಿರಣವನ್ನು ಹೊತ್ತಿಸಿತ್ತು. ಕ್ರಿಸ್ಮಸ್ ಹಬ್ಬ ಕಳೆದುಹೋಯಿತು. ಆದರೆ ರಜೆಯ ದಿನಗಳು ಡಿಯಾನಾ ಮತ್ತು ಆಬ್ನರ್ ಪಾಲಿಗೆ ಅಷ್ಟೊಂದು ಮುದ ನೀಡಲಿಲ್ಲ. ಜನವರಿ ತಿಂಗಳ ಕಡುಚಳಿಯಲ್ಲಿ, ಮಗನೊಡನೆ ಕುದುರೆಗಾಡಿ ಚಲಾಯಿಸುತ್ತ ತನ್ನ ಯೋಚನೆಗಳಿಗೆ ತಡೆ ಹಾಕಿ ಡಿಯಾನಾ ರಸ್ತೆಯತ್ತ ಗಮನ ಕೊಟ್ಟಳು. ಅಂದಿನ ಸಂತೆಯಲ್ಲಿ ಕ್ವಿಲ್ಟ್ ಹೊಲಿಯಲು ಬೇಕಾದ ಸಾಮಗ್ರಿಗಳನ್ನು ಕೊಳ್ಳಬೇಕಿತ್ತು. ಹಣಕಾಸಿನ ಪರಿಸ್ಥಿತಿ ಬಿಗಿಯಾಗಿದ್ದರಿಂದ, ಸಂತೆಯ ರಿಯಾಯತಿ ದರದಲ್ಲಿ ಎಲ್ಲವನ್ನೂ ಕೊಳ್ಳಲು ಹೊರಟಿದ್ದಳು. ಜೊತೆಗೆ ಮನೆಯ ತೋಟದಲ್ಲಿ ಬೆಳೆದಿದ್ದ ಸೇಬಿನ ಹಣ್ಣುಗಳನ್ನು ಮಾರುವ ಉದ್ದೇಶವೂ ಸೇರಿತ್ತು. ಅಂದಿನ ಸಂತೆಯಲ್ಲಿ ಮರದ ಹಕ್ಕಿಯ ಗೂಡುಗಳನ್ನು ಮಾರುವ ಸಲುವಾಗಿ ಅಲ್ಲಿಗೆ ಬಂದಿದ್ದ ಎಲ್ಮರ್, ತನ್ನ ಡ್ರೈವರ್ ಸಹಾಯದಿಂದ ಎಲ್ಲವನ್ನೂ ಅಣಿಗೊಳಿಸುತ್ತಿದ್ದ. ಡಿಯಾನಾ ಮತ್ತು ಆಬ್ನರ್ ಸಂತೆಯಲ್ಲಿ ಸಿಕ್ಕಬಹುದೇ ಎಂದು ಆಸೆಯಿಂದ ಅವರ ಧ್ವನಿಗಳನ್ನು ಕೇಳಲು ಕಾತರಿಸುತ್ತಿದ್ದ ಎಲ್ಮರನ ಮನದಲ್ಲಿ, ಹಿಂದಿನ ವರ್ಷ ಅವರ ಮನೆಯಲ್ಲಿ ಕಳೆದಿದ್ದ ಕ್ರಿಸ್ಮಸ್ ರಜೆಯ ನೆನಪುಗಳಿನ್ನೂ ಹಸಿರಾಗೇ ಇತ್ತು. ಅಷ್ಟರಲ್ಲೇ ಅಲ್ಲಿಗೆ ಬಂದ ಬಿಷಪ್ ಹೆನ್ರಿ, ಅವನು ಮಾಡುತ್ತಿದ್ದ ಹೊಸ ಕೆಲಸದ ಬಗ್ಗೆ ಮೆಚ್ಚುಗೆಯ ಮಾತನ್ನಾಡಿ, ಅವನು ಜೀವನದಲ್ಲಿ ನಿರಾಶನಾಗಬೇಕಿಲ್ಲ. ಅವನು ಮತ್ತೊಮ್ಮೆ ನೂತನ ಜೀವನ ಪ್ರಾರಂಭಿಸಬಹುದು ಎಂದು ಭರವಸೆ ನೀಡಿದಾಗ, ಎಲ್ಮರ್ ಅದು ಸಾಧ್ಯವೇ ಎಂದು ಸಿಡುಕಲು ಪ್ರಾರಂಭಿಸಿದಾಗ, ಅವನನ್ನು ಸಂತೈಸಿದ ಬಿಶಪ್, ಚರ್ಚಿನಲ್ಲಿ ಮತ್ತೊಮ್ಮೆ ಮಾತನಾಡೋಣ ಎಂದು ಅಲ್ಲಿಂದ ಕಾಲ್ಕಿತ್ತರು. ಅವರು ಹೋದ ಸ್ವಲ್ಪ ಸಮಯದಲ್ಲೇ ಬಾಲಕಿಯೊಬ್ಬಳು ತನ್ನ ತಾಯಿಯ ಕೂಡ ಅವನು ಮಾಡಿದ್ದ ಹಕ್ಕಿಯ

ಗೂಡನ್ನು ಕೊಳ್ಳಲು ಬಂದಿದ್ದಳು. ಎಲ್ಲವನ್ನೂ ಕೊಂಡ ಮೇಲೆ, ಬಾಲಕಿಯ ತಾಯಿ ತನ್ನ ಮಗಳಿಗೆ ಅವನನ್ನು ನೋಡಬೇಕಾಗಿದೆ ಎಂದು ಹೇಳಿದಾಗ, ಸ್ವಲ್ಪ ಅಚ್ಚರಿಗೊಂಡ ಎಲ್ಮರ್, ಅದಕ್ಕೆ ಒಪ್ಪಿದ. ಆ ಬಾಲಕಿ ಅವನ ಬಳಿ ಬಂದಾಗ ಅವನ ಬಿಳಿಯ ಬೆತ್ತವನ್ನು ಎಡವಿ, ಬೆತ್ತವನ್ನು ನೆಲಕ್ಕೆ ಕೆಡವಿದಳು. ಹುಡುಗಿಯ ತಾಯಿ ಅದನ್ನು ಕೈಗೆತ್ತಿಕೊಂಡು ಮಗಳ ಕೈಗೆ ಇತ್ತಾಗ, ಅವಳು ತಡುವುತ್ತಾ ಅದನ್ನು ಎಲ್ಮರನಿಗೆ ಕೊಟ್ಟಳು. ಆಗ ಎಲ್ಮರನಿಗೆ ಆ ಬಾಲಕಿ ಕುರುಡಿ ಎಂದು ತಿಳಿದು, ಅವನ ಗಂಟಲು ಉಬ್ಬಿ ಬಂತು. ಆ ಬಾಲಕಿ ಅವನ ಕೈ ಮುಖಗಳನ್ನು ತಡವುತ್ತಾ, ಅವನ ತಲೆಗೂದಲ ಬಣ್ಣವೇನೆಂದು ವಿಚಾರಿಸಿದಾಗ, ಎಲ್ಮರ್ ತನ್ನ ಕೂದಲು ಕೆಂಪು ಮಿಶ್ರಿತ ಕಂದು ಬಣ್ಣದ್ದು ಎಂದು ತಿಳಿಸಿದ. "ನಿನ್ನ ಬಳಿ ಬಿಳಿಯ ಬೆತ್ತವಿರುವುದರಿಂದ ನೀನೂ ಅಂಧನಿರಬೇಕು ಎಂದು ನನ್ನ ಎಣಿಕೆ. ನೀನು ಮಾಡಿರುವ ಹಕ್ಕಿ-ಗೂಡು ಬಹಳ ಸುಂದರವಾಗಿದೆ" ಎಂದಾಗ, ಎಲ್ಮರ್ "ಥಾಂಕ್ಯೂ, ನೀನೊಬ್ಬ ಅಮೂಲ್ಯವಾದ ವಿಶೇಷ ಹುಡುಗಿ" ಎಂದು ತನ್ನ ಧನ್ಯವಾದಗಳನ್ನು ಅರ್ಪಿಸಿದ. ಜನ್ಮತಃ ಕುರುಡಿಯಾದ ಆ ಮಗುವಿನಿಂದ ತಾನು ನಿಜವಾಗಿಯೂ ಕಲಿಯುವುದಿದೆ ಎಂದುಕೊಂಡ.

ಸಂತೆಯಲ್ಲಿ, ಎಲ್ಮರ್ ತನ್ನ ಮಧ್ಯಾಹ್ನದ ಭೋಜನಕ್ಕೆಂದು ತಂದಿದ್ದ ಸ್ಯಾಂಡ್ವಿಚ್ಚನ್ನು ತಿನ್ನುವ ತಯಾರಿಯಲ್ಲಿದ್ದ. ಇದ್ದಕ್ಕಿದ್ದಂತೆ ಮಹಿಳೆಯೊಬ್ಬಳು ಅಲ್ಲಿದ್ದ ಮಗುವಿಗೆ ಸಕ್ಕರೆಯ ಪೆಪ್ಪರಮಿಂಟನ್ನು ಕೊಡುತ್ತಾ ಮಾತನಾಡಿಸುತ್ತಿದ್ದ ಶಬ್ದ ಎಲ್ಮರ್ ಕಿವಿಗೆ ಬಿತ್ತು. ಆದರೆ ಸಂತೋಷದಿಂದ ನಗುತ್ತಿದ್ದ ಮಗುವಿನ ಧ್ವನಿ ಆಬ್ನರನದು ಎಂದು ತಕ್ಷಣವೇ ಗುರ್ತಿಸಿ, ಡಿಯಾನಾಳೂ ಅಲ್ಲೇ ಹತ್ತಿರದಲ್ಲಿರಬೇಕೆಂದು ಸುಮ್ಮನಾದ. ಆಬ್ನರ್ ಪೆಪ್ಪರಮೆಂಟಿನ ಕಾಗದದ ಹೊದಿಕೆಯನ್ನು ತೆಗೆಯುವ ಶಬ್ದ ಕಿವಿಗೆ ಬಿತ್ತು. ಅದಾದ ಹಲವೇ ಕ್ಷಣಗಳಲ್ಲಿ, ಅವನು ಕೆಮ್ಮುವುದು ಕೇಳಿಸಿತು. ಕೆಮ್ಮಿನ ನಂತರ ಅವನ ಗಂಟಲು ಕಟ್ಟಿ ಉಸಿರಾಡಲು ಹೆಣಗಾಡುವ ಸದ್ದು ಎಲ್ಮರನ ಕಿವಿಗೆ ಬಿದ್ದೊಡನೆ, ಅವನು ತನ್ನ ಕುರ್ಚಿಯಿಂದ ನೆಗೆದು, ತನ್ನ ಬಿಳಿಯ ಬೆತ್ತದ ಸಹಾಯದಿಂದ ಕ್ಷಣದಲ್ಲಿ ಆಬ್ನರನ ಹತ್ತಿರಕ್ಕೆ ಹೋಗಿ ಉಸಿರಾಡದೆ ಪರದಾಡುತ್ತಿದ್ದ ಅವನ ಸೊಂಟದ ಸುತ್ತಾ ತನ್ನ ಕೈಗಳನ್ನು ಬಳಸಿ ಮುಷ್ಟಿ ಮಾಡಿ, ಅದನ್ನು ಅವನ ಪಕ್ಕೆಲುಬಿನ ಕೆಳಗೆ ಇರಿಸಿಕೊಂಡು, ಹೈಮ್ಲಿಕ್ ಪ್ರಥಮ ಚಿಕಿತ್ಸೆಯ ವಿಧಾನವನ್ನನುಸರಿಸಿ ಅವನ ಬಾಯಿಂದ ಪೆಪ್ಪರ್ಮೆಂಟಿನ ಚೂರು ಹೊರ ಬೀಳುವಂತೆ ಮಾಡಿದ. ಆಬ್ನರ್ ಪುನಃ ಉಸಿರಾಡಲು ಪ್ರಾರಂಭಿಸಿದಾಗ ನೆಮ್ಮದಿಯ ನಿಟ್ಟುಸಿರಿಟ್ಟ ಎಲ್ಮರನನ್ನು ಅಲ್ಲಿದ್ದವರು ಹೊಗಳುತ್ತಿದ್ದರು. ಅಷ್ಟು ಹೊತ್ತಿಗೆ ತನ್ನ ಕಣ್ಣಿಗೆ ಕಾಣದೆ ಮರೆಯಾಗಿದ್ದ ಮಗನನ್ನು ಹುಡುಕುತ್ತಾ ಬಂದ ಡಿಯಾನ ನೆರೆದ ಗುಂಪನ್ನು ಸರಿಸಿ ಅಳುತ್ತಿದ್ದ ಮಗನನ್ನು ಕಂಡು ಗಾಬರಿಯಾದಳು. ನೆರೆದಿದ್ದ ಮಂದಿ ಎಲ್ಮರನತ್ತ ಬೆಟ್ಟು ತೋರಿ, ಅವನ ಸಮಯೋಚಿತ ಕ್ರಿಯೆಯಿಂದ ಮಗು ಉಳಿಯಿತೆಂದು ಗೊತ್ತಾದಾಗ, ತನ್ನ ಧನ್ಯವಾದಗಳನ್ನರ್ಪಿಸಿದಳು. ಆಬ್ನರನ್ನು ಒಂಟಿಯಾಗಿ ಬಿಡುವುದು ಸರಿಯಲ್ಲ ಎಂದು ಎಲ್ಮರ್ ಟೀಕಿಸಿದಾಗ ಅವಳಿಗೆ ಸ್ವಲ್ಪ ಸಿಟ್ಟು ಬಂತು. ಅವಳು ಎಲ್ಮರನ ಹತ್ತಿರ

ನಡೆದು, "ನನ್ನ ತಲೆಯ ಹಿಂಭಾಗದಲ್ಲಿ ಕಣ್ಣಿಲ್ಲ. ನಾನು ಗ್ರಾಹಕರೊಂದಿಗೆ ವ್ಯಸ್ತಳಾಗಿದ್ದಾಗ, ನನ್ನ ಕಣ್ಣು ತಪ್ಪಿಸಿ ಓಡಿದ್ದಾನೆ" ಎಂದು ಸಿಡುಕುತ್ತಾ ಹೇಳಿ ಅಲ್ಲಿಂದ ಹೊರಟುಹೋದಳು. ಆ ಮಾತನ್ನು ಕೇಳಿ ಅವಳ ಮನ ನೋಯಿಸಿದೆ ಎಂದು ತನ್ನನ್ನು ಹಳಿದುಕೊಂಡ ಎಲ್ಮರ್, ಬಹುಶಃ ಎಣಿಸಿದ್ದಕ್ಕಿಂತ ತಾನು ಹೆಚ್ಚು ಸಮರ್ಥ ಎಂದು ಯೋಚಿಸುತ್ತಿದ್ದ. ಇಲ್ಲದಿದ್ದರೆ ಇಂದು ಕ್ಷಣಾರ್ಧದಲ್ಲಿ ಆಬ್ನರನ ಪ್ರಾಣ ಉಳಿಸಲಾಗುತ್ತಿರಲಿಲ್ಲ. ಈಗಂತೂ ನನ್ನ ಕೆಲಸ ಭದ್ರವಾಗಿದೆ. ಅದರ ಗಳಿಕೆಯಿಂದ ಸ್ವಾವಲಂಬಿಯಾಗಿದ್ದೇನೆ. ತುರ್ತು ಪರಿಸ್ಥಿತಿಯಲ್ಲಿ ಪ್ರತಿಕ್ರಿಯಿಸುವ ಸಾಮರ್ಥ್ಯ ತನಗಿದೆ. ಇನ್ನು ಡಿಯಾನಾಳ ಜೊತೆ ಮತ್ತೊಮ್ಮೆ ತಮ್ಮ ಮದುವೆಯ ಬಗ್ಗೆ ಮಾತನಾಡಲು ಹಿಂಜರಿಯುವುದರಲ್ಲಿ ಅರ್ಥವಿಲ್ಲ. ಇಂದು ಸಂಜೆಯೇ ಊಟವಾದ ನಂತರ, ಅವಳ ತಂದೆ ರೂಫಸ್ ಮನೆಗೆ ಹೋಗಿ, ತಮ್ಮಿಬ್ಬರ ನಡುವಿರುವ ತಪ್ಪು ತಿಳುವಳಿಕೆಗಳನ್ನು ದೂರ ಮಾಡಲೇಬೇಕು ಎಂದು ನಿರ್ಧರಿಸಿದನು. ಅಂದು ಸಂಜೆಯ ಊಟದ ಸಮಯದಲ್ಲಿ, ಎಲ್ಮರ್ ತನ್ನ ಕುಟುಂಬದವರೊಡನೆ ಎಲ್ಲಾ ವಿಷಯಗಳನ್ನು ವಿವರವಾಗಿ ತಿಳಿಸಿ, ಕುದುರೆ ಅಪಘಾತದ ನಂತರ ಮೊಟ್ಟಮೊದಲ ಬಾರಿಗೆ ತನ್ನ ಮನಸ್ಸಿನಲ್ಲಿದ್ದ ಹೆದರಿಕೆ ಮತ್ತು ಅನುಮಾನಗಳು ದೂರವಾಗಿವೆ. ನಾನು ಈಗಲೆ ಡಿಯಾನಾಳ ಮನೆಗೆ ಹೋಗಿ ನಮ್ಮ ಮದುವೆಯ ಬಗ್ಗೆ ಮತ್ತೊಮ್ಮೆ ಪ್ರಸ್ತಾಪಿಸುತ್ತೇನೆ ಎಂದಾಗ, ಅವನ ತಂದೆ, ತಾಯಿ ಸಂತೋಷದಿಂದ ಅವನ ನಿರ್ಧಾರಕ್ಕೆ ತಮ್ಮ ಬೆಂಬಲವನ್ನು ಸೂಚಿಸಿದರು.

ಅವನ ಕುದುರೆಗಾಡಿಯ ಚಾಲಕ ಡ್ರೂ ಅವನನ್ನು ಡಿಯಾನಾಳ ತಂದೆ ರೀಫಸ್ ಮನೆಗೆ ಕರೆದೊಯ್ದ. ಅವನ ಸಹಾಯದಿಂದ ಡಿಯಾನಳ ಮನೆಯ ಬಾಗಿಲನ್ನು ತಲುಪಿದ ಎಲ್ಮರನ ಮನಸ್ಸು ಮತ್ತೊಮ್ಮೆ ಮಗುವಿನಂತೆ ಮುದಗೊಂಡಿತ್ತು. ಮನಸ್ಸಿನಲ್ಲಿ ನಡೆಯುತ್ತಿದ್ದ ಅನಿಶ್ಚಿತತೆಯ ಆಲೋಚನೆಗಳನ್ನು ತಳ್ಳಿಹಾಕುತ್ತಾ ಅವರ ಮನೆಯ ಬಾಗಿಲನ್ನು ಬಡಿದ ಎಲ್ಮರ್. ರೂಫಸ್ ಬಾಗಿಲು ತೆರೆದೊಡನೆ, ಬಿಸಿಯಾದ ಗಾಳಿ ಎಲ್ಮರನ ಮುಖವನ್ನು ಸ್ಪರ್ಶಿಸಿತು. ಅವನ ಬರುವಿಗೆ ಆಶ್ಚರ್ಯ ತೋರಿದ ರೂಫಸ್ ತನ್ನ ಗಟ್ಟಿಯಾದ ದನಿಯಲ್ಲಿ ಅವನನ್ನು ಸ್ವಾಗತಿಸಿದ. ನಿಮ್ಮ ಮಗಳ ಕೂಡ ಮಾತನಾಡಲು ಬಂದಿದ್ದೇನೆ, ಅವಳಿರುವಳೇ ಎಂದು ಪ್ರಶ್ನಿಸಿದನು. ಡಿಯಾನ ಕೊಟ್ಟಿಗೆಯಲ್ಲಿ ತನ್ನ ಗೆಳತಿ ಫ್ರಾನಿ ಹೋಸ್ಟೆಲ್ಲರಳಿಗೆ ಹೊಸದಾಗಿ ಹುಟ್ಟಿರುವ ಬೆಕ್ಕಿನ ಮರಿಗಳನ್ನು ತೋರಿಸುತ್ತಿದ್ದಾಳೆ ಎಂದು ಕೇಳಿ, ಕೊಟ್ಟಿಗೆಯ ಕಡೆಗೆ ತನ್ನ ಬಿಳಿ ಬೆತ್ತದ ಸಹಾಯದಿಂದ ತಡವುತ್ತಾ ನಿಧಾನವಾಗಿ ನಡೆದ. ಕೊಟ್ಟಿಗೆ ಬಾಗಿಲನ್ನು ತೆರೆದೊಡನೆ, ಒಳಗಿನಿಂದ ಒಣ ಹುಲ್ಲಿನ ವಾಸನೆ ಅವನ ಮೂಗಿನ ಹೊಳ್ಳೆಗಳಿಗೆ ಬಡಿದಾಗ, ಅದನ್ನು ಆಘ್ರಾಣಿಸುತ್ತಾ ಒಳಕ್ಕೆ ನಡೆದ ಅವನ ಕಾಲಿಗೆ ಬೆಕ್ಕೊಂದು ತನ್ನ ಮುಖವನ್ನು ಉಜ್ಜಿ ಮಿಯಾಂವ್ ಎಂದು ಶಬ್ದ ಮಾಡಿತು. ತನ್ನ ಬೆತ್ತದಿಂದ ಮೆಲ್ಲಗೆ ಬೆಕ್ಕನ್ನು ಓಡಿಸುತ್ತಾ, ಕೊಟ್ಟಿಗೆಯ ಒಳಭಾಗಕ್ಕೆ ನಡೆದ ಎಲ್ಮರನ ಕಿವಿಗೆ ಡಿಯಾನಾಳ ಧ್ವನಿ ಕೇಳಿಸಿತು. ಅದನ್ನು ಕೇಳಿ ಅಲ್ಲಿಯೇ ನಿಂತು ಒಳಗೆ ನಡೆಯುತ್ತಿದ್ದ ಸಂಭಾಷಣೆಯನ್ನು ಆಲಿಸಿದ. ಡಿಯಾನ ಹಿಂದಿನ ದಿನ, ಯೋಸ್ಟ್ ಹೋಸ್ಟೆಲ್ಲರ್ ಎನ್ನುವ ಆಮಿಶ್

ಸಮುದಾಯದ ವ್ಯಕ್ತಿ ಅವಳನ್ನು ಮದುವೆಯಾಗುವ ಆಶಯ ವ್ಯಕ್ತಪಡಿಸಿದ್ದಾನೆ ಎನ್ನುವ ಸಮಾಚಾರವನ್ನು ಫ್ಲಾನಿಯ ಬಳಿ ಹೇಳುತ್ತಿದ್ದಳು. ಅದನ್ನು ಕೇಳಿ ನಿರಾಶನಾದ ಎಲ್ಮರ್, ಇನ್ನು ತಾನು ಅಲ್ಲಿ ನಿಂತಿರುವುದು ಸರಿಯಲ್ಲ. ಕುದುರೆ ಗಾಡಿಗಳನ್ನು ತಯಾರಿಸಿ ಮಾರುವ ವ್ಯಾಪಾರಿ ಹೋಸ್ಟೆಲ್ಲರ್, ತನಗಿಂತಲೂ ಡಿಯಾನಾಳಿಗೆ ಉತ್ತಮನಾದ ವರ. ಜೊತೆಗೆ ಆಬ್ನರನಿಗೆ ಒಳ್ಳೆಯ ಜೀವನವನ್ನು ಕೊಡಬಲ್ಲ ಎಂದು ಭಾರವಾದ ಹೃದಯ ಹೊತ್ತು ಅಲ್ಲಿಂದ ನಡೆದ. ಕೊಟ್ಟಿಗೆಯಿಂದ ವಾಪಸಾದ ಡಿಯಾನಾಳನ್ನು ನೋಡಿ ಅವಳ ತಂದೆ ರೂಫಸ್, ಎಲ್ಮರ್ ನಿನ್ನ ಬಳಿ ಏನು ಕೇಳಿದ ಎಂದು ಪ್ರಶ್ನಿಸಿದಾಗ, ಕಕ್ಕಾಬಿಕ್ಕಿಯಾದ ಡಿಯಾನಾ, ಎಲ್ಲಿದ್ದಾನೆ ಎಲ್ಮರ್, ಇಂದು ಮಧ್ಯಾಹ್ನ ಸಂತೆಯಲ್ಲಿ ನೋಡಿದ ನಂತರ ಅವನ ಭೇಟಿಯಾಗಿಲ್ಲ ಎಂದಳು. ಎಲ್ಮರ್ ಈಗ ತಾನೆ ಬಂದಿದ್ದ, ನಿನ್ನನ್ನು ಭೇಟಿಯಾಗಲು ಕೊಟ್ಟಿಗೆಯ ಕಡೆಗೆ ಬಂದಿದ್ದನ್ನು ನಾನೇ ನೋಡಿದೆ ಎಂದು ರೂಫಸ್ ತಿಳಿಸಿದಾಗ, ತಕ್ಷಣವೇ ಡಿಯಾನಾಳಿಗೆ ನಡೆದ ಸಂಗತಿಯ ಅರಿವಾಯಿತು. ತಾನು ಫ್ಲಾನಿಯ ಜೊತೆ ಹೇಳುತ್ತಿದ್ದ ಮಾತುಗಳನ್ನು ಕೇಳಿಸಿಕೊಂಡು, ಹೇಳದೆ ಹೊರಟುಹೋಗಿದ್ದಾನೆ ಎನ್ನುವುದು ಸ್ಪಷ್ಟವಾಯಿತು. ಡ್ಯಾಡ್, ನಾನೀಗಲೇ ಎಲ್ಮರನ್ನು ಭೇಟಿಯಾಗಲೇಬೇಕು ಎಂದು ತಂದೆಗೆ ಹೇಳಿ, ಅಲ್ಲೇ ಮೇಜಿನ ಮೇಲಿದ್ದ ತನ್ನ ಶಾಲನ್ನು ಕೈಗೆತ್ತಿಕೊಂಡು ಕೊಟ್ಟಿಗೆಯಲ್ಲಿದ್ದ ತನ್ನ ಕುದುರೆಗಾಡಿಯತ್ತ ಹೊರಟಳು. ಅವಳು ಕತ್ತಲೆಯಾದ ನಂತರ ಒಬ್ಬಳೇ ಕುದುರೆಗಾಡಿಯಲ್ಲಿ ಹೋಗುವುದು ತನಗೆ ಇಷ್ಟವಿಲ್ಲ, ಕೇವಲ ಲ್ಯಾಂಪಿನ ಬೆಳಕಿನಲ್ಲಿ 'ಬಗ್ಗಿ' ಗಾಡಿಯನ್ನು ಚಲಾಯಿಸುವುದು ಅಪಾಯ ಎಂದು ತಂದೆ ಹೇಳಿದರೂ, ಅದನ್ನು ಲೆಕ್ಕಿಸದ ಡಿಯಾನಾ, ಆಬ್ನರನ್ನು ಮಲಗಿಸಿ ಎಂದು ತಿಳಿಸಿ ಹೊರಟುಹೋದಳು. ಮಗು ಮಲಗಿದ ನಂತರ ಬೈಬಲ್ ಓದಿ ಅವಳ ಸುರಕ್ಷತೆಗಾಗಿ ಪ್ರಾರ್ಥಿಸುತ್ತೇನೆ ಎಂದ ತಂದೆಯ ಮಾತು ಕೇಳಿದ "ಡಿಯಾನಾ, ಇಂದು ನನಗೆ ನಿಮ್ಮ ಪ್ರಾರ್ಥನೆ ಬಹಳ ಮುಖ್ಯ" ಎಂದು ಧನ್ಯವಾದಗಳನ್ನರ್ಪಿಸುತ್ತಾ ನಡೆದಳು.

ಅಂದು ರಾತ್ರಿ ಹಿಮಪಾತದ ಮುನ್ಸೂಚನೆ ಇತ್ತು. ಹಿಮದ ಹೊದಿಕೆಯಿಂದ ರಸ್ತೆಯ ಮೇಲ್ಮೈ ನುಣುಪಾಗಿದ್ದಾಗ, ಕುದುರೆಗಳೇನಾದರೂ ಜಾರಿದಲ್ಲಿ ಅಪಘಾತವಾಗುವ ಸಂಭವವಿತ್ತು. ಅದಾವುದರ ಕಡೆಗೂ ಅವಳ ಗಮನವಿರಲಿಲ್ಲ. ಡಿಯಾನಾಳ ಮನೆಯಿಂದ ವಾಪಸಾಗುವಾಗ, ದಾರಿಯುದ್ದಕ್ಕೂ ಅವಳ ಬಗ್ಗೆಯೇ ಯೋಚಿಸುತ್ತಿದ್ದ ಎಲ್ಮರನ ಮನದಲ್ಲಿ ವಿಷಾದಗಳ ಸುಳಿಗಳೆದ್ದಿದ್ದವು. ಡಿಯಾನಾಳನ್ನು ದೂರ ತಳ್ಳಿ ತಪ್ಪು ಮಾಡಿದೆ. ಇದನ್ನು ಜೀವನ ಪೂರ್ತಿ ಅನುಭವಿಸುವೆ ಎಂದು ಹಲುಬಿದ. ಮನದ ಖಿನ್ನತೆಯನ್ನು ದೂರಗೊಳಿಸಲು ಇರುವ ದಾರಿ ಒಂದೇ, ನನ್ನನ್ನು ನನ್ನ ಕೆಲಸಗಳಲ್ಲಿ ವ್ಯಸ್ತಗೊಳಿಸಿಕೊಳ್ಳುವುದು ಎಂದು ನಿರ್ಧರಿಸಿದ. ಮನೆ ತಲುಪಿದೊಡನೆ, ತನ್ನ ಮರಗೆಲಸ ಮುಂದುವರೆಸಲು ಕೊಟ್ಟಿಗೆಯತ್ತ ನಡೆಯಲಾರಂಭಿಸಿದ. ಲ್ಯಾಂಪಿನ ಮಂದ ಬೆಳಕಿನಲ್ಲೇ ತನ್ನ ಕುದುರೆ ಗಾಡಿಯನ್ನು ಚಲಾಯಿಸುತ್ತಾ ಎಲ್ಮರನ ಮನೆ ತಲುಪಿದ ಡಿಯಾನಾ, ತನ್ನ ಬಳಿಯಿದ್ದ ಲ್ಯಾಂಪಿನ ಸಹಾಯದಿಂದ ಅವನ ಮನೆಯ ಬಾಗಿಲು ಬಡಿದಾಗ ಅವಳನ್ನು ಸ್ವಾಗತಿಸಿದ

ಎಲ್ಮರನ ತಾಯಿ ಸಾರಾಳ ಮುಖದಲ್ಲಿ ಆಶ್ಚರ್ಯವಿತ್ತು. ರಾತ್ರಿಯಲ್ಲಿ ಬಂದ ಡಿಯಾನಾಳನ್ನು ಕಂಡು ಗಾಬರಿಯಿಂದ, ಎಲ್ಲವೂ ಕ್ಷೇಮವೇ ಎಂದು ವಿಚಾರಿಸಿಕೊಂಡಳು. ನಾನು ಎಲ್ಮರನ ಬಳಿ ಮಾತನಾಡಬೇಕು. ಅವನೆಲ್ಲಿ ಎಂದಾಗ, ಅವನು ಕೊಟ್ಟಿಗೆಯಲ್ಲಿ ಮರದ ಕೆಲಸ ಮಾಡುತ್ತಿರಬಹುದು ಎಂದು ತಿಳಿಸಿದಳು. ಎಚ್ಚರಿಕೆಯಿಂದ ಹೆಜ್ಜೆಯಿಡುತ್ತಾ ಕೊಟ್ಟಿಗೆಗೆ ನಡೆದ ಡಿಯಾನಾ, ಬಾಗಿಲು ಬಡಿದು, "ನಾನು ಡಿಯಾನಾ, ನಿನ್ನ ಹತ್ತಿರ ಮಾತನಾಡಬಹುದೆ?" ಎಂದಾಗ, ಎಲ್ಮರನ ಹೃದಯದ ಬಡಿತ ವೇಗಗೊಂಡು, ಅವನ ಕೈಯಲ್ಲಿದ್ದ ಮರದ ತುಂಡು ನೆಲಕ್ಕೆ ಬಿತ್ತು. ಹಲವು ಕ್ಷಣಗಳ ನಂತರ ಡಿಯಾನಾ ತನ್ನ ಮೃದುವಾದ ಕೈಯನ್ನು ಎಲ್ಮರನ ಬೆನ್ನಿನ ಮೇಲೆ ಇಟ್ಟಾಗ, ಅವಳ ಮತ್ತು ಆಬ್ನರ್‌ನ ಕ್ಷೇಮವನ್ನು ವಿಚಾರಿಸಿದ. ಹೆಚ್ಚಿಗೆ ಸಮಯ ವ್ಯರ್ಥ ಮಾಡದೆ, ಡಿಯಾನಾ ತಾನು ಫ್ಲಾರಿಯ ಜೊತೆಗೆ ಹೇಳಿದ ಸುದ್ದಿಯ ಬಗ್ಗೆ ತಿಳಿಸಿ, ಯೋಸ್ಟ್ ಹೋಸ್ಟೆಲ್ಲರನನ್ನು ತಾನು ಪ್ರೀತಿಸುವುದಿಲ್ಲ, ಅವಳ ಪ್ರೀತಿಯಿರುವುದು ಎಲ್ಮರನ ಮೇಲೆ ಎಂದು ದೃಢವಾಗಿ ಹೇಳಿದಳು. ಅವಳ ಮಾತುಗಳನ್ನು ಕೇಳಿ ಎಲ್ಮರನ ಕಣ್ಣುಗಳು ತೇವಗೊಂಡವು. ನಿಧಾನವಾಗಿ ತನ್ನ ಕೈಗಳಿಂದ ಅವಳ ಮುಖವನ್ನು ತಡವುತ್ತಾ ಮತ್ತೊಮ್ಮೆ "ನೀನು ನನ್ನನ್ನು ಮದುವೆಯಾಗುವೆಯಾ" ಎಂದಾಗ, "ಹೌದು, ನಿನ್ನನ್ನೇ ಮದುವೆಯಾಗುತ್ತೇನೆ, ನನ್ನ ಮದುವೆಯ ಗೌನ್ ಕೂಡಾ ಸಿದ್ಧವಾಗಿದೆ" ಎಂದು ಡಿಯಾನಾ ಒಪ್ಪಿಗೆಯಿತ್ತಳು. "ಇನ್ನು ಯಾರೂ ನಮ್ಮ ಮದುವೆಗೆ ಅಡ್ಡಿ ಬರಲು ಸಾಧ್ಯವಿಲ್ಲ. ತಕ್ಷಣವೇ ಚರ್ಚಿನ ಬಿಷಪ್‌ರ ಕೂಡ ಮಾತನಾಡಿ ಮದುವೆಯ ತಾರೀಖನ್ನು ನಿಶ್ಚಯಿಸೋಣ" ಎಂದು ತನ್ನ ಪ್ರೇಮವನ್ನು ಸ್ಪಷ್ಟಪಡಿಸಿದ ಡಿಯಾನಾಳ ಇಂಪಾದ ಧ್ವನಿಯಲ್ಲಿ ಅಂತಿಮ ನಿರ್ಧಾರವಿತ್ತು. ಅಂತಹ ಚಿತ್ತಸ್ಥೈರ್ಯವುಳ್ಳ ಮಹಿಳೆಯೊಬ್ಬಳು ತನ್ನ ಸಂಗಾತಿಯಾಗಲು ಸಮ್ಮತಿಸಿದ್ದಕ್ಕೆ ನಿಶ್ಶಬ್ದವಾಗಿ ದೇವರನ್ನು ಪ್ರಾರ್ಥಿಸಿದ ಎಲ್ಮರನ ಹೃದಯವು ಭವಿಷ್ಯದ ಬಗ್ಗೆ ಕನಸುಗಳನ್ನು ಹೆಣೆಯಲಾರಂಭಿಸಿತ್ತು. ಮದುವೆಯಾದ ನಾಲ್ಕು ತಿಂಗಳುಗಳ ನಂತರ, ಸರಳವಾದ ಕೆಲವೇ ಪೀಠೋಪಕರಣಗಳಿಂದ ಅಲಂಕೃತವಾದ ಕೋಣೆಯಲ್ಲಿ ಹೆಂಡತಿ ಮಗನೊಡನೆ ಕುಳಿತು ತನ್ನ ಜೀವನದಲ್ಲಾದ ಒಳ್ಳೆಯ ಬೆಳವಣಿಗೆಗಳ ಬಗ್ಗೆ ಯೋಚಿಸುತ್ತಿದ್ದ ಎಲ್ಮರ್, ತನ್ನ ಅದೃಷ್ಟದ ಬಗ್ಗೆ ಹಿಗ್ಗುತ್ತಾ, ದೇವರನ್ನು ಮನಸಾರೆ ಪ್ರಾರ್ಥಿಸುತ್ತಿದ್ದ.

ಆಧಾರ

* The Brides of the Big Valley – Wanda. E. Brunstetter.

❑

18

ಅಮೇರಿಕೆಯ ಮೂಲನಿವಾಸಿಗಳ ಮರಣೋತ್ತರ ಕ್ರಿಯೆ ಹಾಗೂ ನಂಬಿಕೆಗಳು

ಶಂಕರ ಹೆಗಡೆ
ನೇಪರ್‌ವಿಲ್, ಇಲಿನಾಯ್

*

ಒಂದು ಜನಾಂಗದ ಶವಸಂಸ್ಕಾರದ ಸಂಪ್ರದಾಯಗಳು ಮುಖ್ಯವಾಗಿ ಹುಟ್ಟು-ಸಾವುಗಳನ್ನು ಕುರಿತು ಅವರ ದೃಷ್ಟಿಕೋನವನ್ನು ಅವಲಂಬಿಸಿರುತ್ತವೆ. ಹಿಂದಿನಿಂದಲೂ ಬಹುಮಟ್ಟಿನ ಜನಾಂಗಗಳು ಆತ್ಮ ಎಂಬ ಬಾಹ್ಯ ಶಕ್ತಿ ಮಾನವನ ಎಲ್ಲ ಕ್ರಿಯೆಗಳನ್ನು ನಿಯಂತ್ರಿಸುತ್ತದೆ, ಮರಣವೆಂಬುದು ದೇಹಕ್ಕೆ ಮಾತ್ರ, ಆತ್ಮಕ್ಕೆ ಸಾವಿಲ್ಲ ಎಂದು ನಂಬಿಕೊಂಡು ಬಂದಿದ್ದಾರೆ. ವ್ಯಕ್ತಿಯೊಬ್ಬನ ಮರಣದ ನಂತರ ಆತನ ದೇಹದಿಂದ ಬೇರ್ಪಟ್ಟ ಆತ್ಮಕ್ಕೆ ಏನಾಗುತ್ತದೆ ಎಂಬ ಬಗೆಗೂ ಹಲವಾರು ನಂಬಿಕೆಗಳಿವೆ. ಈ ನಂಬಿಕೆಗಳೇ ಶವಸಂಸ್ಕಾರದ ವಿಧಿಗಳನ್ನು ಬಹುಮಟ್ಟಿಗೆ ರೂಪಿಸುತ್ತವೆ ಎನ್ನಬಹುದು.

ಪರಲೋಕಗಳ ಅಸ್ತಿತ್ವದಲ್ಲಿ ಕೂಡ ಬಹುಮಟ್ಟಿನ ಜನಾಂಗಗಳು ವಿಶ್ವಾಸ ಇಟ್ಟಿವೆ. ವ್ಯಕ್ತಿಯೊಬ್ಬನ ಮರಣದ ನಂತರ ಆತನ ಚೇತನ ಎಲ್ಲಿಗೆ ಹೋಗುತ್ತದೆ? ನಮಗೆ ಅಗೋಚರವಾದ ಪರಲೋಕವೊಂದರಲ್ಲಿ ಅಥವಾ ಭೂಲೋಕದಲ್ಲಿಯೇ ಬೇರೊಂದು ರೂಪದಲ್ಲಿ ಆತ್ಮದ ಅಸ್ತಿತ್ವ ಮುಂದುವರಿಯುವುದೇ? ಇಂತಹ ಪ್ರಶ್ನೆಗಳಿಗೆ ಸಮಂಜಸ ಉತ್ತರ ಸಿಗದಿದ್ದಾಗ ಜನರು ಸ್ವರ್ಗ, ನರಕಗಳೆಂಬ ಭಾವನಾಲೋಕಗಳ ಸೃಷ್ಟಿ ಮಾಡಿಕೊಂಡರು. ಈ ಭಾವನಾಲೋಕಗಳ ಮೂಲಭೂತ ಕಲ್ಪನೆ ಎಲ್ಲ ಜನಾಂಗಗಳಲ್ಲಿ ಒಂದೇ ಆಗಿದ್ದರೂ ಅವುಗಳ ರೂಪ-ರೇಷೆ, ವಿವರಣೆಗಳಲ್ಲಿ ಭಿನ್ನತೆಗಳನ್ನು ಗಮನಿಸಬಹುದು.

ಈ ಲೇಖನದ ಉದ್ದೇಶ ಅಮೇರಿಕೆಯ ಮೂಲನಿವಾಸಿಗಳ ಶವಸಂಸ್ಕಾರ ಪದ್ಧತಿ ಮತ್ತು ಅವರ ಪರಲೋಕದ ಕಲ್ಪನೆಗಳ ಸ್ಥೂಲ ಪರಿಚಯ ಮಾಡಿಕೊಡುವುದು. ಈ ಮೂಲನಿವಾಸಿಗಳು ಅಮೇರಿಕೆಯಲ್ಲಿ ಯೂರೋಪಿಯನ್ನರ ವಸಾಹತು ಪ್ರಾರಂಭವಾಗುವ

ಸಾವಿರಾರು ವರ್ಷಗಳ ಮೊದಲಿನಿಂದಲೇ ಜೀವಿಸುತ್ತಿದ್ದರು. ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಮೂಲನಿವಾಸಿ ಬಣಗಳು ಬೇರೆ-ಬೇರೆ ಹೆಸರುಗಳಿಂದ ಗುರುತಿಸಿಕೊಂಡು ತಮ್ಮದೇ ಆದ ವಿಶಿಷ್ಟ ಭಾಷೆ, ಧರ್ಮ, ನಂಬಿಕೆ, ಸಂಪ್ರದಾಯಗಳನ್ನು ಬೆಳೆಸಿಕೊಂಡಿದ್ದರು. ಅಮೇರಿಕದಲ್ಲಿ ಇಂದು ಒಂದು ಸಾವಿರಕ್ಕೂ ಹೆಚ್ಚು ಬಣಗಳಿವೆ. ವಿವಿಧ ಬಣಗಳ ಸಂಸ್ಕೃತಿ-ಸಂಪ್ರದಾಯಗಳಲ್ಲಿ ಸಾಕಷ್ಟು ಸಾಮ್ಯತೆಗಳೂ ಇವೆ. ಮೂಲನಿವಾಸಿಗಳ ಒಟ್ಟಾರೆ ಜನಾಂಗದ ಸಂಸ್ಕೃತಿಯ ಒಂದು ಪಕ್ಷಿನೋಟವನ್ನು ಹಲವು ಬಣಗಳ ಉದಾಹರಣೆಗಳ ಮೂಲಕ ಪ್ರಸ್ತುತಪಡಿಸುವ ಪ್ರಯತ್ನ ಇಲ್ಲಿದೆ.

ಹತ್ತೊಂಬತ್ತನೇ ಶತಮಾನದ ಕೊನೆಯತನಕವೂ ಮೂಲನಿವಾಸಿಗಳು ತಮ್ಮ ಸಾಂಪ್ರದಾಯಿಕ ಪದ್ಧತಿಗಳನ್ನು ಉಳಿಸಿಕೊಂಡು ಬಂದಿದ್ದರು. ನಂತರ ಕ್ರಮೇಣವಾಗಿ ಬಹಳಷ್ಟು ಮೂಲನಿವಾಸಿಗಳು ತಮ್ಮನ್ನು ಕ್ರಿಶ್ಚಿಯನ್ ಧರ್ಮದೊಂದಿಗೆ ಗುರುತಿಸಿ ಕೊಳ್ಳಹತ್ತಿದರು. ಹಾಗಾಗಿ ಇಂದು ಅವರ ಬಹುಮಟ್ಟಿನ ಸಂಪ್ರದಾಯಗಳು ಎರಡೂ ಪದ್ಧತಿಗಳ ಮಿಶ್ರಣವೆನ್ನಬಹುದು. ಈ ಲೇಖನವು ಪ್ರಮುಖವಾಗಿ ಹತ್ತೊಂಬತ್ತನೇ ಶತಮಾನದ ಅಂತ್ಯದವರೆಗೆ ಪ್ರಚಲಿತವಿದ್ದ ನಂಬಿಕೆ, ಸಂಪ್ರದಾಯಗಳನ್ನು ವಿವರಿಸುತ್ತದೆ. ಹಳೆಯ ಸಂಪ್ರದಾಯಗಳನ್ನು ಕಾಯ್ದುಕೊಂಡು ಬಂದ ಕೆಲವು ಬಣಗಳಲ್ಲಿಯೂ ಬಳಕೆಯಲ್ಲಿರ ಬಹುದು.

ಶವಸಂಸ್ಕಾರ ಪದ್ಧತಿಗಳನ್ನು ಮುಖ್ಯವಾಗಿ ಮೂರು ಗುಂಪುಗಳಲ್ಲಿ ವಿಭಾಗಿಸಬಹುದು: ದಹನ, ದಫನ, ಮತ್ತು ಮೇಲ್ಮೈ ಅಂತ್ಯಕ್ರಿಯೆಗಳು. ಇವುಗಳಲ್ಲಿ ದಹನ ಮತ್ತು ದಫನಗಳ ಮೂಲಕ ಶವಸಂಸ್ಕಾರ ಮಾಡುವ ಸಂಪ್ರದಾಯಗಳು ಹೆಚ್ಚು ವ್ಯಾಪಕವಾದದ್ದು. ತೆರೆದ ಅಥವಾ ಮುಚ್ಚಿದ ಪೆಟ್ಟಿಗೆಯಲ್ಲಿ ಶವವನ್ನು ಮಲಗಿಸಿ ಅಟ್ಟಣಿಗೆಯ ಮೇಲಿಟ್ಟು ಹೊರಗಡೆ ಸ್ಮಶಾನದಲ್ಲಿ ಬಿಡುವ ಪದ್ಧತಿ ಕೆಲವೇ ಜನಾಂಗಗಳಲ್ಲಿ ಪ್ರಚಲಿತವಿದೆ.

ಭಾರತದಲ್ಲಿ ಬಹುಮತ ಹಿಂದುಗಳು, ಜೈನರು, ಬೌದ್ಧರು, ಮತ್ತು ಸಿಖ್ ಧರ್ಮೀಯರು ಅಗ್ನಿಸಂಸ್ಕಾರದಿಂದ ಅಂತ್ಯಕ್ರಿಯೆ ನೆರವೇರಿಸುತ್ತಾರೆ. ವೀರಶೈವ ಪಂಥಕ್ಕೆ ಸೇರಿದವರು ಮೃತದೇಹವನ್ನು ಕುಳಿತ ಭಂಗಿಯಲ್ಲಿ ಹೂಳುತ್ತಾರೆ. ಹಿಂದು ಸನ್ಯಾಸಿಗಳು ಐಕ್ಯ ಹೊಂದಿದಾಗ ಅವರ ದೇಹವನ್ನು ಕೂತ ಭಂಗಿಯಲ್ಲಿ ಹೂಳಿ ಸ್ಮಾರಕ ಕಟ್ಟುವ ಸಂಪ್ರದಾಯವಿದೆ. ಮುಸಲ್ಮಾನರಿಗೆ ದಹನಕ್ರಿಯೆ ನಿಷಿದ್ಧ. ಅವರು ದಫನ ಶವಸಂಸ್ಕಾರವನ್ನು ಪಾಲಿಸುತ್ತಾರೆ. ಕ್ರಿಶ್ಚಿಯನ್ನರು ಕೂಡ ಮೃತರನ್ನು ಪೆಟ್ಟಿಗೆಯಲ್ಲಿಟ್ಟು ಹೂಳುತ್ತಾರೆ. ಇತ್ತೀಚೆಗೆ ಅಮೇರಿಕೆಯ ಕೆಲವು ಕ್ರಿಶ್ಚಿಯನ್ನರಲ್ಲಿ ದಹನವೂ ಜನಪ್ರಿಯವಾಗುತ್ತಿದೆ. ಝೊರಾಸ್ಟ್ರಿಯನ್ ಧರ್ಮೀಯರಲ್ಲಿ ಮೇಲ್ಮೈ ಶವಸಂಸ್ಕಾರ ಪ್ರಚಲಿತವಿದೆ. ವಿಶಾಲ ಗೋಪುರದ ಮೇಲೆ ನಿರ್ಮಿಸಿದ ವೇದಿಕೆಯ ಮೇಲೆ ಶವವನ್ನು ಮುಕ್ತವಾಗಿಟ್ಟು ಹದ್ದುಗಳಿಗೆ ತಿನ್ನಲು ಬಿಡುತ್ತಾರೆ.

ಮೂಲನಿವಾಸಿಗಳ ಶವಸಂಸ್ಕಾರದ ಪದ್ಧತಿಗಳು

ಅಮೇರಿಕೆಯ ಮೂಲನಿವಾಸಿಗಳಲ್ಲಿ ಕೂಡ ಮೇಲೆ ಉಲ್ಲೇಖಿಸಿದ ಮೂರೂ ವಿಧಾನಗಳು ಪ್ರಚಲಿತವಿದ್ದವು. ದಹನ ಶವಸಂಸ್ಕಾರ ಪದ್ಧತಿ ಮುಖ್ಯವಾಗಿ ರಾಕಿ

ಪರ್ವತಶ್ರೇಣಿಗಳ ಪಶ್ಚಿಮಕ್ಕೆ ವಾಸಿಸುವ ಜನಾಂಗಗಳಲ್ಲಿ ಸರ್ವೇ ಸಾಮಾನ್ಯವಾಗಿದ್ದಿತು. ಆದರ ಪೂರ್ವಕ್ಕೆ ವಾಸಿಸುತ್ತಿರುವ ಹಲವರಲ್ಲಿಯೂ ದಹನ ಶವಸಂಸ್ಕಾರ ರೂಢಿಯಲ್ಲಿತ್ತು ಎಂಬ ಬಗ್ಗೆ ಆಧಾರಗಳಿವೆ. ಹಲವು ಬಣಗಳು ದಹನಕ್ರಿಯೆಯನ್ನು ಅಳವಡಿಸಿಕೊಂಡಿದ್ದರೂ ಅದರಲ್ಲಿ ಅವರ ನಂಬಿಕೆ, ದಹನದ ವಿಧಾನ ಮತ್ತು ದಹನಾನಂತರದ ಆಚರಣೆಗಳಲ್ಲಿ ವ್ಯತ್ಯಾಸವನ್ನು ಕಾಣಬಹುದು.

ಮೃತದೇಹವನ್ನು ನೆಲದಲ್ಲಿ ಹೂಳುವ ಪದ್ಧತಿಯೂ ಹಲವು ಬಣಗಳಲ್ಲಿ ಇತ್ತು. ಆದರೆ ಹೂಳುವ ರೀತಿಯಲ್ಲಿ ಬೇರೆ-ಬೇರೆ ಬಣಗಳು ಭಿನ್ನ-ಭಿನ್ನ ಪದ್ಧತಿಗಳನ್ನು ಅನುಸರಿಸುತ್ತಿದ್ದರು. ಮೃತನ ಆತ್ಮದ ಮರಣೋತ್ತರ ಜೀವನ ಕುರಿತ ನಂಬಿಕೆಗಳು ಶವವನ್ನು ಯಾವ ಭಂಗಿಯಲ್ಲಿಟ್ಟು ಹೂಳಬೇಕೆಂಬುದನ್ನು ನಿರ್ಧರಿಸುವಂತೆ ತೋರುತ್ತದೆ. ಶವವನ್ನು ನೇರವಾಗಿ ಮಲಗಿಸಿ ಹೂಳುವುದು ಹೆಚ್ಚು ಪ್ರಚಲಿತವಿತ್ತೆಂದು ಕಾಣುತ್ತದೆ. ಕೆಲವು ಬಣಗಳು ಶವವನ್ನು ಕೂಡಿಸಿ ಅಥವಾ ನಿಲ್ಲಿಸಿ ಹೂಳುವ ರೂಢಿಗಳೂ ಕೂಡ ಇದ್ದವು.

ಮೇಲ್ಮೈಯಲ್ಲಿ ಮೃತದೇಹವನ್ನಿಟ್ಟು ಮಾಡುವ ಶವಸಂಸ್ಕಾರಗಳಲ್ಲಿ ಕೆಲವು ಬಗೆಗಳಿದ್ದವು. ಅತ್ಯಂತ ಸಾಮಾನ್ಯ ರೂಢಿಯೆಂದರೆ ಮರ ಮತ್ತು ಅಟ್ಟಣಿಗೆಯ ಸಮಾಧಿಗಳು. ಇವು ಇಂದು ಕೂಡ ವ್ಯಾಪಕವಾಗಿ ಆಚರಣೆಯಲ್ಲಿವೆ. ದೊಡ್ಡ ಮರಗಳು ದೊರಕುವ ಪ್ರದೇಶಗಳಲ್ಲಿ ಮರಗಳನ್ನು, ಇಲ್ಲವಾದರೆ, ಅಟ್ಟಣಿಗೆಗಳನ್ನು ಬಳಸಲಾಗುತ್ತಿತ್ತು. ಎಂಟರಿಂದ ಹತ್ತು ಅಡಿ ಎತ್ತರದ ಅಟ್ಟಣಿಗೆಗಳ ಮೇಲೆ ಶವವನ್ನು ಮಲಗಿಸಿ, ಅಥವಾ ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ಸಂಸ್ಕಾರ ಮಾಡುತ್ತಿದ್ದರು. ಪೆಟ್ಟಿಗೆಯ ಬದಲು ಕೆಲವು ಬಣಗಳು ನಾವೆಯಲ್ಲಿ ಶವವನ್ನು ಮಲಗಿಸಿ ಅಟ್ಟಣಿಗೆಯ ಮೇಲೆ ಇಟ್ಟು ಶವಸಂಸ್ಕಾರ ಮಾಡುತ್ತಿದ್ದುದೂ ಉಂಟು. ಮೇಲ್ಮೈ ಶವಸಂಸ್ಕಾರ ಪದ್ಧತಿಗಳು ಧಾರ್ಮಿಕ ನಂಬಿಕೆಗಿಂತ ಹೆಚ್ಚಾಗಿ ಅವರು ವಾಸಿಸುವ ನೈಸರ್ಗಿಕ ವಾತಾವರಣ ಮತ್ತು ಆ ಪ್ರದೇಶದಲ್ಲಿ ಆ ಸಮಯದಲ್ಲಿ ದೊರಕುವ ಸೌಲಭ್ಯಗಳ ಮೇಲೆ ಅವಲಂಬಿಸಿರುತ್ತದೆ.

ಮುಂದಿನ ಪರಿಚ್ಛೇದಗಳಲ್ಲಿ ವಿವಿಧ ಬಣಗಳಲ್ಲಿ ಪ್ರಚಲಿತವಿದ್ದ ಅಂತ್ಯಕ್ರಿಯೆಗಳ ಹಲವು ಉದಾಹರಣೆಗಳಿವೆ. ಇವುಗಳನ್ನು ಆಕರ ಗ್ರಂಥ [1] ಮತ್ತು [2] ರಿಂದ ಆಯ್ದು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇಲ್ಲಿ ಹೆಸರಿಸಿದ ಬಣಗಳ ಸ್ಥೂಲ ಪರಿಚಯಗಳನ್ನು [3] ಅಥವಾ [4]ರಿಂದ ಪಡೆಯಬಹುದು.

ಕೊಲೊರಾಡೊ ನದೀತೀರದ ಯೂಮನ್ ಜನಾಂಗದವರು ದಹನ ಸಂಸ್ಕಾರದಲ್ಲಿ ದೃಢ ನಂಬಿಕೆಯುಳ್ಳವರಾಗಿದ್ದರು. ಹೂಳುವುದರಿಂದ ದೇಹ ಕೊಳೆತು ನಾರುತ್ತದೆ ಎಂದು ಅವರ ನಂಬಿಕೆಯಿತ್ತು. 'ಸತ್ತ ವ್ಯಕ್ತಿಯ ಶವ ಸಂಸ್ಕಾರವನ್ನು ವಿಧಿಪೂರ್ವಕವಾಗಿ ಮಾಡದಿದ್ದಲ್ಲಿ ವ್ಯಕ್ತಿಯ ಪರಲೋಕ ಜೀವನ ಚಿಂತಾಜನಕವಾಗುವುದು. ವಿಧಿಪೂರ್ವಕ ಶವಸಂಸ್ಕಾರವು ಆತ್ಮವನ್ನು ದೇಹದಿಂದ ಬಿಡುಗಡೆ ಮಾಡಿ ಅದನ್ನು ಪರಲೋಕ ಪ್ರವೇಶಕ್ಕೆ ಅಣಿ ಮಾಡುತ್ತದೆ. ಅಗ್ನಿಯಿಂದ ಮಾತ್ರ ಆತ್ಮವನ್ನು ದೇಹದಿಂದ ಬೇರ್ಪಡಿಸಲು ಸಾಧ್ಯ. ಆದ್ದರಿಂದಲೆ

ದಹನವು ಅಂತ್ಯಕ್ರಿಯೆಯ ಏಕೈಕ ಮಾರ್ಗ' ಎಂದು ನಂಬಿದ್ದರು. ದೇಹವು ಉರಿಯುತ್ತಿದ್ದಾಗ ಪ್ರೇಕ್ಷಕರು ಜೋರಾಗಿ ಹಾಡುವುದರಿಂದ ಮೃತನ ಆತ್ಮವು ಸಂತೋಷದಿಂದ ಬಿಡುಗಡೆಯನ್ನು ಅನುಭವಿಸುತ್ತದೆ ಎಂಬುದು ಅವರ ವಿಶ್ವಾಸ.

ಉತ್ತರ ಕ್ಯಾಲಿಫೋರ್ನಿಯಾ ಪ್ರದೇಶದಲ್ಲಿ ವಾಸಿಸುತ್ತಿರುವ ವಪ್ಪೊ ಇಂಡಿಯನ್ಸ್ ಬಣ, ಮೃತರನ್ನು ಮರಣದ ತಕ್ಷಣವೇ ದಹನ ಮಾಡಿ, ಚಿತಾಭಸ್ಮವನ್ನು ಗಾಳಿಯಲ್ಲಿ ತೂರುತ್ತಿದ್ದರು. ಆಗ ಆತ್ಮವು ಎತ್ತರದಲ್ಲಿ ಬಿಡುಗಡೆ ಹೊಂದಿ ಸಮುದ್ರದ ಮೇಲಿಂದ ಹಾರಿ ಹೋಗಿ ಒಂದು ವಿಶಿಷ್ಟ ಗುಹೆಯನ್ನು ಸೇರಿಕೊಳ್ಳುತ್ತದೆ. ಈ ಗುಹೆಯಲ್ಲಿ ಸದಾ ಬೆಂಕಿಯು ಉರಿಯುತ್ತಿರುತ್ತದೆ. ಈ ಬೆಂಕಿ ಎಷ್ಟು ಉಗ್ರವಾಗಿರುತ್ತದೆಂದರೆ ಜೀವಂತ ವ್ಯಕ್ತಿ ಅದನ್ನು ನೋಡಿದರೆ ತಕ್ಷಣ ದೃಷ್ಟಿಯನ್ನು ಕಳೆದುಕೊಳ್ಳುತ್ತಾನೆ. ಚಿತಾಭಸ್ಮದಿಂದ ಬಿಡುಗಡೆಯಾದ ಆತ್ಮ, ಆ ಗುಹೆಯಲ್ಲಿ ಬೆಂಕಿಯ ಸುತ್ತಲೂ ಒಂದು ವರ್ಷದ ತನಕ ಸುಳಿದಾಡುತ್ತಿರುತ್ತದೆ. ನಂತರ ಅಲ್ಲಿಂದ ಹಾರಿ ಹೋಗಿ ಪಶ್ಚಿಮ ದಿಕ್ಕಿನಲ್ಲಿರುವ ಸ್ವರ್ಗವನ್ನು ಸೇರಿಕೊಳ್ಳುತ್ತದೆ' ಎಂದು ನಂಬಿದ್ದರು.

ರಾಕಿ ಪರ್ವತ ಶ್ರೇಣಿ ಮತ್ತು ಸಿಯಾರಾ ನೆವಾಡಾಗಳ ಮಧ್ಯೆ ವಾಸಿಸುವ ಶೋಶೋನ್ ಬಣದವರಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ದಹನ ಮತ್ತು ದಫನ ಎರಡೂ ಪದ್ಧತಿಗಳು ರೂಢಿಯಲ್ಲಿದ್ದವು. ಮೃತ ದೇಹವನ್ನು ಅವರು ವಾಸ ಮಾಡುತ್ತಿದ್ದ ಮನೆಯ ಸಹಿತ ದಹನ ಮಾಡುತ್ತಿದ್ದರೆ, ಹೂಳಲಿಕ್ಕೂ ಕೆಲವು ವಿಶಿಷ್ಟ ಸ್ಥಳಗಳನ್ನು ಆಯ್ದುಕೊಳ್ಳುತ್ತಿದ್ದರು. ಇದಕ್ಕೆ ಭಿನ್ನವಾಗಿ ಕ್ಯಾಲಿಫೋರ್ನಿಯಾ ಪ್ರದೇಶದ ಕರೋಕ್ ಬಣದವರು ಮೃತರ ನಿವಾಸಗಳ ಬಳಿಯೇ ಹೂಳಿ ಅದರ ಸುತ್ತ ಬಿಳಿಯ ಬಣ್ಣದ ಬೇಲಿ ಕಟ್ಟುತ್ತಿದ್ದರು. ಇದರಿಂದ ಅವರ ಸ್ನೇಹಿತರು ಮತ್ತು ಸಂಬಂಧಿಕರು ಸಮಾಧಿಯ ಸ್ಥಳವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಲು ಸುಲಭವಾಗುತ್ತದೆ ಎಂಬ ವಿಶ್ವಾಸವಿತ್ತು. ಕೆಲವು ಬಣಗಳಲ್ಲಿ ಮನೆಯಿಂದ ದೂರ ಮರಣ ಹೊಂದಿದವರನ್ನು ಮೃತಪಟ್ಟ ಸ್ಥಳದಲ್ಲಿಯೇ ದಹನ ಮಾಡಿ, ಮೃತನ ಚಿತಾಭಸ್ಮವನ್ನು ಒಂದು ಬುಟ್ಟಿಯಲ್ಲಿ ತಂದು ಮನೆಯಲ್ಲಿ ಇಟ್ಟುಕೊಳ್ಳುವ ರೂಢಿಯಿತ್ತು.

ಅರಿಝೋನಾ ರಾಜ್ಯದ ಪೀಮಾ ಬಣದವರು ಹೂಳಿದ ಶವಕ್ಕೆ ಮಣ್ಣಿನ ಸಂಪರ್ಕ ಬಾರದಂತೆ ಮೃತದೇಹವನ್ನು ಸಿದ್ಧಪಡಿಸುತ್ತಿದ್ದರು. ಉದ್ದವಾದ ಹಗ್ಗವನ್ನು ಮೊಣಕಾಲು ಕೆಳಗಿನಿಂದ ಕುತ್ತಿಗೆಯ ಮೇಲಿನವರೆಗೆ ಗಟ್ಟಿಯಾಗಿ ಎಳೆದು ಕಟ್ಟಿ ದೇಹವನ್ನು ತಲೆತಗ್ಗಿಸಿ ಕುಳಿತ ಭಂಗಿಗೆ ತರುತ್ತಿದ್ದರು. ಆಮೇಲೆ ಚರ್ಮದ ದುಪ್ಪಟಿ ಹೊದಿಸಿ ಅದರ ಮೇಲೆ ಹಗ್ಗವನ್ನು ಹಲವು ಬಾರಿ ಸುತ್ತಿ ದೇಹವು ಸಂಪೂರ್ಣ ಮುಚ್ಚುವಂತೆ ಮಾಡುತ್ತಿದ್ದರು. ಗೋರಿಯನ್ನು ನಾಲ್ಕರಿಂದ ಐದು ಅಡಿ ಆಳ ಮತ್ತು ಎರಡು ಅಡಿ ವ್ಯಾಸದ ವೃತ್ತಾಕಾರದಲ್ಲಿ ತೋಡಿ ದೇಹ ನೇರವಾಗಿ ಕೂಡುವಂತೆ ಗೋರಿಯ ತಳದ ಮಧ್ಯದಲ್ಲಿ ಸ್ವಲ್ಪ ತಗ್ಗು ನಿರ್ಮಿಸುತ್ತಿದ್ದರು. ಆ ತಗ್ಗಿನಲ್ಲಿ ಶವವನ್ನು ತಲೆ ಮೇಲ್ಮುಖವಾಗಿರುವಂತೆ ಹೂಳುತ್ತಿದ್ದರು. ಮೃತನ ಜೊತೆ ಅವನು ಉಪಯೋಗಿಸುತ್ತಿದ್ದ ವಸ್ತುಗಳನ್ನು ಸಹ ಹೂಳುತ್ತಿದ್ದರು. ಕಯೋಟಿಗಳಿಂದ ರಕ್ಷಿಸಲು ಗೋರಿಯನ್ನು ಮರದ ಟೊಂಗೆಗಳಿಂದ ಮುಚ್ಚುತ್ತಿದ್ದರು.

ಶವಸಂಸ್ಕಾರವನ್ನು ಸಾಮಾನ್ಯವಾಗಿ ರಾತ್ರಿಯಲ್ಲಿ ಮಾಡುತ್ತಿದ್ದರು. ಆದರೂ ಮರಣದ ನಂತರ ಶವವನ್ನು ಬಹಳ ಸಮಯ ಇಟ್ಟುಕೊಳ್ಳುತ್ತಿರಲಿಲ್ಲ. ಶವಸಂಸ್ಕಾರದ ವೇಳೆ ಯಾರೂ ಬಹಿರಂಗವಾಗಿ ಶೋಕವನ್ನು ವ್ಯಕ್ತ ಮಾಡುತ್ತಿರಲಿಲ್ಲ. ವ್ಯಕ್ತಿಯು ಕೊನೆಯುಸಿರು ಎಳೆಯುತ್ತಿದ್ದಂತೆಯೇ ಗೋರಿಯನ್ನು ಸಿದ್ಧಪಡಿಸಿಡುತ್ತಿದ್ದರು. ಶೋಕಾಚರಣೆಯ ಸಂಕೇತವಾಗಿ ಗಂಡಸರು ತಮ್ಮ ಉದ್ದವಾದ ಕೂದಲನ್ನು ಆರು ಇಂಚುಗಳಷ್ಟು ಮತ್ತು ಹೆಂಗಸರು ತುಂಬಾ ಚಿಕ್ಕದಾಗಿ ಕತ್ತರಿಸಿಕೊಳ್ಳುತ್ತಿದ್ದರು. ಮೃತನ ಹತ್ತಿರದ ಸಂಬಂಧಿಕರು ತಮ್ಮ ದುಃಖದ ಸಂಕೇತವಾಗಿ ವಾರಗಟ್ಟಲೆ, ಕೆಲವೊಮ್ಮೆ ತಿಂಗಳುಗಟ್ಟಲೆ ತಮ್ಮ ಗ್ರಾಮದಲ್ಲಿಯೇ ಇರುತ್ತಿದ್ದರು. ಮೃತನ ವಿಧವೆಯು ತನ್ನ ಒಂದು ವರ್ಷದ ಶೋಕಾಚರಣೆ ಆಚರಿಸಿದ ನಂತರ ಪುನಃ ಮದುವೆಯಾಗಬಹುದಿತ್ತು.

ಉತ್ತರ ಮತ್ತು ದಕ್ಷಿಣ ಡಕೋಟಾ ಹಾಗೂ ನೆಬ್ರಾಸ್ಕಾ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಕೊಮಾಂಚೆ ಬಣದವರು ಮತ್ತು ಕ್ಯಾನ್ಸಾಸ್‌ನ ವಿಚಿಟಾ ಬಣದವರು ಕೂಡ ಅರಿಝೋನಾದ ಪೀಮಾ ಬಣದವರಂತೆ ಶವವನ್ನು ಚರ್ಮದ ಹೊದಿಕೆಯಿಂದ ಮುಚ್ಚಿ, ಹಗ್ಗ ಸುತ್ತಿ ಕುಳಿತ ಭಂಗಿಯಲ್ಲಿರುವಂತೆ ಹೂಳಲು ಸಿದ್ಧಪಡಿಸುತ್ತಿದ್ದರು. ದೇಹವನ್ನು ಬಾಗಿಸಲು ಅನುಕೂಲವಾಗುವಂತೆ, ಮರಣವಾದ ನಂತರ ಆದಷ್ಟು ಶೀಘ್ರ ಇದನ್ನು ಮಾಡುತ್ತಿದ್ದರು. ಈ ಬಣದವರು ಹೀಗೆ ತಯಾರಿಸಿದ ಹೆಣವನ್ನು ಒಂದು ಸಣ್ಣ ಕುದುರೆಯ ಮೇಲೆ ಕೂಡಿಸಿ ಸ್ಮಶಾನಕ್ಕೆ ಕರೆದೊಯ್ಯುತ್ತಿದ್ದರು. ಶವವು ಕೆಳಗೆ ಬೀಳದಂತೆ ಕುದುರೆಯ ಎರಡೂ ಪಕ್ಕಕ್ಕೆ ಮತ್ತು ಹಿಂಬದಿಗೆ ಮೂವರು ಹಿಡಿದುಕೊಳ್ಳುತ್ತಿದ್ದರು. ಗೋರಿಯು ಶವ ಹಿಡಿಯಲು ಸಾಕಾಗುವಷ್ಟು ಮಾತ್ರ ಚಿಕ್ಕದಾಗಿರುತ್ತಿತ್ತು. ಸಮಾಧಿಗಾಗಿ ಮನೆಯ ಪಶ್ಚಿಮ ದಿಕ್ಕಿನಲ್ಲಿರುವ ಸ್ಥಳವನ್ನು ಆರಿಸಿಕೊಳ್ಳುತ್ತಿದ್ದರು. ಅಂತ್ಯಕ್ರಿಯೆ ಆದ ನಂತರ ಮೃತನು ಉಪಯೋಗಿಸುತ್ತಿದ್ದ ಎಲ್ಲ ವಸ್ತು, ಆಭರಣಗಳನ್ನೆಲ್ಲ ಸುಟ್ಟುಬಿಡುತ್ತಿದ್ದರು. ಸತ್ತವನ ಬಳಿ ಇರುವ ಅತ್ಯುತ್ತಮ ಕುದುರೆಯನ್ನು ಸಹ ಸಮಾಧಿಗೆ ತಂದು ಕೊಲ್ಲಲಾಗುತ್ತಿತ್ತು. ಅಗಲಿದವನು ಪರಲೋಕದಲ್ಲಿ ತನ್ನ ಸಹಚರರೊಡನೆ ಈ ಕುದುರೆಯ ಮೇಲೆ ಸವಾರಿ ಮಾಡಿ ಸಂತೋಷಪಡುತ್ತಾನೆ ಎಂದು ನಂಬಿದ್ದರು.

ನೆಬ್ರಾಸ್ಕಾದ ಓಟೋ ಮತ್ತು ಮಿಸೌರಿ ಬಣದವರಲ್ಲಿ ವ್ಯಕ್ತಿಯೊಬ್ಬನ ಮರಣ ತೀರ ಹತ್ತಿರವಿದೆ ಎಂದು ಖಾತ್ರಿಯಾದೊಡನೆಯೇ ಆತನ ಸಮಾಧಿ, ಉಡುಪಿನ ತಯಾರಿಕೆಯನ್ನು ಪ್ರಾರಂಭಿಸಲಾಗುತ್ತಿತ್ತು. ಸಾಯುತ್ತಿರುವ ವ್ಯಕ್ತಿಯ ಹತ್ತಿರದ ಸಂಬಂಧಿಗಳು ಆತನ ಹಾಸಿಗೆಯ ಪಕ್ಕದಲ್ಲಿ ಕುಳಿತು ಜೋರಾದ ಅಳುವಿನಿಂದ ತಮ್ಮ ಶೋಕವನ್ನು ವ್ಯಕ್ತಪಡಿಸಹತ್ತುತ್ತಿದ್ದರು. ಮರಣದ ತಕ್ಷಣ ಬಣದ ಮಹಿಳೆಯರು ಮೃತನಿಗೆ ಅವರ ಬಳಿ ಇರುವ ಅತ್ಯಂತ ಉತ್ತಮ ನಿಲುವಂಗಿಯನ್ನು ತೊಡಿಸುತ್ತಿದ್ದರು. ಸಾಮಾನ್ಯವಾಗಿ ವ್ಯಕ್ತಿ ಜೀವಂತವಿರುವಾಗಲೇ ತಾನು ಸತ್ತ ಮೇಲೆ ತನಗೆ ಯಾವ ಉಡುಪು ತೊಡಿಸಬೇಕೆಂಬ ಅಭಿಲಾಷೆ ವ್ಯಕ್ತಪಡಿಸುತ್ತಿದ್ದನು. ಸಮಾಧಿ ತಯಾರಿಕೆಯು ತುಂಬ ಪವಿತ್ರ ಕೆಲಸವೆಂದು ನಂಬಿದ್ದ ಅವರು ಅತ್ಯಂತ ಕಾಳಜಿಯಿಂದ ಗೋರಿಯನ್ನು ತಯಾರಿಸುತ್ತಿದ್ದರು. ಶವವನ್ನು ಸುಂದರ ಆಭರಣಗಳಿಂದ

ಶೃಂಗರಿಸಿ ಮನೆಯ ಮುಖ್ಯ ಭಾಗದಲ್ಲಿ ಮಲಗಿಸಿದ ಮೇಲೆ ಆಹ್ವಾನಿತ ಜನರು ಸರತಿಯಂತೆ ಬಂದು ತಮ್ಮ ಗೌರವ ಸಲ್ಲಿಸುತ್ತಿದ್ದರು. ಇದಾದ ನಂತರ ಶವಸಂಸ್ಕಾರದ ವಿಧಿ ಪ್ರಾರಂಭವಾಗುತ್ತಿತ್ತು. ಬಣದ ಹಿರಿಯರು ಡ್ರಮ್ ಅಥವಾ ಅಡುಗೆ ಪಾತ್ರೆಯೊಂದನ್ನು ಬಾರಿಸುತ್ತ, ವಿಶಿಷ್ಟ ಹಾಡುಗಳನ್ನು ಹಾಡುತ್ತ ಮೃತ ದೇಹವನ್ನು ಸುತ್ತುತ್ತಿದ್ದರು. ಆಗಾಗ ಉಳಿದ ಸಂಬಂಧಿಕರು ಎದ್ದು ನೃತ್ಯ ಮಾಡುತ್ತಿದ್ದರು. ಬಳಿಕ ಎಲ್ಲರೂ ವೃತ್ತಾಕಾರದಲ್ಲಿ ಮತ್ತು ಮಧ್ಯದಲ್ಲಿ ಊರ ಹಿರಿಯರು ಕುಳಿತು ಭೋಜನ ಮಾಡುತ್ತಿದ್ದರು. ಶವಪೆಟ್ಟಿಗೆಯನ್ನು ಗಾಡಿಯ ಮೇಲೆ ಅಥವಾ ಕುದುರೆಯ ಮೇಲೆ ಸ್ಮಶಾನಕ್ಕೆ ಒಯ್ಯುತ್ತಿದ್ದರು. ಶವವನ್ನು ಗೋರಿಯಲ್ಲಿ ಇಳಿಸುವ ಮೊದಲು, ಗೋರಿಯ ತಳದಲ್ಲಿ ಮಹಿಳೆಯರು ಹೆಣೆದ ಹುಲ್ಲಿನ ಚಾಪೆ, ಪಕ್ಕದಲ್ಲಿ ಸುಂದರ ಶಾಲುಗಳನ್ನು ಇಳಿಬಿಟ್ಟು ಶೃಂಗರಿಸುತ್ತಿದ್ದರು. ಗೋರಿಯನ್ನು ಮುಚ್ಚುವ ಮೊದಲು ಕೆಲವು ಸಲ ಮೃತನ ಕುದುರೆಯನ್ನು ಕೊಲ್ಲುವ ರೂಢಿಯಿದ್ದಿತು. ಮಣ್ಣನ್ನು ನೇರವಾಗಿ ಶವದ ಮೇಲೆ ಎಸೆಯುತ್ತಿರಲಿಲ್ಲ. ಹೆಣದ ಸುತ್ತ ಮಣ್ಣು ಹಾಕುತ್ತ ಕ್ರಮೇಣ ಗೋರಿಯನ್ನು ಮುಚ್ಚುತ್ತಿದ್ದರು.

ಹಡ್ಸನ್ ನದಿಗುಂಟ ವಾಸಿಸುವ ಮೂಲನಿವಾಸಿಗಳು ಮೃತದೇಹಕ್ಕೆ ಅತ್ಯಂತ ಉತ್ತಮ ಬಟ್ಟೆ ತೊಡಿಸಿ, ಹೂಳುವ ಕುಂಡದ ಸುತ್ತ ಮರದ ಕೊಂಬುಗಳನ್ನಿಟ್ಟು ಹೂಳುತ್ತಿದ್ದರು. ಸಮಾಧಿಯನ್ನು ಏಳರಿಂದ ಎಂಟು ಅಡಿ ಎತ್ತರದವರೆಗೆ ಕಲ್ಲು-ಮಣ್ಣುಗಳಿಂದ ಮುಚ್ಚುತ್ತಿದ್ದರು. ಇವರು ಶವವನ್ನು ಮಲಗಿಸಿ ಹೂಳುತ್ತಿದ್ದರೋ ಅಥವಾ ಕೂಡಿಸಿ ಹೂಳುತ್ತಿದ್ದರೋ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಶವದ ಜೊತೆ ಪಾತ್ರೆ ಮತ್ತು ಇತರ ಊಟದ ಜಿನಸುಗಳನ್ನು ಹೂಳುತ್ತಿದ್ದರು.

ಕ್ಯಾಲಿಫೋರ್ನಿಯಾದ ಸಾಂಟಾ ಬರ್ಬರಾ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಚೂಮಾಶ್ ಬಣದವರು ವ್ಯಕ್ತಿಯೊಬ್ಬನ ಮರಣದ ನಂತರ ಆತನ ದೇಹವನ್ನು ಬಣದ ಆರಾಧನೆಯ ಸ್ಥಳಕ್ಕೆ ಅಥವಾ ಆರಾಧ್ಯದೇವತೆ ಇರುವ ಗ್ರಾಮದ ಸಮೀಪ ಕೊಂಡೊಯ್ಯುತ್ತಿದ್ದರು. ಕುಟುಂಬದ ಕೆಲವರು ಅಲ್ಲಿ ಬೆಂಕಿಯ ಮುಂದೆ ಕುಳಿತು ರಾತ್ರಿಯಿಡೀ ಶವವನ್ನು ಕಾಯುತ್ತಿದ್ದರು. ಮುಂಜಾನೆಯ ಹೊತ್ತಿಗೆ ಉಳಿದ ಬಂಧು-ಬಾಂಧವರು ಅವರನ್ನು ಕೂಡಿಕೊಂಡ ನಂತರ ಅಂತ್ಯಕ್ರಿಯೆ ವಿಧಿ ಪ್ರಾರಂಭವಾಗುತ್ತಿತ್ತು. ನಾಲ್ವರು ಸರತಿಯಂತೆ ದೊಡ್ಡ ಕಲ್ಲಿನ ಪೈಪಿನಲ್ಲಿ ತಂಬಾಕು ಹೊತ್ತಿಸಿ ಅದರ ಹೊಗೆಯನ್ನು ಮಲಗಿಸಿಟ್ಟ ಶವಕ್ಕೆ ಪ್ರದಕ್ಷಿಣೆ ಮಾಡಿಸುತ್ತಿದ್ದರು. ಹೊಗೆಯನ್ನು ಪಾದದ ಹತ್ತಿರ ತೋರಿಸುತ್ತಿರುವಾಗ ನಾಲ್ವರೂ ಕೂಡಿ ದೊಡ್ಡದಾಗಿ ಹಾಡುವ ಸಂಪ್ರದಾಯವಿತ್ತು. ಈ ವಿಧಿ ಮುಗಿದ ನಂತರ ಉಳಿದ ಜನರು ಈ ನಾಲ್ವರಿಗೆ ಮಣಿ ಸರಗಳನ್ನು ಕೊಟ್ಟು ಮೃತನಿಗೆ ತಮ್ಮ ಗೌರವ ಸಲ್ಲಿಸುತ್ತಿದ್ದರು. ಆ ಬಳಿಕ ನಾಲ್ಕು ಜನರು ಶವವನ್ನು ಎತ್ತಿಕೊಂಡು ಸ್ಮಶಾನಕ್ಕೆ ಒಯ್ದು ಅಲ್ಲಿ ಮೊದಲೇ ಸಿದ್ಧಮಾಡಿಟ್ಟ ಗೋರಿಯಲ್ಲಿ ಶವವನ್ನು ಮಲಗಿಸಿ, ಶವದ ಜೊತೆಗೆ ಮೃತನಿಗೆ ಇಷ್ಟವಾಗಿದ್ದ ಕೆಲವು ವಸ್ತುಗಳನ್ನು ದೇಹದ ಸುತ್ತ ಇಟ್ಟು ಹೂಳುತ್ತಿದ್ದರು. ಗೋರಿಯನ್ನು ಮುಚ್ಚುವ ಮೊದಲು ಒಂದು ಉದ್ದವಾದ ಕೋಲನ್ನು

ನೆಲದಿಂದ ಎತ್ತರವಾಗಿ ಬರುವಂತೆ ಹುಗಿದು, ಗೋರಿಯನ್ನು ಮುಚ್ಚಿದ ನಂತರ ಕೋಲಿನ ತುದಿಯಲ್ಲಿ ಮೃತನ ಕೆಲವು ಪವಿತ್ರ ಸ್ಮಾರಕ ವಸ್ತುಗಳನ್ನು ಕಟ್ಟುತ್ತಿದ್ದರು. ಮೃತವ್ಯಕ್ತಿ ಮಹಿಳೆಯಾಗಿದ್ದರೆ, ಕೋಲಿಗೆ ಕಟ್ಟಲು ಆ ಮಹಿಳೆ ಹೆಣೆಯುತ್ತಿದ್ದ ಬುಟ್ಟಿ ಮತ್ತು ಪೆಟ್ಟಿಗೆಗಳನ್ನು ಉಪಯೋಗಿಸುತ್ತಿದ್ದರು.

ಅಮೇರಿಕೆಯ ನೈಋತ್ಯ ಪ್ರದೇಶದಲ್ಲಿ ನೆಲೆಸಿರುವ ಹೋಪಿ ಬಣದಲ್ಲಿ ವಯಸ್ಕ ಹೋಪಿ ಸತ್ತಾಗ ಹತ್ತಿರದ ಸಂಬಂಧಿಗಳು ಮೃತನ ತಲೆ ತೊಳೆದು, ಗರಿಗಳನ್ನು ಹಣೆಯ ಮೇಲೆ ತೂಗಾಡುವಂತೆ ಕೂದಲಿಗೆ ಕಟ್ಟುತ್ತಿದ್ದರು. ನಂತರ ದೇಹಕ್ಕೆ ಉತ್ತಮ ನಿಲುವಂಗಿಯನ್ನು ತೊಡಿಸಿ ಹತ್ತಿರದ ಕಣಿವೆಯಲ್ಲಿರುವ ನಿರ್ಜನ ಪ್ರದೇಶದ ಸ್ಮಶಾನಕ್ಕೆ ಒಯ್ಯುತ್ತಿದ್ದರು. ದೇಹವನ್ನು ಪೂರ್ವಕ್ಕೆ ಮುಖಮಾಡುವಂತೆ ಕೂಡಿಸಿ ಅದೇ ಭಂಗಿಯಲ್ಲಿ ಹೂಳುತ್ತಿದ್ದರು. ಸಾವು ಸಂಭವಿಸಿದ ಕೆಲವೇ ಗಂಟೆಗಳಲ್ಲಿ ಇದನ್ನು ಮಾಡಲಾಗುತ್ತಿತ್ತು. ಮೂರನೇ ರಾತ್ರಿ, ಒಂದು ಚಿಕ್ಕ ಪಾತ್ರೆಯಲ್ಲಿ ಊಟ, ಪ್ರಾರ್ಥನೆ ಕೋಲು, ಗರಿ ಮತ್ತು ದಾರ ಇಷ್ಟನ್ನು ಸಮಾಧಿಗೆ ಕೊಂಡೊಯ್ದು, ದಾರವನ್ನು ಸಮಾಧಿಯ ಎದುರು ಪಶ್ಚಿಮ ಮುಖವಾಗಿ ಇರಿಸುತ್ತಿದ್ದರು. ಮರುದಿನ ಬೆಳಿಗ್ಗೆ ಆತ್ಮವು ಸಮಾಧಿಯಿಂದ ಎದ್ದು, ದಾರವು ಸೂಚಿಸಲಾದ ದಿಕ್ಕಿನಲ್ಲಿ ಸಾಗಿ ಪರಲೋಕವನ್ನು ಪ್ರವೇಶಿಸುತ್ತದೆ ಎಂಬುದು ಅವರ ನಂಬಿಗೆ. ಚಿಕ್ಕ ಮಕ್ಕಳ ದೇಹಗಳನ್ನು ನೆಲದಲ್ಲಿ ಹೂಳುತ್ತಿರಲಿಲ್ಲ. ಆದರೆ ತಾಯಿಯ ಮನೆಯ ಸಮೀಪ ಒಂದೆಡೆ ಬಂಡೆಯ ಬಿರುಕಿನಲ್ಲಿ ಇಟ್ಟು ಕಲ್ಲುಗಳಿಂದ ಮುಚ್ಚಲಾಗುತ್ತಿತ್ತು. ಕುಟುಂಬದ ಮನೆಗೆ ಮುಖವಾಗಿ ಒಂದು ದಾರವನ್ನು ಇಡುತ್ತಿದ್ದರು. ಮೃತ ಮಗುವಿನ ಆತ್ಮವು ದಾರದ ಮೂಲಕ ಮನೆಯನ್ನು ಹುಡುಕಿಕೊಂಡು ತಾಯಿಯ ಗರ್ಭದಲ್ಲಿ ಪುನಃ ಜನ್ಮ ತಾಳುತ್ತದೆ ಅಥವಾ ತಾಯಿ ಸಾಯುವವರೆಗೂ ಗೋರಿಯಲ್ಲಿಯೇ ಉಳಿದು, ನಂತರ ಅವಳೊಂದಿಗೆ ಪರಲೋಕಕ್ಕೆ ಹೋಗುತ್ತದೆ ಎಂದು ಈ ಜನಾಂಗದ ವಿಶ್ವಾಸವಾಗಿದ್ದಿತು.

ಒರೆಗಾನ್ ಮತ್ತು ವಾಶಿಂಗ್ಟನ್ ರಾಜ್ಯಗಳಲ್ಲಿರುವ ಮೂಲನಿವಾಸಿಗಳು ದೋಣಿಗಳಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ನೀರಿನಲ್ಲಿ ತೇಲಿಬಿಡುವ ಬದಲು ಶವ ತುಂಬಿದ ದೋಣಿಯನ್ನು ಮರದ ಮೇಲೆ ಅಥವಾ ನಾಲ್ಕು ಕಂಬಗಳ ಅಟ್ಟದ ಮೇಲೆ ಇಟ್ಟು ಬರುತ್ತಿದ್ದರು.

ದೋಣಿ ಶವಸಂಸ್ಕಾರದ ಇನ್ನೊಂದು ಸುಂದರ ಉದಾಹರಣೆ, ವಾಯವ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದ ಚಿನೂಕ್ ಬಣದ ಸಂಪ್ರದಾಯ. ಇವರು ಶವವನ್ನು ಮಲಗಿಸಲು ಸೀಡರ್ ಮರದ ಒಂದೇ ದೊಡ್ಡ ತುಣುಕಿನಿಂದ ಸುಂದರವಾದ ನಾವೆಯನ್ನು ಕೆತ್ತುತ್ತಿದ್ದರು. ಕೆಲವು ಅಂತ್ಯಕ್ರಿಯೆಯ ನಾವೆಗಳು ಸುಮಾರು 35 – 40 ಅಡಿ ಉದ್ದವಿರುತ್ತಿದ್ದವು. ನಾವೆಯನ್ನು ಚೆನ್ನಾಗಿ ತೊಳೆದು ತಳದಲ್ಲಿ ಅದನ್ನು ಪುನಃ ಉಪಯೋಗಿಸಲು ಬಾರದಂತೆ ಎರಡು ದೊಡ್ಡ ಚಚ್ಚೌಕಾಕಾರದ ತೂತುಗಳನ್ನು ಕೊರೆಯುತ್ತಿದ್ದರು. ನಂತರ ಶವವನ್ನು ಹೊಸ ಬಟ್ಟೆಯಲ್ಲಿ ಸುತ್ತಿ, ದಪ್ಪ ದುಪ್ಪಟಿಯ ಮೇಲೆ ಮಲಗಿಸಿ, ಶವದ ಜೊತೆಗೆ ಮೃತನ

ಪರಲೋಕದ ಉಪಯೋಗಕ್ಕೆಂದು ವ್ಯಕ್ತಿಯು ಜೀವಂತವಿದ್ದಾಗ ಉಪಯೋಗಿಸುತ್ತಿದ್ದ ಹಲವು ವಸ್ತುಗಳನ್ನು ಇಡುತ್ತಿದ್ದರು. ಕೆಲವು ವಸ್ತುಗಳನ್ನು ಉದ್ದೇಶಪೂರ್ವಕವಾಗಿ ಮುರಿದು ಹಾಕುತ್ತಿದ್ದರು. ಅವರ ನಂಬಿಕೆಯಂತೆ ಎಲ್ಲ ವಸ್ತುಗಳಲ್ಲಿಯೂ ಚೇತನವಿರುತ್ತದೆ. ಮುರಿಯುವುದರಿಂದ ಚೇತನವನ್ನು ಬಿಡುಗಡೆ ಮಾಡಿದಂತಾಗುತ್ತದೆ. ನೆಲದಿಂದ ಮೇಲಿರುವಂತೆ ನಾವೆಗೆ ನಾಲ್ಕು ಎತ್ತರದ ಕಂಬದ ಕಾಲುಗಳನ್ನು ಜೋಡಿಸಿ ಸ್ಮಶಾನದಲ್ಲಿ ಇಡುತ್ತಿದ್ದರು. ಮಾರನೆಯ ವರ್ಷ, ಮೃತನ ಅಸ್ಥಿಗಳನ್ನು ಸಂಗ್ರಹಿಸಿ ತಂದು, ಅವುಗಳನ್ನು ಹೊಸ ಬಿಳಿಯ ಬಣ್ಣದ ಬಟ್ಟೆಯಲ್ಲಿ ಸುತ್ತಿ ನಾವೆಯ ಕೆಳಗೆ ಹೂಳುತ್ತಿದ್ದರು. ಅಸ್ಥಿಗಳನ್ನು ಸಂಗ್ರಹಿಸುವ ಸಮಯದಲ್ಲಿ ಸಾರ್ವಜನಿಕರಿಗೆ ಪ್ರವೇಶಿಸಲು ಬಿಡುತ್ತಿರಲಿಲ್ಲ.

ಡಕೋಟಾ ಬಣದವರಲ್ಲಿ ಮೃತದೇಹವನ್ನು ಮಲಗಿಸಿದ ಭಂಗಿಯಲ್ಲಿ ಮರದ ಮೇಲೆ ಇಟ್ಟು ಸಂಸ್ಕಾರ ಮಾಡುವ ಪದ್ಧತಿಯಿತ್ತು. ಆದರೆ ಅವರು ವಾಸಿಸುವ ಪ್ರದೇಶಗಳಲ್ಲಿ ದೊಡ್ಡ ಮರಗಳು ವಿರಳ. ಹಾಗಾಗಿ ಸುಮಾರು ಹತ್ತು ಅಡಿ ಎತ್ತರದ ಎರಡು ಕಂಬಗಳನ್ನು ಕತ್ತರಿ ಆಕಾರದಲ್ಲಿ ಜೋಡಿಸಿದ ಎರಡು ಕಾಲುಗಳ ಆಧಾರದಿಂದ ನಿಲ್ಲಿಸಿದ ಅಟ್ಟಣಿಗೆಯ (ಸ್ಕ್ಯಾಫೋಲ್ಡ್) ಮೇಲೆ ಶವವನ್ನು ಮಲಗಿಸಿ ಅಂತ್ಯಕ್ರಿಯೆ ಮಾಡುತ್ತಿದ್ದರು. ಶವಸಂಸ್ಕಾರಕ್ಕೆ ಶವವನ್ನು ಸಿದ್ಧಗೊಳಿಸುವುದು ಸಾಮಾನ್ಯವಾಗಿ ಬಣದ ಹಿರಿಯ ಮಹಿಳೆಯರ ಕರ್ತವ್ಯ. ಶವವನ್ನು ಸ್ವಚ್ಛ ಮಾಡಿದ ನಂತರ ಮೃತನ ಕುತ್ತಿಗೆ ಮತ್ತು ಕೈಗಳಿಗೆ ಕುಂಕುಮದಂತಹ ಕೆಂಪು ಮಣ್ಣಿನ ಪುಡಿಯನ್ನು ಲೇಪಿಸಲಾಗುತ್ತಿತ್ತು. ದೇಹವನ್ನು ಮೊದಲು ಒಂದು ರಗ್ಗು, ಅದರ ಮೇಲೆ ಎಮ್ಮೆಯ ಚರ್ಮದ ಹೊದಿಕೆ, ಕೊನೆಯದಾಗಿ ಸುಂದರವಾದ ಕೆಂಪು ವಸ್ತ್ರದಿಂದ ಸುತ್ತುತ್ತಿದ್ದರು. ಸ್ಕ್ಯಾಫೋಲ್ಡ್ ತಯಾರಾದ ತಕ್ಷಣ ಶವವನ್ನು ಮಹಿಳೆಯರೇ ಸ್ಮಶಾನಕ್ಕೆ ಹೊತ್ತೊಯ್ಯುತ್ತಿದ್ದರು. ಇದು ಭಾರತೀಯ ಮತ್ತು ಹಲವು ಇತರ ಬಣಗಳ ಪದ್ಧತಿಗೆ ವಿರುದ್ಧವಾದ ಸಂಪ್ರದಾಯವೆಂದೆನಿಸುತ್ತದೆ. ಸ್ಕ್ಯಾಫೋಲ್ಡ್‌ನ ಕೆಳಗೆ ಆತನಿಗೆ ಪ್ರಿಯವಾದ ಕೆಲವು ವಸ್ತುಗಳನ್ನು ಇಡುತ್ತಿದ್ದರು. ಕೆಲವೊಮ್ಮೆ ಆತ ಬೇಟೆಯಾಡಿ ಕೊಂದ ಎಮ್ಮೆಗಳ ತಲೆ, ಆತನ ಕುದುರೆಯ ಶವಗಳನ್ನು ಕೂಡ ಶೇಖರಿಸಿಡುತ್ತಿದ್ದರು.

ಹಿಮಾಚ್ಛಾದಿತವಾಗಿರುವ ಆರ್ಕಟಿಕ್ ಪ್ರದೇಶಗಳಲ್ಲಿ ಪೆಟ್ಟಿಗೆಯಲ್ಲಿ ಶವವನ್ನು ಮಲಗಿಸಿ ಭೂಮಿಯ ಮೇಲ್ಮೈಯಲ್ಲಿ ಇಡುವ ಪದ್ಧತಿ ಇತ್ತು. ಈ ಪದ್ಧತಿ ಇನ್ನೂ ಜೀವಂತವಾಗಿದೆ. ಉದಾಹರಣೆಗೆ ಎಸ್ಕಿಮೋಗಳು ದೇಹವನ್ನು ಅರ್ಧದಲ್ಲಿ ಮಡಿಚಿ ಹಲಗೆಯ ಪೆಟ್ಟಿಗೆಯಲ್ಲಿ ಅಡ್ಡವಾಗಿ ಮಲಗಿಸಿ ನೆಲದಿಂದ ಮೂರು ಅಥವಾ ನಾಲ್ಕು ಅಡಿ ಎತ್ತರಕ್ಕೆ ಮತ್ತು ನಾಲ್ಕು ಕಂಬಗಳ ಆಧಾರದಿಂದ ಎತ್ತರದಲ್ಲಿ ಇಟ್ಟು ಸಂಸ್ಕಾರ ಮಾಡುತ್ತಿದ್ದರು. ಸಮಾಧಿ ಪೆಟ್ಟಿಗೆಯನ್ನು ಸಾಮಾನ್ಯವಾಗಿ ಪಕ್ಷಿಗಳು, ಮೀನುಗಳು ಮತ್ತು ಪ್ರಾಣಿಗಳ ಚಿತ್ರಗಳಿಂದ ಅಲಂಕರಿಸುತ್ತಿದ್ದರು. ಕೆಲವೊಮ್ಮೆ ಪೆಟ್ಟಿಗೆಯ ಬದಲು ಶವವನ್ನು ಚರ್ಮದಲ್ಲಿ ಸುತ್ತಿ ಕಾಡುಮೃಗಗಳಿಂದ ರಕ್ಷಿಸುವ ಸಲುವಾಗಿ ಹಲಗೆ ಅಥವಾ ಮರದ ಕಾಂಡಗಳಿಂದ ಮುಚ್ಚುವ ಪದ್ಧತಿಯೂ ಇತ್ತು.

ವಿಶಾಲ ಸಾಲ್ಟ್ ಲೇಕ್ ಮರುಭೂಮಿಯ ಒಂದು ಕಣಿವೆಯಲ್ಲಿ ವಾಸಿಸುತ್ತಿದ್ದ ಬಣದವರು ನೀರಿನ ಬುಗ್ಗೆಗಳಿರುವ ಸ್ಥಳದಲ್ಲಿ ಶವವನ್ನಿಟ್ಟು ಅದು ನೀರಿನಿಂದ ಮೇಲೆ

ತೇಲಿ ಬಾರದಂತೆ ಕಲ್ಲು ಮತ್ತು ಒಣ ಕಡ್ಡಿಗಳಿಂದ ಹೆಣವನ್ನು ಮುಚ್ಚುತ್ತಿದ್ದರು. ಈ ತರದ ಜಲ ಆಧಾರಿತ ಸಮಾಧಿ ತೀರ ವಿರಳ.

ಮೇಲಿನ ಉದಾಹರಣೆಗಳಲ್ಲಿ ಕೆಲವು ಸಾಮಾನ್ಯ ಅಂಶಗಳನ್ನು ಗಮನಿಸಬಹುದು. ಮೊದಲನೆಯದಾಗಿ ಮೂಲನಿವಾಸಿಗಳು ಮರಣದ ನಂತರ ಆದಷ್ಟು ಬೇಗ ಶವಸಂಸ್ಕಾರ ಮಾಡುತ್ತಿದ್ದರು. ಹಲವು ಬಣದವರು ವ್ಯಕ್ತಿಯ ಮರಣ ನಿಶ್ಚಿತ ಎಂದ ತಕ್ಷಣವೇ ಅಂತ್ಯಕ್ರಿಯೆಯ ಸಿದ್ಧತೆ ನಡೆಸಲು ಪ್ರಾರಂಭಿಸುತ್ತಿದ್ದರು. ಕೆಲವೊಮ್ಮೆ ವ್ಯಕ್ತಿ ತೀವ್ರ ಕಾಯಿಲೆಯಿಂದ ಬಳಲುತ್ತಿದ್ದಾಗ ಆತನ ಮರಣವನ್ನು ನಿರೀಕ್ಷಿಸಿ ಗೋರಿ ಅಗೆದಾದ ಮೇಲೆ ಆತ ಗುಣ ಹೊಂದಿ ಉಪಯೋಗಿಸದ ಖಾಲಿ ಗೋರಿಗಳ ಉದಾಹರಣೆಗಳಿವೆಯಂತೆ. ಇನ್ನೊಂದು ಸಾಮಾನ್ಯ ಅಂಶವೆಂದರೆ ಶವಸಂಸ್ಕಾರದ ಅಂಗವಾಗಿ ವ್ಯಕ್ತಿ ಜೀವಂತವಿದ್ದಾಗ ಅವನಿಗೆ ಪ್ರಿಯವಾದ ಮತ್ತು ಅವನು ಉಪಯೋಗಿಸುತ್ತಿದ್ದ ವಸ್ತುಗಳನ್ನೆಲ್ಲ ಸುಟ್ಟುಬಿಡುತ್ತಿದ್ದರು. ಕೆಲವೊಮ್ಮೆ ಶವದ ಜೊತೆಯೇ ಹೂಳುತ್ತಿದ್ದರು. ಒಂದು ಅತಿರೇಕದ ಉದಾಹಣೆ ಹೀಗಿದೆ: ಒಬ್ಬ ವ್ಯಕ್ತಿ ಕಾಯಿಲೆಯಿಂದ ಬಳಲುತ್ತಿದ್ದಾಗ ಆತನ ಉಪಯೋಗಕ್ಕೆಂದು ಸಂಬಂಧಿಕರೊಬ್ಬರು ಮೂತ್ರಪಾತ್ರೆಯನ್ನು ಎರವಲು ಕೊಟ್ಟಿದ್ದರಂತೆ. ಅದನ್ನೂ ಸಹ ವಾಪಸ್ಸು ಕೊಡುವ ಬದಲಿಗೆ ಶವಸಂಸ್ಕಾರದಲ್ಲಿ ಸುಟ್ಟಿದ್ದರಂತೆ. ಹಲವು ಬಣದವರು ಮೃತನ ಕುದುರೆ, ಕೆಲವೊಮ್ಮೆ ನಾಯಿಗಳನ್ನು ಕೂಡ ಕೊಲ್ಲುತ್ತಿದ್ದರು.

ಭಾರತೀಯರಂತೆ ಮೂಲನಿವಾಸಿಗಳೂ ಕೂಡ ಮಕ್ಕಳನ್ನು ಸತ್ತವರ ಹತ್ತಿರ ಇರಲಿಕ್ಕೆ ಮತ್ತು ಅಂತ್ಯಕ್ರಿಯೆ ಹಾಗೂ ಶೋಕಾಚರಣೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಕ್ಕೆ ಬಿಡುತ್ತಿರಲಿಲ್ಲ. ಭಾರತದಲ್ಲಿ ಸಾಮಾನ್ಯವಾಗಿ ಹಲವು ವರ್ಗಗಳ ಮಹಿಳೆಯರು ಸ್ಮಶಾನಕ್ಕೆ ಹೋಗುವುದಿಲ್ಲ. ಮೂಲನಿವಾಸಿಗಳಲ್ಲಿ ಈ ಕಟ್ಟಳೆ ಇರಲಿಲ್ಲವೆಂದು ಕಾಣುತ್ತದೆ.

ಮೂಲನಿವಾಸಿಗಳಿಗೆ ಅವರದೇ ಪ್ರತ್ಯೇಕ ಧರ್ಮ ಮತ್ತು ಧರ್ಮಗ್ರಂಥ ಇಲ್ಲ. ತಲೆ-ತಲಾಂತರದಿಂದ ಬಂದ ಸಂಪ್ರದಾಯಗಳೇ ಅವರ ಧರ್ಮ. ದೇವರಲ್ಲಿ ನಂಬಿಕೆ ಮತ್ತು ಅವರದೇ ಆದ ಆರಾಧ್ಯ ದೇವತೆಗಳಿವೆಯೆಂದು ತೋರುತ್ತದೆ. ಸಂಪ್ರದಾಯಸ್ಥ ಹಿಂದುಗಳಂತೆ ಅಮೇರಿಕೆಯ ಮೂಲನಿವಾಸಿಗಳಿಗೆ ಧಾರ್ಮಿಕ ಆಚರಣೆ ಮತ್ತು ಕರ್ಮ ಕ್ರಿಯೆಗಳು ಅತ್ಯಂತ ಮಹತ್ವವಾಗಿದ್ದಿತು. ಹಾನಿಕಾರಕ ಹವಾಮಾನದಿಂದ ರಕ್ಷಣೆ ಪಡೆಯಲು, ಹೆರಿಗೆಯ ಸುರಕ್ಷತೆಗಾಗಿ, ಶುಭಕಾರ್ಯಗಳ ಆಚರಣೆ ಹೀಗೆ ವಿವಿಧ ಧಾರ್ಮಿಕ ಆಚರಣೆಗಳ ವಿಧಿಗಳು ರೂಢಿಯಲ್ಲಿದ್ದವು. ಮೃತರ ಆತ್ಮಶಾಂತಿಗಾಗಿ ಆಚರಿಸುವ ಕ್ರಿಯೆ ಮಹತ್ವದ ಆಚರಣೆಗಳಲ್ಲೊಂದು. ಹಿಂದು ಅಥವಾ ಕ್ರಿಶ್ಚಿಯನ್ ಧರ್ಮಗಳಲ್ಲಿರುವಂತೆ ಪುರೋಹಿತರು ಅಥವಾ ಪಾದ್ರಿಗಳಿಗೆ ಸಮಾನವಾದ ಸ್ಥಾನಗಳು ಇವರಲ್ಲಿ ಇದ್ದಂತಿಲ್ಲ. ಮೂಲನಿವಾಸಿಗಳಲ್ಲಿ ಬಣದ ಮುಖ್ಯಸ್ಥ ಮತ್ತು ವೈದ್ಯ (Medicine Man) ಅವರಿಗೆ ವಿಶೇಷ ಸ್ಥಾನವಿದ್ದು, ಅವರು ಬಣದ ಆಧ್ಯಾತ್ಮಿಕ ಸಲಹೆಗಾರರೂ ಆಗಿರುತ್ತಿದ್ದರು. ಅಂತ್ಯಕ್ರಿಯೆಗಳಲ್ಲಿ ಬಣದ ಹಿರಿಯರಿಂದ ಪ್ರಾರ್ಥನೆಯ ಹಾಡುಗಳು, ಡ್ರಮ್ ಬಡಿತ, ಕೆಲವೊಮ್ಮೆ ನೃತ್ಯಗಳು ಇರುತ್ತಿದ್ದವು.

ಹಲವು ಬಣಗಳಲ್ಲಿ ಮೃತನ ನಿಕಟ ಸಂಬಂಧಿಗಳು ತಮ್ಮ ಕೂದಲನ್ನು ಚಿಕ್ಕದಾಗಿ ಕತ್ತರಿಸಿಕೊಳ್ಳುತ್ತಿದ್ದರು. ಮಹಿಳೆಯ ಪತಿ ಸತ್ತಾಗ, ಅವಳು ಮೊದಲು ತನ್ನ ಕೂದಲನ್ನು ಕತ್ತರಿಸಿಕೊಂಡು ಅದನ್ನು ಜಡೆಯಾಗಿ ಹೆಣೆದು ತನ್ನ ಮೃತ ಪತಿಯ ಎದೆಯ ಮೇಲೆ ಅಡ್ಡಲಾಗಿ ಇಡುತ್ತಿದ್ದಳು. ನಂತರ ಮೃತನ ತಾಯಿ ಮತ್ತು ಸಹೋದರಿಯರು, ಅವನ ತಂದೆ ಮತ್ತು ಸಹೋದರರು ಮತ್ತು ಅವನ ಎಲ್ಲಾ ರಕ್ತಸಂಬಂಧಿಗಳು ತಮ್ಮ ತಮ್ಮ ಕೂದಲನ್ನು ಕತ್ತರಿಸಿಕೊಳ್ಳುತ್ತಿದ್ದರು. ಮೃತನ ವಿಧವೆ ಅವಳ ಕೂದಲು ಮೊದಲಿನ ಉದ್ದಕ್ಕೆ ಬೆಳೆಯುವತನಕವೂ ಅವಿವಾಹಿತಳಾಗಿ ಉಳಿಯಬೇಕೆಂಬ ಕಟ್ಟಳೆಯಿದ್ದಿತು.

ಇನ್ನೊಂದು ಸ್ವಲ್ಪ ಕ್ರೂರ ಎನ್ನಬಹುದಾದ ಸಂಪ್ರದಾಯವೆಂದರೆ ಮಹಿಳೆಯರು ತಮ್ಮ ಕೈ ಮತ್ತು ಕಾಲುಗಳನ್ನು ಚಾಕುವಿನಿಂದ ಕತ್ತರಿಸಿ ದುಃಖದ ಸಂಕೇತವಾಗಿ ತಮ್ಮ ತಲೆಯ ಮೇಲೆ ಅದರ ಕೆಂಪು ಬಣ್ಣವನ್ನು ಬಳಿದುಕೊಳ್ಳುತ್ತಿದ್ದರು. ಕೆಲವು ವರದಿಗಳ ಪ್ರಕಾರ ಬಹಳಷ್ಟು ಮಂದಿ ರಕ್ತದ ನಷ್ಟದಿಂದ ಮರಣವನ್ನಪ್ಪಿದ ಉದಾಹರಣೆಗಳೂ ಇವೆ.

ಹಲವು ಮೂಲನಿವಾಸಿಗಳ ಬಣಗಳು ಹಿಂದಿನ ವರ್ಷದಲ್ಲಿ ಮರಣಹೊಂದಿದ ತಮ್ಮ ಸಂಬಂಧಿಗಳ ನೆನಪಿಗಾಗಿ ವಾರ್ಷಿಕ ಶೋಕಾಚರಣೆಯನ್ನು ಆಚರಿಸುತ್ತಿದ್ದರು. ಶೋಕಾಚರಣೆಯ ಕಾರ್ಯಕ್ರಮ ವರ್ಷಕ್ಕೊಮ್ಮೆ ಸಾಮಾನ್ಯವಾಗಿ ಶರತ್ಕಾಲದಲ್ಲಿ ನಡೆಯುತ್ತಿತ್ತು. ಈ ಶೋಕಾಚರಣೆಯ ಕಾರ್ಯಕ್ರಮಕ್ಕೆ ಸಾಕಷ್ಟು ವೆಚ್ಚವಾಗುವುದರಿಂದ ಕೆಲವೊಮ್ಮೆ ತಮಗೆ ಅನುಕೂಲವಾದಾಗ ಮಾಡುತ್ತಿದ್ದುದುಂಟು. ಆ ಸಮಯದಲ್ಲಿ ಸತ್ತವರ ಸಂಬಂಧಿಕರು ಮಾಂಸ ಮತ್ತು ಕರಿದ ಪದಾರ್ಥಗಳನ್ನು ತ್ಯಜಿಸಬೇಕಾಗಿತ್ತು. ಶೋಕಾಚರಣೆಯ ಸಮಾರಂಭವು ಸಂಬಂಧಿಕರ ದುಃಖವನ್ನು ಸಾಂಕೇತಿಕವಾಗಿ ಪರಿಹರಿಸಲು ಮತ್ತು ಮುಖ್ಯವಾಗಿ, ಗುಂಪಿನ ಪರಸ್ಪರ ಸಂಬಂಧವನ್ನು ದೃಢಪಡಿಸುವ ಒಂದು ಸಾಧನವೆಂದು ನಂಬಿದ್ದರು. ಈ ಸಮಾರಂಭವನ್ನು ಕೆಲವರು ತುಂಬ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಹಣ ಕೊಟ್ಟು ವೃತ್ತಿಗಾಗಿ ಅಳುವವರನ್ನು, ನೃತ್ಯ, ಸಂಗೀತಗಾರರನ್ನು ಕರೆಯಿಸಿ ಕಾರ್ಯಕ್ರಮ ಏರ್ಪಡಿಸುತ್ತಿದ್ದರೆಂದು ಕೆಲವು ವರದಿಗಳು ಹೇಳುತ್ತವೆ.

ಈ ಪದ್ಧತಿಯನ್ನು ಹಿಂದೂಗಳ ಪಿತೃಪಕ್ಷ ಅಮಾವಾಸ್ಯೆಗೆ ಹೋಲಿಸಬಹುದು. ಹಿಂದುಗಳು ಭಾದ್ರಪದ ಅಮಾವಾಸ್ಯೆಯನ್ನು ಪಿತೃಪಕ್ಷ ಅಮಾವಾಸ್ಯೆ ಎಂದು ಕರೆಯುತ್ತಾರೆ. ಆ ದಿನ ಹಲವು ತಲೆಮಾರುಗಳ ಪಿತೃಗಳ ಹೆಸರಿನಲ್ಲಿ ತರ್ಪಣ ಕೊಡುತ್ತಾರೆ. ಕೆಲವರು ಸಂಪೂರ್ಣ ಶ್ರಾದ್ಧವಾಗಿ ಕೂಡ ಆಚರಿಸುವುದುಂಟು.

ಸಾಮಾನ್ಯವಾಗಿ ವಾರ್ಷಿಕ ಶೋಕಾಚರಣೆಯನ್ನು ಮುಖ್ಯಸ್ಥರ ನೇತೃತ್ವದಲ್ಲಿ ನಡೆಸಲಾಗುತ್ತಿತ್ತು. ಕಾರ್ಯಕ್ರಮದ ಕೆಲವು ದಿನಗಳ ಮುಂಚಿತವಾಗಿ ಸುತ್ತಮುತ್ತಲಿನ ಇತರ ಬುಡಕಟ್ಟು ಜನಾಂಗದವರನ್ನು ಆಹ್ವಾನಿಸಲಾಗುತ್ತಿತ್ತು. ಶೋಕಾಚರಣೆಯ ಸಮಾರಂಭಗಳನ್ನು ಪ್ರತಿ ವರ್ಷ ಅಲ್ಲದಿದ್ದರೂ ಪ್ರತಿ ಎರಡು ವರ್ಷಕ್ಕೊಮ್ಮೆ ಆಚರಿಸುವ ರೂಢಿ ಹಲವು ಬಣಗಳಲ್ಲಿ ಇದ್ದಿತು. ಕೆಲವು ಬಣದವರು 10–12 ವರ್ಷಕ್ಕೊಮ್ಮೆ ಆಚರಿಸುವ ಪದ್ಧತಿಯೂ ಪ್ರಚಲಿತವಿತ್ತು.

ಪರಲೋಕದ ನಂಬಿಕೆಗಳು

ಹಲವು ಜನಾಂಗಗಳಂತೆ ಅಮೇರಿಕೆಯ ಮೂಲನಿವಾಸಿಗಳು ಕೂಡ ಪರಲೋಕದ ಅಸ್ತಿತ್ವವನ್ನು ನಂಬುತ್ತಾರೆ. ಮನುಷ್ಯನ ಮರಣವಾದಾಗ ಆತನ ಆತ್ಮ ದೇಹದಿಂದ ಬೇರ್ಪಟ್ಟು ಪರಲೋಕ ಜೀವನಕ್ಕೆ ಪ್ರಯಾಣ ಮಾಡುತ್ತದೆ. ಭಾರತೀಯರ ಸ್ವರ್ಗ, ನರಕಗಳ ಕಲ್ಪನೆಯಂತೆ ಮೂಲನಿವಾಸಿಗಳಲ್ಲಿಯೂ ವಿಭಿನ್ನ ತರದ ಪರಲೋಕಗಳ ಕಲ್ಪನೆಗಳಿವೆ. ಜೀವನದಲ್ಲಿ ಒಳ್ಳೆಯ ಕೆಲಸ ಮಾಡಿದ ಪುಣ್ಯವಂತರು ಸ್ವರ್ಗಕ್ಕೂ, ಪಾಪಿಗಳು ನರಕಕ್ಕೂ ಹೋಗುತ್ತಾರೆಂಬ ಭಾರತೀಯರ ನಂಬಿಕೆಗಳನ್ನು ಹೋಲುವ ನಂಬಿಕೆಗಳು ಮೂಲನಿವಾಸಿಗಳಲ್ಲಿಯೂ ಇವೆ. ಮುಖ್ಯ ಅಂತರವಿರುವುದು ಈ ವಿಭಿನ್ನ ಪರಲೋಕಗಳ ವರ್ಣನೆಗಳಲ್ಲಿ. ಭಿನ್ನ-ಭಿನ್ನ ಬಣಗಳ ಮಧ್ಯೆ ಮರಣಕ್ರಿಯೆಗಳಲ್ಲಿ ಹೇಗೆ ವ್ಯತ್ಯಾಸಗಳಿವೆಯೋ ಹಾಗೆಯೇ ಪರಲೋಕಕ್ಕೆ ಕರೆದೊಯ್ಯುವ ಮಾರ್ಗ ಮತ್ತು ಪರಲೋಕಗಳ ವರ್ಣನೆಗಳಲ್ಲಿ ವ್ಯತ್ಯಾಸವನ್ನು ಕಾಣಬಹುದು. ಮುಂದಿನ ಪರಿಚ್ಛೇದಗಳು ಕೆಲವು ಬಣಗಳ ಉದಾಹರಣೆಗಳನ್ನು ಒಳಗೊಂಡಿವೆ.

ಕ್ಯಾಲಿಫೋರ್ನಿಯಾದ ಚೂಮಾಶ್ ಇಂಡಿಯನ್ ಜನರಿಗೆ ಆತ್ಮವೆನ್ನುವುದು ಶಾಶ್ವತ; ಜೀವನ, ಮರಣ, ಮತ್ತು ಪುನರ್ಜನ್ಮಗಳು ಒಂದು ಚಕ್ರದಂತೆ ಪುನರಾವರ್ತಿಯಾಗುತ್ತಿರುತ್ತದೆ. ಮರಣವಾದ ತಕ್ಷಣ ದಹನ ಮಾಡದಿದ್ದರೆ ಐದು ದಿನಗಳವರೆಗೆ ಆತನ ಆತ್ಮ ಮರಣ ಹೊಂದಿದ ಸ್ಥಳದಲ್ಲಿಯೇ ಇರುತ್ತದೆ. ತಕ್ಷಣ ದಹನ ಮಾಡಿದರೆ ಆತ್ಮ ಅಲ್ಲಿ ಉಳಿಯುವುದಿಲ್ಲ. ನೀರಿನಲ್ಲಿ ಮುಳುಗಿ ಸತ್ತವರ ಆತ್ಮ ನೀರಿನಲ್ಲಿಯೇ ಸದಾ ಉಳಿದುಬಿಡುತ್ತದೆ. ಅವರಿಗೆ ಪರಲೋಕವಾಗಲಿ, ಪುನರ್ಜನ್ಮವಾಗಲಿ ಇಲ್ಲ. ಅದರಂತೆ ಚಿಕ್ಕ ಮಗು ಸತ್ತರೆ ಅದು ಹಿರಿಯರು ಹೋಗುವಂತೆ ಪರಲೋಕಕ್ಕೆ ಹೋಗದೆ ಮತ್ತೆ ಹುಟ್ಟಿ ಬರುತ್ತದೆ. ಉಳಿದವರು ಮರಣದ ನಂತರ ಮೊದಲು ಪಶ್ಚಿಮದಲ್ಲಿರುವ ಪರಲೋಕಕ್ಕೆ ಹೋಗುತ್ತಾರೆ. ಅಲ್ಲಿ ಹನ್ನೆರಡು ವರ್ಷಗಳ ತನಕ ಉಳಿದು ನಂತರ ಪುನರ್ಜನ್ಮ ಪಡೆಯುತ್ತಾರೆ. ಈ ಹನ್ನೆರಡು ವರ್ಷಗಳಲ್ಲಿ ಆತ್ಮ ಭೂಮಿಗೆ ಅದೃಶ್ಯ ರೂಪದಲ್ಲಿ ಬಂದು ಹೋಗಬಹುದು. ಚೂಮಾಶ್ ಜನರಲ್ಲಿ ಒಂದು ದಂತಕತೆ ಪ್ರಚಲಿತವಿದೆ. ಅದರ ಪ್ರಕಾರ ಆತ್ಮವು ಸ್ಮಶಾನದಿಂದ ಮೊದಲು ಆ ಜನಾಂಗದ ಪವಿತ್ರ ಸರೋವರಕ್ಕೆ ಹೋಗುತ್ತದೆ. ಅಲ್ಲಿಯ ಕಲ್ಲೊಂದರ ಮೇಲೆ ಹೆಂಗಸರು ಮತ್ತು ಮಕ್ಕಳ ಹೆಜ್ಜೆಗಳು ಕಾಣಸಿಗುತ್ತವೆ. ಅದನ್ನು ಕಂಡ ಮೇಲೆ ಮೃತನ ಆತ್ಮ ಆ ಸರೋವರದಲ್ಲಿ ಸ್ನಾನ ಮಾಡಿ, ಮೈಗೆ ಬಣ್ಣದಿಂದ ಅಲಂಕರಿಸಿಕೊಳ್ಳುತ್ತದೆ. ಆಗ ಆತ್ಮಕ್ಕೆ ಪಶ್ಚಿಮ ದಿಕ್ಕಿನಲ್ಲಿ ಪ್ರಕಾಶಮಾನವಾದ ಮಾರ್ಗ ಕಾಣುತ್ತದೆ. ಆ ಮಾರ್ಗವಾಗಿ ಆತ್ಮವು ಗಾಳಿಯಲ್ಲಿ ಪ್ರಯಾಣಿಸುತ್ತ ಪರಲೋಕವನ್ನು ತಲುಪುತ್ತದೆ.

ಚೂಮಾಶ್ ಬಣದವರಲ್ಲಿ ಇನ್ನೊಂದು ನಂಬಿಗೆಯಿದೆ. ಮರಣಹೊಂದಿದವನು ಪರಲೋಕ ತಲುಪಲು ಭೂಲೋಕ ಮತ್ತು ಪರಲೋಕದ ಮಧ್ಯ ಇರುವ ನದಿಯೊಂದನ್ನು ದಾಟಬೇಕಾಗುತ್ತದೆ. ಈ ನದಿಗೆ ಸೇತುವೆಯ ಬದಲು ಒಂದು ಬಾರೀಕಾದ (ತೆಳುವಾದ) ಕೋಲನ್ನು ಚಾಚಿರುತ್ತಾರೆ. ಅದರ ಮೇಲೆ ನಡೆದುಕೊಂಡು ಹೋಗಬೇಕು. ಆತ್ಮ ದಾಟಿ

ಹೋಗದಂತೆ ತಡೆಗಟ್ಟಲು ನೀರಲ್ಲಿರುವ ರಾಕ್ಷಸರು ಕೋಲನ್ನು ಅಲುಗಾಡಿಸುತ್ತಿರುತ್ತಾರೆ. ದಾಟುತ್ತಿರುವ ಆತ್ಮ ನೀರಿನಲ್ಲಿ ಕೆಳಗೆ ಬಿದ್ದರೆ ಅದು ಅರ್ಧ ಮನುಷ್ಯ, ಅರ್ಧ ಕಪ್ಪೆಯಾಗಿ ಜೀವಿಸಬೇಕಾಗುತ್ತದೆ. ಕೊಲೆಗಾರರು ಮುಂತಾದ ದುಷ್ಟರು ಕೋಲನ್ನು ದಾಟಲು ಸಾಧ್ಯವಾಗದೆ ಕೆಳಗೆ ಬಿದ್ದು ಕಲ್ಲಾಗಿ, ದಾಟುವವರನ್ನು ನೋಡುತ್ತಿರಬೇಕಾಗುತ್ತದೆ.

ಎಸ್ಕಿಮೋ ಜನಾಂಗದ ನೆಟ್ಸಿಲಿಕ್ ಎಂಬ ಬಣದವರು ಮೂರು ಸ್ತರದ ಪರಲೋಕಗಳಿವೆ ಎಂದು ನಂಬುತ್ತಾರೆ. 'ಗ್ರಾಮ' ಎಂದು ಕರೆಯುವ ಮೊದಲ ಪರಲೋಕ ಆಕಾಶದಲ್ಲಿದ್ದು, ಅಲ್ಲಿ ಬೇಟೆಯಾಡಲು ವಿಪುಲವಾಗಿ ಪಕ್ಷಿ-ಪ್ರಾಣಿಗಳು ದೊರೆಯುತ್ತವೆ. ಆತ್ಮಕ್ಕೆ ಈ ಬೇಟೆಯಿಂದ ದಣಿವಾಗಿದ್ದರೆ ಚಂದ್ರನ ಆತ್ಮವು ಸಮುದ್ರಕ್ಕೆ ಹೋಗಲು ಸಹಾಯ ಮಾಡುತ್ತದೆ. ಅಲ್ಲಿ ಅವರು ಮೀನು ಅಥವಾ ಇತರ ಸಮುದ್ರ ಪ್ರಾಣಿಗಳ ಬೇಟೆ ಆಡಬಹುದು. ಈ ಪರಲೋಕ ಬೇಟೆಗಾರರಿಗೆ ಮತ್ತು ದೊಡ್ಡದಾದ ಹಚ್ಚೆ ಹಾಕಿಸಿಕೊಂಡ ಹೆಂಗಸರಿಗೆ ಮೀಸಲಾದದ್ದು. ಎರಡನೆಯ ಪರಲೋಕ ತಂಡ್ರಾ ಪ್ರದೇಶದ ಕೆಳಗಡೆ ಭೂಮಿಯ ಆಳದಲ್ಲಿರುತ್ತದೆ. ಈ ಲೋಕದಲ್ಲಿ ಅವರು ಕ್ಯಾರಿಬೂ ಮತ್ತು ಸ್ಯಾಮನ್ ಮೀನುಗಳ ಬೇಟೆ ಆಡಬಹುದು. ಇಲ್ಲಿ ಕೂಡ ಆತ್ಮ ಸುಖಿಯಾಗಿ ಬಾಳುತ್ತದೆ. ಮೂರನೆಯ ಪರಲೋಕ ಭೂತಳದಲ್ಲಿ, ಭೂಮಿಯ ಮೇಲ್ಮೈಗೆ ಹೊಂದಿಕೊಂಡಿರುತ್ತದೆ. ಈ ಲೋಕ ಆಲಸಿ ಜನರಿಗೆ ಮತ್ತು ಹಚ್ಚೆ ಹಾಕಿಸಿಕೊಳ್ಳಲು ಹೆದರಿಕೊಂಡವರಿಗೆ ಮೀಸಲಾಗಿದೆ. ಇಲ್ಲಿ ವಾಸಿಸುವವರು ತೂಗಾಡುತ್ತಿರುವ ರುಂಡಗಳೊಂದಿಗೆ ವಾಸಿಸಬೇಕಾಗುತ್ತದೆ. ಇವರಿಗೆ ಸಿಗುವ ಏಕಮಾತ್ರ ಆಹಾರವೆಂದರೆ ಪಾತರಗಿತ್ತಿಗಳು; ಹಾಗಾಗಿ ಇವರು ಸದಾ ಹಸಿವೆಯಿಂದ ಬಳಲುತ್ತಿರುತ್ತಾರೆ.

ಚಿಪ್ಪವಾ ಇಂಡಿಯನ್ ಬಣದವರ ನಂಬಿಕೆಯಂತೆ ಮನುಷ್ಯ ಮರಣಹೊಂದಿದಾಗ ಆತ್ಮವು ದಕ್ಷಿಣ ದಿಕ್ಕಿನಲ್ಲಿ ಸಾಗರದ ಅಂಚಿನಲ್ಲಿರುವ ಆತ್ಮಲೋಕಕ್ಕೆ ಹೋಗುತ್ತದೆ. ಈ ಬಣದವರಿಗೂ ಪರಲೋಕಕ್ಕೆ ಹೋಗುವ ಮೊದಲು ಅವರು ನದಿಯೊಂದನ್ನು ದಾಟಬೇಕು ಎಂಬ ನಂಬಿಕೆಯಿದೆ. ದಾಟುವ ಮೊದಲು ದೊಡ್ಡ ಸರ್ಪವೊಂದು ಸೇತುವೆಯ ಉದ್ದೇಶವನ್ನು ಹೇಳುತ್ತದೆ. ಸೇತುವೆಯನ್ನು ಯಶಸ್ವಿಯಾಗಿ ದಾಟಿದವರು ಮುಂದಿನ ಲೋಕಕ್ಕೆ ಹೋಗುತ್ತಾರೆ. ದಾಟುವಾಗ ಕೆಳಗೆ ಬಿದ್ದವರು ಸದಾ ಅಲ್ಲಿಯೇ ಇರಬೇಕಾಗುತ್ತದೆ. ಬದುಕಿದ್ದಾಗ ರೋಗಗ್ರಸ್ತ ಅಥವಾ ನಿರ್ಜೀವಿಗಳಂತೆ ಬದುಕಿದವರು ಸೇತುವೆಯ ಅಂಚಿನ ತನಕ ಬಂದು ಸರ್ಪದಿಂದ ತಡೆಯಲ್ಪಟ್ಟು ಪುನಃ ಮಾನವ ದೇಹವನ್ನು ಸೇರುತ್ತಾರೆ. ಆತ್ಮಲೋಕದಲ್ಲಿ ಅದರ ಬದುಕು ಅವರು ಜೀವಂತವಿದ್ದಾಗ ಸಂಪಾದಿಸಿದ ಪಾಪ-ಪುಣ್ಯಗಳ ಮೇಲೆ ಅವಲಂಬಿಸಿರುತ್ತದೆ. ಪುಣ್ಯವಂತರಿಗೆ ರೋಗ ರುಜಿನಗಳ ಕಾಟವಿಲ್ಲ; ಕೆಲಸ ಮಾಡಬೇಕಾಗಿಲ್ಲ. ಆಹಾರದ ಕೊರತೆಯಿಲ್ಲ. ಸದಾ ನೃತ್ಯ-ಸಂಗೀತಗಳಲ್ಲಿ ಅವರು ಆನಂದಿಸುತ್ತಿರುತ್ತಾರೆ. ಪಾಪ ಮಾಡಿದವರ ಈ ಪರಲೋಕ ಜೀವನ ದುಸ್ತರವಾಗಿರುತ್ತದೆ. ಜೀವನದಲ್ಲಿ ಅವರು ಯಾರೊಂದಿಗೆ ಕ್ರೂರವಾಗಿ ನಡೆದುಕೊಂಡಿದ್ದರೋ, ಮತ್ತೊಬ್ಬ ಮನುಷ್ಯನೇ ಇರಲಿ ಅಥವಾ ನಾಯಿ-ಕುದುರೆಯಂತಹ ಪ್ರಾಣಿಯೇ ಇರಲಿ, ಅವರ

ಪ್ರೇತ ಬಂದು ಇವರನ್ನು ಕಾಡುತ್ತದೆ. ಸೇತುವೆ ದಾಟಿದ ಆತ್ಮ ಪ್ರೇತವಾಗದಿದ್ದರೂ, ಆಗಾಗ ಭೂಲೋಕಕ್ಕೆ ಬಂದು ತನ್ನ ಸ್ನೇಹಿತರನ್ನು ಪರಲೋಕಕ್ಕೆ ಬರಲು ಪ್ರೇರೇಪಿಸುತ್ತದೆ.

ಮೃತರ ಆತ್ಮ ವಾಸಿಸುವ ಪರಲೋಕ, ಉತ್ತರ ದಿಕ್ಕಿನ ಆಕಾಶದಲ್ಲಿದೆ ಎಂದು 'ಸೂ' ರಾಷ್ಟ್ರಕ್ಕೆ ಸೇರಿದ ಲಕೋಟಾ ಬಣದ ನಂಬಿಕೆ. ಅಲ್ಲಿ ಮೃತರು ರೋಗ-ರುಜಿನಗಳಿಂದ ಮುಕ್ತವಾದ ಶಾಂತಿಯುತ ಜೀವನ ನಡೆಸುತ್ತಾರೆ. ಅವರಿಗೆ ತಮಗೆ ಮೆಚ್ಚಿಗೆಯಾಗುವ ಕುದುರೆ ಮತ್ತು ಹೆಣ್ಣು ಸಂಗಾತಿಗಳು ಯಥೇಚ್ಛವಾಗಿ ದೊರೆಯುತ್ತಾರೆ. ಹೇಡಿತನ ಅಥವ ಕ್ಷುಲ್ಲಕ ಬುದ್ಧಿಯ ಮಾನವರು ಮರಣ ಹೊಂದಿದಾಗ ಉತ್ತರ ದಿಕ್ಕಿನಲ್ಲಿರುವ ಆತ್ಮವು ಅವರನ್ನು ಎದುರಿಸಿ ನೀರಿನ ಕೊಳಕ್ಕೆ ನೂಕುತ್ತದೆ. ಈ ಕೊಳ ಜೀವಿತರ ಲೋಕ ಮತ್ತು ಮೃತರ ಲೋಕಗಳ ಮಧ್ಯೆ ಇರುತ್ತದೆ. ಇನ್ನು ಕೆಲವರ ನಂಬಿಕೆಯಂತೆ ಸತ್ತವರ ಆತ್ಮ ಒಂದು ನದಿಯನ್ನು ಅತ್ಯಂತ ಕಿರಿದಾದ ಮರದ ಸೇತುವೆಯ ಮೇಲಿಂದ ದಾಟಬೇಕಾಗುತ್ತದೆ. ಕಷ್ಟವಿಲ್ಲದೆ ದಾಟಿದವರು ಆತ್ಮಲೋಕಕ್ಕೆ ಪ್ರಯಾಣಿಸುತ್ತಾರೆ. ದಾಟಲು ಹಿಂಜರಿಯುವವರು ಭೂತರೂಪದಲ್ಲಿ ಭೂಲೋಕಕ್ಕೆ ಹಿಂತಿರುಗುತ್ತಾರೆ.

ಕಿರಿದಾದ ಸೇತುವೆ ದಾಟುವ ಪರಿಕಲ್ಪನೆ ಸಾಮಾನ್ಯ ಎಲ್ಲ ಬಣಗಳಲ್ಲಿಯೂ ಒಂದಿಲ್ಲೊಂದು ರೀತಿಯಲ್ಲಿ ಕಾಣುತ್ತದೆ. ಸೇತುವೆ ದಾಟುವಾಗ ಪರಲೋಕದ ರಕ್ಷಕರು ಅಥವಾ ರಾಕ್ಷಸರು ದಾಟದಂತೆ ಅಡ್ಡ ಬರುತ್ತಾರೆ. ಅವರನ್ನು ಎದುರಿಸಿ ಸಫಲವಾಗಿ ದಾಟಿದವರು ಮಾತ್ರ ಪರಲೋಕದ ಸುಖಜೀವನಕ್ಕೆ ಬಾಧ್ಯರು. ಉಳಿದವರು ಪ್ರಪಾತಕ್ಕೆ ಬಿದ್ದು ನೀರಿನ ಸುಳಿಯಲ್ಲಿ ಸಿಕ್ಕಿ ಒದ್ದಾಡುತ್ತಾರೆ. ಜಗತ್ತಿನ ಬಹಳಷ್ಟು ಸಂಸ್ಕೃತಿಗಳಲ್ಲಿ ಇಡೀ ಸಮಾಜದ ಏಳ್ಗೆಗಾಗಿ ಏನನ್ನೂ ಮಾಡದವರು ಮರಣದ ನಂತರ ಶಿಕ್ಷೆ ಅನುಭವಿಸುತ್ತಾರೆ ಎಂಬ ದೃಢ ನಂಬಿಕೆಯಿದೆ.

ಪರಲೋಕದ ದಾರಿಯಲ್ಲಿ ನದಿ ದಾಟುವ ಕಲ್ಪನೆ ಹಿಂದೂ ಪುರಾಣಗಳಲ್ಲಿಯೂ ಇದೆ. ಗರುಡ ಪುರಾಣದಲ್ಲಿ ವೈತರಣಿ ನದಿಯ ಉಲ್ಲೇಖ ಬರುತ್ತದೆ. ಯಮಲೋಕಕ್ಕೆ ತೆರಳುವ ಮೃತರು ವೈತರಣಿಯನ್ನು ದಾಟಿ ಹೋಗಬೇಕು. ವೈತರಣಿ ನದಿ ಅವರವರ ಕರ್ಮಾನುಸಾರ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣುತ್ತದೆ. ಸತ್ಯನಿಷ್ಠನ ಪಾಲಿಗೆ ಸುಂದರ, ಮನಮೋಹಕ ನದಿಯಾಗಿ ಕಾಣುತ್ತದೆ. ಹಾಗಾಗಿ ಅವನು ಸುಲಭವಾಗೇ ನದಿಯನ್ನು ದಾಟುತ್ತಾನೆ. ಅದೇ ಪಾಪಕರ್ಮದಿಂದ ಬದುಕಿದವನಿಗೆ ವೈತರಣಿ ಭಯಾನಕ ವಸ್ತುಗಳಿಂದ ತುಂಬಿದಂತೆ ಕಾಣುತ್ತದೆ. ಹಾಗಾಗಿ ಅವನ ಮಟ್ಟಿಗೆ ಅದೊಂದು ಅಸಹ್ಯಕರವೆನಿಸುತ್ತದೆ. ದಾಟಲು ಬಲು ಪ್ರಯಾಸಪಡುತ್ತಾನೆ.

ಮೂಲನಿವಾಸಿಗಳಲ್ಲಿ ಅತಿದೊಡ್ಡ ಬಣವಾದ ನಾವಹೊ ಜನರು ಮರಣವೆಂದರೆ ಭಯಪಡುತ್ತಾರೆ. ಎಂದೂ ಮರಣದ ವಿಷಯ ಕುರಿತು ಮಾತನಾಡಬಯಸುವುದಿಲ್ಲ. ಮರಣೋತ್ತರ ಜಗತ್ತು ಕರಾಳವಾಗಿದ್ದು ಅಲ್ಲಿಗೆ ಯಾರೂ ಹೋಗಲಿಚ್ಛಿಸುವುದಿಲ್ಲ. ಪರಲೋಕ ಕೂಡ ಭೂಲೋಕದಂತೆಯೇ ಇರುತ್ತದೆ. ಈ ಪರಲೋಕ ಉತ್ತರ ದಿಕ್ಕಿಗೆ ಭೂಮಿಯ ಕೆಳಗಡೆ ಇದೆ. ಮೃತನ ಆತ್ಮವು ಭೂಮಿಯ ಆಳದಲ್ಲಿ ಒಂದು ಮರಳುದಿನ್ನೆ ಸಿಗುವ

ತನಕ ಕುಸಿಯುತ್ತ ಹೋಗುತ್ತದೆ. ಅಲ್ಲಿ ಅವರು ತಮ್ಮ ಸಂಬಂಧಿಕರನ್ನು ಸಂಧಿಸುತ್ತಾರೆ. ಅವರು ಅಲ್ಲಿಂದ ಮೃತ್ಯುಲೋಕಕ್ಕೆ ಹೋಗುವ ಮಾರ್ಗವನ್ನು ಸೂಚಿಸುತ್ತಾರೆ. ಮೃತ್ಯುಲೋಕ ತಲುಪಲು ನಾಲ್ಕು ದಿನ ತಗಲುತ್ತದೆ. ಮೃತ್ಯುಲೋಕ ಸಂತೋಷದಾಯಕವೂ ಅಲ್ಲ ಅಥವಾ ದುಃಖಕರವೂ ಅಲ್ಲ, ಆದರೆ ಸದಾ ಹಾಳು ಸುರಿಯುವಂತೆ ಮಂಕಾಗಿರುತ್ತದೆ.

ಕೆಲವು ಬಣಗಳಲ್ಲಿ ಹಿಂದೂ ಧರ್ಮದ ಕಲ್ಪನೆಯಂತೆ ಪುಣ್ಯಾತ್ಮರು ಹೋಗುವ ಸ್ವರ್ಗ ಭೂಮಿಯ ಮೇಲ್ಗಡೆ ಇದೆ, ಪಾಪಿಗಳ ನರಕ ಭೂಮಿಯ ತಳದಲ್ಲಿ ಇದೆ ಎಂಬ ನಂಬಿಕೆಯಿದೆ. ಇದಲ್ಲದೆ ಸ್ವರ್ಗದಲ್ಲಿ ಹದಿಮೂರು ಸ್ತರಗಳಿವೆಯೆಂದೂ, ನರಕದಲ್ಲಿ ಒಂಬತ್ತು ಸ್ತರಗಳಿವೆಯೆಂದೂ ಹೇಳುತ್ತಾರೆ. ಮಾನವರು ಜೀವನದಲ್ಲಿ ಗಳಿಸಿದ ಪಾಪ-ಪುಣ್ಯಗಳನ್ನು ಅವಲಂಬಿಸಿ, ಸ್ವರ್ಗ ಅಥವಾ ನರಕದ ವಿಶಿಷ್ಟ ಸ್ತರಕ್ಕೆ ಹೋಗುತ್ತಾರೆ. ನರಕಕ್ಕೆ ಹೋದವರಿಗೆ ನರಕದಿಂದ ಎಂದೂ ಮುಕ್ತಿಯಿಲ್ಲ. ಸ್ವರ್ಗಕ್ಕೆ ಹೋದವರಿಗೆ ಸ್ವರ್ಗ ಶಾಶ್ವತವಲ್ಲ. ಅಲ್ಲಿ ಬದುಕಲು ಅವರು ತಮ್ಮ ಪುಣ್ಯಗಳನ್ನು ವ್ಯಯ ಮಾಡಬೇಕಾಗುತ್ತದೆ. ಪುಣ್ಯ ಖಾಲಿಯಾದ ಬಳಿಕ ಪುನಃ ಭೂಮಿಯಲ್ಲಿ ಜನ್ಮ ತಾಳುತ್ತಾರೆ. ಈ ಪುನರ್ಜನ್ಮದ ನಂಬಿಕೆ ಚೂಮಾಶ್, ಅಲ್ಗೋಂವಕಿನ್ ಮುಂತಾದ ಹಲವು ಮೂಲನಿವಾಸಿ ಬಣಗಳಲ್ಲಿಯೂ ಇದೆ.

ಅಮೇರಿಕೆಯ ಮೂಲನಿವಾಸಿಗಳ ಹಲವು ಸಂಪ್ರದಾಯಗಳನ್ನು ನೋಡಿದರೆ ದೇಹಕ್ಕಿಂತ ಭಿನ್ನವಾದ ಚೇತನದಲ್ಲಿ ಮತ್ತು ಪರಲೋಕಗಳಲ್ಲಿ ಅವರ ನಂಬಿಕೆಗಳು ಎಷ್ಟು ಗಾಢವಾಗಿವೆ ಎಂಬುದು ಮನದಟ್ಟಾಗುತ್ತದೆ. ಇಂಥ ನಂಬಿಕೆಗಳು ಈ ಜನಾಂಗದಲ್ಲಿ ಮಾತ್ರವಲ್ಲ; ಜಗತ್ತಿನಾದ್ಯಂತ ಎಲ್ಲ ಜನಾಂಗಗಳಲ್ಲಿಯೂ ಇವೆ. ಕಾಣದ ಜಗತ್ತನ್ನು ಕುರಿತು ಸಾರ್ವತ್ರಿಕವಾಗಿರುವ ಈ ಭಾವನೆಗಳನ್ನು ನೋಡಿದಾಗ ಒಮ್ಮೊಮ್ಮೆ ಆಶ್ಚರ್ಯವಾಗುತ್ತದೆ. ವೈಯಕ್ತಿಕವಾಗಿ ನಾನು ಇವುಗಳನ್ನು ಮನಸಾ ನಂಬಲಾರೆ, ನಂಬದೆಯೂ ಇರಲಾರೆ.

ಆಶ್ಚರ್ಯವೆಂದರೆ ವಿವಿಧ ಜನಾಂಗಗಳಲ್ಲಿ ಸಾಮ್ಯತೆಗಳಿರುವ ಈ ತರದ ಪರಲೋಕ ಹಾಗೂ ಭೂತ-ಪ್ರೇತಗಳಲ್ಲಿ ನಂಬಿಕೆಗಳು, ಮತ್ತು ಶವಸಂಸ್ಕಾರ ಹಾಗೂ ಮರಣೋತ್ತರ ಸಂಪ್ರದಾಯಗಳು ಸಾವಿರಾರು ವರ್ಷಗಳಿಂದ ಒಂದಿಲ್ಲೊಂದು ರೂಪದಲ್ಲಿ ಉಳಿದುಕೊಂಡು ಬಂದಿವೆ. ಇಂದಿನ ವಿಜ್ಞಾನ ಯುಗದಲ್ಲಿಯೂ ಜೀವಂತವಾಗಿವೆ. ಬಹುಶಃ ಭಾವನಾ ಜಗತ್ತೇ ಬೇರೆ, ಬೌದ್ಧಿಕ ಜಗತ್ತೇ ಬೇರೆ.

ಆತ್ಮವನ್ನು 'ಶಬ್ದಗಳಲ್ಲಿ ವರ್ಣಿಸಲಾಗದು. ತರ್ಕದಿಂದ ಅರಿಯಲು ಶಕ್ಯವಾಗದು' ಎನ್ನುತ್ತವೆ ಹಿಂದೂ ಉಪನಿಷತ್ತುಗಳು. ಆತ್ಮದರ್ಶನವಾಗಿದೆಯೆನ್ನಲಾದ ಮಹರ್ಷಿಗಳು ಆತ್ಮದ ಅಸ್ತಿತ್ವವನ್ನು ಸಾರಿ-ಸಾರಿ ಹೇಳಿದರೂ ಸಾಮಾನ್ಯ ಮನುಷ್ಯನಿಗೆ ಅದೊಂದು ಅಮೂರ್ತ ಕಲ್ಪನೆಯಾಗಿಯೇ ಉಳಿದಿದೆ. ಸತ್ತವರು ಯಾರೂ ತಿರುಗಿ ಬಂದು ಮರಣೋತ್ತರ ಜೀವನದ ಕಥೆಯನ್ನು ಹಂಚಿಕೊಂಡಿದ್ದಿಲ್ಲ. ಆದರೂ ಪರಲೋಕಗಳ ರೋಚಕ ವರ್ಣನೆಗಳು, ಕಥೆಗಳು, ಜಗತ್ತಿನಾದ್ಯಂತ ವಿಪುಲವಾಗಿವೆ. ಜೀವನ, ಮರಣಗಳೆಂಬ ನಿಗೂಢ ರಹಸ್ಯ

ಮಾನವನ ಕಲ್ಪನಾ ಶಕ್ತಿಯನ್ನು ಧಾರಾಳವಾಗಿ ಹರಿಯ ಬಿಟ್ಟು ಅಮೂರ್ತ ಲೋಕಗಳನ್ನು ಸೃಷ್ಟಿಸಿವೆ. ಈ ಭಾವನಾ ಲೋಕಗಳು ಮಾನವನಿಗೆ ತಾರ್ಕಿಕವಾಗಿ ಉತ್ತರಿಸಲಾಗದ ಹಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟು ಜೀವನ-ಮರಣಗಳನ್ನು ಧೈರ್ಯ ಮತ್ತು ಶಾಂತಿ-ಸಮಾಧಾನಗಳಿಂದ ಎದುರಿಸಲು ಸಹಾಯ ಮಾಡಿವೆ ಎನ್ನಬಹುದು.

ಆಧಾರ

1. Varner, Gary R.: Ghosts, Spirits & the Afterlife in Native American Folklore and Religion, OakChylde Books/Lulu Press (2010).
2. Dr. H. C. Yarrow, Act. Asst. Surg.,USA, "A Further Contribution to the Study of the Mortuary Customs of the North American Indians" in the First Annual Report of Smithsonian Institution—Bureau of Ethnology (1881).
3. Waldman, Carl: Encyclopedia of Native American Tribes, Third Edition, Facts On File Publication.
4. https://www.legendsofamerica.com/na-tribelist.

❑

19

ಕಡಲಾನೆಗಳ ಜೊತೆ ಬೆಳೆದ ಬಾಲಕ

ಪ್ರವೀಣ್ ಶಿವಶಂಕರ್
ಟೊರಾಂಟೋ, ಕೆನಡ

*

ಯುಪಿಕ್ ಎಸ್ಕಿಮೋ ಜನಾಂಗದವರ ಕುರಿತು

ಯುಪಿಕ್ ಎಸ್ಕಿಮೋ ಜನಾಂಗದವರು ಮೂಲತಃ ಪಾಶ್ಚಿಮಾತ್ಯ ಅಲಾಸ್ಕ ಪ್ರಾಂತ್ಯದವರು. ಇವರ ಬಗ್ಗೆ ಹೆಚ್ಚು ಮಾಹಿತಿಗಳು ಲಭ್ಯವಿಲ್ಲದಿದ್ದರೂ, ಇವರು ಕೆನಡಾ ಮತ್ತು ಗ್ರೀನ್ ಲ್ಯಾಂಡ್‌ನ ಮೂಲನಿವಾಸಿ ಜನಾಂಗಗಳಾದ 'ಇನ್ಯುಯಿಟ್ಟ'ರಿಗೆ ಸಂಬಂಧಪಟ್ಟಿರಬಹುದೆಂಬ ಶಂಕೆಗಳಿದ್ದರೂ ಅವರಿಗಿಂತಲೂ ವಿಭಿನ್ನವಾದ ಭಾಷೆ ಮತ್ತು ಸಂಪ್ರದಾಯಗಳನ್ನು ಒಳಗೊಂಡವರಾಗಿರುತ್ತಾರೆ. ಇವರು ನದಿ ದಂಡೆಗಳಲ್ಲಿ ಮತ್ತು ಬೆರಿಂಗ್ ಕಡಲ ತೀರದಲ್ಲಿ ವಾಸಿಸುವವರಾಗಿದ್ದು ಯುಪಿಕ್ ಭಾಷೆಯನ್ನು ಮಾತನಾಡುತ್ತಾರೆ. ಯುಪಿಕ್ ಎಸ್ಕಿಮೋಗಳು ತಮ್ಮ ಪರಿಸರದಲ್ಲಿ ನೈಸರ್ಗಿಕವಾಗಿ ಲಭ್ಯವಿರುವ ಪ್ರಾಣಿಗಳಾದ ಕಡಲ ಸಿಂಹ, ಕಡಲ ಆನೆ, ಮೀನು, ಜಲಪಕ್ಷಿಗಳು, ಚಿಕ್ಕ ಸಸ್ತನಿಗಳು, ಮೂಸ್, ಕರಡಿಗಳು, ವಿವಿಧ ಜಾತಿಯ ಚಿಕ್ಕ ಹಣ್ಣುಗಳು ಮತ್ತು ಸಸ್ಯಗಳನ್ನು ತಿನ್ನುತ್ತಾರೆ. ವಸಂತ ಕಾಲದಲ್ಲಿ ನದಿಗಳಲ್ಲಿ ಹರಿದು ಬರುವ ಮರದ ದಿಮ್ಮಿಗಳನ್ನು ಉಪಯೋಗಿಸಿ ತಮ್ಮ ಸಾಂಪ್ರದಾಯಿಕ ಆಚರಣೆಗಳಿಗೆ ಬೇಕಾದ ಸಲಕರಣೆಗಳನ್ನು ಮತ್ತು ಸಾಮೂಹಿಕ ವಸತಿಗಳನ್ನು ನಿರ್ಮಿಸಲು ಬಳಸುತ್ತಾರೆ. ಪ್ರತೀ ಚಳಿಗಾಲದಲ್ಲಿ ಸುಮಾರು ಮುನ್ನೂರು, ನಾನ್ನೂರು ಜನರು ಒಂದೆಡೆಯಲ್ಲಿ ಸೇರುತ್ತಾರೆ. ಆಗ ಗಂಡಸರು ಮತ್ತು ಹುಡುಗರು (ಐದು ವರುಷದ ಮೇಲ್ಪಟ್ಟವರು) ಕಾಸ್ಗಿಕ್ ಎಂಬ ಸಾಮೂಹಿಕ ವಸತಿಯನ್ನು ನಿರ್ಮಿಸಿ ಅಲ್ಲಿರುತ್ತಾರೆ. ಹೆಂಗಸರು, ಬಾಲಕಿಯರು ಮತ್ತು ಚಿಕ್ಕ ಮಕ್ಕಳು ಬೇರೆಡೆಯಲ್ಲಿ ವಸತಿ ಹೂಡುತ್ತಾರೆ. ಆಂತರಿಕ ಕಲಹಗಳಿಂದ ಸಾಕಷ್ಟು ನಷ್ಟಗಳನ್ನು ಆಗಲೇ ಅನುಭವಿಸಿದ್ದ ಈ ಜನಾಂಗದವರಿಗೆ ಹೊರಗಿನಿಂದ ಬಂದ ಯೂರೋಪಿಯನ್ನರು ಮತ್ತು ಅಮೆರಿಕನ್ನರು ಅವರೊಂದಿಗೆ

ತಂದಿದ್ದ ಸಾಂಕ್ರಾಮಿಕ ರೋಗಗಳನ್ನು ಇವರಿಗೆ ವರ್ಗಾಯಿಸಿ ಇವರ ಸಂತತಿ ಮತ್ತಷ್ಟು ಕುಂದುವಂತೆ ಮಾಡಿದರು.

ಇಲ್ಲಿ ಅನುವಾದಿಸಲು ಆಯ್ದುಕೊಂಡ ಕಥೆಯನ್ನು ಕುಲಿರಾಕ್ (ಸಾಂಪ್ರದಾಯಿಕ ಕಥೆ) ಎನ್ನುತ್ತಾರೆ. ಈ ಕಥೆಯಲ್ಲಿ ಯುಪಿಕ್ ಜನಾಂಗದವರ ನಂಬಿಕೆಗಳನ್ನು ಸುಂದರವಾಗಿ ಚಿತ್ರಿಸಲಾಗಿದೆ. ಅದರಲ್ಲೂ ಮುಖ್ಯವಾಗಿ ಪ್ರಾಣಿಗಳ ಹಾಗೂ ಮನುಷ್ಯರ ನಡುವಿನ ಸಂಬಂಧವನ್ನು ಮನಮುಟ್ಟುವಂತೆ ಚಿತ್ರಿಸಿದೆ. ಬೇಟೆಗಾರ ಮತ್ತು ಆತನ ಬೇಟೆಯ ನಡುವಣ ಸಂಬಂಧ ಯಾವ ರೀತಿಯದ್ದು ಮತ್ತು ಅದರಲ್ಲೂ ಇರುವ ಪರಸ್ಪರ ಗೌರವ, ಪ್ರೀತಿ, ಸ್ನೇಹಗಳನ್ನು ಕಾಣಬಹುದಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಇರುವ ನಂಬಿಕೆಗಳಿಗೆ ಸಂವಾದಿಯಾಗಬಹುದಾದ ನಂಬಿಕೆಗಳನ್ನು, ಆಚರಣೆಗಳನ್ನೂ ಸಹಿತ ಈ ಕಥೆಯಲ್ಲಿ ನಾವು ನೋಡಬಹುದು. ಯಾವುದೇ ರೀತಿಯ ಸಂಪರ್ಕವಿರದಿದ್ದರೂ ಸಾವಿರಾರು ಮೈಲಿ ದೂರದಲ್ಲಿ ತನ್ನದೇ ಆದ ಪ್ರಪಂಚವೋ ಎಂಬಂತೆ ಇರಬಹುದಾದ ಜನಾಂಗಗಳ ನಡುವೆಯೂ ಎಷ್ಟೊಂದು ಸಮನಾದ ನಂಬಿಕೆಗಳು ಇರಬಹುದು ಎನ್ನುವುದು ವಿಸ್ಮಯವೇ ಸರಿ!. ಜನರನ್ನು ನಂಬಿಕೆಗಳ ಆಧಾರದ ಮೇಲೆ ವಿಭಜಿಸುವ ಪ್ರಕ್ರಿಯೆ ನಡೆಯುತ್ತಿರುವ ಇಂದಿನ ದಿನಗಳಲ್ಲಿ ಸಮೀಕರಿಸಬಲ್ಲ ನಂಬಿಕೆಗಳ ಆಧಾರದ ಮೇಲೆ ಒಟ್ಟುಗೂಡಿಸುವ ಪ್ರಯತ್ನ ಹೆಚ್ಚು ಆವಶ್ಯಕವಾಗುತ್ತದೆ.

ಇಲ್ಲಿ ಮುಖ್ಯವಾಗಿ ಜೀವನದ ನಿರಂತರತೆಯ ಕುರಿತಾದ ನಂಬಿಕೆಗಳನ್ನೂ ನಾವು ನೋಡಬಹುದು. ಜೀವಿ ಎಂದಿಗೂ ಶಾಶ್ವತವಾಗಿ ಸಾಯುವುದಿಲ್ಲ - ಪುನಃ ಪುನಃ ಜನ್ಮವನ್ನು ತಾಳಿ ಮರಳುತ್ತದೆ ಎಂಬುದು ಪ್ರಬಲವಾದ ನಂಬಿಕೆ. ಅದಕ್ಕೆ ಪೂರಕವಾಗಿ ಎಲ್ಲ ನೆರವನ್ನೂ ಮನುಷ್ಯನಾದವನು ನೀಡಬೇಕು ಎಂಬುದೇ ಇಲ್ಲಿನ ಮುಖ್ಯ ಪಾಠ. ಮನುಷ್ಯ ಇತರ ಜೀವಿಗಳನ್ನು ಹೇಗೆ ನೋಡುವನೋ ಅದೇ ರೀತಿ ಇತರ ಮೃಗಗಳೂ ಕೂಡ ಮನುಷ್ಯನನ್ನು ಯಾವ ರೀತಿ ನೋಡುತ್ತವೆ ಎಂಬುದರ ಝಲಕ್ ಕೂಡ ನಮಗೆ ಈ ಕಥೆಯಲ್ಲಿ ಸಿಗುತ್ತದೆ. ಈ ಕಥೆಯನ್ನು ಮೂಲ ಮಾತೃಕೆಯಲ್ಲಿ ಯುಪಿಕ್ ಜನಾಂಗದವ ಹೇಳಿದ ಹಾಗೆಯೇ ದಾಖಲಿಸಲಾಗಿದೆ. ಹಾಗಾಗಿ ಅಲ್ಲಲ್ಲಿ ವ್ಯಕ್ತಿಯೊಬ್ಬ ಕಥೆಯನ್ನು ಹೇಳುತ್ತಿರುವ ಶೈಲಿ ಕಂಡುಬರುತ್ತದೆ. ಅನುವಾದದಲ್ಲಿ ಮೂಲಕ್ಕೆ ಆದಷ್ಟು ನ್ಯಾಯ ಒದಗಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಲಾಗಿದೆ.

ಕಥೆ

(ಕಥೆಗಾರ, ಕಥೆ ಕೇಳುತ್ತಿರುವ ಒಬ್ಬ ಹುಡುಗನನ್ನು ಉದ್ದೇಶಿಸಿ ಹೇಳುತ್ತಿರುವಂತೆ ಕಥೆ ಆರಂಭವಾಗುತ್ತದೆ.)

ಎಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯದಂತೆ ಅಂಗಾಲ್ಲುಕ್ (ಯುಪಿಕ್ ಜನಾಂಗದವರಲ್ಲಿ ಪಾರಲೌಕಿಕದೊಡನೆ ಸಂವಹನೆಯನ್ನು ನಡೆಸುವ ಸಾಮರ್ಥ್ಯವುಳ್ಳ ದಾರ್ಶನಿಕ) ಒಬ್ಬ ಹುಡುಗನನ್ನು ಕಡಲ ಆನೆಗಳೊಂದಿಗೆ ಬಾಳಲು

ಕಳುಹಿಸಿದನು. ಅವನು ನಿನ್ನಂತಹ ಬಾಲಕನೇ ಆಗಿದ್ದ! ಒಂದು ವರುಷದವರೆವಿಗೂ ಅವನು ಕಡಲಾನೆಗಳೊಂದಿಗೆ ಜೀವನವನ್ನು ನಡೆಸಿದನು. ಆನಂತರ ಚಳಿಗಾಲದ ಕೊನೆಯಲ್ಲಿ ಮರಳಿ ಬಂದನು.

ನಿನ್ನಂತೆಯೇ ಬಾಲಕನಾಗಿದ್ದ ಅವನು ತನ್ನ ತಂದೆ ತಾಯಿಯ ಏಕೈಕ ಸಂತಾನನಾಗಿದ್ದ. ಒಬ್ಬನೇ ಮಗನಾದ ಕಾರಣ ಅವನ ತಂದೆ ತಾಯಿಗೆ ಚಿಂತೆಯಾಯಿತು – "ಪಾಪ ನಂ ಮಗ ಬೆಳ್ದು ದೊಡ್ಡೋನಾದ್ಮೇಲೆ ಅವ್ನಿಗೆ ಸಹಾಯ ಮಾಡೋಕೆ ಯಾರೂ ಇರೋಲ್ವಲ್ಲ! ಒಬ್ನೇ ಮಗ ಹೇಗ್ಬದುಕ್ತಾನೆ? ಅವ್ನು ಮುಂದೆ ಬೆಳ್ದು ದೊಡ್ಡೋನಾದ್ಮೇಲೆ ಹೇಗೆ ಅವ್ನ ಬದುಕ್ನ ಸುಲಭ ಮಾಡ್ಬೋದೋ ಏನೋ!" ಹೀಗೆ ಯೋಚಿಸುತ್ತಿರುವಾಗ ಆ ಹುಡುಗನ ತಂದೆ ಹೇಳಿದ "ಒಂದ್ಕೆಲ್ಸ ಮಾಡ್ತೀನಿ. ಒಂದು ಪರೀಕ್ಷೆ ಮಾಡಿ ತುಂಬಾ ಶಕ್ತಿವಂತನಾಗಿರೋ, ಉಪಯುಕ್ತನಾಗಿರೋ ಒಬ್ಬ ಅಂಗಾಲ್ಲುಕ್ಕನ್ನ ಹುಡುಕ್ತೀನಿ. ಅವ್ರು ಹೇಳ್ಬಹುದು ನಂ ಮಗ ದೊಡ್ಡೋನಾಗಿ ಬೇಟೆಗಾರ ಆದಾಗ ಸುಲಭವಾಗಿ ಬದ್ಕೋ ದಾರಿನ."

ಆ ಹುಡುಗನ ತಂದೆ ಕೂಡ ನಮ್ಮ ಪೂರ್ವಜರ ಹಾಗೆ, ನಿನ್ನ ನನ್ನ ಹಾಗೆ. ಒಬ್ಬ ಪ್ರಭಾವಶಾಲಿಯಾದ ತಿಳುವಳಿಕೆಯುಳ್ಳ ಅಂಗಾಲ್ಲುಕ್‌ನನ್ನು ಹುಡುಕಲು ಪ್ರಾರಂಭಿಸಿದ. ಆಗಿನ ದಿನಗಳಲ್ಲಿ ಹೊರಗಿನಿಂದ ಆಮದಾಗಿರುವ ಚಾಕುಗಳೆಲ್ಲ ತುಂಬಾ ವಿರಳವಾಗಿದ್ದವು. ಕೆಲವೇ ಚಾಕುಗಳಿದ್ದದ್ದರಿಂದಾಗಿ ಎಲ್ಲರೂ ಅವುಗಳನ್ನು ಜಾಗರೂಕರಾಗಿ ಕಾಯ್ದುಕೊಂಡಿದ್ದರು ಮತ್ತು ಅದು ಎಲ್ಲಿ ಕಳೆದುಹೋಗುವುದೋ ಎಂದು ಸದಾ ಚಿಂತಿಸುತ್ತಿದ್ದರು. ಆ ಹುಡುಗನ ತಂದೆಗೆ ಈ ವಿಚಾರ ಚೆನ್ನಾಗಿ ತಿಳಿದಿತ್ತು.

ಅವನು ಅತ್ಯಂತ ಪ್ರಭಾವಶಾಲಿಯಾದ ಅಂಗಾಲ್ಲುಕ್‌ನನ್ನು ಹುಡುಕಲು ಶುರು ಮಾಡಿದಾಗ ತನ್ನಲ್ಲಿದ್ದ ಒಂದು ಚಾಕುವನ್ನು ತನ್ನ ಮನೆಯ ಕಿಟಕಿಯ ಅಡಿಯಲ್ಲಿನ ಭೂಮಿಯಲ್ಲಿ ಅಡಗಿಸಿಟ್ಟನು. ರಾತ್ರಿಯ ಹೊತ್ತಿನಲ್ಲಿ ಎಲ್ಲರೂ ಮಲಗಿದ್ದು ಯಾರೂ ನೋಡದೆ ಇರುವುದನ್ನು ಖಚಿತಪಡಿಸಿಕೊಂಡು ಮಣ್ಣನ್ನು ತೆಗೆದು ಚಾಕುವನ್ನು ಇಟ್ಟು ಪುನಃ ಮುಚ್ಚಿಬಿಟ್ಟನು. ಆ ಜಾಗವನ್ನು ನೋಡಿದರೆ ಮೊದಲಿನ ಹಾಗೆಯೇ ಇದ್ದು ಯಾರಿಗೂ ಕೂಡ ಅಲ್ಲಿ ಏನೋ ಹುದುಗಿರಬಹುದು ಎಂಬ ಸಂದೇಹವೇ ಬರಲಿಲ್ಲ. ತನ್ನ ಮಗನ ಭವಿಷ್ಯವನ್ನು ಸುಗಮಗೊಳಿಸಲು ಆ ತಂದೆ ಇಷ್ಟೆಲ್ಲ ಜಾಗರೂಕತೆಯನ್ನು ವಹಿಸಿದ್ದ.

ಇನ್ನು ಆ ಊರಿನಲ್ಲಿ ಅನೇಕ ಜನ 'ಅಂಗಾಲ್ಲುಕ್ಕಟ್' ಇದ್ದರು. ಅವರಲ್ಲಿ ಒಬ್ಬನನ್ನು ಎಲ್ಲರೂ ಅಂಗಾಲ್ಲುಕ್ ಎಂದು ಕರೆದರೂ ಆತನಲ್ಲಿ ಹೆಚ್ಚು ಶಕ್ತಿ ಇರಲಿಲ್ಲವೆಂದೂ, ಇತರರೆಲ್ಲರಿಗಿಂತಲೂ ಅತ್ಯಂತ ನಿಷ್ಪ್ರಯೋಜಕನೆಂದು ಎಲ್ಲರೂ ನಂಬಿದ್ದರು. ಅವನಿಗಿಂತಲೂ ಹೆಚ್ಚು ಶಕ್ತಿವಂತರಾದ ಅನೇಕ ಅಂಗಾಲ್ಲುಕ್ಕಟ್ಗಳು ಇರುವರೆಂದು ಎಲ್ಲರೂ ನಂಬಿದ್ದರು. (ಅಂಗಾಲ್ಲುಕ್ – ಏಕವಚನ; ಅಂಗಾಲ್ಲುಕ್ಕಟ್ – ಬಹುವಚನ)

ಹಿಂದೆ ಒಬ್ಬ ಅಂಗಾಲ್ಲುಕ್‌ನನ್ನು ಕಂಡು ಆತನಿಂದ ಯಾವುದೇ ಒಂದು ಮಾಂತ್ರಿಕ

ಕ್ರಿಯೆಯನ್ನು ಮಾಡಿಸಲು ಹೋಗುವಾಗ ಅವನಿಗೆ ಉಡುಗೊರೆಯನ್ನು (ದಕ್ಷಿಣೆಯನ್ನು) ಕೊಡಬೇಕಾಗಿತ್ತು. ಆ ಹುಡುಗನ ತಂದೆ ಅನುಕೂಲಸ್ಥನಾಗಿದ್ದರಿಂದ, ಹಣವಂತ ನಾಗಿಲ್ಲದಿದ್ದರೂ ಒಳ್ಳೆಯ ಬೇಟೆಗಾರನಾಗಿದ್ದರಿಂದ ಹೊಟ್ಟೆಪಾಡಿನ ಚಿಂತೆ ಅವನಿಗೆ ಇರಲಿಲ್ಲ. ಹಾಗಾಗಿ ಅವನು ಎಲ್ಲರಿಗಿಂತಲೂ ಅತ್ಯಂತ ಶಕ್ತಿಶಾಲಿಯೆಂದು ನಂಬಲಾಗಿದ್ದ ಒಬ್ಬ ಅಂಗಾಲ್ಕುಕ್‌ನ ಬಳಿ ಹೋಗಿ "ನಿಮ್ಗೋಸ್ಕರ ತಂದಿರೋ ಈ ದಕ್ಷಿಣೆನ ಒಪ್ಪಿಸ್ಕೊಳ್ಬೇಕು. ನಿಂ ಶಕ್ತಿ ಉಪ್ಯೋಗಿಸ್ಕೊಂಡು ನನ್ ಚಾಕು ಅದೆಲ್ಕಳ್ದೋಗಿದ್ಯೋ ಸ್ವಲ್ಪ ನೋಡಿ" ಅಂತ ಕೇಳಿಕೊಂಡ. ಆ ಅಂಗಾಲ್ಕುಕ್ ಪಠಣ ಶುರುಮಾಡಿ ಏನೇನೋ ಬಡ್ಬಡಾಯಿಸೋಕೆ ಪ್ರಾರಂಭಿಸಿದ. ಆದರೆ ಚಾಕು ಎಲ್ಲಿದೆ ಅಂತ ಅವನಿಗೆ ಗೊತ್ತಾಗಲೇ ಇಲ್ಲ. ಸರಿ ಅದಾದ ಮೇಲೆ ಆ ಹುಡುಗನ ತಂದೆ ಒಬ್ಬನಾದ ನಂತರ ಒಬ್ಬನಂತೆ ಅಂಗಾಲ್ಕುಕ್‌ನ ಬಳಿ ಹೋಗಿ ಅವರಿಗೆ ಕಾಣಿಕೆ ಒಪ್ಪಿಸಿ ಚಾಕುವನ್ನು ಹುಡುಕುವಂತೆ ಕೇಳಿಕೊಂಡ. ಆದರೆ ಯಾರಿಂದಲೂ ಕೂಡ ಅದು ಸಾಧ್ಯವಾಗಲಿಲ್ಲ. ಕಡೆಯಲ್ಲಿ ಏನೂ ಕೆಲಸಕ್ಕೆ ಬಾರದವನೆಂದು ತಿಳಿದಿದ್ದ ಆ ಒಬ್ಬ ಅಂಗಾಲ್ಕುಕ್ ಮಾತ್ರ ಉಳಿದಿದ್ದ. ಆ ತಂದೆಗೆ ಇದ್ದ ದೃಢವಾದ ನಂಬಿಕೆ ಏನೆಂದರೆ ಸೂಕ್ತನಾದ ಅಂಗಾಲ್ಕುಕ್ ಮಾತ್ರ ತನ್ನ ಮಗನನ್ನು ಉತ್ತಮ ಬೇಟೆಗಾರನಾಗಿ ಮಾಡಿ ಅವನ ಭವಿಷ್ಯವನ್ನು ಸುಗಮಗೊಳಿಸಬಹುದು ಎಂದು. ಆಗಿನ ಕಾಲದಲ್ಲಿ ನಮ್ಮ ಜನರಲ್ಲಿ ಇಂತಹ ನಂಬಿಕೆಗಳು ಬಹಳ ದೃಢವಾಗಿತ್ತು.

ಸರಿ, ಆ ಕೊನೆಯ ಅಂಗಾಲ್ಕುಕ್‌ನ ಬಳಿ ಆ ಹುಡುಗನ ತಂದೆ ಹೋಗಿ ಒಂದು ಸಣ್ಣ ಕಾಣಿಕೆಯನ್ನು ಕೊಟ್ಟು "ಏನ್ ಹೇಳೋದು! ಎಲ್ಲಾ ಅಂಗಾಲ್ಕುಟ್ಗಳನ್ನ ಕೇಳ್ಕೊಂಡ್ಬಂದೆ ನನ್ ಚಾಕು ಎಲ್ಲಿದೆ ಅಂತ. ಒಬ್ರಿಗೂನೂ ಹುಡುಕ್ಕೊಡೋಕೆ ಆಗ್ಲಿಲ್ಲ. ಅದೇನಾಗಿದ್ಯೋ ಅದಕ್ಕೆ! ನಿಮ್ಗೇನಾದ್ರೂ ಗೊತ್ತಾಗ್ತದ ಒಸಿ ನೋಡ್ರಲಾ!" "ಸರಿ ನೋಡ್ತೀನಿ" ಅಂತ ಮಾತ್ರ ಆ ಅಂಗಾಲ್ಕುಕ್ ಉತ್ತರಿಸಿದ. ಇತರ ಎಲ್ಲ ಅಂಗಾಲ್ಕುಟ್ಗಳಿಗೆ ದೊಡ್ಡ ಕಾಣಿಕೆಗಳನ್ನು ಕೊಟ್ಟು ಇವನಿಗೆ ಯಾವುದೋ ಬೇಕಾಬಿಟ್ಟಿಯಾದ ಕಾಣಿಕೆ ನೀಡಿ ಚಾಕುವನ್ನು ಹುಡುಕುವಂತೆ ಕೇಳಿಕೊಂಡ. ಅಂಗಾಲ್ಕುಕ್ ತನ್ನ ಕ್ರಿಯೆಗಳನ್ನು ಶುರುಮಾಡಿ ಆವಾಹನೆಯನ್ನು ಪ್ರಾರಂಭಿಸಿದ. ಇತರರು ಆಗ ಅವನ ಕ್ರಿಯೆಗಳಿಗೆ ಸಹಕರಿಸೋಕೆ ಬಂದರು. ಅವನು ತನ್ನ ಮೇಲೆ ಗುಟ್ ಪರ್ಕಾವನ್ನು (ಮಾಂತ್ರಿಕ ಕ್ರಿಯೆಗಳನ್ನು ಮಾಡುವಾಗ ಇದನ್ನು ಮೈಮೇಲೆ ಧರಿಸುವುದು ಇವರ ವಾಡಿಕೆ) ಹೊದ್ದುಕೊಂಡಿದ್ದ. ಸ್ವಲ್ಪ ಸಮಯದ ನಂತರ ಇವನು ತನ್ನನ್ನು ಮುಚ್ಚಿದ್ದ ಗುಟ್ ಪರ್ಕಾವನ್ನು ತೆಗೆದು ಹೇಳಿದ – "ಅಯ್ಯೋ! ನೀನು ಕಿಟಕಿ ಕೆಳ್ಗೆ ಮಣ್ಣಲ್ಲಿ ಮುಚ್ಚಿಟ್ಟಿದ್ದೀಯಲ್ಲ ಅಲ್ಲೇ ಹೋಗಿ ನಿನ್ ಚಾಕುನ ಮಣ್ಣಗ್ದು ತಗೊ. ಮತ್ತೆ ಕಳ್ಕೊಂಡೆ ಅಂತ ಗೋಳಾಡ್ಬೇಡ ಹೋಗು." ಕಡೆಗೂ ಆ ತಂದೆಗೆ ಹುದುಗಿದ್ದ ಚಾಕುವನ್ನು ಹುಡುಕುವ ಸಾಮರ್ಥ್ಯವಿದ್ದ ಅಂಗಾಲ್ಕುಕ್ ಸಿಕ್ಕಿದ. ಬಚ್ಚಿಡುವಾಗ ಇವನು ಅದನ್ನು ಕಂಡಿರಲಿಲ್ಲ ಎಂಬುದು ಆ ತಂದೆಗೆ ಚೆನ್ನಾಗಿ ತಿಳಿದಿತ್ತು. ತನ್ನ ಮಗನನ್ನು ಒಬ್ಬ ಒಳ್ಳೆಯ ಬೇಟೆಗಾರನಾಗಿ ಮಾಡುವ ಶಕ್ತಿಯಿದ್ದ ಅಂಗಾಲ್ಕುಕ್ ಕಡೆಗೂ ಸಿಕ್ಕಿದನಲ್ಲಾ ಎಂದು ಆ ತಂದೆಗೆ ಬಹಳ ನೆಮ್ಮದಿ ಸಂತೋಷವುಂಟಾಯಿತು. ನಂತರ ಖುದ್ದಾಗಿ ಮಾತನಾಡುವ

ವಿಷಯವೊಂದಿದೆ ಎಂದು ಆ ಅಂಗಾಲ್ಲುಕ್‌ನನ್ನು ಆ ದಿನ ರಾತ್ರಿ ಮನೆಗೆ ಊಟಕ್ಕೆ ಬರುವಂತೆ ಆಹ್ವಾನಿಸಿದ. ತನ್ನ ಹೆಂಡತಿಯನ್ನೂ ಜೊತೆಗೂಡಿಸಿಕೊಂಡು ಇವನೊಂದಿಗೆ ಮಾತನಾಡಬೇಕು ಎಂದುಕೊಂಡಿದ್ದ.

ಅವನನ್ನು ತನ್ನ ಮನೆಗೆ ಕರೆದುಕೊಂಡು ಬಂದ ನಂತರ ಆತನೊಡನೆ ಮಾತಿಗೆ ಪ್ರಾರಂಭಿಸಿದನು – "ಅಬ್ಬಾ! ನಿಮ್ಜೊತೆ ಇದ್ದೋರಲ್ಲೆಲ್ಲ ನೀವೊಬ್ರೇ ನೋಡೀ ನನ್ ಚಾಕು ಎಲ್ಲಿತ್ತು ಅಂತ ಪತ್ತೆ ಮಾಡಿದ್ದು! ನನ್ ಮಗ ಒಳ್ಳೇ ಬೇಟೆಗಾರ ಆಗ್ಬೇಕು ಅಂದ್ರೆ ಅವಂಗೆ ಒಬ್ರು ಅಂಗಾಲ್ಲುಕ್ ಮಾತ್ರ ಸಹಾಯ ಮಾಡ್ಬೋದು ಅಂತ ಅನ್ಕೊಂಡು ಈ ಥರಾ ಚಾಕುನ ಬಚ್ಚಿಟ್ಟಿಟ್ಟು ಯಾರಿಗೆ ಇಷ್ಟು ಶಕ್ತಿ ಇರುತ್ತೆ ಅಂತ ಪತ್ತೆ ಮಾಡೋಣಾ ಅಂತ ಹೀಗ್ಮಾಡ್ದೆ. ಅವ್ನು ನಮ್ಮೊಬ್ನೇ ಮಗ ಅವಂಗೆ ಯಾರೂ ಜೊತೆ ಇಲ್ಲ. ಅದ್ಕೆ ಹೀಗ್ಮಾಡ್ದೆ." ಆಗ ಸರಳ ವ್ಯಕ್ತಿಯಾಗಿದ್ದ ಆ ಅಂಗಾಲ್ಲುಕ್ ಕೇಳಿದ – "ನಿನ್ಮನಸ್ಸಲ್ಲಿ ಏನಿದೆ ಅದನ್ನ ಹೇಳು." ತಂದೆ ಉತ್ತರಿಸಿದ – "ನಿಮ್ ಶಕ್ತಿ ಉಪ್ಯೋಗಿಸ್ಕೊಂಡು ಏನಾದ್ರೂ ಮಾಡಿ – ಒಟ್ನಲ್ಲಿ ಅವ್ನು ದೊಡ್ಡೋನಾದ್ಮೇಲೆ ಬೇಟೆಗಾರ ಆಗಿ ನೆಮ್ದಿಯಾಗಿರೋ ಹಾಗಾದ್ರೆ ಸಾಕು." ಇದಕ್ಕೆ ಆ ಅಂಗಾಲ್ಲುಕ್ ಹೇಳಿದ "ಸರಿ! ನೀನ್ಹೇಳಿದ್ದನ್ನ ಮಾಡೋಣಂತೆ. ಇವತ್ತು ಎಲ್ಲ ಮಲಗಿ ಆದ್ಮೇಲೆ ನಿನ್ಮಗನ್ನ ಕಾಸ್ಗಿಕ್ಕಿಗೆ ಕರ್ಕೊಂಡು ಬರ್ತಿಯಾ? ಅಲ್ಲಿಗೆ ಬಂದಾಗ ನೀನೇನ್ಮಾಡ್ಬೇಕು ಅನ್ನೋದನ್ನ ನಾನ್ ಹೇಳ್ತಿನಿ..." ಹೀಗೆ ಮಾತನ್ನು ಮುಂದುವರೆಸಿದ.

ಅಂಗಾಲ್ಲುಕ್ ಮಾತನ್ನು ಮುಂದುವರೆಸಿದ "ನೀನು ಕಾಸ್ಗಿಕ್‌ನ ಬಾಗಿಲನ್ನು ದಾಟಿ ಬಂದಾಗ ಅಲ್ಲಿ ಟಪರ್ಟಾತ್ (ಕಡಲಾನೆಗಳ ತುಪ್ಪಟದಿಂದ ಮಾಡಿದ ಹಗ್ಗಗಳು) ಗಳಿರುತ್ತೆ. ಅವುನ್ನ ತಗೊಂಡು ನಿನ್ಮಗನ್ನ ಕಟ್ಬಿಡು." ಮಾತನ್ನು ಮುಂದುವರಿಸುತ್ತ: "ಅವನ ಕತ್ತಿಗೆ ಹಗ್ಗವನ್ನ ಕಟ್ಬಿಟ್ಟು ಎಳ್ಕೊಂಡು ನೀನು ಆ ಪೊಟರೆ ತನಕ ಬರ್ಬೇಕು. ಆಮೇಲೆ ಅವನ್ತಲೆ ಪೊಟರೆಯಿಂದ ಮುಂದೆ ಬಂದಾಗ ನಿನ್ನ ಚಾಕು ತಗೊಂಡು ಒಂದೇ ಏಟಲ್ಲಿ ಅವನ ತಲೆನ ಕತ್ತರಿಸ್ಬೇಕು. ಆ ರುಂಡವನ್ನ ತಗೊಂಡು ನೀನು ಬೆಂಕಿ ಗುಂಡಿ ಪಕ್ಕದಲ್ಲಿರೋ ನೆಲದಲ್ಲಿರೊ ಪೊಟರೆ ಒಳಗೆ ಹಾಕ್ಬೇಕು. ಇಷ್ಟನ್ನ ಮಾಡಿದ್ರೆ ನಿನ್ನ ಮಗ ಒಬ್ಬ ಒಳ್ಳೇ ಬೇಟೆಗಾರ ಆಗ್ತಾನೆ. ನೀನೇನಾದ್ರೂ ಅವನ ತಲೆನ ಕಡೀಲಿಲ್ಲ ಅಂದ್ರೆ ನಿನ್ನ ಕೈಯಾರೆ ಅವ್ನ ಭವಿಷ್ಯನ ಹಾಳ್ಮಾಡ್ದಂಗೆ. ತಿಳ್ಕೋ!" ಹೀಗೆ ಆ ತಂದೆಯೇನಾದರೂ ಮಮಕಾರಕ್ಕೆ ಒಳಗಾಗಿ ತನ್ನ ಮಗನ ತಲೆಯನ್ನು ಕತ್ತರಿಸದಿದ್ದರೆ ಆ ಮಗ ಉತ್ತಮ ಬೇಟೆಗಾರನಾಗದಂತೆ ತಡೆದ ಹೊಣೆ ಆತನದಾಗುತ್ತದೆ ಎಂದು ಎಚ್ಚರಿಸಿದನು. (ಕಾಸ್ಗಿಕ್ ಮನೆಯ ಒಳಗೆ ಪ್ರವೇಶಿಸುತ್ತಿದ್ದಂತೆ ನಮಗೆ ಮುಂದೆ ಒಂದು ಪೊಟರೆ ಕಾಣಿಸುತ್ತದೆ. ಅದಕ್ಕೂ ಒಳಗೆ ಭೂಮಿಯಲ್ಲಿ ಒಂದು ಗುಂಡಿಯ ಹಾಗಿದ್ದು ಅದನ್ನು ಬೆಂಕಿ ಗುಂಡಿ ಎಂದು ಕರೆಯುತ್ತಾರೆ. ಆ ಗುಂಡಿಯ ಸುತ್ತಲಿನ ಭೂಮಿಯ ಮೇಲೆಲ್ಲ ಮರದ ಸಣ್ಣ ಸಣ್ಣ ತುಂಡುಗಳನ್ನು ಹೊಟ್ಟನ್ನು ಹರಡಿರುತ್ತಾರೆ. ಆ ಪೊಟರೆಯ ತನಕ ಇವೆಲ್ಲವನ್ನು ಹರಡಿರುತ್ತಾರೆ. ಆ ಪೊಟರೆಯ ಮುಖಾಂತರ ಮುಂದೆ ಬಂದರೆ ನೆಲದಲ್ಲಿ ಇನ್ನೊಂದು ಹಳ್ಳವಿರುವುದೂ ಕಾಣಿಸುತ್ತದೆ.) (ಟಪರ್ಟಾತ್ – ಕಡಲಾನೆಯ ಚರ್ಮವನ್ನು ಚೆನ್ನಾಗಿ ಒಣಗಿಸಿ ಅದನ್ನು

ಸಮವಾಗಿ ಕತ್ತರಿಸುತ್ತ ಚರ್ಮವನ್ನು ಸುತ್ತಿ ಸುತ್ತಿ ನಿಲ್ಲಿಸದೆ ಒಂದು ಉದ್ದನೆಯ ಹಗ್ಗವಾಗುವ ತನಕ ಕತ್ತರಿಸುತ್ತಾ ಹೋಗುತ್ತಾರೆ.)

ಅಂದುಕೊಂಡಂತೆ ಆ ತಂದೆ ತನ್ನ ಮಗನನ್ನು ಅಂದೇ ರಾತ್ರಿ ಎಲ್ಲರೂ ಮಲಗಿದ ನಂತರ ಕಾಸ್ಗಿಕ್‌ಗೆ ಕರೆದುಕೊಂಡು ಬಂದನು. ಅಲ್ಲಿ ಅಂಗಾಲ್ಕುಕ್ ಆ ಮಗನನ್ನು ಹಗ್ಗದಲ್ಲಿ ಕಟ್ಟಿ ಅವನ ಕತ್ತಿನ ಸುತ್ತ ಹಗ್ಗವನ್ನು ಹಾಕಿ ಎಳೆದುಕೊಂಡು ಒಳಗಿನ ಪೊಟರೆಯ ತನಕ ಬಂದನು. ಅದರ ಮೂಲಕ ತಲೆಯನ್ನು ತೂರಿಸಿ ಆ ಹುಡುಗನ ತಂದೆಗೆ ಸಂಜ್ಞೆ ಮಾಡಿದನು. ಆತ ತನ್ನ ಚಾಕುವನ್ನು ಎತ್ತುತ್ತಿದ್ದಂತೆ ತನ್ನ ಕಣ್ಣೆದುರಿಗಿರುವ ಒಬ್ಬನೇ ಮಗನನ್ನು ನೋಡಿ ಮನಸ್ಸು ಕರಗಿ ಚಾಕುವನ್ನು ಬಿಟ್ಟುಬಿಟ್ಟನು. ಅವನಿಂದ ತನ್ನೊಬ್ಬನೇ ಮಗನ ತಲೆಯನ್ನು ಕಡೆಯಲಾಗಲಿಲ್ಲ. ಅವನು ತನ್ನ ಕೈ ಕೆಳಮಾಡುತ್ತಿದ್ದಂತೆ ಅಂಗಾಲ್ಕುಕ್ ನುಡಿದನು "ನಾನು ಆಗ್ಲೇ ಹೇಳಿದ್ದೆ. ನೀನು ನಾನ್ಹೇಳ್ದಂಗೆ ಮಾಡ್ಲಿಲ್ಲ ಅಂದ್ರೆ ಅವ್ನ ಭವಿಷ್ಯನ ಹಾಳ್ಮಾಡ್ದಂಗೆ ಅಂತ. ಇನ್ನ ನನ್ನಿಂದ ಏನೂ ಮಾಡೋಕಾಗೊಲ್ಲ. ಅವ್ನ ಕರ್ಕೊಂಡು ಹೋಗು." ಆಗ ತಾನು ಮಾಡಿದ ಕೆಲಸದ ಬಗ್ಗೆ ಆ ತಂದೆಗೆ ಅತೀವ ಪಶ್ಚಾತ್ತಾಪ ಉಂಟಾಯಿತು. ಮಮತೆಗೆ ಒಳಗಾಗಿ ತನ್ನ ಮಗನ ಭವಿಷ್ಯವನ್ನು ಹಾಳುಮಾಡಿದ ಪಾಪಪ್ರಜ್ಞೆ ಕಾಡತೊಡಗಿತು. ಅವನು ಮತ್ತೊಮ್ಮೆ ಆ ಅಂಗಾಲ್ಕುಕ್‌ನನ್ನು ತನ್ನ ಮನೆಗೆ ಔತಣಕ್ಕೆ ಕರೆದ. ಅಂಗಾಲ್ಕುಕ್ ಮನೆಗೆ ಬರುತ್ತಿದ್ದಂತೆ ಆತನ ಕಾಲಮೇಲೆ ಬಿದ್ದು ಮಾಡಿದ್ದು ತಪ್ಪಾಯಿತೆಂದು ಹೇಗಾದರೂ ಮಾಡಿ ತನ್ನ ಮಗನನ್ನು ಉದ್ಧರಿಸಬೇಕೆಂದು ಹಲುಬಿದ. ಇನ್ನ್ಯಾವುದೇ ಉಪಾಯವಿಲ್ಲವೇ ಎಂದು ವಿನಂತಿಸಿಕೊಂಡ. ಕಡೆಯಲ್ಲಿ ಅಂಗಾಲ್ಕುಕ್ ಹೇಳಿದ "ಸರಿ ನೀನು ನಿನ್ ಹೆಂಡ್ತಿ ಅವನ್ಗೋಸ್ಕರ ಮರುಗೋದಾಗ್ಲಿ, ದುಃಖಪಡೋದಾಗ್ಲಿ ಮಾಡೋದಿಲ್ಲ ಅಂತಂದ್ರೆ ನಾನು ಅವ್ನನ್ನ ಕಡಲಾನೆಯ ಮೂತ್ರಕೋಶಗಳ ಜೊತೆ ಕಳಿಸ್ತೀನಿ. ಅದೊಂದೇ ಇನ್ನು ಉಳ್ದಿರೋ ಉಪಾಯ." (ಬೇಟೆಯ ದಿನಗಳಲ್ಲಿ ತಾವು ಕೊಂದ ಕಡಲಾನೆಯ ಮೂತ್ರಕೋಶಗಳನ್ನು ತೆಗೆದು ಅವುಗಳಲ್ಲಿ ಗಾಳಿ ತುಂಬಿ ಒಣಗಿಸಿ ಇಟ್ಟಿರುತ್ತಿದ್ದರು. ಚಳಿಗಾಲದಲ್ಲಿ ಒಂದು ನಿಗದಿತ ಮಾಸದಲ್ಲಿ ಹೊಸ ವರ್ಷ ಇಲ್ಲವೇ ಕ್ರಿಸ್ಮಸ್ ಆಚರಿಸೋ ಥರದಲ್ಲಿ ಯುಪಿಕ್ ಜನಾಂಗದಲ್ಲೂ ಒಂದು ಸಂಪ್ರದಾಯವಿದೆ. ಆಗ ಆ ಎಲ್ಲ ಉಬ್ಬಿದ ಮೂತ್ರಕೋಶಗಳನ್ನು ತೇಲಿಬಿಡುತ್ತಿದ್ದರು. ಇದಕ್ಕೆ ಮೂತ್ರಕೋಶದ ಹಬ್ಬ [Bladder Festival] ಎಂದೇ ಹೆಸರು).

ಹೀಗೆ ಅಂಗಾಲ್ಕುಕ್ ಅವರು ದುಃಖಿಸದೆ, ಕಳವಳಪಡದೆ ಇರುವುದಾದರೆ ಕೋಶಗಳ ಜೊತೆ ಅವನನ್ನು ತೇಲಿಬಿಡುವುದಾಗಿ ಹೇಳಿದನು. ಅವರು ಒಂದು ವರ್ಷದ ಕಾಲ ಅವನನ್ನು ಕಾಣಲು ಸಾಧ್ಯವಿಲ್ಲವೆಂದೂ ತಿಳಿಸಿದನು. ಈ ಮಾತಿಗೆ ಆ ಹುಡುಗನ ತಂದೆ ತಕ್ಷಣ ಒಪ್ಪಿ ಅವನಿಗೆ ಅನುಮತಿಯನ್ನೂ ಕೊಟ್ಟನು. ನಿಗದಿಯಾದ ತಿಂಗಳು ಬರುತ್ತಿದ್ದಂತೆ ತಮ್ಮ ಬಳಿ ಕಲೆ ಹಾಕಿದ್ದ ಮೂತ್ರಕೋಶಗಳನ್ನು ನೀರಿನಿಂದ ತುಂಬಿಸಿ ಉಬ್ಬಿಸಿ ಕಾಸ್ಗಿಕ್ಕಿನ ಹಿಂಬಾಗಿಲಿನಲ್ಲಿ ನೇತುಹಾಕಿದರು. ಪ್ರತಿಯೊಬ್ಬ ಬೇಟೆಗಾರನೂ ತನ್ನ ಬಳಿಯಿದ್ದ ಕೋಶಗಳನ್ನೆಲ್ಲ ಗಂಟುಕಟ್ಟಿ ಅಲ್ಲಿ ಹಾಕಿದರು. ಯಶಸ್ವಿಯಾದ ಬೇಟೆಗಾರರ ಬಳಿ ಹಲವು ಕಡಲಾನೆಗಳ

ಮೂತ್ರಕೋಶಗಳಿದ್ದು ಅಷ್ಟೇನೂ ಉತ್ತಮರಲ್ಲದ ಬೇಟೆಗಾರರ ಬಳಿ ಕೆಲವಾರು ಇರುತ್ತಿದ್ದವು. ಹೀಗೆ ಅವುಗಳನ್ನು ತೇಲಿ ಬಿಡುವುದರಿಂದ ತಾವು ಕೊಂದ ಕಡಲಾನೆಯ ಜೀವಗಳನ್ನು ಪುನಃ ಸಮುದ್ರಕ್ಕೆ ಸೇರಿಸುತ್ತೇವೆಂದು ಅವರು ನಂಬಿದ್ದರು. ಕಡಲಾನೆಯನ್ನು ಹಿಡಿದಾಗ ಅವುಗಳ ಜೀವ ಅವುಗಳ ಮೂತ್ರಪಿಂಡದಲ್ಲಿ ಹೋಗಿ ನೆಲೆಸುತ್ತವೆ. ಹಾಗಾಗಿ ಅವುಗಳ ಪ್ರಾಣ ಹೋಗಿರುವುದಿಲ್ಲ. ಅವುಗಳನ್ನು ಸಮುದ್ರದಲ್ಲಿ ತೇಲಿಬಿಟ್ಟಾಗ ಅವು ಪುನಃ ಸ್ವರೂಪವನ್ನು ಪಡೆಯುತ್ತವೆ ಎಂಬುದು ಅವರ ನಂಬಿಕೆ. ಹೊಸ ವರುಷದಲ್ಲಿ ಎಲ್ಲರೂ ಬೇಟೆಗೆ ಹೋಗುವಾಗ ತಾವು ಹಿಂದೆ ಕೊಂದ ಕಡಲಾನೆಗಳೇ ಮತ್ತೊಮ್ಮೆ ಅವರಿಗೆ ಬೇಟೆಯಾಗಿ ಸಿಗುತ್ತವೆ ಎಂದೂ ನಂಬಿದ್ದರು. ಹೀಗಾಗಿ ಅವರು ಎಂದೂ ಕಡಲಾನೆಯ ಜೀವವನ್ನು ಶಾಶ್ವತವಾಗಿ ತೆಗೆಯುತ್ತಿದ್ದೇವೆ ಎಂದು ತಿಳಿಯಲಿಲ್ಲ.

ತೇವಗೊಂಡು ಉಬ್ಬಿದ ಮೂತ್ರಕೋಶಗಳವು. ಅವುಗಳನ್ನು ತೇಲಿಬಿಡುವ ಸಮಯ ಬಂದಾಗ ಹೆಪ್ಪುಗಟ್ಟಿದ ಹಿಮದಲ್ಲಿ ಒಂದು ರಂಧ್ರವನ್ನು ಮಾಡಿ ಅಲ್ಲಿಂದ ನದಿಯ ತುದಿಯವರೆವಿಗೂ ಒಂದು ದಾರಿಯನ್ನು ಕೊರೆಯುತ್ತಿದ್ದರು. ಆಮೇಲೆ ಆ ಎಲ್ಲ ಕೋಶಗಳಿಂದ ಗಾಳಿಯನ್ನು ತೆಗೆದು ಒಂದಿಬ್ಬರು ಎಲ್ಲ ಮೂತ್ರಕೋಶಗಳನ್ನು ತೆಗೆದುಕೊಂಡು ಬಂದು ಒಂದೊಂದಾಗಿ ಆ ತೂತಿನೊಳಗೆ ತೇಲಿಬಿಡುತ್ತಿದ್ದರು. ಅವುಗಳು ಅದರಲ್ಲಿ ಮುಳುಗುತ್ತಿದ್ದಂತೆ ಕಡಲಾನೆಗಳ ಜೀವ ಮತ್ತೆ ಮರಳುತ್ತದೆ. ಈ ನದಿಯ ಮೂಲಕ ಅವು ಕಡಲನ್ನು ಸೇರಿದವು ಎಂದು ಎಲ್ಲರೂ ತಂತಮ್ಮ ಮನೆಗಳಿಗೆ ಹೊರಟು ಹೋಗುತ್ತಿದ್ದರು. ಈ ರೀತಿ ಆ ಹುಡುಗನನ್ನೂ ಕೂಡ ಮೂತ್ರಕೋಶಗಳ ಜೊತೆಯಲ್ಲಿ ಕಳುಹಿಸಿದರೆ ಅವನ ಭವಿಷ್ಯ ಸುಗಮವಾಗುವುದೆಂದು ಅಂಗಾಲ್ಕುಕ್ ಹೇಳಿದನು. ಅದಕ್ಕೋಸ್ಕರವಾಗಿ ಒಬ್ಬ ಗುರುವನ್ನೂ ಕೂಡ ಆ ಹುಡುಗನಿಗೆ ನೇಮಿಸಿದ್ದೇನೆಂದನು. ಒಡನೆಯೆ ತಂದೆ ಒಪ್ಪಿ ಅದನ್ನು ನೆರವೇರಿಸುವಂತೆ ಕೇಳಿಕೊಂಡನು.

ಎಲ್ಲ ಮೂತ್ರಕೋಶಗಳಲ್ಲಿನ ಗಾಳಿಯನ್ನು ತೆಗೆದ ನಂತರ ಇಬ್ಬರು ಅವುಗಳನ್ನು ನದಿಯಲ್ಲಿ ತೇಲಿಬಿಡಲು ಹೊರಟಾಗ ಹುಡುಗನನ್ನು ಕರೆದುಕೊಂಡು ಅಂಗಾಲ್ಕುಕ್ ಕೂಡ ಅವರ ಹಿಂದೆ ಹೋದನು. ಕೋಶಗಳನ್ನು ರಂಧ್ರದ ಒಳಗೆ ಬಿಟ್ಟ ನಂತರ ಆ ಇಬ್ಬರ ಕಡೆಗೆ ತಿರುಗಿ "ನೀವು ಹೋಗಿ. ನಾನು ಸ್ವಲ್ಪದರಲ್ಲಿ ಬರ್ತೀನಿ" ಎಂದು ಹೇಳಿದನು. ಅವರಿಬ್ಬರೂ ಕಾಸ್ಗಿಕ್ಕಿಗೆ ಹಿಂತಿರುಗಿದರು. ಸ್ವಲ್ಪ ಹೊತ್ತಿನ ನಂತರ ಅಂಗಾಲ್ಕುಕ್ ಒಬ್ಬನೇ ಮರಳಿದನು. ಅವನ ಜೊತೆಗಿದ್ದ ಹುಡುಗ ಹಿಂದಿರುಗಲಿಲ್ಲ.

ಆ ಹುಡುಗ ನದಿಯಲ್ಲಿ ಮಾಡಿದ್ದ ಆ ತೂತಿನ ಮುಖಾಂತರ ಇಳಿಯುತ್ತಿದ್ದಂತೆಯೇ ಅವನಲ್ಲಿ ಏನೋ ವಿಚಿತ್ರವಾದ ಅನುಭವವುಂಟಾಯಿತು, ವಿದ್ಯುತ್ಕಾಂತಿ ಅವನಲ್ಲಿ ಪ್ರವಹಿಸಿದಂತೆ. ಅವನು ಕಣ್ಣು ಬಿಟ್ಟು ಜಾಗೃತನಾದಾಗ ಇತರರೊಂದಿಗೆ ಅವನು ಪ್ರವಹಿಸುತ್ತಿದ್ದನು. ಅವನ ಜೊತೆಗಾರರು ತಾವು ತಮ್ಮ ಮನೆಗಳಿಗೆ ಹೋಗುತ್ತಿದ್ದೇವೆಂದು ಹೇಳಿದರು. ಅವರೆಲ್ಲ ತಮ್ಮ ಊರಿಗೆ ತಲುಪುತ್ತಿದ್ದಂತೆ ಅಲ್ಲಿದ್ದ ಕಾಸ್ಗಿಕ್ಕಿಗೆ ಹೋದರು. ಅದರ ಒಳಗೆ ಕೆಲಸ ಮಾಡಲು ಮತ್ತು ಮಲಗಲು ಎತ್ತರದ ದಿಬ್ಬಗಳಿದ್ದವು – ಆ

ಹುಡುಗನ ಸ್ವಂತ ಊರಿನಲ್ಲಿದ್ದಂತೆ. ಕೆಲವರು ಕೆಳಗೆ ನೆಲದ ಮೇಲೆ ಕುಳಿತಿದ್ದರು. ಅವರು ಯಾವಾಗಲೂ ಅಲ್ಲಿ ಇಲ್ಲಿ ವಾಲಾಡುತ್ತ ತಮ್ಮ ಮೈ ತಿಕ್ಕಿಕೊಳ್ಳುತ್ತಿದ್ದರು. ಅವರ ಮೈಮೇಲೆ ಹುಣ್ಣುಗಳಿದ್ದವು.

ಅದಕ್ಕಿಂತ ಕೊಂಚ ಎತ್ತರ ಸ್ತರದಲ್ಲಿ ಇನ್ನು ಕೆಲವರು ಕುಳಿತಿದ್ದರು. ಅವರ ಚಿಕ್ಕದಾದ ಗುಂಡುಮುಖದಲ್ಲಿ ದೊಡ್ಡ ಗುಂಡಗಿನ ಕಣ್ಣುಗಳು ಎದ್ದು ಕಾಣುತ್ತಿದ್ದವು. ಕಡೆಯದಾಗಿ ಅತ್ಯಂತ ಎತ್ತರದ ಸ್ಥಳದಲ್ಲಿ ಕೆಲವರು ಕುಳಿತಿದ್ದರು. ಅವರೆಲ್ಲರೂ ಗಂಭೀರರಾಗಿ ತೇಜೋವಂತರಾಗಿದ್ದರು. ಅವನ ಜೊತೆ ಪ್ರಯಾಣ ಮಾಡುವಾಗ ಒಬ್ಬ ವ್ಯಕ್ತಿ ತಾನು ಅವನೊಂದಿಗೆ ಇರುವುದಾಗಿಯೂ ಯಾವಾಗಲೂ ಅವನನ್ನು ನೋಡಿಕೊಳ್ಳುವುದಾಗಿಯೂ ಹೇಳಿದ್ದನು. ಆ ಎತ್ತರದಲ್ಲಿ ಕುಳಿತಿದ್ದವರಲ್ಲಿ ಒಬ್ಬ ಆ ಹುಡುಗ ಇಡೀ ಚಳಿಗಾಲವನ್ನು ತನ್ನ ಪಕ್ಕದಲ್ಲಿ ಕಳೆಯಬಹುದು ಎಂದನು.

ಇಡೀ ಚಳಿಗಾಲದಲ್ಲಿ ಕೆಳಗೆ ನೆಲದ ಮೇಲಿದ್ದವರು ಪದೇ ಪದೇ ಆಚೆ ಹೋಗಿ ತಾಜಾ ಮೀನನ್ನೋ ಇಲ್ಲವೇ ಹೆಪ್ಪುಗಟ್ಟಿದ ಮೀನನ್ನೋ ತರುತ್ತಿದ್ದರು. ಅವನ್ನು ಎಲ್ಲರೂ ತಿನ್ನುತ್ತಿದ್ದರು. ಸ್ವಲ್ಪ ಮೇಲ್ಭಾಗದಲ್ಲಿದ್ದವರೂ ಕೂಡ ಆಗಾಗ ಕಾಸ್ಗಿಕ್ಕಿನಿಂದ ಹೊರ ಹೋಗಿ ಬರುತ್ತಿದ್ದರು. ಆದರೆ ಎಲ್ಲರಿಗಿಂತಲೂ ಮೇಲಿನ ಹಂತದಲ್ಲಿ ಕುಳಿತಿದ್ದವರು ಕಾಸ್ಗಿಕ್ಕಿನಿಂದ ಆಚೆ ಹೋಗುತ್ತಿರಲಿಲ್ಲ. ಅವರಿಗೆ ತಿನ್ನಲು ಎಲ್ಲವನ್ನೂ ಅವರ ಸಂಗಡಿಗರೇ ತರುತ್ತಿದ್ದರು. ಆ ಹುಡುಗನಿಗೆ ಬಹು ಬೇಗ ತಿಳಿಯಿತು. ಕೆಳಗಿನ ನೆಲದ ಮೇಲಿದ್ದವರೆಲ್ಲರೂ ಚುಕ್ಕಿ ನೀರಾನೆಗಳು (Spotted Seals) ಎಂದು. ಸಣ್ಣ ಮುಖದ ದುಂಡು ಕಣ್ಣಿನವರು ಕೂದಲ ನೀರಾನೆಗಳು (Hair Seals) ಎಂದು. ಮತ್ತು ಮೇಲಿನ ಸ್ತರದಲ್ಲಿದ್ದವರು ಗಡ್ಡದ ನೀರಾನೆಗಳೆಂದು (Bearded Seals). ಆದರೆ ಅವನ ಕಣ್ಣಿಗೆ ಮಾತ್ರ ಅವರೆಲ್ಲರೂ ಮಾನವಾಕೃತಿಯಂತೇ ಕಾಣುತ್ತಿದ್ದರು.

ಅವರು ಹೀಗೆ ಚಳಿಗಾಲದ ಕೆಟ್ಟ ಹವಾಮಾನದಲ್ಲಿ ಆ ಕಾಸ್ಗಿಕ್ಕಿನಲ್ಲಿ ಕುಳಿತಿರುವಾಗ ಯಾರೋ ಒಬ್ಬ ಅವರ ಮೇಲ್ಛಾವಣಿಯ ಮೇಲೆ ಬಂದು ಅದನ್ನು ಶುಭ್ರಗೊಳಿಸಿದ. ಆ ಹುಡುಗ ನೋಡಿದಾಗ ಆ ವ್ಯಕ್ತಿ ತನ್ನ ಮುಖವನ್ನು ಮೇಲ್ಛಾವಣಿಯ ಒಳಗೆ ತೂರಿಸಿದ. ಆ ಹುಡುಗನಿಗೆ ಈ ವ್ಯಕ್ತಿ ತನ್ನ ಊರಿನವನೇ ಎಂದು ತಿಳಿಯಿತು. ಆ ಹುಡುಗ ನೋಡುತ್ತಿದ್ದಂತೆ ಆ ವ್ಯಕ್ತಿ ಮುಖವನ್ನು ತೂರಿಸಿ ಏನನ್ನೋ ಕುಡಿದವನಂತೆ ಮಾಡಿ ಆಹ್ಲಾದ ಹೊಂದಿ ಹೊರಟುಹೋದ. ಆ ಹುಡುಗನಿಗೆ ಆನಂತರ ತಿಳಿದ ವಿಷಯವೇನೆಂದರೆ ಒಂದು ಅತಿಯಾದ ಚಳಿಗಾಲದ ದಿನ ತನ್ನ ಊರಿನವನೊಬ್ಬ ನೀರನ್ನು ಹುಡುಕುತ್ತ ಅವನಿದ್ದಲ್ಲಿಗೆ ಬಂದು ಅಲ್ಲಿ ಸಣ್ಣದಾಗಿ ಅಗೆದು ನೀರನ್ನು ಕುಡಿದಿದ್ದನು ಎಂದು. ಆಗ ಅವನ ಗುರು ಹೇಳುತ್ತಿದ್ದನು "ನೋಡಿದ್ಯಾ? ಅವ್ನು ನಿನ್ನ ಊರಿನವನು. ಮುಂದೆ ನೀನು ನಿನ್ನೂರಿಗೆ ಹೋದ್ಮೇಲೆ ನಿನ್ಪಾಡಿಗೆ ನೀನು ಬದುಕೋವಾಗ ಇದೇ ಥರ ಹುಷಾರಾಗಿ ನೀರು ಕುಡಿಯೋಕೆ ಒಂದು ಗುಂಡಿಯನ್ನ ತೋಡಿ ಬಾಯಾರಿಕೆ ಆದಾಗ ನೀರು ಕುಡೀಬೇಕು. ಹಾಗ್ಮಾಡಿದ್ರೆ ನಾವೂ ನಿನ್ನ ನೋಡ್ಬಹುದು."

ಸ್ವಲ್ಪ ಹೊತ್ತಿನ ನಂತರ ಇನ್ನೊಬ್ಬನು ಬಂದು ಅವರಿದ್ದ ಕಾಸ್ಗಿಕ್ಕಿನ ಕಿಟಿಕಿಗಳನ್ನು ಸ್ವಚ್ಛಗೊಳಿಸಿ ಹೋದನು. ಆ ಹುಡುಗ ಕೆಳಗಿನಿಂದ ನೋಡುತ್ತಿರಲು ಗುರು ಹೇಳಿದ "ನೀನು ಮನೆಗೆ ಹಿಂದಿರುಗಿದ ನಂತರ ನಿಮ್ಮಲ್ಲಿ ಕೆಲವರು ಮಂಜುಗಡ್ಡೆಯಲ್ಲಿ ಮಾಡೋ ತೂತುಗಳನ್ನ ಬೇಕಾಬಿಟ್ಟಿ ಮನಸ್ಸಿಗೆ ಬಂದಂತೆ ಸ್ವಚ್ಛ ಮಾಡ್ತೀರ. ಅವ್ನು ನೋಡು ಮನಸ್ಸೇ ಇಲ್ದಿರ ಏನೋ ಕೆಲ್ಸ ಮಾಡಿ ಮುಗಿಸ್ಬೇಕು ಅನ್ನೋ ಹಾಗೆ ಮಾಡ್ಬಿಟ್ಟು ಹೋದ. ನಮ್ಮ ಕಡೆ ಕಣ್ಣು ಹಾಯಿಸಲೂ ಇಲ್ಲ. ಅವನಿಗೆ ಉತ್ಸಾಹವಿಲ್ಲ, ಮತ್ತೆ ಬೇಟೆಯಾಡಬೇಕು ಅನ್ನೋ ಮನಸ್ಸೇ ಇಲ್ಲ."

ಒಮ್ಮೊಮ್ಮೆ ಹಾಗೆ ಕುಳಿತಿರುವಾಗ ಅವನಿಗೆ ಹಿಮದ ಗೆಡ್ಡೆಗಳು ಬೀಳುವ ಸದ್ದು ಕೇಳಿಸುತ್ತಿತ್ತು. ಅವು ಕಾಸ್ಗಿಕ್ ಮೇಲೆ ಬಿದ್ದು ನಿರ್ದಿಷ್ಟವಾದ ಪಟಪಟ ಸದ್ದು ಮಾಡುತ್ತಿದ್ದವು. ಹಿಮವನ್ನ ಕೆದಕಿ ಚೆಲ್ಲುವಾಗ ಅವು ತಮ್ಮದೇ ಆದ ಒಂದು ಶಬ್ದವನ್ನು ಮಾಡುತ್ತವಲ್ಲ? ಹಾಗೆ! ಅವನಿಗೆ ತಾರಸಿಯ ಮೇಲೆ ಹಿಮದ ಉಂಡೆಗಳು ಬೀಳುವ ಸದ್ದು ಕೇಳಿಸುತ್ತಿತ್ತು. ಒಮ್ಮೊಮ್ಮೆ ಅವು ಕಿಟಕಿಯ ಮೇಲೂ ಬೀಳುತ್ತಿದ್ದವು.

ಆಗ ಆ ಹುಡುಗನ ರಕ್ಷಕ ಹೇಳುತ್ತಿದ್ದ "ನೀನು ನಿನ್ನ ಮನೆಗೆ ಹೋದ ನಂತರ ತೀವ್ರವಾದ ಚಳಿಯಿರುವ ದಿನ ಇನ್ನೊಬ್ಬರ ಮನೆಯ ಮುಂದಿನ ಹಿಮವನ್ನ ತೆಗೆದು ದಾರಿ ಮಾಡೋಕೆ ಬೇಜಾರಾಗ್ಬಹುದು. ಆದರೆ ಮೇಲೆ ಕೆಲಸ ಮಾಡ್ತಾಯಿರೋ ನಿನ್ನ ಊರಿನವನನ್ನೇ ನೋಡು. ಅವನು ಬೇರೆಯವರಂತೆ ಉದಾಸೀನದಿಂದ ಇರುವುದನ್ನು ಬಿಟ್ಟು ಬಾಗಿಲುಗಳ ಮುಂದಿನ ಹಿಮವನ್ನ ತೆಗೀತಾಯಿದ್ದಾನೆ. ಹಾಗೆ ಮಾಡ್ತಾ ಹಿಮವನ್ನ ಎತ್ತಿ ಹಾಕೋವಾಗ ಅದು ನಮ್ಮ ಕಾಸ್ಗಿಕ್ ಛಾವಣಿ ಮೇಲೆ ಬಂದು ಬೀಳ್ತಿದೆ. ಅವ್ನು ಎಷ್ಟು ಹುಷಾರಾಗಿ ದಾರಿಯನ್ನ ಸಮ ಮಾಡ್ತಿದಾನೆ ನೋಡು. ಇದೇ ದಾರಿಯಲ್ಲಿ ಅವ್ನು ವಸಂತಕಾಲ ಬಂದಾಗ ನಡ್ಕೊಂಡು ಬಂದು ನಮ್ಮ ಬೇಟೆಯಾಡೋದು. ಹಾಗೆ ಬರೋವಾಗ ಅವನ ದಾರಿಗೆ ಅಡ್ಡವಾಗಿ ಬರಬಹುದಿದ್ದ ಹೆಂಟೆಗಳೇ ಈಗ ಮೇಲೆ ಬೀಳ್ತಿರೋದು. ದಾರಿಯನ್ನ ಸರಿ ಮಾಡೋವಾಗ ಒಮ್ಮೊಮ್ಮೆ ಬೇಜವಾಬ್ದಾರಿತನ ಬಂದ್ಬಿಡ್ಬಹುದು. ಆದ್ರೆ ನೆನಪಿಟ್ಕೋ, ನಿನ್ನೂರಿನೋರು ಯಾರು ದಾರಿಯನ್ನ ಸಮ ಮಾಡ್ತಾಯಿದ್ದಾರೋ ಅವ್ರು ನಿಜವಾಗಿ ನಮಗೆ ದಾರಿಯನ್ನ ಮಾಡಿಕೊಡ್ತಿರೋದು ನಿಮ್ಹತ್ರ ಮರಳಿ ಬರೋದಕ್ಕೆ."

ಒಮ್ಮೊಮ್ಮೆ ಆ ಹುಡುಗನಿಗೆ ಎಲ್ಲೋ ದೂರದಲ್ಲಿ ಸಣ್ಣ ಶಬ್ದ ಕೇಳಿಬರುತ್ತಿತ್ತು. ಯಾರೋ ದಾರಿಯಲ್ಲಿದ್ದ ಹಿಮದ ಗುಡ್ಡೆಗಳನ್ನ ತೆಗೆದು ಸಮ ಮಾಡುತ್ತಿದ್ದರು. ಆದರೆ ಅವರು ಹಿಮವನ್ನ ಎತ್ತಿ ಹಾಕುವಾಗಿನ ಶಬ್ದ ಮಾತ್ರ ಅಷ್ಟು ಸರಿಯಾಗಿ ಕೇಳಿಸುತ್ತಿರಲಿಲ್ಲ. ಆಗ ಆ ಹುಡುಗನ ಗುರು ಹೇಳುತ್ತಿದ್ದ "ಇವನು ಮಾಡ್ತಿರೋ ಕೆಲ್ಸದ ಮೇಲೆ ಗಮನ ಇಡು. ಒಂದೊಂದ್ಸಾರ್ತಿ ನೀನು ಮನಸ್ಸು ಬಂದ ಹಾಗೆ ಹಿಮವನ್ನ ತೆಗೆಯೋಕೆ ಹೋಗಬಹುದು. ಪ್ರಾಣಿಗಳ ಬರುವಿನ ದಾರಿಯ ಬಗ್ಗೆ ಯೋಚಿಸದೇನೇ ಇರಬಹುದು. ಈಗ ನೀನು ಮೇಲೆ ಹಿಮವನ್ನ ತೆಗೀತಾಯಿರೋ ಶಬ್ದ ಕೇಳಿಸ್ಕೊತಿದೀಯಲ್ಲ? ಅವನಿಗೆ

ಪ್ರಾಣಿಗಳು ಬರೋ ದಾರಿ ಬಗ್ಗೆ ಆಗಲಿ ಅದನ್ನ ಸರಿ ಮಾಡೋ ಬಗ್ಗೆ ಆಗಲಿ ಯೋಚನೇನೇ ಇಲ್ಲ. ಸುಮ್ನೆ ಹಿಮ ತೆಗೀತಿದಾನೆ ಅಷ್ಟೆ. ಅವನು ತೆಗೀತಿರೋ ಹಿಮ ಅವನ ಬಳಿ ಬರಬೇಕು ಅಂತಿರೋ ಪ್ರಾಣಿಗಳ ದಾರಿಗೆ ಅಡ್ಡ ಮಾಡುತ್ತೆ." ಹೀಗೆ ಅವನ ಗುರು ಆ ಹುಡುಗನಿಗೆ ಸತತವಾಗಿ ಶಿಕ್ಷಣ ನೀಡುತ್ತಿದ್ದನು.

ಒಮ್ಮೊಮ್ಮೆ ಅಲ್ಲಿ ಕುಳಿತಿರುವಾಗ ಒಂದು ಬಟ್ಟಲಿನಲ್ಲಿ ಅಕುಟಾಕ್ (ಐಸ್ ಕ್ರೀಂನಂತಹ ಒಂದು ಸವಿಯಾದ ತಿನಿಸು) ಬಾಗಿಲ ಮೂಲಕ ಬಂದು ಅವರಿಬ್ಬರ ನಡುವೆ ಬಂದು ನಿಲ್ಲುತ್ತಿತ್ತು. ಆಗ ಆ ಗುರು ಹೇಳುತ್ತಿದ್ದ "ನಿನ್ನಪ್ಪ ಅಮ್ಮ ನಮಗೋಸ್ಕರ ಊಟ ಕಳಿಸಿದ್ದಾರೆ. ಬಾ ಇಬ್ರೂ ಸೇರಿ ಅಕುಟಾಕ್ ತಿನ್ನೋಣ." ನಂತರ ಆ ಬಾಲಕನಿಗೆ ತಿಳಿದದ್ದು ಏನೆಂದರೆ ಆತನ ತಂದೆತಾಯಿಯರು ಅಂಗಾಲ್ಲುಕ್ಕಿಗೆ ಅಕುಟಾಕನ್ನು ಅರ್ಪಿಸುತ್ತಿದ್ದಾಗ ಆ ಅಂಗಾಲ್ಲುಕ್ ತಾನು ಸೇವಿಸಿದ ಅಕುಟಾಕನ್ನು ನಿಜವಾಗಿಯೂ ಇವರೊಂದಿಗೆ ಹಂಚಿಕೊಳ್ಳುತ್ತಿದ್ದನು. ಅಕುಟಾಕನ್ನು ಸೇವಿಸುವ ಮೊದಲು ಅದನ್ನು ಇವರಿಗೆ ಅರ್ಪಣೆ ಮಾಡುತ್ತಿದ್ದನು. ನಂತರ ಅಕುಟಾಕನ್ನು ತಿನ್ನುವ ಮೊದಲು ಮೇಲಕ್ಕೆ ಎಸೆದಾಗ ಅದು ಇವರಿಗೇ ತಲುಪುತ್ತಿತ್ತು. ಆ ಗುರು ಸತತವಾಗಿ ಬಾಲಕನಿಗೆ ತನ್ನ ಊರಿಗೆ ಹಿಂತಿರುಗಿ ತನ್ನ ಜನರೊಂದಿಗೆ ಸೇರಿದ ಮೇಲೆ ಹೇಗೆ ಉಪಯುಕ್ತವಾದ ಬಾಳ್ವೆಯನ್ನು ನಡೆಸಬಹುದು ಎಂಬುದನ್ನು ವಿವರಿಸುತ್ತಿದ್ದನು.

ಕಾಲ ಕಳೆಯುತ್ತಿದ್ದಂತೆ ಹೊರಗೆ ಬೆಳಕಿನ ಪ್ರಮಾಣ ಹೆಚ್ಚಾಗತೊಡಗಿತು. ಅಲ್ಲಿರುತ್ತಿದ್ದ ಕೆಲವರು ಹೊರಗೆ ಹೋದ ಮೇಲೆ ಮತ್ತೆ ಹಿಂತಿರುಗುತ್ತಿರಲಿಲ್ಲ. ಆಗ ಆ ಹುಡುಗನ ಆತಿಥೇಯ ವಿವರಿಸುತ್ತಿದ್ದ "ದಿನದ ಪ್ರಮಾಣ ಜಾಸ್ತಿಯಾಗ್ತಿದೆ. ನಿನ್ನ ಸಂಬಂಧಿಕರು ಖಂಡಿತ ಕಡಲ ಕಡೆ ಮತ್ತೆ ಹೊರಡೋಕೆ ಶುರು ಮಾಡಿದ್ದಾರೆ. ಅಲ್ಲಿ ಅವ್ರು ತಮ್ಮ ಬೇಟೆಯ ನೈಪುಣ್ಯವನ್ನ ತೋರಿಸ್ತಾರೆ. ಸರಿಯಾದ ಸಮಯ ಬಂದಾಗ ನೀನು ಮತ್ತೆ ನಾನು ಕೂಡ ನನಗೆ ಆಯ್ಕೆಯಾದ ಆತಿಥೇಯನ ಹತ್ತಿರ ಹೋಗೋಣಂತೆ. ನಾನು ಪ್ರತೀ ವರ್ಷ ಅವನ ಬಳಿಯೇ ಹೋಗ್ತೀನಿ. ಯಾಕಂದ್ರೆ ಅವನು ನನ್ನ ಇರುವಿಕೆಯನ್ನ ಬಹಳ ಗೌರವದಿಂದ ಕಾಣ್ತಾನೆ ಮತ್ತೆ ನನ್ನನ್ನ ತುಂಬಾ ಹೆದರಿಸೋದಿಲ್ಲ. ಅವನು ಎಷ್ಟೋ ವರುಷಗಳಿಂದ ನನಗೆ ಆತಿಥೇಯನಾಗಿದ್ದಾನೆ."

ಕಾಲಕ್ರಮೇಣ ನೆಲದ ಮೇಲೆ ಇದ್ದವರು ಹಿಂದಿರುಗುವುದನ್ನು ನಿಲ್ಲಿಸಿಬಿಟ್ಟರು. ಅವರೆಲ್ಲ ಉತ್ತರ ದಿಕ್ಕಿನ ಕಡೆಗೆ ಹೋದರು ಎಂದು ನಂತರದಲ್ಲಿ ಹುಡುಗ ಅರಿತನು. ಕೆಲವು ತರುಣರು ಹೊರಡುವ ಮುನ್ನ ಅಲ್ಲಿದ್ದ ಹಿರಿಯರು ಅವರಿಗೆ ಬುದ್ಧಿವಾದ ಹೇಳುತ್ತಿದ್ದರು – "ನೀವು ನಿಮ್ಮ ಪ್ರಯಾಣದಲ್ಲಿರುವಾಗ ತುಂಬಾ ಹೊತ್ತು ನಿದ್ರಿಸಬೇಡಿ. ತುಂಬಾ ನಿದ್ದೆ ಮಾಡ್ತಿದ್ರೆ, ನೀವು ಜಾಗರೂಕರಿಲ್ಲದೆ ಇರುವಾಗ ಬೇಟೆಗಾರರು ನಿಮ್ಮನ್ನ ಹಿಡೀಬಹುದು." ಆಗ ಆ ತರುಣರಲ್ಲಿ ಒಬ್ಬ ಹೇಳುತ್ತಿದ್ದ "ಆದ್ರೆ ಅವರು ಒಂದೇ ಸಮನೆ ತಮ್ಮ ವಾದ್ಯಗಳನ್ನ ನುಡಿಸ್ತಿದ್ರೆ ಎಚ್ಚರ ಇರೋದು ತುಂಬಾ ಕಷ್ಟ."

ಆ ತರುಣರಿಗೆ ಯಾವಾಗಲೂ ಹಿರಿಯರು ಜಾಗರೂಕರಾಗಿ ಇರಲು ಹೇಳುತ್ತಿದ್ದದ್ದು ಏಕೆಂದರೆ ಬೇಟೆಯ ಸಮಯದಲ್ಲಿ ಬೇಟೆಗಾರ ತನ್ನ ಭರ್ಜಿಯಿಂದ ಇವುಗಳ ಮೇಲೆ

ಹಲ್ಲೆ ಮಾಡಿದಾಗ ಕಡಲಾನೆಗಳು ಬೇಟೆಗಾರರ ಕಯಾಕ್‌ಗಳ ದೂರದ ತುದಿಯ ಕಡೆಗೆ ನೆಗೆಯಬೇಕು. ಹಾಗೆ ನೆಗೆಯುವಾಗ ತಮ್ಮ ಜೀವ ಚೈತನ್ಯವನ್ನು ತಮ್ಮ ಮೂತ್ರಕೋಶದಲ್ಲಿ ಅಡಗಿಸಬೇಕು. ಹಾಗೆ ಮಾಡಿದರೆ ಅವುಗಳ ಪುನರ್ಜನನ ಆಗುವುದು. ಹಾಗೆ ಮಾಡದ ಕಡಲಾನೆಗಳು ಶಾಶ್ವತವಾಗಿ ಸಾಯುವವು. (ಕಡಲಿನಲ್ಲಿ ಮೇಲೆ ಹೆಪ್ಪುಗಟ್ಟಿದ ಹಿಮ ಕರಗುತ್ತ ಒಂದು ತೆಳ್ಳನೆಯ ಪದರವಾಗಿರುವಾಗ, ಶಬ್ದ ಒಂದು ವಿಧದಲ್ಲಿ ಯಾರೋ ಪಿಸುಗುಟ್ಟುತ್ತಿರುವಂತೆ ಬರುತ್ತದೆ. ಹರಿಯುವ ನೀರು ನಿರಂತರವಾಗಿ ಝುಳು ಝುಳು ನಾದ ಮಾಡುತ್ತದೆ. ಇಂತಹ ಹಿಮದ ದಂಡೆಗಳ ಮೇಲೆ ಕಡಲಾನೆಗಳು ಇರುವಾಗ ಅವುಗಳಿಗೆ ಕೆಳಗೆ ಹರಿಯುವ ನೀರಿನ ಧ್ವನಿ ಯಾರೋ ತಾಳವಾದ್ಯಗಳನ್ನು ನುಡಿಸುವಂತೆ ಕೇಳಿಸುತ್ತದೆಯಂತೆ. ಇದು ಕೇಳುತ್ತ ಕೇಳುತ್ತ ಅವುಗಳಿಗೆ ಮಂಪರು ಬಂದ ಹಾಗಾಗುತ್ತದೆ. ಇವರ ನಂಬಿಕೆಯ ಪ್ರಕಾರ ಕಡಲಾನೆಗಳಿಗೆ ಇಂತಹ ನಿದ್ರಾವಸ್ಥೆಯಲ್ಲಿ ಬಲೆಗೆ ಬೀಳುವುದು ಒಳ್ಳೆಯದಲ್ಲ. ಏಕೆಂದರೆ ಮಂಪರಿನಲ್ಲಿ ಅವರು ತಕ್ಷಣ ತಮ್ಮ ಮೂತ್ರಕೋಶದೊಳಗೆ ತಮ್ಮ ಪ್ರಾಣವನ್ನು ಅಡಗಿಸಲು ಆಗುವುದಿಲ್ಲ.)

ತಮ್ಮ ನಿಗದಿತ ಸಮಯ ಬಂದಾಗ ಆ ಹುಡುಗ ಮತ್ತು ಅವನ ಗುರು ಇಬ್ಬರೂ ಅಲ್ಲಿಂದ ತೆರಳಿದರು. ಅವರು ಪಯಣಿಸುತ್ತಿರುವಾಗ ಅವರ ಪಕ್ಕದಲ್ಲಿ ಒಮ್ಮೊಮ್ಮೆ ಕಯಾಕ್‌ಗಳನ್ನು ತೇಲಿಸಿಕೊಂಡು ಹೋಗುತ್ತಿದ್ದುದ್ದನ್ನು ಕಾಣುತ್ತಿದ್ದರು. ಬಡವರ ಕಯಾಕ್ ಹಳೆಯ ಬಟ್ಟೆಗಳಿಂದ ತುಂಬಿರುತ್ತಿತ್ತು. ಅದರಲ್ಲಿ ಹಳೆಯ ಬೂಟುಗಳು ಚಿಂದಿಯಾದ ಹೊದಿಕೆಗಳೂ ಇದ್ದುವು. ಆತನ ಗುರು ಹೇಳುತ್ತಿದ್ದ "ಈಗ ಇದನ್ನು ನೆನಪಿನಲ್ಲಿಡು. ನೀನು ನಿನ್ನ ಊರಿಗೆ ಹೋದ ಮೇಲೆ ನಿನ್ನದೇ ಒಂದು ಕಯಾಕನ್ನು ಕೊಂಡುಕೊಂಡಾಗ ಅದನ್ನು ಒರಗಿಸಲು ನೆಡುವ ಕೋಲುಗಳನ್ನು ಮನೆಯ ಭಾಗಕ್ಕೆ ತುಂಬಾ ಹತ್ತಿರದಲ್ಲಿ ನೆಡಲು ಯೋಚಿಸ್ಬಹುದು ನೀನು. ಹಾಗೆ ಮಾಡ್ದಾಗ ಮನೆಯ ಹೆಂಗಸರು ಆ ಕೋಲುಗಳನ್ನು ಬಟ್ಟೆಗಳನ್ನ ಒಣಗಿಸೋಕೆ ಉಪ್ಯೋಗಿಸ್ಬಹುದು. ನೀನು ಕೋಲುಗಳನ್ನ ಮನೆಯ ಹತ್ತಿರದಲ್ಲಿ ನೆಟ್ಟು ಅದರ ಮೇಲೆ ಮನೆಯ ಹೆಂಗಸರು ಬಟ್ಟೆ ಒಣಹಾಕಿದರೆ ಅವನ ಹಾಗೆ ನಿನ್ನ ಕಯಾಕ್ ಆಗುತ್ತದೆ."

ಹಾಗೆ ಮುಂದೆ ಹೋಗುತ್ತಿದ್ದಂತೆ ಅವರಿಗೆ ಒಮ್ಮೊಮ್ಮೆ ಇನ್ನೊಬ್ಬ ಕಯಾಕ್ ನಡೆಸುತ್ತಿರುವುದು ಕಾಣಿಸುತ್ತಿತ್ತು. ಆ ವ್ಯಕ್ತಿಯ ಕಯಾಕ್ ನೀರಿಗಿಂತ ಕೊಂಚ ಮೇಲಿರುತ್ತಿತ್ತು. ಅವನು ದೋಣಿ ನಡೆಸುವ ಹುಟ್ಟನ್ನು ಚಲಾಯಿಸುತ್ತಿದ್ದರೂ ಕಯಾಕ್ ನೀರಿಗಿಂತ ಕೊಂಚ ಮೇಲೆಯೇ ಇರುತ್ತಿತ್ತು ಮತ್ತು ಆ ಹುಟ್ಟಿನ ತುದಿಗಳು ಮಾತ್ರ ನೀರನ್ನು ಸೋಕುತ್ತಿತ್ತು. ಅವನನ್ನು ತೋರಿಸಿ ಗುರು ಹೇಳಿದ "ನೋಡು ಅವನನ್ನ, ಎಷ್ಟೇ ಹುಟ್ಟನ್ನು ಚಲಾಯಿಸಿದರೂ ಅವನ ಕಯಾಕ್ ನೀರಿಗಿಂತ ಕೊಂಚ ಮೇಲೆಯೇ ಇದೆ. ನಿನ್ನ ಜೀವಮಾನದಲ್ಲಿ ನೀನು ಬಹುಶಃ ಕಡಲನ್ನು ಕಡೆಗಣಿಸಬಹುದು. ಆ ವ್ಯಕ್ತಿಯನ್ನು ನೋಡಿದೆಯಲ್ಲ! ಅವನಿಗೆ ಆ ಸ್ಥಿತಿ ಬಂದದ್ದು ಅವನು ಕಡಲಿನ ಒಳಿತಿನ ಬಗ್ಗೆ ಎಂದೂ

ಯೋಚಿಸದೇ ಇದ್ದ ಕಾರಣ." ಬೇರೆಯವರು ಕಡಲಿನ ಕಡೆಗೆ ಹೋಗುವುದನ್ನು ನೋಡಿ ಅವನಿಗೆ ಕಡಲಿನ ನೆನಪಾಗಿತ್ತು.

ಇನ್ನು ಸ್ವಲ್ಪ ಮುಂದೆ ಹೋಗಲು ಮತ್ತೊಂದು ಕಯಾಕ್ ಅವರ ಕಣ್ಣಿಗೆ ಬಿತ್ತು. ಅದನ್ನು ನಡೆಸುತ್ತಿದ್ದ ವ್ಯಕ್ತಿಯ ತಲೆಯ ಮೇಲೆ ಒಂದು ಬಕೆಟ್ ಇತ್ತು. ಆತನಿಗೆ ತಾನು ಎತ್ತ ಕಡೆಗೆ ಹೋಗುತ್ತಿದ್ದೇನೆ ಎಂಬುದು ತಿಳಿಯುತ್ತಲೇ ಇರಲಿಲ್ಲ ಏಕೆಂದರೆ ಆ ಬಕೆಟ್ ಆತನ ಕಣ್ಣುಗಳನ್ನು ಮುಚ್ಚಿಬಿಟ್ಟಿತ್ತು. ಆದರೂ ಅವನು ನಿಯಮಿತವಾಗಿ ತನ್ನ ಹುಟ್ಟನ್ನು ಚಲಾಯಿಸುತ್ತಲೇ ಇದ್ದ. ಚಿಕ್ಕವರಿದ್ದಾಗ ಹಿರಿಯರು ಯಾವಾಗಲೂ ಹೇಳುತ್ತಿದ್ದರು, ಬಕೆಟ್ಟಿನಿಂದ ನೀರನ್ನು ಕುಡಿಯುವಾಗ ಒಂದು ಸೌಟಿನ ಮೂಲಕ ಎತ್ತಿಕೊಂಡು ಕುಡಿಯಬೇಕು. ನೇರವಾಗಿ ಬಕೆಟ್ಟಿನ ಒಳಗೆ ಬಾಯಿ ಹಾಕಬಾರದು ಎಂದು. ಇದು ಅತ್ಯಂತ ಮುಖ್ಯವಾದ ನಿಯಮವಾಗಿತ್ತು. ಯಾರು ಸೌಟಿನ ಮೂಲಕ ಕುಡಿಯದೆ ನೇರವಾಗಿ ಬಕೆಟ್ಟಿಗೆ ಬಾಯಿ ಹಾಕುತ್ತಿದ್ದರೋ ಅವರೇ ಹೀಗೆ ತಲೆಯ ಮೇಲೆ ಬಕೆಟ್ ಹಾಕಿಕೊಂಡು ಈಗ ಕಯಾಕ್ ನಡೆಸೋ ಹಾಗೆ ಆಗಿದ್ದಾರೆ.

ಒಮ್ಮೊಮ್ಮೆ ಅವರಿಬ್ಬರೂ ವಿಶ್ರಮಿಸುತ್ತಿರುವಾಗ ಇನ್ನೊಂದು ಕಯಾಕ್ ತೇಲಿ ಹೋಗುತ್ತಿದ್ದುದ್ದನ್ನು ನೋಡುತ್ತಿದ್ದರು. ಅದನ್ನು ನಡೆಸುತ್ತಿದ್ದವನ ಬಾಯಿಂದ ಕೂದಲು ಬೆಳೆಯುತ್ತಿದ್ದುದ್ದನ್ನು ನೋಡಿ ಗುರು ಹೇಳಿದ "ಆ ಮನುಷ್ಯನ್ನ ನೋಡಿದ್ಯ? ನಿನಗೆ ಮಕ್ಕಳು ಹುಟ್ಟಿದಾಗ ಅವರ ಮೇಲಿರೋ ಹೇನಿನ ಮೊಟ್ಟೆಗಳನ್ನ ಬಾಯಿಂದ ಕಚ್ಚಿ ತೆಗೆಯೋಣ ಅಂತ ಅನ್ಕೊಳ್ಳಹುದು. ಬಾಯಿಂದ ಕೂದಲು ಬರ್ತಿರೋ ಆ ಮನುಷ್ಯನ್ನ ನೋಡಿದ್ಯಲ್ಲ. ಅವನಿಗೆ ತನ್ಮಕ್ಕಳ ಮೇಲಿಂದ ಹೇನಿನ ಮೊಟ್ಟೆಗಳನ್ನ ಬಾಯಿಂದ ಕಚ್ಚಿ ತೆಗೆಯೋ ಚಪಲ!" ಹೀಗೆ ಮುಂದುವರೆಯುತ್ತ ಅವರು ಹಳ್ಳಿಗಳನ್ನು ದಾಟಿದರು. ಆ ಹಳ್ಳಿಗಳನ್ನು ಗುರು ನೆನಪಿನಲ್ಲಿಟ್ಟುಕೊಂಡಿದ್ದನು. ಅವರಿಬ್ಬರೂ ಉತ್ತರ ದಿಕ್ಕಿನಲ್ಲಿ ಪಯಣಿಸುತ್ತಿದ್ದರು.

ಒಂದು ದಿನ ಪ್ರಯಾಣ ಮಾಡುತ್ತ ಮಾಡುತ್ತ ಅವರು ಒಂದು ಹಳ್ಳಿಯನ್ನು ಸಮೀಪಿಸಿದರು. ಆಗ ಗುರು ಹೇಳಿದ "ನಾವು ಈಗ ನನ್ನ ಆತಿಥೇಯನ ಊರಿಗೆ ಬಂದಿದ್ದೇವೆ. ಇಲ್ಲೇ ಕೂತ್ಕೊಂಡು ಅವನಿಗೆ ಕಾಯೋಣ. ಅವನು ನಾಳೆ ಬೆಳಗಿನ ಜಾವವೇ ಬರ್ತಾನೆ ಅಂತ ನಂಗೆ ಗೊತ್ತಿದೆ." ಅವರು ಅಲ್ಲೇ ಕುಳಿತು ಅವನಿಗೆ ಕಾಯತೊಡಗಿದರು. ಕಾಯುತ್ತ ಕಾಯುತ್ತ ಆ ಹುಡುಗ ತೂಕಡಿಸತೊಡಗಿದನು. ತಕ್ಷಣವೇ ಆತನ ಗುರು ಅವನನ್ನು ಅಲ್ಲಾಡಿಸಿ "ಅಯ್ಯೋ! ಈಗ ಮಲಗಬೇಡಾ! ಜಾಗೃತನಾಗಿರು ಮತ್ತು ನಮ್ಮ ಆತಿಥೇಯನನ್ನು ನೋಡುತ್ತಿರು. ಅವ್ನು ಈಗ್ತಾನೆ ಕಾಸ್ಗಿಕ್ಕಿನಿಂದ ಆಚೆ ಬಂದು ತನ್ನ ಹೆಂಡತಿಯ ಮನೆಗೆ ತಯಾರಾಗಲು ಹೋಗಿದ್ದಾನೆ" ಎಂದನು.

ಅವರಿಬ್ಬರೂ ಆ ಮನೆಗಳ ಹತ್ತಿರದಲ್ಲಿಯೇ ಕಾಯುತ್ತಿದ್ದರು. ಆ ಹುಡುಗ ನೋಡುತ್ತಿದ್ದಂತೆ ಒಬ್ಬ ಹೆಂಗಸು ಮನೆಯಿಂದ ಒಂದು ಬುಟ್ಟಿಯನ್ನು ಹಿಡಿದುಕೊಂಡು ಹೊರಬಂದಳು. ಆಕೆ ಅತ್ಯಂತ ಶುಭ್ರವಾಗಿ ಕಂಗೊಳಿಸುತ್ತಿದ್ದು ಆಕೆಯು ಚಳಿಯನ್ನು

ತಡೆಯಲು ಹೊದ್ದಿದ್ದ ಪರ್ಕಾ ಹೊದಿಕೆಯ ಮೂಲಕ ಬೆಳಕು ಹೊರಹೊಮ್ಮುತ್ತಿತ್ತು. ತನ್ನ ಗಂಡ ತಯಾರಾಗುವುದಕ್ಕೆ ಆಕೆ ಆಸ್ಥೆಯಿಂದ ಸಹಕರಿಸುತ್ತಿದ್ದಳು. ಆಗ ಆ ಹುಡುಗನ ಮಾರ್ಗದರ್ಶಿ ಮತ್ತೆ ವಿವರಿಸತೊಡಗಿದನು. "ಅಲ್ಲಿರುವ ಹೆಂಗಸನ್ನು ನೋಡು. ಆಕೆ ಸೋಮಾರಿಯಲ್ಲವೆಂಬುದು ಎಷ್ಟು ಚೆನ್ನಾಗಿ ತೋರುತ್ತಿದೆ. ಆಕೆಯ ಸುತ್ತಲಿರುವ ಕಾಂತಿ ಆಕೆಯ ಶುಭ್ರ ವ್ಯಕ್ತಿತ್ವವನ್ನೇ ತೋರಿಸ್ತಿದೆ. ಯಾವಾಗ ಹೆಣ್ಣಾದವಳು ತನ್ನ ಕರ್ತವ್ಯಗಳನ್ನು ಅಲಕ್ಷಿಸದೆ ಚಟುವಟಿಕೆಯಿಂದ ಕೂಡಿರುತ್ತಾಳೋ ಅವಳು ನಮ್ಮ ಕಣ್ಣಿಗೆ ಹೀಗೇ ಕಾಣಿಸುತ್ತಾಳೆ. ಈಗ ಅವಳ ಗಂಡ ಕೆಳಗೆ ಬರ್ತಾನೆ ಅವನ ನಡವಳಿಕೆ ನೋಡು."

ಅವರಿಬ್ಬರೂ ಅಲ್ಲಿ ಕೂತು ಟಿ.ವಿ. ನೋಡೋ ರೀತಿಯಲ್ಲಿ ಹಳ್ಳಿಯ ಆಗುಹೋಗುಗಳನ್ನು ನೋಡುತ್ತಿದ್ದರು. ಆಕೆಯ ಗಂಡ ತನ್ನ ಕಯಾಕನ್ನು ಒಂದು ಚಿಕ್ಕ ಸಮತಟ್ಟಾದ ಮರದ ಹಲಗೆಯ ಮೇಲಿರಿಸಿಕೊಂಡು ಅದನ್ನು ಎಳೆಯುತ್ತ ಕಡಲ ದಂಡೆಯ ಕಡೆಗೆ ಬರತೊಡಗಿದನು. ಅವನು ಕೆಳಗೆ ತಮ್ಮ ಕಡೆಗೆ ಬರುತ್ತಿದ್ದರೆ ಆ ಹುಡುಗ ಮತ್ತವನ ಗುರು ಒಂದು ತೇಲುತ್ತಿರುವ ಹಿಮದ ಆವರಣದ ಮೇಲೆ ಕುಳಿತಿದ್ದರು. ಅವನು ಕಡಲ ತೀರಕ್ಕೆ ಬಂದು ಕಯಾಕಿನ ಕೆಳಗಿಂದ ಮರದ ಹಲಗೆಯನ್ನು ತೆಗೆದು ಕಯಾಕಿನ ಹಿಂಬದಿಗೆ ಕಟ್ಟಿದನು. ಕಯಾಕಿನ ಒಳಗಿನಿಂದ ಒಂದು ಮರದ ಬಟ್ಟಲನ್ನು ತೆಗೆದು ನೀರ ಬಳಿ ಬಂದು ನಿಂತನು.

ಗುರು ಹೇಳಿದ "ನೋಡು, ಈಗ ಅವನು ನಮಗೆ ಅವನ ಪಾಲಿನ ಅಕುಟಾಕನ್ನು ಕೊಡ್ತಾನೆ." ಅವರು ನೋಡುತ್ತಿದ್ದಂತೆ ಆ ವ್ಯಕ್ತಿ ತನ್ನ ಬಟ್ಟಲಿಗೆ ಕೈ ಹಾಕಿ ಅವರು ಎಲ್ಲಿದ್ದಾರೋ ಅದು ನಿಖರವಾಗಿ ಗೊತ್ತಿದೆಯೋ ಎಂಬಂತೆ ಕೈಲಿದ್ದ ಅಕುಟಾಕನ್ನು ಅವರೆಡೆಗೆ ಎಸೆದನು. ಆ ಎಸೆದ ಪದಾರ್ಥ ನೇರವಾಗಿ ಇವರಿಬ್ಬರೂ ಇದ್ದಲ್ಲಿಗೆ ಬಂದು ಬಿದ್ದಿತು. "ಈಗ ಇದನ್ನ ಸವಿಯೋಣ ಬಾ" ಎಂದನು ಗುರು. ಇಬ್ಬರೂ ಸೇರಿ ಎಲ್ಲವನ್ನು ಚಪ್ಪರಿಸುತ್ತ ತಿಂದರು. (ಪಾಶ್ಚಾತ್ಯರ ಸಂಸ್ಕೃತಿಯ ಪ್ರಭಾವದ ಮುನ್ನ ಕಡಲ ಕಡೆಗೆ ಬರುವವರೆಲ್ಲರೂ ಕೂಡ ತಿಂಡಿಗಳನ್ನು ಕಡಲ ಪ್ರಾಣಿಗಳಿಗೆ ನಿವೇದಿಸುತ್ತಿದ್ದರು. ತಾವು ತೆಗೆದುಕೊಂಡು ಬಂದಿರುವ ಎಲ್ಲ ತಿಂಡಿಗಳ ಸ್ವಲ್ಪ ಭಾಗವನ್ನು ಅವರು ತೆಗೆದು ಸಮುದ್ರಕ್ಕೆ ಹಾಕುತ್ತಿದ್ದರು, ಅಲ್ಲಿರುವ ಪ್ರಾಣಿಗಳಿಗೆ ಅದು ನೈವೇದ್ಯವೆಂಬಂತೆ.)

ನಂತರ ಆ ಬೇಟೆಗಾರ ತನ್ನ ಕಯಾಕನ್ನು ಹತ್ತಿ, ಇವರಿದ್ದ ಕಡೆಗೆ ಅದನ್ನು ಹರಿಯತೊಡಗಿಸಿದ. ಆ ಹುಡುಗನ ಮಾರ್ಗದರ್ಶಕ ಅವನಿಗೆ ಹೇಳಿದ "ಈಗ ಅವನ ದೃಷ್ಟಿಯನ್ನೇ ನೋಡ್ತಿರು. ಅವನು ನಮ್ಮನ್ನ ನೋಡ್ತಿರೋ ರೀತಿನ ಗಮನ್ಸು. ಅವನ ನೋಟದ ತೀಕ್ಷ್ಣತೆನ ಗಮನ್ಸು. ಅವ್ನು ನಿನ್ನನ್ನೇ ನೇರವಾಗಿ ನೋಡುವಾಗಿನ ಆ ದೃಷ್ಟಿಯ ಶಕ್ತಿಯ ಆಭಾಸ ನಿನಗಾಗುತ್ತಿದೆಯಾ? ಅವನ ಕಣ್ಣೋಟ ಎಷ್ಟು ಪ್ರಖರವಾಗಿದೆ ನೋಡು."

"ನೀನು ನಿನ್ನ ಹಳ್ಳಿಗೆ ಹೋದ್ಮೇಲೆ ಹೆಂಗಸರನ್ನು ಬೇರೆಯವರನ್ನು ಅವರ ಮುಖಗಳನ್ನ ಅದೇ ರೀತಿ ತೀಕ್ಷ್ಣತೆಯಿಂದ ನೋಡ್ಬೇಕು ಅಂತ ಅನ್ಕೊಳ್ಳಹುದು. ಹಾಗೆ ಮಾಡಿ ಅವರನ್ನ ಹೆದರಿಸಬಹುದು ಅಂತ ನಿನಗೆ ಅನ್ಸುತ್ತೆ. ಆದ್ರೆ ಗಂಡಸರು ಆ ರೀತಿ ಹೆಂಗಸರ ಮುಖಗಳನ್ನ

ತೀಕ್ಷ್ಣವಾಗಿ ನೋಡಿದ್ರೆ ಅವರ ಕಣ್ಣಿನ ದೃಷ್ಟಿ ಮಂದವಾಗುತ್ತೆ. ಆದರೆ ಗಂಡಸರು ಹೆಂಗಸರ ಮುಖವನ್ನ ಮತ್ತೆ ಇತರರ ಮುಖವನ್ನ ಆ ರೀತಿ ತದೇಕವಾಗಿ ನೋಡದೆ ಆಮೇಲೆ ಬೇಟೆಗೆ ಹೊರಟ್ರೆ ಅವರ ದೃಷ್ಟಿ ಚೆನ್ನಾಗಿರುತ್ತೆ."

"ಅವನನ್ನ ಚೆನ್ನಾಗಿ ನೋಡು. ಅವನ ನೋಟದಲ್ಲಿ ನೋಟವನ್ನಿಡು. ಆಗ ನಿನಗೆ ಅದರ ಶಕ್ತಿ ಗೊತ್ತಾಗುತ್ತೆ." ಆ ಬೇಟೆಗಾರ ನೇರವಾಗಿ ಅವರ ಕಡೆಗೆ ಬರತೊಡಗಿದನು. ಆ ಹುಡುಗ ಅವನನ್ನೇ ನೋಡುತ್ತಿದ್ದಂತೆ ಇದ್ದಕ್ಕಿದ್ದಹಾಗೆ ಅವನ ಮೈಯಲ್ಲಿ ಶಕ್ತಿ ಸಂಚಲನವಾದಂತಾಯಿತು. ಆ ಹುಡುಗನ ಜೊತೆಗಾರ ಹೇಳಿದ "ಹಾ! ಅವ್ನು ನಮ್ಮನ್ನ ನೋಡ್ದ! ಅವನಿಗೆ ಗುರುತು ಸಿಕ್ಕಿದೆ!! ಅವ್ನು ಈಗ ನಂ ಕಡೆಗೆ ಬರ್ತಾನೆ. ಏನೇ ಆಗಲಿ ನಿದ್ದೆ ಮಾಡ್ಬೇಡ... ನಿಂಗೆ ತುಂಬಾ ನಿದ್ದೆ ಮಂಪರು ಬರಬಹುದು. ಆದರೆ ಅದನ್ನ ಅದುಮಿಟ್ಟು ಎಚ್ಚರವಾಗಿರು."

ಆ ಬೇಟೆಗಾರ ಒಂದು ಚೂಪಾದ ಮರದ ಟೊಪ್ಪಿಯನ್ನು ತನ್ನ ತಲೆಯ ಮೇಲೆ ಹಾಕಿಕೊಂಡು ಇವರೆಡೆಗೆ ಕಯಾಕನ್ನು ನಡೆಸತೊಡಗಿದ. ಸ್ವಲ್ಪದರಲ್ಲಿ ಅವನು ಒಂದು ಹಿಮದ ಗಡ್ಡೆಯ ಹಿಂದೆ ಮರೆಯಾದ. ಅವರು ಕಾದು ನೋಡಿದರೂ ಅವನು ಅದರ ಹಿಂದಿನಿಂದ ಹೊರಬರಲಿಲ್ಲ. ಅವರು ಕಾಯುತ್ತಿದ್ದಂತೆ ಒಂದು ಸಣ್ಣ ಹಕ್ಕಿ ಆಚೆ ಬಂದಿತು. ಅದು ಸಿಗೂರ್ ಹಕ್ಕಿ. ಬೂದು ಬಣ್ಣದ ಕಡಲ ಹಕ್ಕಿ ಅದು. ಯಾವಾಗಲೂ ನೀರಿನಲ್ಲಿ ಧುಮುಕಿ ಆಚೆ ಬರುತ್ತಿದ್ದ ಹಕ್ಕಿ. ಅವುಗಳ ರೆಕ್ಕೆಯ ಮೇಲೆ ಕಪ್ಪು ಚುಕ್ಕಿಗಳಿದ್ದವು. ಆ ಹಕ್ಕಿ ಅವರಿದ್ದ ಕಡೆಗೆ ತಿರುಗಿದಾಗ ಅದರ ಹಿಂದೆ ಆ ಬೇಟೆಗಾರ ಕೂಡ ಈಜುತ್ತಾ ಬಂದನು. ಈಜುತ್ತ ಬರುತ್ತಿದ್ದಂತೆ ಅವನು ಸಣ್ಣದಾಗಿ ತೇಗಿದ. ಅವನು ತೇಗಿದಾಗ ತೆಳುವಾದ ಮಂಜಿನ ಹಾಗೆ ಪದರವೊಂದು ಇವರನ್ನು ಆವರಿಸಿತು. ಆ ಹುಡುಗನಿಗೆ ಮತ್ತು ಬಂದಂತಾಗಿ ನಿದ್ರೆ ಹತ್ತತೊಡಗಿತು. ಅವನು ಎಚ್ಚರವಿರಲು ಬಹಳ ಪ್ರಯತ್ನಿಸುತ್ತಿದ್ದ. ಆಗ ಅವನ ಗುರು ಅವನನ್ನು ಮೆಲ್ಲಗೆ ಅಲುಗಿಸಿ "ಪಾಪ! ನಿಂಗೆ ಎಚ್ಚರ ಇರು ಅಂತ ಹೇಳಿದ್ದೆ ತಾನೆ?" ಎಂದ. ಆ ಹುಡುಗ ಮತ್ತೆ ಬಲವಂತವಾಗಿ ಎಚ್ಚರವಾದ. ಆಗ ಆತನ ಗುರು ಹೇಳಿದ "ಈಗ ಅವನು ಮತ್ತೊಮ್ಮೆ ಇದನ್ನೇ ಮಾಡ್ತಾನೆ. ಆಗ ಅದರ ಪ್ರಭಾವ ಇನ್ನೂ ಹೆಚ್ಚಾಗಿರುತ್ತೆ. ನಿಂಗೆ ತಡೆಯೋಕೆ ಆಗದೆ ಇರೋ ಅಷ್ಟು ನಿದ್ರೆ ಬರುತ್ತೆ. ನಂಗೂ ಕೂಡ ಈ ಬಾರಿ ನಿದ್ರೆ ಹತ್ತುತ್ತೆ. ನನ್ನ ಕೈಲಿ ಕೂಡ ಎಚ್ಚರವಿರೋಕೆ ಆಗದೆ ಇರಬಹುದು. ಈಗ ಸ್ವಲ್ಪ ನಿಮಿಷಗಳ ಕಾಲ ನಾನೂ ಮಂಪರಿನಲ್ಲಿದ್ದೆ. ಅಕಸ್ಮಾತ್ ನೀನು ನಿದ್ದೆ ಮಾಡ್ಬಿಟ್ಟದ್ರೆ ನಿನ್ನ ಮೈಯಲ್ಲಿ ಬಲವಾದ ಶಕ್ತಿಯೊಂದು ಸೇರ್ತು ಅಂತ ನಿಂಗೆ ಅನ್ನಿಸಿದ ತಕ್ಷಣ ನೀನು ನಿನ್ನ ಮೂತ್ರಕೋಶದಲ್ಲಿ ನುಗ್ಗಿ ಸೇರ್ಕೊಂಡುಬಿಡ್ಬೇಕು. ಗೊತ್ತಾಯ್ತಾ?"

ಆಗ ಆ ಹಕ್ಕಿ ಮತ್ತೊಮ್ಮೆ ಹತ್ತಿರ ಬರುತ್ತಿದ್ದ ಹಾಗೆ ಆ ಬೇಟೆಗಾರ ಮತ್ತೊಮ್ಮೆ ತೇಗಿದ. ಹಿಂದಿನಂತೆ ನವುರಾದ ಮಂಜು ಕವಿಯಿತು. ಅದು ಅವರ ಬಳಿ ಬರುತ್ತಿದ್ದಂತೆ ಇಬ್ಬರಿಗೂ ತೀವ್ರವಾದ ನಿದ್ದೆಯ ಮಂಪರು ಆವರಿಸಿತು. ಆ ಹುಡುಗ ಎಷ್ಟೇ ಪ್ರಯತ್ನಿಸಿದರೂ ಎಚ್ಚರವಿರಲು ಸಾಧ್ಯವಿಲ್ಲದ ಸ್ಥಿತಿಯಾಯಿತು. ಇನ್ನೇನು ನಿದ್ದೆ ಮಾಡಿಯೇಬಿಟ್ಟನು

ಎನ್ನುವಷ್ಟರಲ್ಲಿ ಅವನ ಶರೀರದಲ್ಲಿ ಒಂದು ಬಲವಾದ ಶಕ್ತಿ ಸಂಚರಿಸಿದಂತಾಯಿತು. ತಕ್ಷಣ ಅವನು ಮೂತ್ರಕೋಶಕ್ಕೆ ಓಡಿಬಿಟ್ಟನು. ಬೇಟೆಗಾರ ಅವರಿಬ್ಬರನ್ನೂ ಹಿಡಿದಿದ್ದ. ಆದರೆ ಕೇವಲ ಅವರ ಶರೀರಗಳನ್ನು ಮಾತ್ರ ಕೊಂದಿದ್ದ. ಅವರ ಅಮರವಾದ ಜೀವ ಚೈತನ್ಯ ಮೂತ್ರಕೋಶದಲ್ಲಿ ಸುರಕ್ಷಿತವಾಗಿ ಸೇರಿ ಹೋಗಿತ್ತು. ಅನಂತರ ಆ ಬೇಟೆಗಾರ ಇಬ್ಬರ ದೇಹಗಳನ್ನ ಕತ್ತರಿಸಿದ, ಚರ್ಮವನ್ನು ಸುಲಿದ. ಆಗ ಹುಡುಗನಿಗೆ ಮೈಯೆಲ್ಲ ರೋಮಾಂಚನವಾಗುತ್ತಿತ್ತು. ಸ್ವಲ್ಪವೂ ನೋವಿರಲಿಲ್ಲ. ಹಿತವಾದ ಅನುಭವ. ಅವರ ದೇಹಗಳನ್ನು ಕತ್ತರಿಸಿ ತುಂಡುಗಳನ್ನು ತನ್ನ ಕಯಾಕಿನಲ್ಲಿ ಹಾಕಿಕೊಂಡ. ತೀರದ ಕಡೆಗೆ ಬರುತ್ತಿದ್ದಂತೆ ಅವನು ಕಯಾಕಿನ ಹುಟ್ಟನ್ನು ಮೇಲೆತ್ತಿ ಹಿಡಿದ, ಬೇಟೆ ಯಶಸ್ವಿಯಾಯಿತೆಂದು ತೋರಿಸಲು. ಆ ಬೇಟೆಗಾರ ಮನೆಗೆ ಹೋದಾಗ ಅವನ ಹೆಂಡತಿ ಹೊರಬಂದಳು. ಮರದ ಹಲಗೆಯನ್ನು ಸಿದ್ಧಪಡಿಸಿ ಬೇಟೆಯನ್ನು ಕಯಾಕಿನಿಂದ ಮನೆಗೆ ತರಲು ಸಹಾಯ ಮಾಡಲು ಅವನ ಜೊತೆಗೆ ಹೊರಟಳು.

ಇತ್ತ ಅಂಗಾಲ್ಕುಕ್ ಆ ಹುಡುಗನ ತಂದೆ ತಾಯಿಯರ ಮನೆಗೆ ಓಡಿ ಬಂದು ನಿಮ್ಮ ಮಗ ಹಿಂತಿರುಗಿದ್ದಾನೆ ಎಂದು ಸಂತೋಷದಿಂದ ಹೇಳಿದ. ಆ ಸುದ್ದಿಯನ್ನು ಕೇಳಿ ಅವರು ಹಿರಿಹಿರಿ ಹಿಗ್ಗಿದರು. ಅವನು ಸಶರೀರನಾಗಿ ಹಿಂತಿರುಗಿದ್ದಾನೆ ಎಂದುಕೊಂಡಿದ್ದರು. ಆಗ ಅಂಗಾಲ್ಕುಕ್ ಅವರಿಗೆ ಹೇಳಿದನು "ನಿಲ್ಲಿ ನಿಲ್ಲಿ! ಈಗಲೇ ಇಷ್ಟೊಂದು ಸಂತಸ ಬೇಡ. ಅವನನ್ನ ಈಗ್ಲೇ ನೋಡೋಕೆ ಆಗೊಲ್ಲ. ಅವನು ನಿಮಗೆ ಕಾಣಿಸ್ಕೊಳ್ಳೋದು ಚಳಿಗಾಲ ಬಂದಾಗ ಮತ್ತೆ ಮೂತ್ರಕೋಶಗಳನ್ನ ನೀರಿನಲ್ಲಿ ತೇಲಿ ಬಿಟ್ಟಾಗ. ಅವನು ಅವಾಗ ಮನೆಗೆ ಬರ್ತಾನೆ. ಅವನನ್ನ ಸ್ವಾಗತಿಸಿ ಅಕುಟಾಕ್ ತಿನ್ಸಿ. ಅವಂಗೆ ಅಕುಟಾಕ್ ತಿನ್ಬೇಕು ಅಂತ ತುಂಬಾ ಆಸೆ ಆಗಿರುತ್ತೆ. ಆಮೇಲೆ ನಂಗೂ ಸ್ವಲ್ಪ ಅಕುಟಾಕ್ ತಂದ್ಕೊಡ್ಬೇಕು! ಗೊತ್ತಾಯ್ತಾ?"

ಅವರು ತಕ್ಷಣ ಅಕುಟಾಕ್ ಮಾಡಿ ಆ ಅಂಗಾಲ್ಕುಕ್ ಬಳಿ ಬಂದು ಕೊಟ್ಟರು. ಇಡೀ ಬೇಸಿಗೆಯ ಕಾಲ ಕಳೆಯುವತನಕ ಕಾಯುತ್ತಿದ್ದರು. ಅವರಿಗೆ ಅವನ ಮಗ ಮರಳಿದ್ದಾನೆ ಎಂದು ತಿಳಿಸಿದ್ದರೂ ಅವರಿಗೆ ಸಂಶಯ ಕಾಡತೊಡಗಿತು.

ಅವರಿಗೆ ಒಂಟಿತನ ಕಾಡತೊಡಗಿದಾಗೆಲ್ಲ ಅಂಗಾಲ್ಕುಕ್ ಅವರ ಮನೆಯೊಳಗೆ ನುಗ್ಗಿ ಬಂದು "ನಾನು ಎಷ್ಟು ಸರ್ತಿ ಹೇಳಿಲ್ಲ ಈ ಥರ ಒಂಟಿತನ ಬೇಸರ ಎಲ್ಲ ಪಡ್ಬಾರ್ದು ಅಂತ?! ನಾನು ಆಗ್ಲೆ ಹೇಳಿದ್ನಲ್ಲ ಅವ್ನು ಇಲ್ಲಿದಾನೆ ಅಂತ. ಸರಿಯಾದ ಸಮಯ ಬಂದಾಗ ನಿಮ್ಗೆ ಕಾಣಿಸ್ಕೊಳ್ತಾನೆ. ಸ್ವಲ್ಪ ಸಮಾಧಾನವಾಗಿರಿ. ಅಕುಟಾಕ್ ಮಾಡಿ ನನಗೂ ಸ್ವಲ್ಪ ತಂದ್ಕೊಡಿ" ಆಗ ಅವರು ಸ್ವಲ್ಪ ಅಕುಟಾಕ್ ಮಾಡಿ ಅಂಗಾಲ್ಕುಕ್ಗೂ ಕೂಡ ಸ್ವಲ್ಪ ಅರ್ಪಿಸುತ್ತಿದ್ದರು.

ಕಾಲ ಕಳೆದಂತೆ ಚಳಿಗಾಲದ ಮೂತ್ರಕೋಶದ ಹಬ್ಬದ ದಿನ ಬಂದಿತು. ಪ್ರತಿ ಬಾರಿಯಂತೆ ಕೋಶಗಳನ್ನು ಒಣಗಿಸಿ ಅವುಗಳನ್ನು ಉಬ್ಬಿಸಿ ನೆನೆಸಿ ಅವುಗಳನ್ನು ರವಾನಿಸಲು ಬಂದರು. ಅನಂತರ ಅವುಗಳಿಂದ ಗಾಳಿ ತೆಗೆದು ಹಿಮದ ಗುಂಡಿಯ ಬಳಿ ತೆಗೆದುಕೊಂಡು

ಹೋಗಿ ಎಲ್ಲವುಗಳನ್ನು ಮುಳುಗಿಸಿಬಿಟ್ಟರು. ಆದರೂ ಆ ಹುಡುಗನ ಸುದ್ದಿಯೇ ಇಲ್ಲ! ಹಳ್ಳಿಯಲ್ಲಿದ್ದ ಕಡೆಯ ಕೋಶವನ್ನೂ ಮುಳುಗಿಸಿದ ನಂತರ ಒಂದು ದಿನ ಆ ಹಳ್ಳಿಯ ಹೆಂಗಸೊಬ್ಬಳು ನೀರನ್ನು ತರುವುದಕ್ಕೋಸ್ಕರ ಅನಿಗುಯಾಕಿಗೆ ಬಂದಳು. (ಹಿಂದೆ ಬಹಳಷ್ಟು ಹಿಮ ಬೀಳುತ್ತಿದ್ದ ದಿನಗಳಲ್ಲಿ ನೀರಿನ ಗುಂಡಿಯ ಸುತ್ತ ಬಿದ್ದ ಹಿಮವನ್ನೆಲ್ಲ ಉಪಯೋಗಿಸಿ ಅದರ ಸುತ್ತಲೂ ಒಂದು ಗೋಡೆಯ ಹಾಗೆ ಕಟ್ಟಿ ಮೇಲೆ ಛಾವಣಿಯನ್ನೂ ಮಾಡಿ ಗೂಡಿನ ಹಾಗೆ ಕಟ್ಟುತ್ತಿದ್ದರು. ಅದಕ್ಕೆ ಒಂದು ಬಾಗಿಲೂ ಕೂಡ ಇರುತ್ತಿತ್ತು. ಇದಕ್ಕೆ 'ಅನಿಗುಯಾಕ್' ಎಂದು ಹೆಸರು. ಅದರೊಳಗೆ ಹೋಗಿ ಗುಂಡಿಯಿಂದ ನೀರನ್ನು ತೆಗೆಯುತ್ತಿದ್ದರು.)

ಆಕೆ ಒಳಗೆ ಹೋದಾಗ ಅಲ್ಲಿ ಬೆತ್ತಲೆಯಾಗಿ ಒಬ್ಬ ಹುಡುಗ ಮುದುರಿಕೊಂಡು ಕುಳಿತಿದ್ದ. ಆ ಹುಡುಗ ನಡುಗುತ್ತ ಒಬ್ಬನೇ ಅಳುತ್ತ ಕುಳಿತಿದ್ದ. ಅವಳು ಹತ್ತಿರ ಹೋಗಿ ನೋಡಿದಾಗ ಒಂದು ವರ್ಷದ ಹಿಂದೆ ಕಳೆದುಹೋಗಿದ್ದ ಹುಡುಗ ಇವನೇ ಎಂದು ತಿಳಿಯಿತು. ಆ ಮೂತ್ರಕೋಶಗಳೊಡನೆ ಕಳುಹಿಸಿದ್ದ ಹುಡುಗ ಇವನೇ ಎಂದು ತಿಳಿಯಿತು. "ಯಾಕ್ ಅಳ್ತಿದ್ದೀಯ?" ಎಂದು ಕೇಳಿದಳು. ಅವನು ಹೇಳಿದ "ನನ್ನ ಜೊತೆಗಿದ್ದೋರೆಲ್ಲ ನನ್ನ ಬಿಟ್ಟಿಟ್ಟು ಹೋದ್ರು. ನಾನು ಎಷ್ಟೊಂದು ಕೇಳ್ಕೊಂಡೆ ಆದ್ರೂ ಅವ್ರು ನನ್ಮಾತು ಕೇಳಲಿಲ್ಲ" ಅವನು ಅಳುತ್ತಲೇ ಇದ್ದ. ಅವರ ಜೊತೆ ಹೋಗಬೇಕಿತ್ತು ಎನ್ನುತ್ತಲೇ ಇದ್ದ. ಆ ಹೆಂಗಸು ಸಮಾಧಾನಪಡಿಸಿ "ಪಾಪ! ಮಗು! ಅಳ್ಬೇಡ. ನನ್ನ ಜೊತೆ ಬಾ. ನಿಮ್ಮಪ್ಪ ಅಮ್ಮನ ಮನೆಗೆ ಹೋಗೋಣ. ಅವರನ್ನೂ ನೋಡ್ಬೇಕು ಅಲ್ವ?" ನಂತರ ಆಕೆ ಅವನನ್ನು ಕರೆದುಕೊಂಡು ಆತನ ಪೋಷಕರ ಮನೆಯ ಕಡೆಗೆ ಓಡಿದಳು. ಅವನು ಮುಂಚಿನಂತೆ ಸಾಮಾನ್ಯ ಮನುಷ್ಯನ ಆಕಾರದಲ್ಲಿ ಮತ್ತೊಮ್ಮೆ ಊರಿನಲ್ಲಿ ಕಾಣಿಸಿಕೊಂಡಿದ್ದನು. ಅವನನ್ನು ನೋಡುತ್ತಿದ್ದಂತೆ ಅವನ ತಾಯಿ ತಂದೆಯರಿಗೆ ಎಣೆಯಿಲ್ಲದಷ್ಟು ಆನಂದವಾಯಿತು. ಅವರು ಅವನಿಗೋಸ್ಕರ ಹೊಸ ಬಟ್ಟೆಗಳನ್ನು ಮಾಡಿದರು. ಅದಾದ ಮೇಲೆ ಅವನು ಆ ಹಳ್ಳಿಯಲ್ಲೇ ಉಳಿದನು ಮತ್ತು ಎಲ್ಲರಂತೆ ಜೀವನ ನಡೆಸತೊಡಗಿದನು. ಮುಂದಿನ ವರ್ಷ ಮತ್ತೊಮ್ಮೆ ಹಬ್ಬದ ದಿನ ಮೂತ್ರಕೋಶಗಳನ್ನು ಹೊರಗೆ ಒಣಗಲು ನೇತು ಹಾಕಿದ್ದಾಗ ಆ ಹುಡುಗನು ತನ್ನೆಲ್ಲ ಬಟ್ಟೆಗಳನ್ನು ಕಳಚಿಹಾಕಿದ. ಕಾಸ್ಗಿಕ್‌ನ ಬಳಿಯಿದ್ದ ವ್ಯಕ್ತಿಯೊಬ್ಬ "ನೀನೇನು ಮಾಡ್ಬೇಕು ಅನ್ಕೊಂಡಿದ್ದೀಯ?" ಎಂದು ಕೇಳಿದನು. "ನಾನು ನನ್ನ ಸ್ನೇಹಿತರನ್ನ ನೋಡೋಕೆ ಹೋಗ್ತಿದ್ದೀನಿ" ಎಂದ ಆ ಬಾಲಕ. ಬಟ್ಟೆಯನ್ನೆಲ್ಲ ಕಳಚಿದ ನಂತರ ಅವನು ಸಾಲಾಗಿ ಒಣಗಲು ಹಾಕಿದ್ದ ಮೂತ್ರಕೋಶಗಳ ಒಂದು ತುದಿಯ ಬಳಿ ಬಂದು ಒಂದನ್ನು ಮುಟ್ಟಿದ. ಮುಟ್ಟಿದ ಕೂಡಲೆ ಆ ಬಾಲಕ ಅಲ್ಲಿಂದ ಮಾಯವಾಗಿಹೋದ. ಅವನು ಮುಟ್ಟಿದ ಮೂತ್ರಕೋಶದ ಗೊಂಚಲಿಂದ ಹಿಡಿದು ಅಲ್ಲಿ ಒಣಗಿಸಿದ್ದ ಎಲ್ಲ ಗೊಂಚಲುಗಳು ಅಲೆಗಳಂತೆ ಅಲುಗಾಡಲು ಪ್ರಾರಂಭಿಸಿದವು. ಯಾರೂ ಮುಟ್ಟದಿದ್ದರೂ ತಮ್ಮಷ್ಟಕ್ಕೆ ತಾವೇ ಹಾಗೆ ಅಲುಗಾಡತೊಡಗಿದವು. ಎಲ್ಲರೂ ನಡೆಯುತ್ತಿದ್ದುದ್ದನ್ನು ನೋಡುತ್ತಿದ್ದರು. ಒಂದಾದ ಮೇಲೊಂದರಂತೆ ಅವುಗಳು

ಅಲ್ಲಾಡುವುದನ್ನು ನಿಲ್ಲಿಸಿದವು. ನಂತರ ಆ ತಂತಿಯ ಇನ್ನೊಂದು ತುದಿಯಲ್ಲಿ ತಗುಲಿ ಹಾಕಿದ್ದ ಗೊಂಚಲಿನಿಂದ ಆ ಹುಡುಗ ಹೊರ ಬಂದನು. ಅವನು ತನ್ನ ಬಟ್ಟೆಗಳನ್ನು ಮತ್ತೆ ಹಾಕಿಕೊಳ್ಳುತ್ತ "ನಾನು ನನ್ನೋರ್ನೆಲ್ಲಾ ನೋಡ್ಕೊಡ್ಬಂದೆ. ಈಗ ಸಮಾಧಾನ ಆಯ್ತು" ಎಂದ.

ಅಂದಿನಿಂದ ಪ್ರತಿ ವರುಷ ಇದು ನಡೆಯತೊಡಗಿತು. ಅವನು ಬೆಳೆದು ದೊಡ್ಡವನಾದ ಮೇಲೆ ಕಡಲಿಗೆ ಬೇಟೆಗಾಗಿ ಹೋಗಲು ಪ್ರಾರಂಭಿಸಿದ. ಆಗ ಎಲ್ಲ ಕಡಲಾನೆಗಳನ್ನೂ ಗುರುತಿಸುತ್ತಿದ್ದ. ಆತನೊಂದಿಗೆ ಹಿಂದೆ ಸರಿಯಾಗಿ ವ್ಯವಹರಿಸದಿದ್ದ ಕಡಲಾನೆಯನ್ನು ಕಂಡರೆ ಅಥವಾ ಅವನ ಮೇಲೆ ಹಿಂದೆಂದೋ ಕೋಪದಿಂದ ನಡೆದುಕೊಂಡಿದ್ದ ಕಡಲಾನೆಯನ್ನು ನೋಡಿದರೆ ಜೋರಾಗಿ ಎಲ್ಲ ಬಲವನ್ನು ಉಪಯೋಗಿಸಿ ಅದಕ್ಕೆ ಘಾಸಿ ಮಾಡಲು ತನ್ನ ಭರ್ಜಿಯನ್ನು ಎಸೆಯುತ್ತಿದ್ದ. ಆದರೆ ಅವನೊಂದಿಗೆ ಸ್ನೇಹದಿಂದಿದ್ದ ಕಡಲಾನೆಯನ್ನು ಕಂಡರೆ ನಮ್ರವಾಗಿ ಅದರ ಕಡೆಗೆ ಭರ್ಜಿಯನ್ನು ಎಸೆಯುತ್ತಿದ್ದ. ಅದರ ಶರೀರವನ್ನು ಕೊಲ್ಲುವಾಗ ಅದಕ್ಕೆ ಹೆಚ್ಚು ಘಾಸಿಯಾಗದಂತೆ ಎಚ್ಚರ ವಹಿಸುತ್ತಿದ್ದ. ಬೇಟೆಯಿಂದ ತನ್ನ ಕಾಸ್ಗಿಕ್ಕಿಗೆ ಮರಳಿದ ಮೇಲೆ ಅವನು ಈ ಎಲ್ಲ ವಿಷಯಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿದ್ದ. ದೊಡ್ಡವನಾಗಿ ಮದುವೆ ಮಾಡಿಕೊಂಡು ಮಕ್ಕಳ ತಂದೆಯೂ ಆದ.

ವಯಸ್ಸಾದ ಮೇಲೆ ಅವನು ತನ್ನ ಬಾಲ್ಯದ ನೆನಪುಗಳನ್ನು ಎಲ್ಲರೊಡನೆ ಹಂಚಿಕೊಳ್ಳುತ್ತಿದ್ದ. ಅವನು ಕಂಡುಕೊಂಡಿದ್ದ ಜ್ಞಾನವನ್ನು ಎಲ್ಲರೊಡನೆ ಹಂಚಿಕೊಳ್ಳುತ್ತಿದ್ದ. ಆಗಲೂ ಕೂಡ ಅವನು ಹಿಮದ ಗುಂಡಿಗಳು, ನೀರಿನ ಸೆಳೆಯ ಜಾಗಗಳು, ಮನೆಯ ನೆಲಗಳು ಇವೆಲ್ಲವನ್ನೂ ಚೆನ್ನಾಗಿ ಸ್ವಚ್ಛವಾಗಿ ಇರಿಸಲು ಹೇಳುತ್ತಿದ್ದ. ಏಕೆಂದರೆ ಇವುಗಳ ಮೂಲಕವೇ ತಮ್ಮ ಮತ್ತು ಆ ಕಡಲಾನೆಗಳ ನಡುವಿನ ದಾರಿ ಸುಗಮವಾಗುವುದು ಎಂದು ತಿಳಿ ಹೇಳುತ್ತಿದ್ದ.

ಆಧಾರ

* Skyloom Native American Myth Story and Song – Brian.

(ಈ ಕಥೆಯನ್ನು ಮೊದಲು Ann Fienup-Riordan ಮತ್ತು Marie Meade ಎನ್ನುವವರು ಯುಪಿಕ್ ಎಸ್ಕಿಮೋ ಜನಾಂಗದವರಿಂದ ಕೇಳಿ ದಾಖಲಿಸಿದ್ದರು.)

❑

(20)

'ವೂಡೂ' ಎಂಬ ಜಾನಪದ ಧಾರ್ಮಿಕ ಸಂಸ್ಕೃತಿ

ಸರಿತಾ ನವಲಿ
ವೆಸ್ಟ್ ವಿಂಡ್ಸರ್, ನ್ಯೂ ಜೆರ್ಸಿ

*

ಪ್ರಸ್ತಾವನೆ

ನಾವೆಲ್ಲ ಅದೆಷ್ಟೋ ವರ್ಷಗಳಿಂದ ನಮ್ಮಲ್ಲಿ ಕಂಡುಬರುವ, ರೂಢಿಯಲ್ಲಿರುವ ಮಾಟ-ಮಂತ್ರದ ಆಚರಣೆಗಳ ಬಗೆಗಿನ ಮಾತುಗಳನ್ನು ಕೇಳುತ್ತಿದ್ದೇವೆ. ಮಂತ್ರ ಹೇಳಿ ಚಿಕ್ಕ ಮಕ್ಕಳಿಗೆ ದೃಷ್ಟಿ ತೆಗೆಯುವುದು, ಗಿಡಮೂಲಿಕೆಯ ಔಷಧಿಗಳನ್ನು ಮಂತ್ರಿಸಿ ಕೊಟ್ಟು ಚಿಕಿತ್ಸೆ ಮಾಡುವುದು, ಆರೋಗ್ಯ ಸುಧಾರಣೆ, ಭಯ ಪರಿಹಾರ ಎಂದು ಮಂತ್ರಿಸಿದ ತಾಯಿತ ಕಟ್ಟಿಕೊಳ್ಳುವುದು, ಎಲ್ಲವೂ ಒಳಿತಾಗಲೆಂದು ಮನೆಯಲ್ಲಿ ಮಂತ್ರಿಸಿದ ತೆಂಗಿನಕಾಯಿ ಕಟ್ಟುವುದು...ಹೀಗೆ ಮನುಷ್ಯನ ಬದುಕಿಗೆ ಆಧಾರವಾಗಿರುವ ನಂಬಿಕೆಯನ್ನು ಮೂಲವಾಗಿಸಿಕೊಂಡು ಮಂತ್ರ ಹಾಕುವ ಪದ್ಧತಿಯೂ ಮುಂದುವರೆಯುತ್ತ ಬಂದಿರುವುದನ್ನು ನೋಡುತ್ತೇವೆ. ಇದರಂತೆ ಅನೇಕ ಸಂದರ್ಭಗಳಲ್ಲಿ ಸಂಕುಚಿತ ಮನಸ್ಸಿನ, ದ್ವೇಷ-ಅಸೂಯೆ ತುಂಬಿದ, ಕೀಳರಿಮೆಯನ್ನು ಬೆಳೆಸಿಕೊಂಡ, ಸೇಡಿನ ಮನೋಭಾವದ ಜನರು ತಮ್ಮ ಸ್ವಾರ್ಥಕ್ಕಾಗಿ, ಇನ್ನೊಬ್ಬರ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಮಾಟ ಮಾಡಿಸುವ, ವಾಮಾಚಾರದ ಪದ್ಧತಿಯನ್ನು ಅವಲಂಬಿಸುವುದನ್ನು ಕಾಣುತ್ತೇವೆ. ಈ ಮಾಟ-ಮಂತ್ರವೆಂದರೇನು? ಪ್ರಕೃತಿಯನ್ನು, ಭೂತ-ಪ್ರೇತಾದಿಗಳನ್ನು ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನ್ನು ಮಾರ್ಪಡಿಸಲಾಗುವುದೆಂಬ ಅಭಿಪ್ರಾಯವುಳ್ಳ ವಿದ್ಯೆಯನ್ನು ಮಾಟ-ಮಂತ್ರವೆಂದು ಅರ್ಥೈಸಬಹುದು. ಅನೈಸರ್ಗಿಕ ಅಥವಾ ಅಮಾನುಷ ವಿಧಾನಗಳಲ್ಲಿ ನೈಸರ್ಗಿಕ ವ್ಯಾಪಾರಗಳನ್ನು ನಿಯಂತ್ರಿಸುವ ಕ್ರಿಯೆಗೆ ಮಾಟವೆಂಬ ಅರ್ಥವೆಂದು ವಿಶ್ವಕೋಶವೊಂದರಲ್ಲಿ ತಿಳಿಸಲಾಗಿದೆ. ಇಂತಹ ಮಾಟ-ಮಂತ್ರಗಳು ರಹಸ್ಯವಾಗಿ ನಡೆಯುವುವಲ್ಲದೇ ಕೆಡುಕನ್ನು ಉಂಟುಮಾಡಿ, ಹಿಂಸಾತ್ಮಕವಾಗಿಯೂ

ನಡೆಯುತ್ತವೆ. ಮಾಟ-ಮಂತ್ರವಿಲ್ಲದ ಜಾಗವಿಲ್ಲ. ಇದು ವಿಶ್ವದ ಎಲ್ಲ ಕಡೆ ಕಂಡುಬರುವ ಪದ್ಧತಿಯಾಗಿದ್ದು, ಬೇರೆ-ಬೇರೆ ರೀತಿಯಲ್ಲಿ ಈ ಮಾಟ-ಮಂತ್ರದ ಆಚರಣೆಗಳನ್ನು ಕಾಣಬಹುದಾಗಿದೆ. ಕೆಲವು ಕಡೆ ಇಂಥ ಆಚರಣೆಗಳು ಹೆಚ್ಚಿನ ಮಹತ್ವವನ್ನು ಪಡೆದಿವೆಯಾದರೂ, ಕೆಲವು ಕಡೆ ಈ ಎಲ್ಲ ಆಚರಣೆಗಳನ್ನು ಕಡೆಗಣಿಸಿದ್ದನ್ನೂ ನೋಡಬಹುದು. ಒಬ್ಬ ವ್ಯಕ್ತಿ ತನ್ನ ಮನಸ್ಸಿನ ಇಂಗಿತವನ್ನು ಮತ್ತು ತನ್ನ ಪರಿಸ್ಥಿತಿಯನ್ನು ಮಂತ್ರವಾದಿಗೆ ವಿವರಿಸಿ ಅದಕ್ಕೆ ಪರಿಹಾರ ಬೇಡುವುದರೊಂದಿಗೆ, ಮಂತ್ರವಾದಿ ನೀಡುವ ಭರವಸೆಯ ಮಾತುಗಳನ್ನು ನಂಬುತ್ತಾನೆ. ಅದರಂತೆ ಕೆಲವು ಮಂತ್ರವಾದಿಗಳು ತಾವು ರೂಢಿಸಿಕೊಂಡಿರುವ ಮಂತ್ರಶಕ್ತಿಯಿಂದ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳನ್ನು ನಿವಾರಿಸಲು ಪ್ರಯತ್ನಪಡುತ್ತಾರೆ. ಇದರಿಂದ ಜನರ ಪ್ರೀತ್ಯಾದರಗಳನ್ನು ಗಳಿಸಿ ಗೌರವವನ್ನೂ ಪಡೆಯುತ್ತಾರೆ. ಮಂತ್ರವಾದಿ, ಅಲೌಕಿಕ ಶಕ್ತಿಯೊಂದನ್ನು ವಶೀಕರಿಸಿಕೊಂಡಿದ್ದು, ಆ ಶಕ್ತಿ ಮಂತ್ರವಾದಿಯ ಮಾತು ಕೇಳುತ್ತದೆ ಎಂಬ ನಂಬಿಕೆ ಜನರಲ್ಲಿ ಕಂಡುಬರುತ್ತದೆ. ಕೆಲವೊಮ್ಮೆ ಮಾಂತ್ರಿಕರೂ ಕಡಿಮೆ ಸಮಯದಲ್ಲಿ ಸೇಡಿನ ಮನೋಭಾವದವರ ಇಚ್ಛೆಯನ್ನು ನಡೆಸಿಕೊಡುವುದಾಗಿ ಭರವಸೆಯನ್ನು ನೀಡಿ ಪರಿಸ್ಥಿತಿಯ ಲಾಭವನ್ನು ಪಡೆದುಕೊಳ್ಳುತ್ತಾರೆ. ಮಾಂತ್ರಿಕ ನುಡಿಗಳು, ಅವುಗಳಲ್ಲಿನ ಮಾಂತ್ರಿಕ ಶಕ್ತಿ, ಕೆಲವು ವ್ಯಕ್ತಿಗಳು ಅಂತಹ ನುಡಿಗಳನ್ನು ನುಡಿದಾಗ ಆಗುವ ಪರಿಣಾಮ ಇವೆಲ್ಲವೂ ಮಾಟ-ಮಂತ್ರದಲ್ಲಿನ ನಂಬಿಕೆಯನ್ನು ಗಟ್ಟಿಗೊಳಿಸುತ್ತ ಬಂದಿವೆ. ಧರ್ಮದಂತೆಯೇ ವಿಶ್ವದಾದ್ಯಂತವೂ ಕಂಡುಬರುವ ಮಾಟ-ಮಂತ್ರ, ಒಂದೊಂದು ಜನಾಂಗದಲ್ಲಿ ಒಂದೊಂದು ಬಗೆಯಲ್ಲಿ ಕಂಡುಬರುತ್ತದೆ. ಧರ್ಮದ ರೂಪದಲ್ಲಿರುವ ಜಾನಪದ ಮಾಟ-ಮಂತ್ರದ ಪದ್ಧತಿ, 'ವೂಡೂ' ಎಂಬ ಸಂಸ್ಕೃತಿಯಾಗಿ ಆಫ್ರಿಕಾದ ಮೂಲನಿವಾಸಿಗಳಲ್ಲಿ ರೂಢಿಯಲ್ಲಿದ್ದು, ಇಂದಿಗೂ ಅಮೆರಿಕಾದ ಲೂಯಿಸಿಯಾನಾ ರಾಜ್ಯದಲ್ಲಿ ಆಚರಣೆಯಲ್ಲಿದೆ.

ವೂಡೂ ಇತಿಹಾಸ

'ವೂಡೂ' ಸಂಸ್ಕೃತಿಯನ್ನು ಪಶ್ಚಿಮ ಆಫ್ರಿಕಾದ ದಾಹೋಮಿಯನ್ ವೊಡನ್‌ನಲ್ಲಿ ಬೇರೂರಿರುವ ಆಫ್ರಿಕನ್ ಮೂಲದ ಆಧ್ಯಾತ್ಮಿಕ ಜಾನಪದ ಪದ್ಧತಿಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ವೂಡೂವಿನ ಮೂಲವನ್ನು ನೂರಾರು ವರ್ಷಗಳ ಹಿಂದಿನಿಂದ ಆಫ್ರಿಕಾದಲ್ಲಿ ಕಾಣಬಹುದಾಗಿದ್ದು, ಅಲ್ಲಿನ ಬುಡಕಟ್ಟು ಜನಾಂಗದ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಿಂದ 'ವೂಡೂ' ಬೆಳೆದುಬಂದಿದೆ. ಅಮೆರಿಕಾದಲ್ಲಿ ಲೂಯಿಸಿಯಾನಾ ರಾಜ್ಯದಲ್ಲಿ ಹೆಚ್ಚಾಗಿ ಆಚರಣೆಯಲ್ಲಿ ಕಂಡುಬರುವ ಇದು 'ನ್ಯೂ ಆರ್ಲಿಯನ್ಸ್ ವೂಡೂ,' 'ಲೂಯಿಸಿಯಾನ ವೂಡೂ' ಎಂದು ಕರೆಸಿಕೊಂಡು ಇಲ್ಲಿ ನೆಲೆಸಿರುವ ಆಫ್ರಿಕಾ ಮೂಲದ ನಿವಾಸಿಗಳು ಅಭಿವೃದ್ಧಿಪಡಿಸಿದ ಆಫ್ರೋ-ಅಮೆರಿಕನ್ ಧರ್ಮಗಳ ಸಾಂಸ್ಕೃತಿಕ ರೂಪವಾಗಿದೆ. ಮಿಸಿಸ್ಸಿಪ್ಪಿ ಕಣಿವೆಯಲ್ಲಿ ಕಂಡುಬಂದ ಈ ಪದ್ಧತಿಯನ್ನು 'ಮಿಸಿಸ್ಸಿಪ್ಪಿ ವೂಡೂ' ಎಂದೂ ಕರೆಯಲಾಗುತ್ತದೆ. ಆಫ್ರಿಕಾ ದೇಶದ ಜಾನಪದ ಸಂಪ್ರದಾಯವೊಂದು

ಅಮೆರಿಕೆಯಲ್ಲಿ ನೂರಾರು ವರ್ಷಗಳಿಂದ ರೂಢಿಯಲ್ಲಿರುವುದನ್ನು ಈ ದೇಶದ ಇತಿಹಾಸದ ಪುಟಗಳಿಂದ ತಿಳಿದುಕೊಳ್ಳಬಹುದು. ಮಿಸಿಸ್ಸಿಪ್ಪಿ ಕಣಿವೆಯ ಪ್ರಾಂತ್ಯವು ಫ್ರೆಂಚ್ ವಸಾಹತುಶಾಹಿ ಆಡಳಿತದ ಅಧೀನದಲ್ಲಿದ್ದಾಗ ಪಶ್ಚಿಮ ಆಫ್ರಿಕಾದ ನಿವಾಸಿಗಳನ್ನು ಗುಲಾಮರಾಗಿ, ಸೆರೆಯಾಳುಗಳಾಗಿ ಕ್ರಿ.ಶ. 1717ರಿಂದ 1721ರವರೆಗೆ ಲೂಯಿಸಿಯಾನಕ್ಕೆ ಕರೆತರಲಾಯಿತೆಂಬ ಮಾಹಿತಿ ದೊರಕುತ್ತದೆ. ಹೀಗೆ ಆಫ್ರಿಕಾದ ಬೇರೆ-ಬೇರೆ ಭಾಗಗಳಿಂದ ಬಂದು ನೆಲೆಸಿದ ಜನರಲ್ಲಿದ್ದ ಸಾಂಸ್ಕೃತಿಕ ಆಚರಣೆಗಳು, ಭಾಷೆಗಳು, ಧಾರ್ಮಿಕ ಆಚರಣೆಗಳು, ಆತ್ಮ ಮತ್ತು ಪೂರ್ವಜರ ಆರಾಧನೆಯಲ್ಲಿ ಬೇರೂರಿದ್ದ ನಂಬಿಕೆಗಳೆಲ್ಲವೂ ಮುಂದುವರೆದು ವೂಡೂ ಸಂಪ್ರದಾಯ ಬೆಳೆದು ಬಂದ ಮಾಹಿತಿಯನ್ನು ನೀಡುತ್ತವೆ. ತಮ್ಮನ್ನು ರಕ್ಷಿಸಿಕೊಳ್ಳುವುದರೊಂದಿಗೆ ಇತರರಿಗೆ ಹಾನಿ ಮಾಡುವ ಉದ್ದೇಶದಿಂದ ಗಿಡಮೂಲಿಕೆಗಳು, ವಿಷಗಳು, ಮಾಟ-ಮಂತ್ರ, ಮೋಡಿ ಮತ್ತು ತಾಯಿತಗಳ ಬಗ್ಗೆ ತಿಳಿವು ಈ ಜಾನಪದ ಸಂಪ್ರದಾಯದ ಪ್ರಮುಖ ಅಂಶಗಳಾಗಿರುವುದು ತಿಳಿದುಬರುತ್ತದೆ. ಪೂರ್ವಜರಿಗೆ ಪೂಜೆ ಸಲ್ಲಿಸುವುದನ್ನು ಮತ್ತು ಹಿರಿಯರಿಗೆ ಗೌರವ ನೀಡುವುದನ್ನು ವೂಡೂ ಆಚರಣೆಯಲ್ಲಿ ಕಾಣಬಹುದು. ಗೋಚರ ಮತ್ತು ಅಗೋಚರ ಜಗತ್ತುಗಳು ಒಂದಕ್ಕೊಂದು ಬೆಸೆದುಕೊಂಡಿರುವ ಬಗ್ಗೆ ನಂಬಿಕೆ ಹೊಂದಿರುವ ವೂಡೂವಾದಿಗಳು, ತಮ್ಮ ಪೂರ್ವಜರು ಮರಣಹೊಂದಿದ ನಂತರ ಗುಪ್ತ ಜಗತ್ತಿನಲ್ಲಿ ಪರಿವರ್ತನೆಗೊಂಡು ತಮ್ಮೊಂದಿಗೆ ಉತ್ಸಾಹದಿಂದ ಬೆರೆಯುತ್ತಾರೆ ಎಂದೇ ಪರಿಗಣಿಸುತ್ತಾರೆ. ಪೂರ್ವಜರನ್ನು ಪೂಜಿಸುವುದ-ರೊಂದಿಗೆ ವೂಡೂವಾದಿಗಳು 'ಲೋವಾ' ಎಂಬ ಅತಿಮಾನುಷ ಚೇತನ (ಆತ್ಮ)ವನ್ನು ಆರಾಧಿಸುತ್ತಾರೆ. ಗೋಚರ ಜಗತ್ತಿನಲ್ಲಿ ತಾವು ಇಚ್ಛಿಸುವ ಕಾರ್ಯಗಳಿಗಾಗಿ 'ಲೋವಾ' ಆತ್ಮದೊಂದಿಗೆ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾರೆ. ಲೂಯಿಸಿಯಾನಾ ವೂಡೂವಿನಲ್ಲಿ ಕ್ಯಾಥೋಲಿಕ್ ಸಂಪ್ರದಾಯದ ಸಂತರನ್ನು ಮತ್ತು ಸೈತಾನರನ್ನು ಪೂಜಿಸುವ ಪದ್ಧತಿ ಕಂಡುಬರುತ್ತದೆ. ಗುಲಾಮರಾಗಿ ಅಮೆರಿಕಾಗೆ ಬಂದ ಆಫ್ರಿಕಾ ನಿವಾಸಿಗಳು ಲೂಯಿಸಿಯಾನಾ ರಾಜ್ಯದಲ್ಲಿ ಫ್ರೆಂಚರ ಮಾಲೀಕತ್ವದಲ್ಲಿದ್ದ ಕಬ್ಬಿನ ತೋಟಗಳಲ್ಲಿ ಮತ್ತು ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸಗಾರರಾಗಿದ್ದರು. ಆಫ್ರಿಕಾದ ಮೂಲನಿವಾಸಿಗಳ ಧರ್ಮ ಮತ್ತು ಮಾಟ-ಮಂತ್ರ ಆಚರಣೆಯ ಬಗ್ಗೆ ತಿಳುವಳಿಕೆಯಿಲ್ಲದ ಫ್ರೆಂಚ್ ಮಾಲೀಕರು, ಅವರ ಮೇಲೆ ಕ್ಯಾಥೋಲಿಕ್ ನಂಬಿಕೆಗಳನ್ನು ಹೇರಿದ್ದಲ್ಲದೇ ಬಲವಂತದ ಧರ್ಮ ಪರಿವರ್ತನೆಯನ್ನೂ ಮಾಡುತ್ತಿದ್ದರು ಎಂಬ ಮಾಹಿತಿಯಿದೆ. ಇದರಿಂದಾಗಿ ಲೂಯಿಸಿಯಾನಾ ವೂಡೂವಿನಲ್ಲಿ ಪಶ್ಚಿಮ ಆಫ್ರಿಕಾದ ಜಾನಪದ ಸಂಪ್ರದಾಯದೊಂದಿಗೆ ಕ್ಯಾಥೋಲಿಕ್ ಧರ್ಮದ ನಂಬಿಕೆಗಳೂ ಬೆಸೆದುಕೊಂಡಿವೆ. ವೂಡೂ ಮತ್ತು ಕ್ಯಾಥೋಲಿಕ್ ನಂಬಿಕೆಗಳನ್ನು ಸಂಯೋಜಿಸಿ ನವೀಕರಿಸಿದ ವೂಡೂ ಸಂಪ್ರದಾಯವನ್ನು ಲೂಯಿಸಿಯಾನಾ ವೂಡೂ ಆಚರಣೆಯಲ್ಲಿ ನೋಡಬಹುದು. ಈ ಆಧ್ಯಾತ್ಮಿಕ ಜಾನಪದ ಪದ್ಧತಿಯಲ್ಲಿ ಪ್ರಾರ್ಥನಾ ಭಾಷೆಯಾಗಿ 'ಲೂಯಿಸಿಯಾನ ಕ್ರಿಯೋಲ್' ಮತ್ತು 'ಲೂಯಿಸಿಯಾನ ಫ್ರೆಂಚ್' ಭಾಷೆಗಳನ್ನು ಬಳಸುತ್ತಾರೆ. ವೂಡೂ ನಾಯಕರು ಮತ್ತು ವೂಡೂ ರಾಣಿಯರು ತಮ್ಮ ಸಮುದಾಯಗಳಲ್ಲಿ ಪ್ರಭಾವಿ ಪಾತ್ರವನ್ನು ಪಡೆದು,

ಅನೇಕ ಧಾರ್ಮಿಕ ಸಭೆಗಳನ್ನು ಏರ್ಪಡಿಸಿ ಈ ಆಚರಣೆಯನ್ನು ಪ್ರಚಲಿತಗೊಳಿಸಿದ್ದಾರೆ. ಲೂಯಿಸಿಯಾನಾದ ನಿವಾಸಿಗಳು ತಮ್ಮ ದೈನಂದಿನ ಜೀವನದಲ್ಲಿ ತಾಯಿತಗಳ ಬಳಕೆ, ಮಾಂತ್ರಿಕ ಪುಡಿಗಳಿಂದ ಚಿಕಿತ್ಸೆ, ರಕ್ಷಣೆ, ಮಾರ್ಗದರ್ಶನ, ಶತ್ರುಗಳನ್ನು ನೋಯಿಸಲು ಮೋಡಿಯ ಬಳಕೆ ಮತ್ತು ತಮ್ಮ ಪ್ರೀತಿಪಾತ್ರರ ಜೊತೆಗೆ ಸಂಪರ್ಕವನ್ನು ಉಳಿಸಿಕೊಳ್ಳುವ ಪ್ರಯತ್ನ...ಹೀಗೆ ಅನೇಕ ಕಾರಣಗಳಿಂದ ವೂಡೂ ಅನುಯಾಯಿಗಳಾಗಿ ಮುಂದುವರೆದದ್ದನ್ನು ಕಾಣಬಹುದು.

ವೂಡೂ ದೇವಾಲಯ ಮತ್ತು ಆಚರಣೆ

ವೂಡೂ ಆಚರಣೆಗಳು ವೂಡೂ ದೇವಾಲಯಗಳಲ್ಲಿ ನಡೆಯುತ್ತವೆ. ಆತ್ಮಗಳ ಆರಾಧನೆಯನ್ನು ನಿರ್ವಹಿಸುವ ಈ ಸ್ಥಳಗಳನ್ನು 'ಹೌನ್ ಫೋರ್' ಅಥವಾ 'ಹೌಮ್ ಫೋರ್ಟ್' ಎಂದು ಕರೆಯಲಾಗುತ್ತದೆ. 'ಆತ್ಮಗಳ ವಾಸಸ್ಥಾನ' ಎಂದು ಅರ್ಥಕೊಡುವ 'ಫಾನ್ ಹೌನ್'ನಿಂದ ಈ ಪದವು ರೂಪ ತಾಳಿದೆ ಎಂಬ ನಂಬಿಕೆಯಿದೆ. ಈ ದೇವಾಲಯಗಳು ವಿಶಾಲವಾಗಿದ್ದು, ಅರ್ಧದಷ್ಟು ತೆರೆದುಕೊಂಡ ಮಾದರಿಯಲ್ಲಿರುತ್ತವೆ. ದೇವಾಲಯದ ಮಧ್ಯಭಾಗದಲ್ಲಿ, ವೂಡೂ ಆಚರಣೆಯಲ್ಲಿ ಆಹ್ವಾನಗೊಳ್ಳುವ ದೇವರು ಮತ್ತು ಆತ್ಮಗಳು ಅಲ್ಲಿ ನೆರೆದಿರುವ ಅನುಯಾಯಿಗಳೊಂದಿಗೆ ಸಂವಹನ ನಡೆಸುವ ಕಂಬವಿರುತ್ತದೆ. ಈ ಪೂಜಾಸ್ಥಳವನ್ನು ಹಲವು ಬಗೆಯ ವರ್ಣಚಿತ್ರಗಳಿಂದ ಅಲಂಕರಿಸಿದ್ದನ್ನು ಕಾಣಬಹುದು. ಅಲ್ಲಿರುವ ಬಲಿಪೀಠವು ವಿವಿಧ ಬಣ್ಣದ ಮೇಣದಬತ್ತಿಗಳನ್ನು, ಕ್ರೈಸ್ತಮತದ ಸಂತರ ಚಿತ್ರಗಳನ್ನು ಮತ್ತು ಲೋವಾ ಆತ್ಮಗಳಿಗೆ ಸಂಬಂಧಿಸಿದ ಸಾಂಕೇತಿಕ ವಸ್ತುಗಳನ್ನು ಪ್ರದರ್ಶಿಸುತ್ತದೆ. ಪ್ರತಿ ಆಚರಣೆಯ ಮೊದಲು ವಿಶೇಷ ಔತಣವನ್ನು ಏರ್ಪಡಿಸುವ ಸಂಪ್ರದಾಯವಿರುತ್ತದೆ. ಅಲ್ಲದೇ ಪ್ರತಿ ಲೋವಾಗೆ ಸಂಬಂಧಿಸಿದ (ರಂಗೋಲಿಯನ್ನು ಹೋಲುವ) ಧಾರ್ಮಿಕ ಚಿಹ್ನೆಯನ್ನು ರಚಿಸಲಾಗುತ್ತದೆ. ಇಂತಹ ಚಿಹ್ನೆಗಳನ್ನು 'ವೆವ್' ಎಂದು ಕರೆಯುವ ವೂಡೂವಾದಿಗಳು, ಈ ಎಲ್ಲ ಚಿತ್ರಗಳ ಮಾಹಿತಿಯನ್ನು ತಮ್ಮ ದೇವಾಲಯಗಳಲ್ಲಿ ಬರೆಯುತ್ತಾರೆ. ಹಿಟ್ಟಿನಿಂದ ಬರೆಯುವ ಈ ಧಾರ್ಮಿಕ ಸಂಕೇತ, ಅಲ್ಲಿ ಆರಾಧಿಸಲ್ಪಡುವ ಲೋವಾ ಆತ್ಮವನ್ನು ಪ್ರತಿನಿಧಿಸುವುದರೊಂದಿಗೆ, ಈ ಆತ್ಮಗಳಿಗೆ ದಾರಿದೀಪವಾಗುತ್ತದೆ ಎಂಬ ನಂಬಿಕೆ ವೂಡೂವಾದಿಗಳಲ್ಲಿದೆ.

ವೂಡೂ ಆಚರಣೆಯಲ್ಲಿ ತಯಾರಿ, ಆಹ್ವಾನ, ಸ್ವಾಧೀನ ಮತ್ತು ವಿದಾಯ ಎಂಬ ನಾಲ್ಕು ಹಂತಗಳನ್ನು ಪಾಲಿಸಲಾಗುತ್ತದೆ. 'ಹೌಂಗನ್' ಎಂದು ಕರೆಸಿಕೊಳ್ಳುವ ವೂಡೂ ಉಪಾಸಕ ಇಲ್ಲವೇ 'ಮಾಂಬೊ' ಎಂದು ಕರೆಸಿಕೊಳ್ಳುವ ವೂಡೂ ಉಪಾಸಕಿಯ ನೇತೃತ್ವದಲ್ಲಿ ಆಚರಣೆ ಪ್ರಾರಂಭವಾಗುತ್ತದೆ. ಮೊದಲಿಗೆ, ಹೌಂಗನ್ ಅಥವಾ ಮಾಂಬೋ ಮತ್ತು 'ಹೌನ್ಸಿಸ್' ಎಂದು ಕರೆಯಲ್ಪಡುವ ವೂಡೂ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಂದ ನೃತ್ಯ ಇಲ್ಲವೇ ಜಪವನ್ನು ಪ್ರಾರಂಭಿಸಲಾಗುತ್ತದೆ. ಗಿಲಿಕೆಗಳನ್ನು ಮತ್ತು 'ತಂಬೌಲಸ್' ಎಂದು ಕರೆಸಿಕೊಳ್ಳುವ ಧಾರ್ಮಿಕ ನಗಾರಿಗಳನ್ನು ಬಾರಿಸುವುದರೊಂದಿಗೆ, ಅಲ್ಲಿನ

ನರ್ತಕರೊಬ್ಬರಲ್ಲಿ ಆವಾಹನೆ ಮಾಡಲಾದ ಲೋವಾ ಆತ್ಮ ಪ್ರವೇಶಿಸುತ್ತದೆ. ಆತ/ಆಕೆ ಲೋವಾ ಪ್ರಭಾವದ ಅಧೀನನಾಗಿ/ಳಾಗಿ, ಭಾವಪರವಶನಾಗಿ/ಳಾಗಿ ಮೈಮರೆತು ಲೋವಾದ ಆದೇಶಗಳನ್ನೇ ಪಾಲಿಸುತ್ತಾನೆ/ಳೆ. ಪ್ರಾಣಿಬಲಿಯಾಗಿ ಹಂದಿ, ಕುರಿ ಅಥವಾ ಕೋಳಿಯನ್ನು ಬಲಿ ಕೊಡಲಾಗುತ್ತದೆ. ಲೋವಾ ಆತ್ಮದ ಹಸಿವನ್ನು ತೃಪ್ತಿಪಡಿಸುವ ಉದ್ದೇಶದಿಂದ ಅನುಯಾಯಿಗಳು ಬಲಿ ಕೊಡಲಾದ ಪ್ರಾಣಿಯ ರಕ್ತವನ್ನು ಪಾತ್ರೆಯೊಂದರಲ್ಲಿ ಶೇಖರಿಸಿಡುತ್ತಾರೆ. ಲೋವಾದ ಅಧೀನದಲ್ಲಿರುವ ನರ್ತಕ/ನರ್ತಕಿ ಸ್ವಲ್ಪ ರಕ್ತವನ್ನು ಸೇವಿಸುತ್ತಾರೆ. ಅನುಯಾಯಿಗಳು ಬಲಿಕೊಟ್ಟ ಪ್ರಾಣಿಯನ್ನು ಬೇಯಿಸಿ ತಿನ್ನುತ್ತಾರೆ. ವೂಡೂ ಅನುಯಾಯಿಗಳು ಪ್ರಾಣಿಬಲಿಯನ್ನು ಅವರು ನಂಬುವ ದೇವರು ಮತ್ತು ಪೂರ್ವಜರ ಆಶೀರ್ವಾದವೆಂದೇ ತಿಳಿಯುತ್ತಾರೆ.

ವೂಡೂ ಉಪಾಸಕರು (ಪಾದ್ರಿಗಳು)

ಹೌಂಗನ್

ಹೌಂಗನ್ ಎಂದು ಕರೆಸಿಕೊಳ್ಳುವ ವೂಡೂ ಉಪಾಸಕ (ಪಾದ್ರಿ) ಒಬ್ಬ ಆಧ್ಯಾತ್ಮಿಕ ನಾಯಕ. ಆತ ತನ್ನ ಸಮುದಾಯದ ಮುಖಂಡನಾಗಿ ಮತ್ತು ಧಾರ್ಮಿಕ ಮುಖಂಡನಾಗಿ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತಾನೆ. ದೇವರುಗಳೊಂದಿಗೆ ಸಂಪರ್ಕ ಸಾಧಿಸುವ ಶಕ್ತಿಯನ್ನು ಪಡೆದು, ವೂಡೂ ಆಚರಣೆಗಳನ್ನು ನಡೆಸುವ, ಸಂಕೀರ್ಣ ಜ್ಞಾನವನ್ನು ಪಡೆದಿರುವ ವ್ಯಕ್ತಿಯೆಂದು ಪ್ರಾದಿಯನ್ನು ನಂಬುವ ಅನುಯಾಯಿಗಳು ಅವನ ನಿರ್ಧಾರಗಳನ್ನು ಅಂತಿಮ ನಿರ್ಧಾರಗಳೆಂದು ಒಪ್ಪಿಕೊಳ್ಳುತ್ತಾರೆ. ಸ್ವಪ್ನಗಳ ವಿಶ್ಲೇಷಣೆ, ವಿಧಿವತ್ತಾದ ಧಾರ್ಮಿಕ ಆವಾಹನೆ, ಹಸ್ತಸಾಮುದ್ರಿಕೆ, ಭವಿಷ್ಯ ಹೇಳುವ ಕಾರ್ಡುಗಳ ತಿಳುವಳಿಕೆ ಮುಂತಾದ ಕ್ರಮಗಳಿಂದ ಪಾದ್ರಿಯಾದವನು ಲೋವಾಗಳೊಂದಿಗೆ ಸಂಪರ್ಕ ಸಾಧಿಸುತ್ತಾನೆ. ತನ್ನ ಸಮುದಾಯದ ವೂಡೂ ಆಚರಣೆಗಳನ್ನು ಮಾರ್ಪಡಿಸುವ ಅಧಿಕಾರವನ್ನು ಹೊಂದಿರುವ ಪಾದ್ರಿ, ಆ ಸಮುದಾಯದವರಿಂದ ಪೂಜಿಸಲ್ಪಡುವ ನಿರ್ದಿಷ್ಟ ದೇವರುಗಳಿಗೆ ಹೊಂದಿಕೊಳ್ಳುತ್ತಾನೆ. ಈ ಕಾರಣದಿಂದ ಒಂದು ವೂಡೂ ಆಚರಣೆಯು ಇನ್ನೊಂದು ಆಚರಣೆಯಿಂದ ಭಿನ್ನವಾಗಿರುವುದು ಕಂಡುಬರುತ್ತದೆ. ಪಾದ್ರಿಯಾಗಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವ ಈತ ತನ್ನ ಹಿಂಬಾಲಕರಿಂದ ತಪ್ಪೊಪ್ಪಿಗೆಯನ್ನು ಸ್ವೀಕರಿಸುವುದರೊಂದಿಗೆ, ಗೌಪ್ಯ ಸಲಹೆಗಾರನಾಗಿ, ಆರ್ಥಿಕ ಸಮಾಲೋಚಕನಾಗಿ ಸೇವೆ ಸಲ್ಲಿಸುತ್ತಾನೆ. ಹೌಂಗನ್ ತನ್ನ ತಂದೆ ಅಥವಾ ಇತರ ಪುರುಷ ಸಂಬಂಧಿಗಳಿಂದ ತನ್ನ ಸ್ಥಾನವನ್ನು ಪಡೆಯುತ್ತಾನೆ. ಹೌಂಗನ್ನಾಗಿ ಸೇವೆ ಸಲ್ಲಿಸುವಾತ ತನ್ನ ಮುಂದಿನ (ಭವಿಷ್ಯದ) ವೂಡೂ ಉಪಾಸಕನನ್ನು ಚಿಕ್ಕ ವಯಸ್ಸಿನಿಂದಲೇ ಸಿದ್ಧಪಡಿಸುತ್ತಾನೆ. ಹೊಸ ಹೌಂಗನ್ ತನ್ನ ಮೂವತ್ತು ವರ್ಷ ವಯಸ್ಸಿನವರೆಗೆ ತರಬೇತಿಯನ್ನು ಪಡೆದು, ಮೂವತ್ತೊಂದನೇ ವಯಸ್ಸಿನಲ್ಲಿ ಪಾದ್ರಿಯಾಗಲು ಅರ್ಹನಾಗುತ್ತಾನೆ.

ಮಾಂಬೊ

ವೂಡೂ ಆಚರಣೆಯಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಮಹಿಳಾ ಉಪಾಸಕಿಯನ್ನು 'ಮಾಂಬೊ' ಎಂದು ಕರೆಯಲಾಗುತ್ತದೆ. ಈಕೆ ತನ್ನ ಪುರುಷ ಪ್ರತಿರೂಪವಾದ ಹೌಂಗನ್‌ನಂತೆ ಎಲ್ಲ ಆಚರಣೆಗಳನ್ನು ನಿರ್ವಹಿಸುತ್ತಾಳೆ. ಭವಿಷ್ಯ ಹೇಳುವುದು, ಚಿಕಿತ್ಸೆ ನೀಡುವುದು ಮುಂತಾದ ಕೆಲಸಗಳನ್ನು ನಡೆಸಲು ಈಕೆ ವೂಡೂ ಲೋವಾಗಳನ್ನು ಆರಾಧಿಸಿ, ಕರೆನೀಡಿ ಒಲಿಸಿಕೊಳ್ಳುತ್ತಾಳೆ. ಮಾಂಬೊಗಳು ಸ್ವತಂತ್ರ ಚರ್ಚ್ ಗುಂಪುಗಳ ಮುಖ್ಯಸ್ಥರಾಗಿರುತ್ತಾರೆ. ಈ ಕಾರಣದಿಂದ ಇವರು ತಮ್ಮ ದೇವಾಲಯಗಳಲ್ಲಿ ಅನುಯಾಯಿಗಳು ಮತ್ತು ಆಧ್ಯಾತ್ಮಿಕ ಸಹಾಯಕರ ಮೇಲೆ ಅಧಿಕಾರವನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಇವರು ಹೊಂದಿರುವ ಅಧಿಕಾರಗಳು ಅವರು ಪಡೆದುಕೊಂಡಿರುವ ಜ್ಞಾನವನ್ನು ಅವಲಂಬಿಸುತ್ತವೆ. ಅತೀಂದ್ರಿಯ ಶಕ್ತಿ, ದೂರದೃಷ್ಟಿ, ಅಂತಃಪ್ರಜ್ಞೆಗಳನ್ನು ಪಡೆದ ವೂಡೂ ಉಪಾಸಕಿ, ತನ್ನಲ್ಲಿಗೆ ಬರುವ ಅನುಯಾಯಿಗಳ ನೋವುಗಳನ್ನು ಪತ್ತೆಹಚ್ಚಲು, ಚಿಕಿತ್ಸೆ ನೀಡಲು ವೃತ್ತಿಪರ ತರಬೇತಿಯನ್ನು ಪಡೆಯುತ್ತಾಳೆ. ಈ ತರಬೇತಿಯಲ್ಲಿ ವಿವಿಧ ವೂಡೂ ಆತ್ಮಗಳ ಬಗ್ಗೆ ಮತ್ತು ಧಾರ್ಮಿಕ ಆಚರಣೆಗಳ ಬಗ್ಗೆ ಕಲಿಯುತ್ತಾಳೆ. ಮಾಂಬೊಗಳ ಆಯ್ಕೆಯಲ್ಲಿ ಅವರಲ್ಲಿನ ಪ್ರತಿಭೆ, ಜ್ಞಾನ, ಸಾಮರ್ಥ್ಯ, ಸ್ವಪ್ನದಲ್ಲಿ ಕಂಡ ವೂಡೂ ಲೋವಾಗಳ ಆದೇಶ ಮತ್ತು ಲೋವಾ ಆತ್ಮದ ಅಧೀನದಲ್ಲಿರುವ ವ್ಯಕ್ತಿಯ ಅಭಿಪ್ರಾಯವನ್ನು ಪರಿಗಣಿಸಲಾಗುತ್ತದೆ.

ವೂಡೂ ಆಚರಣೆಯಲ್ಲಿನ ಲೋವಾ ಆತ್ಮಗಳು

ವೂಡೂ ಆಚರಣೆಗಳಲ್ಲಿ ಅತಿಮಾನುಷ ಚೇತನ ಪಡೆದಿರುವ ಲೋವಾಗಳನ್ನು ಪ್ರಕೃತಿಯ ಶಕ್ತಿಗಳೆಂದು ನಂಬಲಾಗಿದೆ. ಇವುಗಳನ್ನು ಮೂರು ಪ್ರಮುಖ ಗುಂಪುಗಳಾಗಿ ವಿಂಗಡಿಸಲಾಗಿದೆ. 'ರಾಡಾ', 'ಪೆಟ್ರೋ' ಮತ್ತು 'ಘೆಡೆ.' ಇವುಗಳನ್ನು ವೂಡೂ ನಂಬಿಕೆಯಲ್ಲಿರುವ 'ಬೊಂಡ್ಯೆ' ಎಂಬ ಸರ್ವೋಚ್ಚ ದೇವರು ಮತ್ತು ಬ್ರಹ್ಮಾಂಡದ ಸಂಪೂರ್ಣ ಸಿದ್ಧಾಂತ ಶಕ್ತಿಯ ವಿಸ್ತರಣೆಗಳು ಎಂದು ನಂಬಲಾಗಿದೆ. ಈ ಕಾರಣದಿಂದಾಗಿ ವೂಡೂವಿನಲ್ಲಿ ಈ ಲೋವಾಗಳನ್ನು ದೇವರುಗಳು ಎಂದು ಗುರುತಿಸುವುದಿಲ್ಲ. ಶ್ರದ್ಧೆಯಿಂದ ಸೇವೆ ಸಲ್ಲಿಸಿದಲ್ಲಿ ಲೋವಾಗಳು ಸಹಾಯ ಮಾಡುತ್ತಾರೆ ಎಂಬ ವಿಶ್ವಾಸ ವೂಡೂ ಅನುಯಾಯಿಗಳಲ್ಲಿದೆ. ಲೋವಾಗಳನ್ನು ತಮ್ಮ ಪೂರ್ವಜರೆಂದು ನಂಬುವ ವೂಡೂವಾದಿಗಳು, ಅವರು ತಮ್ಮ ಮತ್ತು ಬ್ರಹ್ಮಾಂಡದ ಸರ್ವೋಚ್ಚ ದೇವರೆಂದು ಪರಿಗಣಿಸುವ ಬೊಂಡ್ಯೆಯ ನಡುವೆ ಮಧ್ಯವರ್ತಿಗಳಂತೆ ಸೇವೆ ಸಲ್ಲಿಸುತ್ತಾರೆ ಎನ್ನುವರು. ನ್ಯೂಆರ್ಲಿಯನ್ಸಿನಲ್ಲಿ ರೂಢಿಯಲ್ಲಿರುವ ವೂಡೂ ಸಂಪ್ರದಾಯದಲ್ಲಿ ಹಲವಾರು ಲೋವಾಗಳನ್ನು ಆರಾಧಿಸುವುದರೊಂದಿಗೆ, ಅಮೆರಿಕನ್ ನಂಬಿಕೆಯಲ್ಲಿದ್ದ ಆತ್ಮಗಳನ್ನು ಮತ್ತು ಪೂರ್ವಜರನ್ನು ತಮ್ಮದೇ ಆದ ರೀತಿಯಲ್ಲಿ ಪ್ರಭಾವಶಾಲಿ ಲೋವಾಗಳಾಗಿ ಸ್ವೀಕರಿಸಿದ್ದಾರೆ. ಅಮೆರಿಕಾದ ಮೂಲನಿವಾಸಿಗಳ ನಂಬಿಕೆಯಲ್ಲಿದ್ದ 'ಬ್ಲ್ಯಾಕ್ ಹಾಕ್'

ಮತ್ತು 'ವೈಟ್ ಹಾಕ್' ಯೋಧರನ್ನು ಮತ್ತು ನ್ಯೂ ಆರ್ಲಿಯನ್ಸಿನಲ್ಲಿ ವಾಸಿಸುತ್ತಿದ್ದ ವೂಡೂ ರಾಣಿ 'ಮೇರಿ ಲಾವೊ' ಮತ್ತು ವೂಡೂ ರಾಜ 'ಡಾಕ್ಟರ್ ಜಾನ್' ಅವರನ್ನೂ ಸಹ ಲೋವಾಗಳೆಂದು ಪರಿಗಣಿಸಿ ಪೂಜಿಸಲಾಗುತ್ತದೆ. ಪ್ರತಿ ಲೋವಾಗಳ ಆರಾಧನೆಯಲ್ಲಿ ವಿವಿಧ ಬಣ್ಣಗಳನ್ನು, ಬಗೆ-ಬಗೆಯ ಕಾಣಿಕೆಗಳನ್ನು, ಪೂಜೆಯ ದಿನವನ್ನು ನಿಗದಿ ಪಡಿಸಲಾಗಿದೆ.

1. **ರಾಡಾ ಲೋವಾ ಆತ್ಮ:** ಈ ಲೋವಾವನ್ನು ಪುರಾತನವಾದ ಲೋವಾವೆಂದು ಪರಿಗಣಿಸಿ ಪೂಜಿಸಲಾಗುತ್ತದೆ. ಇದು ಆಫ್ರಿಕಾ ಮೂಲದಿಂದ ಬಂದಿರುವುದರಿಂದ ಹೆಚ್ಚು ಪರಿಣಾಮಕಾರಿ ಎಂದು ನಂಬಲಾಗಿದೆ. ಗುಲಾಮರಾಗಿ ಬಂದ ಆಫ್ರಿಕಾದ ಮೂಲನಿವಾಸಿಗಳು ವೂಡೂ ಧರ್ಮದೊಳಗಿನ ಪ್ರಮುಖ ಶಕ್ತಿಯಾದ ರಾಡಾ ಲೋವಾವನ್ನು ಲೂಯಿಸಿಯಾನ ವೂಡೂಗೆ ಪರಿಚಯಿಸಿದರು ಎನ್ನಲಾಗುತ್ತದೆ. ರಾಡಾ ಲೋವಾಗಳು ಮುಖ್ಯವಾಗಿ ಜಲಮೂಲದ ಶಕ್ತಿಗಳಾಗಿವೆ. ಆದ್ದರಿಂದ ಈ ಲೋವಾಗಳನ್ನು ನೀರಿನೊಂದಿಗೆ ಪೂಜಿಸಲಾಗುತ್ತದೆ. ಬಿಳಿಯ ಬಣ್ಣದಿಂದ ಗುರುತಿಸಿಕೊಳ್ಳುವ ರಾಡಾ ಲೋವಾಗಳಿಗೆ ಗುರುವಾರವನ್ನು ಪವಿತ್ರವಾದ ದಿನವೆಂದು ನಿಗದಿಸಲಾಗಿದೆ.

ವಿವಿಧ ರಾಡಾ ಲೋವಾಗಳು

(1) **ಅಗ್ವೆ:** ಸಮುದ್ರವನ್ನು ಸಂಕೇತಿಸುವ ಈ ಲೋವಾವನ್ನು ಮೀನುಗಾರರ ಮತ್ತು ನಾವಿಕರ ರಕ್ಷಕನೆಂದು ನಂಬಿ, ಪವಿತ್ರ ಗುರುವಾರದಂದು ಪೂಜಿಸಲಾಗುತ್ತದೆ.

(2) **ಡಂಬಲ್ಲಾ:** ಎಲ್ಲಾ ಲೋವಾಗಳಲ್ಲಿ ಡಂಬಲ್ಲಾ ಲೋವಾ ಪ್ರಮುಖವಾದುದು. ಸ್ವಾಭಾವಿಕವಾಗಿ ಎಲ್ಲಾ ಜೀವಿಗಳ ರೂವಾರಿ ಇದಾಗಿದೆ ಎಂದು ನಂಬಿ, ಈ ಲೋವಾವನ್ನು ಹಾವಿನಂತೆ ರೂಪಿಸಲಾಗಿದೆ. ಈತನನ್ನು ಮತ್ತು ಈತನ ಪತ್ನಿ 'ಆಯಿಡಾ ವೆಡೋ' ಲೋವಾವನ್ನು ಬುದ್ಧಿವಂತರೆಂದು ಪರಿಗಣಿಸಲಾಗಿದೆ. ಡಂಬಲ್ಲಾ ಲೋವಾ ವಿಶ್ವದಾದ್ಯಂತ ಶಾಂತಿ ಮತ್ತು ಏಕತೆಯನ್ನು ಪ್ರತಿಪಾದಿಸುತ್ತದೆ ಎಂದು ವೂಡೂ ಅನುಯಾಯಿಗಳು ನಂಬುತ್ತಾರೆ.

(3) **ಆಯಿಡಾ ವೆಡೋ:** ಡಂಬಲ್ಲಾ ಲೋವಾದ ಪತ್ನಿಯೆಂದು ಪರಿಗಣಿಸಲ್ಪಡುವ ಆಯಿಡಾ ವೆಡೋ, ಸಂತಾನ ಮತ್ತು ಹೊಸ ಜೀವನದ ಲೋವಾ ಆಗಿರುವಳು. 'ಕಾಮನಬಿಲ್ಲಿನ ಹಾವು' ಎಂದು ಕರೆಯಲ್ಪಡುವ ಇವಳು ಹಾವಿನ ರೂಪದಲ್ಲಿರುತ್ತಾಳೆ.

(4) **ಆಯಿಜಾನ್:** ಇದು ವ್ಯಾಪಾರ ಮತ್ತು ಹಣಕಾಸಿನ ಮೂಲದ ಲೋವಾ ಆಗಿದೆ. ಇದು ವೂಡೂ ಉಪಾಸಕ ಮತ್ತು ಆತ ನಡೆಸುವ ಧಾರ್ಮಿಕ ಆಚರಣೆಗಳ ರಕ್ಷಕ ಎನ್ನುವ ನಂಬಿಕೆಯಿದೆ. ವೂಡೂ ಆಚರಣೆಯ ಸಂದರ್ಭದಲ್ಲಿ ಇದು ಯಾರನ್ನೂ ಪ್ರವೇಶಿಸುವುದಿಲ್ಲ.

(5) **ಎರ್ಜುಲಿ ಫ್ರೆಡಾ:** ಇದೊಂದು ಸ್ತ್ರೀ ಲೋವಾ ಮತ್ತು ಅತ್ಯಂತ ಪ್ರೀತಿ ಪಾತ್ರವಾದ ಲೋವಾ. ಪ್ರೀತಿ, ಸೌಂದರ್ಯ ಮತ್ತು ಮಡಿವಂತಿಕೆ ಈ ಲೋವಾದ ಲಕ್ಷಣಗಳು. ಈಕೆ ಆದರ್ಶ ಸ್ತ್ರೀಯನ್ನು ಪ್ರತಿನಿಧಿಸಿ, ಪ್ರಣಯ-ಮದುವೆ, ಅದೃಷ್ಟದ ಪ್ರೇರಣೆಯಾಗಿದ್ದಾಳೆ.

(6) **ಪಾಪಾ ಲೆಗ್ಬಾ:** ಲೋವಾ ಜಗತ್ತಿನ ಕಾವಲುಗಾರ ಎಂದು ಪರಿಗಣಿಸುವ ಈ ಲೋವಾ ಅತ್ಯಂತ ಪ್ರಸಿದ್ಧವಾಗಿದೆ. ವೂಡೂ ಆಚರಣೆಯ ಸಮಯದಲ್ಲಿ ಮೊದಲಿಗೆ ಮತ್ತು ಕೊನೆಯಲ್ಲಿ ಪ್ರಾರ್ಥಿಸುವ ಈತನನ್ನು 'ಲೋವಾಗಳ ಹಿರಿಯ' ಎಂದು ನಂಬಲಾಗಿದೆ.

2. ಪೆಟ್ರೋ ಲೋವಾ ಆತ್ಮ

ಈ ಲೋವಾಗಳು ತೀವ್ರವಾದ ಮತ್ತು ಕಾಳಗದ ಮನೋಧರ್ಮ ಹೊಂದಿದ ಲೋವಾಗಳಾಗಿವೆ. ಇವು ನಕಾರಾತ್ಮಕ, ಕ್ಷುದ್ರ ವಿಷಯ ಮತ್ತು ಅಭ್ಯಾಸಗಳೊಂದಿಗೆ ಸಂಬಂಧ ಹೊಂದಿವೆ. ಅಮೆರಿಕಾದ ವೂಡೂ ಆಚರಣೆಗಳಲ್ಲಿ ಕಂಡುಬರುವ ಈ ಲೋವಾಗಳು ಆಫ್ರಿಕಾದ ವೂಡೂ ಆಚರಣೆಗಳಲ್ಲಿ ಕಂಡುಬರುವುದಿಲ್ಲ. ರೌದ್ರ ರೂಪಿಯಾಗಿರುವ ಈ ಲೋವಾಗೆ, ರೌದ್ರ ನರ್ತನದೊಂದಿಗೆ ಬಲಿಯನ್ನು ನೀಡದಿದ್ದಲ್ಲಿ ಅದರ ಕೋಪ, ಸೇಡು ಮತ್ತು ದ್ವೇಷಕ್ಕೆ ಒಳಗಾಗುತ್ತಾರೆಂಬ ಭಯ ವೂಡೂ ಅನುಯಾಯಿಗಳಲ್ಲಿದೆ. ಪೆಟ್ರೋ ಆಚರಣೆಯಲ್ಲಿ ಕೆಂಪು ಬಣ್ಣದ ಉಡುಪನ್ನು ಧರಿಸಲಾಗುತ್ತದೆ. ಮಂಗಳವಾರವನ್ನು ಪವಿತ್ರ ದಿನವೆಂದು ಪರಿಗಣಿಸಲಾಗಿದೆ. ವಿಲಕ್ಷಣವಾಗಿ ನಗಾರಿ ಬಾರಿಸುವುದು ಮತ್ತು ಉನ್ಮಾದದ ನೃತ್ಯಗಳಿಂದ ಈ ಲೋವಾದ ಆಚರಣೆಯನ್ನು ಮಾಡಲಾಗುತ್ತದೆ.

ವಿವಿಧ ಪೆಟ್ರೋ ಲೋವಾಗಳು

(1) **ಎರ್ಜುಲಿ ಡಾಂಟರ್:** ಇದು ಅಸೂಯೆ ಮತ್ತು ಪ್ರತೀಕಾರದ ಲೋವಾ ಆಗಿದ್ದು, ಕ್ರೂರಿಯಾದ ಸ್ತ್ರೀ ಲೋವಾ ಆಗಿದೆ. ಈ ಲೋವಾದ ಆಚರಣೆಯಲ್ಲಿ ಬರೆಯುವ ವೆವ್ (ರಂಗೋಲಿ) ನಲ್ಲಿ ಕಠಾರಿಯಿಂದ ಇರಿದ ಹೃದಯದ ಚಿತ್ರವನ್ನು ಬಿಡಿಸಲಾಗುತ್ತದೆ.

(2) **ಗ್ರ್ಯಾಂಡ್ ಬೋಯಿಸ್:** ಪ್ರಕೃತಿ ಮತ್ತು ಅರಣ್ಯವನ್ನು ಪ್ರತಿನಿಧಿಸುವ ಈ ಲೋವಾ, ಗಿಡಮೂಲಿಕೆಗಳು, ಸಸ್ಯಗಳು ಮತ್ತು ಮರ-ಗಿಡಗಳೊಂದಿಗೆ ನಿಕಟ ಸಂಬಂಧ ಹೊಂದಿದೆ. ಇದರ ಆಕಾರವು ಸ್ಥೂಲವಾಗಿದ್ದು, ಅರ್ಧ ಮನುಷ್ಯ ಮತ್ತು ಅರ್ಧ ಮರದಂತೆ ಇರುತ್ತದೆ. ಕಾಂಡದಂತಹ ದೇಹವಿದ್ದು, ಬೇರಿನಂತೆ ಪಾದಗಳು ಮತ್ತು ರೆಂಬೆ-ಕೊಂಬೆಗಳಂತೆ ಬೆರಳುಗಳಿರುತ್ತವೆ.

(3) **ಮೈಟ್ ಕ್ಯಾರಿಫೋರ್:** ದುಷ್ಟಶಕ್ತಿಗಳ ಮುಖ್ಯಸ್ಥನೆಂದು ಪರಿಗಣಿಸಲ್ಪಡುವ ಈ ಲೋವಾ ಮೋಡಿ, ಮಾಟ - ಮಂತ್ರಗಳೊಂದಿಗೆ ನಿಕಟ ಸಂಬಂಧ ಹೊಂದಿದೆ. ಈ ಲೋವಾ ಆತ್ಮಕ್ಕೆ ಸಲ್ಲಿಸುವ ಸಮಾರಂಭಗಳನ್ನು ರಸ್ತೆಯ ತಿರುವುಗಳಲ್ಲಿ (ಅಡ್ಡರಸ್ತೆಯಲ್ಲಿ)

ಏರ್ಪಡಿಸುವುದನ್ನು ಕಾಣಬಹುದು. ರಾತ್ರಿಯ ಕತ್ತಲು, ರಸ್ತೆಯ ತಿರುವು ಮತ್ತು ಚಂದ್ರನೊಂದಿಗೆ ಸಂಬಂಧ ಹೊಂದಿರುವ ಈ ಆತ್ಮಕ್ಕೆ ಚಂದ್ರ ಸಂಕೇತವಾಗಿ ಕಾಣಿಸಿಕೊಳ್ಳುತ್ತಾನೆ.

(4) **ಮ್ಯಾರಿನೆಟ್:** ತನ್ನ ಭೌತಿಕ ಜೀವನದಲ್ಲಿ ವೂಡೂ ಉಪಾಸಕಿ (ಮಾಂಬೊ) ಆಗಿದ್ದ ಮ್ಯಾರಿನೆಟ್, ಹುತಾತ್ಮಳಾಗಿ ಮರಣಸಿದ ನಂತರ ಲೋವಾ ಸ್ಥಾನವನ್ನು ಪಡೆದಿದ್ದಾಳೆ. ಈಕೆ ಅತ್ಯಂತ ಹಿಂಸಾತ್ಮಕ ಮತ್ತು ಕೆಟ್ಟತನವನ್ನು ರೂಢಿಸಿಕೊಂಡಿದ್ದರೂ, ಈಕೆಯನ್ನು ದುಷ್ಟಳೆಂದು ಪರಿಗಣಿಸದೇ ಪೂಜಿಸಲಾಗುತ್ತದೆ. ಈಕೆ ತನ್ನ ಜನರನ್ನು ಗುಲಾಮಗಿರಿಯಿಂದ ಬಿಡುಗಡೆ ಮಾಡಿಸುತ್ತಾಳೆ ಎಂಬ ನಂಬಿಕೆ ಇದಕ್ಕೆ ಕಾರಣವಾಗಿದೆ.

(5) **ಟಿ–ಜೀನ್–ಪೆಟ್ರೋ:** ಇದೊಂದು ಏಕಪಾದಿ ಲೋವಾ. ಒಂದು ಪಾದವನ್ನು ಹೊಂದಿರುವ ಕುಬ್ಜ ಎಂದು ಈ ಲೋವಾವನ್ನು ಕರೆಯಲಾಗುತ್ತದೆ. ನ್ಯೂ ಆರ್ಲಿಯನ್ಸಿನ ಸರ್ಪಚೇತನವಾಗಿರುವ ಈ ಲೋವಾ ಹಿಂಸಾತ್ಮಕ ಗುಣವನ್ನು ಹೊಂದಿದೆ. ಇದು ಮಾಂತ್ರಿಕರನ್ನು ರಕ್ಷಿಸುತ್ತದೆ ಎಂದು ನಂಬಲಾಗಿದೆ.

3. ಘೆಡೆ ಲೋವಾ ಆತ್ಮ

ಇವುಗಳನ್ನು ಮೃತಪಟ್ಟವರೊಂದಿಗೆ ಗುರುತಿಸಿ, ಈ ಲೋವಾಗಳು ಮೃತ ಆತ್ಮಗಳನ್ನು ಪ್ರಚೋದಿಸುತ್ತವೆ ಎಂದು ನಂಬಲಾಗಿದೆ. ಸಾವಿನ ಸಮಯದಲ್ಲಿ ಜೀವವನ್ನು ಈ ಲೋವಾಗಳು ಕಾಪಾಡುತ್ತವೆ ಎಂದೂ ನಂಬುತ್ತಾರೆ. ದುಷ್ಟಶಕ್ತಿಗಳನ್ನು ನಿವಾರಿಸಿ ಮಕ್ಕಳನ್ನು ರಕ್ಷಿಸಲು ಘೆಡೆ ಲೋವಾ ಆತ್ಮಕ್ಕೆ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಚಿಕಿತ್ಸೆಯ ಸಮಯದಲ್ಲಿ ಅಸಾಧಾರಣ ಶಕ್ತಿ ತೋರಿ ಸಾವನ್ನು ತಡೆಯಬಹುದೆಂದು ಈ ಆತ್ಮವನ್ನು ಆವಾಹನೆ ಮಾಡಲಾಗುತ್ತದೆ. ಇವುಗಳ ಪವಿತ್ರ ದಿನ ಶುಕ್ರವಾರ ಮತ್ತು ಸಾಂಪ್ರದಾಯಿಕ ಬಣ್ಣ ನೇರಳೆ, ಕಪ್ಪು ಮತ್ತು ಬಿಳಿ.

ವಿವಿಧ ಘೆಡೆ ಲೋವಾಗಳು

(1) **ಬ್ಯಾರನ್ ಸಮೇಡಿ:** ಇದು ಮೃತ್ಯುವಿನ ಲೋವಾ ಆಗಿದ್ದು, ಮಕ್ಕಳ ರಕ್ಷಕ ಆತ್ಮವೂ ಆಗಿದೆ. ಅನಾರೋಗ್ಯಕ್ಕೆ ಒಳಗಾದ ಮಕ್ಕಳಿಗಾಗಿ ಈ ಲೋವಾವನ್ನು ಪ್ರಾರ್ಥಿಸುತ್ತಾರೆ. ಇದೊಂದು ಮಹಾನ್ ಜಾದೂಗಾರನೆಂದು ನಂಬಿ, ಸಾವು ಸಮೀಪಿಸಿದಾಗ ಚಿಕಿತ್ಸೆ ನೀಡಲು ಆವಾಹನೆ ಮಾಡಲಾಗುತ್ತದೆ.

(2) **ಮೇಡಂ ಬ್ರಿಗೆಟ್:** ಸಾವಿನ ಲೋವಾ ಆಗಿರುವ ಮೇಡಂ ಬ್ರಿಗೆಟ್, ಬ್ಯಾರನ್ ಸಮೇಡಿಯ ಪತ್ನಿ. ಇವಳು ರಕ್ಷಕಳು ಮತ್ತು ಆಧ್ಯಾತ್ಮಿಕ ಗುರು ಎಂದು ನಂಬಲಾಗಿದೆ. ಇವಳು ಮೃತರ ಮತ್ತು ಸ್ಮಶಾನದ ರಕ್ಷಕಳಾಗಿದ್ದಾಳೆ.

ವೂಡೂ ಆಚರಣೆಯಲ್ಲಿ ಬಳಸುವ ಸಾಮಗ್ರಿಗಳು ವೂಡೂ ಮೇಣದಬತ್ತಿಗಳು, ಉದ್ದೇಶ ಮತ್ತು ಬಳಕೆ

ವಿಶ್ವದಾದ್ಯಂತ ಅನೇಕ ಧರ್ಮಗಳ ಆಚರಣೆಗಳಲ್ಲಿ ಮೇಣದಬತ್ತಿಗಳನ್ನು ಹಚ್ಚಿ ಪ್ರಾರ್ಥನೆ ಸಲ್ಲಿಸುವುದನ್ನು ನಾವು ನೋಡುತ್ತೇವೆ. ವೂಡೂ ಉಪಾಸಕ ಮೇಣದಬತ್ತಿಯ ಬೆಳಕಿನಲ್ಲಿ ನಿರ್ದಿಷ್ಟ ಮಂತ್ರಗಳನ್ನು ಉಚ್ಚರಿಸುತ್ತ ಆತ್ಮಗಳೊಂದಿಗೆ ಸಂಪರ್ಕ ಸಾಧಿಸುವುದನ್ನು ಮತ್ತು ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವುದನ್ನು ನೋಡಬಹುದು. ವೂಡೂ ಆಚರಣೆಯಲ್ಲಿ ಅದೃಷ್ಟ, ದುಡ್ಡು, ಪ್ರೀತಿ, ಸಂಪತ್ತು, ಆರೋಗ್ಯ, ರಕ್ಷಣೆ ಪಡೆಯುವ ಉದ್ದೇಶಗಳನ್ನಿಟ್ಟುಕೊಂಡು ಮೇಣದಬತ್ತಿಗಳನ್ನು ಬಳಸಲಾಗುತ್ತದೆ. ಪ್ರಾರ್ಥನೆಯ ಮೊದಲು ಈ ಮೇಣದಬತ್ತಿಗಳಿಗೆ ವೂಡೂ ತೈಲಗಳನ್ನು ಲೇಪಿಸಿ ಆಚರಣೆಗೆ ತಯಾರಿ ಮಾಡಿಕೊಳ್ಳಲಾಗುತ್ತದೆ. ಇಲ್ಲಿ ಬಳಸಲಾಗುವ ಮೇಣದಬತ್ತಿಗಳನ್ನು ವಿವಿಧ ಬಣ್ಣಗಳನ್ನು ಉಪಯೋಗಿಸಿ ತಯಾರಿಸಲಾಗುವುದು. ಈ ಬಣ್ಣಗಳು ವೂಡೂ ಮೇಣದಬತ್ತಿಗಳನ್ನು ಬಳಸುವ ಬೇರೆ-ಬೇರೆ ಉದ್ದೇಶಗಳನ್ನು ಬಿಂಬಿಸುತ್ತವೆ.

ನಿಗದಿತ ವ್ಯಕ್ತಿಯ ಪರವಾಗಿ ಆತ್ಮದಲ್ಲಿ ಪ್ರಾರ್ಥನೆ ಸಲ್ಲಿಸುವಾಗ ಮೇಣದಬತ್ತಿಯನ್ನು ಆ ವ್ಯಕ್ತಿಯ ಹೆಸರಿನಿಂದ ಅಲಂಕಾರಗೊಳಿಸಿ, ವೂಡೂ ಆಚರಣೆಯಲ್ಲಿ ಬಳಸಲಾಗುವ ಎಣ್ಣೆ ಲೇಪಿಸಿ ಹೊತ್ತಿಸುತ್ತಾರೆ. ಆ ವ್ಯಕ್ತಿಯ ಹೆಸರನ್ನು ಮತ್ತೆ-ಮತ್ತೆ ಉಚ್ಚರಿಸುವುದರೊಂದಿಗೆ ಮಂತ್ರಗಳನ್ನು ಮತ್ತು ಮಾಂತ್ರಿಕ ನುಡಿಗಳನ್ನು ಪಠಿಸಲಾಗುತ್ತದೆ. ಬೇರೆ-ಬೇರೆ ಬಣ್ಣದ ಮೇಣದಬತ್ತಿಗಳನ್ನು ಬೇರೆ-ಬೇರೆ ಉದ್ದೇಶಗಳಿಗೆ ಬಳಸುವುದನ್ನು ನೋಡಬಹುದು.

ಕಂದು ಬಣ್ಣದ ಮೇಣದಬತ್ತಿ: ಕಾನೂನಿಗೆ ಸಂಬಂಧಿಸಿದ ಕೆಲಸಗಳಿಗೆ ಮತ್ತು ಜಯಕ್ಕಾಗಿ ಪಾರ್ಥನೆ.

ಕಪ್ಪು ಮೇಣದಬತ್ತಿ: ದುಷ್ಟಶಕ್ತಿಗಳನ್ನು ಓಡಿಸಲು ಪ್ರಾರ್ಥನೆ.

ಬಿಳಿ ಮೇಣದಬತ್ತಿ: ಆಧ್ಯಾತ್ಮಿಕ ಚಿಕಿತ್ಸೆ ಮತ್ತು ಶುದ್ಧತೆಗಾಗಿ ಪ್ರಾರ್ಥನೆ.

ನೀಲಿ ಮೇಣದಬತ್ತಿ: ಸಂತೋಷ, ಏಕತೆ ಮುಂತಾದ ಒಳ್ಳೆಯ ಉದ್ದೇಶಗಳಿಗಾಗಿ ಪ್ರಾರ್ಥನೆ.

ಹಸಿರು ಮೇಣದಬತ್ತಿ: ಸಂಪತ್ತು, ಶ್ರೀಮಂತಿಕೆ, ಒಳ್ಳೆಯ ಕೆಲಸ, ಒಳ್ಳೆಯ ಬೆಳೆ (ಸುಗ್ಗಿ) ಗಾಗಿ ಪ್ರಾರ್ಥನೆ.

ಕೆಂಪು ಮೇಣದಬತ್ತಿ: ಪ್ರೀತಿ, ಜೀವನೋತ್ಸಾಹ ಮತ್ತು ಉತ್ತಮ ಆರೋಗ್ಯಕ್ಕಾಗಿ ಪ್ರಾರ್ಥನೆ.

ಹಳದಿ ಮೇಣದಬತ್ತಿ: ಸ್ನೇಹ ಮತ್ತು ಆಕರ್ಷಣೆ.

ಗುಲಾಬಿ ಬಣ್ಣದ ಮೇಣದಬತ್ತಿ: ಆಕರ್ಷಣೆ ಮತ್ತು ಪ್ರಣಯ.

ನೇರಳೆ ಬಣ್ಣದ ಮೇಣದಬತ್ತಿ: ಶಕ್ತಿಯನ್ನು ಪಡೆಯಲು ಮತ್ತು ಮಹತ್ವಾಕಾಂಕ್ಷೆಗಳನ್ನು ಈಡೇರಿಸಲು ಪ್ರಾರ್ಥನೆ.

ಕೇಸರಿ ಮೇಣದಬತ್ತಿ: ಭವಿಷ್ಯವನ್ನು ತಿಳಿಯಲು ಮತ್ತು ಯೋಜನೆಗಳನ್ನು ಬದಲಾಯಿಸುವ ಪ್ರಯತ್ನಗಳಿಗಾಗಿ ಪ್ರಾರ್ಥನೆ.

ಇದಲ್ಲದೇ, ಕೆಲವು ಬಣ್ಣದ ಮೇಣದಬತ್ತಿಗಳನ್ನು ಜೊತೆಯಾಗಿಸಿಕೊಂಡು ಬೇರೆ-ಬೇರೆ ಉದ್ದೇಶಗಳಿಗಾಗಿ ಪ್ರಾರ್ಥನೆ ಸಲ್ಲಿಸುವುದನ್ನು ನೋಡಬಹುದು.

ವೂಡೂ ತೈಲಗಳು ಮತ್ತು ಬಳಕೆ

ವೂಡೂ ಮೇಣದಬತ್ತಿಗಳಂತೆಯೇ ವಿವಿಧ ಉದ್ದೇಶಗಳಿಂದ ಬಗೆ-ಬಗೆಯ ತೈಲಗಳನ್ನು ವೂಡೂ ಆಚರಣೆಯಲ್ಲಿ ಬಳಸಲಾಗುತ್ತದೆ. ಅಂದುಕೊಂಡ ಕಾರ್ಯಗಳು ಮತ್ತು ಅವುಗಳನ್ನು ನೆರವೇರಿಸಲು ನೆರವಾಗುವ ಶಕ್ತಿಗಾಗಿ ಈ ತೈಲಗಳನ್ನು ಉಪಯೋಗಿಸಲಾಗುತ್ತದೆ. ಈ ತೈಲಗಳು ಅಗೋಚರ ಆತ್ಮಗಳ ಪ್ರಯಾಣವನ್ನು ಸುಲಭಗೊಳಿಸುತ್ತವೆ ಎಂಬ ನಂಬಿಕೆಯಿದೆ. ವಿವಿಧ ಗಿಡಮೂಲಿಕೆಗಳನ್ನು ಬಳಸಿ, ಮನೆಯಲ್ಲೇ ತಯಾರಿಸಲ್ಪಟ್ಟ ತೈಲಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ ಎಂದು ವೂಡೂ ಉಪಾಸಕರು ಮತ್ತು ಅನುಯಾಯಿಗಳು ನಂಬುತ್ತಾರೆ.

ಅದೃಷ್ಟ ಮತ್ತು ಸಮೃದ್ಧಿಗಳನ್ನು ತಮ್ಮತ್ತ ಆಕರ್ಷಿಸಲು ಕೆಲವು ತೈಲಗಳನ್ನು ಸುಗಂಧದ್ರವ್ಯಗಳಂತೆ ದೇಹಕ್ಕೆ ಲೇಪಿಸಿಕೊಳ್ಳುತ್ತಾರೆ. ವೂಡೂ ಮೇಣದಬತ್ತಿಗೆ ಲೇಪಿಸಲು, ನಿರ್ದಿಷ್ಟ ವ್ಯಕ್ತಿಯ ಮೇಲೆ ಶಕ್ತಿ ಮತ್ತು ಪ್ರಭಾವವನ್ನು ಪಡೆದು, ಆತನ/ಆಕೆಯ ಪ್ರೀತಿ-ಆಸಕ್ತಿಗಳನ್ನು ತಮ್ಮತ್ತ ಸೆಳೆಯಲು ಈ ತೈಲಗಳ ಬಳಕೆಯಾಗುತ್ತದೆ. ಆಧ್ಯಾತ್ಮಿಕ ಶುದ್ಧೀಕರಣಕ್ಕಾಗಿ ಸ್ನಾನದಲ್ಲಿ ವೂಡೂ ತೈಲಗಳನ್ನು ಉಪಯೋಗಿಸುವರು. ಕೆಲಸದ ಸ್ಥಳಗಳಲ್ಲಿ ಈ ತೈಲಭರಿತ ಶೀಷೆಗಳನ್ನು ಇರಿಸಿದರೆ, ಅದು ಅದೃಷ್ಟ ಮತ್ತು ರಕ್ಷಣೆಯ ಸಂಕೇತವೆಂದೂ ನಂಬಲಾಗುತ್ತದೆ. ನಿರ್ದಿಷ್ಟ ಪ್ರಮಾಣದಲ್ಲಿ ಸಸ್ಯದ ಸಾರ, ಗಿಡಮೂಲಿಕೆಗಳ ತೈಲಾಂಶವನ್ನು ಮಿಶ್ರಣಗೊಳಿಸಿ ಈ ತೈಲಗಳನ್ನು ತಯಾರಿಸಲಾಗುತ್ತದೆ.

ವಿವಿಧ ವೂಡೂ ತೈಲಗಳು

(1) **ಮಾ ಫೋರ್ ಥೀವ್ಸ್ ತೈಲ:** ಕಾಯಿಲೆ ಮತ್ತು ವಿಪತ್ತುಗಳ ವಿರುದ್ಧ ರಕ್ಷಣೆ, ನಕಾರಾತ್ಮಕ ವಾತಾವರಣದಿಂದ ಮನೆಯನ್ನು ಶುದ್ಧಿಗೊಳಿಸಲು, ವ್ಯಕ್ತಿಯನ್ನು ನಕಾರಾತ್ಮಕ ಯೋಚನೆಗಳಿಂದ ಮುಕ್ತಗೊಳಿಸಲು ಬಳಕೆ.

(2) **ಅನ್ ಕ್ರಾಸಿಂಗ್ ತೈಲ:** ಮಾಂತ್ರಿಕ ನುಡಿಗಳು, ವಾಮಾಚಾರ ಮತ್ತು ವ್ಯಕ್ತಿಯ ದುರದೃಷ್ಟವನ್ನು ಹೊರಹಾಕಲು ಬಳಕೆ.

(3) **ಕಮ್ ಟು ಮಿ ತೈಲ:** ಹೆಸರೇ ಸೂಚಿಸುವಂತೆ ಪ್ರೀತಿ ಮತ್ತು ಪ್ರಣಯದ ಉದ್ದೇಶದಿಂದ ಈ ತೈಲವನ್ನು ಬಳಸಲಾಗುತ್ತದೆ.

(4) **ಒಬೇ ಮೈ ಕಮಾಂಡ್ ತೈಲ:** ಒಬ್ಬ ವ್ಯಕ್ತಿ ಅಥವಾ ಪರಿಸ್ಥಿತಿಯನ್ನು ನಿಯಂತ್ರಿಸಲು

ಈ ತೈಲವನ್ನು ಬಳಸಲಾಗುತ್ತದೆ. ಕೂದಲು, ರಕ್ತ, ವ್ಯಕ್ತಿಯ ಹೆಸರಿರುವ ಕಾಗದ, ಚಿತ್ರ, ಕತ್ತರಿಸಿದ ಉಗುರುಗಳಿಗೆ ಈ ತೈಲವನ್ನು ಲೇಪಿಸಲಾಗುತ್ತದೆ.

(5) **ರೋಡ್ ಓಪನರ್ ತೈಲ:** ಕೈಗೊಂಡ ಯಾವುದೇ ಕಾರ್ಯದಲ್ಲಿನ ಪ್ರಗತಿಯನ್ನು ತ್ವರಿತಗೊಳಿಸಲು, ಅಡೆತಡೆಗಳನ್ನು ನಿವಾರಿಸಿ ಹೊಸ ಅವಕಾಶಗಳನ್ನು ಕಲ್ಪಿಸಲು ಈ ತೈಲವನ್ನು ಬಳಸಲಾಗುತ್ತದೆ.

ವೂಡೂ ಗೊಂಬೆಗಳು

ವೂಡೂ ಆಚರಣೆಗಳಲ್ಲಿ ಒಬ್ಬ ವ್ಯಕ್ತಿಯ ಚೈತನ್ಯವನ್ನು ವಶೀಕರಿಸಿಕೊಳ್ಳಲು ವೂಡೂ ಗೊಂಬೆಗಳನ್ನು ಬಳಸಲಾಗುತ್ತದೆ. ವ್ಯಕ್ತಿಯೊಬ್ಬನ ಚೈತನ್ಯವನ್ನು ಗೊಂಬೆಯಲ್ಲಿ ಬಂಧಿಸಿ, ತಮ್ಮ ಮನವಿ, ಪ್ರಾರ್ಥನೆ ಮತ್ತು ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುವ ಉದ್ದೇಶವನ್ನು ಈ ಆಚರಣೆಯಲ್ಲಿ ಕಾಣಬಹುದು. ಈ ಗೊಂಬೆಗಳನ್ನು ಒಣಗಿದ ಹುಲ್ಲು, ಕಟ್ಟಿಗೆ, ಆಲೂಗಡ್ಡೆ, ಮಣ್ಣು ಇಲ್ಲವೇ ಬಟ್ಟೆಯಿಂದ ಮಾಡಲಾಗುತ್ತದೆ. ಹೀಗೆ ತಯಾರಿಸಿದ ಗೊಂಬೆಗಳಿಗೆ ವ್ಯಕ್ತಿಯ ಕೂದಲು, ಕತ್ತರಿಸಿದ ಉಗುರು, ರಕ್ತ, ಬಳಸಿದ ಬಟ್ಟೆಗಳನ್ನು ಉಪಯೋಗಿಸಿ, ಆ ವ್ಯಕ್ತಿಯ ಚೈತನ್ಯವನ್ನು ಗೊಂಬೆಯಲ್ಲಿ ಬಂಧಿಸಲಾಗುತ್ತದೆ. ಗೊಂಬೆಯ ಮೂಲಕ ಕಾರ್ಯನಿರ್ವಹಣೆ, ಕ್ಷಮೆಯಾಚನೆ, ಪ್ರಶ್ನೆಗಳನ್ನು ಕೇಳುವುದು ಮತ್ತು ನಿರ್ದಿಷ್ಟ ವ್ಯಕ್ತಿಯ ನಾಶವನ್ನು ಮಾಡಬಹುದು ಎಂಬ ನಂಬಿಕೆಯಿದೆ. ಗೊಂಬೆಗೆ ಸೂಜಿಗಳನ್ನು ಚುಚ್ಚುವತನಕ ಅದು ವಶೀಕರಣ ಪಡೆದ ಗೊಂಬೆ ಎನಿಸಿಕೊಳ್ಳುವುದಿಲ್ಲ ಮತ್ತು ಈ ವೂಡೂ ಗೊಂಬೆಗಳನ್ನು ಕೆಟ್ಟ ಉದ್ದೇಶಗಳಿಗಷ್ಟೇ ಬಳಸಲಾಗುತ್ತದೆ ಎನ್ನುವುದು ತಪ್ಪು ಕಲ್ಪನೆ ಎಂಬ ಅಭಿಪ್ರಾಯಗಳು ವೂಡೂ ಅನುಯಾಯಿಗಳಲ್ಲಿವೆ. ವ್ಯಕ್ತಿಯ ಚೇತನ, ಆರೋಗ್ಯ, ಉದ್ಯೋಗ, ವೃತ್ತಿ, ಮದುವೆ, ಅದೃಷ್ಟ ಮುಂತಾದ ಸಕಾರಾತ್ಮಕ ವಿಷಯಗಳಿಗೂ ಗೊಂಬೆಯನ್ನು ಬಳಸುವುದನ್ನು ವೂಡೂ ಆಚರಣೆಗಳಲ್ಲಿ ಕಾಣಬಹುದು. ಆತ್ಮದ ಶಕ್ತಿಯನ್ನು ಆಹ್ವಾನಿಸಲು ಮತ್ತು ಸ್ಪಷ್ಟವಾದ ಸಂದೇಶಗಳನ್ನು ರವಾನಿಸಲು, ವೂಡೂ ಮೇಣದಬತ್ತಿ, ವೂಡೂ ತೈಲ, ನಗಾರಿ ಬಡಿತದೊಂದಿಗೆ ವೂಡೂ ಗೊಂಬೆಯನ್ನು ಆರಾಧಿಸಲಾಗುತ್ತದೆ.

ವಿವಿಧ ಬಗೆಯ ವೂಡೂ ಗೊಂಬೆಗಳು

ಲೂಯಿಸಿಯಾನಾ ವೂಡೂವಿನಲ್ಲಿ ಬೇರೆ-ಬೇರೆ ಉದ್ದೇಶಗಳಿಗೆ ಬೇರೆ-ಬೇರೆ ಬಗೆಯ ವೂಡೂ ಗೊಂಬೆಗಳನ್ನು ಬಳಸಲಾಗುತ್ತದೆ. ಚಿಕಿತ್ಸೆ, ಹಣ, ಸಂಪತ್ತು, ಸೇಡು, ಮಾರ್ಗದರ್ಶನ, ರಕ್ಷಣೆ, ಶಾಪ ಹಾಕುವುದು ಹೀಗೆ ಹಲವು ಉದ್ದೇಶಗಳಿಗೆ ಹಲವು ಬಣ್ಣದ ಗೊಂಬೆಗಳು ಬಳಕೆಯಲ್ಲಿರುವುದನ್ನು ನೋಡಬಹುದು.

(1) **ಕಪ್ಪು ಗೊಂಬೆ:** ನಕಾರಾತ್ಮಕ ಶಕ್ತಿಯನ್ನು ಹೊರಹಾಕಲು ಮತ್ತು ಬೇರೊಬ್ಬರ ಜೀವನವನ್ನು ನಾಶ ಮಾಡಲು ಬಳಕೆ.

(2) **ನೀಲಿ ಬಣ್ಣದ ಗೊಂಬೆ:** ಪ್ರೀತಿ, ಶಾಂತಿ ಮತ್ತು ನೆಮ್ಮದಿಗಾಗಿ ಬಳಕೆ.

(3) **ಹಳದಿ ಬಣ್ಣದ ಗೊಂಬೆ:** ಯಶಸ್ಸು ಮತ್ತು ಆತ್ಮವಿಶ್ವಾಸ ಹೆಚ್ಚಿಸಲು ಬಳಕೆ.

(4) **ನೇರಳೆ ಬಣ್ಣದ ಗೊಂಬೆ:** ಆತ್ಮಗಳೊಂದಿಗೆ ಸಂವಹನ ನಡೆಸಲು, ಆತ್ಮಗಳಿಂದ ಜ್ಞಾನವನ್ನು ಪಡೆಯಲು, ಮಾನಸಿಕ ಜಗತ್ತನ್ನು ಅನ್ವೇಷಿಸಲು ಬಳಕೆ.

(5) **ಹಸಿರು ಗೊಂಬೆ:** ವ್ಯವಹಾರದಲ್ಲಿ ಮತ್ತು ಕೆಲಸದಲ್ಲಿ ಪ್ರಗತಿ ಮತ್ತು ಸಂತಾನ ಅಪೇಕ್ಷೆಯಿಂದ ಬಳಕೆ.

(6) **ಬಿಳಿ ಗೊಂಬೆ:** ಸಕಾರಾತ್ಮಕ ಚಿಂತನೆ, ಚಿಕಿತ್ಸೆ, ಶುದ್ಧತೆ, ಒಳ್ಳೆಯತನದ ಅಪೇಕ್ಷೆಯಿಂದ ಬಳಕೆ.

(7) **ಕೆಂಪು ಗೊಂಬೆ:** ಪ್ರೀತಿ, ಪ್ರೀತಿಗಾಗಿ ಆಸಕ್ತಿ ಮತ್ತು ಶಕ್ತಿಯನ್ನು ಆಕರ್ಷಿಸಲು ಬಳಕೆ.

ವೂಡೂ ಮಾಂತ್ರಿಕ ಚೀಲಗಳು (ಸಂಚಿಗಳು)

(1) ಮೋಜೊ ಚೀಲ: ವೂಡೂ ಉಪಾಸಕ/ಉಪಾಸಕಿ ತಯಾರಿಸುವ ಮಾಂತ್ರಿಕ ಚೀಲಗಳನ್ನು 'ಮೋಜೊ ಚೀಲ'ಗಳೆಂದು ಕರೆಯುತ್ತಾರೆ. ಇಂತಹ ಪುಟ್ಟ ಚೀಲಗಳನ್ನು ಬಳಸುವುದರಿಂದ ದುಷ್ಟಶಕ್ತಿಗಳಿಂದ ರಕ್ಷಿಸಿಕೊಳ್ಳಬಹುದು ಮತ್ತು ಅವರ ಮನದ ಅಪೇಕ್ಷೆಗಳನ್ನು ಈಡೇರಿಕೊಳ್ಳಬಹುದು ಎನ್ನುವ ನಂಬಿಕೆಯಿದೆ. ಇವುಗಳನ್ನು ಬಳಸುವವರ ಅಪೇಕ್ಷೆಯಂತೆ, ಅವರ ಉದ್ದೇಶಗಳಿಗನುಸಾರವಾಗಿ ಈ ಚೀಲಗಳನ್ನು ತಯಾರಿಸಲಾಗುತ್ತದೆ. ಬೇರೆ-ಬೇರೆ ಬಣ್ಣದ ಬಟ್ಟೆಯಿಂದ ಸಿದ್ಧಪಡಿಸುವ ಈ ಪುಟ್ಟ ಚೀಲಗಳನ್ನು ಸ್ತ್ರೀ/ಪುರುಷ ಧರಿಸುವ ಇತರ ಬಟ್ಟೆಯೊಂದಿಗೆ ಜೋಡಿಸಿ ಧರಿಸಲಾಗುತ್ತದೆ. ಕಪ್ಪು, ನೀಲಿ, ಕಂದು, ಹಸಿರು, ಕೇಸರಿ, ನೇರಳೆ, ಕೆಂಪು, ಹಳದಿ, ಗುಲಾಬಿ ಬಣ್ಣಗಳ ಬಟ್ಟೆಯಲ್ಲಿ ವಿವಿಧ ಉದ್ದೇಶಗಳಿಗೆ ಹೋಲುವಂತೆ ಈ ಚೀಲಗಳನ್ನು ತಯಾರಿಸಿ ಕೊಡಲಾಗುತ್ತದೆ. ಮೋಜೊ ಚೀಲಗಳಲ್ಲಿ ಉದ್ದೇಶಕ್ಕೆ ಒಪ್ಪುವಂತೆ ಗಿಡಮೂಲಿಕೆ, ಚಿಕ್ಕ-ಚಿಕ್ಕ ಕಲ್ಲುಗಳು, ಹರಳುಗಳನ್ನು ಮಂತ್ರಿಸಿ ಬರೆದ ಚಿಹ್ನೆಯೊಂದಿಗೆ (ಯಂತ್ರ) ಇರಿಸಲಾಗುತ್ತದೆ. ಪ್ರೀತಿ, ಸಂಪತ್ತು, ಅದೃಷ್ಟ ಪಡೆಯಲು ವಿವಿಧ ಗಿಡಮೂಲಿಕೆಗಳನ್ನು, ಬೇರುಗಳನ್ನು ಬಳಸಲಾಗುತ್ತದೆ.

(2) ಗ್ರಿಸ್-ಗ್ರಿಸ್ ಚೀಲ: ದುಷ್ಟಶಕ್ತಿಯನ್ನು ನಿವಾರಿಸಲು ಈ ಚೀಲಗಳನ್ನು ಬಳಸಲಾಗುತ್ತದೆ. ಈ ಚೀಲಗಳಲ್ಲಿ ಕೈಬರಹದ ಹಾಳೆ, ನಾಣ್ಯಗಳು, ಪಕ್ಷಿಯ ಗರಿಗಳು, ಚಿಕ್ಕ ಕಲ್ಲು, ಉಣ್ಣೆಬಟ್ಟೆ, ಗಿಡಮೂಲಿಕೆಗಳಲ್ಲದೇ ಕೆಲವೊಮ್ಮೆ ಸ್ಮಶಾನದಲ್ಲಿನ ಮಣ್ಣನ್ನು ಇಡಲಾಗುತ್ತದೆ. ಈ ಚೀಲಗಳನ್ನು ಕಟ್ಟಡ, ಕಛೇರಿ ಮತ್ತು ಮನೆಗಳಲ್ಲಿ ಇಡಲಾಗುತ್ತದೆ. ವೂಡೂ ಉಪಾಸಕರ ಅನುಮತಿ ಇಲ್ಲದಿದ್ದಲ್ಲಿ ಈ ಚೀಲಗಳನ್ನು ಗುಪ್ತವಾಗಿಯೇ ಇರಿಸಲಾಗುತ್ತದೆ. ಗ್ರಿಸ್-ಗ್ರಿಸ್ ಚೀಲಗಳನ್ನು ಐದು ಅಂಶಗಳಿಂದ ರಚಿಸಲಾಗುವುದು. ಮೂರಕ್ಕಿಂತ ಹೆಚ್ಚು ಮತ್ತು ಹದಿಮೂರಕ್ಕಿಂತ ಕಡಿಮೆ ವಸ್ತುಗಳನ್ನು ಬೆಸ ಸಂಖ್ಯೆಯಲ್ಲಿಯೇ ಬಳಸಿ ಈ ಚೀಲಗಳನ್ನು ತಯಾರಿಸುವುದು ಇವುಗಳ ವಿಶೇಷ ಲಕ್ಷಣವಾಗಿದೆ. ನಿರ್ದಿಷ್ಟ ಉದ್ದೇಶಕ್ಕೆ ಅನುಗುಣವಾಗಿ ಈ ಚೀಲಗಳಲ್ಲಿ ವಿವಿಧ ಗಿಡಮೂಲಿಕೆಗಳನ್ನು ಬಳಸಲಾಗುತ್ತದೆ.

ವೂಡೂ ಚಿಹ್ನೆಗಳು (ಸಂಕೇತಗಳು)

ವೂಡೂ ಆಚರಣೆಯಲ್ಲಿ ರಂಗೋಲಿಯನ್ನು ಹೋಲುವ 'ವೆವ್' ಚಿಹ್ನೆಗಳನ್ನು ಬರೆಯಲಾಗುತ್ತದೆ. ವೆವ್ ಸಂಕೇತಗಳು ಅಲ್ಲಿ ಆಹ್ವಾನಿಸುವ ಲೋವಾ ಆತ್ಮವನ್ನು ಪ್ರತಿನಿಧಿಸುತ್ತವೆ. ಇವುಗಳನ್ನು ವೂಡು ದೇವಾಲಯದ ಗೋಡೆಗಳ ಮೇಲೆ ಚಿತ್ರಿಸುವುದರೊಂದಿಗೆ, ವೂಡೂ ಆಚರಣೆಯಲ್ಲಿ ಲೋವಾ ಆತ್ಮವನ್ನು ಆವಾಹನೆ ಮಾಡುವ ಮೊದಲು ದೇವಾಲಯದ ನೆಲದ ಮೇಲೆ ಬರೆಯಲಾಗುತ್ತದೆ. ನುಣ್ಣಗೆ ಪುಡಿ ಮಾಡಿದ ಮೊಟ್ಟೆಯ ಚಿಪ್ಪು, ಗೋಧಿಹಿಟ್ಟು, ಇಟ್ಟಿಗೆಯ ಪುಡಿ, ಮರದ ತೊಗಟೆ, ಸೀಮೆಸುಣ್ಣ, ಇದ್ದಿಲು, ಬೂದಿ ಮುಂತಾದ ವಸ್ತುಗಳನ್ನು ಬಳಸಿ ಈ ಸಂಕೇತವನ್ನು ಬರೆಯುತ್ತಾರೆ. ಆಚರಣೆಯಲ್ಲಿನ ಬಲಿ ಮತ್ತು ಅರ್ಪಣೆಗಳನ್ನು ಈ ಚಿಹ್ನೆಗಳ ಮೇಲೆ ಇರಿಸುತ್ತಾರೆ. ವೆವ್ ಚಿಹ್ನೆಗಳನ್ನು ಸರಿಯಾದ ವಿವರಗಳೊಂದಿಗೆ ಚಿತ್ರಿಸಿದರೆ ಮಾತ್ರ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂಬ ನಂಬಿಕೆಯಿದೆ. ಇದರ ನಿಖರತೆಗೆ ಹೆಚ್ಚಿನ ಮಹತ್ವ ನೀಡುವ ವೂಡೂ ಉಪಾಸಕ/ಉಪಾಸಕಿ, ತನ್ನ ಕಲಾತ್ಮಕತೆಯನ್ನು ಬಳಸಿ ಈ ಚಿಹ್ನೆಗಳನ್ನು ಬರೆಯುತ್ತಾರೆ. ಆಚರಣೆಯ ನಂತರ ಈ ಚಿಹ್ನೆಗಳನ್ನು ಅಳಿಸಲಾಗುತ್ತದೆ.

ವೂಡೂ ನಾಯಕರು

ವೂಡೂ ರಾಣಿಯರು ಎಂದು ಕರೆಸಿಕೊಳ್ಳುವ ವೂಡೂ ಉಪಾಸಕಿಯರು ನ್ಯೂಆರ್ಲಿಯನ್ಸಿನಲ್ಲಿ ವೂಡೂ ಧರ್ಮದ ಪ್ರಬಲ ಸ್ತ್ರೀ ವೃತ್ತಿಪರರಾಗಿ ತಮ್ಮ ಸಮುದಾಯಗಳಲ್ಲಿ ಹೆಚ್ಚಿನ ಪ್ರಭಾವವನ್ನು ಚಲಾಯಿಸುತ್ತಿದ್ದರು. ಇವರು ಅನೇಕ ಧಾರ್ಮಿಕ ಸಭೆ ಮತ್ತು ನೃತ್ಯಗಳನ್ನು ಏರ್ಪಡಿಸಿ ಸಾವಿರಾರು ಜನರನ್ನು ವೂಡೂ ಅನುಯಾಯಿಗಳಾಗಿ ಪಡೆದರು. ತಾಯಿತಗಳು, 'ಗ್ರಿಸ್-ಗ್ರಿಸ್' ಚೀಲಗಳು, ಮಾಂತ್ರಿಕ ಪುಡಿಗಳು, ಚಿಕಿತ್ಸೆ, ಆಸೆಗಳನ್ನು ಈಡೇರಿಸುವುದು, ಶತ್ರುಗಳನ್ನು ಗೊಂದಲಗೊಳಿಸುವುದು ಅಥವಾ ನಾಶಪಡಿಸುವುದು-ಹೀಗೆ ಅನೇಕ ಮಂತ್ರಗಳು ಮತ್ತು ಮೋಡಿಗಳ ಮೂಲಕ ಅವರು ಜೀವನ ಸಾಗಿಸಿದರು. ಅವರ ಶಕ್ತಿ ಮತ್ತು ಪ್ರಭಾವವು ವ್ಯಾಪಕವಾಗಿತ್ತು. ಆಫ್ರಿಕನ್ ಮತ್ತು ಕ್ರಿಯೋಲ್ ಮೂಲದ ಈ ಮಹಿಳೆಯರು ಗುಲಾಮರ ಮೇಲಿನ ದಬ್ಬಾಳಿಕೆಯ ಆಡಳಿತವನ್ನು, ಕರಿಯರು ಮತ್ತು ಬಿಳಿಯರ ಸ್ವಾತಂತ್ರ್ಯದಲ್ಲಿನ ವ್ಯತ್ಯಾಸವನ್ನು ಜನರಿಗೆ ತಿಳಿಯುವಂತೆ ಮಾಡಿ ಸಮಾಜದಲ್ಲಿ ಪ್ರಬಲ ನಾಯಕರಾಗಿ ಹೊರಹೊಮ್ಮಿದರು.

ಸೇಂಟ್ ಡೆಡೆ

ನ್ಯೂ ಆರ್ಲಿಯನ್ಸಿನಲ್ಲಿ ಕ್ರಿ.ಶ. 1803ರಿಂದ 1820ರವರೆಗೆ ಕಂಡುಬಂದ ವೂಡೂರಾಣಿಯರಲ್ಲಿ ಸೇಂಟ್ ಡೆಡೆ ಮೊದಲಿಗಳಾಗಿದ್ದಾಳೆ. ಅವಳು ತನ್ನ ಹೊಲದಲ್ಲಿ ವೂಡೂ ಆಚರಣೆಗಳನ್ನು ನಡೆಸುತ್ತಿದ್ದಳು ಎನ್ನುವ ಮಾಹಿತಿಯಿದೆ. ನ್ಯೂ ಆರ್ಲಿಯನ್ಸಿನಲ್ಲಿ ಇಂದಿಗೂ ಪೂಜಿಸಲ್ಪಡುವ, ಪ್ರಸಿದ್ಧ ವೂಡೂ ರಾಣಿ ಮೇರಿ ಲಾವೋ ಅವರ ಮಾರ್ಗದರ್ಶಕಿಯಾಗಿ, ಶಿಕ್ಷಕಿಯಾಗಿ ಸೇಂಟ್ ಡೆಡೆ ಎಂದು ಗುರುತಿಸಲ್ಪಡುತ್ತಾಳೆ.

ಮೇಡಂ ಮೇರಿ ಲಾವೋ

ಮೇರಿ ಲಾವೋ (ಕ್ರಿ.ಶ. 1801–1881), ನ್ಯೂಆರ್ಲಿಯನ್ಸಿನ ವೂಡೂ ಆಚರಣೆಯಲ್ಲಿ ಕಂಡುಬಂದ ಅತ್ಯಂತ ಪ್ರಭಾವಿ ವೂಡೂ ರಾಣಿ. ಇವರು ಆಫ್ರಿಕಾ ಮೂಲದ ಸ್ವತಂತ್ರ ಮಹಿಳೆ ಮತ್ತು ಕ್ಯಾಥೋಲಿಕ್ ಪಂಥದ ಫ್ರೆಂಚ್ ವ್ಯಕ್ತಿಯ ಮಗಳಾಗಿದ್ದರು. ಕೇಶವಿನ್ಯಾಸಕಾರ್ತಿಯಾಗಿ ಕೆಲಸ ಪ್ರಾರಂಭಿಸಿದ ಮೇರಿ ಲಾವೋ, ನಂತರದ ದಿನಗಳಲ್ಲಿ ಗಿಡಮೂಲಿಕೆಯ ತಜ್ಞಳಾಗಿ ಚಿಕಿತ್ಸೆ ನೀಡುತ್ತ, ವೂಡೂ ವೈದ್ಯೆಯಾಗಿ ಪ್ರಸಿದ್ಧಿ ಪಡೆದರು. ಅನೇಕ ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಸಾವಿರಾರು ವೂಡೂ ಅನುಯಾಯಿಗಳನ್ನು ಪಡೆದರು. ಮೇರಿ ಲಾವೋ ನಡೆಸುತ್ತಿದ್ದ ವೂಡೂ ಆಚರಣೆಯಲ್ಲಿ ಆಫ್ರಿಕಾ ಮೂಲದ ಮತ್ತು ಕ್ಯಾಥೋಲಿಕ್ ಮೂಲದ ಸಂತರನ್ನು ಪೂಜಿಸುವುದು ಕಂಡುಬರುತಿತ್ತು. ಆಫ್ರಿಕಾದ ಜಾನಪದ ಧರ್ಮ ಮತ್ತು ಕ್ರೈಸ್ತ ಧರ್ಮದ ನಂಬಿಕೆಗಳನ್ನು ಒಟ್ಟಾಗಿಸಿದ ಮೇರಿ ಲಾವೋ ವೂಡೂ ಆಚರಣೆಗಳು, ಆಫ್ರಿಕಾ ಮೂಲನಿವಾಸಿಗಳೊಂದಿಗೆ ಕ್ಯಾಥೋಲಿಕ್ ಪಂಥವರನ್ನೂ ತಮ್ಮತ್ತ ಆಕರ್ಷಿಸಿದವು. ಮೇರಿ ಲಾವೋ ಅವರನ್ನು ಮಹಿಳಾ ಧಾರ್ಮಿಕ ಮುಖಂಡಳೆಂದು ಮತ್ತು ಸಮುದಾಯ ಕಾರ್ಯಕರ್ತೆ ಎಂದೂ ಕರೆಯಲಾಗುತ್ತಿತ್ತು. ಅವರ ಸಾವಿನ ನಂತರ ಮೇರಿ ಲಾವೋವನ್ನು ಪವಿತ್ರ ಲೋವಾ ಆತ್ಮವೆಂದು ಪರಿಗಣಿಸಿದ ವೂಡೂ ಅನುಯಾಯಿಗಳು ಇಂದಿಗೂ ಅವರಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ನ್ಯೂಆರ್ಲಿಯನ್ಸಿನಲ್ಲಿರುವ ಅವರ ಸಮಾಧಿಯನ್ನು ಪವಿತ್ರ ಸ್ಥಳವೆಂದು ಭೇಟಿ ನೀಡಿ, ದರ್ಶನ ಪಡೆದು ಕಾಣಿಕೆಗಳನ್ನು ಅರ್ಪಿಸುತ್ತಾರೆ. ವೂಡೂ ಆಚರಣೆಗಳಲ್ಲಿ ಮೇರಿ ಲಾವೋ ಆತ್ಮವನ್ನು ಆಹ್ವಾನಿಸಿ, ಕೋರಿಕೆಗಳನ್ನು ಪ್ರಾರ್ಥಿಸುತ್ತಾರೆ. ನ್ಯೂಆರ್ಲಿಯನ್ಸಿನ ವೂಡೂ ಇತಿಹಾಸದಲ್ಲಿ ತನ್ನ ಪ್ರಾಮುಖ್ಯತೆ ಪಡೆದಿರುವ ಮೇರಿ ಲಾವೋ ಹಲವಾರು ಕಲಾತ್ಮಕ ಚಿತ್ರಣಗಳಿಗೂ ಸ್ಫೂರ್ತಿಯಾಗಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ನ್ಯೂ ಆರ್ಲಿಯನ್ಸಿನಲ್ಲಿ ಕಂಡುಬಂದ ಇತರ ಪ್ರಭಾವಿ ವೂಡೂ ನಾಯಕರು

(1) ಡಾಕ್ಟರ್ ಜಾನ್ (ಕ್ರಿ.ಶ. 1941–2019): ಮೂಲತಃ ಸಂಗೀತಗಾರರಾದ ಡಾ. ಜಾನ್ ವೂಡೂ ಉಪಾಸಕನಾಗಿಯೂ ಖ್ಯಾತಿಯನ್ನು ಪಡೆದಿದ್ದಾರೆ.

(2) ಫ್ರೆಡ್ ಸ್ಟೇಟನ್ (ಕ್ರಿ.ಶ. 1937–1998): 1970ರ ದಶಕದಲ್ಲಿ ನ್ಯೂ ಆರ್ಲಿಯನ್ಸಿನಲ್ಲಿ ನೆಲೆಯೂರಿದ ಸ್ಟೇಟನ್, ದೇವರು ಮತ್ತು ವೂಡೂ ಆಚರಣೆಯೊಂದಿಗಿನ ಆಧ್ಯಾತ್ಮಿಕ ಸಂಪರ್ಕವನ್ನು ವ್ಯಕ್ತಪಡಿಸುವ ನೈಟ್ ಕ್ಲಬ್‌ಗಳನ್ನು ಸ್ಥಾಪಿಸಿದರು. ಅವರು ತಮ್ಮ ನೃತ್ಯ ಮತ್ತು ಮಾಂತ್ರಿಕ ವಿದ್ಯೆಯಿಂದ ಅನೇಕ ಅನುಯಾಯಿಗಳನ್ನು ಪಡೆದರು. ವೂಡೂ ಪಾದ್ರಿಯಂತೆ ಪೂಜಿಸಲ್ಪಟ್ಟ ಸ್ಟೇಟನ್ ಅವರ ಚಿತಾಭಸ್ಮವನ್ನು ವೂಡೂ ಆಧ್ಯಾತ್ಮಿಕ ದೇವಾಲಯಕ್ಕೆ ದಾನ ಮಾಡಲಾಯಿತು.

(3) ವೂಡೂ ಉಪಾಸಕಿ ಮಿರಿಯಮ್ ಚಮಾನಿ (ಕ್ರಿ.ಶ. 1943): ಇಂದಿನ ದಿನಗಳಲ್ಲಿ ನ್ಯೂಆರ್ಲಿಯನ್ಸಿನ ವೂಡೂ ಆಚರಣೆಯಲ್ಲಿ ಮುಖ್ಯ ಪಾತ್ರ ವಹಿಸುವ ಮಿರಿಯಮ್ ಚಮಾನಿಯವರು ಒಬ್ಬ ಮಾಂಬೋ (ವೂಡೂ ಉಪಾಸಕಿ). ಎಪ್ಪತ್ತೇಳು ವರ್ಷ ವಯಸ್ಸಿನ ಮಿರಿಯಮ್ ಚಮಾನಿ ಅವರು ಮಿಸಿಸ್ಸಿಪ್ಪಿಯಲ್ಲಿ ಬೆಳೆದಿದ್ದು, ತಾವು ಬಾಲ್ಯದಿಂದಲೂ ಆಧ್ಯಾತ್ಮಿಕ ಆಚರಣೆಗಳ ಬಗ್ಗೆ ಆಸಕ್ತಿ ಹೊಂದಿದ್ದರೆಂದು ಹೇಳುತ್ತಾರೆ. ತನ್ನ ಆಧ್ಯಾತ್ಮಿಕ ಅಭ್ಯಾಸವನ್ನು ಮುಂದುವರೆಸಿ, ವೂಡೂ ಉಪಾಸಕಿಯಾಗಿ ಗುರುತಿಸಿಕೊಂಡಿದ್ದಾರೆ. ನ್ಯೂ ಯಾರ್ಕ್ ಮತ್ತು ಶಿಕಾಗೋ ನಗರಗಳಲ್ಲಿ ವಾಸಿಸಿದ ಇವರು, ತಮ್ಮ ವಿವಾಹದ ನಂತರ ಪತಿಯೊಂದಿಗೆ ನ್ಯೂ ಆರ್ಲಿಯನ್ಸಿನಲ್ಲಿ ವೂಡೂ ಆಧ್ಯಾತ್ಮಿಕ ದೇವಾಲಯವನ್ನು ಸ್ಥಾಪಿಸಿದರು. ಅಲ್ಲಿ ವೂಡೂ ಮತ್ತು ಗಿಡಮೂಲಿಕೆಯ ಸಂಪ್ರದಾಯದೊಂದಿಗೆ ತನ್ನದೇ ಆದ ಆಧ್ಯಾತ್ಮಿಕ ಅಭ್ಯಾಸಗಳನ್ನು ನಡೆಸುತ್ತಾರೆ. ಜನಾಂಗ ಮತ್ತು ನಂಬಿಕೆಯ ಹೊರತಾಗಿಯೂ ಎಲ್ಲಾ ಜನರಿಗೆ ಸೇವೆ ಸಲ್ಲಿಸಲು ಪ್ರಯತ್ನಿಸುತ್ತಾರೆ.

ನ್ಯೂ ಆರ್ಲಿಯನ್ಸಿನ ವೂಡೂ ಆಧ್ಯಾತ್ಮಿಕ ದೇವಾಲಯ

ಈ ದೇವಾಲಯವನ್ನು ಕ್ರಿ.ಶ. 1990ರಲ್ಲಿ ಉಪಾಸಕ ಓಸ್ವಾನ್ ಚಮಾನಿ ಮತ್ತು ಆತನ ಪತ್ನಿ ಮಿರಿಯಮ್ ಚಮಾನಿ ಸ್ಥಾಪಿಸಿದರು. ಇದು ನ್ಯೂಆರ್ಲಿಯನ್ಸಿನಲ್ಲಿ ಗುಲಾಮಗಿರಿಯ ಕಾಲದಿಂದಲೂ ವೂಡೂ ಆಚರಣೆ ನಡೆಯುತ್ತಿದ್ದ ಸ್ಥಳವಾದ ಕಾಂಗೋ ಸ್ಕ್ವೇರ್‌ನ ಪಕ್ಕದಲ್ಲಿರುವ 'ಫ್ರೆಂಚ್ ಕ್ವಾಟರ್' ಎಂಬ ನಗರದಲ್ಲಿದೆ. ಹಿಂದಿನ ದಿನಗಳಲ್ಲಿ ವೂಡೂ ರಾಣಿ ಮೇರಿ ಲಾವೋ ಮತ್ತು ಇತ್ತೀಚಿನ ವರ್ಷಗಳಲ್ಲಿ ಡಾಕ್ಟರ್ ಜಾನ್ ಅವರು ಕಾಂಗೋ ಸ್ಕ್ವೇರ್‌ನಲ್ಲಿಯೇ ವೂಡೂ ಆಚರಣೆಗಳನ್ನು ನಡೆಸುತ್ತಿದ್ದರು. ವೂಡೂ ಆಚರಣೆಗಳಿಗೆಂದೇ ಸ್ಥಾಪಿಸಿದ ಏಕೈಕ ಆಧ್ಯಾತ್ಮಿಕ ದೇವಾಲಯ ಇದಾಗಿದ್ದು, ಪ್ರಸ್ತುತ ನ್ಯೂಆರ್ಲಿಯನ್ಸಿನಲ್ಲಿ ಸಾಂಪ್ರದಾಯಿಕ ಪಶ್ಚಿಮ ಆಫ್ರಿಕಾದ ಆಧ್ಯಾತ್ಮಿಕ ಮತ್ತು ಗಿಡಮೂಲಿಕೆಗಳ ಚಿಕಿತ್ಸಾ ಪದ್ಧತಿಗಳನ್ನು ಮುಂದುವರೆಸುತ್ತಿದೆ.

ನ್ಯೂ ಆರ್ಲಿಯನ್ಸಿನ ಐತಿಹಾಸಿಕ ವೂಡೂ ವಸ್ತು ಸಂಗ್ರಹಾಲಯ

ಲೂಯಿಸಿಯಾನ ರಾಜ್ಯದ ನ್ಯೂ ಆರ್ಲಿಯನ್ಸಿನಲ್ಲಿರುವ ಐತಿಹಾಸಿಕ ವೂಡೂ ವಸ್ತುಸಂಗ್ರಹಾಲಯ (ಸ್ಥಾಪನೆ: 1972), ಸಂಪೂರ್ಣವಾಗಿ ವೂಡೂ ಕಲೆಗೆ ಮೀಸಲಾಗಿರುವ ವಿಶ್ವದ ಕೆಲವೇ ಕೆಲವು ವಸ್ತು ಸಂಗ್ರಹಾಲಯಗಳಲ್ಲಿ ಒಂದಾಗಿದೆ. ಇದು ನ್ಯೂಆರ್ಲಿಯನ್ಸಿನ ಪ್ರವಾಸಿ ಆಕರ್ಷಣೆಗಳ ಭಾಗವಾಗಿದೆ. ಧರ್ಮದಲ್ಲಿನ ಜನಪ್ರಿಯ ಆಸಕ್ತಿಗಳನ್ನು ಉಳಿಸಿಕೊಂಡು, ಮುಂದುವರೆಸಿಕೊಂಡು ಹೋಗುವುದರೊಂದಿಗೆ ವ್ಯಾಪಾರಿ ಮನೋಭಾವವೂ ಸೇರಿಕೊಂಡಿದ್ದನ್ನು ಇಲ್ಲಿ ಕಾಣಬಹುದು. ಮೋಡಿ, ಗ್ರಿಸ್-ಗ್ರಿಸ್ ಚೀಲಗಳು, ಮೇಣದಬತ್ತಿಗಳು, ವೂಡೂ ಗೊಂಬೆಗಳು ಮತ್ತು ಗಿಡಮೂಲಿಕೆಯ ಪುಡಿಗಳನ್ನು ಮಾರಾಟ ಮಾಡುವ ಇಲ್ಲಿನ ಅಂಗಡಿಗಳು ಪ್ರವಾಸಿಗರನ್ನು ತಮ್ಮತ್ತ ಆಕರ್ಷಿಸುತ್ತವೆ. ಇಲ್ಲಿನ ವೂಡೂ ಉಪಾಸಕ, ವೂಡೂ ಆಚರಣೆಯ ಮಾಹಿತಿಯನ್ನು ಕೊಡುತ್ತಾನೆ.

ಸ್ಮಶಾನ ಪ್ರವಾಸಗಳು

ವೂಡೂ ವಸ್ತುಸಂಗ್ರಹಾಲಯದ ಹತ್ತಿರದ ಸೇಂಟ್ ಲೂಯಿಸ್ ಸ್ಮಶಾನಕ್ಕೆ ಮತ್ತು ವೂಡೂ ರಾಣಿ ಮೇರಿ ಲಾವೋ ಸಮಾಧಿಗೆ ಪ್ರತಿ ದಿನ ಪ್ರವಾಸವನ್ನು ಏರ್ಪಡಿಸಲಾಗುತ್ತದೆ. ಈ ಪ್ರವಾಸದಲ್ಲಿ ಗುಲಾಮಗಿರಿಯ ಕಾಲದಿಂದಲೂ ವೂಡೂ ಆಚರಣೆ ನಡೆಯುತ್ತಿದ್ದ ಸ್ಥಳವಾದ ಕಾಂಗೋ ಸ್ಕ್ವೇರ್ ಮತ್ತು ಇತರ ವೈಶಿಷ್ಟ್ಯಗಳನ್ನು ನೋಡಬಹುದು.

ವೂಡೂ ಮಾಹಿತಿ

ಈ ವೂಡೂ ವಸ್ತು ಸಂಗ್ರಹಾಲಯವು ವೂಡೂ ಸೇವೆಗಳನ್ನು ನೇರವಾಗಿ ಒದಗಿಸದಿದ್ದರೂ, ಆಸಕ್ತರಿಗೆ ಮನೋವೈಜ್ಞಾನಿಕ ವಾಚನ, ಸಮಾಲೋಚನೆ, ವಿಶೇಷ ಗ್ರಿಸ್-ಗಿಸ್ ಮೋಡಿ ಮತ್ತು ಆಚರಣೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.

ವೂಡೂ ವಾಣಿಜ್ಯೀಕರಣ

ಜಾನಪದ ಧಾರ್ಮಿಕ ಪದ್ಧತಿಯಾದ ವೂಡೂ ಇಂದಿನ ದಿನಗಳಲ್ಲಿ ವಾಣಿಜ್ಯೀಕರಣ ಗೊಂಡಿದೆ. ಮೋಡಿ, ಗ್ರಿಸ್-ಗ್ರಿಸ್ ಚೀಲಗಳು, ಮೇಣದಬತ್ತಿಗಳು, ವೂಡೂ ಗೊಂಬೆಗಳು ಮತ್ತು ಗಿಡಮೂಲಿಕೆಗಳ ಪುಡಿಗಳನ್ನು ಮಾರಾಟ ಮಾಡಲಾಗುತ್ತದೆ. ವೂಡೂ ಗೊಂಬೆಗಳನ್ನು ಆಟದ ಗೊಂಬೆಗಳಂತೆ ಮಾರಾಟ ಮಾಡುವುದನ್ನು ನೋಡಬಹುದು. ವಿವಿಧ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಇಚ್ಛಿಸಿ, ಅದಕ್ಕೆಂದೇ ತಯಾರಿಸಿದ ಸಾಮಗ್ರಿಗಳನ್ನು (ವೂಡೂ ಕಿಟ್), ವೂಡೂ ಗೊಂಬೆಗಳನ್ನು ಅಂತರ್ಜಾಲದ ಮೂಲಕ ಖರೀದಿಸಬಹುದು. ಮನೆಯಲ್ಲಿಯೇ ವೂಡೂ ಆಚರಣೆ ಕೈಗೊಳ್ಳಲು ಮೇರಿ ಲಾವೋ ಆತ್ಮವನ್ನು ಆಹ್ವಾನಿಸಿ, ಪೂಜಿಸುವ ಮಾಹಿತಿಯನ್ನು ನೀಡುವ ಸಾಮಗ್ರಿಗಳನ್ನು ಖರೀದಿಸಬಹುದಾಗಿದೆ. ವೂಡೂ ಆಚರಣೆಯ ಕೈಪಿಡಿಯನ್ನು ಪೂಜಾ ಸಾಮಗ್ರಿಗಳೊಂದಿಗೆ ಒದಗಿಸಲಾಗುತ್ತದೆ. ನ್ಯೂ ಆರ್ಲಿಯನ್ಸಿನ ಬೇಕರಿ ಮತ್ತು ಉಪಹಾರ ಕೇಂದ್ರಗಳಲ್ಲಿ ವಿವಿಧ ಬಗೆಯ ವೂಡೂ ಸಿಹಿ ತಿನಿಸುಗಳನ್ನು ಮತ್ತು ವೂಡೂ ಕಾಫಿಯನ್ನೂ ಮಾರಾಟ ಮಾಡಲಾಗುತ್ತದೆ.

ಅಮೆರಿಕದ ಇತರ ರಾಜ್ಯಗಳಲ್ಲಿ ವೂಡೂ ಆಚರಣೆ

ವೂಡೂ ಆಚರಣೆ ಮಿಸಿಸ್ಸಿಪ್ಪಿ ಕಣಿವೆಯ ಪ್ರದೇಶ ಮತ್ತು ಲೂಯಿಸಿಯಾನಾ ರಾಜ್ಯಕ್ಕೆ ಸೀಮಿತವಾಗಿಲ್ಲ. ಪಶ್ಚಿಮ ಆಫ್ರಿಕಾ ಮತ್ತು ಹೇಟಿ ಮೂಲದಿಂದ ಬಂದು ಅಮೆರಿಕಾದ ವಿವಿಧ ರಾಜ್ಯಗಳಲ್ಲಿ ನೆಲೆಸಿರುವ ಆಫ್ರಿಕನ್-ಅಮೆರಿಕನ್ ಸಮುದಾಯಗಳಲ್ಲಿ ವೂಡೂ ಸಂಪ್ರದಾಯ ಮತ್ತು ಆಚರಣೆಯನ್ನು ಕಾಣಬಹುದು.

ದಕ್ಷಿಣ ಕೆರೊಲಿನಾ ರಾಜ್ಯದ ಶೆಲ್ಡನ್ ಸಮೀಪದ 'ಓಯೊಂಟುಜಿ' ಸಾಂಪ್ರದಾಯಿಕ ಪಶ್ಚಿಮ ಆಫ್ರಿಕಾದ ಹಳ್ಳಿಯಾಗಿದೆ. 1970ರಲ್ಲಿ ವೂಡೂ ಪುರೋಹಿತರಿಂದ ಸ್ಥಾಪಿಸಲ್ಪಟ್ಟ ಈ ಗ್ರಾಮ, ಆಫ್ರಿಕಾದ ಯೊರುಬಾ ಜನರೊಂದಿಗೆ ಸಂಪರ್ಕವನ್ನು ಉಳಿಸಿಕೊಳ್ಳುವ

ಕುಟುಂಬಗಳ ಗುಂಪನ್ನು ಹೊಂದಿದೆ. ಇಲ್ಲಿನ ನಿವಾಸಿಗಳು ನೈಜೀರಿಯನ್ ಮತ್ತು ಬೆನಿನ್ ಪ್ರದೇಶಗಳ ವಂಶಸ್ಥರಾಗಿದ್ದು, ವೂಡೂ ಆಚರಣೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣಬಹುದು. 'ಓಯೊಂಟುಜಿ' ಸಾಂಪ್ರದಾಯಿಕ ಹಳ್ಳಿಯನ್ನು ವೀಕ್ಷಿಸಲು ಪ್ರವಾಸಗಳನ್ನು ಏರ್ಪಡಿಸಿ, ಅಲ್ಲಿನ ಸಂಸ್ಕೃತಿಯ ಮಾಹಿತಿಯನ್ನು ನೀಡಲಾಗುತ್ತದೆ.

ನ್ಯೂ ಯಾರ್ಕಿನ ಬ್ರೂಕ್ಲಿನ್, ಹಾರ್ಲೆಮ್ ಮತ್ತು ಕ್ವೀನ್ಸ್‌ನ ಕೆಲವು ಭಾಗಗಳಲ್ಲಿ ನೆಲೆಸಿರುವ ಹೇಟಿ ಮೂಲದ ನಿವಾಸಿಗಳು ವೂಡೂ ಸಂಪ್ರದಾಯವನ್ನು ಆಚರಿಸುವುದು ಕಂಡುಬರುತ್ತದೆ. ಬ್ರೂಕ್ಲಿನ್ನಲ್ಲಿರುವ ಮಾಂಬೋಗಳು (ವೂಡೂ ಉಪಾಸಕಿಯರು) ಈ ಆಚರಣೆಗಳನ್ನು ಏರ್ಪಡಿಸುತ್ತಾರೆ. ಇಲ್ಲಿನ ಅನೇಕ ವೂಡೂ ಆಚರಣೆಗಳು ವರ್ಣರಂಜಿತ ನೆಲಮಾಳಿಗೆಯ ಸಮಾರಂಭಗಳಲ್ಲಿ ರಹಸ್ಯವಾಗಿ ನಡೆಯುತ್ತವೆ. ರೋಸ್ ಮೇರಿ ಪಿಯರೆ ಎಂಬ ಮಾಂಬೊ (ವೂಡೂ ಉಪಾಸಕಿ) ತನ್ನ ನೆಲಮಾಳಿಗೆಯಲ್ಲಿ ವೂಡೂ ಆಚರಣೆ ಮತ್ತು ಭೂತೋಚ್ಚಾಟನೆಗಳನ್ನು ನೆರವೇರಿಸುತ್ತಾಳೆ ಎಂಬ ಮಾಹಿತಿಯನ್ನು ಮಾಧ್ಯಮದವರು ಸಂಗ್ರಹಿಸಿದ್ದಾರೆ.

ನ್ಯೂ ಆರ್ಲಿಯನ್ಸಿನ ವೂಡೂ ರಾಣಿ ಮೇರಿ ಲಾವೋರವರಿಂದ ವೂಡೂ ಅಧ್ಯಯನ ಮಾಡಿದ ಮೇರಿ ಎಲ್ಲೆನ್ ಪ್ಲೆಸೆಂಟ್, 1852ರಲ್ಲಿ ಕ್ಯಾಲಿಫೋರ್ನಿಯಾ ರಾಜ್ಯದ ಸ್ಯಾನ್ ಫ್ರಾನ್ಸಿಸ್ಕೋಗೆ ತೆರಳಿದರು. ಅಲ್ಲಿ ವೂಡೂ ಆಚರಣೆಯನ್ನು ಮುಂದುವರೆಸಿದರು ಮತ್ತು ನಾಗರಿಕ ಹಕ್ಕುಗಳ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಭೂಗತ ರೈಲ್ ಮಾರ್ಗ ವ್ಯವಸ್ಥೆಯ ಮೂಲಕ ಗುಲಾಮರನ್ನು ಮುಕ್ತಗೊಳಿಸಲು ಹೋರಾಡಿದರು. ಇಂದಿಗೂ ಅಲ್ಲಿ ವೂಡೂ ಸಂಪ್ರದಾಯ ಆಚರಣೆಯಲ್ಲಿ ಕಂಡುಬರುತ್ತದೆ. ಮೇರಿ ಎಲ್ಲೆನ್ ಪ್ಲೆಸೆಂಟರವರ ಸಮಾಧಿಯಿರುವ ಸ್ಮಶಾನಕ್ಕೆ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ.

ವೂಡೂ ಮಾಟ ಮಂತ್ರವೇ ಅಥವಾ ಧಾರ್ಮಿಕ ಸಂಸ್ಕೃತಿಯೇ?

ಈ ಪ್ರಶ್ನೆಗೆ ಉತ್ತರಿಸುವ ವೂಡೂ ಅನುಯಾಯಿಗಳು, ವೂಡೂ ಆಚರಣೆಯನ್ನು ಬರೀ ಮಾಟ-ಮಂತ್ರವೆನ್ನುವುದಿಲ್ಲ. ಗುಲಾಮರಾಗಿ ಅಮೆರಿಕಾಗೆ ಬಂದು ಇಲ್ಲಿ ನೆಲೆಸಿದ ಪಶ್ಚಿಮ ಆಫ್ರಿಕಾದ ಮೂಲನಿವಾಸಿಗಳಲ್ಲಿ ರೂಢಿಯಲ್ಲಿದ್ದ ವೂಡೂ, ಆಫ್ರಿಕನ್, ಕ್ಯಾಥೋಲಿಕ್ ಮತ್ತು ಅಮೆರಿಕಾದ ಮೂಲನಿವಾಸಿಗಳ ಧಾರ್ಮಿಕ ಸಂಸ್ಕೃತಿಗಳಿಂದ ಮಿಳಿತವಾಗಿ ತನ್ನದೇ ಆದ ಆಚರಣೆಗಳನ್ನು ಹೊಂದಿದೆ. ಪಶ್ಚಿಮ ಆಫ್ರಿಕಾದ ವೂಡೂ, ಲೂಯಿಸಿಯಾನ ವೂಡೂ ಮತ್ತು ಹೈಶಿಯನ್ ವೂಡೂ ಎಂದು ಮೂರು ವಿಧಗಳಲ್ಲಿ ಆಚರಿಸಲ್ಪಡುತ್ತಿದೆ. ಆತ್ಮಗಳ ಇರುವಿಕೆಯನ್ನು ನಂಬುವ ಈ ಧಾರ್ಮಿಕ ಸಂಸ್ಕೃತಿಯನ್ನು ಪಾಲಿಸುವ ವೂಡೂ ಅನುಯಾಯಿಗಳು, ತಾವು ಆತ್ಮಗಳ ಸೇವಕರೆಂದೇ ನಂಬಿದ್ದಾರೆ. ಕ್ಯಾಥೋಲಿಕ್ ಚರ್ಚುಗಳಿಂದ ಸಿಕ್ಕ ಸ್ವೀಕೃತಿಯಿಂದ ವೂಡೂ ಆಚರಣೆಯನ್ನು ಧಾರ್ಮಿಕ ಸಂಸ್ಕೃತಿಯೆಂದು ಒಪ್ಪಿಕೊಳ್ಳುವಂತಾಗಿದೆ. ಆದರೂ 'ವೂಡೂ' ಎಂದಾಕ್ಷಣ ಮಾಟ-ಮಂತ್ರ, ಸ್ಮಶಾನ, ಆತ್ಮಗಳ ಆರಾಧನೆ, ರೌದ್ರ ನರ್ತನ, ಪ್ರಾಣಿಬಲಿ, ಸೂಜಿ ಚುಚ್ಚಿದ ಗೊಂಬೆಗಳು... ಹೀಗೆ

ಭಯ ಹುಟ್ಟಿಸುವ ಆಚರಣೆಯಾಗಿ ಕಂಡುಬರುತ್ತದೆ. ವೂಡೂ ಅನುಯಾಯಿಗಳು ವೂಡೂ ಗೊಂಬೆಯನ್ನು ಬಳಸಿ ವಾಮಾಚಾರವನ್ನು ಅಭ್ಯಸಿಸುತ್ತಾರೆ ಎಂಬ ನಂಬಿಕೆ ಹಲವರಲ್ಲಿದೆ. ಅದಕ್ಕೆ ಪೂರಕವಾಗಿ ಹಾಲಿವುಡ್‌ನ ಕೆಲವು ಚಿತ್ರಗಳಲ್ಲಿ ವೂಡೂ ಗೊಂಬೆಗಳನ್ನು ಮಾಟ-ಮಂತ್ರಕ್ಕಾಗಿಯೇ ಬಳಸಲಾಗುತ್ತದೆ ಎನ್ನುವಂತೆ ಚಿತ್ರಿಸಲಾಗಿದೆ. ವೂಡೂ ಅನುಯಾಯಿಗಳು ಈ ಅಭಿಪ್ರಾಯವನ್ನು ವಿರೋಧಿಸುತ್ತಾರೆ. ಅವರ ನಂಬಿಕೆಯಲ್ಲಿ ವೂಡೂ ಮಾಟ-ಮಂತ್ರವಾಗಿರದೆ, ಜವಾಬ್ದಾರಿಯುತ, ನೋವುನಿವಾರಕ, ಬದುಕಿಗೆ ವಿಶ್ವಾಸ ನೀಡುವ ಧಾರ್ಮಿಕ ಆಚರಣೆಯಾಗಿ, ಸಕಾರಾತ್ಮಕ ನಂಬಿಕೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ.

ಆಧಾರ

1. 'ಕರ್ನಾಟಕ ಜಾನಪದ ಸಮೀಕ್ಷೆ': ಸಂಪಾದಕರು – ಜೀ. ಶಂ. ಪರಮಶಿವಯ್ಯ.
2. ಕರ್ನಾಟಕ ಜಾನಪದ ಕೈಪಿಡಿ.
3. ವೂಡೂ ಆಫ್ ಲೂಯಿಸಿಯಾನಾ' – ಮೋನಿಕ್ ಜಾಯ್ನರ್ ಸೈಡ್ಲಾಕ್.
4. 'ಒರಿಶಾಸ್, ಗಾಡೆಸಸ್ ಆಂಡ್ ವೂಡೂ ಕ್ವೀನ್ಸ್' –ಲಿಲಿತ್ ಡಾರ್ಸೆ ಮತ್ತು ಅಂತರ್ಜಾಲ.

❑

21

ಅಮೇರಿಕೆಯ ಜಾನಪದ ಕಥೆಗಳಲ್ಲಿ ಭೂತ-ಪ್ರೇತಗಳು

ಶಂಕರ ಹೆಗಡೆ
ನೇಪರ್‌ವಿಲ್, ಇಲಿನಾಯ್

*

ಮಾನವ ಬಹು ಹಿಂದಿನಿಂದಲೂ ದೇವರ ಅಸ್ತಿತ್ವದಲ್ಲಿ ನಂಬಿಕೆಯಿಟ್ಟಿರುವಂತೆ ಭೂತ-ಪ್ರೇತಗಳ ಅಸ್ತಿತ್ವದಲ್ಲಿಯೂ ಬಲವಾದ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾನೆ. ಇದಕ್ಕೆ ಹಲವು ಕಾರಣಗಳನ್ನು ಕೊಡಬಹುದಾದರೂ ಮುಖ್ಯ ಕಾರಣ ಮನುಷ್ಯನ ದೇಹದಲ್ಲಿ ಆತ್ಮ ಎಂಬ ಬಾಹ್ಯಶಕ್ತಿ ಎಲ್ಲ ಕ್ರಿಯೆಗಳಿಗೆ ಮೂಲ ಎಂಬ ನಂಬಿಕೆ. ಮರಣ ದೇಹಕ್ಕೆ ಮಾತ್ರ. ಆತ್ಮಕ್ಕೆ ಸಾವಿಲ್ಲ. ಹಾಗಿದ್ದರೆ ವ್ಯಕ್ತಿಯೊಬ್ಬನ ಮರಣದ ನಂತರ ಆತನ ಚೇತನಕ್ಕೆ ಏನಾಗುತ್ತದೆ ಎಂಬ ಜಿಜ್ಞಾಸೆ ಸಹಜವಾಗಿಯೇ ಉದ್ಭವಿಸುತ್ತದೆ. ಕಣ್ಣಿಗೆ ಗೋಚರವಾಗದ ಪರಲೋಕವೊಂದಿದೆಯೇ? ದೇಹದಿಂದ ಬೇರ್ಪಟ್ಟ ಆತ್ಮ ಪರಲೋಕಕ್ಕೆ ಹೋಗಿ ಇನ್ನೊಂದು ರೀತಿಯಲ್ಲಿ ಬದುಕುವುದೇ? ಅಥವಾ ಈ ಭೂಲೋಕದಲ್ಲಿಯೇ ಬೇರೊಂದು ರೂಪದಲ್ಲಿ ಜೀವಿಸುತ್ತದೆಯೇ? ಇಂತಹ ಕುತೂಹಲಗಳಿಗೆ ಉತ್ತರ ಹುಡುಕ ಹೋಗಿ ಮಾನವ ಸ್ವರ್ಗ, ನರಕ, ಭೂತ, ಪ್ರೇತ ಮುಂತಾದ ಅಮೂರ್ತ ಲೋಕಗಳನ್ನು ಸೃಷ್ಟಿಸಿಕೊಂಡನು.

ಮನುಷ್ಯ ತುಂಬು ಜೀವನ ಬದುಕಿ ತೃಪ್ತಿಯಿಂದ ಸಹಜ ಮರಣಹೊಂದಿದರೆ ಆತ ಜೀವನದಲ್ಲಿ ಮಾಡಿದ ಸುಕೃತ್ಯ, ದುಷ್ಕೃತ್ಯಗಳನ್ನವಲಂಬಿಸಿ ಅವನ ಆತ್ಮ ಸ್ವರ್ಗಕ್ಕೋ, ನರಕಕ್ಕೋ ಹೋಗುತ್ತದೆ. ಆದರೆ ಅದೇ ಮನುಷ್ಯ ಚಿಕ್ಕ ವಯಸ್ಸಿನಲ್ಲಿ, ಆಶೆ-ಆಕಾಂಕ್ಷೆಗಳನ್ನು ತೀರಿಸಿಕೊಳ್ಳದೆ ಅಪಘಾತ, ಆತ್ಮಹತ್ಯೆಯಂತಹ ದುರ್ಮರಣಕ್ಕೆ ತುತ್ತಾದರೆ ಆ ವ್ಯಕ್ತಿಯ ಆತ್ಮ ದೆವ್ವ, ಭೂತ, ಪ್ರೇತ, ಅಥವಾ ಪಿಶಾಚಿ ರೂಪದಲ್ಲಿ ಭೂಮಿಯ ಮೇಲೆಯೇ ಬದುಕುತ್ತದೆ. ತನಗೆ ಅನ್ಯಾಯ ಮಾಡಿದವರಿಗೆ ಕಾಟ ಕೊಟ್ಟು ಪೀಡಿಸಿ ಸಂತೋಷಪಡುತ್ತದೆ. ಈ ನಂಬಿಕೆಗಳು ಒಂದು ದೇಶ ಅಥವಾ ಜನಾಂಗಕ್ಕೆ ಸೀಮಿತವಾದುದಲ್ಲ. ಜಗತ್ತಿನ ಎಲ್ಲ

ಜನಾಂಗಗಳಲ್ಲಿಯೂ ಅವರದೇ ಆದ ವಿಶಿಷ್ಟ ರೂಪಗಳಲ್ಲಿ ಪ್ರಚಲಿತವಿವೆ. ತಲೆ-ತಲಾಂತರದಿಂದ ಈ ನಂಬಿಕೆಗಳು ನಿತ್ಯ ಜೀವನದಲ್ಲಿ ಹಾಸು-ಹೊಕ್ಕಾಗಿದ್ದು ವಿವಿಧ ಜಾನಪದ ಕಲೆ-ಸಾಹಿತ್ಯಗಳ ಸೃಷ್ಟಿಗೆ ಎಡೆಮಾಡಿಕೊಟ್ಟಿವೆ.

ಅಮೇರಿಕೆಯ ಜಾನಪದ ಕಥೆಗಳು ವಿಪುಲವಾಗಿವೆ. ಇವುಗಳನ್ನು ಮೂಲನಿವಾಸಿಗಳ ಸಾಹಿತ್ಯ ಮತ್ತು ವಲಸೆಗಾರರ ಸಾಹಿತ್ಯ ಎಂದು ಎರಡು ವಿಭಿನ್ನ ಗುಂಪುಗಳಾಗಿ ವಿಭಜಿಸಬಹುದು. ಅಮೇರಿಕೆಯಲ್ಲಿ ಯೂರೋಪಿಯನ್ನರ ವಸಾಹತು ಪ್ರಾರಂಭವಾಗುವ ಮೊದಲೇ ಸಾವಿರಾರು ವರ್ಷಗಳಿಂದ ಇಲ್ಲಿಯ ಮೂಲನಿವಾಸಿಗಳು ತಮ್ಮದೇ ಆದ ಸಂಸ್ಕೃತಿ, ಭಾಷೆ, ಕಲೆ, ರಾಜಕೀಯ ಪದ್ಧತಿಗಳನ್ನು ಬೆಳೆಸಿಕೊಂಡು ಜೀವಿಸುತ್ತಿದ್ದರು. ನಂತರ ಜಗತ್ತಿನ ನಾನಾ ದೇಶಗಳಿಂದ ವಲಸೆ ಬಂದ ವಿವಿಧ ಜನಾಂಗದವರು ಅವರದೇ ಸಂಸ್ಕೃತಿ- ಸಂಪ್ರದಾಯಗಳನ್ನು ತಂದು ಸ್ಥಾಪಿಸಿದರು.

ಭೂತಗಳನ್ನು ಪ್ರತ್ಯಕ್ಷವಾಗಿ ಕಂಡವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಭೂತ-ಪ್ರೇತಗಳ ರಂಜಕ ಜಾನಪದ ಕಥೆಗಳಿಗೇನೂ ಕೊರತೆಯಿಲ್ಲ. ಮೂಲನಿವಾಸಿಗಳ ಭೂತ-ಪ್ರೇತದ ಕಥೆಗಳು ಸಾಮಾನ್ಯವಾಗಿ ಹಲವು ಸನ್ನಿವೇಶಗಳನ್ನೊಳಗೊಂಡ ಕಥೆಗಳು. ಅವುಗಳಲ್ಲಿ ಶೌರ್ಯ ಧೈರ್ಯಗಳ ಪ್ರದರ್ಶನ ಕಾಣುತ್ತದೆ. ಅವರ ಜೀವನದ ಪ್ರಮುಖ ಅಂಗವಾಗಿದ್ದ ಕುದುರೆಗಳು ಭೂತವಾಗಿ ಅಲೆಯುತ್ತಿರುವ ಹಲವು ಕಥೆಗಳನ್ನು ಕಾಣಬಹುದು. ಇತರ ಪ್ರಾಣಿಗಳನ್ನೊಳಗೊಂಡ ಕಥೆಗಳೂ ಇವೆ. ಹಲವು ಬಣಗಳಲ್ಲಿ ಸತ್ತವರು ಗೂಬೆಯ ರೂಪದಲ್ಲಿ ಭೂತವಾಗಿ ಬರುತ್ತಾರೆ ಎಂಬ ನಂಬಿಕೆಯಿದೆ. ಇದಕ್ಕೆ ಬದಲಾಗಿ ವಲಸೆಗಾರರ ಜಾನಪದ ಕಥೆಗಳು ಚಿಕ್ಕ-ಚಿಕ್ಕ ಕಥೆಗಳು. ಬಹುಮಟ್ಟಿನ ಕಥೆಗಳು ಒಂದೇ ಘಟನೆಯನ್ನು ನಿರೂಪಿಸುತ್ತವೆ. ಮಾಟಗಾತಿ, ಮಾಟಗಾರರ ಹಲವು ಕಥೆಗಳಿವೆ. ಮೂಲನಿವಾಸಿಗಳಲ್ಲಿ ಇಂಥ ಕಥೆಗಳು ಕಡಿಮೆ.

ಈ ಕೆಳಗೆ ಪ್ರಸ್ತುತಪಡಿಸಿದ ಮೊದಲಿನ ಎರಡು ಕಥೆಗಳು ಅಮೇರಿಕೆಯ ಮೂಲನಿವಾಸಿಗಳ ದಂತಕಥೆಗಳು. ಮೂರನೆಯದು ಅಮೇರಿಕೆಯ ಸಾಮಾನ್ಯ ಜನಪದದಲ್ಲಿ ಪ್ರಚಲಿತವಿರುವ ಕಥೆ. ಈ ಕಥೆಗಳು ವಿವಿಧ ಮೂಲಗಳಲ್ಲಿ ಭಿನ್ನ-ಭಿನ್ನ ಗಾತ್ರ ಮತ್ತು ನಿರೂಪಣೆಗಳಲ್ಲಿ ಸಿಗುತ್ತವೆ. ನಾನು ಇವುಗಳನ್ನು ಮೂಲ ಕಥೆಗಳ ಆಶಯಕ್ಕೆ ಭಂಗ ಬರದಂತೆ ನನ್ನದೇ ಶಬ್ದಗಳಲ್ಲಿ ನೇರ, ಸಂಕ್ಷಿಪ್ತ ರೂಪದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ.

ನಡೆದಾಡುವ ಅಸ್ಥಿಪಂಜರ

ಇದು ಮೊಂಟಾನಾ ಹುಲ್ಲುಗಾವಲು ಪ್ರದೇಶದಲ್ಲಿ ವಾಸಿಸುವ ಬ್ಲ್ಯಾಕ್ ಫೀಟ್ ಬಣದ ದಂತಕಥೆ.

ಹೆವಿ ಕಾಲರ್‌ನಿಗೆ ಬೆಳಕು ಹರಿಯುವ ಮೊದಲೇ ಎಚ್ಚರವಾಯಿತು. ಕಣ್ಣುಜ್ಜಿಕೊಂಡು ಮೈ ಮುರಿಯುತ್ತಿದ್ದಂತೆ ಪಕ್ಕದಲ್ಲಿ ಕೈಗೆ ಏನೋ ತಡಕಿದಂತಾಯಿತು. ನೋಡಿದರೆ ಒಂದು ಹೆಣ್ಣಿನ ಅಸ್ಥಿಪಂಜರ! ತನ್ನ ಪಕ್ಕದಲ್ಲಿಯೇ ಅತಿ ಸಮೀಪ ಮಲಗಿತ್ತು. ಸತ್ತು

ಶವಸಂಸ್ಕಾರ ಮಾಡದ ಹೆಣ್ಣೊಂದು ಪ್ರೇತವಾಗಿ ನನ್ನನ್ನು ಹಿಡಿದುಕೊಂಡಿದೆ ಎಂದುಕೊಂಡ. ಹೆದರಿ ಎಲ್ಲಿದ್ದೇನೆ ಎಂದು ಸುತ್ತೆಲ್ಲ ನೋಡಿದರೆ ಈ ನಿರ್ಜನ ಪ್ರದೇಶದಲ್ಲಿ ಹುಲ್ಲಿನ ಮೇಲೆ ತಾನೊಬ್ಬನೇ ಮಲಗಿದ್ದೇನೆ. ನಾನು ಹೇಗೆ ಇಲ್ಲಿಗೆ ಬಂದೆ ಎಂದು ಹಿಂದಿನ ದಿನ ನಡೆದದ್ದನ್ನೆಲ್ಲ ನೆನಪಿಸಿಕೊಳ್ಳಹತ್ತಿದ.

ಹಿಂದಿನ ದಿನ ಮಧ್ಯಾಹ್ನ ಹೆವಿ ಕಾಲರ್ ತನ್ನ ಬಣದ ಏಳು ಯುವ ಯೋಧರ ಜೊತೆಗೆ ಕಾಡೆಮ್ಮೆಗಳ ಬೇಟೆಗೆ ಹೊರಟಿದ್ದ. ಆತ ಬ್ಲ್ಯಾಕ್ ಫೀಟ್ ಬಣದ ಒಬ್ಬ ಮುಖ್ಯಸ್ಥ. ಇಡೀ ದಿನ ಸುತ್ತಿದರೂ ಅವರಿಗೆ ಒಂದೂ ಬೇಟೆ ಸಿಗಲಿಲ್ಲ. ನಿರಾಶರಾಗಿ ತಮ್ಮ ಶಿಬಿರದ ಕಡೆಗೆ ಹೋಗುತ್ತಿದ್ದಾಗ ಹೆವಿ ಕಾಲರ್‌ನಿಗೆ ದೊಡ್ಡ ಶತ್ರು ತಂಡ ಹತ್ತಿರದಲ್ಲೆಲ್ಲೋ ಇರುವ ಚಿಹ್ನೆ ಕಂಡಿತು. ತನ್ನ ಗುಂಪನ್ನು ವೈರಿ ಗುಂಪಿಗೆ ಕಾಣದಂತೆ ಆದಷ್ಟು ತಗ್ಗು ಪ್ರದೇಶದ ಮರೆಯಲ್ಲಿ ಕರೆದೊಯ್ಯಹತ್ತಿದ. ಹೋಗುತ್ತಿದ್ದಂತೆ ದೂರದಲ್ಲಿ ನದಿಯ ಆಚೆಯ ದಡದಲ್ಲಿ ಮೂರು ಮುದಿ ಎಮ್ಮೆಗಳು ಕಂಡವು. ತಪ್ಪಿಸಿಕೊಳ್ಳಬಾರದೆಂದು ಗುಂಪನ್ನು ಹಿಂದೆ ಬಿಟ್ಟು ಆ ದಿಕ್ಕಿನಲ್ಲಿ ಓಡಿದ. ಹತ್ತಿರ ಹೋಗಿ ಎಮ್ಮೆಯೊಂದಕ್ಕೆ ಬಾಣದಿಂದ ಗುರಿಯಿಟ್ಟು ಹೊಡೆದ. ಅವನ ಅದೃಷ್ಟಕ್ಕೆ ಎಮ್ಮೆ ಸತ್ತು ಬಿತ್ತು. ಆಗಲೇ ಕತ್ತಲೆ ಆವರಿಸಹತ್ತಿ ಹೆವಿ ಕಾಲರ್‌ಗೆ ತನ್ನ ಗುಂಪನ್ನು ಸೇರಿಕೊಳ್ಳಲು ತುಂಬ ತಡವಾಗಿತ್ತು.

ಸರಿ, ಅಲ್ಲಿಯೇ ರಾತ್ರಿ ಕಳೆಯಲು ನಿರ್ಧರಿಸಿದ. ಬೆಂಕಿ ಹೊತ್ತಿಸಿ ಎಮ್ಮೆಯ ಮಾಂಸದ ತುಂಡೊಂದನ್ನು ಬೇಯಿಸಿಕೊಂಡ. ತಿಂದು ಸಂತೋಷಪಡುತ್ತಿರುವಾಗ ಗುಂಪನ್ನು ಬಿಟ್ಟು ಬರಬಾರದಾಗಿತ್ತು, ಇಲ್ಲಿ ನಾನೊಬ್ಬನೇ ಊಟ ಮಾಡಿ ಆನಂದಿಸುತ್ತಿದ್ದೇನೆ ಎಂದು ಸ್ವಲ್ಪ ಬೇಸರ ಮಾಡಿಕೊಂಡ. ಇರಲಿ, ಎಮ್ಮೆಯ ಕೂದಲಿನಿಂದ ತನ್ನ ಕೋವಿಯನ್ನಾದರೂ ಸ್ವಚ್ಛ ಮಾಡೋಣವೆಂದು ಕೂದಲು ಕಿತ್ತು ಬಂದು ಕೋವಿ ಹಿಡಿದು ಕುಳಿತಿದ್ದಂತೆಯೇ, ಎಲ್ಲಿಂದಲೋ ಕೂದಲಿನ ಉಂಡೆಯೊಂದು ಆತನ ಕಾಲಬುಡದಲ್ಲಿಯೇ ಬಂದು ಬಿತ್ತು. ಅತ್ತಿತ್ತ ನೋಡಿದರೆ ಯಾರೂ ಕಾಣಲಿಲ್ಲ. ಮಧ್ಯಾಹ್ನ ನಾನೆಂದುಕೊಂಡ ವೈರಿಬಣ ಇಲ್ಲೆಲ್ಲೋ ಹತ್ತಿರವಿದ್ದು ಸಂಜ್ಞೆ ಕೊಡುತ್ತಿರಬಹುದು ಎಂದು ಸ್ವಲ್ಪ ಅಳುಕಿದ. ಈ ಜಾಗ ಬಿಟ್ಟು ಬೇರೆ ಕಡೆ ಹೋಗುವುದು ಲೇಸು ಎಂದುಕೊಂಡು ಕೋವಿಯನ್ನು ಸ್ವಚ್ಛ ಮಾಡಿಕೊಂಡು ಮದ್ದು ತುಂಬಿದ. ನದಿಯ ದಂಡೆಗುಂಟ ಕತ್ತಲಲ್ಲೇ ನಡೆದುಕೊಂಡು ಹೋದ. ಬಹು ದೂರ ನಡೆದ ಮೇಲೆ ತುಂಬ ಆಯಾಸವಾಗಿ ಅಲ್ಲಿಯೇ ಹುಲ್ಲಿನ ಮೇಲೆ ಮಲಗಿ ನಿದ್ದೆ ಹೋದ. ಆಯಾಸವಾಗಿದ್ದರೂ ಸರಿಯಾಗಿ ನಿದ್ದೆ ಬರಲಿಲ್ಲ. ಏನೇನೋ ಕೆಟ್ಟ ಕನಸುಗಳು. ಕನಸಿನಲ್ಲಿ ಯಾರೋ ಕರೆದಂತೆ. ಒಮ್ಮೊಮ್ಮೆ ಯಾರೋ ಕೂಗಿದಂತೆ. ಬಹಳ ಹೊತ್ತಿನ ಮೇಲೆ ಗಾಢ ನಿದ್ರೆ ಬಂದು ನಸುಕಿನಲ್ಲೇ ಎಚ್ಚರವಾಗಿ ನೋಡಿದರೆ ಈ ಪ್ರೇತ ತನ್ನ ಬೆನ್ನು ಹತ್ತಿದೆ.

ಅಸ್ಥಿಪಂಜರವನ್ನು ಇನ್ನೊಮ್ಮೆ ನೋಡಿದ. ತಲೆಗೆ ಮಾತ್ರ ಕೋವಿಗುಂಡಿನ ಹೊಡೆತ ಬಿದ್ದಂತೆ ಕಾಣುತ್ತದೆ. ಬಹುಶಃ ಇದು ಯಾವುದೋ ವೈರಿಬಣದ ಶಿಬಿರವಾಗಿದ್ದು ಅವರು ಒಂದು ಮಹಿಳೆಯನ್ನು ಕೊಂದು ಶವವನ್ನು ಇಲ್ಲಿಯೇ ಬಿಟ್ಟು ಹೋಗಿದ್ದಾರೆ. ಅದೇ ಹೆಣ್ಣಿನ ಪ್ರೇತ ಇದು ಎಂದುಕೊಂಡ.

ಹೆವಿ ಕಾಲರ್‌ನಿಗೆ ಎಲ್ಲಿಲ್ಲದ ಭಯ ಆವರಿಸಿತು. ಭೂತದ ಹೆದರಿಕೆ, ವೈರಿಬಣದ ಭಯ. ರಾತ್ರಿಯಿಡೀ ಅಜ್ಞಾತ ಮಹಿಳೆಯ ಅಸ್ಥಿಪಂಜರದ ಜೊತೆ ಮಲಗಿಬಿಟ್ಟೆನೆಂಬ ಆತಂಕ. ಆತ ಅಲ್ಲಿ ಹೆಚ್ಚು ಹೊತ್ತು ಕೂಡದಾದ. ನದಿಯ ಆಚೆಯ ಗುಡ್ಡದ ಮೇಲಿಂದ ಬಹಳ ದೂರದತನಕ ಜೋರಾಗಿ ನಡೆಯುತ್ತ ಹೋದ. ಅವನ ಗುಂಪಿನ ಯೋಧರು ಯಾರೂ ಕಾಣಲಿಲ್ಲ. ಕತ್ತಲೆಯಾಗುವ ಮೊದಲು ಒಂದು ಸುರಕ್ಷಿತ ಸ್ಥಳಕ್ಕೆ ಸೇರಿಕೊಳ್ಳಬೇಕು. ನದಿಯ ಆಚೆಯ ದಡದಲ್ಲಿ ಒಂದು ದ್ವೀಪ ಕಂಡಿತು. ಅದೇ ಸುರಕ್ಷಿತ ಸ್ಥಳವೆಂದು ಅಲ್ಲಿಗೆ ಹೋಗಿ ರಾತ್ರಿ ತಂಗಲು ನಿರ್ಧರಿಸಿದ.

ಕೆಳಗೆ ಬಿದ್ದ ದೊಡ್ಡ ಮರವೊಂದು ಕಣ್ಣಿಗೆ ಬಿತ್ತು. ಗಾಳಿ ಬರದಂತೆ ಮರದ ಸಂದಿಯ ಹಿಂದೆ ಬೆಂಕಿಯನ್ನು ನಿರ್ಮಿಸಿಕೊಂಡ. ಬೆಂಕಿಗೆ ತನ್ನ ಬೆನ್ನನ್ನು ಒಡ್ಡಿ ಮೈ ಕಾಯಿಸಿಕೊಳ್ಳಹತ್ತಿದ. ಹಿಂದಿನ ರಾತ್ರಿ ಜೊತೆಯಲ್ಲಿ ಮಲಗಿದ್ದ ಅಸ್ಥಿಪಂಜರದ ಬಗ್ಗೆ ಸದಾ ಯೋಚಿಸುತ್ತಲೇ ಇದ್ದ. ಇದ್ದಕ್ಕಿದ್ದಂತೆ ಅವನ ಹಿಂದಿನಿಂದ ಏನೋ ಶಬ್ದ ಕೇಳಿಸಿತು, ನೆಲದ ಮೇಲಿಂದ ಏನೋ ಎಳೆದುಕೊಂಡು ಬೆಂಕಿಯ ಕಡೆಗೇ ಬರುತ್ತಿರುವ ಸದ್ದು. ಯಾರೋ ಹುಲ್ಲಿನ ಮೇಲೆ ಟೀಪಿಯ ಮೇಲು ಹೊದಿಕೆಯನ್ನು ಎಳೆಯುತ್ತಿರುವಂತಿತ್ತು. ಶಬ್ದ ಹತ್ತಿರ ಹತ್ತಿರಕ್ಕೆ ಬರಹತ್ತಿತು. ಹೆವಿ ಕಾಲರ್ ಬಹಳ ಭಯಗೊಂಡು ತುಂಬ ಹೊತ್ತು ತಲೆತಗ್ಗಿಸಿ ಕುಳಿತಿದ್ದ. ಅದೇನು ಸದ್ದಿರಬಹುದೆಂದು ತಲೆ ಎತ್ತಿ ನೋಡಲೂ ಅವನಿಗೆ ಹೆದರಿಕೆಯಾಯಿತು. ಯಾರೋ ಟೀಪಿಯೊಂದನ್ನು ಎಳೆದುಕೊಂಡು ಬಂದಂತೆ ಕೇಳಿಬರುತ್ತಿದ್ದ ಆ ಸದ್ದು ಅವನು ಕುಳಿತಿದ್ದ ಮರದ ಕೊಂಬೆಯ ಹತ್ತಿರದತನಕ ಬಂದು ನಂತರ ನಿಂತುಹೋಯಿತು. ಇದ್ದಕ್ಕಿದ್ದಂತೆ ಯಾರೋ ಶಿಳ್ಳೆ ಹಾಕುವಂತೆ ಕೇಳಿಸಿತು. ಆಗ ಆತ ಆ ಶಬ್ದ ಬರುತ್ತಿರುವ ಕಡೆಗೆ ನೋಡಿ ಬೆಚ್ಚಿಬಿದ್ದ. ಹಿಂದಿನ ರಾತ್ರಿ ಅವನ ಜೊತೆ ಮಲಗಿದ್ದ ಅಸ್ಥಿಪಂಜರವೇ ಮರದ ಇನ್ನೊಂದು ಕೊಂಬೆಯ ಮೇಲೆ ಅವನ ಎದುರೇ ಕುಳಿತಿತ್ತು. ಈ ಪ್ರೇತ ಈಗ ಹಳೆಯ ಟೀಪಿಯ ಹೊದಿಕೆಯೊಂದನ್ನು ಧರಿಸಿತ್ತು. ಅದರಿಂದ ದಾರವೊಂದು ಜೋಲುತ್ತಿದ್ದು ಅದರ ಇನ್ನೊಂದು ತುದಿ ಪ್ರೇತದ ಕುತ್ತಿಗೆಗೆ ಸುತ್ತಿಕೊಂಡಿತ್ತು. ಪ್ರೇತವು ಶಿಳ್ಳೆಯಿಂದ ಹಾಡಿನ ರಾಗವೊಂದನ್ನು ಹಾಡುತ್ತ, ರಾಗಕ್ಕೆ ಜೊತೆಗೂಡಿಸಿ ತನ್ನ ಕಾಲುಗಳಿಂದ ತಾಳ ಹಾಕುತ್ತಿತ್ತು. [ಟೀಪಿ – ಪ್ರಾಣಿಗಳ ಚರ್ಮ ಅಥವಾ ಬಟ್ಟೆ, ಕ್ಯಾನ್ವಾಸ್‌ಗಳಿಂದ ಮಾಡಿದ ಕೋನಾಕಾರದ ಗುಡಾರ (tent).]

ಹೆವಿ ಕಾಲರ್‌ಗೆ ಈ ವಿಚಿತ್ರ ದೃಶ್ಯವನ್ನು ನೋಡಿ ಒಂದು ಕ್ಷಣ ಹೃದಯದ ಬಡಿತವೇ ನಿಂತಿತು. ಕೊನೆಗೆ ಧೈರ್ಯ ಮಾಡಿ, "ಎಲೇ ಪ್ರೇತವೇ, ನನ್ನನ್ನು ಪೀಡಿಸಬೇಡ. ನನಗೆ ತುಂಬಾ ಸುಸ್ತಾಗಿದೆ. ನನ್ನನ್ನು ನಿದ್ರೆ ಮಾಡಲು ಬಿಡು" ಎಂದ.

ಆದರೆ ಪ್ರೇತವು ಅವನ ಮಾತಿಗೆ ಲಕ್ಷ್ಯ ಕೊಡದೆ ಮತ್ತೂ ದೊಡ್ಡದಾಗಿ ಶಿಳ್ಳೆ ಹಾಕುತ್ತ ಕಾಲುಗಳನ್ನು ಮತ್ತಷ್ಟು ಜೋರಾಗಿ ತಟ್ಟಹತ್ತಿತು. ತಲೆಬುರುಡೆಯು ಅತ್ತಿತ್ತ ಅಲ್ಲಾಡುತ್ತ, ಒಮ್ಮೆ ಅವನತ್ತ, ಇನ್ನೊಮ್ಮೆ ಆಕಾಶದತ್ತ ನೋಡುತ್ತ, ತನ್ನ ಶಿಳ್ಳೆಯ ಸಂಗೀತವನ್ನು ಮುಂದುವರಿಸಿಯೇ ಇತ್ತು. ಹೆವಿ ಕಾಲರ್ ಕೋಪೋದ್ರಿಕ್ತನಾಗಿ, "ಸರಿ, ಪ್ರೇತವೇ, ನಿನಗೆ

ನನ್ನ ಮೇಲೆ ಸ್ವಲ್ಪವೂ ಕನಿಕರವಿಲ್ಲ. ನಿನ್ನನ್ನು ಗುಂಡು ಹೊಡೆದು ಓಡಿಸುತ್ತೇನೆ" ಎಂದು ಹೇಳಿ ತನ್ನ ಬಂದೂಕನ್ನು ಎತ್ತಿಕೊಂಡು, ಹೆದರುತ್ತಲೇ ಭೂತದತ್ತ ಗುಂಡು ಹಾರಿಸಿದ. ಆಗ ಪ್ರೇತ ಕತ್ತಲಲ್ಲಿ ಹಿಂದಕ್ಕೆ ಬಿದ್ದು, "ಹೆವಿ ಕಾಲರ್, ನೀನು ನನ್ನ ಮೇಲೆ ಗುಂಡು ಹಾರಿಸಿದೆ! ನಾಯಿಗಿಂತಲೂ ಕಡೆ ನೀನು. ನಿನಗೆ ಶಾಪ ಹಾಕುತ್ತೇನೆ. ಇನ್ನು ನೀನು ನನ್ನಿಂದ ಎಂದೂ ಮರೆಮಾಚಿಕೊಳ್ಳಲು ಸಾಧ್ಯವಿಲ್ಲ. ಈ ಭೂಮಿಯ ಮೇಲೆ ಎಲ್ಲಿದ್ದರೂ ನಾನು ನಿನ್ನ ಬೆಂಬತ್ತಿ ಬರುತ್ತೇನೆ" ಎಂದು ಅರಚಿತು.

ತಕ್ಷಣ ಹೆವಿ ಕಾಲರ್ ಹೌಹಾರಿ ಎದ್ದುನಿಂತು, ಸಾಧ್ಯವಾದಷ್ಟು ವೇಗವಾಗಿ ಓಡಹತ್ತಿದ. ಅವನು ಓಡುತ್ತಿದ್ದಂತೆಯೇ ಅವನ ಹಿಂದೆಯೇ ಕತ್ತಲಲ್ಲಿ ಪ್ರೇತದ ಧ್ವನಿ ಕೇಳುತ್ತಿತ್ತು: "ಹೆವಿ ಕಾಲರ್, ನೀನು ನನಗೆ ಗುಂಡಿಕ್ಕಿದೆ. ಒಮ್ಮೆ ಸತ್ತ ನನ್ನನ್ನು ಮತ್ತೆ ಕೊಲ್ಲಲು ಪ್ರಯತ್ನಿಸಿದೆ." ಬಹಳ ಹೊತ್ತಿನ ತನಕ ಧ್ವನಿ ಹಿಂಬಾಲಿಸಿ ಕೊನೆಗೆ ನಿಂತಿತು. ಅವನು ನಿಲ್ಲದೆ ಓಡಿಯೇ ಓಡಿದ. ಓಡಿ ಓಡಿ ಉಸಿರು ಕಟ್ಟಿ ಕ್ಷಣಮಾತ್ರ ನಿಂತಾಗ ಅವನ ಹೆಸರು ಮತ್ತೆ ಮತ್ತೆ ಮರುಧ್ವನಿಸುತ್ತಿತ್ತು. ತುಂಬಾ ದಣಿದು ನಿದ್ದೆಯಿಂದ ಕಣ್ಣು ತೂಕಡಿಸುತ್ತಿತ್ತು. ಆದರೆ ಮಲಗಲು ಧೈರ್ಯವಾಗಲಿಲ್ಲ. ಪ್ರೇತವು ತನ್ನ ಬೆನ್ನು ಹತ್ತುವುದೆಂದು ಹೆದರಿ ರಾತ್ರಿಯಿಡೀ ಓಡುತ್ತಲೇ ಇದ್ದ. ಬೆಳಗಿನ ಹೊತ್ತಿಗೆ ಸ್ವಲ್ಪ ವಿಶ್ರಾಂತಿಗಾಗಿ ಕುಳಿತ. ತಕ್ಷಣ ನಿದ್ರಾದೇವಿ ಆವರಿಸಿಬಿಟ್ಟಳು.

ಎಚ್ಚರವಾದ ಮೇಲೆ ತನ್ನ ಗುಂಪಿನ ಯೋಧರನ್ನು ಹುಡುಕಿಕೊಂಡು ಹೊರಟ. ಗುಡ್ಡದ ತುದಿಯ ಸಮತಟ್ಟು ಜಾಗ ತಲುಪಿದಾಗ, ಹೆವಿ ಕಾಲರ್ ವೇಗವಾಗಿ ನಡೆಯಲು ಪ್ರಾರಂಭಿಸಿದ. ಪ್ರೇತವೂ ಆತನನ್ನು ಹಿಂಬಾಲಿಸಿ ಬಂತು. ಆತ ವೇಗವಾಗಿ ನಡೆದರೆ ಪ್ರೇತವೂ ವೇಗದಿಂದ ಹಿಂಬಾಲಿಸುತ್ತಿತ್ತು. ನಿಧಾನಿಸಿ ನಡೆದರೆ ಪ್ರೇತದ ನಡಿಗೆಯೂ ನಿಧಾನವಾಗುತ್ತಿತ್ತು.

ಈ ನಡುವೆ ಹೆವಿ ಕಾಲರ್‌ನ ಯೋಧರ ತಂಡ ತಮ್ಮ ನಾಯಕನ ಆಗಮನಕ್ಕಾಗಿ ಮೊದಲೇ ನಿಗದಿತ ಸ್ಥಳದಲ್ಲಿ ಕಾಯುತ್ತಿತ್ತು. ಸಮೀಪ ಅವರಿಗೆ ಕಾಣುವಂತೆ ಒಂದು ಕೊಳ್ಳವಿತ್ತು. ಹೆವಿ ಕಾಲರ್ ಅದನ್ನು ದಾಟಿಯೇ ಬರಬೇಕಿತ್ತು. ಕೊಳ್ಳದ ಕೊನೆಯ ತನಕವೂ ಹೆಣ್ಣು ಪ್ರೇತ ಆತನನ್ನು ಹಿಂಬಾಲಿಸಿ ಕೊನೆಗೆ ಮಾಯವಾಯಿತು. ಹೆವಿ ಕಾಲರ್ ಒಬ್ಬ ಮಹಿಳೆಯಂತೆ ಕಾಣುವ ವ್ಯಕ್ತಿಯೊಂದಿಗೆ ಬರುತ್ತಿದ್ದುದನ್ನು ದೂರದಿಂದ ನೋಡಿದ ಒಬ್ಬ ಯೋಧ ಗುಂಪಿನ ಇತರರನ್ನು ಕರೆದು "ಇಲ್ಲಿ ನೋಡಿ, ನಮ್ಮ ಮುಖ್ಯಸ್ಥ ತನ್ನೊಂದಿಗೆ ಒಬ್ಬ ಮಹಿಳೆಯನ್ನು ಕರೆದುಕೊಂಡು ಬರುತ್ತಿದ್ದಾನೆ" ಎಂದ.

ಯೋಧರು ಜಯಕಾರ ಹಾಕುತ್ತ ಮುಖ್ಯಸ್ಥನನ್ನು ಸ್ವಾಗತಿಸಿ ಅವನ ಜೊತೆ ತಮ್ಮ ಶಿಬಿರಕ್ಕೆ ಹೋದರು. "ಮುಖ್ಯಸ್ಥರೇ, ನಿಮ್ಮ ಜೊತೆಗಿದ್ದ ಮಹಿಳೆ ಎಲ್ಲಿಗೆ ಹೋದಳು?" ಎಲ್ಲರೂ ಒಕ್ಕೊರಲಿನಿಂದ ಕೇಳಿದರು. ನಾಯಕ ಅವರನ್ನು ನೋಡಿ ಹುಬ್ಬೇರಿಸಿ "ನಾನು ಯಾವ ಹೆಂಗಸನ್ನೂ ಕರೆತಂದಿಲ್ಲವಲ್ಲ. ನೀವೇನು ಕೇಳುತ್ತಿರುವಿರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ" ಎಂದ.

ಮುಖ್ಯಸ್ಥನ ಮಾತನ್ನು ನಂಬದೆ ಪುನಃ-ಪುನಃ ಅದನ್ನೇ ಕೇಳುತ್ತ "ನೀವು ಅವಳನ್ನು ಎಲ್ಲಿ ಸೆರೆ ಹಿಡಿದಿರಿ, ಯಾವ ಬುಡಕಟ್ಟಿನವಳು?" ಎಂದು ಹಲವಾರು ಪ್ರಶ್ನೆ ಕೇಳಿದರೂ ಹೆವಿ ಕಾಲರ್ "ನೀವೆಲ್ಲ ಹುಚ್ಚರು. ನಾನು ಯಾವ ಹೆಣ್ಣನ್ನೂ ಸೆರೆ ಹಿಡಿದಿಲ್ಲ." "ಯಾಕೆ, ನೀವು ಕೊಳ್ಳದಲ್ಲಿ ಇಳಿದು ಬರುತ್ತಿರುವಾಗ ನಿಮ್ಮ ಜೊತೆಗಿದ್ದ ಮಹಿಳೆಯನ್ನು ಕಣ್ಣಾರೆ ಕಂಡಿದ್ದೇವೆ. ನೀವು ನಿರಾಕರಿಸಿದರೆ ನಾವು ನಂಬುವುದಿಲ್ಲ".

ಯೋಧನಿಗೆ ಮಹಿಳೆಯಂತೆ ಕಂಡದ್ದು ತನ್ನನ್ನು ಹಿಂಬಾಲಿಸುತ್ತಿದ್ದ ಪ್ರೇತವೇ ಎಂದು ಈಗ ಹೆವಿ ಕಾಲರ್‌ಗೆ ಅರಿವಾಯಿತು. ಹಿಂದಿನ ರಾತ್ರಿ ನಡೆದ ಘಟನೆಯನ್ನು ಗುಂಪಿಗೆ ವಿಸ್ತಾರವಾಗಿ ಹೇಳಿದ. ಕೆಲವರು ಕೊಳ್ಳಕ್ಕೆ ಓಡಿ ಹೋಗಿ ಮಹಿಳೆಗಾಗಿ ಹುಡುಕಾಡಿದರು. ಅಲ್ಲಿ ಹೆವಿ ಕಾಲರ್‌ನ ಬೂಟುಗಳ ಗುರುತುಗಳ ಹೊರತಾಗಿ ಬೇರಾವ ವ್ಯಕ್ತಿಯ ಹೆಜ್ಜೆಯ ಗುರುತುಗಳೂ ಕಾಣಲಿಲ್ಲ. ಪುಣ್ಯಕ್ಕೆ ಆ ರಾತ್ರಿ ಪ್ರೇತದ ಸುಳಿವಿರಲಿಲ್ಲ. ಮರುದಿನ ಬೆಳಿಗ್ಗೆ ಅವರು ತಮ್ಮ ಬ್ಲ್ಯಾಕ್ ಫೂಟ್ ಬಣದ ಕ್ಯಾಂಪ್ ಇರುವ ಸ್ಥಳಕ್ಕೆ ಹಿಂದಿರುಗಲು ಹೊರಟರು. ಅವರು ಕ್ಯಾಂಪ್ ತಲುಪುವ ಮೊದಲೇ ಕತ್ತಲು ಆವರಿಸಿತ್ತು. ಬಣದ ಸ್ನೇಹಿತರು ಮತ್ತು ಬಂಧುಗಳು ಯೋಧರನ್ನು ಮುಖ್ಯಸ್ಥನೊಂದಿಗೆ ವಿಶೇಷ ಭೋಜನಕ್ಕಾಗಿ ಆಹ್ವಾನಿಸಿದರು.

ಊಟದ ನಂತರ ಹೆವಿ ಕಾಲರ್ ತನ್ನ ಟೀಪಿಯ ಮುಂದೆ ಸ್ವಲ್ಪ ಹೊತ್ತು ಕುಳಿತು ಶಾಂತ ಬೆಳದಿಂಗಳ ರಾತ್ರಿಯನ್ನು ಆನಂದಿಸುತ್ತಿದ್ದ. ಇದ್ದಕ್ಕಿದ್ದಂತೆ ಎದುರಿಗಿದ್ದ ಗಿಡಗಳ ಮಧ್ಯದಿಂದ ಏನೋ ಸಪ್ಪಳ ಕೇಳಿಬಂತು. ನೋಡಿದರೆ ಅದೊಂದು ಕರಡಿ. ಕಾಡಿನಿಂದ ಓಡಿಬಂದ ಕರಡಿ ಎಂದುಕೊಂಡ. ಅದನ್ನು ಹೆದರಿಸಲೆಂದು ಹತ್ತಿರದಲ್ಲಿದ್ದ ಮೂಳೆಯ ತುಂಡನ್ನು ಕರಡಿಯ ಮೇಲೆ ಎಸೆದ.

"ಸರಿ, ಸರಿ, ಹೆವಿ ಕಾಲರ್" ಎಂದಿತು ಕರಡಿ. "ನೀನು ನನ್ನನ್ನು ಒಂದು ಸಲ ಗುಂಡಿನಿಂದ ಕೊಲ್ಲಲೆತ್ನಿಸಿದೆ, ಈಗ ನನ್ನ ಮೇಲೆ ಕಲ್ಲೆಸೆಯುತ್ತಿರುವೆ. ನಾನು ಆಗಲೇ ಹೇಳಿದ್ದೇನೆ. ನೀನು ಜಗತ್ತಿನ ಯಾವ ಮೂಲೆಯಲ್ಲಿಯೂ ನನ್ನ ತಪ್ಪಿಸಿ ಅಡಗಿಕೊಳ್ಳಲು ಸಾಧ್ಯವಿಲ್ಲ. ನೀನು ಎಲ್ಲಿದ್ದರೂ ಅಲ್ಲಿಗೆ ನಿನ್ನನ್ನು ಹುಡುಕಿಕೊಂಡು ಬರುವೆ."

ಕರಡಿ ಮಾತನಾಡುವುದನ್ನು ಕೇಳಿ, ಹೆವಿಕಾಲರ್ ತನ್ನನ್ನು ಹಿಂಬಾಲಿಸಿ ಬಂದ ಪ್ರೇತವೇ ಈಗ ಕರಡಿಯ ಆಕಾರ ತಾಳಿ ಬಂದಿದೆ ಎಂದು ಹೆದರಿ ತನ್ನ ಟೀಪಿಯತ್ತ ಓಡಿದ. "ಓಡಿರಿ, ಎಲ್ಲರೂ ಓಡಿರಿ! ಕರಡಿ ರೂಪದ ಪ್ರೇತವೊಂದು ನಮ್ಮ ಮೇಲೆ ದಾಳಿಯಿಟ್ಟಿದೆ!"

ಕ್ಯಾಂಪಿನಲ್ಲಿದ್ದ ಎಲ್ಲರೂ ಹೆವಿ ಕಾಲರ್‌ನ ಟೀಪಿಯ ಕಡೆಗೆ ಓಡಿದರು, ಕೆಲವೇ ನಿಮಿಷಗಳಲ್ಲಿ ಅದು ಜನರಿಂದ ಕಿಕ್ಕಿರಿದು ತುಂಬಿಹೋಯಿತು. ಟೀಪಿಯಲ್ಲಿ ಉರಿಯುತ್ತಿರುವ ಬೆಂಕಿಯಿಂದ ಹೊಗೆ ಬಾಗಿಲಿನ ರಂಧ್ರದ ಮೂಲಕ ಮೇಲೆ ಹೊರಗೆ ಹೋಗುತ್ತಿತ್ತು. ಪಶ್ಚಿಮದಿಂದ ಬೀಸುವ ಗಾಳಿ ಟೀಪಿಯನ್ನು ಅಲುಗಾಡಿಸುತ್ತಿತ್ತು. ಪುರುಷರು, ಮಹಿಳೆಯರು, ಮಕ್ಕಳು ಎಲ್ಲರೂ ಪ್ರೇತಕ್ಕೆ ಹೆದರಿ ಒಬ್ಬರಿಗೊಬ್ಬರು ತಬ್ಬಿ ಉಸಿರು ಹಿಡಿದು ಕುಳಿತಿದ್ದರು.

ಹೊರಗಡೆಯಿಂದ ಪ್ರೇತ ಟೀಪಿಯ ಕಡೆಗೇ ಬರುತ್ತಿರುವ ಹೆಜ್ಜೆಯ ಸದ್ದು ಕೇಳುತ್ತಿತ್ತು. "ನೀವೆಲ್ಲ ನಾಯಿಗಿಂತ ಹೀನರು" ಎಂದು ಪ್ರೇತ ಕೂಗಿಕೊಂಡಿತು. "ನಾನು ಎಲ್ಲರನ್ನೂ ಕೊಲ್ಲುತ್ತೇನೆ. ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ." ಹೆಜ್ಜೆಯ ಸದ್ದು ಹತ್ತಿರ-ಹತ್ತಿರವಾಗುತ್ತ ಮುಚ್ಚಿದ್ದ ಟೀಪಿಯ ಬಾಗಿಲಿನಿಂದಲೇ ಬಂದಿತು. "ನಿಮ್ಮನ್ನೆಲ್ಲ ಹೊಗೆಯಿಂದ ಉಸಿರುಗಟ್ಟಿಸಿ ಸಾಯಿಸುತ್ತೇನೆ" ಎಂದು ಟೀಪಿಯ ಕಂಬಗಳನ್ನು ತಿರುಗಿಸಿತು. ಇದರಿಂದಾಗಿ ಟೀಪಿಯ ಬಾಗಿಲು ತಿರುಗಿ ಪಶ್ಚಿಮದಿಂದ ಬರುತ್ತಿದ್ದ ಹೊರಗಿನ ಗಾಳಿ ಹೊಗೆ ರಂಧ್ರದಿಂದ ಸರಾಗವಾಗಿ ಒಳಗಡೆಯೇ ಬೀಸಹತ್ತಿತು. ಟೀಪಿ ಹೊಗೆಯಿಂದ ತುಂಬುತ್ತಿದ್ದಂತೆ ಕರಡಿ ಹೆಚ್ಚು-ಹೆಚ್ಚು ಬೆದರಿಕೆ ಹಾಕುತ್ತಲೇ ಇತ್ತು. ಹೊಗೆ ಕಡಿಮೆಯಾಗುವಂತೆ ಟೀಪಿಯ ಪಕ್ಕಗಳನ್ನು ಸರಿಮಾಡಲು ಒಬ್ಬನನ್ನು ಮೇಲೆ ಎತ್ತಿದರು. ದಪ್ಪ ಹೊಗೆಯಿಂದಾಗಿ ಎತ್ತಿದ ಮನುಷ್ಯ ಅದನ್ನು ಸರಿಸಲಾಗಲಿಲ್ಲ. ತನ್ಮಧ್ಯೆ ಕರಡಿ ಟೀಪಿಯನ್ನು ಬಲವಾಗಿ ಒದೆಯಿತು. ಹೀಗಾಗಿ ಎತ್ತಿದ್ದ ಮನುಷ್ಯ ಕೆಳಗೆ ಬಿದ್ದುಬಿಟ್ಟ. "ನಮ್ಮಿಂದ ಏನು ಮಾಡಲೂ ಸಾಧ್ಯವಿಲ್ಲ. ಆ ಪ್ರೇತ ನಮ್ಮೆಲ್ಲರನ್ನೂ ಇಂದು ರಾತ್ರಿ ಸಾಯಿಸಲು ನಿರ್ಧರಿಸಿದೆ" ಎಂದ ಹೆವಿ ಕಾಲರ್. ದಟ್ಟ ಹೊಗೆಯ ಮಧ್ಯೆ ಒಬ್ಬರಿಂದೊಬ್ಬರ ಮುಖ ಕಾಣದಾಯಿತು.

"ಈ ಪ್ರೇತದ ಮೇಲೆ ಜಯ ಸಾಧಿಸಬಲ್ಲ ಶಕ್ತಿವಂತರು ಇಲ್ಲಿ ಯಾರೂ ಇಲ್ಲವೇ?" ಹೆವಿ ಕಾಲರ್ ಜೋರಾಗಿ ಕೇಳಿದ. "ನಾನು ಈ ಬಣದ ಅತ್ಯಂತ ಹಿರಿಯಳು. ನಾನು ಪ್ರಯತ್ನಿಸುತ್ತೇನೆ" ಎಂದು ಆತನ ತಾಯಿ ಹೇಳಿ ತನ್ನ ಔಷಧಿ ಪೆಟ್ಟಿಗೆ ತೆರೆದು ಮುಖಕ್ಕೆ ಬಣ್ಣ ಬರೆದುಕೊಂಡಳು. ನಂತರ ತನ್ನ ಗಂಡನ ಪೈಪ್ ಗೆ ಬೆಂಕಿ ಹಚ್ಚಿ, ಪ್ರವೇಶ ದ್ವಾರದ ಸಂದಿಯಲ್ಲಿ ಪೈಪಿನ ತುದಿಯನ್ನು ಹೊರಕ್ಕೆ ತಳ್ಳಿದಳು. "ಓ, ಪ್ರೇತವೇ, ಕೇಳು, ನಿನಗೆ ಒಂದೇ ಮಾತಿನಲ್ಲಿ ಹೇಳುತ್ತೇನೆ. ಈ ಪೈಪನ್ನು ಸೇದಿ ಹೊರಟುಹೋಗು."

"ಇಲ್ಲ, ಇಲ್ಲ, ಇಲ್ಲ" ಎಂದು ಪ್ರೇತ ನುಡಿಯಿತು. "ನೀವು ನಾಯಿಗಳು. ನಾನು ನಿಮ್ಮ ಮಾತನ್ನು ಕೇಳುವುದಿಲ್ಲ. ನಿಮ್ಮ ಪ್ರತಿಯೊಬ್ಬ ವ್ಯಕ್ತಿಯೂ ಸಾಯಲೇಬೇಕು."

"ನಮ್ಮ ಮೇಲೆ ಕನಿಕರ ತೋರಿ ಈ ಪೈಪನ್ನು ಸೇದಿಕೊಂಡು ಶಾಂತಿಯಿಂದ ಹೊರಟುಹೋಗು." ಮುದುಕಿ ಮತ್ತೆ ಮತ್ತೆ ಹೇಳಿದಳು.

ಆಗ ಪ್ರೇತ "ನಾನು ಟೀಪಿಯ ಹೊರಗೆ ಇರುವಾಗ ಒಳಗಿನಿಂದ ಹಿಡಿದ ಪೈಪ್ ಸೇದುವದು ಹೇಗೆ ಸಾಧ್ಯ? ನನ್ನ ಬಳಿ ಹಕ್ಕಿಯಂತೆ ಉದ್ದನೆಯ ಕೊಕ್ಕು ಇಲ್ಲ. ಪೈಪ್ ತೆಗೆದುಕೊಂಡು ಹೊರಗೆ ಬಾ." ಮುದುಕಿ ಟೀಪಿಯ ಪ್ರವೇಶ ದ್ವಾರದಿಂದ ಹೊರಬಂದು ತನ್ನ ನಡುಗುತ್ತಿರುವ ಕೈಯಿಂದ ಆ ಪೈಪನ್ನು ಪ್ರೇತದ ಧ್ವನಿ ಬರುತ್ತಿದ್ದ ಕಡೆಗೆ ಚಾಚಿದಳು.

"ಪೈಪನ್ನು ಇನ್ನೂ ಹತ್ತಿರ ತೆಗೆದುಕೊಂಡು ಬಾ" ಪ್ರೇತ ಆಜ್ಞೆ ಮಾಡಿತು. "ನಾನು ಅದನ್ನು ಸೇದಬೇಕೆಂದರೆ ನೀನು ಅದನ್ನು ಇನ್ನಷ್ಟು ನನ್ನ ಹತ್ತಿರಕ್ಕೆ ತರಬೇಕು."

ಮುದುಕಿ ಪ್ರೇತದ ಹತ್ತಿರವೇ ಹೋದಳು, "ಇಲ್ಲ, ನಾನು ಆ ರೀತಿಯ ಪೈಪನ್ನು ಸೇದುವುದಿಲ್ಲ" ಎಂದು ಕೋಪದಿಂದ ಘರ್ಜಿಸಿ ಮುದುಕಿಯನ್ನು ಪ್ರಬಲ ಶಕ್ತಿಯಿಂದ ತನ್ನೆಡೆ ಎಳೆದುಕೊಳ್ಳುತ್ತ ಹಿಂದೆ-ಹಿಂದೆ ಹೋಗಹತ್ತಿತು. ಮುದುಕಿ ಭಯದಿಂದ

ಕೂಗಿಕೊಂಡಳು: "ಓ ನನ್ನ ಮಕ್ಕಳೇ, ಪ್ರೇತ ನನ್ನನ್ನು ಎಳೆದೊಯ್ಯುತ್ತಿದೆ!, ಬೇಗ ಬನ್ನಿ." ಹೆವಿ ಕಾಲರ್ ಅವಳ ಸಹಾಯಕ್ಕೆ ಧಾವಿಸುತ್ತಿದ್ದಂತೆಯೇ, "ನನ್ನ ತಾಯಿಯನ್ನು ಪ್ರೇತದಿಂದ ಪಾರು ಮಾಡಲು ಸಹಾಯ ಮಾಡಿ" ಎಂದು ಇತರರನ್ನು ಕೂಗಿ ಕರೆದ. ಅವನು ತನ್ನ ತಾಯಿಯ ಸೊಂಟ ಹಿಡಿದು ಹಿಂದಕ್ಕೆ ಎಳೆಯಹತ್ತಿದ. ಉಳಿದವರು ಸಾಲಾಗಿ ಒಬ್ಬರ ಸೊಂಟವನ್ನೊಬ್ಬರು ಹಿಡಿದುಕೊಂಡು ಒಟ್ಟಾಗಿ ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ಎಳೆದರು. ಎಷ್ಟೇ ಶಕ್ತಿ ಹಾಕಿ ಎಳೆದರೂ ಪ್ರೇತ ಜಗ್ಗಲಿಲ್ಲ. ಹೆಚ್ಚು ಹೆಚ್ಚು ತನ್ನ ಹತ್ತಿರ ಸೆಳೆದುಕೊಳ್ಳುತ್ತಲೇ ಇತ್ತು. ಇದ್ದಕ್ಕಿದ್ದಂತೆ ಆ ಮುದುಕಿಯ ಕೈಯಲ್ಲಿದ್ದ ಪೈಪ್ ಜಾರಿ ಕೆಳಗೆ ಬಿದ್ದು ಒಡೆದುಹೋಯಿತು. ಅದೇ ಕ್ಷಣದಲ್ಲಿ ಪ್ರೇತ ಮತ್ತು ಒಡೆದ ಪೈಪಿನ ತುಣುಕುಗಳೆಲ್ಲ ಒಮ್ಮಿಂದೊಮ್ಮೆ ಮಾಯವಾಗಿಬಿಟ್ಟವು.

ಭೂತಗ್ರಾಮದಲ್ಲಿ ಜೀವಂತ ಮನುಷ್ಯ

ಇದು ಅಮೇರಿಕೆಯ ವಾಯವ್ಯ ಕರಾವಳಿಯಲ್ಲಿ ವಾಸಿಸುವ ಚಿನೂಕ್ ಬಣದ ದಂತಕಥೆ. ಇದರಲ್ಲಿ ಬ್ಲ್ಯೂಜೇ ಎಂಬ ಯುವಕ ತನ್ನ ಅಕ್ಕನನ್ನು ಹುಡುಕಿಕೊಂಡು ಜೀವಂತವಾಗಿ ಪ್ರೇತಗಳ ಗ್ರಾಮಕ್ಕೆ ಹೋಗುತ್ತಾನೆ. ಆತನಿಗೆ ಅಲ್ಲಿ ಏನಾಗುತ್ತದೆ? ಓದಿ ನೋಡಿ.

ಒಂದು ದಿನ ಬ್ಲ್ಯೂಜೇ ಹೊರಗಡೆ ಹೋಗಿ ಬರುವಷ್ಟರಲ್ಲಿ ಅವನ ಪ್ರೀತಿಯ ಅಕ್ಕ ಐಯೋ ಕಾಣೆಯಾಗಿದ್ದಳು. ಕೆಲ ಸಮಯ ಕಾದರೂ ಆಕೆಯ ಪತ್ತೆಯಿಲ್ಲ. ಮನೆಯಲ್ಲಿ ಆಭರಣದ ಹಲ್ಲುಗಳನ್ನು ಯಾರೋ ಇಟ್ಟು ಹೋಗಿದ್ದರು. ಅವುಗಳನ್ನು ನೋಡಿದ ಬಣದ ಹಿರಿಯರು "ಈ ಹಲ್ಲುಗಳು ಭೂತಗಳ ಆಭರಣ. ನಿನ್ನ ಅಕ್ಕನನ್ನು ಭೂತವೊಂದು ತನ್ನ ಗ್ರಾಮಕ್ಕೆ ಎತ್ತಿಕೊಂಡು ಹೋದಂತೆ ಕಾಣುತ್ತದೆ" ಎಂದರು. ಅಕ್ಕ ತಿರುಗಿ ಬರಬಹುದೆಂದು ಬ್ಲ್ಯೂಜೇ ಬಹಳ ದಿನಗಳವರೆಗೆ ಕಾದ. ಕಾಯುತ್ತ ಒಂದು ವರ್ಷವೇ ಉರುಳಿತು. ಇನ್ನು ಹೆಚ್ಚು ದಿನ ಕಾಯದಾದ. ಬ್ಲ್ಯೂಜೇ ತುಂಟ ಯುವಕ, ಸಾಹಸಿ. ಏನನ್ನೂ ಜಯಿಸಬಲ್ಲೆ ಎಂಬ ಹುಂಬ ಧೈರ್ಯ ಬೇರೆ. ಭೂತಗ್ರಾಮ ಎಲ್ಲಿದೆ, ಅಲ್ಲಿಗೆ ಹೋಗುವುದು ಹೇಗೆ ಎಂಬ ಸುಳಿವು ಇಲ್ಲದಿದ್ದರೂ ತಾನು ಅಲ್ಲಿಗೆ ಹೋಗಿ ಅಕ್ಕನನ್ನು ತಿರುಗಿ ಕರೆತರಬೇಕೆಂದು ನಿಶ್ಚಯಿಸಿದ.

ಭೂತಗಳ ಗ್ರಾಮ ಎಲ್ಲಿದೆ ಎಂದು ಊರ ಹಿರಿಯರನ್ನೆಲ್ಲ ಕೇಳಿದ. ಯಾರಿಗೂ ಗೊತ್ತಿರಲಿಲ್ಲ. ಸುತ್ತಲಿನ ಮರಗಳನ್ನು ಕೇಳಿದ. ಪಕ್ಷಿಗಳನ್ನು ಕೇಳಿದ. ಯಾವುದೂ ಮಾತನಾಡಲಿಲ್ಲ. ಕೊನೆಗೆ ಬೇಸರವಾಗಿ ಒಂದು ಹಳೆಯ ದೊಡ್ಡ ಕಲ್ಲುಬಂಡೆಯ ಮೇಲೆ ಕುಳಿತು ಚಿಂತಿಸಹತ್ತಿದ. "ಯಾಕೆ ಚಿಂತಿಸುವೆ? ನಾನು ಸಹಾಯ ಮಾಡುತ್ತೇನೆ" ಎಂದು ಯಾರೋ ಹೇಳಿದಂತಾಯಿತು. ಯಾರೂ ಹತ್ತಿರ ಕಾಣಲಿಲ್ಲ. ಪುನಃ ಅದೇ ಧ್ವನಿ ಬಂತು. ನೋಡಿದರೆ ಅವನು ಕುಳಿತ ಕಲ್ಲಿನ ಬಂಡೆಯೇ ಮಾತನಾಡುತ್ತಿತ್ತು. "ನೀನು ಯಾರು? ಭೂತಗಳ ವಾಸ್ತವ್ಯ ನಿನಗೆ ಹೇಗೆ ಗೊತ್ತು" ಎಂದು ಕೇಳಿದ. "ನನಗೆ ಗೊತ್ತು. ಮೂರು

ತಲೆಮಾರುಗಳಿಂದ ನಾನು ಹಲವು ಮರ ಸೀಳುವವರಿಗೆ ಮರ ಸೀಳುವ ಆಯುಧವಾಗಿದ್ದೆ. ಹಲವು ಭೂತಗಳು ಹೋಗುವುದನ್ನು ನೋಡಿದ್ದೇನೆ. ಭೂತಗಳ ಗ್ರಾಮಕ್ಕೆ ನಿನ್ನನ್ನು ನಾನು ಕರೆದೊಯ್ಯುತ್ತೇನೆ, ಅದರೆ ಪುಕ್ಕಟೆ ಒಯ್ಯಲಾರೆ. ಪ್ರಯಾಣದ ಖರ್ಚು ಕೊಡಬೇಕು" ಎಂದಿತು ಆ ಬಂಡೆ. ಬ್ಲ್ಯೂಜೇ ಒಪ್ಪಿದ. ಮನೆಯಲ್ಲಿ ಭೂತ ಬಿಟ್ಟುಹೋಗಿದ್ದ ಹಲ್ಲುಗಳನ್ನು ಕೊಟ್ಟ. ಕಲ್ಲುಬಂಡೆ ತನ್ನ ಮೇಲೆ ಕುಳಿತುಕೋ ಎಂದಿತು. ಬ್ಲ್ಯೂಜೇಯನ್ನು ಎತ್ತಿಕೊಂಡು ಹಾರುತ್ತ ಹೋಗಿ ಒಂದು ಕಡೆ ಇಳಿಸಿ ಇದೇ ಭೂತಗಳ ಊರು ಎಂದು ಹೇಳಿ ಮಾಯವಾಯಿತು.

ಬ್ಲ್ಯೂಜೇಗೆ ಭೂತಗ್ರಾಮ ಹೇಗಿರಬಹುದು, ಜೀವಂತ ವ್ಯಕ್ತಿಗೆ ಹೇಗೆ ಕಾಣಿಸಬಹುದು ಎಂಬ ಕಲ್ಪನೆಯಿರಲಿಲ್ಲ. ಮನೆಗಳ ಎದುರು ನಡೆದುಕೊಂಡು ಹೊರಟ. ದೊಡ್ಡ ದೊಡ್ಡ ಹಾಳು ಬಿದ್ದ ಸಾಲುಮನೆಗಳು. ಮನೆಯೊಳಗೆ ಇಣುಕಿದಾಗ ಬರೇ ಮೂಳೆಗಳ ರಾಶಿ. ಹಲವು ಮನೆಗಳನ್ನು ದಾಟಿ ಕೊನೆಯ ಮನೆಗೆ ಬಂದಾಗ ಒಳಗೆ ಬೆಂಕಿಯ ಬೆಳಕಿತ್ತು. ಯಾರೋ ಇದ್ದಂತೆ ಕಾಣಿಸಿತು. ಒಳ ಹೊಕ್ಕ. ಅವನ ಅಕ್ಕ ಐಯೋ ಅಡಿಗೆ ಮಾಡುತ್ತಿದ್ದಳು. ಬ್ಲ್ಯೂಜೇಗೆ ಎಲ್ಲಿಲ್ಲದ ಸಂತೋಷವಾಯಿತು. ಐಯೋಗೂ ತಮ್ಮನನ್ನು ನೋಡಿ ಆಶ್ಚರ್ಯ. "ತಮ್ಮ, ಏನಾಯಿತು? ನೀನು ಹೇಗೆ ಸತ್ತೆ?" ಎಂದು ಕೇಳಿದಳು. "ನಾನು ಸತ್ತಿಲ್ಲ, ಜೀವಂತವಿದ್ದೇನೆ. ನಿನ್ನನ್ನು ತಿರುಗಿ ಕರೆದೊಯ್ಯಲು ಹುಡುಕಿಕೊಂಡು ಬಂದೆ. ಒಂದು ಪುಣ್ಯವಂತ ಹಳೆ ಕಲ್ಲುಬಂಡೆ ನನ್ನ ಮೊರೆ ಕೇಳಿ ನನ್ನನ್ನು ಎತ್ತಿಕೊಂಡು ಇಲ್ಲಿಗೆ ತಂದು ಬಿಟ್ಟಿತು. ಯಾಕೆ ಇಲ್ಲಿ ಯಾರೂ ಕಾಣುವುದಿಲ್ಲ? ಎಲ್ಲ ಮನೆಗಳೂ ಮೂಳೆಗಳಿಂದ ತುಂಬಿವೆಯಲ್ಲ?" ಎಂದು ಕೇಳಿದ. ಐಯೋ ಉತ್ತರಿಸಲಿಲ್ಲ. ಪಕ್ಕದಲ್ಲಿ ಬಿದ್ದಿದ್ದ ಅಸ್ಥಿಪಂಜರವನ್ನು ತೋರಿಸಿ "ಇದು ನಿನ್ನ ಭಾವ. ಈ ಊರಿನ ಮುಖ್ಯಸ್ಥ. ಒಂದು ರಾತ್ರಿ ನಮ್ಮೂರಿಗೆ ಬಂದು ನನ್ನನ್ನು ಜೀವಂತ ಎತ್ತಿಕೊಂಡು ಬಂದು ಮದುವೆಯಾದ" ಎಂದಳು. ಇದೇನು ಈ ಮೂಳೆಗಳ ಊರಿನಲ್ಲಿ ನನ್ನ ಅಕ್ಕ ಒಬ್ಬಳೇ ಹೇಗೆ ಇರುತ್ತಾಳೆ? "ಈ ಅಸ್ಥಿಪಂಜರವನ್ನು ತನ್ನ ಪತಿ ಎನ್ನುತ್ತಿದ್ದಾಳೆ. ತಿರುಗಿ ತಮ್ಮೂರಿಗೆ ಹೋಗೋಣ ಎಂದರೆ ಬರುವುದಿಲ್ಲ ಎಂದು ಯಾಕೆ ಹೇಳುತ್ತಾಳೆ?" ಎಂದು ಆಶ್ಚರ್ಯಪಟ್ಟ.

ಸ್ವಲ್ಪ ಹೊತ್ತಿನಲ್ಲಿ ಸೂರ್ಯ ಕಂತಿದ. ಕತ್ತಲೆಯಾದೊಡನೆಯೇ ಊರಿನ ಎಲ್ಲ ಮನೆಗಳಲ್ಲಿಯೂ ವಿವಿಧ ಚಟುವಟಿಕೆಗಳು ಪ್ರಾರಂಭವಾದವು. ಬ್ಲ್ಯೂಜೇ ಅಕ್ಕನನ್ನು "ಈ ಎಲ್ಲ ಜನಗಳು ಯಾರು? ಒಮ್ಮಿಂದೊಮ್ಮೆ ಎಲ್ಲಿಂದ ಬಂದರು?" ಎಂದು ಕೇಳಿದರೆ ಆಕೆ ನಗುತ್ತ, "ಇವರೆಲ್ಲ ಜೀವಂತ ಮನುಷ್ಯರೆಂದು ತಿಳಿದೆಯಾ? ಇವರೆಲ್ಲರೂ ಭೂತಗಳು" ಎಂದಳು. ಬ್ಲ್ಯೂಜೇ ಇನ್ನೊಬ್ಬರನ್ನು ಚುಡಾಯಿಸಿ, ಕಪಟದಿಂದ ಕಷ್ಟದಲ್ಲಿ ಸಿಕ್ಕಿಸಿ ತಾನು ಸಂತೋಷಪಡುವ ಸ್ವಭಾವದವ. ಭೂತಗಳು ಹೇಗೆ ಬದುಕುತ್ತವೆ ಎಂದು ನೋಡುವ ಕುತೂಹಲ ಉಂಟಾಯಿತು. ಅಕ್ಕ ತಿರುಗಿ ಬರಲು ಒಪ್ಪದಿದ್ದರೂ ತಾನು ಸ್ವಲ್ಪ ದಿನ ಅಲ್ಲಿಯೇ ಉಳಿಯಲು ನಿರ್ಧರಿಸಿದ.

"ತಮ್ಮ, ರಾತ್ರಿ ಇವರೆಲ್ಲ ಮೀನು ಹಿಡಿಯಲು ಹೋಗುತ್ತಿದ್ದಾರೆ. ನೀನೂ ಒಂದು

ಬಲೆ ಹಿಡಿದು ಹೋಗು. ಈ ಯುವಕ ನಿನ್ನ ಭಾವನ ಸಂಬಂಧಿಕ. ಅವನ ಜೊತೆ ಅವನ ದೋಣಿಯಲ್ಲಿ ಹೋಗು. ಅದರೆ ಎಚ್ಚರಿಕೆ, ಅವನ ಜೊತೆ ಮಾತನಾಡಬೇಡ" ಎಂದಳು. ಆ ಜನರೆಲ್ಲ ಯಾವಾಗಲೂ ಪಿಸುದನಿಯಲ್ಲಿ ಮಾತನಾಡುತ್ತಿದ್ದರು. ಬ್ಲ್ಯೂ ಜೇಗೆ ಏನೂ ಅರ್ಥವಾಗುತ್ತಿರಲಿಲ್ಲ. ಸ್ವಲ್ಪ ದೂರ ಹೋಗುತ್ತಲೇ ಅಲ್ಲಿ ಆಗಲೇ ಹಲವರು ನೆರೆದಿದ್ದನ್ನು ಕಂಡ. ಎಲ್ಲರೂ ಹಾಡುತ್ತ, ನಗುತ್ತ ಸಾಗುತ್ತಿದ್ದರು. ಬ್ಲ್ಯೂ ಜೇನೂ ಅವರೊಂದಿಗೆ ದೊಡ್ಡ ಧ್ವನಿಯಲ್ಲಿ ಜೊತೆಗೂಡಿಸಿದ. ತಕ್ಷಣ ಅವರ ಹಾಡು ನಿಂತುಹೋಯಿತು. ಜನರಾರೂ ಕಾಣದಾದರು. ಜೊತೆಯ ಹುಡುಗ ಇದ್ದ ಸ್ಥಳ ನೋಡಿದ. ಈಗ ಅಲ್ಲಿ ಬರೇ ಮೂಳೆಗಳಿದ್ದವು. ದೋಣಿ ಮಾತ್ರ ಮುಂದೆ ಹೋಗುತ್ತಲೇ ಇತ್ತು. ಬ್ಲ್ಯೂ ಜೇ ಸ್ವಲ್ಪ ಸಮಯ ಶಾಂತವಾಗಿದ್ದು ತಿರುಗಿ ನೋಡುತ್ತಾನೆ, ಹುಡುಗ ದೋಣಿಯ ತುದಿಯಲ್ಲಿ ಕುಳಿತೇ ಇದ್ದಾನೆ. ಬ್ಲ್ಯೂ ಜೇ ಪಿಸುದನಿಯಲ್ಲಿ "ನಿನ್ನ ಗಾಳ ಎಲ್ಲಿ?" ಎಂದು ಕೇಳಿದ. ಹುಡುಗ "ಸ್ವಲ್ಪ ಮುಂದೆ ಇದೆ" ಅಂದ. ಇನ್ನು ಕೆಲವು ನಿಮಿಷಗಳ ನಂತರ ದೊಡ್ಡ ದನಿಯಲ್ಲಿ "ಎಲ್ಲಿ ನಿನ್ನ ಗಾಳ?" ಎಂದು ಹುಡುಗನ ಕಡೆ ನೋಡಿದರೆ ಮತ್ತೆ ಅಲ್ಲಿ ಬರೇ ಮೂಳೆಗಳ ರಾಶಿ! ಬ್ಲ್ಯೂ ಜೇಯ ಕುಹಕ ಬುದ್ಧಿಗೆ ಇದೊಂದು ತಮಾಶೆಯ ಆಟದಂತೆ ಕಂಡಿತು.

ಸ್ವಲ್ಪ ದೂರ ಹೋದ ಮೇಲೆ ಮೀನು ಹಿಡಿಯಲು ಗಾಳ ಹಾಕಿದರು. ಬ್ಲ್ಯೂ ಜೇಯ ಬಲೆಯಲ್ಲಿ ಏನೋ ಸಿಕ್ಕಿದಂತಾಯಿತು. ಎತ್ತಿದರೆ ಸಿಕ್ಕಿದ್ದು ಎರಡು ಮರದ ಕೊಂಬೆಗಳು. ತಥ್ ಎಂದು ನೀರಿಗೆ ಎಸೆದ. ಮತ್ತೊಮ್ಮೆ ಬಲೆ ಎತ್ತಿದಾಗ ಸಿಕ್ಕಿದ್ದು ಬರೇ ಎಲೆಗಳು. ಮತ್ತೆ ನೀರಿಗೆ ಚೆಲ್ಲಿದ. ಚೆಲ್ಲುವಾಗ ಒಂದೆರಡು ಎಲೆಗಳು ದೋಣಿಯಲ್ಲಿ ಬಿದ್ದವು. ಹುಡುಗ ಅವನ್ನು ತೆಗೆದಿಟ್ಟುಕೊಂಡ. ಮನೆಗೆ ಬಂದಾಗ ಅಕ್ಕ, "ಎಲ್ಲಿ ನೀವು ಹಿಡಿದ ಮೀನುಗಳು?" ಎಂದು ಕೇಳಿದಳು. ಹುಡುಗ "ಹಿಡಿದದ್ದನ್ನೆಲ್ಲ ಬ್ಲ್ಯೂ ಜೇ ನೀರಿಗೆ ಎಸೆದ; ಇಲ್ಲದಿದ್ದರೆ ನಮ್ಮ ದೋಣಿ ತುಂಬ ಮೀನು ಇರುತ್ತಿತ್ತು" ಎಂದ. ಅದಕ್ಕೆ ಬ್ಲ್ಯೂ ಜೇ "ಬಲೆಯಲ್ಲಿ ಸಿಕ್ಕಿದ್ದು ಬರಿಯ ಮರದ ಕೊಂಬೆಗಳು, ಎಲೆಗಳು" ಎಂದ. ಅದಕ್ಕೆ ಅಕ್ಕ "ಹುಚ್ಚ, ನಿನ್ನ ಕಣ್ಣಿಗೆ ಹಾಗೆ ಕಂಡಿತು. ನಿಜವಾಗಿಯೂ ಅವು ದೊಡ್ಡ ಮತ್ತು ಸಣ್ಣ ಮೀನುಗಳು" ಎಂದಳು. ದೋಣಿಯಲ್ಲಿ ಹುಡುಕಲಾಗಿ ಒಂದೆರಡು ಚಿಕ್ಕ ಮೀನುಗಳು ಸಿಕ್ಕವು. ಅಂದು ಅದನ್ನೇ ಅಡಿಗೆ ಮಾಡಿ ತಿಂದರು.

ಮರುದಿನ ರಾತ್ರಿ ಬ್ಲ್ಯೂ ಜೇ ಮತ್ತು ಹುಡುಗ ಮತ್ತೆ ಮೀನು ಹಿಡಿಯಲು ಹೊರಟರು. ಬ್ಲ್ಯೂ ಜೇಗೆ ಮತ್ತೆ ಹುಡುಗನ ಜೊತೆ ಕೀಟಲೆ ಮಾಡುವ ಮನಸ್ಸಾಯಿತು. ದೊಡ್ಡ ಧ್ವನಿಯಲ್ಲಿ ಮಾತನಾಡುವುದು, ಹುಡುಗ ಮೂಳೆಯಾಗುವುದು, ಸ್ವಲ್ಪ ಸಮಯ ಶಾಂತವಾಗಿದ್ದರೆ ಮತ್ತೆ ಜೀವಂತನಾಗುವುದು. ಈ ಆಟ ನಡೆಯುತ್ತಲೇ ಇತ್ತು. ಈ ಸಲ ಅವನ ಬಲೆಯಲ್ಲಿ ಸಿಕ್ಕ ಮರದ ಕೊಂಬೆ ಮತ್ತು ಎಲೆಗಳನ್ನು ತಿರುಗಿ ನೀರಿಗೆ ಎಸೆಯಲಿಲ್ಲ. ಮನೆಗೆ ಬರುವ ಹೊತ್ತಿಗೆ ಅವನ ದೋಣಿಯ ತುಂಬ ಮೀನುಗಳಿದ್ದವು. ಅಂದು ರಾತ್ರಿ ಭರ್ಜರಿ ಮೀನಿನ ಭೋಜನವಾಯಿತು.

ಮಾರನೆಯ ಹಗಲು ಬ್ಲ್ಯೂ ಜೇ ಪಕ್ಕದ ಮನೆಯೊಂದಕ್ಕೆ ಹೋದ. ಎಂದಿನಂತೆ

ಮೂಳೆಗಳ ರಾಶಿ ಬಿದ್ದಿದ್ದವು. ಅವನ ಕುಚೇಷ್ಟೆಯ ಬುದ್ದಿ ಜಾಗೃತವಾಯಿತು. ತಮಾಶೆಗೆಂದು ಒಂದು ಮನೆಗೆ ಹೋಗಿ ಚಿಕ್ಕ ತಲೆಬುರುಡೆಯನ್ನು ದೊಡ್ಡ ಅಸ್ಥಿಪಂಜರಕ್ಕೆ ಜೋಡಿಸಿದ. ದೊಡ್ಡ ತಲೆಬುರುಡೆಯನ್ನು ತೆಗೆದುಕೊಂಡು ಆ ಮಗುವಿನ ಅಸ್ಥಿಪಂಜರದ ಮೇಲೆ ಇಟ್ಟ. ಅವನು ಹೀಗೆ ಎಲ್ಲ ಅಸ್ಥಿಪಂಜರಗಳನ್ನು ಬೆರಿಕೆ ಮಾಡಿ ಇಟ್ಟುಬಿಟ್ಟ. ಕತ್ತಲು ಆವರಿಸಿದಾಗ ಮಗು ನಿಂತುಕೊಳ್ಳಲು ಹೋಗಿ ತಲೆಭಾರದಿಂದ ಕುಸಿದು ಬಿತ್ತು. ವಯಸ್ಕ ಎದ್ದು ನಿಂತಾಗ ಅವನ ತಲೆ ತುಂಬಾ ಹಗುರವಾಗಿತ್ತು! ಮರುದಿನ ಬೆಳಿಗ್ಗೆ ಬ್ಲ್ಯೂ ಜೇ ತಲೆಗಳ ಬದಲು, ಅವರ ಕಾಲುಗಳನ್ನು ಅದಲು-ಬದಲು ಮಾಡಿದ. ಕೆಲವೊಮ್ಮೆ ಒಬ್ಬ ಪುರುಷನ ಕಾಲುಗಳನ್ನು ಮಹಿಳೆಯ ದೇಹಕ್ಕೆ ಮತ್ತು ಒಬ್ಬ ಮಹಿಳೆಯ ಕಾಲುಗಳನ್ನು ಪುರುಷನ ದೇಹಕ್ಕೆ ಜೋಡಿಸಿದ. ಈ ಚೇಷ್ಟೆಗಳನ್ನು ಜನ ಸಹಿಸದಾದರು. ಐಯೋಳ ಪತಿ ನಿನ್ನ ತಮ್ಮನನ್ನು ತಿರುಗಿ ಕಳಿಸು. ಇಲ್ಲಿ ಅವನ ಕಾಟ ತಡೆಯಲಾರೆವು ಎಂದ. ಐಯೋ ತಮ್ಮನಿಗೆ ಇಂತಹ ಹುಚ್ಚುತನ ಬಿಡು ಎಂದರೂ ಆತನ ಕುಹಕ ಬುದ್ಧಿ ಆತನನ್ನು ಶಾಂತವಾಗಿ ಕುಳಿತು ಭೂತಗ್ರಾಮದ ನಿಯಮಗಳನ್ನು ಪಾಲಿಸಲು ಒಪ್ಪಲಿಲ್ಲ. ಮರುದಿನ ಬೆಳಿಗ್ಗೆ ಅವನು ಬೇಗನೆ ಎಚ್ಚರಗೊಂಡು ಐಯೋ ತನ್ನ ತೋಳುಗಳಲ್ಲಿ ಅಸ್ಥಿಪಂಜರದ ರುಂಡವನ್ನು ಹಿಡಿದು ಮಲಗಿರುವುದನ್ನು ನೋಡಿದ. "ಐಯೋ, ನೀನು ಆ ತಲೆಬುರುಡೆಯನ್ನು ಏಕೆ ಹಿಡಿದುಕೊಂಡಿರುವೆ?" ಎಂದು ಕೇಳಿ ಅದನ್ನೆಳೆದು ಎಸೆದುಬಿಟ್ಟ. ಎಸೆದ ರುಂಡವನ್ನು ನೊಡಿ "ಅಯ್ಯೋ ಮೂರ್ಖ, ನಿನ್ನ ಭಾವನ ಕುತ್ತಿಗೆಯನ್ನು ಮುರಿದುಬಿಟ್ಟೆಯಲ್ಲ!" ಅಂದಳು. ಅಂದು ಕತ್ತಲೆಯಾದಾಗ, ಅವನ ಭಾವನ ಕತ್ತು ತುಂಬ ನೋಯುತ್ತಿತ್ತು. ಐಯೋ ಒಬ್ಬ ಮಾಂತ್ರಿಕ ವೈದ್ಯನನ್ನು ಕರೆಯಿಸಿ ಗುಣಪಡಿಸಲು ಕೇಳಿಕೊಂಡಳು. ಆತ ಏನನ್ನೋ ಪಠಿಸುತ್ತ ಕೆಲವು ವನಸ್ಪತಿ ರಸವನ್ನು ಲೇಪಿಸಲಾಗಿ ಭಾವನ ನೋವು ವಾಸಿಯಾಯಿತು.

ಐಯೋನ ಗಂಡನು ಬ್ಲ್ಯೂ ಜೇನ ಕೀಟಲೆ ತಡೆಯದಾದ. ಐಯೋ ತಮ್ಮನನ್ನು ತಿರುಗಿ ಕಳಿಸುವುದೇ ಲೇಸು ಎಂದುಕೊಂಡಳು. ತಮ್ಮನನ್ನು ಕರೆದು "ನೋಡು ನೀನೀಗ ತಿರುಗಿ ಹೋಗಲೇಬೇಕು. ನಾನು ಹೋಗುವ ದಾರಿ ಹೇಳುತ್ತೇನೆ. ಕಷ್ಟದ ದಾರಿ. ನಾಲ್ಕು ಉರಿಯುತ್ತಿರುವ ಹುಲ್ಲುಗಾವಲುಗಳನ್ನು ದಾಟಿ ಹೋಗಬೇಕು. ಇದೋ ನಿನಗೆ ಐದು ಬಕೆಟ್ ನೀರು ಕೊಡುತ್ತೇನೆ. ಎಚ್ಚರಿಕೆ! ನಾಲ್ಕನೆಯ ಹುಲ್ಲುಗಾವಲು ತಲುಪುವ ತನಕವೂ ಸಾಕಷ್ಟು ನೀರನ್ನು ಉಳಿಸಿಕೋ, ಬೇಕಾಗುತ್ತದೆ" ಎಂದಳು. ಬ್ಲ್ಯೂ ಜೇ ಹೊರಟ. ಮೊದಲ ಹುಲ್ಲುಗಾವಲು ಬಂತು. ಮೈಸುಡುವಷ್ಟು ಸೆಕೆ, ಕೆಂಪು ಹೂವುಗಳು ಅರಳುತ್ತಿದ್ದವು. ಸೆಕೆ ತಡೆಯಲಾರದೆ ಬ್ಲ್ಯೂ ಜೇ ಅರ್ಧ ಬಕೆಟ್ ನೀರನ್ನು ಮೈಮೇಲೆ ಸುರಿದುಕೊಳ್ಳುತ್ತ ಮುಂದೆ ಸಾಗಿದ. ಅಡವಿಯೊಂದನ್ನು ದಾಟಿ ಎರಡನೆಯ ಹುಲ್ಲುಗಾವಲಿಗೆ ಬಂದ. ಬೆಂಕಿ ಹತ್ತಿ ಉರಿಯುತ್ತಿತ್ತು. ಇದೇ ಹುಲ್ಲುಗಾವಲಿರಬೇಕು, ನನ್ನ ಅಕ್ಕ ಹೇಳಿದ್ದು ಎಂದು ಅರ್ಧ ಉಳಿದಿದ್ದ ಬಕೆಟ್ ನೀರು ಚೆಲ್ಲಿ ದಾರಿ ಮಾಡಿಕೊಂಡ. ಸಾಕಾಗಲಿಲ್ಲ. ಇನ್ನೊಂದು ಬಕೆಟ್ಟಿನ ನೀರನ್ನು ಚೆಲ್ಲುತ್ತ ಮುಂದೆ ಹೋದ. ಸ್ವಲ್ಪ ದೂರ ಹೋದ ಮೇಲೆ ಬೆಂಕಿಯಿರಲಿಲ್ಲ.

ಮತ್ತೊಂದು ಅಡವಿ ದಾಟಿ ಮೂರನೆಯ ಹುಲ್ಲುಗಾವಲಿಗೆ ಬಂದ. ಅರ್ಧ ಹುಲ್ಲುಗಾವಲು ಬೆಂಕಿ ಹತ್ತಿ ಉರಿಯುತ್ತಿತ್ತು. ಒಂದು ಬಕೆಟ್ ನೀರು ಮುಗಿದರೂ ಬೆಂಕಿಯನ್ನು ಪೂರ್ಣ ದಾಟಲಾಗಲಿಲ್ಲ. ಮತ್ತೊಂದು ಬಕೆಟ್ಟಿನಿಂದ ಅರ್ಧ ನೀರು ಸುರಿಯುತ್ತ ಮುಂದೆ ಸಾಗಿದ. ಹುಲ್ಲುಗಾವಲಿನ ಮುಂದಿನ ಅರ್ಧ ಭಾಗದಲ್ಲಿ ಬೆಂಕಿಯಿರಲಿಲ್ಲ. ಮತ್ತೊಂದು ಅಡವಿಯನ್ನು ದಾಟಿ ಕೊನೆಯದಾಗಿ ಅಕ್ಕ ಎಚ್ಚರಿಸಿದ ನಾಲ್ಕನೆಯ ಹುಲ್ಲುಗಾವಲಿಗೆ ಬಂದ. ಇಡೀ ಹುಲ್ಲುಗಾವಲು ಧಗ-ಧಗ ಹೊತ್ತಿ ಉರಿಯುತ್ತಿತ್ತು. ಈಗ ಅವನ ಹತ್ತಿರ ಉಳಿದದ್ದು ಒಂದೂವರೆ ಬಕೆಟ್ ನೀರು ಮಾತ್ರ. ನೀರು ಚೆಲ್ಲಿ ದಾರಿ ಮಾಡಿಕೊಳ್ಳುತ್ತ ಮುಂದೆ ಸಾಗಿದ. ಸ್ವಲ್ಪ ದೂರದಲ್ಲೇ ನೀರು ಖಾಲಿಯಾಯಿತು. ಇನ್ನೂ ಬಹಳ ಮುಂದೆ ಸಾಗಬೇಕಿತ್ತು. ತನ್ನ ತೊಗಲಿನ ಹೊದಿಕೆಯಿಂದ ಬೆಂಕಿಯನ್ನು ಬಡಿದು ಆರಿಸಲು ನೋಡಿದ. ಅದಕ್ಕೂ ಬೆಂಕಿ ಹೊತ್ತಿ ಸುಟ್ಟುಹೋಯಿತು. ನೋಡನೋಡುತ್ತಿದ್ದಂತೆ ಅವನ ತಲೆ ಮತ್ತು ಕೂದಲು ಬೆಂಕಿಗೆ ಆಹುತಿಯಾದವು. ಕೆಲವೇ ಹೊತ್ತಿನಲ್ಲಿ ಬ್ಲ್ಯೂ ಜೇ ಸಂಪೂರ್ಣ ಸುಟ್ಟುಹೋಗಿ ಅಲ್ಲಿಯೇ ಮರಣಹೊಂದಿದ.

ಎಷ್ಟೋ ಹೊತ್ತಿನ ಮೇಲೆ ಬ್ಲ್ಯೂ ಜೇಗೆ ಎಚ್ಚರವಾಗಿ ಅಕ್ಕನ ಮನೆಯ ಕಡೆ ಹಿಂತಿರುಗಿದ. ಅಕ್ಕನನ್ನು ಕರೆಯಲು ಪ್ರಯತ್ನಿಸಿದರೆ ಮೊದಲಿನಂತೆ ದೊಡ್ಡ ಸ್ವರ ಹೊರಡುತ್ತಿಲ್ಲ. "ಕೂ ಕೂ ಕೂ ಕೂ ಕೂ" ಎಂದು ಗೊಗ್ಗರು ದನಿಯಲ್ಲಿ ದೂರದಿಂದ ಕರೆಯುತ್ತಿದ್ದ ತಮ್ಮನ ಧ್ವನಿ ಕೇಳಿ ಐಯೋಗೆ ಅಳುವೇ ಬಂದುಬಿಟ್ಟಿತು. ಇದು ಭೂತದ ಕರೆ. "ಅಯ್ಯೋ ನನ್ನ ತಮ್ಮ ಸತ್ತುಹೋದನಲ್ಲ" ಎಂದು ಉದ್ಗಾರ ತೆಗೆದಳು. ಆತ ಇನ್ನೂ ನದಿಯ ಆಚೆ ದಡದಲ್ಲಿರುವುದನ್ನು ನೋಡಿ ಅವನನ್ನು ಕರೆತರಲು ದೋಣಿಯನ್ನು ನಡೆಸಿಕೊಂಡು ಹೋದಳು. ಬ್ಲ್ಯೂ ಜೇ ಅಕ್ಕನ ದೋಣಿ ನೋಡಿ "ನಿನ್ನ ದೋಣಿ ಎಷ್ಟು ಸುಂದರವಾಗಿದೆ! ಆ ದಿನ ನೋಡಿದಾಗ ತೂತು-ತೂತಾಗಿದ್ದು ಹಾವಸೆಯಿಂದ ತುಂಬಿತ್ತು. ಇದು ಹೇಗೆ ಹೀಗಾಯಿತು?" ಎಂದು ಕೇಳಿದ. ಅದಕ್ಕೆ ಆಕೆ "ನೀನೀಗ ಮರಣ ಹೊಂದಿ ಭೂತನಾಗಿರುವೆ. ಈಗ ನಿನಗೆ ಎಲ್ಲವೂ ಬೇರೆಯಾಗಿಯೇ ಕಾಣುತ್ತದೆ" ಎಂದಳು. ಬ್ಲ್ಯೂ ಜೇ ಅಕ್ಕನ ಮಾತನ್ನು ನಂಬಲಿಲ್ಲ. ಮನೆಗೆ ಬರುತ್ತಿದ್ದಂತೆ ಸುತ್ತಲಿನ ಎಲ್ಲ ಮನೆಗಳಲ್ಲಿಯೂ ಜನರನ್ನು ನೋಡಿದ. ಹಲವರು ಹಾಡುತ್ತಿದ್ದರು. ಕೆಲವರು ಬೀವರ್ ಪ್ರಾಣಿಯ ಹಲ್ಲುಗಳನ್ನು ಬಿಲ್ಲೆಯಾಗಿ ಉಪಯೋಗಿಸಿ ಪಗಡೆ ಆಟ ಆಡುತ್ತಿದ್ದರು. ಹೆಂಗಸರು ತಮ್ಮದೇ ಗುಂಪಿನಲ್ಲಿ ಬೇರೊಂದು ಆಟದಲ್ಲಿ ಮಗ್ನರಾಗಿದ್ದರು. ಕೆಲವರು ಮಂತ್ರವಾದಿಯ ಹಾಡುಗಳನ್ನು ಹಾಡುತ್ತ "ಕುಮ್, ಕುಮ್ ಕುಮ್" ಎಂದು ಕುಣಿಯುತ್ತಿದ್ದರು. ಬ್ಲ್ಯೂ ಜೇ ಅವರೊಡನೆ ಹಾಡಹತ್ತಿದರೆ ಅವನ ವಿಚಿತ್ರ ವರ್ತನೆಗೆ ಅವರೆಲ್ಲ ನಗ ಹತ್ತಿದರು. ಅಕ್ಕನ ಮನೆಗೆ ಬಂದಾಗ ಅವಳ ಗಂಡನನ್ನು ನೋಡಿದ. ಎಷ್ಟು ಸುಂದರವಾಗಿದ್ದಾನೆ ಎಂದುಕೊಂಡ. "ನೋಡು, ಈ ನಮ್ಮ ಸುಂದರವಾದ ದೋಣಿಗಳನ್ನು, ನೀನು ದೋಣಿಗಳೆಲ್ಲ ಹಾವಸೆಯಿಂದ ಆವರಿಸಿವೆ, ತೂತು ತೂತಾಗಿವೆ ಎಂದಿದ್ದೆ." ಬ್ಲ್ಯೂ ಜೇ ನೋಡಿದ. "ಹೌದು ಎಷ್ಟು ಸುಂದರ ದೋಣಿಗಳು" ಎಂದ. "ತಮ್ಮ ನೀನೀಗ ಇಲ್ಲಿರುವ ಎಲ್ಲರಂತೆ

ಒಬ್ಬ ಭೂತ, ನಿನಗೀಗ ಎಲ್ಲವೂ ಬೇರೆಯಾಗಿಯೇ ಕಾಣುತ್ತವೆ" ಎಂದಳು. ಆದರೂ ಆತ ಅಕ್ಕನನ್ನು ನಂಬಲಿಲ್ಲ. ಊರಿನ ಇಡೀ ದೃಶ್ಯವೇ ಬದಲಾದದ್ದನ್ನು ನೋಡಿ ಸ್ವಲ್ಪ ಆಶ್ಚರ್ಯವೇನೋ ಆಯಿತು. ಬ್ಲ್ಯೂಜೇ ಪಕ್ಕದ ಮನೆಗಳಿಗೆ ಹೋಗಿ ಗೊಗ್ಗರು ದನಿಯಲ್ಲಿ ಕೂಗಿ ಕರೆಯಲು ನೋಡಿದ. ಅವರೆಲ್ಲ ನಕ್ಕರು. ಐಯೋ ತಮ್ಮನನ್ನು ಹುಡುಕಿಕೊಂಡು ಬಂದಾಗ ಆತ ಒಬ್ಬ ಮಂತ್ರವಾದಿಯ ಪಕ್ಕದಲ್ಲಿ ನಿಂತಿದ್ದ. ತನಗೂ ಮಂತ್ರವಾದಿಯ ಶಕ್ತಿ ಬರುವಂತೆ ಮಾಡು ಎಂದು ಆತನನ್ನು ಕೇಳಿಕೊಂಡರೆ ಜನರೆಲ್ಲ ನಕ್ಕರು. ನಾಲ್ಕು ದಿನಗಳ ತನಕ ಅಲ್ಲಿಯೇ ಉಳಿದು ಪ್ರತಿ ದಿನ ಮಂತ್ರವಾದಿಯನ್ನು ತನಗೂ ಕಲಿಸು ಎಂದು ಗೋಗರೆದ. ಮಂತ್ರವಾದಿ ಜಾದುಗಾರಿಕೆ ಮಾಡುತ್ತಿದ್ದಾಗ ಅವನನ್ನು ಅನುಕರಿಸಲು ನೋಡಿದ. ಐದು ದಿನಗಳ ನಂತರ ಅಕ್ಕನ ಮನೆಗೆ ಮರಳಿ ಬಂದ. ತಲೆಯ ಮೇಲೆ ನಿಂತು ವಿಚಿತ್ರವಾಗಿ ಕುಣಿಯಲು ಪ್ರಾರಂಭಿಸಿದ. ಐಯೋ ನೋಡಿದಳು. "ನನ್ನ ತಮ್ಮ ಈ ಸಲ ಬಂದಾಗ ಸತ್ತು ಭೂತವಾಗಿ ಬಂದ. ಸತ್ತರೂ ತನ್ನ ಚೇಷ್ಟೆ ಬಿಡಲಿಲ್ಲ. ಮಂತ್ರವಾದಿ ಇವನಿಗೆ ಹುಚ್ಚು ಹಿಡಿಸಿ ಕಳಿಸಿದ್ದಾನೆ" ಎಂದುಕೊಂಡು ಬಿಕ್ಕಿ ಬಿಕ್ಕಿ ಅತ್ತಳು.

ತೂಗಾಡುತ್ತಿರುವ ತೊಟ್ಟಿಲು

ಇದು ಮನೆಹೊಕ್ಕ ಅದೃಶ್ಯ ಪ್ರೇತದ ಕಥೆ

ಅಳು, ಯಾವುದೋ ಚಿಕ್ಕ ಮಗು ಬಿಕ್ಕಿ-ಬಿಕ್ಕಿ ಜೋರಾಗಿ ಅಳುತ್ತಿರುವ ಧ್ವನಿ. ಸಮುದ್ರದ ಕಡೆಯಿಂದ ಅಲೆ-ಅಲೆಯಾಗಿ ತೇಲಿ ಬರುತ್ತಿದೆ. ದಡದಲ್ಲಿರುವ ತನ್ನ ಮನೆಯ ಮುಂಬಾಗಿಲಲ್ಲಿ ನಿಂತು ಲೂಯಿಸ್ ಆಲಿಸುತ್ತಿದ್ದಾಳೆ. ಸಂಜೆಯಿಂದ ಒಂದೇ ಸಮನೆ ಸುರಿಯುತ್ತಿರುವ ಈ ಬಿರುಗಾಳಿ ಮಳೆಯ ಮಧ್ಯವೂ ಸ್ಪಷ್ಟವಾಗಿ ಕೇಳಿಬರುತ್ತಿದೆ. ಊಂಹೂ, ಅಲ್ಲ ಇದು ಗಾಳಿಯ ಸಪ್ಪಳವಲ್ಲ. ಅಥವಾ ಸಮುದ್ರದಲ್ಲಿರುವ ಸೀಲ್‌ಗಳು ಮಾಡುವ ಶಬ್ದವೂ ಅಲ್ಲ. ಅವು ಹೇಗೆ ಕೇಳಿಸುತ್ತವೆಂದು ನಾನು ಸರಿಯಾಗಿ ಬಲ್ಲೆ. ಇದು ಮಗುವಿನ ಅಳು ಎಂಬುದು ಖಾತ್ರಿ. ತನ್ನ ಪತಿಯನ್ನು ಕೇಳಿದಳು. ಆತನೂ ಇದು ಮಗುವಿನ ಅಳುವೇ ಎಂದು ದೃಢಪಡಿಸಿದ.

ಮನಸ್ಸು ಹಿಂಡುತ್ತಿತ್ತು. ಆದರೆ ಈ ಕಗ್ಗತ್ತಲೆಯಲ್ಲಿ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಲ್ಲಿ ಹೊರಗೆ ಹೋಗುವಂತಿರಲಿಲ್ಲ. ಬೆಳಕು ಹರಿದಂತೆ ಮಳೆ ನಿಂತಿತು. ಇಬ್ಬರೂ ದಡಕ್ಕೆ ಹೋಗಿ ನೋಡಿದರು. ಈಗ ಅಲ್ಲಿ ಮಗುವಿನ ಅಳು ಕೇಳುತ್ತಿಲ್ಲ. ಸುತ್ತೆಲ್ಲ ಅಲೆದು ಹುಡುಕಿದರು. ಎಷ್ಟು ಹುಡುಕಿದರೂ ಯಾವ ಮಗುವೂ ಕಾಣಲಿಲ್ಲ. ದಡದ ಮೇಲೆ ನಡೆದಾಡುತ್ತಿದ್ದಂತೆ ಸಮುದ್ರದ ಅಲೆಗಳು ತಂದು ಹಾಕಿದ್ದ ತೊಟ್ಟಿಲೊಂದನ್ನು ಕಂಡರು. ಸುಸ್ಥಿತಿಯಲ್ಲಿದ್ದ ಸುಂದರವಾದ ತೊಟ್ಟಿಲು. ಬಿಟ್ಟು ಬರಲು ಮನಸ್ಸಾಗಲಿಲ್ಲ. ತನ್ನ ಮಗುವಿಗಾಗುತ್ತದೆ ಎಂದು ತಂದು ಮನೆಯಲ್ಲಿ ಹೊಂದಿಸಿ ಇಟ್ಟರು.

ಸ್ವಲ್ಪ ಸಮಯದಲ್ಲಿಯೇ ಅವರಿಗೆ ವಿಚಿತ್ರವೊಂದು ಕಾದಿತ್ತು. ಹೊರಗಡೆ ಜೋರಾಗಿ ಗಾಳಿ ಬೀಸಿದಾಗೆಲ್ಲ ಮನೆಯ ಒಳಗಿದ್ದ ತೊಟ್ಟಿಲು ತನ್ನಿಂದ ತಾನೆ ತೂಗಿಕೊಳ್ಳುತ್ತಿತ್ತು.

ಮಲಗಿದ ಮಗುವನ್ನು ನಿದ್ರಿಸಲು ಯಾರೋ ತೂಗುತ್ತಿರುವಂತೆ ಕಾಣುತ್ತಿತ್ತು. ಆದರೆ ಹತ್ತಿರ ಯಾವ ವ್ಯಕ್ತಿಯೂ ಇರಲಿಲ್ಲ. ಮನೆ ತುಂಬ ಹುಡುಕಿದರೂ ಯಾರೂ ಹೊರಗಿನವರು ಕಾಣುತ್ತಿರಲಿಲ್ಲ. ಹೀಗೆಯೇ ಹಲವು ದಿನಗಳು ಕಳೆದವು. ಮೊದಮೊದಲು ಆತಂಕದಿಂದ ಅದನ್ನು ಗಮನಿಸುತ್ತಿದ್ದರು. ಸ್ವಲ್ಪ ದಿನಗಳಲ್ಲಿ ಅದು ರೂಢಿಯಾಗಿಬಿಟ್ಟಿತು.

ಲೂಯಿಸ್‌ಗೆ ಎರಡನೆ ಮಗುವಾದಾಗ ಪರವೂರಿನಲ್ಲಿ ವಾಸಿಸುತ್ತಿದ್ದ ಲೂಯಿಸಳ ತಂಗಿ ಚೆರಂತಿ ಅಕ್ಕನ ಮನೆಗೆ ಭೆಟ್ಟಿ ಕೊಟ್ಟಳು. ಒಂದು ಮಧ್ಯಾಹ್ನ ಹೊರಗಡೆ ಜೋರಾಗಿ ಗಾಳಿ ಬೀಸಿದಾಗ ಎಂದಿನಂತೆ ತೊಟ್ಟಿಲು ತೂಗಿಕೊಳ್ಳಹತ್ತಿತು. ಚೆರಂತಿ ತೊಟ್ಟಿಲು ಇದ್ದ ರೂಮಿನಲ್ಲಿ ಇಣುಕಿ ನೋಡಿದಳು. ಅಕ್ಕನನ್ನು ಕೇಳಿದಳು: "ಲೂಯಿಸ್, ಅದಾರು ತೊಟ್ಟಿಲು ತೂಗುತ್ತಿರುವವಳು? ರೇಷ್ಮೆಯ ನಿಲುವಂಗಿ ಧರಿಸಿದ ಯುವತಿ. ಕಪ್ಪಾದ ನೀಳ ಕೂದಲು ಇಳಿಬಿಟ್ಟಿದೆ. ಆದರೆ ಮುಖದಲ್ಲಿ ನಿರ್ಜೀವ ಕಳೆ. ತನ್ನ ಅಳುವ ಕಣ್ಣುಗಳಿಂದ ನನ್ನನ್ನೇ ನೋಡುತ್ತಿದ್ದಾಳೆ." ಲೂಯಿಸ್ ಮೊದಲು "ಯಾರೂ ಇಲ್ಲವಲ್ಲ" ಎಂದಳು. ಕೆಲ ಕ್ಷಣಗಳಲ್ಲಿ ಆಕೆಗೆ ಹೊಳೆಯಿತು. "ನಮಗೆ ಕಾಣದ ವ್ಯಕ್ತಿ ಚೆರಂತಿಗೆ ಕಾಣುತ್ತದೆಂದರೆ ಅದು ಜೀವಂತ ಮಹಿಳೆಯಲ್ಲ. ಚೆರಂತಿ ಜನ್ಮದಿಂದಲೇ ವಿಶೇಷ ಶಕ್ತಿ ಪಡೆದು ಹುಟ್ಟಿದವಳು. ಇತರರಿಗೆ ಅದೃಶ್ಯ ರೂಪದಲ್ಲಿ ಅಡಗಿ ಕುಳಿತ ಭೂತ-ಪ್ರೇತಗಳು ಆಕೆಗೆ ತೋರಿಸಿಕೊಳ್ಳುತ್ತವೆ. ನಾನು ತಂದ ತೊಟ್ಟಿಲಲ್ಲಿ ಸತ್ತ ಮಗುವಿನ ಪ್ರೇತ ಅಡಗಿ ಕುಳಿತಿದ್ದಿರಬೇಕು. ಸತ್ತು ಪ್ರೇತವಾದ ಮಗುವಿನ ತಾಯಿ ತೊಟ್ಟಿಲನ್ನು ಹಿಂಬಾಲಿಸಿ ನನ್ನ ಮನೆ ಸೇರಿದ್ದಾಳೆ." ಇಷ್ಟು ದಿನ ಮನೆಯಲ್ಲಿ ಭೂತದೊಂದಿಗೆ ಜೀವಿಸುತ್ತಿದ್ದೆವಲ್ಲ ಎಂದು ಅಳುಕಾಯಿತು. "ನಮ್ಮ ಮನೆಯಲ್ಲಿ ಭೂತ-ಪ್ರೇತಗಳಿಗೆ ಇರಲು ಬಿಡಲಾರೆ" ಎಂದು ಲೂಯಿಸ್ ತೊಟ್ಟಿಲನ್ನು ಎರಡು ಸೀಳು ಮಾಡಿ ಬೆಂಕಿಗೆ ಹಾಕಿಬಿಟ್ಟಳು. ಅದು ಉರಿಯುತ್ತಿದ್ದಂತೆ ಬಿಕ್ಕಿ-ಬಿಕ್ಕಿ ಅಳುತ್ತಿದ್ದ ಮಗುವಿನ ಧ್ವನಿ ಕೇಳಹತ್ತಿತು. ತೊಟ್ಟಿಲು ಸಂಪೂರ್ಣ ಉರಿದು ಭಸ್ಮವಾಗುವ ತನಕವೂ ಅಳು ನಿರಂತರವಾಗಿ ಕೇಳುತ್ತಲೇ ಇತ್ತು.

ಭೂತ-ಪ್ರೇತಗಳು ಹೇಗೆ ಕಾಣಿಸಿಕೊಳ್ಳುತ್ತವೆ, ಯಾರಿಗೆ, ಯಾವ ಸಮಯದಲ್ಲಿ ಎದುರಾಗುತ್ತವೆ, ಅದೃಶ್ಯ ರೂಪದಲ್ಲಿ ಅಡಗಿದ್ದರೆ ಅವರ ಅಸ್ತಿತ್ವವನ್ನು ಹೇಗೆ ಗುರುತಿಸಬಹುದು ಮುಂತಾದ ಹಲವು ಕುತೂಹಲಕರ ನಂಬಿಕೆಗಳಿವೆ. ಈ ದೃಷ್ಟಿಯಿಂದ ಭಾರತೀಯರ ಭೂತದ ಜಾನಪದ ಕಥೆಗಳಿಗೂ, ಅಮೇರಿಕೆಯ ಜಾನಪದದ ಭೂತದ ಕಥೆಗಳಿಗೂ ಸಾಕಷ್ಟು ಸಾಮ್ಯವನ್ನು ಗುರುತಿಸಬಹುದು. ಉದಾಹರಣೆಗಾಗಿ ಉತ್ತರ ಕರ್ನಾಟಕದ ಒಂದು ಜನಪದ ಕಥೆಯಲ್ಲಿ ಹುಣಿಸೆ ಮರದ ಮೇಲೆ ವಾಸಿಸುತ್ತಿದ್ದ ಒಂದು ದೈವದ ಕತೆಯಿದೆ. ಬಂಗಾಲಿ ಕಥೆಯೊಂದರಲ್ಲಿ ಮದುವೆಯಾದ ಹೆಂಗಸೊಬ್ಬಳು ಚಿಕ್ಕ ವಯಸ್ಸಿನಲ್ಲಿಯೇ ಸತ್ತು ಶಾಕಿಣಿಯಾಗಿ ಊರಿನ ಹೊರಗೆ ಮರದ ಮೇಲೆ ವಾಸಿಸುತ್ತಾಳೆ; ಹತ್ತಿರ ಬಂದ ಒಬ್ಬ ಜೀವಂತ ಮಹಿಳೆಯನ್ನು ಅಡಗಿಸಿಟ್ಟು ತಾನೇ ಅವಳ ಪತಿಯ ಹೆಂಡತಿಯಾಗಲು ಹೋಗಿ ಸಿಕ್ಕಿಬಿದ್ದ ಕತೆಯಿದೆ. ಇನ್ನೊಂದು ಕಥೆಯಲ್ಲಿ ಒಂದು ದೆವ್ವ

ಚಿಗುರೆ ತಲೆಯ ರೂಪದಲ್ಲಿ ಅಡವಿಯಲ್ಲಿ ಅಡಗಿಕೊಂಡಿದ್ದು ತನ್ನನ್ನು ಯಾರಾದರೂ ಜೀವಂತ ವ್ಯಕ್ತಿ ಮುಟ್ಟಿದರೆ, ರಾಕ್ಷಸಿಯಾಗಿ ಅವರನ್ನು ನುಂಗಿಬಿಡುತ್ತಿದ್ದ ಕಥೆಯಿದೆ.

ಕೆಲವು ಭಾರತೀಯ ಪುರಾಣಗಳಲ್ಲಿಯೂ ಭೂತ-ಪ್ರೇತಗಳು ಕಾಣಿಸಿಕೊಳ್ಳುತ್ತವೆ. ಶಿವಪುರಾಣ ಆಧಾರಿತ ಯಕ್ಷಗಾನವೊಂದರಲ್ಲಿ ಶ್ವೇತಕುಮಾರ ಎಂಬ ಒಬ್ಬ ರಾಜನ ಕಥೆಯಿದೆ. ಅದರಲ್ಲಿ ಆತ ಸತ್ತ ಮೇಲೆ ಪ್ರೇತವಾಗಿ ಸ್ವರ್ಗದಲ್ಲಿ ರಂಭೆಯೊಂದಿಗೆ ನೃತ್ಯ ಮಾಡುವ ದೃಶ್ಯವಿದೆ. ಇನ್ನೊಂದು ಉದಾಹರಣೆ, ರನ್ನಕವಿಯ ಗದಾಯುದ್ಧವನ್ನು ಆಧರಿಸಿದ 'ಗದಾಯುದ್ಧ' ಯಕ್ಷಗಾನದಲ್ಲಿದೆ. ಯುದ್ಧದ ಕೊನೆಯ ದಿನ ದುರ್ಯೋಧನ ರಣರಂಗದಲ್ಲಿ ಮಡಿದ ಯೋಧರ ಹೆಣಗಳ ನಡುವೆ ನಡೆಯುತ್ತಿದ್ದಾಗ ಅವನದೇ ಪ್ರೇತದೊಡನೆ ಸಂಭಾಷಣೆ ನಡೆಸುತ್ತಾನೆ. ಒಟ್ಟಿನಲ್ಲಿ ಭೂತ-ಪ್ರೇತಗಳಲ್ಲಿ ನಂಬಿಕೆ ಮತ್ತು ಕಥೆಗಳು ಜಗತ್ತಿನಾದ್ಯಂತ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಎನ್ನಬಹುದು.

ಆಧಾರ

1. Gideon, Amos and Zenko, Darren, Native American Ghost Stories, Lone Pine Publishing International (2006).
2. Botkin, B. A. (Editor), A Treasury of Southern Folklore, Bonanza Books, New York (1977).
3. Botkin, B. A. (Editor), A Treasury of New England Folklore, Revised Edition, Bonanza Books, New York.
4. DasGupta, S and Das Gupta, S, The Demon Slayers and Other Storis: Bengali Folk Tales, Interlink Books, New York (1995).
5. ಸಿಂಪಿ ಲಿಂಗಣ್ಣ, ಉತ್ತರ ಕರ್ನಾಟಕದ ಜಾನಪದ ಕಥೆಗಳು, ಕರ್ನಾಟಕ ಸರಕಾರ, ಕನ್ನಡ ಮಾತು ಸಂಸ್ಕೃತಿ ಇಲಾಖೆ (2011).
6. ಡಿ. ಲಿಂಗಯ್ಯ ಮತ್ತು ಡಾ. ಚಕ್ಕೆರೆ ಶಿವಶಂಕರ್, ದೆವ್ವ ಜಾನಪದ, ಲೇಖನಗಳ ಸಂಗ್ರಹ ಕರ್ನಾಟಕ ಜಾನಪದ ಪರಿಷತ್ತು (2008).

❑

22

ಆಫ್ರಿಕ ಖಂಡದ ಒಂದಿಷ್ಟು ಗಾದೆಗಳು

ಟಿ. ಎಸ್. ಕೃಷ್ಣರಾಜು
ಗೈಥರ್ಸ್‌ಬರ್ಗ್, ಮೇರಿಲ್ಯಾಂಡ್

*

'ಊಟಕ್ಕೊಂದು ಉಪ್ಪಿನಕಾಯಿ, ಮಾತಿಗೊಂದು ಗಾದೆ' ಎಂಬ ಗಾದೆಯ ಮಾತೇ ಇದೆ. ಗಾದೆಗಳು ಕೆಲವೇ ಪದಗುಚ್ಛಗಳ ಚೂಪುಬಾಣಗಳು. ಆದರೆ, ಇಂದು ಗಾದೆಗಳನ್ನು ಮಾತಿನಲ್ಲಿ ಬಳಸುವವರು ಕಡಿಮೆ. ಗಾದೆಗಳನ್ನು ಓದುವವರು ಇನ್ನೂ ಅಪರೂಪ. ಗಾದೆಗಳ ಬಗ್ಗೆ ಆಸಕ್ತಿ ಮತ್ತು ತಿಳುವಳಿಕೆ ಇಲ್ಲದೇ ಜನಮನಗಳಿಂದ ಅವು ಅಳಿಸಿ ಹೋಗಬಹುದು. ಗಾದೆಗಳ ಮೂಲ ಮತ್ತು ವಿಸ್ತಾರಗಳ ಬಗ್ಗೆ ಎ. ಕೆ. ರಾಮಾನುಜನ್ 'ಗಾದೆಗಳು' ಎಂಬ ಸಣ್ಣ ಪುಸ್ತಕದಲ್ಲಿ ವಿದ್ವತ್ಪೂರ್ಣವಾಗಿ ಬಣ್ಣಿಸಿದ್ದಾರೆ. ನನಗೂ ಬಾಲ್ಯದಿಂದಲೇ ಗಾದೆಗಳ ಗೀಳು. ಕನ್ನಡ ಗಾದೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಒಂದು ಸಚಿತ್ರ ಪುಸ್ತಕವನ್ನು 2002ರಲ್ಲಿ ಪ್ರಕಟಿಸಿದ್ದೇನೆ.

ಈ ಲೇಖನದಲ್ಲಿ ಆಫ್ರಿಕ ಖಂಡದ ಒಂದಿಷ್ಟು ಗಾದೆಗಳ ಪರಿಚಯವನ್ನು ಮಾಡಿಸುತ್ತೇನೆ. ಏಕೆ ಆಫ್ರಿಕ? ಅನೇಕ ಸಂಸ್ಕೃತಿ, ಜಾತಿ, ಮತಧರ್ಮ ಮತ್ತು ರಾಜಕೀಯಗಳ ಸಮ್ಮಿಳನದ ಖಂಡ ಆಫ್ರಿಕ. ಇದು 54 ಸ್ವತಂತ್ರ ದೇಶಗಳ, ನೂರಾರು ಜನಾಂಗಗಳ, ಸಾವಿರಾರು ಬುಡಕಟ್ಟು ಮತ್ತು ಅಸಂಖ್ಯ ಭಾಷೆಗಳ ಮಹಾತಾಯಿ. ಇಂಥಾ ವೈವಿಧ್ಯಮಯ ಖಂಡ ಮತ್ತೆಲ್ಲೂ ಇಲ್ಲ. ನಿಸರ್ಗ ಸೌಂದರ್ಯದ ಮಡಿಲಿನಲ್ಲಿ ಪ್ರಾಣಿ ಸಂಸಾರಗಳ ಸಮುದಾಯ, ಮರಿಗಳೊಡನೆ ಮದಗಜಗಳ ಮೆರವಣಿಗೆ; ಮರದಡಿಯ ನೆರಳಿನಲ್ಲಿ ಗೊರಕೆ ಹೊಡೆಯುವ ಸಿಂಹಗಳು; ಚಿಮ್ಮುತ್ತಾ ಓಡುವ ಜಿಂಕೆಗಳು; ನಡುರಸ್ತೆಯಲ್ಲಿ ನಿಂತು ನೋಡುವ ಜೀಬ್ರಾಗಳು; ನೀರು ಕುಡಿಯುವ ಜಿರಾಫೆಗಳ ತ್ರಿಕೋಣಗಳು; ಕಣ್ಣೆದುರಿಗೇ ಹರಿದು ಹೋಗುವ ಉಗ್ರ ಸರ್ಪಗಳು--ಒಂದೇ ಎರಡೇ! ಈ ಮಧ್ಯೆ ಹಳ್ಳಿಗಳು, ನಗರಗಳು, ಜನಕೋಟಿ.

ಆಫ್ರಿಕಾ ಖಂಡದ ಗಾದೆಗಳಲ್ಲಿ ಹಾಸ್ಯ, ದುಃಖ, ಕುಚೋದ್ಯ, ವಿವೇಕ, ವ್ಯವಹಾರ ಜ್ಞಾನ, ಶೂರತೆ, ಪ್ರೀತಿ ಮತ್ತು ಸೌಂದರ್ಯಗಳು ಸ್ಪಂದಿಸುತ್ತವೆ. ಆದರೂ, ಈ ವೈವಿಧ್ಯಮಯ ಸಂಸ್ಕೃತಿಯ ಪರಿಚಯ ಹೆಚ್ಚು ಜನಕ್ಕಿಲ್ಲ. ಎಲ್ಲಾ ಸಂಸ್ಕೃತಿಗಳನ್ನೂ ಕರಗಿಸುವ ಉತ್ತರ ಅಮೇರಿಕದ ಮಡಿಕೆಯಲ್ಲಿ ಕರಗುತ್ತಿರುವ ನಮಗೆ, ಗುಲಾಮಗಿರಿಯ ಕಾರಣದಿಂದ ಇಲ್ಲಿರುವ ನೀಗ್ರೋ ಜನಾಂಗದವರ ಶ್ರೀಮಂತ ಸಂಸ್ಕೃತಿಯ ಮೂಲದ ಪರಿಚಯವಾಗಬೇಕು. ಈ ಕೆಳಗಿನ ಪಟ್ಟಿಯಲ್ಲಿ ಆಫ್ರಿಕ ಮತ್ತು ಕನ್ನಡದ ಗಾದೆಗಳಿಗಿರುವ ಸಮಾನತೆ ಮತ್ತು ಭಿನ್ನತೆಗಳನ್ನು ನೋಡಬಹುದು. ಅದಕ್ಕೇನು ಕಾರಣ ಎಂದು ವಿವರಿಸುವುದು ಈ ಪ್ರಬಂಧದ ವ್ಯಾಪ್ತಿಯಿಂದ ಹೊರಗೆ, ಆದರೂ, ಕೆಲವು ಸಂಗತಿಗಳನ್ನು ಗುರುತಿಸಬಹುದು.

ಶತಮಾನಗಳಿಂದ ಯೂರೋಪ್ ಮತ್ತು ಪಶ್ಚಿಮ ಏಷ್ಯಾ ಖಂಡಗಳಿಂದ ರಾಜರಿಂದ ಹಿಡಿದು ಸಾಮಾನ್ಯರವರೆಗೆ ಸಾವಿರಾರು ಜನರು ಆಫ್ರಿಕ ಖಂಡಕ್ಕೆ ಹೋಗಿ ಬರುತ್ತಿದ್ದರು. ಅಲೆಕ್ಸಾಂಡರ್, ಜೂಲಿಯಸ್ ಸೀಜ಼ರ್ ಮತ್ತು ಅಗಸ್ಟಸ್, ಈಜಿಪ್ಟ್ ಮತ್ತು ಟುನೀಷಿಯಗಳನ್ನು ಆಕ್ರಮಿಸಿ ಅಲ್ಲಿ ತಮ್ಮ ಸೇನೆಗಳ ಕೇಂದ್ರಗಳನ್ನು ನಿರ್ಮಿಸಿದರು. ಏಳನೇ ಶತಮಾನದ ನಂತರ ಅರಬ್ ದೇಶಗಳ ಆಕ್ರಮಣದಿಂದ ಯೂರೋಪಿನ ದೇಶಗಳು ಸೋತರೂ, ಪುನಃ ಆಫ್ರಿಕದ ಆಕ್ರಮಣವನ್ನು ಮುಂದುವರಿಸಿದವು. ಹದಿಮೂರನೇ ಶತಮಾನದ ನಂತರ ಪೋರ್ಚ್‌ಗಲ್, ಬೆಲ್ಜಿಯಂ, ಫ್ರಾನ್ಸ್, ಬ್ರಿಟನ್, ಜರ್ಮನಿ, ಸ್ಪೈನ್ ಮತ್ತು ಇಟಲಿ ದೇಶಗಳು ಆಧುನಿಕ ಯುಗದ ಗುಲಾಮಗಿರಿಗೆ ಅಡಿಪಾಯ ಹಾಕಿದ್ದು ಮಾತ್ರವಲ್ಲದೇ, ಆಫ್ರಿಕ ಖಂಡದ ನೈಸರ್ಗಿಕ ಸಂಪತ್ತಿನ ಸೂರೆಯನ್ನೂ ಮಾಡಲಾರಂಭಿಸಿದವು (ಈ ಸೂರೆ ಇಂದಿಗೂ ಮುಂದುವರಿದಿದೆ). ಅಲ್ಲಿ ಸಮೃದ್ಧಿಯಾಗಿ ದೊರಕುವ ಚಿನ್ನ, ವಜ್ರ, ಪ್ಲಾಟಿನಂ, ಯುರೇನಿಯಂ, ಕಬ್ಬಿಣದ ಅದಿರು, ತಾಮ್ರ, ಅಲ್ಯೂಮಿನಿಯಂ, ಹತ್ತಿ, ಪ್ಲುಟೋನಿಯಂ, ದಂತ, ಪೆಟ್ರೋಲ್, ಕಾಫಿ, ಟೀ, ಇತ್ಯಾದಿಗಳ ಸೆಳೆತ ವಸಾಹತುಶಾಹಿಗೆ ಅಡಿಗಲ್ಲಾದವು.

ಪಂಜಾಬ್, ಗುಜರಾತ್, ಮಹಾರಾಷ್ಟ್ರ, ಕರಾವಳಿ ಕರ್ನಾಟಕ, ಕೇರಳ ಮತ್ತು ತಮಿಳು ದೇಶಗಳು ಮತ್ತು ಆಫ್ರಿಕ ಖಂಡದ ವಿವಿಧ ದೇಶಗಳ ನಡುವೆ 3000 ವರ್ಷಗಳಿಂದಲೂ ಸಾಂಸ್ಕೃತಿಕ ಮತ್ತು ವಾಣಿಜ್ಯ ವ್ಯವಹಾರಗಳು ನಡೆಯುತ್ತಿದ್ದವು. ಹತ್ತೊಂಬತ್ತನೇ ಶತಮಾನದಲ್ಲಿ ಈಸ್ಟ್ ಇಂಡಿಯಾ ಕಂಪನಿ, ನಂತರ ಬ್ರಿಟಿಷ್ ರಾಜ್ಯದ ಒಪ್ಪಂದದ ದಾಸ್ಯಕ್ಕೆ (indentured servitude) ಒಳಗಾಗಿ ಸಾವಿರಾರು ಭಾರತೀಯರು ಆಫ್ರಿಕ ಖಂಡಕ್ಕೆ ಹೋದರು. ಸೊಮಾಲಿಯದಿಂದ ದಕ್ಷಿಣ ಆಫ್ರಿಕದವರೆಗೆ ಭಾರತೀಯರು ಗುಮಾಸ್ತರಾಗಿ, ಶಿಕ್ಷಕರಾಗಿ, ಕಟ್ಟಡ, ಸೇತುವೆ ಮತ್ತು ರೈಲ್ವೇಗಳ ನಿರ್ಮಾಣದ ಕೂಲಿಗಾರರಾಗಿ ಅಲ್ಲಿ ದುಡಿದರು. ಕೆಲವರು ಹಿಂತಿರುಗಿ ಬಂದರೆ ಮತ್ತಿತರರು ಅಲ್ಲೇ ನೆಲಸಿದರು. ಇಂದಿಗೂ ಕೆನ್ಯಾ, ಟಾಂಜ಼ಾನಿಯ, ಜ಼ಾಂಬಿಯ, ಉಗಾಂಡ, ದಕ್ಷಿಣ ಆಫ್ರಿಕ, ನೈಜೀರಿಯ, ಸಿಯರ ಲಿಯೋನ್ ಮತ್ತು ಗಾಂಬಿಯ ದೇಶಗಳಲ್ಲಿ ಭಾರತೀಯರ ಜನಸಂಖ್ಯೆ ಸಾಕಷ್ಟಿದೆ. ಒಂದು ವರದಿಯ ಪ್ರಕಾರ 3 ಮಿಲಿಯನ್‌ಗೂ ಹೆಚ್ಚು ಭಾರತೀಯರು ಆಫ್ರಿಕದ ದೇಶಗಳಲ್ಲಿ ನೆಲೆಸಿದ್ದಾರೆ.

ಈ ಕಾರಣಗಳಿಂದ ಭಾರತ ಮತ್ತು ಇತರ ದೇಶಗಳ ಸಂಸ್ಕೃತಿ, ಆಫ್ರಿಕದ ಭಾಷೆ ಮತ್ತು ಜನಜೀವನದ ಮೇಲೆ ಪ್ರಭಾವ ಮಾಡಿವೆ. ಅವುಗಳ ಪರಿಣಾಮವನ್ನು ನಾವು ಕೆಳಗಿನ ಕೆಲವು ಗಾದೆಗಳಲ್ಲಿ ಕಾಣಬಹುದು. ಈ ಗಾದೆಗಳ ಮೂಲವನ್ನು ಹುಡುಕುವುದು ಸುಲಭವಲ್ಲ. ಹಾಗೂ, ಗಾದೆಗಳನ್ನು ಓದಿ ಆಸ್ವಾದಿಸಬೇಕೇ ವಿನಃ ಹೆಚ್ಚಾಗಿ ವಿವರಿಸಬಾರದು. ಪ್ರತಿ ಗಾದೆಯ ಮೇಲೂ ಪುಟಗಟ್ಟಲೆ ವ್ಯಾಖ್ಯಾನ ಮಾಡಬಹುದು--ಅದು ನನ್ನ ಉದ್ದೇಶವಲ್ಲ! ಆದ್ದರಿಂದ ಕೆಳಗಿನ ಪಟ್ಟಿಯಲ್ಲಿ ಕೆಲವು ಗಾದೆಗಳಿಗೆ ಮಾತ್ರ ಟಿಪ್ಪಣಿಗಳನ್ನು ಬರೆದಿದ್ದೇನೆ.

* ಅಂಗೈ ಕೆರೆದರೆ ನಿನಗೆ ಅದೃಷ್ಟ (ಲೆಸೋಥೋ).
* ಹೆಂಗಸಿನ ಎಡಗೈ ಅಥವಾ ಗಂಡಸಿನ ಬಲಗೈ ತುರಿಕೆಯಾದರೆ ಅದೃಷ್ಟ ಕುದುರುತ್ತದೆ ಎಂಬ ಶಕುನದ ನಂಬಿಕೆ ನಮ್ಮಲ್ಲಿದೆ.
* ಅಜ್ಜನಿಗಿಂತ ಮೊಮ್ಮಗ ವೇಗವಾಗಿ ನಡೆದಾನು--ಆದರೆ, ದಾರಿ ಗೊತ್ತಿರುವುದು ಅಜ್ಜನಿಗೆ ಮಾತ್ರ (ಆಫ್ರಿಕ).

  ಹೋಲಿಸಿ: ಅಜ್ಜನ ಬುದ್ಧಿ ಮೊಗ್ಗಿನ ಹಾಗೆ.
* ಅಡಿಗೆ ತಯಾರಾದಾಗ ಊಟ ಮಾಡು, ಸಮಯ ಸರಿಯಾದಾಗ ಮಾತನಾಡು (ಇಥಿಯೋಪಿಯಾ).
* ಹೋಲಿಸಿ: "ಆಡಿದ ಮಾತು ಮತ್ತು ಬಿಟ್ಟ ಬಾಣ ಹಿಂದೆ ಬರವು;" Loose lips sink ships.
* ಅತ್ತರೆ ಶಾಂತಿ ಬರದು (ಬುರುಂಡಿ).
* ಅದೃಷ್ಟದ ಬೆನ್ನು ಹಿಡಿದವನಿಗೆ ಶಾಂತಿ ದೊರಕದು (ಆಫ್ರಿಕ).

  ಹೋಲಿಸಿ: 'ಅತಿ ಆಸೆ ಗತಿಗೆಡಿಸಿತು', 'ಅತಿ ಹಂಬಲ ದುಃಖದ ಮೂಲ,' 'ಇಷ್ಟದ ವಸ್ತು ಕಷ್ಟ ತಂದಿತು' ಇತ್ಯಾದಿ.
* ಅರಣ್ಯರಾಜನಾದರೂ ಸಿಂಹಕ್ಕೆ ಸೊಳ್ಳೆಕಾಟ ತಪ್ಪದು (ಘಾನ).

  ಹೋಲಿಸಿ: 'ಸೊಳ್ಳೆ ಕಂಡರೆ ಆನೆಗೆ ಹೆದರಿಕೆಯಂತೆ.'
* ಅವಿವೇಕಿ ತಾನು ಸರ್ವಜ್ಞಾನಿ ಎಂದುಕೊಳ್ಳುತ್ತಾನೆ (ಆಫ್ರಿಕ).
* ಆನೆಗಿಂತ ವನತಾಯಿ ಬಲಿಷ್ಠಳು (ದಕ್ಷಿಣ ಆಫ್ರಿಕ).

  ಆಫ್ರಿಕದಲ್ಲಿ ಪರಿಸರದ ಬಗ್ಗೆ ಅನೇಕ ಗಾದೆಗಳಿವೆ (ಕೆಳಗೆ ನೋಡಿ).
* ಆನೆಗೂ ಇರುವೆ ಕಚ್ಚಿ ನೋವು ತರುವುದು (ದಕ್ಷಿಣ ಆಫ್ರಿಕ).

  ಹೋಲಿಸಿ: 'ಕೀಟ ಸಣ್ಣದಾದರೂ ಕಾಟ ಬಹಳ.'
* 'ಆಫ್ರಿಕಾಕ್ಕೆ ಬಂದ ಪಾದ್ರಿಗಳ ಕೈಯಲ್ಲಿ ಬೈಬಲ್ ಇತ್ತು, ನಮ್ಮ ಕೈಯಲ್ಲಿ ಭೂಮಿ ಇತ್ತು. ಕಣ್ಣು ಮುಚ್ಚಿ ಪ್ರಾರ್ಥಿಸೋಣ ಎಂದರು. ನಾವು ಕಣ್ಣು

ತೆರೆದಾಗ ನಮ್ಮ ಕೈಯ್ಯಲ್ಲಿ ಬೈಬಲ್ ಇತ್ತು, ಅವರ ಕೈಯಲ್ಲಿ ಭೂಮಿ!' (ಡೆಸ್ಮಂಡ್ ಟುಟು).

ಇದು ಗಾದೆ ಅಲ್ಲವಾದರೂ ಅರ್ಥಪೂರ್ಣ ಹೇಳಿಕೆಯಾದ್ದರಿಂದ ಇದನ್ನು ಇಲ್ಲಿ ನಮೂದಿಸಿದ್ದೇನೆ.

* ಆರೋಗ್ಯದ ಮೂಲ, ಒಳ್ಳೆಯ ತಲೆ (ಸೊಮಾಲಿಯಾ).
* ಇಲಿಯ ಮಗು ಇಲಿಯೇ (ಮಲಗಾಸೇ).
* ಇಲ್ಲಿ ರಾಜನ ಮಗ, ಅಲ್ಲಿ ಗುಲಾಮ (ಜಿಂಬಾಬ್ವೆ).
* ಇಲ್ಲಿಗೆ ಯಾರು ಬಂದಿಲ್ಲವೋ ಅವನೇ ತಪ್ಪುಗಾರ (ಕಾಂಗೋ).
* ಈ ಭೂಮಿ ನಮ್ಮ ಸೊತ್ತಲ್ಲ, ನಮ್ಮ ಮಕ್ಕಳಿಂದ ಪಡೆದ ಸಾಲ (ಹೈಡ).
  ಪರಿಸರವನ್ನು ಮಕ್ಕಳಿಗಾಗಿ ಕಾಪಾಡಬೇಕಾದ ಅಗತ್ಯ.
* ಉದ್ದ ಮೂಗಿನ ಪ್ರೇಮಿಗಳಿಗೆ ಚುಂಬನ ಕಷ್ಟ (ಆಫ್ರಿಕ).
* ಎರಡೂ ಕಾಲುಗಳನ್ನಿಟ್ಟು ನದಿಯ ಆಳವನ್ನು ಅಳೆಯುವವನು ಮೂರ್ಖ (ಆಫ್ರಿಕ).
* ಎಲ್ಲರ ತಲೆಗಳೂ ಒಂದೇ, ಯೋಚನೆಗಳು ಬೇರೆ (ಘಾನ).
* ಹಾರುವ ಎಲ್ಲಾ ಹಕ್ಕಿಗಳೂ ನೆಲಕ್ಕಿಳಿಯುತ್ತವೆ (ಈಜಿಪ್ಟ್).
  ಹೋಲಿಸಿ: 'ಏರಿದವನು ಇಳಿದಾನು.'
* ಎಷ್ಟೇ ತೊಳೆದರೂ ಮೇಕೆಗೆ ಮೇಕೆಯದೇ ವಾಸನೆ. (ಇಥಿಯೋಪಿಯ).
  ಹೋಲಿಸಿ: 'ಹುಟ್ಟು ಗುಣ ಸುಟ್ಟರೂ ಬಿಡದು.'
* ಐಶ್ವರ್ಯ ಮೂಗೊಳಗಿನ ಕೂದಲಿದ್ದಂತೆ...ಒಂದಿರಲಿ ಹತ್ತಿರಲಿ, ಕಿತ್ತೆಳೆದರೆ ನೋಯುತ್ತದೆ (ಮಲಗಾಸೆ).
* ಐಶ್ವರ್ಯವನ್ನು ಉಪಯೋಗಿಸಿದರೆ ಕಡಿಮೆಯಾಗುತ್ತದೆ, ಜ್ಞಾನವನ್ನು ಉಪಯೋಗಿಸಿದರೆ ಹೆಚ್ಚಾಗುತ್ತದೆ (ಸ್ವಾಹೀಲಿ).
* ಒಂದು ಕಡ್ಡಿಯ ಮೇಲೆ ಮತ್ತೊಂದು ಕಡ್ಡಿ...ಹಕ್ಕಿ ಗೂಡುಕಟ್ಟುವುದು ಹೀಗೆ (ನೈಜೀರಿಯ).
  ಹೋಲಿಸಿ: 'ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ರಾಶಿ.'
* ಒಂದೇ ಕಾಲಿನಿಂದ ನಡೆಯಲು ಸಾಧ್ಯವೆ? (ಈಜಿಪ್ಟ್).
* ಒಂದೇ ಕೈಬಳೆ ಜಣಝುಣಿಸದು (ಕಾಂಗೋ).
* ಒಗ್ಗಟ್ಟು ಕಲ್ಲಿನ ಬಂಡೆಯಂತೆ ಅದನ್ನು ಮುರಿಯಲಸಾಧ್ಯ (ಆಫ್ರಿಕ).
  ಮೇಲಿನ ಮೂರು ಗಾದೆಗಳು ಒಗ್ಗಟ್ಟಿನ ಬಲವನ್ನು ಸೂಚಿಸುತ್ತವೆ; ಈ ಅರ್ಥದ ಅನೇಕ ಗಾದೆಗಳು ಕನ್ನಡದಲ್ಲೂ ಇವೆ.

* ಒಂದೇ ರೆಂಬೆಯ ಮೇಲೆ ಎಲ್ಲಾ ಕೋತಿಗಳು ನೇತುಕೊಳ್ಳಬಾರದು (ಕೆನ್ಯಾ). ಹೋಲಿಸಿ: Don't put all your eggs in one basket.
* ಒಕ್ಕಣ್ಣಿರುವವರ ರಾಜ್ಯದಲ್ಲಿ ಒಂದು ಕಣ್ಣು ಮುಚ್ಚಿಕೋ (ಕೆನ್ಯಾ).
* ಒಬ್ಬನಿಗೆ ವಿದ್ಯಾದಾನ ಮಾಡಿದರೆ ಅವನು ಜಾಣನಾಗುತ್ತಾನೆ...ಒಬ್ಬಳಿಗೆ ವಿದ್ಯಾದಾನ ಮಾಡಿದರೆ, ಇಡೀ ಜನಾಂಗಕ್ಕೆ ಜ್ಞಾನ ಕೊಟ್ಟಂತೆ (ಘಾಂಟ). ಸಮಾಜದಲ್ಲಿ ಹೆಂಗಸಿನ ಸ್ಥಾನ ಎಷ್ಟು ಮುಖ್ಯ ಎಂಬ ಅರ್ಥಭರಿತ ಗಾದೆಗಳು ಅನೇಕವಿವೆ.
* ಒಳ್ಳೆಯ ಊಟದೊಟ್ಟಿಗೆ ಒಳ್ಳೆಯ ಸಂಗೀತವಿರಲಿ (ಆಫ್ರಿಕ).
* ಒಳ್ಳೆಯ ಹೆಂಡತಿ ಸಿಗುವುದು ಸುಲಭ, ಸ್ನೇಹದ ಬೀಗರು ಸಿಗುವುದು ಅಪರೂಪ (ಮಲಗಸೇ).
* ಓಡುತ್ತಿರುವವನನ್ನು ಹಿಂಬಾಲಿಸಬೇಡ (ಕೆನ್ಯಾ).
* ಕೈಯಲ್ಲಿ ಚಾವಟಿ ಇಟ್ಟುಕೊಂಡು ನಾಯಿಯನ್ನು ಕರೆಯಬೇಡ (ಸುಡಾನ್).
* ಕಲಿತವನು ಕಲಿಸಿಯಾನು (ಮಾಸಾಯ್).
* ಕಷ್ಟ ಬಂದಾಗ ಜಾಣರು ಸೇತುವೆ ಕಟ್ಟುವರು, ಮೂರ್ಖರು ಅಣೆಕಟ್ಟು ನಿರ್ಮಿಸುವರು (ನೈಜೀರಿಯ).
  (ಪರಿಸರದ ಕಾಳಜಿ ಸೂಚಿಸುವ ಗಾದೆ).
* ಕಾಫಿ ಮತ್ತು ಪ್ರೀತಿ ಬಿಸಿಯಾಗಿದ್ದಾಗ ಅತಿರುಚಿ (ಇಥಿಯೋಪಿಯಾ).
* ಕಿವಿಗಳು ಬುದ್ಧಿ ಮಾತನ್ನು ಕೇಳದಿದ್ದರೆ, ಹೊತ್ತ ತಲೆಯ ಜತೆಗೇ ಅವು ನೆಲಕ್ಕೆ ಬೀಳುತ್ತವೆ.
* ಕೇಳದ ಕಿವಿ ಸಾವಿಗೆ ಹಾದಿ, ಕೇಳುವ ಕಿವಿಗೆ ಆಶೀರ್ವಾದ (ಸಮ್ಬುರು).
  ಮೇಲಿನ ಎರಡು ಗಾದೆಗಳನ್ನು ಹೋಲಿಸಿ: 'ಕೇಳದ ಕಿವಿ ಊರಿಗೆ ಮಾರಿ ತಂತು'.
* ಕುಟುಂಬ ಕಾಡಿದ್ದಂತೆ ಹೊರಗಿನಿಂದ ದಟ್ಟವಾಗಿ ಕಂಡರೂ, ಒಳಗೆ ಪ್ರತಿ ಮರಕ್ಕೂ ಅದರದೇ ಜಾಗವಿರುತ್ತದೆ (ಆಫ್ರಿಕ).
* ಕುಟುಂಬದ ಹೆಸರು ಹೂವಿದ್ದಂತೆ, ಗುಂಪಿನಲ್ಲಿದ್ದರೆ ಗುಚ್ಛವಾಗುತ್ತದೆ (ಆಫ್ರಿಕ).
* ಕುಣಿಯಲಾರದ ಹೆಣ್ಣು ಮೃದಂಗಕ್ಕೆ ಶ್ರುತಿ ಇಲ್ಲ ಅಂದಳಂತೆ (ಕೆನ್ಯಾ).
* ನಾಟ್ಯ ಬಾರದವಳು ನೆಲದ ತುಂಬ ಕಲ್ಲು ಅಂದಳಂತೆ (ಮಸಾಯ್).
  ಮೇಲಿನ ಎರಡು ಗಾದೆಗಳನ್ನು ಹೋಲಿಸಿ: 'ಕುಣಿಯಲಾರದ ಹೆಣ್ಣಿಗೆ ನೆಲಡೊಂಕು.'
* ಕೂತು ಘರ್ಜಿಸುವ ಸಿಂಹಕ್ಕೆ ಬೇಟೆ ಸಿಗದು (ನೈಜೀರಿಯ, ಮಸಾಯ್).
* ತೆಂಗಿನ ಮರದ ತುದಿಗೆ ಹತ್ತಲು ಒಳದಾರಿ ಇಲ್ಲ (ಕ್ಯಾಮರೂನ್).

* ಮೇಲಿನ ಎರಡು ಗಾದೆಗಳು ಹೋಲಿಸಿ: 'ಕೈಕೆಸರಾಗದೇ ಬಾಯಿ ಮೊಸರಾಗದು.'
* ಕೊಡಲಿ ತಾನು ಹೊಡೆದದ್ದನ್ನು ಮರೆತರೂ ಮರಕ್ಕೆ ಹೊಡೆತದ ನೆನಪಿರುತ್ತದೆ (ನಮೀಬಿಯ).
* ಕೋತಿಗಳೂ ಮರದಿಂದ ಬೀಳುತ್ತವೆ (ಆಫ್ರಿಕ).
  ಹೋಲಿಸಿ: 'ತಪ್ಪು ಮಾಡದವರಿಲ್ಲ, ತುಪ್ಪ ಉಣದವರಿಲ್ಲ.'
* ಕೋತಿಯಾಟ ನೋಡಿ ನಗುತ್ತೇವೆ, ಆದರೆ ಮಗ ಕೋತಿಯಾಗಲಿ ಅಂತ ಬಯಸುವುದಿಲ್ಲ (ಆಫ್ರಿಕ).
* ಕೋಪ ಮತ್ತು ಹುಚ್ಚು ಅಣ್ಣತಮ್ಮಂದಿರು (ಆಫ್ರಿಕ).
* ಕೋಲಿನಿಂದ ಸಿಂಹದೊಂದಿಗೆ ಜಗಳವಾಡಬೇಡ (ಮಾಸಾಯ್).
* ಖಾಲಿ ಮಡಿಕೆಗೆ ಸದ್ದು ಬಹಳ (ಕೆನ್ಯಾ).
* ಬಾಯಿ ಡಂಗೂರ, ಒಳಗೆ ಖಾಲಿ (ಸುಡಾನ್).
  ಮೇಲಿನ ಎರಡು ಗಾದೆಗಳು ಹೋಲಿಸಿ: 'ತುಂಬಿದ ಕೊಡ ತುಳುಕದು.'
* ಗೂಳಿಯ ಸಗಣಿಯಲ್ಲಿ ಸಾವಿರ ನೊಣಗಳು (ಮೊಝಾಂಬಿಕ್).
* ಚಂದ್ರನಿಲ್ಲದ ರಾತ್ರಿಯಲ್ಲಿ ನಕ್ಷತ್ರಗಳು ಉಜ್ವಲವಾಗಿ ಹೊಳೆಯುತ್ತವೆ (ಉಗಾಂಡದ ಬುಗಾಂಡ ಜನಾಂಗ).
* ಚಾಕುವನ್ನು ಬಾಯಲ್ಲಿ ಮುಚ್ಚಿಟ್ಟರೆ ನಿನ್ನ ತುಟಿ ಹರಿಯುತ್ತದೆ (ರುವಾಂಡಾ).
* ಜಾಣನಾದ ರಾಜ ಶಾಂತಿಯ ಸಹೋದರ (ದಕ್ಷಿಣ ಆಫ್ರಿಕ).
* ಜಾರುವವನು ರಾಜನಾಗನು (ಕೆನ್ಯಾ).
* ಜಿಂಕೆಯ ಮರಣದ ಹೊಣೆ ಬೇಟೆಗಾರನ ಹೆಗಲಿನ ಮೇಲೆ (ಕೆನ್ಯಾ).
* ತನ್ನ ಮನೆಯನ್ನೇ ಸುಟ್ಟವನಿಗೆ ಬೂದಿಗೆ ಕ್ರಯ ಎಷ್ಟು ಎಂದು ಆಮೇಲೆ ತಿಳಿಯುತ್ತದೆ (ಆಫ್ರಿಕ).
* ತಲೆಯ ತುಂಬ ಜಂಬವಿದ್ದರೆ ಅಲ್ಲಿ ವಿವೇಕಕ್ಕೆ ಜಾಗವಿಲ್ಲ (ಟಾಂಝಾನಿಯ).
* ತಾಯಿ ಇಲ್ಲದ ಕರು ತನ್ನ ಬೆನ್ನನ್ನು ತಾನೇ ನೆಕ್ಕಬೇಕು (ಕೆನ್ಯಾ).
* ತಾಯಿ ಕುರೂಪಿಯಾಗಿದ್ದರೂ ಅವಳ ಮಗ ಅವಳನ್ನು ಹಾಸ್ಯ ಮಾಡುವುದಿಲ್ಲ (ಘಾನ).
* ತಾಳ್ಮೆ ಇದ್ದರೆ ಮಾತ್ರ ಕಳ್ಳು ತಯಾರಿಸಲು ಸಾಧ್ಯ (ಒವಾಂಬೋ).
  ಹೋಲಿಸಿ: With time and patience the mulberry leaf becomes a silk gown (Chinese).
* ತಾಳ್ಮೆಯಿಂದ ಬಾಳೇಮರವನ್ನು ಬೆಳೆಸು (ಕಾಂಗೋ).
  ಹೋಲಿಸಿ: 'ತಾಳಿದವನು ಬಾಳಿಯಾನು.'
* ತುಂಬಿದ ನದಿಗೂ ಬೆಳೆಯುವ ಆಸೆ (ಕಾಂಗೋ).

* ದಟ್ಟವಾಗಿದೆ ಅಂತ ಅರಣ್ಯಕ್ಕೆ ಹೆದರಬೇಡ (ಆಫ್ರಿಕ).
* ದಾರಿ ತಪ್ಪಿದವನು ಹೊಸ ಮಾರ್ಗವನ್ನು ಕಂಡುಹಿಡಿಯುತ್ತಾನೆ (ಆಫ್ರಿಕ).
* ದುಡ್ಡಿದೆ ಅಂತ ಕೋತಿಯನ್ನು ಮದುವೆಯಾದರೆ, ದುಡ್ಡು ಹೋದ ಮೇಲೆ ಕೋತಿ ಮಾತ್ರ ಉಳಿಯುತ್ತದೆ (ಈಜಿಪ್ಟ್).
* ದೇವರು ಕರುಣಾಮಯಿ, ಆದರೆ ಸಿಂಹದೊಂದಿಗೆ ನಾಟ್ಯವಾಡಬೇಡ (ಜಿಂಬಾಬ್ವೆ).
* ದೋಣಿಗೆ ನಾಯಕನ ಪರಿಚಯವಿಲ್ಲ. ಅದು ಮಗುಚಿದರೆ ಎಲ್ಲರೂ ಮುಳುಗುತ್ತಾರೆ (ಮಡಗಾಸ್ಕರ್).
* ಧರ್ಮಕಾರ್ಯ ಮಾಡಿ ಕಡಲಿಗೆ ಹಾಕು (ಈಜಿಪ್ಟ್).
* ಧೀರನಿಗೆ ಒಂದು ಮರಣ, ಹೇಡಿಗೆ ಸಾವಿರ ಮರಣ (ಸೊಮಾಲಿಯ).
* ನಾವು ನಮ್ಮ ಮಕ್ಕಳಿಗೆ ಕೊಡುವ ದಾನ, ಬೇರುಗಳು ಮತ್ತು ರೆಕ್ಕೆಗಳು (ಸೂಡಾನ್).

  (ಮತ್ತೊಂದು ಪರಿಸರದ ಗಾದೆ).
* ನಿನ್ನ ತಲೆಯ ಮೇಲೆ ಎಷ್ಟೇ ಮಳೆ ಸುರಿದರೂ, ಅಲ್ಲಿ ಬಾಳೇಮರ ಬೆಳೆಯದು (ಕೆನ್ಯಾ).
* ನಿನ್ನ ಬೆನ್ನು ಕೆರೆಯಲು ಮತ್ತೊಬ್ಬನ ಸಹಾಯ ಬೇಕು (ಕೆನ್ಯಾ).
* ನಿನ್ನನ್ನು ಭುಜದ ಮೇಲೆ ಕೂರಿಸಿಕೊಂಡವನ ಮೈ ವಾಸನೆ ಅನ್ನಬೇಡ (ಸಿಯ-ರಲಿಯೋನ್).
* ನೀನು ಒಂಟೆಯಾದರೆ ಮತ್ತೊಂದು ಒಂಟೆಯ ಭುಜವನ್ನು ನೋಡಿ ನಗಬೇಡ (ಘಾನ).
* ನಿನ್ನ ಬೇಟೆ ಮುಗಿದ ಮೇಲೆ ಮತ್ತೊಂದು ಬೇಟೆ ಕಾಣುತ್ತದೆ (ಇಗ್ಬೋ).
* ನೀನು ಸುತ್ತಿಗೆಯಾದರೆ ನಿನ್ನ ಕಣ್ಣಿಗೆ ಕಾಣುವುದು ಮೊಳೆಗಳು ಮಾತ್ರ (ಗಾಂಬಿಯ)
  ಹೋಲಿಸಿ: For a hammer, everything is a nail.
* ನೀರಿನ ಝುರಿ ಚಾಡಿ ಹೇಳಿದರೆ ಕಪ್ಪೆಗೆ ಕೇಳಿಸದೇ? (ಮೊಜ಼ಾಂಬಿಕ್).
* ನೀರಿಲ್ಲದೇ ಅಲೆಗಳಿಲ್ಲ (ಕೆನ್ಯಾ).
  ಹೋಲಿಸಿ: 'ಹೊಗೆ ಇದ್ದಲ್ಲಿ ಬೆಂಕಿ, ತಗ್ಗಿದ್ದಲ್ಲಿ ಚಳಿ' 'Where there is smoke, there is fire.'
* ನೇತೃತ್ವ ದೇವರಿಂದ ಬರುತ್ತದೆ (ಕೆನ್ಯಾ).
* ನೈಜೆರ್ ಮಹಾನದಿಯೂ ದ್ವೀಪದ ಸುತ್ತ ಹರಿಯಬೇಕು (ಹಾಸು).
* ಪ್ರತಿ ಬಾಗಿಲಿಗೂ ಅದರದೇ ಬೀಗದ ಕೈ ಇರುತ್ತದೆ (ಕೆನ್ಯಾ).
* ಪ್ರೀತಿ ಮಗುವಿದ್ದಂತೆ, ಕೋಮಲವಾಗಿ ಪಾಲಿಸಬೇಕು (ಕಾಂಗೋ).
* ಪ್ರೀತಿಯ ಕೈಯಲ್ಲಿ ಆಯುಧವಿಲ್ಲ (ನಮೀಬಿಯ).

* ಪ್ರೀತಿಯ ಖಾಯಿಲೆಗೆ ತಾಳ್ಮೆಯೇ ಮದ್ದು (ಕ್ಯಾಮರೂನ್).
* ಬಣ್ಣ ಕಳೆದುಕೊಂಡ ಸಿಂಹವನ್ನು ಬೆಕ್ಕು ಅನ್ನಬೇಡ (ಪಿಗ್ಮಿ).
* ಬದುಕಲೆಂದು ನಮಗೆ ದೇವರು ನದಿ ಮತ್ತು ಸರೋವರವನ್ನು ಕೊಟ್ಟ; ಆತ್ಮಶೋಧನೆಗೆ ಮರುಭೂಮಿಯನ್ನು ಕೊಟ್ಟ (ಟುವರೆಗ್) [ಮತ್ತೊಂದು ಪರಿಸರದ ಗಾದೆ].
* ಬಲವಿದ್ದವನಿಗೆ ದೊಣ್ಣೆ ಬೇಡ (ಸೆನೆಗಲೀಸ್).
* ಬಾಯಲ್ಲಿ ಮೃದುಮಾತು, ಕೈಯಲ್ಲಿ ದೊಣ್ಣೆ ಇದ್ದರೆ ಎಲ್ಲಿಗೂ ಹೋಗಬಹುದು (ಪಶ್ಚಿಮ ಆಫ್ರಿಕ).
* ಬಿಟ್ಟ ಬಾಣವನ್ನು ನೋಡಿ ಸಂತೋಷಿಸುವ ಬಾಣಗಾರ ಬಿಲ್ಲನ್ನೂ ಪ್ರೀತಿಸುತ್ತಾನೆ (ನೈಜೀರಿಯಾ).
* ಬೀಸುಗಾಳಿ ಎಲ್ಲಾ ತೂತುಗಳ ಮೂಲಕ ಹೋಗುತ್ತದೆ (ಈಜಿಪ್ಟ್).
* ಬೆಳೆ ಬಂದಿಲ್ಲ ಎಂದು ಬಿತ್ತುವುದನ್ನು ನಿಲ್ಲಿಸಬೇಡ (ಕೆನ್ಯಾ).
* ಬೆಳೆದ ಮರ ಊರುಗೋಲಾಗದು (ಕೆನ್ಯಾ).

  ಹೋಲಿಸಿ: 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?'
* ಭೂಮಿ ಹಾಸಿಗೆಗಳ ರಾಣಿ (ನಮೀಬಿಯ).
* ಮಕ್ಕಳೇನು ತಿನ್ನುತ್ತಾರೆ ಎಂಬುದು ಒಳ್ಳೆಯ ತಾಯಿಗೆ ಗೊತ್ತು (ಆಕನ್).
* ಮಗ ಎಷ್ಟೇ ಬೆಳೆದರೂ, ಒಮ್ಮೆ ಅವನನ್ನು ಅವನಮ್ಮ ಹೊತ್ತಿದ್ದಳು (ಆಫ್ರಿಕ).
* ಒಂದು ಮಗು, ಎಲ್ಲರ ಮಗು (ಸುಡಾನ್).
* ಮಗುವನ್ನು ಬೆಳೆಸಲು ಇಡೀ ಹಳ್ಳಿಯೇ ಬೇಕು (ಆಫ್ರಿಕ).

  ಮೇಲಿನ ಎರಡು ಗಾದೆಗಳು ಇಡೀ ಸಮಾಜ ಹೇಗೆ ವ್ಯಕ್ತಿಯ ನೈತಿಕ ಬೆಳವಣಿಗೆ ಹೊಣೆ ಎಂದು ಅರ್ಥೈಸುತ್ತವೆ.
* ಮಗುವಿಗೆ ಚಂದ್ರನನ್ನು ತೋರಿಸಿದರೆ ಅವಳು ನೋಡುವುದು ನಿನ್ನ ಬೆರಳನ್ನು (ಜ಼ಾಂಬಿಯ).
* ಮಗುವಿದ್ದವನಿಗೆ ಸಾವಿಲ್ಲ (ನೈಜೀರಿಯ).
* ಮಗುವಿನ ನಗು ಮನೆಯೆಲ್ಲಾ ಬೆಳಕು (ಸ್ವಾಹೀಲೀ).
* ಮಡಿಕೆ ಎಷ್ಟೇ ಸುಂದರವಾಗಿದ್ದರೂ ತಾನೇ ಅಡಿಗೆ ಮಾಡದು (ಆಫ್ರಿಕ).
* ಮತ್ತೊಬ್ಬರ ದುರದೃಷ್ಟವನ್ನು ಕಂಡಾಗ ನನ್ನ ದುರದೃಷ್ಟವನ್ನು ಮರೆಯುತ್ತೇನೆ (ಆಲ್ಜೀರಿಯ).
* ಮತ್ತೊಬ್ಬರಿಗೆ ಅಪಕೀರ್ತಿ ತಂದರೆ, ನಿನಗೇ ಅಪಕೀರ್ತಿ (ಯೊರುಬ).
* ಮನೆ ಕಟ್ಟುವಾಗ ಮೊಳೆ ಮುರಿದರೆ, ಕಟ್ಟುವುದನ್ನು ನಿಲ್ಲಿಸುವೆಯಾ? (ರುವಾಂಡ).

* ಮರದ ತುದಿಯಿಂದ ಇನ್ನೂ ಮೇಲೆ ಹತ್ತುತ್ತೇನೆ ಎಂದು ಹಠ ಹಿಡಿದವನಿಗೆ ಭೂಮಿ ಕಾದಿರುತ್ತದೆ (ಆಫ್ರಿಕ).
* ಮಳೆಗಾಲದಲ್ಲಿ ಸೊಳ್ಳೆಯ ಕಾಟ ತಪ್ಪದು (ಕೆನ್ಯಾ).
* ಮಳೆಯ ನೀರು ಬೀಳುವುದು ನಿನ್ನ ಮನೆಯ ಮೇಲೆ ಮಾತ್ರವಲ್ಲ (ಕ್ಯಾಮರುನ್).
* ಮುದಿ ಜೋಳ ಮತ್ತು ಎಳೇ ಜೋಳ ಒಂದೇ ಗಿರಣಿಯಲ್ಲಿ ಹುಡಿಯಾಗುತ್ತವೆ (ಅಚೊಲಿ).

  ಹೋಲಿಸಿ: ಸಾವಿನ ಸಾರ್ವಜನಿಕತೆಯನ್ನು ಸೂಚಿಸುವ ಗಾದೆಗಳು ಅನೇಕ ಸಂಸ್ಕೃತಿಗಳಲ್ಲಿವೆ: 'ಸಾಯದ ಮನೆ ಇಲ್ಲ, ಬೇಯದ ಕಾಳಿಲ್ಲ.'
* ಮುರಿದ ಸೇತುವೆಯಿಂದ ಒಬ್ಬ ನೀರಿಗೆ ಬಿದ್ದಮೇಲೇ ಸೇತುವೆ ರಿಪೇರಿಯಾಗುವುದು (ಸೊಮಾಲಿ).
* ಮೂರ್ಖ ಮಾತಾಡುತ್ತಾನೆ, ವಿವೇಕಿ ಕೇಳುತ್ತಾನೆ (ಇಥಿಯೋಪಿಯ).
* ಮೂರ್ಖನ ಸ್ನೇಹಕ್ಕಿಂತ ಬುದ್ಧಿವಂತನ ಶತ್ರುತ್ವ ಮೇಲು (ಸೆನೆಗಲ್).
* ಮೊಟ್ಟೆ ಇರುವ ಬುಟ್ಟಿ ಕೈಯಲ್ಲಿದ್ದರೆ ನಾಟ್ಯವಾಡಬೇಡ (ಆಮ್ಹೇಡೆ).
* ಯುದ್ಧಕ್ಕೆ ಕಣ್ಣಿಲ್ಲ (ಸ್ವಾಹೀಲಿ).
* ರಾಣಿ ಅರಸಿಯಾದರೆ ಆ ರಾಜ್ಯದ ಹೊಳೆಯೂ ಬೆಟ್ಟದ ತುದಿಗೆ ಹರಿಯುತ್ತದೆ (ಇಥಿಯೋಪಿಯ).
* ರಾತ್ರಿಗೆ ಕಿವಿಗಳಿವೆ (ಮಸಾಯ್).
* ರೆಕ್ಕೆಗಳನ್ನು ತುಂಬಿಸಿಕೊಂಡು ಕುಣಿಯುವ ಕೋಳಿ ನೋಡಲು ದೊಡ್ಡದು ಎನಿಸುತ್ತದೆ (ಝಾಂಬಿಯ).
* ರೈನೋ ಕೋತಿಯ ಜತೆ ನಾಟ್ಯವಾಡದು (ನೈಜೀರಿಯಾ).
* ವಿವೇಕ ಅಗ್ಗಿಷ್ಟಿಕೆಯ ಬೆಂಕಿಯಂತೆ ಅದನ್ನು ಜನರು ಹಂಚಿಕೊಳ್ಳುತ್ತಾರೆ (ಕಾಂಗೋ).
* ವಿವೇಕ ಒಂದೇ ರಾತ್ರಿಯಲ್ಲಿ ಮೂಡುವುದಿಲ್ಲ (ಸೊಮಾಲಿಯ).
* ವಿವೇಕ ಬೇಯಬ್ಯಾಬ್ ಮರದಂತೆ; ಒಬ್ಬನೇ ಅದನ್ನು ತಬ್ಬಲಾರ (ಟೋಗೋ).
* ವಿವೇಕವಿಲ್ಲದ ಜ್ಞಾನ ಮರಳಿನ ಮೇಲೆ ನೀರುಸುರಿದಂತೆ (ಗಿನಿ).
* ವಿವೇಕವೇ ಐಶ್ವರ್ಯ (ಸ್ವಾಹೀಲಿ).
* ವೃದ್ಧಾಪ್ಯದಲ್ಲಿ ನೀನು ಕೂರುವ ಜಾಗ ಯೌವ್ವನದಲ್ಲಿ ಎಲ್ಲಿದ್ದೆ ಎಂದು ತಿಳಿಸುತ್ತದೆ (ಯೊರುಬ).
* ವೇಗವಾಗಿ ಹೋಗಲು ಒಬ್ಬನೇ ಹೋಗು; ಬಹುದೂರ ಹೋಗಲು ಗುಂಪಲ್ಲಿ ಹೋಗು (ಆಫ್ರಿಕ).
* ಶವಪೆಟ್ಟಿಗೆ ಎಷ್ಟೇ ಸುಂದರವಿದ್ದರೂ ಅದರೊಳಗೆ ಮಲಗಲು ಬಯಸುವೆಯಾ? (ಆಫ್ರಿಕ).

* ಶಾಂತವಾಗಿ ಕಾಣುವ ಸರೋವರದಲ್ಲೂ ಮೊಸಳೆಗಳಿರುತ್ತವೆ (ಆಫ್ರಿಕ).
* ಸತ್ತವನಂತೆ ನಟಿಸು, ನಿನ್ನನ್ನು ಯಾರು ಪ್ರೀತಿಸುತ್ತಾರೆ ಎಂದು ತಿಳಿಯುತ್ತದೆ (ಆಫ್ರಿಕನ್).
* ಸಾವು ಅಂದರೇನು ಎಂದು ತಿಳಿಯಲು ಸಮಾಧಿಗಳ ಆಳವನ್ನು ಗಮನಿಸು (ಕೆನ್ಯಾ).
* ಸಿಂಹ ಸೊಳ್ಳೆಯನ್ನು ಕಾಡುವುದಕ್ಕಿಂತ ಹೆಚ್ಚಾಗಿ ಸೊಳ್ಳೆಯೇ ಸಿಂಹವನ್ನು ಕಾಡುತ್ತದೆ (ಕೆನ್ಯಾ).
* ಸಿಂಹಕ್ಕೆ ಬರೆಯಲು ಬರುವವರೆಗೆ, ಬೇಟೆಗಾರ ಹೇಳಿದ್ದೇ ಸಾಹಸದ ಕತೆ (ಆಫ್ರಿಕ).
* ಸುತ್ತಿಗೆ ಹಿಡಿದವರೆಲ್ಲಾ ಕಮ್ಮಾರರಾಗುವರೇ? (ಘಾನ).
* ಹಕ್ಕಿಗಳು ಹಾಡುವುದು ಉತ್ತರಗಳಿವೆ ಅಂತಲ್ಲ, ಹಾಡುಗಳಿವೆ ಅಂತ (ಆಫ್ರಿಕ).
* ಹಚ್ಚೆ ಹಾಕಿಸುವಾಗ ರಕ್ತ ಬಂದೇ ಬರುತ್ತದೆ (ಮೊಜಾಂಬಿಕ್).
* ಹರಡುವ ಮೊದಲೇ ಬೆಂಕಿಯನ್ನು ನಂದಿಸು (ಕೆನ್ಯಾ).
* ಹಲ್ಲು ಬಿರಿಸಿ ನಗುವವನ ಮುಖದಲ್ಲಿ ಬಡತನದ ಸುಳಿವಿಲ್ಲ (ಮಸಾಯ್).
* ಹಲ್ಲುಜ್ಜದವನು ಊಟ ಕಹಿ ಅಂದನಂತೆ (ಆಫ್ರಿಕ).
* ಹಳ್ಳಿ ಸಣ್ಣದಾದರೂ, ಸೂರ್ಯ ಅದನ್ನು ಬೆಳಗಿಸುತ್ತಾನೆ (ಆಫ್ರಿಕ).
* ಹಳ್ಳಿಯ ಹಿರಿಯ ಹಳ್ಳಿಯ ಗಡಿದ್ವಾರ (ಘಾನ).
* ಹಾವನ್ನು ಸಾಕಿದರೆ, ನಿನಗೆ ನಿದ್ದೆ ಬಂದಾಗ ಅದು ಕಚ್ಚುತ್ತದೆ (ಟೋಗೋ).
  ಹೋಲಿಸಿ: 'ಹಾವಿಗೆ ಹಾಲೆರೆದರೆ ತನ್ನ ವಿಷ ಬಿಟ್ಟೀತೇ?'
* ಹಿರಿಯನೊಬ್ಬ ಸತ್ತಾಗ, ಪುಸ್ತಕ ಭಂಡಾರ ಸುಟ್ಟಂತೆ (ಇಒರಿಯನ್).
* ಹುಟ್ಟದ ಮಗುವಿಗೆ ಹೆಸರಿಡಬೇಡ (ಆಫ್ರಿಕ).
  ಹೋಲಿಸಿ: 'ಹುಟ್ಟದ ಮಗುವಿಗೆ ಪುಟ್ಟಪ್ಪ ಅಂತ ಹೆಸರಿಟ್ಟರಂತೆ.' 'ಕೂಸು ಹುಟ್ಟುವ ಮೊದಲು ಕುಲಾವಿ ಹೊಲಿದಂತೆ.'
* ಹುತ್ತದಿಂದ ಹಾವನ್ನು ಎಳೆಯಲು ಇನ್ನೊಬ್ಬನ ಕೈ ಉಪಯೋಗಿಸು (ಘಾನ)
* ಹುಲಿಯ ಬಾಲವನ್ನೆಳೆಯುವುದಕ್ಕಿಂತ ನಾಯಿಯ ತಲೆಯನ್ನು ಸವರುವುದು ಒಳಿತು (ನೈಜೀರಿಯ).
* ಹುಲ್ಲನ್ನು ತುಳಿಯದೇ ಪರ್ವತ ಹತ್ತಲು ಸಾಧ್ಯವೇ? (ಉಗಾಂಡ).
  ಹೋಲಿಸಿ: You cannot make an omelet without breaking eggs.
* ಹೂ ಬಿಡುವ ಮರದ ಸುತ್ತ ಸೊಳ್ಳೆಗಳ ಗುಂಪು (ಗಿನಿ).
* ಹೇಳಿದ್ದೇನು ಎಂದು ನೋಡು, ಹೇಳಿದ್ಯಾರು ಎಂದು ಕೇಳಬೇಡ (ಈಜಿಪ್ಟ್).
* ಹೊಟ್ಟೆ ಮುಂದೆ ಬಂದರೆ ಬಸಿರಾಗಿರಲೇಬೇಕು (ಮಸಾಯ್).
* ಹೊಟ್ಟೆ ಹಸಿದ ಹೆಂಗಸು, "ಮಕ್ಕಳು ತಿನ್ನಲಿ, ಬುತ್ತಿ ತಯಾರಿಸುತ್ತೇನೆ" ಎನ್ನುತ್ತಾಳೆ (ಅಶಾಂತಿ).

* ಹೊಸವಾರ್ತೆ ಇಲ್ಲದೆ ಸೂರ್ಯ ಮುಳುಗನು (~Xhosa ಖೋಸಾ, ಜಿಂಬಾಬ್ವೆ).
* ಹೋದ ವರ್ಷದ ಬೇಸಿಗೆಗಾಗಿ ಈಗ ಮನೆ ಕಟ್ಟುತ್ತೀಯಾ? (ಇಥಿಯೋಪಿಯ) ಹೋಲಿಸಿ: 'ಮನೆಗೆ ಬೆಂಕಿ ಹತ್ತಿದಾಗ ಬಾವಿ ತೋಡಲು ಹೋದಂತೆ.'

ಸಮಾರೋಪ–ಸಾರಾಂಶ

'ಕತ್ತಲೆಯ ಖಂಡ' ಎಂಬ (ತಪ್ಪಾದ) ಹೆಸರಿರುವ ಆಫ್ರಿಕ ಖಂಡದ ಗಾದೆಗಳನ್ನು ಈ ಲೇಖನಕ್ಕಾಗಿ ಹುಡುಕಿ ಬರೆಯುವಾಗ ಆ ಗಾದೆಗಳ ಆಳ ಮತ್ತು ವ್ಯಾಪ್ತಿಯನ್ನು ಓದಿ ನನಗೆ ಆಶ್ಚರ್ಯವಾಯಿತು. ಇತರ ಭಾಷೆಗಳ ಪ್ರಭಾವ ಇವುಗಳಲ್ಲಿ ಕಂಡುಬಂದರೂ, ಈ ಗಾದೆಗಳಲ್ಲೂ ಹಲವು ವಿಶಿಷ್ಟ ಗುಣ ಮತ್ತು ಉದ್ದೇಶಗಳನ್ನು ಗುರುತಿಸಬಹುದು. ನೈತಿಕ ಶಿಕ್ಷಣದ ಮೂಲಕ ಸಮಾಜೀಕರಣ, ಕೋಪದ ಪರಿಣಾಮ, ಪರಿಸರವನ್ನು ಕಾಪಾಡುವ ಅಗತ್ಯ, ಸಮಾಜದ ಮೌಲ್ಯ ವ್ಯವಸ್ಥೆ, ಮಹಿಳೆಯರಿಗೆ ಸಮಾಜ ಕೊಡಬೇಕಾದ ಗೌರವ, ಸಮಾಜ ಮತ್ತು ಕುಟುಂಬದಲ್ಲಿ ಮಕ್ಕಳ ಪ್ರಾಮುಖ್ಯತೆ, ಮತ್ತು ತೆಳುವಾದ ಹಾಸ್ಯಲೇಪಿತ ವ್ಯಾವಹಾರಿಕ ಜ್ಞಾನ (common sense) ಇತ್ಯಾದಿಗಳು ಗಮನಾರ್ಹ.

ಗಾದೆಗಳನ್ನು ಕಾವ್ಯದಂತೆ ಓದಿ ಆಸ್ವಾದಿಸಬೇಕು ಎಂಬುದು ನನ್ನ ಅಭಿಪ್ರಾಯ––ಆದ್ದರಿಂದ ಕೆಲವು ಗಾದೆಗಳಿಗೆ ಮಾತ್ರ ಒಂದೆರಡು ಸಾಲುಗಳ ವಿವರಣೆಗಳನ್ನು ಕೊಟ್ಟಿದ್ದೇನೆ. ಈ ಗಾದೆಗಳ ಪಟ್ಟಿ ನಿಮಗೆ ಸ್ವಾರಸ್ಯ ಎಂದೆನಿಸಿದರೆ, ಅಂತರ್ಜಾಲದ ಸಹಾಯದಿಂದ ಇದೇ ರೀತಿಯ ಅನೇಕ ದೇಶಗಳ ಗಾದೆಗಳನ್ನು ಓದುತ್ತೀರಿ ಎಂದು ನಂಬುತ್ತೇನೆ.

ಆಧಾರ

1. African Proverbs—300 Inspirational proverbs and quotes—Safari Junkie https://safarijunkie.com/culture/african-proverbs/
2. The Timeless Wisdom of African Sayings https://goldrestaurant.co.za/african-culture-and-tradition/12-african-proverbs-and-sayings-to-live-by/
3. He Night has Ears: African Proverbs. Ashley Bryan. Atheneum Books for Young Readers, New York, 1999.
4. Google: Images of African Proverbs.
5. ಟಿ.ವಿ. ವೆಂಕಟರಮಣಯ್ಯ. 'ಕನ್ನಡ ಗಾದೆಗಳ ಕೋಶ' (ದ. ರಾ. ಬೇಂದ್ರೆಯವರ ಮುನ್ನುಡಿ), ಪ್ರತಿಭಾ ಗ್ರಂಥಮಾಲೆ, ಸಮಾಜ ಪುಸ್ತಕಾಲಯ, ಧಾರವಾಡ, 1963.
6. ಕೆ. ಭೈರಪ್ಪ ಶೂಲಲಾಗದ ಗಾದೆಗಳು, ಸಿ.ಪಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, 1995.
7. ಎ. ಕೆ. ರಾಮಾನುಜನ್, 'ಗಾದೆಗಳು', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1955.
8. ಬಿ. ಬಿ. ಬಿರಾದರ, 'ಬೆತ್ತಲೆ ಗಾದೆಗಳು', ಪ್ರತಿಭಾ ಮುದ್ರಣ, ಧಾರವಾಡ, 1981.
9. ಹಂ. ಪ. ನಾಗರಾಜಯ್ಯ ಮತ್ತು ಹು. ಮ. ರಾಮಾರಾಧ್ಯ (ಸಂಪಾದಕರು). 'ಕನ್ನಡ ಗಾದೆಗಳ ಮಹಾಕೋಶ', (696 ಪುಟಗಳ ಗ್ರಂಥ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

❑

23

ನಾಲ್ಕು ಜನಪದ ಕತೆಗಳು

ಕಾವ್ಯಾ ಕಡಮೆ
ಬ್ರಿಡ್ಜ್‌ವಾಟರ್, ನ್ಯೂ ಜೆರ್ಸಿ

*

ಟಿಪ್ಪಣಿ

ಜನಮಾನಸದ ಒಟ್ಟು ಪ್ರಜ್ಞೆಯಿಂದ ಸ್ವಚ್ಛಂದವಾಗಿ ಅರಳಿದ ಜನಪದ ಸಾಹಿತ್ಯಕ್ಕೆ ಆ ನೆಲದ ಸತ್ವದ ಬಲವಿರುತ್ತದೆ. ಜನವಸತಿ ಕೇಂದ್ರವಾಗಿದ್ದ ಪ್ರಪಂಚದ ಯಾವುದೇ ಭೂ ಭಾಗವೂ, ಸಮುದ್ರಯಾನವೂ ಇದಕ್ಕೆ ಹೊರತಲ್ಲ. ಒಂದು ಹಿಡಿ ಮಣ್ಣಿನಿಂದ ಇಡೀ ಜೀವ ಸಂಕುಲವೇ ಅಂಕುರಿಸುವಂತೆ ಹೆಜ್ಜೆಯ ಗುರುತು ಬಿದ್ದಲ್ಲೆಲ್ಲ ಒಂದೊಂದು ಕತೆ ಹುಟ್ಟಿದೆ. ಆ ಕತೆಗಳ ಜಾಡು ಹಿಡಿದು ಹೊರಟಾಗ ನಮಗೆ ಗೋಚರಿಸುವುದು ಆ ಕಾಲದ ಕನಸುಗಳು, ನೋವು– ನಲಿವುಗಳು, ಅಪಮಾನ– ಅಸೂಯೆ– ಆಡಂಬರಗಳು. ನೂರಾರು ವರ್ಷ ಕಳೆದರೂ ನಮ್ಮ ಪಾಡನ್ನು ಈ ಕತೆಗಳು ಅನಾವರಣಗೊಳಿಸಬಲ್ಲವು. ಆ ಮೂಲಕ ಮನುಷ್ಯನ ಮೂಲ ಗುಣಗಳಾದ ದುಃಖ, ಏಕಾಂತ, ಸುಖ, ತಳಮಳಗಳಿಗೆ ಕನ್ನಡಿ ಹಿಡಿಯುತ್ತವೆ ಈ ಕಥನಗಳು. ಕನ್ನಡಿಯ ಚೌಕಟ್ಟು ಬೇರೆಯಾದರೇನು? ಅದರೊಳು ಕಾಣುವ ಬಿಂಬ ಒಂದೇ ತಾನೇ.

ಅಮೆಝಾನಿನ ದ್ವೀಪಗಳು

ಕೆರಿಬಿಯನ್ ಪ್ರಾಂತ್ಯದಲ್ಲಿ ಫೆಮಿನಿಯಾ ಅನ್ನುವ ದ್ವೀಪ ಇತ್ತು. ಅಲ್ಲಿ ವಾಸವಾಗಿರುವ ಹೆಣ್ಣುಗಳು ತಮ್ಮ ಎತ್ತರಕ್ಕೆ, ಯೌವನ ತುಂಬಿದ ಬಳುಕುವ ದೇಹಕ್ಕೆ ಹೆಸರಾದವರು, ಜೊತೆಗೆ ವೀರ ಮಹಿಳೆಯರು. ಈ ನಾಡನ್ನು ವಿವೇಕ ಮತ್ತು ಸೌಂದರ್ಯದ ಸಾಕಾರ ಮೂರ್ತಿಯಾದ ರಾಣಿಯೊಬ್ಬಳು ಆಳುತ್ತಿದ್ದಳು. ಈ ದ್ವೀಪ ಎತ್ತರದ ತಾಳೆ ಮರಗಳು ಮತ್ತು ವಿವಿಧ ಬಗೆಯ ಹಣ್ಣಿನ ಮರಗಳಿಂದ ಆವೃತವಾಗಿತ್ತು. ಹಗಲು ತಣ್ಣಗೆ, ರಾತ್ರಿ

ಬೆಚ್ಚಗೆ ಇರುವ ಈ ದ್ವೀಪದ ತುಂಬ ಚಿನ್ನದ ಬಣ್ಣದ ಮರಳನ್ನೂ, ಅಷ್ಟೇನೂ ಕಷ್ಟ ಪಡದೆಯೂ, ಚಿನ್ನ ಮತ್ತು ಬೆಲೆಬಾಳುವ ಮುತ್ತು, ರತ್ನಗಳನ್ನೂ ಕಾಣಬಹುದಾಗಿತ್ತು.

ವರ್ಷದಲ್ಲಿ ಒಂಬತ್ತು ತಿಂಗಳು ಗಂಡಸರು ಈ ದ್ವೀಪವನ್ನು ಪ್ರವೇಶಿಸಲು ಪ್ರಯತ್ನಿಸಿದರೆ ಅಲ್ಲಿನ ಹೆಂಗಸರು ಅವರನ್ನು ಹೊಡೆದು ಬಡಿದು ಓಡಿಸಿಬಿಡುತ್ತಿದ್ದರು. ಆದರೆ ಉಳಿದ ಮೂರು ತಿಂಗಳು ಮಾತ್ರ ಇಲ್ಲಿ ಗಂಡಸರಿಗೆ, ಮುಖ್ಯವಾಗಿ ಸಮುದ್ರ ಯಾತ್ರಿಕರಿಗೆ ಆಮಂತ್ರಣವಿರುತ್ತಿತ್ತು. ಈ ಮೂರು ತಿಂಗಳು ಎಲ್ಲ ದಿನನಿತ್ಯದ ಚಟುವಟಿಕೆಗಳಿಗೂ ರಜಾ. ಹಗಲು ರಾತ್ರಿಗಳೆಲ್ಲ ಹಬ್ಬದೌತಣ ಮತ್ತು ಕೂಟಗಳಲ್ಲಿ ಕಳೆದುಹೋಗುತ್ತಿದ್ದವು.

ಆದರೆ ಮೂರು ತಿಂಗಳ ಕೊನೆಗೆ ಗಂಡಸರು ಈ ದ್ವೀಪವನ್ನು ಬಿಟ್ಟು ಹೊರಡಲೇಬೇಕಿತ್ತು. ಬೆಲೆ ಬಾಳುವ ಉಡುಗೊರೆಗಳ ಜೊತೆಗೆ ಆ ವರ್ಷ ಮೀಸೆ ಬಲಿತ ಆ ದ್ವೀಪದ ಗಂಡುಮಕ್ಕಳನ್ನೂ ಯಾತ್ರಿಕರು ತಮ್ಮೊಂದಿಗೆ ಹೊರ ಜಗತ್ತಿಗೆ ಕರೆದುಕೊಂಡು ಹೋಗಬೇಕಿತ್ತು. ಮತ್ತದರ ಜೊತೆಗೆ ಜಗತ್ತಿನ ಅತ್ಯಂತ ಸುಂದರ ಹೆಂಗಸರ ಸಹವಾಸ ಮಾಡಿದ ನೆನಪುಗಳಂತೂ ಇದ್ದೇ ಇರುತ್ತಿದ್ದವಲ್ಲ!

(ಅನಾದಿ ಕಾಲದಿಂದಲೂ ಈ ದ್ವೀಪ ಇದೆಯೆಂದು ಮತ್ತು ಈ ಮಹಿಳೆಯರು ಇದ್ದಾರೆಂದೂ ಸಮುದ್ರ ವಿಹಾರಿಗಳು ನಂಬಿದ್ದಾರೆ. ಸಮುದ್ರ ಒದಗಿಸುವ ಏಕಾಕಿತನದಲ್ಲಿ, ಸುದೀರ್ಘ ಪ್ರಯಾಣಗಳಲ್ಲಿ ಉತ್ಸಾಹವನ್ನು ಉಳಿಸಿಕೊಳ್ಳಲು ಹಡಗಿನ ಪ್ರಯಾಣಿಕರು ಇಂಥ ಕತೆಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿರಬಹುದು. ಈ ಕತೆಯನ್ನು ಕೊಲಂಬಸ್ ಕೇಳಿದ್ದ ಮತ್ತು ನಂಬಿದ್ದ ಎಂಬುದು ಪ್ರತೀತಿ.)

ಮಾಯವಾದ ಅಟ್ಲಾಂಟಿಸ್ ಖಂಡ

ಯೂರೋಪ್ ಮತ್ತು ಆಫ್ರಿಕಾ ಖಂಡಗಳನ್ನು ಸ್ಟ್ರೇಟ್ಸ್ ಆಫ್ ಗಿಬ್ರಾಲ್ಟರ್ ಎಂಬ ಇಕ್ಕಟ್ಟಿನ ಜಲಮಾರ್ಗ ಬೇರ್ಪಡಿಸುತ್ತದೆ. ಸುವರ್ಣ ಯುಗದಲ್ಲಿ, ಈ ಜಾಗದ ಪಶ್ಚಿಮಕ್ಕೆ ಮುಖ ಮಾಡಿ ನಿಂತರೆ ಅಟ್ಲಾಂಟಿಸ್ ಖಂಡವನ್ನು ಕಾಣಬಹುದಿತ್ತು. ಏಷ್ಯಾ ಖಂಡಕ್ಕಿಂತ ದೊಡ್ಡದಾಗಿದ್ದ ಈ ದ್ವೀಪದ ಜನರು ತಮ್ಮ ಶಕ್ತಿ ಸಾಮರ್ಥ್ಯ, ಜ್ಞಾನ ಮತ್ತು ಕಲಾವಂತಿಕೆಗೆ ಹೆಸರಾಗಿದ್ದರು. ಇಲ್ಲಿನ ರಾಜರು ಸಮುದ್ರ ದೇವತೆಯಾದ ಪೊಸೈಡನ್‌ನ ವಂಶಸ್ತರು. ಈ ದ್ವೀಪದ ಉಗ್ರ ಮೃಗಗಳಿಗೆ ಬೃಹತ್ ಗಾತ್ರವಿತ್ತು. ಅಷ್ಟೇ ಅಲ್ಲದೇ ಇಲ್ಲಿ ವಾಸವಿದ್ದ ಮನುಷ್ಯರು ಕೂಡ ಯೂರೋಪಿನ ಸಾಮಾನ್ಯ ಜನರಿಗಿಂತಾ ಎರಡರಷ್ಟು ಎತ್ತರವನ್ನು ಮತ್ತು ದೀರ್ಘಾಯುಷ್ಯವನ್ನು ಹೊಂದಿದ್ದರು. ಅಲ್ಲಿನ ವಿಶಿಷ್ಟ ಜೀವನಕ್ರಮ ಮತ್ತು ನಗರಗಳ ವರ್ಚಸ್ಸಿಗೆ ಮಾರುಹೋಗಿ ದೇವತೆಗಳೂ ಈ ಖಂಡಕ್ಕೆ ಕಾಲಕಾಲಕ್ಕೆ ಪ್ರವಾಸ ಬರುತ್ತಿದ್ದರಂತೆ. ಯೂರೋಪಿನಲ್ಲಿ ಕಬ್ಬಿಣ ಉಪಯೋಗಿಸಿದ ಹಾಗೆ ಅಟ್ಲಾಂಟಿಸ್‌ನಲ್ಲಿ ಚಿನ್ನ ಬೆಳ್ಳಿಗಳನ್ನು ಉಪಯೋಗಿಸುತ್ತಿದ್ದರಂತೆ. ಇಲ್ಲಿನ ಸೇನಾ ಸಾಮರ್ಥ್ಯ, ವಾಣಿಜ್ಯಕ್ರಮ ಮತ್ತು ಸಂಸ್ಕೃತಿ ಎಷ್ಟು ಶಕ್ತಿಶಾಲಿಯಾಗಿತ್ತು ಅಂದರೆ ಉತ್ತರ ಆಫ್ರಿಕಾ ಮತ್ತು ಪೂರ್ವ ಯೂರೋಪ್‌ವರೆಗೂ ಅದರ ಪ್ರಾಬಲ್ಯವಿತ್ತು.

ಆದರೆ ಕೊನೆಗೊಮ್ಮೆ ಅಟ್ಲಾಂಟಿಸ್ ಗ್ರೀಸ್ ದೇಶವನ್ನು ಆಕ್ರಮಣ ಮಾಡಲು ಸಿದ್ಧವಾಯಿತು. ಪ್ರಬಲ ಸೈನ್ಯವನ್ನು ಹೊಂದಿದ್ದ ಗ್ರೀಸ್ ದೇಶ ನಂತರದ ವರ್ಷಗಳಲ್ಲಿ ಸಲಾಮೀಸ್ ಮತ್ತು ಮ್ಯಾರಥಾನ್‌ಗಳಲ್ಲಿ ಮಾಡಿದಂತೆ ದಾಳಿ ಮಾಡಿದವರನ್ನು ಸೋಲಿಸಿದ್ದಲ್ಲದೇ ಈಗಾಗಲೇ ಅಟ್ಲಾಂಟಿಸ್ ದೇಶದ ಅಧೀನದಲ್ಲಿದ್ದ ಇತರ ದೇಶಗಳನ್ನೂ ಸ್ವತಂತ್ರವಾಗಿಸಿತು.

ಈ ಸೇನಾ ವೈಫಲ್ಯದ ಜೊತೆಗೆ ಇನ್ನೊಂದು ದುರದೃಷ್ಟವೂ ಅಟ್ಲಾಂಟಿಸ್ ದೇಶದ ಬೆನ್ನು ಬಿದ್ದಿತ್ತು. ಆ ವರ್ಷ ಅತಿವೃಷ್ಟಿಯೂ ಭೂಕಂಪನವೂ ಒಟ್ಟಿಗೇ ಬಂದು ಅಟ್ಲಾಂಟಿಸ್ ಖಂಡ ಅಟ್ಲಾಂಟಿಕ್ ಮಹಾಸಾಗರದಲ್ಲಿ ಮುಳುಗಿಹೋಯಿತು. ತೂಕಡಿಸಿದಂತೆ ಕಾಣುತ್ತ, ಇಂಚಿಂಚೇ ಮುಳುಗುತ್ತಿದ್ದ ಅಟ್ಲಾಂಟಿಸ್ ತನ್ನ ಜೊತೆಗೆ ಸಂಪದ್ಭರಿತ ನೆಲವನ್ನೂ, ಮಹಾನ್ ಪರ್ವತಗಳನ್ನೂ, ಅರಣ್ಯ ಸಂಪತ್ತನ್ನೂ, ಪ್ರಸಿದ್ಧ ಪಟ್ಟಣಗಳನ್ನೂ ಸಮುದ್ರದಲ್ಲಿ ಮರೆಮಾಚಿಬಿಟ್ಟಿತು. ಜೊತೆಗೆ ಆ ಪ್ರದೇಶದಲ್ಲಿ ವಾಸವಾಗಿದ್ದ ಅರವತ್ನಾಲ್ಕು ಮಿಲಿಯನ್ ಜನರೂ ಮುಳುಗಿಹೋದರು.

ಈ ದುರಂತ ಸಂಭವಿಸಿದ ಬಹು ಕಾಲದವರೆಗೂ ಅಟ್ಲಾಂಟಿಕ್ ಮಹಾಸಾಗರ ಹರ್ಕ್ಯುಲಿಸ್ ಸ್ತಂಭಗಳ ಆಚೆಗೆ ಭೇದಿಸಲು ಅಸಾಧ್ಯವಾಗಿತ್ತು ಎಂಬ ಕುರಿತಾದ ಕತೆಗಳು ಚಾಲ್ತಿಯಲ್ಲಿವೆ. ಏಕೆಂದರೆ ಮುಳುಗಿದ ಅಟ್ಲಾಂಟಿಸ್ ಖಂಡದ ಎತ್ತರದ ಪರ್ವತಗಳು ನೀರಿನ ಮಟ್ಟಕ್ಕಿಂತ ಚೂರೇ ಕೆಳಗಿದ್ದವಂತೆ. ಆದರೆ ಆಶ್ಚರ್ಯಕರ ರೀತಿಯಲ್ಲಿ ಉಳಿದ ಅಟ್ಲಾಂಟಿಸ್ ಖಂಡದ ಕೆಲ ಪ್ರದೇಶಗಳನ್ನು ಅಟ್ಲಾಂಟಿಕ್ ದ್ವೀಪಗಳ ಹೆಸರಿನಲ್ಲಿ ಈಗಲೂ ನಾವು ಕಾಣಬಹುದು.

(ಅಮೆರಿಕ ಮತ್ತು ಆಫ್ರಿಕಾ ಖಂಡಗಳ ನಡುವೆ ಅಟ್ಲಾಂಟಿಕ್ ಮಹಾಸಾಗರದಲ್ಲಿ ಹಿಂದೊಮ್ಮೆ ಅಟ್ಲಾಂಟಿಸ್ ಎಂಬ ಖಂಡ ಇತ್ತು ಎನ್ನುವುದು ಒಂದು ಪ್ರಸಿದ್ಧ ದಂತಕತೆ. ಹತ್ತೊಂಬತ್ತನೆಯ ಶತಮಾನದ ಆದಿಯವರೆಗೂ ಕೆಲವು ನಕಾಶೆಗಳಲ್ಲಿ ಅಟ್ಲಾಂಟಿಸ್ ದ್ವೀಪದ ಹೆಸರನ್ನು ಉಳಿಸಿಕೊಳ್ಳಲಾಗಿತ್ತು. ಈ ಖಂಡದ ಇರುವು ಸತ್ಯ ಎಂದು ವಾದಿಸಲು ಸಹಾಯವಾಗುವ ಹಾಗೆ ಆ ಕುರಿತ ಸಾಹಿತ್ಯವೂ ನಿರ್ಮಾಣವಾಗಿತ್ತು. ಈ ಮೇಲಿನ ಕತೆಯನ್ನು ಪ್ಲೇಟೊ ಮತ್ತು ರಾಬರ್ಟ್ ಗ್ರೇವ್ಸ್‌ನ ಬರಹಗಳ ಮೇಲೆ ಆಧರಿಸಲಾಗಿದೆ.)

ಮ್ಯಾಡಾಕ್

ಇಂಗ್ಲೆಂಡಿನ ವೇಲ್ಸ್ ಪ್ರಾಂತ್ಯದ ಕಡೆಯ ಸ್ವತಂತ್ರ ರಾಜಕುಮಾರ ಅವನ್ ಗ್ವೆನ್ನಡನ ಕೊನೆಯ ಮಗ ಮ್ಯಾಡಾಕ್. ಗ್ವೆನ್ನಡ್ ತೀರಿಹೋದಾಗ ಅವನ ಇನ್ನಿಬ್ಬರು ಮಕ್ಕಳಾದ ಹೈವೆಲ್ ಮತ್ತು ಡಾವಿಸ್‌ರಿಗೆ ಅರಸನ ಪಟ್ಟದ ಸಲುವಾಗಿ ಕಾಳಗ ಆರಂಭವಾಯಿತು. ಅಣ್ಣಂದಿರ ಈ ಅಧಿಕಾರ ಲಾಲಸೆಯಿಂದಾಗಿ ಮ್ಯಾಡಾಕ್‌ನಿಗೆ ರೋಸಿಹೋಯಿತು. ಎಲ್ಲಿಯಾದರೂ ಹೋಗಿ ಬದುಕಿಕೊಂಡೇನು, ಇಲ್ಲಿ ಮಾತ್ರ ಇರಲಾರೆ ಎಂದು ಮ್ಯಾಡಾಕ್ ಆ ಪ್ರಾಂತ್ಯವನ್ನು ಬಿಟ್ಟು ಹೊರಟ. ಮೂರು ಹಡಗುಗಳ ತುಂಬ ತನ್ನ ಸಹಚರಿಗಳನ್ನು

ತುಂಬಿಕೊಂಡು ಪಶ್ಚಿಮದತ್ತ ತನ್ನ ಪ್ರಯಾಣ ಆರಂಭಿಸಿದ. ಹೀಗೆ ಅವನು ಅಮೆರಿಕವೆಂಬ ಹೊಸ ಜಗತ್ತನ್ನು ಕಂಡುಕೊಂಡಿದ್ದು.

ಮ್ಯಾಡಾಕ್ ಅಮೆರಿಕವನ್ನು ನೋಡಿ ಎಂಥ ಸಮ್ಮೋಹನಕ್ಕೊಳಗಾದನೆಂದರೆ ತನ್ನ ಸಹಚರರನ್ನು ಅಲ್ಲಿಯೇ ಬಿಟ್ಟು ಪುನಃ ವೇಲ್ಸ್ ಪ್ರಾಂತ್ಯಕ್ಕೆ ತೆರಳಿ ಮೂರು ಸಾವಿರ ಜನರನ್ನು ಕರೆತಂದ. ಈ ನವ ಸ್ವರ್ಗಕ್ಕೆ ಲಗ್ಗೆಯಿಡಲು ಹತ್ತು ಹಡಗುಗಳ ಪಡೆ ಪ್ರಯಾಣ ನಡೆಸಿತು. ಮ್ಯಾಡಾಕ್ ಕರೆತಂದ ಜನ ಸಾಹಸಪ್ರಿಯರಾಗಿದ್ದ ಕಾರಣ ಅವನ ಪಾಳೆಯ ಈ ಹೊಸ ಜಗತ್ತಿನಲ್ಲಿ ಸಮೃದ್ಧಿಯನ್ನು ಕಂಡಿತು. ಅತಿ ಬೇಗನೆ ಅವರು ಗುಂಪುಗಳಲ್ಲಿ ಚದುರಿಹೋಗಿ ಹೊಸ ಹೊಸ ಜಾಗಗಳನ್ನೂ ವಶಪಡಿಸಿಕೊಳ್ಳತೊಡಗಿದರು. ಹೀಗೆಯೇ ಹಬ್ಬುತ್ತ ಮ್ಯಾಡಾಕ್‌ನ ಜನ ಇಡೀ ಅಮೆರಿಕಾ ಖಂಡದಲ್ಲಿ ಹಂಚಿಹೋಗಿದ್ದಲ್ಲದೇ ಮೆಕ್ಸಿಕೋ ದೇಶವನ್ನೂ ತಲುಪಿ, ಹೊಸ ದಾರಿಗಳನ್ನು ಶೋಧಿಸುತ್ತ, ಕೋಟೆಗಳನ್ನು ಕಟ್ಟುತ್ತ, ಮಿಸಿಸ್ಸಿಪ್ಪಿ ಮುಂತಾದ ಬೃಹತ್ ನದಿಗಳನ್ನು ಸಣ್ಣ ದೋಣಿಗಳಲ್ಲಿ ದಾಟುತ್ತ, ದಾರಿಯಲ್ಲಿ ಸಿಗುವ ಅಲ್ಲಿನ ಸ್ನೇಹಪರ ಮೂಲ ನಿವಾಸಿಗಳಿಗೆ ತಮ್ಮ ಭಾಷೆಯನ್ನೂ, ಧರ್ಮವನ್ನೂ, ತಮ್ಮ ಕೆಲಸದ ವೈಖರಿಯನ್ನೂ ಕಲಿಸುತ್ತ ಮುಂದೆ ಸಾಗುತ್ತಿದ್ದರು.

ಆದರೆ ಎಲ್ಲ ಮೂಲ ನಿವಾಸಿಗಳೂ ಸ್ನೇಹಪರರೇ ಆಗಿರಲಿಲ್ಲವಲ್ಲ. ಅದರಲ್ಲಿ ಕೆಲವು ಗುಂಪುಗಳು ಸೇರಿಕೊಂಡು ಅಲ್ಲಲ್ಲಿ ಕಾಣಸಿಗುತ್ತಿದ್ದ ಈ ಬಿಳಿಯ ವಲಸಿಗರಿಗೆ ಬುದ್ಧಿ ಕಲಿಸಲು ಪಣ ತೊಟ್ಟವು. ಕೊನೆಗೊಮ್ಮೆ ಎರಡೂ ಪಡೆಗಳ ನಡುವೆ ಭೀಕರ ಕಾಳಗವೇ ನಡೆಯಿತು. ಈ ಕಾಳಗದಲ್ಲಿ ಮ್ಯಾಡಾಕ್‌ನ ಬಹುಪಾಲು ಜನ ಹತರಾದರು. ಈ ಯುದ್ಧದ ನಂತರ ಸರಿಯಾದ ಮಾರ್ಗದರ್ಶನ ಮತ್ತು ಮುಖಂಡತ್ವವಿಲ್ಲದೇ ಉಳಿದವರು ವಿವಿಧೆಡೆಗಳಲ್ಲಿ ಹಂಚಿ ಹೋದರು. ಸಮಯ ಕಳೆದಂತೆ ಇವರು ಕಾಡು ಜನರಂತೆಯೇ ಆಗಿಹೋದರು. ಕೊನೆಕೊನೆಗೆ ತಾವು ಯೂರೋಪಿನಿಂದ ಬಂದವರು ಎಂಬ ಅಸ್ಮಿತೆಯನ್ನೇ ಬಿಟ್ಟುಕೊಟ್ಟು ಸುತ್ತಣ ಮೂಲನಿವಾಸಿಗಳಲ್ಲೇ ಒಂದಾಗಿಹೋದರು. ಅಮೆರಿಕದ ಮೂಲನಿವಾಸಿಗಳಿಗಿಂತ ಭಿನ್ನವಾಗಿ ಅವರಲ್ಲಿ ಉಳಿದಿದ್ದ ಎರಡೇ ಅಪವಾದಗಳೆಂದರೆ, ಅವರ ಬಿಳಿ ಚರ್ಮ ಮತ್ತು ವೆಲ್ಶ್ ಭಾಷೆ.

ಹಲವು ವರ್ಷಗಳ ನಂತರ ವರ್ಜಿನಿಯಾದಿಂದ ದಕ್ಷಿಣ ಕ್ಯಾರೊಲಿನಾ ರಾಜ್ಯಕ್ಕೆ ಪ್ರಯಾಣ ಬೆಳೆಸುತ್ತಿದ್ದ ಪಾದ್ರಿ ಮಾರ್ಗನ್ ಜೋನ್ಸ್ ಕೆಲವು ಇಂಡಿಯನ್ನರ ಕೆಂಗಣ್ಣಿಗೆ ಗುರಿಯಾದ. ಇನ್ನೇನು ಸಾಯಲು ತಯಾರಾಗುವಂತೆ ಅವನಿಗೆ ಸೂಚಿಸಲಾಯಿತು. ಸಾಯುತ್ತೇನೆಂಬ ಭಯದಲ್ಲಿ ಜೋನ್ಸ್ ತನ್ನ ತಾಯಿಭಾಷೆಯಾದ ವೆಲ್ಶ್‌ನಲ್ಲಿ ಪ್ರಾರ್ಥನೆಗೈಯ್ಯುತ್ತ ಏನೇನನ್ನೋ ಬಡಬಡಿಸಲು ಶುರು ಮಾಡಿದ. ಅವನು ದಿಗ್ಭ್ರಮೆಗೊಳ-ಗಾಗುವಂತೆ ಮೂಲನಿವಾಸಿಗಳ ಗುಂಪಿನಲ್ಲಿ ಒಬ್ಬ ಆ ಪಾದ್ರಿಯನ್ನು ವೆಲ್ಶ್ ಭಾಷೆಯಲ್ಲಿಯೇ ಸಂತೈಸಿದ. ಹಾಗೆಯೇ ಪಾದ್ರಿ ಜೋನ್ಸ್‌ನನ್ನೂ ಬಿಡುಗಡೆಗೊಳಿಸಲಾಯಿತು. ನಂತರ ಜೋನ್ಸ್ ಆ ಇಂಡಿಯನ್ ಗುಂಪಿನ ಜೊತೆಗೇ ನಾಲ್ಕು ತಿಂಗಳುಗಳ ಕಾಲ ಇದ್ದು ಅವರನ್ನು ತನ್ನ ವೆಲ್ಶ್ ಭಾಷೆಯ ಧರ್ಮೋಪದೇಶದಿಂದ ಮತಾಂತರಿಸಲು ಪ್ರಯತ್ನಿಸಿದ.

(ವೆಲ್ಶ್ ಭಾಷೆಯಲ್ಲಿ ಪ್ರಚಲಿತವಿರುವ ದಂತಕತೆಯ ಪ್ರಕಾರ ಕೊಲಂಬಸ್ ಕಂಡುಹಿಡಿಯುವ ಮುನ್ನೂರು ವರ್ಷಗಳ ಮೊದಲೇ ಅಮೆರಿಕಕ್ಕೆ ಯೂರೋಪಿಯನ್ನರು ವಲಸೆ ಹೋಗಿದ್ದರು. ಜಾರ್ಜ್ ರಾಜರ್ಸ್ ಕ್ಲಾರ್ಕ್, ಡೇನಿಯಲ್ ಬೂನ್ ಮುಂತಾದ ಪ್ರಥಮ ವಲಸಿಗರು ಮೂಲನಿವಾಸಿಗಳ ಪಂಗಡಗಳಲ್ಲಿ ಕೆಲವು ಬಿಳಿಯರನ್ನು ಗುರುತಿಸಿದ್ದ-ರಂತೆ. ಜೊತೆಗೆ ಅವರ ಬಳಿ ವೆಲ್ಶ್ ಜನರು ಉಪಯೋಗಿಸುತ್ತಿದ್ದ ಅಪರೂಪದ ತೆಪ್ಪಗಳಿದ್ದವು ಎಂದು ಟಿಪ್ಪಣಿ ಮಾಡಿಕೊಂಡಿದ್ದಾರೆ. ಇತಿಹಾಸಕಾರರು ಶಾವನಿ ಮತ್ತು ಟಸ್ಕಾರೋರಾ ಮೂಲನಿವಾಸಿ ಪಂಗಡಗಳ ಭಾಷೆಯಲ್ಲಿ ವೆಲ್ಶ್ ಭಾಷೆಯ ಶಬ್ದಗಳನ್ನು ಮತ್ತು ನುಡಿಗಟ್ಟುಗಳನ್ನು ಗುರುತಿಸಿದ್ದಾರೆ. ಅಲ್ಲದೇ ಹದಿನೇಳನೆಯ ಶತಮಾನದ ಪಾದ್ರಿ ರೆವರೆಂಡ್ ಮಾರ್ಗನ್ ಜೋನ್ಸ್ ಹೇಳಿದ ಈ ವಿಚಿತ್ರ ಕತೆಯೂ ಮ್ಯಾಡಾಕ್‌ನ ಕುರಿತಾದ ಅನುಮಾನಗಳನ್ನು ಬಲಪಡಿಸುತ್ತವೆ.)

ಕೊರೊನಾಡೊ ಮತ್ತು ಇಂಡಿಯನ್ ಮಾರ್ಗದರ್ಶಿ

1541ರ ವಸಂತ ಋತುವಿನ ಒಂದು ಮುಂಜಾನೆ ನ್ಯೂಮೆಕ್ಸಿಕೋದ ಪೆಕೋಸ್ ಪ್ರಾಂತ್ಯದ ಮೂಲ ನಿವಾಸಿ ಇಂಡಿಯನ್ನರಿಗೆ ಒಂದು ಆಶ್ಚರ್ಯ ಕಾದಿತ್ತು. ಇಡೀ ನಾಡಿನಲ್ಲೇ ಅತಿ ಪ್ರಬಲ ಸೇನೆಯನ್ನುಳ್ಳ ಕೊರೊನಾಡೊ ಎಂಬ ವೀರ ತನ್ನ ಸಹಚರರೊಡನೆ ಧಾವಿಸಿದ್ದ. ಅವನ ಸೇನೆಯಲ್ಲಿ ಎದೆಗವಚವನ್ನು ತೊಟ್ಟ ಸುಮಾರು ಮುನ್ನೂರು ಸ್ಪ್ಯಾನಿಷ್ ವೀರರಿದ್ದರು. ಜೊತೆಗೆ ಸುಮಾರು ಸಾವಿರ ಮೆಕ್ಸಿಕನ್ ಸೈನಿಕರೂ ಇದ್ದರು. ಕೊರೊನಾಡೊ ಕೂಡ ಶ್ರೇಷ್ಠ ಲೋಹದಿಂದ ಕಲಾತ್ಮಕವಾಗಿ ಕುಸುರಿ ಕೆತ್ತಿದ ಎದೆಗವಚವನ್ನು ತೊಟ್ಟಿದ್ದ.

ಈ ಸ್ಪ್ಯಾನಿಷ್ ವೀರರು ಚಿನ್ನ ತುಂಬಿದ ಸಂಪದ್ಭರಿತ ಪಟ್ಟಣಗಳ ತಲಾಶಿನಲ್ಲಿ ಉತ್ತರ ದಿಕ್ಕಿನ ಈ ನ್ಯೂಮೆಕ್ಸಿಕೋ ಪ್ರಾಂತ್ಯಕ್ಕೆ ಬಂದಿದ್ದರು. ಆದರೆ ಇಲ್ಲಿಯತನಕ ಅವರಿಗೆ ನಿರಾಸೆಯೇ ಕಾದಿತ್ತು. ಆದರೂ ಕೆಲ ಮೂಲನಿವಾಸಿಗಳಿಂದ ಈಶಾನ್ಯ ದಿಕ್ಕಿನ ಪಟ್ಟಣಗಳಲ್ಲಿ ಸಿಗಬಹುದಾದ ಸಿರಿಯ ಬಗ್ಗೆ ಕತೆಗಳನ್ನು ಕೇಳಿದಾಗ ಅವರಲ್ಲಿ ಆಶಾವಾದ ಜಾಗೃತವಾಯಿತು.

ಕೊರೊನಾಡೊ ಕೇಳಿದ ಅತ್ಯುತ್ತಮ ಕತೆಗಳನ್ನು ಹೇಳಿದವನು ಪೆಕೋಸ್‌ನ ಒಬ್ಬ ಗುಲಾಮ. ಈಶಾನ್ಯ ದಿಕ್ಕಿನಲ್ಲಿರುವ ಗ್ರಾನ್ ಕ್ವಿವಿರಾ ಪ್ರಾಂತ್ಯ ಇಡೀ ಜಗತ್ತಿನಲ್ಲಿಯೇ ಶ್ರೀಮಂತ ನಗರ ಎಂಬುದಾಗಿ ಅವನು ಹೇಳಿದ್ದ. ನಿನಗೆ ಹೇಗೆ ಗೊತ್ತು ಎಂದು ಕೇಳಿದರೆ ತನ್ನನ್ನು ಅಲ್ಲಿಂದಲೇ ಕದ್ದು ತಂದು ಇಲ್ಲಿ ಗುಲಾಮನನ್ನಾಗಿ ಇಟ್ಟುಕೊಂಡಿದ್ದಾರೆ ಎಂದ. ಈ ಕತೆಗಳು ಅಲಾವುದ್ದೀನನ ಕತೆಗಳನ್ನೂ ನಾಚಿಸುವಷ್ಟು ಆಕರ್ಷಕವಾಗಿದ್ದವು. ಅವನ ಮಾತಿನ ವೈಖರಿಗೆ ಸ್ಪ್ಯಾನಿಯಾರ್ಡ್‌ಗಳು ಆ ಗುಲಾಮನನ್ನು 'ಟರ್ಕಿ' ಎಂದು ಕರೆದರು. ಕೆಲವು ಮೂಲನಿವಾಸಿಗಳು ಟರ್ಕಿಯ ಅತಿರಂಜಿತ ಕತೆಗಳನ್ನು ಪರಿಪೂರ್ಣವಾಗಿ ನಂಬಬಾರದೆಂದು ಕೊರೊನಾಡೊನನ್ನು ಎಚ್ಚರಿಸಿದರು. ಆದರೆ ನಂಬುವ ಆಸೆಯಿಂದಲೇ ಕೊರೊನಾಡೊ ಈ ಕತೆಗಳನ್ನು ಕೇಳುತ್ತಿದ್ದ ಎಂದು ಆ ಮೂಲನಿವಾಸಿಗಳಿಗೆ ಹೇಗೆ ಹೊಳೆಯಬೇಕು!

ಈ ನಗರವನ್ನು ಹುಡುಕಲು ಕೊರೊನಾಡೊನ ಜೊತೆಗೆ ಹತ್ತಾರು ಮಾರ್ಗದರ್ಶಕರನ್ನು ಮತ್ತು ದುಭಾಷಿಗಳನ್ನು ಪೆಕೋಸ್‌ನ ಇಂಡಿಯನ್ನರು ಕಳುಹಿಸಿಕೊಟ್ಟರು. ಜೊತೆಗೆ ಕೊರೊನಾಡೋನಿಗೆ ಕತೆ ಹೇಳಿ ಆಪ್ತನಾಗಿದ್ದ ಟರ್ಕಿಯನ್ನೂ ಉಚಿತವಾಗಿ ಕಳಿಸಿದರು. ಆ ಮೂಲಕ ಅವರು ಬೇರೆಯದೇ ಒಂದು ಸಂಚು ರೂಪಿಸಿದ್ದರು. ಸಂಪದ್ಭರಿತ ನಗರದ ಆಮಿಷ ತೋರಿಸಿ ಟರ್ಕಿ ಈ ಸ್ಪ್ಯಾನಿಯಾರ್ಡ್‌ಗಳನ್ನು ನೀರು ಆಹಾರ ಸಿಗದ ಮರುಭೂಮಿಗೆ ಕರೆದೊಯ್ದು ಅಲ್ಲೇ ಅವರನ್ನು ಸಾಯಲು ಬಿಟ್ಟು ಬಂದರೆ ತಮಗೆ ಅವರ ಕಾಟ ತಪ್ಪುತ್ತದೆ ಎನ್ನುವುದು ಇಂಡಿಯನ್ನರ ಉಪಾಯವಾಗಿತ್ತು.

ಟರ್ಕಿಗೂ ಅವನದೇ ಒಳ ಸಂಚುಗಳಿದ್ದವು. ಕೊರೊನಾಡೊನನ್ನು ಮೊದಲ ಬಾರಿ ನೋಡಿದಾಗಿನಿಂದ ಅವನ ಅಪರೂಪದ ಎದೆಗವಚಕ್ಕೆ ಟರ್ಕಿ ಮಾರುಹೋಗಿದ್ದ. ಕೊರೊನಾಡೊ ಮರುಭೂಮಿಯಲ್ಲಿ ಸತ್ತಾಗ ಅವನ ಈ ಎದೆಗವಚವನ್ನು ವಶಪಡಿಸಿಕೊಳ್ಳಬೇಕು ಎನ್ನುವುದು ಟರ್ಕಿಯ ಮಹದಾಸೆಯಾಗಿತ್ತು. ಈ ಪುಟ್ಟ ಲೋಹದ ಮನೆಯೊಳಗೆ ಅಡಗಿಕೊಂಡು ಎಲ್ಲಿ ಬೇಕಾದರೂ ಹೋಗಬಹುದಲ್ಲ, ಇಂಡಿಯನ್ನರ ವಿಧವಿಧದ ಆಯುಧಗಳ ಬಾಣಗಳಿಂದ ಸುಲಭವಾಗಿ ಪಾರಾಗಬಹುದಲ್ಲ ಎಂದು ಕನಸು ಕಂಡಿದ್ದ.

ಈ ಗುಂಪು ಪೆಕೋಸ್ ಪ್ರಾಂತ್ಯವನ್ನು ಬಿಟ್ಟಾಗಿನಿಂದ ಟರ್ಕಿ ಕೊರೊನಾಡೊನ ಪಕ್ಕಪಕ್ಕವೇ ನಡೆಯುತ್ತ ಗ್ರಾನ್ ಕ್ವಿವಿರಾ ಪಟ್ಟಣವನ್ನು ತನ್ನ ಕಲ್ಪನೆಗಳು ಹರಿದಂತೆ ಚಿತ್ರಿಸುತ್ತ ಸಾಗುತ್ತಿದ್ದ. ಆದರೆ ಅವನಿಗೂ ಕೆಲವೊಮ್ಮೆ ಸುಸ್ತಾಗಿ ಕುಳಿತುಬಿಡುತ್ತಿದ್ದ. ಆಗ ಕೊರೊನಾಡೊನೇ ಟರ್ಕಿಗೆ ಕತೆಗಳನ್ನು ಮುಂದುವರೆಸಲು ಪ್ರೋತ್ಸಾಹಿಸುತ್ತಿದ್ದ. ಟರ್ಕಿಗೆ ಅಂಥ ಉತ್ತೇಜನ ಸಿಕ್ಕಿದರೆ ಕೇಳಬೇಕೇ? ಮತ್ತೆ ತನ್ನ ಎಂದಿನ ಶೈಲಿಯಲ್ಲಿ ಗ್ರಾನ್ ಕ್ವಿವಿರಾದ ಎತ್ತರೆತ್ತರದ ಬಂಗಾರದ ಮಹಲುಗಳನ್ನೂ, ಮುತ್ತುಗಳಿಂದ ಅಲಂಕೃತವಾದ ರಸ್ತೆಗಳನ್ನೂ ವರ್ಣಿಸುತ್ತಿದ್ದ. ಅವನ ಒಂದು ಕತೆಯ ಪ್ರಕಾರ ಗ್ರಾನ್ ಕ್ವಿವಿರಾದಲ್ಲಿ ಚಿನ್ನ ಎಷ್ಟು ಅಗ್ಗವಾಗಿತ್ತೆಂದರೆ ಬಡಜನರು ಮಾತ್ರ ಚಿನ್ನದ ತಾಟಿನಲ್ಲಿ ಊಟ ಮಾಡುತ್ತಿದ್ದರು. ಯಾರಾದರೂ ಚಿನ್ನದ ಆಭರಣಗಳನ್ನು ಧರಿಸಿದರೆ ಅವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಆ ನಗರದ ರಾಜ ಅವನ ಅರಮನೆಯಲ್ಲಿ ತಂಬಾಕು ಉಗಿಯುವ ಪೀಕುದಾನಿಗೆ ಮಾತ್ರ ಚಿನ್ನವನ್ನು ಉಪಯೋಗಿಸುತ್ತಿದ್ದ. ಈ ಕತೆಗಳನ್ನೆಲ್ಲ ಕೇಳುತ್ತ ಕೊರೊನಾಡೊ ಇನ್ನೂ ಉತ್ಸಾಹದಿಂದ ಹೆಜ್ಜೆ ಹಾಕುತ್ತಿದ್ದ. ಟರ್ಕಿಗೆ ಮಾತ್ರ ಯಾವಾಗಲೂ ಕೊರೊನಾಡೊನ ಆ ಕಲಾತ್ಮಕ ಎದೆಗವಚದ ಮೇಲೆಯೇ ಕಣ್ಣು. ಇಂಥ ಐಸಿರಿಯನ್ನು ಎದೆಯ ಮೇಲಿಟ್ಟುಕೊಂಡವರಿಗೆ ಮತ್ತ್ಯಾವುದೋ ಸಿರಿಯ ಆಕಾಂಕ್ಷೆಯಾದರೂ ಯಾಕಿರಬೇಕು ಎಂಬುದು ಟರ್ಕಿಯ ವಾದವಾಗಿತ್ತು.

ಆದರೆ ಟರ್ಕಿಯ ಮಹದಾಸೆಯೆಲ್ಲ ಮಣ್ಣುಪಾಲಾಗುವ ಸಮಯ ಬಂದೇ ಬಿಟ್ಟಿತು. ಆ ವರ್ಷ ಸೊಗಸಾಗಿ ಮಳೆ ಬಿದ್ದು ಒಣ ಭೂಮಿಯಲ್ಲೂ ಕೊರೊನಾಡೊ ಮತ್ತವನ ಸಂಗಡಿಗರಿಗೆ ಕುಡಿಯಲು ಸಾಕಷ್ಟು ನೀರು ಸಿಕ್ಕಿತು. ಆ ವರ್ಷ ವಲಸೆಯ ಎಮ್ಮೆಗಳು

ಅಪರೂಪಕ್ಕೆ ದಕ್ಷಿಣಕ್ಕೆ ಪ್ರಯಾಣ ಮಾಡಿಬಿಟ್ಟಿದ್ದವು. ಅವುಗಳ ಮಾಂಸ ಅವರ ಉಳಿವಿಗೆ ಸಾಕಾಯಿತು. ಅಂತೂ ಜೀವ ಉಳಿಸಿಕೊಳ್ಳುವುದು ಅವರಿಗೆ ಕಷ್ಟವಾಗಲಿಲ್ಲ.

ಉತ್ತರದ ಆರ್ಕನ್ಸಾ ನದಿ ಬರುವತನಕವೂ ಕೊರೊನಾಡೊ ಮತ್ತವನ ಸಂಗಡಿಗರು ಟರ್ಕಿಯ ಜೊತೆಗೆ ಸಂಚರಿಸುತ್ತಲೇ ಇದ್ದರು. ಆ ನದಿಯನ್ನು ದಾಟಿ ದಂಡೆಯ ಗುಂಟ ಪೂರ್ವ ದಿಕ್ಕಿಗೆ ಬಹು ದೂರ ನಡೆದರು. ದಾರಿಯಲ್ಲಿ ಸಿಗುತ್ತಿದ್ದ ಇಂಡಿಯನ್‌ರನ್ನು ಗ್ರಾನ್ ಕ್ವಿವಿರಾದ ಬಗ್ಗೆ ಕೇಳುತ್ತಲೇ ಸಾಗುತ್ತಿದ್ದರು.

ಕೊನೆಗೆ, ಐದು ತಿಂಗಳ ಪ್ರಯಾಸದಾಯಕ ಯಾನದ ನಂತರ ಕೊರೊನಾಡೊ ಮತ್ತು ಸಂಗಡಿಗರು ತಮ್ಮ ಬಹು ನಿರೀಕ್ಷೆಯ ಗ್ರಾನ್ ಕ್ವಿವಿರಾ ಪಟ್ಟಣವನ್ನು ತಲುಪಿದರು. ಆದರಲ್ಲಿ ಅವರಿಗೆ ಕಂಡಿದ್ದೇನು! ಟರ್ಕಿ ಹೇಳುತ್ತಿದ್ದಂತೆ ಆ ಊರಿನಲ್ಲಿ ಚಿನ್ನದ ಇಮಾರತುಗಳಿರದೇ ಕಲ್ಲಿನ ಕಟ್ಟಡಗಳಿದ್ದವು. ಬಂಗಾರವು ಕೇವಲ ಕೆಲವೇ ಸಿರಿವಂತರ ಸ್ವತ್ತಾಗಿತ್ತು. ಮೊದಲ ನೋಟದಲ್ಲಿ ಕೊರೊನಾಡೊನಿಗೆ ಆ ಊರು ಕೊಳಕು ನದಿಯ ದಂಡೆಯ ಮೇಲಿದ್ದ ಕೊಳಕು ಪಟ್ಟಣವಾಗಿ ಕಂಡಿತು. ಕಾನ್ಸಾಸ್‌ನ ಬಯಲು ಪ್ರದೇಶದಲ್ಲಿ ಹುಲುಸಾಗಿ ಬೆಳೆಯುವ ಜೊಂಡು ಹುಲ್ಲಿನಿಂದ ಅಲ್ಲಿನ ಬಹುತೇಕ ಮನೆಗಳ ಛಾವಣಿ ನಿರ್ಮಾಣವಾಗಿತ್ತು. ಎಮ್ಮೆಯ ಮಾಂಸ ಸಿಗದಿದ್ದಾಗ ಊಟಕ್ಕಿರಲಿ ಎಂದು ಅಲ್ಲಿನ ಮೂಲನಿವಾಸಿಗಳು ಸ್ವಲ್ಪವೇ ಜೋಳವನ್ನು ಬೆಳೆದುಕೊಳ್ಳುತ್ತಿದ್ದರು.

ಕೊರೊನಾಡೊ ಕ್ಷುದ್ರನಾಗಿ ತನ್ನ ಸೈನ್ಯಕ್ಕೊಮ್ಮೆ ಕರೆ ಕೊಟ್ಟ. ಸಾವಿರದೈನೂರು ಮೈಲುಗಳನ್ನು ಕುದುರೆಯ ಬೆನ್ನ ಮೇಲೆ ಓಲಾಡುತ್ತ, ಅರೆ ಬೆಂದ ಎಮ್ಮೆಯ ಮಾಂಸವನ್ನು ತಿನ್ನುತ್ತ ಈ ಪ್ರದೇಶಕ್ಕೆ ಬರಲು ಅವನು ಬಹಳವೇ ಕಷ್ಟಪಟ್ಟಿದ್ದ. ಇಲ್ಲಿ ನೋಡಿದರೆ ಅವನು ಕನಸು ಕಂಡ ಗ್ರಾನ್ ಕ್ವಿವಿರಾ ಅವನು ಹಾಯ್ದು ಬಂದ ನ್ಯೂ ಮೆಕ್ಸಿಕೋದ ಅರ್ಧದಷ್ಟೂ ಸಂಪದ್ಭರಿತವಾಗಿರಲಿಲ್ಲ.

ಆದರೆ ತುಸು ಸಮಯದ ಬಳಿಕ ಅವನ ವಿವೇಕ ಅವನನ್ನು ಎಚ್ಚರಿಸಿತು. ಅಲ್ಲಿನ ರಾಜನನ್ನು ತನ್ನ ಮುಂದೆ ಕರೆತರಲು ಸೈನಿಕರಿಗೆ ಆದೇಶ ಕೊಟ್ಟ. ಮಂಡಿಯೂರಿ ಕುಳಿತ ರಾಜನಿಗೆ ಅವನ ಬಳಿ "ಅಡಗಿಸಿಟ್ಟ ನಿಧಿಯೇನಾದರೂ ಇದೆಯೇ" ಅಂತ ದರ್ಪದಿಂದ ಕೇಳಿದ. ಈ ಬಾರಿ ಮಾತುಗಳನ್ನು ಭಾಷಾಂತರಿಸಲು ಟರ್ಕಿಗೆ ಹೇಳದೇ ಬೇರೆ ದುಭಾಷಿಗಳಿಗೆ ಹೇಳಿದ. ಆ ರಾಜ ಹೌದು, ನನ್ನ ಬಳಿ ಜಗತ್ತಿನಲ್ಲಿಯೇ ಅತ್ಯಮೂಲ್ಯವಾದ ಸಂಪತ್ತು ಇದೆಯೆಂದು ಒಪ್ಪಿಕೊಂಡ. ಈ ಮಾತುಗಳು ಕೊರೊನಾಡೊನಿಗೆ ಅಪರಿಮಿತವಾದ ಸಂತೋಷವನ್ನು ತಂದುಕೊಟ್ಟವು.

ಶಾಂತಿ ಸಂಧಾನದ ಬಹು ದೀರ್ಘ ಸಮಾರಂಭದ ನಂತರ ಗ್ರಾನ್ ಕ್ವಿವಿರಾದ ರಾಜ ತನ್ನ ಸೇವಕರಿಗೆ ಸಂಪತ್ತಿನ ಪೆಟ್ಟಿಗೆಯನ್ನು ಹೊತ್ತು ತರಲು ಹೇಳಿದ. ಸೇವಕರು ಕೋಣೆಯ ಮೂಲೆಯೊಂದಕ್ಕೆ ತೆರಳಿ ಅಲ್ಲಿ ಮೇಲ್ಛಾವಣಿಯಿಂದ ತೂಗಿಬಿಟ್ಟಿದ್ದ ಮರದ ಗುಂಡು ಪೆಟ್ಟಿಗೆಯೊಂದನ್ನು ಎತ್ತಿ ತಂದರು. ಆ ಪೆಟ್ಟಿಗೆಯ ಬಾಯಿಗೆ ಸುಲಭವಾಗಿ ಬಿಚ್ಚಲು ಬಾರದ ವಿಸ್ತಾರವಾದ ಗಂಟುಗಳನ್ನು ಹಾಕಲಾಗಿತ್ತು.

ರಾಜ ಆ ಪೆಟ್ಟಿಗೆಯ ಬಾಯಿಗೆ ಹಾಕಿದ್ದ ಒಂದೊಂದೇ ಗಂಟುಗಳನ್ನು ನಿಧಾನವಾಗಿ ಬಿಚ್ಚುವಾಗ ಕೊರೊನಾಡೊ ಮತ್ತವನ ಸಂಗಡಿಗರು ಪೆಟ್ಟಿಗೆಯ ಸುತ್ತಲು ಮೈಯೆಲ್ಲ ಕಣ್ಣಾಗಿ ಕುಳಿತಿದ್ದರು. ಇನ್ನೇನು ಕೊನೆಯ ಗಂಟು ಬಿಚ್ಚಿತು ಎನ್ನುವಾಗ ಕೊರೊನಾಡೊನಿಗೆ ಕುತೂಹಲದಿಂದ ಜೀವ ಬಾಯಿಗೇ ಬರುವಂತಾಗಿತ್ತು. ರಾಜ ನಿಧಾನವಾಗಿ ಪೆಟ್ಟಿಗೆಯೊಳಗೆ ಕೈ ಹಾಕಿ ಒಂದೊಂದೇ ವಸ್ತುವನ್ನು ತೆಗೆದು ತೋರಿಸಲು ಶುರು ಮಾಡಿದ.

ತೋರಿಸಿದ ಮೊದಲ ವಸ್ತು: ಒಣಗಿದ ತೊಗಲಿಗೆ ಅಂಟಿಕೊಂಡ ಹತ್ತಾರು ಕಪ್ಪು ಕೂದಲುಗಳು. "ಇದು ನನ್ನ ಬಹುದೊಡ್ಡ ಆಸ್ತಿ. ನನ್ನ ಕಡುವೈರಿ ಲೇಯಾಸ್ ಪ್ರಾಂತ್ಯದ ರಾಜನ ನೆತ್ತಿಯಿಂದ ತೆಗೆದ ಚರ್ಮ" ಎಂದ. ನಂತರ ಕಾಗೆಯ ಒಣಗಿದ ಪಂಜಿನಂಥ ಪದಾರ್ಥವನ್ನು ತೆಗೆದು "ಇದು ನನ್ನ ಬಳಿಯಿರುವ ಅತಿ ಮುಖ್ಯ ಸಂಪತ್ತು. ಯಾರಾದರೂ ಮಾಟ ಮಾಡಿಸಿ ಹಾಕಿದ್ದರೆ ಆ ಮಾಟ ತೆಗೆದುಹಾಕಲು ಬಹು ಉಪಯುಕ್ತ" ಎಂದ. ಹಾಗೆಯೇ ಮತ್ತೆ ಪೆಟ್ಟಿಗೆಯೊಳಗೆ ಕೈ ಹಾಕಿ ನುಜ್ಜುಗುಜ್ಜಾದ ತಾಮ್ರದ ತುಂಡೊಂದನ್ನು ತೆಗೆದು ಕೊರೊನಾಡೊನ ಮುಂದೆ ದೈನ್ಯದಿಂದ ಹಿಡಿದ. "ನಾನಿದನ್ನ ನಿಮಗೇ ಅರ್ಪಿಸುತ್ತೇನೆ ಸ್ವಾಮಿ. ಈ ತಾಮ್ರ ಸಿಡಿಲಿನಿಂದ ನಿಮ್ಮನ್ನು ರಕ್ಷಿಸುತ್ತದೆ" ಎಂದ. ಇನ್ನೊಂದು ಪುಟ್ಟ ಚರ್ಮದ ಚೀಲದಲ್ಲಿ ಜೋಳದ ಹೂವಿನ ಪರಾಗದ ಧೂಳನ್ನು ತುಂಬಿಡಲಾಗಿತ್ತು. ಅದು ಜೋಳದ ಬೆಳೆಯನ್ನು ಸೊಗಸಾಗಿ ಬೆಳೆಯುವಂತೆ ಮಾಡುತ್ತದೆ ಅಂತ ಹೇಳಿದ ರಾಜ.

ಕೊರೊನಾಡೊ ದಿಗ್ಭ್ರಮೆಗೊಳಗಾಗಿದ್ದ. ಬಹು ಸಮಯದ ತನಕ ರಾಜ ಚಿತ್ರವಿಚಿತ್ರ ಆಕಾರದ ಕಲ್ಲುಗಳನ್ನೂ, ಎಲುಬು ಮತ್ತು ಚಿಪ್ಪಿನ ತುಂಡುಗಳನ್ನೂ, ಕಟ್ಟಿಗೆಯ ಕಡ್ಡಿಗಳನ್ನೂ, ಮಣ್ಣು ತುಂಬಿದ ಪುಟ್ಟ ಪುಟ್ಟ ಚೀಲಗಳನ್ನೂ ಒಂದೊಂದಾಗಿ ತೆಗೆದು ತೋರಿಸುತ್ತ ಅತಿ ದೀರ್ಘವಾಗಿ ಆ ವಸ್ತುಗಳ ಕುರಿತು ಮಾತನಾಡುತ್ತಿದ್ದ. ಅದೆಷ್ಟೋ ಹೊತ್ತಿನ ಬಳಿಕ ರಾಜ ಅವನ ಬಳಿಯಿದ್ದ ಎಲ್ಲ ಸಂಪತ್ತಿನ ಪರಿಚಯ ಮಾಡಿದ ಮೇಲೆ ಕೊರೊನಾಡೊ ಎದ್ದು ರಾಜನಿಗೆ ನಮಸ್ಕರಿಸಿ ಹೊರಟ.

ಈಗ ಕೊರೊನಾಡೊನಿಗೆ ಒಂದೇ ಒಂದು ಆಸೆ ಉಳಿದಿತ್ತು. ತನ್ನ ಡೇರೆಗೆ ಹೋದ ತಕ್ಷಣ ಟರ್ಕಿಯನ್ನು ಕರೆತರಲು ತನ್ನ ಸೈನಿಕರಿಗೆ ಆದೇಶ ಕೊಟ್ಟ. ಟರ್ಕಿಯು ಪಟ್ಟಣದ ಮುಖ್ಯಸ್ಥಳದಲ್ಲಿ ಜನರನ್ನು ಗುಂಪುಗೂಡಿಸಿಕೊಂಡು ಕೊರೊನಾಡೊನನ್ನೂ ಅವನ ಸಂಗಡಿಗರನ್ನೂ ಕೊಲ್ಲಬೇಕೆಂದೂ, ಅವರಲ್ಲಿರುವ ಸಂಪತ್ತನ್ನೆಲ್ಲ ಜನರೇ ಉಳಿಸಿಕೊಳ್ಳ-ಬಹುದೆಂದೂ, ತನಗೆ ಕೊರೊನಾಡೊ ಧರಿಸಿದ ಎದೆಗವಚವನ್ನು ಮಾತ್ರ ಕೊಟ್ಟರೆ ಸಾಕೆಂದೂ ಬೊಬ್ಬಿಡುತ್ತಿದ್ದ. ಆಗಲೇ ಕೊರೊನಾಡೊನ ಸೈನಿಕರು ಅವನನ್ನು ವಶಪಡಿಸಿಕೊಂಡರು.

ಟರ್ಕಿ ಬಂದ ಕೂಡಲೆ ಅವನಿಗೆ ಏನು ಮಾಡಬೇಕು ಎಂಬುದರ ಬಗ್ಗೆ ಕೊರೊನಾಡೊ ತನ್ನ ಸೈನಿಕರಿಗೆ ಮೊದಲೇ ಹೇಳಿದ್ದ. ಹೀಗಾಗಿ ಟರ್ಕಿ ಒಳಗೆ ಬರುತ್ತಲೇ ಅವನ ಕುತ್ತಿಗೆಗೆ ಹಗ್ಗ ಬಿಗಿಯಲಾಯಿತು. ಇಬ್ಬರು ಬಲಿಷ್ಠ ಸೈನಿಕರು ಆ ಹಗ್ಗವನ್ನು ಎತ್ತಿ ಹಿಡಿದರು.

ಅವತ್ತಿಡೀ ದಿನ ಟರ್ಕಿಯನ್ನು ಯಾವ ಸ್ಥಿತಿಯಲ್ಲಿ ನೋಡಬೇಕೆಂದು ಕೊರೊನಾಡೊ ಆಸೆಪಟ್ಟಿದ್ದನೋ ಕೊನೆಗೂ ಆ ದೃಶ್ಯವನ್ನು ಅವನು ಕಣ್ತುಂಬಿಕೊಳ್ಳುವಂತಾಯಿತು.

ಮರುದಿನ ಮುಂಜಾನೆ ಎದ್ದವನೇ ರಾಜನಿಗೆ ವಂದಿಸಿ ಕೊರೊನಾಡೋ ನಿರಾಶನಾಗಿ ಪುನಃ ಪೆಕೋಸ್ ಪ್ರಾಂತ್ಯಕ್ಕೆ ಪ್ರಯಾಣ ಬೆಳೆಸಿದ. ಪೆಕೋಸ್‌ನ ಮೂಲ ನಿವಾಸಿಗಳು ಕೊರೊನಾಡೊ ಇನ್ನು ಮರಳಿ ಬರಲು ಸಾಧ್ಯವಿಲ್ಲ ಎಂದೇ ನಂಬಿದ್ದರು. ಆದರೂ ಅವರು ತಮ್ಮ ಆಶ್ಚರ್ಯವನ್ನು ಹುದುಗಿಸಿಟ್ಟುಕೊಂಡು ಅವನಿಗೆ ತಕ್ಕ ಆತಿಥ್ಯವನ್ನು ನೀಡಿದರು. ಕೊರೊನಾಡೊ ಅವರ ಯಾವ ಆತಿಥ್ಯವನ್ನೂ ಸ್ವೀಕರಿಸುವ ಮನಸ್ಥಿತಿಯಲ್ಲೂ ಇರಲಿಲ್ಲ. ಅವನು ತನ್ನೂರಾದ ಮೆಕ್ಸಿಕೋಗೆ ತೆರಳಿದ. ಅಲ್ಲಿಂದ ಬರುವಾಗ ಹೇಗೆ ಬರಿಗೈಯಲ್ಲಿ ಬಂದಿದ್ದನೋ ಹಾಗೆಯೇ ಬರಿಗೈಯಲ್ಲಿ ಅವನು ಮರಳುವಂತಾಯಿತು.

ಸಂಪತ್ತಿನ ಆಸೆಯಿಂದ ಕೈಗೊಂಡ ಅತಿ ದೀರ್ಘಯಾನ ಇದಾಗಿತ್ತು. ಅದಾಗಿ ಎಷ್ಟೋ ವರ್ಷಗಳ ನಂತರ ಪೆಕೋಸ್ ಪ್ರಾಂತ್ಯದ ಮೂಲನಿವಾಸಿಗಳು ಪುಟ್ಟ ಲೋಹದ ಮನೆಗಳನ್ನು ಎದೆಗೆ ಒತ್ತಿಕೊಂಡು ಬಾಳುತ್ತಿದ್ದ ಸ್ಪ್ಯಾನಿಯಾರ್ಡ್‌ಗಳ ಕುರಿತ ಕತೆಗಳನ್ನು ತಮ್ಮ ಮೊಮ್ಮಕ್ಕಳಿಗೂ ಮರಿ ಮಕ್ಕಳಿಗೂ ಹೇಳುತ್ತಿದ್ದರು. ಹಿಂದೆ ಪೆಕೋಸ್ ಇರುವಲ್ಲಿ ಈಗಲೂ ಪಾಳು ಭೂಮಿಯಿದೆ. ಈಗಿರುವ ಸ್ಯಾಂಟಾ ಫೇಯಿಂದ ಇಪ್ಪತ್ತೈದು ಮೈಲಿ ಪೂರ್ವಕ್ಕೆ ಹೋದರೆ ನಾವು ಆ ಪಾಳುಬಿದ್ದ ಭೂಮಿಯನ್ನು ಕಾಣಬಹುದು. (ಬಂಗಾರದ ಹುಚ್ಚು, ಯೂರೋಪಿಯನ್ನರನ್ನು ಹೊಸ ಜಗತ್ತಿಗೆ ದಂಡಯಾತ್ರೆ ಹೊರಡುವಂತೆ ಮಾಡಿತು. ಇದು ಅಂಥದೇ ಅನ್ವೇಷಣೆಯ ಕತೆ. ಒಂದೇ ವ್ಯತ್ಯಾಸವೆಂದರೆ ಈ ಕತೆ ಹೆಣೆದಿರುವುದು ಒಬ್ಬ ಮೂಲನಿವಾಸಿ ಮಾರ್ಗದರ್ಶಿಯ ಸುತ್ತ. ಈ ಕುತಂತ್ರಿ ಮಾರ್ಗದರ್ಶಿಗೆ ವೀರ ಕೊರೊನಾಡೊ ಧರಿಸಿದ ಬಂಗಾರದ ಎದೆಗವಚದ ಮೇಲೆಯೇ ಕಣ್ಣು. ಅದನ್ನು ಹೇಗಾದರೂ ವಶಪಡಿಸಿಕೊಳ್ಳಬೇಕೆಂಬ ಏಕೈಕ ಗುರಿ ಇವನದ್ದು.)

ಆಧಾರ

* ಈ ನಾಲ್ಕೂ ಕಥೆಗಳನ್ನು, ಟೈಮ್ ಪ್ರಕಾಶನದವರು 1961ರಲ್ಲಿ ಪ್ರಕಟಿಸಿದ 'ದ ಲೈಫ್ ಟ್ರೆಷರಿ ಆಫ್ ಅಮೆರಿಕನ್ ಫೋಕ್‌ಲೋರ್' ಪುಸ್ತಕದ 'ಅನ್ವೇಷಕರು' ಭಾಗದಿಂದ ಆಯ್ದುಕೊಳ್ಳಲಾಗಿದೆ.

❑

(24)

ಬೇ ಏರಿಯಾದ ಓಹ್ಲೋನಿಯರು: ಒಂದು ಪಕ್ಷಿನೋಟ

ಆನಂದ ಸಿಂಹ
ಸ್ಯಾನ್ ರಮೋನ್, ಕ್ಯಾಲಿಫೋರ್ನಿಯಾ

*

ತಾಂತ್ರಿಕ ನಾವೀನ್ಯಕ್ಕೆ ಜಗತ್ಪ್ರಸಿದ್ಧವಾಗಿರುವ ಇಂದಿನ ಬೇ ಏರಿಯಾ ಅರ್ಥಾತ್ 'ಸಿಲಿಕಾನ್ ವ್ಯಾಲಿ'ಯು ಕೇವಲ 200 ವರ್ಷಗಳ ಹಿಂದೆ ಗಿರಿಜನರ ಬೀಡಾಗಿತ್ತು. ಇದೇ ಭೂಮಿಯಲ್ಲಿ ಹಲವು ಆದಿವಾಸಿ ಸಮುದಾಯಗಳು ಪ್ರವರ್ಧಿಸುತ್ತಿದ್ದವು. ದಕ್ಷಿಣದ 'ಪಾಯಿಂಟ್ ಸರ್' ನಿಂದ ಹಿಡಿದು (ರೇಖಾಚಿತ್ರವನ್ನು ವೀಕ್ಷಿಸಿ), ಉತ್ತರದ ಸ್ಯಾನ್ ಫ್ರಾನ್ಸಿಸ್ಕೋದವರೆಗೆ 10,000ಕ್ಕೂ ಹೆಚ್ಚು ಸ್ಥಳೀಯರು, ಅಂದರೆ 'ನೇಟಿವ್' ಅಮೆರಿಕನ್ನರು ಸುಮಾರು 40 ಬಣಗಳಾಗಿ (tribelets) ವಾಸಿಸುತ್ತಿದ್ದರು. ಆಡುವ ಭಾಷೆಗಳ ತಳಹದಿ ಒಂದೇ ಆಗಿದ್ದರೂ ಎಲ್ಲಾ 40 ಬಣಗಳೂ ವಿಭಿನ್ನವಾದ ನುಡಿಗಳಲ್ಲಿ ಮಾತನಾಡುತ್ತಿದ್ದರು. ಯಾರೀ ಆದಿವಾಸಿಗಳು? ನೋಡುವುದಕ್ಕೆ ಹೇಗಿದ್ದರು? ಇವರ ವೇಷ ಭೂಷಣಗಳು ಹೇಗಿದ್ದವು? ಏನನ್ನು ಉಣ್ಣುತ್ತಿದ್ದರು? ಇವರ ಚಿಂತನೆ ಹೇಗಿತ್ತು? ಎಲ್ಲವೂ ಆಸಕ್ತಿ ಹುಟ್ಟಿಸುವ ಪ್ರಶ್ನೆಗಳು.

ಕ್ರಿ.ಶ. 1770ರ ದಶಕದಲ್ಲಿ ವಲಸೆ ಹೂಡಿದ ಸ್ಪೇನ್ ದೇಸಿಗರು (Spaniards) ಇವರನ್ನು 'ಕಾಸ್ಟನೊಸ್' ಅಂದರೆ ಕರಾವಳಿ ಪ್ರದೇಶದವರು ಎಂದು ಕರೆದರು. ನಂತರ ಇದು 'ಕಾಸ್ಟೋನೋಅನ್' (Costonoan) ಆಗಿ ಮಾರ್ಪಾಟಾಯಿತು. ತದನಂತರ ಇವರನ್ನು 'ಓಹ್ಲೋನಿಯರು' (Ohlones) ಎಂದು ಕರೆಯಲಾಯಿತು. ಓಹ್ಲೋನಿ ಎಂಬುದು 'ನವಾಹೋ', 'ಅಪಾಚಿ' ಅಥವಾ 'ಹೋಪಿ' ತರಹ ಒಂದು ದೇಶೀಯ ಜನಾಂಗದ ಹೆಸರಲ್ಲ. ಓಹ್ಲೋನಿ ಪದದ ಉಗಮ ಇಂದಿಗೂ ಅಸ್ಪಷ್ಟ. ಈ ಪ್ರದೇಶದ ಒಂದು ಪ್ರಮುಖ ಹಳ್ಳಿಯ ಹೆಸರಾಗಿದ್ದಿರಬಹುದು ಎಂದು ಕೆಲವರ ಊಹೆ. ಏನೇ ಇರಲಿ, ಬೇ ಏರಿಯಾದ ಇಂಡಿಯನ್ನರ ಸಂತತಿಯವರು ಸಾಮೂಹಿಕವಾಗಿ 'ಓಹ್ಲೋನಿ' ಎಂದೇ ಕರೆಸಿಕೊಳ್ಳಲು ಇಷ್ಟಪಡುತ್ತಾರೆ.

ಅಮೇರಿಕಾ ದೇಶದ ಇನ್ನಿತರ ಮೂಲ ಜನಸಮುದಾಯದಂತೆ ಓಹ್ಲೋನಿಯರಿಗೆ ಬೇಸಾಯದ ಅರಿವಿರಲಿಲ್ಲ. ಇವರ ಬದುಕು ಶಿಲಾಯುಗದ ಮಾನವನ ಬದುಕನ್ನು ಹೋಲುತ್ತಿತ್ತು. ಓಹ್ಲೋನಿಯರು ಮೂಲಭೂತವಾಗಿ ಬೇಟೆಗಾರರು ಮತ್ತು ಸಂಗ್ರಾಹಕರಾಗಿದ್ದರು ('hunter - gatherers'). ಸಹಜವಾಗಿ ಸಿಗುವ ಹಣ್ಣು, ಕಾಯಿ, ಗೆಡ್ಡೆ ಗೆಣಸುಗಳೇ ಇವರ ಸಸ್ಯಾಹಾರದ ಭಾಗ. ಇವರಿಗೆ ಯಾವ ಲೋಹದ ಬಳಕೆಯೂ ಗೊತ್ತಿರಲಿಲ್ಲ. ಅಳಿಲು, ಮೊಲ, ಜಿಂಕೆ, ಪಕ್ಷಿಗಳು ಇಂತಹ ಸಾಧುಪ್ರಾಣಿಗಳನ್ನು ಬಿಟ್ಟರೆ ಇವರು ಬೇರೆ ಯಾವ ಪಶುಗಳನ್ನೂ ಬೇಟೆಯಾಡಲು ಅಸಮರ್ಥರಾಗಿದ್ದರು. ಹೀಗೆ, ಪ್ರಕೃತಿಗೆ ವಿರುದ್ಧವಾದ ಯಾವ ಚಟುವಟಿಕೆಗಳಲ್ಲೂ ತೊಡಗಿರದೆ ನಿಸರ್ಗಕ್ಕೆ ಹೊಂದಿಕೊಂಡ, ಪೂರಕವಾದ ಬದುಕನ್ನು ಬಾಳುತ್ತಿದ್ದರು. ಇಂತಹ ವಿಸ್ಮಯಕಾರಿಯಾದ ಜೀವನ ಶೈಲಿ ಹೊಂದಿದ ಜನಸಮುದಾಯದ ಬದುಕುವ ರೀತಿಯ ಬಗ್ಗೆ ಒಂದು ಒಳನೋಟ ಹೊಂದುವುದು ರೋಚಕವೆನಿಸುತ್ತದೆ.

ಓಹ್ಲೋನಿಯರು ಒಂದು ಮಾದರಿಯ ದಿನವನ್ನು ಹೇಗೆ ಕಳೆಯುತ್ತಿದ್ದರು ಎಂಬುದನ್ನು ಅರಿತುಕೊಳ್ಳುವ ಮೂಲಕ ಈ ಜನಪದದ ಜೀವನ ಶೈಲಿಯ ಪಕ್ಷಿನೋಟ ಪಡೆಯೋಣ.

ಒಂದು ಸಾಧಾರಣ ದಿನ

ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿಯ ಓರ್ವ ಕಡಲು ಚಾಚುವಿನ (creek) ಸಮೀಪವಿರುವ ಒಂದು ಹಳ್ಳಿಯ ಮೇಲೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸೋಣ. ಅಪಾರ ಪ್ರಮಾಣದಲ್ಲಿ ಹರಡಿಹೋಗಿರುವ ಮಣ್ಣು, ಬೂದಿ, ಕಪ್ಪೆಚಿಪ್ಪುಗಳಿಂದ ಮೈತಳೆದ ನೆಲವು, ಕ್ರಮೇಣ ದಿಬ್ಬವಾಗಿ ಪರಿವರ್ತಿಸುತ್ತದೆ. ಜೌಗು ಭೂಮಿಯ (marsh land) ಮಧ್ಯೆ ತಲೆ ಎತ್ತಿರುವ ಇಂತಹ ಒಂದು ದಿಬ್ಬ. ಇದರ ಮೇಲೆ ವಿಶಾಲವಾದ ಅಂಗಳ. ಅದರ ಸುತ್ತಲೂ 'ಟೂಲಿ' (Tule) ಎಂಬ ಹುಲ್ಲುಕಡ್ಡಿಯಲ್ಲಿ ಕಟ್ಟಲ್ಪಟ್ಟ ಗುಮ್ಮಟಾಕಾರದ ಗುಡಿಸಲುಗಳು ನಿಂತಿವೆ. ಏತನ್ಮಧ್ಯೆ ಅಲ್ಲಲ್ಲೇ ಚದುರಿಸಿರುವ ಕಣಜಗಳನ್ನು ಕಾಣಬಹುದು. ಮೆಟ್ಟುಗೋಲುಗಳ ಮೇಲೆ ನಿಂತ ಬೃಹತ್ ಬುಟ್ಟಿಗಳಂತೆ ಕಾಣುವ ಈ ಕಣಜಗಳಲ್ಲಿ ವರ್ಷಕ್ಕೆ ಬೇಕಾಗುವಷ್ಟು 'ಓಕ್' ಮರದ ಏಕಾರ್ನ್ (acorn) ಕಾಯಿಗಳು ಶೇಖರಿಸಲ್ಪಟ್ಟಿವೆ. ('ಓಕ್' ಎಂಬುದು ಬೀಚ್ ಜಾತಿಯ ಮರ).

ನಿರಭ್ರ ಆಕಾಶದ ಒಂದು ಬೆಚ್ಚನೆಯ ಮಧ್ಯಾಹ್ನ. ಹಳ್ಳಿಯ ಹಲವಾರು ಕಡೆ ಹರಡಿರುವ, ಭೂಗತವಾದ ಗುಂಡಿ ಒಲೆಗಳಿಂದ (pit oven) ಹಬೆ ತಲೆದೋರುತ್ತಿದೆ. ರಾತ್ರಿಯ ಊಟಕ್ಕೆ ತಯಾರಿಯಾಗುತ್ತಿರುವ ಮಳಿ (mussel), ಕ್ಲಾಮ್ (ಕಪ್ಪೆಚಿಪ್ಪಿನ ಪ್ರಾಣಿ), ಮೊಲದ ಮಾಂಸ, ಮೀನು ಮತ್ತು ವಿವಿಧ ಬಗೆಯ ಗೆಡ್ಡೆ ಗೆಣಸುಗಳು ಬೇಯುತ್ತಿರುವುದೇ ಈ ಹಬೆಗೆ ಕಾರಣ.

ತಮ್ಮ ತಮ್ಮ ಗುಡಿಸಲಿನ ಬಾಗಿಲ ಮುಂದೆ ಜನರು ಗುಂಪುಗಟ್ಟಿದ್ದಾರೆ. ನಾಲ್ಕು ಗಂಡಸರು ಒಟ್ಟುಗೂಡಿ ಒಂದು ಮೀನಿನ ಬಲೆಯನ್ನು ರಿಪೇರಿ ಮಾಡುತ್ತಿದ್ದಾರೆ. ಮಕ್ಕಳ

ಗುಂಪೊಂದು ಪಕ್ಕದಲ್ಲೇ ಕಣ್ಣಾಮುಚ್ಚಾಲೆ ಆಟದಲ್ಲಿ ತೊಡಗಿದೆ. ಕೆಲವು ಒಂಟಿ ಮುದುಕರು ಅಂಗಳದ ಮೇಲೆ ಬೋರಲಾಗಿ ಮಲಗಿ ಸೂರ್ಯನ ಶಾಖವನ್ನು ಸವಿಯುತ್ತಿದ್ದಾರೆ.

ಬೇ ಏರಿಯಾದ ದಿಬ್ಬಗಳು (Shellmounds)

ಸಮುದ್ರಗಳಲ್ಲಿ ಕಾಣುವ ಎಲ್ಲಾ ತರಹದ ಕಪ್ಪೆಚಿಪ್ಪಿನ ಪ್ರಾಣಿಗಳಿಗೆ ಒಟ್ಟಾರೆ 'shellfish' ಎಂದು ಹೆಸರು. ಕಡಲ ತೀರದ ನಿವಾಸಿಗಳಾಗಿದ್ದ ಓಹ್ಲೋನಿಯರು ಇಂತಹ ಸಮುದ್ರ ಆಹಾರಗಳನ್ನು ಯಥೇಚ್ಛವಾಗಿ ಸೇವಿಸುತ್ತಿದ್ದರು. ಇದರಿಂದ ಅಸಾಧಾರಣ ಪ್ರಮಾಣದಲ್ಲಿ ಕಪ್ಪೆಚಿಪ್ಪುಗಳು ಒಟ್ಟುಗೂಡಲು ಪ್ರಾರಂಭಿಸಿದವು. ಇವು ಮೊದಲು ಗುಪ್ಪೆಗಳಾಗಿ ಕ್ರಮೇಣ ದಿಬ್ಬಗಳಾಗಿ ಬೆಳೆಯತೊಡಗಿದವು. ದಿಬ್ಬಗಳು ಸಾಕಷ್ಟು ಬೆಳೆದ ಮೇಲೆ ಆದಿವಾಸಿಗಳು ಇವುಗಳ ಮೇಲೆಯೇ ತಮ್ಮ ಗುಡಿಸಲುಗಳನ್ನು ಕಟ್ಟಿಕೊಂಡರು. ಹೀಗೆ ದಿಬ್ಬಗಳು ಹಳ್ಳಿಗಳ ನಿರ್ಮಾಣಕ್ಕೆ ಆಧಾರವಾದವು. 30 ಅಡಿಗಿಂತಲೂ ಎತ್ತರವಿರಬಹುದಾಗಿದ್ದ ಈ ದಿಬ್ಬಗಳು ಧರ್ಮಾಚರಣೆಯ ಸಲುವಾಗಿ ಮತ್ತು ಮಸಣಗಳಾಗಿಯೂ ಉಪಯೋಗಿಸಲ್ಪಡುತ್ತಿದ್ದವು. ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಬೇ ಏರಿಯಾದಲ್ಲಿ ಇಂತಹ 400ಕ್ಕೂ ಹೆಚ್ಚು ದಿಬ್ಬಗಳು ಇದ್ದವು. ಇಂದು ಕೇವಲ 3 ಅಥವಾ 4 ದಿಬ್ಬಗಳು ಉಳಿದುಕೊಂಡಿವೆ. ಮಿಕ್ಕೆಲ್ಲವೂ ಅಭಿವೃದ್ಧಿ ಎಂಬ ಹೇಕುಳಿಗೆ ಬಲಿಯಾಗಿವೆ.

ಹೆಂಗೆಳೆಯರ ಸಾಮರಸ್ಯ

ಹಳ್ಳಿಯ ಸ್ವಲ್ಪ ಹೊರ ಭಾಗಕ್ಕೆ ಬರೋಣ. ಅಗೋ, ಅಲ್ಲಿ ನೋಡಿ. ಕಾಲು ಚಾಚಿ ಕುಳಿತಿರುವ ಹೆಣ್ಣುಗಳ ಗುಂಪೊಂದು 'ಏಕಾರ್ನ್' ಕಾಯಿಗಳನ್ನು ಅರೆಯುತ್ತಿದ್ದಾರೆ. ಸಮರಸವಾಗಿ ಹಾಡುತ್ತಾ ತಮ್ಮ ಭಾರವಾದ ಒನಕೆಯನ್ನು ಒರಳೊಳಗೆ ಅನಾಯಾಸವಾಗಿ ಮತ್ತೆ ಮತ್ತೆ ಎತ್ತಿ ಬಿಡುತ್ತಿದ್ದಾರೆ. ಮೈ ಮಾಟಕ್ಕೆ ಹೊಂದುವ 'ಟೂಲಿ' ಹುಲ್ಲಿನ ದಂಟು ಮತ್ತು ಜಿಂಕೆ ಚರ್ಮವೇ ಇವರ ಉಡಿಗೆ. ಗಂಡಸರಾಗಲಿ ಹೆಂಗಸರಾಗಲಿ ಯಾವುದೇ ವಿಧವಾದ ಚಪ್ಪಲಿ ಬೂಟುಗಳನ್ನು ಧರಿಸಿಲ್ಲ. ಜೀವನಪರ್ಯಂತ ಬರಿಗಾಲಿನಲ್ಲಿ ನಡೆದ ಪಾದಗಳು ಒರಟಾಗಿ ಕಾಣುವುದು ಆಶ್ಚರ್ಯಕರವಲ್ಲ. ಚುಕ್ಕೆ ಗೆರೆಗಳುಳ್ಳ ಹಚ್ಚೆ (tattoo) ಮುಖದ ಗದ್ದವನ್ನು ಅಲಂಕರಿಸಿವೆ. ಏಕಾರ್ನ್ ಕಾಯಿಗಳನ್ನು ಕುಟ್ಟುತ್ತಿರುವ ಲಯಕ್ಕೆ, ವಿಧವಿಧವಾದ ಕವಡೆ ಮಣಿಗಳ ಮತ್ತು ಹಕ್ಕಿಯ ಗರಿಗಳಿಂದ ಹೆಣೆದ ಸರಗಳು ಝಣಝಣಿಸುತ್ತಿವೆ. ಪುಟ್ಟ ಬಾಲಕ ಬಾಲಕಿಯರು ಸಮೀಪದಲ್ಲೇ ಬುಗುರಿ ಮತ್ತು ಇನ್ನಿತರ ಆಟಗಳಲ್ಲಿ ತೊಡಗಿದ್ದಾರೆ. ಹಸುಳೆಯರನ್ನು ತಮ್ಮ ತಮ್ಮ ಅಮ್ಮಂದಿರು ಬುಟ್ಟಿಯಂತಿರುವ ತೊಟ್ಟಿಲುಗಳಲ್ಲಿ ತಮ್ಮ ಬದಿಯಲ್ಲೇ ಸುರಕ್ಷಿತವಾಗಿ ನೋಡಿಕೊಂಡಿದ್ದಾರೆ. ತೊಟ್ಟಿಲುಗಳು ಕವಡೆ ಮಣಿಗಳಿಂದ ಸುಂದರವಾಗಿ ಸಿಂಗರಿಸಲ್ಪಟ್ಟಿವೆ.

ಹುಲ್ಲುಗಾವಲುಗಳು ಕೈ ಬೀಸಿ ಕರೆಯುತ್ತಿವೆ, ಆದರೆ...

ತಾವು ತೊಡಗಿರುವ ಕೆಲಸದಿಂದ ತಾತ್ಕಾಲಿಕವಾಗಿ ಬಿಡುವು ಪಡೆದ ಹೆಂಗಸರು

ತಮ್ಮ ತಮ್ಮಲ್ಲೇ ಗೊಣಗಿಕೊಂಡೋ ಅಥವಾ ಗೇಲಿ ಮಾಡಿಕೊಂಡೋ ನಗುತ್ತಿದ್ದಾರೆ. ಈಗ ವಸಂತ ಕಾಲದ ಆದಿ. ಕಡಲದಂಡೆ ಪ್ರದೇಶವನ್ನು ಬಿಟ್ಟು ಬೆಟ್ಟದೆಡೆಗೆ ಹೋಗಲು ಎಲ್ಲರೂ ಹಾತೊರೆಯುತ್ತಿದ್ದಾರೆ. ಮಳೆ ನೀರಿನಿಂದ ತೋಯ್ದ ಟೂಲಿ ಗುಡಿಸಲುಗಳನ್ನು ತೊರೆದು ಹೋಗುವ ನಿರೀಕ್ಷೆಯಲ್ಲಿದ್ದಾರೆ. ಕಂದು ಬಣ್ಣದ ಹೂವುಳ್ಳ 'ಕ್ಲೋವರ್' ಗಿಡಗಳು, ಹಚ್ಚ ಹಸಿರಿನ ಹುಲ್ಲು ಗಾವಲುಗಳು ಕೈ ಬೀಸಿ ಕರೆಯುತ್ತಿವೆ. ಗಿರಿ ಶಿಖರಗಳು ಹರಿದ್ವರ್ಣಕ್ಕೆ ಬದಲಿಸಿವೆ. ಹೂವಿನ ರಾಶಿಗಳ ಮಧ್ಯೆ ತರುಣರು ತರುಣಿಯರನ್ನು ಬೆನ್ನಟ್ಟಿಸಿ ಓಡುತ್ತಿದ್ದಾರೆ. ವಸಂತ ಋತುವು ತಂದ ಈ ರೋಮಾಂಚನ, ಹಿರಿಯರಲ್ಲೂ ಹಬ್ಬಿದಂತಿದೆ!

ಆದರೆ ಬೆಟ್ಟದೆಡೆಗೆ ಅಷ್ಟು ಸುಲಭವಾಗಿ ಹೋಗುವಂತಿಲ್ಲ. ಎಲ್ಲರೂ ಹಳ್ಳಿಯ ಮೊದಲಿಗನ ಮಾತಿಗೆ ಕಾದಿದ್ದಾರೆ. ಅವನ ವರ್ತನೆ 'ನಾ ಈಗಲೇ ಒಪ್ಪಿಗೆ ಕೊಡಲಾರೆ' ಎಂಬಂತಿದೆ. ಹಲವು ಯೋಚನೆಗಳು ಅವನ ಮನಸ್ಸನ್ನು ಕಾಡುತ್ತಿವೆ. "ಬೆಟ್ಟದಲ್ಲಿ ಹೂ ಬೀಜಗಳೇನೋ ಯಥೇಚ್ಛವಾಗಿವೆ. ಆದರೆ ಅವನ್ನು ಆಯಲು ಎಲ್ಲರೂ ಚದುರಬೇಕಾಗುತ್ತದೆ. ಹೀಗಾದಾಗ ಪಕ್ಕದ ಹಳ್ಳಿಯವರು ನಮ್ಮ ಗಂಡಸರ ಮೇಲೆ ಹಲ್ಲೆ ಮಾಡುವ ಮತ್ತು ನಮ್ಮ ಹೆಂಗಸರನ್ನು ಎತ್ತಿಕೊಂಡು ಹೋಗುವ ಸಾಧ್ಯತೆಗಳು ಹೆಚ್ಚು. ಅದಲ್ಲದೆ ಈ ವರ್ಷದ ಚಳಿಗಾಲದಲ್ಲಿ ಒಂದು ವಿಚಿತ್ರ ರೋಗ ನಮ್ಮ ಜನರಲ್ಲಿ ಹರಡಿ, ಮಂದಿಯ ಸಂಖ್ಯೆ ಆಗಲೇ ಕ್ಷೀಣಿಸಿದೆ. ಮೇಲಾಗಿ, ಸಮೀಪದ ಸಮುದಾಯದವರು ಇತ್ತೀಚೆಗೆ ನಮ್ಮ ಜನರ ಮೇಲೆ ಯಾವುದೋ ಮಾಟ – ಮದ್ದು ಮಾಡುತ್ತಿದ್ದಂತೆ ಕಾಣುತ್ತಿದೆ."

ಹಳ್ಳಿಯ ಬಹುತೇಕ ಜನರು ತಮ್ಮ ಮೊದಲಿಗನ ಅಭಿಮತವನ್ನು ಒಪ್ಪುವಂತೆ ತೋರುತ್ತಿಲ್ಲ. ಇವನು ಅನಾವಶ್ಯಕವಾಗಿ ಅತಿ ಜಾಗರೂಕತೆ ವಹಿಸುವನು ಮತ್ತು ಸಂಶಯಾಸ್ಪದ ಮನೋಭಾವವುಳ್ಳ ಮನುಷ್ಯನೆಂದು ತೀರ್ಮಾನಿಸಿ ಸದ್ಯಕ್ಕೆ ಸುಮ್ಮನಾಗಿದ್ದಾರೆ. ಏಕಾರ್ನ್ ಕುಟ್ಟುತ್ತಿದ್ದ ಹೆಂಗಸರಂತೂ, "ಈ ಮುದುಕನಿಗೆ ವಯಸ್ಸಾದ ಕಾರಣ ತನ್ನ ಆತ್ಮವಿಶ್ವಾಸ ಕಳೆದುಕೊಂಡಿದ್ದಾನೆ" ಎಂದು ತಮ್ಮ ತಮ್ಮಲ್ಲೇ ಮಾತಾಡಿಕೊಂಡು ಮುಗುಳ್ನಗುತ್ತಿದ್ದಾರೆ.

ಜೋಪಡಿಗಳ ವಿನ್ಯಾಸ

ಇಂತಹ ಬೆಚ್ಚನೆಯ ವಾತಾವರಣದಲ್ಲಿ ಎಲ್ಲರೂ ಹೊರಗೆ ಸಮಯ ಕಳೆಯಲು ಇಷ್ಟಪಡುತ್ತಾರೆ. ಉಷ್ಣತೆ ಮೀರಿರುವ ಗುಡಿಸಲಿನ ಒಳಮಗ್ಗಲು ಇನ್ನಷ್ಟು ಇರುಸುಮುರುಸು ತಂದೀತು. ಈ ಗುಡಿಸಲುಗಳ ವಿನ್ಯಾಸ ಬಹಳ ಸರಳ. ಮೊದಲೇ ಹೇಳಿದಂತೆ ಟೂಲಿ ಹುಲ್ಲಿನಿಂದ ಮಾಡಲ್ಪಟ್ಟಿರುತ್ತವೆ. ಹುಲ್ಲಿನ ಕಂತುಗಳನ್ನು, 'ವಿಲ್ಲೊ' (Willow) ಮರದಿಂದ ಮಾಡಿದ ಕೋಲಿನಿಂದ ಕಟ್ಟಡದ ಪಂಜರಕ್ಕೆ ಬಿಗಿ ಪಡಿಸಲಾಗಿರುತ್ತದೆ. ಗುಡಿಸಲುಗಳ ಅಡ್ಡಳತೆ 6 ರಿಂದ 20 ಅಡಿಗಳೂ ಇರಬಹುದು. ಒಂದು ಗುಡಿಸಿಲಿನಲ್ಲಿ ಒಂದು ಅಥವಾ ಎರಡು ಸಂಸಾರಗಳು ವಾಸಿಸುವರು. ಪ್ರತಿ ಗುಡಿಸಲಿನಲ್ಲೂ ಸಾಮಾನ್ಯವಾಗಿ ಸುಮಾರು 6 ಜನರಿಂದ, ಗುಡಿಸಲು ದೊಡ್ಡದಾಗಿದ್ದರೆ 12 ಜನರವರೆಗೆ ನೆಲೆ ಕಾಣುತ್ತಾರೆ. ಯಾವುದೇ

ಗುಡಿಸಲನ್ನೂ ನೋಡಿದರೂ ಒಳಗೆ ಸಾಮಾನುಗಳು ಕಿಕ್ಕಿರಿದು ತುಂಬಿರುತ್ತವೆ. ನಡುವಿನಲ್ಲಿ ಇರುವ ಬೆಂಕಿ ಹೊಂಡದ (fire pit) ಸುತ್ತಲೂ ಜಿಂಕೆಯ ಚರ್ಮ, ಕರಡಿಯ ಚರ್ಮ, ಹೆಣೆದ ಮೊಲದ ಚರ್ಮ ಮುಂತಾದುವು ಚೆಲ್ಲಾಪಿಲ್ಲಿಯಾಗಿ ಹರಡಿರುತ್ತವೆ. ಬೀಜಗಳು, ಗಡ್ಡೆಗಳು, ಒಣಗಿದ ಮೀನು ಮಾಂಸಾದಿಗಳಿಂದ ತುಂಬಿದ ಹೆಡಿಗೆಗಳು (hamper baskets) ಹೊಗೆ ಸೋರಿದ ಗೋಡೆಯ ಬದಿಯಲ್ಲಿ ನಿಂತಿವೆ. ಕೇರುವುದಕ್ಕೆ, ಜರಡಿ ಆಡುವುದಕ್ಕೆ, ಬಡಿಸುವುದಕ್ಕೆ ಅಥವಾ ಅಡಿಗೆ ಮಾಡುವುದಕ್ಕೆ ಉಪಯೋಗಕ್ಕೆ ಬರುವ ಅಪೂರ್ಣ ಬುಟ್ಟಿಗಳು ಹಲವು ಹಂತಗಳ ನಿರ್ಮಾಣದಲ್ಲಿ ಗುಡಿಸಲಿನ ಪ್ರವೇಶ ದ್ವಾರದ ಹತ್ತಿರ ಇವೆ. ಸೂರಿನ ಗಳುಗಳಿಗೆ ಬುಟ್ಟಿ ಮಾಡುವುದಕ್ಕೆ ಬೇಕಾಗುವ ಸಾಮಾನುಗಳು, ಜಿಂಕೆಯ ಚರ್ಮ ಮತ್ತು ಒಡವೆ ಮಣಿಗಳನ್ನು ಹೊತ್ತ ಚೀಲಗಳು, ಎಲುಬು ತುರಿಯಲು ಉಪಯೋಗಿಸುವ ಹೆರೆಮಣೆ (scraper), ಕಲ್ಲಿನ ಅರ ಮತ್ತು 'ಒಬ್ಸಿಡಿಯನ್' (Obsidian) ಗಾಜಿನ ಚಾಕು ಮತ್ತು ಮಣಿಗಳಲ್ಲಿ ತೂತು ಮಾಡಲು ಬೈರಿಗೆಗಳು (twist drills) – ಇವೆಲ್ಲವನ್ನೂ ಸಿಕ್ಕಿಸಲಾಗಿದೆ.

ಇದರ ಜೊತೆಗೆ, ಹಲವು ಗುಡಿಸಲುಗಳಲ್ಲಿ ಟೂಲಿ ಹುಲ್ಲು ತುಂಬಿದ ಬಾತುಕೋಳಿ (ಬಲೆಯಾಗಿ ಉಪಯೋಗಿಸುವುದಕ್ಕೆ), ಮೀನು ಹಿಡಿಯುವ ಬಲೆ, ಪಾಶ, ಇನ್ನಿತರ ಬೇಟೆಗೆ ಉಪಯುಕ್ತ ವಸ್ತುಗಳು ಮತ್ತು 'ಅಬಲೋನಿ' ಕವಡೆಗಳು (abalone shells) ಕಂಡುಬರುತ್ತವೆ. ಅಬಲೋನಿ ಕವಡೆಗಳು ಕೊಲ್ಲಿಯ ಎದುರು ಪ್ರದೇಶದಲ್ಲಿರುವ ಜನರಿಂದ ವಸ್ತು ವಿನಿಮಯದಿಂದ (barter) ಪಡೆಯಲಾಗಿತ್ತು. ಈ ಕವಡೆಗಳನ್ನು ನಯಗೊಳಿಸಿ, ರೂಪಿಸಿ ಪೂರ್ವಕ್ಕೆ ಇರುವ ಹಳ್ಳಿಗಳಿಗೆ ಮಾರಾಟ ಮಾಡಿ ಪೀತದಾರು ಮರದ ಕಾಯಿಗಳನ್ನು (pine nuts) ಪಡೆಯುವುದು ವಾಡಿಕೆ.

ಜೋಪಡಿಗಳು ಸಮಾನವಾಗಿ ಕಂಡರೂ ಎಲ್ಲವೂ ಒಂದೇ ಬಗೆಯಾಗಿ ಇಲ್ಲ. ಊರಿನ ಅಂಚಿನಲ್ಲಿರುವ ಕೊರಕಲಿನ (creek) ಹತ್ತಿರ ಇರುವ ಗುಡಿಸಲು ಬೇರೆಯವಕ್ಕಿಂತ ಎರಡು ಪಟ್ಟು ದೊಡ್ಡದಾಗಿದೆ ಮತ್ತೆ ಭೂಮಿಯನ್ನು ಅಗೆದು ಪಾಯದ ಮೇಲೆ ಕಟ್ಟಲಾಗಿದೆ. ಬಾಗಿಲು ಎಷ್ಟು ಪುಟ್ಟದೆಂದರೆ ತೆವಳಿಕೊಂಡು ಹೋದರೇನೇ ಇದರೊಳಗೆ ಪ್ರವೇಶ ಸಾಧ್ಯ. ವರ್ಣಮಯ ಗರಿಗಳಿಂದ ಸಿಂಗರಪಡಿಸಿರುವ ಕಂಬದಿಂದ ಉದ್ದನೆಯ ಮೊಲದ ಚರ್ಮದ ತುಕಡಿ ನೇತುಹಾಕಲಾಗಿದೆ. ಸೂರಿನ ಮಧ್ಯ ಭಾಗದಲ್ಲಿ ಇರುವ ರಂಧ್ರದಿಂದ ಹೊಗೆ ಉಬ್ಬುತ್ತಿದೆ. ಈ ಗುಡಿಸಲಿನ ಹೆಸರು 'ಬೆವರು ಮನೆ' (sweat house). ಸ್ಪೇನಿನವರು ಇದನ್ನು 'ತೆಮಸ್ಕಾಲ್' (Temescal) ಎಂದು ಕರೆಯುತ್ತಿದ್ದರು. ಇದರೊಳಗೆ ಗಂಡಸರು ಚಪ್ಪಾಳೆ ಹೊಡೆದುಕೊಂಡು ಹಾಡುತ್ತಾ ಬೆವರು ಸುರಿಸಿಕೊಂಡು, ಮಾರನೆ ದಿವಸದ ಜಿಂಕೆ ಶಿಕಾರಿಗೆ ತಯಾರಿಯಾಗುತ್ತಿದ್ದಾರೆ. ಈ ಬೆವರ ಮನೆಯೊಳಗೆಯೇ ಬಿಲ್ಲು, ಬಾಣ ಮತ್ತು ಬೇಟೆಗೆ ಬೇಕಾಗುವ ಇತರ ಸಾಮಗ್ರಿಗಳು (ಹೆಂಗಸರಿಂದ ದೂರವಾಗಿ), ಶೇಖರಿಸಲಾಗಿರುತ್ತದೆ.

ಬಾಲ ಬೇಟೆಗಾರನ ಮೆಚ್ಚು

ಮಧ್ಯಾಹ್ನ ಆಗುತ್ತಿದ್ದಂತೆಯೇ ಹುಡುಗರ ಗುಂಪೊಂದು ಹಳ್ಳಿಗೆ ಹಿಂದಿರುಗಿದೆ. ಅವರು ಬಲೆಗಳು, ಬಿಲ್ಲು ಬಾಣಗಳು ಮತ್ತು ಕಟ್ಟಿಗೆಯ ತುಂಡುಗಳನ್ನು ಹೊಂದಿದ್ದಾರೆ. ಎಲ್ಲರೂ ಒಡನೆ ಏಕಾರ್ನ್ ಜಜ್ಜುತ್ತಿರುವ ಹೆಂಗಸರ ಬಳಿ ತಾವು ಬೇಟೆಯಾಡಿದ ಮೊಲಗಳು, ಒಂದು ಅಳಿಲು ಮತ್ತು ಕೆಲವು ಪಕ್ಷಿಗಳನ್ನು ತೋರಿಸಲು ಓಡಿ ಹೋಗುತ್ತಾರೆ. ಅವರ ಪೈಕಿ ಐದು ವರ್ಷದ ಬಾಲಕನೊಬ್ಬನಂತೂ ಪರಮಾನಂದ ಪಡುತ್ತಿರುವಂತೆ ಕಾಣುತ್ತಿದ್ದಾನೆ. ಏಕೆಂದರೆ ಅವನು ತನ್ನ ಜೀವನದಲ್ಲೇ ಮೊಟ್ಟ ಮೊದಲು ಒಂದು ಪ್ರಾಣಿಯನ್ನು ಬೇಟೆಯಾಡಿ ಬಲಿ ತೆಗೆದುಕೊಂಡಿದ್ದಾನೆ. 'ಇದು ಒಂದು ಮೊಲ' ಎನ್ನುತ್ತ ಹೆಂಗಸರೆಲ್ಲರೂ ಗೊಳ್ಳೆಂದು ನಗುವಂತಾದರೂ, ಆ ಪುಟ್ಟ ಹುಡುಗ ಅವರ ಪ್ರಶಂಸೆಗೂ ಪಾತ್ರನಾಗುತ್ತಾನೆ.

ಹುಡುಗನ ತಾಯಿ, 'ಮೊಲ ಎಷ್ಟು ದಪ್ಪದಾಗಿದೆ' ಎಂದು ವಾಸ್ತವವಾಗಿ ಉದ್ಗರಿಸುತ್ತಾಳೆ. ಆದರೆ ತಕ್ಷಣವೇ, ಇದು ಬಡಾಯಿ ಕೊಚ್ಚುವಿಕೆಯಾಗಿ ತೋರುವುದೆಂದು ತಿಳಿದು ಸುಮ್ಮನಾಗುತ್ತಾ ತನ್ನದೇ ಆದ ಯೋಚನೆಗಳಲ್ಲಿ ತಲ್ಲೀನಳಾಗುತ್ತಾಳೆ. ಈ ರಾತ್ರಿಯೇ ಮೊಲವನ್ನು ನೆಲದಡಿಯ ಒಲೆಯಲ್ಲಿ ಬೇಯಿಸಿ ತಿನ್ನಬೇಕು. ಎರಡು ತುಣುಕಾದರೂ ಸಿಗಬಹುದು. ಆದರೆ ಅದಕ್ಕಿಂತ ಮೇಲಾಗಿ ನನ್ನ ಶಿಶು ಬೇಟೆಗಾರನಾಗಿ ಮಾಗುತ್ತಿರುವುದು ನನಗೆ ಖುಷಿ ತಂದಿದೆ. ಅವನು ಈ ಹಂತ ತಲುಪಿರುವುದು ತನ್ನ ಪರಿಶ್ರಮದಿಂದಲ್ಲವೇ ಎಂದು ತನ್ನ ಪ್ರಶ್ನೆಗೆ ತಾನೇ ಹ್ದೂ ಎಂದು ಉತ್ತರಿಸಿಕೊಳ್ಳುತ್ತಾಳೆ. ಅವನು ತನ್ನ ಗರ್ಭಕೋಶದಲ್ಲಿದ್ದಾಗ ಮಾಂಸವನ್ನಾಗಲಿ, ಮೀನನ್ನಾಗಲಿ ಸೇವಿಸಿದವಳಲ್ಲ. ಹುಟ್ಟಿದ ಮೇಲೆ ಹೊಕ್ಕುಳ ಬಳ್ಳಿಯನ್ನು ಅವಳ ಕೈಯಿಂದಲೇ ಸುಡಿಸಲಾಯಿತು ಮತ್ತು ಸುಟ್ಟ ಬೂದಿಯನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಲಾಯಿತು. ಅವನಿಗೆ ಎರಡು ವರುಷ ಪೂರ್ತಿಯಾಗುವವರೆಗೂ ಮೊಲೆಯೂಡಿಸಿ, ಆ ಸಮಯದಲ್ಲಿ ತನ್ನ ಮೊಲೆಹಾಲು ಕಲುಷಿತವಾಗಬಹುದೆಂಬ ಭಯದಿಂದ ತನ್ನ ಗಂಡನ ಜೊತೆ ಸಂಪರ್ಕ ಹೊಂದಿರಲಿಲ್ಲ ವೆಂಬುದನ್ನು ನೆನೆಯುತ್ತಾಳೆ. ಬೇರೆ ಹೆಂಗಸರ ಕಿಲಕಿಲ ನಗುವಿಕೆ ಅವಳನ್ನು ಇಹಲೋಕಕ್ಕೆ ಮತ್ತೆ ಕರೆದೊಯ್ಯುತ್ತದೆ.

ಉತ್ಸವದ ನಿರೀಕ್ಷಣೆಯಲ್ಲಿ...

ಎಲ್ಲರೂ ಸಡಗರ, ಸಂತೋಷದಲ್ಲಿ ಮುಳುಗಿರುವಂತೆ ಭಾಸವಾಗುತ್ತದೆ. "ಇಂದು ರಾತ್ರಿ ಜೂಜಾಡುವಾ" ಎಂದು ಎಲ್ಲರೂ ಒಟ್ಟಾಗಿ ತೀರ್ಮಾನಿಸುತ್ತಾರೆ. ಜೂಜಾಟದ ಹಾಡುಗಳನ್ನು ನೆನೆದುಕೊಳ್ಳುತ್ತಾ ತಮ್ಮ ತಮ್ಮ ಅದೃಷ್ಟವನ್ನು ತಾವು ಹೇಗೆ ಒಲೈಸಿಕೊಳ್ಳಬಹುದು ಎಂಬುದರ ಲೆಕ್ಕಾಚಾರದಲ್ಲಿ ಮಗ್ನರಾಗುತ್ತಾರೆ. ಇಂದು ತನ್ನ ಮುಟ್ಟಿನ ದಿನವಲ್ಲವೆಂದು ಹುಡುಗನ ತಾಯಿಗೆ ಗೋಚರವಾಗಿ ಸಂತುಷ್ಟಳಾಗುತ್ತಾಳೆ, ಏಕೆಂದರೆ ಆ ಅವಸ್ಥೆಯಲ್ಲಿ ತಾನು ಹೋದರೆ ಬೇರೆಯವರ ಅದೃಷ್ಟಕ್ಕೆ ಧಕ್ಕೆ ತರುವಂತಾಗುತ್ತದೆ.

ಮಧ್ಯಾಹ್ನ ಕಳೆಯುತ್ತಿದ್ದಂತೆಯೇ ಬಹಳಷ್ಟು ಜನ ಹಳ್ಳಿಯ ಕಡೆ ಕಾಲು ಬೆಳೆಸುತ್ತಾರೆ. ಹೆಂಗಸರು ಮತ್ತು ವಯಸ್ಸಾದ ಗಂಡಸರು ಕೂಡಿದ ಗುಂಪೊಂದು ಕೆಸರು ಮಣ್ಣಿನ ಕೆಲಸ ಮುಗಿಸಿ ಬರುತ್ತಿದ್ದಾರೆ. ಎಲ್ಲರೂ ಅಗೆತಕ್ಕೆ ಬಳಸುವ ಕೋಲುಗಳನ್ನು ಹಿಡಿದಿದ್ದಾರೆ. ಸಿಂಪಿ (oyster), ಮಳಿ (mussel) ಮತ್ತು ಇನ್ನಿತರ ಕಪ್ಪೆಚಿಪ್ಪಿನ ಪ್ರಾಣಿಗಳಿಂದ ತುಂಬಿದ, ಸಮುದ್ರದ ನೀರಿನಿಂದ ತೊಟ್ಟಿಕ್ಕುತ್ತಿರುವ ಬುಟ್ಟಿಗಳನ್ನು ಹೆಂಗಸರ ಬೆನ್ನಲ್ಲಿ ಕಾಣಬಹುದು. ಬುಟ್ಟಿಗೆ ಕಟ್ಟಿದ ಪಟ್ಟಿಯು ಹೆಂಗಸಿನ ಹಣೆಯ ಮೂಲಕ ಹೋಗಿ ಭಾರವನ್ನು ತೂಗಿಸುವುದಕ್ಕೆ ಸಹಾಯವಾಗುತ್ತದೆ. ಅತ್ತ ಕೊಲ್ಲಿಯ ಕಡೆ ನೋಡಿದರೆ ಗಂಡಸರ ಗುಂಪೊಂದು ಟೂಲಿ ಹುಲ್ಲು ದಂಟಿನಲ್ಲಿ ಮಾಡಿದ ಎರಡು ಸಣ್ಣ ದೋಣಿಗಳನ್ನು ಸಮುದ್ರದಿಂದ ದಡಕ್ಕೆ ಸಾಗಿಸುವುದನ್ನು ಕಾಣಬಹುದು. ಬಲೆಯನ್ನು ನೇತುಹಾಕಿ ಮೀನಿನ ದೊಡ್ಡ ಹೊರೆಯನ್ನೇ ಹಳ್ಳಿಯ ಕಡೆ ಖುಷಿಯಿಂದ ಒಯ್ಯುತ್ತಿದ್ದಾರೆ. ಹಳ್ಳಿಯ ಮಿಕ್ಕೆಲ್ಲರೂ ಕಟ್ಟಿಗೆಯ ಕಂತುಗಳನ್ನು ತಮ್ಮ ಬೆನ್ನಿನ ಮೇಲೆ ಹೊರೆಯಿಸಿಕೊಂಡು ಧಾವಿಸುತ್ತಿದ್ದಾರೆ.

ಮಾಟಗಾತಿ 'ಶಾಮನ್'

ಎಲ್ಲರಿಗೂ ಪರಿಚಿತವಾಗಿರುವ ಮುದುಕಿಯೊಬ್ಬಳು ಅಚಾನಕ್ಕಾಗಿ ಗೋಚರವಾಗುತ್ತಾಳೆ. ಮುದುಕಿ ಎಲ್ಲೋ ಹೋಗಿ ಹಿಂದಿರುಗಿ ಬರುತ್ತಿರುವಂತೆ ಕಾಣುತ್ತದೆ. ದಿನವಿಡೀ ಈಕೆ ಎಲ್ಲಿ ಮರೆಯಾಗಿದ್ದಳು? ಬಹುಶಃ ಅವಳು ಶಕ್ತಿ ಸಸ್ಯಗಳ (power plants) ಸಂಗ್ರಹಣೆಗೆ ಹೋಗಿದ್ದಳೋ ಏನೋ? ಅಥವಾ ಪವಿತ್ರ ಸ್ಥಳಗಳಲ್ಲಿ ಹಾಡಲು ಹೋಗಿದ್ದಳೋ ಏನೋ? ಅಥವಾ ಭೂತ ಜಗತ್ತಿನ ಒತ್ತಾಳುಗಳ (spirit helpers) ಜೊತೆ ಸಂಪರ್ಕಿಸುತ್ತಿದ್ದಳೋ ಏನೋ? ಕಾಡಿನಲ್ಲಿ ಅಡಗಿಸಿ ಇಟ್ಟಿರುವ ತನ್ನ ಮದ್ದು ಮೂಟೆಯನ್ನು (medicine bundle) ನೋಡಲು ಹೋಗಿದ್ದಳೋ ಏನೋ? ತಿಳಿಯದಿದ್ದರೂ ಯಾರಿಗೂ ಕೇಳುವ ಧೈರ್ಯವಿಲ್ಲ. ಹೆಂಗಸರು ಅವಳನ್ನು ಸೂಕ್ಷ್ಮವಾಗಿ ಗಮನಿಸಿ ಸಭ್ಯತೆಯಿಂದ ಬರಮಾಡಿಕೊಳ್ಳುತ್ತಾರೆ. ಇವಳೇ ಈ ಹಳ್ಳಿಯ 'ಶಾಮನ್,' ಅಂದರೆ ಮಾಟಗಾತಿ.

ಇದುವರೆವಿಗೂ ಹಳ್ಳಿಯ ಜನ ಈ ಶಾಮನ್ನನ್ನು ಖಂಡಿಸಿಲ್ಲ ಅಥವಾ ನಿಂದಿಸಿಲ್ಲ. ಅವಳು ತನ್ನಲ್ಲಿ ಸಾಕಷ್ಟು ಶಕ್ತಿ ಶೇಖರಿಸಿದ್ದಾಳೆ. ಗಂಟೆಗಟ್ಟಲೆ ಹಾಡಿ ತಮ್ಮೊಟ್ಟಿಗೆ ಕುಣಿದಿದ್ದಾಳೆ. ಜನರ ದೇಹದಲ್ಲಿ ಶತ್ರುಗಳು ಸೇರಿಸಿದ ಹಲವಾರು ಮಾರಕ ವಸ್ತುಗಳನ್ನು ತನ್ನ ಕೊಳವೆಯಿಂದ ಹೀರಿದ್ದಾಳೆ. ಅವು ಹಲ್ಲಿಗಳಾಗಿರಬಹುದು, ಹುಳಗಳಾಗಿರಬಹುದು, ಜಿಂಕೆ ಎಲಬಿನ ತುಣುಕಗಳಾಗಿರಬಹುದು ಅಥವಾ ಬೆಣಚು ಕಲ್ಲಿನ ಚೂರುಗಳಾಗಿರಬಹುದು. ಆದರೆ ಒಂದು ಎಚ್ಚರಿಕೆಯ ಮಾತಂತೂ ನಿಜ. ಶಾಮನ್‌ಗಳ ಮೇಲೆ ಜನ ನಿಗಾ ಇಟ್ಟಿರಬೇಕು. ಏಕೆಂದರೆ ಅವರು ಕೇಡಿಗಳಾಗಿ ಪರಿವರ್ತನೆಗೊಳ್ಳಬಹುದು. ಹೀಗಾದಾಗ ಶಾಮನ್ ಗಳಲ್ಲಿ ಕೆಲವು ಬದಲಾವಣೆಗಳು ಕಂಡುಬರುತ್ತವೆ – ಗೂಬೆಗಳ ಜೊತೆ ಸಂಪರ್ಕ ಬೆಳೆಸುವುದು, ಮೈಮೇಲೆ ಕರಡಿಯ ಸ್ವಭಾವ ಆವರಿಸುವುದು ಮತ್ತೆ ಶಾಮನ್ ಮುಟ್ಟಿದವರೆಲ್ಲಾ ಸಾಯುವುದು. ಇಂತಹ ಗಂಭೀರ ಸಂದರ್ಭದಲ್ಲಿ ಜನರು ಶಾಮನ್‌ನನ್ನು ಕೊಲ್ಲುವುದು

ಅವಶ್ಯ. ಆದರೆ ಇದು ಅಷ್ಟು ಸುಲಭವಾದ ಕೆಲಸವಲ್ಲ. ಶಾಮನ್‌ಗೆ ಅಲೌಕಿಕ ಬಲವಿದ್ದಲ್ಲಿ (supernatural powers) ಕೊಲ್ಲುವುದು ಇನ್ನೂ ಕಷ್ಟಕರ. ಆದರೆ ಈ ನಮ್ಮ ಶಾಮನ್ನಿನ ಬಗ್ಗೆ ಇದುವರೆವಿಗೂ ಹಳ್ಳಿಯ ಜನರಲ್ಲಿ ಯಾವ ತರಹವಾದ ಅನುಮಾನ ಹುಟ್ಟಿಲ್ಲ. ಮತ್ತೊಂದು ವಿಷಯ: ಶಾಮನ್ ಮಾಟಗಾರನಾದರೂ ಇರಬಹುದು, ಹೆಂಗಸೇ ಆಗಬೇಕೆಂಬ ನಿಯಮವಿಲ್ಲ.

ಭೋಜನಕೂಟಕ್ಕೆ ತಯಾರಿ

ಹೆಂಗಸರು ಏಕಾರ್ನ್ ಕಾಯಿಗಳನ್ನು ಅರೆಯುವ ಕೆಲಸ ಮುಗಿಸಿದಂತಿದೆ. ಹೊರಗಡೆಯಲ್ಲೇ ಇರುವ ಒಲೆಗಳಿಗೆ ಕಟ್ಟಿಗೆಯನ್ನೂ ತುಂಬಿಸಲಾಗಿದೆ. ಕುದಿಯುವ ನೀರಿನೊಳಗೆ ನುರಿದ ಏಕಾರ್ನ್ ಕಾಯಿಗಳನ್ನು ಕರಗಿಸಿ ತೆಗೆದ ಗಂಜಿಯೇ (mush) ಈ ರಾತ್ರಿಯ ಭೋಜನಕ್ಕೆ ಮೂಲಾಧಾರ. ಭೂಮಿಯಲ್ಲಿ ಹೂತುಕೊಂಡಿರುವ ಒಲೆಗಳಲ್ಲಿ ಹಿಂದೆ ತಯಾರಿಸಿದ ಸವಿ ಪದಾರ್ಥಗಳು ಔತಣಕ್ಕೆ ಸೇರಿಹೋಗುತ್ತವೆ.

ಬೆವರು ಮನೆಯಲ್ಲಿದ್ದ ಗಂಡಸರು ಕುಣಿತಗಳನ್ನು ಮುಗಿಸಿ ಬೆವರು ಸುರಿಸುತ್ತಾ ನದಿಯ ಕಡೆಗೆ ಹೋಗುವರು. ಜಿಂಕೆಯ ಬೆನ್ನು ಪಟ್ಟಿಯಿಂದ (curved deer ribs) ತಮ್ಮ ದೇಹಗಳನ್ನು ಉಜ್ಜಿ ಸ್ವಚ್ಛಗೊಳಿಸಿ, ನದಿಯ ತಣ್ಣನೆಯ ನೀರಿನಲ್ಲಿ ಸ್ನಾನ ಮಾಡಿರುವರು. ಎಲ್ಲ ಗಂಡಸರು ಮೀಸೆ ಗಡ್ಡಧಾರಿಗಳು. ಕೆಲವರು ತಮ್ಮ ಕೂದಲನ್ನು ಹತೋಟಿಯಲ್ಲಿಟ್ಟುಕೊಳ್ಳಲು ಕಳೆ ನಾರಿನಿಂದ (milkweed fibers) ಮಾಡಿದ 'ಕೂದಲುಬಲೆ' (hairnet) ಯನ್ನು ಧರಿಸಿದ್ದಾರೆ. ಮತ್ತೆ ಕೆಲವರು ಕವಡೆ ಮತ್ತು ಕಲ್ಲಿನಿಂದ ಮಾಡಿದ ತಾಯತಗಳನ್ನು (amulets) ಕತ್ತಿಗೆ ಹಾಕಿಕೊಂಡಿದ್ದಾರೆ. ಎಲ್ಲರ ಮೂಗು ಮತ್ತು ಕಿವಿಗಳು ತಿವಿದಿವೆ ಮತ್ತು ರಂಧ್ರದೊಳಗೆ ಮರದ ತುಂಡು ಅಥವಾ ಎಲುಬಿನ ಚೂರು ತೂರಿಸಲಾಗಿದೆ. ಇವಷ್ಟು ಬಿಟ್ಟರೆ ಈ ಗಂಡಸರು ದಿಗಂಬರರು.

ಬೆವರು ಮನೆಯ ಗಂಡಸರೆಲ್ಲಾ ರಾತ್ರಿಯ ಔತಣದಲ್ಲಿ ಮಾಂಸಕ್ಕೆ ನಾ ಒಲ್ಲೆ ಎನ್ನುವರು. ಏಕಾರ್ನ್‌ನಲ್ಲಿ ಮಾಡಿದ ಅಡುಗೆಯೇ ಇವರ ಊಟ. ಇಂತಹ ತಾತ್ಕಾಲಿಕ ಸಸ್ಯಾಹಾರಿತನ ಬೇರೆಯವರಲ್ಲಿ ಆಶ್ಚರ್ಯ ತರುವುದಿಲ್ಲ. ಏಕೆಂದರೆ, ಇವರು ಮಾರನೆಯ ದಿನ ಜಿಂಕೆ ಬೇಟೆಗೆ ಹೋಗಬೇಕಲ್ಲವೇ? ಹೀಗಿರುವಾಗ ಮಾಂಸವನ್ನು ಹೇಗೆ ಸೇವಿಸಿಯಾರು? ಅಂತಹ ಕೃತ್ಯ ಬೇಟೆ ಸಿಗುವುದಕ್ಕೆ ಧಕ್ಕೆ ತರುವುದೆಂಬುದು ಎಲ್ಲರಿಗೂ ತಿಳಿದ ವಿಷಯವೇ ಸರಿ. ಜಿಂಕೆ ಬೇಟೆಯ ಬಗ್ಗೆ ಯಾವ ಹೆಂಗಸೂ ತನ್ನ ಗಂಡಸಿನಲ್ಲಿ ಪ್ರಸ್ತಾಪಿಸುವಂತಿಲ್ಲ. ಆ ವಿಷಯದ ಬಗ್ಗೆ ಏನು ಮಾತನಾಡಿದರೂ ಅವನಿಗೆ ದುರದೃಷ್ಟ ತರಬಹುದು ಅಥವಾ ಆ ಹೆಂಗಸಿಗೆ ರೋಗ ಬಂದು ಆಕೆ ಸಾಯಲೂಬಹುದು.

ಸಡಗರ ತುಂಬಿದ ಕೂಟ

ಹಳ್ಳಿಗರು ಗುಂಪು ಗುಂಪಾಗಿ ಕುಳಿತು ಹಬ್ಬದೂಟವನ್ನು ಸೇವಿಸುತ್ತಾರೆ. ನಗೆ, ಹಾಸ್ಯ, ಸರಸ ತುಂಬಿದ ವಾತಾವರಣವಿರುತ್ತದೆ. ಅಂದಿನ ದಿನದ ಚಟುವಟಿಕೆಗಳನ್ನು

ಮೆಲುಕು ಹಾಕುತ್ತಾರೆ. ಏಕಾರ್ನ್ ಕಾಯಿಗಳನ್ನು ಸರಿಯಾಗಿ ಅರಿಯದ ಓರ್ವ ಸೋಮಾರಿ ಹೆಂಗಸೋ ಅಥವಾ ಆ ದಿನ ಒಂದು ಮೀನೂ ಹಿಡಿಯದ ಗಂಡಸೋ ಮಿಕ್ಕವರ ಕೀಟಲೆಗೆ ಗುರಿಯಾಗುತ್ತಾರೆ. ತಮ್ಮ ತಮ್ಮ ಬೆರಳುಗಳನ್ನು ಏಕಾರ್ನ್ ಗಂಜಿಯ ಬಟ್ಟಲಲ್ಲಿ ಅದ್ದಿ ಶಬ್ದ ಮಾಡುತ್ತಾ ಹೀರುವ ಮೂಲಕ ಇದರ ಸೇವನೆ ನಡೆಯುತ್ತದೆ.

ಕತ್ತಲು ಆಗುತ್ತಿದ್ದಂತೆಯೇ ಹಸುಳೆಯರು ಮತ್ತು ಚಿಕ್ಕ ಮಕ್ಕಳು ಕಂಬಳಿಗಳೊಳಗೆ ತೆವಳಿಕೊಂಡು ನಿದ್ದೆ ಹೋಗುತ್ತಾರೆ. ಇನ್ನಿತರರು ಮೊಲದ ಚರ್ಮದ ಮೇಲಂಗಿ ಮತ್ತು ಜಿಂಕೆ ಚರ್ಮದ ಹೊದಿಕೆಯನ್ನು ಸುತ್ತಿಕೊಳ್ಳುವರು. ಸ್ವಲ್ಪ ವಯಸ್ಸಾದ ಮಕ್ಕಳು ತಮ್ಮ ತಮ್ಮ ಅಜ್ಜಿ–ಅಜ್ಜಂದಿರ ಸುತ್ತಲೂ ಸೇರಿ ಕಥೆಯ ನಿರೀಕ್ಷಣೆಯಲ್ಲಿರುತ್ತಾರೆ.

ಇದ್ದಕ್ಕಿದ್ದಂತೆ ಯಾರೋ ಚೀರುತ್ತಾರೆ. ನೋಡಿದರೆ, ಕಯೋಟಿಯೊಂದು (ಒಂದು ಬಗೆಯ ನರಿ–Coyote) ತನ್ನ ಬಾಯಲ್ಲಿ ಮೀನನ್ನು ಕಚ್ಚಿಕೊಂಡು ಯಾವುದೋ ಒಂದು ಗುಡಿಸಲಿನಿಂದ ಓಡುತ್ತಿದೆ! ಹೆಂಗಸಳೊಬ್ಬಳು ಅದರ ಹಿಂದೆ ತನ್ನ ಕೋಲನ್ನು ಆಡಿಸುತ್ತಾ ಓಡುವಳು. ಮುದುಕನೊಬ್ಬ ಈ ದೃಶ್ಯವನ್ನು ನೋಡಿ ಮುಗುಳ್ನಗುವನು. ಈ ಕಯೋಟಿಗಳೇ ಹೀಗೆ. ಜಗತ್ತಿನ ಕ್ರಿಯೆಯೊಳಗೆ ಕಯೋಟಿಯ ನಕ್ಕು ನಗಿಸುವ ಕೃತ್ಯಗಳನ್ನು ಆ ಮುದುಕ ತನ್ನ ಸುತ್ತಮುತ್ತಲಿದ್ದವರಿಗೆ ಮನವರಿಕೆ ಮಾಡಿಕೊಡುತ್ತಾನೆ. (ಅಮೆರಿಕನ್ ಇಂಡಿಯನ್ನರ ನಂಬಿಕೆಯಲ್ಲಿ ಕಯೋಟಿ ಒಂದು ಅತಿಮಾನುಷ ಚೇತನದ ಸಂಕೇತ (spirit-figure).

ಜೂಜಾಡುವ ಸಮಯ

ಮುದುಕ ಈ ಕಥೆ ಹೇಳುತ್ತಿದಂತೆಯೇ ಹಳ್ಳಿಯ ಇನ್ನೊಂದು ಕಡೆಯಿಂದ ನುಡಿಹಾಡು ಕೇಳಿಬರುತ್ತದೆ. ಹೆಂಗಸರು ಜೂಜು ಆಡುವುದಕ್ಕೆ ಪ್ರಾರಂಭಿಸಿದ್ದಾರೆ. ಎರಡು ಪಂಗಡವಾಗಿ ಬೆಂಕಿಯ ಸುತ್ತ ಎದುರು ಬದುರಾಗಿ ಕೂತಿದ್ದಾರೆ. ಪಂಗಡಕ್ಕೆ ತಲಾ 4 ಮಂದಿ ಇದ್ದಾರೆ. ಒಂದು ಪಂಗಡದ ನೇತೃತ್ವವನ್ನು ಸುಮಾರು 18 ವರ್ಷದ ಸುಂದರಾಂಗಿ ಹೊಂದಿದ್ದಾಳೆ. ಮಿಕ್ಕವರಿಗಿಂತ ಎತ್ತರದ ಈಕೆಗೆ ಮುಖದ ಮೇಲೆ ಸೊಕ್ಕಿನ ಚಹರೆ ಕಂಡುಬರುತ್ತದೆ. ಬೇರೆ ಹೆಂಗಸರೆಲ್ಲಾ ತಮ್ಮ ತಮ್ಮ ಪಂಗಡದ ಹಾಡನ್ನು ಹಾಡುತ್ತಾ ಉಲ್ಲಾಸಭರಿತರಾಗಿರುವಂತೆ ತೋರುತ್ತದೆ. ಅತಿ ಕಿರಿಯಳಾದ 8 ವರ್ಷದ ಬಾಲೆಯಿಂದ ಹಿಡಿದು, ತನ್ನ ಚಾತುರ್ಯ ಮತ್ತು ಅದೃಷ್ಟಕ್ಕೆ ಹೆಸರು ಮಾಡಿರುವ ಬಿಳಿ ಕೂದಲಿನ ಇಳಿ ವಯಸ್ಸಿನ ಮುದುಕಿಯೂ ಈ ಹೆಂಗೆಳೆಯರ ಜೂಜಿನ ಕೂಟದಲ್ಲಿ ಪಾಲ್ಗೊಂಡಿದ್ದಾಳೆ.

ಒಂದು ಪಂಗಡದ ನಾಯಕಿಯು ಕವಡೆಯನ್ನು ಕುಲುಕಿ ತನ್ನ ಸುತ್ತಮುತ್ತ ನೋಡಿ, ಯಾರಿಗೆ ಕೊಡಬೇಕೆಂದು ಯೋಚಿಸುತ್ತಾಳೆ. "ಆ ಬಾಲಕಿ ಪ್ರಬಲವಾಗಿಯೂ, ಅದೃಷ್ಟಶಾಲಿಯಾಗಿಯೂ ಕಾಣುತ್ತಾ ಇದ್ದಾಳಲ್ಲ. ಸರಿ ಅವಳಿಗೇ ಕೊಡೋಣ" ಎಂದು ನಿರ್ಧರಿಸುತ್ತಾಳೆ. ಕವಡೆ ಸ್ವೀಕರಿಸಿದ ಬಾಲಕಿ, ತನ್ನ ಕೈಗಳನ್ನು ಕಂಬಳಿಯ ಒಳಗೆ ಹಾಕಿ, ಸ್ವಲ್ಪ ಝುಣಝುಣಪಡಿಸಿ ತನ್ನ ಮುಷ್ಟಿಗಳನ್ನು ಹೊರ ತೆಗೆಯುತ್ತಾಳೆ. ತನ್ನ ಕೈಗಳನ್ನು ಅಡ್ಡ

ಮಾಡಿಕೊಂಡು ಸೌಮ್ಯದ ಚಹರೆ ತಾಳುತ್ತಾ ನುಡಿಹಾಡು ಹಾಡುವುದರಲ್ಲಿ ತೊಡಗುತ್ತಾಳೆ. ತನ್ನ ಕತ್ತನ್ನು ಸ್ವಲ್ಪ ಬಲಭಾಗಕ್ಕೆ ವಾಲಿಸುತ್ತಾಳೆ. 'ಇದರಲ್ಲಿ ಯಾವುದಾದರೂ ಅರ್ಥವಿದೆಯೇ? ಇಂತಹ ಎಳೆ ವಯಸ್ಸಿನ ಹುಡುಗಿ ಮೋಸ ಮಾಡಲು ಸಾಧ್ಯವೇ?' ಎದುರು ಪಂಗಡದ ಹೆಂಗಸರು ಅವಳನ್ನೇ ದೃಷ್ಟಿಸಿ, ಯಾವುದಾದರೂ ಸುಳಿವು ಸಿಗಬಹುದೆಂದು ಕಾಯುತ್ತಾರೆ. ಬಾಲಕಿ ಹಾಡನ್ನು ನಿಲ್ಲಿಸದೆ ತನ್ನ ಕಣ್ಣುಗಳನ್ನು ಅರ್ಧ ಮುಚ್ಚಿದ ಹಾಗೆ ಮಾಡುತ್ತಾಳೆ. ಕೊನೆಗೆ ಎದುರು ಪಂಗಡದವಳೊಬ್ಬಳು ತನ್ನ ಎಣಿಕೆ ಕಡ್ಡಿಯಿಂದ ಹುಡುಗಿಯ ಬಲಗೈಯಿಯ ಕಡೆ ಸೂಚಿಸುತ್ತಾಳೆ. ಈಗ ಬಾಲಕಿ ಹಾಡನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಕೊಂಚ ನಾಟಕೀಯವಾಗಿ ವರ್ತಿಸುತ್ತಾಳೆ. ಬೇಸರದಿಂದೆಂಬಂತೆ ತನ್ನ ಬಲಗೈಯನ್ನು ನೋಡುತ್ತಾಳೆ. ಮುಚ್ಚಿಟ್ಟ ಎರಡೂ ಕೈಗಳ ಮುಷ್ಟಿಗಳನ್ನು ಬಿಚ್ಚುತ್ತಾಳೆ. ಬಣ್ಣ ಬಳಿದ ಕವಡೆ ಎಡಗೈಯಲ್ಲಿರುವುದು ಎಲ್ಲರಿಗೂ ಕಾಣುತ್ತದೆ. ಎರಡೂ ಪಂಗಡದವರೂ ನಗುತ್ತಾ ಚಪ್ಪಾಳೆ ತಟ್ಟಿ ಬಾಲಕಿಯ ಚಾತುರ್ಯದಲ್ಲಿ ಮೆಚ್ಚುಗೆ ಸೂಚಿಸುತ್ತಾರೆ. ಈ ಹುಡುಗಿ ಅದ್ಭುತ! ನಿಜವಾಗಿಯೂ ಅದ್ಭುತ! ರಾತ್ರಿ ಮುಂದುವರಿಯುತ್ತಿದ್ದಂತೆ ಎದುರು ಪಂಗಡದವರು ಹುಡುಗಿಯಿಂದ ಪದೇ ಪದೇ ಸೋಲನ್ನಪ್ಪುತ್ತಾರೆ. ಇವಳು ಮುಂದೆ ಒಂದು ಮಹಾನ್ ಜೂಜುಗಾರ್ತಿಯಾಗುವಳೆಂದು ಅಲ್ಲಿ ನೆರೆದ ಎಲ್ಲರೂ ಒಪ್ಪುತ್ತಾರೆ.

ಬೇಟೆಗೆ ಸಜ್ಜು

ಹೆಂಗಸರ ನುಡಿಹಾಡುಗಳಲ್ಲಿ ವಿರಾಮ ಉಂಟಾದ ಕ್ಷಣವೇ ಅತ್ತ ಇನ್ನೊಂದು ಗಾನ ಕೇಳಿ ಬರುತ್ತಿದೆ. ಮೆಲುದನಿಯ ಈ ಹಾಡಿಗೆ ಚಿಟಿಕೆ ಹೊಡೆಯುವ ಸದ್ದು ಲಯಬದ್ಧವಾಗಿ ಸೇರಿಕೊಂಡಿದೆ. ಆ ಗಂಡಸರು ಊಟದ ನಂತರ ಬೆವರು ಮನೆ ಸೇರಿದ್ದಾರೆ. ಅವರಲ್ಲಿ ಕೆಲವರು ತಲೆಯಲ್ಲಿ ಗರಿಗಳನ್ನು ಧರಿಸಿ ಕುಣಿಯುತ್ತಿದ್ದಾರೆ. ಇಂದು ರಾತ್ರಿ ಶಿಕಾರಿಯ ಕತೆಗಳನ್ನು ಹೇಳಿಕೊಂಡು ಹೊಗೆಸೊಪ್ಪನ್ನು (tobacco) ಸೇದುವರು. ಬಹುಶಃ ಸರಿಯಾದ ಕನಸುಗಳನ್ನು ಕಾಣುವರು. ತಮಗೆ ಸೂಕ್ತವಾದ ಕನಸುಗಳು ಬಿದ್ದರೆ, ಮರುದಿನ ಮತ್ತೆ ಬೆವರು ಮನೆಯಲ್ಲಿ ಬೆಂಕಿ ಹಚ್ಚಿ, ಇನ್ನೂ ಸ್ವಲ್ಪ ಬೆವರು ಸುರಿಸಿ, ಮೈಮೇಲೆ ಬಣ್ಣ ಬಳಿದುಕೊಂಡು, ಜಿಂಕೆ ತಲೆಯ ಮುಖವಾಡ ಧರಿಸಿ ಬೇಟೆಗೆ ಹೊರಡುವರು.

ಬೇಟೆಯ ಹಿಂದಿನ ದಿನವಾದ ಇಂದು ಊರಿನ ಜನರು ಮಂದಸ್ಮಿತರಾಗುವರು. ಪ್ರಾಯಶಃ ನಾಳೆ ತಾಜಾ ಜಿಂಕೆ ಮಾಂಸ ಕಾದಿದೆಯೂ ಏನೋ. ಹಾಗಾದರೆ ಒಳ್ಳೆಯದು, ಬಹಳ ಒಳ್ಳೆಯದು. ಎಲ್ಲರಿಗೂ ಸ್ವಲ್ಪವಾದರೂ ಲಭಿಸುತ್ತದೆ. ಅದಕ್ಕಿಂತ ಮೇಲಾಗಿ ಈ ಪುರುಷರು ಬೆಟ್ಟದತ್ತ ಹೋದರೆ ಹೂಬೀಜಗಳ (flower seeds) ಬಗ್ಗೆ ಮಾಹಿತಿ ತರುವರು. ನಮ್ಮ ಊರಿನ ಮುಖ್ಯಸ್ಥನು ಬೆಟ್ಟದ ಕಡೆ ಸಂಚರಿಸುವುದಕ್ಕೆ ಅಪ್ಪಣೆ ಕೊಟ್ಟಾನು. ಹಾಗೇ ಆದರೆ ಹಳ್ಳಿಯ ಜನರು ಓಡಿ ಹೋಗಿ ಬೆಟ್ಟಗಳ ಇಳಿಜಾರಿನಲ್ಲಿ ಬೆಳೆದಿರುವ ರುಚಿಕರ 'ಕ್ಲೋವರ್' ಅನ್ನು (ಮೂರು ಎಲೆಯ ಗಿಡ) ಸ್ವಾದಿಸಬಹುದು. ಇಂತಹ ಯೋಚನೆಗಳೇ

ಮನಸ್ಸನ್ನು ಹರ್ಷಿಸುತ್ತದೆ. ಚಳಿಗಾಲದ ಕೊನೆಯ ದಿನಗಳು ಬಂದಿವೆ, ಬೆಟ್ಟದ ಕಡೆ ಸಂಚರಿಸುವ ಹೊತ್ತು ಆಗಮಿಸಿದೆ.

ಕಡೆ ನುಡಿ

ಪರಿಸರಕ್ಕನುಗುಣವಾಗಿ ನಡೆದುಕೊಂಡು ಬಂದಿದ್ದ ಓಹ್ಲೋನಿಯರ ಜೀವನ ಕ್ರಮ, ನೆಲೆ ಎಲ್ಲವೂ ಮೊದಲು ಸ್ಪೇನ್ ದೇಸಿಗರ, ನಂತರ ಅಮೆರಿಕನ್ನರ ಅಧೀನಕ್ಕೆ ಬಂದ ಕೆಲವೇ ದಶಕಗಳಲ್ಲಿ ಅಧೋಗತಿ ಕಂಡಿತು. ತಮ್ಮ ಕಟ್ಟುಪಾಡುಗಳನ್ನು ಓಹ್ಲೋನಿಯರ ಮೇಲೆ ಬಲವಂತವಾಗಿ ಹೇರಿದ ಆಕ್ರಮಣಕಾರರ ದೃಷ್ಟಿಯಲ್ಲಿ, ಸ್ಥಳೀಯರು ಒರಟಾದ, ಪ್ರಾಚೀನ ಶಿಲಾಯುಗದ ಹೆಡ್ಡರೆನಿಸಿಕೊಂಡರು. ಮತೀಯ ಭಾವನೆಗಳನ್ನು ಮುಂದಿಟ್ಟುಕೊಂಡು ಸ್ಪೇನ್ ಮೂಲದ ಕ್ರೈಸ್ತಧರ್ಮ ಪ್ರಚಾರಕರು (missionaries) ಸ್ಥಳೀಯರ ಸೂಕ್ಷ್ಮತೆಗಳನ್ನು ಅರಿಯುವುದರ ಬದಲಾಗಿ ಇವರನ್ನು 'ನಾಗರಿಕ'ರನ್ನಾಗಿ ಮಾಡುವುದು ತಮ್ಮ ದೈವನಿಯಮಿತ ಕರ್ತವ್ಯವೆಂದು ಭಾವಿಸಿದ್ದರು. ಅವರ ಬಲಾತ್ಕಾರವನ್ನು ಎದುರಿಸಿದ ಸ್ಥಳೀಯರನ್ನು ಅಮಾನುಷವಾಗಿ ಹಿಂಸಿಸಲಾಯಿತು ಮತ್ತು ಕೊಲ್ಲಲಾಯಿತು. ಪಾಶ್ಚಾತ್ಯರು ತಂದ, ತಾವೆಂದೂ ಕಾಣದ ದಡಾರ (measles), ಸಿಡುಬು (smallpox), ಮಂಪ್ಸ್ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಸ್ಥಳೀಯರು ಬಲಿಯಾದರು. ಮೂಲನಿವಾಸಿಗರ ಜನಸಂಖ್ಯೆ ಕ್ಷೀಣಿಸುವುದಕ್ಕೆ ಇದೂ ಒಂದು ಕಾರಣವಾಯಿತು. ಆದಿವಾಸಿಗರ ಸಂಸ್ಕೃತಿಗೆ ಮಾನ್ಯತೆ ನೀಡಿ ಅವರೊಡನೆ ಸಹಬಾಳ್ವೆಯಿಂದಿರಬೇಕು ಎಂಬ ಮನಗಾಣುವಿಕೆ ಅಮೆರಿಕನ್ನರಿಗೆ ಬರುವಷ್ಟರಲ್ಲಿ ಕಾಲ ಮಿಂಚಿತ್ತು. ಆದಿವಾಸಿಗರ ಬದುಕು ಮತ್ತು ಬದುಕಿನ ಕ್ರಮ ಆಗಲೇ ಹೆಚ್ಚೂ ಕಡಿಮೆ ಶಾಶ್ವತವಾಗಿ ಕಣ್ಮರೆಯಾಗಿತ್ತು.

ತಮ್ಮ ಪೂರ್ವಿಕರು ನೆಲೆಸಿದ್ದ ಸ್ಯಾನ್ ಫ್ರಾನ್ಸಿಸ್ಕೋ ಮತ್ತು ಮೊಂಟೆರೇ ಕೊಲ್ಲಿ ಪ್ರದೇಶಗಳಲ್ಲಿ ಓಹ್ಲೋನಿಯರ ವಂಶಸ್ಥರು ಅಲ್ಲೋ ಇಲ್ಲೋ ಇಂದಿಗೂ ಇದ್ದಾರೆ. ಅವರಿಗೆ ಪವಿತ್ರ ಸ್ಥಳವೆನಿಸಿದ ಭೂಮಿಯ ಮೇಲೆ ಕಟ್ಟಡ ಅಥವಾ ರಸ್ತೆ ನಿರ್ಮಾಣ ಕಾರ್ಯಗಳು ಚಾಲನೆಯಾಗುವ ಸಂದರ್ಭಗಳಲ್ಲಿ ಇವರ ಪ್ರತಿಭಟನೆಯ ಧ್ವನಿ ಒಮ್ಮೊಮ್ಮೆ ಬೇ ಏರಿಯಾದಲ್ಲಿ ಕೇಳಿಬರುತ್ತದೆ.

ಸಾವಿರಾರು ವರ್ಷಗಳಿಂದ ತಮ್ಮ ನೆಲೆಯಲ್ಲಿ ತಾವು ನಿರಾಳವಾಗಿ ಬದುಕುತ್ತಿದ್ದವರನ್ನು ವಲಸೆ ಹೂಡುವ ನೆಪದಲ್ಲಿ ಆಕ್ರಮಣ ಮಾಡಿ, ಇಡೀ ಜನಾಂಗವನ್ನೇ ಬಹುಪಾಲು ನಿರ್ನಾಮ ಮಾಡಿದ್ದನ್ನು ಸಮರ್ಥಿಸಲು ಸಾಧ್ಯವೇ?... ಯಾವ ದೃಷ್ಟಿಕೋನದಿಂದ ನೋಡಿದರೂ ಈ ಪ್ರಶ್ನೆಗೆ ನಕಾರಾತ್ಮಕ ಉತ್ತರವೇ ಸಮಂಜಸವೆನಿಸುತ್ತದೆ.

ಆಧಾರ

1. 'ಅಮೆರಿಕನ್ ಇಂಡಿಯನ್ ಸ್ಟೋರೀಸ್ ಅಂಡ್ ಓಲ್ಡ್ ಲೆಜೆಂಡ್ಸ್' – ಝಿತ್ಕಾಲ ಸಾ, ಡೋವರ್ ಪಬ್ಲಿಕೇಷನ್ಸ್, ನ್ಯೂ ಯಾರ್ಕ್, ನ್ಯೂ ಯಾರ್ಕ್.

2. https://www.californiafrontier.net/ohlone-tribe-language-food-clothing/
3. "There Were Once More Than 425 Shellmounds in the Bay Area. Where Did They Go?" by Laura clivens, December 6, 2019 https://www.kqed.org/
4. 'ದಿ ಓಹ್ಲೋನಿ ವೇ' - ಮಾಲ್ಕಮ್ ಮಾರ್ಗೋಲಿನ್, ಹೇ ಡೇ ಬುಕ್ಸ್, ಬರ್ಕ್ಲೀ, ಕ್ಯಾಲಿಫೋರ್ನಿಯಾ.
5. https://en.wikipedia.org/wiki/Ohlone.
6. http://www.native-languages.org/ohlone-legends.htm.

❑

(25)

ಮೂಲನಿವಾಸಿಗಳ ವೈದ್ಯ ಲೋಕ: ಒಂದು ಕೌತುಕಮಯ ಜಗತ್ತು

ಜ್ಯೋತಿ ವೆಂಕಟಸುಬ್ರಹ್ಮಣ್ಯ
ಲ್ಯಾರೆಮಿ, ವಯೋಮಿಂಗ್

*

ಪ್ರಸ್ತಾವನೆ

ಉತ್ತರ ಅಮೇರಿಕಾ, ಕೆನಡಾಗಳಲ್ಲಿ ಸುಮಾರು 80,000 ಸಾವಿರ ವರ್ಷಗಳ ಹಿಂದಿನಿಂದಲೇ ಜನಜೀವನ ಇದ್ದ ಕುರುಹುಗಳು ಇವೆಯಾದರೂ ಸುಮಾರು 15 ಸಾವಿರ ವರ್ಷಗಳಿಂದ ಆದಿವಾಸಿಗಳು ವ್ಯವಸ್ಥಿತವಾಗಿ, ಗುಂಪುಗಳಲ್ಲಿ ನಾಗರಿಕ ಜೀವನ ನಡೆಸುತ್ತಿದ್ದರು ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಇವರೂ ಎಲ್ಲಾ ಪ್ರಾಚೀನ ಬುಡಕಟ್ಟಿನವರಂತೆ ಸರಳ, ಪ್ರಾಕೃತಿಕ ಜೀವನ ನಡೆಸುತ್ತಿದ್ದರು. 15ನೇ ಶತಮಾನದಲ್ಲಿ ಯೂರೋಪಿಯನ್ನರ ಆಗಮನದೊಂದಿಗೆ ಮೂಲನಿವಾಸಿಗಳ ವ್ಯವಸ್ಥಿತ ಅವನತಿ ಆರಂಭವಾಯಿತು. ರೋಗ ರುಜಿನಗಳು, ಮಾರಣಹೋಮಗಳು, ಯುದ್ಧಗಳು, ಸ್ಥಾನಪಲ್ಲಟಗಳು, ಸಂಸ್ಕೃತಿ ಮತ್ತು ಜೀವನಶೈಲಿಯ ನಾಶ ಇತ್ಯಾದಿಗಳಿಂದ ಅವರ ಜೀವನದಲ್ಲಿ ಬಹಳ ಮಾರ್ಪಾಟುಗಳಾದವು. ಮುಂದೆ ಅವರನ್ನು ಕೆಲವೇ ಕೆಲವು ನಿಗದಿತ ಪ್ರದೇಶಗಳಿಗೆ ಸೀಮಿತಗೊಳಿಸಿದರು. ಈ ಎಲ್ಲಾ ಅಹಿತಕರ ಬದಲಾವಣೆಗಳ ನಡುವೆಯೂ ಮೂಲನಿವಾಸಿಗಳು, ತಮ್ಮ ಕಲೆ, ಸಂಸ್ಕೃತಿ, ಜ್ಞಾನಗಳನ್ನು ಬಹುಮಟ್ಟಿಗೆ ಕಾಪಾಡಿಕೊಂಡು ಬಂದಿದ್ದಾರೆ. ಸುಮಾರು 550ಕ್ಕೂ ಹೆಚ್ಚು ಪಂಗಡಗಳು ಇಂದಿಗೆ ಅಮೇರಿಕಾ ಮತ್ತು ಕೆನಡಾಗಳಲ್ಲಿ ವಾಸವಾಗಿದ್ದಾರೆ. ತಮ್ಮ ಪರಂಪರೆ ಮತ್ತು ಆಧುನಿಕ ಜೀವನ ಎರಡನ್ನೂ ತಮ್ಮ ಜೀವನಶೈಲಿಯಲ್ಲಿ ಅಳವಡಿಸಿಕೊಂಡು ಬದುಕುತ್ತಿದ್ದಾರೆ.

ಮೂಲನಿವಾಸಿಗಳ ವೈದ್ಯಕೀಯ ಪದ್ಧತಿಗಳು ಮತ್ತು ಅವಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕಾದರೆ ಮೊದಲು ಕೆಲವು ಹಿನ್ನೆಲೆಗಳನ್ನು ಅರ್ಥ

ಮಾಡಿಕೊಳ್ಳಬೇಕು. ಎಲ್ಲಾ ಪ್ರಾಚೀನ ಮತ್ತು ಸಾಂಪ್ರದಾಯಿಕ ಸಮಾಜಗಳಂತೆ ಇವರೂ ಸಹಾ ಲೌಕಿಕ (ನೈಸರ್ಗಿಕ) ಮತ್ತು ಅಲೌಕಿಕ ಶಕ್ತಿಗಳು ಜೀವನವನ್ನು ಬಹುಮಟ್ಟಿಗೆ ನಿಯಂತ್ರಿಸುತ್ತವೆ ಎಂಬ ತತ್ವದಲ್ಲಿ ನಂಬಿಕೆ ಇಟ್ಟವರು. ಭೂತ ಪ್ರೇತಗಳು, ಆತ್ಮಗಳು, ಮತ್ತು ಕಣ್ಣಿಗೆ ಕಾಣದ ದೈವೀಶಕ್ತಿಗಳು ಅವರ ಉಳಿವು, ಅಳಿವುಗಳಿಗೆ ಕಾರಣ ಎಂಬುದು ಸಾಮಾನ್ಯ ನಂಬಿಕೆಯಾಗಿತ್ತು. ಇಷ್ಟಕ್ಕೆ ಮೀರಿ ಬೇರೆ ವೈದ್ಯಕೀಯ ಅರಿವು, ಶಾರೀರಶಾಸ್ತ್ರ ಅಥವಾ ವಿಶೇಷ ಔಷಧಿಗಳ ಪ್ರಯೋಗಗಳ ಬಗ್ಗೆ ಮಾಹಿತಿ ಇದ್ದ ಯಾವುದೇ ದಾಖಲೆಗಳಿಲ್ಲ. ಮೂಲನಿವಾಸಿಗಳ ಯಾವುದೇ ಪಂಗಡದವರಲ್ಲೂ ಲಿಖಿತ ಭಾಷೆಯ ಆವಿಷ್ಕಾರವಾಗಿರಲಿಲ್ಲ. ಹಿಂದಿನ ತಲೆಮಾರಿನಿಂದ ಮುಂದಿನ ಪೀಳಿಗೆಗೆ ಈ ಎಲ್ಲಾ ಜ್ಞಾನ ಸಂಪತ್ತು ಕೇವಲ ಮೌಖಿಕವಾಗಿಯೇ ವರ್ಗಾಯಿಸಲ್ಪಡುತ್ತಿತ್ತು, ಮತ್ತು ಹೆಚ್ಚೂ ಕಡಿಮೆ ಎಲ್ಲಾ ವಿಷಯಗಳನ್ನೂ ಗೋಪ್ಯವಾಗಿಯೇ ಇರಿಸಲಾಗುತ್ತಿತ್ತು. ಈ ಚಿಕಿತ್ಸಾ ಪದ್ಧತಿಗಳ ಪಾವಿತ್ರ್ಯ ನಾಶವಾಗುತ್ತದೆ ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳದಿದ್ದರೆ ಅದರ ಪ್ರಭಾವ ಮತ್ತು ಶಕ್ತಿ ನಾಶವಾಗುತ್ತದೆ ಎಂಬ ನಂಬಿಕೆಗಳಿಂದ ಈ ಜ್ಞಾನವನ್ನು ಮುಕ್ತವಾಗಿ ಹಂಚಿಕೊಳ್ಳದಿದ್ದುದರಿಂದ ಕಾಲಾನುಕ್ರಮದಲ್ಲಿ ಬಹಳಷ್ಟು ಕಳೆದುಹೋದದ್ದೂ ಇದೆ. ಇಂದಿಗೂ ಸಹಾ ಅನೇಕ ಬುಡಕಟ್ಟುಗಳಲ್ಲಿ ನಡೆಸುವ ಆಚರಣೆಗಳಿಗೆ ಮತ್ತು ಚಿಕಿತ್ಸೆಗಳಿಗೆ ಮೂಲನಿವಾಸಿಗರ ಜನಾಂಗಕ್ಕೆ ಸೇರಿದವರ ಹೊರತು ಹೊರಗಿನವರಿಗೆ ಪ್ರವೇಶವಿಲ್ಲ.

ಮೂಲನಿವಾಸಿಗಳ ಜೀವನದೃಷ್ಟಿ ಮತ್ತು ವೈದ್ಯ

ಪ್ರಾಚೀನ ಅಮೆರಿಕನ್ನರಿಗೆ (ಮೂಲನಿವಾಸಿಗಳಿಗೆ) ಈ ಭೂಮಿಯಲ್ಲಿನ ಜೀವನವೆಂದರೆ ಒಂದು ವಿಶೇಷ ಪಥ ಅಥವಾ ದಾರಿ. ನಾವಹೊ ಪಂಗಡದವರು ಇದನ್ನು 'ಪರಾಗ ಪಥ' (Pollen Path) ಎಂದರೆ ಉಳಿದವರು 'ಉತ್ತಮ ಕೆಂಪು ದಾರಿ' (Good Red Road) ಎನ್ನುತ್ತಾರೆ. ಈ ಜೀವನ ಎನ್ನುವ ದಾರಿ ಆದಿ ಅಂತ್ಯಗಳಿಲ್ಲದ ಒಂದು ಅನಂತ ಚಕ್ರದ ಭಾಗ. ಇದೊಂದು ಹುಟ್ಟು ಸಾವು, ಮನುಷ್ಯ, ಸಮಾಜ ಎಲ್ಲವನ್ನು ಮೀರಿದ ಅಸ್ತಿತ್ವದ ನಿರಂತರ ಚಕ್ರ. ಈ ಸೃಷ್ಟಿಯಲ್ಲಿ ಎಲ್ಲವೂ ಒಂದಕ್ಕೊಂದು ಬೆಸೆದುಕೊಂಡಿವೆ ಮತ್ತು ನಮ್ಮ ಜೀವದೊಂದಿಗೆ ಪ್ರಕೃತಿ ಮತ್ತು ಸೃಷ್ಟಿಯ ಸರ್ವ ಚೈತನ್ಯಗಳಿಗೂ ಬಿಡಿಸಲಾರದ ಸಂಬಂಧವಿದೆ. ಈ ಚಕ್ರದ ಕೇಂದ್ರ ಬಿಂದುವೇ ಪರಮ ಚೈತನ್ಯ (ಸೃಷ್ಟಿಕರ್ತ). ಚಕ್ರದ ಕಡ್ಡಿಗಳು ಹೇಗೆ ಒಂದಕ್ಕಿಂತ ಒಂದು ಭಿನ್ನವಾಗಿದ್ದರೂ, ಕೇಂದ್ರದೊಂದಿಗೆ ಸಂಪರ್ಕ ಹೊಂದಿವೆಯೋ ಹಾಗೆ ಎಲ್ಲ ಮನುಷ್ಯರೂ ಪ್ರಕೃತಿಯ ಇತರ ಜೀವ ಚೈತನ್ಯಗಳೊಂದಿಗೆ ಬಾಂಧವ್ಯ ಹೊಂದಿದ್ದೇವೆ. ಈ ಸತ್ಯದ ಅರಿವಿನೊಂದಿಗೆ ಬದುಕುವುದರಿಂದ ಜೀವನಕ್ಕೊಂದು ಹೊಸ ಪರಿಪೂರ್ಣತೆ ಮತ್ತು ಸಾರ್ಥಕತೆ ಸಿಗುತ್ತದೆ. ಈ ತತ್ವವನ್ನು ಮೂಲನಿವಾಸಿಗಳು ಸಾವಿರಾರು ವರ್ಷಗಳ ಹಿಂದೆಯೇ ನಿರ್ಮಿಸಿದ ಕಲ್ಲಿನ ಔಷಧಿ ಚಕ್ರಗಳಲ್ಲಿ ಸಾಂಕೇತಿಕವಾಗಿ ಚಿತ್ರಿಸಿದ್ದನ್ನು ಕಾಣಬಹುದು. ಉತ್ತರ ಅಮೇರಿಕಾ, ಕೆನಡಾಗಳಲ್ಲಿ ಅನೇಕ ಕಡೆ ಇಂತಹ ಚಕ್ರಗಳಿವೆ. ಬಹಳ ಪ್ರಖ್ಯಾತವಾದ ಚಕ್ರ ವಯೋಮಿಂಗ್ ರಾಜ್ಯದ ಬಿಗ್‌ಹಾರ್ನ್ ರಾಷ್ಟ್ರೀಯ ಉದ್ಯಾನವನದಲ್ಲಿದೆ.



ಔಷಧಿ ಚಕ್ರ – ಬಿಗ್‌ಹಾರ್ನ್, ವಯೋಮಿಂಗ್

ಮೂಲನಿವಾಸಿಗಳು ಜೀವನವೆಂದರೆ ಜೀವ, ಪ್ರಕೃತಿಗಳ ಸಾಮರಸ್ಯ ಮತ್ತು ರೋಗಗಳೆಂದರೆ ಈ ಸಾಮರಸ್ಯದಲ್ಲಿ ಏರುಪೇರುಂಟಾಗುವುದು ಎಂದು ನಂಬಿದ್ದರು. ದುಃಖ, ಶಾರೀರಿಕ ನೋವು, ತೊಂದರೆಗಳು ಮತ್ತು ಅಧರ್ಮ ಪಾಲನೆಗಳಿಂದ ದೇಹ, ಮನಸ್ಸು ಮತ್ತು ಆತ್ಮಗಳ ಸಮತೋಲನದಲ್ಲಿ ಏರುಪೇರಾಗುತ್ತದೆ. ಹಾಗಾಗಿ ಚಿಕಿತ್ಸೆಯ ಉದ್ದೇಶ ಈ ಅಸಮತೋಲನದ ಮೂಲ ಕಾರಣವನ್ನು ಅರಿತು ಸರಿಪಡಿಸಿ ಮತ್ತೆ ಸಾಮರಸ್ಯವನ್ನು ಸ್ಥಾಪಿಸಿ ವ್ಯಕ್ತಿಯನ್ನು ಉತ್ತಮ 'ಕೆಂಪು ದಾರಿ'ಯಲ್ಲಿ ನಡೆಯಲು ಅನುವು ಮಾಡುವುದು. ಜೀವನ ಸಾರ್ಥಕತೆಯನ್ನು ಸಿದ್ಧಿಸಲು ಸಹಾಯ ಮಾಡುವುದು. ಇದು ಬಹಳಷ್ಟು ಮಟ್ಟಿಗೆ ಭಾರತೀಯ ಸನಾತನ ವೈದ್ಯ ಪದ್ಧತಿ, ಆಯುರ್ವೇದದ ತತ್ವಕ್ಕೆ ಹತ್ತಿರವಾದದ್ದು. ಚಿಕಿತ್ಸಾ ಪದ್ಧತಿಗಳು, ರೋಗನಿರ್ಣಯಗಳ ಬಗ್ಗೆ ಪಂಗಡಗಳಲ್ಲಿ ಭೇದವಿದ್ದರೂ ದೇಹ ಮನಸ್ಸು ಮತ್ತು ಆತ್ಮಗಳು ಸತ್ವಯುತ ಮತ್ತು ಶುದ್ಧವಾಗಿದ್ದರೆ ರೋಗಗಳು ಬಾರದಂತೆ ತಡೆಗಟ್ಟಬಹುದು ಎಂದು ಎಲ್ಲ ಪಂಗಡದವರೂ ನಂಬುತ್ತಾರೆ. ಹಾಗಾಗಿ ರೋಗಿಯ ಒಳ ಹೊರಗೆ, ಕುಟುಂಬದಲ್ಲಿ, ಸಮುದಾಯದಲ್ಲಿ ಸಾಮರಸ್ಯವನ್ನು ಸ್ಥಾಪಿಸುವುದೇ ವೈದ್ಯರ ಮುಖ್ಯ ಉದ್ದೇಶ. ಸಾಮಾನ್ಯವಾಗಿ ಈ ಎಲ್ಲಾ ಚಿಕಿತ್ಸೆಗಳು ರೋಗಿಯ ಪರಿವಾರದವರನ್ನು ಮತ್ತು ಕೆಲವೊಮ್ಮೆ ಇಡೀ ಸಮುದಾಯವನ್ನೂ ಭಾಗಿಯಾಗಿಸುತ್ತವೆ. ಗಿಡಮೂಲಿಕೆಗಳ ಪ್ರಯೋಗ ಬಹಳ ಮುಖ್ಯವಾದರೂ ಅವುಗಳು ಚಿಕಿತ್ಸೆಯ ಒಂದು ಅಂಶವಷ್ಟೇ. ಅದನ್ನು ಬಳಸಿ ವ್ಯಕ್ತಿಯನ್ನು ದೈಹಿಕ ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಆರೋಗ್ಯವಂತನನ್ನಾಗಿ ಮಾಡುವುದೇ ಮೂಲ ಉದ್ದೇಶ. ಇದಕ್ಕೆಂದೇ

ಚಿಕಿತ್ಸಾ ವಿಧಿಗಳು ಅಥವಾ ಆಚರಣೆಗಳನ್ನು ನಡೆಸಲಾಗುತ್ತದೆ. ಇವು ಅನೇಕ ವಿಧಿಗಳು, ನೃತ್ಯ, ಪ್ರಾರ್ಥನೆ, ಹಾಡು, ಸಂಗೀತ, ಹಬ್ಬದೂಟ ಹೀಗೆ ಎಲ್ಲಾ ಸೇರಿ ವೈವಿಧ್ಯಮಯವಾಗಿ, ವರ್ಣಮಯವಾಗಿ, ಸಮುದಾಯದವರೆಲ್ಲಾ ಸೇರಿ ನಡೆಸುವ ಉತ್ಸವವಾಗಿ ಮಾರ್ಪಾಡಾಗುತ್ತವೆ. ಇಂತಹ ಆಚರಣೆಗಳು ಕೇವಲ ರೋಗವನ್ನು ವಾಸಿ ಮಾಡುವುದಕ್ಕಷ್ಟೇ ಅಲ್ಲದೆ ಜೀವನದ ಪ್ರತಿಯೊಂದು ಘಟ್ಟಗಳಲ್ಲೂ ನಡೆಯುತ್ತವೆ (ಜನನ, ಬಾಲ್ಯಾವಸ್ಥೆ, ಯೌವ್ವನ, ಮದುವೆಯಾದಾಗ, ಮಧ್ಯವಯಸ್ಸಿಗೆ ಬಂದಾಗ ಮತ್ತು ವೃದ್ಧಾಪ್ಯದಲ್ಲಿ). ಇದಲ್ಲದೇ ಭೂಮಿಯನ್ನು ಪುನರುಜ್ಜೀವನಗೊಳಿಸುವ ವಿಧಿಗಳು, ಸುಗ್ಗಿ ಮುಂತಾದ ಹಬ್ಬಗಳಲ್ಲಿ ಮತ್ತು ಚೆರೋಕೆ ಮತ್ತಿತರ ಸಮುದಾಯದವರು ನಡೆಸುವ ಸಮುದಾಯ ಆಶೀರ್ವಾದ ಸಮಾರಂಭಗಳಲ್ಲೂ ಇದೇ ರೀತಿಯ ಆಚರಣೆಗಳನ್ನು ಕಾಣಬಹುದು. ಸಾಮಾನ್ಯವಾಗಿ ಇವು ಮುಕ್ತವಾದ ಆಚರಣೆಗಳಾದರೂ ಹಲವು ವಿಧಿಗಳು ಮಾತ್ರ ತುಂಬಾ ಗೋಪ್ಯವಾಗಿ ನಡೆಯುತ್ತವೆ.

ಔಷಧಿ ಪುರುಷ/ಮಹಿಳೆ (ಶಾಮನ್)

ಮೂಲನಿವಾಸಿಗಳಲ್ಲಿ ಔಷಧಿ ಅಥವಾ ವೈದ್ಯ ಎನ್ನುವುದಕ್ಕೆ ಸಮಾನಾರ್ಥಕ ಪದವಿಲ್ಲ. ಅವರು ಇದನ್ನು 'ರಹಸ್ಯ' ಅಥವಾ 'ನಿಗೂಢ' ಎನ್ನುತ್ತಾರೆ ಅಷ್ಟೇ. ಈ ಚಿಕಿತ್ಸೆಗಳನ್ನು ನಡೆಸುವ ವ್ಯಕ್ತಿಗಳನ್ನು ಯೂರೋಪಿಯನ್ನರು 'ಔಷಧಿ ಪುರುಷರು' ಅಥವಾ 'ಔಷಧಿ ಮಹಿಳೆ' (ಶಾಮನ್) ಎಂದು ಕರೆದರು. ಈ ಔಷಧಿ ಪುರುಷರು/ಮಹಿಳೆಯರು ಚಿಕ್ಕ ವಯಸ್ಸಿನಲ್ಲೇ ತಮ್ಮ ಕಲಿಕೆಯನ್ನು ಪ್ರಾರಂಭಿಸುತ್ತಿದ್ದರು. ಎಷ್ಟೋ ಬಾರಿ ಇವರಿಗೆ ಈ ಸಾಧನೆ ಮಾಡಲು ವಿಶೇಷ ಸಾಕ್ಷಾತ್ಕಾರವಾಗುತ್ತಿತ್ತು ಎಂಬ ನಂಬಿಕೆ ಇದೆ. ಕಿರಿಯ ವಯಸ್ಸಿನ ವೈದ್ಯರು ಸಾಮಾನ್ಯವಾಗಿ ಹಿರಿಯ ವೈದ್ಯರ ಸಹಾಯಕರಾಗಿ ವರ್ಷಾನುಗಟ್ಟಲೆ ಕೆಲಸ ಮಾಡುತ್ತಿದ್ದರು. ಇವರೆಲ್ಲಾ ಸಾಮಾನ್ಯ ಜನರ ದೃಷ್ಟಿಯಲ್ಲಿ ಲೌಕಿಕ ಮತ್ತು ಅಲೌಕಿಕ ಪ್ರಪಂಚಗಳಿಗೆ ಮಧ್ಯವರ್ತಿಗಳಾಗಿ ಗೌರವ ಸಂಪಾದಿಸುತ್ತಿದ್ದರು. ಸುತ್ತಮುತ್ತಲಿನ ಎಲ್ಲಾ ಗಿಡಮೂಲಿಕೆಗಳ ಜ್ಞಾನವಲ್ಲದೆ, ಮಂತ್ರ, ಪ್ರಾರ್ಥನಾ ಗೀತೆಗಳು, ಆಚರಣಾ ವಿಧಿಗಳು ಇವನ್ನೆಲ್ಲಾ ಕೇವಲ ಕೇಳಿಯೇ ಕಲಿತು ನೆನಪಿಟ್ಟುಕೊಳ್ಳುವುದು ದೊಡ್ಡ ಸಾಧನೆಯೇ ಸರಿ. ಇವರು ಕೇವಲ ಔಷಧಿ ಕೊಡುವವರಲ್ಲದೆ ಬುಡಕಟ್ಟು ಜನಾಂಗದವರಿಗೆ ಧಾರ್ಮಿಕ ಮತ್ತು ಆಧ್ಯಾತ್ಮಿಕ ಗುರುಗಳೂ ಹೌದು. ಅನೇಕ ವರ್ಷಗಳ ಸಾಧನೆ, ಪೂಜೆ ಮತ್ತು ಉಪವಾಸಗಳಿಂದ ಇವರಲ್ಲಿ ವಿಶೇಷ ಶಕ್ತಿ, ಪ್ರಭಾವಗಳು ನೆಲೆಗೊಂಡಿವೆ ಎಂದು ಜನರು ನಂಬುತ್ತಿದ್ದರು. ಇವರ ಮೂಲಕ ಸೃಷ್ಟಿಕರ್ತನ ಚೇತನ ತಮ್ಮೊಡನೆ ಸಂಭಾಷಿಸುತ್ತದೆ ಎಂದು ನಂಬಿದ್ದರು. ಕಾಡುಮೇಡುಗಳಲ್ಲಿ ಅಲೆದು ಸಂಗ್ರಹಿಸಿದ ಮೂಲಿಕೆಗಳು, ಚಿಕಿತ್ಸೆಗೆ ಬೇಕಾದ ಇತರ ವಸ್ತುಗಳು, ಪ್ರಾಣಿಗಳ ಉಗುರು, ಹಲ್ಲು, ಹರಳುಗಳು ಇತ್ಯಾದಿಗಳನ್ನು ತಮ್ಮ ಔಷಧಿ ಚೀಲಗಳಲ್ಲಿ ತುಂಬಿಸಿಕೊಂಡು ತಿರುಗುತ್ತಿದ್ದರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೇವಲ ದೈವದ ಪ್ರತೀಕದಂತೆ ಕೆಲಸ ಮಾಡಿದರೆ ಮಾತ್ರ ತಮ್ಮ ಪ್ರಭಾವ ಮತ್ತು

ಶಕ್ತಿಗಳು ಉಳಿಯುತ್ತವೆ ಎಂದು ನಂಬಿದ್ದರು. ಎಷ್ಟೋ ಬಾರಿ ಚಿಕಿತ್ಸೆಯಲ್ಲಿ ಬಳಸುವ ಸಂಕೇತಗಳು, ಹಾಡುಗಳು ಮತ್ತು ಮೂಲಿಕೆಗಳ ದರ್ಶನ ಇವರಿಗೆ ಕನಸಿನಲ್ಲಿ ಕಾಣುತ್ತಿತ್ತು ಎಂಬ ನಂಬಿಕೆಯೂ ಇತ್ತು. ಆತ್ಮಸಾಕ್ಷಾತ್ಕಾರಕ್ಕಾಗಿ ಕಾಡಿನಲ್ಲಿ ಒಬ್ಬರೇ ಋಷಿಗಳಂತೆ ಕಠಿಣ ವ್ರತ (ಉಪವಾಸ, ಪ್ರಾರ್ಥನೆ, ವಿಧಿಗಳು)ಗಳನ್ನು ಆಚರಿಸುತ್ತಿದ್ದರು.

ಆಚರಣೆಗಳು

ಮೂಲನಿವಾಸಿಗಳಿಗೆ ಚಿಕಿತ್ಸೆಯೆಂದರೆ ಕೇವಲ ಔಷಧಿ ಕೊಡುವ/ತೆಗೆದುಕೊಳ್ಳುವ ಪ್ರಕ್ರಿಯೆಯಷ್ಟೇ ಅಲ್ಲದೆ ಆತ್ಮ, ಮನಗಳೊಂದಿಗೆ ಪರಮಚೇತನದ ಸಾಂಗತ್ಯಪೂರ್ವಕ ಸಾಮರಸ್ಯವನ್ನು ಪುನಃಸ್ಥಾಪಿತಗೊಳಿಸುವುದು ಮತ್ತು ತನ್ಮೂಲಕ ರೋಗ ನಿವಾರಣೆಯಾಗಿ ಜೀವ ಚೈತನ್ಯವನ್ನು ಪುನಶ್ಚೇತನಗೊಳಿಸುವುದು. ಇದರ ಸಾಧನೆಗಾಗಿ ನೆರವೇರಿಸುವ ವಿಧಿವತ್ತಾದ, ನೇಮ – ನಿಯಮಗಳಿಂದ ಕೂಡಿದ ಧಾರ್ಮಿಕ, ಆಧ್ಯಾತ್ಮಿಕ ಮಹತ್ವವುಳ್ಳ ಕಾರ್ಯಗಳೇ ಆಚರಣೆಗಳು. ಅವುಗಳ ವಿಸ್ತಾರ, ವೈವಿಧ್ಯಗಳನ್ನು ಕೆಲವು ಸಾಲುಗಳಲ್ಲಿ ಹಿಡಿದಿಡಲು ಕಷ್ಟ. ಈ ಆಚರಣೆಗಳು ಸಾಮಾನ್ಯವಾಗಿ ಪ್ರಾರ್ಥನೆ, ವಿಶಿಷ್ಟ ಹಾಡುಗಳು, ವಾದ್ಯ ಸಂಗೀತ, ನೃತ್ಯ ಇವುಗಳೆಲ್ಲದರ ಸಮ್ಮಿಲಿತ. ಅದ್ಭುತ, ಅಲೌಕಿಕ ಅನುಭವ ನೀಡುವ ವಿಶಿಷ್ಟ ಕಾರ್ಯ ಸಂಯೋಜನೆಗಳು. ವೈಯಕ್ತಿಕ ಶಮನವಿಧಿಗಳಲ್ಲೂ ಮತ್ತು ಬುಡಕಟ್ಟಿನವರೆಲ್ಲರೂ ಸೇರಿ ಆಚರಿಸುವ ಅನೇಕ ಸಾಂಪ್ರದಾಯಿಕ ವಿಧಿಗಳಲ್ಲೂ ಈ ಆಚರಣೆಗಳು ಮಹತ್ವದ ಪಾತ್ರ ವಹಿಸುತ್ತವೆ.

ಮರಳಿನ ಚಿತ್ತಾರ (Sand Painting)

ಇಂಥಾ ಆಚರಣೆಗಳಲ್ಲಿ ಬಹಳ ಕುತೂಹಲಕಾರಿ ಮತ್ತು ವಿಸ್ಮಯ ಮೂಡಿಸುವ ಹಾಗೂ ಇಂದಿಗೂ ಪ್ರಚಲಿತವಾಗಿರುವ ಪದ್ಧತಿಯೆಂದರೆ ಮರಳಿನ ಚಿತ್ತಾರ ಅಥವಾ ಚಿತ್ರಕಲೆ. ಇದು ಸಾಮಾನ್ಯವಾಗಿ ಅಮೇರಿಕಾದ ನೈಋತ್ಯ ಮತ್ತು ಪಶ್ಚಿಮ ದಿಕ್ಕಿನಲ್ಲಿದ್ದ ಮತ್ತು ಮರಳುಗಾಡಿಗೆ ಹತ್ತಿರದಲ್ಲಿ ವಾಸವಾಗಿದ್ದ ಬುಡಕಟ್ಟಿನವರು ಆಚರಿಸುವ ಚಿಕಿತ್ಸಾ ವಿಧಿ. ಮೂಲನಿವಾಸಿಗಳ ಎಲ್ಲಾ ಆಚರಣೆಗಳಂತೆ ಇದೂ ಸಹ ಅವರ ಜೀವನಶೈಲಿಯ, ನಂಬಿಕೆಗಳ, ಪಾರಮಾರ್ಥಿಕ ಸಾಧನೆಯ ಒಂದು ಭಾಗವೇ ಆಗಿದೆ. ನಾವಹೊ ಗುಂಪಿನವರು ಇದನ್ನು ನಡೆಸಲು ಎಂಟು ಮೂಲೆಗಳಿರುವ 'ಹೋಗನ್' ಎಂಬ ಗುಡಿಸಿಲನ್ನು ಕಟ್ಟುತ್ತಾರೆ. ಬೆಣಚುಕಲ್ಲು ಅಥವಾ ಅದೇ ರೀತಿ ಪುಡಿ ಮಾಡಬಹುದಾದ ಕಲ್ಲುಗಳನ್ನು ಸಂಗ್ರಹಿಸಿ ನುಣುಪಾದ ಪುಡಿ ಮಾಡುತ್ತಾರೆ. ಹರಳು, ವಿಶಿಷ್ಟ ರೀತಿಯ ಕಲ್ಲುಗಳು ಮತ್ತು ಎಲೆಗಳು, ತರಕಾರಿಗಳಿಂದ ತಯಾರಿಸಿದ ಬಣ್ಣಗಳನ್ನು ಬಳಸುತ್ತಾರೆ.



ನಾವಹೊ ಪಂಗಡದವರು 'ಆಶೀರ್ವಾದ ವಿಧಿ'ಗಳಲ್ಲಿ ಬಳಸುವ ಒಂದು ಚಿತ್ತಾರ

ಚಿತ್ರಕಾರರು ಹೋಗನ್ ಗುಡಿಸಿಲಿನ ಮಧ್ಯಭಾಗದಲ್ಲಿ ಮರಳು ಅಥವಾ ಕಲ್ಲಿನ ಪುಡಿಯನ್ನು ಹರಡಿ ಅದರ ಮೇಲೆ ತುಂಬಾ ಸೂಕ್ಷ್ಮವಾಗಿ ರೇಖೆಗಳನ್ನು ಬಿಡಿಸುತ್ತಾರೆ. ದೇವ-ದೇವತೆಯರು, ಮೋಡಗಳು, ಪವಿತ್ರವಾದ ಹಕ್ಕಿಗಳ ಪುಕ್ಕಗಳು, ಔಷಧಿ ಚೀಲಗಳು, ನಿಂತಿರುವ ಕಾಮನಬಿಲ್ಲು, ಮೆಕ್ಕೆ ಜೋಳದ ಪರಾಗದಿಂದ ಚಿತ್ರಿಸಿದ ಹುಡುಗ, ಹುಡುಗಿ, ಹೀಗೆ ಹತ್ತು ಹಲವು ಚಿತ್ತಾರಗಳು. ಪ್ರತಿ ರೋಗಕ್ಕೂ ಒಂದು ವಿಶಿಷ್ಟ ವಿನ್ಯಾಸವಿರುತ್ತದೆ. ಈ ಚಿತ್ರಕಾರರು ಅನೇಕ ವರ್ಷಗಳ ಪರಿಶ್ರಮ ಮತ್ತು ಧಾರ್ಮಿಕ ಸಾಧನೆಗಳಿಂದ ಈ ಕಲೆಯನ್ನು ಕೈಗತ ಮಾಡಿಕೊಂಡಿರುತ್ತಾರೆ (ಇದು ಹಿಂದಿಗೂ ಮತ್ತು ಇಂದಿಗೂ ಸತ್ಯ ಎಂಬ ನಂಬಿಕೆಯಿದೆ). ಒಮ್ಮೊಮ್ಮೆ ಈ ಚಿತ್ತಾರವನ್ನು ಬಿಡಿಸಲು ಆರರಿಂದ ಎಂಟು ಗಂಟೆಗಳೂ ಬೇಕಾಗುತ್ತವೆ. ಆಯಾ ಸಮಸ್ಯೆಗೆ ಅಥವಾ ರೋಗಕ್ಕೆ ತಕ್ಕಂತೆ ದೊಡ್ಡ ಅಥವಾ ಪುಟ್ಟ ಚಿತ್ರಗಳಿರುತ್ತವೆ. ಸೂರ್ಯೋದಯವಾಗುತ್ತಿದ್ದಂತೆ ಪ್ರಾರಂಭಿಸಿ ಈ ಚಿತ್ತಾರವನ್ನು ಸೂರ್ಯಾಸ್ತವಾಗುವುದರ ಒಳಗೆ ಪೂರ್ಣಗೊಳಿಸಬೇಕೆಂಬ ನಿಯಮವಿದೆ. ಚಿತ್ರ ಪೂರ್ಣವಾದ ಮೇಲೆ ರೋಗಿಯನ್ನು ಪೂಜೆ ನಡೆಸುವ ಔಷಧಿ ಪುರುಷ ಮೊದಲು ಆಶೀರ್ವದಿಸಿ, ಮೆಕ್ಕೆ ಜೋಳದ ಹುಡಿಯನ್ನು ಆಶೀರ್ವಾದ ಪೂರ್ವಕವಾಗಿ (ಅಕ್ಷತೆಯಂತೆ)

ಉದುರಿಸಿ ಆ ಚಿತ್ರದ ಮಧ್ಯದಲ್ಲಿ ಕುಳ್ಳಿರಿಸಿ ರೋಗಿಯ ಮೈಮೇಲೆ ಸ್ವಲ್ಪ ಮರಳಿನ ಪುಡಿಯನ್ನು ಉದುರಿಸುತ್ತಾರೆ. ಈ ರೀತಿ ಮಾಡುವುದರಿಂದ ಆ ಮರಳು ರೋಗವನ್ನು ಹೀರಿಕೊಂಡು ರೋಗಿ ಗುಣವಾಗುತ್ತಾನೆಂಬ ವಿಶ್ವಾಸ ಅವರದು. ಔಷಧಿ ಪುರುಷ ಅಥವಾ ಮಹಿಳೆ ಮತ್ತು ಅವರ ಪರಿವಾರದವರು ಆಯಾ ರೋಗವನ್ನು ವಾಸಿಮಾಡುವ ಪ್ರಾರ್ಥನಾ ಗೀತೆಗಳನ್ನು ಹಾಡುತ್ತಾರೆ, ಮಂತ್ರಗಳ ರೀತಿಯಲ್ಲಿ ಪಠಣವನ್ನೂ ನಿರಂತರವಾಗಿ ಮಾಡುತ್ತಿರುತ್ತಾರೆ. ತಮಟೆ, ಡ್ರಮ್ಮು, ಗಿಲಕಿ ಇತರ ವಾದ್ಯಗಳ ದನಿಯೂ ಸೇರಿ ಅದೊಂದು ಅಲೌಕಿಕ ಅನುಭವ ನೀಡುವ ಬೇರೆ ಲೋಕವನ್ನೇ ಸೃಷ್ಟಿ ಮಾಡಿಬಿಡುತ್ತದೆ. ಜೊತೆಗೇ ಗಿಡಮೂಲಿಕೆಗಳ ಧೂಪವನ್ನೂ ಹಾಕುತ್ತಾರೆ. ಈ ಸಮಯದಲ್ಲಿ ಪವಿತ್ರಾತ್ಮಗಳು ಮತ್ತು ಅಲೌಕಿಕ ಶಕ್ತಿಗಳು ಬಂದು ರೋಗಿಯನ್ನು ಮತ್ತು ಅಲ್ಲಿ ಸೇರಿರುವ ಎಲ್ಲರನ್ನೂ ಹರಸುವವು ಎಂಬ ದೃಢ ನಂಬಿಕೆ ನಾವಹೊ ಜನರದ್ದು. ಈ ಸಮಯದಲ್ಲಿ ರೋಗಿಯ ಕುಟುಂಬ, ಸ್ನೇಹಿತರು ಎಲ್ಲಾ ಸುತ್ತ ನೆರೆದಿದ್ದು ಅಲ್ಲಿ ಹಬ್ಬದೂಟದ ವ್ಯವಸ್ಥೆಯೂ ಇರುತ್ತದೆ. ವಿಚಿತ್ರವಾಗಿ ವೇಷ ಧರಿಸಿ ತಲೆಕೆಳಗಾಗಿ ನಡೆಯುತ್ತಾ ಎಲ್ಲಾ ಮಂತ್ರಗಳನ್ನೂ ತಪ್ಪು ತಪ್ಪಾಗಿ ಹೇಳಿ ಜನರನ್ನೆಲ್ಲಾ ನಗಿಸುವ ವಿದೂಷಕರೂ ಇರುತ್ತಾರೆ. ಸಂಗೀತ, ಹಾಡು, ಪ್ರಾರ್ಥನೆ, ನಗು ತುಂಬಿರುವ ಆ ವಾತಾವರಣ ರೋಗಿಯ ತೊಂದರೆಯನ್ನು ಕಡಿಮೆ ಮಾಡುವುದರಲ್ಲಿ ಯಾವ ಸಂಶಯವೂ ಇಲ್ಲ. ಅಷ್ಟೇ ಅಲ್ಲದೆ ನೆರೆದಿರುವ ಸಮುದಾಯದ ಎಲ್ಲರೂ ಆ ದಿವ್ಯ ಅನುಭವದಲ್ಲಿ ಪಾಲುದಾರರಾಗುವುದರಿಂದ ಇಡೀ ಸಮಷ್ಟಿಯೇ ಆರೋಗ್ಯಕರ ವಾತಾವರಣದಲ್ಲಿ ಮಿಂದು ಮನಸ್ಸು, ದೇಹ, ಆತ್ಮಗಳ ಕಲ್ಮಶ ತೊಳೆದು ಪುನಶ್ಚೇತನ ಹೊಂದುತ್ತದೆ. ಎಲ್ಲಾ ಸಮಾರಂಭ ಮುಗಿದ ಮೇಲೆ ಆ ಮರಳನ್ನೆಲ್ಲಾ ಒಟ್ಟುಗೂಡಿಸುತ್ತಾರೆ ಮತ್ತು ರೋಗಿಗೆ ಒಂದು ಚಿಟಿಕೆಯಷ್ಟು ಆಶೀರ್ವಾದದ ರೂಪದಲ್ಲಿ ಕೊಡುತ್ತಾರೆ. ಅದನ್ನು ಅವನು ತನ್ನ ಔಷಧಿ ಚೀಲದಲ್ಲಿ ಹಾಕಿಕೊಳ್ಳುತ್ತಾನೆ/ಳೆ. ಉಳಿದದ್ದನ್ನು ಒಂದು ಚಾದರದಲ್ಲಿ ಸುತ್ತಿ ಪೂರ್ವ ದಿಕ್ಕಿನಲ್ಲಿ ದೂರದಲ್ಲಿ ಮರಳುಗಾಡಿನಲ್ಲಿ ಎಸೆಯಲಾಗುತ್ತದೆ. ಸಾಮಾನ್ಯವಾಗಿ ಇದು ರೋಗಗಳನ್ನು ವಾಸಿ ಮಾಡುವ ಆಚರಣೆಯೇ ಆಗಿದ್ದರೂ ಕೆಲವೊಮ್ಮೆ ಹೊಸದಾಗಿ ಮದುವೆಯಾದವರಿಗೆ, ಹದಿಹರಯದವರಿಗೆ ಮತ್ತು ವ್ಯಸನಗಳಿಂದ ಬಳಲುತ್ತಿರುವವರಿಗಾಗಿ ನಡೆಸುವ ಆಶೀರ್ವಾದ ವಿಧಿಗಳಲ್ಲೂ ಈ ಆಚರಣೆಯನ್ನು ನಡೆಸುತ್ತಾರೆ.

ಬೆವರು ಮನೆ (Sweat Lodge)

ರೋಗಗಳು ಬರುವುದು ದೇಹ ಮನಸ್ಸು ಆತ್ಮ ಮತ್ತು ಪ್ರಕೃತಿಯಲ್ಲಿ ಸಾಮರಸ್ಯ ನಾಶವಾದಾಗ ಎಂಬ ನಂಬಿಕೆ ಮೂಲನಿವಾಸಿಗಳಲ್ಲಿ ಬಲವಾಗಿ ಬೇರೂರಿತ್ತು. ಈ ಸಾಮರಸ್ಯ ಮತ್ತು ಸಮತೋಲನ ಕಾಪಾಡಿಕೊಳ್ಳಲು ದೇಹ, ಮನ ಹಾಗೂ ಆತ್ಮಗಳ ಶುದ್ಧೀಕರಣ ಅಗತ್ಯ. ಅದಕ್ಕೆಂದೇ ಅನೇಕ ವಿಧಿ, ಆಚರಣೆಗಳನ್ನು ದಿನ ನಿತ್ಯದ ಜೀವನದಲ್ಲಿಯೇ ಅಳವಡಿಸಿಕೊಂಡಿರುತ್ತಿದ್ದರು. ಅಂತಹಾ ಆಚರಣೆಗಳು ಲೌಕಿಕ ಮತ್ತು ಅಲೌಕಿಕ

ಲೋಕಗಳೆರಡರ ಸಂಬಂಧವನ್ನು ಗಟ್ಟಿಯಾಗಿಸುತ್ತದೆ ಎಂಬ ವಿಶ್ವಾಸವಿತ್ತು. ಈ ರೀತಿಯ ಒಂದು ಆಚರಣೆಯೇ 'ಬೆವರು ಮನೆ.' ಇದರ ಪದ್ಧತಿ ಬೇರೆ ಬೇರೆ ಪಂಗಡಗಳಲ್ಲಿ ಭಿನ್ನವಾಗಿದ್ದರೂ ಮೂಲ ಉದ್ದೇಶ ದೇಹ ಮನಗಳನ್ನು ಪವಿತ್ರಗೊಳಿಸುವುದೇ ಆಗಿದೆ. ಲಕೋಟಾ ಪಂಗಡದವರು ಇದನ್ನು 'ಇನಿಟಿಪಿ (initipi)' ಎಂದು ಕರೆಯುತ್ತಾರೆ. ಅವರ ಭಾಷೆಯಲ್ಲಿ 'ನಿ' ಎಂದರೆ ಪವಿತ್ರ ಉಸಿರು, ಜೀವನದ ಆಧಾರ. ಅನಿಶಿಬೇ ಪಂಗಡದ ಹಿರಿಯರ ಪ್ರಕಾರ ಜಗತ್ತಿನ ಸೃಷ್ಟಿಗೆ ಕಾರಣವಾದ ಪವಿತ್ರ ಚೇತನ (ಸೃಷ್ಟಿಕರ್ತ) ಭೂಮಿಗೆ, ನೀರಿಗೆ, ಅಗ್ನಿಗೆ ಮತ್ತು ವಾಯುವಿಗೆ ಈ ಪವಿತ್ರ ಉಸಿರು ನೀಡಿದಾಗ ಈ ಜಗತ್ತು ಸೃಷ್ಟಿಯಾಯಿತು. ಮತ್ತು ಆ ಪವಿತ್ರ ಚೇತನ ನಮ್ಮೊಂದಿಗೆ ಮಾತನಾಡುವುದೇ ಈ ಉಸಿರಿನ ಮೂಲಕ. ಇದು ಶಕ್ತಿಯುತವಾಗಿದ್ದರೆ, ಸ್ವಚ್ಛವಾಗಿದ್ದರೆ ಮನುಷ್ಯ ಆರೋಗ್ಯವಂತನಾಗಿರುತ್ತಾನೆ. 'ನಿ'ಯ ಶುದ್ಧೀಕರಣಕ್ಕಾಗಿ ಈ ಬೆವರುಮನೆಯ ಆಚರಣೆಯನ್ನು ಪ್ರತೀ ಚಳಿಗಾಲಕ್ಕೆ ಮುಂಚೆ ನಡೆಸುತ್ತಾರೆ. ಬೆವರು ಮನೆ ಅಥವಾ ಬಿಡದಿ ಗುಮ್ಮಟಾಕಾರದಲ್ಲಿರುತ್ತದೆ. ಇದನ್ನು 'ವಿಲ್ಲೊ' ಎಂಬ ಮರದ ಕಡ್ಡಿಗಳನ್ನು ಬಳಸಿ ಹೆಣೆದು ಕಟ್ಟಿ ಅದರ ಮೇಲೆ ಹುಲ್ಲಿನ ಹಾಸು, ಮರಗಳ ತೊಗಟೆ, ಪ್ರಾಣಿಗಳ ಚರ್ಮ, ಉಣ್ಣೆಯ ಕಂಬಳಿ, ಚಾದರ ಇತ್ಯಾದಿಗಳನ್ನು ಮುಚ್ಚುತ್ತಾರೆ. ಇದರ ಬಾಗಿಲು ಯಾವಾಗಲೂ ಪೂರ್ವ ದಿಕ್ಕಿಗೇ ಇರುತ್ತದೆ. ಇದರ ಆಕಾರ ಗೋಲಾಕಾರದಲ್ಲಿರುವುದೂ ಒಂದು ಧಾರ್ಮಿಕ ನಂಬಿಕೆಯ ಸಂಕೇತ. ಬಾಸಾಲ್ಟ್ ಮತ್ತಿತರ ಕಲ್ಲುಗಳನ್ನು ಬಿಡದಿಯ ಹೊರಗಡೆ ಚೆನ್ನಾಗಿ ಕಾಯಿಸಿ ಬಿಡದಿಯ ಮಧ್ಯಭಾಗದಲ್ಲಿ ಇರಿಸುತ್ತಾರೆ. ಸಾಮಾನ್ಯವಾಗಿ ಈ ಬಿಡದಿ ಬಹಳ ಚಿಕ್ಕದಾಗಿರುತ್ತದೆ. ಈ ಆಚರಣೆಯಲ್ಲಿ ಭಾಗವಹಿಸುವವರು ಅದರ ಸುತ್ತಲೂ ಕುಳಿತುಕೊಳ್ಳುತ್ತಾರೆ ಮತ್ತು ಇದನ್ನು ನಡೆಸುವ ಔಷಧಿ ಪುರುಷ/ಮಹಿಳೆ ಪ್ರಾರ್ಥನೆ ಹೇಳುತ್ತಾ, ಮಂತ್ರ ಪಠಿಸುತ್ತಾ ಆ ಕಲ್ಲಿನ ಮೇಲೆ ನೀರು ಚಿಮುಕಿಸುತ್ತಾರೆ. ಬಿಸಿಯಾದ ಕಲ್ಲಿನಿಂದ ಹೊಮ್ಮಿದ ಹಬೆಯು ಬಿಡದಿಯನ್ನೆಲ್ಲಾ ತುಂಬುತ್ತಿದ್ದ ಹಾಗೆ ತಂಬಾಕು, ಮತ್ತಿತರ ಸುವಾಸನೆ ಬೀರುವ ಗಿಡಮೂಲಿಕೆಗಳನ್ನು ಆ ಕಲ್ಲುಗಳ ಮೇಲೆ ಇರಿಸಿ ಸೃಷ್ಟಿಕರ್ತನಿಗೆ ಅರ್ಪಿಸಲಾಗುತ್ತದೆ. ಭಾಗವಹಿಸುವವರು ಹಬೆಯಲ್ಲಿ ಮೀಯುತ್ತಿರುವಂತೆ ಬೆವರು ಸುರಿಯಲಾರಂಭಿಸುತ್ತದೆ. ತನ್ಮೂಲಕ ದೇಹದ ದೋಷಗಳೆಲ್ಲಾ ಬೆವರಿನ ಮೂಲಕ ಹರಿದು ಹೋಗಿ ನರನಾಡಿಗಳೆಲ್ಲಾ ಶುದ್ಧವಾಗುತ್ತವೆ. ಹೊಸ ಚೇತನ ಮೂಡುತ್ತದೆ. ಜೊತೆಗೇ ಮಂತ್ರ, ಪ್ರಾರ್ಥನೆ ಮತ್ತು ಗಿಡಮೂಲಿಕೆಗಳ ಸುಗಂಧಗಳ ಪ್ರಭಾವದಿಂದ ಮನಸ್ಸಿನ ಆತಂಕ, ಋಣಾತ್ಮಕ ಚಿಂತನೆಗಳೂ ದೂರವಾಗಿ ಪ್ರಸನ್ನತೆ, ಪ್ರಫುಲ್ಲತೆ ಉಂಟಾಗುತ್ತದೆ. ಇದಾದ ನಂತರ ತಣ್ಣೀರಿನಲ್ಲಿ ಸ್ನಾನ ಮಾಡಿ, ಆಚರಣೆ ಮುಗಿಯುತ್ತದೆ. ಕೆಲವೊಮ್ಮೆ ಸರೋವರ ಮತ್ತು ನದಿಯ ಮೇಲೆ ಕಟ್ಟಿರುವ ಮಂಜುಗಡ್ಡೆಯಲ್ಲಿ ತೂತು ಕೊರೆದು ಅದರಲ್ಲಿ ಮುಳುಗುಹಾಕುವ ಪರಿಪಾಠವೂ ಇದೆ. ಮೂಲನಿವಾಸಿಗಳಿಗೆ ಇದೊಂದು ಧಾರ್ಮಿಕ ಮತ್ತು ಆಧ್ಯಾತ್ಮಿಕ ಅನುಭವ. ಆದ್ದರಿಂದ ಇದೊಂದು ಅತ್ಯಂತ ಪವಿತ್ರ ಆಚರಣೆ ಎಂದು ಪರಿಗಣಿಸುತ್ತಾರೆ. ಸಾಮಾನ್ಯವಾಗಿ ಇದರಲ್ಲಿ ಪುರುಷರು ಮಾತ್ರ

ಭಾಗವಹಿಸುತ್ತಾರೆ. ಸ್ತ್ರೀಯರು ನೈಸರ್ಗಿಕವಾಗಿ ಪ್ರತಿ ತಿಂಗಳೂ ಶುದ್ಧವಾಗುವುದರಿಂದ ಅವರಿಗೆ ಯಾವುದೇ ರೀತಿಯ ಶೋಧನದ ಅಗತ್ಯವಿಲ್ಲ ಎಂಬ ಅಭಿಪ್ರಾಯವಿತ್ತು. (ಇದೇ ವಿಚಾರವನ್ನು ಆಯುರ್ವೇದದಲ್ಲೂ ಪ್ರತಿಪಾದಿಸಿದ್ದಾರೆ). ಐರೋಪ್ಯ ದೇಶಗಳಲ್ಲೂ ಈ ರೀತಿಯ ಹಬೆ ಮನೆಗಳು (sauna) ಹಿಂದಿನಿಂದಲೂ ಪ್ರಚಲಿತವಿದ್ದರೂ ಈ ಆಚರಣೆ ಮೂಲನಿವಾಸಿಗಳ ಪಾಲಿಗೆ ಕೇವಲ ಚೇತೋಹಾರಕಕ್ಕಷ್ಟೇ ಸೀಮಿತವಾಗಿಲ್ಲದೆ ಆಧ್ಯಾತ್ಮಿಕ ಮತ್ತು ಗಾಢವಾದ ಧಾರ್ಮಿಕ ಮಹತ್ವ ಉಳ್ಳ ವಿಧಿಯಾಗಿದೆ.

ಪಾರಂಪರಿಕ ನೃತ್ಯಗಳು

ಮೂಲನಿವಾಸಿಗಳ ಜೀವನದಲ್ಲಿ ಸಂಗೀತ, ನೃತ್ಯ, ಧಾರ್ಮಿಕ ಆಚರಣೆಗಳು ಅವಿಭಾಜ್ಯ ಅಂಗಗಳೆಂದೇ ಹೇಳಬಹುದು. ಇಲ್ಲಿ ನೃತ್ಯವೆಂದರೆ ಸಂಗೀತಕ್ಕೆ ಹೆಜ್ಜೆ ಹಾಕುವುದು ಅಂತಲ್ಲ. ಅತ್ಯಂತ ವಿಶಿಷ್ಟವಾದ, ವಿಧಿವತ್ತಾದ ಮತ್ತು ಅಪರೂಪವಾದ ಕಟ್ಟಳೆಗಳಿಂದ ಕೂಡಿದ ಒಂದು ಸಂಪ್ರದಾಯ ಎಂದೇ ಹೇಳಬಹುದು. ಯಾವುದೇ ಆಚರಣೆ ಅಥವಾ ಧಾರ್ಮಿಕ, ಸಾಂಸ್ಕೃತಿಕ ಸಂಭ್ರಮಗಳು ಮತ್ತು ಶಮನ (ರೋಗವನ್ನು ಗುಣಪಡಿಸುವ) ವಿಧಿಗಳು ಆಯಾ ಸಮಾರಂಭಕ್ಕೆ ಮೀಸಲಾದ ನೃತ್ಯವಿಲ್ಲದೆ ಪೂರ್ಣವಾಗುವುದಿಲ್ಲ. ಕೆಲವೊಮ್ಮೆ ನೃತ್ಯವೇ ಪ್ರಧಾನ ಆಚರಣೆಯೂ ಆಗುವುದುಂಟು. ಕೆನಡಾದ ಹುಲ್ಲುಗಾವಲು ಮತ್ತು ಉತ್ತರ ಅಮೇರಿಕಾದ ಮೈದಾನ ಪ್ರದೇಶದ ಬುಡಕಟ್ಟಿನವರು ನಡೆಸುವ ಸೂರ್ಯಾರಾಧನೆಯ ನೃತ್ಯ, ಹಸಿರು ಜೋಳದ ನೃತ್ಯ, ಲಯಬದ್ಧ ನಡಿಗೆಯ ನೃತ್ಯ (stomp dance) ಹೀಗೆ. ಈ ಪರಂಪರೆ ವಂಶಪಾರಂಪರ್ಯವಾಗಿ ಅಥವಾ ಹಿರಿಯರಿಂದ ಕಿರಿಯರಿಗೆ ಮೌಖಿಕವಾಗಿ ಹರಿದು ಬಂದಿರುತ್ತದೆ. ಹೋಪಿ ಪಂಗಡದವರಲ್ಲಿ 'ಕಚೀನಾ' ಎಂಬ ವಿಶಿಷ್ಟ ದೈವೀ ಸ್ವರೂಪಿಗಳ ಗುಂಪಿನವರು ನಡೆಸುವ ವಿಧಿಗಳಿಗೆ ನೃತ್ಯವೇ ಪ್ರಧಾನ. ಇವರು ಅನೇಕ ರೀತಿಯ ಮುಖವಾಡಗಳನ್ನು ಧರಿಸಿರುತ್ತಾರೆ. ಈ ನೃತ್ಯಕಾರರು ಹೆಚ್ಚಾಗಿ ಔಷಧಿ ಪುರುಷ/ ಮಹಿಳೆಯರೇ ಆಗಿರುತ್ತಾರೆ. ಸುಗ್ಗಿಯ ಸಮಯದ ಕುಣಿತ, ವರ್ಷಕ್ಕೊಮ್ಮೆ ನಡೆಸುವ ಆಚರಣೆಗಳು, ದಕ್ಷಿಣಾಯನ ಮತ್ತು ಉತ್ತರಾಯಣದ ಸಂಕ್ರಮಣ ಸಮಯದಲ್ಲಿ ನಡೆಸುವ ಆಶೀರ್ವಾದದ ವಿಧಿಗಳು ಮತ್ತು ಶಮನ (ರೋಗ ವಾಸಿ ಮಾಡುವ) ವಿಧಿಗಳು ಹೀಗೆ ವೈಯಕ್ತಿಕ ಮತ್ತು ಸಾಮುದಾಯಿಕ ಆಚರಣೆಗಳಲ್ಲಿ ಭಾಗವಹಿಸುವ ನೃತ್ಯಕಾರರು ವರ್ಷವಿಡೀ ನೇಮ, ಉಪವಾಸ, ಪ್ರಾರ್ಥನೆ ಮುಂತಾದ ಕಠಿಣ ವ್ರತಗಳನ್ನು ಆಚರಿಸಿ ಅತ್ಯಂತ ಪವಿತ್ರರಾಗಿರುತ್ತಾರೆ. ನೃತ್ಯದ ಸಮಯದಲ್ಲಿ ಇವರು ದೇವ ದೇವತೆಯರ, ಪವಿತ್ರ ಚೇತನಗಳ ಮತ್ತು ಅಲೌಕಿಕ ಶಕ್ತಿಗಳ ಅವತಾರವೇ ಆಗಿರುತ್ತಾರೆ ಎಂದು ಎಲ್ಲಾ ಮೂಲನಿವಾಸಿ ಬುಡಕಟ್ಟಿನ ಜನಾಂಗದವರೂ ನಂಬಿದ್ದಾರೆ. ಈ ನೃತ್ಯಕಾರರ ವೇಷಭೂಷಣಗಳೂ ಬಹಳ ವರ್ಣಮಯವಾಗಿ ನಯನ ಮನೋಹರವಾಗಿರುತ್ತವೆ. ಅಪಾಚೆ ಪಂಗಡವರು ತಮ್ಮ ಸಮುದಾಯದ ಹೆಣ್ಣುಮಕ್ಕಳು ಋತುಮತಿಯಾದಾಗ ನಡೆಸುವ ಸೂರ್ಯೋದಯ ವಿಧಿಯಲ್ಲಿ ನೃತ್ಯ ಮಾಡುವ ನೃತ್ಯಕಾರರು 'ಗಾನ್' ಎಂಬ ಶಕ್ತಿಯ ಪ್ರತಿರೂಪ ಎಂದು

ನಂಬುತ್ತಾರೆ. ವಿವಿಧ ರೀತಿಯ ಗಂಟೆಗಳು, ಮಣಿಗಳು ಇತ್ಯಾದಿಗಳಿಂದ ಸಿಂಗರಿಸಿದ ಬಟ್ಟೆ ಧರಿಸಿದ ಈ ನೃತ್ಯಕಾರರು ಸುತ್ತಲಿನ ಪರ್ವತ ದೇವತೆಗಳು ಮತ್ತು ಹರಸುವ ಸಲುವಾಗಿಯೇ ಬೆಟ್ಟದಿಂದ ಇಳಿದು ಬರುತ್ತಾರೆ ಎಂಬ ಪ್ರತೀತಿ ಇದೆ. ಅವರು ನೃತ್ಯ ಮಾಡುವುದನ್ನು ಕಣ್ಣಿನಲ್ಲಿ ನೋಡಿದರೇ ರೋಗಗಳು ವಾಸಿಯಾಗುತ್ತವೆ ಎಂಬ ದೃಢ ನಂಬಿಕೆ ಅಪಾಚೆ ಪಂಗಡದ ಕೆಲವರಿಗೆ ಇತ್ತಂತೆ.

ನಾವಹೊ ಜನಾಂಗದವರು ನಡೆಸುವ 'ರಾತ್ರಿ ವಿಧಿ' ಆಚರಣೆಯಲ್ಲಿ ನೃತ್ಯ ಮಾಡುವವರು ಬಿಳಿಯ ಜೇಡಿ ಮಣ್ಣಿನಿಂದ ಮೈಗೆಲ್ಲಾ ಚಿತ್ತಾರ ಮಾಡಿಕೊಳ್ಳುತ್ತಾರೆ. ಜಿಂಕೆಯ ಚರ್ಮದಿಂದ ಮಾಡಿದ, ಅನೇಕ ರೀತಿಯ ರೆಕ್ಕೆ ಪುಕ್ಕಗಳಿಂದ ಸಿಂಗರಿಸಿದ ಮುಖವಾಡ ಧರಿಸುತ್ತಾರೆ. ಮೈ ಮೇಲೆ ಕೂಡಾ ಗರಿಗಳು ಮತ್ತು ಅನೇಕ ರೀತಿಯ ಗಿಡಮೂಲಿಕೆಗಳನ್ನು ಅಲಂಕಾರಿಕವಾಗಿ ಧರಿಸುತ್ತಾರೆ. ಇವರು ಆ ದಿನ 'ಯೆಯಿ' (yei) ಎಂಬ ದೇವತೆಯ ಪ್ರತಿರೂಪವಾಗಿರುತ್ತಾರೆ. ಇನ್ನು ಕೆಲವು ನೃತ್ಯಕಾರರು ಸರಳವಾದ, ಹೆಚ್ಚು ಅಲಂಕಾರವಿಲ್ಲದ ಜಿಂಕೆಯ ಚರ್ಮದ ಮೇಲೆ ಗಿಡುಗ ಪಕ್ಷಿಯ ಗರಿಗಳಿಂದ ಅಲಂಕರಿಸಿದ ಮುಖವಾಡ ಧರಿಸಿ ಮೈಗೆಲ್ಲಾ ಬಿಳಿಯ ಬಣ್ಣದ ಜೇಡಿ ಮಣ್ಣಿನಿಂದ ಚಿತ್ತಾರ ಮಾಡಿಕೊಂಡಿರುತ್ತಾರೆ. ಇವರನ್ನು 'ಗುಡುಗುಕಾರರು' ಎನ್ನುತ್ತಾರೆ. ಗಗನ ಶಕ್ತಿಗಳಾದ ಕಾರ್ಮೋಡ, ಮಿಂಚು, ಮಳೆ ಗಾಳಿಗಳ ಪ್ರತಿರೂಪವಾದ ಇವರು ನೃತ್ಯ ಮಾಡುತ್ತಾ ಭೂಮಿಗೂ ಆಕಾಶಕ್ಕೂ ಇರುವ ಸಂಬಂಧವನ್ನು ಹಾಡಿನ ಮೂಲಕ ಹೇಳುತ್ತಾರೆ. 'ರಾತ್ರಿ ವಿಧಿ' ಸಮಾರಂಭ ಒಂಬತ್ತು ದಿನ ರಾತ್ರಿಗಳು ನಡೆಯುತ್ತವೆ. ಕೊನೆಯ ದಿನ ರಾತ್ರಿ ನೃತ್ಯಕಾರರು ಗುಂಪುಗಳಲ್ಲಿ ಅತ್ಯಾಕರ್ಷಕವಾದ ಮುಖವಾಡಗಳನ್ನು ಧರಿಸಿ ರೋಗಿಯನ್ನು ಪುನಶ್ಚೇತನಗೊಳಿಸುವ ಗೀತೆಗಳನ್ನು ಹಾಡುತ್ತಾ ಇಡೀ ರಾತ್ರಿ ನೃತ್ಯ ಮಾಡುತ್ತಾರೆ. ಇದನ್ನು ನೋಡಲು ನೂರಾರು ಮಂದಿ ಸೇರಿರುತ್ತಾರೆ.

ಉತ್ತರ ಕ್ಯಾಲಿಫೋರ್ನಿಯಾದ ಕ್ಲಾಮತ್ ನದಿಯ ಉದ್ದಕ್ಕೂ ಉತ್ತರ ಮತ್ತು ದಕ್ಷಿಣಕ್ಕೆ ವಾಸವಾಗಿದ್ದ ಯುರೋಕ್ ಮತ್ತು ಕರೋಕ್ ಬುಡಕಟ್ಟಿನವರು ಮತ್ತು ಅದೇ ನದಿಗೆ ಬಂದು ಸೇರುವ ಟ್ರಿನಿಟಿ ನದಿಯ ತೀರದಲ್ಲಿ ವಾಸವಾಗಿದ್ದ ಹೂಪಾ ಬುಡಕಟ್ಟಿನವರು ವರ್ಷಕೊಮ್ಮೆ 'ಭೂಮಿಯನ್ನು ಗಟ್ಟಿ ಮಾಡುವ' 'ಪ್ರಪಂಚ ನವೀಕರಣ' ಆಚರಣೆ ಅಥವಾ ಸಮಾರಂಭವನ್ನು ನಡೆಸುತ್ತಿದ್ದರು. ಇದು ತಾವು ನೆಲೆಸಿರುವ ಭೂಮಿಯ ಮೇಲಿನ ಗೌರವ ಭಕ್ತಿಗಳನ್ನು ಅಭಿವ್ಯಕ್ತಿಸುವ ಮತ್ತು ಆಹಾರ, ಔಷಧಿ ಮತ್ತು ಜೀವನದ ಸಾಕ್ಷಾತ್ಕಾರವನ್ನು ನೀಡುವ ಭೂಮಿಗೆ ತಮ್ಮ ನಮನವನ್ನು ಸಲ್ಲಿಸುವ ಒಂದು ಪ್ರಕಾರವಾಗಿತ್ತು. ಇದನ್ನು ಸಾಮಾನ್ಯವಾಗಿ ಪಂಗಡದ ಹಿರಿಯರು ಮಾತ್ರ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಅವರು ಕಿರಿಯರಿಗೆ ಮೌಲ್ಯಗಳಿಂದ ಕೂಡಿದ ಉತ್ತಮ ಜೀವನ ಶೈಲಿಯ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರು. ಅಲ್ಲದೆ ತಾವು ವಾಸ ಮಾಡುವ ಜಾಗದೊಂದಿಗೆ ಭಾವನಾತ್ಮಕವಾಗಿ ಬೆಸೆದುಕೊಳ್ಳುವುದರ ಮಹತ್ವವನ್ನೂ ಕಲಿಸುತ್ತಿದ್ದರು. ಈ ಸಮಯದಲ್ಲಿ ತಮ್ಮ ಹಳ್ಳಿಗಳು ವಿನಾಶವಾಗದಂತೆ ಮತ್ತು ನೈಸರ್ಗಿಕ ಸಂಪನ್ಮೂಲಗಳು ಸುರಕ್ಷಿತವಾಗಿ

ಉಳಿಯುವಂತೆ ವಿಧಿಗಳನ್ನು ಆಚರಿಸುತ್ತಿದ್ದರು. ಇದಕ್ಕಾಗಿ ಶಾಮನ್‌ಗಳು (ಔಷಧಿ ಪುರುಷರು) ಶುದ್ಧೀಕರಣ ವಿಧಿಗಳನ್ನು ಮತ್ತು ವ್ರತಗಳನ್ನು ಆಚರಿಸಿ ಪವಿತ್ರರಾಗಿರುತ್ತಿದ್ದರು. ಭೂಮಿಯ ಪುನಶ್ಚೇತನಕ್ಕಾಗಿ ಗೋಪ್ಯವಾಗಿ ಬೇರೆ ಬೇರೆ ನೈಸರ್ಗಿಕ ನೆಲೆಗಳಲ್ಲಿ ಗುಟ್ಟಾದ ವಿಧಿಗಳನ್ನು ನಡೆಸುತ್ತಿದ್ದರು. ಈ ಸಮಾರಂಭಗಳಲ್ಲಿ ನಡೆಯುತ್ತಿದ್ದ ಸಾರ್ವಜನಿಕ ಆಚರಣೆಗಳಲ್ಲಿ ನೃತ್ಯ ಅಮೋಘವಾಗಿರುತ್ತಿತ್ತು. ಒಟ್ಟು ಮೂರು ಬಗೆಯ ನೃತ್ಯಗಳಿರುತ್ತಿದ್ದವು. ಮೊದಲನೆಯದು ಶ್ವೇತ ಜಿಂಕೆ ಚರ್ಮದ ನೃತ್ಯ. ಜಿಂಕೆಯ ಚರ್ಮದ ಮೇಲು ಹೊದಿಕೆಯ ಮೇಲೆ ನಾನಾ ರೀತಿಯ ಶಂಖ, ಮಣಿಗಳು, ಪ್ರಾಣಿಗಳ ಹಲ್ಲುಗಳಿಂದ ಸಿಂಗರಿಸಿದ ಸರಗಳನ್ನು ಹಾಕಿಕೊಂಡಿರುತ್ತಿದ್ದರು. ಬಣ್ಣ ಬಣ್ಣ ರೆಕ್ಕೆ ಪುಕ್ಕಗಳು ಸಿಕ್ಕಿಸಿದ ಜಗಮಗಿಸುವ ಟೋಪಿಗಳನ್ನು ಧರಿಸಿ, ಜಿಂಕೆ ಚರ್ಮವನ್ನು ಹೊದೆಸಿದ ಕೋಲಿನ ತುದಿಗೆ ಕೆಂಪು ಪುಕ್ಕಗಳಿರುವ ಮರಕುಟಿಕ ಪಕ್ಷಿಯ ತಲೆಯನ್ನು ಸಿಕ್ಕಿಸಿ ಆ ಕೋಲನ್ನು ನೆಲಕ್ಕೆ ಕುಟ್ಟಿ ಮಾಡುವ ನೃತ್ಯ. ಎರಡನೆಯದು ನಾವೆ ನೃತ್ಯ. ಇದೊಂದು ರೋಚಕ ನೃತ್ಯ. ಮರದ ಉದ್ದವಾದ ತೂಬು ನಾವೆಗಳಲ್ಲಿ ಅನೇಕ ಮಂದಿ ನೃತ್ಯಕಾರರು ರಭಸವಾಗಿ ಹರಿಯುವ ನದಿಯಲ್ಲಿ ವೇಗವಾಗಿ ಸಾಗುತ್ತಾ ಹಾಡುತ್ತಾ ಹೋಗುತ್ತಾರೆ. ಮೂರನೆಯದು ಲಯಬದ್ಧವಾಗಿ ಜಿಗಿಯುವ ನೃತ್ಯ. ಇವರೂ ಬಣ್ಣಬಣ್ಣದ ಟೋಪಿಗೆ ಮರಕುಟಿಕ ಪಕ್ಷಿಯ ಪುಕ್ಕ ತಲೆಗಳನ್ನು ಸಿಕ್ಕಿಸಿ ಪವಿತ್ರ ಗಿಡಮೂಲಿಕೆಗಳಿಂದ ಮಾಡಿದ ದಂಡಗಳನ್ನು ಹಿಡಿದು ಸಂಗೀತ ವಾದ್ಯಗಳ ತಾಳಕ್ಕೆ ತಕ್ಕಂತೆ ಜಿಗಿಯುತ್ತಾ ನೃತ್ಯ ಮಾಡುತ್ತಾರೆ. ನೂರಾರು ಮಂದಿ ಸೇರಿದ ಆ ವಾತಾವರಣ ಧಾರ್ಮಿಕ ವಿಧಿಗಳು, ನೃತ್ಯಗಳು, ಸಂಗೀತ ಎಲ್ಲಾ ಸೇರಿ ಅತ್ಯಂತ ಪವಿತ್ರವೆನ್ನಿಸುತ್ತಿತ್ತು.

ಇನ್ನು ಕೆಲವು ಆಚರಣೆಗಳಲ್ಲಿ ಕೇವಲ ಮಹಿಳೆಯರು ಮಾತ್ರ ನೃತ್ಯ ಮಾಡುವುದೂ ಉಂಟು. ಅದರಲ್ಲಿ ಹೋಪಿ ಪಂಗಡದವರ ಬುಟ್ಟಿ ನೃತ್ಯ ತುಂಬಾ ಪ್ರಸಿದ್ಧವಾದುದು. ಇದೂ ಕೂಡಾ ಭೂಮಿಯ ಪುನರುಜ್ಜೀವನಕ್ಕಾಗಿಯೇ ಮಾಡುವ ನೃತ್ಯ. ಇದನ್ನು ಸಾಮಾನ್ಯವಾಗಿ ಹೆಂಗಸರೇ ನಡೆಸುತ್ತಾರೆ. ಆಗಸ್ಟ್ ತಿಂಗಳ ಬಿರು ಬೇಸಿಗೆಯ ದಿನ ನಡೆಯುವ ಈ ನೃತ್ಯ ಮುಂದಿನ ಬೆಳೆ ಸಮೃದ್ಧವಾಗಿ ಬರಲೆಂಬ ಆಶಯದಿಂದ ಮಾಡುವ ಆಚರಣೆ. ಸಾಂಪ್ರದಾಯಿಕ ಕಪ್ಪು ಬಣ್ಣದ ನಿಲುವಂಗಿಗೆ ಹೊಳೆಯುವ ಕೆಂಪು ಮತ್ತು ಹಸಿರು ಬಣ್ಣದ ಸುಂದರ ಕುಸುರಿ ಕೆಲಸ ಮಾಡಿರುವ ದಿರಿಸನ್ನು ಮತ್ತು ಚರ್ಮದ ಚಪ್ಪಟೆಯಾದ ಚಪ್ಪಲಿ ಧರಿಸಿದ ಹೆಂಗಸರು 'ಯಕ್ಕಾ' ಗಿಡದ ಎಲೆಗಳಿಂದ ಹೆಣೆದ ಹರಿವಾಣವನ್ನು ಕೈಯಲ್ಲಿ ಹಿಡಿದು ಪ್ರಾಂಗಣಕ್ಕೆ ನಡೆದು ಬರುತ್ತಾರೆ. ವೃತ್ತಾಕಾರದಲ್ಲಿ ನಿಂತು ನಿಧಾನವಾಗಿ ಲಯಬದ್ಧವಾಗಿ ಭೂಮಿಯನ್ನು ತಮ್ಮ ಕಾಲುಗಳಿಂದ ನಾದುವಂತೆ ಹೆಜ್ಜೆ ಹಾಕುತ್ತಾ ಸುಂದರ ನೃತ್ಯ ಮಾಡುತ್ತಾರೆ.

ನೃತ್ಯಗಳು ಆಚರಣೆಗಳ ಭಾಗವಷ್ಟೇ ಅಲ್ಲದೆ ಮೂಲನಿವಾಸಿಗಳ ಜೀವನದ ಎಲ್ಲಾ ಹಂತಗಳಲ್ಲೂ ಜೀವನ ಶೈಲಿಯ ಒಂದು ಭಾಗವೇ ಆಗಿತ್ತು. ಅದಕ್ಕೆಂದೇ ಮೂಲನಿವಾಸಿಗಳ ಇತಿಹಾಸದಲ್ಲಿ ಲೆಕ್ಕವಿಲ್ಲದಷ್ಟು ನೃತ್ಯ ಪದ್ಧತಿಗಳು ಕಾಣಸಿಗುತ್ತವೆ. ಈ ನೃತ್ಯಗಳಲ್ಲಿ ಬಳಸುವ

ಮುಖವಾಡಗಳಿಗೆ ಅದರದೇ ಆದ ಐತಿಹ್ಯವಿದೆ, ಧಾರ್ಮಿಕ ಮಹತ್ವವಿದೆ. ಸಾಮಾನ್ಯವಾಗಿ ನೃತ್ಯಕಾರರೇ ಇದನ್ನು ತಯಾರಿಸುತ್ತಾರೆ. ಹೋಪಿ ಪಂಗಡದವರು ಮರದಿಂದ, ಸೆಮಿನೋಲ್ ಪಂಗಡದವರು ಸೋರೇಕಾಯಿ, ಕರಬೂಜ ಹಣ್ಣು ಮತ್ತು ಮರದ ತೊಗಟೆಗಳಿಂದ ಮುಖವಾಡ ತಯಾರಿಸುತ್ತಾರೆ. ತೂತು ಕೊರೆದು ಕಣ್ಣನ್ನು ಮತ್ತು ಬಾಯನ್ನು ಕೆತ್ತಿ ಮೆಕ್ಕೆ ಜೋಳದ ಕಾಳಿನಲ್ಲಿ ಹಲ್ಲುಗಳನ್ನು ಮಾಡಿ ಮೆತ್ತುತ್ತಾರೆ. ನೇರಳೆ, ಬೆರ್ರಿ ಹಣ್ಣುಗಳ ರಸದಿಂದ ಬಣ್ಣ ತಯಾರಿಸಿ ಹಚ್ಚುತ್ತಾರೆ. ಇರೋಕೊಯಿ ಸಮುದಾಯದವರಲ್ಲಿ ಮುಖವಾಡ ತಯಾರಿಸುವವರ ವಿಶೇಷ ಪ್ರತಿಷ್ಠಿತ ಸಮಾಜವೇ ಇತ್ತು. ದಂತಕತೆಗಳು ಮತ್ತು ಅವರಿಗೆ ಉಂಟಾಗುವ ವಿಶೇಷ ದರ್ಶನಗಳೇ ಈ ಮುಖವಾಡಗಳಿಗೆ ಆಧಾರ. ಈ ಸುಳ್ಳು ಮುಖ ಕೆತ್ತಲು ಜೀವಂತವಿರುವ 'ಬಾಸ್ ಮರ' ವೃಕ್ಷವೇ ಬೇಕು. ಅನುಭವ ಇರುವ ಕೆತ್ತನೆಕಾರ ಅಂತಹ ಮರವನ್ನು ಆರಿಸಿ ಮೊದಲು ಮರಕ್ಕೆ ಪ್ರಾರ್ಥನೆ ಮತ್ತು ತಂಬಾಕನ್ನು ನೈವೇದ್ಯದ ರೂಪದಲ್ಲಿ ಸಲ್ಲಿಸಿ ಮರವನ್ನು ಕೆತ್ತುತ್ತಾನೆ. ಇದರಿಂದ ಮರದ ಚೇತನ ಮುಖವಾಡದಲ್ಲಿ ಉಳಿಯುತ್ತದೆ ಎಂಬ ನಂಬಿಕೆ. ಎಮ್ಮೆ, ಗೂನುಬೆನ್ನು, ಸುಂಟರಗಾಳಿ, ಉದ್ದಮೂಗು, ತಲೆಬುರುಡೆ, ನಗುತ್ತಿರುವ ಭಿಕ್ಷುಕ ಇವೆಲ್ಲಾ ಅಲೌಕಿಕ ಶಕ್ತಿಗಳನ್ನು, ಪ್ರೇತಾತ್ಮಗಳನ್ನು ಪ್ರತಿನಿಧಿಸುತ್ತವೆ. ಮುರಿದ ಮೂಗಿನ ಪ್ರೇತದ ಮುಖವಾಡದ ಕತೆ ನಗು ತರಿಸುತ್ತದೆ. ಈ ಆತ್ಮ ಒಮ್ಮೆ ಪರ್ವತದೊಡನೆ ವಾದ ಮಾಡಿ ಸೋತುಹೋಯಿತಂತೆ. ಆಗ ಪರ್ವತ ಅದರ ಉದ್ದ ಮೂಗನ್ನು ಮತ್ತು ಬಾಯನ್ನು ಅಡ್ಡಡ್ಡ ಹಿಸುಕಿ ಜಜ್ಜಿಬಿಟ್ಟಿತಂತೆ. ಈ ಮುಖವಾಡಗಳಿಗೆ ಕೆಲವೊಮ್ಮೆ ತೆರೆದ ಬಾಯಿ ಇರುತ್ತದೆ, ಪೂಜೆಯ ಸಮಯದಲ್ಲಿ ಪವಿತ್ರ ಭಸ್ಮವನ್ನು ಆಶೀರ್ವಾದ ರೂಪದಲ್ಲಿ ನೆರೆದವರ ಮೇಲೆ ಉಗುಳಲು ಸಹಾಯವಾಗುವಂತೆ. ಅವಕ್ಕೆ ಬಳಿದ ಕೆಂಪು, ಬಿಳಿ, ಕಪ್ಪು ಬಣ್ಣಗಳು ಜೀವನದ ವಿವಿಧ ಸುಖ ದುಃಖಗಳನ್ನು ಪ್ರತಿನಿಧಿಸುತ್ತವೆ. ಇರಿಕೋಯಿ ಪಂಗಡದವರು ಮನುಷ್ಯರು ಅಧರ್ಮಿಗಳಾಗಿ ಪಾಪಕೃತ್ಯಗಳನ್ನು ಎಸಗಿದಾಗ ಅಲೌಕಿಕ ಶಕ್ತಿಗಳು, ಆತ್ಮ (spirits) ಗಳು ಕುಪಿತಗೊಂಡು ರೋಗಗಳನ್ನು ಉಂಟುಮಾಡುತ್ತವೆ ಎಂದು ನಂಬಿದ್ದರು. ಆತ್ಮಗಳು ಸುಪ್ರೀತರಾದರೆ ಆರೋಗ್ಯವನ್ನು, ಜೀವನದಲ್ಲಿ ದೃಢತೆಯನ್ನು ಪಾಲಿಸುತ್ತವೆ ಎಂಬ ಆಶಯದಿಂದ ಮುಖವಾಡದ ನೃತ್ಯ, ಆರಾಧನೆಗಳು ನಡೆಯುತ್ತಿದ್ದವು. ಇಂತಹುದೇ ಆಚರಣೆಗಳು ಉತ್ತರ ಅಮೇರಿಕಾ ಹಾಗೂ ದಕ್ಷಿಣ ಅಮೇರಿಕಾದ ಉದ್ದಗಲಕ್ಕೂ ಹರಡಿದ ಸಾವಿರಾರು ಬುಡಕಟ್ಟಿನವರಲ್ಲಿ ಕಂಡುಬರುತ್ತವೆ. ಇವು ನಮ್ಮಲ್ಲಿನ ಭೂತಾರಾಧನೆ, ಭೂತದ ಕುಣಿತಗಳನ್ನು ನೆನಪಿಸುತ್ತವೆ.

ಮೇಲ್ನೋಟಕ್ಕೆ ಇಂತಹಾ ಆಚರಣೆಗಳು ಸಮಾರಂಭಗಳು, ಪೂಜೆಗಳು, ಕುಣಿತಗಳು, ಧಾರ್ಮಿಕ ನಂಬಿಕೆಗಳು, ಮೂಢ ನಂಬಿಕೆಗಳ ಸಂಕೇತ ಎಂದಷ್ಟೇ ಎನ್ನಿಸುವುದು ಸಹಜ. ಆದರೆ ಆಳವಾಗಿ ಅರ್ಥ ಮಾಡಿಕೊಂಡಾಗ ಈ ಆಚರಣೆಗಳ ಪ್ರಭಾವದ ವ್ಯಾಪ್ತಿ, ಗಾಢತೆ ಮತ್ತು ಉದ್ದೇಶಗಳ ಮೂಲದರ್ಶನ ಸಿಗುತ್ತದೆ. ಇತ್ತೀಚಿನ ಸಂಶೋಧನೆಗಳೂ ಒಪ್ಪಿಕೊಳ್ಳುವಂತೆ ದೇಹಕ್ಕೂ ಮನಸ್ಸಿಗೂ ಅವಿನಾಭಾವ ಸಂಬಂಧವಿದೆ. ಈ ಸಂಕೀರ್ಣತೆಯನ್ನು ಇನ್ನೂ

ಪೂರ್ಣವಾಗಿ ಅರ್ಥೈಸಿಕೊಳ್ಳುವುದಕ್ಕೇ ಸಾಧ್ಯವಾಗಿಲ್ಲ ಎಂಬುದೂ ಸತ್ಯ. ದೇಹಕ್ಕೆ ತೊಂದರೆಯಾದರೆ ಮನಸ್ಸಿಗೆ ಕಸಿವಿಸಿಯಾಗುವುದು ಮತ್ತು ಮನಸು ಘಾಸಿಗೊಂಡಾಗ ದೇಹದ ಕಾರ್ಯಕ್ಷಮತೆ ಕೆಡುವುದು ಎಲ್ಲರ ಅನುಭವಕ್ಕೂ ಬಂದಿರಬಹುದಾದ ಮತ್ತು ವೈಜ್ಞಾನಿಕವಾಗಿಯೂ ಸಾಬೀತಾಗಿರುವ ವಿಷಯ. ಇದರ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ನಾವು ಸಂತೋಷದಿಂದ ಇದ್ದಾಗ ನಮ್ಮ ರೋಗನಿರೋಧಕ ಶಕ್ತಿ ಅತ್ಯಂತ ಹೆಚ್ಚಾಗಿರುತ್ತದೆ. ಹಾಗೆಯೇ ದೇಹ ಆರೋಗ್ಯವಾಗಿದ್ದಾಗ ಮನಸ್ಸು ಪ್ರಫುಲ್ಲವಾಗಿರುತ್ತದೆ. ಈ ಆಚರಣೆಗಳು ಇಂದ್ರಿಯಗಳನ್ನು ತಣಿಸುತ್ತವೆ. ಮಾನಸಿಕವಾಗಿ ಸ್ಥೈರ್ಯ, ದೃಢತೆಗಳನ್ನು ನೀಡುತ್ತವೆ. ಆಧ್ಯಾತ್ಮಿಕವಾಗಿ, ಪವಿತ್ರತೆಯಲ್ಲಿ ಮಿಂದ ಅನುಭವವಾಗುತ್ತದೆ. ಅಲೌಕಿಕ ಆನಂದದ ಅನುಭೂತಿಯಾಗುತ್ತದೆ. ಪರಿವಾರದವರು, ಬಂಧುಗಳು ಎಲ್ಲರೂ ಸೇರಿ ಭಾಗವಹಿಸಿದಾಗ ರೋಗದ ಜೊತೆಗೇ ಬರುವ ಆತಂಕ, ಖಿನ್ನತೆಗಳೂ ದೂರವಾಗುವ ಸಂಭವವೂ ಇರುತ್ತದೆ. ಜೀವ ಚೈತನ್ಯಕ್ಕೆ ಪುಷ್ಟಿ ದೊರೆಯುತ್ತದೆ. ಈ ಹಿನ್ನೆಲೆಯಲ್ಲಿ ಮನುಷ್ಯನ ಅಸ್ತಿತ್ವವನ್ನು ಇಡಿಯಾಗಿ ನೋಡುವ ಸಾಂಪ್ರದಾಯಿಕ ವೈದ್ಯಪದ್ಧತಿಗಳು ಸಮಂಜಸವೆನ್ನಿಸುತ್ತವೆ. ಇದೇ ಮೂಲನಿವಾಸಿಗಳ ಈ ಆಚರಣೆಗಳ ಮೂಲ ಉದ್ದೇಶದ ಸಾರ್ಥಕತೆಯೂ ಆಗಿದ್ದಿರಬಹುದು ಕೂಡ.

ಪಾರಂಪರಿಕ ಆಟಗಳು

ಪ್ರಪಂಚದ ಎಲ್ಲಾ ನಾಗರಿಕತೆಗಳಂತೆ ಮೂಲನಿವಾಸಿಗಳಲ್ಲೂ ಕ್ರೀಡೆ ಮತ್ತು ಸ್ಪರ್ಧೆಗಳು ಹದಿಹರೆಯರ ಜೀವನದಲ್ಲಿ ಹಾಸುಹೊಕ್ಕಾಗಿಯೇ ಇದ್ದವು. ಲಕ್ರಾಸ್, ಕಡ್ಡಿ ಚೆಂಡಿನ ಆಟ, ಮಾರಥಾನ್ ರೀತಿಯ ಓಟ, ಹೀಗೆ ಅನೇಕ ರೀತಿಯ ಆಟಗಳು ಪ್ರಚಲಿತವಾಗಿದ್ದವು. ಆದರೆ ಇವುಗಳೆಲ್ಲಾ ಕೇವಲ ಮನರಂಜನೆಗಾಗಿ ಅಥವಾ ಕಾಲಕ್ಷೇಪಕಷ್ಟೇ ಸೀಮಿತವಾಗಿರದೇ ಅವುಗಳೊಂದಿಗೆ ಧಾರ್ಮಿಕ ಮತ್ತು ಸಾಮುದಾಯಿಕ ನಂಬಿಕೆಗಳ ಮತ್ತು ತ್ಯಾಗದ ಮೌಲ್ಯಗಳು ಬೆರೆತುಕೊಂಡಿದ್ದವು. ಕೆಲವು ಆಟಗಳಂತೂ ಅತ್ಯಂತ ಮಹತ್ವದ ಧಾರ್ಮಿಕ ಆಚರಣೆಗಳೇ ಆಗಿದ್ದವು. ಉದಾಹರಣೆಗೆ ಚೆರೋಕೆ ಪಂಗಡವರ ಕಡ್ಡಿ ಚೆಂಡಿನ ಆಟ (stickball). ಇದರಲ್ಲಿ ಭಾಗವಹಿಸುವ ಆಟಗಾರರು ಆರು ತಿಂಗಳುಗಳ ಕಾಲ ಕಠಿಣ ಉಪವಾಸ, ಬ್ರಹ್ಮಚರ್ಯ, ಪಥ್ಯಗಳನ್ನು ಪಾಲಿಸಬೇಕಾಗಿತ್ತು. ನಂತರ ಔಷಧಿ ಪುರುಷ/ಶಾಮನರು ಅವರನ್ನು ಆಶೀರ್ವದಿಸಿ ವಿಶೇಷವಾದ ಹಚ್ಚೆ ಹಾಕಿ ಆಟಕ್ಕೆ ಒಪ್ಪಿಗೆ ನೀಡುತ್ತಿದ್ದರು. ಇದಕ್ಕೆಂದೇ ವಿಶೇಷ ಮಂತ್ರಗಳನ್ನು ಪಠಿಸುತ್ತಿದ್ದರು. ಇಂತಹ ಆಟಗಳು ಮೂಲನಿವಾಸಿಗಳ ಧಾರ್ಮಿಕ ಮತ್ತು ಆಧ್ಯಾತ್ಮಿಕ ನಂಬಿಕೆಗಳ ಪುನರುತ್ಥಾನಗೊಳಿಸುವುದಲ್ಲದೇ ಮತ್ತು ಹದಿಹರೆಯರಲ್ಲಿ ದೃಢವಾದ ಒಗ್ಗಟ್ಟನ್ನೂ ಹುಟ್ಟುಹಾಕುತ್ತಿತ್ತು.

ಎಷ್ಟೋ ಬಾರಿ ಇಂತಹಾ ಆಟಗಳು ಪರಿವಾರದ ಹಿರಿಯರು ಅಥವಾ ಇತರ ಸದಸ್ಯರು ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿರುವಾಗ ಅವರ ರೋಗ ನಿವಾರಣೆಗಾಗಿ ಹರಕೆಯ ರೂಪದಲ್ಲೂ ಕುಟುಂಬದ ಕಿರಿಯ ಸದಸ್ಯರಿಂದ ಆಡಲ್ಪಡುತ್ತಿತ್ತು. ಇದರಿಂದ

ಶಾಮನರು ನೀಡುವ ಔಷಧಿಗಳೂ ಹೆಚ್ಚು ಶಕ್ತಿಯುತವಾಗಿ ಕೆಲಸ ಮಾಡುವವು ಎಂಬ ಮುಗ್ಧ ನಂಬಿಕೆಯೂ ಇತ್ತು. ಇದಕ್ಕೆ ಉದಾಹರಣೆಯೆಂದರೆ ವಾಂಪಂಹ್ಗ್ (wampanaog) ಸಮುದಾಯದವರ 'ಬೆಂಕಿ ಚೆಂಡಿನಾಟ' (Fire ball game). ಪೂರ್ವ ಮ್ಯಾಸಾಚೂಸೆಟ್ಸ್, ಮಾರ್ಥಾ ದ್ರಾಕ್ಷಿ ತೋಟ, ನಂಟುಕೆಟ್ (Nantucket), ಎಲಿಜಬೆತ್ ದ್ವೀಪಗಳಲ್ಲಿ ಸುಮಾರು ಹನ್ನೆರಡು ಸಾವಿರ ವರ್ಷಗಳಿಂದ ವಾಸವಾಗಿದ್ದ ಈ ಪಂಗಡದವರು ಮೊದಲ ವಲಸಿಗರನ್ನು ಸುಗ್ಗಿಯ ಸಮಯದಲ್ಲಿ ಕರೆದು ಆತಿಥ್ಯ ನೀಡಿದರು ಮತ್ತು ಇದರಿಂದಲೇ 'ಥ್ಯಾಂಕ್ಸ್ ಗೀವಿಂಗ್' ಪರಂಪರೆ ಮೊದಲಾಯಿತು ಎಂಬ ಅಭಿಪ್ರಾಯವೂ ಇದೆ.

ಬೆಂಕಿ ಚೆಂಡಿನಾಟ

ಇದೊಂದು ನೂರಾರು ವರ್ಷಕ್ಕೂ ಹಳೆಯ ಇತಿಹಾಸವಿರುವ, ಪಾರಂಪರಿಕವಾದ, ಸ್ವಲ್ಪಮಟ್ಟಿಗೆ ಫುಟ್ಬಾಲನ್ನು ಹೋಲುವ ಆಟ. ಸಾಮಾನ್ಯವಾಗಿ ಗಂಡಸರೇ ಆಡುವ ಈ ಆಟವನ್ನು ಕುಟುಂಬದವರು ಅಥವಾ ಸ್ನೇಹಿತರು ರೋಗದಿಂದ ಬಳಲುತ್ತಿರುವಾಗ ಅವರ ಆರೋಗ್ಯ ಕುದುರಲಿ ಎಂದು ಹರಕೆ ಹೊತ್ತು ಆಡುತ್ತಿದ್ದರು. ಜಿಂಕೆಯ ಚರ್ಮದ ಪಟ್ಟಿಯನ್ನು ತಿಮಿಂಗಲ (whale) ದ ಎಣ್ಣೆಯಲ್ಲಿ ದಿನಗಳಗಟ್ಟಲೆ ನೆನೆಸಿ ಅದನ್ನು ಚೆಂಡಿನಾಕಾರಕ್ಕೆ ತರುತ್ತಿದ್ದರು. ವಿಶಾಲವಾದ ಹುಲ್ಲಿನ ಮೈದಾನದಲ್ಲಿ ರಾತ್ರಿಯ ಸಮಯದಲ್ಲಿ ಈ ಆಟ ನಡೆಯುತ್ತಿತ್ತು. ಚೆಂಡುಗಳಿಗೆ ಬೆಂಕಿ ಹೊತ್ತಿಸಿ ಮೈದಾನದುದ್ದಕ್ಕೂ ಅದನ್ನು ಎಸೆಯುತ್ತಾ, ಕಾಲಿನಿಂದ ಒದೆಯುತ್ತಾ ಅಟ್ಟಿಸಿಕೊಂಡು ಹೋಗುವ ಈ ಪರಿಯ ಆಟ ನೋಡುಗರ ಮೈನವಿರೇಳಿಸುತ್ತಿತ್ತು. ನಿಂತು ನೋಡುವವರಿಗೆ ಗಗನದಲ್ಲಿನ ಉಲ್ಕೆಗಳಂತೆ ಕಾಣುತ್ತಿದ್ದ ಇವು ಆಟ ರಂಗೇರಿದಂತೆ ಭಯ, ಉನ್ಮಾದಗಳನ್ನು ಹುಟ್ಟಿಸಿ, ಮೈ ಜುಮ್ಮೆನ್ನಿಸುತ್ತಿತ್ತು! ತಮ್ಮ ಮೈಮೇಲೆ ಆದ ಸುಟ್ಟ ಗಾಯಗಳು, ತರುಚು ಗಾಯಗಳಿಂದ ರೋಗಿಗಳ ನೋವು ಸಂಕಟವನ್ನು ನಾವೂ ಹಂಚಿಕೊಂಡು,ಇದರಿಂದ ಅವರಿಗೆ ಸಾಂತ್ವನ ದೊರೆಯುತ್ತದೆ ಎಂಬ ಸಮಾಧಾನ ಆಟಗಾರರಿಗೆ ಸಿಗುತ್ತಿತ್ತು. ಇಂತಹ ಎಷ್ಟು ವೈಚಿತ್ರ್ಯಗಳು ಕಾಲಗರ್ಭದಲ್ಲಿ ಹುದುಗಿವೆಯೋ!

ವಾಂಪಾಂಹ್ಗ್ ಪಂಗಡದ ಸಂಸ್ಕೃತಿ, ವೈಶಿಷ್ಟ್ಯಗಳನ್ನು ಪ್ರದರ್ಶಿಸುವ 'ಪಾವ್ ಪಾವ್' ಎಂದು ಕರೆಸಿಕೊಳ್ಳುವ ಜಾತ್ರೆಯನ್ನು ಹೋಲುವ ಸಮಾವೇಶವನ್ನು ಪ್ರತಿ ವರ್ಷ ಜುಲೈ ನಾಲ್ಕರ ವಾರಾಂತ್ಯದಲ್ಲಿ ಮ್ಯಾಸ್ಸಾಚ್ಯುಸೆಟ್ಸ್ ನ 'ಮಾಶ್ಪೀ' (ಕೇಪ್ ಕಾಡ್ ಬಳಿ) ಯಲ್ಲಿ ಏರ್ಪಡಿಸುತ್ತಾರೆ. ಅಲ್ಲಿಗೆ ಸಾವಿರಾರು ಜನರು ದೇಶದೆಲ್ಲೆಡೆಯಿಂದ ಬಂದು ಪಾರಂಪರಿಕ ನೃತ್ಯ, ಸಂಗೀತ, ಊಟಗಳನ್ನು ಸವಿದು ಆನಂದಿಸುತ್ತಾರೆ. ಅಲ್ಲಿ ವರ್ಷಕ್ಕೊಮ್ಮೆ ಆ ವಾರಾಂತ್ಯದ ಶನಿವಾರದ ರಾತ್ರಿ ಈ ಬೆಂಕಿ ಚೆಂಡಿನ ಆಟವನ್ನೂ ಪ್ರದರ್ಶಿಸುತ್ತಾರೆ. ನೆರೆದಿರುವ ಮಂದಿಗೆ ಪುಳಕದ ಪರಾಕಾಷ್ಠದ ಅನುಭವ ನೀಡುತ್ತಾರೆ.

ಗಿಡಮೂಲಿಕೆಗಳ ಮಹತ್ವ ಮತ್ತು ಬಳಕೆ

ಮೂಲನಿವಾಸಿಗಳು ಆಧುನಿಕತೆಯ ಸೋಂಕಿಲ್ಲದೆ ಪ್ರಕೃತಿಯೊಂದಿಗೆ ಒಂದಾಗಿ ಬಾಳುತ್ತಿದ್ದವರು. ಹಾಗಾಗಿ ಸಹಜವಾಗಿಯೇ ಗಿಡಮೂಲಿಕೆಗಳ ಬಳಕೆ ದಿನನಿತ್ಯದ ಜೀವನದಲ್ಲಿ ಹಾಸು ಹೊಕ್ಕಾಗಿತ್ತು. ಸಾವಿರಾರು ವರ್ಷಗಳಿಂದ ಇವರಿಗೆ ಸುಮಾರು 300 – 350ಕ್ಕೂ ಹೆಚ್ಚು ಗಿಡಮೂಲಿಕೆಗಳ ಪರಿಚಯ, ಔಷಧೀಯ ಗುಣಗಳ ಜ್ಞಾನ ಇದ್ದಿರಬಹುದೆಂದು ಅಂದಾಜು ಮಾಡುತ್ತಾರೆ. ಧಾರ್ಮಿಕ ಆಚರಣೆಗಳಲ್ಲಿ, ರೋಗ ಶಮನಕ್ಕಾಗಿ ಮಾಡುವ ವಿಧಿಗಳಲ್ಲಿ, ಪವಿತ್ರ ಮೂಲಿಕೆಗಳ ಮಹತ್ವ ಬಲು ದೊಡ್ಡದು. ಅದರೊಂದಿಗೇ ನಿತ್ಯದ ಚಟುವಟಿಕೆಗಳಲ್ಲೂ, ಆಹಾರದಲ್ಲೂ ಮತ್ತು ಮನೆಮದ್ದುಗಳಲ್ಲಿ ಕೂಡಾ ಮೂಲಿಕೆಗಳ ಬಳಕೆ ಇತ್ತು. ಜೋಳ, ಪೈನ್ ಗಿಡಗಳು, ದೇವದಾರು ವೃಕ್ಷಗಳು, ಸೇಜ್, ಎಲ್ಲಾ ರೀತಿಯ ಬೆರ್ರಿ ಗಿಡಗಳ ಎಲೆಗಳು, ಅನೇಕ ರೀತಿಯ ಅಣಬೆಗಳು, ಸುಗಂಧಿತ ಪುದೀನ ಜಾತಿಯ ಸಸ್ಯಗಳು, ಹೀಗೆ ಸ್ಥಳೀಯವಾಗಿ ಸಿಗುವ ಅನೇಕ ಗಿಡಮೂಲಿಕೆಗಳು ಔಷಧಿಯಾಗಿ ಬಳಕೆಯಾಗುತ್ತಿದ್ದವು. ಮೆಕ್ಕೆ ಜೋಳದೊಂದಿಗೆ ಇನ್ನೊಂದು ಧಾರ್ಮಿಕ ಮಹತ್ವ ಇದ್ದ ಸಸ್ಯವೆಂದರೆ ತಂಬಾಕು. ಅದನ್ನು ಅತ್ಯಂತ ಪವಿತ್ರ ಮತ್ತು ಪೂಜ್ಯವೆಂದು ಪರಿಗಣಿಸಲಾಗುತ್ತಿತ್ತು. ತಂಬಾಕನ್ನು ದೇವರಿಗೆ ಮತ್ತು ಗಿಡಮೂಲಿಕೆಗಳಿಗೆ ಅರ್ಪಿಸಲು ಮತ್ತು ಆಚರಣೆಗಳಲ್ಲಿ ಆಶೀರ್ವಾದದ ಸಂಕೇತವಾಗಿ ಕೂಡಾ ಬಳಸಲಾಗುತ್ತಿತ್ತು. ಜೊತೆಗೆ ಕೆಲವು ಅಮೂಲ್ಯ ಗಿಡಮೂಲಿಕೆಗಳನ್ನು ಒಂದು ಚೀಲದಲ್ಲಿ ಹಾಕಿ ಯಾವಾಗಲೂ ತಮ್ಮೊಂದಿಗೇ ಇಟ್ಟುಕೊಳ್ಳುತ್ತಿದ್ದರು. ಇದನ್ನು 'ಔಷಧಿ ಚೀಲ' (medicine bag) ಎನ್ನುತ್ತಾರೆ. ಇದೊಂದು ವಿಶಿಷ್ಟ ನಂಬಿಕೆ. ಅದರಲ್ಲಿರುವ ಮೂಲಿಕೆಗಳ ಚೇತನ ಆರೋಗ್ಯವನ್ನು ಸದಾ ಕಾಪಾಡುತ್ತದೆ ಎಂಬ ನಂಬಿಕೆ ಇತ್ತು. ಇದನ್ನು ಯಾರು ಬೇಕಾದರೂ ತಮಗೆ ಬೇಕಾದವರಿಗೆ ಆಶೀರ್ವಾದದ ರೂಪದಲ್ಲಿ ಮಾಡಿಕೊಡಬಹುದು. ಈ ಪದ್ಧತಿ ಇಂದಿಗೂ ಪ್ರಚಲಿತವಿದೆ.

ಗರ್ಭಿಣಿಯರು ತಮ್ಮ ಆರೋಗ್ಯಕ್ಕಾಗಿ ಮತ್ತು ಹೆರಿಗೆ ಸುಲಭವಾಗಿ ಆಗುವಂತೆ ಮಾಡಲು ಸ್ಥಳೀಯ ಗಿಡಮೂಲಿಕೆಗಳನ್ನು ಬಳಸುತ್ತಿದ್ದರು. ಮುಖ್ಯವಾಗಿ ಮೆಕ್ಕೆ ಜೋಳದ ಮೇಲಿನ ರೇಶ್ಮೆಯಂತಹ ನೂಲು, ಕೆಂಪು ರಾಸ್ಪ್ ಬೆರ್ರಿ ಗಿಡದ ಎಲೆಗಳು ಇವುಗಳನ್ನು ಚಹಾದಂತೆ ಕಾಯಿಸಿ ಕುಡಿಯುತ್ತಿದ್ದರು. ಮೆಕ್ಕೆ ಜೋಳದ ಎಣ್ಣೆಯನ್ನು ಅಭ್ಯಂಗಕ್ಕಾಗಿ ಉಪಯೋಗಿಸುತ್ತಿದ್ದರು. ಹೆರಿಗೆಯ ಸಮಯದಲ್ಲಿ, 'Antelope Horn' ಅಥವಾ ಮಿಲ್ಕ್ ವೀಡ್ (*Asclepiodora decumbens*) ಎಂಬ ಸಣ್ಣ ಗಿಡದ ಬೇರಿನ ಟೀ, ಒಂದು ಬಗೆಯ ದೇವದಾರು ಅಥವಾ ಪೈನ್ ಗಿಡವಾದ ಜುನಿಪರ್ (*Juniperus scopulorum*) ಎಂಬ ಮರದ ಚಿಗುರಿನ ಚಹಾ, ಹತ್ತಿ ಗಿಡದ ಬೇರಿನ (*Gossypium hisrutum*) ಚಹಾ ಮತ್ತು ಮೆಕ್ಕೆ ಜೋಳದ ಮೇಲೆ ಬೆಳೆಯುವ ಒಂದು ರೀತಿಯ ಶಿಲೀಂದ್ರ (ಅಣಬೆ), ಇವುಗಳ ಬಳಕೆಯಿಂದ ಹೆರಿಗೆ ಶೀಘ್ರವಾಗಿ ಮತ್ತು ಸುಲಭವಾಗಿ ನಡೆಯುತ್ತಿತ್ತು, ಹೆರಿಗೆಯಾದ ಮೇಲೆ ಕಾಲೆಂಡುಲಾ ಎಂಬ ಗಿಡದ ಹೂವುಗಳು ಮತ್ತು ಚಿಗುರು ಎಲೆಗಳು ಮತ್ತು *Lygodesmia juncea* ಎಂಬ ಕಳೆ ಗಿಡ, ಹಾಲು ಅಣಬೆ (Lactaria)

ಇವುಗಳ ಉಪಯೋಗದಿಂದ ತಾಯಿಯ ಹಾಲು ಪುಷ್ಟಿಯಾಗುತ್ತದೆ ಎಂಬ ಅಂಶ ತಿಳಿದಿತ್ತು. ತಾಯಿ ಮತ್ತು ಮಗುವಿನ ಸ್ನಾನಕ್ಕೆ ರಾಸ್ಪ್ ಬೆರ್ರಿ ಮತ್ತು ಇನ್ನಿತರ ಕೆಲವು ಗಿಡಗಳ ಎಲೆಗಳನ್ನು ನೀರಲ್ಲಿ ಕಾಯಿಸಿ ಸ್ನಾನಕ್ಕೆ ಉಪಯೋಗಿಸುತ್ತಿದ್ದರು. ಮಗು ಹುಟ್ಟಿದ ನಂತರ ಹೊಕ್ಕಳು ಬಳ್ಳಿಯನ್ನು ಕತ್ತರಿಸಿದ ಮೇಲೆ ಹೊಕ್ಕಳಿನ ಮೇಲೆ *Lycopodium clavatum* ಎಂಬ ಜರೀ ಗಿಡದ ಪರಾಗವನ್ನು ಉದುರಿಸುತ್ತಿದ್ದರು. ಇದರಿಂದ ಗಾಯ ಬೇಗ ಮಾಗುತ್ತಿತ್ತು. ಕತ್ತರಿಸಿದ ಹೊಕ್ಕಳು ಬಳ್ಳಿಯನ್ನು ಒಂದು ವಿಶೇಷ ಚೀಲದಲ್ಲಿ ಹೊಲೆದು ತೊಟ್ಟಿಲಿನ ಮೇಲೆ ಕಟ್ಟುವ ಸಂಪ್ರದಾಯವಿತ್ತು. ಇದನ್ನು ನೋಡುವುದರಿಂದ ಮಗುವಿನ ದೃಷ್ಟಿ ಚುರುಕಾಗುತ್ತದೆ ಎಂಬ ನಂಬಿಕೆ ಇತ್ತು. ಬಜೆಯನ್ನು ನಮ್ಮಲ್ಲಿದ್ದಂತೆಯೇ ಮಕ್ಕಳ ಅನೇಕ ತೊಂದರೆಗಳಿಗೆ ಬಳಸುವ ಸಂಪ್ರದಾಯವಿತ್ತು. ಮೆಕ್ಕೆ ಜೋಳದ ಹುಡಿ (corn meal), ಪರಾಗ (pollen) ಮತ್ತು ಹಿಟ್ಟನ್ನು (corn starch) ಗಳನ್ನು ಪೌಡರ್‌ನಂತೆ ಬಳಸುತ್ತಿದ್ದರು. Sclaroderma ಎಂಬ ಬಿಳಿಯ ಬಣ್ಣದ ಹತ್ತಿಯ ಉಂಡೆಯಂತೆ ಕಾಣುವ (puff ball) ಅಣಬೆಯ ಬೀಜಕ (spores)ಗಳು ಹೊಕ್ಕಳಿನ ರಕ್ತಸ್ರಾವ ತಡೆಯಲು, ಡಯಾಪರ್ ಗುಳ್ಳೆಗಳಿಗೆ, ಸುಟ್ಟ ಗಾಯಕ್ಕೆ, ಹುಳು ಕೀಟಗಳು ಕಚ್ಚಿದ ಗಾಯಕ್ಕೆ ಮುಲಾಮಿನಂತೆ ಬಳಕೆಯಾಗುತ್ತಿತ್ತು. ಮೆಕ್ಕೆ ಜೋಳದ ಮೇಲಿನ ಶಿಲೀಂದ್ರವನ್ನೂ ಇದಕ್ಕಾಗಿ ಬಳಸುತ್ತಿದ್ದರು. (ಮೂಲನಿವಾಸಿಗಳು ವಿಶೇಷ ಜಾತಿಯ ಹಾವಸೆ ಗಿಡದ ತಾಜಾ ಹಾಸು (sphagnum moss), 'cattail' ಎಂಬ ಗಿಡದ ಬೀಜದಲ್ಲಿರುವ ಬೂರುಗ, ಮತ್ತು ಜೂನಿಪರ್ ಮರದ ತೊಗಟೆಗಳನ್ನು ಬಟ್ಟೆಯಲ್ಲಿ ಸುತ್ತಿ ತೊಟ್ಟಿಲಿನಲ್ಲಿ ಹಾಸುತ್ತಿದ್ದರು, ಡಯಾಪರ್‌ನಂತೆ. ಇವುಗಳನ್ನು ಶುಚಿಪಡಿಸಿ ಮತ್ತೆ ಮತ್ತೆ ಬಳಸುತ್ತಿದ್ದರು. ಇವು ನೈಸರ್ಗಿಕ ಕೀಟಾಣು ನಾಶಕಗಳಂತೆಯೂ ಕೆಲಸಮಾಡುತ್ತಿದ್ದವು.)

ಮಕ್ಕಳು ಬೆಳೆದಂತೆ ಚಿಕ್ಕ ವಯಸಿನಲ್ಲಿಯೇ ಮೂಲಿಕೆಗಳು, ಔಷಧೀಯ ಗಿಡಗಳ ಪರಿಚಯ ಅವರಿಗೆ ಹಿರಿಯರಿಂದ ಸಿಗುತಿತ್ತು. ವಿಷಯುಕ್ತ ಗಿಡಗಳನ್ನು ಗುರುತಿಸುವುದು, ಒಂದು ವೇಳೆ ಅದರ ಸಂಪರ್ಕಕ್ಕೆ ಬಂದರೆ ವಿಷ ಲಕ್ಷಣಗಳನ್ನು ನಿವಾರಿಸಲು ಬಳಸುವ ಗಿಡಮೂಲಿಕೆಗಳನ್ನು ಗುರುತಿಸುವುದು, ಹೀಗೆ ಎಲ್ಲಾ ಜ್ಞಾನವನ್ನೂ ಅವರು ಪಡೆಯುತ್ತಿದ್ದರು. 'ವಿಲ್ಲೋ' ಗಿಡದ ತೊಗಟೆಗಳನ್ನು ಕಚ್ಚಿ ಹಲ್ಲುಜ್ಜುವ ಬ್ರಷ್ನಂತೆ ಬಳಸುವುದು, ಹಲ್ಲುನೋವಿಗೆ ಲೇಪಗಳನ್ನು ತಯಾರಿಸುವುದು ಹೀಗೆ ಸಣ್ಣ ಔಷಧಿಗಳ ಪ್ರಾಯೋಗಿಕ ಕಲಿಕೆ ಸಣ್ಣ ವಯಸ್ಸಿನಿಂದಲೇ ನಡೆಯುತ್ತಿತ್ತು. ಜೊತೆಗೇ ಗಿಡಮೂಲಿಕೆಗಳ ಪಾವಿತ್ರ್ಯ, ಅವುಗಳಿಗೆ ಮತ್ತು ಜೀವಿಗಳಿಗಿರುವ ದೈವಿಕ ಬಂಧಗಳ ಬಗ್ಗೆಯೂ ಹಿರಿಯರು ತಿಳಿಹೇಳುತ್ತಿದ್ದರು.

ಗಿಡಮೂಲಿಕೆಗಳನ್ನು ಸಾಮಾನ್ಯವಾಗಿ ಕುದಿಸಿ ಟೀನಂತೆ ಅಥವಾ ತೆಳುವಾದ ಕಷಾಯದಂತೆ ಮಾಡಿ ಸೇವಿಸುತ್ತಿದ್ದರು. ಇದಲ್ಲದೆ ಲೇಪಗಳು, ಮುಲಾಮು, ಪೋಟಲಿಗಳು, ಟಿಂಕ್ಚರ್‌ಗಳು, ಸುಗಂಧಿತ ಎಣ್ಣೆಗಳು ಇವುಗಳನ್ನು ಬಾಹ್ಯ ಪ್ರಯೋಗಗಳಿಗೆ ಬಳಸುತ್ತಿದ್ದರು. ಗಿಡಮೂಲಿಕೆಗಳನ್ನು ಒಣಗಿಸಿ ಅವುಗಳ ಒಂದು ತುದಿಯಲ್ಲಿ ಸಣ್ಣಗೆ ಬೆಂಕಿ ಹಚ್ಚಿ ಅದು ನಿಧಾನವಾಗಿ ಹೊಗೆಯಾಡುವಾಗ ಆ ಹೊಗೆಯಲ್ಲಿ ಮೀಯುವುದು, ಇದನ್ನು 'smudging'

ಎನ್ನುತ್ತಾರೆ. ಇದು ಸಾಮಾನ್ಯವಾಗಿ ವಿಧಿ ಮತ್ತು ಆಚರಣೆಗಳಲ್ಲಿ ಮಾಡುತ್ತಿದ್ದ ಪದ್ಧತಿ. ಕೆಲವೊಮ್ಮೆ ಮನೆಗಳಲ್ಲೂ ಸಣ್ಣ ಪುಟ್ಟ ತೊಂದರೆಗಳಲ್ಲಿ ಇದನ್ನು ಮಾಡುತ್ತಿದ್ದರು. ಕುದಿಯುವ ನೀರಿಗೆ ಔಷಧೀಯ ಸಸ್ಯಗಳನ್ನು ಹಾಕಿ ಮುಚ್ಚಿಟ್ಟು, ನಂತರ ಅದನ್ನು ಸೋಸಿ ಕುಡಿಯುತ್ತಿದ್ದರು. (ಇದನ್ನು ಆಯುರ್ವೇದದಲ್ಲಿ 'ಫಾಂಟಾ' ಎನ್ನುತ್ತಾರೆ). ಆದರೆ ಗುಳಿಗೆಗಳ ಪ್ರಯೋಗ ಎಲ್ಲೂ ಕಂಡುಬರುವುದಿಲ್ಲ. ಖನಿಜಗಳ ಪ್ರಯೋಗ ಶಮನ ವಿಧಿಗಳಲ್ಲಿ ಕಂಡುಬರುತ್ತದೆ. ಒಂದೇ ಸಸ್ಯವನ್ನು ವಿವಿಧ ಪಂಗಡದವರು ಬೇರೆ ಬೇರೆ ತೊಂದರೆಗಳಲ್ಲಿ ಪ್ರಯೋಗಿಸುವುದನ್ನು ಕಾಣಬಹುದು. ನೋವು ಶಾಮಕ ಗುಣಗಳಿರುವ ಮೂಲಿಕೆಗಳನ್ನು ತಲೆನೋವು, ಜ್ವರ ಇತ್ಯಾದಿಗಳಿಗೆ ಉಪಯೋಗಿಸುತ್ತಿದ್ದರು. ಎಲ್ಲಾ ಗಿಡಮೂಲಿಕೆಗಳ ಪ್ರಯೋಗಗಳನ್ನು ಪಟ್ಟಿ ಮಾಡುತ್ತಾ ಹೋದರೆ ಬಹಳ ಪುಟಗಳಾಗಬಹುದು. ಋತುಸ್ತಂಭನದ ಸಮಯದಲ್ಲಿ ಉಂಟಾಗುವ ತೊಂದರೆಗಳಿಗೆ ಕಪ್ಪು ಕೋಹೋಶ್ (*Cimicfuga racemosa*), ನೀಲಿ ಕೋಹೋಶ್ (*Caulophyllum thalictroides*), ಇವುಗಳ ಟೀ ಮತ್ತು ಟಿಂಕ್ಚರ್‌ಗಳನ್ನು ಉಪಯೋಗಿಸುತ್ತಿದ್ದರು. ಒಣ ಚರ್ಮವನ್ನು ನಿವಾರಿಸಲು Evening primoseನಲ್ಲಿ ಮಾಡಿದ ಎಣ್ಣೆಯನ್ನು ಬಳಸುತ್ತಿದ್ದರು. ಇವರಿಗೆ ಗರ್ಭನಿರೋಧಕಗಳ ಪ್ರಯೋಗವೂ ತಿಳಿದಿತ್ತು. ಇದಕ್ಕೆಂದು ಅವರು ವ್ಯಾಪಕವಾಗಿ ಬಳಸುತ್ತಿದ್ದ, ಸಾಮಾನ್ಯವಾಗಿ ಸ್ಕ್ವಾ ಬೇರು ಮತ್ತು ಪಾಪೂಸ್ ಬೇರುಗಳೆಂದು ಕರೆಯಲ್ಪಡುವ ಗಿಡಗಳ ಗರ್ಭನಿರೋಧಕ ಸಾಮರ್ಥ್ಯವನ್ನು 1950ರಲ್ಲಿ ವಿಜ್ಞಾನಿಗಳು ಅಧ್ಯಯನ ಮಾಡಿ ಇದನ್ನೇ ಅಳತೆಗೋಲೆಂದು ಪರಿಗಣಿಸುತ್ತಿದ್ದರು. ಇವು ಈಸ್ಟ್ರೋಜೆನ್ ಚಕ್ರವನ್ನು ಅಂತ್ಯಗೊಳಿಸುವುದಲ್ಲದೆ ಜನನಾಂಗಗಳ ಗಾತ್ರವನ್ನೂ ಕುಗ್ಗಿಸಬಹುದೆಂದು ಸಾಬೀತಾಗಿದೆ. ಹೆಂಗಸರು ಮತ್ತು ಗಂಡಸರಿಬ್ಬರೂ Dogbane (*Apocynum androsaemifolium*), milkweed (*Asclepias syriaca*), stoneseed (*Lithospermum ruderale*), Antelope sage (*Eriogonum jamesii*) ಈ ಮೂಲಿಕೆಗಳನ್ನು ಕುದಿಸಿ ತೆಳುವಾದ ಟೀ ಮಾಡಿ ಕುಡಿಯುತ್ತಿದ್ದರು. ಇದೇ ಕಾರಣಕಾಗಿ ಬಳಸುತ್ತಿದ್ದ ಕಾಡು ಗೆಣಸಿನಲ್ಲಿರುವ (Diascoria villosa) 'disogenin' ಅಂಶವನ್ನು ಈಗ ಪ್ರೊಜೆಸ್ಟೆರಾನ್ ಮತ್ತು ಸ್ಟೆರಾಯಿಡ್‌ಗಳ ಉತ್ಪಾದನೆಯಲ್ಲಿ ಬಳಸುತ್ತಾರೆ. ಈ ಗಿಡದ ಆಲ್ಕಲಾಯಿಡ್‌ಗಳನ್ನು ಬೇರೆ ಬೇರೆ ರೋಗಗಳಿಗೆ ಮತ್ತು ಗರ್ಭನಿರೋಧಕಗಳಲ್ಲೂ ಬಳಸುತ್ತಾರೆ. ಹತ್ತಿ (*Gossypium hirsutum*) ಯಲ್ಲಿರುವ 'Gossypol' ಅನ್ನು ಸಂಸ್ಕರಿಸಿ ಚೀನಾದಲ್ಲಿ ಪುರುಷರಲ್ಲಿ ವೀರ್ಯನಾಶಕವಾಗಿ ಬಳಸುತ್ತಾರೆ.

ಮೂಲನಿವಾಸಿಗಳಿಗೆ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವ ಸಸ್ಯಗಳ ಪ್ರಯೋಗವೂ ತಿಳಿದಿತ್ತು. ಅದರಲ್ಲಿ ಮುಖ್ಯವಾಗಿ ಅಣಬೆಗಳ ಈ ಔಷಧೀಯ ಗುಣ ಈಗ ಪ್ರಪಂಚಾದ್ಯಂತ ಪ್ರಸಿದ್ಧವಾಗಿದೆ. Grifola frondosa (maitake) ಎಂಬ ಅಣಬೆ ಮಧುಮೇಹ, ಕ್ಯಾನ್ಸರ್, ಮತ್ತು ಎಚ್‌ಐವಿ ವೈರಸ್ಸನ್ನು ಕೂಡಾ ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದು ಸಂಶೋಧನೆಗಳಿಂದ ತಿಳಿದುಬಂದಿದೆ. ಇದಲ್ಲದೆ ಅಣಬೆಗಳು ಸ್ಥೌಲ್ಯ, ರಕ್ತದೊತ್ತಡ,

ಗರ್ಭಾಶಯದ ಗಡ್ಡೆಗಳು ಮತ್ತು ಪ್ರೋಸ್ಟೇಟ್ ಗ್ರಂಥಿಗಳ ಊತವನ್ನು ಕಡಿಮೆ ಮಾಡಬಹುದು ಎಂದು ಕಂಡುಹಿಡಿದಿದ್ದಾರೆ. ಇನ್ನೂ ಅನೇಕ ಗಿಡಮೂಲಿಕೆಗಳ ಔಷಧೀಯ ಗುಣಗಳೂ ಸಾಬೀತಾಗಿವೆ ಮತ್ತು ಅಲೋಪತಿಯ ಅನೇಕ ಔಷಧಿಗಳಲ್ಲಿ ಯಥೇಚ್ಛವಾಗಿ ಬಳಕೆಯೂ ಆಗುತ್ತಿದೆ.

ಬುಡಕಟ್ಟಿನವರ ಆಹಾರ ಕ್ರಮವೂ ಎಲ್ಲಾ ಪುರಾತನ ಜನಾಂಗದವರಂತೆ, ಬೇಟೆಯಾಡುವುದು, ಮೀನು ಹಿಡಿಯುವುದು, ವ್ಯವಸಾಯ ಮತ್ತು ಪ್ರಾಣಿ/ಪಕ್ಷಿಗಳ (ಬಾತುಕೋಳಿ, ಟರ್ಕಿ) ಸಾಗಾಣಿಕೆಯನ್ನು ಅವಲಂಬಿಸಿತ್ತು. ಮೆಕ್ಕೆ ಜೋಳ ಜೀವನಾಧಾರವಾಗಿದ್ದ ಬೆಳೆ. ಅಂತೆಯೇ ಅದನ್ನು ದೈವದ ಪ್ರತೀಕ ಎಂಬಂತೆ ನೋಡುತ್ತಿದ್ದರು. ಆಯಾ ಋತುಗಳಲ್ಲಿ ಸಿಗುವ ಹಣ್ಣು ಹಂಪಲುಗಳನ್ನು ಸುತ್ತಲಿರುವ ಕಾಡಿನಿಂದ ಸಂಗ್ರಹಿಸಿ ಶೇಖರಿಸಿ ಉಪಯೋಗಿಸುತ್ತಿದ್ದರು. ಕಾಯಿಲೆಯ ಸಮಯದಲ್ಲಿ ಪಥ್ಯದ ಮಹತ್ವವೂ ಅವರಿಗೆ ತಿಳಿದಿತ್ತು. ಗರ್ಭಿಣಿಯರು ಮಾಂಸಾಹಾರ, ಉಪ್ಪು ಮತ್ತು ಕೊಬ್ಬಿನ ಪದಾರ್ಥಗಳನ್ನು ತಿನ್ನಬಾರದೆಂಬ ನಿಯಮವಿತ್ತು. ಕೇವಲ ನೀರನ್ನು ಕುಡಿದು ಉಪವಾಸ ಮಾಡುವ ಪದ್ಧತಿಯೂ ಇತ್ತು. ಗಿಡಮೂಲಿಕೆಗಳನ್ನು ಆಹಾರದೊಂದಿಗೆ ಬಳಸುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದರು.

ಮುಗಿಸುವ ಮುನ್ನ....

ಮೂಲನಿವಾಸಿಗಳ ಜೀವನಧರ್ಮವೇ ತಮ್ಮ ಸುತ್ತಲಿನ ಪ್ರಕೃತಿ ಮತ್ತು ಸೃಷ್ಟಿಯ ಸರ್ವ ಜೀವಜಾತುಗಳನ್ನೂ ಭಯಮಿಶ್ರಿತ ಗೌರವಾದರಗಳಿಂದ ನೋಡುವುದು, ಅವುಗಳೊಂದಿಗೆ ಸಾಮರಸ್ಯ, ಸೌಹಾರ್ದಗಳಿಂದ ಬಾಳುವುದು. ಪ್ರಕೃತಿಯ ಸರ್ವ ಸಂಪತ್ತನ್ನೂ ಕೊಳ್ಳೆಹೊಡೆದು, ನಾವಿರುವ ಭೂಮಿಯನ್ನೇ ನಾಶಮಾಡಿ, ನಮ್ಮ ಅವನತಿಗೆ ನಾವೇ ಕಾರಣರಾಗುತ್ತಿರುವ ಭಸ್ಮಾಸುರರೇ ತುಂಬಿರುವ ಇಂದಿನ ಈ ಯುಗದಲ್ಲಿ ನಮ್ಮ ಉಳಿವಿಗೆ ಸರ್ವಚರಾಚರಗಳ ಉಳಿವೇ ಮೂಲ ಎಂಬ ಅದಮ್ಯ ವಿವೇಕ ಹೊಂದಿದ್ದ ಈ ಜನಾಂಗ ಆದರ್ಶಪ್ರಾಯರಾಗುತ್ತಾರೆ, ಅನುಕರಣೀಯರಾಗುತ್ತಾರೆ. ಪ್ರಕೃತಿಯ ಬಗ್ಗೆ, ಭೂಮಿಯ ಬಗ್ಗೆ ಅವರಿಗಿದ್ದ ಧನ್ಯತಾಭಾವ, ಭಕ್ತಿಗಳನ್ನು ಪ್ರತಿಧ್ವನಿಸುವ ಒಂದು ಗೀತೆ ಇಲ್ಲಿದೆ. ಬಹುಶಃ ಪಾರಂಪರಿಕ ವಿವೇಕ, ಧರ್ಮಗಳನ್ನು ಹಿಡಿದಿಡುವ ಗೀತೆ ಇದು. ನಮ್ಮ ಸನಾತನ ಭಾರತೀಯ ಮೌಲ್ಯಗಳನ್ನೇ ಬಿಂಬಿಸುವ ಗೀತೆಯೆಂದರೂ ತಪ್ಪಿಲ್ಲ.

"ಚಿಣ್ಣರಿಗೊಂದು ಕಿವಿ ಮಾತ ಕೇಳಿಸಿ
ನಾವೆಲ್ಲಾ ಮಕ್ಕಳಿಗೆ ತಿಳಿಹೇಳಿದ್ದನ್ನೇ ಕಲಿಸಿ
ಈ ಭೂಮಿತಾಯೇ ನಮ್ಮಮ್ಮ, ಪಾಠವಿದನೇ ಉಣಿಸಿ
ಭೂತಾಯಿಗಾದ ದೆಸೆಯೇ
ಕೂಸ ಪಾಡೂ ಆಗುವುದು ಸಂಶಯವಿಲ್ಲ.

ಚೀತ್ಕರಿಸಿ ಉಗುಳುವ ಮಾನವರು ಭೂತಾಯ ಮೇಲೆ
ತಮ್ಮಯ ಮೇಲೆಯೇ ಉಗುಳಿಕೊಳ್ಳುವುವರು ಸಂಶಯವಿಲ್ಲ
ಇದು ಅರಿವಿದೆ ನಮಗೆ
ನಮ್ಮ ನಿಮ್ಮ ಸ್ವತ್ತಲ್ಲ, ಭೂಮಾತೆಯೆಂದೂ
ನಾವವಳ ಸ್ವತ್ತು, ಇದಷ್ಟೇ ಸತ್ಯ ಎಂದೂ
ಇದರ ಅರಿವಿದೆ ನಮಗೆ
ಎಲ್ಲ ಹೊಸೆದುಕೊಂಡಿವೆ ಒಂದಕ್ಕೊಂದು ವಿಶ್ವದಲಿ
ಒಂದೇ ರಕ್ತದಿ ಬೆಸೆಯುವಂತೆ ಕುಟುಂಬಗಳು
ಎಲ್ಲ ಹೊಸೆದುಕೊಂಡಿವೆ ಒಂದಕ್ಕೊಂದು

ಭೂತಾಯಿಗಾದ ದೆಸೆಯೇ
ಕೂಸ ಪಾಡೂ ಸಂಶಯವಿಲ್ಲ
ನಾವೆಂದೂ ನೇಯ್ದವರಲ್ಲ ಈ ವಿಶ್ವಜೀವನ ಬಲೆಯ
ಮಾತ್ರ ನಾವು ಸೂತ್ರದೆಳೆಗಳಷ್ಟೇ ಇದರಲಿ
ನೇಯ್ದ ಬಲೆಗೇನು ಕುತ್ತೆಸೆಗಿದರೂ
ನಮಗೆ ನಾವೇ ವಿನಾಶವೆಸೆಗಿದಂತಲ್ಲದೆ ಇನ್ನೇನು?"

–ಸಿಯಾಟಲ್ ಮುಖ್ಯಸ್ಥ (ಚೀಫ್)

ಕಳೆದ ಶತಮಾನದಿಂದೀಚೆಗೆ ಆಧುನಿಕ ವೈದ್ಯ ಶಾಸ್ತ್ರದಲ್ಲಿ ಅದ್ಭುತ ಪ್ರಗತಿಯಾಗಿದೆ. ಆದರೂ ಮನಸ್ಸು ದೇಹಗಳ ಸಂಬಂಧ ಮತ್ತು ಮಿದುಳಿನ ಕಾರ್ಯ ವೈಖರಿಗಳ ಸಂಪೂರ್ಣ ಅರಿವು ಇನ್ನೂ ಕೈಗೆ ನಿಲುಕದ ಮಾತೇ ಆಗಿದೆ. ಇಂದಿನ ಜಗತ್ತಿನ ಒತ್ತಡಪೂರಿತ ಜೀವನಶೈಲಿಯಿಂದ ಬಹುಮಟ್ಟಿನ ಜನರು ದೀರ್ಘಕಾಲೀನ (chronic) ರೋಗಗಳಿಂದ ಬಳಲುವುದೂ ಹೆಚ್ಚಾಗಿದೆ. ಇದನ್ನು ಜೀವನಶೈಲಿ ಕಾಯಿಲೆಗಳು ಎಂದು ಹೆಸರಿಸಿದ್ದಾರೆ. ಔಷಧಿ, ಚಿಕಿತ್ಸೆಗಳೊಂದಿಗೆ ಉತ್ತಮ ಜೀವನ ಶೈಲಿಯ ಅಳವಡಿಕೆ ಮತ್ತು ಮನಸ್ಸಿನ ಆರೋಗ್ಯ ಕೂಡಾ ಅಷ್ಟೇ ಮಹತ್ವದ್ದು ಎಂದು ಇತ್ತೀಚಿನ ಸಂಶೋಧನೆಗಳಿಂದ ದೃಢವೂ ಆಗಿದೆ. ಈ ನಿಟ್ಟಿನಲ್ಲಿ ಯೋಚಿಸಿದಾಗ ದೇಹ, ಮನ, ಆತ್ಮಗಳ ಸಾಮರಸ್ಯದಿಂದಲೇ ನಿಜವಾದ ಆರೋಗ್ಯ ಪ್ರಾಪ್ತಿ ಸಾಧ್ಯ ಎಂಬ ಸತ್ಯ ಎಂದು ಎಲ್ಲರೂ ಒಪ್ಪಬಹುದು. ಈ ರೀತಿಯ ಸಮಗ್ರತಾ ವೈದ್ಯ (holistic medicine) ಈಗಿನ ದಿನಗಳಲ್ಲಿ ಬಹಳ ಪ್ರಸಿದ್ಧಿಯನ್ನು ಪಡೆಯುತ್ತಿದೆ. ಹಳೆಯದೆಲ್ಲವೂ ಅವೈಜ್ಞಾನಿಕ, ಗೊಡ್ಡು ಶಾಸ್ತ್ರ ಎಂದು ಅವಗಣಿಸದೇ ಅವುಗಳಲ್ಲಿರುವ ಜ್ಞಾನಸಂಪತ್ತನ್ನು ಮಾನವಕುಲದ ಒಳಿತಿಗೆ ಬಳಸಿಕೊಳ್ಳುವುದೇ ಬುದ್ಧಿವಂತಿಕೆ.

ಇತ್ತೀಚಿನ ದಿನಗಳಲ್ಲಿ ಈ ಸಾಂಪ್ರದಾಯಿಕ ವೈದ್ಯ ಪದ್ಧತಿ 'ಪರ್ಯಾಯ ವೈದ್ಯಪದ್ಧತಿ' ಎಂಬ ಮಾನ್ಯತೆ ಪಡೆದಿದೆ. ಕಾಲಕ್ಕೆ ತಕ್ಕಂತೆ ಅನೇಕ ಬದಲಾವಣೆಗಳನ್ನು ಹೊಂದಿದೆ.

ಅಮೇರಿಕಾದ ಎಲ್ಲೆಡೆ ನುರಿತ ಪಾರಂಪರಿಕ ವೈದ್ಯರು ರೋಗಿಗಳ ಶುಶ್ರೂಷೆ ನಡೆಸುತ್ತಾರೆ. ಮೂಲನಿವಾಸಿ ಅಮೇರಿಕನ್ನರು ಮತ್ತು ಇತರರು ಕೂಡಾ ಆಧುನಿಕ ಚಿಕಿತ್ಸೆಗಳ ಜೊತೆ ಪಾರಂಪರಿಕ ಪದ್ಧತಿಗಳನ್ನೂ ಅನುಸರಿಸುತ್ತಾರೆ. ಒಟ್ಟಿನಲ್ಲಿ ಇಷ್ಟೆಲ್ಲಾ ವೈಶಿಷ್ಟ್ಯಗಳನ್ನು ತನ್ನೊಳಗೆ ಹುದುಗಿಸಿಕೊಂಡಿರುವ, ಮನುಷ್ಯನ ಅಸ್ತಿತ್ವವನ್ನು ಕೇವಲ ದೈಹಿಕವಾಗಲ್ಲದೇ ಈ ಸೃಷ್ಟಿಯ ಅದಮ್ಯ ಚೇತನದ ಒಂದು ಭಾಗ ಎಂದು ಪರಿಗಣಿಸಿ ಮನಸ್ಸು ಆತ್ಮಗಳನ್ನೂ ಪೋಷಿಸುವ ಇಂತಹ ಅದ್ಭುತ ವೈದ್ಯಪದ್ಧತಿ ಪುನರುಜ್ಜೀವನಗೊಂಡಿರುವುದು ಸಮಾಧಾನಕರ ವಿಷಯ.

ಆಧಾರ

1. American Healing Arts: Herbs, Rituals and Remedies for Every Season of Life – E.Barrie Kavasch, Karen Baar.
2. Hounoring the Medicine: Essential Guide To Native American Healing – Kenneth Cohen
3. http://www.shermanindianmuseum.org/native-american-medicine.html
4. www.legendsofamerica.com
5. https://en.wikipedia.org/wiki/Medicine Wheel/Medicine_Mountain _National_Historic_Landmark (ಚಿತ್ರ).
6. https://www.nlm.nih.gov/nativevoices/exhibition/healing-ways/medicine-ways/ healing-plants.html

❑

(26)

ಮೌಂಟ್ ಶಾಸ್ತಾ – ದಂತಕತೆಗಳ ಬೆಳ್ಳಿಶಿಖರ

ಪ್ರಕಾಶ್ ನಾಯಕ್
ಕುಪರ್ಟಿನೋ, ಕ್ಯಾಲಿಫೋರ್ನಿಯಾ

*

ಭೋರ್ಗರೆವ ಸಮುದ್ರ, ಉಕ್ಕಿ ಹರಿವ ನದಿ, ಸುತ್ತುಗಟ್ಟಿ ಸುಡುವ ಕಾಡ್ಗಿಚ್ಚು, ಎತ್ತೆತ್ತಿ ಒಗೆವ ಬಿರುಗಾಳಿಗಳಂತೆ ಗಗನ ಚುಂಬಿಸುವ ಪರ್ವತಗಳೂ ಜನಪದಗಳಲ್ಲಿ ಕತೆಗಳಿಗೆ ಕಾವು ಕೊಡುವ ಮಹತ್ತುಗಳು. ಅವುಗಳ ಸಹಕಾರ, ಸೆಡವು, ವಿಕೋಪಗಳು ಜನಪದಗಳ ದೈನಂದಿನ ಬದುಕಿನ ನಿರ್ಣಾಯಕ ಶಕ್ತಿಗಳು; ಹಾಗಾಗಿಯೇ ಅವು ಕೆಲವೊಮ್ಮೆ ರಕ್ಷಣೆ ಕೊಡುವ ದೇವರ ಆಲಯವಾಗುತ್ತವೆ, ಪ್ರಾಣ ಹಿಂಡುವ ರಾಕ್ಷಸರ ಅಡ್ಡೆಗಳಾಗುತ್ತವೆ. ಎಲ್ಲ ಧರ್ಮಗಳ ಪುರಾಣಗಳಲ್ಲೂ ಪರ್ವತಗಳು ಪಾತ್ರ ವಹಿಸುತ್ತವೆ. ಪಶ್ಚಿಮ ಅಮೇರಿಕೆಯ ಬೆಳ್ಳಿ ಬೆಟ್ಟ (White mountain) ಎಂದು ಖ್ಯಾತವಾಗಿರುವ ಮೌಂಟ್ ಶಾಸ್ತಾ ಕೂಡ ಇದಕ್ಕೆ ಹೊರತಲ್ಲ. ಕ್ಯಾಲಿಫೋರ್ನಿಯದ ಉತ್ತರ ಭಾಗದಲ್ಲಿ, ಒರೆಗಾನ್ ರಾಜ್ಯಕ್ಕೆ ಹೊಂದಿಕೊಂಡಿರುವ ಈ ಸರ್ವಋತು ಹಿಮಾಚ್ಛಾದಿತ ಪರ್ವತ, ಪರ್ವತಾರೋಹಿಗಳನ್ನು ಕರೆದಷ್ಟೇ ತೀವ್ರವಾಗಿ ಅತೀಂದ್ರಿಯ ಶಕ್ತಿಗಳನ್ನು ನಂಬುವವರನ್ನು ಇಂದಿಗೂ ಆಕರ್ಷಿಸುತ್ತಿದೆ. ತನ್ನ ಸುತ್ತ ಸುಮಾರು ಹನ್ನೊಂದು ಸಾವಿರ ವರ್ಷಗಳ ಜನವಾಸ್ತವ್ಯದ ಇತಿಹಾಸ ಉಳ್ಳ ಈ ಶಿಖರ ದಂತಕತೆಗಳಿಗೆ ಜನ್ಮಕೊಡದಿದ್ದರೆ ಹೇಗೆ? ಕುತೂಹಲವೆಂದರೆ ಆಧುನಿಕ ಕಾಲದಲ್ಲಿಯೂ ಹೊಸ ದಂತಕಥೆಗಳನ್ನು ಹುಟ್ಟುಹಾಕಿದ ಹಿರಿಮೆ ಈ ಶಾಸ್ತಾ ಶಿಖರದ್ದು.

ಭೂವಿಜ್ಞಾನಿಗಳ ಪ್ರಕಾರ ಮೌಂಟ್ ಶಾಸ್ತಾ ಕೆಂಡದುಂಡೆಗಳನ್ನು ಕಕ್ಕಲು ಸಿದ್ಧವಾಗುತ್ತಿರುವ ಜೀವಂತ ಅಗ್ನಿಪರ್ವತ. ಸುತ್ತಲ ಚರಾಚರ ಜಗತ್ತಿನ ಚಹರೆಯನ್ನು ಬದಲುಮಾಡಬಲ್ಲ ಸಾಧ್ಯತೆಗಳ ಬೆಟ್ಟ. ದೇಸೀ ಅಮೇರಿಕನ್ನರಿಗೆ ಮೌಂಟ್ ಶಾಸ್ತಾ ಮತ್ತು ಸುತ್ತಲಿನ ಪ್ರದೇಶ ನಿಸರ್ಗದ ಮಡಿಲಿನ ದೇವನಿರ್ಮಿತ ದೇವಸ್ಥಾನ, ದೇವಸೃಷ್ಟಿಯ ಮೊದಲ ಪರ್ವ. ಹಾಗಾಗಿಯೇ ಸಂತರು ಮತ್ತು ಗಿಡಮೂಲಿಕೆಯನ್ನರಸುವ ವೈದ್ಯರ

ಹೊರತಾಗಿ ಯಾರೂ ಅಲ್ಲಿನ ಮರಗಳನ್ನು ದಾಟಿ ಮೇಲಿರುವ ಪರ್ವತದ ಮೇಲೆ ಕಾಲಿಡುವುದನ್ನು ಅವರು ಒಪ್ಪುವುದಿಲ್ಲ. ಈ ಪರ್ವತದ ನೆರೆಯಲ್ಲಿರುವ ಶಾಸ್ತಾ, ವಿಂಟು, ಅಚುಮಾವಿ ಮತ್ತು ಮುಡೋಕ್ ಬುಡಕಟ್ಟುಗಳು ಇಲ್ಲಿ ಧಾರ್ಮಿಕ ವಿಧಿಗಳನ್ನು ಇಂದಿಗೂ ನೆರವೇರಿಸುತ್ತಾರೆ, ಅವರಿಗೆ ಇದು ಜಗತ್ತಿನ ಶಕ್ತಿಕೇಂದ್ರ, ದೇವರ ವಾಸಸ್ಥಳ. ಅದರಲ್ಲಿಯೂ ವಿಂಟು ಬುಡಕಟ್ಟು ಜನಾಂಗಕ್ಕೆ ತಾವು ಬಂದಿದ್ದೇ ಅಲ್ಲಿಂದ ಎನ್ನುವ ನಂಬುಗೆ.

ಇಂತಹ ಪರ್ವತದ ಸುತ್ತ ಹತ್ತು ಹಲವು ದಂತಕತೆಗಳು, ನಂಬಿಕೆಗಳು ಹಬ್ಬಿಕೊಂಡಿವೆ. ಜನಪದ ತಮ್ಮನ್ನು ಮೌಂಟ್ ಶಾಸ್ತಾದೊಂದಿಗೆ ಜೋಡಿಸಿಕೊಂಡ ಒಂದು ಕಥೆ ಹೀಗಿದೆ.

ಒಂದಾನೊಂದು ಕಾಲದಲ್ಲಿ, ಈ ಭೂಮಿಯ ಮೇಲೆ ಮನುಷ್ಯರು ಕಾಣಿಸಿಕೊಳ್ಳುವುದಕ್ಕಿಂತಲೂ ಬಹಳ ಮುಂಚೆ, ಭೂಮಿಗಿಂತ ಬಹಳ ಮೇಲೆ ತನ್ನ ಲೋಕದಲ್ಲಿ ಇದ್ದ ಆಕಾಶದೇವನಿಗೆ ತನ್ನ ಆಲಯದ ಬಗ್ಗೆಯೇ ಬೇಸರ ಉಂಟಾಯಿತಂತೆ. ಯಾವಾಗ ನೋಡಿದರೂ ಏರಿಳಿತವಿಲ್ಲದ ಅದೇ ಚಳಿ. ಕೆಳಗೆ ನೋಡಿದರೆ ದೃಷ್ಟಿ ಹರಿಯುವವರೆಗೂ ಚಪ್ಪಟೆಯಾದ ಸುಂದರ ಭೂಮಿ. ಆ ದೇವರಿಗೆ ತಾನು ಭೂಮಿಗೆ ಬಂದಿಳಿಯುವ ಮೊದಲು ದೂರದೂರದಿಂದಲೂ ಕಾಣುವಂತಹ ಮಹೋನ್ನತ ಪರ್ವತ ಮಾಡುವ ಮನಸ್ಸಾಯಿತು. ಹಾಗಾಗಿ ಒಂದು ಕಲ್ಲು ತಗೊಂಡು ತಿಕ್ಕಿ, ತಿರುಗಿಸಿ ಆಕಾಶಕ್ಕೊಂದು ತೂತು ಮಾಡಿದ. ಆ ತೂತಿನ ಮೂಲಕ ಹಿಮ ಸುರಿದು ದೊಡ್ಡ ಗುಡ್ಡೆಯಾಯಿತು, ಅದೇ ಈ ಮೌಂಟ್ ಶಾಸ್ತಾ.

ಹಾಗೆ, ತಾನೇ ನಿರ್ಮಿಸಿದ ಶಾಸ್ತಾದ ಮೇಲೆ ಕಾಲಿಟ್ಟು ಭೂಮಿಗೆ ಬಂದ ಆ ಆಕಾಶದೇವನಿಗೆ, ಅರ್ಧ ದಾರಿ ಇಳಿದ ನಂತರ ಈ ಪರ್ವತದ ಮೇಲೆ ಮರಗಳಿದ್ದರೆ ಚೆನ್ನಾಗಿರುತ್ತಿತ್ತು ಅನ್ನಿಸಿತು. ಅವನು ಬೆರಳೊತ್ತಿದಲ್ಲಿ ಮರಗಳು ಹುಟ್ಟಿಕೊಂಡವು. ಹೆಜ್ಜೆಯಿಟ್ಟಲ್ಲಿ, ಹೆಪ್ಪುಗಟ್ಟಿದ್ದ ಹಿಮ ಕರಗಿ ನದಿಗಳು ಹುಟ್ಟಿಕೊಂಡವು.

ಆ ಆಕಾಶದೇವ ತಾನು ಬರುವಾಗ ಆಕಾಶದಿಂದ ತಂದಿದ್ದ ಊರುಗೋಲನ್ನು ತುಂಡು ಮಾಡಿ ಕೆಲವನ್ನು ಆ ನೀರಿಗೆಸೆದ. ದೊಡ್ಡ ತುಂಡುಗಳಿಂದ ಬೀವರ್ ಮತ್ತು ಆಟ್ಟರ್‌ಗಳು ಹುಟ್ಟಿಕೊಂಡವು. ಸಣ್ಣ ತುಂಡುಗಳಿಂದ ಮೀನುಗಳು ಹುಟ್ಟಿಕೊಂಡವು. ಕೋಲಿನ ಉಳಿದ ಭಾಗದಿಂದ ಪ್ರಾಣಿಗಳನ್ನು ಮಾಡಿದ. ಅವುಗಳಲ್ಲಿ ಅತಿ ದೊಡ್ಡದು ಗ್ರಿಜ್ಲಿ ಕರಡಿಯಾಯ್ತು. ಇಂದಿನ ಹಾಗೆಯೆ ಆ ಕರಡಿಗಳಿಗೂ ಮೈತುಂಬ ಬೂದುಬಣ್ಣದ ಕೂದಲು, ಹರಿತ ಕೈ ಉಗುರು. ಆದರೆ ಅವು ಆಗ ಎರಡೇ ಕಾಲಿನಲ್ಲಿ, ಹೆಮ್ಮೆಯಿಂದ ತಲೆಯೆತ್ತಿ ತಿರುಗುತ್ತಿದ್ದವು, ಮಾತಾಡುತ್ತಿದ್ದವು. ದೇವರು ಅವುಗಳನ್ನು ಪರ್ವತದ ತಳ ಭಾಗದಲ್ಲಿ ಉಳಿಯಲು ಕಳುಹಿಸಿದ. ಬಿದ್ದ ಮರದ ಎಲೆಗಳಿಗೆ ಆಕಾಶ ದೇವರ ಉಸಿರು ತಾಕಿ ಹಕ್ಕಿಗಳು ಹುಟ್ಟಿಕೊಂಡವು.

ಇಷ್ಟು ಮಾಡಿದ ಮೇಲೆ ಆಕಾಶದೇವನಿಗೆ ಇಲ್ಲಿಯ ವಾಸ್ತವ್ಯ ಖುಷಿಯೆನಿಸಿತು. ತನ್ನ ಮನೆಯವರಿಗೂ ಕರೆ ಕಳುಹಿಸಿದ. ಮೌಂಟ್ ಶಾಸ್ತಾ ಅವರ ಮನೆಯಾಯಿತು. ಆ ಮನೆಯಲ್ಲಿ, ಅಂದರೆ ಆ ಶಾಸ್ತಾ ಪರ್ವತದೊಳಗೆ ದೊಡ್ಡ ಬೆಂಕಿ ಮಾಡಿದ, ಹೊಗೆಕಿಡಿಗಳು ಹೊರಹೋಗಲೆಂದು ಪರ್ವತದ ತುತ್ತತುದಿಯಲ್ಲಿ ಒಂದು ಕಿಂಡಿಯನ್ನೂ ಮಾಡಿದ.

ವರುಷಗಳು ಉರುಳಿದವು. ಮೌಂಟ್ ಶಾಸ್ತಾದಲ್ಲಿ ಆಕಾಶದೇವನ ವಾಸ್ತವ್ಯದಿಂದ ಸುತ್ತಲ ಜಗತ್ತು ಚಿಗುರತೊಡಗಿತು.

ಒಮ್ಮೆ ವಸಂತ ಋತು ಇನ್ನೇನು ಮುಗಿಯುವುದರಲ್ಲಿತ್ತು. ಒಂದು ದಿನ ಗಾಳಿದೇವತೆ ಬಲಯುತವಾಗಿ ಬೀಸಿದಾಗ, ಶಾಸ್ತಾದ ತುದಿಯಲ್ಲಿರುವ ಹೊಗೆಗಿಂಡಿಯಿಂದ ಹೊಗೆ, ಕಿಡಿಗಳು ಹೊರಹೋಗಲಾಗದೆ, ಆಕಾಶದೇವನ ಮನೆಯನ್ನು ತುಂಬಿ, ಮನೆಯಲ್ಲಿದ್ದವರ ಕಣ್ಣುಗಳು ಉರಿಸಲಾರಂಭಿಸಿದವು. ಆಕಾಶದೇವ ತನ್ನ ಕಿರಿಯ ಮಗಳನ್ನು ಕರೆದು ಗಾಳಿದೇವತೆಗೆ ಹಾಗೆ ಜೋರಾಗಿ ಬೀಸದಿರುವಂತೆ ಹೇಳಿ ಬಾ ಎಂದು ಕಳುಹಿಸಿದ. ಕಳುಹಿಸುವ ಮೊದಲು, "ಹಾಗೆ ಮೇಲೆ ಹೋದಾಗ, ನಿನ್ನ ತಲೆ ಹೊರಹಾಕಬೇಡ, ಗಾಳಿದೇವತೆ ಕೂದಲು ಹಿಡಿದು ಹೊರಗೆಳೆದುಕೊಂಡಾಳು. ಕೈ ಹೊರಚಾಚಿ ಸನ್ನೆ ಮಾಡು, ನಂತರ ಕೂಗಿ ಹೇಳು" ಎಂಬ ಎಚ್ಚರಿಕೆಯನ್ನೂ ಕೊಟ್ಟ.

ಆ ಪುಟ್ಟ ಹುಡುಗಿ ಅಪ್ಪ ಹೇಳಿದಂತೆ ಮಾಡಿದಳು. ವಾಪಸ್ಸು ಬರುವಾಗ, ತಮ್ಮ ಮನೆಯ ಮೇಲಿನಿಂದ, ಅದೇ ಆ ಹೊಗೆಗಿಂಡಿಯಿಂದ ನೋಡಿದರೆ ಸಾಗರ ಕಾಣುತ್ತದೆ ಎಂದದ್ದು ನೆನಪಾಯಿತು. ಈ ಮನೆಗೆ ಬಂದ ನಂತರ ಅಪ್ಪ ಮಾಡಿದ ಆ ಸಾಗರವನ್ನು ತಾನು ನೋಡೇ ಇಲ್ಲ, ನೋಡಿ ಬರುವ ಕುತೂಹಲವಾಗಿ ಹೋಗಿ, ತಲೆ ಹೊರಹಾಕಿ ಪಶ್ಚಿಮದ ಕಡೆ ನೋಡಿದಾಗ ವಿಶಾಲ ಸಾಗರ ಕಾಣಿಸಿತು. ಆದರೆ ಅಪ್ಪ ಎಚ್ಚರಿಸಿದ್ದಂತೆ ಗಾಳಿದೇವತೆ ಅವಳ ಕೂದಲು ಹಿಡಿದು ಹೊರಗೆಳೆದುಬಿಟ್ಟಳು. ಆ ಪುಟ್ಟ ಹುಡುಗಿ ವಿಶಾಲ ಹಿಮ, ಮಂಜುಗಳ ರಾಶಿಯಲ್ಲಿ, ಫರ್ ಮರಗಳ ನಡುವೆ ಬಿದ್ದುಬಿಟ್ಟಳು.

ಆ ಹಿಮದ ರಾಶಿಯ ಮೇಲೆ ಕೆಂಗೂದಲು ಹರಡಿಕೊಂಡು ಬಿದ್ದಿದ್ದ ಅವಳನ್ನು ಗ್ರಿಜ್ಲಿ ಕರಡಿ ನೋಡಿದ. ಅವಳನ್ನು ಎತ್ತಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋದ. ಗ್ರಿಜ್ಲಿ ಕರಡಿಯ ಹೆಂಡತಿ ಅವಳನ್ನೂ ತನ್ನ ಮರಿ ಕರಡಿಗಳ ಜೊತೆಯಲ್ಲಿ ಸಾಕಿದಳು. ಆಕಾಶದೇವನ ಆ ಪುಟ್ಟ ಹುಡುಗಿ ಮತ್ತು ಮರಿ ಕರಡಿಗಳು ಒಟ್ಟೊಟ್ಟಿಗೇ ಬೆಳೆದವು.

ದೊಡ್ಡವಳಾದ ಮೇಲೆ ಆ ಆಕಾಶದೇವನ ಮಗಳು ಗ್ರಿಜ್ಲಿ ಕರಡಿಯ ಮಗನನ್ನೇ ಮದುವೆಯಾಗಿ ಹಲವು ಮಕ್ಕಳನ್ನು ಹೆತ್ತಳು. ಅವಳ ಮಕ್ಕಳು ಅವಳನ್ನೂ ಹೋಲುತ್ತಿರಲಿಲ್ಲ, ತಮ್ಮ ಅಪ್ಪ ಗ್ರಿಜ್ಲಿ ಕರಡಿಯ ಮಗನನ್ನೂ ಹೋಲುತ್ತಿರಲಿಲ್ಲ. ಗ್ರಿಜ್ಲಿ ಕರಡಿಯ ಸಂಸಾರಕ್ಕೆ ಈ ಅಪರೂಪದ ಮಕ್ಕಳನ್ನು ನೋಡಿ ಬಹಳ ಖುಷಿಯಾಗಿತ್ತು. ಕೆಂಗೂದಲ ಅಮ್ಮ ಮತ್ತು ಅವಳ ಮಕ್ಕಳಿಗಾಗಿ ಹೊಸ ಮನೆಯನ್ನೇ ಮಾಡಿಕೊಟ್ಟರು. ಆ ಮನೆಗೆ ಲಿಟ್ಲ್ ಮೌಂಟ್ ಶಾಸ್ತಾ ಎಂದು ಹೆಸರನ್ನೂ ಇಟ್ಟರು.

ವರ್ಷಗಳು ಉರುಳಿದವು. ಅಮ್ಮ ಗ್ರಿಜ್ಲಿ ಕರಡಿಗೆ ತಾನು ಬಹಳ ದಿನ ಬದುಕುವುದಿಲ್ಲ ಎನ್ನುವ ಅರಿವಾಯಿತು. ಆಕಾಶದೇವನ ಮಗಳನ್ನು ತಾವಿಲ್ಲಿಯೇ ಇಟ್ಟುಕೊಂಡು ತಪ್ಪು ಮಾಡಿದೆವು ಎನ್ನುವ ಕಲ್ಪನೆ ಬಂತು. ಅವಳನ್ನು ಮತ್ತೆ ಆಕಾಶದೇವನಿದ್ದಲ್ಲಿಗೆ ಕಳುಹಿಸಿ, ಕ್ಷಮಿಸುವಂತೆ ಕೇಳಿಕೊಳ್ಳಬೇಕು ಎನ್ನುವ ಮನಸ್ಸಾಯಿತು. ಎಲ್ಲ ಗ್ರಿಜ್ಲಿ ಕರಡಿಗಳನ್ನು ಲಿಟ್ಲ್ ಮೌಂಟ್ ಶಾಸ್ತಾದಲ್ಲಿ ಒಟ್ಟುಗೂಡಿಸಿ, ತನ್ನ ಯೋಚನೆಯನ್ನು ಹೇಳಿ, ಆಕಾಶದೇವನ

ಮೊಮ್ಮಕ್ಕಳಲ್ಲಿ ಹಿರಿಯನನ್ನು ಅಜ್ಜನಲ್ಲಿ ಅವನ ಮಗಳ ಈ ವಾಸ್ತವ್ಯದ ಬಗ್ಗೆ ತಿಳಿಸಿ ಬರಲು ಕಳುಹಿಸಿದಳು.

ಆಕಾಶದೇವನಿಗೆ ಮಗಳ ಸುದ್ದಿ ಕೇಳಿ ಬಹಳ ಖುಷಿಯಾಯಿತು. ಅವನು ಖುಷಿಯಿಂದ ದಾಪುಗಾಲು ಹಾಕುತ್ತ ಬಂದಾಗ ಹೆಜ್ಜೆಯಿಟ್ಟಲ್ಲಿ ಹಿಮಕರಗಿ ದಾರಿಯಾಯಿತು. ಪರ್ವತಾರೋಹಿಗಳಿಗೆ ಅಲ್ಲಲ್ಲಿ ಕಾಣುವ ತಗ್ಗುಗಳು ಆಕಾಶದೇವನ ದೊಡ್ಡ ಹೆಜ್ಜೆ ಗುರುತುಗಳಂತೆ!

ಆಕಾಶದೇವ, ಮಗಳ ಮನೆ ಲಿಟ್ಲ್ ಮೌಂಟ್ ಶಾಸ್ತಾದ ಮುಂದೆ ನಿಂತು ಮಗಳನ್ನು ಕೂಗಿದ. ಮಗಳೊಟ್ಟಿಗೆ ಬಂದ ವಿಲಕ್ಷಣವಾದ ಜೀವಿಗಳನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ಅವು ತನ್ನ ಮೊಮ್ಮಕ್ಕಳೆಂದು ತಿಳಿದು ಸಿಟ್ಟು ಬಂತು. ಅವನ ಉಗ್ರ ನೋಟಕ್ಕೆ ಮುದಿ ಗ್ರಿಜ್ಲಿ ಕರಡಿ ಅಲ್ಲಿಯೇ ಪ್ರಾಣಬಿಟ್ಟಳು. ಸುತ್ತ ನಿಂತಿದ್ದ ಗ್ರಿಜ್ಲಿ ಕರಡಿಗಳನ್ನು ನೋಡಿ ಶಪಿಸಿದ: "ನೀವೆಲ್ಲರೂ ಕೈಗಳನ್ನು, ನಿಮ್ಮ ಮೊಣಕಾಲುಗಳನ್ನು ನೆಲಕ್ಕೂರಿ ನಿಲ್ಲಿ. ಈ ಕ್ಷಣದಿಂದ ನೀವ್ಯಾರೂ ನೆಟ್ಟಗೆ ನಿಲ್ಲಲಾರಿರಿ, ಮಾತನಾಡಲಾರಿರಿ. ನಿಮ್ಮ ದ್ರೋಹಕ್ಕೆ ಇದೇ ಶಿಕ್ಷೆ."

ತನ್ನ ಮೊಮ್ಮಕ್ಕಳನ್ನು ಆ ಮನೆಯಿಂದ ಹೊರಗಟ್ಟಿದ. ಮಗಳನ್ನು ಹೆಗಲ ಮೇಲೆ ಹೊತ್ತು ಆಕಾಶದೇವ ಮತ್ತೆ ಮೌಂಟ್ ಶಾಸ್ತಾ ಕಡೆ ಹೊರಟ. ಮತ್ತೆಂದೂ ಆಕಾಶದೇವ ಆ ಬೆಟ್ಟದ ಕಡೆ ಹೆಜ್ಜೆ ಹಾಕಲಿಲ್ಲ.

ಕೆಲವರ ಪ್ರಕಾರ ಆಕಾಶದೇವ ಮೌಂಟ್ ಶಾಸ್ತಾದ ಒಳಗೆ ಬೆಂಕಿಯನ್ನು ಹಾಗೆ ಉರಿಯಲು ಬಿಟ್ಟು, ಆಕಾಶದಲ್ಲಿರುವ ತನ್ನ ಮನೆಗೆ ಮಗಳೊಂದಿಗೆ ವಾಪಸು ಹೋಗಿದ್ದಾನೆ. ಮೌಂಟ್ ಶಾಸ್ತಾದ ಒಳಗಿರುವ ಆ ಬೆಂಕಿಗೆ ಕಟ್ಟಿಗೆ ತುಂಡು ಬಿದ್ದಾಗಲೆಲ್ಲ ಭೂಮಿ ನಡುಗುತ್ತದೆ, ಹೊಗೆ-ಕಿಡಿ-ಬೂದಿಗಳು ಆ ತೂತಿನಿಂದ ಹೊರಬರುತ್ತವೆ. ವಿಚಿತ್ರವಾಗಿ ಕಾಣುತ್ತಿದ್ದ ಅವನ ಮೊಮ್ಮಕ್ಕಳೇ ತಮ್ಮ ಪೂರ್ವಜರು ಎಂದೂ ಬುಡಕಟ್ಟುಗಳ ಜನ ನಂಬುತ್ತಾರೆ.

ಮೌಂಟ್ ಶಾಸ್ತಾ ಸುತ್ತಲ ಜನ ಗ್ರಿಜ್ಲಿ ಕರಡಿಗಳನ್ನು ಕೊಲ್ಲುವುದಿಲ್ಲ, ಅಕಸ್ಮಾತ್ ಗ್ರಿಜ್ಲಿ ಕರಡಿಯಿಂದ ತಮ್ಮವನೇನಾದರೂ ಸತ್ತರೆ ಅದೇ ಜಾಗದಲ್ಲಿ ಅವನನ್ನು ಸುಟ್ಟು ಅಂತ್ಯಕ್ರಿಯೆ ಮಾಡುತ್ತಾರೆ.

ಭೂಗರ್ಭ ಶಾಸ್ತ್ರಜ್ಞರು ಈಗಲೂ ಒಳಗೊಳಗೆ ಕುದಿಯುತ್ತಿರುವ ಮೌಂಟ್ ಶಾಸ್ತಾ ಕೊನೆಯ ಸಲ ಲಾವಾ ಹೊರಚೆಲ್ಲಿದ್ದು ಯಾವಾಗ ಎಂದು ನಿರ್ಧರಿಸಲು ಪುರಾವೆಗಳಿಗಾಗಿ ತಡಕಾಡುತ್ತಿರುವಾಗಲೇ ಜನಪದರ ಹತ್ತಿರ ಅದಕ್ಕೂ ಒಂದು ಕಥೆಯಿದೆ.

ತುಂಟತನಕ್ಕೆ ಸದಾ ತುಡಿಯುವ ಕಯೋಟಿ (ಉತ್ತರ ಅಮೇರಿಕೆಯ ತೋಳದ ಜಾತಿಯ, ನರಿಯನ್ನು ಹೋಲುವ ಪ್ರಾಣಿ) ಯೊಂದು ಮೌಂಟ್ ಶಾಸ್ತಾದ ಸ್ವಲ್ಪ ದೂರದ ಊರಿನಲ್ಲಿ ವಾಸವಾಗಿತ್ತು. ಆ ಊರಿನಲ್ಲಿ ಮೀನು ಸಿಗುತ್ತಿದ್ದುದೇ ಅಪರೂಪ, ಅದರಲ್ಲಿಯೂ ಸ್ಯಾಮನ್ ಮೀನು ಸಿಗುತ್ತಲೇ ಇರಲಿಲ್ಲ. ಶಾಸ್ತಾ ಹಳ್ಳಿಯಲ್ಲಿ, ಅಲ್ಲಿನ ಜನ

ತಿಂದು ಮಿಕ್ಕುವಷ್ಟು ಸ್ಯಾಮನ್ ದೊರೆಯುತ್ತಿತ್ತು. ಅಲ್ಲಿಯ ಜನ ಮೀನುಗಳನ್ನು, ಅದರಲ್ಲಿಯೂ ಸ್ಯಾಮನ್ ಹಿಡಿಯಲೆಂದೇ ಸಣ್ಣ ತಡಸಲು ಕಟ್ಟಿಕೊಂಡು ಬೇಕುಬೇಕೆಂದಾಗಲೆಲ್ಲಾ ಮೀನು ಹಿಡಿಯುತ್ತಿದ್ದರು. ಹಸಿಯಾಗಿ, ಕೆಂಡದ ಮೇಲೆ ಬೇಯಿಸಿಕೊಂಡು ತಿನ್ನುತ್ತಿದ್ದರು. ಚಳಿಗಾಲಕ್ಕಾಗಿಯೂ ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಸ್ಯಾಮನ್ ಕೊಳ್ಳಲೆಂದೇ ಸುತ್ತಮುತ್ತಲಿನ ಬುಡಕಟ್ಟುಗಳ ಜನ ಅಲ್ಲಿಗೆ ಬರುತ್ತಿದ್ದುದರಿಂದ ಶಾಸ್ತಿಗರಿಗೆ ಹಣ ಮತ್ತು ಮರ್ಯಾದೆ ಎರಡೂ ಸಿಗುತ್ತಿದ್ದವು. ಕಿಲಾಡಿ ಕಯೋಟಿಗೆ ಅದು ನೆನಪಾಗಿ, ತನ್ನ ಹಸಿವನ್ನು ತೋಡಿಕೊಂಡರೆ ಉದಾರಿ ಶಾಸ್ತಾ ಜನ ಸ್ಯಾಮನ್ ಊಟ ಹಾಕದೆ ವಾಪಸ್ಸು ಕಳುಹಿಸಲಾರರು ಎಂದು ಆಶಿಸಿ ಹೊರಟೇಬಿಟ್ಟಿತು.

ಹರಿವ ನದಿಯಲ್ಲಿ ಮೈತಿಕ್ಕಿ ತೊಳೆದುಕೊಂಡು ಶುಭ್ರವಾಗಿ, ಶಾಸ್ತಾ ಜನರು ಮೀನು ಹಿಡಿಯುತ್ತಿದ್ದ ತಡಸಲಿಗೆ ಹೋಯಿತು. ಆ ದಿನ ಸ್ಯಾಮನ್ ಹೇರಳವಾಗಿ ದೊರಕಿದ್ದುದರಿಂದ, ಹೊಟ್ಟೆ ತುಂಬಾ ಸಾಲ್ಮನ್ನು ತಿಂದು, ಬೇಕಾದರೆ ತೆಗೆದುಕೊಂಡೂ ಹೋಗಲು ಹೇಳಿದರು. ಕಯೊಟಿಗೆ ಇನ್ನೂ ಹೆಚ್ಚಿಗೆ ಆಹ್ವಾನ ಬೇಕಾಗಿರಲಿಲ್ಲ. ಹೊಟ್ಟೆ ಬಿರಿಯುವಂತೆ ತಿಂದು, ಸ್ವಲ್ಪ ಹೆಚ್ಚೇ ಸ್ಯಾಮನ್ ಹೊತ್ತುಕೊಂಡು ಹೊರಟಿದ್ದುದರಿಂದ ಸ್ವಲ್ಪ ದೂರ ಹೋಗುವಷ್ಟರಲ್ಲಿ ಆಯಾಸವಾಗತೊಡಗಿತು. ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡು ಹೋದರಾಯಿತು ಎಂದು ಕೂತ ಕಯೋಟಿಗೆ ನಿದ್ದೆ ಬಂದುದೇ ಗೊತ್ತಾಗಲಿಲ್ಲ. ಕಣ್ತೆರೆದಾಗ ಅಲ್ಲಿದ್ದುದು ಬರೆ ತಾನು ಹೊತ್ತು ತಂದ ಸ್ಯಾಮನ್ ಮೀನಿನ ಮೂಳೆಗಳ ರಾಶಿ ಮಾತ್ರ! ತಾನು ಮಲಗಿದ್ದ ಜಾಗದ ಸುತ್ತಲೂ ಕದ್ದವರ ಹೆಜ್ಜೆ ಗುರುತುಗಳನ್ನು ಹುಡುಕಲು ಪ್ರಯತ್ನಿಸಿದರೂ ಉಪಯೋಗವಾಗಲಿಲ್ಲ. ಜೇನ್ನೊಣವನ್ನು ಹೋಲುವ ರಾಶಿರಾಶಿ ಕಣಜದ ಹುಳುಗಳು (Yellowjackets) ಹಾರಿ ಬಂದು ತಿಂದು ಹಾರಿ ಹೋಗಿದ್ದವು. "ನನ್ನ ಸ್ಯಾಮನ್ ಕದ್ದವರಾರು?" ಎಂದು ಕೂಗಿತು. ಪ್ರಶ್ನೆ ಮಾರ್ದನಿಸಿತೇ ವಿನಹ ಏನೂ ಉಪಯೋಗವಾಗಲಿಲ್ಲ.

ಮತ್ತೊಮ್ಮೆ ಶಾಸ್ತಾ ಜನರನ್ನೇ ಕೇಳಿಕೊಂಡರಾಯ್ತು ಎಂದು ಅವರ ಊರಿಗೆ ಹೋಯಿತು. ತನ್ನ ಕಥೆಯನ್ನು ಹೇಳಿ "ನಾನೂ ನಿಮ್ಮೊಡನೆ ಮೀನು ಹಿಡಿಯಲು ಬರಲೇ?" ಎಂದು ಕೇಳಿಕೊಂಡಿತು. ಅವರೂ ಮರುಕಪಟ್ಟು ಒಪ್ಪಿಕೊಂಡರು. ಮತ್ತೆ ಮಾರನೆಯ ದಿನ ಉಂಡು, ಸ್ಯಾಮನ್ ಹೊರೆ ಹೊತ್ತು ತನ್ನ ಊರಿಗೆ ಹೋಗಲಾರಂಭಿಸಿತು. ಸಂಯೋಗದಿಂದೆಂಬಂತೆ ಮತ್ತೆ ಅದೇ ಮರದ ಕೆಳಗೆ ವಿಶ್ರಾಂತಿಗಾಗಿ ಅಡ್ಡಾಯಿತು. ಆದರೆ ಎವೆಯಿಕ್ಕದಿರಲು ತೀರ್ಮಾನಿಸಿತು. ಅದರ ಕಣ್ಣ ಮುಂದೆಯೇ ಮೊದಲು ಆದ ಹಾಗೆಯೇ, ಏನಾಗುತ್ತಿದೆ ಎನ್ನುವುದು ಕಯೋಟಿಗೆ ಅರಿವಾಗುವಷ್ಟರಲ್ಲಿ, ಅಸಂಖ್ಯ ಕಣಜದ ಹುಳುಗಳು ಸ್ಯಾಮನ್ ಮಾಂಸಖಂಡಗಳನ್ನು, ತಿಂದು ಮೂಳೆಗಳನ್ನಷ್ಟೇ ಕಯೋಟಿಯ ಪಾಲಿಗೆ ಉಳಿಸಿ ಹಾರಿಹೋದವು.

ಕಯೋಟಿ ಮತ್ತೆ ಶಾಸ್ತಾ ಜನರಿದ್ದಲ್ಲಿಗೆ ಹೋಯಿತು. ಕಣಜದ ಹುಳುಗಳು ತನ್ನ ಕಣ್ಣ ಮುಂದೆಯೇ ಸ್ಯಾಮನ್ ತಿಂದಿದ್ದನ್ನು ಹೇಳಿತು. ಕಯೋಟಿಯ ಕತೆಗೆ ಮರುಗಿದ

ಅವರು ಮತ್ತೆ ಸ್ಯಾಮನ್ ಹೊರೆ ತಯಾರು ಮಾಡಿ, "ಬೇಸರಪಡಬೇಡ, ನೀನು ಇದನ್ನು ಹೊತ್ತುಕೊಂಡು ಅದೇ ಜಾಗಕ್ಕೆ ಹೋಗು, ನಾವು ನಿನ್ನನ್ನು ಹಿಂಬಾಲಿಸಿ ಬಂದು ಆ ಕಣಜದ ಹುಳುಗಳಿಗೆ ಸರಿಯಾದ ಪಾಠ ಕಲಿಸುತ್ತೇವೆ" ಎಂದು ವಾಗ್ದಾನ ಕೊಟ್ಟು, ಧೈರ್ಯ ತುಂಬಿ ಕಳುಹಿಸಿದರು.

ಕಯೋಟಿ ಹೊಸ ಹುಮ್ಮಸ್ಸಿನೊಂದಿಗೆ ಹೊರಟಿತು. ಶಾಸ್ತಾ ಜನರೂ ಅದರ ಹಿಂದೆಯೇ ಹೊರಟರು. ಮುತ್ತಜ್ಜ ಆಮೆಯೂ ಅವರೊಟ್ಟಿಗೆ ಹೊರಟಿತು. "ನಿನ್ನನ್ನು ಕರೆದವರು ಯಾರು? ಕಣಜದ ಹುಳುಗಳಿಗೆ ಪಾಠ ಕಲಿಸಲು ಹೊರಟಿದ್ದೇವೆ" ಎಂದು ಕಯೋಟಿ ಅಸಮಾಧಾನ ವ್ಯಕ್ತಪಡಿಸಿದರೂ ಮುತ್ತಜ್ಜ ಆಮೆ ಬೆನ್ನುಬಿಡಲಿಲ್ಲ.

ಕಯೋಟಿ ಎರಡೆರಡು ಬಾರಿ ಸ್ಯಾಮನ್ ಕಳೆದುಕೊಂಡಿದ್ದ ಆ ಜಾಗ ಬಂತು. "ನಾನು, ಮತ್ತು ನನ್ನ ಶಾಸ್ತಾ ಗೆಳೆಯರು ಸಾಕು. ನಿನ್ನ ದಾರಿ ನೀನು ಹಿಡಿ, ಇಲ್ಲಿಂದ ಹೊರಟುಹೋಗು." ಎಂದು ಕಯೋಟಿ ಮತ್ತೆ ಮತ್ತೆ ಹೇಳಿದರೂ ಮುತ್ತಜ್ಜ ಆಮೆ ಕೇಳಲಿಲ್ಲ. ಹಾಗೆ ಮಾತಾಡುತ್ತಿರುವಾಗಲೇ ಕಣಜದ ಹುಳುಗಳು ಬಂದು, ಸ್ಯಾಮನ್ ಮೀನಿನ ಮಾಂಸಖಂಡಗಳನ್ನು ತಿಂದು ಹಾರಿಯೇಬಿಟ್ಟವು. ತಬ್ಬಿಬ್ಬಾದ ಶಾಸ್ತಾ ಜನ ಮತ್ತು ಕಯೋಟಿ ಕಣಜದ ಹುಳುಗಳ ಬೆನ್ನಟ್ಟಿ ಹೋದರು. ಓಡಿ, ಓಡಿ ಒಬ್ಬೊಬ್ಬರಾಗಿ ನಿತ್ರಾಣ ಹೊಂದಿ, ಕುಸಿದು ಕುಳಿತರು. ಆದರೆ ಮುತ್ತಜ್ಜ ಆಮೆ ಮಾತ್ರ ತನ್ನದೇ ಗತಿಯಲ್ಲಿ, ವ್ಯವಸ್ಥಿತವಾಗಿ ಆ ಕಣಜದ ಹುಳಗಳನ್ನು ಹಿಂಬಾಲಿಸಿತು.

ಕಣಜದ ಹುಳುಗಳ ಗುರಿ ಅಚಲವಾಗಿತ್ತು. ಬಿಟ್ಟ ಬಾಣದಂತೆ ಅವು ಶಾಸ್ತಾ ಪರ್ವತದ ತುದಿ ತಲುಪಿದವು. ಮುತ್ತಜ್ಜ ಆಮೆ ನೋಡುತ್ತಿದ್ದಂತೆಯೇ ಅವು ತುದಿಯಲ್ಲಿದ್ದ ರಂಧ್ರದ ಮೂಲಕ ಸ್ಯಾಮನ್ ಮಾಂಸಖಂಡಗಳ ಸಮೇತ ಶಾಸ್ತಾದ ಒಳಪ್ರವೇಶಿಸಿದವು. ಮುತ್ತಜ್ಜ ಆಮೆ ಇನ್ನೂ ಬರಲಿದ್ದ ಕಯೋಟಿ ಮತ್ತು ಶಾಸ್ತಾ ಜನರಿಗಾಗಿ ಕಾಯುತ್ತ ಅಲ್ಲಿಯೇ ಕುಳಿತಿತು. ಕಯೋಟಿ ಮತ್ತು ಶಾಸ್ತಾ ಜನರು ನಿಧಾನವಾಗಿ ತಲುಪಿದರು. ಕಯೋಟಿ ಶಾಸ್ತಾ ಶಿಖರದ ತುತ್ತತುದಿಯಲ್ಲಿನ ಬಿರುಕಿನಿಂದ ಹೊಗೆ ಒಳಹೋಗುವಂತೆ ಬೆಂಕಿ ಹಾಕುವಂತೆ ಜನರನ್ನು ನಿರ್ದೇಶಿಸಿತು. ಆ ಹೊಗೆಯಿಂದ ಕಣಜದ ಹುಳುಗಳನ್ನು ಹೊರ ಅಟ್ಟುವುದು ಅದರ ಉದ್ದೇಶವಾಗಿತ್ತು. ಶಿಖರದಲ್ಲಿನ ಎಲ್ಲಾ ಸಣ್ಣ ಸಣ್ಣ ಬಿರುಕುಗಳ ಮೂಲಕ ಹೊಗೆ ಹೊರಹೋಗಲು ಶುರುವಾಯಿತು. ಶಾಸ್ತಾ ಜನರು ಓಡಾಡಿ ಎಲ್ಲ ಬಿರುಕುಗಳನ್ನೂ ಮುಚ್ಚತೊಡಗಿದರು. ಮುತ್ತಜ್ಜ ಆಮೆ ಶಿಖರದ ತುತ್ತತುದಿಯ ದೊಡ್ಡ ಬಿರುಕಿನ ಮೇಲೆ ತನ್ನ ಚಿಪ್ಪಿನ ಸಮೇತ ಝುಮ್ಮೆಂದು ಕುಳಿತುಬಿಟ್ಟಿತು. "ಕಣಜದ ಹುಳುಗಳಿಗೆ ಹೊರಬರದೇ ಬೇರೆ ದಾರಿಯೇ ಇಲ್ಲ" ಎನ್ನುವ ಆತ್ಮವಿಶ್ವಾಸದೊಂದಿಗೆ ಕಯೋಟಿ ಮತ್ತು ಶಾಸ್ತಾ ಜನರು ಕಾಯತೊಡಗಿದರು.

ಶಾಸ್ತಾ ಪರ್ವತದ ಉದ್ದಗಲಕ್ಕೂ ಒಮ್ಮೆಲೇ ಕುಲುಕಾಟದ ಸದ್ದು ಕೇಳಿಸಲಾರಂಭಿಸಿತು. ಶಿಖರದ ತುದಿಯಂತೂ ಓಲಾಡತೊಡಗಿತು. ಮುತ್ತಜ್ಜ ಆಮೆ ಇನ್ನೂ ಅಲ್ಲಿ ಕುಳಿತಿರುವುದು ಸರಿಯಲ್ಲವೆಂದು ಸರಿಯಿತು. ಗುಡ್ಡದೊಳಗಿನ ಸ್ಫೋಟದಿಂದಾಗಿ ಒಮ್ಮಿಂದೊಮ್ಮೆಗೇ

ಕೆಂಡದುಂಡೆಗಳು, ಸಹಿಸಲಸಾಧ್ಯ ಹೊಗೆ ಮತ್ತು ಕಲ್ಲುಗಳು ಆ ಬಿರುಕಿನಿಂದ ಹೊರಬರತೊಡಗಿದವು. ಅವುಗಳೊಟ್ಟಿಗೆ ಹದವಾಗಿ ಬೆಂದ ಸ್ಯಾಮನ್ ಮೀನಿನ ತುಂಡುಗಳೂ ಕೂಡ! "ಅಂತೂ ಸ್ಯಾಮನ್ ಊಟದ ವ್ಯವಸ್ಥೆಯೂ ಆಯಿತು, ಆ ಕಣಜದ ಹುಳುಗಳಿಗೆ ತಕ್ಕ ಶಾಸ್ತಿಯೂ ಆಯಿತು" ಎಂದು ಕಯೋಟಿ ಮತ್ತು ಶಾಸ್ತಾ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. "ಒಂದಾನೊಂದು ಕಾಲದಲ್ಲಿ ಶಾಸ್ತಾ ಶಿಖರ ಸಿಡಿದಿದ್ದು ಹೀಗೆ" ಎಂದು ಈ ಕಥೆಯನ್ನು ಶಾಸ್ತಾ ಜನರು ಮಕ್ಕಳಲ್ಲಿ ಹೇಳಿಕೊಳ್ಳುತ್ತಾರೆ.

ಶಾಸ್ತಾ ಪರ್ವತದ ಸುತ್ತ ಇಂತಹ ಕತೆಗಳ ಸಮೂಹವೇ ಇದೆ. ಶಿಖರದ ಒಳಗಿರುವ ಆಕಾಶರಾಯ, ಶಿಖರದ ತುದಿಯಲ್ಲಿರುವ ಗಾಳಿ ದೇವತೆ, ಅವಳ ಎರಡು ಹೆಣ್ಣುಮಕ್ಕಳು, ಅವರ ಮದುವೆಯಾಗ ಬಯಸುವ ಹದ್ದು ಮತ್ತು ಕಯೋಟಿಯ ಸಾಹಸ ಇತ್ಯಾದಿ ನವರಸಭರಿತ ಕಥೆಗಳು ಹೇರಳವಾಗಿವೆ. ಮುತ್ಸದ್ದಿ ಆಮೆ, ತುಂಟ ಕಯೋಟಿ, ಸಾಹಸಿ ಕರಡಿ ಮತ್ತು ಶಾಸ್ತಾ ಜನರು ಈ ಕಥೆಗಳಲ್ಲಿನ ಪ್ರಮುಖ ಪಾತ್ರಗಳು. ಶಾಸ್ತಾದ ಈ ದಂತ ಕಥೆಗಳಿಗೆ ಇತ್ತೀಚೆಗೆ ಸೇರ್ಪಡೆಯಾಗಿದ್ದು ಲೆಮೂರಿಯನ್ ಎಂಬ ಜನಸಮೂಹದ್ದು. ದೇಸೀ ಅಮೇರಿಕನ್ನರಲ್ಲದ ಜನಸಮೂಹದಿಂದ ಶಾಸ್ತಾ ಪರ್ವತದ ಬಗ್ಗೆ ನಂಬುಗೆಯ ಬೆಸುಗೆಯುಳ್ಳ ಕಥೆಗಳಲ್ಲಿ ಇದೇ ಮಹತ್ವದ್ದಿರಬಹುದು.

ಹತ್ತೊಂಬತ್ತನೆಯ ಶತಮಾನದ ನಡುವಿನಲ್ಲಿ ಲೆಮೂರಿಯಾ ಎಂಬ ಕಾಲ್ಪನಿಕ ಭೂಖಂಡದ ಹೆಸರು ಪ್ರಚಲಿತಕ್ಕೆ ಬಂತು. ಮಡಗಾಸ್ಕರಿನಿಂದ ಭಾರತಕ್ಕೆ ನಿಶಾಚರ ಲೆಮೂರ್ ಎನ್ನುವ ಪ್ರಾಣಿಗಳು ಬರಲು ಸಾಧ್ಯವಾಗಿಸುವ ಈ ಕಾಲ್ಪನಿಕ ಭೂಖಂಡ ನಂತರ ಸಮುದ್ರದಲ್ಲಿ ಮುಳುಗಿಹೋಯಿತು ಎನ್ನುವ ಕಲ್ಪನೆ ಅಟ್ಲಾಂಟಿಸ್ ಅಥವಾ ದ್ವಾರಕೆಯ ಹಾಗೆ, ಸಮೃದ್ಧ ಭೂಖಂಡವೊಂದು ನೀರಿನಲ್ಲಿ ಅದೃಶ್ಯವಾದ ಕತೆ. ಹತ್ತೊಂಬತ್ತನೆಯ ಶತಮಾನದ ಕೊನೆಕೊನೆಯಲ್ಲಿ, ಈ ಲೆಮೂರಿಯಾ ಅತ್ಯಾಧುನಿಕವಾಗಿತ್ತು ಎನ್ನುವ ಕಲ್ಪನೆ ಪ್ರಚಲಿತವಾಯಿತು. ನಿಧಾನವಾಗಿ ಈ ಲೆಮೂರಿಯಾ ಇದೆ ಎನ್ನಲಾದ ಪ್ರದೇಶ ಪೆಸಿಫಿಕ್ ಸಾಗರವನ್ನೂ ವ್ಯಾಪಿಸಿಕೊಂಡಿತು. ಶಾಸ್ತಾ ಪರಿಸರದ ಫ್ರೆಡರಿಕ್ ಸ್ಪೆನ್ಸರ್ ಆಲೊವರ್ ಎಂಬಾತ 'A Dweller on Two Plants' ಕಥೆಯಲ್ಲಿ ಶಾಸ್ತಾ ಪರ್ವತದೊಳಗೆ ಒಂದು ನಗರವಿರುವ ಕಲ್ಪನೆಯನ್ನು ಪ್ರಸ್ತಾಪಿಸಿದ. ಫೈಲೋಸ್ (Phylos) ಎಂಬ ಲೆಮೂರಿಯನ್ ಆತ್ಮವೊಂದು ಈ ಕಥೆಯನ್ನು ತನ್ನಿಂದ ಬರೆಸಿತು ಎಂದೂ ಹೇಳಿಕೊಂಡ. ಸೆಲ್ವಿಯಸ್ (Selvius) ಎನ್ನುವ ಲೇಖಕ 1925ರಲ್ಲಿ ಬರೆದ 'Mystic Triangle' ಕೃತಿ, ಲೆಮೂರಿಯನ್ ಹಳ್ಳಿಯೊಂದು ಶಾಸ್ತಾದಲ್ಲಿ ಅಡಗಿದೆ ಎನ್ನುವ ಕಲ್ಪನೆಯನ್ನು ಇನ್ನಷ್ಟು ಗಟ್ಟಿ ಮಾಡಿತು. ನಂತರ ಬಂದ ಇನ್ನೂ ಕೆಲವು ಪುಸ್ತಕಗಳು ಈ ಕಲ್ಪನೆಯನ್ನು ಬೆಳೆಸುತ್ತಲೇ ಹೋದವು. ಶಾಸ್ತಾ ಪರ್ವತದಲ್ಲಿ ಮೊಂಡು ಹೆಬ್ಬೆಟ್ಟಿನಂತೆ ಬೆಳೆದು ನಿಂತ ಹೆಬ್ಬಂಡೆಯೊಂದು ಈ ಲೆಮೂರಿಯನ್ ಹಳ್ಳಿಗೆ ಪ್ರವೇಶದ್ವಾರವೆಂದು ಪ್ರಚಲಿತವಾಯಿತು. ನಂಬಿಕೆಯುಳ್ಳವರು, ಪರ್ವತದ ಒಳಗಿರುವ ಲೆಮೂರಿಯನ್ ಜನ ತಮ್ಮನ್ನು ಸ್ವಾಗತಿಸಬಹುದೆಂದು ಬಂಡೆಯನ್ನು ಕುಟ್ಟಿ ತಮ್ಮ ಬಯಕೆಯನ್ನು ವ್ಯಕ್ತಪಡಿಸತೊಡಗಿದರು.

ಶಾಸ್ತಾ ನೆರೆ ಹೊರೆಯಲ್ಲಿ ಏಳು ಅಡಿಗಿಂತಲೂ ಎತ್ತರವಿರುವ ನೀಳಕಾಯದ, ಬಿಳಿ ಬಟ್ಟೆ ಉಟ್ಟ ಜೀವಿಗಳನ್ನು ನೋಡಿದೆವೆಂತಲೂ, ಶಿಖರದ ಮೇಲೆ ಸುತ್ತುತ್ತಿದ್ದ ಬಾಹ್ಯಾಕಾಶ ನೌಕೆಯನ್ನು ನೋಡಿದ್ದೇವೆಂತಲೂ ಹೇಳುವ ಜನ ಹುಟ್ಟಿಕೊಳ್ಳತೊಡಗಿದರು. ಮೌಂಟ್ ಲೊವ್ ಖಗೋಲ ವೀಕ್ಷಣಾಲಯದ ನಿರ್ದೇಶಕರಾಗಿದ್ದ ಪ್ರೊ. ಎಡ್ಗರ್ ಲುಸಿನ್ ಲಾರ್ಕಿನ್ನನಂತಹ ವಿಜ್ಞಾನಿಗಳೂ ಈ ಅಲೌಕಿಕ ಅಸ್ತಿತ್ವವನ್ನು ದೂರದರ್ಶಕದ ಮೂಲಕ ನೋಡಿದ್ದೇವೆ ಎಂದು ಹೇಳಿಕೆ ಕೊಟ್ಟ ಮೇಲೆ ಜನಸಾಮಾನ್ಯರು ನಂಬದೇ ಇರಲು ಸಾಧ್ಯವೆ! ನಂಬದಿದ್ದವರಿಗೂ ಈ ಕಥೆ ಪರಿಚಿತವಾಗಿ ಕುತೂಹಲವನ್ನು ಉಂಟುಮಾಡಿತು. ಈ ಕಥೆಯನ್ನು ಆಧರಿಸಿಕೊಂಡು ಅತೀಂದ್ರಿಯ ಶಕ್ತಿಗಳನ್ನು ನಂಬಿದ ಹಲವು ಧರ್ಮಗಳು ('I AM' Activity, The Summit Lighthouse, Church Universal and Triumphant, and Kryon) ಇಂದಿಗೂ ಆಗಾಗ ಈ ಪರಿಸರದಲ್ಲಿ ತಮ್ಮ ಆಚರಣೆ ನಡೆಸುತ್ತವೆ.

ಆಗಸ ಶುಭ್ರವಾಗಿದ್ದ ದಿನ ನೂರು ಮೈಲಿ ದೂರದಿಂದಲೂ ಕಾಣಬಹುದಾದ ಈ ಬೆಳ್ಳಿ ಬೆಟ್ಟ ಇಂದಿಗೂ ದಂತಕಥೆಗಳನ್ನು ಹುಟ್ಟು ಹಾಕಬಲ್ಲುದಾದರೆ ಆ ಪರಿಸರದಲ್ಲಿಯೇ ಹಲವು ತಲೆಮಾರುಗಳನ್ನು ಕಳೆದ ಜನಪದಕ್ಕೆ ಸ್ಫೂರ್ತಿಸೆಲೆಯಾಗಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಅದನ್ನು ಈ ಶಿಖರದ ಸುತ್ತ ಹಬ್ಬಿರುವ ಹಲವು ದಂತಕಥೆಗಳು ಸಾರುತ್ತವೆ.

ಆಧಾರ

1. Mount Shasta's Forgotten History & Legends - Naef, Dustin.
2. Shasta Indian Tales Holsinger, Rosemaryhttp://www.native-languages.org/shasta-legends.htm

❑

27

ಮಿಯಾಮ್ಮೈ ಸಪ್ತ ಸಹೋದರಿಯರು

ಸಿಡ್ನಿ ಶ್ರೀನಿವಾಸ್
ಸಿಡ್ನಿ, ಆಸ್ಟ್ರೇಲಿಯ

*

ಆಸ್ಟ್ರೇಲಿಯಾದ ಆದಿವಾಸಿಗಳು –ಒಂದು ಕಿರು ಪರಿಚಯ

ಆದಿವಾಸಿಗಳು ಆಸ್ಟ್ರೇಲಿಯಾ (Aborigines) ಖಂಡದಲ್ಲಿ ಸುಮಾರು 50,000 ವರ್ಷಗಳ ಹಿಂದಿನಿಂದ ವಾಸಿಸುತ್ತಿದ್ದಾರೆ ಎಂದು ಕೆಲವರು ಅಭಿಪ್ರಾಯಪಟ್ಟರೆ, ಸ್ಥಳೀಯರು ಅದನ್ನು ಅಲ್ಲಗೆಳೆದು "ನಾವು 70,000 ವರ್ಷಗಳಿಂದ ಇಲ್ಲಿದ್ದೇವೆ" ಎನ್ನುತ್ತಾರೆ. ಇನ್ನೂ ಮುಂದುವರೆದು ಅವರು "ನಾವು ಸೃಷ್ಟಿಯ ಆರಂಭದಿಂದಲೂ ಇದ್ದೇವೆ. ನಾವು ಭೂಮಿ ತಲೆ ಎತ್ತಿದ್ದನ್ನೂ ನೋಡಿದ್ದೇವೆ. ನಮ್ಮ ಪಿತೃಗಳ ಶಕ್ತಿ, ಬುದ್ಧಿ ಮತ್ತು ಇಂಗಿತಗಳಿಗೆ ಅನುಸಾರವಾಗಿ ಈ ಸುಂದರ ಪ್ರಪಂಚ ರೂಪ ತಾಳಿತು" ಎಂದು ಹೇಳಿಕೊಳ್ಳುತ್ತಾರೆ. 18ನೇ ಶತಮಾನದ ಕೊನೆಯಲ್ಲಿ ಈ ಖಂಡದಲ್ಲಿ 350ರಿಂದ 750 ಆದಿವಾಸಿಗಳ ಪಂಗಡಗಳಿದ್ದವು. ಪ್ರತಿಯೊಂದಕ್ಕೂ ಅದರದೇ ಆದ ಭಾಷೆ ಅಥವಾ ಉಪಭಾಷೆಯೂ ಇತ್ತು. ಹೀಗಾಗಿ ಅವೆಲ್ಲಾ ಸ್ಥಳೀಯವಾಗಿಯೇ ಹುಟ್ಟಿಕೊಂಡಿದ್ದು, ಇವಾವುವೂ ಹೊರದೇಶಗಳ ಭಾಷೆಗಳಿಗೆ ಸಂಬಂಧಿಸಿರಲಿಲ್ಲ. ಆದರೆ 21ನೇ ಶತಮಾನದ ಆದಿಯಲ್ಲಿ 200ಕ್ಕಿಂತ ಕಡಿಮೆ ಭಾಷೆಗಳು ಉಳಿದಿದ್ದು, ಅವುಗಳಲ್ಲಿ 20 ಮಾತ್ರ ಚಾಲನೆಯಲ್ಲಿದ್ದವು, ಮಿಕ್ಕವು ಸಹಜ ಸಾವನ್ನಪ್ಪಿದವು ಎಂಬುದು ಗಮನಾರ್ಹ.

ಈ ನಾಡಿಗೆ ಯೂರೋಪಿಯನ್ ಯಾತ್ರಿಗಳು ಹಿಂದೆಯೇ ಬಂದಿದ್ದರೂ ಇಲ್ಲಿ ಮೊದಲು ಕಾಲಿಟ್ಟ ಖ್ಯಾತಿ ಇಂಗ್ಲೀಷರಿಗೆ ಸಂದುಹೋಗಿದೆ. ಕ್ಯಾಪ್ಟನ್ ಕುಕ್ ಇಲ್ಲಿಗೆ ಬಂದದ್ದು 1788ರಲ್ಲಿ. ಇಲ್ಲಿಗೆ ಆಗಮಿಸಿದ ಅವರು ತಮ್ಮೊಡನೆ ಸಿಡುಬು ಎಂಬ ಪಿಡುಗನ್ನೂ ಹೊತ್ತು ತಂದರು. ಇದನ್ನು ತಗುಲಿಸಿಕೊಂಡ ಪರಿಣಾಮವಾಗಿ ಅರ್ಧದಷ್ಟು ಆದಿವಾಸಿಗಳು ನಾಶವಾದರು. ಮುಂದೆ, ಇಲ್ಲುಳಿದ ಇಂಗ್ಲೀಷರು ಇಲ್ಲಿಯ ಭೂಮಿ ಮತ್ತು ನೀರುಗಳನ್ನು

ತಮ್ಮ ವಶಕ್ಕೆ ತೆಗೆದುಕೊಂಡು ಅವನ್ನು ತಮಗೆ ಸರಿಹೊಂದುವಂತೆ ಮಾರ್ಪಡಿಸಿದರು. ಮೀನುಗಳನ್ನೆಲ್ಲಾ ಹಿಡಿದು ತಿಂದರು. ಅಲ್ಲದೇ ಸಮುದ್ರದ ನೀರನ್ನು ಮಲಿನಗೊಳಿಸಿದರು. ಕಾಂಗರೂಗಳನ್ನು ನಾಶಮಾಡಿದರು. ಇದು ಸಾಲದೆಂಬಂತೆ ಅನೇಕಾನೇಕ ಆದಿವಾಸಿಗಳನ್ನು ಕೊಂದುಹಾಕಿದರು. ಹೀಗಾಗಿ 1788ರಿಂದ 1900ರವರೆಗಿನ ಸಮಯದಲ್ಲಿ ಸುಮಾರು ಶೇಕಡ 90ರಷ್ಟು ಆದಿವಾಸಿಗಳು ನಿರ್ನಾಮವಾದರು. 1870ರ ಹೊತ್ತಿಗೆ ಇಲ್ಲಿಯ ಫಲವತ್ತಾದ ಭೂಮಿಯನ್ನೆಲ್ಲಾ ಬ್ರಿಟಿಷರು ತಮ್ಮ ವಶಕ್ಕೆ ತೆಗೆದುಕೊಂಡಿದ್ದು, ಆದಿವಾಸಿಗಳು ಊರ ಹೊರಗೆ ಅಥವಾ ಬ್ರಿಟಿಷರಿಗೆ ಬೇಡವಾದ ಸ್ಥಳಗಳಲ್ಲಿ ವಾಸಿಸಬೇಕಾಯಿತು. ಇವರಲ್ಲಿ ಕೆಲವರು ಬಿಳಿಯರ ದಾಸರುಗಳಾಗಿ ಕೆಲಸ ಮಾಡಲಾರಂಭಿಸಿ ಅವರ ಪದ್ಧತಿಗಳನ್ನೇ ಅನುಕರಿಸಿದರು. ಮಿಕ್ಕವರು ಮಾತ್ರ ಬಿಳಿಯರಿಂದ ಅತಿ ದೂರದಲ್ಲಿ, ಊರುಗಳಾಚೆ ವಾಸಿಸುತ್ತಾ ಅವರ ಸ್ವಾತಂತ್ರ್ಯವನ್ನು ಕಾಪಾಡಿಕೊಂಡರು. 20ನೇ ಶತಮಾನದ ಆದಿಯಲ್ಲಿ ಇಲ್ಲಿಯ ಆದಿವಾಸಿಗಳ ಸಂಖ್ಯೆ 50,000ರಿಂದ 90,000ರಷ್ಟಿತ್ತು. ಆಗ ಆಸ್ಟ್ರೇಲಿಯಾದ ಜನಸಂಖ್ಯೆ 5 – 6 ಮಿಲಿಯನ್.

ಅವರ ಮಕ್ಕಳನ್ನು ಬಲಾತ್ಕಾರವಾಗಿ ಪೋಷಕರಿಂದ ಬೇರ್ಪಡಿಸಿ ಶಾಲೆಗಳಿಗೆ ಸೇರಿಸಲಾಯಿತು. ಅವರನ್ನು ಸ್ಟೋಲನ್ ಜನರೇಷನ್ (Stolen Generation) ಎಂದು ಕರೆಯುತ್ತೇವೆ. ಇಂತಹ ಅನೇಕ ಕುತಂತ್ರಗಳನ್ನು ಇಲ್ಲಿನ ಸರ್ಕಾರಗಳು ನಡೆಸುತ್ತಲೇ ಬಂದಿವೆ. ತಾನು ಮಾಡಿದ ತಪ್ಪುಗಳಿಗಾಗಿ ಇಲ್ಲಿಯ ಸರ್ಕಾರ ಅವರಿಗೆ 2008ರಲ್ಲಿ 'ಸಾರಿ' ಹೇಳಿತು. ಇವೆಲ್ಲಾ ಈಗ ಚರಿತ್ರೆ.

ಆಸ್ಟ್ರೇಲಿಯಾದಲ್ಲಿ ಪ್ರಜಾಪ್ರಭುತ್ವ ಜಾರಿಯಲ್ಲಿದ್ದರೂ ಆದಿವಾಸಿಗಳಿಗೆ ಮತ ಚಲಾಯಿಸುವ ಹಕ್ಕಿರಲಿಲ್ಲ. ಅದನ್ನು ಸರ್ಕಾರ ದಯಪಾಲಿಸಿದ್ದು 1962ರಲ್ಲಿ. ಇಂದಿಗೂ ಸರ್ಕಾರ ಮತ್ತು ಆದಿವಾಸಿಗಳ ಮಧ್ಯೆ ವಾದ ವಿವಾದಗಳು ಏಳುತ್ತಲೇ ಇರುತ್ತವೆ.

ಆದಿವಾಸಿಗಳ ಸಂಸ್ಕೃತಿ

ಆಸ್ಟ್ರೇಲಿಯಾದ ಮಧ್ಯ ಪ್ರದೇಶವೆಲ್ಲಾ ಮರುಭೂಮಿ ಎಂಬುದು ತಿಳಿದ ವಿಚಾರ. ಹೀಗಾಗಿ ಆದಿವಾಸಿಗಳು ಸಮುದ್ರದ ತೀರಗಳ ಹತ್ತಿರವೇ ವಾಸ ಹೂಡುತ್ತಿದ್ದದ್ದು ಸಾಮಾನ್ಯ. ಮೀನುಗಳನ್ನು ಹಿಡಿದು, ಹತ್ತಿರವೇ ಇದ್ದ ಪೊದೆಗಳಲ್ಲಿ ಸಿಕ್ಕ ಹಣ್ಣು ಕಾಯಿಗಳನ್ನು ಉಪಯೋಗಿಸಿಕೊಂಡರು ಮತ್ತು ಅಲ್ಲಿದ್ದ ಕಾಡುಪ್ರಾಣಿಗಳನ್ನು ಹಿಡಿದು ತಿಂದರು. ವಿಶಾಲವಾದ ನೆಲ, ಕಡಿಮೆ ಜನಸಂಖ್ಯೆ, ಹೀಗಾಗಿ ದೂರ ಪ್ರಯಾಣದ ಅವಶ್ಯಕತೆ ಇರಲಿಲ್ಲ. ದಿನಕ್ಕೆ ನಾಕೈದು ಗಂಟೆಗಳ ದುಡಿತ ಸಾಕಾಗಿತ್ತು, ಅವರ ದೈನಂದಿನ ಅವಶ್ಯಕತೆಗಳಿಗೆ. ಇದರಿಂದಾಗಿ ಅವರಿಗೆ ಪ್ರತಿನಿತ್ಯ ಸಾಕಷ್ಟು ಬಿಡುವು ದೊರೆಯುತ್ತಿತ್ತು. ಆದ್ದರಿಂದ ಅವರು ಭಾಷೆ, ಪದ್ಧತಿ, ಆಧ್ಯಾತ್ಮಿಕತೆ ಮುಂತಾದುವುಗಳನ್ನು ಬೆಳೆಸಿಕೊಂಡರು. ತಾವು ಸದಾ ನೋಡುತ್ತಿದ್ದ ಗಿಡ ಮರಗಳು, ಪ್ರಾಣಿಗಳು, ಸೂರ್ಯ, ಚಂದ್ರ, ನಕ್ಷತ್ರಗಳು ಮುಂತಾದುವುಗಳೊಂದಿಗೆ ಸಂಬಂಧ ಕಲ್ಪಿಸಿಕೊಂಡರು. ರಂಜಕ ಕತೆಗಳನ್ನು ಕಟ್ಟಿದರು. ಮಕ್ಕಳಿಗೆ ಹೇಳಿದರು. ಅದೇ ಜಾನಪದ ಸಾಹಿತ್ಯವಾಗಿ ಅರಳಿತು.

ಪರಿಸರವನ್ನು ಅರ್ಥಮಾಡಿಕೊಂಡು ಅದರೊಂದಿಗೆ ಸಾವಯವ ಸಂಬಂಧ ಕಟ್ಟಿಕೊಂಡರು. ಪ್ರಾಣಿಗಳನ್ನು ಆಹಾರಕ್ಕಾಗಿ ಕೊಲ್ಲಲಿ ಅಥವಾ ಮರ ನೆಡಲಿ ಅಥವಾ ಮನೆ ಕಟ್ಟಿಕೊಳ್ಳಲಿ, ಇವೆಲ್ಲಾ ಈ ಸಂಬಂಧವನ್ನು ಅನುಸರಿಸಿದ್ದವು. ಒಂದೊಂದಕ್ಕು ನಿಗೂಢ ಅರ್ಥವನ್ನು ಕಲ್ಪಿಸಿದರು. ಉದಾಹರಣೆಗೆ ಆಸ್ಟ್ರೇಲಿಯಾ ಮಧ್ಯದಲ್ಲಿರುವ ಉಲುರು (Uluru, Ayers Rock) ಎಂಬ ಬೃಹತ್ ಬಂಡೆ. ಅಲ್ಲಿಗೆ ಹೋಗುವ ಪ್ರವಾಸಿ ವೀಕ್ಷಕರಿಗೆ ಒಂದು ಪ್ರೇಕ್ಷಣೀಯ ಸ್ಥಳ. ಅಲ್ಲಿ ಎಲ್ಲರಿಗೂ ಆ ಬಂಡೆಯನ್ನು ಹತ್ತುವುದೇ ಒಂದು ಮೋಜು! ಆದರೆ ಸ್ಥಳೀಯರಿಗೆ ಅದು ಮಹಿಮೆಯುಳ್ಳ ಪವಿತ್ರ ಬಂಡೆ. ಅದನ್ನು ಹತ್ತುವುದು ಒಂದು ಪಾಪ; ಅದು ಆದಿವಾಸಿಗಳಿಗೆ ಅವಮಾನ ಮಾಡಿದಂತೆ. ಈಗ ಅದನ್ನು ಹತ್ತುವುದನ್ನು ನಿಷೇಧಿಸಲಾಗಿದೆ. ಅದು ಬೇರೆಯ ಮಾತು. ಇಂತಹ ಮಹಿಮೆಗಳ ಸುತ್ತಾ ಇವರ ಕತೆಗಳು ಹೆಣೆದುಕೊಂಡಿವೆ.



ಯೂಹ್ಲಾಯಿ ಸೀಮೆ

ನೂಂಗಾಬುರಾ (Noongahburrah) ಪಂಗಡ

ನೂಂಗಾಬುರಾ ಪಂಗಡವನ್ನು ನಾರಾನ್ (Narran) ಪಂಗಡ ಮತ್ತು ಯೂಹ್ಲಾಯಿ (Euahlayi) ಪಂಗಡ ಎಂದೂ ಕರೆಯುತ್ತಾರೆ. ಇಂದಿನ ನ್ಯೂಸೌತ್ ವೇಲ್ಸ್ ಪ್ರಾಂತದ ಈಶಾನ್ಯದಲ್ಲಿರುವ (ಇಂದಿನ ಕ್ವೀನ್ಸ್ ಲ್ಯಾಂಡಿನ ದಕ್ಷಿಣಕ್ಕೆ) ನಾರಾನ್ ನದಿಯ ಹತ್ತಿರವಿರುವ

ಬುಡಕಟ್ಟು ಇದು. ಅವರದೇ ಆದ ಪದ್ಧತಿ, ನಂಬಿಕೆಗಳನ್ನು ಹೊಂದಿದ್ದಾರೆ ಈ ಜನ. ಇವರಲ್ಲಿ ಪ್ರಚಲಿತವಿರುವ ಕತೆಯೊಂದನ್ನು ಮುಂದಿನ ಭಾಗದಲ್ಲಿ ನೀಡಲಾಗಿದೆ.

ಮಿಯಾಮೈ ಸಪ್ತ ಸಹೋದರಿಯರು (ಜಾನಪದ ಕಥೆ)

ವುರೂನ ದಿನವೆಲ್ಲಾ ಬೇಟೆಯಾಡಿ ದಣಿದು, ಹಸಿದು ಮನೆಗೆ ಹಿಂತಿರುಗಿದ. ವಯಸ್ಸಾದ ತಾಯಿ ಮನೆಯಲ್ಲಿದ್ದಳು. "ಬಹಳ ಹಸಿವಾಗಿದೆ, ಡರೀ (Durrie, ಹುಲ್ಲಿನ ಬೀಜದಿಂದ ಮಾಡಿದ ಬ್ರೆಡ್ ಅಥವಾ ರೊಟ್ಟಿ) ಕೊಡು" ಎಂದು ಕೇಳಿದ. "ಮಾಡಿದ ಡರೀ ಎಲ್ಲಾ ಮುಗಿದುಹೋಯಿತು, ಏನೂ ಮಿಕ್ಕಿಲ್ಲ" ಎಂದಳು ತಾಯಿ. ಆಗ ಅವನು ತನ್ನ ನೆರೆಹೊರೆಯವರನ್ನು"ಸ್ವಲ್ಪವಾದರೂ ಡೂನ್ ಬರ್ (Doonburr, ಹುಲ್ಲಿನ ಬೀಜ) ಕೊಡಿ. ಹಸಿವು. ಡರೀ ಮಾಡಿಕೊಳ್ಳಬೇಕು" ಎಂದು ಬೇಡಿದ. ಎಲ್ಲರೂ ಅವನಿಗೆ ಏನನ್ನು ಕೊಡಲೂ ನಿರಾಕರಿಸಿದರು. ಆಗ ಅವನಿಗೆ ಮಿತಿಮೀರಿದ ಕೋಪ ಬಂದು, "ನಮ್ಮ ಜನ ನನ್ನನ್ನು ಅನ್ನ ಕೊಡದೆ ಸಾಯಿಸುತ್ತಾರೆ. ಇವರ ಗೊಡವೆಯೇ ಬೇಡ. ದೂರದ ದೇಶಕ್ಕೆ ಹೋಗಿ ಅನ್ಯ ಜನರ ಜೊತೆ ಜೀವನ ನಡೆಸುತ್ತೇನೆ" ಎಂದುಕೊಂಡ. ರೋಷ ಉಕ್ಕುತ್ತಿದ್ದಂತೆಯೇ ವುರೂನಾ ಮನೆ ಮತ್ತು ಬೀಡುಗಳನ್ನು ಬಿಟ್ಟು ಹೊರಟ. ತನ್ನ ಆಯುಧಗಳನ್ನು ತನ್ನೊಡನೆ ತೆಗೆದುಕೊಂಡು ಹೊಸ ದೇಶಗಳತ್ತ, ಹೊಸ ಜನರುಗಳತ್ತ ಪ್ರಯಾಣ ಬೆಳೆಸಿದ. ನಡೆಯುತ್ತಾ ಹೋಗುತ್ತಿದ್ದ ಅವನಿಗೆ ದೂರದಲ್ಲಿ ಯಾರೋ ಒಬ್ಬ ಜೇನಿನ ಗೂಡುಗಳನ್ನು ಕೆಡವುತ್ತಿದ್ದದ್ದು ಕಾಣಿಸಿತು. ಅವನೊಬ್ಬ ಮುದುಕ. ಇವನ ಕಡೆಗೇ ನೋಡುತ್ತಿದ್ದ. ಅವನ ಬಳಿ ಹೋಗುತ್ತಿದ್ದ ಹಾಗೇ ವುರೂನಾಗೆ ಆಶ್ಚರ್ಯ ಕಾದಿತ್ತು. ಆ ಮುದುಕನಿಗೆ ಕಣ್ಣೇ ಇರಲಿಲ್ಲ. ಆದರೂ ಅವನು ಬಹು ದೂರದಿಂದ ತಾನು ಬರುವುದನ್ನೇ ದಿಟ್ಟಿಸಿ ನೋಡುತ್ತಿದ್ದ. ಇವನು ಬರುತ್ತಿದ್ದ ಸೂಚನೆ ಅವನಿಗೆ ಹೇಗೆ ಸಿಕ್ಕಿತು? ಕಣ್ಣಿಲ್ಲದಿದ್ದರೂ ತನ್ನ ಕಡೆಗೆ ಮುಖ ಮಾಡಿಕೊಂಡಿದ್ದ ಮುದುಕನನ್ನು ಕಂಡು ಭಯವಾಯಿತು. ತನ್ನ ಹೆದರಿಕೆಯನ್ನು ಮುಚ್ಚಿಟ್ಟುಕೊಂಡು ಅವನತ್ತ ನಡೆದ ವುರೂನಾ. ಹತ್ತಿರ ಬರುತ್ತಿದ್ದಂತೆ, ಮುದುಕ ಇವನನ್ನು ಬರ ಮಾಡಿಕೊಂಡು ಹೇಳಿದ

"ನನ್ನ ಹೆಸರು ಮೂರೂನಿಮಿಲ್ಡಾ (Mooroonumildah, ಕಣ್ಣಿಲ್ಲದವನು). ನಮ್ಮ ಪಂಗಡಕ್ಕೆ ಅದೇ ಹೆಸರು. ಇಲ್ಲಿ ಯಾರಿಗೂ ಕಣ್ಣಿಲ್ಲ. ನಾವು ನಮ್ಮ ಮೂಗಿನ ಮೂಲಕ ನೋಡುತ್ತೇವೆ." ವುರೂನಾಗೆ ಮತ್ತಷ್ಟು ಹೆದರಿಕೆ ಆಯಿತು. ಇದನ್ನು ಗಮನಿಸಿದ ಮುದುಕ ಹೇಳಿದ "ಹೆದರಲು ಏನೂ ಕಾರಣವಿಲ್ಲ. ನೀನು ಬಹಳ ದಣಿದಿದ್ದೀಯ. ಮುಖ ನೋಡಿದರೆ ತಿಳಿಯುತ್ತದೆ." ಕೂಡಲೇ ಅವನು ವುರೂನಾನಿಗೆ ಒಂದು ಮರದ ಬಟ್ಟಲ ತುಂಬಾ ಜೇನುತುಪ್ಪವನ್ನು ಕೊಟ್ಟ. ಅಲ್ಲದೆ ಅವನ ಹಳ್ಳಿಯತ್ತ ಕೈಮಾಡಿ ತೋರಿಸಿ "ನೋಡು, ಅಲ್ಲಿದೆ ನಮ್ಮ ಮನೆ. ಹೋಗಿ ತಂಗು ಅಲ್ಲಿ. ಬೇಕಾದರೆ ಅಲ್ಲಿಯೇ ಇದ್ದುಬಿಡು" ಎಂದು ಆಹ್ವಾನವಿತ್ತ. ವುರೂನಾ ಜೇನುತುಪ್ಪವನ್ನು ಹಿಡಿದು ಮುದುಕ ಹೇಳಿದ ದಿಕ್ಕಿನಲ್ಲಿ ನಡೆದ. ತುಸು ದೂರ ಹೋಗಿ, ಮುದುಕ ಮರೆಯಾದ ಮೇಲೆ ಅವನಿಗೆ ಅನ್ನಿಸಿತು "ಈ

ಮುದುಕನ ಗೊಡವೆ ನನಗೇಕೆ? ಇನ್ನೆಲ್ಲಾದರೂ ಹೋದರಾಯಿತು" ಎಂದು ಬೇರೆ ದಿಕ್ಕಿನಲ್ಲಿ ಪಾದ ಬೆಳೆಸಿದ.

ಮತ್ತಷ್ಟು ನಡೆದ ಮೇಲೆ ಹಾದಿಯಲ್ಲಿ ಒಂದು ಸರೋವರ ಕಾಣಿಸಿತು. ಇದೇ ತಂಗಲು ಉತ್ತಮ ತಾಣ ಎನಿಸಿತು. ಅದರ ನೀರನ್ನು ಚೆನ್ನಾಗಿ ಕುಡಿದ. ಹಾಗೆಯೇ ನಿದ್ದೆ ಬಂತು. ಅಲ್ಲಿಯೇ ಮಲಗಿದ. ಅವನಿಗೆ ಎಚ್ಚರವಾದಾಗ ಬೆಳಗಾಗಿತ್ತು, ಕಣ್ಣು ಬಿಟ್ಟು ನೋಡಿದ. ಸರೋವರ ಮಾಯವಾಗಿತ್ತು. "ಇದೇನಿದು, ನೆನ್ನೆ ತಾನೆ ಅಷ್ಟು ನೀರನ್ನು ಕುಡಿದೆ. ಇಂದು ಸರೋವರವೇ ಇಲ್ಲವಲ್ಲಾ? ಕನಸು ಕಾಣುತ್ತಿದ್ದೇನೆಯೇ" ಎಂದು ಅನ್ನಿಸಿತು. ಮತ್ತೆ ಕಣ್ಣು ಬಿಟ್ಟು ನೋಡಿದ – ಅಲ್ಲಿದ್ದದ್ದು ಒಂದು ದೊಡ್ಡ ಬಯಲು!

ಇದೆಂತಹ ಮಾಯದ ದೇಶವಪ್ಪಾ? ಇಲ್ಲಿಯ ಜನರಿಗೆ ಕಣ್ಣಿಲ್ಲ. ಆದರೂ ಚೆನ್ನಾಗಿ ನೋಡುತ್ತಾರೆ. ನೆನ್ನೆ ನಾನು ನೋಡಿದ ಸರೋವರ, ನಾನು ನೀರು ಕುಡಿದ ಸರೋವರ ಇಂದು ಒಂದು ದೊಡ್ಡ ಬಯಲಾಗಿದೆ. ನೀರು ಎಲ್ಲಿ ಮಾಯವಾಯಿತು ಎಂದು ಅವನು ಯೋಚಿಸುತ್ತಾ ಇದ್ದ ಹಾಗೆ ಒಂದು ಭಯಂಕರ ಮಾರುತ ಬರಲಾರಂಭಿಸಿತು. ಇನ್ನು ಪೊದೆಯೊಳಗೆ ಆಶ್ರಯ ತೆಗೆದುಕೊಳ್ಳುವುದೊಂದೇ ದಾರಿ ಎನಿಸಿತು. ಹತ್ತಿರವೇ ಇದ್ದ ಪೊದೆಯತ್ತ ನಡೆದ. ಹಾದಿಯಲ್ಲಿ ಕತ್ತರಿಸಿ ಸಿದ್ಧವಾಗಿದ್ದ ಮರದ ತೊಗಲು ಕಾಣಿಸಿತು. ಮರಗಳಿಂದ ಒಂದಷ್ಟು ಕೋಲುಗಳನ್ನು ಕತ್ತರಿಸಿಕೊಂಡು ಒಂದು ಡಾರ್ ಡರ್ (Dardurr, ಮರದ ಪೊಟರೆ) ನಿರ್ಮಿಸುವ ಯೋಜನೆ ಹಾಕಿಕೊಂಡ. ಆಗ ಮಾರುತದ ಹಾನಿ ತಪ್ಪುತ್ತಿತ್ತು. ಕೂಡಲೇ ಕೋಲುಗಳನ್ನು ಕತ್ತರಿಸಿ ತಂದು ಭೂಮಿಯ ಮೇಲೆ ನೆಟ್ಟ. ಇನ್ನು ಅವುಗಳ ಮೇಲೆ ಮರದ ತೊಗಲನ್ನು ಹರಡಬೇಕು. ತೊಗಲನ್ನು ಎತ್ತಿದ. ಅಲ್ಲಿ ಇವನು ಈವರೆಗೆ ನೋಡದ ಪ್ರಾಣಿಯೊಂದಿತ್ತು. ಅದು ಒಮ್ಮೆಗೇ ಒಂದು ಕೂಗು ಹಾಕಿತು,

"ನಾನು ಬುಲ್ಗಾನುನೂ (Bulgahnunnoo, ತೊಗಟೆ ಬೆನ್ನಿನವ)" ಆ ಸಿಡಿಲ ಧ್ವನಿಗೆ ಬೆದರಿದ ವುರೂನಾ ಒಮ್ಮೆಗೇ ತನ್ನ ಆಯುಧಗಳನ್ನೂ ಮರೆತು ಅಲ್ಲಿಂದ ಕಂಬಿ ಕಿತ್ತ. ಅಲ್ಲಿಂದ ದೂರವಾದರೆ ಸಾಕಾಗಿತ್ತು. ಬೀಸುತ್ತಿದ್ದ ಮಾರುತವನ್ನೂ ಲೆಕ್ಕಿಸಲಿಲ್ಲ.

ಹೀಗೆ ಓಡಿ, ಓಡಿ ವುರೂನಾ ಒಂದು ದೊಡ್ಡ ನದಿಯನ್ನು ತಲುಪಿದ. ಆ ನದಿ ಅವನನ್ನು ಮೂರೂ ಕಡೆಗಳಿಂದ ಆವರಿಸಿತು. ಅದನ್ನು ದಾಟಿ ಮುಂದೆ ಹೋಗುವುದು ಅಸಾಧ್ಯವಾದ ಕೆಲಸ. ಹಿಂತಿರುಗುವುದೊಂದೇ ಮಾರ್ಗ ಎನಿಸಿತು. ವುರೂನಾ ಹಿಂದಕ್ಕೆ ಹೆಜ್ಜೆ ಹಾಕಿದ. ಬಂದ ದಿಕ್ಕಿನಲ್ಲಿಯೇ ಅಲ್ಲ. ಸ್ವಲ್ಪ ಬೇರೆಯ ಕಡೆ. ತುಸು ದೂರ ಹೋಗಿಲ್ಲ ಇನ್ನೂ, ಆಗ ಅಲ್ಲಿ ಈಮ್ಯೂ (Emu) ಹಕ್ಕಿಗಳ ಗುಂಪೊಂದು ನೀರನ್ನು ಹುಡುಕಿಕೊಂಡು ಬಂತು. ಮುಂದಿದ್ದ ಹಕ್ಕಿಗಳಿಗೆ ರೆಕ್ಕೆಗಳಿದ್ದವು, ಆದರೆ ಹಿಂದಿದ್ದ ಹಕ್ಕಿಗಳು, ರೆಕ್ಕೆಗಳಿಲ್ಲದೆ, ಬೋಡಾಗಿದ್ದವು.

ವುರೂನಾ ಇದೇ ತಕ್ಕ ಸಮಯವೆಂದು ಭಾವಿಸಿ ಒಂದು ಈಮ್ಯೂವನ್ನು ಕೊಂದು ತಿನ್ನುವ ಮನಸು ಮಾಡಿದ. ಕೂಡಲೇ ಅಲ್ಲಿದ್ದ ಮರವನ್ನು ಏರಿ ತನ್ನ ಈಟಿಯನ್ನು

ಹಿಡಿದು ಕುಳಿತ. ಕೆಳಗೆ ಗುಂಪು ಬರುತ್ತಿದ್ದ ಹಾಗೆ ಒಂದು ರೆಕ್ಕೆಯಿಲ್ಲದ ಹಕ್ಕಿಗೆ ಗುರಿಯಿಟ್ಟು ಈಟಿಯನ್ನು ಎಸೆದ. ಹಕ್ಕಿ ಸತ್ತುಹೋಯಿತು. ಅದನ್ನು ಎತ್ತಲು ಮರ ಇಳಿದ. ಕೂಡಲೇ ಅವನಿಗೆ ಗೋಚರವಾಯಿತು – ಅವು ಈಮ್ಯೂ ಹಕ್ಕಿಗಳಲ್ಲ. ಬದಲಾಗಿ ಅವು ನಿಗೂಢ ಪಂಗಡದ ಮನುಷ್ಯರಾಗಿದ್ದರು! ಅವರೆಲ್ಲರೂ ತಮ್ಮ ಸತ್ತ ಗೆಳೆಯನ ದೇಹದ ಸುತ್ತಾ ನಿಂತು ಅವನನ್ನು ಕೊಂದವನ ಮೇಲೆ ಸೇಡು ತೀರಿಸಿಕೊಳ್ಳುವ ಹೊಂಚು ಹಾಕುತ್ತಿದ್ದರು! ಈಗ ವುರೂನಾನ ಪ್ರಾಣಕ್ಕೇ ಸಂಚಕಾರ ಬಂದಿತ್ತು. ಅಲ್ಲಿಂದ ಓಡಿ ಹೋಗುವುದೊಂದೇ ಮಾರ್ಗ ಎನಿಸಿತು. ಮತ್ತೆ ಕಂಬಿ ಕಿತ್ತ ಅವನು, ಹಿಂದೆ ನೋಡದೆಯೇ ಓಡುತ್ತಾ ಮತ್ತೊಂದು ಹಳ್ಳಿಯನ್ನು ತಲಪಿದ. ಹಿಂದಿದ್ದ ವಿಪತ್ತಿನ ಬಗ್ಗೆಯೇ ಯೋಚಿಸುತ್ತಿದ್ದ ಅವನಿಗೆ ಹೊಸ ಹಳ್ಳಿಗೆ ಬಂದಿದ್ದರ ಅರಿವೆಯೇ ಇರಲಿಲ್ಲ. ಈ ಹಳ್ಳಿಯಲ್ಲಿ ಅವನಿಗೆ ಭಯಪಡುವ ಪ್ರಮೇಯವೇ ಇರಲಿಲ್ಲ. ಅಲ್ಲಿ ಇದ್ದವರು ಏಳು ಮಂದಿ ಯುವತಿಯರು ಮಾತ್ರ. ಅವರಲ್ಲಿ ಅಪರೂಪದ, ಆಶ್ಚರ್ಯಕರವಾದ ವಿಶೇಷಗಳೇನೂ ಇರಲಿಲ್ಲ. ಆದರೆ ಅವರು ವುರೂನಾನನ್ನು ಕಂಡು ಚಕಿತರಾದರು. ಅವರು ಪ್ರೀತಿಯಿಂದಲೇ ಇವನತ್ತ ನೋಡಿ ಮಾತನಾಡಿಸಿದರು. ಅವನಿಗೆ ಹಸಿವು ಎಂಬುದು ತಿಳಿದ ತಕ್ಷಣ ಅವನಿಗೆ ಆಹಾರವನ್ನು ನೀಡಿ, ಅಲ್ಲಿಯೇ ತಂಗುವಂತೆ ಆಹ್ವಾನ ನೀಡಿದರು. "ನೀವಾರು? ನಿಮ್ಮ ಗುಂಪಿನ ಹೆಸರೇನು?" ಎಂದು ವುರೂನಾ ವಿಚಾರಿಸಿದ. ಅದಕ್ಕವರು "ನಮ್ಮ ಹೆಸರು ಮಿಯಾಮ್ಯೆ. ನಾವು ದೂರದ ದೇಶದಿಂದ ಬಂದವರು. ಈ ಪ್ರದೇಶ ಹೇಗಿದೆ ನೋಡಲು ಬಂದಿದ್ದೇವೆ. ನಂತರ ನಮ್ಮ ನಾಡಿಗೆ ಹಿಂತಿರುಗಿ ಹೋಗುತ್ತೇವೆ" ಎಂದರು.

ಮರುದಿನ ಎಂದಿನಂತೆ ಎದ್ದ ವುರೂನಾ ಆ ಹಳ್ಳಿಯಿಂದ ತೆರಳುವುದಾಗಿ ನಟಿಸಿದ. ಅದರೆ ಅಲ್ಲಿಯೇ ಇದ್ದ ಪೊದೆಯ ಹಿಂದೆ ಕುಳಿತು ಹುಡುಗಿಯರು ಏನು ಮಾಡುತ್ತಾರೆ ನೋಡುತಿದ್ದ. ಅವನಲ್ಲಿ ಆಸೆಯೊಂದು ಕುದುರಿತು. ಹೇಗೋ ಅವರಲ್ಲಿ ಒಬ್ಬಳನ್ನಾದರೂ ಅಪಹರಿಸಿ ಮದುವೆಯಾಗಬೇಕು!

ಸಪ್ತಕನ್ಯೆಯರೂ ತಮ್ಮ ಯಾಮ್ ಕೋಲುಗಳೊಡನೆ ಬಂದರು. ಇವನು ಕಾಣದಂತೆ ಅವಿತು ಕುಳಿತ. ಹುಡುಗಿಯರು ಅಲ್ಲಿದ್ದ ಇರುವೆ ಗೂಡುಗಳ ಬಳಿ ಹೋಗಿ ತಮ್ಮ ಕೋಲುಗಳಿಂದ ಗೂಡುಗಳನ್ನೆಲ್ಲಾ ತಡಕಾಡಿದರು. ಇದ್ದ ಇರುವೆಗಳನ್ನೆಲ್ಲಾ ಬಗೆದು ಹೊರ ತೆಗೆದು ಒಂದೆಡೆ ಕುಳಿತರು. ತಮ್ಮ ಯಾಮ್ ಕೋಲುಗಳನ್ನು ಅಲ್ಲಿಯೇ ಬಿಟ್ಟರು. ಇರುವೆಯ ಭವ್ಯ ಭೋಜನ ಪ್ರಾರಂಭವಾಯಿತು. (Yam Stick, ಆಸ್ಟ್ರೇಲಿಯಾದ ಆದಿನಿವಾಸಿಗಳು ಗೆಡ್ಡೆ ಗೆಣಸುಗಳಿಗಾಗಿ ನೆಲ ಅಗೆಯಲು ಬಳಸುವ ಸಾಧನ. ಚೂಪಾದ ತುದಿ, ಇವುಗಳ ಉದ್ದ ಸುಮಾರು ಒಂದು ಮೀಟರ್)

ಹುಡುಗಿಯರು ಊಟದಲ್ಲಿ ನಿರತರಾಗಿದ್ದಾಗ ವುರೂನಾ ಮರೆಯಿಂದ ಹೊರಬಂದು, ಅಲ್ಲಿದ್ದ ಏಳು ಯಾಮ್ ಕೋಲುಗಳಲ್ಲಿ ಎರಡನ್ನು ತೆಗೆದುಕೊಂಡು ಮತ್ತೆ ಪೊದೆಯ ಹಿಂದೆ ಹೋಗಿ ಕೂತ. ತಮ್ಮ ಭೋಜನವಾದ ನಂತರ ಕನ್ಯೆಯರು ತಮ್ಮ ಕೋಲುಗಳನ್ನು

ತೆಗೆದುಕೊಳ್ಳಲು ಬಂದರು. ಐವರು ಕೋಲುಗಳನ್ನು ತೆಗೆದುಕೊಂಡು ಹೊರಟರೆ ಇಬ್ಬರು ಹಾಗೆಯೇ ಉಳಿದು ಕೋಲುಗಳನ್ನು ಹುಡುಕಲಾರಂಭಿಸಿದರು. ಐವರು ದೂರ ಹೋದ ಮೇಲೆ ವುರೂನಾ ಸಮಯಕ್ಕಾಗಿ ಕಾದು ಕುಳಿತ. ಮಿಕ್ಕ ಇಬ್ಬರು ಎಲ್ಲೋ ಮರೆಯಲ್ಲಿ ಕೋಲನ್ನು ಹುಡುಕುತ್ತಾ ಇದ್ದಾಗ ಇವನು ಆಚೆ ಬಂದು ತನ್ನ ಬಳಿ ಇದ್ದ ಎರಡು ಕೋಲುಗಳನ್ನು ನೆಲದ ಮೇಲೆ ನೆಟ್ಟು ಪೊದೆಗೆ ಹಿಂದಿರುಗಿದ. ಇರುವೆ ಗೂಡುಗಳು ಮತ್ತಿತರ ಸ್ಥಳಗಳಲ್ಲಿ ಹುಡುಕಿ ಕೋಲುಗಳನ್ನು ಕಾಣದೇ ನಿರಾಶರಾಗಿದ್ದ ಕನ್ಯೆಯರಿಗೆ ಒಮ್ಮೆಗೇ ಅವು ಗೋಚರವಾದವು. ಆನಂದದಿಂದ "ನಮ್ಮ ಯಾಮ್ ಕೋಲು ಸಿಕ್ಕಿದವು" ಎಂದು ಹೇಳುತ್ತಾ ಅವುಗಳತ್ತ ಓಡಿ ಬಂದು ಅವನ್ನು ಎಳೆಯಹೋದರು. ಕೋಲುಗಳು ಬಲವಾಗಿ ನೆಲದಲ್ಲಿ ಊರಿ ಹೋಗಿದ್ದವು. ಅವರು ಎಷ್ಟೇ ಕಷ್ಟಪಟ್ಟರೂ ಅವುಗಳನ್ನು ಎಳೆಯಲಾಗಲಿಲ್ಲ. ವುರೂನಾ ಕೂಡಲೇ ಬಂದು ಅವರೆದುರು ಪ್ರತ್ಯಕ್ಷನಾಗಿ ಇಬ್ಬರ ನಡುಗಳನ್ನೂ ಭದ್ರವಾಗಿ ಹಿಡಿದ. ಅವರಿಬ್ಬರೂ ಚೀರಾಡಿದರು, ಕೂಗಾಡಿದರು. ಆದರೆ ಇವನು ಅವರನ್ನು ಬಿಡಲಿಲ್ಲ. ಅವರ ಆರ್ತನಾದವನ್ನು ಕೇಳುವವರು ಯಾರೂ ಇರಲಿಲ್ಲ. ಅವರು ಕೂಗಿದಷ್ಟೂ ವುರೂನಾ ಅವರನ್ನು ಮತ್ತಷ್ಟು ಭದ್ರವಾಗಿ ಹಿಡಿದ. ಅವರ ಚೀತ್ಕಾರ ನಂತರ ಕಡಿಮೆಯಾಯಿತು. ಆಗ ಅವನು ಹೇಳಿದ "ಭಯಪಡುವ ಅವಶ್ಯಕತೆ ಏನೂ ಇಲ್ಲ. ನಾನು ನಿಮಗೆ ಏನನ್ನೂ ಮಾಡುವುದಿಲ್ಲ. ನಾನು ಏಕಾಂಗಿ. ಮದುವೆಯಾಗಲು ಹುಡುಗಿಯರನ್ನು ನೋಡುತ್ತಿದ್ದೇನೆ. ನೀವಿಬ್ಬರು ನನಗೆ ಸೂಕ್ತ ಹೆಂಡತಿಯರು. ನನ್ನೊಡನೆ ಸಂಸಾರ ಮಾಡಿಕೊಂಡಿರಿ. ನನ್ನೊಡನೆ ಸುಮ್ಮನೆ ಬನ್ನಿ. ನಾನು ನಿಮ್ಮ ರಕ್ಷಣೆ ಮಾಡುತ್ತೇನೆ. ಒಂದು ಶರತ್ತು ನನ್ನದು. ನೀವಿಬ್ಬರೂ ನಾನು ಹೇಳಿದ ಹಾಗೆ ನಡೆದುಕೊಳ್ಳಬೇಕು. ಆಗ ನಾನು ನಿಮಗೆ ಒಳ್ಳೆಯವನಾಗಿರುತ್ತೇನೆ. ಹೆಚ್ಚು ಮಾತಾಡಿದರೆ ನನ್ನ ಮೂರಿಲ್ಲಾ (Moorillah) ಬಳಸಿ ನಿಮ್ಮನ್ನು ಸುಮ್ಮನಾಗಿಸಬೇಕಾಗುತ್ತದೆ." ಮರುಮಾತಾಡದೇ ಹುಡುಗಿಯರಿಬ್ಬರೂ ಅವನ ಹಿಂದೆಯೇ ನಡೆದು ಅವನನ್ನು ಅನುಸರಿಸಿಕೊಂಡಿದ್ದರು. ಅವನಿಗೆ ಇಷ್ಟವಾಗದ ಯಾವ ಕೆಲಸವನ್ನೂ ಮಾಡಲಿಲ್ಲ. ಮರುಮಾತಾಡಲಿಲ್ಲ. ಆದರೆ ಅವರು ಅವನಿಗೆ ಒಂದು ಎಚ್ಚರಿಕೆಯನ್ನು ಕೊಟ್ಟರು, "ನಮ್ಮ ಪಂಗಡದವರು ಹೇಗೋ ಬಂದು ನಮ್ಮನ್ನು ಅಪಹರಿಸಿಕೊಂಡು ಹೋಗುತ್ತಾರೆ. ಇದು ಖಂಡಿತ." ಇದನ್ನು ನಂಬಿದ ವುರೂನಾ ಅಂದಿನಿಂದ ವೇಗವಾಗಿ ಸ್ಥಳದಿಂದ ಸ್ಥಳಕ್ಕೆ ಜಿಗಿಯಲಾರಂಭಿಸಿದ. ಹುಡುಕಿಕೊಂಡು ಬರುವ ಆ ಹುಡುಗಿಯರ ಜನಕ್ಕೆ ತಾನು ಸಿಗಬಾರದು ಅಲ್ಲವೇ? ಹೀಗೆ ಹಲವಾರು ವಾರಗಳು ಕಳೆದವು. ಹೊರಗಡೆ ವಿಧೇಯರಾಗಿ ಕಂಡ ಆ ಹುಡುಗಿಯರು ತಮ್ಮ ಮನಸ್ಸಿನಲ್ಲಿ ಬಹಳ ನೊಂದಿದ್ದರು. "ನಮ್ಮ ಐವರು ಸಹೋದರಿಯರು ಎಲ್ಲಿ ಹೋದರು? ಅವರು ನಮ್ಮನ್ನು ಹುಡುಕುತ್ತಾ ಇದ್ದಾರೆಯೇ? ಅವರನ್ನು ಪುನಃ ನಾವು ನೋಡುತ್ತೇವೆಯೇ? ಈ ಶಿಕ್ಷೆ ನಮಗೇತಕ್ಕೆ? ನಮ್ಮ ಗುಂಪಿನವರು ಏಕೆ ಸುಮ್ಮನಿದ್ದಾರೆ? ಏನು ನಮ್ಮ ಗತಿ? ಹೀಗೆ ಮುಂದುವರೆದರೆ ಅವರೆಲ್ಲರಿಗೆ ನಾವು ಮರೆತುಹೋಗುತ್ತೇವೆ. ನಾವು ಈ ವುರೂನಾ ಜೊತೆಗೇ ಕೊನೆಯವರೆಗೆ ಬಾಳಬೇಕಾಗುತ್ತದೆ!"

ಒಮ್ಮೆ ವುರೂನಾ ಮತ್ತು ಹುಡುಗಿಯರು ಎಲ್ಲಿಯೋ ಬೀಡು ಮಾಡಿದ್ದರು. ಬೆಳಿಗ್ಗೆ ಅವನು ಬೆಂಕಿ ಹಚ್ಚಲು ಪ್ರಯತ್ನಿಸಿದ. ಆದರೆ ಹಸಿ ಮರ. ಉರಿ ಏಳಲೇ ಇಲ್ಲ. ಆಗ ತನ್ನ ಹುಡುಗಿಯರಿಗೆ ಹೇಳಿದ, "ಏಕೋ ಇಲ್ಲಿ ಉರಿಯಾಗುತ್ತಿಲ್ಲ. ಅಲ್ಲಿ ಕಾಣುವ ಎರಡು ಪೈನ್ ಮರಗಳಿಂದ ಸ್ವಲ್ಪ ಕಟ್ಟಿಗೆಯನ್ನು ತನ್ನಿ. ಅದು ಒಣಗಿದ ಮರ. ಆಗ ಬೆಂಕಿ ಹಚ್ಚುವುದು ಸುಲಭ." "ಇಲ್ಲಾ, ಇಲ್ಲಾ, ಪೈನ್ ಮರವನ್ನು ಕಡಿಯಬಾರದು. ನಾವು ಕಡಿದಿದ್ದೇ ಆದರೆ ನೀನು ಮತ್ತೆ ನಮ್ಮನ್ನು ನೋಡುವುದಿಲ್ಲ" "ಸುಮ್ಮನೇ ಏನೇನೋ ಹೇಳಬೇಡಿ. ನೋಡಿ ಇಲ್ಲಿ, ಬೆಂಕಿ ಹತ್ತುತ್ತಿಲ್ಲ. ಪೈನ್ ಮರವೇ ಸರಿ ಇದಕ್ಕೆ. ಹೋಗಿ ತನ್ನಿ." "ನಾವು ಪೈನ್ ಮರದತ್ತ ಹೋದರೆ ಹಿಂತಿರುಗಿ ಬರುವುದಿಲ್ಲ. ನೀನು ನಮ್ಮನ್ನು ಮತ್ತೆ ಈ ಪ್ರದೇಶದಲ್ಲಿ ನೋಡುವುದಿಲ್ಲ. ನಮಗೆ ಚೆನ್ನಾಗಿ ಗೊತ್ತು" "ಹೋಗಿ ಕಟ್ಟಿಗೆ ತನ್ನಿ. ಸುಮ್ಮನೇ ಮಾತಾಡುತ್ತಾ ನನ್ನ ಮುಂದೆ ನಿಲ್ಲಬೇಡಿ. ನಿಮ್ಮ ಮಾತಿನಿಂದ ಒಲೆ ಹೊತ್ತಿಕೊಳ್ಳುವುದಿಲ್ಲ. ಅದಕ್ಕೆ ಕಟ್ಟಿಗೆ ಬೇಕು. ಮೊದಲು ಹೊರಡಿ. ಪೆದ್ದು ಪೆದ್ದಾಗಿ ಮಾತಾಡಿದ್ದು ಸಾಕು. ಒಂದು ಪಕ್ಷ ನೀವೇನಾದರೂ ಹಾಗೆಯೇ ಓಡಿಹೋಗಿದ್ದೇ ಆದರೆ ನಾನು ನಿಮ್ಮನ್ನು ಹಿಡಿದು ಬಾರಿಸುತ್ತೇನೆ. ಎಚ್ಚರ! ಮಾತು ಬೇಡ. ಹೊರಡಿ."

ವಿಧಿಯಿಲ್ಲದೆ ಮಿಯಾಮ್ಮೆ ತರುಣಿಯರು ತಂತಮ್ಮ ಕೋಂಬೋ (Combo, ಮರ ಕಡಿಯುವ ಸಾಧನ) ಗಳನ್ನು ಹಿಡಿದು ಪೈನ್ ಮರಗಳತ್ತ ನಡೆದರು. ಒಬ್ಬೊಬ್ಬರು ಒಂದೊಂದು ಮರವನ್ನು ಆರಿಸಿಕೊಂಡು ಮರವನ್ನು ತಮ್ಮ ಕೋಂಬೋಗಳಿಂದ ಹೊಡೆದರು.

ಕೋಂಬೋ ತಗುಲಿದಂತೆ ಪೈನ್ ಮರಗಳು ಮೇಲಕ್ಕೆ ಬೆಳೆಯಲಾರಂಭಿಸಿದವು. ಜೊತೆಗೆ ಆ ತರುಣಿಯರನ್ನೂ ಮೇಲಕ್ಕೆತ್ತಿದವು. ಮರಗಳು ಬೆಳೆಯುತ್ತಾ ಹೋದವು. ಅವುಗಳನ್ನು ಹಿಡಿದಿದ್ದ ತರುಣಿಯರು ಜೊತೆಗೇ ಮೇಲು ಮೇಲಕ್ಕೆ ಹೋದರು. ವುರೂನಾಗೆ ಆಶ್ಚರ್ಯವಾಯಿತು. ಕಾರಣ, ಎರಡು ಬಾರಿ ಕೋಂಬೋ ಮರಕ್ಕೆ ತಗುಲಿದ ಶಬ್ದ ಕೇಳಿತ್ತು. ನಂತರ ಯಾವ ಶಬ್ದವೂ ಇಲ್ಲ. ಹುಡುಗಿಯರು ಏನು ಮಾಡುತ್ತಿದ್ದಾರೆ ನೋಡೋಣ ಎಂದು ಮರಗಳ ಹತ್ತಿರ ಬಂದ. ಅವು ವಿಪರೀತ ಎತ್ತರ ಬೆಳೆದಿದ್ದವು. ಅವುಗಳ ತುದಿಯಲ್ಲಿ ಹುಡುಗಿಯರು ಕುಳಿತಿದ್ದರು. ಚಕಿತನಾದ ಅವನು ನೋಡುತ್ತಿದ್ದಂತೆಯೇ ಮರಗಳು ಇನ್ನೂ ಎತ್ತರಕ್ಕೆ ಬೆಳೆಯುತ್ತಿದ್ದವು. ಹುಡುಗಿಯರತ್ತ ಕೂಗು ಹಾಕಿದ, "ಮೊದಲು ಕೆಳಗೆ ಬನ್ನಿ" ಆದರೆ ಅವರು ಉತ್ತರ ಕೊಡಲಿಲ್ಲ. ಮರ ಬೆಳೆದಂತೆ ಮತ್ತೆ ಮತ್ತೆ ಕೂಗು ಹಾಕಿದ. ಮತ್ತೆ ನಿರುತ್ತರ. ಒಂದೇ ಸಮನೆ ಮರಗಳು ಬೆಳೆದು ಆಕಾಶವನ್ನು ಮುಟ್ಟಿದವು. ಕೂಡಲೆ ಅಲ್ಲಿ ಅವರ ಮಿಕ್ಕ ಐವರು ಸಹೋದರಿಯರು ಗೋಚರವಾದರು. ಅವರು ಮರಗಳಲ್ಲಿ ಅವಿತುಕೊಂಡಿದ್ದ ಹುಡುಗಿಯರಿಗೆ "ಹೆದರಬೇಡಿ, ಮೇಲೆ ಬನ್ನಿ" ಎಂದರು. ಕೂಡಲೇ ತಮ್ಮ ಕೈಗಳನ್ನು ಚಾಚಿ ಇಬ್ಬರನ್ನೂ ಮೇಲಕ್ಕೆ ಎಳೆದರು. ಮತ್ತೆ ಏಳು ಸಹೋದರಿಯರೂ ಒಟ್ಟಿಗೆ ಆಕಾಶದಲ್ಲಿ ಜೀವಿಸತೊಡಗಿದರು.

ಈಗಲೂ ನೀವು ಆಕಾಶದತ್ತ ನೋಡಿದರೆ ಸಪ್ತ ಸಹೋದರಿಯರನ್ನೂ ನೋಡಬಹುದು. ನೀವು ಅವರನ್ನು ಕೃತ್ತಿಕಾ ಗುಚ್ಛ (Pleiades) ಎಂದು ಕರೆಯಬಹುದು. ಆದರೆ ನಾವು ಮಿಯಾಮ್ಮೆ ಎನ್ನುತ್ತೇವೆ..

ಆಧಾರ

* K. Langloh Parker, Australian Legendary Tales, David Nutt, 270-271 Strand, Melbourne, Melville, Mullen & Slade, 1896.

❑

(28)

ಇಲಿನಿ ಒಕ್ಕೂಟ

ಅನುರಾಧ ಅರುಣ್
ಬೋಲಿಂಗ್‌ಬ್ರೂಕ್, ಇಲಿನಾಯ್

*

ಜನ–ಜೀವನ

ಹಲವು ವರ್ಷಗಳ ಹಿಂದೆ ಅಮೆರಿಕ ಖಂಡ ಐರೋಪ್ಯರ ಅಧೀನಕ್ಕೆ ಬರುವ ಮೊದಲು, ಇಲ್ಲಿ ಬೇರೆ ಬೇರೆಯ ಸಾಂಸ್ಕೃತಿಕ ಹಿನ್ನೆಲೆ ಇರುವ ಹಲವು ಬುಡಕಟ್ಟು ಜನಾಂಗದವರು ಸಮೃದ್ಧಿಯ ಜೀವನವನ್ನು ನಡೆಸುತ್ತಿದ್ದರು. ಅದರಲ್ಲಿ ಈಗಿನ ಇಲಿನಾಯ್ ರಾಜ್ಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ನೆಲೆಸಿದ್ದ ಮೂಲನಿವಾಸಿಗಳ ಗುಂಪು (ಇಲಿನಿ ಒಕ್ಕೂಟ) ಕೂಡಾ ಒಂದು. ಈ ಪ್ರದೇಶಗಳು ಹೊರಗಿನಿಂದ ಬಂದವರಿಗೆ ಇಲ್ಲೇ ನೆಲೆಸಬೇಕೆನಿಸುವಷ್ಟು ಚೆನ್ನಾಗಿದ್ದವು. ಫ್ರಾನ್ಸ್ ಮತ್ತು ಇಂಗ್ಲೆಂಡಿನಿಂದ ಇಲ್ಲಿಗೆ ಬಂದ ವಲಸೆಗಾರರು ಈ ನೆಲಕ್ಕಾಗಿ ಒಳ ಜಗಳಗಳನ್ನು ನಡೆಸುತ್ತಿದ್ದರು. ಹಾಗಾಗಿ, ಬುಡಕಟ್ಟು ಜನರನ್ನು ಇಲಿನಿ ಒಕ್ಕೂಟದಿಂದ ಬಲವಂತವಾಗಿ ಓಡಿಸುವ ಪ್ರಯತ್ನ ಮಾಡಲಾಯಿತು. ಸ್ಥಳೀಯ ಜನರ ಮನೆಗಳೆಲ್ಲ ದೊಡ್ಡ ನದಿ ತೀರಗಳಲ್ಲಿಯೇ ಇರುತ್ತಿದ್ದವು. ವ್ಯಾಪಾರದ ಸಾಮಾನು ಸಾಗಿಸಲು ಮತ್ತು ವ್ಯವಸಾಯಕ್ಕೆ, ಪ್ರಾಣಿಪಕ್ಷಿಗಳಿಗೆ ನೀರಿನ ವ್ಯವಸ್ಥೆಗೆ ನದಿ ತೀರ ಬಹಳ ಸಹಾಯಕ್ಕೆ ಬರುತ್ತಿತ್ತು. ದೋಣಿಗಳನ್ನು ಕಟ್ಟಿ ಭಾರವಾದ ಸಾಮಾನು ಸುಲಭವಾಗಿ ಸಾಗಣೆ ಮಾಡುವ ವಿಧಾನ ಅವರಿಗೆ ತಿಳಿದಿತ್ತು. ಬೇಸಿಗೆಯಲ್ಲಿ ಬೇಟೆಗಾಗಿ ಮನೆ ಬಿಟ್ಟು ಬೇರೆಯ ಸ್ಥಳದಲ್ಲಿ ತಾತ್ಕಾಲಿಕ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಚಳಿಗಾಲದಲ್ಲಿ ಬೇಟೆಗಾಗಿಯೂ ತಾತ್ಕಾಲಿಕ ವಸತಿ ನಿರ್ಮಿಸಿ ಅವನ್ನು 'ವಿಗ್ವಮ್ಸ್' ಎಂದು ಕರೆದರು. ಸ್ಪೇನ್ ದೇಶದಿಂದ ಬಂದವರು ಈ ಬುಡಕಟ್ಟಿನವರಿಗೆ ಕುದುರೆಯನ್ನು ಪರಿಚಯಿಸಿದರು ಎಂದು ನಂಬಲಾಗಿದೆ. ಕುದುರೆ ಸವಾರಿಯ ಕಲಿಕೆ, ಕುದುರೆಗಳ ಕೊಡು/ಕೊಳ್ಳುವಿಕೆ ಮತ್ತು ತಮ್ಮ ಕೆಲಸಗಳಿಗಾಗಿ

ಕುದುರೆಗಳನ್ನು ಬಳಸುವುದು ಇಲಿನಿ ಸಮುದಾಯದಲ್ಲೂ ಪ್ರಾರಂಭವಾಯಿತು. ಯೂರೋಪಿಯನ್ನರು ಬರುವ ಮೊದಲು, ಇಲಿನಾಯ್ ಬುಡಕಟ್ಟಿನ ಜನರು ಬೇಕಾದಷ್ಟು ಪದಾರ್ಥಗಳನ್ನು ತಾವೇ ಬೆಳೆದುಕೊಳ್ಳುತ್ತಿದ್ದರು. ತಮ್ಮ ಜೀವನ ನಿರ್ವಹಣೆಗಷ್ಟೇ ಅಲ್ಲದೆ ಬೇರೆ ದೇಶಗಳೊಂದಿಗೆ ವ್ಯಾಪಾರ ವಿನಿಮಯ ಮಾಡುತ್ತಿದ್ದರು. ಇಲಿನಾಯ್ ಬಹಳ ಬೇಗ ಸ್ವಾವಲಂಬನೆಯ, ಸಮೃದ್ಧಿಯ ನೆಲವಾಯಿತು. ಆದ್ದರಿಂದಲೇ ಇವರೊಂದಿಗೆ ವ್ಯಾಪಾರದಲ್ಲಿ ಕೈಜೋಡಿಸಿದ್ದ ಇತರ ದೇಶಿಕರು ಇಲ್ಲಿನ ನೆಲದ ಆಸೆಗಾಗಿ ಬುಡಕಟ್ಟಿನ ಜನಕ್ಕೆ ಆಪತ್ತು ತಂದೊಡ್ಡಿದರು. ಮೊದಲೇ ಈ ಬುಡಕಟ್ಟಿನ ಜನರಲ್ಲಿ ಒಗ್ಗಟ್ಟಿನ ಕೊರತೆ ಇದ್ದುದು ಬೇರೆಯ ದೇಶದ ಜನರು ಮೇಲ್ಗೈ ಸಾಧಿಸಲು ಅವಕಾಶ ಮಾಡಿಕೊಟ್ಟಂತೆ ಆಯಿತು. ಅಧಿಕಾರ ದಾಹಕ್ಕಾಗಿ ಬಡಿದಾಡಿಕೊಂಡು ತಮ್ಮ ಅವನತಿಯನ್ನು ತಾವೇ ತಂದುಕೊಂಡರು. ಅಮೇರಿಕನ್ನರು ಮೂಲನಿವಾಸಿಗಳ ಸೌಲಭ್ಯಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಲೂ ಇಲ್ಲ, ಅಲ್ಲದೆ ಮೂಲನಿವಾಸಿಗಳಿಗೆ ಪೌರತ್ವವನ್ನು ನಿರಾಕರಿಸಿ ಮತ ಚಲಾಯಿಸುವ ಹಕ್ಕನ್ನೂ ಸಹ ನಿರಾಕರಿಸಲಾಯಿತು. ಈ ರೀತಿ, ಆದಿವಾಸಿಗಳನ್ನು ತಮ್ಮ ನೆಲದಿಂದ ಓಡಿಸುವ ಹುನ್ನಾರ ಬೇರೆ ದೇಶದ ಪ್ರಜೆಗಳು ನಡೆಸಿದ್ದರು. ಇವರಿಗೆ ನೆಲದ ಒಡೆತನ ಇಲ್ಲದಂತೆ ಮಾಡುವಲ್ಲಿ ಬಿಳಿಯರು ಯಶಸ್ವಿಯಾದರು.

ನಂತರದಲ್ಲಿ ತಮ್ಮಲ್ಲಿಯೇ ಸಾಮರಸ್ಯ ಬೆಳೆಸಿಕೊಂಡು, ಒಳಜಗಳಗಳಿಂದ ಹೊರಬಂದು ತಮ್ಮ ನೆಲೆಯನ್ನು ಭದ್ರಗೊಳಿಸಿಕೊಳ್ಳುವಲ್ಲಿ ಈ ಬುಡಕಟ್ಟಿನ ಜನರು ಯಶಸ್ವಿಯಾದರು. 1854ರಲ್ಲಿ ಇವರ ಸಾಮರಸ್ಯಕ್ಕೆ ಮಣಿದು ಒಕ್ಕೂಟದ ಎಲ್ಲಾ ಸದಸ್ಯರಿಗೂ ಅಮೇರಿಕಾ 160 ಎಕರೆ ಜಾಗವನ್ನು ಮಂಜೂರು ಮಾಡಿತು. ಈ ಸಂತೋಷ ಬಹಳ ದಿನ ಇರಲಿಲ್ಲ. ಅಮೆರಿಕನ್ ಸಿವಿಲ್ ಯುದ್ಧದಿಂದ ಮತ್ತೆ ಭೂಮಿಯನ್ನು ಕಳೆದುಕೊಳ್ಳುವ ಪಾಡು ಬಂತು ಮತ್ತು ಹೊಸ ಕಾಯ್ದೆಗಳ ಮಾರ್ಪಾಡಿನಿಂದ ಬಹಳ ತೊಂದರೆಗಳು ಎದುರಾದುವು. ಇದನ್ನೆಲ್ಲ ಮೆಟ್ಟಿ ನಿಂತು ಈ ಬುಡಕಟ್ಟು ಇನ್ನೂ ಜೀವಂತವಾಗಿದೆ.

'ಇಲಿನಿ' ಅನ್ನುವುದು 13 ಬುಡಕಟ್ಟುಗಳು, ಮತ್ತು ಅದರೊಳಗಿನ 5 ಗುಂಪುಗಳು ಸೇರಿರುವ ಒಂದು ಒಕ್ಕೂಟ. ಎಲ್ಲಾ ಗುಂಪುಗಳು ಈಗ ಅಸ್ತಿತ್ವದಲ್ಲಿಲ್ಲದ ಕಾರಣ, ಒಂದು ಗುಂಪು ಮತ್ತೊಂದು ಗುಂಪಿನ ಜೊತೆಗೆ ವಿಲೀನವಾಗುವುದು ಅನಿವಾರ್ಯವಾಗಿತ್ತು. ಆ ಗುಂಪುಗಳು ಯಾವುವೆಂದರೆ; Illinois, Miami, Winnibago, Fox, and Sacs (Sauk), Kickapoo, and Pottawatomie, Kaskaskias, Cahokias, Tamaroas, Peorias, Michigamea. ಅದರಲ್ಲಿ ಒಳಗುಂಪುಗಳು Kaskaskias, Cahokias, Tamaroas, peorias and Michigamea. ಇಲಿನಾಯ್ ಬುಡಕಟ್ಟಿನ ಜನ ಮಿಸಿಸ್ಸಿಪ್ಪಿ ನದಿ ತೀರದಲ್ಲಿ ನೆಲೆಸಿ, ಈಗಿನ Arkansas, Iowa, Wisconsin, ಮತ್ತು Missouri ರಾಜ್ಯಗಳವರೆಗೂ ಸೀಮೆಯನ್ನು ವಿಸ್ತರಿಸಿಕೊಂಡಿದ್ದರು.

ಎಲ್ಲಾ ಬುಡಕಟ್ಟಿನ ಜನರೂ ಈ ನೆಲದಲ್ಲಿ ವಾಸಿಸುತ್ತಾ, ಅಲ್ಗಾನ್‌ಕ್ವಿನ್ ಭಾಷೆ ಮಾತನಾಡುವವರು ಒಂದು ಗುಂಪಾಗಿ ಇಲಿನಾಯ್–ಮಯಾಮಿ ಗುಂಪಿಗೆ ಸೇರಿಸಲ್ಪಟ್ಟರು.

ಮಿಸಿಸ್ಸಿಪಿ ನದಿಯ ಕಣಿವೆಯಲ್ಲಿ ವಾಸಿಸುತ್ತಿದ್ದ ಜನ ಮಿಶಿಗನ್ ಸರೋವರದಿಂದ ಅಯೋವ, ಇಲಿನಾಯ್ ಮತ್ತು ದಕ್ಷಿಣಕ್ಕೆ ಮಿಸ್ಸೌರಿ, ಅರ್ಕಾನ್ಸಾವರೆಗಿನ ಪ್ರದೇಶದಲ್ಲಿ ನೆಲೆಸಿದ್ದರು. ಈ ಜನರು (ಚಹೋಕಿಯಾ, ಕಸ್ಕಾಸ್ಕಿಯಾ, ಮಿಶಿಗಾಮಿಯಾ, ಪಿಯೋರಿಯಾ, ಟಮರಾವ್) ತಮ್ಮನ್ನು ಇಲಿನಿ ಇಲಿನಿವೆಕ್ –ಎಂದರೆ ಗಂಡಸರು ಎಂದು, ಕರೆದುಕೊಳ್ಳುತ್ತಿದ್ದರು. ಫ್ರಾನ್ಸ್‌ನ ಜನ ಇವರಿಗೆ ಇಲಿನಾಯ್ ಎಂದು ನಾಮಕರಣ ಮಾಡಿದರು. ಫ್ರಾನ್ಸ್ ಜನರು ಅಮೆರಿಕದ ನೆಲದಲ್ಲಿ ಬಂದು ಮೂಲನಿವಾಸಿಗಳನ್ನು ಅವರ ನೆಲದಿಂದ ಓಡಿಸಿ, ಬುಡಕಟ್ಟಿನ ಹೆಸರುಗಳನ್ನು ರಾಜ್ಯಗಳಿಗೆ, ನದಿ – ಸರೋವರಗಳಿಗೆ ನಾಮಕರಣ ಮಾಡಿದರು. ಇಂದಿನ ಇಲಿನಾಯ್ ಪ್ರಾಂತ್ಯಕ್ಕೆ ಇದೇ ಬುಡಕಟ್ಟಿನ ಹೆಸರನ್ನು ನಾಮಕರಣ ಮಾಡಿದರು.

ಈ ಎಲ್ಲ ಬುಡಕಟ್ಟಿನ ಜನರೂ ಚದುರಿಹೋಗುವ ಮುನ್ನ ಅಲ್ಗಾನ್‌ಕ್ವಿನ್ ಭಾಷೆಯನ್ನು ಮಾತನಾಡುತ್ತಿದ್ದರು. ಇವರು ಯುದ್ಧಪ್ರಿಯರು. ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡು ತಮ್ಮ ಅವನತಿಯನ್ನು ತಾವೇ ತಂದುಕೊಂಡರು. ಅಲ್ಲದೇ ರೋಗರುಜಿನಗಳಿಗೂ ತುತ್ತಾದರು. ಬೇಟೆಯೂ ಇವರಿಗೆ ಪ್ರಿಯವಾಗಿತ್ತು. ಬೇಟೆ ಮಾಡಿದ ಪ್ರಾಣಿಗಳ ತೊಗಲಿನಿಂದ ಮಾಡಿದ ಉಡುಪು ಮತ್ತು ಗಾಜಿನ ಮಣಿ, ಶಂಖ, ಬೆಳ್ಳಿ, ಹಿತ್ತಾಳೆ ಆಭರಣಗಳನ್ನು ತೊಡುತ್ತಿದ್ದರು. ಪ್ರಾಣಿಗಳ ತೊಗಲಿನ ಮೇಲೆ ಚಿತ್ರ ಬಿಡಿಸುವುದು ಇವರ ಹವ್ಯಾಸಗಳೊಂದು. ಇವರೆಲ್ಲರೂ ಒಂದೇ ದೈವವನ್ನು ನಂಬುತ್ತಿದ್ದರು. 'ಕಿಸೆ ಮನಿಟೋ' ಎಂಬ ದೈವ ತಮ್ಮ ಜೀವನಕ್ಕೆ ಶಕ್ತಿ ತುಂಬುವವನು. ಜೀವನವನ್ನು ನಡೆಸಲು ಸೂರ್ಯ ಮತ್ತು ವರುಣನ ಸಹಕಾರ ಬೇಕೆಂದು ನಂಬಿದ್ದರು. ಸತ್ತವನು ಮತ್ತೆ ಹುಟ್ಟಿ ಬರುತ್ತಾರೆಂದು ಕೂಡ ನಂಬಿದ್ದರು.

ಅಮೆರಿಕದ ಬುಡಕಟ್ಟು ಜನರು ತಮ್ಮ ನಂಬಿಕೆಗಳನ್ನು ಬಾಯಿಂದ ಬಾಯಿಗೆ ಇಲ್ಲವೇ ಚಿತ್ರ ಬಿಡಿಸುವುದರ ಮೂಲಕ ಮತ್ತು ಕೆತ್ತನೆ ಕೆಲಸದ ಮೂಲಕ ಅಭಿವ್ಯಕ್ತಗೊಳಿಸುತ್ತಿದ್ದರು. ತಮ್ಮ ಚಲನವಲನ, ನೃತ್ಯದಲ್ಲಿ ಭಾವ ವ್ಯಕ್ತಪಡಿಸುವುದರ ಮೂಲಕ ಮತ್ತು ತಾಳಬದ್ಧ ವಾದ್ಯ ನುಡಿಸುವಿಕೆಯಿಂದಲೂ ತಮ್ಮ ಭಾವನೆಗಳು ಮತ್ತು ನಂಬಿಕೆಗಳನ್ನು ತೋರ್ಪಡಿಸುತ್ತಿದ್ದರು. ಅದರಲ್ಲಿ ಮುಖ್ಯವಾದದ್ದು ಬಾಯಿಂದ ಬಾಯಿಗೆ ತಮ್ಮ ಆಚಾರ–ವಿಚಾರಗಳ ವಿನಿಮಯ. ಇವು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸಲ್ಪಡುತ್ತಿದ್ದವು. ಸಣ್ಣ ವಯಸ್ಸಿನಿಂದಲೇ, ಇತಿಹಾಸವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿಯನ್ನು ಕಲಿಸಲಾಗುತ್ತಿತ್ತು. ಆದರೆ, ಎಲ್ಲಾ ಬಾಯಿ ಪಾಠದ ಮೂಲಕವೇ! ಕಥೆಗಳು, ಕಥೆಗಳಲ್ಲಿ ಬರುವ ಪಾತ್ರಧಾರಿಗಳ ಅನುಕರಣೆ ಮಾಡುವುದನ್ನೂ ಸಹ ಮಕ್ಕಳಿಗೆ ಕಲಿಸಲಾಗುತ್ತಿತ್ತು.

ಕಥೆ ಹೇಳುವುದನ್ನು ಚಳಿಗಾಲಕ್ಕೆ ಮೀಸಲಾಗಿಡಲಾಗುತ್ತಿತ್ತು, ಬೆಂಕಿ ಕಾಯಿಸಲು ಜನ ಒಂದು ಕಡೆ ಗುಂಪಾಗಿ ಸೇರಿದಾಗ ಮಾತ್ರ ಕಥೆಗಳನ್ನು ಹೇಳಲು ಮತ್ತು ಕೇಳಲು ಅನುಮತಿ ಇತ್ತು. ಬೇರೆಯ ಋತುಮಾನದಲ್ಲಿ ಬೇಟೆಯಾಡುವುದು, ಮೀನುಗಾರಿಕೆ, ದವಸಧಾನ್ಯಗಳ ಕಟಾವು, ಸಂಗ್ರಹಣೆ, ಮನೆಮಂದಿಗೆಲ್ಲ ಬಟ್ಟೆಗಳನ್ನು ಹೊಲೆಯುವುದು ಮುಂತಾದ ಕೆಲಸಗಳನ್ನು ಬಿಟ್ಟು ಕಾಲಹರಣ ಮಾಡುವುದು ಬುಡಕಟ್ಟು ಜನರ

ನಿಯಮಗಳಿಗೆ ವಿರುದ್ಧವಾಗಿದ್ದುದರಿಂದ, ಹಾಗೇನಾದರೂ ಕಥೆ ಹೇಳಿಕೊಂಡು, ಕೇಳಿಕೊಂಡು ಕೆಲಸ ಮಾಡದೆ ಕುಳಿತಿದ್ದುದನ್ನು ನೋಡಿದ ಪಕ್ಷದಲ್ಲಿ ದಂಡನೆಯನ್ನು ವಿಧಿಸಲಾಗುತ್ತಿತ್ತು. ಅದಲ್ಲದೆ, ಕೆಟ್ಟ ಶಕ್ತಿಗಳು ಉಪಟಳ ಕೊಡುತ್ತವೆಂದೂ ಸಹ ಭಯವಿತ್ತು. ಹಾಗಾಗಿ, ಶ್ರಮವಹಿಸಿ ಕೆಲಸ ಮಾಡುತ್ತಿದ್ದರು. ಮೈಗಳ್ಳತನಕ್ಕೆ ಹೆಚ್ಚಿನ ಅವಕಾಶಗಳಿರಲಿಲ್ಲ.

ಚಿಕ್ಕಂದಿನಿಂದ ಕಥೆ ಹೇಳುವುದನ್ನು ಮತ್ತು ಪಾತ್ರಧಾರಿಗಳನ್ನು ಅನುಕರಿಸುವ ಶಬ್ದಗಳನ್ನು ಮಾಡುವುದನ್ನು ಕಲಿತಿದ್ದ ಕಾರಣ ಪೀಳಿಗೆಯಿಂದ ಪೀಳಿಗೆಗೆ ಇವರಿಗೆ ಕಥೆ ಹೇಳುವ ಕಲೆ ಚೆನ್ನಾಗಿ ಸಿದ್ಧಿಸಿತ್ತು. ಕಥೆ ಹೇಳುವ ವಿಧಾನ ಕಥೆಗಾರನ ಸಾಮರ್ಥ್ಯವನ್ನು ಅವಲಂಬಿಸಿತ್ತು. ಅಂದರೆ ಒಂದೇ ಕಥೆಯನ್ನು ಬೇರೆ ಬೇರೆ ಕಥೆಗಾರರು ತಮ್ಮದೇ ಶೈಲಿಯಲ್ಲಿ ಹೇಳುತ್ತಿದ್ದುದರಿಂದ ಅಲ್ಪಸ್ವಲ್ಪ ಮಾರ್ಪಾಡಿನಿಂದ ಕಥೆ ಸ್ವಲ್ಪ ವಿಭಿನ್ನತೆಯನ್ನು ಪಡೆಯುತ್ತಿತ್ತು. ಕೆಲವು ಕಥೆಗಾರರು ಪ್ರಾಣಿಗಳ ಅನುಕರಣೆಯನ್ನು ಚೆನ್ನಾಗಿ ಮಾಡಿದರೆ ಮತ್ತೆ ಕೆಲವರು ದುಷ್ಟ ಶಕ್ತಿಗಳ ಮತ್ತು ಭೂತ–ಪ್ರೇತಗಳ ಅನುಕರಣೆಯನ್ನು ಮಾಡುತ್ತಿದ್ದರು. ವೈವಿಧ್ಯತೆಯಿಂದ ಕೂಡಿದ ಕಥೆಗಳು ಇದ್ದವಾದರೂ ಅದೇ ಬುಡಕಟ್ಟಿಗೆ ಸೇರಿದ ಜನರಿಗೆ ಮಾತ್ರ ಲಭ್ಯವಾಗಿತ್ತು.

ಉತ್ತರ ಅಮೆರಿಕದ ಬುಡಕಟ್ಟಿನ ಆದಿವಾಸಿಗಳಲ್ಲಿ ಅವ್ಯಕ್ತ ಶಕ್ತಿಗಳ ಆರಾಧನೆ ಹೆಚ್ಚಾಗಿತ್ತು. ತಮ್ಮ ಇರುವಿಕೆ, ಧಾರ್ಮಿಕ ನಂಬಿಕೆಗಳು ಮತ್ತು ಅನುಸರಿಸುತ್ತಿದ್ದ ವಿಧಿ ವಿಧಾನಗಳು ಪ್ರಕೃತಿಯನ್ನು ಅವಲಂಬಿಸಿವೆ ಹಾಗೂ ಪ್ರಕೃತಿಯೂ ಸಹ ಶಕ್ತೀಭೂತ ಕ್ರಿಯೆಯ ಮೇಲೆ ನಡೆಯುತ್ತದೆ ಎಂದು ನಂಬಿದ್ದರು. ಆಕಾಶದಲ್ಲಿ ನಡೆಯುವ ಚಮತ್ಕಾರಗಳು, ಭೂಮಿಯ ಮೇಲಿನ ಘಟನೆಗಳು, ಪರ್ವತಗಳ ಇರುವಿಕೆ, ಮರಗಿಡಗಳು, ನೀರು, ಪ್ರಾಣಿಗಳು, ಪಕ್ಷಿಗಳು ಮತ್ತು ಮಾನವರು ಎಲ್ಲದರ ಕಾರಣಕರ್ತ ಒಂದು ಅಗೋಚರ ಶಕ್ತಿ ಎಂದು ನಂಬಿದ್ದರು. ಈ ಆದಿವಾಸಿ ಜನರಿಗೆ ತಮ್ಮ ಅಸ್ತಿತ್ವಕ್ಕೆ ಧನ್ಯತಾ ಭಾವ ಇದ್ದದ್ದು ಕಂಡುಬರುತ್ತದೆ. ತಮ್ಮ ಜನರಿಗಲ್ಲದೆ ಬೇರೆ ಅನಾಮಿಕರಿಗೆ ತಮ್ಮ ಮನಸ್ಸಿನ ಭಾವನೆಗಳನ್ನು ಸುಲಭವಾಗಿ ತೆರೆದಿಡುತ್ತಿರಲಿಲ್ಲ. ಹಾಗಾಗಿ ಹೆಚ್ಚಿನ ಕಥೆಗಳು ಲಭ್ಯವಿಲ್ಲ ಮತ್ತು ದಾಖಲಿಸದೆ ಬರೀ ಬಾಯಿಂದ ಬಾಯಿಗೆ ತಮ್ಮ ಬುಡಕಟ್ಟಿನವರಿಗೆ ಮಾತ್ರವೇ ಹೇಳಲ್ಪಟ್ಟಿದ್ದಾದರಿಂದ ಕೆಲವೇ ಕಥೆಗಳು ಮಾರ್ಪಾಡಾಗಿ ನಮಗೆ ಲಭಿಸಿವೆ. ಈಗೀಗ ಕೆಲವು ಇತಿಹಾಸಕಾರರು ತಾಂಡಕ್ಕೆ ಭೇಟಿಕೊಟ್ಟು ಕಥೆಗಳನ್ನು ಕೇಳಿ ಲಿಖಿತ ರೂಪದಲ್ಲಿ ಬರೆದುಕೊಂಡು ಮತ್ತು ಸಂಗ್ರಹಾಲಯಗಳಿಂದ ಹಾಡು, ಕಥೆಗಳ ವಾಕ್–ಸಂಗ್ರಹದಿಂದ ಲಿಖಿತ ರೂಪಕ್ಕಿಳಿಸಿ, ಪುಸ್ತಕಗಳನ್ನು ನಮಗೆ ತಲುಪಿಸುತ್ತಿದ್ದಾರೆ. ಕಣ್ಮರೆಯಾಗುತ್ತಿದ್ದ ಬಾಯಿಪಾಠದ ಕಥೆಗಳು, ಹಾಡುಗಳೆಲ್ಲಾ ಪುಸ್ತಕ ರೂಪದಲ್ಲಿ ಪ್ರತಿಧ್ವನಿಸುತ್ತಿವೆ. ನನ್ನ ಸಂಶೋಧನೆಯಲ್ಲಿ ಸಿಕ್ಕಿರುವ ಇಲಿನಿ ಸಮುದಾಯದ ಕೆಲವು ಕಥೆಗಳನ್ನು ಇಲ್ಲಿ ಓದುಗರೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಒಂದು ಬಹಳ ಪ್ರಚಲಿತವಾದ ಕಥೆ 'ವಿಸಕತ್ಚೆಕ್ವ' ಎಂಬ ಜಾದೂಗಾರನದು. ಅವನು ತನಗೆ ತಾನೇ ಸಂಕಷ್ಟವನ್ನು ತಂದುಕೊಳ್ಳುವವನೂ ಆಗಿದ್ದ.

ಜಾದೂಗಾರ ವಿಸಕತ್ಜೆಕ್ಷ

ಈ ಜಾದೂಗಾರ ಒಮ್ಮೆ ಹಳ್ಳಿಗಾಡಿನಲ್ಲಿ ಸಂಚರಿಸುತ್ತಾ ಇಬ್ಬರು ಅಂಧರು ವಾಸಿಸುತ್ತಿದ್ದ ಗುಡಿಸಲಿಗೆ ಬರುತ್ತಾನೆ. ಆ ಅಂಧರು ನೀರು ತರಲು ಹೊಳೆಗೆ ಹೋಗುವ ಸಲುವಾಗಿ ದೂರವನ್ನು ಅಳೆಯಲು ಹಗ್ಗವನ್ನು ಕಟ್ಟಿರುತ್ತಾರೆ. ಜಾದೂಗಾರ ಅಂಧರ ಬಳಿ ಬಂದು "ನಾನು ಯಾತ್ರಿಕ, ನಿಮ್ಮೊಂದಿಗೆ ಸ್ವಲ್ಪ ಸಮಯ ತಂಗಿರಬಹುದೇ?" ಎಂದು ಕೇಳುತ್ತಾನೆ. ಅಂಧರು ಸ್ವಲ್ಪ ಯೋಚಿಸಿ, "ನೀನು ನಮಗೆ ಅಡುಗೆ ಮಾಡಿ ಹಾಕುವುದಾದರೆ ಇಲ್ಲಿರಬಹುದು" ಎಂದು ತಿಳಿಸುತ್ತಾರೆ. "ಅದಕ್ಕೇನಂತೆ, ನಿಮಗೆ ಅಡುಗೆ ಮಾಡಿ ಹಾಕಲು ಅಡ್ಡಿ ಇಲ್ಲ" ಎಂದು ಅಂಧರ ಜೊತೆಯಲ್ಲಿ ಉಳಿದುಕೊಳ್ಳುತ್ತಾನೆ. ಒಂದು ದಿನ ಜಾದೂಗಾರ ಅಂಧರನ್ನು "ನೀವು ಹೇಗೆ ಬೇಟೆಯಾಡುತ್ತೀರಿ?" ಎಂದು ಕೇಳುತ್ತಾನೆ. ಅಂಧರು ಈ ಪ್ರಶ್ನೆಗೆ ಉತ್ತರಿಸುವುದಿಲ್ಲ. ಜಾದೂಗಾರನಿಗೆ ಸ್ವಲ್ಪ ಸಮಯದ ನಂತರ ಬೇಜಾರಾಗಿ ನಾನು ಹೊರಡುವೆ ಎಂದು ತಿಳಿಸುತ್ತಾನೆ. ಹೊರಡುವ ಮೊದಲು, ಅಂಧರು ನೀರು ತರಲು ಹೊಳೆಗೆ ಹೋಗಲು ಕಟ್ಟಿದ್ದ ಹಗ್ಗದ ದಿಕ್ಕನ್ನು ಬದಲಿಸಿ ಹೋಗುತ್ತಾನೆ. ಜಾದೂಗಾರ ತನ್ನ ಪ್ರಯಾಣ ಮುಂದುವರೆಸಿದ ನಂತರ ಮತ್ತೆ ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳಬೇಕಾಗಿದ್ದುದರಿಂದ ನೀರು ತರಲು ಹೊಳೆಗೆ ಹೋದವರು, ಜಾದೂಗಾರ ಬದಲಿಸಿದ್ದ ಮಾರ್ಗದ ಹಗ್ಗ ಬೆಟ್ಟದ ತುದಿಯಿಂದ ಅಂಧರು ಉರುಳುವಂತೆ ಮಾಡುತ್ತದೆ. ಅಂಧರಿಗೆ ಈಜಲು ಬರುತ್ತಿತ್ತು ಎಂದು ಕಾಣುತ್ತದೆ, ಹೇಗೋ ದಡವನ್ನು ಸೇರುತ್ತಾರೆ.

ಆಮೇಲೊಂದು ದಿನ ಅಂಧರಿಬ್ಬರೂ ತಂಬಾಕು ಕೊಳವೆಯ ಮೂಲಕ ಸೇದುತ್ತಾ ಕುಳಿತಿರುವಾಗ ಆ ವಾಸನೆಗೆ ಜಾದೂಗಾರ ಹಿಂತಿರುಗಿ ಬರುತ್ತಾನೆ. ಜಾದೂಗಾರ ಅಂಧರ ಮನೆಯನ್ನು ಪ್ರವೇಶಿಸಿದಾಗ ಬಾಗಿಲನ್ನು ಮುಚ್ಚಿ, ಇಬ್ಬರು ಅಂಧರೂ ಸೇರಿ ಕತ್ತಿ ಗುರಾಣಿಗಳಿಂದ ಅಡ್ಡಗಟ್ಟಿ ಹೊಳೆಗೆ ಹೋಗಲು ಕಟ್ಟಿದ್ದ ಹಗ್ಗದ ದಿಕ್ಕನ್ನು ಬದಲಿಸಿದ ಕಾರಣ ಹೇಳೆಂದು ಕೇಳುತ್ತಾರೆ. ತನಗಾಗಿ ಬೆಟ್ಟಕ್ಕೆ ಹಗ್ಗವನ್ನು ಹಾಕಿಕೊಂಡು ಮತ್ತೆ ಹೊಳೆಯ ಕಡೆಗೆ ತಿರುಗಿಸಲು ಮರೆತುಹೋದದ್ದಾಗಿ ತಿಳಿಸುತ್ತಾನೆ. ಆ ತಪ್ಪಿಗಾಗಿ ತನ್ನನ್ನು ಕೊಲ್ಲದಂತೆ ನಿವೇದಿಸಿಕೊಳ್ಳುತ್ತಾನೆ. ಅಂಧರಿಗೆ ಅಡುಗೆಯಲ್ಲಿ ಸಹಾಯ ಮಾಡುತ್ತಾ ಮತ್ತೆ ಕೆಲವಷ್ಟು ಸಮಯವನ್ನು ಅವರೊಂದಿಗೆ ಕಳೆಯುತ್ತಾನೆ.

ಒಂದು ದಿನ ಅಡುಗೆಗಾಗಿ ಬೇಟೆ ತರಲು ಜಾದೂಗಾರ ಕಾಡಿಗೆ ಹೋಗಿರುವಾಗ, ಅಂಧರಿಬ್ಬರೂ ಅವನನ್ನು ಮನೆಯಿಂದ ಹೊರಗೆ ಕಳುಹಿಸಲು ಯೋಚಿಸುತ್ತಾರೆ. ಅವನು ಬೇಟೆಯಿಂದ ಬಂದ ನಂತರ ಅಂಧರು ತಮ್ಮ ನಿರ್ಧಾರವನ್ನು ತಿಳಿಸುತ್ತಾರೆ. ಜಾದೂಗಾರ ಪ್ರಯಾಣಿಕನಾದುದರಿಂದ ತಮಗೆ ಸರಿ ಬರುತ್ತಿಲ್ಲವೆಂದು ಒಬ್ಬ ಅಂಧ ತಿಳಿಸುತ್ತಾನೆ. ಮತ್ತೊಬ್ಬ ಅಂಧ "ನಾವು ಹೇಗೆ ಬೇಟೆಯಾಡುತ್ತೇವೆ ಎಂದು ತಿಳಿಸಿ ಕೊಡುತ್ತೇವೆ ನೀನೂ ಅದೇ ರೀತಿಯಲ್ಲಿ ಬೇಟೆಯಾಡುವೆಯಂತೆ ಬಾ" ಎಂದು ಕರೆಯುತ್ತಾನೆ. "ದೊಡ್ಡ ಕೆರೆ ಹತ್ತಿರ ಹೋಗು, ಅಲ್ಲಿ ಬಹಳಷ್ಟು ಪಕ್ಷಿಗಳು ಇವೆ. ದಾರದಿಂದ ಒಂದೊಂದು ಪಕ್ಷಿಯನ್ನು ನಿನ್ನ ಸೊಂಟಕ್ಕೆ ಕಟ್ಟಿ ತೆಗೆದುಕೊಂಡು ಬಾ. ಮೊದಲು ಆ ಪಕ್ಷಿಗಳ

ಕಾಲುಗಳನ್ನು ಕಟ್ಟುವುದನ್ನು ಶುರು ಮಾಡು" ಎಂದು ತಿಳಿಸುತ್ತಾನೆ. ವಿಸಕತ್ಚೆಕ್ಸ್, ಅಂಥ ತಿಳಿಸಿದಂತೆ ಮಾಡುತ್ತಾನೆ. ಪಕ್ಷಿಗಳನ್ನು ಒಂದೊಂದನ್ನಾಗಿ ತನ್ನ ಸೊಂಟಕ್ಕೆ ಕಟ್ಟಿಕೊಂಡಾಗ ಅವು ಹಾರಲು ಪ್ರಾರಂಭಿಸುತ್ತವೆ. ಅದರೊಂದಿಗೆ ಜಾದೂಗಾರನೂ ಸಹ ನೀರಿನಿಂದ ಮೇಲೆ ಬರುತ್ತಾನೆ. ಹೀಗೆ, ಪಕ್ಷಿಗಳು ಅವನನ್ನು ಆಕಾಶದಲ್ಲಿ ಸುತ್ತಾಡಿಸುತ್ತಾ ಬಹಳ ದಿನಗಳು ಕಳೆಯುತ್ತವೆ. ಜಾದೂಗಾರನಿಗೆ ಕಟ್ಟಿದ್ದ ದಾರವನ್ನು ಕತ್ತರಿಸಲು ಆಗದೇ, ಕಡೆಗೆ ಪಕ್ಷಿಗಳನ್ನು ದಾರವನ್ನು ತುಂಡರಿಸುವಂತೆ ವಿನಂತಿಸಿಕೊಳ್ಳುತ್ತಾನೆ. ಪಕ್ಷಿಗಳು ದಾರವನ್ನು ಕತ್ತರಿಸಿದ ತಕ್ಷಣ ನೆಲಕ್ಕೆ ಬೀಳುತ್ತಾನೆ. ಒಂದು ಮರದ ಬುಡಕ್ಕೆ ಬಂದು ಬೀಳುತ್ತಾನೆ. ಮರ ಪೊಳ್ಳಾಗಿದ್ದುದರಿಂದ ಪೊಟರೆಯೊಳಗೆ ಸಿಲುಕುತ್ತಾನೆ. ಹೀಗೇ, ದಿನಗಳು ಕಳೆಯುತ್ತವೆ. ಕಡೆಗೆ, ಕೆಲವು ಶಿಬಿರಾರ್ಥಿಗಳು ಅವನ ರೋದನವನ್ನು ಕೇಳಿ ಕರಡಿ ಇರಬಹುದೆಂದು ತಿಳಿದು ಮರದ ಪೊಟರೆಯನ್ನು ಒಡೆದು ಕರಡಿಯನ್ನು ಕೊಲ್ಲಲು ನಿರ್ಧರಿಸುತ್ತಾರೆ. ಹೊರಗಿನಿಂದ ಬಂದ ಶಬ್ದ ಕೇಳಿಸಿಕೊಂಡ ಜಾದೂಗಾರ ಹೊರಗೆ ಬರುತ್ತಾನೆ ಎಂಬಲ್ಲಿಗೆ, ಈ ಕಥೆ ಇಲ್ಲಿಗೇ ಮುಗಿಯುತ್ತದೆ.

ವಿಲಕ್ಟ್ವ

ಮಯಾಮಿ ಬುಡಕಟ್ಟಿನ ಜನಾಂಗದಲ್ಲಿ ಪ್ರಚಲಿತವಿದ್ದ ಮತ್ತೊಂದು ಕಥೆ ವಿಲಕ್ಟ್ವ ಎಂಬ ಕೀಟಲೆಗಳನ್ನು ಮಾಡುವವನದ್ದು. ಇದೊಂದೇ ಕಥೆ ಈತನ ಬಗ್ಗೆ ದಾಖಲಿಸಲ್ಪಟ್ಟಿರುವುದು. ಬುಡಕಟ್ಟಿನ ಜನರಲ್ಲಿ ಬಹಳ ಕಥೆಗಳು ಈ ಕೀಟಲೆ ಮಾಡುವವನ ಬಗ್ಗೆ ಪ್ರಚಲಿತವಾಗಿದ್ದರೂ ಲಿಖಿತ ರೂಪದಲ್ಲಿ ದೊರೆತಿರುವ ಇದೊಂದೇ ಸಣ್ಣ ಕಥೆ.

ವಿಲಕ್ಟ್ವ ಬೇಟೆಗಾಗಿ ಹೊರಡುವಾಗ ತನ್ನ ಹೆಂಡತಿಯನ್ನೂ ಜೊತೆಗೆ ಕರೆದುಕೊಂಡು, ದೊಡ್ಡ ಕೆಟಲ್, ಮರದ ಸೌಟು, ಜೋಳ ಮತ್ತು ದನದ ಮಾಂಸ ಎಲ್ಲವನ್ನೂ ಜೊತೆಯಲ್ಲಿ ಇಟ್ಟುಕೊಂಡಿರುವುದನ್ನು ಅಭ್ಯಾಸ ಮಾಡಿಕೊಂಡಿರುತ್ತಾನೆ.

ಒಮ್ಮೆ ಅಡುಗೆ ಮಾಡುತ್ತಿರುವಾಗ, ತಾನಿದ್ದ ಕಡೆಗೆ ಸೈನಿಕರು ಬರುವ ಸಪ್ಪಳ ಕೇಳಿಸುತ್ತದೆ. ತಾನು ಜೊತೆಯಲ್ಲಿ ತಂದಿದ್ದ ಜೋಳವನ್ನು ಬೇಯಲು ಹಾಕಿ ಕುದಿ ಬಂದ ನಂತರ ದನದ ಮಾಂಸವನ್ನು ಸೇರಿಸಿ ಇನ್ನೇನು ಸೇವಿಸಲು ಬಟ್ಟಲುಗಳನ್ನು ಜೋಡಿಸಿಕೊಳ್ಳುವಾಗ ಸೈನಿಕರು ಇವನಿದ್ದೆಡೆಗೆ ಬರುತ್ತಾರೆ. ಅತಿಥಿದೇವೋ ಭವ ಎಂಬ ಭಾವನೆಯಿಂದ "ತಾವು ಮೊದಲು ಊಟವನ್ನು ಸ್ವೀಕರಿಸುವವರಾಗಿ" ಎಂದು ದೈನ್ಯದಿಂದ ಉಪಚರಿಸುತ್ತಾನೆ. ಇದ್ದಕ್ಕಿದ್ದಂತೆ, ಊಟದ ಮಧ್ಯೆ ಪಾತ್ರೆಯಲ್ಲಿದ್ದ ಕುದ್ದ ತಿಳಿಸಾರನ್ನು ಸೈನಿಕರ ಮುಖಕ್ಕೆ ಎರಚಿ ಬಿಡುತ್ತಾನೆ. ಬಿಸಿ ಸಾರು ಕಣ್ಣಿಗೆ ಬಿದ್ದು ಕುರುಡರಾದ ಸೈನಿಕರನ್ನು ಬಡಿದು ಸಾಯಿಸುತ್ತಾನೆ. ಅಷ್ಟರಲ್ಲಿ ಮತ್ತೊಂದು ಸೈನಿಕರ ದಂಡು ತಾನಿರುವ ಜಾಗಕ್ಕೆ ಬರುವುದನ್ನು ಕಾಣುತ್ತಾನೆ. ವಿಲಕ್ಟ್ವ ಬೆಟ್ಟದ ಮೇಲೇರಿ ಹೋಗಿ ಸೈನಿಕರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅವನಿಲ್ಲದಿರುವುದನ್ನು ಗಮನಿಸಿದ ಸೈನಿಕರು ಇವನ ಹೆಂಡತಿಯನ್ನು ಎತ್ತಿಕೊಂಡು ಹೋಗುತ್ತಾರೆ. ಅವಳ ಅಳು ಮತ್ತು ಕಿರುಚಾಟ ಕೇಳಿ ಹೆಂಡತಿಯನ್ನು ಅಪಹರಿಸಿದ್ದಾರೆನ್ನುವುದು ಅವನಿಗೆ ಖಾತರಿಯಾಗುತ್ತದೆ.

ವಿಲಕ್ಟ್ವ ಒಂದು ಕಾಡೆಮ್ಮೆಯನ್ನು ಕೊಂದು ಅದರ ರಕ್ತವನ್ನು ಎಮ್ಮೆಯ ಹೊಟ್ಟೆಗೆ ಸವರಿ, ಆ ಭಾಗವನ್ನು ತನ್ನ ತಲೆಗೆ ಟೋಪಿಯ ಮಾದರಿಯಲ್ಲಿ ಧರಿಸಿ, ರಸ್ತೆ ಮಧ್ಯದಲ್ಲಿ ಸೈನಿಕರು ಹೋಗುವ ಮಾರ್ಗದಲ್ಲಿ ಮಲಗಿಕೊಳ್ಳುತ್ತಾನೆ. ಸೈನಿಕರು ತಮ್ಮ ಮಾರ್ಗದ ಮಧ್ಯೆ ಬಿದ್ದಿರುವ ವಸ್ತು ಏನೆಂದು ನೋಡಲು ಹತ್ತಿರಕ್ಕೆ ಬಂದಾಗ ಜೋರಾಗಿ ಗುಟುರು ಹಾಕಿ ಸೈನಿಕರ ಮೇಲೆ ಎರಗುತ್ತಾನೆ. ಹೆದರಿದ ಸೈನಿಕರು ಮೂರ್ಛೆ ಹೋಗುತ್ತಾರೆ. ತಕ್ಷಣ ಎಲ್ಲ ಸೈನಿಕರನ್ನೂ ಕೊಲ್ಲುತ್ತಾನೆ. ವಿಲಕ್ಟ್ವ ತನ್ನ ಹೆಂಡತಿಯನ್ನು ಕರೆದುಕೊಂಡು ಹಿಂತಿರುಗಿ ತನ್ನ ಬಿಡಾರದ ಸ್ಥಳಕ್ಕೆ ವಾಪಸ್ಸಾಗುತ್ತಾನೆ. ವಾಪಸ್ಸಾದ ಕೆಲ ಕ್ಷಣಗಳಲ್ಲಿ ವಿಲಕ್ಟ್ವನೂ ಸಾವನ್ನಪ್ಪುತ್ತಾನೆ. ಹೆಂಡತಿ ಅವನನ್ನು ಗುಂಡಿ ತೋಡಿ ಮಣ್ಣು ಮಾಡುತ್ತಾಳೆ. ನಾಲ್ಕು ದಿನಗಳ ನಂತರ ಅವನನ್ನು ಗುಂಡಿಯಿಂದ ತೆಗೆಯಲು ನೋಡಿದಾಗ ವಿಲಕ್ಟ್ವ ಅಲ್ಲಿರುವುದಿಲ್ಲ, ಬರಿ ಗುಂಡಿ ಮಾತ್ರವೇ ಇರುವುದು ಎಂಬಲ್ಲಿಗೆ ಈ ಸಣ್ಣ ಕಥೆಯು ಮುಗಿಯುತ್ತದೆ.

ನಾನಾಬೊಹೊ (ಶಕ್ತಿಯ ಪ್ರತೀಕ) ಮತ್ತು ಮತ್ಸ್ಯರಾಜ

ಬಹಳ ಹಿಂದೆ ಒಬ್ಬ ಅಜ್ಜಿ ಮತ್ತು ಮೊಮ್ಮಗ ಇಬ್ಬರೂ ಒಟ್ಟಿಗೆ ಜೀವನ ನಡೆಸುತ್ತಿರುತ್ತಾರೆ. ಅಜ್ಜಿಯ ಹೆಸರು ನಕೋಮಿ. ಮೊಮ್ಮಗನನ್ನು ಕರೆದು ಒಂದು ದಿನ ನಕೋಮಿ "ನಾನಾ, ನನ್ನ ಕೂದಲು ಎಣ್ಣೆ ಇಲ್ಲದೇ ಉದುರಿಹೋಗುತ್ತಿದೆ. ನಿನ್ನ ತಾತ ತಂದು ಕೊಟ್ಟಿದ್ದ ಎಣ್ಣೆ ಎಲ್ಲ ಮುಗಿದುಹೋಗಿದೆ. ನಿನಗೆ ಶಾಲೆಗೆ ಹೇಗೂ ಇನ್ನೂ ರಜೆ ಇರುವುದರಿಂದ ನನಗೆ ಎಣ್ಣೆ ತರಲು ಸಹಾಯ ಮಾಡುವೆಯಾ?" ಎಂದು ಕೇಳುತ್ತಾಳೆ. ನಾನಾ "ಸರಿ, ಏನು ಮಾಡಬೇಕು ಹೇಳಜ್ಜಿ" ಎನ್ನುತ್ತಾ ಬಂದು ಕೂರುತ್ತಾನೆ. ನಕೋಮೀ "ಮಹಾ ಸರೋವರದ ಉತ್ತರ ದಿಕ್ಕಿನಲ್ಲಿ ಹೋದರೆ ಮೆಶೆನ- ಮಗ್ವೈರ್ ಎಂಬ ಮತ್ಸ್ಯರಾಜನಿದ್ದಾನೆ. ಅವನನ್ನು ಕೊಂದು ನನ್ನ ಮುಂದೆ ತಂದು ನಿಲ್ಲಿಸು. ನಂತರ, ಅವನನ್ನು ಬೇಯಿಸಿ ಎಣ್ಣೆಯನ್ನು ತೆಗೆದು ವರ್ಷಗಳಿಗಾಗುವಷ್ಟು ಶೇಖರಿಸಿಟ್ಟುಕೊಳ್ಳುವೆ ಮತ್ತೂ ಎಲ್ಲರಿಗೂ ಹಂಚಬಹುದು ಸಹ" ಎಂದು ತಿಳಿಸುತ್ತಾಳೆ.

ನಾನಾ "ಆಯ್ತು ಅಜ್ಜಿ, ನೀನು ಗಾಳವನ್ನು ಸಿದ್ಧಪಡಿಸು, ನಾನು ದೋಣಿಯನ್ನು ಮಾಡಲು ಮರವನ್ನು ತರುವೆ" ಎಂದು ಕಾಡಿಗೆ ಹೋಗುತ್ತಾನೆ. ಹತ್ತಿರದ ಬೆಟ್ಟದ ಮೇಲೆ ಕುಳಿತು ತನ್ನಲ್ಲಿ ಶಕ್ತಿ ತುಂಬಿ ಅಜ್ಜಿಯ ಕೆಲಸವನ್ನು ಯಶಸ್ವಿಯಾಗಿ ಮುಗಿಸಲು ಪ್ರೇರೇಪಿಸೆಂದು ತನ್ನಲ್ಲಿ ಅಡಗಿದ್ದ ಶಕ್ತಿಯನ್ನು ಆಹ್ವಾನಿಸಿ ಮರ ಹುಡುಕಲು ಪ್ರಾರಂಭ ಮಾಡುತ್ತಾನೆ. ನಾಲ್ಕು ದಿನಗಳು ಏನೂ ತಿನ್ನದೆ, ಕುಡಿಯದೇ ಶ್ರಮವಹಿಸಿ ನುಣುಪಾದ ಮರದ ತೊಗಟೆಯಿಂದ ದೋಣಿಯನ್ನು ತಯಾರು ಮಾಡಿ, ದೋಣಿಯನ್ನು ನಡೆಸಲು ಹುಟ್ಟನ್ನೂ ಸಹ ತಯಾರಿಸಿ ಮನೆಗೆ ವಾಪಸ್ಸಾಗುತ್ತಾನೆ.

ಅಜ್ಜಿ ತಯಾರಿಸಿಟ್ಟಿದ್ದ ಗಾಳ ತೆಗೆದುಕೊಂಡು ಮಹಾ ಸರೋವರಕ್ಕೆ ಹೋಗುವ ದಾರಿ ಹಿಡಿಯಲು ನದಿಯ ಮಾರ್ಗದಲ್ಲಿ ಹುಟ್ಟು ಹಾಕುತ್ತಾ ಸಾಗುತ್ತಾನೆ. ಮಹಾ ಸರೋವರದ ಮಧ್ಯೆ ದೋಣಿಯನ್ನು ನಿಲ್ಲಿಸಿ, ಗಾಳವನ್ನು ನೀರಿಗೆ ಇಳಿಸಿ ಎತ್ತರದ

ಧ್ವನಿಯಲ್ಲಿ "ಮೆಶೆನ – ಮಗ್ವೆ, ಮತ್ಸ್ಯ ರಾಜನೇ, ನನ್ನ ಗಾಳವನ್ನು ಸರೋವರದ ಬುಡಕ್ಕೆ ತೆಗೆದುಕೊಂಡು ಹೋಗು" ಎಂದು ಕೂಗಿ ಹೇಳುತ್ತಾನೆ. ಮತ್ಸ್ಯರಾಜನಿಗೆ ನಾನಾಬೊಹೊನ ಕೂಗು ಕೇಳಿಸುತ್ತದೆ. ಬೇರೆಯ ಮೀನನ್ನು ಕರೆದು "ಮೇಲೆ ಹೋಗಿ ಯಾರು ಇಷ್ಟು ಏರು ಧ್ವನಿಯಲ್ಲಿ ನನ್ನನ್ನು ಮಾತನಾಡಿಸುತ್ತಿದ್ದಾನೆ, ನೋಡಿಕೊಂಡು ಬಾ" ಅನ್ನುವಾಗ ನಾನಾಗೆ ಯಾರೋ ತಾನು ಹಿಡಿದಿರುವ ಗಾಳವನ್ನು ಬಿಗಿಯಾಗಿ ಹಿಡಿದು ಜಗ್ಗಿದ ಅನುಭವವಾಗುತ್ತದೆ. ಆ ರಭಸಕ್ಕೆ, ಮತ್ಸ್ಯರಾಜನೇ ಬಂದನೆಂದು, ಇನ್ನಾರಿಗೂ ಇಷ್ಟು ಶಕ್ತಿ ಇರಲಾರದೆಂದುಕೊಂಡು ಗಾಳವನ್ನು ಜೋರಾಗಿ ಎಳೆದರೆ ನಾನಾಬೊಹೊನ ದೋಣಿ ಮೇಲಕ್ಕೆ ಎದ್ದು ನಿಲ್ಲುತ್ತದೆ. ತಾನು ಗಟ್ಟಿಯಾಗಿ ನಿಲ್ಲಲು ಕಾಲುಗಳನ್ನು ಭದ್ರವಾಗಿ ಊರಿ ನೋಡಿದಾಗ, ಮಧ್ಯಮ ಶರೀರದ ಮೀನು ಕಾಣಿಸುತ್ತದೆ. "ಇಷ್ಟಿದ್ದೀಯಾ ನೀನು, ನೋಡಲೂ ಸಹ ಸುಮಾರಾಗಿದ್ದೀಯಾ.. ನೀನು ಮತ್ಸ್ಯರಾಜನಾಗಲು ಹೇಗೆ ಸಾಧ್ಯ? ನಿನ್ನ ಆ ರಾಜನಿಗೆ ನನ್ನನ್ನು ಕಂಡರೆ ಭಯ ಅನ್ನಿಸುತ್ತೆ ಹೋಗಿ ಹೇಳವನಿಗೆ" ಅನ್ನುತ್ತಾನೆ ನಾನಾಬೊಹೊ.

ಈ ಮೀನು ಕೆಳಗೆ ಸರೋವರದಲ್ಲಿ ಮತ್ಸ್ಯರಾಜನಿಗೆ "ರಾಜಾ, ಅವನು ನಾನಾಬೊಹೊ, ಒಂದು ಸ್ವಲ್ಪವೂ ಸಂಸ್ಕಾರವಿಲ್ಲದ ಮನುಷ್ಯ. ನಿಮ್ಮನ್ನು ಕೆಟ್ಟ ಮಾತುಗಳಿಂದ ಬಯ್ಯುತ್ತಾನೆ. ನಿಮಗೆ ಅವನನ್ನು ಕಂಡರೆ ಭಯವಂತೆ ಹಾಗಾಗಿ ಮೇಲೆ ಬರುತ್ತಿಲ್ಲ ಎಂದು ದೂರುತ್ತಿದ್ದಾನೆ" ಎಂದು ವರದಿ ಒಪ್ಪಿಸುತ್ತದೆ. ಮತ್ಸ್ಯರಾಜ, "ಹಾಗೇನು ಸಮಾಚಾರ?" ಎನ್ನುತ್ತಾ, ಮೊದಲು ಕಳುಹಿಸಿದ ಮೀನಿಗಿಂತ ಇನ್ನೂ ಸ್ವಲ್ಪ ದಪ್ಪಗಿನ ಮೀನನ್ನು ಕರೆದು "ಈ ಬಾರಿ ನೀನು ಹೋಗಿ ಮತ್ಸ್ಯರಾಜನನ್ನು ಹೇಗೆ ಮಾತನಾಡಿಸಬೇಕೆಂಬ ಸಂಸ್ಕಾರವನ್ನು ಕಲಿಸಿ ಬಾ" ಎಂದು ತಿಳಿಸುತ್ತಾನೆ. ಸರೋವರದ ತಳದಿಂದ ಮೇಲಕ್ಕೆ ಬಂದ ಈ ಮೀನು ನಾನಾಬೊಹೊ ಕೂಗುತ್ತಿದ್ದ "ಮತ್ಸ್ಯರಾಜ, ನನ್ನ ಗಾಳವನ್ನು ಸರೋವರದ ತಳಕ್ಕೆ ತೆಗೆದುಕೊಂಡು ಹೋಗು" ಅನ್ನುವ ಮಂತ್ರ ಕೇಳಿಸಿಕೊಂಡು, ಗಾಳವನ್ನು ಸುತ್ತ ತಿರುಗಿಸುತ್ತದೆ. ಸರೋವರವೆಲ್ಲ ನೊರೆನೊರೆಯಾಗಿ ನಾನಾಬೊಹೊನ ದೋಣಿ ಗಿರ್ಕಿ ಹೊಡೆಯುತ್ತದೆ. ಮತ್ತೆ, ದೋಣಿ ಮತ್ತು ಅದರಲ್ಲಿರುವ ನಾನಾಬೊಹೊಗೆ ಸ್ಥಿಮಿತವನ್ನು ಕಳೆದುಕೊಳ್ಳುವ ಅನುಭವವಾಗುತ್ತದೆ.

ನಾನಾಬೊಹೊನಿಗೆ ತನ್ನ ದೋಣಿ ಸರೋವರದ ತಳಕ್ಕೆ ಹೋಗುತ್ತಿರುವ ಹಾಗೆ ಅನ್ನಿಸುತ್ತೆ. ಆದರೆ, ನಾನಾಬೊಹೊ ಶಕ್ತಿವಂತನಾದ್ದರಿಂದ ತನ್ನನ್ನು ಮತ್ತು ದೋಣಿ ಎರಡನ್ನೂ ಮೇಲೆಯೇ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. ಇಷ್ಟು ಕಷ್ಟಪಟ್ಟು ದೋಣಿಯನ್ನು ತನ್ನನ್ನೂ ಸಂಬಾಳಿಸಿಕೊಳ್ಳಲು ಹರಸಾಹಸ ಪಡುವ ಹಾಗೆ ಮಾಡಿದ್ದರಿಂದ ಈಗ ಮತ್ಸ್ಯರಾಜನೇ ಬಂದಿದ್ದಾನೆ ಅಂದುಕೊಳ್ಳುತ್ತಾನೆ. ಆದರೆ ಆ ಮೀನನ್ನು ನೋಡಿ "ಅರೇ, ನೀನು ಮತ್ಸ್ಯರಾಜನಾಗಿರಲು ಸಾಧ್ಯವೇ ಇಲ್ಲ! ನಿನ್ನ ರಾಜ ನನ್ನನ್ನು ಭೇಟಿಯಾಗಲು ತತ್ತರಿಸಿ ಹೋಗಿರಬೇಕು, ಅದಕ್ಕಾಗಿಯೇ ಮೇಲೆ ಬರುತ್ತಿಲ್ಲ. ಕೆಳಗೆ ಹೋಗಿ ಕಳುಹಿಸು ನಿನ್ನ ರಾಜನನ್ನು" ಎಂದು ಗಾಳವನ್ನು ರಭಸದಿಂದ ಕೆಳಗೆ ನೀರಿನಲ್ಲಿ ಬಿಸಾಡುತ್ತಾನೆ.

ತಕ್ಷಣ, ತಳ ಸೇರಿಸಿದ ಮೀನು "ಮತ್ಸ್ಯರಾಜ ನಿಮಗೆ ಅವನನ್ನು ಕಂಡರೆ ಭಯವಂತೆ, ನಿನ್ನನ್ನು ಬಾಯಿಗೆ ಬಂದ ಹಾಗೆ ಬೈಯುತ್ತಿದ್ದಾನೆ. ನೀನು ಯಾವ ರಾಜಾ, ನಿನಗೆ ಏನೂ ಮಹತ್ವವಿಲ್ಲ ಎಂದ" ಎಂದು ಹೇಳಿತು.

"ಹೀಗೋ ಸಮಾಚಾರ, ಈ ಸಮಸ್ಯೆಯನ್ನು ನಾನೇ ಪರಿಹಾರ ಮಾಡಬೇಕು" ಎಂದು ನಿಧಾನವಾಗಿ ಮೇಲೆ ಬರಲಾರಂಭಿಸಿದ ಮತ್ಸ್ಯರಾಜ ನಾನಾಬೊಹೊ ಬೊಬ್ಬೆ ಹಾಕುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಾನೆ. ತನ್ನ ರಭಸವನ್ನು ಹೆಚ್ಚಿಸಿದ ಕಾರಣ ಮತ್ಸ್ಯರಾಜ ಸರೋವರದ ನೀರನ್ನು ಉಕ್ಕಿ ಎಲ್ಲ ಕಡೆಯೂ ನೀರು ಚೆಲ್ಲುವಂತೆ ಮಾಡುತ್ತಾನೆ.

ಎಲ್ಲಿ ನೋಡಿದರಲ್ಲಿ ನೀರು ಆವರಿಸಿಕೊಳ್ಳುತ್ತದೆ. ಒಂದೇ ಬಾರಿಗೆ ನಾನಾಬೊಹೊ ಅವನ ದೋಣಿ, ಹುಟ್ಟು ಎಲ್ಲವನ್ನೂ ನುಂಗುತ್ತಾನೆ ಮತ್ಸ್ಯರಾಜ. ಮತ್ಸ್ಯರಾಜನ ಹೊಟ್ಟೆಯಲ್ಲಿ ಕತ್ತಲು ಮತ್ತು ಹೊಟ್ಟೆಯ ಮಾಂಸಖಂಡಗಳ ಅದರುವಿಕೆ ಪ್ರತಿಧ್ವನಿಸುತ್ತದೆ. ಆ ಪ್ರತಿಧ್ವನಿಯ ಅಬ್ಬರ ನಾನಾಬೊಹೊ ಮೈಯನ್ನು ಭೂಕಂಪನದಲ್ಲಿ ಸಿಕ್ಕಿ ಹಾಕಿಕೊಂಡಂಥಾ ಅನುಭವವನ್ನು ನೀಡುತ್ತದೆ. ನಾನಾಬೊಹೊ ಈ ಶಬ್ದ ಮತ್ಸ್ಯರಾಜನ ಹೃದಯದಿಂದ ಬರುತ್ತಿರುವುದನ್ನು ಆಲಿಸುತ್ತಾನೆ. ತನ್ನ ಹರಿತವಾದ ಆಯುಧ ಸೊಂಟದ ಪಟ್ಟಿಗೆ ಸಿಕ್ಕಿಸಿಕೊಂಡಿದ್ದು ಎಲ್ಲಿ ಎಂದು ಹುಡುಕಿದಾಗ ಅದು ಕೆಳಗೆ ಜಾರಿದ್ದು ನೋಡಿ, ಅದನ್ನು ತೆಗೆದುಕೊಂಡು ಮತ್ಸ್ಯರಾಜನ ಹೃದಯಕ್ಕೆ ಚುಚ್ಚುತ್ತಾನೆ. ಆಗ ಬರುತ್ತಿದ್ದ ಶಬ್ದವೂ ಸಂಪೂರ್ಣ ನಿಂತುಹೋಗುತ್ತದೆ. ಈ ಹರಿತವಾದ ಆಯುಧವಿಲ್ಲದೆ ನಾನಾಬೊಹೊ ಎಂದೂ ಮನೆ ಬಿಟ್ಟು ಹೋಗುತ್ತಿರಲಿಲ್ಲ.

ಸರೋವರದ ಅಲೆಗಳು ಮತ್ಸ್ಯರಾಜನನ್ನು ದಂಡೆಯ ಮರಳಿನ ಮೇಲೆ ನೂಕುತ್ತವೆ. ನಾನಾಬೊಹೊ ತನ್ನ ಯುದ್ಧವನ್ನು ಗೆದ್ದ ಖುಷಿಯಲ್ಲಿ ಮೀನಿನ ಹೊಟ್ಟೆಯಿಂದ ಹೊರಕ್ಕೆ ಬರುವ ಮಾರ್ಗವನ್ನು ಹುಡುಕುತ್ತಾನೆ. ಮತ್ಸ್ಯರಾಜನ ಬಾಯಿ ಗಟ್ಟಿಯಾಗಿ ಮುಚ್ಚಿರುತ್ತದೆ.

ನಾನಾಬೊಹೊ ಒಳಗೆ ಸಿಕ್ಕಿಹಾಕಿಕೊಂಡು ಹಸಿವಿನಿಂದ ಇಲ್ಲಿಯೇ ಸಾಯುತ್ತೇನೆಂದು ಗಾಬರಿಯಾಗುತ್ತಾನೆ. ಅಷ್ಟರಲ್ಲಿ ಕ್ಷೀಣವಾದ ಧ್ವನಿ ಕೇಳಿಸುತ್ತದೆ. ಒಂದು ಅಳಿಲು ಮೀನನ್ನು ಕಡಿಯುತ್ತಿರುವುದು ಗೊತ್ತಾಗುತ್ತದೆ ಆದರೆ, ತೂತು ಸಣ್ಣದಾಗಿದ್ದು ನಾನಾಬೊಹೊ ಹೊರಗೆ ಬರಲು ಆಗುತ್ತಿರಲಿಲ್ಲ. ಇನ್ನೂ ಸ್ವಲ್ಪ ಸಮಯದ ನಂತರ ಸಮುದ್ರ ಹಕ್ಕಿಗಳು ಮೀನನ್ನು ಕುಕ್ಕತೊಡಗುತ್ತವೆ. ಅಳಿಲು ಮತ್ತು ಸಮುದ್ರ ಹಕ್ಕಿಗಳು ಸೇರಿ ಮಾಡಿದ ರಂಧ್ರದಿಂದ ನಾನಾಬೊಹೊ ಹೊರಕ್ಕೆ ಬರುವುದು ಸಾಧ್ಯವಾಗುತ್ತದೆ. ಅಳಿಲು ಮತ್ತು ಈ ಹಕ್ಕಿ–ಪಕ್ಷಿಗಳಿಗೆ ವಂದಿಸಿ ಮತ್ಸ್ಯರಾಜನನ್ನು ನಾವೆಗೆ ಕಟ್ಟಿಕೊಂಡು ಅಜ್ಜಿಯ ಮನೆ ಕಡೆಗೆ ಹೊರಡುತ್ತಾನೆ.

ಅಜ್ಜಿ ನಕೋಮಿ ಬಹಳ ಹರ್ಷದಿಂದ ಮೊಮ್ಮಗನನ್ನು ಎದುರುಗೊಂಡು ಮತ್ಸ್ಯರಾಜನನ್ನು ನೋಡಿ ಸಂಭ್ರಮಿಸುತ್ತಾಳೆ. ಮೆಶೆನ ಮಗ್ವೈ ಎಂಬ ಈ ಮತ್ಸ್ಯರಾಜನನ್ನು ಕುದಿಯುವ ನೀರಿನಲ್ಲಿ ಹಾಕಿ ಎಣ್ಣೆ ತೆಗೆಯಲು ಪ್ರಾರಂಭಿಸುತ್ತಾಳೆ. ಎಣ್ಣೆ ಎಷ್ಟು ಸಿಕ್ಕಿತೆಂದರೆ ಒಂದು ಸರೋವರವನ್ನೇ ನಿರ್ಮಾಣ ಮಾಡುತ್ತದೆ. ಅಜ್ಜಿಗೆ ಮತ್ತು ಹಳ್ಳಿಯ ಎಲ್ಲ

ಜನರಿಗೂ ಯುಗಗಳಿಗಾಗುವಷ್ಟು ಎಣ್ಣೆ ಸಿಗುತ್ತದೆ. ಮುಂದೆ ಬಹಳ ವರ್ಷಗಳು ತಲೆಗೆ ಎಣ್ಣೆ ಇಲ್ಲ ಎಂಬ ಕೊರಗು ಈ ಗ್ರಾಮದಲ್ಲಿ ಕೇಳಿ ಬರುವುದೇ ಇಲ್ಲ.

ಆಧಾರ

1. Algonquian Spirit - Brian Swann.
2. American Indian Trickster Tales - Richard Erdoes, Alfonso Ortiza.
3. Voices of the winds: Native American Legends - Margot Edmonds, Ella. E. Clark.
4. The Myths and Legends of the First Peoples of the Americas - Joanne Randolph
5. Illini Confederacy - Jennifer Lee.
6. Encyclopedia of North American Indians - Edited by Frederick E . Hoxi .

❑

29

ಜನಪದ ವೈದ್ಯ – ಕೆಲವು ಸೌತ್ ಇಂಡಿಯನ್ ಮತ್ತು ರೆಡ್ ಇಂಡಿಯನ್ ಮನೆಮದ್ದುಗಳು

ಜ್ಯೋತಿ ಮಹಾದೇವ್
ಮಣಿಪಾಲ

*

ಪ್ರಸ್ತಾವನೆ

ಆರೋಗ್ಯ–ಸಂಪತ್ತಿಗೆ ಮಿಗಿಲಾದ ಸಂಪತ್ತಿಲ್ಲವೆಂಬುದು 2020ರ ಆದಿಯಿಂದಲೇ ಪ್ರಪಂಚದಾದ್ಯಂತ ಪ್ರಜ್ಞಾವಂತರಿಗೆ ಪುನಃಮನವರಿಕೆಯಾಗಿದೆ. ಆರೋಗ್ಯಭಾಗ್ಯವನ್ನು ದೇಹದಲ್ಲಿಯೇ ಇರಿಸಿಕೊಳ್ಳುವುದಕ್ಕಾಗಿ ಇನ್ನಿಲ್ಲದ ಕಸರತ್ತುಗಳನ್ನು ಮಾಡುತ್ತ ಬಂದಿದೆ ಈ ಮಾನವ ಜನಾಂಗ. ಮನುಷ್ಯ ಜೀವನದಲ್ಲಿ ಸಮಸ್ಯೆಗಳಿಗೆ ನೋವು–ತೊಂದರೆಗಳಿಗೆ ಕಾಯಿಲೆ ಕಸಾಲೆಗಳಿಗೆ ಮಿತಿಯೆಂಬುದಿಲ್ಲ. ಲಕ್ಷಾಂತರ ವರುಷಗಳಿಂದ ಪ್ರಕೃತಿಯ ಭಾಗವಾಗಿರುವ ಮನುಜನಿಗೆ ದೇಹದೊಳಗಿನ ಅಥವಾ ಹೊರಗಿನ ಪ್ರಕೃತಿಯ ಏರುಪೇರಿನಿಂದಾಗಿ ಆರೋಗ್ಯದಲ್ಲಿ ಏರುಪೇರಾಗುವುದು ಸಹಜವೇ. ಅದನ್ನು ಮತ್ತೆ ಸಮತೋಲನಕ್ಕೆ ತರಲು ಪ್ರಕೃತಿಯ ಭಾಗಗಳಾದ ಗಿಡಮೂಲಿಕೆಗಳೇ ಬೇಕು. ಅನಾದಿ ಕಾಲದಿಂದಲೂ ತನ್ನ ಸುತ್ತಲ ಪ್ರಕೃತಿಯಿಂದ ತನ್ನ ಸ್ವಾಸ್ಥ್ಯಕ್ಕೆ ಅಗತ್ಯವೆನಿಸುವ ಸಂಪನ್ಮೂಲಗಳನ್ನು– ಅರಿವಿದ್ದೋ ಇಲ್ಲದೆಯೋ (ಆಕಸ್ಮಿಕವಾಗಿಯೋ) ಬಳಸಿ, ಒಳಿತು ಕೆಡುಕುಗಳನ್ನು ಕಂಡುಕೊಂಡು, ಬೇಕಾದುದನ್ನು ಉಳಿಸಿ–ಬೆಳೆಸಿಕೊಂಡು ಬಂದ ಜೀವಿ–ಮಾನವ. ಸಾವಿರಾರು ವರುಷಗಳ ಕಾಲ ಅವನ್ನೆಲ್ಲವನ್ನೂ ಮೌಖಿಕವಾಗಿಯೇ ತಲೆಮಾರಿನಿಂದ ತಲೆಮಾರಿಗೆ ಪರಂಪರಾನುಗತವಾಗಿಸಿದ್ದಾರೆ ಹಿಂದಿನವರು. ಸಂಸ್ಕೃತಿಯ ಭಾಗವಾಗಿ ಬೆಳೆಯುತ್ತ ಬಂದಿರುವ ಸಾವಿರಾರು ವಿಧಿವಿಧಾನಗಳಲ್ಲಿ ಆರೋಗ್ಯಸೂತ್ರಗಳೂ ಹಲವಾರು. ಅವುಗಳೆಲ್ಲವೂ, ಪ್ರಪಂಚದ ಎಲ್ಲ ಭೂಭಾಗಗಳ ಮೂಲಜನಾಂಗಗಳಲ್ಲಿ,

ಸರಿಸುಮಾರಾಗಿ ಹೋಲಿಕೆಯುಳ್ಳವುಗಳಾಗಿರುವುದು ಮಾನವ ಜನಾಂಗೀಯ ಬೆಳವಣಿಗೆಯ ಅಧ್ಯಯನದಲ್ಲಿ ಗಮನಿಸಿಕೊಳ್ಳಲೇಬೇಕಾದ ಕೌತುಕಮಯ ಅಂಶವಾಗಿರುತ್ತದೆ.

ಪ್ರಪಂಚದ ಎಲ್ಲ ಮುಖ್ಯ ಭೂಭಾಗಗಳ ಮೂಲಜನಾಂಗ ಎಂದೇನಾದರೂ ಈ ಲೇಖನದ ವ್ಯಾಪ್ತಿಗೆ ಉತ್ತರ ಅಮೆರಿಕ ಖಂಡದ ಅಮೆರಿಕ ಸಂಯುಕ್ತ ಸಂಸ್ಥಾನವೆಂಬ ಬಹುದೊಡ್ಡ ಭೂಭಾಗವೊಂದರ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರೆಂದು ಗುರುತಿಸಿಕೊಂಡಿರುವ ಹಲವು ಜನಾಂಗಗಳಲ್ಲಿ ಕೆಲವರ ವೈದ್ಯ ಪದ್ಧತಿಯನ್ನೂ, ದಕ್ಷಿಣ ಭಾರತೀಯ ಜನಪದ ವೈದ್ಯ ಪದ್ಧತಿ – ಅದರಲ್ಲೂ ಕರ್ನಾಟಕದ ಕರಾವಳಿ ಭಾಗದಲ್ಲಿ ಈಗಲೂ ಪ್ರಚಲಿತವಿರುವ (ನನ್ನ ಅರಿವಿನ ವ್ಯಾಪ್ತಿಗೆ ದಕ್ಕಿರುವ) ಕೆಲವು ಮನೆಮದ್ದುಗಳನ್ನೂ ಎದುರುಬದುರಾಗಿಸುವ ಪುಟ್ಟ ಪ್ರಯತ್ನ ಇಲ್ಲಿದೆ. ಇವೆರಡೂ ಪದ್ಧತಿಗಳ ಕುರಿತಾಗಿ ಇದು ಸಮಗ್ರ ಅಧ್ಯಯನವಲ್ಲ. ಸಾಗರದ ಮುಂದೆ ನಿಂತು ಬೊಗಸೆಯಲ್ಲಿ ನೀರೆತ್ತಿಕೊಳ್ಳುವ ಕಾರ್ಯವಿದಾಗಿದೆ. ಎರಡೂ ನಾಡುಗಳ ಜನಪದ ವೈದ್ಯದಲ್ಲಿರುವ ನಂಬಿಕೆ–ಆಚರಣೆಗಳಲ್ಲಿನ ಸಾಮ್ಯ–ವ್ಯತ್ಯಾಸಗಳು, ಈ ಕುರಿತಾಗಿ ಯಾರಾದರೂ ಆಸಕ್ತರು ವಿಸ್ತೃತ ಅಧ್ಯಯನ ಮತ್ತು ಸಂಶೋಧನೆ ಕೈಗೊಳ್ಳಬಹುದಾದಷ್ಟು ಮಾಹಿತಿಗಳನ್ನು ಹೊಂದಿದ ಅಪಾರ ಜ್ಞಾನಸಾಗರಗಳಾಗಿವೆ.

ಜನಪದ ವೈದ್ಯ ಎನ್ನುವಾಗ ಥಟ್ಟನೆ ನಮಗೆ ಹೊಳೆಯುವುದು ಸಾಮಾನ್ಯವಾಗಿ ಹಳ್ಳಿಗರ, ಗುಡ್ಡಗಾಡು ಜನಾಂಗದವರ, ಬಹುತೇಕ ಅವಿದ್ಯಾವಂತರ ವೈದ್ಯ ಪದ್ಧತಿ. ಇದಕ್ಕೆ ಇರುವ ಇನ್ನೊಂದು ಪ್ರಚಲಿತ ಹೆಸರು 'ನಾಟಿ ವೈದ್ಯ.' ಅಂತೆಯೇ ಇದು ಕುಖ್ಯಾತಿಯನ್ನೂ ಪಡೆದಿದೆ. ನಾಟಿ ವೈದ್ಯ ಎಂದೊಡನೆ ಬಹುತೇಕ ಹೆದರಿಕೊಳ್ಳುವವರೇ. 'ಅದು ಅಪಾಯಕಾರಿ', 'ಅಲ್ಲಿ ಖಾಯಿಲೆಯನ್ನು ಸರಿಯಾಗಿ ಗುರುತಿಸಲಾಗದು', 'ಅದಕ್ಕೆ ಸರಿಯಾದ ವೈಜ್ಞಾನಿಕ ನೆಲೆಗಟ್ಟಿಲ್ಲ', 'ಗಿಡಮರಗಳ ಹೂವು–ಎಲೆಗಳನ್ನೋ ಕಾಯಿ–ಹಣ್ಣು–ಬೀಜಗಳನ್ನೋ ಬೇರು–ನಾರುಗಳನ್ನೋ ಅರೆದು ಹಚ್ಚುವುದೋ, ತೇಯ್ದು ಕುಡಿಸುವುದೋ, ಕಷಾಯ–ಚೂರ್ಣ–ಎಣ್ಣೆಗಳಲ್ಲಿ ಬಳಸುವುದೋ ಆಗಿರುತ್ತದೆ' ಎಂದೇ ಜನಜನಿತವಾಗಿದೆ. ಈ ಪದ್ಧತಿಯ ಕುರಿತಾಗಿ ನಂಬಿಕೆ ವಿಶ್ವಾಸಕ್ಕಿಂತ ಅಪನಂಬಿಕೆಯೇ ಜಾಸ್ತಿ. ಇಂತಹ ವೈದ್ಯಪದ್ಧತಿಯನ್ನು ಅಭ್ಯಸಿಸಿ ರೂಢಿಸಿಕೊಂಡು ಬಂದು, ಇತರರಿಗೆ ಔಷಧೋಪಚಾರ ಮಾಡುವವರನ್ನು 'ಅಳಲೆಕಾಯಿ ಪಂಡಿತ' ಎಂದು ಅಣಕಿಸುವವರೇ ಹೆಚ್ಚು.

ಆದರೆ, ಈ ವೈದ್ಯ ಪದ್ಧತಿಯು ಹಳ್ಳಿಗರ, ಗುಡ್ಡಗಾಡಿನ ಆದಿವಾಸಿ ಜನರ ಜೀವನದೊಳಗೆ ತಲೆತಲಾಂತರದಿಂದ, ಸಾವಿರಾರು ವರುಷಗಳಿಂದ, ಲಿಖಿತಜ್ಞಾನದ ಆರಂಭಕ್ಕೂ ಮೊದಲಿನಿಂದಲೇ ಹಾಸುಹೊಕ್ಕಾಗಿ ಹರಿದು ಬಂದಿರುವ 'ಟೆಸ್ಟೆಡ್ ಅಂಡ್ ಟ್ರೈಡ್' ವೈದ್ಯ ಪದ್ಧತಿಯೆನ್ನುವುದು ವೈಜ್ಞಾನಿಕವಾಗಿ ಯೋಚಿಸಹತ್ತಿದ ಆಧುನಿಕ ವಿದ್ಯಾವಂತರಿಗೆ ನಗರವಾಸಿಗಳಿಗೆ ಕಲ್ಪಿಸಿಕೊಳ್ಳಲೂ ಅಸಾಧ್ಯ. ಇಂತಹ ಅನಾದಿ ಇತಿಹಾಸವುಳ್ಳ ವೈದ್ಯಪದ್ಧತಿಯ ಸರಳೀಕೃತ ರೂಪವೇ ಮನೆಮದ್ದು. ಕೆಲವೊಂದಿಷ್ಟನ್ನು ನಾವು ಒಂದಿಲ್ಲೊಂದು

ರೀತಿಯಲ್ಲಿ ಬಳಸಿದವರೇ ಆದರೂ, ಅದರ ಅರಿವು ಸಂಪೂರ್ಣವಾಗಿ ನಮಗಿಲ್ಲ. ಜನಪದ ವೈದ್ಯದ ಪ್ರಕಾರ ಪ್ರಕೃತಿಯಲ್ಲಿರುವ ಎಲ್ಲವೂ ಒಂದಿಲ್ಲೊಂದು ಔಷಧೀಯ ಗುಣ ಹೊಂದಿರುವಂಥವೇ ಆಗಿವೆ. ನಮಗದರ ಅರಿವಿಲ್ಲ ಅಂದಮಾತ್ರಕ್ಕೆ ಆ ಗಿಡದಲ್ಲಿ ಅಥವಾ ಆ ವಸ್ತುವಿನಲ್ಲಿ ಆ ಗುಣ ಇಲ್ಲವಾಗುತ್ತದೆಯೇ? ನಮ್ಮ ಸುತ್ತಮುತ್ತಲಿನ ಗಿಡಮರಗಳ ಔಷಧೀಯ ಗುಣಗಳನ್ನು ನಾವೆಷ್ಟು ಅವಗಣನೆ ಮಾಡಿದ್ದೇವೆಂದರೆ ಅದನ್ನಾಡಲು ಹುಟ್ಟಿಕೊಂಡ 'ಹಿತ್ತಲ ಗಿಡ ಮದ್ದಲ್ಲ' ಗಾದೆ ಮಾತೇ ಸಾಕ್ಷಿ. ಅಂದರೆ, ಪ್ರತಿಯೊಂದು ಹಿತ್ತಲಗಿಡವೂ ಮದ್ದೇ! ಅರಿವು ನಮಗೆ ಇರಬೇಕಾಗಿದೆ, ಅಷ್ಟೇ!

ಇದನ್ನೊಂದು ಉದಾಹರಣೆಯ ಮೂಲಕ ಹೇಳುವುದಾದರೆ, ದಿನನಿತ್ಯ ನಾವು ಭಾರತೀಯರು- ಅಡುಗೆಯಲ್ಲಿ ಬಳಸುವ ಜೀರಿಗೆಯೆಂಬ ಸಂಬಾರ ಪದಾರ್ಥ ನಮಗೆಲ್ಲ ಗೊತ್ತು. *Cuminum cyminum* ಎಂದು ವೈಜ್ಞಾನಿಕವಾಗಿ ಕರೆಸಿಕೊಂಡು ಕ್ಯೂಮಿನ್ ಎಂಬ ಆಂಗ್ಲ ನಾಮಧಾರಿಯಾದ ಈ ಪುಟಾಣಿ ಜೀರಾ ಅದ್ಭುತ ದಿನಸಿ ಸಾಮಾನು ಮಾತ್ರವಲ್ಲ ಮನೆಯೊಳಗಿನ ಸಂಜೀವಿನಿಯೆಂದೇ ಹೇಳಬಹುದು. ಸಾಮಾನ್ಯವಾಗಿ ನಮ್ಮ ದೈನಂದಿನ ಅಡುಗೆಯಲ್ಲಿ ಇದನ್ನು ನಮ್ಮ ಹಿರಿಯರು ಬರಿಯ ಸ್ವಾದ-ಸುವಾಸನೆಗಾಗಿಯಷ್ಟೇ ಬಳಸುತ್ತಿದ್ದುದಲ್ಲ, ಬದಲಾಗಿ ಅದರ ಮೂಲಿಕಾ ಗುಣಕ್ಕಾಗಿ ನಮ್ಮ ದೇಹದೊಳಕ್ಕೆ ಇದು ನಿತ್ಯವೂ ಸೇರುತ್ತಿರಲಿ ಎಂಬ ಉದ್ದೇಶವೂ ಈ ಕಿರಿಗಾಳನ್ನು ಸಂಬಾರ ಪದಾರ್ಥ ಆಗಿಸಿದ್ದಿರಬಹುದು. ಗ್ಯಾಸ್ಟ್ರೈಟಿಸ್, ಆಸಿಡಿಟಿ, ನಾಸಿಯಾ, ಕ್ರಾಂಪಿಂಗ್ (ಮಾಸಖಂಡಗಳ ಸೆಳೆತ-ಬಿಗಿತ), ಅಜೀರ್ಣ, ವಾಂತಿ, ಶೀತೋಷ್ಣಗಳ ಏರುಪೇರು (ದೈಹಿಕ ಸ್ವಭಾವ ಶೀತ ಅಥವಾ ಉಷ್ಣ; ಥಂಡಿ-ಶೀತ-ನೆಗಡಿ ಅಲ್ಲ)- ಇಂತಹ ಕೆಲವಾರು ದಿನವಹಿ ಸಣ್ಣ ಪುಟ್ಟ ತೊಂದರೆಗಳಿಗೆಲ್ಲ ಈ ಜೀರಿಗೆಯ ಕಷಾಯ ರಾಮಬಾಣ.

ಏನೋ ಕೆಲಸ ಮಾಡುವಾಗಲೋ, ಭಾರ ಎತ್ತುವಾಗಲೋ, ವ್ಯಾಯಾಮದ ಮಧ್ಯದಲ್ಲೋ ಬೆನ್ನಲ್ಲಿಯೋ, ಕತ್ತಿನಲ್ಲೋ ಉಳುಕು ಹಿಡಿದಂತಾಗಿ ನರಳಿದ್ದು ಒಮ್ಮೆಯಾದರೂ ನಮಗೆಲ್ಲ ಅನುಭವದಲ್ಲಿದ್ದೀತು, ಅಥವಾ ಅಂತಹವರನ್ನು ಕಂಡದಿದ್ದೀತು. ಅಂಥ ಸಂದರ್ಭದಲ್ಲಿ ನಮ್ಮಲ್ಲೆಲ್ಲ ಮೊದಲ ಮದ್ದೇ ಜೀರಿಗೆ ಕಷಾಯ. ಹೇಗೇಂತೀರಾ? ಒಂದು ಚಮಚದಷ್ಟು ಜೀರಿಗೆಯನ್ನು ಒಂದು ಬಾಣಲೆಯಲ್ಲಿ ಹಾಕಿ ಒಲೆಯುರಿಯಲ್ಲಿಟ್ಟು ಚೆನ್ನಾಗಿ ಹುರಿದುಕೊಂಡು, ಚಟಪಟ ಅನ್ನುವಾಗ ಎರಡು ಲೋಟ ನೀರನ್ನು ಸುರಿದು, ಹದವಾದ ಉರಿಯಲ್ಲಿ ಕುದಿಸಿ ಕುದಿಸಿ ಅರ್ಧ ಲೋಟದಷ್ಟಕ್ಕೆ ಇಳಿದುಕೊಂಡಾಗ ಅದರ ಹದ ಕಂಡು ನೀರನ್ನು ಲೋಟೆಗೆ ಸೋಸಿಕೊಂಡರೆ ಕಷಾಯ ಸಿದ್ಧ. ಅದಕ್ಕೊಂದು ಚಮಚದಷ್ಟು ತುಪ್ಪ ಯಾ ಬೆಣ್ಣೆಯನ್ನು ಹಾಕಿ ಬಿಸಿಬಿಸಿಯಾಗೇ ತುಸುತುಸುವಾಗಿ ಕುಡಿದು ಕೆಲವು ನಿಮಿಷ ಕೂತಿರಬೇಕು. ದಿನಕ್ಕೆರಡು ಬಾರಿಯಂತೆ ಮೂರು ದಿನ ಈ ಜೀರಿಗೆ ಕಷಾಯ ಸೇವಿಸಿದರೆ ಯಾವುದೇ ಉಳುಕಾದರೂ ಉಸಿರೆತ್ತದೆ ಓಡಿಹೋಗುತ್ತದೆ. ಇದು ನಮ್ಮಲ್ಲಿಯ ಮಾಮೂಲು ಮನೆಮದ್ದು. ಏನೋ ತಿಂದದ್ದು ಹೆಚ್ಚು-ಕಮ್ಮಿಯಾಗಿ ಹೊಟ್ಟೆ ಗುರುಗುರು ಅನ್ನುತ್ತಿದೆಯೋ- ಜೀರಿಗೆ ಕಷಾಯ. ಎಣ್ಣೆಯಲ್ಲಿ ಕರಿದ ತಿಂಡಿ ತಿಂದು ಹುಳಿತೇಗು

ಮೇಲುಮೇಲೆ ಬರುತ್ತಿದೆಯೋ- ಜೀರಿಗೆ ಕಷಾಯ. ಕೆಲಸ ಜಾಸ್ತಿಯಾಗಿ ಮೈ-ಕೈ ನೋವೋ- ಜೀರಿಗೆ ಕಷಾಯ. ಪುಟಾಣಿ ಕೂಸು ಯಾವುದೋ ಅರಿಯದ ಕಾರಣಕ್ಕೆ ಕುಸುಕುಸು ಮಾಡುತ್ತಿದೆಯೋ- ಜೀರಿಗೆ ಕಷಾಯ. ಹೀಗೇ... ಇಂತಹ ಅನೇಕಾನೇಕ ಮನೆಮದ್ದುಗಳು ನಮ್ಮಜ್ಜ-ಅಜ್ಜಿಯ ತಲೆಮಾರಿನವರೂ ಅವರಿಗಿಂತ ಅದೆಷ್ಟೆಷ್ಟೋ ಹಿರಿಯ ತಲೆಮಾರಿನವರೂ ಶತಾಯುಷಿಗಳಾಗಿ ಬಾಳುವಲ್ಲಿ ಸಹಕಾರಿಯಾಗಿವೆ.

ಇಂತಹ ಹಲವಾರು ಜನಪದ ವೈದ್ಯ ಪ್ರಯೋಗಗಳು, ಅಭ್ಯಾಸಗಳು ಅಮೆರಿಕದ ಮೂಲನಿವಾಸಿಗಳಾದ ರೆಡ್-ಇಂಡಿಯನ್ನರ ಎಲ್ಲ ಜನಾಂಗಗಳಲ್ಲೂ ಪ್ರಚಲಿತದಲ್ಲಿದ್ದವು ('ಇದ್ದವು' ಅನ್ನುವ ಭೂತಕಾಲ-ಪ್ರಯೋಗ ಏಕೆಂದರೆ ಈಗಲೂ ಈ ವೈದ್ಯಪದ್ಧತಿ ಅಲ್ಲಿ ಪ್ರಚಲಿತದಲ್ಲಿದೆಯೇ ಅನ್ನುವುದಕ್ಕೆ ಸರಿಯಾದ ಮಾಹಿತಿ ದೊರಕಿಲ್ಲ. ಆದುದರಿಂದ ಈ ಲೇಖನದಲ್ಲಿ ನೇಟಿವ್ ಅಮೆರಿಕನ್ ವೈದ್ಯವನ್ನು 'ಭೂತಕಾಲ-ಪ್ರಯೋಗ'ದಲ್ಲೇ ಬರೆಯಲಾಗಿದೆ). ಅವುಗಳಲ್ಲಿ ಹೆಚ್ಚಿನವೆಲ್ಲವೂ ಈಗ ನಮಗೆ- ನವನಾಗರಿಕರಿಗೆ - ಅಲಭ್ಯವಾಗಿರುವುದು ಖೇದಕರ. ಈ ಮಾತನ್ನು ಭಾರತೀಯ ಜನಪದ ವೈದ್ಯದ ಕುರಿತಾಗಿಯೂ ಹೇಳಬಹುದಾಗಿದೆ. ಆದಾಗ್ಯೂ, ಈಗಿರುವ ಇತಿಮಿತಿಗಳ ವ್ಯಾಪ್ತಿಯಲ್ಲಿಯೇ ಅರಿವನ್ನು ವಿಸ್ತರಿಸಿಕೊಳ್ಳುವ ಯತ್ನವಿದು. ಲೇಖನದ ಮಿತಿಯನ್ನು ದೃಷ್ಟಿಯಲ್ಲಿರಿಸಿಕೊಂಡು, ಕೆಲವೇ ಕೆಲವು ಸಾಮಾನ್ಯ ಅನಾರೋಗ್ಯ ಲಕ್ಷಣಗಳಿಗೆ ಎರಡೂ ಜನಪದದಲ್ಲಿನ ವೈದ್ಯೋಪಚಾರದ ವಿವರಗಳನ್ನಷ್ಟೇ ನೀಡಲಾಗಿದೆ. ಅಮೆರಿಕನ್ ಮೂಲನಿವಾಸಿ- ರೆಡ್ ಇಂಡಿಯನ್ನರ ಒಳಪಂಗಡಗಳ ವಿವರಗಳಿಗೆ ಹೋಗದೆ, ಮೂಲನಿವಾಸಿಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದ್ದ ಮನೆಮದ್ದುಗಳನ್ನಷ್ಟೇ ಇಲ್ಲಿ ದಾಖಲಿಸಲಾಗಿದೆ.

1. ಸಾಮಾನ್ಯ ನೆಗಡಿ-ತಲೆನೋವು-ಜ್ವರ

ಪ್ರಪಂಚಾದ್ಯಂತ ಅತ್ಯಂತ ಸಾರ್ವತ್ರಿಕವಾಗಿರುವ ಒಂದು ಅನಾರೋಗ್ಯ ನೆಗಡಿ. ಬಹುತೇಕ ಎಲ್ಲರನ್ನೂ ಜೀವಮಾನದಲ್ಲಿ ಅತಿ ಹೆಚ್ಚು ಬಾರಿ ಕಾಡುವ ಆರೋಗ್ಯ ಸಮಸ್ಯೆಯಿದು. ನಮ್ಮ ಕರಾವಳಿಯಲ್ಲಿ ಈ ನೆಗಡಿ ಮತ್ತು ಜ್ವರಕ್ಕೆ ಮಾಮೂಲಾಗಿ ಮಾಡುವುದು ಹಿತ್ತಲಲ್ಲಿನ ಕೆಲವಾರು ಗಿಡಮೂಲಿಕೆಗಳನ್ನು ಹಾಕಿ ಮಾಡುವ ಕಷಾಯ (ನಾನಿವತ್ತಿಗೂ ಇದನ್ನೇ ಮಾಡಿಕೊಳ್ಳುವ ಅಭ್ಯಾಸದವಳು). ಅದರಲ್ಲೂ ನೆಗಡಿಯ ತೀವ್ರತೆ ಮತ್ತು ಜತೆ-ಲಕ್ಷಣಗಳ ಆಧಾರದ ಮೇಲೆ ಕಷಾಯದೊಳಗೆ ಸೇರಿಕೊಳ್ಳುವ ಮೂಲಿಕೆಗಳೂ ಬದಲಾಗುತ್ತವೆ ಯಾ ಸೇರುತ್ತವೆ.

ಈ ಕಷಾಯದ ಮೂಲ ಅಂಶಗಳು ಮೂರು: ಕಾಳುಮೆಣಸಿನ ಪುಡಿ (ಅರ್ಧ ಚಮಚ), ಒಣಶುಂಠಿ ಪುಡಿ (ಅರ್ಧ ಚಮಚ) ಅಥವಾ ಒಂದಿಂಚು ಹಸಿಶುಂಠಿಯ ಜಜ್ಜಿಕೊಂಡ ಚೂರುಗಳು, ಅರಶಿನ ಪುಡಿ (ನಾಲ್ಕು ಚಿಟಿಕೆ)- ಇವನ್ನು ನಾಲ್ಕು ಲೋಟ ನೀರಿನಲ್ಲಿ ಹಾಕಿ, ಒಂದು ಚಿಟಿಕೆ ಉಪ್ಪು ಮತ್ತು ಒಂದು ಲಿಂಬೆಯ ಗಾತ್ರದಷ್ಟು ಬೆಲ್ಲ ಸೇರಿಸಿ, ಕುದಿಸಿ, ಒಂದು ಲೋಟಕ್ಕಿಳಿಸಿಕೊಂಡು ದಿನಕ್ಕೆ ನಾಲ್ಕೈದು ಬಾರಿ ಬಿಸಿಬಿಸಿಯಾಗಿಯೇ

ಕಾಲು ಲೋಟದಷ್ಟನ್ನು (ಅಥವಾ ತುಸು ಕಡಿಮೆ) ಕುಡಿದು ಚೆನ್ನಾಗಿ ಹೊದ್ದು ಮಲಗುವುದು! ಕೆಮ್ಮು-ಕಫವಿದ್ದರೆ ಪಂಚಪತ್ರೆ, ದೊಡ್ಡಪತ್ರೆ, ಆಡುಸೋಗೆ, ತುಂಬೆ ಚಿಗುರುಗಳನ್ನು ಸೇರಿಸಿಕೊಳ್ಳುವುದು ಉತ್ತಮ. ಜ್ವರವೂ ಇದ್ದರೆ ಕಿರಾತಕಡ್ಡಿ, ಭದ್ರಮುಷ್ಠಿ, ಗರಿಕೆ, ಮಜ್ಜಿಗೆ ಹುಲ್ಲು (ಲೆಮನ್ ಗ್ರಾಸ್), ಹಿಪ್ಪಲಿ, ಪಾರಿಜಾತದ ಚಿಗುರುಗಳು ಉಪಕಾರಿ. ಸಮಗ್ರ ಕಷಾಯ ಮಾಡುವ ಅಭ್ಯಾಸದ ಮನೆಗಳಲ್ಲಿ, ಲವಂಗ, ಚಕ್ಕೆಯ ತುಂಡು, ಬೆಳ್ಳುಳ್ಳಿಯ ಒಂದೆರಡು ಎಸಳು, ಕೊನೆಯಲ್ಲಿ ಒಂದು ಚೂರು ಲಿಂಬೆಯನ್ನೂ ಸೇರಿಸಿಕೊಳ್ಳುವುದಿದೆ. ಇವಿಷ್ಟೆಲ್ಲ ಉಷ್ಣದ ಅಂಶಗಳನ್ನು ತಡೆದುಕೊಳ್ಳಲು ಚಿಟಿಕೆ ಮೆಂತೆ, ಎರಡು ಚಮಚ ಕೊತ್ತಂಬರಿ, ಅರ್ಧ ಚಮಚ ಜೀರಿಗೆ, ಅರ್ಧ ಚಮಚ ಸೋಂಫ್‌ಗಳನ್ನೂ ನಸು ಬೆಚ್ಚಗೆ ಮಾಡಿಕೊಂಡು ಪುಡಿಮಾಡಿ ಸೇರಿಸಿಕೊಂಡರೆ ಉಷ್ಣಪ್ರಕೃತಿಯವರಿಗೆ ತುಸು ಅನುಕೂಲವಾಗುತ್ತದೆ.

ಕಫ-ಕೆಮ್ಮು ಇದ್ದಾಗ ಇನ್ನೊಂದು ಪರಿಣಾಮಕಾರಿ ವಸ್ತು ದಾರೆಹುಳಿ (ಸ್ಟಾರ್ ಫ್ರುಟ್). ಈ ಹಣ್ಣನ್ನು ಚಿಕ್ಕದಾಗಿ ಹೆಚ್ಚಿಕೊಂಡು ಜೇನಿನಲ್ಲಿ ಬೆರೆಸಿ ತಿನ್ನಬಹುದಾಗಿದೆ. ಹಾಗೆಯೇ, ಹಸಿಶುಂಠಿಯನ್ನು ಜಜ್ಜಿಕೊಂಡು ಹಿಂಡಿ ಪಡೆದ ರಸವನ್ನು ಸಮಪ್ರಮಾಣ ಜೇನಿನೊಂದಿಗೆ ಬೆರೆಸಿ ಒಂದೊಂದು ಹನಿಯಾಗಿ ನಾಲಗೆಯಲ್ಲಿರಿಸಿ ನಿಧಾನವಾಗಿ ಸೇವಿಸಿದರೆ ಕಫ ಕರಗಿ ಕೆಮ್ಮು ತಣ್ಣಗಾಗುತ್ತದೆ. ಇದಲ್ಲದೆ ಕಫ-ಕೆಮ್ಮು ನಿವಾರಣೆಗೆ ತುಂಬೆ ಎಲೆಯ ರಸ, ಪಂಚಪತ್ರೆ ಎಲೆಯ ರಸ, ಈರುಳ್ಳಿಯ ರಸ ಮುಂತಾದುವನ್ನೂ ಬಳಸಲಾಗುತ್ತದೆ. ಒಬ್ಬೊಬ್ಬರ ದೇಹಪ್ರಕೃತಿಯನ್ನು ಅನುಸರಿಸಿ ಯಾವುದಾದರೊಂದನ್ನು ಆರಿಸಿಕೊಳ್ಳುವರು. ಇದರ ಜೊತೆಗೆ ತುಸು ಅರಶಿನ ಪುಡಿ ಬೆರೆಸಿದ ನೀರಿನಲ್ಲಿ ಬಾಯಿ ಮತ್ತು ಗಂಟಲು ಮುಕ್ಕಳಿಸುವುದರಿಂದ 'ಗಲೇ ಮೆ ಖಿಚ್ಖಿಚ್' ತಹಬದಿಗೆ ಬರುತ್ತದೆ, ಕೆಮ್ಮಿನ ತೀವ್ರತೆ ಇಳಿಯುತ್ತದೆ. ಅದೇ ಬಿಸಿನೀರಿನ ಹಬೆಯನ್ನು ಉಸಿರಾಡುವುದರಿಂದ ಕಟ್ಟಿಕೊಂಡ ಮೂಗು-ಗಂಟಲು ತೆರೆದುಕೊಂಡು ಉಸಿರಾಟ ಸರಾಗವಾಗುತ್ತದೆ. ತಲೆನೋವು ಇದ್ದಲ್ಲಿ ಹಬೆಯ ನೀರಿಗೆ ಒಂದೆರಡು ಹನಿ ನೀಲಗಿರಿ ಎಣ್ಣೆಯನ್ನೋ ತುಳಸಿ ಎಣ್ಣೆಯನ್ನೋ ಬಳಸುವುದು ಅತ್ಯಂತ ಉಪಯುಕ್ತ. [ಕೋವಿಡ್ ಸಮಯದಲ್ಲಿ ಭಾರತೀಯರನೇಕರು ಈ 'ಹಬೆಸೇವನೆ'ಯನ್ನು ಅನುಸರಿಸುತ್ತಿದ್ದರು. ಇದರಿಂದ ಮೂಗು-ಗಂಟಲುಗಳಲ್ಲೂ ಕಣ್ಣಿನ ರೆಪ್ಪೆಯಡಿಯಲ್ಲೂ ಸೇರಿಕೊಂಡ ವೈರಾಣುಗಳು ನಾಶವಾಗುತ್ತವೆ.]

ಅಮೆರಿಕನ್ ಮೂಲನಿವಾಸಿಗಳಲ್ಲಿ ನೀಲಗಿರಿ, ಕ್ಯಾಟ್ ನಿಪ್, ಫ಼ೆನ್ನೆಲ್ (ಸೋಂಫ್), ಎಕನೇಷಿಯಾ, ಸ್ಕಲ್ ಕ್ಯಾಪ್, ಕಾಟನ್ (ಹೌದು, ಹತ್ತಿಗಿಡ!), ಬ್ಲ್ಯಾಕ್ ವಿಲ್ಲೊ, ಅಮೆರಿಕನ್ ಬಾಸ್‌ವುಡ್, ಯೂರೋಪಿಯನ್ ಲಿಂಡೆನ್, ಬಗೆಬಗೆಯ ಮಿಂಟ್‌ಗಳು ಮುಂತಾದ ಗಿಡಮೂಲಿಕೆಗಳ ವಿವಿಧ ಭಾಗಗಳು ತಲೆನೋವು (ಮೈಗ್ರೇನ್), ನೆಗಡಿ-ಕೆಮ್ಮು-ಜ್ವರಗಳ ಉಪಶಮನದಲ್ಲಿ ಬಳಕೆಯಾಗುತ್ತಿದ್ದವು. ನೀಲಗಿರಿ, ಕ್ಯಾಟ್ ನಿಪ್, ಮಿಂಟ್ ಅಥವಾ ಬೀ ಬಾಮ್ (ಬರ್‌ಗಮಾಟ್) ಎಲೆಗಳನ್ನು ಕುದಿನೀರಿನಲ್ಲಿ ಹಾಕಿ ಹಬೆಸೇವನೆಯೂ ಬಳಕೆಯಲ್ಲಿತ್ತು. ನೀಲಗಿರಿ ಎಣ್ಣೆಯನ್ನು ಶ್ವಾಸಕೋಶ ಸಂಬಂಧಿ ತೊಂದರೆಗಳಲ್ಲಿ ಹಬೆ ಸೇವನೆಗಾಗಿಯೂ ಹಣೆ-ಎದೆಗಳಿಗೆ ಸವರಿ ಉಜ್ಜುವುದಕ್ಕಾಗಿಯೂ ಬಳಸುತ್ತಿದ್ದರು.

ನಮ್ಮಲ್ಲಿಯಂತೆಯೇ, ಅಮೆರಿಕನ್ ಮೂಲನಿವಾಸಿಗಳು ಕೂಡ ಉಸಿರಾಟದ ತೊಂದರೆಗಳ ನಿವಾರಣೆಗಾಗಿ ಎಕನೇಷಿಯಾ ಮತ್ತು ಸ್ಕಲ್ ಕ್ಯಾಪ್ ಗಿಡದ ಎಲೆಗಳನ್ನು ಕಷಾಯ ಅಥವಾ ಚಹಾದಂತೆ ತಯಾರಿಸುತ್ತಿದ್ದರು. ನಾಲ್ಕೈದು ಲೋಟದಷ್ಟು ನೀರಿಗೆ ನಿಗದಿತ ಪ್ರಮಾಣದ ಎಲೆಗಳನ್ನು (ಹಸಿಯಾಗಿ ಅಥವಾ ಒಣಗಿಸಿ ಶೇಖರಿಸಿ ಇಟ್ಟುದನ್ನು) ಹಾಕಿ ಕುದಿಸಿ, ಒಂದು ಲೋಟದಷ್ಟಕ್ಕಿಳಿಸಿ ದಿನದಲ್ಲಿ ನಾಲ್ಕೈದು ಬಾರಿ ಸೇವಿಸುವುದರಿಂದ ಉಪಶಮನ ಕಂಡುಕೊಂಡಿದ್ದರು.

ನೆಗಡಿಯ ಸಮಯದಲ್ಲಿ ಗಂಟಲಿನ ಕಿರಿಕಿರಿಯನ್ನು ನಿವಾರಿಸಲು, ಕೆಮ್ಮನ್ನು ಮತ್ತು ಟಾನ್ಸಿಲ್ಸ್ ಉರಿಯೂತವನ್ನು ಉಪಶಮನಗೊಳಿಸಲು ರೆಡ್ ಇಂಡಿಯನ್ನರೂ 'ಗಾರ್ಗಲ್' ಅಭ್ಯಾಸ ಮಾಡಿಕೊಂಡಿದ್ದರು. ವೈಲ್ಡ್ ಚೆರ್ರಿ ಮರದ ಕಾಂಡದ ಒಳತೊಗಟೆ (ಇನ್ನರ್ ಬಾರ್ಕ್) ಸುವಾಸನಾಭರಿತವಾಗಿದ್ದು ನೆಗಡಿ, ಗಂಟಲಿನ ಕಿರಿಕಿರಿ, ಜ್ವರ, ಮತ್ತು ಶ್ವಾಸನಾಳದ ಸೋಂಕಿನ ಚಿಕಿತ್ಸೆಯಲ್ಲಿ ಬಳಕೆಯಾಗುತ್ತಿತ್ತು. ಆದರೆ ಈ ಮರದ ಒಳತೊಗಟೆಯನ್ನು ವಸಂತಕಾಲದಲ್ಲೇ ಮರದಿಂದ ಕೆತ್ತಿ ತರಬೇಕಾದುದು ಅತಿಮುಖ್ಯ. ಏಕೆಂದರೆ, ಶಿಶಿರದಲ್ಲಿ (ಫಾಲ್ ಸೀಸನ್ನಲ್ಲಿ) ಈ ಕಾಂಡವು ಅತ್ಯಂತ ವಿಷಕಾರಿ ವಸ್ತುವನ್ನು ಒಳಗೊಂಡಿರುತ್ತದೆ.

ವೈಲ್ಡ್ ಚೆರ್ರಿ ತೊಗಟೆಯನ್ನು ಪುಡಿಮಾಡಿ ವರ್ಷಕ್ಕಾಗುವಷ್ಟು ಶೇಖರಿಸಿಡುತ್ತಿದ್ದರು ಮತ್ತು ಇದರಿಂದ ಕೆಮ್ಮು ನಿವಾರಣೆಗೆ ಕಾಫ್ ಸಿರಪ್ ಮಾಡಲಾಗುತ್ತಿತ್ತು. ತೊಗಟೆಯ ಪುಡಿ, ಮಾರ್ಷ್ಮೆಲ್ಲೊ ಬೇರಿನ ಪುಡಿ, ನೀರು, ಜೇನು ಮತ್ತು ಮೇಪಲ್ ಸಿರಪ್ ಬಳಸಿ ಕೆಮ್ಮಿನ ಮದ್ದು ತಯಾರಾಗುತ್ತಿತ್ತು. ಅಂತೆಯೇ ಕೆಂಪು ರಾಸ್ಪ್ಬೆರ್ರಿ ಮತ್ತು ಸೇಜ್ ಎಲೆಗಳಿಂದ ಚಹಾ ಅಥವಾ ಬಾಯಿ ಮುಕ್ಕಳಿಕೆ ದ್ರವ ತಯಾರಿಸಿಕೊಂಡು ಗಂಟಲಿನ ಸಮಸ್ಯೆಗೆ ಉಪಶಮನ ಕಂಡುಕೊಂಡಿದ್ದರು.

2. ಹೊಟ್ಟೆಯ ಸಮಸ್ಯೆಗಳು

ಕರ್ನಾಟಕದ ಕರಾವಳಿ ಭಾಗದಲ್ಲಿ, ಅದರಲ್ಲೂ ಉಡುಪಿ–ಮಂಗಳೂರು (ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ) ಪ್ರಾಂತ್ಯಗಳಲ್ಲಿ, ಹೊಟ್ಟೆಯ ಸಮಸ್ಯೆ –ಅದೂ ಅಜೀರ್ಣ– ಅಂದಾಕ್ಷಣ ಮೊದಲಾಗಿ ನೆನಪಾಗುವುದು ವೀಳ್ಯದೆಲೆ, ಓಮ, ಉಪ್ಪು. ಸುಮಾರು ಐದಾರು ವರುಷದ ಮಕ್ಕಳಿಂದ ಮೇಲ್ಪಟ್ಟ ವಯೋಮಾನದವರು ಈ ಮೂರನ್ನೂ (ಒಂದೆರಡು ವೀಳ್ಯದೆಲೆ, ಅರ್ಧ ಚಮಚ ಓಮಕಾಳು, ಎರಡು ಚಿಟಿಕೆ ಕಲ್ಲುಪ್ಪು) ಸೇರಿಸಿಕೊಂಡು ನುಣ್ಣಗೆ ಜಗಿದು ನಿಧಾನವಾಗಿ ರಸ ಹೀರುತ್ತ ನುಂಗುವುದು ಸಾಮಾನ್ಯ ಅಭ್ಯಾಸವಾಗಿತ್ತು ಮತ್ತು ಅದು ಅತ್ಯಂತ ಉಪಶಮನಕಾರಿ. ಓಮ ಕಷಾಯದಿಂದ ಅಜೀರ್ಣ, ಹೊಟ್ಟೆ ಹುಳದ ಬಾಧೆ, ವಾಯುಪ್ರಕೋಪ, ಬಾಯಿ ರುಚಿಯಿಲ್ಲದಿರುವಿಕೆ, ವಾಂತಿಯಂತಹ ಸಮಸ್ಯೆಗಳು ನಿವಾರಣೆಯಾಗುತ್ತವೆ.

ಪ್ರಸ್ತಾವನೆಯಲ್ಲಿ ತಿಳಿಸಿದಂತೆ, ಜೀರಿಗೆ ಕಷಾಯವು ಹೊಟ್ಟೆಯ ಸಮಸ್ಯೆಗಳಿಗೂ

ಸರಳ ಆದರೆ ಪರಿಣಾಮಕಾರಿ ಪ್ರಥಮ ಚಿಕಿತ್ಸೆ. ಸಣ್ಣ ಮಟ್ಟಿನ ಹೊಟ್ಟೆನೋವಿಗೆ ಇದು ಮೊದಲ ಮದ್ದು. ಗಜ್ಜುಗವೂ ಪುಟ್ಟಮಕ್ಕಳ ಹೊಟ್ಟೆಹುಳದ ಸಮಸ್ಯೆಗೆ ರಾಮಬಾಣ. ಗಟ್ಟಿ ಕವಚದೊಳಗಿರುವ ಗಜ್ಜುಗ ಬೀಜವನ್ನು (ಹಿಂದೆಲ್ಲ ಕೆಂಡದೊಳಗಿರಿಸಿ) ಸುಟ್ಟು, ಗುದ್ದಿ, ಒಳಗಿನ ಬೀಜವನ್ನು ತೆಗೆದು ಅದನ್ನು ತುಳಸಿಯೆಲೆ ಹಾಕಿದ ನೀರಿನಲ್ಲಿ (ದೇವರ ತೀರ್ಥದಲ್ಲಿ ಅನ್ನುವ ಸಂಪ್ರದಾಯ) ತೇದು ಮಕ್ಕಳಿಗೆ ನೆಕ್ಕಿಸುತ್ತಿದ್ದರು; ಆ ಕಹಿಯನ್ನು ಮರೆಮಾಚಲು ತಕ್ಷಣ ತುಸು ಬೆಚ್ಚಗಿನ ನೀರನ್ನೋ ತಾಯಿಯ ಹಾಲನ್ನೋ ಕುಡಿಸುತ್ತಿದ್ದರು. ಇದರಿಂದ ಮಕ್ಕಳು ಕಹಿಪ್ರೇರಿತ ವಾಂತಿ ಮಾಡಿಕೊಳ್ಳುವುದು ತಪ್ಪುತ್ತಿತ್ತು. ಆದರೆ, ಅತಿ ಸರ್ವತ್ರ ವರ್ಜಯೇತ್; ಅತಿಯಾದರೆ ಅಮೃತವೂ ವಿಷ. ಅಂತೆಯೇ, ಜೀರಿಗೆಯಾಗಲಿ, ಓಮ, ವೀಳ್ಯದೆಲೆ, ಗಜ್ಜುಗವಾಗಲಿ ಅತಿಯಾಗಿ ಬಳಸಿದರೆ ಪ್ರತಿಕೂಲ ಪರಿಣಾಮಗಳಾಗ ಬಹುದು. ತಿಂಗಳಿಗೆರಡು ಮೂರು ದಿನಗಳ ಮಿತಿಯಲ್ಲಿ ಬಳಸಿದರೆ ಒಳಿತು.

ಇಂಗು ಮತ್ತು ಶುಂಠಿಗಳ ಬಳಕೆ ನಮ್ಮ ಅಡುಗೆಗಳಲ್ಲಿ ವಿರಳವೇನಲ್ಲ. ಇವೆರಡೂ ನಮ್ಮ 'ಮಧ್ಯಪ್ರದೇಶ' ಹೊಟ್ಟೆಯನ್ನು ಸಮತೋಲನದಲ್ಲಿರಿಸಲು ಅತ್ಯಂತ ಸಹಕಾರಿಗಳು. ಶುಂಠಿಯು ಬಹುದೊಡ್ಡ ಜೀರ್ಣಕಾರಿ ಮತ್ತು ರುಚಿವರ್ಧಕವಾದರೆ ಇಂಗು ವಾಯುಹರ. ಇವುಗಳ ನಿಯಮಿತ ಬಳಕೆ ಉಪಕಾರಿ, ನಿಜ. ಇವೆರಡೂ ಉಷ್ಣಾಹಾರಗಳೂ ಆದುದರಿಂದ ಮಿತಿಯರಿತು ಬಳಸುವುದೊಳಿತು.

ಕರಾವಳಿಯ ಹಲವಾರು ಮನೆಗಳಲ್ಲಿ ಊಟದ ಕೊನೆಗೆ 'ನೀರು ಮಜ್ಜಿಗೆ'ಯನ್ನು ಬಡಿಸುವ ಕ್ರಮವಿದೆ. ಕೆನೆಮೊಸರನ್ನು ಕಡೆಗೋಲಲ್ಲಿ ಕಡೆದು ಬೆಣ್ಣೆ ತೆಗೆದು ಉಳಿದ ಮಜ್ಜಿಗೆಯನ್ನು (ಅಥವಾ ಕೆನೆ ತೆಗೆದ ಹಾಲಿನ ಮೊಸರನ್ನೇ) ಶುದ್ಧ ನೀರು ಬೆರೆಸಿ ತೆಳ್ಳಗಾಗಿಸಿ ಅದಕ್ಕೆ ತುಸು ಇಂಗು, ಶುಂಠಿ ರಸ, ಜಜ್ಜಿಕೊಂಡ ಒಂದೆರಡು ಚಿಕ್ಕ ಹಸಿಮೆಣಸು, ತುಸು ಉಪ್ಪು, ಒಂದೆರಡು ಚಮಚ ನಿಂಬೆರಸ, ಜೊತೆಗೆ ಸುವಾಸನೆಗಾಗಿ ನುಣ್ಣಗೆ ಜಜ್ಜಿದ ಕರಿಬೇವು, ಸಣ್ಣಗೆ ಹೆಚ್ಚಿಕೊಂಡ ಕೊತ್ತಂಬರಿ ಸೊಪ್ಪು – ಇವಿಷ್ಟನ್ನು ಸೇರಿಸಿ ಚೆನ್ನಾಗಿ ಬೆರೆಸಲಾಗುತ್ತದೆ. ಈ 'ನೀರು ಮಜ್ಜಿಗೆ'ಗೆ ಬಹಳ ಬೇಡಿಕೆ. ಸಮಾರಂಭಗಳಲ್ಲಿಯಂತೂ ಬಗೆಬಗೆಯ ಭಕ್ಷ್ಯಗಳನ್ನು ಗಡದ್ದಾಗಿ ತಿಂದವರು ಒಂದೆರಡು ಲೋಟ ನೀರುಮಜ್ಜಿಗೆ ಕುಡಿಯುವುದೂ ಇದೆ. ಬಿರುಬೇಸಗೆಯಲ್ಲಿ ಬಿಸಿಲಿನಾಯಾಸದಿಂದ ಮನೆಯೊಳಗೆ ಬಂದಾಗ ನೀರುಮಜ್ಜಿಗೆ ಅದೆಂಥಾ ಹಿತಾಸ್ವಾದ ನೀಡುತ್ತದೆಂದು ಕುಡಿದವರಿಗೇ ಗೊತ್ತು. ಇಲ್ಲೆಲ್ಲ ಮಜ್ಜಿಗೆಯ ತಂಪು ಗುಣ ಮತ್ತು ಅದರಲ್ಲಿ ಬೆರೆಸಲಾದ ಶುಂಠಿ, ಇಂಗು, ಹಸಿಮೆಣಸುಗಳ ಉಷ್ಣಗುಣಗಳ ಸಮತೋಲನ, ನಿಂಬೆ–ಕರಿಬೇವು–ಕೊತ್ತಂಬರಿ ಸೊಪ್ಪುಗಳ ನವಿರುಘಮ ಎಲ್ಲವೂ ಜೊತೆಯಾಗಿ ಉಪ್ಪಿನೊಂದಿಗೆ ದೇಹಕ್ಕೆ ಬೇಕಾದ ಖನಿಜಾಂಶಗಳನ್ನು ಪೂರೈಸುತ್ತವೆ; ಸ್ವಾದೋದ್ದೀಪನವನ್ನೂ ಮಾಡುತ್ತವೆ.

ನೇಟಿವ್ ಅಮೆರಿಕನ್ನರು ಸೇಜ್, ಫೆನ್ನೆಲ್ (ಸೋಂಫ಼್), ಸ್ಯಾಂಪ್ಸನ್ಸ್ ಸ್ನೇಕ್ ರೂಟ್, ಲಿಕೊರೀಶ್ (ಜೇಷ್ಠಮಧು), ಶುಂಠಿ, ಸ್ಟ್ರಾಬೆರಿ ಎಲೆ ಮತ್ತು ವಿವಿಧ ಮಿಂಟ್ ಎಲೆಗಳನ್ನು ಜೀರ್ಣಕಾರಿಯಾಗಿ, ಸ್ವಾದೋದ್ದೀಪಕವಾಗಿ, ಮತ್ತು ಸುವಾಸನೆಗಾಗಿ ಬಳಸುತ್ತಿದ್ದರು. ಹತ್ತು

ಹನಿ ಸ್ಯಾಂಪ್ಸನ್ಸ್ ಸ್ನೇಕ್ ರೂಟ್ ಟಿಂಕ್ಚರ್ ಮತ್ತು ಐದು ಹನಿ ಮಿಂಟ್ ಟಿಂಕ್ಚರ್ ಇವನ್ನು ಆರು ಔನ್ಸ್ ನಸುಬೆಚ್ಚಗಿನ ನೀರಿನಲ್ಲಿ ಬೆರೆಸಿ ದಿನಕ್ಕೆರಡು ಮೂರಾವರ್ತಿ ಸೇವಿಸುವುದರಿಂದ ಜೀರ್ಣಾಂಗವ್ಯೂಹದ ಸಮಸ್ಯೆ ನಿವಾರಣೆಯಾಗುತ್ತದೆಂದು ಕಂಡುಕೊಂಡಿದ್ದರು (ನನಗಿದು ನೀರು ಮಜ್ಜಿಗೆಗೆ ಸಮನಾಗಿ ಕಂಡಿತು). ತ್ರಿವಳಿಯಾದ ಮೂರು ಸ್ಟ್ರಾಬೆರಿ ಎಲೆ ಮತ್ತು ವಿವಿಧ ಮಿಂಟ್‌ಗಳ ಒಂಬತ್ತು ಎಲೆಗಳನ್ನು ಚೆನ್ನಾಗಿ ಹಿಸುಕಿ ಎರಡು ಲೋಟ ಕುದಿನೀರನ್ನು ಹಾಕಿ ಹತ್ತು ನಿಮಿಷ ಮುಚ್ಚಿರಿಸಿ ಅನಂತರ ಈ ಬೆಚ್ಚನೆಯ ನೀರನ್ನು ಊಟದ ತರುವಾಯ ಸೇವಿಸಿದರೆ ವಾಯುಹರವಾಗಿಯೂ ಜೀರ್ಣಕಾರಿಯಾಗಿಯೂ ಕೆಲಸ ಮಾಡುತ್ತದೆ. ಸೇಜ್, ಲಿಕೊರೀಶ್, ಮಿಂಟ್ ಮತ್ತು ಫ಼ೆನ್ನೆಲ್ ಆಹಾರವನ್ನು ಸುಗಂಧಿತವಾಗಿಸುವುದರ ಜೊತೆಗೆ ಕೆಲವೊಮ್ಮೆ ಆಹಾರ ಸೇವನೆಯ ಬಳಿಕ ಉಂಟಾಗುವ ಆಸಿಡಿಟಿ ಸಮಸ್ಯೆಯನ್ನು ನೀಗಿಸುತ್ತವೆ (ಮಿಂಟ್ ಮತ್ತು ಫ಼ೆನ್ನೆಲ್ ಭಾರತೀಯರಲ್ಲಿಯೂ ಆಸಿಡಿಟಿ ನಿವಾರಕಗಳೆಂದು ಚಾಲ್ತಿಯಲ್ಲಿದ್ದು, ಬಹುತೇಕರಲ್ಲಿ ಊಟವಾದ ಬಳಿಕ ಇವೆರಡರ ನಿತ್ಯಸೇವನೆಯ ಅಭ್ಯಾಸವಿರುವುದನ್ನು ಗಮನಿಸಬಹುದು). ಹೊಟ್ಟೆಹುಣ್ಣಿನ ತೊಂದರೆಯನ್ನು ನೀಗಿಸಲು ಲಿಕೊರೀಶ್ ಸಹಕಾರಿ.

3. ಮಹಿಳೆಯರ ಮಾಸಿಕ ದಿನಗಳು

ಮಹಿಳೆಯರ ಮಾಸಿಕ ದಿನಗಳ ಸುತ್ತಮುತ್ತ ಹಲವಾರು (ಗಾಢ–ಗೂಢ–ಮೂಢ) ನಂಬಿಕೆಗಳೂ ಆಚರಣೆಗಳೂ ಪ್ರಪಂಚಾದ್ಯಂತ ಚಾಲ್ತಿಯಲ್ಲಿವೆ. ಈ ನಂಬಿಕೆ–ಆಚರಣೆಗಳಲ್ಲಿ ಸಾಮ್ಯತೆಯೂ ಭಿನ್ನತೆಯೂ ಬೇಕಾದಷ್ಟಿವೆ. ಈ ಲೇಖನದ ವ್ಯಾಪ್ತಿಯಲ್ಲಿ ಇವುಗಳ ಹೊರತಾಗಿ, ಆ ದಿನಗಳಲ್ಲಿ ಮಹಿಳೆಗೆ ಅಗತ್ಯವಿರುವ ಮತ್ತು ಸಾಮಾನ್ಯವಾಗಿ ಜನಪದರಲ್ಲಿ ಬಳಕೆಯಲ್ಲಿರುವ ವೈದ್ಯೋಪಚಾರಗಳ ಕುರಿತಾಗಿಯಷ್ಟೇ ಪ್ರಸ್ತಾಪಿಸಲಾಗಿದೆ.

ಮಾಸಿಕ ದಿನಗಳಲ್ಲಿ ಅಸಾಧ್ಯ ಕಿರಿಕಿರಿಯನ್ನುಂಟುಮಾಡುವ ಬಹುದೊಡ್ಡ ಸಮಸ್ಯೆ ಕಿಬ್ಬೊಟ್ಟೆ ನೋವು ಮತ್ತು/ಅಥವಾ ಬೆನ್ನು ನೋವು, ಬೆನ್ನುಸೆಳೆತ, ಕಾಲುಗಳ ಸೆಳೆತ ಮತ್ತು ಮಾನಸಿಕ ಕಿರಿಕಿರಿ. ಎಲ್ಲರನ್ನು ಅಲ್ಲವಾದರೂ ಬಹುತೇಕರನ್ನು ಕಾಡುವ ಸಮಸ್ಯೆಗಳಿವು. ಇವುಗಳ ತೀವ್ರತೆಯ ಮಟ್ಟವೂ ಒಬ್ಬರಿಂದೊಬ್ಬರಿಗೆ ವ್ಯತ್ಯಾಸವಾಗುವಂತೆ ಒಬ್ಬಳೇ ಮಹಿಳೆಯ ಜೀವನದ ವಿವಿಧ ಹಂತಗಳಲ್ಲೂ ಬದಲಾಗುತ್ತಿರುತ್ತದೆ. ಹುಡುಗಿಯೊಬ್ಬಳು ತರುಣಿಯಾಗಿ ಮಾರ್ಪಾಡಾಗುವ ಪ್ರಕ್ರಿಯೆಯಲ್ಲಿ ಈ ನೋವು ಅನಿವಾರ್ಯ ಎಂದು ಒಪ್ಪಿಕೊಂಡು ಮುನ್ನಡೆದವರು ಬಹಳ ಮಂದಿ. ನಾಟಿ ವೈದ್ಯರಲ್ಲಿಗೆ ಈ ಸಮಸ್ಯೆಯನ್ನು ಒಯ್ಯುವುದೂ ನಾಚಿಕೆ ಸಂಕೋಚದ ವಿಷಯವಾಗಿದ್ದುದೇ ಹೆಚ್ಚು. ಹೆಣ್ಣಿನ ವೈಯಕ್ತಿಕ ಬದುಕು ಅಷ್ಟೊಂದು ಮುಚ್ಚಟೆಯಾಗಿತ್ತು. ಅಥವಾ ಅವಳ ನೋವು ಅವಳಿಗಷ್ಟೇ ಸೀಮಿತವಾಗಿ ಹುದುಗಿಸಲ್ಪಡುತ್ತಿತ್ತು. ಆದರೂ ಕೆಲವೆಡೆಗಳಲ್ಲಿ ಅಡುಗೆ ಮನೆಯೊಳಗಿನ ಸಾಮಗ್ರಿಯಿಂದ ಆಕೆಯ ಆರೈಕೆ ನಡೆದಿದೆ, ನಡೆಯುತ್ತಿದೆ. ಅಡುಗೆಮನೆಯ ಸಂಬಾರಡಬ್ಬಿಯೊಳಗಿನ ಸಂಜೀವಿನಿ ಜೀರಿಗೆ ಇಲ್ಲೂ ಉಪಕಾರಿ. ಹದಿವಯಸಿನ ಹುಡುಗಿಯರಿಂದ ಕುದಿನಿಲ್ಲುವ

ಮಹಿಳೆಯವರೆಗೂ ಜೀರಿಗೆ ಕಷಾಯ 'ಆ' ದಿನಗಳಲ್ಲಿ ಸಾಂತ್ವನ ನೀಡಬಲ್ಲದು. ಈ ಮೊದಲೇ ತಿಳಿಸಿದಂತೆ ಜೀರಿಗೆ ಕಷಾಯ ತಯಾರಿಸಿಕೊಂಡು, ವಾಯುಮಾತ್ರೆ (ನಾಟಿ ಮತ್ತು ಆಯುರ್ವೇದ ತಯಾರಿಕೆಗಳು ಲಭ್ಯ) ಒಂದೆರಡನ್ನು ಜಜ್ಜಿ ಪುಡಿಮಾಡಿ ಅದರೊಳಗೆ ಬೆರೆಸಿ ಆದಷ್ಟು ಬಿಸಿಬಿಸಿಯಾಗಿ ಸೇವಿಸಬೇಕು. ದಿನಕ್ಕೆರಡು ಬಾರಿಯಂತೆ, ನಿಗದಿತ ಮಾಸಿಕ ದಿನದ ಐದು ದಿನ ಮೊದಲಿಂದ ಆರಂಭಿಸಿ ಮುಟ್ಟಾಗುವ ತನಕ ಸೇವಿಸಿದರೆ, ಒಂದೆರಡು ವರ್ಷದೊಳಗೆ ತಡೆಯಲಸಾಧ್ಯವಾಗಿದ್ದ ಮಾಸಿಕ ನೋವು ತಹಬದಿಗೆ ಬಂದದ್ದಿದೆ. ಕೆಲವು ದೇಹಪ್ರಕೃತಿಯನ್ನು ಹೊಂದಿಕೊಂಡು, ಹಸಿಯಾದ ಲೋಳೆಸರ (ಅಲೋ ವೆರಾ, ಕುಮಾರಿ-ಸಂ.) ಗಿಡದೆಲೆಯ ಜೆಲ್ ಸೇವನೆಯೂ ಪರಿಣಾಮಕಾರಿ-ಯಾಗಿದೆ.

ಶತಮಾನಗಳ ಹಿಂದೆ, ಋತುಮತಿಯಾದ ಹೆಣ್ಣನ್ನು ಭಾರತೀಯರು ನಡೆಸಿಕೊಳ್ಳುತ್ತಿದ್ದ ಅವೈಜ್ಞಾನಿಕ ಅಮಾನವೀಯ ರೀತಿಯಿಂದ ನಾವು ಬಹಳ ಮುಂದೆ ಬಂದಿದ್ದೇವಾದರೂ ಅಮೆರಿಕನ್ ಮೂಲ ನಿವಾಸಿಗಳ ಕೆಲವೊಂದು ಕ್ರಮಗಳ ಮುಂದೆ ನಾವು ಬಹಳ ಹಿಂದೆಯೇ ಉಳಿದಿದ್ದೆವು ಅನಿಸುವಂತಾಗಿದೆ. ಕಾಡುವಾಸಿಗಳಾದ ಮೂಲನಿವಾಸಿಗಳ ಕೆಲವೊಂದು ಪಂಗಡಗಳು ಋತುಮತಿಯ ಋತುಸ್ರಾವಕ್ಕಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ಮಾಡಿ, ಬಳಸುತ್ತಿದ್ದರೆಂದರೆ ಹುಬ್ಬೇರಿಸುವಂತಾಗುತ್ತದೆ. ಸ್ಫ್ಯಾಗ್ನಮ್ ಹಾವಸೆ ಮತ್ತು ಒಂದೆರಡು ವಿಧದ ಒಣ ಹಾವಸೆಗಳನ್ನೋ ಸುಲಿದ ಸೇಜ್ ತೊಗಟೆಗಳನ್ನೋ ಮೆದುವಾಗಿಸಿದ ಹುಲ್ಲನ್ನೋ ಪ್ರಾಣಿಚರ್ಮ ಅಥವಾ ಜೋಳತೆನೆಗಳ ಮುಸುಕಿನೆಲೆಗಳ ಒಳಗಿರಿಸಿ ಸ್ಯಾನಿಟರಿ ಪ್ಯಾಡ್‌ನಂತೆ ಬಳಸುತ್ತಿದ್ದರು. ಹಾವಸೆಗಳನ್ನು ನದಿಯಲ್ಲಿ ಒಗೆದು ಬಿಸಿಲಲ್ಲಿ ಒಣಗಿಸಿ ಪುನರ್ಬಳಕೆ ಮಾಡುತ್ತಿದ್ದರು. ಮೊದಲು ಮುಟ್ಟಾದ ಕುವರಿಯನ್ನು ಸಹಿತ ಅತ್ಯಂತ ಗೌರವಯುತವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಋತುಮತಿಯರಿಗೆ ಮೀಸಲಾದ 'ಪುಟ್ಟಮನೆ'ಯ (ಲಿಟ್ಲ್ ಹಟ್) ಒಳಗೆ ಆಕೆಯನ್ನು ಮೊದಲ ಬಾರಿಗೆ ಕಳುಹಿಸುವಾಗ ಅದೊಂದು ಧನಾತ್ಮಕ ಕ್ರಿಯೆಯಾಗಿರುತ್ತಿತ್ತು. ಅಲ್ಲಿರುವ ಇತರ ಮಹಿಳೆಯರು ಆಕೆಗೆ ಹೆಣ್ಣಿನ ಹಿರಿಮೆ, ಜವಾಬ್ದಾರಿಗಳ ಕುರಿತು ತಿಳಿಹೇಳುತ್ತಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ, ಋತುಮತಿಯಾದ ಹೆಣ್ಣು ಬೇರಾವುದೇ ಕೆಲಸ ಕಾರ್ಯಗಳನ್ನು ಮಾಡುವಂತಿರಲಿಲ್ಲ. ಅದರ ಕಾರಣ ನಮ್ಮಲ್ಲಿಯಂತೆ 'ಮೈಲಿಗೆ'ಯಲ್ಲ; ಬದಲಾಗಿ, ಆ ದಿನಗಳಲ್ಲಿ ಆಕೆಯಲ್ಲಿರುತ್ತಿದ್ದ ಹೆಚ್ಚಿನ 'ಪ್ರಭಾಶಕ್ತಿ'. ಈ ಹೆಚ್ಚುವರಿ ಶಕ್ತಿಯಿಂದ ಇತರರ ಪ್ರಭಾಶಕ್ತಿಗೆ ಅಡೆತಡೆ ಉಂಟಾಗದಂತೆಯೂ ಆಕೆಗೆ ತನ್ನತನದ ಅರಿವನ್ನು ತಂದುಕೊಳ್ಳಲು, ಬೆಳೆಸಿಕೊಳ್ಳಲು ಸಮಯಾವಕಾಶ ಕಲ್ಪಿಸುವುದೂ ಈ ರೀತಿಯಾಗಿ 'ದೂರ ಕುಳ್ಳಿರಿಸುವುದರ' ಉದ್ದೇಶವಾಗಿದೆ.

ಆ ದಿನಗಳಿಗೆ ಸಂಬಂಧಿಸಿದಂತೆ ದೈಹಿಕ ಮಾನಸಿಕ ಕಿರಿಕಿರಿ, ನೋವು, ಅಸ್ವಸ್ಥತೆಗಳಿಗೂ ಅವರಲ್ಲಿ ಹಲವು ವಿಧದ ಎಲೆ-ಕಾಯಿ-ಬೇರು-ನಾರುಗಳ ಚಹಾ ಬಳಕೆಯಲ್ಲಿತ್ತು, ಮತ್ತು ಕೆಲವನ್ನು ಎಣ್ಣೆಯ ಜೊತೆಯಲ್ಲಿ ನೇರವಾಗಿ ಮೈಗೆ ಯಾ ನೋವಿನ ಭಾಗಕ್ಕೆ ಉಜ್ಜುವುದರಿಂದಲೂ ಉಪಶಮನ ಕಾಣುತ್ತಿದ್ದರು. ಕ್ಯಾಮೊಮೈಲ್, ದಾಸವಾಳ ಮತ್ತು

ಸ್ಕಲ್ ಕ್ಯಾಪ್ ಗಿಡಗಳ ಭಾಗಗಳನ್ನೂ ಮಾಸಿಕ ದಿನಗಳಲ್ಲಿ ಕಂಡುಬರುವ ಮಾನಸಿಕ ಅಸಮತೋಲನವನ್ನು ಸರಿದೂಗಿಸಲು ಬಳಸಲಾಗುತ್ತಿತ್ತು. ಕ್ರ್ಯಾಂಪ್‌ಬಾರ್ಕ್ ಅಥವಾ ಬ್ಲ್ಯಾಕ್ ಹಾವ್ ತೊಗಟೆಯನ್ನು ಸೀಳಿ ಚೂರಾಗಿಸಿ ಒಣಗಿಸಿ ಶೇಖರಿಸಿಟ್ಟು ಬಳಸಲಾಗುತ್ತದೆ. ಎಂಟು ಔನ್ಸ್ ಕುದಿನೀರನ್ನು ಒಂದು ಟೇಬಲ್ ಸ್ಪೂನ್ ತೊಗಟೆಚೂರುಗಳ ಮೇಲೆ ಸುರಿದು ಹತ್ತು ನಿಮಿಷ ಮುಚ್ಚಿಟ್ಟು ಅನಂತರ ಸೋಸಿಕೊಂಡು ದಿನವಿಡೀ ಇದನ್ನೇ ಕುಡಿಯುತ್ತಿದ್ದರೆ ಸ್ನಾಯುಸೆಳೆತ, ನೋವು ತಗ್ಗುತ್ತವೆ. ಇದನ್ನೇ ಇನ್ನಷ್ಟು ಹೊತ್ತು ನೀರಲ್ಲಿಟ್ಟು ಅನಂತರ ಸೋಸಿಕೊಂಡು, ಸೆಳೆತ-ನೋವು ಇದ್ದೆಡೆ ಆ ನೀರನ್ನು ಉಜ್ಜಿಕೊಂಡರೆ ಸ್ನಾಯುಬಿಗಿತ ಸಡಿಲಾಗಿ ನೋವು ಮಾಯುತ್ತದೆ. ಅಡಿಯಲ್ಲುಳಿದ ತೊಗಟೆಚೂರುಗಳನ್ನು ಬೆಚ್ಚಗಿರುವಾಗಲೇ ಬಟ್ಟೆಯಲ್ಲಿ ಕಟ್ಟಿ ನೋವಿನ ಮೇಲೆ ಶೇಖ ಕೊಡಲು ಸಹ ಬಳಸಬಹುದು. ರಕ್ತಹೀನತೆಯಾಗದಂತೆ ತಡೆಯುವುದಕ್ಕಾಗಿ ತುರಿಕೆಗಿಡ (ಸ್ಟಿಂಗಿಂಗ್ ನೆಟ್ಲ್) ಸಹಿತವಾಗಿ ಅನೇಕ ಹಸಿರುಗಿಡಗಳ ಎಲೆಗಳನ್ನು ಸೂಪ್, ಚಹಾಗಳಂತೆಯೂ ಬೆಂದ ಎಲೆಗಳನ್ನು ತರಕಾರಿಯಾಗಿಯೂ ಬಳಸುತ್ತಿದ್ದರು.

ಮಾಸಿಕ ದಿನಗಳಿಗೆ ಸಂಬಂಧಿಸಿದಂತೆ, ಋತುಬಂಧ ಹಂತದ ಸಮಸ್ಯೆಗಳಿಗೂ ಹಳ್ಳಿಗರಲ್ಲಿ ಹಲವು ಮನೆಮದ್ದುಗಳಿವೆ. ಆ ಸಮಯದಲ್ಲಿನ ಮಾನಸಿಕ ಒತ್ತಡ ಮತ್ತು ಭಾವಾವೇಶಗಳಿಗೆ ಸರಳವಾದೊಂದು ನಿವಾರಣೋಪಾಯ ಕಪ್ಪುಎಳ್ಳಿನ ಸೇವನೆ. ದಿನವೂ ಒಂದು ಎಳ್ಳುಂಡೆ ತಿನ್ನುವುದು ಸುಲಭ ದಾರಿ. ಋತುಸ್ರಾವದ ಏರುಪೇರು ಬಹುಮಹಿಳೆಯರನ್ನು ಕಾಡುತ್ತದೆ. ಅದಕ್ಕಿರುವ ಪರಿಹಾರಗಳಲ್ಲಿ ಒಂದನ್ನು ಮುಖ್ಯವಾಗಿ ಇಲ್ಲಿ ಪ್ರಸ್ತಾಪಿಸಲೇಬೇಕು. ನಮಗೆಲ್ಲರಿಗೂ ಚಿರಪರಿಚಿತವಾಗಿರುವ, ಕೆಟ್ಟಕಳೆಯೆಂದು ನಾವು ಕಿತ್ತೆಸೆಯುವ ನಾಚಿಗೆಮುಳ್ಳು (ಮುಟ್ಟಿದರೆ ಮುನಿ ಗಿಡ) ಈ ಸಮಸ್ಯೆಗೆ ಮಾಯಾದಂಡದಂತಹ ಮನೆಮದ್ದು. ಮುಟ್ಟು ನಿಲ್ಲುವ ಸಮಯದಲ್ಲಿ ಹಲವಾರು ಮಹಿಳೆಯರಿಗೆ ಅತಿಸ್ರಾವವಾಗಿ ಗರ್ಭಕೋಶ ತೆಗೆಯುವಂತಹ ಪರಿಸ್ಥಿತಿ ಬಂದಿರುತ್ತದೆ. ಫೈಬ್ರಾಯ್ಡ್ ಅಥವಾ ಅಂತಹ ಬೇರಾವುದೇ ಸಮಸ್ಯೆಗಳಿಲ್ಲದೆ ಬರೀ ಅತಿಸ್ರಾವದ ತೊಂದರೆಯಿದ್ದಲ್ಲಿ ಇದನ್ನು ಧಾರಾಳವಾಗಿ ಮಾಡಿಕೊಳ್ಳಬಹುದು. ಸುಮಾರು ಆರೆಂಟು ಇಂಚು ಅಗಲಕ್ಕೆ ಸುತ್ತು ಹರಡಿರುವ ಮುಟ್ಟಿದರೆ ಮುನಿ ಗಿಡವೊಂದನ್ನು ಬೇರುಸಹಿತ ತಂದು, ಮಣ್ಣೆಲ್ಲ ತೊಳೆದು ತೆಗೆದು ಸ್ವಚ್ಛಗೊಳಿಸಿ, ತುಸು ಜಜ್ಜಿಕೊಂಡು ಎರಡು ಚಮಚ ಜೀರಿಗೆಯೊಂದಿಗೆ ಆರು ಲೋಟ (ಸುಮಾರು ಒಂದು ಲೀಟರ್) ನೀರಿನಲ್ಲಿ ಕುದಿಯಲಿಡಬೇಕು. ಚೆನ್ನಾಗಿ ಕುದಿದು ಎರಡು ಲೋಟದಷ್ಟಕ್ಕೆ ಇಳಿದಾಗ ಅದನ್ನು ಸೋಸಿಕೊಂಡು ಬೆಳಗ್ಗೆ ಮತ್ತು ಸಂಜೆ, ಹೊಟ್ಟೆ ಖಾಲಿಯಿದ್ದಾಗ ಸೇವಿಸುವುದು ಚಿಕಿತ್ಸೆ. ಇದನ್ನು ಬಿಡದೆ 48 ದಿನಗಳ ಕಾಲ ಮಾಡಿದರೆ ಅತಿಸ್ರಾವವೂ ನಿಂತು ಸಂಪೂರ್ಣವಾಗಿ ಋತುಬಂಧವೇ ಆಗಿಬಿಡುತ್ತದೆ. ಶಸ್ತ್ರಚಿಕಿತ್ಸೆ ಮಾಡಿ ಗರ್ಭಕೋಶ ತೆಗೆದುಬಿಡುವುದಕ್ಕಿಂತ ಇದು ಎಷ್ಟೋ ಉತ್ತಮ ಪರಿಹಾರ.

ಅಮೆರಿಕನ್ ಮೂಲನಿವಾಸಿಗಳು ಹಲವು ಮನೆಮದ್ದುಗಳಿಂದ ಅತಿಸ್ರಾವ ಸಮಸ್ಯೆಗೂ ಉಪಚಾರ ಮಾಡುತ್ತಿದ್ದರು. ಆಲ್ಫಾಲ್ಫಾ, ಕಾಡುಗೆಣಸು, ಮಾಕಾ, ಸೇಜ್ ಮುಂತಾದವುಗಳನ್ನು

ಅಡುಗೆಯಲ್ಲಿಯೂ ಆಹಾರವಾಗಿಯೂ ಔಷಧಿಯಾಗಿಯೂ ಬಳಸುತ್ತಿದ್ದರು. ಋತುಬಂಧ ಸಮಯದಲ್ಲಿ ಉಂಟಾಗುತ್ತಿದ್ದ ಮಾನಸಿಕ ಖಿನ್ನತೆಗೆ ಸೈಂಟ್ ಜಾನ್ಸ್ ವಾರ್ಟ್ (ಟಿಪ್ಪನ್ಸ್ ವೀಡ್) ಬಳಕೆಯಾಗುತ್ತಿತ್ತು ಎನ್ನುವ ಮಾಹಿತಿಯಷ್ಟೇ ದೊರೆತಿದೆ (ಹೇಗೆ ಎನ್ನುವುದು ಸರಿಯಾಗಿ ಲಭ್ಯವಾಗಿಲ್ಲ).

4. ಹಸುಗೂಸಿನ ಕಾಳಜಿ

'ಕೂಸು ಇದ್ದ ಮನಿಗೆ ಬೀಸಣಿಗಿ ಯಾತಕ್ಕ...' ಅಂತ ನಮ್ಮ ಜನಪದರು ಹಾಡಿದರು. 'ಒಂದು ಮಗುವಿದ್ದ ಮನೆಗೆ ಹತ್ತಾಳು ಸಾಲದು' ಅಂತೊಂದು ಗಾದೆಯೂ ನಮ್ಮಲ್ಲಿದೆ. 'ಮಗುವೊಂದು ಮನೆಯಲ್ಲಿದ್ದರೆ ಎಲ್ಲರೂ ಚುರುಕಾಗಿರ್ತಾರೆ' ಅಂತ ನಮ್ಮಜ್ಜಿ ಹೇಳುತ್ತಿದ್ದರು. ಇವೆಲ್ಲದರ ಅರ್ಥ ಮತ್ತೇನಲ್ಲ, ಎಲ್ಲರಿಗಿಂತ ಪುಟ್ಟದಾಗಿದ್ದರೂ, ಕೂಸೊಂದು ಮನೆಯ ಕೇಂದ್ರವಾಗಿ ಎಲ್ಲರನ್ನೂ 'ಕುಣಿಸುತ್ತ' ತನ್ನ ತಾನು ಮರೆಯುತ್ತ, ಎಲ್ಲರನ್ನೂ ಮೈಮರೆಸುತ್ತ ಗೃಹವನ್ನು ಗೋಕುಲ ಮಾಡಿಬಿಡುತ್ತದೆ. ಅಂತಹ ಪುಟ್ಟ ಅತಿಥಿ ಮನೆಗೆ ಆಗಮಿಸುವಾಗಿನ ಸಡಗರ ಸಂಭ್ರಮ ಕನಸು ನಿರೀಕ್ಷೆಗಳನ್ನು ಪದಗಳಲ್ಲಿ ಹಿಡಿದಿಟ್ಟರೆ ನೀರಸವಾಗುತ್ತದೆ.

ಈ ಪುಟ್ಟ ದೊರೆ (ದೊರೆಸಾನಿ)ಯ ಸ್ನಾನವೂ ಒಂದು ನಾಜೂಕಿನ ಪ್ರಕ್ರಿಯೆ. ಮಗುವಿಗೆ ನಿಗದಿತ ಎಣ್ಣೆಯನ್ನೇ ಹಚ್ಚುತ್ತಾರೆ ಮತ್ತು ಅಚ್ಚುಕಟ್ಟಾಗಿ ನಿರ್ದಿಷ್ಟವಾಗಿ ತಿದ್ದಿ-ತೀಡಿ ಮಸಾಜ್ ಮಾಡಲಾಗುತ್ತದೆ. ಕೆಲವು ಮನೆಗಳಲ್ಲಿ ಅಥವಾ ಊರುಗಳಲ್ಲಿ ತಲೆತಲಾಂತರದಿಂದ ಕೆಲವೊಂದು ಗಿಡಮೂಲಿಕೆಗಳನ್ನು ಹಾಕಿ ಒಂದು ಹದದಲ್ಲಿ ಕಾಯಿಸಲಾದ ಎಣ್ಣೆಯನ್ನಷ್ಟೇ ಮಗುವಿಗೆ ಹಚ್ಚಲಾಗುತ್ತದೆ. ಅನಂತರ ಮಗುವಿನ ಮೈಯನ್ನು ಹದವಾಗಿ ಮೃದುವಾಗಿ ತೀಡಿ ತೀಡಿ ಮಸಾಜ್ ಮಾಡುತ್ತಾರೆ. ಇದರಿಂದಲೇ ಮಗುವಿನ ರೂಪ ಸೌಂದರ್ಯ ವೃದ್ಧಿಸುತ್ತದೆ ಎಂದು ಖಡಾಖಂಡಿತವಾಗಿ ಸಾರುತ್ತಾರೆ (ಹಾಗೆಂದೇ ಸುಂದರ ರೂಪಿನವರನ್ನು 'ತಿದ್ದಿ-ತೀಡಿದ ಅಂಗಾಂಗ' ಎಂದು ವರ್ಣಿಸುವ ವಾಡಿಕೆ ಬಂದಿರಬೇಕು). ತಲೆ, ಹಣೆ, ಮೂಗು, ಗಲ್ಲ, ಕೆನ್ನೆಗಳಿಂದ ಹಿಡಿದು ಕೈಗಳನ್ನು, ಕಾಲುಗಳನ್ನು, ಎದೆ-ಬೆನ್ನುಗಳನ್ನು, ಕೈಕಾಲು ಬೆರಳುಗಳನ್ನು ಸವರಿ ನೀವಿ ನೇರ್ಪುಗೊಳಿಸುವ ಕಾರ್ಯ ಎಲ್ಲರಿಗೂ ಕರಗತವಾಗದು. ಹೀಗೆ ನೀವಿಸಿಕೊಂಡು ಸುಡುಸುಡು ಬಿಸಿನೀರಲ್ಲಿ ಮೀಯಿಸಿಕೊಂಡ ಎಳೆಗೂಸು ಎರಡು ಮೂರು ಗಂಟೆಯ ಕಾಲ ಒಂದೊಳ್ಳೆ ನಿದ್ದೆ ಮಾಡುವುದು ಗ್ಯಾರಂಟಿ.

ಜೇಷ್ಠಮಧು, ಬಜೆಬೇರು, ಮತ್ತು ಗಜ್ಜುಗಕಾಯಿ ನಮ್ಮ ಹಸುಗೂಸುಗಳ ಆರೈಕೆಯಲ್ಲಿ ಮುಖ್ಯಪಾತ್ರ ವಹಿಸುತ್ತವೆ. ನಿತ್ಯವೂ ಮುಸ್ಸಂಜೆ ಹೊತ್ತು ಸಾಣೆಕಲ್ಲಿನ ಮೇಲೆ ಬಜೆಬೇರನ್ನು ಗಂಧದಂತೆ ತೇಯ್ದು ಮಗುವಿನ ನಾಲಗೆಗೆ ನೆಕ್ಕಿಸುವ ಕ್ರಮ ಈಗಲೂ ಚಾಲ್ತಿಯಲ್ಲಿದೆ. ನಿಗದಿತವಾಗಿ ಜೇಷ್ಠಮಧು, ಒಂದೆಲಗದ ಗಡ್ಡೆಬೇರು ಮತ್ತು ಗಜ್ಜುಗಕಾಯಿಗಳನ್ನು ಇದರೊಂದಿಗೆ ಸೇರಿಸಿಕೊಳ್ಳುತ್ತಾರೆ (ಒಂದೆಲಗ ಬುದ್ಧಿಮತ್ತೆಗೆ ಸಹಕಾರಿಯೆಂದು ಹೆಸರಾಗಿದೆ). ಮಗುವಿನ ವಯಸ್ಸಿಗೆ ಅನುಗುಣವಾಗಿ, ತಿಂಗಳೊಳಗಿನ ಹಸುಗೂಸಿಗೆ ತಾಯಿಯ

ಎದೆಹಾಲಿನಲ್ಲಿ (ಆಮೇಲೆ ಕಾದಾರಿಸಿದ ನೀರಿನಲ್ಲಿ) ಬಜೆಯನ್ನು ಎರಡು-ಮೂರು ಸುತ್ತು, ಜೇಷ್ಠಮಧು ಮತ್ತು ಗಜ್ಜುಗಗಳನ್ನು ಒಂದೊಂದೇ ಸುತ್ತು ತೇಯುವುದು ವಾಡಿಕೆ. ಅನಂತರ ಎರಡು ವಾರಕ್ಕೆ ಒಂದೊಂದು ಸುತ್ತಿನ ತೇಯುವಿಕೆ ಹೆಚ್ಚಿಸಿ ಮುಸ್ಸಂಜೆಗೆ ನಿತ್ಯಾರೈಕೆಯಾಗಿ ವರುಷದವರೆಗೆ ನೀಡುತ್ತಾರೆ. ಬಜೆ ತುಸು ಖಾರ, ಜೇಷ್ಠಮಧು, ತುಸು ಸಿಹಿ ಮತ್ತು ಗಜ್ಜುಗ ಕಹಿ. ಜೊತೆಯಾಗಿ ಈ ಮೂರು ಮಗುವಿನ ಸಾಮಾನ್ಯ ಆರೋಗ್ಯ ಪಾಲನೆಗೆ ಸಹಕಾರಿಯಾಗುತ್ತವೆ. ಹೊಟ್ಟೆಯ ಸಮಸ್ಯೆ, ವಾಯುಪ್ರಕೋಪ, ನೆಗಡಿ-ಕಫಬಾಧೆ ಇತ್ಯಾದಿಗಳಿಂದ ರಕ್ಷಿಸುತ್ತವೆ. ಯಾವುದೋ ಕಾರಣದಿಂದ ಮಗು ಒಂದೇ ಸಮನೆ ಅಳುತ್ತಿದ್ದು ಮಲಗದೆ ಇದ್ದಾಗ ಜಾಯಿಕಾಯಿಯನ್ನು ಕೆಲಸುತ್ತು ಗಂಧದಂತೆ ತೇಯ್ದು ನಾಲಗೆಗೆ ನೆಕ್ಕಿಸಿ ಹಾಲು ಕುಡಿಸುವುದರಿಂದ ಮಗು ಸಾಂತ್ವನಗೊಂಡು, ನಿದ್ರಿಸುತ್ತದೆ.

ವರುಷದೊಳಗಿನ ಪುಟ್ಟ ಕೂಸಿಗೆ ನಿಯಮಿತವಾಗಿ ಓಮ ಕಷಾಯ ಮಾಡಿ ಒಂದೇ ಒಂದು ಚಮಚದಷ್ಟು ಕುಡಿಸುವ ಕ್ರಮವೂ ಕನ್ನಡ ಕರಾವಳಿ ಭಾಗದಲ್ಲಿದೆ. ಮೂರು ತಿಂಗಳೊಳಗಿನ ಹಸುಗೂಸಿಗೆ ವಾಯು ತೊಂದರೆ ಆಗಿದೆಯೆನಿಸಿದರೆ ಓಮ ಕಷಾಯಕ್ಕೂ ಮೊದಲು ಹೊಕ್ಕುಳಿನ ಸುತ್ತಲೂ ಒಂದು ಬಿಂದು ಬೆಣ್ಣೆ ಅಥವಾ ತುಪ್ಪ ಹನಿಸಿ ನಿಧಾನವಾಗಿ ಹೊಕ್ಕುಳಿನಿಂದ ಒಂದಿಂಚು ಅಗಲಕ್ಕೆ ವೃತ್ತಾಕಾರವಾಗಿ ಸುತ್ತುವುದರಿಂದ ಎಳೆಗೂಸು ಶಾಂತವಾಗಿ ನಿದ್ರೆಗೆ ಜಾರಿಕೊಳ್ಳುವುದು. ಸರಿಸುಮಾರು ತಿಂಗಳಿಗೊಮ್ಮೆ ಹಲವಾರು ಗಿಡಗಳ ಚಿಗುರುಗಳನ್ನು ತಂದು ಸ್ವಚ್ಛಗೊಳಿಸಿ ನುಣ್ಣಗೆ ಅರೆದು ಒಂದೆರಡು ಚಮಚ ರಸವನ್ನು ಜೇನಿನೊಂದಿಗೆ ಮಗುವಿಗೆ ಕುಡಿಸುವ ಪರಿಪಾಠ ಈಗಲೂ ಹಳ್ಳಿಗಳಲ್ಲಿದೆ. ಬಳಸುವ ಚಿಗುರುಗಳು ಮಾತ್ರ ಆಯಾ ಪ್ರದೇಶಕ್ಕೆ ಮತ್ತು ವರುಷದ ಋತುಮಾನಕ್ಕೆ ಹೊಂದಿಕೊಂಡು ವ್ಯತ್ಯಾಸವಾಗುತ್ತವೆ. ಮಗುವಿನ ಸರ್ವತೋಮುಖ ರೋಗನಿರೋಧಕ ಶಕ್ತಿವರ್ಧನೆಗಾಗಿ ಈ ರಸೌಷಧಿ ನೀಡಲಾಗುತ್ತದೆ. ಐದಾರು ವರುಷ ವಯಸ್ಸಿನವರೆಗೂ ಇದನ್ನು ಕೊಡುತ್ತಾರೆ. ಡಯಾಪರ್ ಇಲ್ಲದಿದ್ದರೂ ಹಸುಗೂಸಿಗೆ ಒದ್ದೆಬಟ್ಟೆಯ ಕಾರಣದಿಂದ ದದ್ದು ಗಂಧೆಗಳೇಳುವುದು ಸಹಜ. ಬಹಳ ಹಿಂದೆ, ಇದಕ್ಕಾಗಿಯೇ ಕೆಲವು ಗಿಡಗಳ ಎಲೆ-ತೊಗಟೆ-ಬೇರುಗಳನ್ನು ಜಜ್ಜಿ ರಸ ಸವರುತ್ತಿದ್ದರು. ಹಾಗೂ ಅವುಗಳನ್ನೇ ಸುಟ್ಟು ಪಡೆದ ಬೂದಿಯನ್ನು ಒಳ್ಳೆಯ ಹತ್ತಿ ಬಟ್ಟೆಯಲ್ಲಿ ಸೋಸಿ ದೊರೆತ ನಯವಾದ ಬೂದಿಯನ್ನು ಪೌಡರಿನಂತೆ ನಿತ್ಯ ಬಳಸುವುದೂ ವಾಡಿಕೆಯಲ್ಲಿತ್ತು. ಆದರೆ ಈ ಗಿಡಗಳಾವುವೆಂದು ತಿಳಿದವರು ಹೇಳುವುದಿಲ್ಲ, ಹೇಳಬಲ್ಲವರಿಗೆ ತಿಳಿದಿಲ್ಲವಾಗಿದೆ. ಇಂಥ ಅಪರೂಪದ ಕೆಲವು ಗಿಡಮೂಲಿಕೆಗಳ ಮಾಹಿತಿ ಈ ರೀತಿಯ ಗೌಪ್ಯದ ಕಾರಣ ನಶಿಸುತ್ತಿರುವುದು ಖೇದಕರ.

ಪುಟಾಣಿಗೆ ನೆಗಡಿಯಾಗದಂತೆ ಮಳೆಗಾಲದಲ್ಲಿ ಸ್ನಾನ ಮಾಡಿಸಿದ ಬಳಿಕ ಕೂಸಿನ ನೆತ್ತಿಗೆ ನಸುಬೆಚ್ಚಗೆ ಮಾಡಿಕೊಂಡ ಕುಂಕುಮ (ಮನೆಯಲ್ಲೇ ಮಾಡಿದ ಶುದ್ಧ ಅರಶಿನ ಪುಡಿಗೆ ಸುಣ್ಣದ ತಿಳಿನೀರು ಮತ್ತು ತುಸು ಎಳ್ಳೆಣ್ಣೆ ಬೆರೆಸಿ ಮನೆಯಲ್ಲೇ ತಯಾರಿಸಿಕೊಂಡ ಶುದ್ಧ ಕುಂಕುಮ) ವನ್ನು ಒಂದು ಚಮಚ ಸವರಿ ಮತ್ತೆ ಮಲಗಿಸುತ್ತಿದ್ದರು. ಇದರಿಂದ ನೆತ್ತಿಯಲ್ಲಿ ಕೂದಲುಗಳೆಡೆಯಲ್ಲಿ ಉಳಿದ ನೀರಹನಿ ದೇಹಕ್ಕೆ ಹೀರಿಕೊಳ್ಳುವುದಿಲ್ಲ ಎನ್ನುವ

ಮುಂಜಾಗರೂಕತೆ. ವಾತಾವರಣವೇ ಥಂಡಿಯಾಗಿ ಅಥವಾ ಮನೆಯಲ್ಲಿ ಯಾರಿಗಾದರೂ ನೆಗಡಿಯಾಗಿ ಅವರಿಂದ ಮಗುವಿಗೆ ನೆಗಡಿಯಾದರೆ ದೊಡ್ಡಪತ್ರೆ ಎಲೆಯನ್ನು ಬಿಸಿಪಾತ್ರೆಯಲ್ಲಿರಿಸಿ ಬಾಡಿಸಿ ಅದನ್ನು ಹದವಾಗಿ ಹಣೆ-ಎದೆ, ಬೆನ್ನುಗಳಿಗೆ ಒತ್ತಿ ಬಿಸಿ ಶೇಖ (ಪೊಟ್ಟಲಿ ಶಾಖ) ಕೊಡುವುದೂ ಮತ್ತೆರಡು ಎಲೆಗಳನ್ನು ಹಾಗೇ ಬಿಸಿಯಲ್ಲಿರಿಸಿ ಬಾಡಿಸಿ ಹಿಂಡಿ ತೆಗೆದ ರಸವನ್ನು ಜೇನಿನೊಂದಿಗೆ ಮಗುವಿಗೆ ಕುಡಿಸುವುದೂ ಇದೆ. ಇದರಿಂದ ನೆಗಡಿ ಉಲ್ಬಣವಾಗದೆ ಕಫ ಕರಗಿ ಮಗು ನಿರಾಳವಾಗಿ ನಿದ್ರಿಸುತ್ತದೆ. ವರುಷದ ಆಸುಪಾಸಿನ ಮಕ್ಕಳಿಗಾದರೆ ನೆಗಡಿಯಾದಾಗ ಪಂಚಪತ್ರೆಯ ರಸ, ತುಂಬೆಯ ರಸ, ತುಳಸಿ ಮತ್ತು ಈರುಳ್ಳಿ ರಸಗಳನ್ನೂ ಜೇನಿನೊಂದಿಗೆ ಬೆರೆಸಿ ಕುಡಿಸಲಾಗುತ್ತದೆ. ಕೆಮ್ಮು ಹೆಚ್ಚಾಗದಂತೆ ತಡೆಯುವ ಈ ಮದ್ದುಗಳು ಕಫವು ಕರಗಿ ಮಲದೊಂದಿಗೆ ವಿಸರ್ಜಿಸಲ್ಪಡುವುದಕ್ಕೆ ಸಹಕಾರಿಯಾಗಿವೆ.

ಮಹಿಳೆಯ ಮಾಸಿಕ ದಿನಗಳಿಗೆ ಸ್ಯಾನಿಟರಿ ಪ್ಯಾಡ್ ಮಾಡಿಕೊಂಡಂತೆಯೇ, ಅಮೆರಿಕನ್ ಮೂಲನಿವಾಸಿಗಳು ಕಂದಮ್ಮಗಳಿಗೂ ಡಯಾಪರ್ ತಯಾರಿಸಿಕೊಂಡಿದ್ದರು. ನಂಜುನಿರೋಧಕ ಗುಣವುಳ್ಳ ಸ್ಫಾಗ್ನಮ್ ಹಾವಸೆ ಮತ್ತಿತರ ಎಲೆಹಾವಸೆಗಳನ್ನು ಡಯಾಪರ್ ಆಗಿಯೂ (ಸ್ಯಾನಿಟರಿ ಪ್ಯಾಡ್ ಮಾಡಿಕೊಂಡಂತೆಯೇ), ಮೆತ್ತೆ ಹಾಗೂ ಇನ್ಸುಲೇಷನ್ ಗಾಗಿಯೂ, ಲೈಕೆನ್ ಮತ್ತು ಇತರ ಹಾವಸೆಗಳ ಜೊತೆಗೆ ಗಾಯದ ಉಪಚಾರದಲ್ಲಿ ಕಟ್ಟು ಕಟ್ಟುವಿಕೆಯಲ್ಲಿಯೂ ಬಳಸಲಾಗುತ್ತಿತ್ತು. ಡಯಾಪರ್ ದದ್ದುಗಳಿಗೆ ಜೋಳದ ನಯವಾದ ಹಿಟ್ಟನ್ನು ಸೋಪ್-ಸ್ಟೋನ್ ಕಲ್ಲಿನ ಅತಿನುಣ್ಣನೆಯ ಪುಡಿಯೊಂದಿಗೆ ಬೆರೆಸಿ ಪೌಡರಿನಂತೆ ಉಪಯೋಗಿಸುತ್ತಿದ್ದರು. ಜೋಳದ ಹಿಟ್ಟನ್ನು ನುಣ್ಣಗೆ ಪುಡಿ ಮಾಡಿದ ಸೇಜ್ ಪುಡಿಯೊಂದಿಗೆ ಬೆರೆಸಿಯೂ ಮಗುವಿನ ನಾಜೂಕು ತ್ವಚೆಗೆ ಪೌಡರ್ ಆಗಿ ಬಳಸುವುದಿತ್ತು.

ನವಜಾತ ಶಿಶುವಿನ ಹೊಕ್ಕುಳ ಬಳ್ಳಿಯನ್ನು ಕತ್ತರಿಸಿದಾಗ ಅದರ ಮೇಲೆ ಬಿಳಿ ಹತ್ತಿಯುಂಡೆಯಂತಹ ಅಣಬೆ- ಪಫ್ ಬಾಲ್ ಇರಿಸಿ ಕಟ್ಟಲಾಗುತ್ತಿತ್ತು. ಇದರ ಬಳಕೆ ಎಷ್ಟು ಚಾಲ್ತಿಯಲ್ಲಿತ್ತೆಂದರೆ ಚೆರೊಕಿ ಜನರು ಈ ಅಣಬೆಯನ್ನೇ ಶಿಶುನಾಭಿ ಎಂದು ಕರೆಯುತ್ತಿದ್ದರು. ಪಫ್ ಬಾಲ್ ಅಣಬೆಯೊಳಗಿನ ಬೀಜಕಣ (ಸ್ಪೋರ್) ದದ್ದುಗಳಿಗೆ, ಸುಟ್ಟಗಾಯಗಳಿಗೆ ಮದ್ದಾಗುತ್ತಿತ್ತು. ಮಗು ನಡೆದಾಡುವ ವಯಸ್ಸಿನಲ್ಲಿ ಉಸಿರಾಟದ ಸಮಸ್ಯೆಗೆ ಪರಿಹಾರವಾಗಿ ಈ ಅಣಬೆಯನ್ನು ದಾರದಲ್ಲಿ ಪೋಣಿಸಿ ಕತ್ತಿನ ಸುತ್ತ ತೂಗಾಡಿಸುತ್ತಿದ್ದರು. ಉಸಿರಾಟ ಕ್ಲಿಷ್ಟವಾದಲ್ಲಿ ಇದು ಇನ್ಹೇಲರ್ ರೀತಿಯಲ್ಲಿ ಉಪಯುಕ್ತವಾಗುತ್ತಿತ್ತು. ಈ ತಾಯಂದಿರೂ ಆರಂಭಿಕ ದಿನಗಳಲ್ಲಿ ತಮ್ಮ ಮಗುವಿನೊಂದಿಗೆ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಮಗುವಿಗೆ ಮಸಾಜ್ ಮಾಡುವುದು, ಹದವಾಗಿ ಕೈಕಾಲುಗಳನ್ನು ಪೂಸಿ ತೀಡಿ ಎಳೆದು ತಿರುಗಿಸಿ ವ್ಯಾಯಾಮವನ್ನೂ ಮಾಡುತ್ತಿದ್ದರು, ನಮ್ಮಲ್ಲಿಯಂತೆಯೇ.

ಸ್ಟ್ರಾಬೆರಿ ಮತ್ತು ರಾಸ್ಪ್‌ಬೆರಿ ಎಲೆಗಳನ್ನು ಕುದಿಸಿದ ನೀರು ಹಲಬಗೆಯಲ್ಲಿ ಉಪಯುಕ್ತವೆಂದು ಕಂಡುಕೊಂಡಿದ್ದರು, ಮೂಲನಿವಾಸಿಗಳು. ಗಾಯಗಳನ್ನು ತೊಳೆಯಲು,

ಎಳೆಮಕ್ಕಳಿಗೆ ಭೇದಿಯಿದ್ದಾಗ ಹದವಾದ ಟೀಯಾಗಿ, ಜೀರ್ಣಶಕ್ತಿ ವೃದ್ಧಿಗೆ ಈ ಚಹಾ ಉಪಕಾರಿ. ಹಾಲೂಡುವ ತಾಯಂದಿರು ತಮ್ಮ ಹಾಗೂ ಕೂಸಿನ ಜೀರ್ಣಶಕ್ತಿಗಾಗಿ ಈ ಚಹಾವನ್ನು ಸೇವಿಸುತ್ತಿದ್ದರು. ಮಕ್ಕಳ ಬೆಳವಣಿಗೆಯಲ್ಲಿ, ನಮ್ಮಲ್ಲಿಯಂತೆಯೇ ರೆಡ್ ಇಂಡಿಯನ್ನರಲ್ಲಿಯೂ, ಬಜೆ ಅತ್ಯಂತ ಪ್ರಮುಖವಾಗಿದ್ದ ಗಿಡಮೂಲಿಕೆಯಾಗಿತ್ತು. ಹಲ್ಲು ಮೂಡುವ ಸಮಯದಲ್ಲಿನ ಕಿರಿಕಿರಿಯನ್ನು ನಿವಾರಿಸಲು ಬಜೆಬೇರಿನ ಚೂರನ್ನು ದಾರದಲ್ಲಿ ಪೋಣಿಸಿ ಮಗುವಿನ ಕತ್ತಿನ ಸುತ್ತ ಕಟ್ಟುತ್ತಿದ್ದರು. ಸಿಕ್ಕಿದ್ದೆಲ್ಲವನ್ನು ಬಾಯಿಗಿಡುವ ಹಂತದಲ್ಲಿರುವ ಮಗು ಸುಲಭವಾಗಿ ಕೈಗೆಟಕುವ ಇದನ್ನೇ ಬಾಯಲ್ಲಿರಿಸಿ ಕಚ್ಚುವುದರಿಂದ ಹದವಾದ ಅರಿವಳಿಕೆಯ ಗುಣ ಹೊಂದಿದ ಬಜೆ ಹಲ್ಲುಮೂಡುವ ನೋವನ್ನು ಶಮನಗೊಳಿಸುತ್ತದೆ. ಬಜೆ ನೋವುನಿವಾರಕ ಮಾತ್ರವಲ್ಲ, ದುಷ್ಟಶಕ್ತಿಗಳನ್ನು ದೂರೀಕರಿಸುವುದೆಂದೂ ಅವರು ನಂಬಿದ್ದರು. ಅಂತೆಯೇ ಬಜೆ ಬೇರಿನ ತುಂಡುಗಳನ್ನು ಮಗುವಿನ ಬಟ್ಟೆಗೆ, ತೊಟ್ಟಿಲಿನಲ್ಲಿ, ಹಾಸಿಗೆ–ಹೊದಿಕೆಗಳಿಗೆ, ಕೈ–ಕಾಲಿಗೆ ತಾಯಿತದಂತೆ ಕಟ್ಟಿಡುತ್ತಿದ್ದರು. ಜೇನು– ಈಗಿನಂತಲ್ಲದೆ– ಅಂದು ಶಿಶು ಆರೈಕೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿತ್ತು. ಗಾಯಗಳಿಗೆ ಲೇಪವಾಗಿ, ಅಳುತ್ತಿದ್ದ ಮಗುವಿನ ಸಾಂತ್ವನಕ್ಕಾಗಿ, ನಂಜುನಿವಾರಕವಾಗಿ ಜೇನು ಬಳಕೆಯಾಗುತ್ತಿತ್ತು.

5. ಇಳಿವಯಸ್ಸಿನವರ ಕಾಳಜಿ

ವಯಸ್ಸಾಗುತ್ತಿದ್ದಂತೆ, ದೇಹದಲ್ಲಿ ನಿಶ್ಶಕ್ತಿ, ವಾಯುಪ್ರಕೋಪದ ಸಮಸ್ಯೆ, ಆಸಿಡಿಟಿ ಸಮಸ್ಯೆ, ಅಜೀರ್ಣದ ಸಮಸ್ಯೆ, ಮಲಬದ್ಧತೆ, ಅತಿಮೂತ್ರ– ಇವೆಲ್ಲವೂ ಉಂಟಾಗಬಹುದು. ಆಧುನಿಕ ಖಾಯಿಲೆಗಳಾದ ರಕ್ತದೊತ್ತಡ, ಸಿಹಿಮೂತ್ರರೋಗ, ವಯೋಸಹಜ ದೃಷ್ಟಿ ಮತ್ತು ಶ್ರವಣ ದೋಷಗಳು ಸಾಮಾನ್ಯ. ದೃಷ್ಟಿ ದೋಷ ಮತ್ತು ಶ್ರವಣ ದೋಷಗಳಿಗೆ ಕೆಲವೊಂದು ಮದ್ದಿನೆಣ್ಣೆಗಳನ್ನು ಕಣ್ಣಿಗೆ–ಕಿವಿಗೆ ಒಂದೆರಡು ಹನಿ ಹನಿಸುವ ಅಭ್ಯಾಸ ಈಗಲೂ ಹಳ್ಳಿಕಡೆಗಳಲ್ಲಿ ಚಾಲ್ತಿಯಲ್ಲಿದೆಯಾದರೂ ಅದಕ್ಕೆ ಬಳಸುವ ಗಿಡಮೂಲಿಕೆಗಳ ವಿವರ ನೀಡಲಾರರು. ಸುಲಭವಾಗಿ ಮನೆಯಲ್ಲಿಯೇ ಕಣ್ಣುರಿಗೆ ಮಾಡಿಕೊಳ್ಳುವ ಒಂದು ಶಮನಕಾರಕ ಕೊತ್ತಂಬರಿನೀರು. ಒಂದು ಚಮಚ ಕೊತ್ತಂಬರಿ ಬೀಜಗಳನ್ನು ತೊಳೆದು ಶುಭ್ರ ಬಟ್ಟೆಯಲ್ಲಿ ಪುಟ್ಟ ಗಂಟಾಗಿ ಕಟ್ಟಿ ಪುಟಾಣಿ ತಟ್ಟೆಯಲ್ಲಿ ಶುದ್ಧ ನೀರಿಟ್ಟು ಅದರಲ್ಲಿ ಈ ಗಂಟನ್ನು ಮುಳುಗಿಸಿಡಬೇಕು. ಅರ್ಧ–ಒಂದು ಗಂಟೆಯ ಬಳಿಕ ಈ ನೀರನ್ನು ಮುಚ್ಚಿದ ಕಣ್ಣುಗಳ ಮೇಲೆ ಎರಡು ಹನಿ ಹನಿಸಿ ಕಾಲು ಗಂಟೆ ಹಾಗೇ ಕಣ್ಣು ಮುಚ್ಚಿ ಮಲಗಿದ್ದರಾಯ್ತು. ಹೀಗೆ ದಿನದಲ್ಲಿ ನಾಲ್ಕೈದು ಬಾರಿ ಮಾಡಿದರೂ ಕಣ್ಣುರಿ ಪರಾರಿ. ಇದು ಹಿರಿಯರಿಗೇ ಸೀಮಿತವೇನಲ್ಲ. ಯಾವುದೇ ವಯೋಮಾನದವರೂ ತಂಗಣ್ಣು ಬೇಡವೆನ್ನುವುದಿಲ್ಲ.

ಹಾಗೆಯೇ ಹಿರಿಯರಲ್ಲಿ ಕಂಡುಬರುವ ಇನ್ನೊಂದು ಸಮಸ್ಯೆ ಬಾಯಿಹುಣ್ಣು ಮತ್ತು ಉರಿಮೂತ್ರ. ಉಷ್ಣದಾಹಾರ ಸೇವಿಸಿ ಬಾಯಿಹುಣ್ಣು ಆದಾಗ ಮತ್ತು ಉರಿಮೂತ್ರ

ಸಮಸ್ಯೆಯ ಮೊದಲ ಹಂತದಲ್ಲಿ ಮೆಂತೆ-ಕೊತ್ತಂಬರಿ-ಜೀರಿಗೆ ಕಷಾಯದ ಸೇವನೆ ಅತ್ಯಂತ ಉಪಶಮನಕಾರಿ. ಒಂದು ಪಾಲು ಮೆಂತೆ, ಎರಡು ಪಾಲು ಸೋಂಫ್ (ಇಷ್ಟವಿದ್ದರೆ), ನಾಲ್ಕು ಪಾಲು ಜೀರಿಗೆ, ಎಂಟು ಪಾಲು ಕೊತ್ತಂಬರಿಗಳನ್ನು ನಸು ಬೆಚ್ಚಗೆ ಮಾಡಿ ಪುಡಿಮಾಡಿ ಒಣಡಬ್ಬದಲ್ಲಿ ಶೇಖರಿಸಿ. ದಿನವೂ ಒಂದು ಚಮಚ ಈ ಪುಡಿಯನ್ನು ಒಂದು ಲೋಟ ನೀರಿನಲ್ಲಿ ಹಾಕಿ (ಬೇಕಿದ್ದರೆ ಒಂದು ಪುಟಾಣಿ ಲಿಂಬೆ ಗಾತ್ರದ ಬೆಲ್ಲವನ್ನೂ ಸೇರಿಸಿ) ಎರಡು-ಮೂರು ನಿಮಿಷ ಕುದಿಸಿ, ಸೋಸಿಕೊಂಡು, ಒಂದು ಲೋಟ ಬಿಸಿಹಾಲನ್ನು ಸೇರಿಸಿ ಕುಡಿದರೆ ದೇಹಕ್ಕೂ ತಂಪು, ಮನಸ್ಸಿಗೂ ಆಹ್ಲಾದ. [ಬೇಸಿಗೆಯಲ್ಲಿ ನಾನೀಗಲೂ ಇದನ್ನು ಮಾಡಿಕೊಳ್ಳುತ್ತೇನೆ. ಪದೇಪದೇ ಒಂದೆರಡು ಲೋಟದಷ್ಟನ್ನೇ ಮಾಡುವ ಬದಲು, ಸುಮಾರು ಒಂದೂವರೆ ಲೀಟರ್ ನೀರಿಗೆ ನಾಲ್ಕೈದು ಚಮಚ ಈ ಪುಡಿ, ದೊಡ್ಡ ಲಿಂಬೆ ಗಾತ್ರದ ಬೆಲ್ಲ ಹಾಕಿ ಹತ್ತು ನಿಮಿಷ ಕುದಿಸಿ ಇಟ್ಟರೆ, ಹಗಲಲ್ಲಿ ನೀರಿನ ಬದಲು -ಹಾಲು ಹಾಕದೆ- ಇದನ್ನೇ ಕುಡಿಯುವುದು.] ಬಾಯಿಹುಣ್ಣು ಅಥವಾ ಬಾಯಿ-ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಹಲವಾರು ಗಿಡಗಳ ಚಿಗುರುಗಳನ್ನು ನುಣ್ಣಗೆ ಅಗಿದು ನುಂಗುವುದು ಹಳ್ಳಿಗರಲ್ಲಿರುವ ಬಹುಸಾಮಾನ್ಯ ಮತ್ತು ಬಹುಮಾನ್ಯ ಅಭ್ಯಾಸ. ಕೆಲವು ಗಿಡ-ಪೊದೆಗಳ ತೊಗಟೆಗಳ ಮೇಲಿನ ಸಿಪ್ಪೆಯನ್ನು ಚೂರಿಯಿಂದ ಕೆರೆದು ಸ್ವಚ್ಛಗೊಳಿಸಿ ಒಳಗಿನ ಭಾಗವನ್ನು ಅಗಿದು ನುಂಗುವುದು ಅಥವಾ ಜೀರಿಗೆಯ ಜೊತೆಗೆ ಕುದಿಸಿ ಕಷಾಯವಾಗಿಸಿ ಕುಡಿಯುವುದೂ ವಾಡಿಕೆಯಲ್ಲಿದೆ. ಇವುಗಳಲ್ಲಿ ಕೆಲವು ಗಿಡಗಳಷ್ಟೇ ಈಗ ಹಳ್ಳಿಯ ಪರಿಸರದಲ್ಲಿ ಮನೆಗಳ ಸುತ್ತಮುತ್ತ ಲಭ್ಯವಿವೆ.

ಮಂಡಿನೋವು, ಸಂಧಿವಾತ ವಯೋಸಹಜವಾಗಿ ಬರುವ ಇನ್ನೊಂದು ಸಮಸ್ಯೆ. ಎಳ್ಳೆಣ್ಣೆ ಹಚ್ಚಿ ಬಿಸಿನೀರಿನ ಶಾಖದಿಂದ ಆರಂಭಿಸಿ, ಬೆಳ್ಳುಳ್ಳಿ-ಲವಂಗ ಹಾಕಿ ಕಾಸಿದೆಣ್ಣೆಯ ಮಸಾಜ್, ಕಾಡಿನ ಹಲವು ಎಲೆಗಳನ್ನು ಜಜ್ಜಿ ನೋವಿರುವ ಭಾಗದ ಸುತ್ತ ಇಟ್ಟು ಹಾಕುವ ಕಟ್ಟು, ಹುತ್ತದ ಮಣ್ಣನ್ನು ಬೆಚ್ಚಗಿನ ನೀರಿನಲ್ಲಿ ಕಲಸಿದ ಲೇಪದತನಕ ಹಲವಾರು ಕ್ರಮಗಳು ವಾಡಿಕೆಯಲ್ಲಿವೆ. ನಮ್ಮ ಅಜ್ಜ-ಪಿಜ್ಜಿಯರು ಈ ನೋವುಗಳನ್ನು ಸಹಿಸಿಕೊಂಡು ಇಂತಹ ಮನೆಮದ್ದುಗಳಲ್ಲೇ ಆದಷ್ಟು ಉಪಶಮನ ಕಂಡುಕೊಂಡು ಹಾಗೇ ಬಾಳಿ ಮರೆಯಾದರು. ಅವರೊಂದಿಗೆ ಹಲವಾರು ಮನೆಮದ್ದುಗಳೂ ಮರೆಗೆ ಸರಿದವು.

ವಯಸ್ಸಾಗುತ್ತಿದ್ದಂತೆ ತಲೆದೋರುವ ಇನ್ನೊಂದು ಸಮಸ್ಯೆ ಆಹಾರದಲ್ಲಿ ನಿರಾಸಕ್ತಿ, ರುಚಿಯಿಲ್ಲದಿರುವಿಕೆ ಅಥವಾ ಅಜೀರ್ಣದ ಸಮಸ್ಯೆ. ಇದಕ್ಕೊಂದು ಸುಲಭೋಪಾಯ ಊಟವನ್ನೇ ಸರಳಗೊಳಿಸುವುದು. ಅನ್ನವನ್ನು ಮಾಮೂಲಿಗಿಂತ ಹೆಚ್ಚು ಬೇಯಿಸುವುದು, ಹೊಟ್ಟೆಗೆ ಹಗುರವಾದ ಸೊಪ್ಪು-ತರಕಾರಿಗಳಿಂದ ಬಹಳ ಕಡಿಮೆ ಸಂಬಾರ ಪದಾರ್ಥಗಳನ್ನು ಬಳಸಿ ಮೃದುವಾದ ಆಹಾರ ಪದ್ಧತಿಯನ್ನು ಅನುಸರಿಸುವುದು. ಇದಕ್ಕೆ ಉತ್ತಮ ಉದಾಹರಣೆ ಪಲ್ಯ, ತೊವ್ವೆ ಮತ್ತು ತಂಬುಳಿ. ಈ ಮೂರೂ ಹೆಚ್ಚು ಹುಳಿ-ಖಾರವನ್ನು ಬಯಸದ ವ್ಯಂಜನಗಳು, ಮೆತ್ತಗಿನ ಅನ್ನದೊಂದಿಗೆ ಹೊಂದಿಕೆಯಾಗುವಂಥವು, ಜೀರ್ಣಿಸಿಕೊಳ್ಳಲು ಸುಲಭವಾಗಿರುವಂಥವು. ದಿನವೂ ಒಂದು ತರಕಾರಿ ಪಲ್ಯ, ಒಂದು ತಂಬುಳಿ ಅಥವಾ

ತೊವ್ವೆ (ಅಥವಾ ಎರಡನ್ನೂ) ಮಾಡುತ್ತಿದ್ದರೆ ಜೀವನದಲ್ಲಿ ನುರಿದು ನುಣ್ಣಗಾದ ಹಿರಿಜೀವಕ್ಕೆ ಹಾಯೆನಿಸುವುದನ್ನು ಎಷ್ಟೋ ಮನೆಗಳಲ್ಲಿ ಕಂಡುಕೊಂಡಿದ್ದಾರೆ. ತಂಬುಳಿ-ಪಲ್ಯಗಳು ಆಯಾ ಋತುಮಾನಕ್ಕೆ ತಕ್ಕುದಾಗಿದ್ದರಂತೂ ಆರೋಗ್ಯಕ್ಕೆ ಪೂರಕವಾಗಿ ಪರಿಣಮಿಸುತ್ತವೆ.

ಅಮೆರಿಕನ್ ಮೂಲನಿವಾಸಿಗಳಲ್ಲಿ ಋತುಮಾನಕ್ಕೆ ತಕ್ಕಂತೆ ಉಣ್ಣುವುದು ಹಬ್ಬದಂತೆಯೇ ಆಚರಣೆಯಲ್ಲಿತ್ತು. ವಸಂತದ ಹೊಸಚಿಗುರುಗಳು ಕಾಣುತ್ತಿರುವಂತೆಯೇ ಸಂಭ್ರಮಿಸುತ್ತಿದ್ದರು. ಆಗಷ್ಟೇ ಚಿಗುರೊಡೆಯುವ ಕಾಡುಬೆಳ್ಳುಳ್ಳಿ, ನೀರುಳ್ಳಿ, ಲೀಕ್, ನೀರುಬಾಳೆ ಮುಂತಾದವುಗಳ ಹಸುರು ಕಂಡಾಗ ಹೊಸಜೀವೋದಯದ ಉಲ್ಲಾಸ ತುಂಬಿಕೊಳ್ಳುತ್ತಿದ್ದರು. ಅವು ಬೆಳೆಯುತ್ತಿರುವಂತೆ ಆ ಹಸುರೆಲೆಗಳನ್ನು ಅಡುಗೆಗಳಲ್ಲಿ ಆಹಾರದಲ್ಲಿ ಬಳಸುತ್ತಿದ್ದರು. ಅವುಗಳಲ್ಲಿನ ಔಷಧೀತತ್ತ್ವ ಅವರಲ್ಲಿ ಹೊಸ ಆರೋಗ್ಯದ ನವಚೈತನ್ಯದ ಸೆಲೆಯಾಗುತ್ತಿತ್ತು. ಹಿರಿಯರ ಆರೋಗ್ಯಕ್ಕಾಗಿ ಹಣ್ಣುಹಂಪಲುಗಳನ್ನು ತರಕಾರಿಗಳನ್ನು ಹೆಚ್ಚು ತಿನ್ನುತ್ತಿದ್ದರು. ಫ್ಲೋರಿಡಾದ ಸೆಮಿನೋಲ್ ಜನಾಂಗದವರಿಗೆ ಅಲ್ಲಿ ಬೆಳೆಯುವ ಸ್ವಾಂಪ್ ಕ್ಯಾಬೇಜ್ ಬಹುಮೆಚ್ಚು. ಕಾಡು ಅಣಬೆಗಳನ್ನು ಬಹುವಾಗಿ ಮೆಚ್ಚುತ್ತಿದ್ದ ಮೂಲನಿವಾಸಿಗಳು ಹಲವು ವಿಧದ ಅಣಬೆಗಳನ್ನು ಗುರುತಿಟ್ಟುಕೊಂಡು ಸರಿಯಾದ ಸಮಯದಲ್ಲಿ ಅದನ್ನು ಪ್ರಕೃತಿಯಿಂದ ಪಡೆಯುತ್ತಿದ್ದರು, ಅಡುಗೆ ಮತ್ತು ಸೂಪ್‌ಗಳಲ್ಲಿ ಬಳಸುತ್ತಿದ್ದರು.

ಹಿರಿವಯಸ್ಸಿನವರ ರುಚಿ-ಸುವಾಸನೆಗಳಿಗೆ ಸಂಬಂಧಿಸಿದ ಸಮಸ್ಯೆಗೆ, ಜೀರ್ಣಶಕ್ತಿ ವೃದ್ಧಿಗೆ ಅಮೆರಿಕನ್ ಜಿನ್ಸೆಂಗ್, ಅಮೆರಿಕನ್ ಶುಂಠಿ, ಆಸ್ಪೆನ್, ಹಾಪ್ ಟ್ರೀ ಮುಂತಾದವುಗಳ ಬೇರೆ ಬೇರೆ ಭಾಗಗಳ ಚಹಾ ಸೇವಿಸುತ್ತಿದ್ದರು. ಈ ವಯೋಮಾನದ ಇನ್ನೊಂದು ತೊಂದರೆ ನೆನಪುಶಕ್ತಿಯ ಕುಂದುವಿಕೆ. ಇದಕ್ಕಾಗಿ ಮೂಲನಿವಾಸಿಗಳು ಕ್ಲೆಮಾಟಿಸ್, ಚಾಪರೆಲ್, ಶಯೆನ್ನ್ ಬಳಸುವುದರ ಜೊತೆಗೆ ಯೂರೋಪಿಯನ್ನರ ಆಗಮನದ ಬಳಿಕ ಪ್ರಪಂಚದೆಲ್ಲೆಡೆಯಿಂದ ಅಮೆರಿಕದ ಒಳಬಂದ ಇತರ ಮೂಲಿಕಾಗಿಡಗಳನ್ನೂ ಸೇರಿಸಿಕೊಂಡರು. ವಯಸ್ಸು, ದೇಹಗುಣ, ಮರೆವಿನ ತೀವ್ರತೆಗಳಿಗೆ ಅನುಸಾರವಾಗಿ ವೈದ್ಯರು ಪ್ರತಿಯೊಬ್ಬ ವ್ಯಕ್ತಿಗೂ ನಿರ್ದಿಷ್ಟ ಪ್ರಮಾಣದಲ್ಲಿ ಈ ಮೂಲಿಕೆಗಳನ್ನು ಬೆರೆಸಿ ಔಷಧಿ ತಯಾರಿಸುತ್ತಿದ್ದರು. ಒಣತ್ವಚೆಯಂತಹ ಸಮಸ್ಯೆಗೂ ಸೂರ್ಯಕಾಂತಿ, ಜೋಳ ಮತ್ತು ಜೊಜೊಬಾ ಎಣ್ಣೆಗಳನ್ನು ಕೆಲವು ಗಿಡಗಳು, ಪರಾಗರೇಣು, ಖನಿಜಗಳು ಮತ್ತು ಖನಿಜದೆಣ್ಣೆಗಳನ್ನು ಬೆರೆಸಿ ವಿಶೇಷತೈಲ ತಯಾರಿಸುವ ಜಾಣ್ಮೆ ಅವರಲ್ಲಿತ್ತು. ಮೈಕೈ ನೋವಿಗೆ, ಒಣತ್ವಚೆಗೆ, ಸಂಧಿವಾತದ ತೊಂದರೆಗಳಿಗೆ ಅಗತ್ಯವಿದ್ದಂತೆ ವಿಶೇಷ ಮಿಶ್ರತೈಲಗಳನ್ನು ತಯಾರಿಸಲಾಗುತ್ತಿತ್ತು.

6. ಸಾಮಾನ್ಯ ಜೀವನಶೈಲಿ - ಒಂದೆರಡು ಸಮಸ್ಯೆಗಳು-ಪರಿಹಾರಗಳು

ಈ ಮೊದಲು ಕೈಗೆತ್ತಿಕೊಂಡ ವಿಷಯಗಳಲ್ಲದೆ ಜನಜೀವನದಲ್ಲಿ ಕಂಡುಬರುವ ನೂರಾರು ಸಮಸ್ಯೆಗಳಲ್ಲಿ ಸಾಮಾನ್ಯವಾದ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಮೊದಲನೆಯದಾಗಿ ಬಾಯಿ ಮತ್ತು ಹಲ್ಲಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ನಾವು

ಭಾರತೀಯರು ಹಲವಾರು ಗಿಡಗಳ ಎಲೆ–ದಂಟು–ಬೇರುಗಳನ್ನು ಬಳಸುತ್ತಿರುವುದು ಹೊಸದೇನಲ್ಲ. ಹಲವಾರು ಜನಾಂಗಗಳಲ್ಲಿ ಇದ್ದಲಿನ ಪುಡಿ (ಅಥವಾ ಕಹಿಬೇವಿನಂಥ ಮರಗಳ ಪುಟ್ಟ ರೆಂಬೆಗಳನ್ನು ಸುಟ್ಟು ಕರಕಲಾಗಿಸಿ ಕುಟ್ಟಿದ ಪುಡಿ) ಗೆ ಉಪ್ಪು ಬೆರೆಸಿದ ಹಲ್ಲುಜ್ಜುವ ಪುಡಿ ಚಾಲ್ತಿಯಲ್ಲಿತ್ತು, ಈಗಲೂ ತೀರಾ ಹಳ್ಳಿಗಳಲ್ಲಿ ಇದ್ದರೆ ಅಚ್ಚರಿಯೇನಿಲ್ಲ.

ಅಮೆರಿಕನ್ ಮೂಲನಿವಾಸಿಗಳೂ ಕೆಲವಾರು ಗಿಡಗಳ ಪುಟ್ಟ ರೆಂಬೆಗಳನ್ನು ಹಲ್ಲುಜ್ಜಲು ಬಳಸುತ್ತಿದ್ದರು. ವಿಲ್ಲೊ ಮರದ ತೊಗಟೆ ಮತ್ತು ಎಲೆಗಳನ್ನೂ, ಬ್ಲ್ಯಾಕ್ ರಾಸ್ಪ್ ಬೆರಿ ಗಿಡದ ಬೇರು ಮತ್ತು ಎಲೆಗಳನ್ನೂ ಬಾಯಿಯ ಸ್ವಾಸ್ಥ್ಯಕ್ಕಾಗಿ ಉಪಯೋಗಿಸುತ್ತಿದ್ದರು.

'ಸರ್ಪಸುತ್ತು' ಎಂದು ಕರೆಯಲ್ಪಡುವ 'ಹರ್ಪಿಸ್' ಕಾಯಿಲೆಗೆ ಅತ್ಯಂತ ಉಪಯುಕ್ತ ಗಿಡಮೂಲಿಕೆ ಒಳ್ಳೆಕುಡಿ (ದೊಡ್ಡ ನೆಕ್ಕರೆ). ನೀಲಿಗಪ್ಪು ಬಣ್ಣದ ಚಿಗುರುಗಳನ್ನು ಜೀರಿಗೆಯೊಂದಿಗೆ ಹಸುವಿನ ಹಾಲಿನಲ್ಲಿ (ಅಥವಾ ಗೆಂದಾಳಿ ಎಂದು ಹೆಸರಾಗಿರುವ ಕೇಸರಿ ಸೀಯಾಳದ ನೀರಿನಲ್ಲಿ) ನುಣ್ಣಗೆ ಅರೆದು ಹಚ್ಚುವುದು ಮತ್ತು ಹೊಟ್ಟೆ ಖಾಲಿಯಿದ್ದಾಗ ದಿನದಲ್ಲಿ ಎರಡು ಮೂರಾವರ್ತಿ ಸೇವಿಸುವುದರಿಂದ ಬಹಳ ಬೇಗ ಉಪಶಮನ ದೊರೆಯುತ್ತದೆ.

ಡಾಂಡೆಲಿಯಾನ್, ಜಿರೇನಿಯಮ್, ಮೇ ಆಪಲ್, ಮಿಂಟ್, ಪೆಪ್ಪೆರ್ಮಿಂಟ್, ನೀಲಗಿರಿ ಮತ್ತು ಇನ್ನೂ ಹಲವಾರು ಗಿಡಮರಗಳ ಎಲೆ–ತೊಗಟೆ–ಬೇರುಗಳನ್ನು ಚಹಾ, ಎಣ್ಣೆ, ಬಿಸಿಪೊಟ್ಟಣ (ಪೌಲ್ಟೀಸ್), ತೊಳೆವ ಟಿಂಕ್ಚರ್ ಮತ್ತು ಲೇಪಗಳಾಗಿ ಚರ್ಮದ ಸಮಸ್ಯೆಗಳಿಗೆ ನಿವಾರಣೋಪಾಯ ಕಂಡುಕೊಂಡಿದ್ದರು ಅಮೆರಿಕನ್ ಮೂಲನಿವಾಸಿಗಳು.

ತುಳಸಿ ನಮ್ಮಲ್ಲಿನ ಇನ್ನೊಂದು ಸಂಜೀವಿನಿ. ಇದಕ್ಕೇ ಇರಬೇಕು, ದಿನವೂ ತುಳಸಿ ಸೇವನೆ, ತುಳಸಿಗೆ ನೀರೆರೆಯುವ ನೆಪದಲ್ಲಿ ಅದರ ಗಾಳಿಯ ಸೇವನೆಯನ್ನು ನಮ್ಮ ಹಿರಿಯರು ವಿಧಿಸಿದ್ದರು. ಬಾಯಿರುಚಿ, ಜೀರ್ಣಶಕ್ತಿ, ಸ್ವಲ್ಪಮಟ್ಟಿನ ಕಫ–ಕೆಮ್ಮು, ಆಸಿಡಿಟಿ, ಮುಂತಾದ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿ ನಿವಾರಿಸಲು ತುಳಸಿ ಸಹಕಾರಿ. ಅದೇ ರೀತಿ ಶುಂಠಿಯ ನಿತ್ಯ ಸೇವನೆಯೂ ಅಲರ್ಜಿ ಸಮಸ್ಯೆಗಳಿಗೆ ರಾಮಬಾಣ. ನೆಲ್ಲಿಯಂತೂ ನೀರನ್ನೂ ಸಿಹಿಯಾಗಿಸಬಲ್ಲ ಚೇತೋಹಾರಿ ಮತ್ತು ವಿಟಮಿನ್ 'ಸಿ'ಯ ಆಗರ. ನೆಲ್ಲಿಕಾಯಿ, ಯಾವುದೇ ವಿಧದಲ್ಲಿ ಉಪಯೋಗಿಸಿದರೂ ತನ್ನ ಮೂಲ ಆರೋಗ್ಯ ಸತ್ತ್ವಗಳನ್ನು ಸಂಪೂರ್ಣವಾಗಿ ನಮಗೆ ಒದಗಿಸುವಂಥ ಏಕೈಕ ವಸ್ತು. ಹಸಿಯಾಗಿದ್ದರೂ ಬೇಯಿಸಿದರೂ ಉಪ್ಪು–ಮಜ್ಜಿಗೆ ಅಥವಾ ಜೇನಿನಲ್ಲಿ ಹಾಕಿ ಹಲಕಾಲ ಶೇಖರಿಸಿಟ್ಟರೂ ನೆಲ್ಲಿ ತನ್ನ ಮೂಲಗುಣ ಕಳೆದುಕೊಳ್ಳದು. ಆದುದರಿಂದ ನೆಲ್ಲಿಕಾಯಿ ಲಭ್ಯವಿದ್ದಾಗ ಕೊಂಡುಕೊಂಡು ಶೇಖರಿಸಿಡುವುದು ಉತ್ತಮ.

ಇದೇ ರೀತಿ ಸಾಮಾನ್ಯ ಆರೋಗ್ಯದ ನಿರ್ವಹಣೆ ಮತ್ತು ನಿರಂತರತೆಯಲ್ಲಿ ಸ್ಥಳೀಯವಾದ ಗಿಡಮರಗಳ ವಿವಿಧ ಭಾಗಗಳನ್ನು ಅಮೆರಿಕನ್ ಮೂಲನಿವಾಸಿಗಳು ದಿನವಹಿ ಬಳಸುತ್ತಿದ್ದರು. 'ಆಹಾರವೇ ಮದ್ದಿನಂತಿದ್ದರೆ ಮದ್ದೇ ಆಹಾರದಂತಾಗುವುದನ್ನು

ತಪ್ಪಿಸಬಹುದು' ಎನ್ನುವುದನ್ನು ಆಯುರ್ವೇದದ ಮೂಲ ಸೂತ್ರ ತಿಳಿಸುತ್ತದೆ. ಇದನ್ನು ಅಕ್ಷರಶಃ ಪಾಲಿಸುತ್ತಿದ್ದವರು ಮಾತ್ರ ಭಾರತದಿಂದ ಅರ್ಧಗೋಳದಾಚೆಗಿನ ಭೂಭಾಗದ ಜನರು.

ಸಮಾಪನ

ಆರೋಗ್ಯ ಎಲ್ಲರಿಗೂ ಅತ್ಯಮೂಲ್ಯ. ಪ್ರಸ್ತಾವನೆಯಲ್ಲಿ ಹೇಳಿದಂತೆ, 2020ರ ಆದಿಯಿಂದಲೇ ಪ್ರಪಂಚದ ಎಲ್ಲರಿಗೂ- ಜನಸಾಮಾನ್ಯರಿಂದ ಹಿಡಿದು ಅತ್ಯಂತ ಪ್ರತಿಷ್ಠಿತ ವ್ಯಕ್ತಿಗಳತನಕ -ಆರೋಗ್ಯದ ಪ್ರಾಮುಖ್ಯ ಅರಿವಾಗಿದೆ ಎಂದುಕೊಳ್ಳುವಷ್ಟರಲ್ಲಿ ಅರಿವಿದ್ದರೂ ವಿದ್ಯಾವಂತರೇ ಮೂರ್ಖರಂತಾಡಿದ ಘಟನೆಗಳು ನಮ್ಮ ಮುಂದಿವೆ. 'ಪ್ರತಿಯೊಂದು ತಪ್ಪನ್ನೂ ನಾವೇ ಮಾಡಲು ಈ ಜನ್ಮ ಸಾಲದು. ಇನ್ನೊಬ್ಬರ ತಪ್ಪಿನಿಂದ ಪಾಠ ಕಲಿಯಿರಿ, ಹೊಸ ತಪ್ಪುಗಳನ್ನು ಮಾಡಿ' ಎಂದಿದ್ದ ಚಾಣಕ್ಯ (ಹಾಗೆ ಎಲ್ಲೋ ಓದಿದ್ದೆ, ತಪ್ಪಿದ್ದರೆ ಮನ್ನಿಸಿರಿ). ಈ ಒಂದು ವರ್ಷದ ವಿದ್ಯಮಾನಗಳನ್ನು ಗಮನಿಸಿದರೆ, ಯಾಕೆ, ಇಡೀ ಮಾನವ ಜನಾಂಗ ನಡೆದು ಬಂದ ಹಾದಿಯನ್ನು ಗಮನಿಸಿದರೆ, ಮನುಷ್ಯ ತನ್ನ ಉಡಾಫೆಯಿಂದ ತನ್ನನ್ನು ಅನಾಹುತಕ್ಕೆ, ವಿನಾಶದಂಚಿಗೆ ಒಡ್ಡಿಕೊಳ್ಳುವುದರ ಜೊತೆಗೆ ತನ್ನ ಸಹವರ್ತಿಗಳನ್ನೂ ಅಪಾಯಕ್ಕೊಡ್ಡುತ್ತಿದ್ದಾನೆ. ಸಂಘಜೀವಿಯಾದ ಮಾನವ ತನ್ನ ಸಂಘಶಕ್ತಿಯ ದುರುಪಯೋಗದಿಂದ ಹೀಗೆ ತನ್ನ ಕುಲದ ವಿನಾಶದತ್ತ ದಾಪುಗಾಲಿಡುತ್ತಿರು-ವುದು ಖೇದಕರ. ಭಸ್ಮಾಸುರನ ಸರ್ವನಾಶಕ ಬುದ್ಧಿಯ ಕಥೆ ಕೇಳುತ್ತಲೇ ಬೆಳೆದ ನಾವುಗಳು ಈಗ ಭಸ್ಮಾಸುರರಾಗುತ್ತಿದ್ದೇವೆಯೆ? ಪ್ರತಿಯೊಬ್ಬ ವ್ಯಕ್ತಿಯೂ ಕೇಳಿಕೊಳ್ಳಬೇಕಾದ ಪ್ರಶ್ನೆ. ಆತ್ಮವಿಮರ್ಶೆಯ ಸಮಯವಿದು.

ಇನ್ನಾದರೂ ಎಚ್ಚೆತ್ತುಕೊಳ್ಳುವ ಮನೋಬಲ ಮನುಜಕುಲಕ್ಕಿರಲಿ. ಎಲ್ಲರಿಗೂ ಒಳಿತಾಗಲಿ ಎನ್ನುವುದು ಅನಾದಿ ಕಾಲದ ಎಲ್ಲ ಮಾನವ ಜನಾಂಗಗಳ ಹಾರೈಕೆ. ಕನಸುಗಳು ಸಾಕಾರಗೊಳ್ಳಲಿ.

ಲೇಖನದಲ್ಲಿ ಉಲ್ಲೇಖಿತ ಗಿಡ-ಮರಗಳ ವೈಜ್ಞಾನಿಕ ಹೆಸರುಗಳು

ಈ ಲೇಖನದ ಚೌಕಟ್ಟಿನೊಳಗೆ ನಮೂದಿಸಿದ ಕನ್ನಡ ಕರಾವಳಿಯ ಮನೆಮದ್ದು-ಗಳೆಲ್ಲವನ್ನೂ ಸ್ವಾನುಭವದಿಂದ ಪರಿಶೀಲಿಸಿಲ್ಲ. ಅವುಗಳನ್ನು ಒಂದು ಮಾಹಿತಿಯಂತೆ ತಿಳಿಯಬೇಕೇ ಹೊರತು ಅಧಿಕೃತ ವೈದ್ಯ-ಚೀಟಿ (ಪ್ರಿಸ್ಕ್ರಿಪ್ಷನ್) ಇದಲ್ಲ. ಬಳಸಿದಂತಹ, ಅನುಕೂಲ/ಸಾಂತ್ವನ ಪಡೆದಂತಹ ಮನೆಮದ್ದುಗಳನ್ನು ಅಲ್ಲಲ್ಲೇ ವಿವರಿಸಲಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಇಲ್ಲಿನ ಗಿಡಮೂಲಿಕೆಗಳ ಹೆಸರುಗಳನ್ನು ನೀಡಲು ಯತ್ನಿಸಲಾಗಿದೆ. ಗಿಡಗಳ ಸ್ಥಳೀಯ ಹೆಸರುಗಳು ಒಂದೊಂದೂರಲ್ಲಿ ಒಂದೊಂದು ಇರಬಹುದಾದ ಸಾಧ್ಯತೆಯಿಂದ ಲಭ್ಯವಾದಷ್ಟು ವೈಜ್ಞಾನಿಕ ಹೆಸರುಗಳನ್ನೂ ನೀಡಲಾಗಿದೆ. ಜನಪದ ವೈದ್ಯದ ಕುರಿತಾಗಿರುವ ಈ ಪುಟ್ಟ ದಾಖಲೆಯೂ ಆ ಮಟ್ಟಿಗೆ ಪರಿಪೂರ್ಣವಾಗಿರಲಿ ಎನ್ನುವುದಷ್ಟೇ ಇಲ್ಲಿನ ಉದ್ದೇಶ.

ಜೀರಿಗೆ *(Cumin, Cuminum cyminum)*, ಕೊತ್ತಂಬರಿ *(Coriander, Coriandrum sativum)*, ಮೆಂತ್ಯ *(Fenugreek, Trigonella foenum-graecum)*, ಕಾಳುಮೆಣಸು *(Pepper, Piper nigrum)*, ಏಲಕ್ಕಿ *(Cardamom, Elettaria cardamomum)*, ಲವಂಗ *(Clove, Syzygium aromaticum)*, ಚಕ್ಕೆ *(Cinnamon, Cinnamomum verum)*, ಇ(ಹಿ)ಪ್ಪಲಿ *(Long Pepper, Pippali, Piper longum)*, ಜಾಯಿಕಾಯಿ (Nutmeg, *Myristica fragrans, Myristica malabarica*), ಗಜ್ಜುಗ *(Caesalpinia crista)*, ಓಮ *(Carom seeds, Trachyspermum ammi)*, ಆಡುಸೋಗೆ *(Adhatoda vasica)*, ಸಂಬಾರಬಳ್ಳಿ ಎಲೆ/ದೊಡ್ಡಪತ್ರೆ *(Indian Borage/ Indian Oregano, Mexican mint, Plectranthus amboinicus)*, ವೀಳ್ಯದೆಲೆ *(Piper betle)*, ತುಳಸಿ *(Ocimum sanctum)*, ಅಮೃತಬಳ್ಳಿ *(Tinospora cordifolia)*, ಕಿರಾತಕಡ್ಡಿ *(Andrographis paniculata)*, ನೆಲನೆಲ್ಲಿ *(Phyllanthus niruri)*, ಒಂದೆಲಗ *(Centella asiatica)*, ಗರ್ಗ/ಭೃಂಗರಾಜ (*Eclipta prostrata*), ನೆಲ್ಲಿಕಾಯಿ (*Phyllanthus emblica*), ಬಜೆ *(Sweet flag, Acorus calamus)*, ಜೇಷ್ಠಮಧು *(Licorice, Glycyrrhiza glabra)*, ಅರಶಿನ *(Turmeric, Curcuma longa)*, ಶುಂಠಿ *(Ginger, Zingiber officinale)*, ನೀ(ಈ)ರುಳ್ಳಿ *(Onion, Allium cepa)*, ಬೆಳ್ಳುಳ್ಳಿ *(Garlic, Allium sativum)*, ಭದ್ರಮುಷ್ಠಿ *(Cyperus rotundus)*, ಕರಿಬೇವು *(Murraya koenigii)*, ಕಹಿಬೇವು *(Azadirachta indica)*, ಪಂಚಪತ್ರೆ (ಮಾಚಿಪತ್ರೆ, ಮಂಜಿಪತ್ರೆ, *Mugwort, Artimisia vulgaris, Japanese Mugwort, Artimisia princeps)*, ಮಜ್ಜಿಗೆ ಹುಲ್ಲು *(Lemon grass, Cymbopogon citratus)*, ನಿಂಬೆ (ಲಿಂಬೆ, *Lemon, Citrus limon)*, ತುಂಬೆ *(Leucas aspera)*, ಗರಿಕೆ *(Cynodon dactylon)*, ದಾರೆಹುಳಿ (ಸ್ಟಾರ್ ಫ್ರುಟ್ *Averrhoa carambola)*, ಕಡಿರ ಬೇರು *(Sida rhombifolia)*, ಲೋಳೆಸರ (ಕುಮಾರಿ–ಸಂ., ಅಲೋ ವೆರಾ, *Aloe vera)*, ಒಳ್ಳೆ ಕುಡಿ *(Memecylon malabaricum)*, ನಾಚಿಕೆಮುಳ್ಳು (ಮುಟ್ಟಿದರೆ ಮುನಿ, *Touch-me-not, Mimosa pudica)*.

ನೀಲಗಿರಿ *(Eucalyptus spp)*, ಕ್ಯಾಟ್ ನಿಪ್ *(Nepeta cataria)*, ಫ಼ೆನ್ನೆಲ್ (ಸೋಂಫ್, *Foeniculum vulgare)*, ಎಕಿನೇಷಿಯಾ *(Echinacea spp.)*, ಪುದಿನಾ *(Mint, Mentha spicata)*, ಸ್ಕಲ್ ಕ್ಯಾಪ್ *(Scutellaria lateriflora)*, ಹತ್ತಿ (ಕಾಟನ್, *Gossypium spp.)*, ಬ್ಲ್ಯಾಕ್ ವಿಲ್ಲೊ *(Salix nigra)*, ವಿಲ್ಲೊ *(Sallows, Salix spp)*, ಅಮೆರಿಕನ್ ಬಾಸ್‌ವುಡ್ *(Tilia americana)*, ಯುರೋಪಿಯನ್ ಲಿಂಡೆನ್ *(Tilia cordata)*, ಬೀ ಬಾಮ್ (ಬರ್‌ಗಮಾಟ್, ಮೊನಾರ್ಡ, *Monarda fistulosa.)*, ವೈಲ್ಡ್ ಚೆರ್ರಿ *(Prunus serotina)*, ಸ್ಯಾಂಪ್ಸನ್ಸ್ ಸ್ನೇಕ್ ರೂಟ್ *(Sampson's snake-root, Gentiana villosa)*, ಫ಼ಿವರ್‌ವಾರ್ಟ್ *(Triosteum perfoliatum)*,

ಕ್ರ್ಯಾಂಪ್‌ಬಾರ್ಕ್ *(Crampbark, Viburnum opulus)*, ಬ್ಲ್ಯಾಕ್ ಹಾವ್ *(Blackhaw, Viburnum prunifolium)*, ಆಲ್ಫಾಲ್ಫಾ *(Alfalfa, Medicago sativa)*, ಕಾಡುಗೆಣಸು (Dioscorea villosa), ಮಾಕಾ *(Peruvian ginseng, Lepidium meyenii)*, ಸೇಜ್ *(Salvia officinalis)*, ತುರಿಕೆಗಿಡ *(Stinging nettle, Urtica dioica)*, ಸೈಂಟ್ ಜಾನ್ಸ್ ವಾರ್ಟ್ (ಟಿಪ್ಟನ್ಸ್ ವೀಡ್, *Hypericum perforatum)*, ಕ್ಯಾಮೊಮೈಲ್ (Chamomile), ದಾಸವಾಳ (ಹೈಬಿಸ್ಕಸ್, *Hibiscus spp)*, ಜೋಳ *(Corn, Zea mays)*, ಸ್ವಾಂಪ್ ಕ್ಯಾಬೇಜ್ *(Sabal palmetto)*, ಕ್ಲೆಮಾಟಿಸ್ *(Clematis spp)*, ಚಾಪರಲ್ *(Chaparral, Larrea tridentata)*, ಕಯೆನ್ನ್ *(Cayenne, Capsicum annuum)*, ಸೂರ್ಯಕಾಂತಿ *(Sunflower, Helianthus annus)*, ಜೊಜೊಬಾ *(Wild hazel, Goat nut, Deer nut, Simmondsia chinensis)*, ಡಾಂಡೆಲಿಯಾನ್ *(Taraxacum spp)*, ಜಿರೇನಿಯಮ್ *(Geranium spp), Strawberry (Fragaria x ananassa), Raspberry (Rubus spp), Saw palmetto (Serrulata, Serenoa repens), Sarsaparilla (Aralia nudicaulis), American mountain ash (Sorbus americana), Turtlehead (Chelone glabra), Hop tree (Ptelea trifoliata), Quaking aspen (Populus tremuloides), Mayapple (Podophyllum spp).*

ಆಧಾರ

ನನ್ನ ಬಾಲ್ಯದಾರಭ್ಯ ಇದುತನಕ ಮಾತಿಗೆ ದೊರಕಿದ ಹಲವಾರು 'ಮದ್ದುಮನ'ದ ಹಿರಿಯರು ಮತ್ತು

1. https://www.legendsofamerica.com/
2. https://en.wikipedia.org/wiki/
3. American Indian Healing Arts -by- E. Barrie Kavasch and Karen Baar (Bantam Books/ April, 1.

❑

(30)

ಜಾಣರ ಜಾಣ – ಕಯೋಟಿ ಅಣ್ಣ

ಪೂರ್ಣಿಮಾ ಕಶ್ಯಪ್
ಡ್ಯಾಲಸ್, ಟೆಕ್ಸಾಸ್

*

ಕಿಯೋವಾ–ಅಪಾಚಿ ಇಂಡಿಯನ್ಸ್ ಬುಡಕಟ್ಟಿನ ಕಿರುಪರಿಚಯ

ಕಿಯೋವಾ ಅಪಾಚಿ ಇಂಡಿಯನ್ಸ್, ಹತ್ತೊಂಬತ್ತನೇ ಶತಮಾನದಲ್ಲಿ ಉತ್ತರ ಅಮೆರಿಕೆಯಲ್ಲಿದ್ದ ಒಂದು ಸಣ್ಣ ಬುಡಕಟ್ಟು ಜನಾಂಗ. ಪ್ರಸ್ತುತ ಅಮೆರಿಕ ಸಂಯುಕ್ತ ಸಂಸ್ಥಾನಗಳ ನೈಋತ್ಯ ಓಕ್ಲಹೋಮಾ ಮತ್ತು ಸುಡುವ ಟೆಕ್ಸಾಸ್ ಬಾಣಲೆಯ ಹಿಡಿ (Panhandle) ಪ್ರದೇಶದಲ್ಲಿ ಅವರು ನೆಲೆಸಿದ್ದರು. ಅವರ ನುಡಿಗಟ್ಟು Athabascan (Apachean). ಕೇವಲ 300 – 350 ಜನರ ಈ ಪುಟ್ಟ ಗುಂಪು ತಮ್ಮನ್ನು ತಾವು Naishandina ಎಂದು ಕರೆದುಕೊಳ್ಳುತ್ತಿದ್ದರು. ಅಂದರೆ Athabascan ಭಾಷೆಯಲ್ಲಿ 'ನಮ್ಮ ಜನ' (Our People) ಎಂದು ಅರ್ಥ.

ನ್ಯೂ ಮೆಕ್ಸಿಕೋ ಮತ್ತು ಅರಿಝೋನಾ ಪ್ರಾಂತ್ಯದಲ್ಲಿ ನೆಲೆಸಿದ್ದ ಅಪಾಚಿ ಬುಡಕಟ್ಟಿನ ಸಂಬಂಧೀ ಒಕ್ಕಲು ಎನ್ನುವ ತಪ್ಪು ತಿಳುವಳಿಕೆಯಿಂದ ಈ ಹೆಸರು ಬಂದಿದೆ. ಆದರೆ ಲಭ್ಯವಿರುವ ಅವರ ಸಾಂಪ್ರದಾಯಿಕ ಮತ್ತು ಜನಪದ ವಾಙ್ಮಯದ ಪ್ರಕಾರ, ಉತ್ತರದ ರಾಕಿ ಶ್ರೇಣಿಗಳ ಪೂರ್ವತಪ್ಪಲಿನಿಂದ ವಲಸೆ ಬಂದ ಒಂದು ಸಣ್ಣ ಗುಂಪು ದಕ್ಷಿಣದ ಕಿಯೋವಾಗಳ ಒಂದು ತಂಡದ ಜೊತೆ ಹೊಂದಿಕೊಂಡರು. ಪರಸ್ಪರ ರಕ್ಷಣೆಗಾಗಿ ಆದ ಈ ಹೊಂದಾಣಿಕೆಯಲ್ಲಿ ಮೊದಲು ಭಾಷೆಯ ಸಮಸ್ಯೆಯೂ ಇದ್ದಿರಬಹುದು. ಹಾಗಾಗಿ ಅವರು ಮೊದಲಲ್ಲಿ ಸನ್ನೆಯ ಭಾಷೆಯನ್ನೇ ಹೆಚ್ಚು ಬಳಸಿರಬಹುದು ಎಂದು ಕೆಲವು ಅಧ್ಯಯನಗಳು ಹೇಳುತ್ತವೆ. ನಂತರ ಅವರು Athabascan ಭಾಷೆಯನ್ನು ಬಳಸಿರಬಹುದು.

ಉಳಿದಂತೆ, ಇತರ ಸ್ಥಳವಂದಿಗ ಬುಡಕಟ್ಟುಗಳಂತೆ ಇವರೂ ಸಹ ಬೂಡುಗಳಲ್ಲಿ ಟೀಪಿ ಗುಡಿಸಲುಗಳನ್ನು ಕಟ್ಟಿಕೊಂಡು, ಎಮ್ಮೆಗಳನ್ನು ಬೇಟೆಯಾಡಿಕೊಂಡು, ಕುದುರೆ

ಮತ್ತು ಜಟಕಾಬಂಡಿಗಳಲ್ಲಿ ಓಡಾಡುತ್ತಿದ್ದ ಅಲೆಮಾರಿಗಳು. ಸೂರ್ಯನೃತ್ಯ ಮತ್ತು ಬುಡಕಟ್ಟಿನ ಶಿಬಿರವೃತ್ತಗಳಲ್ಲಿ (Sun dance and Camp circle) ಭಾಗವಹಿಸುವುದು ಅವರಿಗೆ ಮನರಂಜನೆ ಮತ್ತು ಹೆಮ್ಮೆಯ ವಿಷಯವಾಗಿತ್ತು. (ಸೂರ್ಯನೃತ್ಯವು ನಮ್ಮ ಕನ್ನಡನಾಡಿನ 'ಸಿಡಿ'ಯಂತೆ ಒಂದು ಧಾರ್ಮಿಕ ಸಂಪ್ರದಾಯ)

ಕಿಯೋವಾ ಅಪಾಚಿಗಳ ಸಣ್ಣ ಸಣ್ಣ ತಂಡಗಳ ನಡುವೆ ಪರಸ್ಪರ ಒಗ್ಗಟ್ಟಿತ್ತು. ಸಂಬಂಧ, ಬಾಂಧವ್ಯಗಳು ಅವರ ಸಮಾಜವನ್ನು ಬೆಸೆಯುವ ಸಾಮರಸ್ಯದ ತಂತುಗಳಾಗಿದ್ದವು. ಸುತ್ತಮುತ್ತಲೂ ಬಹಳ ಸಂಖ್ಯೆಯಲ್ಲಿದ್ದ ಆಕ್ರಮಣಕಾರಿ ಪ್ರವೃತ್ತಿಯ ದೊಡ್ಡ ದೊಡ್ಡ ಬುಡಕಟ್ಟುಗಳ ನಡುವೆಯೂ ಸ್ವಂತಿಕೆಯನ್ನು, ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಅವರ ಸ್ವಾವಲಂಬನೆ, ಒಗ್ಗಟ್ಟು ಮತ್ತು ಸೌಹಾರ್ದತೆಯ ಸ್ವಭಾವ ಕಾರಣವಾಯಿತು.

ಕಥಾನಾಯಕ ಕಯೋಟಿ

ಅಮೆರಿಕೆಯ ಜಾನಪದದಲ್ಲಿ ಕಯೋಟಿ ಒಂದು ಮುಖ್ಯ ಪ್ರಾಣಿ. ಇಲ್ಲಿಯ ಕತೆಗಳಲ್ಲಿ ಅದಕ್ಕೆ ವಿಶಿಷ್ಟ ಮತ್ತು ವೈವಿಧ್ಯ ಪಾತ್ರಚಿತ್ರಣವಿದೆ. ಕೆಲವೊಮ್ಮೆ ಸೂರ್ಯನನ್ನೇ ಸೃಷ್ಟಿಸಬಲ್ಲಂತಹ ಚೈತನ್ಯವುಳ್ಳವನು, ಗೆಳೆಯರಿಗೆ ಬೇಕಾದ್ದನ್ನು ಒದಗಿಸುವ ಪರೋಪಕಾರಿ, ಆಗಾಗ ಸಾಂಸ್ಕೃತಿಕ ದೂತ. ಮತ್ತೆ ಕೆಲವು ಬಾರಿ ಅಲೌಕಿಕ ಶಕ್ತಿಗಳನ್ನು ಹಿಮ್ಮೆಟ್ಟಿಸಬಲ್ಲ ಧೀರ. ಅಷ್ಟೇ ಅಲ್ಲ, ನಮ್ಮ ಜಾಣನರಿಯಂತೆ ಕುತಂತ್ರಿಯೂ ಹೌದು. ಮನುಷ್ಯರು ಮತ್ತು ಪ್ರಾಣಿಗಳನ್ನು ಮೋಸಗೊಳಿಸುವ ಚತುರ. ಇದರೊಂದಿಗೆ ಚುರುಕಿಲಿ ಜೆರ್ರಿಯ ಹುಡುಗಾಟಕ್ಕೆ ಸಿಕ್ಕಿ ನರಳುವ ಟಾಮ್ ಬೆಕ್ಕಿನಂತೆ ನಗೆಯುಕ್ಕಿಸುವ, ಮೊದ್ದು ವಿದೂಷಕ. ಈ ಎಲ್ಲ ಜೀವಂತ ಗುಣಗಳ ಸಂಗಮವಾದ ಕಯೋಟಿಯ ಎರಡು ಜಾಣತನದ ಕತೆಗಳು (ಕಿಯೋವಾ-ಅಪಾಚಿ ಇಂಡಿಯನ್ಸ್ ಬುಡಕಟ್ಟಿನ ಕತೆಗಳ ರೂಪಾಂತರ) ಇಲ್ಲಿವೆ.

ಸೃಷ್ಟಿಕರ್ತ ಕಯೋಟಿ

ಒಂದಾನೊಂದು ಕಾಲದಲ್ಲಿ ಭೂಮಿ ತುಂಬಾ ಕತ್ತಲೆಯೇ ತುಂಬಿತ್ತು. ಸೂರ್ಯನೂ ಇಲ್ಲ, ಹಗಲೂ ಇಲ್ಲ, ಯಾರಿಗೆ ಯಾರೂ ಕಾಣುತ್ತಿರಲಿಲ್ಲ. ಹೀಗಿದ್ದಾಗ ಒಮ್ಮೆ ಕಪ್ಪುಗಿಡುಗ, ಸೀಮೆಮೊಲ, ಕಾಡುಕೋಳಿ, ಆಮೆ ಮೊದಲಾದ ಪ್ರಾಣಿಗಳೆಲ್ಲಾ ಕಯೋಟಿಯ ನೇತೃತ್ವದಲ್ಲಿ ಸಭೆ ಸೇರಿದವು. ಕಯೋಟಿ ಹೇಳಿತು:

"ಗಿಡುಗ, ಮೊಲ, ಆಮೆ, ಕೋಳಿ
ಯಾವುದೂ ಏನೂ ಕಾಣ್ತಿಲ್ಲ,
ಹೇಗಿದ್ದೀರಾ ನೀವೆಲ್ಲ?!
ಮಾತು ಮಾತ್ರ ಕೇಳಿಸುತ್ತೆ,

ಆಕಾರ ಏನೋ ಗೊತ್ತಿಲ್ಲ,
ರೂಪ ಹೇಗಿದೆ ಕಾಣ್ತಿಲ್ಲ!

ಹಿಂದೆ ಎಲ್ಲೋ ಒಂದ್ಕಡೆ
ನಾನು ಬೆಂಕೀನ್ ನೋಡಿದ್ದೆ.
ಅದರ ಬೆಳಕಲ್ ಸುತ್ಮುತ್ಲೂ
ನೂರಾರ್ ಬಣ್ಣ ಕಂಡಿದ್ದೆ,
ಸಾವಿರಾರ್ ವಸ್ತು ಕಂಡಿದ್ದೆ!

ಬನ್ನಿ, ನಾವು ಎಲ್ಲಾ ಹೋಗಿ
ಬೆಂಕೀನ್ ಹುಡುಕೋಣ.
ಬೆಳಕಿನ ಚೆಂಡನು ಮೇಲಕೆ ಏರಿಸಿ
ಸೂರ್ಯನ ಮಾಡೋಣ,
ಕತ್ತಲ ಒಗಟನು ಬಿಡಿಸೋಣ!"

ಬೆಂಕಿ –ಬೆಳಕಿನ ವಿಷಯ ಕೇಳಿ ಉಳಿದ ಪ್ರಾಣಿಗಳಿಗೆ ಬಹಳ ಖುಷಿಯಾಯಿತು. ಅವೆಲ್ಲಾ ಒಟ್ಟಿಗೆ ಕೇಳಿದವು:

"ಜಾಣರ ಜಾಣ, ಕಯೋಟಿ ಅಣ್ಣ
ಬೆಂಕಿ ಎಂದರೆ ಏನಣ್ಣಾ?
ಬಣ್ಣಬಣ್ಣದ ನೋಟವ ಕಾಣುವ
ಬೆಳಕೆಂದರೆ ಹೇಗಿಹುದಣ್ಣಾ?
ನೀನೇ ತೋರಿಸಬೇಕಣ್ಣ!"

ಅಯ್ಯೋ ಪಾಪ, ಇವರ್ಯಾರಿಗೂ ಬೆಂಕಿ ಎಂದರೆ ಏನು ಅಂತಾನೆ ಗೊತ್ತಿಲ್ಲ ಅಂತ ಕಯೋಟಿಗೆ ತುಂಬಾ ಬೇಜಾರಾಯಿತು. ಹಿಂದೊಮ್ಮೆ ಆಹಾರವನ್ನು ಹುಡುಕಿಕೊಂಡು ತಾನು ತುಂಬಾ ದೂರ ಹೋಗಿದ್ದೆ. ಆಗ ನದೀತೀರದ ಗುಹೆಯೊಂದರಲ್ಲಿ ಕೆಲವರು ಸ್ವಲ್ಪ ಬೆಂಕಿ ಇಟ್ಟುಕೊಂಡಿದ್ದರು. ಆದರೆ ಅವರು ಅದನ್ನು ಯಾರ ಜೊತೆಯೂ ಹಂಚಿಕೊಳ್ಳದೆ ಗುಟ್ಟಾಗಿ ಉಪಯೋಗಿಸುತ್ತಿದ್ದರು. ಈಗ ಏನಾದರೂ ಉಪಾಯ ಮಾಡಿ ಅದನ್ನು ತನ್ನ ಗೆಳೆಯರಿಗೆ ತಂದು ಕೊಡಬೇಕು ಎಂದು ಮನಸ್ಸು ಮಾಡಿತು. ಎಲ್ಲರೂ ಒಟ್ಟಿಗೆ ಹೋಗಿ ಬೆಂಕಿಯನ್ನು ತರಲು ನಿಶ್ಚಯಿಸಿದರು.

ಅದರಂತೆ ಒಂದು ದಿನ ಎಲ್ಲ ಪ್ರಾಣಿಗಳೂ, ಬೆಂಕಿ ಇರುವ ದೂರದ ಗುಹೆಯನ್ನು ಹುಡುಕಿಕೊಂಡು ಹೊರಟರು. ಗುಹೆ ಕಂಡ ಮೇಲೆ, ಉಳಿದವರನ್ನು ಅಲ್ಲಲ್ಲಿ ಸ್ವಲ್ಪ ದೂರದಲ್ಲಿ ಕಾಯಲು ಹೇಳಿ ಕಯೋಟಿ ಮಾತ್ರ ಗುಹೆಯ ಬಳಿ ಹೋಯಿತು. ಮುಚ್ಚಿದ ಗುಹೆಯ ಬಾಗಿಲಲ್ಲಿ ಒಂದು ಡ್ರ್ಯಾಗನ್ ನೊಣ ಕಾವಲಿತ್ತು. ಆ ಡ್ರ್ಯಾಗನ್ ನೊಣಕ್ಕೆ

ಕೇವಲ ಒಂದು ದಿಕ್ಕಿನಲ್ಲಿ ಮಾತ್ರ ನೇರವಾಗಿ ನೋಡಲು ಸಾಧ್ಯವಿತ್ತು. ಜೊತೆಗೆ ಅದು ಕಣ್ಣು ಮಿಟುಕಿಸುವುದೇ ಇಲ್ಲ. ಪಾಪ, ಅದಕ್ಕಾಗಿ ಅದನ್ನು ಹಿಡಿದು ತಂದು ಕಾವಲಿಗೆ ಹಾಕಿದ್ದರು. ಕಯೋಟಿ ಮೆಲ್ಲನೆ ಹೋಗಿ ಆ ನೊಣವನ್ನು ಹಿಡಿದುಕೊಂಡುಬಿಟ್ಟಿತು. ಆಗ ಡ್ರ್ಯಾಗನ್ ನೊಣ ಹೇಳಿತು:

"ಜಾಣರ ಜಾಣ, ಕಯೋಟಿ ಅಣ್ಣ
ನನ್ನನು ಹಿಡಿದಿಹೆ ಏಕಣ್ಣಾ?
ಗುಟ್ಟಿನ ಗುಹೆಗೆ ಕಾವಲು ನಾನು
ಒಳಗಡೆ ಯಾರನು ಬಿಡೆ ನಾನು!
ಜಾಣರ ಜಾಣ, ಕಯೋಟಿ ಅಣ್ಣ
ನೀ ಏತಕೆ ಬಂದಿಹೆ? ಜೋಪಾನ!

ನಿನ್ನ ರೀತಿಯಲೇ ನಾನಿದ್ದೆ
ಅಂಕೆಯಿಲ್ಲದೆ ತಿರುಗುತಲಿದ್ದೆ.
ಹಿಡಿದರು ನನ್ನನು ಕಾವಲಿಗೆ
ಕಟ್ಟಿ ಹಾಕಿಹರು ಬಾಗಿಲಿಗೆ.
ನಿನ್ನನೂ ಹಾಕುವರು ಸೆರೆಗೆ!"

ಕಯೋಟಿಗೆ ಸ್ವಲ್ಪವೂ ಭಯವಾಗಲಿಲ್ಲ, ನೊಣದ ಮೇಲಿನ ಹಿಡಿತವನ್ನೂ ಸಡಿಲಿಸಲಿಲ್ಲ. ಅದು ಡ್ರ್ಯಾಗನ್ ನೊಣಕ್ಕೆ "ಪಾಪ, ನೀನೊಬ್ಬ ಬಡಪಾಯಿ ಕಾವಲುಗಾರ. ನೀನೇನಾದರೂ 'ಛೂ, ಮಂತ್ರಕಾಳಿ' ಮಾಡಿ ಬಾಗಿಲು ತೆಗೆಸಿದರೆ ನಿನ್ನನ್ನು ಬಿಟ್ಟುಬಿಡುವೆ. ಆಗ ನೀನು ಕತ್ತಲಲ್ಲಿ ಯಾರಿಗೂ ಕಾಣದಂತೆ ಸ್ವತಂತ್ರವಾಗಿ ಹಾರಿಹೋಗಬಹುದು. ಇಲ್ಲದಿದ್ದರೆ ನಿನ್ನನ್ನು ತಿಂದುಬಿಡುವೆ?" ಎಂದು ಹೆದರಿಸಿತು. ಬೆದರಿಕೆಗೋ, ಇಲ್ಲ ಸ್ವಾತಂತ್ರ್ಯದ ಆಸೆಗೋ ಡ್ರ್ಯಾಗನ್ ನೊಣ "ಬೆಂಕಣ್ಣ, ಬೆಂಕಣ್ಣ, ಬಾಗಿಲು ತೆಗೆಯೋ ಮಂಕಣ್ಣ" ಎನ್ನುವ ಗುಟ್ಟಿನ ಮಂತ್ರವನ್ನು ಹೇಳಿಯೇ ಬಿಟ್ಟಿತು. ಗುಹೆಯ ಬಾಗಿಲು ನಿಧಾನವಾಗಿ ತೆರೆಯಿತು. ನೊಣಕ್ಕೆ ಧನ್ಯವಾದ ಹೇಳಿದ ಕಯೋಟಿ ಅದನ್ನು ಹಾರಿ ಹೋಗಲು ಬಿಟ್ಟು ಮೆಲ್ಲಗೆ ಗುಹೆಯ ಒಳಗೆ ಹೋಯಿತು.

ಅಲ್ಲಿ ಒಂದು ಸಣ್ಣ ಬೆಂಕಿಯ ಸುತ್ತ ಕೆಲವು ಪ್ರಾಣಿಗಳು ತಿಂಡಿ ತಿನ್ನುತ್ತಾ, ನೃತ್ಯ ಮಾಡುತ್ತಾ ಖುಷಿಯಾಗಿದ್ದವು. ತಮಗೆ ದೊರೆತ ಸಂಪತ್ತನ್ನು ಯಾರೊಂದಿಗೂ ಹಂಚಿಕೊಳ್ಳದೆ, ತಮ್ಮ ಮುಂದಿನ ತಲೆಮಾರುಗಳಿಗೆ ಪೇರಿಸಿಡುವ ಮುಖ್ಯಸ್ಥರಂತೆ ಕಾಣುತ್ತಿದ್ದರು. ಕಯೋಟಿಯನ್ನು ಕಂಡೊಡನೆ ಅವರಿಗೆ ಆಶ್ಚರ್ಯವಾಯಿತು. ದರ್ಪದಿಂದ ಕೇಳಿದರು

"ಏನೋ ಕಯೋಟಿ, ಏನು ಭೇಟಿ?
ಹೇಗೆ ಬಂದೆಯೋ ಕಾವಲು ದಾಟಿ?
ನೀನಿರಬಹುದು ಮಹಾ ಘಾಟಿ,

ಆದರಿಲ್ಲಿ ನಡೆಯದು ನಿನ್ನಯ ಚೂಟಿ!
ತೊಲಗಿಲ್ಲಿಂದ, ತೆಗೆವೆವು ಚಾಟಿ!"

ಕಯೋಟಿಗೆ ಸ್ವಲ್ಪ ಬೇಜಾರಿನ ಜೊತೆ ಕೋಪವೂ ಬಂತು. ಆದರೂ ಅದನ್ನು ತೋರಿಸಿಕೊಳ್ಳದೆ ನಯವಾಗಿ ಹೇಳಿತು,

"ಹೌದಣ್ಣಗಳಾ ನಾನೇ ಕಯೋಟಿ,
ಸುಮ್ಮನೆ ಬಂದೆ ಮಾಡಲು ಭೇಟಿ.
ಹೇಳುವರೆಲ್ಲ ನಾನು ಬಲು ಸೂಟಿ,
ಆದರು ನಿಮಗಿಲ್ಲಾ ಸರಿಸಾಟಿ?!
ನಾನೂ ಸೇರಲೇ ನಿಮ್ಮಯ ಗೊಟ್ಟಿ!
ತಂದುಕೊಡುವೆನು ನಿಮಗೂ ರೊಟ್ಟಿ!"

ಅಲ್ಲಿದ್ದ ಪ್ರಾಣಿಗಳು "ಆಯಿತು. ಸ್ವಲ್ಪ ಹೊತ್ತು ನೀನು ನಮ್ಮ ಜೊತೆ ಇರಬಹುದು" ಎಂದು ಒಪ್ಪಿಕೊಂಡವು. ಬಿಟ್ಟಿಯಾಗಿ ರೊಟ್ಟಿ ತಯಾರಿಸಿ ಬಡಿಸುವ ಸೇವಕನೊಬ್ಬ ಸಿಕ್ಕನೆಂದು ಅವರಿಗೆ ಖುಷಿ. ಕಯೋಟಿ ಎಲ್ಲರ ಜೊತೆ ಸಂತೋಷದಿಂದ ನೃತ್ಯದಲ್ಲಿ ತೊಡಗಿತು. ಮೆಲ್ಲಗೆ ಬೆಂಕಿಯ ಹತ್ತಿರ ಹೋಗುತ್ತಿದ್ದ ಅದನ್ನು ಕೆಲವರು ತಡೆದರು. ಕಯೋಟಿ ಅದನ್ನು ನಿರ್ಲಕ್ಷಿಸಿ ನೃತ್ಯದಲ್ಲಿ ಮುಳುಗಿರುವಂತೆ ತೋರಿಸಿಕೊಂಡಿತು. ಯಾರೂ ಗಮನಿಸದಿದ್ದಾಗ ಕೆಂಡವಿದ್ದ ಸ್ವಲ್ಪ ಕಲ್ಲಿದ್ದಲನ್ನು ಬಾಲದಲ್ಲಿ ಸುತ್ತಿಕೊಂಡು ಬಾಗಿಲ ಬಳಿ ಓಡಿಹೋಗಿ "ಬೆಂಕಣ್ಣ, ಬೆಂಕಣ್ಣ, ಬಾಗಿಲು ತೆಗೆಯೋ ಮಂಕಣ್ಣ" ಎಂದು ಕೂಗಿತು. ಬಾಗಿಲು ತೆರೆದೊಡನೆ ಬೇಗ ಹೊರಗೆ ಓಡಿತು. ಈ ಅನಿರೀಕ್ಷಿತ ತಿರುವನ್ನು ನಂಬಲಾರದೆ ಬೆಪ್ಪಾದ ಉಳಿದ ಪ್ರಾಣಿಗಳು ಕುಣಿಯುವುದನ್ನು ನಿಲ್ಲಿಸಿ ಕಯೋಟಿಯನ್ನು ಅಟ್ಟಿಸಿಕೊಂಡು ಹೋದವು.

ಎಲ್ಲರಿಗೂ ಬೆಳಕನ್ನು ಕೊಡುವ ಹಂಬಲದಿಂದ ಕಯೋಟಿ ಅವರ್ಯಾರಿಗೂ ಸಿಗದಂತೆ ವೇಗವಾಗಿ ಓಡಿತು. ಸ್ವಲ್ಪ ಸುಸ್ತಾದಾಗ ಕಪ್ಪುಗಿಡುಗವನ್ನು ಕರೆಯಿತು. ಕೆಂಡವನ್ನು ಗಿಡುಗನಿಗೆ ಕೊಟ್ಟು ಒಂದು ಬಿಲದೊಳಗೆ ಅಡಗಿಕೊಂಡಿತು. ಗಿಡುಗ ಸ್ವಲ್ಪ ದೂರದ ನಂತರ ಸೀಮೆಮೊಲಕ್ಕೆ ಕೆಂಡವನ್ನು ದಾಟಿಸಿ ಅಡಗಿಕೊಂಡಿತು. ಗುಹೆಯಿಂದ ಕಯೋಟಿಯನ್ನು ಅಟ್ಟಿಸಿಕೊಂಡು ಬಂದ ಪ್ರಾಣಿಗಳು ಗಿಡುಗ ಮತ್ತು ಮೊಲವನ್ನೂ ಹಿಂಬಾಲಿಸುತ್ತಿದ್ದರು. ಪುಟಪುಟ ಓಡಿ ಸೀಮೆಮೊಲಕ್ಕೆ ದಣಿವಾದಾಗ ಅದು ಕೆಂಡವನ್ನು ಕಾಡುಕೋಳಿಗೆ ಕೊಟ್ಟು ಬಚ್ಚಿಟ್ಟುಕೊಂಡಿತು. ಇನ್ನೇನು ಅಟ್ಟಿಸಿಕೊಂಡು ಬಂದವರಿಗೆ ಕಾಡುಕೋಳಿ ಸಿಗಬೇಕು, ಅಷ್ಟರಲ್ಲಿ ಅದು ಕೆಂಡವನ್ನು ಆಮೆಗೆ ಕೊಟ್ಟುಬಿಟ್ಟಿತು. ಆಮೆ ಕಲ್ಲಿದ್ದಲಿನ ಕೆಂಡವನ್ನು ತನ್ನ ಚಿಪ್ಪಿನೊಳಗೆ ಸೇರಿಸಿ, ತಾನೂ ಒಳಗೆ ಹೋಗಿಬಿಟ್ಟಿತು. ಅಟ್ಟಿಸಿಕೊಂಡು ಬಂದವರು ಆಮೆಯನ್ನು ಹಿಡಕೊಂಡು ಚಿತ್ರಹಿಂಸೆ ಕೊಟ್ಟರು. ಆದರೆ ಅವರ ಯಾವ ಹಿಂಸೆಗೂ ಜಗ್ಗದ ಆಮೆ ಚಿಪ್ಪಿನಿಂದ ಈಚೆಗೆ ಬರಲೇ ಇಲ್ಲ. ಅವರೆಲ್ಲಾ

ಕಾದು ಕಾದು ಕೋಪದಿಂದ ಆಮೆಯನ್ನು ಒಂದು ಕೊಳಕ್ಕೆ ಎಸೆದು ಹೊರಟುಹೋದರು. ಅವರೆಲ್ಲಾ ಹೊರಟುಹೋದ ಮೇಲೆ ಕಯೋಟಿ, ಕಪ್ಪುಗಿಡುಗ, ಸೀಮೆಮೊಲ, ಕಾಡುಕೋಳಿ ಎಲ್ಲರೂ ಕೊಳದ ಬಳಿ ಸೇರಿ ಆಮೆಯನ್ನು ಈಚೆಗೆ ಕರೆದರು.

"ಆಮೆಯಣ್ಣ ಆಮೆಯಣ್ಣ
ಬೇಗನೆ ಹೊರಗೆ ಬಾರಣ್ಣ,
ಕೆಂಡವ ಈಚೆಗೆ ತಳ್ಳಣ್ಣ!
ಬೇಗನೆ ಬೆಂಕಿಯ ಮಾಡೋಣ
ಬೆಳಕನು ಎಲ್ಲೆಡೆ ಹರಡೋಣ!"

ಆಮೆ ಈಚೆ ಬಂದು ಕಲ್ಲಿದ್ದಲನ್ನು ಕೊಟ್ಟಿತು. ಅದರಲ್ಲಿ ಸ್ವಲ್ಪೇ ಸ್ವಲ್ಪ ಕೆಂಡವಿತ್ತು. ಬೇಗ ಬೇಗ ಎಲ್ಲರೂ ಸೇರಿ ಸ್ವಲ್ಪ ತರಗೆಲೆ ಮತ್ತು ಪುರುಳೆ ಅದರ ಸುತ್ತ ಒಟ್ಟುಮಾಡಿ ಗಾಳಿ ಊದಿದರು. ಕೆಂಡ ಸ್ವಲ್ಪ ಹೊಗೆಯಾಡುತ್ತಾ ಸಣ್ಣಕಿಡಿಯಾಗಿ ಬೆಂಕಿಯಾಯಿತು. ಮತ್ತಷ್ಟು ಒಣಸೌದೆಗಳನ್ನು ಪೇರಿಸಿದಾಗ ದೊಡ್ಡ ಬೆಂಕಿಯಾಯಿತು. ಅದರ ಬೆಳಕಲ್ಲಿ ಎಲ್ಲರಿಗೂ ಮತ್ತೊಬ್ಬರ ರೂಪ, ಆಕಾರ ತಿಳಿಯಿತು.

"ಕಯೋಟಿ ಅಂದ್ರೆ ಹೀಗಿರುತ್ತೆ ಅಂತ ಗೊತ್ತಾಯ್ತು.
ಚೂಪು ಮೂತಿ, ಚುರುಕು ಕಿವಿ, ಪೊದೆ ಬಾಲದ ಗುರುತಾಯ್ತು!
ಗಿಡುಗ ಅಂದ್ರೆ ಹೀಗಿರುತ್ತೆ ಅಂತ ಗೊತ್ತಾಯ್ತು.
ಚೂಪು ಕೊಕ್ಕು, ಚುರುಕು ಕಣ್ಣು, ದೊಡ್ಡ ರೆಕ್ಕೆಯ ಗುರುತಾಯ್ತು
ಮೊಲ ಅಂದ್ರೆ ಹೀಗಿರುತ್ತೆ ಅಂತ ಗೊತ್ತಾಯ್ತು.
ಉದ್ದನೆ ಕಿವಿಗಳು, ಮೆತ್ತನೆ ತುಪ್ಪುಳ, ಮೋಟು ಬಾಲದ ಗುರುತಾಯ್ತು
ಕಾಡುಕೋಳಿ ಅಂದ್ರೆ ಹೀಗಿರುತ್ತೆ ಅಂತ ಗೊತ್ತಾಯ್ತು.
ಚಂದದ ಪುಕ್ಕ, ಕಿರೀಟ ಹೊತ್ತ ಚೆಲುವನ ಗುರುತಾಯ್ತು
ಆಮೆ ಅಂದ್ರೆ ಹೀಗಿರುತ್ತೆ ಅಂತ ಗೊತ್ತಾಯ್ತು.
ಗಟ್ಟಿಚಿಪ್ಪು, ಮೆತ್ತನೆ ದೇಹ, ಉದ್ದನೆ ಕತ್ತಿನ ಗುರುತಾಯ್ತು!"

ಹೀಗೆ ಒಬ್ಬರಿಗೊಬ್ಬರು ಕಂಡ ಮೇಲೆ, ಚಂದವನ್ನು ವರ್ಣಿಸಿದ ಮೇಲೆ, ಇಷ್ಟು ಉಪಯೋಗಕರವಾದ ಬೆಂಕಿಯನ್ನು ಜಗತ್ತಿನಲ್ಲಿ ಎಲ್ಲರ ಜೊತೆ ಹಂಚಿಕೊಳ್ಳಲೇಬೇಕು ಎಂದು ಒಮ್ಮತದಿಂದ ನಿಶ್ಚಯಿಸಿದರು. ಆದರೆ, ಎಲ್ಲರಿಗೂ ತಲುಪಿಸುವುದು ಹೇಗೆ? ಕಯೋಟಿ ಹೇಳಿತು, "ಇದರಿಂದ ಸೂರ್ಯನನ್ನು ಮಾಡಿಬಿಡೋಣ. ಅವನಿಂದ ಹಗಲಾಗಿ, ಎಲ್ಲರಿಗೂ ಬೆಳಕು ಸಿಗುತ್ತದೆ." ಆಗ ಮಿಕ್ಕ ಪ್ರಾಣಿಗಳೆಲ್ಲಾ ಸಂತೋಷದಿಂದ ಹೇಳಿದವು

"ಜಾಣರ ಜಾಣ, ಕಯೋಟಿ ಅಣ್ಣ
ಬೆಂಕಿಯ ಬೀರನು ನೀನಣ್ಣ,

ಬೇಗನೆ ಸೂರ್ಯನ ಮಾಡಣ್ಣ.
ಝಗಮಗ ಬೆಳಕನು ಬೀರೋಣ,
ಜಗದ ಕತ್ತಲೆಯ ತೊಳೆಯೋಣ!"

ಕಯೋಟಿ "ಬೆಂಕಣ್ಣ, ಬೆಂಕಣ್ಣ, ನೀನು ಬೆಳಕಿನ ಚೆಂಡಣ್ಣ! ಬೇಗನೆ ಸೂರ್ಯ ಆಗಣ್ಣ" ಎಂದು ಭೂಮಂತ್ರ ಹಾಕಿ ಉರಿಯುತ್ತಿರುವ ಕೆಂಡವನ್ನು ಉಂಡೆಕಟ್ಟಿ ಸೂರ್ಯನನ್ನು ಮಾಡಿತು. ಕಪ್ಪುಗಿಡುಗ "ಪರ್ವತದ ಮೇಲೆ ಹಾರಿ ಅಲ್ಲಿ ಇಡಲೇ" ಎಂದು ಕೇಳಿತು. ಅಲ್ಲಿ ಇಟ್ಟರೆ ಎಲ್ಲರಿಗೂ ಕಾಣುವುದಿಲ್ಲವಲ್ಲಾ ಎಂದು ಕಯೋಟಿ ಯೋಚಿಸಿ ಸೂರ್ಯನಿಗೆ ಹೇಳಿತು, "ನಾನು ನಿನ್ನನ್ನು ತುಂಬಾ ಮೇಲಕ್ಕೆ ಎಸೆಯುತ್ತೇನೆ. ನೀನು ಕೆಳಗೆ ಬರಬೇಡ. ಅಲ್ಲೇ ನಿಂತುಕೊಂಡು ಭೂಮಿಯನ್ನೆಲ್ಲಾ ಸುತ್ತುತ್ತಿರು. ಆಗ ಎಲ್ಲರಿಗೂ ಹಗಲು ದೊರಕುತ್ತದೆ, ಬೆಳಕೂ ಸಿಗುತ್ತದೆ. ಸೂರ್ಯ ಅದಕ್ಕೆ ಖುಷಿಯಾಗಿ ಒಪ್ಪಿಕೊಂಡ. ತನ್ನೆಲ್ಲ ಶಕ್ತಿಯನ್ನೂ ಉಪಯೋಗಿಸಿ ಕಯೋಟಿ ಸೂರ್ಯನನ್ನು ಆಕಾಶಕ್ಕೆ ಎಸೆಯಿತು. ಅಂದಿನಿಂದ ಇಂದಿನವರೆಗೂ ಸೂರ್ಯ ಅಲ್ಲೇ ನಿಂತು ಜಗತ್ತಿನ ಎಲ್ಲರಿಗೂ ಬೆಳಕನ್ನು ಕರುಣಿಸುತ್ತಿದ್ದಾನೆ.

ಸೂರ್ಯನನ್ನು ಮಾಡಿದ ಮೇಲೆ ಸಣ್ಣಪುಟ್ಟ ಬೆಂಕಿಯ ಜ್ವಾಲೆಗಳು ಇನ್ನೂ ಉಳಿದಿದ್ದವು. ಕಯೋಟಿ ಕೆಲವು ಕಲ್ಲುಗಳನ್ನು ಆರಿಸಿಕೊಂಡಿತು. "ಬೆಂಕಣ್ಣ, ಬೆಂಕಣ್ಣ, ನೀನು ಬೆಳಕಿನ ಚೆಂಡಣ್ಣ! ಕಲ್ಲಿನ ಒಳಗಡೆ ಅಡಗಣ್ಣ" ಎಂದು ಭೂಮಂತ್ರ ಹಾಕಿ ಬೆಂಕಿಯನ್ನು ಕಲ್ಲಿನ ಒಳಗಡೆ ಹಾಕಿತು. ಅವೆಲ್ಲಾ ಚಕಮಕಿ ಕಲ್ಲಾದವು. ಅವುಗಳನ್ನು ಚೆನ್ನಾಗಿ ಉಜ್ಜಿದರೆ ಕಿಡಿ ಹುಟ್ಟುತ್ತದೆ. ಅದಕ್ಕೆ ಸ್ವಲ್ಪ ಒಣಗಿದ ಎಲೆ ಮತ್ತು ಪುರುಳೆಗಳನ್ನು ಹಾಕಿದರೆ ಬೆಂಕಿಯೇ ಬರುವುದು. ಕಯೋಟಿ ಸಂತೋಷದಿಂದ ದೊಡ್ಡ ಚೀಲದಲ್ಲಿ ಚಕಮಕಿಕಲ್ಲು ತುಂಬಿಕೊಂಡು, ಪ್ರಪಂಚದಲ್ಲೆಲ್ಲಾ ಕಡೆ ತಿರುಗುತ್ತಾ, ಬೇಕು ಎಂದವರಿಗೆಲ್ಲಾ ಕೊಟ್ಟಿತು.

ಈ ರೀತಿ ಜಾಣರ ಜಾಣನಾದ ಪರೋಪಕಾರಿ ಕಯೋಟಿ ಸೂರ್ಯನನ್ನು ಮತ್ತು ಚಕಮಕಿ ಕಲ್ಲುಗಳನ್ನು ಮಾಡಿ ಎಲ್ಲರಿಗೂ ಬೆಳಕು ಮತ್ತು ಬೆಂಕಿ ನೀಡಿತು.

ಪರೋಪಕಾರಿ ಕಯೋಟಿ

ಕಯೋಟಿ ಸೂರ್ಯನನ್ನು ಮಾಡಿ ಆಕಾಶಕ್ಕೆ ಏರಿಸಿದ ಮೇಲೆ ಎಲ್ಲರಿಗೂ ಬೆಳಕು ದೊರೆತು ಸಂತೋಷವಾಯಿತು. ಅನೇಕ ಬುಡಕಟ್ಟಿನ ಜನರೆಲ್ಲಾ ಕುಣಿದು ಸಂಭ್ರಮಿಸಿದರು. ಭಗವಂತನ ಪ್ರತಿನಿಧಿಯಂತಿದ್ದ ಬೆಳಕಿಗೆ ತಮ್ಮ ಕೃತಜ್ಞತೆಗಳನ್ನು ಅರ್ಪಿಸುವುದಕ್ಕಾಗಿ ವರ್ಷಕ್ಕೊಮ್ಮೆ ಸೂರ್ಯನೃತ್ಯಾರಾಧನೆಯ ದೊಡ್ಡ ಜಾತ್ರೆಯನ್ನು ನಡೆಸುವುದು ಸಂಪ್ರದಾಯವೇ ಆಗಿಹೋಯಿತು.

ಈ ರೀತಿ ಒಮ್ಮೆ ಇಂಡಿಯನ್ ಬುಡಕಟ್ಟಿನವರೆಲ್ಲಾ ಒಂದು ದೊಡ್ಡ ಸೂರ್ಯನೃತ್ಯದ ಸಿಡಿಹಬ್ಬವನ್ನು ಏರ್ಪಡಿಸಿದ್ದರು. ಆ ಪರಿಷೆಗೆ ಎಲ್ಲಾ ಪ್ರಾಣಿ ಪಕ್ಷಿಗಳಿಗೂ ಆಹ್ವಾನವಿತ್ತು.

ಎಲ್ಲರೂ ಬಣ್ಣಬಣ್ಣದ ಬಟ್ಟೆ, ಚಿತ್ರವಿಚಿತ್ರವಾದ ಮಣಿಸರಗಳು, ಕರಕೌಶಲ್ಯದಿಂದ ತಯಾರಿಸಿದ ನಾಜೂಕು ಆಭರಣಗಳಿಂದ ಅಲಂಕೃತಗೊಂಡು ಸಂಭ್ರಮದಲ್ಲಿದ್ದರು. ಸಮಯಕ್ಕೆ ಸರಿಯಾಗಿ ಎಲ್ಲಾ ಸೇರಿದರೂ ಕಾಗೆಯ ಸುಳಿವೇ ಇಲ್ಲ. ಅಂತೂ ಇಂತೂ ನೃತ್ಯ ಮುಗಿಯುವ ವೇಳೆಗೆ ಮೆಲ್ಲಗೆ ಬಂತು ಕಾಗೆ. ಜಾಣ ಕಯೋಟಿಯ ಚುರುಕು ಮೂಗಿಗೆ ಏನೋ ಜಿಡ್ಡಿನ ವಾಸನೆ ಅಡರಿತು. ಅದು ಕಾಗೆಯನ್ನು ಕೇಳಿತು:

"ಓ ಕಾಗಣ್ಣಾ, ಓ ಕಾಗಣ್ಣಾ
ಘಮಘಮ ಪರಿಮಳವೇನಣ್ಣಾ?
ಸವಿರುಚಿ ತಿಂಡಿಯ ತಿಂದಿಹೆಯೇನೋ
ನಮಗೂ ಸ್ವಲ್ಪ ಹೇಳಣ್ಣಾ!"
ಕಾಗೆ ಮಾತ್ರ ಗುಟ್ಟು ಬಿಟ್ಟುಕೊಡದೆ,
"ಜಾಣರ ಜಾಣ, ಕಯೋಟಿ ಅಣ್ಣ
ನಿನಗೇತಕೆ ಈ ಭ್ರಮೆಯಣ್ಣ?!
ನನ್ನನ್ಯಾರು ಕರೆಯುವರು?
ತಿಂಡಿತೀರ್ಥವ ನೀಡುವರು?

ಯಾರೋ ತೀಡಿದ ಪರಿಮಳದೆಣ್ಣೆ,
ಬೆಳಕಿಗೆ ಉರಿಸಿದ ಸೂಡಿನ ಎಣ್ಣೆ,
ಹಬ್ಬದ ತಿಂಡಿಗೆ ಹಾಕಿದ ಬೆಣ್ಣೆ,
ಬೇರೇನೋ ಇರಬೇಕಣ್ಣಾ!"

ಎಂದು ತಿಪ್ಪೆ ಸಾರಿಸಿತು. ಈ ಕಾಗೆ ಏನೋ ಮುಚ್ಚಿಡುತ್ತಿದೆ ಎಂದು ಉಳಿದವರಿಗೆ ಅನುಮಾನ. ಕಯೋಟಿ ಕಣ್ಣೇ ಮಿಟುಕಿಸದ ಡ್ರ್ಯಾಗನ್ ನೊಣವನ್ನು ಪಕ್ಕಕ್ಕೆ ಕರೆದು, ಕಾಗೆಯ ಮೇಲೆ ಒಂದು ಕಣ್ಣಿಡಲು ಹೇಳಿತು. ಪರಿಷೆ ಊಟ ಮುಗಿದ ಮೇಲೆ ಕಾಗೆ ಮೆಲ್ಲಗೆ ನುಸುಳಿಕೊಂಡು ಹಾರಿಹೋಯಿತು. ಅದರ ಮೇಲೆ ಕಣ್ಣಿಟ್ಟಿದ್ದ ಡ್ರ್ಯಾಗನ್ ನೊಣ ಕಣ್ಣು ಮಿಟುಕಿಸದೆ ಅದನ್ನೇ ನೋಡುತ್ತಾ, ಅದು ಹಾರಿಹೋದ ದಾರಿಯನ್ನು ನೆನಪಿಟ್ಟುಕೊಂಡಿತು.

ಮಾರನೇ ದಿನ ಬೆಳಗ್ಗೆ ಡ್ರ್ಯಾಗನ್ ನೊಣದ ಮಾರ್ಗದರ್ಶನದಲ್ಲಿ ಎಲ್ಲರೂ ಕಾಗೆಯನ್ನು ಹುಡುಕಿಕೊಂಡು ಹೊರಟರು. ಒಂದು ಪುಟ್ಟ ಟೀಪಿಯೊಳಗೆ ಅದು ತನ್ನ ಹೆಂಡತಿಯೊಡನೆ ವಾಸವಾಗಿತ್ತು. ಗುಡಿಸಲಿನ ಹೊರಗೆ ಪುಟ್ಟ ಕಾಗೆಮರಿಯೊಬ್ಬಳು ಕುಂಟೆಬಿಲ್ಲೆ ಆಡುತ್ತಿದ್ದಳು. ಒಳಗಡೆ ಹೊಗೆಗೂಡಿನ ಬಳಿಯಿದ್ದ ಒಂದು ದೊಡ್ಡ ಕಲ್ಲುಹಾಸಿನ ಮೇಲೆ ಕಾಗೆ ಮತ್ತು ಅದರ ಹೆಂಡತಿ ಕುಳಿತಿದ್ದವು. ಪ್ರಾಣಿಗಳೆಲ್ಲಾ ಸುಮ್ಮನೆ ಉಭಯ ಕುಶಲೋಪರಿ ಮಾತಾಡಿ, ಮೆಲ್ಲಗೆ ಸುತ್ತಮುತ್ತ ಕಣ್ಣಾಡಿಸಿದವು. ಏನೂ ಸುಳಿವು ಸಿಗಲಿಲ್ಲ. ಕಾಗಣ್ಣ ಮತ್ತು ಕಾಗಕ್ಕ ಮಾತ್ರ ಕಲ್ಲುಹಾಸನ್ನು ಬಿಟ್ಟು ಕದಲಲೇ ಇಲ್ಲ. ಜಾಣರ ಜಾಣನಾದ

ಕಯೋಟಿ ಅಣ್ಣನಿಗೆ ಇಲ್ಲೇನೋ ಇದೆ ಎಂದು ಅನುಮಾನ ಬಂತು. ಆದರೂ ತೋರಿಸಿಕೊಳ್ಳದೆ ಎಲ್ಲರ ಜೊತೆ ವಾಪಸ್ ಬಂತು. ಮಾರನೆಯ ದಿನ ಬೆಳಗ್ಗೆ ಇಂಡಿಯನ್ಸ್ ನಾಯಕ ಒಂದು ಸಭೆ ಕರೆದ. ಅಲ್ಲಿ ಕಯೋಟಿ ಎಲ್ಲರಿಗೂ ಹೇಳಿತು:

"ಏನೋ ಉಂಟು ಕಾಗಣ್ಣನ ಗುಟ್ಟು
ಸುಳ್ಳು ಹೇಳುವನು ಏನೋ ಮುಚ್ಚಿಟ್ಟು.
ಮೋಸ ತಟವಟದ ಹಾದಿಯು ಸೊಟ್ಟು
ಅದ ಹಿಡಿದರೆ ಉಳಿವುದೆ ಒಗ್ಗಟ್ಟು?

ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
ಗಾದೆಯ ಮರೆತನು ಏತಕೋ ಕಾಗೆ!
ಪಾಠವ ಕಲಿಸಲು ಹೊರಡುವೆ ನಾನು
ಮರೆಯಲಿ ಎಲ್ಲರೂ ಕಾದಿರಿ ನೀವು."

ಈ ರೀತಿ ಹೇಳಿದ ಕಯೋಟಿ, ಛೂಮಂತ್ರ ಹೇಳಿಕೊಂಡು ಒಂದು ಪುಟಾಣಿ ಪುಟ್ಟ ನಾಯಿಮರಿಯಾಗಿ ಬದಲಾಯಿತು. ಆತುರದಲ್ಲಿ ಕಣ್ಣು ಮೀಸೆ ಮಾತ್ರ ಕಯೋಟಿಯದೇ ಉಳಿದುಬಿಟ್ಟಿತು. ನಾಯಿಮರಿ ದೇಹ, ಕಯೋಟಿ ಕಣ್ಣು–ಮೀಸೆ. ಒಟ್ಟಿನಲ್ಲಿ ಹೊಸ ವೇಷ, ಭಾಷೆ, ದನಿಯ ವಿಚಿತ್ರ ವಿದೂಷಕನನ್ನು ನೋಡಿ ಎಲ್ಲರೂ ನಕ್ಕರು. ಮಾರುವೇಷದ ಕಯೋಟಿ ಟೀಪಿಯಿಂದ ಹೊರಟಿತು.

"ಕಾಗಣ್ಣ್ ಏನೋ ಮುಚ್ಚಿಟ್ಟವ್ನೆ
ಕೂತಿದ್ ಕಲ್ಹಾಸ್ ಕೆಳ್ಗೆ.
ಕಂಡಿಡಿಯಾಕೆ ಒಂಟವ್ನಿ ನಾ
ಕುಯ್ ಕುಯ್ ನಾಯ್ಮರಿ ಆಗೆ"

ಮಾರುವೇಷದ ಕಯೋಟಿ ಕಾಗೆಯ ಟೀಪಿ ಬಳಿ ಬಂದಾಗ, ಹೊರಗೆ ಆಟವಾಡುತ್ತಿದ್ದ ಕಾಗೆಮರಿ ಅದನ್ನು ಎತ್ತಿಕೊಂಡು ಅಪ್ಪ–ಅಮ್ಮನ ಹತ್ತಿರ ಓಡಿಹೋಯಿತು.

"ಎಂಥಾ ಚೆಂದದ ಪುಟಾಣಿ ನಾಯಿ
ಪುಟುಪುಟು ಓಡುವ ಮುದ್ದಿನ ಗೊಂಬಿ
ಆಟಕೆ ನನಗಿದು ಬೇಕೇ ಬೇಕು
ನೀವಿಬ್ಬರು ಇದಕೊಪ್ಪಲೇಬೇಕು"

ಎಂದು ಹಠ ಹಿಡಿಯಿತು. ಮಗಳ ಜೊತೆಯಿದ್ದ ವಿಚಿತ್ರ ಪ್ರಾಣಿಯನ್ನು ನೋಡಿ ಕಾಗಣ್ಣ, ಕಾಗಕ್ಕನಿಗೆ ಗಾಬರಿಯಾಯಿತು.

"ಅಯ್ಯೋ, ಅಯ್ಯಯ್ಯೋ, ಬಿಟ್ಟುಬಿಡು ತಾಯಿ.
ಏನೋ ಮಾಟ ಮಂತ್ರ, ಇದು ಅಲ್ಲ ಮರಿನಾಯಿ!

ಮೀಸೆಯ ನೋಡು, ಕುಣಿಯುತ್ತಿಹುದು
ಕಣ್ಣನು ಕಾಣು, ಹೊಳೆಯುತ್ತಿಹುದು.
ಜಾಣನಾಗಿ ಕಾಣುತ್ತಿಹುದು, ಅಲ್ಲ ಇದು ನಾಯಿ!"

ಅಪ್ಪ ಅಮ್ಮ ಎಷ್ಟು ಹೇಳಿದರೂ ತನ್ನ ಮುದ್ದಿನ ಬೊಂಬೆಯಂತಹ ನಾಯಿಯನ್ನು ಬಿಟ್ಟುಬಿಡಲು ಕಾಗೆಮರಿ ಒಪ್ಪಲೇ ಇಲ್ಲ. ಅದರ ಜೊತೆ ಆಟವಾಡುತ್ತಾ ಕುಳಿತೇ ಬಿಟ್ಟಳು. ಮಧ್ಯಾಹ್ನ ಊಟದ ಸಮಯವಾಯಿತು. ಎಲ್ಲರಿಗೂ ವಿಪರೀತ ಹೊಟ್ಟೆ ಹಸಿವು. ಕಾಗಕ್ಕ ನಾಯಿಮರಿಯ ಕಣ್ಣನ್ನು ಬಿಗಿಯಾಗಿ ಮುಚ್ಚಿದಳು. ಕಾಗಣ್ಣ ಮೆಲ್ಲಗೆ ಕಲ್ಲುಹಾಸು ಸರಿಸಿ, ಅದು ಮುಚ್ಚಿದ್ದ ಬಿಲದೊಳಗೆ ಹೋಗಿ ಏನೋ ಮಾಂಸವನ್ನು ತಂದಿತು. ನಂತರ ಮೊದಲಿನಂತೆ ಕಲ್ಲುಹಾಸನ್ನು ಮುಚ್ಚಿಬಿಟ್ಟಿತು. ಕಯೋಟಿಗೆ ಜಾತ್ರೆಯಲ್ಲಿ ಬಂದಂತಹ ಘಮಲು ಈಗಲೂ ಬಂದಿತು. ತನ್ನ ದೊಡ್ಡ ಕಣ್ಣನ್ನು ಮೆಲ್ಲಗೆ ಅಗಲಿಸಿ ಕಲ್ಲುಹಾಸಿನ ಕೆಳಗಿನ ರಹಸ್ಯವನ್ನು ನೋಡಿಬಿಟ್ಟಿತು.

ಸ್ವಲ್ಪ ಹೊತ್ತಾದ ಮೇಲೆ ಕಾಗಣ್ಣ, ಕಾಗಕ್ಕ ಹೊರಗೆ ಸುತ್ತಾಡಿಕೊಂಡು ಬರಲು ಹೊರಟರು. ಕಯೋಟಿ ಕಾಗೆಮರಿಯ ಹಿಡಿತದಿಂದ ತಪ್ಪಿಸಿಕೊಂಡು ಛೂಮಂತ್ರದಿಂದ ವಾಪಸ್ ಕಯೋಟಿಯಾಗಿ ಬದಲಾಯಿತು. ಕಲ್ಲುಹಾಸನ್ನು ಸರಿಸಿ ನೋಡಿತು. ಅಲ್ಲಿದ್ದ ಬಿಲವನ್ನು ದೊಗೆದು ದೊಡ್ಡದಾಗಿ ಮಾಡಿತು. ಅಲ್ಲಿ ನೂರಾರು ಎಮ್ಮೆಗಳಿದ್ದವು. ಅವೆಲ್ಲಾ ಬಿಲದಿಂದ ಹೊರಗೆ ಓಡಲು ಶುರು ಮಾಡಿದವು. ಓಡುವ ರಭಸದಲ್ಲಿ ಟೀಪಿಯ ಕಂಬಗಳೆಲ್ಲಾ ಮುರಿದು ಹೋಗಿ ಟೀಪಿ ಕುಸಿಯಿತು.

ಅಷ್ಟು ಹೊತ್ತಿಗೆ ವಾಪಸ್ ಬಂದ ಕಾಗಣ್ಣನಿಗೆ ಕಯೋಟಿಯ ಕೆಲಸವನ್ನು ನೋಡಿ ವಿಪರೀತ ಸಿಟ್ಟು ಬಂತು. ಕಯೋಟಿ ಈಚೆ ಬಂದ ತಕ್ಷಣ ಅದನ್ನು ಕುಕ್ಕಿಕುಕ್ಕಿ ಕೊಂದುಬಿಡಬೇಕೆಂದು ಕಾಯುತ್ತಿತ್ತು. ಇತ್ತ, ಒಂದನ್ನು ಬಿಟ್ಟು ಮಿಕ್ಕೆಲ್ಲ ಎಮ್ಮೆಗಳೂ ಓಡಿಹೋದವು. ಕೊನೆಯ ಎಮ್ಮೆ ಮಾತ್ರ ನಿಧಾನವಾಗಿ ಬರುತ್ತಿತ್ತು. ಕಯೋಟಿ ಆ ಎಮ್ಮೆಯ ಕಾಲ್ಕೆಳಗೆ ಅವಿತುಕೊಂಡು ಮೆಲ್ಲಗೆ ಈಚೆ ಬಂದುಬಿಟ್ಟಿತು. ಬೇರೆ ಪ್ರಾಣಿಗಳೆಲ್ಲಾ ಇದ್ದ ಕ್ಷೇಮವಾದ ಸ್ಥಳಕ್ಕೆ ತಲುಪಿದ ಮೇಲೆ ಕಯೋಟಿ ಕಾಗೆಗೆ ಹೇಳಿತು:

"ಓ ಕಾಗಣ್ಣಾ, ಓ ಕಾಗಣ್ಣಾ
ಬಚ್ಚಿಟ್ಟು ಕೆಟ್ಟೆಯಲ್ಲಣ್ಣ.
ಅತ್ತರೆ ಸುಖವೀಗಿಲ್ಲಣ್ಣ,
ಹಂಚಿ ತಿಂದರೆ ಸುಖವಣ್ಣ.

ಮನೆಯೂ ಹೋಯಿತು,
ಮಾನವೂ ಹೋಯಿತು.
ಗೆಳೆಯರ ಬಳಗವೂ ತೊರೆದಾಯ್ತು
ಮುಖವನು ತೋರಿಸದಂತಾಯ್ತು."

ಹಗಲು ಬಾನಲಿ ಹಾರುತಿರು,
ಇರುಳು ಮರದಲಿ ತೂಕಡಿಸು.
ಸತ್ತ ಮಾಂಸವ ತಿನ್ನುತಿರು,
ಒಂಟಿ ಬಾಳನು ಬಾಳುತಿರು."

ಕಾಗೆ ಸಪ್ಪೆ ಮುಖ ಮಾಡಿಕೊಂಡು ಹಾರಿ ಹೋಯಿತು. ಅಂದಿನಿಂದ ಕಾಗೆಯನ್ನು ಯಾರೂ ಹತ್ತಿರ ಸೇರಿಸಲಿಲ್ಲ. ಈ ರೀತಿ ಪರೋಪಕಾರಿ ಕಯೋಟಿ ಅಣ್ಣ, ಕಾಗೆಗೆ ಬುದ್ಧಿ ಕಲಿಸಿ ಇಂಡಿಯನ್ಸ್ ಬುಡಕಟ್ಟಿನವರಿಗೆ ಎಮ್ಮೆಗಳನ್ನು ತಂದು ಕೊಟ್ಟಿತು.

ಆಧಾರ

1. ಮೂಲ ಕಥೆ – Apache Tales written by J. Gilbert McAllister.
2. Reference book: The Best of Texas and Texas Folklore.
3. TSHA - Texas State Historical Association.

❑

(31)

ಅಮೆರಿಕದಲ್ಲಿ ಕಂಟ್ರಿ ವೆಸ್ಟರ್ನ್ ಮ್ಯೂಸಿಕ್

ವತ್ಸ ಕುಮಾರ್
ಹ್ಯೂಸ್ಟನ್, ಟೆಕ್ಸಾಸ್

*

ನಮಗೆ ಸಂಗೀತ ಏಕೆ ಬೇಕು? ವೈಜ್ಞಾನಿಕವಾಗಿ ಹೇಳಬೇಕೆಂದರೆ, ಸಂಗೀತ ನಮ್ಮ ಮೆದುಳಿನ ಬೆಳವಣಿಗೆಗೆ ಅತಿ ಮುಖ್ಯವಾದ ಸಾಧನವಾಗಿದೆ. ಮಾನವರ ಸಾಂಸ್ಕೃತಿಕ ಜೀವನದ ಅಂಗವಾಗಿದೆ. ನಮಗೆ ಪ್ರಿಯವಾದ ಸಂಗೀತ ಕೇಳುವುದರಿಂದ ನಮ್ಮ ಮೆದುಳಿನಲ್ಲಿ ಆಕ್ಸಿಟೋಸಿನ್ ಎಂಬ ಹಾರ್ಮೋನ್ ಬಿಡುಗಡೆಯಾಗಿ ನಾವು ಇತರರ ಬಗ್ಗೆ ಅನುಕಂಪ, ಸಹಾನುಭೂತಿಯಿಂದ ವರ್ತಿಸಲು ಸಾಧ್ಯವಾಗುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. 'Music is the universal language of man-kind' ಎಂದು ಅಮೆರಿಕದ ಶ್ರೇಷ್ಠ ಕವಿ ಹೆನ್ರಿ ವಾಡ್ಸ್‌ವರ್ತ್ ಲಾಂಗ್ ಫೆಲೋ ಬರೆದಿದ್ದಾನೆ. ಸಂಗೀತ ವಿಶ್ವದ ಉಸಿರು, ಕಲ್ಪನಾ ಶಕ್ತಿಯ ರೆಕ್ಕೆ, ಪ್ರತಿಯೊಂದರ ಜೀವ.

ವಲಸೆ ಬಂದವರು

ಉತ್ತರ ಅಮೆರಿಕದಲ್ಲಿ ಸಾವಿರಾರು ವರ್ಷಗಳಿಂದ ಏಷ್ಯಾ ಖಂಡದಿಂದ ವಲಸೆ ಬಂದ ಕ್ಲೊವಿಸ್ ಎಂಬ ಜನಾಂಗದವರು ವಾಸವಾಗಿದ್ದರು. ಈ ದೇಶದ ಸಂಸ್ಕೃತಿಯ ಬೆಳವಣಿಗೆಗೆ ಕ್ಲೊವಿಸ್ ಜನಾಂಗದವರನ್ನು ಮೂಲಪುರುಷರೆಂದೇ ಪರಿಗಣಿಸಬಹುದು. ಭಾರತದಿಂದ ವಲಸೆ ಬಂದಾಗ ನಾವು ನಮ್ಮೊಡನೆ ಸಂಗೀತ, ನೃತ್ಯ, ಚಿತ್ರಕಲೆ, ಕಸೂತಿ, ಪಾಕಶಾಸ್ತ್ರ ಹೀಗೆ ಹತ್ತಾರು ರೀತಿಯ ಸಂಸ್ಕೃತಿಯನ್ನು ಈ ದೇಶಕ್ಕೆ ತಂದಿರುವುದೇ ಅಲ್ಲದೆ, ಅವುಗಳನ್ನು ಇಲ್ಲಿ ಉಳಿಸಿ, ಬೆಳೆಸಿ, ಆನಂದದಿಂದ ಇತರರೊಡನೆ ಹಂಚಿಕೊಳ್ಳುತ್ತಿದ್ದೇವೆ. ಕಾಲಕ್ರಮೇಣ ನಮ್ಮ ಸಂಸ್ಕೃತಿ, ಸಾಹಿತ್ಯಗಳು ಈ ದೇಶದ ಒಂದು ಅವಿಭಾಜ್ಯ ಸಂಸ್ಕೃತಿಯೇ ಆಗಿಹೋಗಿದೆ.

ಕ್ರಿಸ್ಟೋಫರ್ ಕೊಲಂಬಸ್ ಹುಟ್ಟುವ 500 ವರ್ಷಗಳ ಹಿಂದೆಯೇ ನಾರ್ವೆ ದೇಶದ ಕೆಲವು ನಾವಿಕರು ಹೊಸ ದೇಶವನ್ನು ಕಂಡುಹಿಡಿಯುವ ಮಹದಾಕಾಂಕ್ಷೆಯಿಂದ ವೈಕಿಂಗ್ ಎಂಬ ನಾವೆಯಲ್ಲಿ ತಮ್ಮ ದೇಶವನ್ನು ಬಿಟ್ಟು ಹೊರಟರು. ಕೊರೆಯುವ ನೀರಿನ ಅಟ್ಲಾಂಟಿಕ್ ಸಾಗರದಲ್ಲಿ ಬಿರುಗಾಳಿಯ ಅಪ್ಪಳಿಸುವಿಕೆಯಿಂದ ಓಲಾಡುತ್ತಿದ್ದ ನಾವೆಯಲ್ಲಿ ಧೈರ್ಯದಿಂದ ಮುಂದೆ ಸಾಗಿದ, ಈ ನಾರ್ವೆಯ ಜನರು (Norsemen) ಬಹಳ ದಿನಗಳ ಪ್ರಯಾಣ ಮಾಡಿ, ದೂರದಲ್ಲಿ ಹೊಸನಾಡನ್ನು ಕಂಡಾಗ ಅವರ ಖುಷಿ ಹೇಳತೀರದು. ಈ ನಾವಿಕರೇ ಅಮೆರಿಕಕ್ಕೆ ಕಾಲಿಟ್ಟ ಮೊಟ್ಟ ಮೊದಲನೆಯ ವಲಸಿಗರು.

1600ರಿಂದ ವಲಸೆ ಬಂದ ವಲಸೆಗಾರರು ಬೇರೂರಿದ್ದು ಪೂರ್ವ ಕರಾವಳಿಯ ಪ್ರದೇಶಗಳಲ್ಲಿ. ನಂತರದಲ್ಲಿ ಆಫ್ರಿಕಾದಿಂದ ಕೆಲಸ ಮಾಡಲು ಜನರನ್ನು ಆಮದು ಮಾಡಿಕೊಳ್ಳಲಾಗುತಿತ್ತು. ಸುಮಾರು 1870 ರಿಂದ 1900ರವರೆಗೆ, ಅಂದರೆ ಮುವ್ವತ್ತು ವರ್ಷಗಳ ಕಾಲದಲ್ಲಿ, ಉತ್ತರ ಮತ್ತು ಪಶ್ಚಿಮ ಯೂರೋಪಿನಿಂದ ಸಾವಿರಾರು ಮಂದಿ ವಲಸೆ ಬಂದರು. ಇದರಲ್ಲಿ ಐರ್ಲೆಂಡ್, ಗ್ರೇಟ್ ಬ್ರಿಟನ್ ಮತ್ತು ಸ್ಕ್ಯಾಂಡಿನೇವಿಯನ್ ದೇಶಗಳವರೂ ಸೇರಿದ್ದರು. ಆದರೆ ಇದಕ್ಕೆ ಮೊದಲೇ ದಕ್ಷಿಣ ಮತ್ತು ಪೂರ್ವ ಯೂರೋಪ್‌ಗಳಿಂದ ವಲಸೆ ಬಂದು ಈ ನಾಡಿನಲ್ಲಿ ನೆಲಸಿದ್ದ ವಲಸೆಗಾರರು, ಅಮೆರಿಕದ ಸಂಸ್ಕೃತಿ ಹಾಗೂ ಜನಜೀವನವನ್ನು ನಿರೂಪಿಸುವುದರಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸಿದ್ದರೆಂದು ಶತಮಾನಗಳ ಚರಿತ್ರೆಯಿಂದ ತಿಳಿಯಬಹುದಾಗಿದೆ. ಹೀಗೆ ವಲಸೆ ಬಂದವರು, ಆ ವೇಳೆಗೇ ಇಲ್ಲಿದ್ದ ವಲಸೆಗಾರರಿಗೆ ತಮ್ಮ ನಾಡಿನ ಪರಿಚಯ ಮಾಡಿಕೊಟ್ಟು ತಮ್ಮ ಸಂಸ್ಕೃತಿಯನ್ನೂ ಅವರೊಡನೆ ಹಂಚಿಕೊಂಡರು.

ಅಮೆರಿಕದಲ್ಲಿ ಸಂಗೀತದ ಪ್ರಾರಂಭ

ಸುಮಾರು ಹದಿನೆಂಟನೆಯ ಶತಮಾನದಿಂದಲೇ ಐರಿಶ್, ಸ್ಕಾಟಿಷ್ ಮತ್ತು ವೇಲ್ಸ್‌ಗಳ ಸಂಗೀತವು ಅಮೆರಿಕದ ಸಂಗೀತದ ಮೂಲವಾಗಿದೆ. 1820ರ ದಶಕದಲ್ಲಿ ಐರಿಶ್ ವಲಸೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಬಂದದ್ದು ನಿಜ. ಹೀಗೆ ವಲಸೆ ಬಂದವರಲ್ಲಿ ಸ್ಕಾಟ್-ಐರಿಶ್ ಪದ್ಧತಿಯವರು, ಸ್ಕಾಟ್ ಪ್ರೆಸಿಬಿಟೇರಿಯನ್ ಚರ್ಚ್ ಮೂಲದವರು ಮತ್ತು ತಗ್ಗು ನಾಡಿನ ಸ್ಕಾಟ್ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದವರು. (ಇವರು ಇಂಗ್ಲಿಷ್ ಮತ್ತು ಗೇಲಿಕ್ ಭಾಷೆಗಳನ್ನು ಮಾತಾಡುವವರು.) ಪಶ್ಚಿಮ ಯೂರೋಪಿನ ಕೆಲ್ಟಿಕ್ (celtic) ಎಂಬ ಜನಾಂಗದವರ ಜಾನಪದ ಹಾಡುಗಳ ಪ್ರಭಾವದಿಂದ ಅಮೆರಿಕದ ಕಂಟ್ರಿ ಮತ್ತು ವೆಸ್ಟರ್ನ್ ಸಂಗೀತದ ಉಗಮವಾಯಿತು ಎಂಬ ವಾದ ಮನ್ನಣೆ ಪಡೆದಿದೆ. ಹೀಗೆ ಉಗಮವಾದ ಕಂಟ್ರಿ ಮ್ಯೂಸಿಕ್, ತನ್ನ ಬೆಳವಣಿಗೆಯಲ್ಲಿ ಆಂಗ್ಲೋ ಕೆಲ್ಟಿಕ್ ಮಾದರಿಯ ಮತ ಗೀತೆಗಳನ್ನು ಮತ್ತು ಆಫ್ರಿಕಾದ ಸ್ಪಿರಿಚುಯಲ್ ಗೀತೆಗಳ ಶೈಲಿಯನ್ನು ಅಡಗಿಸಿಕೊಂಡು ಒಂದು ಹೊಸ ನಮೂನೆಯ ಸಂಗೀತವಾಗಿ ಅವತರಿಸಿತು. ಇದನ್ನೇ ನಾವು 'ಕಂಟ್ರಿ ವೆಸ್ಟರ್ನ್ ಮ್ಯೂಸಿಕ್' ಎಂದು ನಾಮಕರಣ ಮಾಡಿರುವುದು. ಈ ಕಂಟ್ರಿ ವೆಸ್ಟರ್ನ್

ಸಂಗೀತದ ಹುಟ್ಟು, ಬೆಳವಣಿಗೆ, ಪೋಷಣೆ ಮತ್ತು ಈ ಸಂಗೀತದ ಪ್ರಪಂಚದಲ್ಲಿ ಪ್ರಖ್ಯಾತರಾಗಿರುವ ಕೆಲವು ಸಂಗೀತಗಾರರ ಪರಿಚಯ ಮಾಡಿ ಕೊಡುವುದು ಈ ಲೇಖನದ ಉದ್ದಿಶ್ಯ.

ಕಂಟ್ರಿ ಮ್ಯೂಸಿಕ್ಕಿನ ಹುಟ್ಟು

ವಲಸೆ ಬಂದ ಕೆಲವೇ ವರ್ಷಗಳ ಕಾಲದಲ್ಲಿ ಬ್ರಿಟಿಷ್ ಶಾಹಿಗಳು ತಮ್ಮ ನಾಡಿನ ಹಳೆಯ ಇಂಗ್ಲಿಷ್ ಗೀತೆಗಳನ್ನು ತಾವು ಈಗ ನೆಲಸಿರುವ ಹೊಸ ನಾಡಿನ ವಾತಾವರಣ ಮತ್ತು ಪರಿಸರಗಳಿಗೆ ಹೊಂದಿಕೊಳ್ಳುವಂತಹ ರೀತಿಯಲ್ಲಿ ಸಂಗೀತದ ರಚನೆಯನ್ನು ಪ್ರಾರಂಭಿಸಿದರು. ಹೀಗೆ ಹೊಸ ಸಂಗೀತವನ್ನು ನಿರ್ಮಾಣ ಮಾಡಿದ ಬ್ರಿಟಿಷ್ ಶಾಹಿಗಳು ಈ ದೇಶಕ್ಕೆ ಸ್ಪೈಯಿನ್, ಫ್ರಾನ್ಸ್ ಮತ್ತು ಜರ್ಮನಿಗಳಿಂದ ವಲಸೆ ಬಂದಿದ್ದವರೊಡನೆ ಕೂಡಿಕೊಂಡು ರಚನೆಯನ್ನು ಮುಂದುವರೆಸಿದರು. ವಲಸೆ ಬಂದಿದ್ದ ಆಫ್ರಿಕನ್ ಜನರು ಸಹ ತಮ್ಮ ಸಂಗೀತವನ್ನು ಹೊಸದಾಗಿ ಸೃಷ್ಟಿಯಾಗುತ್ತಿರುವ ಸಂಗೀತದ ಜೊತೆಯಲ್ಲಿ ಕೂಡಿಸಿ ಅಮೆರಿಕದ ಸಂಸ್ಕೃತಿಯ ಕಡಾಯಿಗೆ ತುಂಬಿದರು. ಅವರು ತಮ್ಮ ದೇಶದಿಂದ ತಂದಿದ್ದ ಸಂಗೀತದ ಸಿಹಿ, ಬ್ಯಾಂಜೋ ಎಂಬ ವಾದ್ಯ, ಎಲ್ಲ ಒಟ್ಟುಗೂಡಿ ಒಂದು ಹೊಸ ಮಾದರಿಯ ಮಧುರ ಸ್ವರಗಳ ಸಂಗೀತವೇ ಉದಯಗೊಂಡಿತು.

ತಲತಲಾಂತರದಿಂದ ಇಂಗ್ಲಿಷ್ ಗೀತೆಗಳಿಂದ ಮತ್ತು ಕೆಲ್ಟಿಕ್ ಹಾಗೂ ಐರಿಶ್ ಜನರ ಫಿಡ್ಲ್(ಅಂದರೆ ಈಗಿನ ಪಿಟೀಲು) ಸಂಗೀತವು ಮತ್ತು ಅನೇಕ ಮತಗಳ ವಲಸೆಗಾರರ ಯುರೋಪಿಯನ್ ಸಂಗೀತದ ಪ್ರಭಾವದಿಂದ ಜನ್ಮ ಹೊಂದಿದ ಹೊಸ ನಮೂನೆಯ ಸಂಗೀತ ಕಂಟ್ರಿ ಮ್ಯೂಸಿಕ್. ಈ ಸಂಗೀತವು ತಮ್ಮಷ್ಟಕ್ಕೆ ತಮ್ಮ ಗುಂಪಿನಲ್ಲೇ ಇದ್ದುಕೊಂಡು, ಚರ್ಚ್ ಮತ್ತು ಇತರ ಸಾಮಾಜಿಕ ಸ್ಥಳಗಳಲ್ಲಿ ಶನಿವಾರ ಸಂಜೆ ಖುಷಿಯಿಂದ ಹಾಡಿ, ನರ್ತಿಸುವ ಜನರಿಂದ ಹೊಮ್ಮಿದ ಸಂಗೀತ. ವಿಶ್ರಾಂತಿ ವೇಳೆಯಲ್ಲಿ ದಣಿದು ಬಂದ ಕೆಲಸಗಾರರು, ಮನಸ್ಸಂತೋಷಕ್ಕಾಗಿ ಹಾಡಿಕೊಳ್ಳುತ್ತಾ ಇತರ ವಲಸೆಗಾರರ ಸಮೂಹದಲ್ಲಿ ಕಾಲ ಕಳೆಯುತ್ತಿದ್ದಾಗ ಹರಿದ ಸಂಗೀತ. ಅಪಲೇಶಿಯನ್ ಬೆಟ್ಟಸಾಲುಗಳ ಮಧ್ಯೆ ವಾಸ ಮಾಡುತ್ತಿದ್ದ ಬಡಕೆಲಸಗಾರರ ಸಂಖ್ಯೆಯೇ ಹೆಚ್ಚಾಗಿ ಕೂಡಿದ್ದು ಬೆಳೆದ ಸಂಗೀತ ಕಂಟ್ರಿ ವೆಸ್ಟರ್ನ್ ಮ್ಯೂಸಿಕ್. ಇದು ಪ್ರಾರಂಭವಾಗಿದ್ದು 20ನೆಯ ಶತಮಾನದ ಆದಿಯಲ್ಲಿ.

ಕಂಟ್ರಿ ಮ್ಯೂಸಿಕ್ ಹುಟ್ಟಿದ್ದೆಲ್ಲಿ?

1927ರಲ್ಲಿ ಸಂಗೀತವನ್ನು ಮೊದಲ ಬಾರಿಗೆ ಧ್ವನಿಮುದ್ರಿಸಿದ ರೆಕಾರ್ಡ್ ಕಂಪನಿಗಳು ತಮ್ಮ ಕಾರ್ಯಾಚರಣೆಗಳಿಗೆ ಟೆನ್ನೆಸ್ಸೀ ರಾಜ್ಯದ ಬ್ರಿಸ್ಟಲ್ ಎಂಬ ಪಟ್ಟಣವನ್ನು ಆರಿಸಿಕೊಂಡು ಮುಂದುವರೆದವು. 1928–30ರಲ್ಲಿ ಜಾನ್ಸನ್ ಸಿಟಿ ಮತ್ತು ನ್ಯಾಶ್‌ವಿಲ್‌ಗಳಲ್ಲಿ ರೆಕಾರ್ಡಿಂಗ್ ಸಂಸ್ಥೆಗಳು ಕಾರ್ಯ ನಿರ್ವಹಣೆ ಮಾಡಿದ್ದರೂ, ಅಮೆರಿಕ ಸರ್ಕಾರ 1930ರಲ್ಲಿ ಬ್ರಿಸ್ಟಲ್

ಅನ್ನು ಕಂಟ್ರಿ ಮ್ಯೂಸಿಕ್ ಹುಟ್ಟಿದ ಸ್ಥಳವೆಂದು ಘೋಷಿಸಿತು. 1927ರಲ್ಲಿ ವಿಕ್ಟರ್ ರೆಕಾರ್ಡಿಂಗ್ ಕಂಪನಿಯು ಬ್ರಿಸ್ಟಲ್ ನಗರಕ್ಕೆ ಭೇಟಿ ಕೊಟ್ಟು, ಕಂಟ್ರಿ ಮ್ಯೂಸಿಕ್ ಹಾಡಬಲ್ಲ ಕಲಾವಿದರ ತಲಾಶೆ ಮಾಡಿತು. ಕಾರ್ಟರ್ ಫ್ಯಾಮಿಲಿ ಮತ್ತು ಜಿಮ್ಮಿ ರಾಡ್ಜರ್ಸ್ ಎಂಬ ಇಬ್ಬರು ಸ್ಥಳೀಯ ಕಲಾವಿದರು ಮುಂದೆ ಬಂದು, ಸ್ಥಳೀಯ ಸಂಗೀತವಾದ ಅಪಲೇಶಿಯನ್ ಬೆಟ್ಟಸಾಲುಗಳಲ್ಲಿ ಪ್ರಸಿದ್ಧವಾಗಿದ್ದ ಹಾಡುಗಳ ಧ್ವನಿಮುದ್ರಣಕ್ಕೆ ಕಂಠದಾನ ಮಾಡಿದರು. ಯೂರೋಪಿನ ಸ್ವಿಸ್ ಬೆಟ್ಟಗಳ ಸಾಲುಗಳಲ್ಲಿ ಬಳಕೆಯಲ್ಲಿದ್ದ 'ಯೋಡ್ಲಿಂಗ್' ಎಂಬ ಪದ್ಧತಿಯಲ್ಲಿ ಜಿಮ್ಮಿ ರಾಡ್ಜರ್ಸ್ ಹಾಡಿ, ಕಂಟ್ರಿ ಮ್ಯೂಸಿಕ್ಕಿಗೆ ಒಂದು ಹೊಸ ದಿಕ್ಕನ್ನು ತೋರಿಸಿದ. ಜಿಮ್ಮಿ ರಾಡ್ಜರ್ಸ್ ಹಾಡಿದ 'ಬ್ಲೂ ಯೋಡ್ಲಿಂಗ್' ಎಂಬ ಗೀತೆ, 1998ರಲ್ಲಿ ಒಂದು ಮಿಲಿಯನ್ ಧ್ವನಿಸುರಳಿಗಳ ಮಾರಾಟದ ದಾಖಲೆಯನ್ನು ನಿರ್ಮಿಸಿತು.

ಕಂಟ್ರಿ ಮ್ಯೂಸಿಕ್ಕಿನ ಬೆಳವಣಿಗೆ

1920ರ ದಶಕದಲ್ಲಿ ಪ್ರಾರಂಭವಾದ ಬಾನುಲಿ ಕೇಂದ್ರಗಳು ಕಂಟ್ರಿ ಮ್ಯೂಸಿಕ್ಕನ್ನು ಇಡೀ ಅಮೆರಿಕದ ಮುಂದೆ ಒಡ್ಡಿತು. ಹಿತವಾದ ಸಂಗೀತ, ಸರಳ ಭಾಷೆ, ಗಡಿಬಿಡಿ ಮದ್ದಳೆಗಳ ಆರ್ಭಟವಿಲ್ಲದ, ಈ ಸಂಗೀತ ಜನಗಳ ಮನಸೆಳೆಯುವುದರಲ್ಲಿ ಮುಂದಾಯಿತು. ಹಳ್ಳಿ ದೃಶ್ಯಗಳನ್ನು ಮತ್ತು ಹಾಲಿವುಡ್ ಪ್ರಚಾರದ ಸಂಗೀತವನ್ನು ಜನಸಾಮಾನ್ಯರನ್ನು ಮೆಚ್ಚಿಸುವಂತಹ ಸಂಗೀತವನ್ನು ಹಂಚುತ್ತಿದ್ದ ಬಾನುಲಿ ಕೇಂದ್ರಗಳು ಯಶಸ್ವಿಯಾದವು. ಹೀಗೆ ಪ್ರಚಾರಗೊಂಡ ಕಂಟ್ರಿ ಮ್ಯೂಸಿಕ್ ಹೊಸ ಹೊಸ ಶೈಲಿಗಳನ್ನು ಹುಟ್ಟುಹಾಕಿಕೊಳ್ಳುತ್ತಾ ತನ್ನ ವಿಶಾಲತೆಯನ್ನು ಹೆಚ್ಚಿಸಿಕೊಂಡಿತು. ಈ ಹಾಡುಗಳನ್ನು ಹಾಡುವವರು ತಮ್ಮ ಜೀವನದ ಕಥೆಯನ್ನೇ ಹಾಡುಗಳ ಮೂಲಕ ಜನತೆಯ ಮುಂದಿಡುವುದರಲ್ಲಿ ಸಮರ್ಥರಾದರು. ಜನತೆಗೂ ಸಹ ಕಿವಿಗೆ ಅಪ್ಪಳಿಸುವಂತಹ ವಾದ್ಯಗಳ ಭರಾಟೆಯಿಲ್ಲದ, ಇಂಪಾಗಿರುವ ಸಂಗೀತ, ಜನಸಾಮಾನ್ಯನಿಗೆ ಅರ್ಥವಾಗುವ ಭಾಷೆಯಲ್ಲಿ ಹಾಡುಗಳು, ಹಾಡುವವರ ಮನಬಿಚ್ಚಿ ಮುದ ಕೊಡುವ ಹಾಡುಗಳ ಶೈಲಿ, ಹೀಗೆ ಎಲ್ಲವೂ ಸೇರಿ ಕಂಟ್ರಿ ಮ್ಯೂಸಿಕ್ ತನ್ನದೇ ಆದ ಪ್ರಪಂಚದಲ್ಲಿ ಬೆಳೆಯತೊಡಗಿತು. 1920ರಿಂದ ಬೆಳೆಯಲು ಪ್ರಾರಂಭವಾದ ಈ ಸಂಗೀತ ಅಮೆರಿಕದ ಸಾಮಾನ್ಯ ಜನತೆಯ ಸಂಗೀತದಿಂದ ಪ್ರಭಾವಿತಗೊಂಡು, ಇಂಗ್ಲಿಷ್ ಜನರ ಫೋಕ್ ಸಾಂಗ್ಸ್‌ಗಳಿಂದ, ಐರಿಶ್ ಜನರ ಫಿಡ್ಲ್ ಧ್ವನಿಗಳಿಂದ, ಟೆಕ್ಸಾಸ್ ಕೌಬಾಯ್ಸ್ ಸಂಗೀತದಿಂದ, ವಲಸೆ ಬಂದ ಯೂರೋಪಿಯನ್ನರ ಸಂಗೀತದಿಂದ ಸಮೃದ್ಧಿಯಾಗಿ ಬೆಳೆಯಿತು.

ಹಲವಾರು ಸಂಗೀತ ಪದ್ಧತಿಗಳು ಬಳಕೆಯಲ್ಲಿದ್ದರೂ ಕಂಟ್ರಿ ಮ್ಯೂಸಿಕ್ ಮಾತ್ರ ತನ್ನದೇ ಆದ ಜಾಡನ್ನು ಹಿಡಿದಿರುವುದೇ ಅಲ್ಲದೆ ಅನೇಕ ರೀತಿಯ ಒಳಜಾಡುಗಳಿಗೆ ದಾರಿ ಮಾಡಿಕೊಟ್ಟಿದೆ. ಜಾನ್ಸನ್ ಸಿಟಿ, ಬ್ರಿಸ್ಟಲ್ ಮತ್ತು ನ್ಯಾಶ್‌ವಿಲ್‌ಗಳಲ್ಲಿ 1920ರಲ್ಲಿ ರೆಕಾರ್ಡ್ ಆದ 'ಸ್ಮೋಕಿ ಮೌಂಟನ್' ಸಂಗೀತಕ್ಕೆ ವೈವಿಧ್ಯತೆ ಇದ್ದರೂ, ಅದೇ ಸಮಯಕ್ಕೆ ಅಟ್ಲಾಂಟಾ ನಗರದಲ್ಲಿ ಸುತ್ತಮುತ್ತಲಿನ ಅಪಲೇಶಿಯನ್ ಬೆಟ್ಟಗಳಿಂದ ಬಂದ ಹೊಸ

ರೀತಿಯ ಹಾಡುಗಳು ಸಹ ನಿರ್ಮಾಣಗೊಳ್ಳುತ್ತಾ ಹೋದವು. ಅಟ್ಲಾಂಟಾದ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಬೆಟ್ಟದ ಅನಿವಾಸಿಗಳಿಗೆ, ತಮ್ಮ ಸಂಗೀತದಲ್ಲಿಯೇ ಸುಖ ಸಿಗುತ್ತಿತ್ತು. 1930ರ ವೇಳೆಗೆ ಅಮೆರಿಕದ ಬಾನುಲಿ ಕೇಂದ್ರಗಳು ದೇಶದಾದ್ಯಂತ ಕಂಟ್ರಿ ಮ್ಯೂಸಿಕ್ಕನ್ನು ಪ್ರಸಾರಗೊಳಿಸುತ್ತಿದ್ದವು. ಇವು ಆಯಾ ಪ್ರಾಂತಗಳಲ್ಲಿ ಪ್ರಸಿದ್ಧಿಪಡೆದಿದ್ದ ಗೀತೆಗಳನ್ನು ಆಯಾ ಪ್ರಾಂತಗಳಲ್ಲಿ ಪ್ರಸಾರ ಮಾಡುತ್ತಿದ್ದವು. ಇದರಲ್ಲಿ 'ಬಾರ್ನ್ ಡ್ಯಾನ್ಸ್' ಎಂಬುದು ಬಹಳ ಹೆಸರುವಾಸಿಯಾಗಿತ್ತು. 1925ರಲ್ಲಿ ನ್ಯಾಶ್‌ವಿಲ್‌ನಲ್ಲಿ ಪ್ರಾರಂಭವಾದ 'ಗ್ರಾಂಡ್ ಓಲ್ ಓಪ್ರಿ' ಸಂಸ್ಥೆಯು ಮುಂದೆ ಅಗಾಧವಾಗಿ ಬೆಳೆದು ಅಮೆರಿಕದಲ್ಲಿ ಒಂದು ಜನಪ್ರಿಯ ಸ್ಥಳವಾಯಿತು. ಈ 'ಗ್ರಾಂಡ್ ಓಲ್ ಓಪ್ರಿ' ಆಗಿನ ಕಾಲಕ್ಕೆ ಬಹು ಶಕ್ತಿಶಾಲಿಯಾಗಿದ್ದ ರೇಡಿಯೋ ಸಿಗ್ನಲ್ ಮೂಲಕ ಇಡೀ ಅಮೆರಿಕ ದೇಶದಲ್ಲಿ ಕಂಟ್ರಿ ಮ್ಯೂಸಿಕ್ಕನ್ನು ಪ್ರಸಾರಗೊಳಿಸುತ್ತಿತ್ತು. ಇದರಿಂದಾಗಿ ಸಾವಿರಾರು ಮಂದಿ ಈ ಬಗೆಯ ಸಂಗೀತವನ್ನು ಕೇಳಿ ಆನಂದಿಸುವ ಅವಕಾಶ ಸಿಕ್ಕಿತಾದರೂ, 1980ರವರೆಗೆ ಕಂಟ್ರಿ ಮ್ಯೂಸಿಕ್ ಗ್ರಾಮಾಂತರ ಪ್ರದೇಶಗಳಲ್ಲೇ ಉಳಿದುಕೊಂಡಿತ್ತು.

ದಶಕಗಳಲ್ಲಿ ವಿವಿಧ ರೀತಿಯ ಸಂಗೀತ

1950ರಲ್ಲಿ ಪ್ರಾರಂಭವಾದ ರಾಕ್ ಅಂಡ್ ರೋಲ್ ಸಂಗೀತ ತನ್ನ ಪ್ರಭಾವವನ್ನು ಇತರ ಜಾಡುಗಳ ಸಂಗೀತಗಳ ಮೇಲೆ ಬೀರಲು ಪ್ರಾರಂಭಿಸಿತು. ಟಿಹಾನೋ ಸಂಗೀತ, ಹಾಂಕಿ ಟಾಂಕ್, ವೆಸ್ಟರ್ನ್ ಸ್ವಿಂಗ್ ಇತ್ಯಾದಿ ಸಂಗೀತಗಳು ಪ್ರಚಲಿತದಲ್ಲಿದ್ದಾಗಲೇ 1959ರಲ್ಲಿ ಮಾರ್ಟಿ ರಾಬಿನ್ಸ್ ಹಾಡಿದ್ದ 'ಎಲ್ ಪಾಸೋ' ಎಂಬ ಗೀತೆ ದೇಶದ ಸಂಗೀತ ಅಭಿಮಾನಿಗಳಿಗೆ ಪ್ರಿಯವಾಯಿತು. 1960ರಲ್ಲಿ ಹಲವು ಕಲಾವಿದರು ಜಾನಪದ (Folk) ಸಂಗೀತವನ್ನು ಪುನರುದ್ಧಾರಮಾಡಲು ಪ್ರಾರಂಭಿಸಿ, ದೇಶದ ಕ್ರಾಂತಿಕಾರೀ ಮತ್ತು ರಾಜಕೀಯದಿಂದ ತುಂಬಿದ್ದ ಸಂಗೀತದ ಮೇಲೆ ತಮ್ಮ ಆಗ್ರಹವನ್ನು ಮುಂದುಮಾಡಿದರು. ಕಂಟ್ರಿ ಮ್ಯೂಸಿಕ್ಕಿನ ಅಭಿಮಾನಿಗಳಿಗೆ ಈ ರಾಜಕೀಯ, ಕ್ರಾಂತಿಕಾರೀ ಸಂಗೀತ ಯಾವ ಒತ್ತಡವನ್ನೂ ಹಾಕಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಕಂಟ್ರಿ ಮ್ಯೂಸಿಕ್ ಮತ್ತೆ ತನ್ನ ಯಾತ್ರೆಯನ್ನು ಮುಂದುವರೆಸಿತು.

ಸುಮಾರು 100 ವರ್ಷಗಳಿಂದ ಕಂಟ್ರಿ ಮ್ಯೂಸಿಕ್ ತನ್ನ ಸ್ಥಾನವನ್ನು ಭದ್ರವಾಗಿ ಉಳಿಸಿಕೊಂಡಿದೆ. ಹೊಸ ಹೊಸ ಜಾಡುಗಳನ್ನು ಅನುಸರಿಸಿ ತನ್ನದಾಗಿಸಿಕೊಳ್ಳುತ್ತಾ ಮುಂದುವರೆದ ಕಂಟ್ರಿ ಮ್ಯೂಸಿಕ್ ಭದ್ರ ತಳಹದಿಯ ಮೇಲೆ ನಿಂತಿದೆ. 1920–30ರ ದಶಕದಲ್ಲಿ ಸಂಗೀತಗಾರರು ಹೇಗೆ ಒಂದೇ ಜಾಡಿನಲ್ಲಿ ಮುಂದುವರೆಯಲು ಇಷ್ಟಪಡಲಿಲ್ಲವೋ ಅದೇ ರೀತಿಯಲ್ಲಿ 1970ರ ಸಂಗೀತಗಾರರೂ ಸಹ ಒಂದೇ ಜಾಡಿನ ಸಂಗೀತಕ್ಕೆ ಜೋತು ಬೀಳದೆ ಹಲವಾರು ರೀತಿಯ ಸಂಗೀತಗಳಿಗೆ ಅವಕಾಶ ಮಾಡಿಕೊಟ್ಟರು.

ಮೆಕ್ಸಿಕೋವನ್ನು ನಾವು ಮರೆಯುವಂತಿಲ್ಲ

ಯೂರೋಪ್ ಮತ್ತು ಆಫ್ರಿಕಾಗಳಿಂದ ವಲಸೆ ಬಂದ ಸಂಗೀತಕ್ಕೆ ನಾವು ಪ್ರಾಮುಖ್ಯತೆ ನೀಡಿದ್ದರೂ, ಕಂಟ್ರಿ ಮ್ಯೂಸಿಕ್ ಮೆಕ್ಸಿಕೋಗೆ ಬಹಳ ಆಭಾರಿಯಾಗಿದೆ. ಬಹಳ ಕಾಲದಿಂದ ಕೌ ಬಾಯ್ಸ್ ಸಂಗೀತ ಮತ್ತು ಸ್ಪೆಯಿನ್ ಸಂಗೀತಗಳು ಕಂಟ್ರಿ ಮ್ಯೂಸಿಕ್ಕಿನ ಮೇಲೆ ತಮ್ಮ ಪ್ರಭಾವ ಬೀರಿರುವುದೇ ಅಲ್ಲದೆ, ಜೊತೆ ಜೊತೆಯಾಗಿಯಾಗಿದ್ದು, ಕಂಟ್ರಿ ಮ್ಯೂಸಿಕ್ ಈ ಮಟ್ಟಕ್ಕೆ ಬರಲು ಕಾರಣವಾಗಿವೆ. 1920ರ ದಶಕದಿಂದ ಕಂಟ್ರಿ ಮ್ಯೂಸಿಕ್ ತನ್ನ ಬೆಳವಣಿಗೆಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿಕೊಂಡಿತು. ಮೆಕ್ಸಿಕೋ ಸಂಗೀತದ ಜನಪ್ರಿಯ ಮಾರಿಯಾಚಿ ಸಂಗೀತದ ಬಹಳಷ್ಟು ಭಾಗವನ್ನು ಕಂಟ್ರಿ ಮ್ಯೂಸಿಕ್ ತನ್ನದಾಗಿಸಿಕೊಂಡಿತು. ವಯೊಲಿನ್ ಅಥವಾ ಫ್ಲಿಡ್ಲ್‌ನ ಉಪಯೋಗ, ಹಲವು ತಂತೀ ವಾದ್ಯಗಳು, ಫ್ರೆಂಚ್ ಹಾರ್ನ್ ಮುಂತಾದ ವಾದ್ಯಗಳ ಬಳಕೆಯಿಂದ ಕೂಡಿದ ಮಾರಿಯಾಚಿ ಮೆಕ್ಸಿಕೋ ದೇಶದ ಪ್ರಮುಖ ಸಂಗೀತಗಳಲ್ಲಿ ಒಂದಾಗಿದೆ. ಹೀಗೆ ಹಲವಾರು ವಾದ್ಯಗಳಿಂದ ಕೂಡಿದ ಮಾರಿಯಾಚಿಗೆ ಬಿಗ್ ಬ್ಯಾಂಡ್ ಎಂಬ ಅನ್ವರ್ಥ ನಾಮವೂ ಸಹ ಬಂದಿದೆ. ಕೇವಲ ಒಂದು ಗಿಟಾರ್ ಮತ್ತು ಅಕಾರ್ಡಿಯನ್ ಬಳಸಿ 'ನಾನೊಬ್ಬ ಮೆಕ್ಸಿಕನ್' ಎಂದು ಹಾಡಿರುವ ರಿಕ್ ಟ್ರೆವಿನೋ ಮೆಕ್ಸಿಕೋದ ಅತ್ಯಂತ ಜನಪ್ರಿಯ ಗಾಯಕ. ಈ ಹಾಡಿನಲ್ಲಿ ಅವನು ತನ್ನ ಅಳಲನ್ನು ಮನಮುಟ್ಟುವಂತೆ ತೋಡಿಕೊಂಡಿದ್ದಾನೆ.

ಕಂಟ್ರಿ ಮ್ಯೂಸಿಕ್ಕಿನ ಪರಂಪರೆ

ಜಿಮ್ಮಿ ರಾಜರ್ಸ್ ಮತ್ತು ಕಾರ್ಟರ್ ಸಂಘಟನೆಗಳನ್ನು ಒಳಗೊಂಡು 1920ರ ವೇಳೆಗೆ ಕಂಟ್ರಿ ಮ್ಯೂಸಿಕ್ಕಿನ ಮೊದಲನೆಯ ಪೀಳಿಗೆ ಅಸ್ತಿತ್ವಕ್ಕೆ ಬಂತು. ನಂತರದಲ್ಲಿ ಬಂದ ಕ್ಲೆಫ್ ಕಾರ್ಲಿ ಮುಂತಾದವರು, ಕಂಟ್ರಿ ಮ್ಯೂಸಿಕ್ ಮತ್ತು ಬ್ಲೂಸ್ ಸಂಗೀತವನ್ನು ಒಟ್ಟುಗೂಡಿಸುವುದರಲ್ಲಿ ಬಹಳ ಯಶಸ್ವಿಯಾದರು.

1930–1950

1925ರಲ್ಲಿ ಮೊದಲ ಬಾರಿಗೆ ಕಾರ್ಯಕ್ರಮವನ್ನು ಬಿತ್ತರಿಸಿದ "ಗ್ರಾಂಡ್ ಓಲ್ ಓಪ್ರಿ" ಕಂಟ್ರಿ ಮ್ಯೂಸಿಕ್ಕಿನ ಅತಿ ದೊಡ್ಡ ಪ್ರಸಾರದ ಮೂಲಕ ಮಾನ್ಯತೆ ಗಳಿಸಿ, 1930–40ರ ದಶಕದಲ್ಲಿ ಪ್ರಸಿದ್ಧಿಹೊಂದಿತು. ಬಾಬ್ ವಿಲ್ಸ್ ಎಂಬುವನು ಡ್ಯಾನ್ಸ್ ಹಾಲ್‌ಗಳಲ್ಲಿ ಬಳಸುವ ವೆಸ್ಟರ್ನ್ ಸ್ವಿಂಗ್ ಎಂಬ ಸಂಗೀತವನ್ನು ಪ್ರಚಾರ ಮಾಡಿದನು. 1938ರಲ್ಲಿ ವಿದ್ಯುತ್ಸಹಾಯದ ಗಿಟಾರನ್ನು ಉಪಯೋಗಿಸಿಕೊಂಡು ಕಂಟ್ರಿ ಮ್ಯೂಸಿಕ್ ಮತ್ತು ಜಾಝ್ (jazz) ಸಂಗೀತಗಳಿಂದ ಮಿಳಿತವಾದ ಸಂಗೀತವನ್ನು ಉಣಬಡಿಸಿದ ಪ್ರಸಿದ್ಧಿ ಇವನದು.

1950–1970

ಈ ಕಾಲಾವಧಿಯಲ್ಲಿ ಚರ್ಚ್‌ಗಳಲ್ಲಿ ಉಪಯೋಗಿಸುವಂತಹ ಧಾರ್ಮಿಕ ಸಂಗೀತ

(ಗಾಸ್ಪೆಲ್) ಕಂಟ್ರಿ ಮ್ಯೂಸಿಕ್ಕಿನ ಒಂದು ಭಾಗವಾಗಿ ಬೆರೆಯಿತು. ನಂತರದ ದಶಕಗಳಲ್ಲಿ ಟೆಕ್ಸಸ್ ಮತ್ತು ಓಕ್ಲಹೋಮಾ ಪ್ರಾಂತಗಳಲ್ಲಿ ಹಾಂಕಿ ಟಾಂಕ್ ಎಂಬ ಹೆಸರಿನಲ್ಲಿ ಕಂಟ್ರಿ ಮ್ಯೂಸಿಕ್ ಉಪಯೋಗಿಸಲಾಯಿತು. ಜನಸಾಮಾನ್ಯನಿಗೆ ಸುಲಭ ರೀತಿಯಲ್ಲಿ ಪ್ರವೇಶ ಸಿಗುವ ಈ ಹಾಂಕಿ ಟಾಂಕ್‌ಗಳು ಆಗಿನ ಕಾಲದಲ್ಲಿ ಪ್ರಚಲಿತದಲ್ಲಿದ್ದು ಕಂಟ್ರಿ ಮ್ಯೂಸಿಕ್ಕಿನ ಬೆಳವಣಿಗೆಗೆ ಕಾರಣವಾದವು. ದಕ್ಷಿಣದಲ್ಲಿ ಮೆಕ್ಸಿಕೋಗೆ ಹೊಂದಿಕೊಂಡಿದ್ದ ಹಲವು ರಾಜ್ಯಗಳಲ್ಲಿ ವೆಸ್ಟರ್ನ್ ಮ್ಯೂಸಿಕ್ ಮತ್ತು 'ರ್‍ಯಾಂಚ್ ಮ್ಯೂಸಿಕ್' ಎಂಬ ಎರಡು ಸಂಗೀತ ವರ್ಗಗಳು ಕಂಟ್ರಿ ಮ್ಯೂಸಿಕ್ಕಿನ ಅವಿಭಾಜ್ಯ ಅಂಗಗಳಾಗಿ, ಜನರನ್ನು ತಣಿಸಿದವು. ರ್‍ಯಾಂಚ್ ಸಂಗೀತ 'ರಾಂ ಚೇರ' ಎಂಬ ಶಬ್ದದಿಂದ ಹುಟ್ಟಿದೆ. ಹುಲ್ಲುಗಾವಲಿನಂಥ ಪ್ರಾಣಿಗಳ ಸಾಕಣೆಗೆ ಅನುಕೂಲಕರವಾದ ವಿಶಾಲ ಹೊಲ ಗದ್ದೆಗಳ ಹಳ್ಳಿಗಾಡಿನ ಸಂಗೀತ ಅದು. ಮೆಕ್ಸಿಕೋ ದೇಶದ ಕ್ರಾಂತಿಕಾರೀ ವಸ್ತುವಿನಿಂದ ಹಿಡಿದು ಅಲ್ಲಿನ ಪಟ್ಟಣವಾಸದ ವಸ್ತುಗಳನ್ನೂ ಒಳಗೊಂಡ ಈ ಸಂಗೀತದ 'ಪ್ರಕಾರ' (ಜಾನ್ರ) ರ್‍ಯಾಂಚ್ ಸಂಗೀತವೆಂದು ಪ್ರಸಿದ್ಧಿಯಾಗಿದೆ.

1960ರಲ್ಲಿ ಪ್ಯಾಟ್ಸಿ ಕ್ಲೈನ್ ಮತ್ತು ಜಿಮ್ ರೀವ್ಸ್ ಇವರ ಮಿಲಿಯನ್‌ಗಟ್ಟಲೆಯ ರೆಕಾರ್ಡ್ ಸಂಗೀತದಿಂದ ಟೆನ್ನಿಸಿಯ ನ್ಯಾಶ್‌ವಿಲ್ ಕಂಟ್ರಿ ಮ್ಯೂಸಿಕ್ಕಿಗೆ ಅತ್ಯಂತ ಪ್ರೋತ್ಸಾಹ ಕೊಟ್ಟಿತು.

ನಾಲ್ಕನೆಯ ತಲೆಮಾರಿನ ಅಚಿದರೆ 1970–1990ರ ದಶಕಗಳಲ್ಲಿ, ಹಲವು ಸಂಗೀತಗಾರರು ಕಂಟ್ರಿ ಮ್ಯೂಸಿಕ್ಕಿನಿಂದ ಜಾರಿ ಪಾಪ್ ಮ್ಯೂಸಿಕ್ ಸಂಗೀತದ ಜಾಡನ್ನು ಹಿಡಿದರು. ಈ ರೀತಿ ಸರಿದವರಲ್ಲಿ ಟೆಕ್ಸಾಸ್‌ನ ವಿಲ್ಲಿ ನೆಲ್ಸನ್ ಕೂಡಾ ಒಬ್ಬನು. 1970ರಲ್ಲಿ ಪಾಪ್ ಮ್ಯೂಸಿಕ್‌ಗೆ ವಲಸೆ ಬಂದ ಕಂಟ್ರಿ ಮ್ಯೂಸಿಕ್ ಹಾಡುಗಾರ್ತಿ ಡಾಲಿ ಪಾರ್ಟನ್ ಪ್ರಸಿದ್ಧಿಗೆ ಬಂದಳು.

1990ರ ದಶಕ

1970ರಲ್ಲಿ ಪ್ರಸಿದ್ಧಿಯಾದ ಡಾಲಿ ಪಾರ್ಟನ್ ಹಾದಿಯಲ್ಲೇ ನಡೆದ ಮುಂದಿನ ಪೀಳಿಗೆಯ ರೀಬಾ ಮ್ಯಾಕನ್ ಟೈರ್, ಫೈತ್ ಹಿಲ್, ಪ್ಯಾಟಿ ಲವ್ ಲೆಸ್, ಶ್ಯಾನಿಯಾ ಟ್ವೈನ್, ಡಯಾನ ಕಾರ್ಟರ್ ಮುಂತಾದವರು ಪ್ರಸಿದ್ಧರಾದರು. 2000ರಿಂದ ಇಲ್ಲಿಯವರೆಗಿನ ಕಾಲಾವಧಿಯಲ್ಲಿ ಕಂಟ್ರಿ ಮ್ಯೂಸಿಕ್ ಸಮೃದ್ಧವಾಗಿ ಬೆಳೆದು ಹೆಮ್ಮರವಾಗಿ ನಿಂತಿದೆ.

ಕೆಲವು ಜನಪ್ರಿಯ ಸಂಗೀತಗಳ ಪ್ರಕಾರಗಳು (Genre)

ದಶಕಗಳಲ್ಲಿ ಬಳಕೆಗೆ ಬಂದ ಹಲವಾರು ಸಂಗೀತಗಳ ಚೌಕಟ್ಟಿನಲ್ಲಿ, ಕೇಳುವವರಿಗೆ ವಿವಿಧ ರೀತಿಯ ಸಂಗೀತಗಳು ಸದಾ ಸಿಗುತ್ತಿತ್ತು. ಅಂತೆಯೇ ನೂರಾರು ಸಂಗೀತಗಾರರು ಜನಪ್ರಿಯತೆಯಿಂದ ಮೇಲೆ ಬಂದರು. 1940ರಿಂದ 1970ರವರೆಗಿನ ಮುವ್ವತ್ತು ವರ್ಷಗಳ ಕಾಲದಲ್ಲಿ ಪಾಪ್, ರಾಕ್, ಡಿಸ್ಕೋ, ಪಂಕ್, ಸೋಲ್, ಆಫ್ರಿಕನ್ನರ ರಿಥಮ್ ಅಂಡ್ ಬ್ಲೂ ಇತ್ಯಾದಿ ಹಲವಾರು ಸಂಗೀತ ಪ್ರಕಾರಗಳು ಹುಟ್ಟಿದವು. 1970ರಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದ

ಹಿಪ್-ಹಾಪ್ ಸಂಗೀತವನ್ನು ನಾವು ಮರೆಯುವಂತಿಲ್ಲ. ಒಟ್ಟಾರೆ ನೋಡಿದರೆ, ಈ ಎಲ್ಲ ಸಂಗೀತದ ಧಾಟಿಗಳು, ಕಂಟ್ರಿ ಮ್ಯೂಸಿಕ್ನಿಂದಲೇ ಹುಟ್ಟಿ ಬಂದವು ಎಂಬುದರಲ್ಲಿ ಸಂಶಯವಿಲ್ಲ.

ಸುಮಾರು 1800ರ ಕೊನೆಯ ವರ್ಷಗಳಲ್ಲಿ ಪ್ರಾರಂಭವಾದ ಜಾಝ್ (jazz) ಸಂಗೀತವು 1900ರ ನಂತರ ಬಹಳ ಜನಪ್ರಿಯವಾಯಿತು. ಇದರ ಹುಟ್ಟು ಅಮೆರಿಕದ ನ್ಯೂ ಆರ್ಲಿಯನ್ಸ್ ಪ್ರಾಂತ್ಯದ, ಆಫ್ರಿಕನ್ ಅಮೆರಿಕನ್ ಜನರಿಂದ ಆಗಿದೆಯೆಂದು ತಿಳಿದು ಬರುತ್ತದೆ. ಮನೋಧರ್ಮಕ್ಕನುಗುಣವಾಗಿ ವರ್ಧಿಸುತ್ತಾ ಅಲೆಅಲೆಯಾಗಿ ಅಭಿವ್ಯಕ್ತವಾಗುವ, ಅನೇಕ ತಾಳಗಳ ಸಂಗೀತದ ಪ್ರಕಾರಕ್ಕೆ ಜಾಝ್ (jaaz) ಎಂಬ ಹೆಸರು ಬಂದಿದೆ. ಆಫ್ರಿಕನ್ ಅಮೆರಿಕನ್ನರು ಬಹಳ ಪ್ರೀತಿಸುವ ಈ ಸಂಗೀತ 1920ರ ವೇಳೆಗೆ ಉನ್ನತ ಮಟ್ಟದಲ್ಲಿದ್ದು, ಆ ದಶಕವನ್ನು ಜಾಝ್ ಯುಗವೆಂದೇ ಕರೆಯಲಾಗಿದೆ. ಸ್ಯಾಕ್ಸೋಫೋನ್ ಮತ್ತು ಟ್ರಂಪೆಟ್‌ಗಳ ಬಳಕೆಯಿಂದ ಜಾಝ್ ಸಂಗೀತ ಉತ್ತಮ ಸ್ಥಾನ ಗಳಿಸಿತು. ಹಲವಾರು ವಿಧಗಳ ಸಂಗೀತವನ್ನು ಅಳವಡಿಸಿಕೊಂಡ ಜಾಝ್ ಹೊಸ ಮಾದರಿಯ ತಾಳಗಳ ಮಿಶ್ರಣದಿಂದ ಜನಪ್ರಿಯವಾಗತೊಡಗಿತು. 1930ರ ದಶಕದಲ್ಲಿ ಡ್ಯೂಕ್ ಎಲ್ಲಿಂಗ್ಟನ್, ಬೆನ್ನಿ ಗುಡ್ಮನ್ ಮತ್ತು ಗ್ಲೆನ್ ಮಿಲ್ಲರ್ ಮುಂತಾದವರಿಂದ ಸ್ವಿಂಗ್ ಮ್ಯೂಸಿಕ್, ಮತ್ತು ಬ್ಯಾಂಡ್ ಮ್ಯೂಸಿಕ್‌ಗಳು ಜನಪ್ರಿಯವಾದವು.

1940ರ ವೇಳೆಗೆ ರಾಕ್ ಅಂಡ್ ರೋಲ್ ಸಂಗೀತವು ಮರೆಯಾಗತೊಡಗಿ, ಅದರ ಬದಲಾಗಿ ಪಾಪ್, ಬೀಟ್, ಬ್ಲೂ ರಾಕ್ ಮತ್ತು ಜಾನಪದ ಸಂಗೀತಗಳು ಮುಂದೆ ಬಂದವು. 1980ರಲ್ಲಿ ಡ್ಯಾನ್ಸ್ ಮ್ಯೂಸಿಕ್ ಎಲ್ಲೆಡೆ ಪ್ರಚಾರಗೊಂಡು ಕೀರ್ತಿಶಿಖರಕ್ಕೇರಿತು. ಡ್ಯಾನ್ಸ್ ಮಾಡುವವರಿಗಾಗಿಯೇ ತಯಾರಾದ ಈ ಹೊಸ ಮಾದರಿಯ ಸಂಗೀತ, ಪೂರ್ತಿಯಾದ ಹಾಡಾಗಿರಬಹುದು ಅಥವಾ ಹಲವಾರು ಹಾಡುಗಳ ಗುಚ್ಛ (medley) ಕೂಡಾ ಆಗಿರಬಹುದು.

ಜನಪ್ರಿಯ ಕಂಟ್ರಿ ಮ್ಯೂಸಿಕ್ ಸಂಗೀತಗಾರರು

ಕಂಟ್ರಿ ಮ್ಯೂಸಿಕ್ಕಿನ ಬಗ್ಗೆ ಉಪಯುಕ್ತ ವಿಷಯಗಳನ್ನು ತಿಳಿದುಕೊಂಡ ಮೇಲೆ, ಒಂದಿಬ್ಬರು ಕಂಟ್ರಿ ಮ್ಯೂಸಿಕ್ ಸಂಗೀತಗಾರರ ಬಗ್ಗೆ ತಿಳಿಯುವುದು ಅಗತ್ಯ.

ಆನ್ ಮರ್ರೆ

1945 ಜೂನ್ 20ರಂದು ಜನಿಸಿದ ಆನ್ ಮರ್ರೆ ಕೆನಡಾ ದೇಶದ ಜನಪ್ರಿಯ ಗಾಯಕಿ. ಪಾಪ್, ಕಂಟ್ರಿ ಮತ್ತು ಸಮಕಾಲೀನ (contemporary) ಗೀತೆಗಳ ಕಲಾವಿದೆ. ಆನ್ ತಾನು ಹಾಡಿದ 40 ವರ್ಷಗಳ ಅವಧಿಯಲ್ಲಿ, ಪ್ರಪಂಚದಾದ್ಯಂತ ಸುಮಾರು 55 ಮಿಲಿಯನ್ (550 ಲಕ್ಷ) ಧ್ವನಿಮುದ್ರಿಕೆಗಳ ಮಾರಾಟದ ದಾಖಲೆ ಹೊಂದಿದ್ದಾಳೆ.

ಗೌರವಗಳು: 4 ಗ್ರ್ಯಾಮಿ, 24 ಕೆನೆಡಿಯನ್, 3 ಅಮೆರಿಕನ್ ಹಾಗೂ 3 ಕೆನಡಿಯನ್

ಮ್ಯೂಸಿಕ್ ಅಸೋಸಿಯೇಷನ್‌ಗಳಿಂದ ಗೌರವಗಳನ್ನು ಗಳಿಸಿ, ಕಂಟ್ರಿ ಮ್ಯೂಸಿಕ್ ಲೋಕದಲ್ಲಿ ಮಿನುಗಿದ್ದಾಳೆ. 1995ರಲ್ಲಿ ಕೆನಡಾ ಸರ್ಕಾರದ ಲೈಫ್ ಟೈಮ್ ಸಾಧನೆಗೆ ಪಾತ್ರಳಾಗಿರುವ ಆನ್, ಈಗ ಹಲವಾರು ಧರ್ಮಸಂಸ್ಥೆಗಳಿಗೆ ಸ್ವಯಂಸೇವೆ ಸಲ್ಲಿಸುತ್ತಿದ್ದಾಳೆ. ಅವಳ 'ಮದುಮಗಳ ಗೀತೆ'ಯ ತರ್ಜುಮೆಯನ್ನು ಕೆಳಗೆ ಸೇರಿಸಿದೆ. ಅತ್ಯಂತ ಜನಪ್ರಿಯತೆ ಹೊಂದಿರುವ ಈ ಹಾಡನ್ನು, ನೂತನ ವಧೂವರರು ಓಪನಿಂಗ್ ಡ್ಯಾನ್ಸ್‌ನಲ್ಲಿ ಉಪಯೋಗಿಸುತ್ತಾರೆ. ಅರ್ಥಗರ್ಭಿತವಾಗಿರುವ ಈ ಹಾಡನ್ನು ಉದಾಹರಣೆಗಾಗಿ ಇಲ್ಲಿ ಕೊಟ್ಟಿದೆ

Can I have this dance for the rest of my life?
ನರ್ತಿಸುವೆಯೋ ನನ್ನೊಡನೆ ಎಂದೆಂದಿಗೂ?

ಆ ಹೊತ್ತು ಹಾಡುತಲಿದ್ದ ಆ ಹಾಡು
ಎಂದೆಂದೂ ನೆನಪಲಿ ಉಳಿದಿಹುದು

ನಾವು ಮಾಡಿದ ಮೊಟ್ಟ ಮೊದಲಿನ ನೃತ್ಯ
ನನಗಾಗಲೇ ನಂಬಿಕೆಯಾಗಿಹೋಗಿತ್ತು
ಸೊಂಟಗಳ ಬಿಗಿದಪ್ಪಿ ಸುಯ್ದಾಡಿದಾಗ
ನಿನ್ನ ಪ್ರೀತಿಯಲಿ ನಾನು ಸಿಲುಕಿಯಾಗಿತ್ತು (1)

ಈ ನೃತ್ಯ ನನಗಿಹುದೇ ಜೀವನಪರ್ಯಂತ?
ಪ್ರತಿ ಬಾರಿಯೂ ನೀನೆ ಸಂಗಾತಿಯಾಗುವೆಯಾ?
ನೀ ಜೊತೆಯಲಿದ್ದಾಗ ಎಲ್ಲವೂ ಸರಿಯೆನಿಸೆ,
ಈ ನೃತ್ಯ ನನಗಿಹುದೇ ಇಂದೂ, ಎಂದೆಂದೂ? (2)

ನಿನ್ನ ಸನಿಹದಿ ತಬ್ಬಿ ಸುತ್ತಿದಾ ಗಳಿಗೆಗಳ
ನೆನಪಲಿಡುವೆನು ಎಂದೆಂದೂ ನಾನು
ಇಬ್ಬರೂ ಒಟ್ಟಾಗಿ ಹೆಜ್ಜೆಯಿಟ್ಟಾಗ
ನೀನೊಬ್ಬನೇ ಎಂದು ಅನ್ನಿಸಿತ್ತು ಆಗ (3)

ಈ ನೃತ್ಯ ನನಗಿಹುದೇ ಇಂದೂ ಎಂದೆಂದೂ?
ಪ್ರತಿರಾತ್ರಿಯೂ ಜೊತೆಗಾರನಾಗಿ ನೀನೇ ಇರಲೆಂದು

ರೇ ಚಾರ್ಲ್ಸ್

1930 ಸೆಪ್ಟೆಂಬರ್ 30ರಂದು ಜಾರ್ಜಿಯಾದ ಆಲ್ಬನಿ ಎಂಬ ಊರಿನಲ್ಲಿ ಜನಿಸಿದ ರೇ, ಕಡುಬಡತನದಲ್ಲಿ ಹುಟ್ಟಿದ್ದರೂ, ಯಾವಾಗಲೂ ಹರ್ಷದಿಂದಿರುತ್ತಿದ್ದ. ಜೀವನದ

ಉತ್ತಮ ಮೌಲ್ಯಗಳನ್ನು ಹೇಳಿಕೊಟ್ಟ ತಂದೆ, ತಾಯಿ ದೇವರು ಕೊಟ್ಟಿರುವಷ್ಟರಲ್ಲಿಯೇ ತೃಪ್ತಿಯಾಗಿರಬೇಕು, ಇದೇ ಅವನ ನಿಯಮ ಎಂಬ ಪಾಠವನ್ನು ಕಲಿಸಿದ್ದರು. ಚಿಕ್ಕ ವಯಸ್ಸಿನಿಂದಲೇ ಗ್ಲುಕೋಮಾ ಖಾಯಿಲೆಯಿಂದ ನರಳುತ್ತಿದ್ದ ರೇ, ಖಾಯಿಲೆಯನ್ನು ಗುಣಪಡಿಸಿಕೊಳ್ಳಲು ಹಣವಿಲ್ಲದ ಕಾರಣ, 7ನೆಯ ವಯಸ್ಸಿನಲ್ಲಿ ತನ್ನ ಎರಡೂ ಕಣ್ಣುಗಳನ್ನು ಕಳೆದುಕೊಂಡಿದ್ದ. ತಾಯಿ ಅವನನ್ನು ಫ್ಲೋರಿಡಾ ರಾಜ್ಯದ ಅಗಸ್ಟಿನ್ ಎಂಬ ಊರಿನಲ್ಲಿ, ಕಿವುಡ, ಕುರುಡರ ಶಾಲೆಗೆ ವಿದ್ಯಾರ್ಥಿಯಾಗಿ ಸೇರಿಸಿದಳು. ಮುಂದಿನ 8 ವರ್ಷಗಳಲ್ಲಿ, ರೇ ಬ್ರೈಲ್ ಭಾಷೆಯಲ್ಲಿ ತನ್ನ ವಿದ್ಯಾಭ್ಯಾಸ ಮುಂದುವರಿಸಿದ. ಕಣ್ಣಿನ ದೃಷ್ಟಿ ಇಲ್ಲದೇ ಹೋದರೂ, ಬುಟ್ಟಿ ಹೆಣೆಯುವುದು, ರೇಡಿಯೋ ರಿಪೇರಿ, ಕಾರ್ ರಿಪೇರಿ, ಮತ್ತಿತರ ಕೆಲಸಗಳನ್ನು ಕಲಿತ. ಶಾಲೆಯಲ್ಲಿ ಸಂಗೀತ ಅಭ್ಯಾಸ ಮಾಡಿ, ಪಿಯಾನೋ, ಕ್ಲಾರಿಯೋನೆಟ್, ಸ್ಯಾಕ್ಸೋಫೋನ್ ವಾದ್ಯಗಳಲ್ಲಿ ಪರಿಣಿತನಾದ. ಬ್ರೈಲ್ ಭಾಷೆಯಲ್ಲಿಯೇ ಸಂಗೀತ ರಚನೆಯನ್ನು ಸಹ ಮಾಡಿದ.

ಗೌರವಗಳು: 12 ಗ್ರ್ಯಾಮಿ, 60 ಧ್ವನಿ ಮುದ್ರಣಗಳು, ನೂರಾರು ಬಹುಮಾನಗಳು. 1986ರಲ್ಲಿ ರಾಕ್ ಅಂಡ್ ರೋಲ್ ಹಾಲ್ ಆಫ್ ಫೇಮಿಗೆ ಹೆಸರಿನ ಸೇರ್ಪಡೆ, 1993ರಲ್ಲಿ ರಾಷ್ಟ್ರಾಧ್ಯಕ್ಷರ ಗೌರವ. ತನ್ನ ಜೀವನದ ಉದ್ದಕ್ಕೂ ಅನೇಕ ತರುಣ, ತರುಣಿ ಗಾಯಕರಿಗೆ ಪ್ರೋತ್ಸಾಹಿಸಿ ಮುಂದೆ ಬರುವಂತೆ ಮಾಡಿದವ. ಈ ಪಟ್ಟಿಯಲ್ಲಿ ಫ್ರಾಂಕ್ ಸಿನಾತ್ರಾ, ಎಲ್ವಿಸ್ ಪ್ರೆಸ್ಲೀ, ಬಿಲ್ಲಿ ಜೋಲ್ ಮುಂತಾದ ಉತ್ತಮ ಗಾಯಕರು ಸಹ ಇದ್ದಾರೆ. ಕಣ್ಣಿನ ದೃಷ್ಟಿ ಇಲ್ಲದಿದ್ದರೂ ದೇಶದ ಮೇಲಿನ ಪ್ರೀತಿಯಿಂದ, ಅದರ ಸೌಂದರ್ಯವನ್ನು ಬಣ್ಣಿಸಿ ಹಾಡಿರುವ ರೇ ಚಾರ್ಲ್ಸ್‌ನ ಒಂದು ಗೀತೆಯನ್ನು ಉದಾಹರಣೆಗಾಗಿ ಇಲ್ಲಿ ಕೊಟ್ಟಿದೆ.

America, beautiful America
ಅಮೇರಿಕ, ಅತಿ ಸುಂದರ ಅಮೇರಿಕ!

"ಓ ಸುಂದರ, ಪರಿಣತ ಯೋಧರ
ಮುಗಿಯದ ವಾದವ ಮುಗಿಸಿದರ
ತಮ್ಮನೆ ಮರೆತು ದೇಶವ ಪ್ರೀತಿಸಿ
ಪ್ರಾಣವ ತೆತ್ತು ಕರುಣೆತೋರ್ದರ (1)

ಅಮೇರಿಕ, ಓ ಅಮೇರಿಕ
ಪುಟಗೊಳಿಸಲಿ ಚಿನ್ನವ ದೇವ
ಜಯಗಳು ಪವಿತ್ರವಾಗುವ ತನಕ
ಗೆಲವು ದೈವತ್ವವ ಪಡೆವನಕ (2)

ನಾವು ಶಾಲೆಯಲಿ ಕಲಿವ ದಿನಗಳಲಿ
ಹಾಡುತಲಿದ್ದೆವು ಈ ರೀತಿ, ಕೇಳಿ – ಈ ರೀತಿ

ಓ ಸುಂದರ, ವಿಶಾಲ ಮುಗಿಲಿನ ದೇಶ
ಹಳದಿಯ ಕಾಳಿನ ಅಲೆಗಳ ಕೋಶ
ಜೋಲಾಡುವ ಹಣ್ಣುಗಳ ಬಯಲ ಹಿನ್ನೆಲೆಗೆ
ಮೆರೆಯುವ ನೇರಿಳೆ ಗಿರಿಯ ಪ್ರವೇಶ (3)

ಆದರೆ, ಈಗ, ಕೊಂಚ ತಾಳಿ, ನಾನು ಹಾಡುತಿಹೆ--
ಅಮೇರಿಕ, ಸುಮಧುರ ಅಮೇರಿಕ

ದೇವನನುಗ್ರಹ ದೊರಕಾಗಿದೆ ನಿನಗೆ
ಕಿರೀಟ ತೊಡಿಸಿಹ ಅವ ನಿನಗೆ, ನಿಜ
ತೊಡಿಸಿಹ ಭ್ರಾತೃತ್ವದ ಮುಕುಟ
ಹೊಳೆವ ಜಲಧಿಗಳ ನಡುವಲಿ, ಅಕಟ! (4)

ಯಾರಾದರೂ ಸರಿ, ಬನ್ನಿರಿ ದನಿಗೂಡಿಸಿರಿ
ನಾವೆಲ್ಲರು ಹಾಡುವ ಜೊತೆಗೆ
(ಅಮೇರಿಕಾ...ಅಮೇರಿಕಾ...)"

ಕೃತಜ್ಞತೆಗಳು

ಲೇಖನದ ಮೊದಲನೆಯ ಆವರ್ತಿಯನ್ನು ಓದಿ ಅಮೂಲ್ಯ ಸಲಹೆಗಳನ್ನು ಕೊಟ್ಟ ಸನತ್ ಐತಾಳನಿಗೆ ಶುಭ ಕೋರುತ್ತೇನೆ. ಯೂನಿವರ್ಸಿಟಿ ಆಫ್ ಹ್ಯೂಸ್ಟನ್‌ನಿಂದ ಈಗತಾನೇ ಪದವಿ ಪಡೆದಿರುವ ಸನತ್, ಸಂಗೀತವನ್ನು ಎಲೆಕ್ಟಿವ್ ವಿಷಯವಾಗಿ ಅಧ್ಯಯನ ಮಾಡಿದ್ದಾನೆ. ಲೇಖನ ಬರೆಯುವಂತೆ ಉತ್ಸಾಹಿಸಿ ನನ್ನನ್ನು ಪ್ರೋತ್ಸಾಹಿಸಿದವರು ನಮ್ಮೆಲ್ಲರ ಸ್ನೇಹಿತ ಡಾಕ್ಟರ್ ನಟರಾಜ್. ಈ ಲೇಖನಕ್ಕೆ ಉದಾಹರಣೆಗಾಗಿ ಸೇರಿಸಿರುವ ಎರಡು ಗೀತೆಗಳನ್ನು ಸಹ ಅವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿ ಕೊಟ್ಟು ಉಪಕರಿಸಿದ್ದಾರೆ. ಅವರಿಗೆ ನನ್ನ ಅನಂತಾನಂತ ವಂದನೆಗಳು.

ಆಧಾರ

1. Country Music in USA -Bill Malone and Tracey E.W. Laird.
2. Grand Ole Opry- History of Country Music – Paul Kingsbury.
3. Encyclopedia of Country Music – Paul Kingsbury.
4. Country music – an illustrated history – Dayton Duncan.

❑

32

ಕರ್ನಾಟಕ ಮತ್ತು ಅಮೆರಿಕೆಯ ಶ್ರಮಿಕರ ಜನಪದ ಹಾಡುಗಳು – ತೌಲನಿಕ ಅಧ್ಯಯನ

ಅಹೀಶ್ ಭಾರದ್ವಾಜ
ವೆಸ್ಟ್ ವಿಂಡ್ಸರ್, ನ್ಯೂ ಜೆರ್ಸಿ

*

ಪ್ರಸ್ತಾವನೆ

ಭಾರತ ದೇಶದ ಪ್ರಾಚೀನ ನಾಗರಿಕತೆ, ವಿಶಿಷ್ಟವಾದ ಭೌಗೋಳಿಕ ಪರಿಸರ, ಹಲವಾರು ಭಾಷೆ, ಧರ್ಮ, ಜಾತಿ, ಮತ, ಜನಾಂಗಗಳಿಂದ ಬಹಳ ವಿಭಿನ್ನವಾದ ಹಾಗೂ ವೈವಿಧ್ಯಮಯವಾದ ಜನಪದ ಸಂಸ್ಕೃತಿಯ ಪರಂಪರೆಯ ಹುಟ್ಟಿಗೆ ಕಾರಣವಾಗಿದೆ. ಸಾವಿರಾರು ವರ್ಷಗಳಿಂದ ಆಯಾ ಪ್ರಾಂತ್ಯಗಳ ಸಮುದಾಯಗಳ ರೂಢಿಯಲ್ಲಿರುವ ಆಚಾರ–ವಿಚಾರಗಳು, ಕರಕುಶಲ ಕಲೆಗಳು, ಹಾಡು, ನೃತ್ಯ, ನಾಟಕ, ಉಡಿಗೆ–ತೊಡಿಗೆಗಳು, ಸಂಪ್ರದಾಯಗಳು, ಸಾಹಿತ್ಯ, ವೈದ್ಯಕೀಯ ಪದ್ಧತಿಗಳು, ಹಬ್ಬ–ಹರಿದಿನಗಳು, ಕೈಗಾರಿಕೆಗಳು... ಹೀಗೆ ಹಲವಾರು ಪ್ರಕಾರಗಳನ್ನೊಳಗೊಂಡು ಆ ಪ್ರಾಂತ್ಯದ ಜಾನಪದ ಸಂಸ್ಕೃತಿಯ ಲಕ್ಷಣವನ್ನು ನಿರೂಪಿಸುತ್ತವೆ. ಜನಪದ ಸಾಹಿತ್ಯದ ಪ್ರಕಾರಗಳಾದ ಹಾಡು, ಗಾದೆಗಳು, ಲಾವಣಿ, ಒಗಟುಗಳ ಹುಟ್ಟು ಹೇಗಾಯಿತು? ಪ್ರಪಂಚದ ನಾನಾ ಭಾಗಗಳಲ್ಲಿ ಯಾವ ಕಾಲಘಟ್ಟದಲ್ಲಿ ಪ್ರಾರಂಭವಾಗಿ, ಹೇಗೆ ಬಳಕೆಗೆ ಬಂದವೆಂದು ನಿಖರವಾಗಿ ಹೇಳುವುದು ಬಹಳ ಕಷ್ಟ.

ಜನಪದ ಸಾಹಿತ್ಯಗಳನ್ನು ರಚಿಸಿದ ಕರ್ತೃಗಳು ಯಾರೂ ಶಿಷ್ಟ ಸಾಹಿತಿಗಳಲ್ಲ. ಇವು ಉದ್ದೇಶಪೂರ್ವಕವಾಗಿ ಬರೆದ ಕೃತಿಗಳಲ್ಲ. ಶ್ರಮಿಕ ವರ್ಗಗಳ ಜನರ ವಾಸ್ತವಗಳು, ದಿನನಿತ್ಯದ ಜೀವನಾನುಭವಗಳಿಂದ ಹಾಡುಗಳ ರೂಪದಲ್ಲಿ ಹುಟ್ಟಿಕೊಂಡ ಅರ್ಥಗರ್ಭಿತವಾದ ಸಾಹಿತ್ಯದ ಪ್ರಕಾರಗಳಾಗಿವೆ. ಇಂತಹ ಜನಪದ ಹಾಡುಗಳ ಪ್ರಕಾರಗಳಲ್ಲಿ ಶ್ರಮಿಕರು ತಮ್ಮ ಕೆಲಸಗಳು ಸುಗಮವಾಗಿ ಸಾಗಲೆಂದು, ಕೆಲಸದಲ್ಲಿ ಆಗುವ ಶ್ರಮವನ್ನು

ಮರೆಸಲೆಂದು ತಮ್ಮ ದುಡಿಮೆಯ ಆಯಾಸವನ್ನು ಮರೆಯುತ್ತಾ ಕೆಲಸದ ವೇಗಕ್ಕೆ ಅನುಗುಣವಾಗಿ ರಾಗವನ್ನು ಜೋಡಿಸಿ ಹಾಡುತ್ತಾರೆ. ಗ್ರಾಮಗಳಲ್ಲಿ ಜನಪದರು ಮುಂಜಾನೆ ಎದ್ದು ಹೆಣ್ಣು ಮಕ್ಕಳು ಕಾಳನ್ನು ಬೀಸುವ ವೇಳೆ ಹಾಡುವ ಪದಗಳು ಬೀಸುವ ಪದಗಳಾಗಿಯೂ, ಹೊಲದಲ್ಲಿ ನಾಟಿ ಮಾಡುತ್ತಾ ಹಾಡುವ ಪದಗಳು ನಾಟಿ ಪದಗಳಾಗಿಯೂ, ಅಂಬಿಗನು ದೋಣಿ ನಡೆಸುವಾಗ ಹೇಳುವ ಪದಗಳು ಅಂಬಿಗನ ಹಾಡಾಗಿಯೂ, ಗಾಡಿ ಹೊಡೆಯುವಾಗ ಹೇಳುವ ಪದಗಳು ಗಾಡಿ ಪದಗಳಾಗಿಯೂ, ಹಚ್ಚೆ ಹಾಕುವಾಗ ಹೇಳುವ ಪದಗಳು ಹಚ್ಚೆ ಪದಗಳಾಗಿಯೂ, ಭತ್ತ ಕುಟ್ಟುವಾಗ ಒನಕೆ ಹಿಡಿದು ಹಾಡುವ ಹಾಡುಗಳು ಒನಕೆವಾಡುಗಳೆಂದೂ, ಹೊಲದಲ್ಲಿ ಹಂತಿ ಮಾಡುವ ಸಮಯದಲ್ಲಿ ಹೇಳುವ ಹಾಡುಗಳು ಹಂತಿ ಹಾಡುಗಳಾಗಿಯೂ ಹೀಗೆ ತಾವು ಮಾಡುವ ಪ್ರತಿಯೊಂದು ಕೆಲಸಗಳಿಗೂ, ಅದರ ಜೊತೆ ಬರುವ ಹಾಡಿಗೂ ಅವಿನಾಭಾವ ಸಂಬಂಧವನ್ನು ಬೆಸೆಯುತ್ತಾರೆ.

ಸಾವಿರಾರು ವರ್ಷಗಳ ಪ್ರಾಚೀನ ಸಂಸ್ಕೃತಿ ಹಾಗೂ ಅದರ ಹಿನ್ನೆಲೆಯಲ್ಲೇ ಹುಟ್ಟಿಕೊಂಡ ಭಾರತದ ಜಾನಪದ ಸಂಸ್ಕೃತಿಯಂತೆ, ಅಮೆರಿಕ ತನ್ನ ಉದ್ದಗಲಕ್ಕೂ ತನ್ನದೇ ವಿಶಿಷ್ಟವಾದ ಜಾನಪದ ಸಂಸ್ಕೃತಿಯನ್ನು ಹೊಂದಿದೆ. ಅಮೆರಿಕೆಯ ಜನಪದ ಸಾಹಿತ್ಯದಲ್ಲಿ ಕಂಡುಬರುವ ಜನಪದ ಹಾಡುಗಳಲ್ಲಿ, ಅಮೆರಿಕೆಯ ವಸಾಹತು ಪ್ರದೇಶಗಳಲ್ಲಿ ಹೊಸದಾಗಿ ನಗರ ಪ್ರದೇಶಗಳ ನಿರ್ಮಾಣ, ಬಂದರು, ಹೆದ್ದಾರಿಗಳು, ಕಟ್ಟಡಗಳು, ವಸತಿ ಪ್ರದೇಶಗಳ ನಿರ್ಮಾಣ ಕಾರ್ಯ, ವ್ಯವಸಾಯ ಪ್ರದೇಶಗಳ ಪುನರ್ನಿರ್ಮಾಣ, ಹೀಗೆ ಆಯಾಸ ಪಡಿಸುವ ಕೆಲಸ ಕಾರ್ಯಗಳಲ್ಲಿ ಶ್ರಮಿಕರು ತಮ್ಮ ಕೆಲಸದ ವೇಳೆಯಲ್ಲಿನ ಆಯಾಸವನ್ನು ಮರೆಯಲು ತಮ್ಮದೇ ರೀತಿಯಲ್ಲಿ ಹಾಡುಗಳನ್ನು ಹೇಳಿಕೊಳ್ಳುತ್ತಾ ಕೆಲಸದಲ್ಲಿ ಆಗುವ ಶ್ರಮವನ್ನು ನಿವಾರಿಸಿಕೊಳ್ಳುತ್ತಿದ್ದರು. ಶ್ರಮಿಕರ ಹಾಡುಗಳಲ್ಲಿ ಪ್ರಮುಖವಾಗಿ ನಾವಿಕರು ಹಾಡುತ್ತಿದ್ದ 'sea shanties,' ಕಾಡುಗಳಲ್ಲಿ ದೊಡ್ಡ ಮರಗಳನ್ನು ಕಡಿಯುವಾಗ ಹೇಳುತ್ತಿದ್ದ 'Lumberjack songs,' ರೈಲು ಕಾಮಗಾರಿ ಕಾರ್ಯಗಳಲ್ಲಿ ಹಾಡುತ್ತಿದ್ದ 'Railroad songs', ಜಾನುವಾರುಗಳನ್ನು ಕಾಯುತ್ತಾ ಹುಲ್ಲುಗಾವಲುಗಳಲ್ಲಿ ಹೇಳುತ್ತಿದ್ದ 'Cowboy songs', ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವಾಗ ಹೇಳುತ್ತಿದ್ದ 'Harvest songs,' 'Agricultural work songs,' ಜೀತದ ಕೆಲಸಗಳನ್ನು ಮಾಡುತ್ತಾ ಹೇಳುತ್ತಿದ್ದ 'African-American Work songs,' ಗಣಿಗಾರಿಕೆಯ ಕೆಲಸದ ಸಮಯದಲ್ಲಿ ಹಾಡುತ್ತಿದ್ದ 'Coal miner's songs' ಕೇಳಸಿಗುತ್ತವೆ.

ಹೀಗೆ ಕರ್ನಾಟಕ ಹಾಗು ಅಮೆರಿಕೆಯು ವೈವಿಧ್ಯಮಯವಾದ ಜಾನಪದ ಸಂಸ್ಕೃತಿಯನ್ನು ಹೊಂದಿದ್ದು ಅಲ್ಲಿಯ ಜನಪದ ಸಾಹಿತ್ಯದಲ್ಲಿ ಕಾಣಸಿಗುವ ಶ್ರಮಿಕರು ಹೇಳುತ್ತಿದ್ದ ಹಾಡುಗಳ ಪ್ರಭೇದಗಳು ಹೇಗಿದ್ದವು? ಸಾಮಾನ್ಯವಾಗಿ ಯಾವ ರೀತಿಯ ಶ್ರಮದ ಕೆಲಸಗಳಲ್ಲಿ ಹಾಡುಗಳನ್ನು ಹೇಳುವ ವಾಡಿಕೆಯಿತ್ತು? ಹಾಡಿನ ಶೈಲಿಯ ಪ್ರಕಾರಗಳೇನು? ಕೆಲಸ ಮಾಡುವಾಗ ಹಾಡುಗಳನ್ನು ಹೇಳಲು ಪ್ರೇರಣೆಯೇನೆಂಬ

ವಿಷಯಗಳ ಬಗ್ಗೆ ಕೆಲವು ಹಾಡುಗಳನ್ನು ತೆಗೆದುಕೊಂಡು ವಿಶ್ಲೇಷಿಸಿದಾಗ, ಕರ್ನಾಟಕದಲ್ಲಿ ಶ್ರಮಿಕರು ಹಾಡುವ ಕೆಲವು ಹಾಡುಗಳ ವರ್ಗಕ್ಕೂ, ಅಮೆರಿಕೆಯಲ್ಲಿ ಶ್ರಮಿಕರು ಹಾಡುವ ಕೆಲವು ಹಾಡುಗಳ ವರ್ಗಕ್ಕೂ ಸಾಮ್ಯತೆಗಳನ್ನು ಕಾಣಬಹುದು. ಕೆಲವು ಹಾಡಿನ ವರ್ಗಗಳು ಆಯಾ ಪ್ರಾಂತ್ಯಗಳಿಗೆ ಮಾತ್ರ ಸೀಮಿತವಾಗಿರುವುದನ್ನೂ ಕೂಡ ಕಾಣಬಹುದು.

ಹಂತಿಯ ಹಾಡುಗಳು ಮತ್ತು Harvest songs (ಸುಗ್ಗಿಯ ಹಾಡುಗಳು)

ಕರ್ನಾಟಕದಲ್ಲಿ ಕೃಷಿಕರು ಸುಗ್ಗಿಯ ಕಾಲದಲ್ಲಿ ಹಾಡುವ ಸುಗ್ಗಿಯ ಹಾಡುಗಳು ಅಥವ ಹಂತಿಯ ಹಾಡುಗಳು ಅಮೆರಿಕೆಯಲ್ಲಿ ಸುಗ್ಗಿಯ ಕಾಲದಲ್ಲಿ ಕೃಷಿಕರು ಹಾಡುವ 'Harvest songs' ಗಳಿಗೆ ಬಹಳಷ್ಟು ಹೋಲುತ್ತವೆ.

ಹಂತಿಯ ಹಾಡುಗಳು

ಜೋಳ, ಗೋಧಿ, ಭತ್ತವನ್ನು ಹೆಚ್ಚಾಗಿ ಬೆಳೆಯುವ ಉತ್ತರ ಕರ್ನಾಟಕದ ಭಾಗಗಳಲ್ಲಿ ಸುಗ್ಗಿಯ ಕಾಲದಲ್ಲಿ ಈ ಬೆಳೆಗಳನ್ನು ಗೂಡುಹಾಕುವುದು, ತೆನೆ ಮುರಿಯುವುದು, ಚೆಂಡಿಯಾಡುವುದು ಮಾಡಿ ಸೂಡು ಕಟ್ಟಿ, ಬೆಳೆಗಳ ಹೊರೆಗಳನ್ನು ಒಂದು ಕಡೆ ರಾಶಿ ಹಾಕುತ್ತಾರೆ. ಹೀಗೆ ರಾಶಿ ಹಾಕಿದ ತೆನೆಗಳಿಂದ ಧಾನ್ಯ ತೆಗೆಯುವ ಜಾಗಕ್ಕೆ 'ಕಣ'ವೆಂದು ಕರೆಯುತ್ತಾರೆ. ಗೂಡು ಕಟ್ಟುವುದರಿಂದ ಹಿಡಿದು ಕಣದ ಜಾಗ ಆಯ್ಕೆ ಮಾಡುವ ಪ್ರಕ್ರಿಯೆಗಳಿಗೆ ಅವರದೇ ಆದ ಪದ್ಧತಿಗಳು, ನಂಬಿಕೆಗಳು, ಪೂಜಾವಿಧಾನಗಳು ಬಹಳ ಆಳವಾಗಿ ಬೇರೂರಿವೆ. ಹೀಗೆ ರಾಶಿ ಹಾಕಿದ ಕಣದ ಮಧ್ಯದಲ್ಲಿ ನೆಟ್ಟ 'ಮೇಟಿ' ಕಂಬದ ಸುತ್ತಲೂ ಹಾಕಿರುವ ತೆನೆಗಳನ್ನು ಎತ್ತುಗಳು ಎಣೆಯಿಂದ ತುಳಿಸುವ ವಿಧಾನವೇ 'ಹಂತಿ.' ಈ ಮೇಲಿನ ಎಲ್ಲಾ ಪ್ರಕ್ರಿಯೆಗಳನ್ನೊಳಗೊಂಡ ಕಾರ್ಯವಿಧಾನವನ್ನು 'ಹಂತಿ ಸಂಪ್ರದಾಯ'ವೆಂದು ಕರೆಯುತ್ತಾರೆ. ಈ ಸಂಪ್ರದಾಯವು ಉತ್ತರ ಕರ್ನಾಟಕದ ಭಾಗಗಳಲ್ಲಿ ಮಾತ್ರ ಹೆಚ್ಚಾಗಿ ರೂಢಿಯಲ್ಲಿದ್ದು ದಕ್ಷಿಣ ಕರ್ನಾಟಕ ಹಾಗು ಮಲೆನಾಡು ಪ್ರದೇಶಗಳಲ್ಲಿ ಕಂಡುಬರುವುದಿಲ್ಲ. ಹಂತಿಯ ಕಾರ್ಯವನ್ನು ಪುರುಷರೇ ಸಾಮಾನ್ಯವಾಗಿ ಮಾಡುವುದು ಹಾಗೂ ಹಂತಿ ಹೊಡೆಯುವಾಗ ಕೆಲಸದ ದಣಿವನ್ನು ನಿವಾರಿಸಿಕೊಳ್ಳಲು ಹಾಡುಗಳನ್ನು ಹೇಳುತ್ತಾ ಉಲ್ಲಾಸದಿಂದ ಕೆಲಸವನ್ನು ಪೂರೈಸುತ್ತಿದ್ದರು. ಕೆಲವೊಮ್ಮೆ ಹೆಂಗಸರೂ ಕೂಡ ಹಾಡಿನಲ್ಲಿ ಜೊತೆಗೂಡುವುದು ವಾಡಿಕೆಯಲ್ಲಿದೆ.

ಹಂತಿಯ ಹಾಡುಗಳು ಯಾವುದೇ ನಿರ್ದಿಷ್ಟವಾದ ವಿಷಯಕ್ಕೆ ಸೀಮಿತಗೊಳ್ಳುವುದಿಲ್ಲ. ವಿಸ್ತಾರವಾದ ವಿಚಾರಗಳಾದ ದೇವರುಗಳು, ಪುರಾಣದಲ್ಲಿ ಬರುವ ಪುಣ್ಯಪುರುಷರು, ನಾಡಿಗಾಗಿ ಹೋರಾಡಿದ ವೀರರು, ಸಂಪ್ರದಾಯ, ನಂಬಿಕೆಗಳು, ಎತ್ತುಗಳು ಹಾಗು ಕೃಷಿಕೆಯಲ್ಲಿ ಬರುವ ಅನೇಕ ವಸ್ತುಗಳನ್ನು ಜನಪದರು ತಮ್ಮ ಹಾಡುಗಳಲ್ಲಿ ಬಳಸುತ್ತಾರೆ. ಹೀಗೆ ಹಲವಾರು ವಸ್ತು ವೈವಿಧ್ಯತೆಗಳಿಂದ ಕೂಡಿರುವ ಹಂತಿಯ ಹಾಡುಗಳು ಜನಪದ ಗೀತೆಗಳಿಗೆ ವಿಶೇಷವಾದ ಮೆರಗನ್ನು ಕೊಟ್ಟಿವೆ.

ಸುಗ್ಗಿಯ ಕಣ ಮಂಟಪವೆಂದೂ, ಮೇಟಿಯೇ ಚನ್ನಬಸವೇಶನೆಂದೂ, ಆರಾಧನೆಯ ಮಾಡಿಸುವವನೇ ಹೊಣೆಗಾರ ರೈತ ಬಸವೇಶ, ಇದಕ್ಕೆ ಗಣಿಯಾದ ಗುರು, ಪ್ರಭುದೇವ, ಕಣದೊಳಗಿನ ಬುದ್ಧಿವಂತಲಿಂಗ ಎಂದು ಹಂತಿಯ ಬಗ್ಗೆ ಕೃಷಿಕರು ಹಾಡಿದ್ದನ್ನು ನೋಡಬಹುದು.

"ಕಣವೆ ಮಂಟಪವಾತೊ, ಗುಣವಂತ ಬಸವೇಶ
ಹೊಣೆಗಾರ ರೈತ ದಂಡೇಶ । ಕಣಮೇಟಿ
ಗಣಿಗುರುವು ಕಣಕೆ ಪ್ರಭುಲಿಂಗೊ ॥"

ಹಂತಿಯ ಸಮಯದಲ್ಲಿ ಕೃಷಿಕನು ತಾನು ಬೆಳೆಯುವ ಬೆಳೆಯು ಸಮೃದ್ಧವಾಗಿ ಬರಲೆಂದು ತನ್ನ ನಂಬಿಕೆಯ ದೈವಕ್ಕೆ ಪ್ರಾರ್ಥಿಸಿ ಪೂಜಿಸುವ ಪದ್ಧತಿಯಿದೆ. ಅದರಲ್ಲೂ ಶಿವಶರಣರನ್ನು ನೆನೆದು ಹಾಡುವುದೆಂದರೆ ಎಲ್ಲಿಲ್ಲದ ಭಕ್ತಿ. ಕೆಳಗಿನ ಪದದಲ್ಲಿ ಶಿವಶರಣರನ್ನು ಪ್ರಾರ್ಥಿಸಿರುವುದನ್ನು ಕಾಣಬಹುದು.

"ನಿನ್ನ ಹೆಸರಿಲೆ ಹಂತಿ, ಹೊನ್ನು ಮುತ್ತಲಿನ ರಾಶಿ
ಹಣ್ಣಾದ ಮನಸಿನೊಕ್ಕಲಿಗ । ಒಕ್ಕುವನು
ಕನ್ನೆ ಶಿವಭಕ್ತಿ ದಾಸೋಹ ॥
ಹಾಡುತಲಿ ಒಕ್ಕಲಿಗ, ಮಾಡುವನು ಸುಗ್ಗಿಯನು
ನೀಡು ಚೆನ್ನಯ್ಯ ನೀಹುಲುಸು ।
ಕಾಡೊಳಗನಾಡು ತುಂಬಿರಲಿ ಶಿವಭಕ್ತಿ ॥"

ಹಂತಿಯನ್ನು ಕಟ್ಟುವ ಸಮಯದಲ್ಲಿ ಈ ಕೆಳಗಿನ ಪದಗಳನ್ನು ಹಾಡುತ್ತಾರೆ.

"ಜೋಳದ ಹಂತೀ ಕಟ್ಟಿ ನಾಳಿಗೆ ತಿಂಗಳಾತೊ
ಆನಿ ತುಳಿದರ ನಂದದಿಲ್ಲೊ ನಂ ಬಸವ
ಪಾದ ಇಟ್ಟದ್ಕ ನುರತಾವಾ ॥
ಮೇಟಿ ಮೂವತ್ತಮಳಾ ಸುತ್ತಾ ಅರವತ್ತರ ಮಳಾ
ಎತ್ತ ತಿರಗ್ಯಾವ ಐನೂರ ಎಲೆ ಹುಡುಗಾ"

ಹಂತಿ ಮಾಡುವ ಸಮಯದಲ್ಲಿ ಗಾಳಿ ಬೀಸಿದಷ್ಟೂ ಧಾನ್ಯ ಬಿಡಿಸುವ ಕೆಲಸ ಸುಲಭ, ಹಾಗಾಗಿ ಬೀಸುವ ಗಾಳಿಗೂ ಹಾಡನ್ನು ಕಟ್ಟಿ, ಈ ಕೆಳಗಿನ ಸಾಲುಗಳಲ್ಲಿ ವರ್ಣಿಸಿದ್ದಾರೆ.

"ರಾಸಿಗಾಳಿಯು ಬೀಸಿ, ಸೂಸಿ ಹರಿಯಿತು ಕಣವು
ಕೂಸ ಕೋಳೂರ ಕಡೆಗಾಳಿ । ಬೀಸಿಂದು
ಮೀಸಲೀ ರಾಶಿ ಜಂಗಮಕೆ ॥
ಹರಿಚಂದ ಗಾಳಿಗಳು ಭರದೆ ಬೈಲಿಗೆ ಬೀಸಿ

ಸುರಿಮಳೆಯು ನಮ್ಮ ಬೆಳವಲಕೆ । ಕೋಳೂರ
ಬರಿಗಾಳಿ ಬೀಸಿ ಹಗೆ ತುಂಬಿ ॥
ಜಂತೆ ಗುಂಟಲಿ ಎಳೆದ, ನಿಂತ ಕಣಕದ ರಾಸಿ
ಬಂತು ನಿನ್ಹಾಡ ಹಾಡುತಲಿ । ಬೆಳ ತನಕ
ಚಿಂತಿಲ್ಲದೆಡೆಯು ಶಿವನಡಿಗೆ ॥"

ಕೃಷಿಕನಿಗೆ ಎತ್ತುಗಳೇ ಜೀವಾಳ. ಅವನು ಎತ್ತುಗಳನ್ನು ಪ್ರೀತಿಸುವಷ್ಟು ಇನ್ಯಾರನ್ನೂ ಪ್ರೀತಿಸುವುದಿಲ್ಲ. ಹೊಲದಲ್ಲಿ ತಮ್ಮ ಜೊತೆ ದುಡಿಯುವ ಬಸವಣ್ಣನನ್ನು ಭಕ್ತಿಯಿಂದ ವರ್ಣಿಸುತ್ತಾರೆ. ಕೃಷಿಕನು ಎತ್ತುಗಳು ಕುರಿತು ಹೊಗಳುವ ತ್ರಿಪದಿಯೊಂದು ಹೀಗಿದೆ:

"ಪುಂಡಾನ ಎತಗೋಳು ತಿಂಡೀನೆ ತಿಂದಾವೊ
ಗುಂಡದ ನೀರ ಕುಡಿದಾವೊ ನಮ್ಮೆತ್ತ
ಗಂಡೆಳ್ಳಿ ಕಂಡು ಹೆದರ್ಯಾವೊ ॥
ಹಾದಿಯ ಹೊಲ ನೋಡ ಗೋಧಿಯ ಬೆಳಿನೋಡ
ಹಾದಿ ಹೋಗುವನ ನಗಿನೋಡ ನಮ್ಮ ಬಸವ
ಆರಂಭ ನೋಡ ಅಡಿವ್ಯಾಗ ॥
ಕೆಂದೂರ ಕೆರಿಯಾಗ ಮುಂದೆಷ್ಟು ನೆರದೈತ
ನಂದಿಕೋಲಾಟ ನವಲಾಟ – ನಮ್ಮ ಬಸವ
ಬಂಡಿಕಂಡಲ್ಲೆ ಚಲ್ಲಾಟ ॥"

ನಾಡಿಗಾಗಿ ಹೋರಾಡಿ ತಮ್ಮ ಜೀವವನ್ನೇ ಮುಡುಪಾಗಿಟ್ಟಿದ್ದ ಅನೇಕ ವೀರರ, ಚರಿತ್ರೆಯಲ್ಲಿ ಬರುವ ಪ್ರಸಿದ್ಧ ವ್ಯಕ್ತಿಗಳನ್ನು ಹಂತಿಯ ಹಾಡುಗಳ ಮೂಲಕ ಕೊಂಡಾಡಿ ನೆನೆಯುತ್ತಾರೆ. ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ಸಂದರ್ಭಗಳನ್ನು ಈ ಪದ್ಯದಲ್ಲಿ ಬಹಳ ಸುಂದರವಾಗಿ ಬಣ್ಣಿಸಿದ್ದಾರೆ.

"ವೀರಶೈವರ ಮಗಳ ವೀರಚೆನ್ನಮ್ಮನ
ಧೈರ್ಯ ನೋಡಿ ಬಳ್ಳ ಕಚ್ಯಾರೋ!
ಧೈರ್ಯನೋಡಿ ಬಳ್ಳ ಕಚ್ಚಿ ಬಿಳಿ ಮೂತಿಯವರು
ಮತ್ತಿಷ್ಟ ದಂಡ ಕಳಿಶ್ಯಾರೋ!! ॥
ದಂಡಿಗಿ ಅಂಜದ ಪುಂಡ ಚನ್ನಮ್ಮನು
ರುಂಡ ಹಾರಿಶ್ಯಾಳ ಸಾಬನ್ನ ಚಂಡಾ
ಅಗಶ್ಯಾಗ ಕಟ್ಟಿ ನಗತಾಳೋ! ॥"

ಪೌರಾಣಿಕ ಗ್ರಂಥಗಳಾದ ರಾಮಾಯಣ, ಮಹಾಭಾರತ ಹಾಗು ಮುಂತಾದ ಹಲವು ಗ್ರಂಥಗಳಲ್ಲಿ ಬರುವ ಕಥೆಗಳು, ಅದರಲ್ಲಿ ಬರುವ ಪಾತ್ರಗಳನ್ನು ಬಣ್ಣಿಸುತ್ತಾ ಹಾಡುಗಳನ್ನು ಹೇಳುವುದು ಕೇಳಿದಾಗ ಜನಪದರಿಗೆ ನಮ್ಮ ಪೌರಾಣಿಕ ಗ್ರಂಥಗಳ ಬಗ್ಗೆ

ಮಹತ್ತರವಾದ ಜ್ಞಾನವಿತ್ತೆಂದು ಅರಿಯಬಹುದು. ಇಲ್ಲಿ ರಾಮನು ಸೀತೆಯನ್ನು ಕಾಡಿಗೆ ಕಳುಹಿಸಿದಾಗ, ಸೀತೆಯು ಲವ-ಕುಶರೊಡನೆ ಕಾಡಿನಲ್ಲಿ ಪಟ್ಟ ಕಷ್ಟವನ್ನು ಹಾಗು ಹನುಮಂತನನ್ನು ವರ್ಣಿಸುವುದನ್ನು ತಮ್ಮ ಹಾಡಿನ ಮೂಲಕ ಹಾಡಿ ವಿಶೇಷಪ್ರಜ್ಞೆಯನ್ನು ತೋರಿದ್ದಾರೆ.

"ಜನಕರಾಯನ ಮಗಳ ಬನಕ ತೊಟ್ಟಿಲ ಕಟ್ಟಿ!
ಲವ-ಕುಶರನ್ನು ತೂಗ್ಯಾಳೊ! ಸೀತಾದೇವಿ!
ನಗುತ ವನವಾಸ ಕಳದಾಳ ॥
ಉದ್ದನ್ನ ಹನುಮಂತ ಬುದ್ಧೀಲಿ ಶಮರಂತ
ವದ್ದ ಹಾರ್ಯಾನೋ ಸೀತಿಮ್ಮನ ಗೆದ್ದು ತರುವ
ಸಣ್ಣ ಹನುಮಪ್ಪ ಬಣ್ಣದ ಕುಂಚಿಗೆ ಹೊಲಿಸಿ
ಎಣ್ಣೆ ಮಜ್ಜನಕ ನಡೆಯುವ ॥"

-ಸುಗ್ಗಿಯ ಹಾಡುಗಳು (Harvest Songs)

ಪ್ರಪಂಚದ ಯಾವುದೇ ಭೂಪ್ರದೇಶವಿರಲಿ, ವ್ಯವಸಾಯ ಮಾಡುವ ಅಲ್ಲಿನ ಕೃಷಿಕರು ಸುಗ್ಗಿಯ ಕಾಲದಲ್ಲಿ ತಮ್ಮ ಆಚಾರ-ವಿಚಾರ, ನಂಬಿಕೆಗಳಿಗೆ ಅನುಗುಣವಾಗಿ ಸುಗ್ಗಿಯ ಕಾಲದ ಕೆಲಸಗಳಲ್ಲಿ ಹಾಡುಗಳನ್ನು ಹೇಳುತ್ತಾ ಕೆಲಸದ ದಣಿವನ್ನು ನಿವಾರಿಸಿಕೊಳ್ಳುತ್ತಾರೆ. ಐರೋಪ್ಯ ರಾಷ್ಟ್ರಗಳ ವಸಾಹತುಗಳು, ಅಮೆರಿಕೆಯ ವಿವಿಧ ಪ್ರಾಂತ್ಯಗಳಲ್ಲಿ ನಡೆದುಕೊಂಡು ಬಂದ ಕಾಲಘಟ್ಟಗಳಲ್ಲಿ ಕೃಷಿಕರು ತಮ್ಮದೇ ಆದ ವ್ಯವಸಾಯ ಪದ್ಧತಿಗಳನ್ನು ರೂಢಿಸಿಕೊಳ್ಳುವುದರ ಜೊತೆಗೆ ವಿಭಿನ್ನವಾದ ಹಾಡುಗಳನ್ನು ಕೃಷಿ ಮಾಡುವ ವೇಳೆ ಹೇಳುತ್ತಿದ್ದರು. ಸುಗ್ಗಿಯ ವೇಳೆ ತೆನೆಯನ್ನು ಕೊಯ್ಯುವಾಗ, ತೆನೆಗಳನ್ನು ರಾಶಿ ಮಾಡುವಾಗ, ಧಾನ್ಯಗಳನ್ನು ಬಿಡಿಸಿ ಶೇಖರಿಸುವಾಗ ಸುಗ್ಗಿಯ ಹಾಡು (harvest songs) ಗಳನ್ನು ಹೇಳುವ ರೂಢಿಯಿತ್ತು. ಬಾರ್ಲಿ ತೆನೆಗಳನ್ನು ಕೊಯ್ದು ಧಾನ್ಯಗಳನ್ನು ಬಿಡಿಸುವ ವೇಳೆ ಹೇಳುತ್ತಿದ್ದ ಹಾಡಿನ ಸಾಲುಗಳು ಹೀಗಿವೆ:

"Now is come September, the hunter's moon begun,
And through the wheaten stubble is heard the frequent gun.
The leaves are pale and yellow, and kindling into red,
And the ripe and bearded barley is hanging down its head"

ಸುಗ್ಗಿಯ ಕಾಲದಲ್ಲಿ ಹಾಡುಗಳನ್ನು ಹೇಳುವುದಲ್ಲದೇ ನೆಲವನ್ನು ಉಳುವಾಗ, ಬಿತ್ತನೆ ಕಾರ್ಯ ಮಾಡುವಾಗಲೂ ಸಹ ಹಾಡುಗಳನ್ನು ಹೇಳಿಕೊಂಡು ಬಿತ್ತನೆ ಮಾಡುವುದುಂಟು. ಅಂತಹ ಸಂದರ್ಭದಲ್ಲಿ ಹೇಳುತ್ತಿದ್ದ ಹಾಡಿನ ಸಾಲುಗಳು ಇಂತಿವೆ:

"When the farmer has fallowed and tilled all the land
And scattered the grain with a bountiful hand

And the team that had labored with harrow and plough,
Has conveyed the rich produce safe home to the mow"

ಬಂಡಿಯ ಪದಗಳು ಮತ್ತು Railroad Songs

ಬಂಡಿಗಳಲ್ಲಿ ಪ್ರಯಾಣ ಮಾಡುವಾಗ, ಸರಕು ಸಾಗಿಸುವಾಗ ಹೇಳುತ್ತಿದ್ದ ಬಂಡಿಯ ಪದಗಳು, ಅಮೆರಿಕೆಯ ಕಾರ್ಮಿಕರಲ್ಲಿ ವಾಡಿಕೆಯಲ್ಲಿದ್ದ 'Railroad song' ಗಳ ವರ್ಗವನ್ನು ಹೋಲುತ್ತವೆ. ಈ ವೃತ್ತಿಗಳು ವಾಹನ ಸೌಕರ್ಯ, ಸಾಗಾಣಿಕೆಗೆ ಸಂಬಂಧಪಟ್ಟದ್ದಾಗಿದ್ದು ತಮ್ಮ ದಿನನಿತ್ಯದ ಅನುಭವಗಳನ್ನು ಹಾಡಿನ ಮೂಲಕ ವ್ಯಕ್ತಪಡಿಸಿರುವುದನ್ನು ಕಾಣಬಹುದು.

ಬಂಡಿಯ ಪದಗಳು

ಊರಿಂದ ಊರಿಗೆ ಜನರು ಪಯಣಿಸುವಾಗ, ಸರಕುಗಳನ್ನು ಸಾಗಿಸುವಾಗ ಹೆಚ್ಚಾಗಿ ಬಂಡಿಗಳನ್ನು ಬಳಸುತ್ತಿದ್ದ ಕಾಲದಲ್ಲಿ ಬಂಡಿಗಳನ್ನು ಓಡಿಸುತ್ತಿದ್ದ ಗಂಡಸರು ಪ್ರಯಾಣದ ಸಮಯದ ಬೇಸರವನ್ನು ಕಳೆದು ಉತ್ಸಾಹಗೊಳ್ಳುವಂತೆ ಹಾಡುಗಳನ್ನು ಹೇಳಿಕೊಂಡು ತಮ್ಮ ಪ್ರಯಾಣದ ಏಕತಾನತೆಯನ್ನು ಪರಿಹರಿಸಿಕೊಳ್ಳುತ್ತಿದ್ದರು. ಈ ಹಾಡುಗಳನ್ನು ಒಂದೇ ಬಂಡಿ ಓಡಿಸುವಾಗಲೂ, ಎರಡು ಮೂರು ಬಂಡಿಗಳು ಜೊತೆಗೂಡಿ ಹೋಗುವಾಗಲೂ ಬಂಡಿಯ ಚಾಲಕರು ಹಾಡುವುದು ರೂಢಿಯಲ್ಲಿತ್ತು. ಬಹುತೇಕ ಮನೋರಂಜನೆಗೆಂದೇ ಒಬ್ಬರಿಗೊಬ್ಬರು ಕುಚೋದ್ಯ ಮಾಡಿಕೊಂಡು ಹಾಸ್ಯಮಯವಾದ, ಶೃಂಗಾರಭರಿತವಾದ ಸರಳವಾದ ತ್ರಿಪದಿಗಳಿವು.

ಈ ಕೆಳಗಿನ ಪದದಲ್ಲಿ ಬಂಡಿ ಓಡಿಸುವಾತನ ಗತ್ತು, ಠೀವಿ, ಓಡಿಸುವ ಶೈಲಿಗಳನ್ನು ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ.

"ಬಂಡಿ ಹೊಡೆಯೋನ ಬಂಡಾಟ ನೋಡಿರೊ
ಬಾರುಕೋಲೈದು ಬಲಗೈಲಿ-ಹಿಡಕೊಂಡು
ಬೋರಾಡಿ ಘಟ್ಟ ಇಳಿಸ್ಯಾನು ॥
ಕಬ್ಬು ಕಡಿಯೋನೆ ಉಬ್ಬು ನೇರುಳ್ಳೋನೆ
ಗೊಬ್ಬರದ ಗಾಡಿ ಹೊಡೆಯೋನೆ-ತಮ್ಮಯ್ಯನ
ಉಬ್ಬು ತಿದ್ಯವಳೆ ಶ್ರೀಗೌರಿ ॥
ಹಾಡು ಬಂದರೆ ಹಾಡು ಗಾಳಿ ಬಂದರೆ ತೂರೋ
ಹಾಡೇಳೊ ಗೆಣೆಯ ನನದ್ಯೂಲಿ-ಬಲ್ಲಂಥ
ಜಾಣ ನೀ ಒಡದ್ದೇಳೊ ॥
ಹೋರಿಯ ಹೊಡಕಂಡು ಕೋರ್ ಹುಡುಗಿ ನಾ ಕಂಡೆ
ಗೋರಿಕಾಯಂತ ಎದೆಯೋಳ-ನಾ ಕಂಡು
ಹೋರಿ ಹೊಡೆಯಾಕೆ ಮನಸ್ಸಿಲ್ಲ ॥

ಕೆಂಪಾನೆ ಹೆಣ್ಣಿಗೂ ಸಂಪಿಗೆ ಹೂವಿಗೂ
ಅಂತರದಲ್ಲಾಡೊ ಹುಣುಸೇಯ-ದೋರ್ಹಣ್ಣಿಗೂ
ಎಂತೋರು ಬಾಯಿ ಬಿಡುತಾರೆ ॥"

ಎರಡು ಮೂರು ಬಂಡಿಗಳು ಜೊತೆಯಲ್ಲಿ ಪ್ರಯಾಣಿಸುವಾಗ ಒಬ್ಬರಿಗೊಬ್ಬ ಚಾಲಕರು ಸಂಭಾಷಣೆಯ ಮೂಲಕವೋ ಅಥವ ಪ್ರಶ್ನೋತ್ತರಗಳ ಮಾದರಿಯಲ್ಲೊ ಹಾಡುಗಳನ್ನು ಹೇಳಿ ಮನೋರಂಜನೆಯನ್ನು ಪಡೆಯುತ್ತಿದ್ದರು. ಅಂತಹ ಒಂದು ಪದ್ಯವನ್ನು ಈ ಕೆಳಗಿನ ಸಾಲುಗಳಲ್ಲಿ ನೋಡಬಹುದು.

"ನೀರಿಗ್ಹೋಗೋ ಹೆಣ್ಣೇ ನಿಲ್ಲೇ ನಾ ಬರುತೀನ
ನಿನ್ನಾಣೇ ನಿನ್ನ್ಕ ಕೊಡದಾಣೇ
ನಿನ್ನಾಣೇ ನಿನ್ನ್ಕ ಕೊಡದಾಣೆ ಕೊರಳಾಗಿರುವೋ
ಬಣ್ಣದ್ಸರದಾಣೇ ಬರತೀನೀ – ಕೇಹೆಹೇ –॥"

ಹೀಗೆ ಒಬ್ಬ ಬಂಡಿಯ ಚಾಲಕ ಹೇಳಿದ ಪದಕ್ಕೆ ಇನ್ನೊಂದು ಬಂಡಿಯವ,

"ಬಣ್ಣದ್ ಸರದಾ ಮ್ಯಾಲೇ ಕಣ್ಯಾಕೋ ಗಿಣಿ ರಾಮಾ
ಹಣ್ಣಿಲ್ಲವೇನೋ ಮೆಲುವೋಕೇ
ಹಣ್ಣಿಲ್ಲವೇನೋ ಮೆಲುವೋಕೆ ನಿಮ ಕುಲದ
ಹೆಣ್ಣಿಲ್ಲವೇನೋ ತರುವೋಕೇ – ಕೇಹೆಹೇ –॥"

ಎಂದು ಹೇಳಿ ಪದ್ಯದ ಮೂಲಕ ಛೇಡಿಸುವನು. ಈ ತರಹದ ನೂರಾರು ಬಂಡಿಯ ಹಾಡುಗಳು ಕನ್ನಡ ಜಾನಪದದಲ್ಲಿ ಕಾಣಸಿಗುತ್ತವೆ.

Railroad Songs

ಮೊದಲೆಲ್ಲ ಊರಿಂದ ಊರಿಗೆ ಪ್ರಯಾಣಿಸಲು ಹಾಗು ಸರಕು ಸಾಗಾಣಿಸಲು ಕುದುರೆಗಾಡಿಗಳನ್ನು ಅವಲಂಬಿಸುತ್ತಿದ್ದು, 19ನೇ ಶತಮಾನದ ವೇಳೆಗೆ ಅಮೆರಿಕೆಯಲ್ಲಿ ಉಗಿಬಂಡಿ ಆವಿಷ್ಕಾರಗೊಂಡು ಪ್ರಯಾಣ ಮತ್ತು ಸರಕು ಸಾಗಾಣಿಕೆಗೆ ಉತ್ತಮವಾದ ಪರ್ಯಾಯ ವಾಹನ ಸೌಕರ್ಯವಾಗಿ ನೆಲೆಗೊಂಡಿತು. ರೈಲುಗಾಡಿಗಳನ್ನು ನಿರ್ಮಿಸುವವರಿಂದ ಹಿಡಿದು, ಹಳಿಗಳನ್ನು ಹಾಕುವ ಕಾಮಗಾರಿಯಿರಲಿ, ರೈಲುಗಾಡಿಗಳ ದುರಸ್ತಿ, ಸುಸ್ಥಿತಿಯಲ್ಲಿಡುವ ಕೆಲಸಗಳಾಗಿರಲಿ, ರೈಲಿನ ಕಾರ್ಮಿಕರು ಕೆಲಸದ ಜೊತೆ ರೈಲುಗಾಡಿಯ ಶಬ್ದದ ಲಯಕ್ಕೆ ಹೊಂದುವಂತೆ ಹಾಡುಗಳನ್ನು ಹೇಳುತ್ತಾ ತಮ್ಮ ಕೆಲಸದಿಂದಾಗುವ ದಣಿವನ್ನು ಮರೆಯುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ತಮ್ಮ ದಿನನಿತ್ಯದಲ್ಲಿ ನೋಡುವ ರೈಲುಗಾಡಿ, ಹಳಿಗಳು, ಕಾರ್ಯಾಗಾರ ಹಾಗು ರೈಲುಗಾಡಿಯಿಂದ ಹೊಮ್ಮುವ ಶಬ್ದಗಳ ಅಭಿಮಾನವನ್ನು ಹಾಡುಗಳಲ್ಲಿ ಅಭಿವ್ಯಕ್ತಿಸುತ್ತಿದ್ದರು. ಅಮೆರಿಕೆಯ ರೈಲು

ಕಾಮಗಾರಿಯ ಕೆಲಸಗಳಲ್ಲಿ ಐರಿಷ್ ಮೂಲದ ವಲಸೆ ಕಾರ್ಮಿಕರ ಕೊಡುಗೆ ಮಹತ್ತರವಾದದ್ದು, ಅದನ್ನು ಬಹಳ ಹೆಮ್ಮೆಯಿಂದ ಈ ಹಾಡಿನ ಸಾಲುಗಳ ಮೂಲಕ ಹೇಳಿದ್ದಾರೆ.

"I landed in this country
A year and a month ago.
To make my living at laboring work,
To the railroad I did go.
I shoveled and picked in a big clay bank,
I merrily cheered and sang,
For my work is o'er-you plainly see,
I'm the boss of the section gang."

ಹಳಿಗಳನ್ನು ಹಾಕುವ ಕಾಮಗಾರಿಯ ಕೆಲಸದಲ್ಲಿನ ಬಂಡೆ ಕೊರೆಯುವುದು, ಮರದ ಹಲಗೆಗಳನ್ನು ಇಟ್ಟು ಹಳಿಗಳನ್ನು ಜೋಡಿಸುವುದು ಹೀಗೆ ಕೆಲಸದಲ್ಲಿ ಬರುವ ಒಂದೊಂದು ಕಾರ್ಯವನ್ನೂ ಹಾಡಿನ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾರೆ.

"God told Noah about the rainbow sign,
No more water but a fire next time.
Hey boys, can't you line, hey boys, just a hair,"

ಬೀಸುವ ಹಾಡುಗಳು ಮತ್ತು Corn Grinding Songs

ಹಿಂದಿನ ಕಾಲದಲ್ಲಿ ಕೆಲಸ ಕಾರ್ಯಗಳನ್ನು ಸುಲಭಗೊಳಿಸಲು ಯಾವುದೇ ಯಂತ್ರೋಪಕರಣಗಳಿರಲಿಲ್ಲ. ಹಾಗಾಗಿ ಹೆಂಗಸರು ಬೆಳಿಗ್ಗೆ ಬೇಗನೆ ಎದ್ದು ಕಾಳು ಬೀಸುವ ಕೆಲಸ ಮುಗಿಸಿ, ಮುಂದಿನ ಕಾರ್ಯಗಳನ್ನು ಮಾಡುತ್ತಿದ್ದರು. ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಹೆಂಗಸರು ಹಾಡುತ್ತಿದ್ದ ಬೀಸುವ ಹಾಡುಗಳೂ ಹಾಗೂ ಅಮೆರಿಕೆಯ ಮೂಲ ನಿವಾಸಿಗಳಲ್ಲಿ ಒಬ್ಬರಾದ ನವಾಹೊ ಬುಡಕಟ್ಟು ಜನಾಂಗದ ಹೆಂಗಸರು ಹಾಡುತ್ತಿದ್ದ 'corn grinding songs' ಗಳೂ ಒಂದೇ ಬಗೆಯಿಂದ ಕೂಡಿದ್ದು, ಹಾಡುಗಳನ್ನು ಹೇಳುವ ಸಂದರ್ಭ, ಹಾಡಿನ ವಸ್ತು ವಿಶೇಷತೆಗಳು ಬಹಳಷ್ಟು ಸಾಮ್ಯತೆಯನ್ನು ತೋರುತ್ತವೆ.

ಬೀಸುವ ಹಾಡುಗಳು

ಕರ್ನಾಟಕದ ಜನಪದರಲ್ಲಿ ಹೆಣ್ಣುಮಕ್ಕಳು ಕೆಲಸ ಕಾರ್ಯಗಳಲ್ಲಿ ತೊಡಗಿರುವಾಗ ಹೇಳುವ ಹಾಡುಗಳಲ್ಲಿ ಬೀಸುವ ಹಾಡುಗಳು ಬಹಳ ವಿಶಿಷ್ಟವಾಗಿವೆ. ರಾಗಿ, ಜೋಳ, ಗೋಧಿ ಮುಂತಾದ ಧಾನ್ಯಗಳನ್ನು ಬೀಸುವಾಗ ಒಬ್ಬರು ಅಥವ ಬೀಸುತ್ತಿರುವವರು

ಜೊತೆಯಲ್ಲಿ ಸೇರಿಕೊಂಡು ಕೂಡಿ ಹಾಡುವುದುಂಟು. ಬೀಸುವಾಗ ತಮ್ಮ ಕುಲದೇವರು, ಗ್ರಾಮದೇವತೆಗಳನ್ನು ನೆನೆಯುತ್ತಾ ಹಾಡುವುದು ಈ ಕೆಳಗಿನ ಸಾಲುಗಳಲ್ಲಿ ವ್ಯಕ್ತವಾಗಿದೆ.

"ರಾಗಿಯ ಕಲ್ಲಿಗೆ ರನ್ನದ ಕೈಗೂಟ
ರಾಮದೇವರೆಂಬೊ ಹಿಡಿಗೂಟ ಹಿಡಕೊಂಡು
ರಾಜುನ ದೇವನ ಕೊರಳಿಗೆ ॥
ಕಲ್ಲ ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಕಲ್ಲತ್ತಿ ಮೇಲೆ ಮಗ ಬರಲಿ-ನಮ್ಮನಿಗೆ
ಮಲ್ಲಿಗೆ ಮುಡಿಯೊ ಸೊಸೆ ಬರಲಿ ॥"

ಸಂಸಾರವನ್ನು ಸರಿಯಾಗಿ ತೂಗಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಹೊರುವ ಹೆಣ್ಣುಮಗಳು ತನ್ನ ಸಂಬಂಧಗಳು ಚೆನ್ನಾಗಿರಲಿ, ಬಂಧು-ಬಳಗ, ತವರು ಚೆನ್ನಾಗಿರಲೆಂದು ಬಯಸಿ ಹೇಳುವ ಸಾಲುಗಳನ್ನು ಹೀಗೆ ವರ್ಣಿಸಲಾಗಿದೆ:

"ಸಕ್ಕರಿ ಸರಿ ಮಾಡಿ ಕಾರೀಕ ಪುಡಿ ಮಾಡಿ
ಹೊಂಕಣ, ಗುಬ್ಬಿ ನಂಜುಡೇಶ್ವರ ಸ್ವಾಮಿಗೆ
ಎಡೆಮಾಡಿ! ಬೇಡಿಕೊಂಡೆ
ಸುತ್ತಿರುವ ಬಳಗ ಸುಖವಿರಲೆ ॥
ಕಾಂದೀಲಿ ಬೆಳಕೀಲಿ, ಗಂಡಗೂಟಕ ನೀಡಿ
ಡಾಳಿಂಬರಿ ಸೆರಗ ಮರಿಮಾಡಿ! ಕೇಳ್ಯಾಳು
ಹೋಗಿ ಬರತೀನಿ ತವರೀಗೆ ॥"

ಸಂಸಾರದಲ್ಲಿ ಗಂಡಸು ನಿಷ್ಠಾವಂತನಾಗಿ, ಪರಸ್ಪರ ನಂಬಿಕೆಯಿಂದ ಜೀವನ ನಡೆಸಬೇಕು. ಪರಹೆಣ್ಣಿನ ಸಂಗ ಮಾಡುವ ಗಂಡನನ್ನು ಸುಧಾರಿಸಲು ತಿಳಿಹೇಳುವ ಮಾತುಗಳನ್ನು ಕೆಳಗಿನ ಸಾಲುಗಳಲ್ಲಿ ಕಾಣಬಹುದು.

"ಹೆರರ ಹೆಣ್ಣಿಗಾಗಿ ಹೊರಗೆ ಮಲಗುವ ಜಾಣ
ಗಿಡದ ಮೇಲೆರಡು ಗಿಳಿ ಕೂತು! ನುಡಿದಾವ
ಎರವನ್ನೊ ರಾಯ ನಿನ್ನ ಜೀವ! ॥
ಗಂಡುಳ್ಳ ಗರತಿಯ ಸಂಗವ್ಯಾತಕಣಯ್ಯ
ಅವಳಂಗ ಬೇರೆ ಗುಣ ಬೇರೆ! ಅಡಕೆಯ
ಹೊಂಬಾಳೆ ಬೇರೆ ಸುಳಿ ಬೇರೆ ॥
ಸೂಳೆಗೆ ಹೋದವನು ಏನಾದ ಎಂತಾದ
ಕಾಡುನಾಯಾದ ಕಪಿಯಾದ! ಆ ಮರುವ
ಸೂಳೆ ಕಾಲಿಗೆ ಕೆರವಾದ ॥"

Corn Grinding Songs

ಮೂಲ ಅಮೆರಿಕದ ನವಾಹೊ ಬುಡಕಟ್ಟು ಜನಾಂಗದ ಜನರು ಜೋಳ ಅಥವ ಗೋಧಿಯ ಕಾಳುಗಳನ್ನು ಗುಂಪಾಗಿ ಕುಳಿತು ಬೀಸುವ ವಾಡಿಕೆಯಿತ್ತು. ಹೆಣ್ಣುಮಕ್ಕಳು ಹೆಚ್ಚಾಗಿ ಮನೆಯಲ್ಲೇ ಇರುತ್ತಿದ್ದರಿಂದ ಬೀಸುವ ಕೆಲಸದ ಜವಾಬ್ದಾರಿ ಅವರದೇ ಆಗಿತ್ತು. ಪೂರ್ವಾಭಿಮುಖವಾಗಿ ಬೀಸುವ ಕಲ್ಲಿನ ಜೊತೆ ಸಾಲಿನಲ್ಲಿ ಕೂತು ಒಂದು ಕಡೆಯಿಂದ ಕಾಳನ್ನು ಬೀಸಿ, ಬುಟ್ಟಿಯಲ್ಲಿಟ್ಟು ಮತ್ತೊಂದು ಹೆಂಗಸಿಗೆ ಸಾಗಿಸುತ್ತಿದ್ದರು. ಹೀಗೆ ಕೊನೆಯಲ್ಲಿ ಕುಳಿತ ಹೆಂಗಸು ಬೀಸಿ ಮುಗಿಸುವಷ್ಟರಲ್ಲಿ ನಯವಾಗಿ ಪುಡಿಯಾದ ಹಿಟ್ಟು ದೊರಕುತ್ತಿತ್ತು. ಬೀಸುವುದು ಶ್ರಮದ ಕೆಲಸ, ತಮ್ಮ ಕೆಲಸದ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಸ್ತ್ರೀಯರು ಕುಚೋದ್ಯದ, ಹಾಸ್ಯಭರಿತವಾದ ಹಾಡುಗಳನ್ನು ಹೇಳಿಕೊಂಡು ಕೆಲಸದಲ್ಲಾಗುತ್ತಿದ್ದ ದಣಿವನ್ನು ಮರೆಯುತ್ತಿದ್ದರು.

ಅಥಬಾಸ್ಕನ್ (Athabaskan) ಮೂಲದ ಭಾಷೆಯನ್ನು ಮಾತನಾಡುತ್ತಿದ್ದ ಈ ಜನಾಂಗದವರು ಬೀಸುವಾಗ ಹಾಡುತ್ತಿದ್ದ ಕೆಲವು ಹಾಡುಗಳು ಹೀಗಿವೆ:

Athabaskan Language	*English Translation*
'Eluhoma ya ya yallanne	My beautiful mountain
Eluhoma ya ya yallanne yallanne	My beautiful mountain'
Awehlwia kwai-I	Clouds raising sitting up in the sky
Immuna kwagia lonan-eshto wiyane	Rain clouds coming one after the other
He ya ha ya he ya	He ya ha ya he ya
Liwamani iyuteapa	Yonder flower,
Awiyane Hawilana li-itla	Yonder flowers growing here

ಅಂಬಿಗರ ಹಾಡುಗಳು ಮತ್ತು Sea Shanties (ನಾವಿಕರ ಪದಗಳು)

ದೋಣಿಗಳಲ್ಲಿ, ಹಡಗುಗಳಲ್ಲಿ ಪ್ರಯಾಣ ಮಾಡುವುದು, ಸರಕುಗಳನ್ನು ಸಾಗಿಸುವುದು ಶತಮಾನಗಳಿಂದಲೂ ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರಚಲಿತವಾಗಿದೆ. ಕರ್ನಾಟಕದಲ್ಲಿ ದೋಣಿ ನಡೆಸುವವರು ಹೇಳುವ ಅಂಬಿಗರ ಹಾಡುಗಳು, ಅಮೆರಿಕೆಯ ನಾವಿಕರು ಹೇಳುತ್ತಿದ್ದ 'sea shanties' ಹಾಡುಗಳಲ್ಲಿ ಬಹಳಷ್ಟು ಸಾಮ್ಯತೆಯನ್ನು ಕಾಣಬಹುದು.

ಅಂಬಿಗರ ಹಾಡುಗಳು

ಹಿಂದಿನ ಕಾಲದಲ್ಲಿ ಹಳ್ಳ, ಹೊಳೆ, ನದಿಗಳನ್ನು ದಾಟಲು ಹರಿಗೋಲು, ನಾವು, ತೆಪ್ಪ ಮುಂತಾದವನ್ನು ಬಳಸುತ್ತಿದ್ದರು. ಈ ಕೆಳಗಿನ ಹಾಡಿನಲ್ಲಿ ಅಂಬಿಗನ ಕಾಮುಕ

ದೃಷ್ಟಿಗೆ ಬಲಿಯಾದ ಮಾನವಂತ ಹೆಣ್ಣೊಬ್ಬಳು ಯಾವ ರೀತಿ ಅವನಿಂದ ತನ್ನ ಮಾನ ಕಾಪಾಡಿಕೊಳ್ಳಲು ಬೇಡಿಕೊಳ್ಳುತ್ತಾಳೆ ಮತ್ತು ಕೊನೆಗೆ 'ಪ್ರಾಣಕ್ಕಿಂತ ಮಾನ ಮುಖ್ಯ' ಎಂದು ಯಾವ ರೀತಿ ದಾರುಣ ಅಂತ್ಯ ಕಾಣುತ್ತಾಳೆ ಎನ್ನುವುದನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ.

"ಒಡೆವ ತೆಂಗಿನಕಾಯಿ ಮೇಲೆ ಹೂವಿನ ಹಾರ
ಅದನೆಲ್ಲಾ ನಿನಗೆ ಕೊಡುವೆನೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ಮಸರ ಕಲಸಿದ ಬುತ್ತಿ ಎಸೆಳ ಲಿಂಬಿ ಹೋಳಾ
ಅದನೆಲ್ಲಾ ನಿನಗೆ ಕೊಡುವೆನೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ಎಳ್ಳ ಹಚ್ಚಿದ ರೊಟ್ಟಿ ಎಣ್ಣೆ ಬದನಿಕಾಯಿ
ಅದನೆಲ್ಲಾ ನಿನಗೆ ಕೊಡುವೆನೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ಅಕ್ಕ ತಂಗೆರು ಆರು ಮಂದಿ ನನ್ನ ಕೂಡಿ ಏಳು ಮಂದಿ
ಅವರೆಲ್ಲ ಹೊಳೆಯ ದಾಟಿದರೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ಜರದ ರುಮಾಲಿನವರು ಅವರೆಲ್ಲ ನಮ್ಮ ಅಣ್ಣಗೊಳು
ಅವರೆಲ್ಲ ಹೊಳೆಯ ದಾಟಿದರೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ಅತ್ತಿ ಮಾವರು ಹಾಕಿದಂತಾ ಆರುಸೇರು ಬಂಗಾರ
ಅದನೆಲ್ಲ ನಿನಗೆ ಕೊಡುವೆನು
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ಅಷ್ಟೂ ದಾಗಿನ ಉಚ್ಚಿಕೊಂಡು ಸೀರಿ ಸೆರಗಿಗೆ ಕಟ್ಟಿಕೊಂಡು
ಅಂತರಲಿ ನಾವ ಜಿಗಿದಾಳೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥
ನಾರಿ ಮುಳುಗಿದಲ್ಲಿ ನಲವತ್ತು ಬಾರಿ ಮುಳುಗಿ
ನಾರಿ ನಿನ ಸೆರಗ ಸಿಗಲಿಲ್ಲಾ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ ॥"

Sea Shanties (ನಾವಿಕರ ಪದಗಳು)

ಉಗಿಹಡಗುಗಳು, ಮೋಟಾರ್‌ಚಾಲಿತ ದೋಣಿ, ಹಡಗುಗಳು ಬರುವುದಕ್ಕೂ ಮುಂಚೆ ಸರಿಸುಮಾರು 18–19ನೇ ಶತಮಾನಗಳಲ್ಲಿ ಹಾಯಿದೋಣಿ, ಹಾಯಿಹಡಗುಗಳು ಹೆಚ್ಚಿನ

ಬಳಕೆಯಲ್ಲಿದ್ದವು. ಹಾಯಿದೋಣಿ, ಹಡಗುಗಳಲ್ಲಿ ನಾವಿಕರಿಗೆ ದೈಹಿಕ ಶ್ರಮದ ಕೆಲಸಗಳು ಹೆಚ್ಚು. ನಾವಿಕರ ಒಂದು ತಂಡ, ಹಗ್ಗಗಳಿಂದ ಎಳೆಯುತ್ತಾ ಹಡಗಿನ ಗತಿಯನ್ನು ತಿರುಗಿಸಿ ಲಂಗರು ಹಾಕುವುದು, ಬಂದರಿನಲ್ಲಿ ಹಡಗನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯುವುದು, ಹಾಯಿಗಳನ್ನು ಸರಿಯಾಗಿ ಕಟ್ಟಿ ನಿಯಂತ್ರಿಸುವುದು... ಹೀಗೆ ಹಲವಾರು ಕೆಲಸ ಕಾರ್ಯಗಳನ್ನು ಮಾಡುವಾಗ ಲಯಬದ್ಧವಾಗಿ ಹಾಡುಗಳನ್ನು ಹೇಳುತ್ತಾ ದಿನನಿತ್ಯದ ಕಾರ್ಯಕಲಾಪದಲ್ಲಿನ ಏಕತಾನವನ್ನು ಹೋಗಲಾಡಿಸಿಕೊಳ್ಳುತ್ತಿದ್ದರು. Sea chantiesಗಳಲ್ಲಿ ಮೂರು ವಿಧವಾದ ಹಾಡುಗಳಿವೆ. ಮನರಂಜನೆ, ಮೋಜಿಗಾಗಿ ಹೇಳುತ್ತಿದ್ದ ಹಾಡುಗಳು, ಹಾಯಿಗಳನ್ನು ಸರಿಯಾಗಿ ಕಟ್ಟಿ, ನಿಯಂತ್ರಿಸುವಾಗ ಹೇಳುವ ಹಾಡುಗಳು ಮತ್ತು ಹಗ್ಗಗಳಿಂದ ಎಳೆಯುತ್ತಾ ಹಡಗಿನ ಗತಿಯನ್ನು ತಿರುಗಿಸಿ ಲಂಗರು ಹಾಕುವಾಗ ಹೇಳುತ್ತಿದ್ದ ಹಾಡುಗಳು.

(1) ಬಂದರಿನಲ್ಲಿ ಹಡಗನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕೊಂಡೊಯ್ಯುವಾಗ ಅಥವಾ ಅತ್ಯಂತ ಕಷ್ಟಕರವಾದ ಲಂಗರಿನ ರಾಟೆಯ ಕೆಲಸಗಳಲ್ಲಿ, ರಾಟೆಯ ಮೇಲೆ ಕುಳಿತು ಒಬ್ಬ ಮೊದಲ ಸಾಲು ಹಾಡಿದರೆ ಮಿಕ್ಕವರು ರಾಟೆಯ ಎರಡೂ ಬದಿ ನಿಂತು ಸಾಮೂಹಿಕವಾಗಿ ಮತ್ತೆ ಹಾಡುತ್ತಿದ್ದ (Capstan Shanty) ಹಾಡಿನ ಒಂದೆರಡು ಸಾಲುಗಳು ಹೀಗಿವೆ.

"In Amsterdam there lived a maid,
And she was mistress of her trade,
I'll go no more a-roving with you, fair maid;
For a-roving, a-roving, since roving's been my ruin,
I'll go no more a-roving with you, fair maid"

(2) ಹಗ್ಗಗಳಿಂದ ಎಳೆಯುತ್ತಾ ಹಡಗಿನ ಗತಿಯನ್ನು ತಿರುಗಿಸಿ ಲಂಗರು ಹಾಕುವಾಗ ಹೇಳುತ್ತಿದ್ದ (short-haul shanty) 'bowline' ಹಾಡಿನ ಸಾಲುಗಳು ಹೀಗಿವೆ.

"Haul the bowline, Kitty, oh, my darling,
Haul the bowline, we'll haul and haul together,
Haul the bowline, we'll haul for better weather,
Haul the bowline, the bowline haul"

(3) ಹಾಯಿಗಳನ್ನು ಸರಿಯಾಗಿ ಕಟ್ಟಿ, ನಿಯಂತ್ರಿಸುವಾಗ ಹೇಳುವ (halyard shanties) ಹಾಡಿನ ಸಾಲುಗಳು ಹೀಗಿವೆ.

"A Yankee ship came down the river,
And how do you know she's a Yankee clipper?
The stars am bars they flew behind her,

And who do you think was the skipper of her?
Blow, boys, blow,"

ಶ್ರಮಿಕರ ಇತರೆ ಹಾಡುಗಳು

ಕರ್ನಾಟಕ ಹಾಗು ಅಮೆರಿಕೆಯ ಜನಪದದಲ್ಲಿ ಇನ್ನೂ ಅನೇಕ ಶ್ರಮಿಕರ ಹಾಡುಗಳು ಬಳಕೆಯಲ್ಲಿದ್ದವು. ಕೆಲವು ಶ್ರಮಿಕರ ಹಾಡುಗಳು ಕರ್ನಾಟಕಕ್ಕೂ, ಇನ್ನು ಕೆಲವು ಅಮೆರಿಕೆಗಷ್ಟೇ ಸೀಮಿತವಾಗಿದ್ದು ಅವುಗಳಲ್ಲಿ ಅಷ್ಟಾಗಿ ಸಾಮ್ಯತೆಗಳು ಕಂಡುಬರುವುದಿಲ್ಲ.

ಕರ್ನಾಟಕ ಜನಪದದಲ್ಲಿ ಬರುವ ಇತರೆ ಕೆಲವು ಶ್ರಮಿಕರ ಹಾಡುಗಳು

ಭತ್ತ ಕುಟ್ಟುವ ಹಾಡುಗಳು

ಗ್ರಾಮೀಣ ಭಾಗಗಳಲ್ಲಿ ಹೆಂಗಸರು ಭತ್ತ, ರಾಗಿ, ಜೋಳ ಮುಂತಾದ ಧಾನ್ಯಗಳನ್ನು ಒರಳಲ್ಲಿ ಹಾಕಿ ಒನಕೆಯಿಂದ ಕುಟ್ಟುವುದು ನಿಯತವಾದ ಕಾರ್ಯ. ಧಾನ್ಯವನ್ನು ಕುಟ್ಟುವಾಗ ದಣಿವನ್ನು ಮರೆಯಲು, ಕೆಲಸ ಸುಲಭವಾಗಿ ನಡೆಯಲು ಹಾಡುಗಳನ್ನು ಹೇಳಿಕೊಂಡು ಕುಟ್ಟುತ್ತಾರೆ. ಇಂತಹ ಹಾಡುಗಳನ್ನು ಕುಟ್ಟುವ ಹಾಡುಗಳೆಂದು ಹಾಗೂ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಒನಕೆವಾಡೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇಬ್ಬರು ಸೇರಿ ಕುಟ್ಟುವುದರಿಂದ ಒಬ್ಬರಿಗೊಬ್ಬರು ಹಿಮ್ಮೇಳ, ಮುಮ್ಮೇಳಗಳನ್ನು ಹೇಳಿಕೊಂಡು ಹಾಡುತ್ತಾರೆ. ಬೀಸುವ ಹಾಗೂ ಕುಟ್ಟುವ ಹಾಡುಗಳ ಸಂದರ್ಭ, ವಸ್ತುಗಳು ಒಂದೇ ಎನಿಸಿದರೂ ಕುಟ್ಟುವಾಗಿನ ಲಯ, ಶಬ್ದಗಳು ಬೀಸುವುದಕ್ಕಿಂತ ಭಿನ್ನ. ಹಾಗಾಗಿ ಕುಟ್ಟುವ ಕ್ರಿಯೆಯ ಲಯ, ಶಬ್ದಕ್ಕನುಗುಣವಾಗಿ ಹಾಡುಗಳನ್ನು ಹೇಳುತ್ತಾರೆ.

ಹೆಂಗಸರು ತಮ್ಮ ದೈನಂದಿನ ಬದುಕಿನ ಅನುಭವಗಳನ್ನು ಕುಟ್ಟುವಾಗ ಈ ಹಾಡಿನ ಮೂಲಕ ಹೇಳಿ ವರ್ಣಿಸಿದ್ದಾರೆ.

"ಒಂದುಬ್ಬ ಕುಟ್ಟುವಾಗ ಒಬ್ಬಣ್ಣ ಗುಣಿ ಬಂದೋ
ಒಬ್ಬಾವಿಗುಬ್ಬೇಮುರಿಯಾವೋ ಅಣ್ಣಯ್ಯ
ಎಬ್ಬೀಸು ನಿನ್ನ ಮಡದೀಯ
ಸುವ್ವಿ ಸುವ್ವಿ ಸುವ್ವಾಲೆ ॥

ಯಾರ್ಯಾರು ಇಲ್ಲೆಂದು ಎರೇರ ಬರಬ್ಯಾಡ
ತಾರ ಮಾಡೀನ ತವರೀಗಿ! ತವರವರು
ಸಾರೀನ ಸಂಗಾಟ ಬರತಾರ ॥"

ಸಂಸಾರದಲ್ಲಿ ಗಂಡ, ಹೆಂಡತಿ ಅನ್ಯೋನ್ಯವಾಗಿದ್ದು, ಜೀವನವು ಪ್ರೀತಿ, ಪ್ರೇಮ, ಪ್ರಣಯಗಳಿಂದ ತುಂಬಿರಬೇಕೆಂದು ಬಹಳ ನೈಜವಾದ, ರಸಿಕತೆಯಿಂದ ಕೂಡಿದ ಈ ಕೆಳಗಿನ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾರೆ.

"ಕರಿದ ಕರಚೀಕಾಯಿ, ಕರಿ ಅರಿವ್ಯಾಗಿ ಕಟ್ಕೊಂಡು
ಎರಿಯ ಯಮನೂರ ಕೆರಿಮ್ಯಾಲ! ಆ ಹುಡುಗಿ
ಸೆರಗ ಮರಿಮಾಡಿ ತಿನಿಸ್ಯಾಳ ॥
ಹಿತ್ತಲ ಜಗಿಬ್ಯಾಡ, ಕೈ ಮಂಡಿ ಮುರದಾವ
ಸುತ್ತಾದ ಬಾರೋ ಸುಭೇದಾರ! ನನ್ಹೊರತು
ಮತ್ಯಾರು ಇಲ್ಲ ಮನಿಯಾಗ ॥"

ಮದುವೆಯಾದ ಹೆಣ್ಣಿಗೆ ನೀತಿಬೋಧನೆಯನ್ನು ತಿಳಿಸುವ ಹಾಡಿನ ಸಾಲುಗಳು ಹೀಗಿವೆ.

"ಗಂಡಮಾರಿಯ ಹೆಣ್ಣು ಚೆಂಡುಹೂವಿನ ಬಣ್ಣ
ಕಂಡ ಕಂಡಲ್ಲಿ ನಗಬ್ಯಾಡ! ಎಲೆ ಹುಡುಗಿ!
ನಿನ್ನ ಗಂಡ ನಿನಗೆ ಮಹತರ ॥
ಮ್ಯಾಗಿನ ಓಣ್ಯಾಕಿ, ಬ್ಯಾಂಗಡಿ ಬಿಳಿಯಾಕಿ
ಜೋಗತ್ಯಾರಂತಾರೆ ನನ ಸವತಿ! ಸತ್ತರ!
ಜೋಡೆರಡು ಕಾಯಿ ಒಡದೀನಿ ॥"

ಹಚ್ಚೆಯ ಹಾಡುಗಳು

ಕರ್ನಾಟಕದ ಜನಪದರಲ್ಲಿ ಹಚ್ಚೆ ಹಾಕುವ ಸಂಪ್ರದಾಯ ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದು, ಹೆಂಗಸರು ಹೆಚ್ಚಾಗಿ ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಹಾಡುಗಳನ್ನು ಹೇಳುತ್ತಾ, ಹಚ್ಚೆ ಹಾಕಿಸಿಕೊಳ್ಳುವವರ ಗಮನವನ್ನು ಬೇರೆ ಕಡೆ ಸೆಳೆದು ಹಚ್ಚೆ ಹಾಕುವಾಗ ಆಗುವ ನೋವನ್ನು ಮರೆಸುತ್ತಿದ್ದರು. ಹಾಡುಗಳಲ್ಲಿ ತಮ್ಮ ಕುಲದೇವರನ್ನು, ದಿನನಿತ್ಯದ ಸಂಸಾರದ ಬವಣೆಗಳನ್ನು, ಜೀವನದ ಸಂಬಂಧಗಳು, ಪುರಾಣದ ಪ್ರಸಿದ್ಧ ವ್ಯಕ್ತಿಗಳ ಕುರಿತು ಹಾಡುತ್ತಿದ್ದರು.

ಹೆಣ್ಣು ಮಕ್ಕಳು ಹಚ್ಚೆ ಹಾಕಿಸಿಕೊಳ್ಳಲು ಬಂದಾಗ ಹೇಳುತ್ತಿದ್ದ ಸಾಲುಗಳು ಹೀಗಿವೆ

"ಹಚ್ಚೆ ಹೋದೇನು ಬಾರೆ ಬಿತ್ತಾರೆ ತೋಳಿನ ಮ್ಯಾಲೆ
ನಿನ್ನ ಹಚ್ಚೆಯ ಮೇಲೆ ಗಿಣಿರಾಮ!! ಬಾ!
ನಿನ್ನ ಹಚ್ಚೆಯ ಮೇಲೆ ಗಿಣಿರಾಮ–ಬರೆದೇನು
ಚುಚ್ಚುಸಿಕೊಳ್ಳೋದು ನಿಮ್ಮ ಭಾರ!! ಬಾ!!"

ಹಚ್ಚೆ ಹಾಕಿಸಿಕೊಳ್ಳಲು ಬಂದವರ ಸೌಂದರ್ಯ, ಚೆಲುವಿಕೆಗಳನ್ನು ನೋಡಿ ಅಲ್ಲೇ ಶೃಂಗಾರಮಯವಾದ ಸಾಹಿತ್ಯವನ್ನು ಕಟ್ಟಿ ಹೀಗೆ ವರ್ಣಿಸುತ್ತಿದ್ದರು.

"ಹಣಚಿ ಬಟ್ಟಿನ ಮ್ಯಾಲ ಹಚ್ಚಾಳ ಕುಂಕುಮ
ಮೆಚ್ಚ್ಯಾಳ ಬಾಳ ಚೆಲುವನ ನೋಡಯ್ಯ
ಮೆಚ್ಚಿ ಕಾಲ ಹಿಡಿದಾಳ ॥
ಹಚ್ಚಿನ ಹಚ್ಚಿಬಟ್ಟು ಉದ್ದನ ಮಲಿಕಟ್ಟು
ಸಿಗದಂತ ಸಣ್ಣ ನಡುವಿನ ಎಲೆ ಬಾಲೆ
ಮುರಕ ಮಾಡಬ್ಯಾಡ ಮರದೀತು ॥
ಹಂಚಿ ಬಟ್ಟಿನ ಕೈಯ ಒತ್ತೊತ್ತಿ ಹಿಡಿಬ್ಯಾಡೊ
ನೆತ್ತರಿಳಿದಾವು ಬೆರಳಿsಗಿ ನನ ರಾಯ
ಅತ್ತಿ ಬೈದಾಳು ಕೈಬಿಡೊ ॥
ಹಂಚಿ ಬಟ್ಟಿನ ಮ್ಯಾಲ ಹರಿದಾಡು ಕುಂಕುಮ
ಇಚ್ಚುಳ್ಳ ರಾಯ ಇದರಿsಗ ಬಂದರ
ಹೆಚ್ಚುಳ್ಳ ತವರ ಮರತಾಳ ॥"

ಅಮೆರಿಕೆಯ ಜನಪದದಲ್ಲಿ ಬರುವ ಇತರೆ ಕೆಲವು ಶ್ರಮಿಕರ ಹಾಡುಗಳು

Cowboy Songs

ಅಮೆರಿಕಾದ ಟೆಕ್ಸಾಸ್, ಅರಿಝೋನ, ಓಕ್ಲಹೋಮ ಮುಂತಾದ ಪ್ರಾಂತ್ಯಗಳಲ್ಲಿನ ಹುಲ್ಲುಗಾವಲಿನ ಪ್ರದೇಶಗಳಿಗೆ 19ನೆಯ ಶತಮಾನದ ಮಧ್ಯಭಾಗದಲ್ಲಿ ದೇಶದ ನಾನಾ ಭಾಗಗಳಿಂದ ಆಂಗ್ಲ, ಫ್ರೆಂಚ್, ಕೆಲ್ಟಿಕ್, ಸ್ಪ್ಯಾನಿಷ್, ಆಫ್ರಿಕಾ, ಮೂಲ ಹಾಗು ಮಧ್ಯ ಅಮೆರಿಕಾ ಜನಾಂಗದ ಜನರು ಪಶುಸಂಗೋಪನೆಯ ಕಾರ್ಯಗಳಾದ ದನಕರುಗಳನ್ನು ಕಾಯುವುದಕ್ಕೆ, ಕುದುರೆಗಳನ್ನು ಪೋಷಿಸುವುದಕ್ಕೆ ಬಂದು ನೆಲೆಸಿದ್ದನ್ನು ನೋಡಬಹುದು. ಇಂತಹ ವೈವಿಧ್ಯಮಯ ಸಂಸ್ಕೃತಿಯ ಜನರು ತಮ್ಮ ದಿನನಿತ್ಯದ ಕೆಲಸದಲ್ಲಿ ಬರುವ ವಿಷಯಗಳು, ಸಂದರ್ಭಗಳನ್ನು ತುಂಟತನದ– ಹಾಸ್ಯಭರಿತವಾದ ಹಾಡಿನ ಮೂಲಕ ಹೇಳುತ್ತಾ ತಮ್ಮ ದುಡಿಮೆಯ ಆಯಾಸವನ್ನು ಮರೆಯುತ್ತಿದ್ದರು. ಹಾಗೆಯೇ ದನಕರುಗಳ ಮಂದೆಯನ್ನು ಕರೆಯಲು, ಸೂಚನೆ ಕೊಡಲು ಅಲ್ಲದೇ ಹುಲ್ಲುಗಾವಲಿನಲ್ಲಿರುವ ಇತರೆ ದನಕಾಯುವವರ ಜೊತೆ ಮಾತನಾಡಲು ತಮ್ಮದೇ ಆದ ವಿಶಿಷ್ಟ ಶೈಲಿಯ ಹಾಡಿನ ಸಾಲುಗಳನ್ನು ಹೇಳುತ್ತಿದ್ದರು.

ದನಕರುಗಳನ್ನು ಓಡಿಸಿಕೊಂಡು ಹೋಗುವಾಗ ತಮ್ಮ ಹುಲ್ಲುಗಾವಲಿನ ಮನೆಯ ಬಗ್ಗೆ ಹೇಳುವ ಹಾಡಿನ ಸಾಲುಗಳು ಹೀಗಿವೆ:

**"Oh, give me a home where the buffalo roam
Where the deer and the antelope play
Where seldom is heard a discouraging word
And the skies are not cloudy all day"**

ಪಶುಸಂಗೋಪನೆಯ ಕೆಲಸ ಸುಲಭದ್ದಾಗಿರದೆ, ದಿನವಿಡೀ ಮಳೆ, ಚಳಿ, ಗಾಳಿಯನ್ನೂ ಲೆಕ್ಕಿಸದೆ ದುಡಿಯುವ ಉತ್ಸಾಹವಿಲ್ಲದ, ಕಳೆಗುಂದಿದ ಕೆಲಸವೆಂದು ತಮ್ಮ ಶೋಚನೀಯ ಪರಿಸ್ಥಿತಿಯನ್ನು ಬಹಳ ಅದ್ಭುತವಾಗಿ ವ್ಯಕ್ತಪಡಿಸಿದ್ದಾರೆ.

"You can talk about your farms and your Chinaman's charms,
You talk about your silver and your gold,
But the cowboy's life is a very dreary life,
It's a-riding through the heat and the cold"

ಗಣಿ ಕಾರ್ಮಿಕರ ಹಾಡು (Coal Miner's Songs)

ಗಣಿಗಾರಿಕೆಯ ಕೆಲಸಗಳಲ್ಲಿ ಹೆಚ್ಚಾಗಿ ಯಾಂತ್ರೀಕರಣವಾಗಿರದ, 19ನೆಯ ಶತಮಾನದ ಮೊದಲ ಭಾಗದಲ್ಲಿ ಅಮೆರಿಕದ ಗಣಿಗಾರಿಕೆಯ ಪ್ರದೇಶಗಳಾದ ಪೆನ್ಸಿಲ್ವೇನಿಯಾ, ಒಹಾಯೋ, ಇಂಡಿಯಾನ, ಇಲಿನಾಯ್, ವರ್ಜೀನಿಯ ಕೆಂಟಕಿ ಹಾಗು ಇನ್ನಿತರೆ ರಾಜ್ಯಗಳಲ್ಲಿ ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್ ದೇಶಗಳಿಂದ ವಲಸೆ ಬಂದ ಗಣಿ ಕಾರ್ಮಿಕರು ಹಾಗು ಆಫ್ರಿಕಾ ಮೂಲದ ಜೀತದಾಳುಗಳು ತಮ್ಮ ಮೂಲ ದೇಶದಲ್ಲಿ ಗಣಿಗಾರಿಕೆಯ ಕೆಲಸಗಳನ್ನು ಮಾಡುವಾಗ ಹಾಡುಗಳನ್ನು ಹೇಳುತ್ತಿದ್ದರು. ಈ ಹಾಡುಗಳಲ್ಲಿ ಅಮೆರಿಕೆಯಲ್ಲಿ ತಾವು ಇದ್ದ ಗಣಿ ಪ್ರದೇಶದ ಸ್ಥಳೀಯ ಸೊಗಡನ್ನು ಬೆರಸಿ ತಮ್ಮ ದಿನನಿತ್ಯದ ಅನುಭವಗಳನ್ನು ಹಾಡುಗಳ ಮೂಲಕ ಹೇಳುತ್ತಾ ಗಣಿಗಾರಿಕೆಯ ಕೆಲಸದ ದಣಿವನ್ನು ಮನಸ್ಸಿನಿಂದ ಹೊರದೂಡುತ್ತಿದ್ದರು.

ಗಣಿಗಳ ಭೂಗರ್ಭದಲ್ಲಿನ ಕತ್ತಲೆಯ ನೆಲಮಾಳಿಗೆಯ ಕಾರ್ಖಾನೆಯ ಗೂಡುಗಳಲ್ಲಿ ಅದಿರಿಗಾಗಿ ಗಣಿ ತೋಡುವುದು ಬಹಳ ಅಪಾಯಕರವಾದ ಹಾಗು ಕಷ್ಟದ ಕೆಲಸವೆಂದು ಒಂದು ಹಾಡಿನ ಈ ಸಾಲಿನ ಮೂಲಕ ವ್ಯಕ್ತಪಡಿಸುತ್ತಾರೆ.

"Oh, to those who know better,
And the ones that do not care,
I will take this means of telling you
What a miner has to bear"

ದಿನಪೂರ್ತಿ ಕಷ್ಟಪಟ್ಟು ದುಡಿದ ಮೇಲೆ ಸಂಜೆಯ ಹೊತ್ತು ದಣಿವಾರಿಸಿಕೊಳ್ಳಲು ಹತ್ತಿರದ ಸಲೂನ್‌ಗಳಲ್ಲಿ ಸೇರಿ ಮೋಜು ಮಾಡುತ್ತಾ ಹಾಸ್ಯಭರಿತವಾದ ಹಾಡುಗಳನ್ನು ಹೇಳುವುದೇ ಅವರಿಗೆ ಗಣಿಯಲ್ಲಿ ಆಗುತ್ತಿದ್ದ ಗಾಯಗಳಿಗೆ ಮುಲಾಮು. ಸಲೂನಿನಲ್ಲಿ ಹೇಳುತ್ತಿದ್ದ ಹಾಸ್ಯದ ಹಾಡಿನ ಸಾಲುಗಳು ಹೀಗಿವೆ:

"I went uptown last Saturday night,
Intending to get one drink.

The boys were all standing in front of the bar
Telling what they could think"

Lumberjack Song (ಕಟ್ಟಿಗೆ ಕಡಿಯುವವರ ಹಾಡು)

ಐರೋಪ್ಯ ರಾಷ್ಟ್ರಗಳು ಅಮೆರಿಕೆಯಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದ ಕಾಲಘಟ್ಟದಲ್ಲಿ ಪ್ರಾಂತ್ಯಗಳನ್ನು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕಾಡುಗಳನ್ನು ಕಡಿದು ರಸ್ತೆಗಳನ್ನು, ಕಟ್ಟಡಗಳನ್ನು, ವಸತಿ ಸೌಕರ್ಯಗಳನ್ನು ನಿರ್ಮಾಣ ಮಾಡುತ್ತಿದ್ದರು. ಕಾಡಿನಲ್ಲಿ ಕಡಿದ ಮರದ ದಿಮ್ಮಿಗಳು ಕಟ್ಟಡ, ಮನೆ, ಹಡಗು ಹಾಗು ಇತರೆ ಕಾಮಗಾರಿ ಕೆಲಸಗಳಿಗೆ ಬಳಕೆಯಾಗುತ್ತಿತ್ತು. ವಸಾಹತುಗಳು ಬೆಳೆದಂತೆಲ್ಲಾ ಕಾಮಗಾರಿಗಳು ಹೆಚ್ಚಾಗಿ ಮರದ ದಿಮ್ಮಿಯ ಕೆಲಸಗಳೇ ಒಂದು ಬೃಹತ್ ಉದ್ಯಮವಾಗಿ ಬೆಳೆದು ದೇಶದ ನಾನಾ ಭಾಗಗಳಿಂದ ಹಾಗು ಕೆಲವು ಐರೋಪ್ಯ ರಾಷ್ಟ್ರಗಳಿಂದ ನುರಿತ ಮರಗೆಲಸದ ಕಾರ್ಮಿಕರ ವಲಸೆಗೆ ಕಾರಣವಾಯಿತು. ಆರಂಭದ ದಿನಗಳಲ್ಲಿ ಅಮೆರಿಕಾದ ಈಶಾನ್ಯ ಭಾಗದಲ್ಲಿ ಮರದ ದಿಮ್ಮಿಯ ಕೆಲಸಗಳು ಹೆಚ್ಚಾಗಿ ಕಾಣಿಸಿಕೊಂಡವು. ಮರವನ್ನು ಕಡಿದು, ಸಾಗಿಸುವುದು ಬಹಳ ಕಷ್ಟದ ಕೆಲಸ. ಕೆಲಸದ ವೇಳೆಯ ದಣಿವು, ಬೇಸರಗಳನ್ನು ನಿವಾರಿಸಿಕೊಳ್ಳಲು ಹಾಡುಗಳನ್ನು ಹೇಳುತ್ತಿದ್ದರು. ಅಮೆರಿಕಾದ ಬೇರೆ ಪ್ರಾಂತ್ಯಗಳಲ್ಲಿ ಅಲ್ಲಿನ ಸ್ಥಳೀಯ ಸೊಗಡಿನೊಂದಿಗೆ ವೈವಿಧ್ಯಮಯವಾದ ಹಾಡುಗಳು ಹುಟ್ಟಿಕೊಂಡಿದ್ದವು.

ಮಿಷಿಗನ್ ಮತ್ತು ಗ್ರೇಟ್ ಲೇಕ್ಸ್ ರಾಜ್ಯಗಳ ಕಾಡಿನಲ್ಲಿ ಕೆಲಸ ಮಾಡುತ್ತಿದ್ದ ಮರಗೆಲಸದ ಕಾರ್ಮಿಕರು ಹೇಳುತ್ತಿದ್ದ ಹಾಡಿನ ಸಾಲುಗಳು ಹೀಗಿವೆ:

"Come all you sons of freedom and listen to my theme,
come all you roving lumberjacks that run the Saginaw stream.
We 'II cross the Tittabawassee where the mighty waters flow.
And we'll roam the wild woods over and once
more a-lumbering go"

ಅಮೆರಿಕೆಯ ವಾಯುವ್ಯ ಭಾಗದ ಪ್ರದೇಶಗಳಾದ ಓರೆಗಾನ್, ವಾಷಿಂಗ್ಟನ್ ರಾಜ್ಯಗಳ ಕಾಡಿನಲ್ಲಿ ಕೆಲಸ ಮಾಡುತ್ತಿದ್ದ ಮರಗೆಲಸದ ಕಾರ್ಮಿಕರು ಹೇಳುತ್ತಿದ್ದ ಹಾಡಿನ ಸಾಲುಗಳು ಹೀಗಿವೆ:

"We're the northwest unsung hero, the backbone of this land,
Where there walks a timber faller, we claim there walks a man.
The riggin' crew and the sawmill boys, they're always puttin' us down,
But they can't log 'em and they can't saw 'em if we don't cut them down"

ಚಳಿ, ಮಳೆ, ಗಾಳಿಗಳಿಗೆ ಲೆಕ್ಕಿಸದೆ, ದುರ್ಗಮ ಜಾಗಗಳಲ್ಲಿ ಕೆಲಸ ಮಾಡಲು ಹೆದರದೆ ಧೈರ್ಯದಿಂದ ಮುನ್ನುಗ್ಗುತ್ತೀವಿ ಎಂದು ಸಾರುವ ಈ ಹಾಡಿನ ಸಾಲುಗಳು ತಾವು ಮಾಡುವ ಕೆಲಸದ ಮೇಲಿನ ಪ್ರೀತಿ, ಅಭಿಮಾನವನ್ನು ವ್ಯಕ್ತಪಡಿಸುತ್ತವೆ:

"Strong winds and widow-makers, they don't bother us at all,
We don't care what the weather's like, if it's winter spring or fall.
We don't complain if the timber's small, or if the ground is steep,
Hard work don't scare us, we can lay right down beside it, and go to sleep"

African - American Work Songs (ಆಫ್ರಿಕನ್ ಅಮೇರಿಕನ್ನರ ಕೆಲಸದ ಸಮಯದಲ್ಲಿ ಹುಟ್ಟಿದ ಹಾಡುಗಳು)

ಅಮೆರಿಕೆಯಲ್ಲಿ ಐರೋಪ್ಯ ರಾಷ್ಟ್ರಗಳ ವಸಾಹತುಗಳು ಆಳುತ್ತಿದ್ದ 17–18ನೆಯ ಶತಮಾನದ ಕಾಲದಲ್ಲಿ ಆಫ್ರಿಕಾ ಮೂಲದ ಜನರು ಜೀತದಾಳುಗಳಾಗಿ ವ್ಯವಸಾಯ, ರಸ್ತೆ, ಕಟ್ಟಡ, ಮನೆ ಹಾಗು ಇತರೆ ನಗರ ಪ್ರದೇಶ ನಿರ್ಮಾಣದ ಕೆಲಸಗಳಲ್ಲಿ, ರೈಲುಗಾಡಿಗಳು ಆರಂಭವಾದ ದಿನಗಳಲ್ಲಿ ರೈಲು ಕಾಮಗಾರಿ ಕೆಲಸಗಳಿಗೆ, ಕಾಡಿನಲ್ಲಿ ಮರ ಕಡಿಯುವ ಕೆಲಸಗಳಿಗೆ ನೇಮಕಗೊಳ್ಳುತ್ತಿದ್ದರು. ಜೀತಪದ್ಧತಿಗೆ ಬಹಳಷ್ಟು ವಿರೋಧ ವ್ಯಕ್ತಪಡಿಸುತ್ತಿದ್ದ ಆ ಜನರು ಕೆಲಸದ ವೇಳೆ ಹಾಡುವ ಹಾಡುಗಳಲ್ಲಿ ಜೀತಪದ್ಧತಿಗೆ ಪ್ರತಿರೋಧ, ಬಂಡಾಯ, ಬೇಸರವನ್ನು ಸೂಚಿಸುವ ಸಾಲುಗಳೇ ಹೆಚ್ಚು ಕಂಡುಬರುತ್ತಿತ್ತು. ಅವರು ಮೂಲ ಆಫ್ರಿಕಾದ ಸಂಸ್ಕೃತಿಯಲ್ಲಿ ಆಚರಿಸಿಕೊಂಡು ಬರುತ್ತಿದ್ದ ಪದ್ಧತಿಗಳನ್ನು, ಹಾಡುಗಳನ್ನು ಅಮೆರಿಕಾಕ್ಕೆ ಜೀತದಾಳುಗಳಾಗಿ ಬಂದ ಮೇಲೂ ತಮ್ಮ ಸಮುದಾಯದ ದಿನನಿತ್ಯದ ಬದುಕಿನಲ್ಲಿ ರೂಢಿಸಿಕೊಂಡಿದ್ದರು. ಜೀತಪದ್ಧತಿಯು ನಡೆಯುತ್ತಿದ್ದ ಕಾಲದಲ್ಲಿ ಆಫ್ರಿಕಾ ಮೂಲದ ಜೀತದಾಳುಗಳಿಗೆ ಓದಲು ಮತ್ತು ಬರೆಯಲು ನಿಷೇಧ ಹೇರಲಾಗಿತ್ತು. ಹಾಗಾಗಿ ತಾವುಗಳು ಪಡುತ್ತಿದ್ದ ಕಷ್ಟಗಳು, ಬಂಡಾಯಗಳನ್ನು ಹಾಡಿನ ಮೂಲಕ ತೋಡಿಕೊಂಡರೆ ತಮ್ಮ ಜನಾಂಗದ ಮುಂದಿನ ಪೀಳಿಗೆಯ ಜನರಿಗೆ ತಾವು ಪಟ್ಟ ಕಷ್ಟಗಳನ್ನು, ಕಹಿ ಅನುಭವಗಳನ್ನು ದಾಖಲಿಸಲು ಈ ಹಾಡುಗಳು ಉತ್ತಮ ಮಾಧ್ಯಮವಾಗುವುದೆಂದು ಮನಗಂಡಿದ್ದರು. ಸುರಂಗ ರೈಲು ಕಾಮಗಾರಿ ಕಾರ್ಯದಲ್ಲಿ ತೊಡಗಿರುವಾಗ ಜೀತದಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಸಾಂಕೇತಿಕವಾಗಿ ಈ ಕೆಳಗಿನ ಹಾಡಿನ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾರೆ:

"Follow the drinkin' gourd
Follow the drinkin' gourd
For the old man is comin' just to carry you to freedom
Follow the drinkin' gourd"

ಜೀತದ ವಿರುದ್ಧ ಬಂಡಾಯ ಏಳುತ್ತಿದ್ದ ಅಥವಾ ಜೀತದಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಯೋಚಿಸುತ್ತಿದ್ದ ಜೀತದಾಳುಗಳನ್ನು ಬಂಧನದಲ್ಲಿಟ್ಟು ಮರ ಕಡಿಯುವ ಕೆಲಸಕ್ಕೋ, ಕೃಷಿಭೂಮಿಯಲ್ಲಿ ಕೆಲಸ ಮಾಡುವುದಕ್ಕೋ ನೇಮಕ ಮಾಡುತ್ತಿದ್ದರು. ಈ ರೀತಿಯ ಬಂಧನದಲ್ಲಿದ್ದಾಗ ಹೇಳುತ್ತಿದ್ದ ಕೆಲವು ಹಾಡುಗಳ ಸಾಲುಗಳು ಹೀಗಿವೆ:

"Let your hammer ring!
A well butt-cut crackin'
Let your hammer ring!
You better watch- a my timber
Let your hammer ring!"

ಕೃಷಿಭೂಮಿಯಲ್ಲಿ ಸುಗ್ಗಿಯ ಕೆಲಸ ಮಾಡುವಾಗ ತಾವು ಯಾವ ಬೆಳೆಗಳನ್ನು ಬೆಳೆದು ಕಟಾವು ಮಾಡುತ್ತೇವೆಂದು, ಆ ಶ್ರಮದ ಕೆಲಸದಿಂದ ಬೇಸರವಾಗಿ ಯಜಮಾನನನ್ನು ಸಂಬೋಧಿಸುತ್ತಾ ಈ ಬಂಧನದಿಂದ ಮುಕ್ತಿ ಯಾವಾಗ ಸಿಗುವುದೆಂಬ ಮನಸ್ಸಿನ ನೋವನ್ನು ಈ ಕೆಳಗಿನ ಸಾಲುಗಳಲ್ಲಿ ವ್ಯಕ್ತಪಡಿಸಿದ್ದಾರೆ:

"I've been working all day long
Pickin' this stuff called cotton and corn
We raise cotton, cane and a-corn
'Tater and tomatoes and a-that ain't all
Back is weak and I done got tired
Yeah, yeah, yeah, yeah"

ಪ್ರಸ್ತುತ ಜನಪದ ಸಾಹಿತ್ಯದ ಶ್ರಮಿಕರ ಹಾಡುಗಳ ಅಧ್ಯಯನದಲ್ಲಿ ಕರ್ನಾಟಕ ರಾಜ್ಯ ಹಾಗೂ ಅಮೆರಿಕದಲ್ಲಿ ರೂಢಿಯಲ್ಲಿದ್ದ, ಈಗಲೂ ರೂಢಿಯಲ್ಲಿರುವ ಶ್ರಮಿಕರ ಹಾಡುಗಳನ್ನು ಅವುಗಳು ಹಾಡುವ ಸಂದರ್ಭ, ವಸ್ತು ವಿಶೇಷತೆ, ಹಾಡಿನ ಸಾಹಿತ್ಯದ ಮಹತ್ವಗಳು ಹೀಗೆ ನಾನಾ ರೀತಿಯ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ, ವಿವಿಧ ಪ್ರಕಾರಗಳ ಶ್ರಮಿಕರ ಹಾಡುಗಳಲ್ಲಿ ಕರ್ನಾಟಕ ರಾಜ್ಯದ ಹಾಗೂ ಅಮೆರಿಕದ ಜನಪದರ ಬಳಕೆಯಲ್ಲಿ ಹಲವಾರು ಸಾಮ್ಯತೆಗಳು ಕಂಡುಬರುತ್ತವೆ. ಪ್ರತಿಯೊಂದು ಸಂಸ್ಕೃತಿಗೂ, ಸಮಾಜಕ್ಕೂ ಅದರದೇ ಆದ ನಂಬಿಕೆಗಳು, ಸಂಪ್ರದಾಯಗಳು, ಆಚಾರ-ವಿಚಾರಗಳಿವೆ. ಜನಪದರ ದೈನಂದಿನ ಚಟುವಟಿಕೆಗಳಲ್ಲಿ ಬೆರೆತುಹೋಗಿದ್ದ ಜನಪದ ಸಾಹಿತ್ಯವು ಕಾಲಕ್ರಮೇಣ ಕೈಗಾರಿಕೀಕರಣ, ಶ್ರಮದ ಕೆಲಸಗಳ ಯಾಂತ್ರೀಕರಣ, ಸಾಮಾಜಿಕ, ಹವಾಮಾನ, ಪರಿಸರದ ವೈಪರೀತ್ಯಗಳ ಕಾರಣಗಳಿಂದ ನಗರ ಪ್ರದೇಶಗಳಿಗೆ ವಲಸೆ ಹೀಗೆ ಹತ್ತು ಹಲವಾರು ಕಾರಣಗಳಿಂದ ಶ್ರಮಿಕರ ಹಾಡುಗಳು ಈಗಿನ ಕಾಲಘಟ್ಟಕ್ಕೆ ಪ್ರಸ್ತುತವೆನಿಸದೆ ಬಹಳಷ್ಟು ಹಾಡುಗಳು ಬಳಕೆಯಲ್ಲಿಲ್ಲ. ಮೌಖಿಕವಾಗಿ ಹರಿದು ಬಂದ ಇಂತಹ ಸಾಹಿತ್ಯವನ್ನು

ಕಾಪಾಡಿಕೊಳ್ಳಲು ಜಗತ್ತಿನಾದ್ಯಂತ ಅನೇಕ ಜಾನಪದ ಸಂಶೋಧಕರು, ಸಾಹಿತಿಗಳು, ಸಂಘ-ಸಂಸ್ಥೆಗಳು, ಸರ್ಕಾರಗಳ ಅಂಗ ಸಂಸ್ಥೆಗಳು, ಅಧ್ಯಯನ-ಸಂಶೋಧನೆಗಳನ್ನು ಮಾಡಿ, ಜನಪದ ಕ್ರಿಯಾತ್ಮಕ ಹಾಡುಗಳಲ್ಲಿನ ಮೌಲ್ಯಗಳನ್ನು ಶೋಧಿಸಿ, ಮೌಖಿಕ ಸಾಹಿತ್ಯವನ್ನು ಇತರೆ ಮಾಧ್ಯಮದಲ್ಲಿ ಸಂಗ್ರಹಿಸಿ ಸಂರಕ್ಷಿಸಿದ್ದಾರೆ. ಇದು ಮುಂದಿನ ಪೀಳಿಗೆಗಳಿಗೆ ಆಯಾ ಪ್ರಾಂತ್ಯಗಳ ಜನಪದ ಸಂಸ್ಕೃತಿ, ಜನಪದ ಸಾಹಿತ್ಯದ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ ಹೆಚ್ಚಿನ ಅಧ್ಯಯನಗಳಿಗೆ ಅನುಕೂಲವಾಗುತ್ತವೆಯೆಂಬ ಬಲವಾದ ನಂಬಿಕೆ ಮತ್ತು ಭರವಸೆಯನ್ನು ಕೊಟ್ಟಿದೆ.

ಆಧಾರ

1. ಕರ್ನಾಟಕ ಜಾನಪದ ಸಮೀಕ್ಷೆ – ಜೀ. ಶಂ. ಪರಮಶಿವಯ್ಯ.
2. ಜನಪದ ಸಾಹಿತ್ಯ ಸಮೀಕ್ಷೆ – ಜೀ. ಶಂ. ಪರಮಶಿವಯ್ಯ.
3. ಕವಿ ಕಾವ್ಯ ಪರಂಪರೆ – ಜನಪದ ಸಾಹಿತ್ಯ – ಸಂ. ವಿ. ಸೀತಾರಾಮಯ್ಯ.
4. ಜನಪದ ಸಾಹಿತ್ಯ – ಸಂ. ವಿನೀತ ರಾಮಚಂದ್ರರಾಯ.
5. ಜಾನಪದ ಸಾಹಿತ್ಯ ದರ್ಶನ – ನಿಂಗಣ್ಣ ಸಣ್ಣಕ್ಕಿ.
6. ಕನ್ನಡ ಜಾನಪದ ಸಾಹಿತ್ಯ – ಡಾ. ಬೆಟಗೇರಿ ಕೃಷ್ಣಶರ್ಮ.
7. 19th Century Sea Shanties: from the Capstan to the Classroom - Sharon Marie Risko Cleveland State University.
8. Songs of the Michigan Lumberjacks - Edited by E. C. Beck, Library of Congress, Washington.
9. Railroad Songs and Ballads - Edited by Archie Green, Library of Congress Washington.
10. Cowboy songs, Ballads - Edited by Duncan Emrich, Library of Congress Washington.
11. American Sea Son.gs and Shanties, Edited by Duncan Emrich, Library of Congress, Washington.
12. Songs and Ballads of the Bituminous Miners – Edited by George Korson, Library of Congress, Washington.
13. Navaho Corn Grinding Songs – Charlotte I. Johnson, Society for Ethnomusicology .

❑

33

ನನ್ನ ತಲೆಯನ್ನು ಹಿಂದಿರುಗಿಸು

ನಿವೇದಿತಾ ಎನ್. ಕಶ್ಯಪ್

*

ಹೋವಾಕ್ವಿನ್ ಮುರಿಯೆಟ್ಟ, ಅವನ ಅಣ್ಣ ಕಾರ್ಲೋಸ್ ಮುರಿಯೆಟ್ಟ ಹಾಗು ಹೆಂಡತಿ ರೋಸಿಟ ಜೊತೆ ಉತ್ತರ ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದರು. ಮೆಕ್ಸಿಕೋದಿಂದ ವಲಸೆ ಬಂದ ಈ ಮೂವರು ಒಂದು ಚಿಕ್ಕ ಫಲವತ್ತಾದ ಹೊಲದಲ್ಲಿ ಕೃಷಿ ಮಾಡಿಕೊಂಡಿದ್ದರಲ್ಲದೆ, ಹತ್ತಿರದ 'ಗಲ್ಲುಪಟ್ಟಣ'ದಲ್ಲಿ ಅವರಿಗೆ ಸೇರಬೇಕಾದ ಚಿನ್ನದ ಮೇಲೆ ತಮ್ಮ ಹಕ್ಕನ್ನು ಯಾಚಿಸಲು ಹೋಗುತ್ತಿದ್ದರು. ಆದರೆ ಅಲ್ಲಿದ್ದ ಸ್ಥಳೀಯ ಗಣಿಗಾರರು ಕಾನೂನಿನ ಪ್ರಕಾರ ಮುರಿಯೆಟ್ಟ ಸಹೋದರರನ್ನು ವಲಸೆಗಾರರು ಎಂಬ ಕಾರಣಕ್ಕೆ ಅವರಿಗೆ ಅಲ್ಲಿ ಗಣಿಗಾರಿಕೆ ಮಾಡುವ ಹಾಗು ಚಿನ್ನದ ಮೇಲೆ ಹಕ್ಕನ್ನು ಯಾಚಿಸುವ ಅಧಿಕಾರವಿಲ್ಲವೆಂದು ಅಲ್ಲಿಂದ ಅವರನ್ನು ಓಡಿಸಲು ಯತ್ನಿಸಿದ್ದರು. ಮುರಿಯೆಟ್ಟ ಸಹೋದರರು ಇದನ್ನು ಖಂಡಿಸಿ, ಸ್ಥಳೀಯರ ಬೆದರಿಕೆಗಳನ್ನು ಕಡೆಗಣಿಸಿ, ತಮ್ಮ ಕೃಷಿ ಹಾಗೂ ಗಣಿ ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಸುಖವಾಗಿ ಜೀವನ ಸಾಗಿಸುತ್ತಿದ್ದರು. (ಗಲ್ಲುಪಟ್ಟಣ; ಹ್ಯಾಂಗ್ ಟೌನ್ – ಹಿಂದಿನ ಕಾಲದಲ್ಲಿ ತಪ್ಪು ಮಾಡಿದವರನ್ನು, ಕಾನೂನಿನ ಪ್ರಕಾರ ನಡೆದುಕೊಳ್ಳದಿದ್ದ ಜನರನ್ನು ಅಲ್ಲಿ ಗಲ್ಲಿಗೇರಿಸುತ್ತಿದ್ದರು. ಈ ಗಲ್ಲನ್ನು ಪಟ್ಟಣದ ಮಧ್ಯಭಾಗದಲ್ಲಿ ಸ್ಥಾಪಿಸುತ್ತಿದ್ದರು. ಇಂತಹ ಪಟ್ಟಣಕ್ಕೆ ಹ್ಯಾಂಗ್ ಟೌನ್ ಎಂದು ಕರೆಯುತ್ತಿದ್ದರು)

ಅಮೆರಿಕಾದ ಕಾನೂನನ್ನು ಖಡಾಖಂಡಿತವಾಗಿ ಉಲ್ಲಂಘಿಸಿದರೆಂಬ ಕಾರಣಕ್ಕೆ ಮುರಿಯೆಟ್ಟ ಸಹೋದರರಿಂದ ಬೇಸತ್ತಿದ್ದ ಸ್ಥಳೀಯರು, ಒಂದು ರಾತ್ರಿ ಕುಡಿದ ಮತ್ತಿನಲ್ಲಿ ದಂಗೆ ಎಬ್ಬಿಸಿ, ಆ ಕುಟುಂಬದ ಮೇಲೆ ದಾಳಿ ಮಾಡಿ, ಹೋವಾಕ್ವಿನ್ನನ್ನು ಎಳೆದು ತಂದು ಒಂದು ಕಂಬಕ್ಕೆ ಕಟ್ಟಿ, ಕಾರ್ಲೋಸ್ ಮುರಿಯಟ್ಟನನ್ನು ಗುಂಡಿಟ್ಟು ಕೊಂದು ಅವನ ದೇಹವನ್ನು ಗಲ್ಲಿಗೇರಿಸಿದರು. ರೋಸಿಟಾಳನ್ನು ಸಾಮೂಹಿಕವಾಗಿ ಅತ್ಯಾಚಾರಕ್ಕೆ ಕೆಡವಿ

ಅಮಾನುಷವಾಗಿ ಹತ್ಯೆ ಮಾಡಿದರು. ಈ ದುಷ್ಕರ್ಮವೆಲ್ಲವೂ ಹೋವಾಕ್ವಿನ್‌ನ ಕಣ್ಣ ಮುಂದೆ ನಡೆದರೂ ತಾನು ಅಸಹಾಯಕನಾಗಿ, ಏನೂ ಮಾಡದ ಸ್ಥಿತಿಯಲ್ಲಿ ಸಿಲುಕಿ, ಮರುಗಿ ವಿಲವಿಲ ಒದ್ದಾಡಿದ. ಹೋವಾಕ್ವಿನ್ ಎಷ್ಟು ಚೀರಿದರೂ, ಹಿಂತಿರುಗಿ ಹೋರಾಡಿದರೂ ತನ್ನ ಹೆಂಡತಿ ಹಾಗು ಅಣ್ಣನನ್ನು ಅವರು ಉಳಿಸಲಿಲ್ಲ. ಆನಂತರ ಹೋವಾಕ್ವಿನ್‌ನ ಚರ್ಮ ಸುಲಿದು, ರಕ್ತ ಕಾರಿಸಿ, ಮೂರ್ಛೆ ಹೋಗುವತನಕ ಚಾವಟಿಯಿಂದ ಬರ್ಬರವಾಗಿ ಹೊಡೆದು, ಅಲ್ಲೇ ಸಾಯಲು ಬಿಟ್ಟು ಹೊರಟುಹೋದರು. ಹೋವಾಕ್ವಿನ್ ಮುರಿಯೆಟ್ಟ ಈ ಘೋರ ಹಿಂಸೆಯಿಂದ ತತ್ತರಿಸಿ ಅಲ್ಲೇ ಧೊಪ್ಪನೆ ಕುಸಿದು ಬಿಟ್ಟ. ನಡೆದ ಸುದ್ದಿಯನ್ನು ಕೇಳಿ, ಬೆಳಗಿನ ಜಾವ ಕೆಲವು ಮೃದು ಹೃದಯದ ಸ್ಥಳೀಯರು, ಮುರಿಯೆಟ್ಟನ ಮನೆಗೆ ಸಹಾಯ ಮಾಡಲು ಧಾವಿಸಿದರು. ಅಷ್ಟರಲ್ಲಿ ಹೋವಾಕ್ವಿನ್ ಹೇಗೋ ಅಲ್ಲಿಂದ ಪರಾರಿಯಾಗಿಬಿಟ್ಟಿದ್ದ!

ಇದಾದ ನಂತರ ಕೆಲವು ತಿಂಗಳು ಆ 'ಗಲ್ಲುಪಟ್ಟಣ'ದಲ್ಲಿ ಜೀವನ ಮಾಮೂಲಿನಂತೆ ಸಾಗಿಕೊಂಡು ಹೋಗುತ್ತಿತ್ತು. ಒಂದು ದಿನ, ಒಬ್ಬ ಉದ್ದ ಕೂದಲು, ಕಪ್ಪು ಗಡ್ಡ ಹೊಂದಿದ್ದ, ಒರಟನಂತೆ ಕಾಣುವ ಅಪರಿಚಿತ ವ್ಯಕ್ತಿಯೊಬ್ಬ ಆ ಊರಿನಲ್ಲಿ ಜೂಜುಮನೆಯೊಂದನ್ನು ಹುಟ್ಟು ಹಾಕಿದ. ಈ ಅಪರಿಚಿತ ಬಂದ ಕೆಲವೇ ದಿನಗಳಲ್ಲಿ ಒಬ್ಬೊಬ್ಬರೇ ಗಣಿಗಾರರು ಆ ಊರಿನಿಂದ ಕಾಣೆಯಾಗತೊಡಗಿದ್ದರು. ಅವರ ಮೃತ ದೇಹಗಳು ಊರಿನ ಅಪರಿಚಿತ ಜಾಗಗಳಲ್ಲಿ ಕಾಣಿಸಿಕೊಳ್ಳತೊಡಗಿದ್ದವು. ಆಶ್ಚರ್ಯವೆಂಬಂತೆ, ಮೃತರ ಮುಖವನ್ನು ವಿಕಾರಗೊಳಿಸಿ, ಕಿವಿಗಳನ್ನು ಕತ್ತರಿಸಿ ಹಾಕಲಾಗಿತ್ತು. ಈ ಘಟನೆಯಿಂದ ಊರಿನ ಜನರು ಭಯಭೀತರಾಗಿದ್ದರಲ್ಲದೆ, ಇಲ್ಲಿನ ಪರಿಸ್ಥಿತಿಯು ಒಂದು ಗಂಭೀರ ಕುತೂಹಲವನ್ನು ಕೆರಳಿಸಿತ್ತು. ಊರಿನ ಕೆಲವು ಜಾಣ ಸ್ಥಳೀಯರ ಗಮನಕ್ಕೆ ಬಂದಿದ್ದೇನೆಂದರೆ ಮೃತರೆಲ್ಲರೂ ಕಾರ್ಲೋಸ್ ಮುರಿಯೆಟ್ಟ ಹಾಗು ರೋಸಿಟ ಮುರಿಯೆಟ್ಟರ ಅಮಾನುಷ, ಅಕ್ರಮ ಕೊಲೆಯಲ್ಲಿ ಭಾಗಿಯಾದವರೆಂದು. ಆ ಕರಾಳ ರಾತ್ರಿಯ ಭೀಕರ ಕೃತ್ಯದಲ್ಲಿ ಪಾಲ್ಗೊಂಡಿದ್ದ ಮೂವತ್ತೊಂದು ಜನ ಗಣಿಗಾರರಲ್ಲಿ ಈಗ ಹದಿನಾಲ್ಕು ಜನ ಸಾವನ್ನಪ್ಪಿದ್ದರು. ಈ ಸೂಕ್ಷ್ಮ ವಿಚಾರ ಊರಿನ ಎಲ್ಲರ ಗಮನಕ್ಕೆ ಬಂದ ಕೂಡಲೇ ಒಂದೇ ರಾತ್ರಿಯಲ್ಲಿ ಮಿಕ್ಕ ಹದಿನೇಳು ಜನ ಕೊಲೆಗಾರರು ಗಾಳಿಯಲ್ಲಿ ಮಾಯವಾಗಿಬಿಟ್ಟರು. ಆದರೆ, ಯಾರೋ ಒಬ್ಬೊಬ್ಬರನ್ನೇ ಹುಡುಕಿ, ಬೇಟೆಯಾಡಿ, ಅವರನ್ನು ಕೊಂದು, ಅವರ ಮುಖವನ್ನು ವಿಕಾರಗೊಳಿಸಿ, ಅವರ ಕಿವಿಗಳನ್ನು ಕತ್ತರಿಸಿ, ಅವರ ದೇಹವನ್ನು ಹಿಂದಿನಂತೆಯೇ ಅನಾಥಗೊಳಿಸುತ್ತಿದ್ದರು.

ಮುಕ್ತಾಯವೋ ಎಂಬಂತೆ, ಹಿಂದೆ ಮುರಿಯೆಟ್ಟ ಸಹೋದರರ ಜೊತೆ ಕೆಲಸ ಮಾಡುತ್ತಿದ್ದ ಒಬ್ಬ ಗಣಿಗಾರ, ಹೋವಾಕ್ವಿನ್ ಈಗಿರುವ 'ಗಲ್ಲುಪಟ್ಟಣ'ಕ್ಕೆ ಬಂದು ಅವನನ್ನು ಗುರುತಿಸಿ ಅವನ ಅಸ್ತಿತ್ವವನ್ನು ಬಯಲು ಮಾಡಿಬಿಟ್ಟನು. ಈ ಗುಟ್ಟು ರಟ್ಟಾದೊಡನೆ ಮೆಕ್ಸಿಕೋ ವಲಸೆಗಾರ ಹೋವಾಕ್ವಿನ್ ಆ 'ಗಲ್ಲುಪಟ್ಟಣ'ವನ್ನು ಬಿಟ್ಟು ಕಾಡಿನಲ್ಲಿ ಸೇರಿಕೊಂಡನು. ತನ್ನ ಹೆಂಡತಿ ಹಾಗು ಅಣ್ಣನನ್ನು ಕೊಂದ ಕೊಲೆಗಾರರ ಕೊಳೆತ

ಕಿವಿಗಳು ಈಗ ಹೋವಾಕ್ವಿನ್‌ನ ಕುದುರೆಯ ತಡಿಗೆ ಹಾರವಾಗಿ ವಿಜೃಂಭಿಸುತ್ತಿತ್ತು. ಇದು ಅಂಗುಲಿಮಾಲನ ಬೆರಳುಗಳ ಸರಮಾಲೆಯ ಹಾಗೆ ಅವನ ಗುರುತೂ ಆಯಿತು. ಸುತ್ತೇಳು ಪಟ್ಟಣಗಳಲ್ಲಿ ಇವನಂತೆಯೇ ರೊಚ್ಚಿಗೆದ್ದ ಪ್ರಕ್ಷುಬ್ಧ ಮೆಕ್ಸಿಕೋ ವಲಸೆಗಾರರನ್ನು ಒಗ್ಗೂಡಿಸಿ, ಯಾರಿಗೂ ಪತ್ತೆಯಾಗದಂತೆ ದಾಂಡಿಗ ಗುಂಪೊಂದನ್ನು ಕಟ್ಟಿದನು. ಕಾಲಕ್ರಮೇಣ ಹೋವಾಕ್ವಿನ್ ನಾಯಕತ್ವದಲ್ಲಿ ಈ ಗುಂಪು ಬೆಳೆದು ಬಲಿಷ್ಠವಾಯಿತು. ದಷ್ಟಪುಷ್ಟ ಕಪ್ಪು ಕುದುರೆಗಳನ್ನೇರಿ ಸುತ್ತುಮುತ್ತಲಿನ ಎಲ್ಲಾ ಹಳ್ಳಿ ಪಟ್ಟಣಗಳಲ್ಲಿ ಅಮೆರಿಕನ್ ಸ್ಥಳೀಯರ ಬಸ್ತಿಗಳಲ್ಲಿದ್ದ ಚಿನ್ನವನ್ನು ದರೋಡೆ ಮಾಡಿ ದೋಚಲಾರಂಭಿಸಿದರು. ಮುಂಬರುವ ದಿನಗಳಲ್ಲಿ ಹೋವಾಕ್ವಿನ್ ತನ್ನ ದರೋಡೆಕೋರ ಗುಂಪಿನೊಂದಿಗೆ ಸ್ಥಳೀಯ ಅಮೆರಿಕನ್ನರಿಂದ ಲಕ್ಷಗಟ್ಟಲೆ ಬೆಲೆಬಾಳುವಷ್ಟು ಚಿನ್ನವನ್ನು ನಿರ್ದಾಕ್ಷಿಣ್ಯವಾಗಿ ದೋಚುತ್ತಿದ್ದ. ಇಷ್ಟಲ್ಲದೆ ಇವರ ಗುಂಪು ಬಲಿಷ್ಠ ಕುದುರೆಗಳನ್ನೂ ಕದ್ದು ವ್ಯಾಪಾರ ಮಾಡುತ್ತಿತ್ತು. ಬೇರೆಲ್ಲರಿಗೂ ಹೋವಾಕ್ವಿನ್ ಮುರಿಯೆಟ್ಟ ನಿರ್ದಯಿಯಾಗಿ ಕಂಡಿದ್ದರೂ ತನ್ನ ಮೆಕ್ಸಿಕನ್ ಸಹೋದರರಿಗೆ ಅವನು 'ರಾಬಿನ್ ಹುಡ್' ಆಗಿ ಮೆರೆದನು. ಕಷ್ಟದಲ್ಲಿದ್ದ ಮೆಕ್ಸಿಕನ್ ಸಹೋದರರ ನೆರವಿಗೆ ಹೋವಾಕ್ವಿನ್ ಮುರಿಯೆಟ್ಟ ಸದಾ ನಿಲ್ಲುತ್ತಿದ್ದ. ಅವನು ಸಂಪಾದಿಸಿದ ಹಣವನ್ನೆಲ್ಲಾ ಧಾರಾಳವಾಗಿ ಎಲ್ಲರಿಗೂ ದಾನ ಮಾಡಿಬಿಡುತ್ತಿದ್ದ ಹಾಗು ತುಳಿತಕ್ಕೊಳಗಾದ ದೀನದಲಿತರ ಪರ ಹೋರಾಡುತ್ತಿದ್ದ. ಈ ಎಲ್ಲಾ ಕೃತ್ಯಗಳಿಂದ ಹೋವಾಕ್ವಿನ್‌ಗೆ ಮೊರೆ ಹೋಗಿದ್ದ ತನ್ನ ಮೆಕ್ಸಿಕನ್ ಸಹೋದರ-ಸಹೋದರಿಯರಿಗೆ ಅವನು ದೇವತಾ ಮನುಷ್ಯನಾಗಿಬಿಟ್ಟಿದ್ದ. ತನ್ನ ವರ್ಗದ ಜನರ ಪ್ರೀತಿ, ಆಶೀರ್ವಾದ ಹಾಗೂ ಪ್ರಶಂಸೆಗೆ ಹೋವಾಕ್ವಿನ್ ಮುರಿಯೆಟ್ಟ ಪಾತ್ರನಾದ. ಇವರು ಪ್ರತ್ಯುಪಕಾರವಾಗಿ ಹೋವಾಕ್ವಿನನಿಗೆ ಕಾನೂನಿನಿಂದ ತಪ್ಪಿಸಿಕೊಳ್ಳಲು ಬೇಕಾದ ಎಲ್ಲಾ ಸಹಾಯವನ್ನು ಮಾಡುತ್ತಿದ್ದರು.

ಹೋವಾಕ್ವಿನ್ ಗುಂಪಿನವರು ಗಣಿಪ್ರದೇಶದಲ್ಲಿ ಹಾಗೂ ಗಣಿಗೆ ಪ್ರಯಾಣ ಮಾಡುವ ದಾರಿಯಲ್ಲಿ ಓಡಾಡಲಾರದಷ್ಟು ಭೀತಿಯನ್ನು ಜನರಲ್ಲಿ ಹುಟ್ಟಿಸಿ, ಯಾರೂ ಗಣಿಗಾರಿಕೆ ಮಾಡಲಸಾಧ್ಯವಾದ ಸ್ಥಿತಿಯನ್ನು ಸೃಷ್ಟಿಸಿದ್ದರು. ಇವರು ಕುದುರೆ ವ್ಯಾಪಾರದಲ್ಲಿ ತೊಡಗಿಸದಿದ್ದಾಗ ಅವನ ಗ್ಯಾಂಗ್‌ನ ದಾಂಡಿಗರು ವಸಾಹತುಗಾರರನ್ನು, ವಿಶೇಷವಾಗಿ ಕ್ಯಾಲಿಫೋರ್ನಿಯಾ ಚಿನ್ನದ ಗಣಿಯಿಂದ ಹಿಂದಿರುಗುತ್ತಿದ್ದವರನ್ನು ದರೋಡೆ ಮಾಡಿ ಕೊಂದರು. ಇದು ರಾಜ್ಯಕ್ಕೆ ಒಂದು ಗಂಭೀರ ಸಮಸ್ಯೆಯಾಗಿತ್ತು. ಈ ಸಂಗತಿಯು ಕ್ಯಾಲಿಫೋರ್ನಿಯಾ ಗವರ್ನರ್ ಜಾನ್ ಬಿಗ್ಲರ್ ಗಮನಕ್ಕೆ ಬಂದು, ಸಮಸ್ಯೆಯನ್ನು ಬಗೆಹರಿಸಲು ಒಡನೆ ಸಮರ್ಥ ಅಧಿಕಾರಿಗಳನ್ನು ನೇಮಿಸಿ, ಹೋವಾಕ್ವಿನ್ ಮುರಿಯೆಟ್ಟನನ್ನು ಕೊಲ್ಲುವ ಆದೇಶವನ್ನು ಹೊರಡಿಸಿದ. ರಾಜ್ಯವು ಕ್ಯಾಲಿಫೋರ್ನಿಯಾ ರೇಂಜರ್ಸ್‌ಗೆ ತಿಂಗಳಿಗೆ $150 ಪಾವತಿಸಿತು ಮತ್ತು ಅವರು ಬಯಸಿದ ದಾಂಡಿಗನನ್ನು ಸೆರೆಹಿಡಿದರೆ ಅವರಿಗೆ $1000 ಗವರ್ನರ್ ಬಹುಮಾನವನ್ನು ಭರವಸೆ ನೀಡಿದರು. ಕ್ಯಾಪ್ಟನ್ ಹ್ಯಾರಿ ಲವ್ ನೇತೃತ್ವದಲ್ಲಿ ಸೇನಾ ಪಡೆಯೊಂದು ತಯಾರಾಯಿತು. ಜುಲೈ 25, 1853ರಂದು ಕ್ಯಾಲಿಫೋರ್ನಿಯಾದ ಕೋಲಿಂಗಾ ಬಳಿಯ ಡಯಾಬ್ಲೊ ಶ್ರೇಣಿಯ ಅಂಚಿನಲ್ಲಿರುವ

ಆರ್ರೊಯೊ ಡಿ ಕ್ಯಾಂಟುವಾ ಬಳಿ ರೇಂಜರ್ಸ್‌ನ ಒಂದು ಶಸ್ತ್ರಸಜ್ಜಿತ ಪಡೆಯು ಹೋವಾಕ್ವಿನ್ ಮುರಿಯೆಟ್ಟ ಹಾಗು ಅವನ ಗುಂಪಿನ ಮೇಲೆ ದಾಳಿ ಮಾಡಿತು. ಗುಂಡಿನ ಚಕಮಕಿಯಲ್ಲಿ ಹೋವಾಕ್ವಿನ್ ಮುರಿಯೆಟ್ಟ ಅವನ ಕುದುರೆಯೊಂದಿಗೆ ಬಲಿಯಾದ. ಕ್ಯಾಪ್ಟನ್ ಲವ್‌ಗೆ ಇದು ಬಹಳ ಪ್ರತಿಷ್ಠೆಯ ವಿಷಯವಾಗಿದ್ದು, ತಾನು ಹೋವಾಕ್ವಿನ್ ಮುರಿಯೆಟ್ಟನ ತಲೆಯನ್ನು ಕತ್ತರಿಸಿ, ಐದು ಗ್ಯಾಲನ್ ಮದ್ಯ ತುಂಬಿದ ಒಂದು ಶೀಶೆಯಲ್ಲಿ ಅವನ ತಲೆಯನ್ನು ತುಂಬಿ, ಸ್ಯಾನ್ ಫ್ರಾನ್ಸಿಸ್ಕೊದ ಬೀದಿಬೀದಿಗಳಲ್ಲಿ ಬಹಳ ಗರ್ವದಿಂದ ಮೆರವಣಿಗೆ ಮಾಡಿದ. ಮುಂದೆ ಈ ತಲೆಯನ್ನು 'ದಿ ಗೋಲ್ಡನ್ ನಗ್ಗೆಟ್' ಹೆಸರಿನ ಮದ್ಯದಂಗಡಿಯಲ್ಲಿ ಪ್ರದರ್ಶನಕ್ಕೆ ಇಡಲಾಯಿತು. ಹೋವಾಕ್ವಿನ್‌ನ ಕಣ್ಣುಗಳು ಮದ್ಯದಂಗಡಿಗೆ ಬರುವ ಗಿರಾಕಿಗಳಿಗೆ ವಿಚಿತ್ರ ಕುಹಕನೋಟ ಬೀರುವಂತೆ ಭಾಸವಾಗುತ್ತಿದ್ದವು. 1906ರ ವಿನಾಶಕ ಭೂಕಂಪದಲ್ಲಿ ಈ ಮದ್ಯದಂಗಡಿಯು ಕುಸಿದು, ಹೋವಾಕ್ವಿನ್‌ನ ತಲೆ ಕಣ್ಮರೆಯಾಯಿತು.

ತಲೆ ಕಣ್ಮರೆಯಾದ ದಿನದಿಂದ ಇಂದಿನವರೆಗೂ ಹೋವಾಕ್ವಿನ್ ಮುರಿಯೆಟ್ಟನ ರುಂಡವಿಲ್ಲದ ಪ್ರೇತವೊಂದು ಕ್ಯಾಲಿಫೋರ್ನಿಯಾ ಚಿನ್ನದ ಗಣಿಯ ಆಸುಪಾಸು ಓಡಾಡುತ್ತಿದೆ ಹಾಗೂ ಆ ದಾರಿಯಲ್ಲಿ ಬರುವ ಜನರನ್ನು ಪೀಡಿಸಿ, ಕಾಡಿಸಿ, ಆರ್ದ್ರ ಕಂಠದಲ್ಲಿ "ನನ್ನ ತಲೆಯನ್ನು ಹಿಂದಿರುಗಿಸು" ಎಂಬ ಧ್ವನಿಯ ಕೂಗು ಕೇಳಿ ಬರುತ್ತದೆ ಎಂಬ ಪ್ರತೀತಿ ಇದೆ.

ಬಾಲಂಗೋಚಿ

ಅಮೆರಿಕಾದ ಇತಿಹಾಸದಲ್ಲಿ ಅತಿ ದೊಡ್ಡ ವಲಸೆ ಕಂಡಿದ್ದು ಚಿನ್ನದ ಅನ್ವೇಷಣೆಯ (ಗೋಲ್ಡ್ ರಶ್) ಕಾಲದಲ್ಲಿ. 1848 ಮಾರ್ಚಿನಲ್ಲಿ ಕ್ಯಾಲಿಫೋರ್ನಿಯಾದಲ್ಲಿ ಸರಿ ಸುಮಾರು 1,57,000 ಜನರಿದ್ದರು ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಸುಮಾರು 1,50,000 ಅಮೆರಿಕನ್ ಮೂಲನಿವಾಸಿಗಳು, 6,500 ಮಂದಿ ಸ್ಪ್ಯಾನಿಷ್ ಅಥವಾ ಮೆಕ್ಸಿಕೋ ಮೂಲದವರು ಮತ್ತು ಮೂಲನಿವಾಸಿಗಳಲ್ಲದ 800 ಅಮೆರಿಕನ್ನರು ತೊಡಗಿಕೊಂಡಿದ್ದರು ಎಂದು ತಿಳಿದುಬಂದಿದೆ. ಇದೇ ಸಮಯದಲ್ಲಿ ಕ್ಯಾಲಿಫೋರ್ನಿಯಾ ಜನಗಳ ಜೊತೆ ಹೋವಾಕ್ವಿನ್ ಮುರಿಯೆಟ್ಟ ಅವನ ಸಂಸಾರದೊಂದಿಗೆ ಕ್ಯಾಲಿಫೋರ್ನಿಯಾಗೆ ಚಿನ್ನದ ಗಣಿಗಾರಿಕೆ ಮಾಡಲು ಬಂದಿದ್ದನು.

ಹೋವಾಕ್ವಿನ್ ಮುರಿಯೆಟ್ಟನ ಅಸ್ತಿತ್ವವೇ ಸಂಶಯಾಸ್ಪದ ಎನಿಸುತ್ತದೆ. ಏಕೆಂದರೆ, ಇದೊಂದು ಕಟ್ಟುಕಥೆ ಎಂದು ಕೆಲವು ಕಡೆ ಹೇಳಲಾಗಿದೆ. ಕೆಲವರು ಹೇಳುವ ಪ್ರಕಾರ ಕ್ಯಾಪ್ಟನ್ ಲವ್, ಮುರಿಯೆಟ್ಟನನ್ನು ಕೊಲ್ಲಲಿಲ್ಲ ಹಾಗೂ ಅವನು ತಂದ ತಲೆಯು ಮುರಿಯೆಟ್ಟನದು ಅಲ್ಲವೆಂದಿದ್ದಾರೆ. ಈವರೆಗೂ ಈ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿದಿದೆ. ಈ ಘಟನೆಗೆ ಸಾಕ್ಷಿಯಾಗಿ ಪ್ರಮಾಣಪತ್ರಗಳು ದೊರೆತಿದ್ದರೂ, ಇದನ್ನು ಸತ್ಯವೆಂದು ಪರಿಗಣಿಸಿಲ್ಲವೆಂದೂ ಹೇಳುತ್ತಾರೆ. 1853ರಲ್ಲಿ ಈತ ಕೊಲ್ಲಲ್ಪಟ್ಟನು ಎಂದು ವರದಿಯಾಗಿದೆ,

ಆದರೆ ಅವನ ಸಾವಿನ ಸುದ್ದಿ ವಿವಾದಕ್ಕೀಡಾಯಿತು ಮತ್ತು ನಂತರ ಅವನ ಬಗ್ಗೆ ಮತ್ತು ಅವನ ಬದುಕುಳಿಯುವಿಕೆಯ ಬಗ್ಗೆ ಪುರಾಣಗಳು ರೂಪುಗೊಂಡವು. ಹೋವಾಕ್ವಿನ್ ಮುರಿಯೆಟ್ಟ ಮೆಕ್ಸಿಕೋ ಅಥವಾ ಸ್ಯಾನ್ ಆಂಡ್ರೆಯಾಸ್ ಪ್ರದೇಶದಲ್ಲಿ ಬಚ್ಚಿಟ್ಟುಕೊಂಡಿದ್ದ, ಅವನು ಯಾರ ಕೈಗೂ ಸಿಗಲಿಲ್ಲವೆಂದು ಹೇಳುವವರೂ ಇದ್ದಾರೆ!

ಆಂಗ್ಲೋಸ್ ಅವನನ್ನು ಶ್ರೀಮಂತ ಗಣಿಗಾರಿಕೆಯ ಹಕ್ಕಿನಿಂದ ಓಡಿಸಿದನೆಂದು ಒಮ್ಮತವಿದೆ ಎಂದು ತೋರುತ್ತದೆ. ಗಣಿಗಾರಿಕೆ ಶಿಬಿರಗಳ ತೀವ್ರ ಸ್ಪರ್ಧೆಯಲ್ಲಿ ಹೋವಾಕ್ವಿನ್ ಮುರಿಯೆಟ್ಟ ಪೂರ್ವಗ್ರಹ ಪೀಡಿತ ಹಗೆತನವನ್ನು ಎದುರಿಸಿದನು. ಚಿನ್ನಕ್ಕಾಗಿ ಗಣಿಗಾರಿಕೆ ಮಾಡುವಾಗ, ಅವನ ಯಶಸ್ಸಿನ ಬಗ್ಗೆ ಅಸೂಯೆಪಟ್ಟ ಅಮೆರಿಕನ್ ಗಣಿಗಾರರಿಂದ ಅವನು ಮತ್ತು ಅವನ ಹೆಂಡತಿ ಹಲ್ಲೆಗೆ ಒಳಗಾದರು. ಆದರೆ, 25 ವರ್ಷಗಳ ನಂತರ, ಪುರಾಣಗಳು ರೂಪುಗೊಳ್ಳಲು ಪ್ರಾರಂಭಿಸಿದವು. ಪ್ರದರ್ಶಿತ ತಲೆ ತನ್ನ ಸಹೋದರನದಲ್ಲ ಎಂದು ಮುರಿಯೆಟ್ಟನ ಸಹೋದರಿ ಹೇಳಿದ್ದನ್ನು, 1879ರಲ್ಲಿ ಓ. ಪಿ. ಸ್ವಿಟ್ಜರ್ ಕೇಳಿದ್ದನೆಂದು ವರದಿಯಾಗಿದೆ. ಐತಿಹಾಸಿಕವಾಗಿ ಹೋವಾಕ್ವಿನ್ ಕಥೆಗೆ ದೊರಕಿರುವ ಪುರಾವೆಗಳು ವಿರಳ. ಮುರಿಯೆಟ್ಟನ ಸುತ್ತಲೂ ಅನೇಕ ಕಥೆಗಳು ಬೆಳೆದಿವೆ. ಕಟ್ಟುಕಥೆ ಮತ್ತು ಸತ್ಯಕಥೆಗಳನ್ನು ಬೇರ್ಪಡಿಸುವುದು ಕಷ್ಟ.

ಆಧಾರ

ಈ ಕಥೆಯ ಮೂಲ ಬರಹಗಾರರು: ಎಸ್. ಈ. ಶ್ಲೋಸ್ಸರ್.

❑

34

ಮಾರ್ಮನ್ನರ ಜಾನಪದ ಮತ್ತು ಜೀವನಶೈಲಿ

ಮಂಗಳಾ ಕುಮಾರ್
ಬೇ ಏರಿಯಾ, ಕ್ಯಾಲಿಫೋರ್ನಿಯ

*

2012ರಲ್ಲಿ ಅಮೇರಿಕಾದಲ್ಲಿ ಎಲ್ಲೆಲ್ಲೂ ಅಧ್ಯಕ್ಷರ ಚುನಾವಣೆಯ ಸುದ್ದಿ. ಆಗಸ್ಟ್ ಹೊತ್ತಿಗೆ ಮಿಟ್ಟ್ ರಾಮ್ನಿ ಎಂಬುವರು ರಿಪಬ್ಲಿಕನ್ ಪಾರ್ಟಿಯ ಪರವಾಗಿ ಚುನಾವಣಾ ಅಭ್ಯರ್ಥಿ ಎಂದು ಘೋಷಿಸಲಾಗಿತ್ತು. ಯೂಟಾ ಸೆನೆಟರ್ ಮಿಟ್ಟ್ ರಾಮ್ನಿ ಮಾರ್ಮನ್ ಮತದ ಅನುಯಾಯಿ ಎಂದು ಎಲ್ಲರಿಗೂ ಗೊತ್ತಿತ್ತು. ಆದರೆ ಬಹುತೇಕ ಆಗ ಮಾರ್ಮನ್ನರ ಬಗ್ಗೆ ಹಾಸ್ಯಚಟಾಕಿಗಳೇ ಹಾರುತಿದ್ದ ಸಮಯ. ಚರ್ಚೆಗಳಲ್ಲಿ ಮಾರ್ಮನ್ನರ ಜೀವನಶೈಲಿಯ ಬಗ್ಗೆ ತಿಳಿಯದ ಹಲವು ಸಂಗತಿಗಳು ಹೊರಬಂದವು.

ಮಾರ್ಮನ್ನರ ಜಾನಪದದ ಬಗ್ಗೆ ಬರೆಯುವ ಮುನ್ನ ಕೆಲವು ಸಂಗತಿಗಳನ್ನು ಗಮನಿಸುವುದು ಅವಶ್ಯಕ. ಮೊದಲನೆಯದಾಗಿ, ಮಾರ್ಮನ್ನರ ಇತಿಹಾಸ ಕೇವಲ 200 ವರ್ಷಗಳಷ್ಟು ಹೊಸತು. ಭಾರತೀಯ ಸಂಸ್ಕೃತಿ ಅಥವಾ ಈಜಿಪ್ಟಿನ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬಂದಿರುವ ಶತಶತಮಾನಗಳಷ್ಟು ಹಳೆಯದಾದ ಕೆಲವು ಜಾನಪದಗಳಿಗೆ ಹೋಲಿಸಿದರೆ ಇದು ಇನ್ನೂ ನವೀನ ಎನ್ನಬಹುದು. 1960ರ ದಶಕದವರೆಗೆ ಮಾರ್ಮನ್ನರ ಜಾನಪದದ ಒಂದು ಸಂಗ್ರಹ ಕೂಡಾ ಇರಲಿಲ್ಲ. ವಿಲಿಯಮ್ ವಿಲ್ಸನ್ ಎಂಬಾತ 1962ರಲ್ಲಿ ಮಾರ್ಮನ್ನರ ಜಾನಪದದ ಸಂಗ್ರಹಣೆಯನ್ನು ಶುರು ಮಾಡಿ, 1985ರಲ್ಲಿ ಅದು ಬ್ರಿಘಮ್ ಯಂಗ್ ಯೂನಿವರ್ಸಿಟಿಯಿಂದ ಅಧಿಕೃತವಾಗಿ ಮೊದಲ ಬಾರಿಗೆ ಸ್ವೀಕರಿಸಲ್ಪಟ್ಟಿತು. ನಂತರ ಆ ಸಂಗ್ರಹವು ಪ್ರತೀ ವರ್ಷ ಬೆಳೆಯುತ್ತಾ ಬಂದಿದ್ದು, ಈಗ ಸುಮಾರು 50,000 ವಿವಿಧ ರೀತಿಯ ಜಾನಪದ ಕಥೆಗಳು, ಗೀತೆಗಳು, ವಸ್ತುಗಳು, ಕಲೆಗಳು ಎಲ್ಲವನ್ನೂ ಒಳಗೊಂಡಿದೆ. ಎರಡನೆಯದಾಗಿ, ಮಾರ್ಮನ್ನರ ಜಾನಪದವು ಬಹುಮಟ್ಟಿಗೆ ಅವರ ಧಾರ್ಮಿಕ ಜೀವನದ ಚೌಕಟ್ಟಿನಲ್ಲೇ ಹುಟ್ಟಿ ಬೆಳೆದದ್ದು ಎನ್ನಬಹುದು.

ಈ ನಿಟ್ಟಿನಲ್ಲಿ ನಾನು ಕೇಳಿರುವ, ಓದಿರುವ ಗೀತೆಗಳು ಮತ್ತು ಕಥೆಗಳನ್ನು ಇತರ ಸಂಸ್ಕೃತಿಗಳ, ದೇಶಗಳ ಜಾನಪದಗಳಿಗೆ ಹೋಲಿಸಹೋದರೆ ಈ ಎರಡೂ ಸಂಗತಿಗಳು ಎದ್ದು ಕಾಣುತ್ತವೆ. ಹಾಗಾಗಿ ನಾನು ಆರಿಸಿಕೊಂಡಿರುವ ಕೆಲವು ಉದಾಹರಣೆಗಳು ಎಂದೋ ನಡೆದುಹೋದ ಪ್ರಸಂಗವೋ ಅಥವಾ ಕಥೆಯೋ ಅಲ್ಲದೇ, ಅವರು ಧರ್ಮಪ್ರಚಾರಕ್ಕೆ ಉಪಯೋಗಿಸಲು ಮತ್ತು ಇಂದಿಗೂ ಪಾಲಿಸುತ್ತಿರುವ ಜೀವನಶೈಲಿಯನ್ನು ಬಿಂಬಿಸುವಂಥವು ಎನ್ನುವುದನ್ನು ಗಮನಿಸಿ. ಕಳೆದ ಎರಡು ಶತಮಾನಗಳಿಂದಲೂ ಸಹ ಮಾರ್ಮನ್ನರ ಜೀವನಶೈಲಿಯನ್ನೇ ಹಾಸ್ಯಾಸ್ಪದ ಎಂದು ಪರಿಗಣಿಸಲಾಗಿರುವುದರಿಂದ ಅವರ ಜಾನಪದ ಕಥೆಗಳು ಮತ್ತು ಗೀತೆಗಳು ಹಲವಾರು ಮಾಧ್ಯಮಗಳಲ್ಲಿ, ಹಲವಾರು ವಿಧಗಳಲ್ಲಿ ಹೇಳಲ್ಪಟ್ಟು, ಇವು ನಿಜವಾಗಿ ಅವರದೇ ಜಾನಪದವೇ ಎನ್ನುವ ಪ್ರಶ್ನೆಗಳೂ ಏಳುತ್ತವೆ.

ಮೊದಲು ಮಾರ್ಮನ್ನರು ಯಾರು ಎನ್ನುವ ಬಗ್ಗೆ ಸಂಕ್ಷಿಪ್ತವಾಗಿ ಅವರ ಚರಿತ್ರೆಯನ್ನು ನೋಡೋಣ. ಜೋಸೆಫ್ ಸ್ಮಿತ್ ಎಂಬಾತ 1820ರ ಸರಿಸುಮಾರಿನಲ್ಲಿ ನ್ಯೂ ಯಾರ್ಕಿನಲ್ಲಿ ಆರಂಭಿಸಿದ ಒಂದು ರೀತಿಯ ಚಳುವಳಿಯಿಂದ ಮಾರ್ಮನ್ ಪಂಗಡದ ಜನನವಾಯಿತು. ಅಂದಿನ ಕ್ರೈಸ್ತ ಮತದಲ್ಲೂ ಹಲವಾರು ವಿಭಜನೆಗಳಿದ್ದು, ಅವರದೇ ಹಲವಾರು ಒಳ ಪಂಗಡಗಳಿದ್ದವು. ಇವುಗಳಲ್ಲಿ ಯಾವ ಒಳಪಂಗಡವನ್ನು ಸೇರಲಿ ಎನ್ನುವ ದ್ವಂದ್ವಕ್ಕೆ ಒಳಗಾದ ಜೋಸೆಫ್ ಸ್ಮಿತ್, ಸ್ವತಃ ದೇವರು ಮತ್ತು ಯೇಸು ಕ್ರಿಸ್ತನ ಹಲವಾರು 'ದಿವ್ಯ ದರ್ಶನ'ಗಳನ್ನು ಪಡೆದನಂತೆ. ಪ್ರಸ್ತುತ ಪಂಗಡಗಳಲ್ಲಿ ಯಾವುದೂ ಸರಿಯಾಗಿ ಕ್ರಿಸ್ತನ ಬೋಧನೆಗಳನ್ನು ಹರಡುತ್ತಿಲ್ಲ ಮತ್ತು ಪಾಲಿಸುತ್ತಿಲ್ಲ ಎನಿಸಿ 'ನಿಜವಾದ' ಕ್ರೈಸ್ತ ಮತದ ಪುನರುಜ್ಜೀವನ ಮಾಡುವುದರ ಅಗತ್ಯ ಆತನಿಗೆ ಗೋಚರಿಸಿ, ಮಾರ್ಮನ್ ಪಂಗಡದ ಜನನವಾಯಿತು. ಮಾರ್ಮನ್ನರು ತಮ್ಮದೇ ನಿಜವಾದ ಕ್ರೈಸ್ತ ಮತ ಎನ್ನುತ್ತಾರೆ. ಆದರೆ ಅವರಿಗಿಂತ ಮೊದಲೇ ನೂರಾರು ವರ್ಷಗಳಿಂದ ಜಾರಿಯಲ್ಲಿದ್ದ ಇತರ ಕ್ರೈಸ್ತ ಒಳಪಂಗಡಗಳು, ಕ್ಯಾಥೊಲಿಕ್ ಮೊದಲಾಗಿ ಅವರನ್ನು ಕ್ರೈಸ್ತರು ಎಂದೇ ಪರಿಗಣಿಸುವುದಿಲ್ಲ. 1820 ಮತ್ತು ಮುಂದಿನ ಹಲವು ದಶಕಗಳಲ್ಲಿ ಮಾರ್ಮನ್ನರಿಗೂ ಇತರ ಪಂಗಡಗಳಿಗೂ ಘರ್ಷಣೆಗಳು ನಡೆಯುತ್ತಲೇ ಇದ್ದವು. ಹೊಡೆದಾಟ, ಬಡಿದಾಟಗಳೊಂದಿಗೆ ಕೊಲೆಗಳೂ ಸಹ ನಡೆಯುತ್ತಿದ್ದು, ಜೋಸೆಫ್ ಸ್ಮಿತ್ ಸಹ ಕೊಲೆಗೀಡಾಗಿಯೇ 1844ರಲ್ಲಿ ಮರಣ ಹೊಂದಿದ್ದು. ಜೋಸೆಫ್ ಸ್ಮಿತ್ ಮಾರ್ಮನ್ನರ ಮೊದಲ ಪ್ರವಾದಿ. ನಂತರ ಬ್ರಿಘಮ್ ಯಂಗ್ ಎಂಬಾತನನ್ನು ಪ್ರವಾದಿ ಎಂದು ಗುರುತಿಸಿ ಸ್ವೀಕರಿಸಿದರು. ಎಲ್ಲ ಕಡೆಯಿಂದ ಬಹಿಷ್ಕೃತರಾಗಿ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದ ತಮ್ಮವರನ್ನೆಲ್ಲ ಕರೆತಂದು ಇಂದಿನ ಯೂಟಾ ರಾಜ್ಯದಲ್ಲಿ ನೆಲೆಸುವಂತೆ ಮಾಡಿದ ಕೀರ್ತಿ ಆತನದು. ಅಮೇರಿಕಾದಲ್ಲಿ ಈಗ ಸುಮಾರು 6 ಮಿಲಿಯನ್ ಮಾರ್ಮನ್ನರು ಇದ್ದಾರೆ. ಅವರು ಅಮೇರಿಕಾದ ಎಲ್ಲೆಡೆ ಹರಡಿದ್ದರೂ ಸಹ ಯೂಟಾ ರಾಜ್ಯದಲ್ಲಿ ಅವರ ಸಂಖ್ಯೆ ಅತೀ ಹೆಚ್ಚು.

ಮಾರ್ಮನ್ನರ ಧಾರ್ಮಿಕ ನಂಬಿಕೆಗಳು ಮತ್ತು ನಿಯಮಗಳು ಬೇಕಾದಷ್ಟಿವೆ. ಅವುಗಳಲ್ಲಿ ಕೆಲವು ಹೀಗಿವೆ – ಕಾಫಿ, ಟೀ, ಮದ್ಯಪಾನ, ಔಷಧಿಯಲ್ಲದ ಮಾದಕ

ಪದಾರ್ಥಗಳು ಮತ್ತು ಮದ್ದುಗಳ ಸೇವನೆ ನಿಷಿದ್ಧ. ಅಮೇರಿಕಾ ಸರ್ಕಾರ 1882ರಲ್ಲಿ ಬಹುಪತ್ನಿತ್ವವನ್ನು ಕಾನೂನುಬಾಹಿರ ಎಂದು ಘೋಷಿಸಿದ ನಂತರ ಮಾರ್ಮನ್ನರ ಒಂದು ಪಂಗಡವಾದ ಲೇಟರ್ ಡೇ ಸೈಂಟ್ಸ್ ಅವರೂ 1890ರಲ್ಲಿ ಅದನ್ನು ರದ್ದುಗೊಳಿಸಿದರು. ಆದರೂ ಹಲವೆಡೆ ಕಾನೂನಿನ ಕೈಗೆ ಸಿಗದ ಹಾಗೆ ನುಣುಚಿಕೊಂಡು ಬಹುಪತ್ನಿತ್ವವನ್ನು ಇನ್ನೂ ಜಾರಿಯಲ್ಲಿರಿಸಿಕೊಂಡಿದ್ದಾರೆ. ಸಂಪಾದನೆಯ ಒಂದು ಭಾಗವನ್ನು ಅವರ ಚರ್ಚಿಗೆ (ಇದನ್ನು ಮಾರ್ಮನ್ ಟೆಂಪಲ್ ಎಂದೇ ಕರೆಯುವ ವಾಡಿಕೆ) ಮೀಸಲಿಡಬೇಕು. ಸದಾಕಾಲ, ಕನಿಷ್ಠ ಮೂರು ತಿಂಗಳವರೆಗೆ ಸಾಲುವಷ್ಟು ಆಹಾರ, ಕುಡಿಯುವ ನೀರು, ಮತ್ತು ಅಗತ್ಯಕ್ಕೆ ತಕ್ಕಷ್ಟು ಧನವನ್ನು ಕೂಡಿಟ್ಟುಕೊಂಡಿರಬೇಕು. ಬ್ಯಾಪ್ಟಿಸಮ್ – ಒಂದು ರೀತಿಯ ಶುದ್ಧೀಕರಣ – ಇಲ್ಲದೇ ಯಾರೂ ತಾನು ಮಾರ್ಮನ್ ಎಂದು ಹೇಳಿಕೊಳ್ಳುವ ಹಾಗಿಲ್ಲ ಮತ್ತು ಸತ್ತರೆ ಸ್ವರ್ಗಕ್ಕೆ ಹೋಗುವ ಮಾರ್ಗವಿಲ್ಲ. ಮತ್ತು ಈ ಬ್ಯಾಪ್ಟಿಸಮ್ ಆಗದೆ ಸತ್ತ ಯಾರಿಗಾದರೂ ಸರಿ, ಅವರ ಮತ, ಧರ್ಮಗಳು ಏನೇ ಆಗಿದ್ದರೂ ಸರಿ – ಮಾರ್ಮನ್ ಚರ್ಚಿನಲ್ಲಿ ಈ ಶುದ್ಧೀಕರಣವನ್ನು ಮಾಡಿಸಿ, ಅವರಿಗೆ 'ಸ್ವರ್ಗಕ್ಕೆ ಸೇರುವ' ಅವಕಾಶ ಕೊಡಿಸಬಹುದು.

ಈಗ ಈ ಹಿನ್ನೆಲೆಯಲ್ಲಿ ಮಾರ್ಮನ್ನರ ಜಾನಪದ ಲೋಕಕ್ಕೆ ಹೋಗೋಣ. ಸಾಲ್ಟ್ ಲೇಕ್ ಟ್ರಿಬ್ಯೂನಿನ ಪೆಗ್ಗಿ ಫ್ಲೆಚರ್ ಸ್ಟ್ಯಾಕ್ ಅವರ ಸಂಗ್ರಹದಿಂದ ಆಯ್ದ ಗೀತೆ ಮತ್ತು ಕಥೆಗಳು ಇವು.

ಮದ್ಯಪಾನಕ್ಕೆ ಸಂಬಂಧಿಸಿದ ಒಂದು ಜಾನಪದ ಗೀತೆ

ಕಾಫಿ, ಟೀ, ಮದ್ಯಪಾನ, ಔಷಧಿ ಎಂದು ಪರಿಗಣಿಸಲಾಗದ ಮಾದಕ ಪದಾರ್ಥಗಳು ಮತ್ತು ಮದ್ದುಗಳ ಸೇವನೆ ನಿಷಿದ್ಧ ಎನ್ನುವುದು ಮಾರ್ಮನ್ನರ ಧಾರ್ಮಿಕ ನಿಯಮಗಳಲ್ಲಿ ಒಂದು. ಒಂದು ಜಾನಪದ ಗೀತೆಯಲ್ಲಿ ಹೀಗಿದೆ – ಒಮ್ಮೆ ಒಬ್ಬ ಕಂಠಪೂರ್ತಿ ಕುಡಿದು ಚರಂಡಿಯಲ್ಲಿ ಬಿದ್ದಿದ್ದನಂತೆ. ಅವನ ಪಕ್ಕದಲ್ಲೇ ಹಂದಿಯೊಂದು ಬಂದು ಮಲಗಿಕೊಂಡಿತಂತೆ. ಆ ಹಾದಿಯಲ್ಲಿ ನಡೆದು ಬಂದ ಮಹಿಳಾಮಣಿಯೊಬ್ಬಳು "ಒಬ್ಬನ ಗುಣವನ್ನು ಅವನ ಸಹಚರರು ಯಾರು ಎನ್ನುವುದನ್ನು ನೋಡಿಯೇ ತಿಳಿಯಬಹುದು" ಎಂದಳಂತೆ. ಅದನ್ನು ಕೇಳಿದ ತಕ್ಷಣ ಹಂದಿ ಎದ್ದು ಓಡಿ ಹೋಯಿತಂತೆ. ಇದು ಮಾರ್ಮನ್ನರ ಜಾನಪದದಿಂದಾಚೆ ಎಲ್ಲ ಹಾಸ್ಯಕವಿಗಳಿಗೂ ವಸ್ತುವಾಗಿದೆಯಾದ್ದರಿಂದ, ಕೇಳಿ ನಕ್ಕುಬಿಡುತ್ತಾರೆ. ಅದರ ಮೂಲವೇನೆಂದು ಪ್ರಶ್ನಿಸುವ ಗೋಜಿಗೆ ಯಾರೂ ಹೋಗುವುದಿಲ್ಲ. ಆ ಗೀತೆ ಇಲ್ಲಿದೆ ನೋಡಿ.

The Boozer

I was out upon a flicker and had had far too much liquor,
And I must admit that I was quite pie-eyed,

And my legs began to stutter, and I lay down in the gutter
And a pig arrived and lay down by my side.
As I lay there in the gutter with my heart strings all aflutter,
A lady passed and this was heard to say,
You can tell a man who boozes by the company he chooses.
And the pig got up and slowly walked away.

ಮೇಲಿನ ಇಂಗ್ಲೀಷ್ ಜನಪದ ಗೀತೆಯ ಕನ್ನಡ ಭಾವಾನುವಾದ ಕೆಳಗಿದೆ.
(ಅನುವಾದಕರು: ಮೈ ಶ್ರೀ. ನಟರಾಜ).

ಕುಡುಕನೂ ಹಂದಿಯೂ

ತಲ್ಯಾಗ್ ಬುದ್ದಿ ಕಮ್ಯಾಯ್ತು, ಕುಡ್ತ ಸ್ವಲ್ಪ ಎಚ್ಚಾಯ್ತು
ಒಪ್ಕೊಂತೀನಿ ಕೇಳಿ ಸಾಮಿ, ಕಣ್ಣಾಗ್ ಅಮ್ಲು ಕಾಣ್ತಿತ್ತು

ಕೈಕಾಲ್ ಸ್ವಾದೀನ್ ತಪ್ ಬುಟ್ಟಿ, ಬಿದ್ಬುಟ್ಟಿ ನಾ ಚರಂಡೀಲಿ
ಪಕ್ದಾಗ್ ನೋಡಿದ್ರೇನೈತೆ? ಒಂದ್ ಅಂದೀ ಮಲ್ಗೈತ್ ಜೊತೇಲಿ

ಚರಂಡೀಲೆ ನಾ ಮಲ್ಗಿವ್ನಿ, ಎದೆ ಡಬ್–ಡಬ ಬಡ್ಕೊಂತು
ಅಲ್ಲೇ ಒಬ್ಳು ಸುಂದ್ರಿ ಓಗ್ತಾ ಆಡಿದ್ಮಾತು ಕೇಳ್ಬಂತು

"ಜೊತ್ಯೋರ್ಯಾರೂಂತ್ ಗುರ್ತ್ಸಿದ್ರೆ, ಕುಡ್ಕನ್ ಗುರ್ತ ಇಡೀಬೌದ್ರಿ"
ಆಕಿ ಮಾತನ್ ಕೇಳಿದ್ದೇ, ಆ ಅಂದಿ ಎದ್ದು ಓಡ್ಬುಡ್ತ್ರಿ!

ಧರ್ಮಪ್ರಚಾರಣೆಯ ಬಗ್ಗೆ ಒಂದೆರಡು ಜಾನಪದ ಕಥೆಗಳು

ವಿದ್ಯಾಭ್ಯಾಸದ ನಂತರ ಎರಡು ವರ್ಷಗಳ ಕಾಲ ಮನೆಮನೆಗೆ ಹೋಗಿ ಧರ್ಮ ಪ್ರಚಾರ ಮಾಡಬೇಕು ಎನ್ನುವುದು ಮಾರ್ಮನ್ನರ ಮತ್ತೊಂದು ಧಾರ್ಮಿಕ ನಿಯಮ. ಎಲ್ಲಾ ಕಡೆಯಲ್ಲಿ ಬಹಿಷ್ಕೃತರಾಗಿದ್ದ ಮಾರ್ಮನ್ನರಿಗೆ ಮನೆಮನೆಗೆ ಹೋಗಿ ಧರ್ಮಪ್ರಚಾರ ಮಾಡುವುದು ಸುಲಭವಾಗಿರಲಿಲ್ಲ. ಅವರು ಕುಹಕದೊಂದಿಗೆ ಹೊಡೆತ, ಬಡಿತಗಳಿಗೂ ಒಳಗಾಗುತ್ತಿದ್ದರು. ಇದು ಕಷ್ಟದ ಕೆಲಸ ಎಂದು ಗೊತ್ತಿದ್ದ ಮಿಷನರಿಗಳು ಜನರನ್ನು ಉತ್ತೇಜಿಸಲು ಹೇಳುತ್ತಿದ್ದ ಕೆಲವು ಕಥೆಗಳು ಹೀಗಿವೆ.

ಒಮ್ಮೆ ಒಬ್ಬ ಧರ್ಮಪ್ರಚಾರಕ ಮನೆಯೊಂದರ ಬಾಗಿಲು ತಟ್ಟಿದನಂತೆ. ಮನೆಯಾತ ಹೊರಬಂದು ಈತ ಮಾರ್ಮನ್ ಎಂದು ಗುರುತಿಸಿದ ತಕ್ಷಣ ಹೇಳಿದನಂತೆ "ಒಳಗೆ ಹೋಗಿ ಒಂದು ಲೋಟದಲ್ಲಿ ವಿಷ ಹಾಕಿ ತಂದುಕೊಡುತ್ತೇನೆ. ನೀನು ಅದನ್ನು ಕುಡಿದೂ ಸಹ ಬದುಕಿದೆ ಎಂದಾದರೆ, ನಾನು ನಿನ್ನ ಧರ್ಮಕ್ಕೆ ಮತಾಂತರಗೊಳ್ಳುವೆ." ಒಂದು ಕ್ಷಣ ಯೋಚಿಸಿದ ಧರ್ಮಪ್ರಚಾರಕ ಎಂದನಂತೆ "ಈ ವಿಷವನ್ನು ನೀನೇ ಕುಡಿ. ನೀನು ಸತ್ತರೆ, ನಾನು ನನ್ನ ಧರ್ಮದ ಬಲದಿಂದ ನಿನ್ನನ್ನು ಬದುಕಿಸುತ್ತೇನೆ."

ಇನ್ನೊಮ್ಮೆ ಇಬ್ಬರು ಧರ್ಮಪ್ರಚಾರಕರು ಒಂದು ಬಡಾವಣೆಗೆ ಹೋದರಂತೆ. ಅದು ಕೊಲೆ, ಸುಲಿಗೆಗಳನ್ನು ಮಾಡುತ್ತಿದ್ದ ದುಷ್ಕರ್ಮಿಗಳೇ ಜಾಸ್ತಿ ಇದ್ದ ಜಾಗ. ಹಲವರು ಪುಂಡರು ಈ ಧರ್ಮಪ್ರಚಾರಕರನ್ನು ಅಟ್ಟಿಸಿಕೊಂಡು ಬಂದರಂತೆ. ಇವರು ತಕ್ಷಣ ಅಲ್ಲೇ ಇದ್ದ ಕಾರೊಂದರಲ್ಲಿ ಧುಮುಕಿ, ಅದನ್ನು ಚಾಲನೆ ಮಾಡಿ ಪರಾರಿಯಾದರಂತೆ. ಆ ಬಡಾವಣೆಯ ದುಷ್ಕರ್ಮಿಗಳಿಗೆ ಆಶ್ಚರ್ಯ! ಏಕೆಂದರೆ ಅದು ಚಾಲನೆಗೆ ಬೇಕಾದ ಎಂಜಿನ್ನೇ ಇಲ್ಲದೆ ಕೆಟ್ಟು ನಿಂತಿದ್ದ, ತುಕ್ಕು ಹಿಡಿದುಹೋಗಿದ್ದ ಕಾರು. ಆ ಬಡಾವಣೆಯಿಂದ ಸಾಕಷ್ಟು ದೂರ ಹೋದ ನಂತರ ಅದು ಧರ್ಮಪ್ರಚಾರಕರ ಗಮನಕ್ಕೂ ಬಂದಿತಂತೆ.

ಇನ್ನೂ ಒಂದು ಕಥೆ ಹೀಗಿದೆ: ಗಂಡ ಊರಿಂದೂರಿಗೆ ಧರ್ಮಪ್ರಚಾರಕ್ಕೆಂದು ತೆರಳಿದ್ದನಂತೆ. ಹೆಂಡತಿ ಒಂದು ದಿನ ಒಂದು ಲೋಫ್ ಬ್ರೆಡ್ಡನ್ನು ಮಾಡಿ, ಅದು ಸ್ವಲ್ಪ ತಣ್ಣಗಾಗಲಿ ಎಂದು ಒಂದು ಟವೆಲಿನಲ್ಲಿ ಸುತ್ತಿ ಅಡಿಗೆಮನೆಯ ಕಿಟಕಿಯನ್ನು ತೆರೆದು ಅದನ್ನು ಅಲ್ಲಿ ಇಟ್ಟಿದ್ದಳಂತೆ. ಅವಳು ಬೇರೆ ಕೆಲಸಗಳನ್ನು ಮುಗಿಸಿಕೊಂಡು ಬಂದು ನೋಡಿದರೆ ಟವೆಲ್ ಸಮೇತ ಬ್ರೆಡ್ ಮಾಯವಾಗಿತ್ತು. ಅವಳಿಗೆ ಏನಾಯಿತು ಎಂದು ತಿಳಿಯಲಿಲ್ಲ. ಯಾರೋ ತೆಗೆದುಕೊಂಡು ಹೋಗಿದ್ದಾರೆ ಎಂದು ಸುಮ್ಮನಾದಳು. ಒಂದು ತಿಂಗಳ ನಂತರ ಮನೆಗೆ ಬಂದ ಗಂಡನ ಕೊಳೆ ಬಟ್ಟೆಗಳನ್ನು ಒಗೆಯಲು ಹೋದಾಗ, ಅವುಗಳ ಜೊತೆ ಅವಳು ಬ್ರೆಡ್ಡನ್ನು ಸುತ್ತಿಟ್ಟಿದ್ದ ಟವೆಲ್ ಇತ್ತು. ಆಶ್ಚರ್ಯಚಕಿತಳಾಗಿ "ಇದು ನಿನ್ನ ಬಳಿ ಬಂದಿದ್ದು ಹೇಗೆ?" ಎಂದು ಗಂಡನನ್ನು ಕೇಳಿದಳು. ಅವನು ಹೇಳಿದ "ಒಂದು ದಿನ ಹೀಗೇ ಊರಿಂದೂರಿಗೆ ಹೋಗುವಾಗ ಊಟವೇ ಸಿಗದೇ ಅಲೆಯುತ್ತಿದ್ದೆ. ದಾರಿಹೋಕನೊಬ್ಬ ನನಗೆ ಈ ಟವೆಲಿನಲ್ಲಿ ಸುತ್ತಿದ್ದ ಒಂದು ಲೋಫ್ ಬ್ರೆಡ್ಡನ್ನು ಕೊಟ್ಟ. ಅಂದು ನಾನು ಹಸಿವಿನಿಂದ ಬಳಲುವುದು ತಪ್ಪಿತು!"

ಆಪತ್ಕಾಲದಲ್ಲಿ ಆತ್ಮರಕ್ಷಣೆ

ಇದರ ಬಗ್ಗೆಯೂ ಒಂದು ಜಾನಪದ ಕಥೆ ಇದೆ. ಒಮ್ಮೆ ಒಂದು ದಂಪತಿ ಊರಿಂದೂರಿಗೆ ಕಾರಿನಲ್ಲಿ ಹೋಗುತ್ತಿದ್ದಾಗ, ಜನರಹಿತ ಹೆದ್ದಾರಿಯಲ್ಲಿ ನಡೆದು ಬರುತ್ತಿದ್ದ ಒಬ್ಬ ಮುದುಕನನ್ನು ನೋಡಿದರು. ಅಯ್ಯೋ ಪಾಪ ಎನಿಸಿ ಅವನನ್ನು ಕಾರಿನಲ್ಲಿ ಹತ್ತಿಸಿಕೊಂಡರು. ಹಿಂದಿನ ಸೀಟಿನಲ್ಲಿ ಕುಳಿತ ಆ ಮುದುಕ ಹೇಳಿದ್ದು ಒಂದೇ ವಾಕ್ಯ, "ಒಂದು ವರ್ಷಕ್ಕೆ ಸಾಲುವಷ್ಟು ಆಹಾರ ಶೇಖರಿಸಿ ಇಟ್ಟಿದ್ದೀರ ತಾನೇ?" ದಂಪತಿಗಳು ಹಿಂದಿರುಗಿ ನೋಡಿದರೆ ಹಿಂದಿನ ಸೀಟಿನಲ್ಲಿ ಯಾರೂ ಇಲ್ಲ! ಮುಂದೆ ಚಲಿಸುತ್ತ ಅವರಿಗೆ ಸಿಕ್ಕ ಒಬ್ಬ ಪೊಲೀಸನನ್ನು ನೋಡಿ ನಡೆದ ಸಂಗತಿಯನ್ನು ಹೇಳಿದರು. ಅದಕ್ಕೆ ಆತ "ಈ ಕಥೆಯನ್ನು ನನಗೆ ಹಿಂದೆ ಅನೇಕರು ಹೇಳಿದ್ದಾರೆ, ಇದು ಹಳೆಯ ಕಥೆ" ಎಂದು ನಕ್ಕನಂತೆ!

ರಾಮ್ನಿಯವರು ಚುನಾವಣೆಗೆ ನಿಂತಾಗ ಎಲ್ಲರೂ ಮನೆಯಲ್ಲಿ ಮೂರು ತಿಂಗಳಿಗೆ ಆಗುವಷ್ಟು ಆಹಾರ, ನೀರು ಮತ್ತು ಅಗತ್ಯಕ್ಕೆ ತಕ್ಕಷ್ಟು ಧನವನ್ನು ಶೇಖರಿಸಿ ಇಟ್ಟುಕೊಳ್ಳುವ

ಹಾಗೆ ಮಾಡುತ್ತಾರೆಯೇ ಎನ್ನುವುದು ಬಹಳ ಚರ್ಚಿತವಾದ ವಿಷಯಗಳಲ್ಲಿ ಒಂದು. 'ಮನೆಯಲ್ಲಿ ಮೂರು ತಿಂಗಳಿಗೆ ಆಗುವಷ್ಟು ಆಹಾರ, ನೀರು ಮತ್ತು ಅಗತ್ಯಕ್ಕೆ ತಕ್ಕಷ್ಟು ಧನವನ್ನು ಶೇಖರಿಸಿ ಇಟ್ಟುಕೊಳ್ಳಬೇಕು' ಎನ್ನುವ ಒಂದು ಕಾಯಿದೆ ಬರೀ ಜಾನಪದ ಎಂದು ಮಾತ್ರವಲ್ಲದೇ, ಇಂದಿನ ಪರಿಸ್ಥಿತಿಗೆ ಹೇಗೆ ಪ್ರಸ್ತುತ ಎನ್ನುವುದನ್ನು ನೋಡೋಣ. ಮಾರ್ಮನ್ ಪಂಗಡವನ್ನು ಬಿಟ್ಟು ಬೇರೆ ಯಾವ ಧರ್ಮದಲ್ಲಾಗಲೀ ಮತದಲ್ಲಾಗಲೀ 'ಮನೆಯಲ್ಲಿ ಮೂರು ತಿಂಗಳಿಗೆ ಆಗುವಷ್ಟು ಆಹಾರ, ನೀರು ಮತ್ತು ಅಗತ್ಯಕ್ಕೆ ತಕ್ಕಷ್ಟು ಧನವನ್ನು ಶೇಖರಿಸಿ ಇಟ್ಟುಕೊಳ್ಳಬೇಕು' ಎನ್ನುವ ಕಾಯಿದೆ ಇಲ್ಲ. ಸನಾತನ (ಹಿಂದೂ) ಧರ್ಮದಲ್ಲಿ ಈ ರೀತಿಯ ಯಾವುದೇ ಕಾಯಿದೆಗಳು ಇಲ್ಲ. ಜೀವನ ದರ್ಶನವೇನಿದ್ದರೂ ಅದು ಆತ್ಮ, ಮೋಕ್ಷ, ಪಾಪ, ಪುಣ್ಯಗಳ ಚೌಕಟ್ಟಿನಲ್ಲೇ. ನಾವು ತಿಳಿದುಕೊಂಡಿರುವ ಸಂಪ್ರದಾಯಗಳು, ಕಟ್ಟು ಕಟ್ಟಳೆಗಳೆಲ್ಲ ಕಾಲಾಂತರದಲ್ಲಿ ರೂಪುಗೊಂಡವು. ಆದರೆ ಬೌದ್ಧ, ಜೈನ, ಸಿಖ್ ಮೊದಲುಗೊಂಡು ಇಸ್ಲಾಂ, ಕ್ರೈಸ್ತ ಮತಗಳೆಲ್ಲಾ ಕಾಯಿದೆಗಳನ್ನು ಹೊಂದಿವೆ. ಕೆಲವು ಮತಗಳಲ್ಲಿ ದಿನನಿತ್ಯದಲ್ಲಿ ಏನು ಮಾಡಬೇಕು ಎನ್ನುವುದರಿಂದ ಹಿಡಿದು ಜನನ, ಮರಣ, ಮದುವೆ, ಸಾಮಾಜಿಕ ವರ್ತನೆಗಳನ್ನು ಕೂಡಾ ನಿರ್ದೇಶಿಸುವ ಕಾಯಿದೆಗಳು ದಾಖಲಾಗಿವೆ. ಇದು ಯಾವ ದೊಡ್ಡ ಸಂಗತಿ ಎಂದು ಮೂಗು ಮುರಿಯುವ ಮುನ್ನ, ಮಾರ್ಮನ್ ಮತದ ಕಾಯಿದೆಗಳಲ್ಲಿ ಮಾತ್ರ ಇದು ಸೇರಿದ್ದು ಏಕೆ ಅನ್ನುವುದನ್ನೂ ನೋಡೋಣ. ಜೊತೆಗೆ, ಇಂದು ಕರೋನ ವೈರಸ್ ವಿಶ್ವದ ಮೇಲೆ ಹೇರಿರುವ ಪರಿಸ್ಥಿತಿಯಿಂದ ಇದು ನಮಗೆ ಯಾವ ಜ್ಞಾನೋದಯವನ್ನು ಕರುಣಿಸಿದೆ ಎಂದೂ ನೋಡೋಣವೇ?

ಅಮೇರಿಕಾದ ಒಂದಲ್ಲ ಒಂದು ಕಡೆ ಅಸಾಧಾರಣವಾದ ಹಿಮ, ಭೂಕಂಪ, ಚಂಡಮಾರುತ, ಕಾಡ್ಗಿಚ್ಚು, ಪ್ರವಾಹಗಳು ಇದ್ದೇ ಇರುತ್ತವೆ. ಈ ಪ್ರಕೃತಿ ವಿಕೋಪಗಳ ಮುನ್ಸೂಚನೆ ಬಂದಾಗಲೇ ಜನ ಓಡಿ ಹೋಗಿ ಅಂಗಡಿಗಳಿಗೆ ಲಗ್ಗೆ ಹಾಕಿ ಹಾಲು, ನೀರು, ಬ್ರೆಡ್ ಮುಂತಾದ ಆಹಾರ ಪದಾರ್ಥಗಳನ್ನು ಖಾಲಿ ಮಾಡುತ್ತಾರೆ ಎನ್ನುವುದು ಎಲ್ಲರಿಗೂ ತಿಳಿದ ಸಾಮಾನ್ಯ ವಿಷಯ. ಜೊತೆಗೆ ಹೋಮ್ ಡಿಪೋದಂತಹ ಅಂಗಡಿಗಳಿಗೆ ಹೋಗಿ ಮರದ ಹಲಗೆಗಳು, ವಿದ್ಯುತ್ ಜೆನರೇಟರುಗಳು ಮುಂತಾದವುಗಳನ್ನೂ ಕೊಳ್ಳುತ್ತಾರೆ. ಈ ರೀತಿಯ ಮುನ್ಸೂಚನೆಗಳು ಇರಲಿ, ಬಿಡಲಿ ಕಮ್ಮಿ ಎಂದರೆ ಮೂರು ದಿನಗಳಿಗೆ ಆಗುವಷ್ಟು ಆಹಾರ, ಕುಡಿಯುವ ನೀರು, ಅತ್ಯಗತ್ಯವಾಗಿ ಬೇಕಾದ ಔಷಧಿಗಳು ಮುಂತಾದವುಗಳ ಒಂದು 'ಎಮರ್ಜೆನ್ಸಿ ಕಿಟ್' ಸಿದ್ಧವಾಗಿಯೇ ಇಟ್ಟುಕೊಂಡಿರಬೇಕು ಎನ್ನುವುದೂ 'ಕಾಮನ್ ಸೆನ್ಸ್.' ಆದರೆ, ಇದೆಲ್ಲ ಈಗಿನ ಜ್ಞಾನ, ವಿಜ್ಞಾನದ ಫಲಗಳು. ಹಿಂದೆ ಅಸಾಧಾರಣವಾದ ಹಿಮ, ಭೂಕಂಪ, ಚಂಡಮಾರುತ, ಕಾಡ್ಗಿಚ್ಚು, ಪ್ರವಾಹಗಳು ಇತ್ಯಾದಿ ಸಮಸ್ಯೆಗಳು ಎಲ್ಲಿ, ಯಾವಾಗ, ಯಾವ ಮಟ್ಟಕ್ಕೆ ಇದ್ದಿರಬಹುದು ಎನ್ನುವುದನ್ನು ಮೊದಲೇ ತಿಳಿದುಕೊಳ್ಳುವ ವಿಧಾನಗಳು ಇರಲಿಲ್ಲ. ಮತ್ತು ತಿಳಿದರೂ ಅವುಗಳ ಮಾಹಿತಿಯನ್ನು ಎಲ್ಲರಿಗೂ ತಲುಪಿಸುವುದು ದೊಡ್ಡ ಸಮಸ್ಯೆಯೇ ಆಗಿತ್ತು.

ಜೋಸೆಫ್ ಸ್ಮಿತ್ ಈ ಕಾಯಿದೆಯನ್ನು 'ಬುಕ್ ಆಫ್ ಮಾರ್ಮನ್ಸ್' ನಲ್ಲಿ ಬರೆದಿದ್ದು 'ದಿವ್ಯ ದೃಷ್ಟಿ'ಯ ಫಲವೇ? ಅಥವಾ ತಾನು ಹುಟ್ಟು ಹಾಕಿದ ಹೊಸ ಪಂಗಡದ ಅಳಿವು,

ಉಳಿವಿನ ಬಗ್ಗೆ ಆತನದೇ ಚಿಂತನೆಯೋ? ಅದು ಏನೇ ಇರಲಿ, ಎಲ್ಲಾ ಕಡೆ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದ ಮತ್ತು ದೌರ್ಜನ್ಯಗಳಿಗೆ ತುತ್ತಾಗುತ್ತಿದ್ದ ಮಾರ್ಮನ್ನರಿಗೆ ಈ ಕಾಯಿದೆಯ ಅಗತ್ಯವಿತ್ತು ಎನಿಸುವುದಿಲ್ಲವೇ? ಕಾಯಿದೆಯ ಭಯವಿಲ್ಲದೇ ಇರುವ ಮನುಷ್ಯ ತನಗೆ ಬಂದದ್ದು, ತೋಚಿದ್ದು ಮಾಡುತ್ತಾನೆ ಎನ್ನುವ ಸಂಗತಿ ಹೊಸದಲ್ಲ. ಹಾಗಾಗಿ, ಬರೀ ಒಂದು ಕಾಯಿದೆಯ ದೃಷ್ಟಿಯಿಂದ ಮಾತ್ರವಲ್ಲ, ಇದು ಕಾಯಿದೆಯನ್ನು ಪಾಲಿಸುವುದು ಹೇಗೆ, ಅದಕ್ಕೇನು ಮಾಡಬೇಕು ಎನ್ನುವ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶಿಸ್ತನ್ನೂ ಕಲಿಸಿಕೊಡುತ್ತದೆ ಎನ್ನುವುದೂ ನಿಜ ಅಲ್ಲವೇ?

ಮೂರು ತಿಂಗಳ ಆಹಾರ ಸಂಗ್ರಹಣೆ ಎಲ್ಲರಿಗೂ ಸಾಧ್ಯವೇ? ದಿನಗೂಲಿ ಮಾಡುವವರಿಗೆ, ಕೈಗೆ ಬಂದ ತುತ್ತು ಹೊಟ್ಟೆಯನ್ನು ಪೂರ್ತಿ ತುಂಬಿಸಲೇ ಆಗದ ಸ್ಥಿತಿಯಲ್ಲಿರುವವರಿಗೆ, ಈ ಕಾಯಿದೆಯಿಂದ ಪ್ರಯೋಜನವೇನು? ಅದಕ್ಕೆ ಪೂರ್ವಭಾವಿ ಸಿದ್ಧತೆ ಮಾಡುವುದು ಹೇಗೆ? ಮನೆಯಲ್ಲಿ ಎಷ್ಟು ಜನರು? ಅವರ ವಯಸ್ಸೇನು, ಅವರು ಪ್ರತಿನಿತ್ಯ ತಿನ್ನುವ ಆಹಾರವೇನು, ಅದರ ಪ್ರಮಾಣವೇನು? ಯಾವ ರೀತಿಯ ಆಹಾರವನ್ನು ಶೇಖರಿಸಿಬೇಕು? ಅದನ್ನು ಕೆಡದಂತೆ ರಕ್ಷಿಸುವುದು ಹೇಗೆ? ಯಾವ ಕಾಲದಲ್ಲಿ ಯಾವ ಆಹಾರ ಪದಾರ್ಥಗಳ ಬೆಲೆ ಕೈಗೆಟುಕುವ ಹಾಗೆ ಇರುತ್ತದೆ? ಅದನ್ನು ಆಗ ಕೊಂಡು ದುಡ್ಡು ಉಳಿಸುವುದು ಮಾತ್ರವಲ್ಲ, ಅದನ್ನು ಸಂರಕ್ಷಿಸುವುದು ಹೇಗೆ? ನಮ್ಮವರು ಯಾರೋ ಆಪತ್ಕಾಲಕ್ಕೆ ಸಿಲುಕಿ, ಅವರ ಬಳಿ ಆಹಾರವಿಲ್ಲದಿದ್ದರೆ ಏನು ಮಾಡಬೇಕು? ನಮ್ಮದನ್ನು ಅವರೊಂದಿಗೆ ಹಂಚಿಕೊಳ್ಳುವುದೇ? ಹೇಗೆ? ಮಾರ್ಮನ್ನರಿಗೆ ಇದನ್ನೂ ಕೂಲಂಕಷವಾಗಿ 1820ರಿಂದ ಇಲ್ಲಿಯವರೆಗೂ ತಿಳಿಸಿಕೊಡಲಾಗುತ್ತಲೇ ಇದೆ. ಜೊತೆಗೆ, ಈ ಕಾಯಿದೆಯ ಪಾಲನೆಗೆ ಅನುಕೂಲವಾಗುವ ಹಾಗೆ ಆಧುನಿಕ ಪದ್ಧತಿಗಳು, ಸೌಲಭ್ಯಗಳು ಎಲ್ಲವನ್ನೂ ಅವರು ಅಳವಡಿಸಿಕೊಂಡು, ಇಂದಿಗೂ ಪಾಲಿಸುತ್ತಿದ್ದಾರೆ ಎನ್ನುವುದು ಗಮನಾರ್ಹ.

ಈಗ ಕರೋನ ವೈರಸ್ನ ಕಾಲಕ್ಕೆ ಬರೋಣ. ಮಾರ್ಚ್ 15, 2020ರ ಸರಿಸುಮಾರಿಗೆ ಕೋವಿಡ್-19ರ ಆರ್ಭಟ ಪ್ರಪಂಚದ ಎಲ್ಲೆಡೆ ಕೇಳಿಸಿತ್ತು. ಅಮೇರಿಕಾದ ಹಲವಾರು ರಾಜ್ಯಗಳಲ್ಲಿ 'ಆಚೆ ಅಡಿಯಿಡಲು ಬಲವತ್ತಾದ ಕಾರಣವಿಲ್ಲದಿದ್ದರೆ ಮನೆಯೊಳಗೇ ಇರಿ' ಎನ್ನುವ ಸುಗ್ರೀವಾಜ್ಞೆಗಳು ಜಾರಿಗೆ ಬಂದವು. ಅಲ್ಲಿಯವರೆಗೆ 'ಏನು ಮುಟ್ಟಿದರೂ ಕೈ ತೊಳೆಯಿರಿ, ಕೈ ತೊಳೆಯುತ್ತಲೇ ಇರಿ' ಎನ್ನುವುದನ್ನೇ ಪಾಲಿಸುತ್ತಿದ್ದ ಎಲ್ಲರಿಗೂ ರಾತ್ರೋರಾತ್ರಿ ಹೊಸ ತಲೆನೋವು ಶುರುವಾಯಿತು. ಇಡೀ ಸಂಸಾರಗಳು ಗಂಡ, ಹೆಂಡತಿ, ಮಕ್ಕಳು ಮರಿಯಲ್ಲದೆ, ಅವಿಭಕ್ತ ಕುಟುಂಬಗಳ ಅಜ್ಜಿ ತಾತಂದಿರು, ಇನ್ನಿತರರೂ ಇರುವ ಮನೆಗಳಲ್ಲಿ ಯಾರೂ ಹೊರಗೆ ಕಾಲಿಡುವ ಹಾಗಿಲ್ಲ ಎಂದಾದ ಮೇಲೆ ಮೂರು ಹೊತ್ತು ಎಲ್ಲರಿಗೂ ಆಹಾರ ಹೊಂದಿಸುವುದು ಹೇಗೆ? ಎಷ್ಟು ದಿನಗಳ ಮಟ್ಟಿಗೆ?

ದಿನಗೂಲಿ ಮಾಡುವವರಿಗೆ, ಕೈಗೆ ಬಂದ ತುತ್ತು ಹೊಟ್ಟೆಯನ್ನು ಪೂರ್ತಿ ತುಂಬಿಸಲೇ ಆಗದ ಸ್ಥಿತಿಯಲ್ಲಿರುವವರಿಗೆ ಹಸಿವು, ಬಡತನಗಳು ಸದಾ ಕಾಲದ ಸಮಸ್ಯೆಯಾಗಿದ್ದು, ಈಗಿನ ಕರೋನ ವೈರಸ್ ಪರಿಸ್ಥಿತಿಯಿಂದ ಇನ್ನೂ ದೊಡ್ಡ ಸಮಸ್ಯೆಯಾಗಿದೆ. ಇದು ಕೇವಲ ಮೂರು ದಿನದ ತುರ್ತು ಪರಿಸ್ಥಿತಿಯಲ್ಲ. ಮೂರು ತಿಂಗಳು ದಾಟಿದ್ದರೂ

ಇನ್ನೂ ಬಗೆ ಹರಿದಿಲ್ಲದ ಪರಿಸ್ಥಿತಿ. ನಿರುದ್ಯೋಗಿಗಳ ಸಂಖ್ಯೆ ಏರಿ ಕೂತಿದೆ ಮತ್ತು ದಿನದಿನಕ್ಕೆ ಜಾಸ್ತಿಯೂ ಆಗುತ್ತಿದೆ. ನನಗೆ ತಿಳಿದಮಟ್ಟಿಗೆ ಮಾರ್ಮನ್ನರು 'ಸ್ಥಿತಿವಂತರು.' ಬಹುಪತ್ನಿತ್ವ ಜಾರಿಯಲ್ಲಿರುವ ಕೆಲವು ಒಳ ಪಂಗಡಗಳಲ್ಲಿ ಬೇರೆ ರೀತಿಯ ಸಮಸ್ಯೆಗಳಿದ್ದರೂ ಅವರಲ್ಲಿ ಬಡತನ, ಹೊಟ್ಟೆಗಿಲ್ಲದ ಸ್ಥಿತಿ ಇಲ್ಲ. ಹಸಿದವರಿಗೆ ಅನ್ನ ನೀಡುವ, ಇರುವ ಅನ್ನವನ್ನು ಹಂಚಿಕೊಳ್ಳುವ ಮತ್ತು ದುಃಸ್ಥಿತಿಯಲ್ಲಿರುವವರಿಗೆ ಕೈಲಾದ ದಾನ ನೀಡುವ ಔದಾರ್ಯತೆಯನ್ನು ಸನಾತನ ಧರ್ಮ ಮೊದಲುಗೊಂಡು ಎಲ್ಲಾ ಮತಗಳೂ ಬೋಧಿಸುತ್ತವೆ. ಇಸ್ಲಾಂ ಮತದ ಅನುಯಾಯಿಗಳು ಗಳಿಸುವ ಸಂಪತ್ತಿನಲ್ಲಿ ಒಂದು ಭಾಗವನ್ನು ದಾನವಾಗಿ ಅಥವಾ ಧಾರ್ಮಿಕ ಕಾರ್ಯಗಳಿಗೆ ಮುಡಿಪಿಡಬೇಕು ಎಂದಿದೆ. ಆದರೆ, ಇವು ಬಹುತೇಕ ತಾತ್ವಿಕ ಅಥವಾ ಧಾರ್ಮಿಕ ಶ್ರದ್ಧೆಗಳು. 'ಪಾಲಿಸಲೇಬೇಕು' ಎನ್ನುವ ಕಾಯಿದೆಗೆ ಒಳಪಟ್ಟವಲ್ಲ. ಚಾರಿತ್ರಿಕವಾಗಿ ನೋಡುವುದಾದರೆ, ಹಲವಾರು ರೀತಿಗಳಲ್ಲಿ, ಹಲವೆಡೆಗಳಲ್ಲಿ, ಸನಾತನ ಧರ್ಮ ಮತ್ತು ಇತರ ಮತಗಳು ದೌರ್ಜನ್ಯಕ್ಕೆ ಒಳಗಾಗಿವೆ, ನಶಿಸಿಯೇ ಹೋಗುವ ಮಟ್ಟಕ್ಕೂ ಬಂದಿವೆ/ಬರುತ್ತಿವೆ. ಹಾಗಾಗಿ, ಮಾರ್ಮನ್ನರ ಉಳಿವಿಗೆ, ಈ ಕಾಯಿದೆಯು ಕಲಿಸಿದ ಜೀವನಶೈಲಿಯೇ ಇಲ್ಲಿಯವರೆಗೆ ಅವರನ್ನು ಕಾಪಾಡಿದೆಯೇ, ಮತ್ತು ಮುಂದೆಯೂ ಕಾಪಾಡುತ್ತದೆಯೇ ಎನ್ನುವ ಪ್ರಶ್ನೆ ಬರುತ್ತದೆ.

ಮಾರ್ಮನ್ನರ ಈ ಕಾಯಿದೆಯನ್ನು ಎಲ್ಲರೂ ಪಾಲಿಸುತ್ತಿದ್ದರೆ, ಇಂದಿನ ಕರೋನ ವೈರಸ್ ಪರಿಸ್ಥಿತಿಯಲ್ಲಿ ಹಲವು ಸಮಸ್ಯೆಗಳ ನಿವಾರಣೆ ಅಥವಾ ಎದುರಿಸುವಿಕೆ ಸುಲಭವಾಗಿರುತ್ತಿತ್ತು ಎನಿಸುವುದಿಲ್ಲವೇ? ಕೆಲವರ 'Live like there is no tomorrow' ಎನ್ನುವ ಧೋರಣೆ ಮತ್ತು ಜೀವನಶೈಲಿಯಲ್ಲಿ ಯಾವ ಸಾಮಾಜಿಕ, ನೈತಿಕ, ಆರ್ಥಿಕ ಶಿಸ್ತೂ ಇಲ್ಲದೆ ಈಚಿನ ದಿನಗಳಲ್ಲಿ ಎಲ್ಲೆಡೆ ನಡೆಯುತ್ತಿರುವ ಅರಾಜಕತೆ ಇರುತ್ತಿತ್ತೇ? ಈ ಪ್ರಶ್ನೆಗಳೂ ಏಳುತ್ತವೆ.

ಸ್ಥಿತಿವಂತ ಹಿಂದುವಾಗಿ ನನ್ನ ವೈಯಕ್ತಿಕ ಸಾಮಾಜಿಕ, ನೈತಿಕ, ಧಾರ್ಮಿಕ ನಡವಳಿಕೆಗಳು ಈ ಮಾರ್ಮನ್ನರ ಕಾಯಿದೆಯಿಂದ ಬದಲಾಗುವುದಿಲ್ಲ. ಈ ಕರೋನ ವೈರಸ್ ಪರಿಸ್ಥಿತಿಯಿಂದ ನನ್ನ ಆರ್ಥಿಕ ಸ್ಥಿತಿಯನ್ನು, ಜೀವನಶೈಲಿಯನ್ನು ದೊಡ್ಡ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳುವ ಅಗತ್ಯವೂ ಇಲ್ಲ. ಆದರೆ, ಮಾರ್ಮನ್ನರ ಕಾಯಿದೆ ಮತ್ತು ಅದರ ಪಾಲನೆಯನ್ನು ನಾನು ಗೌರವಿಸುತ್ತೇನೆ. ಏಕೆ? ಏಕೆಂದರೆ, ಅದರಿಂದ ಸಮಾಜಕ್ಕೆ ಯಾವ ಹಾನಿಯೂ ಇಲ್ಲ ಮತ್ತು ಅದು ಒಂದು ರೀತಿಯ ಶಿಸ್ತನ್ನು ಜೀವನಕ್ಕೆ ತರುತ್ತದೆ ಎನ್ನುವ ಕಾರಣಕ್ಕಾಗಿ.

ಆಧಾರ

1. William A. Wilson Folklore Archives, Brigham Young University.
   The Influences of Folklore on the Creation of the Mormon Identity, Hannah Ruth.
2. LaPrise, University of Tennessee, Knoxville.

❑

35

ಚೌಕ ನೃತ್ಯ

ಹೇಮಾ ಶ್ರೀಕಂಠ
ಸೇಯಿಂಟ್ ಲೂಯಿಸ್, ಮಿಸ್ಸೌರಿ

*

'ಚೆಲುವಯ್ಯ ಚೆಲ್ವೋ' ಹಾಡು ಕೇಳಿದ ತಕ್ಷಣ ಹೇಗೆ ಕನ್ನಡಿಗರ ಕಾಲು, ದೇಹ ಕುಣಿಯತೊಡಗುತ್ತೋ, ಹಾಗೇ ಸ್ಕ್ವೇರ್ ಡ್ಯಾನ್ಸ್ ಅಂದ ತಕ್ಷಣ ಸ್ಕ್ವೇರ್ ಡ್ಯಾನ್ಸ್ ಪ್ರಿಯರ ಎದೆ ಮಿಡಿಯುತ್ತೆ. ಸ್ಕ್ವೇರ್ ಡ್ಯಾನ್ಸ್ (ಚೌಕ ನೃತ್ಯ) ಮಿಸ್ಸೌರಿ ರಾಜ್ಯದ ರಾಜ ನೃತ್ಯ. ಯಕ್ಷಗಾನದಲ್ಲಿ ಹಿನ್ನೆಲೆ ಗಾಯಕರು ನೃತ್ಯಕ್ಕೆ ಸೊಬಗು ಕೊಟ್ಟಂತೆ ಚೌಕ ನೃತ್ಯದ ಸೂತ್ರದಾರರು (callers) ಹಲವು ಜನಪ್ರಿಯ ಹಾಡುಗಳನ್ನು ಅಳವಡಿಸಿ ತಾಳ ಮತ್ತು ಲಯಬದ್ಧವಾಗಿ ಹಾಡಿದಾಗ ಜನರು ಗುಂಪಾಗಿ ಸುಂದರವಾದ ಶೈಲಿಯಲ್ಲಿ ನರ್ತಿಸುತ್ತಾರೆ.

ಸ್ಕ್ವೇರ್ ಡ್ಯಾನ್ಸ್ 16ನೆಯ ಶತಮಾನದಿಂದ ಯೂರೋಪಿನಲ್ಲಿ ಸರ್ವೇ ಸಾಮಾನ್ಯವಾಗಿ ಮಾಡುತ್ತಿದ್ದ ನೃತ್ಯವೆಂದು ದಾಖಲಾಗಿದೆ. ಯೂರೋಪಿಯನ್ನರು (ಫ್ರಾನ್ಸ್, ಇಟಲಿ, ಸ್ಪೇನ್ ಮತ್ತು ಇಂಗ್ಲೆಂಡ್) ಉತ್ತರ ಅಮೆರಿಕಾಗೆ ಅದನ್ನು ಸುಮಾರು 19ನೇ ಶತಮಾನದಲ್ಲಿ ಪರಿಚಯಿಸಿದರು ಎನ್ನಲಾಗಿದೆ. ಸ್ಕ್ವೇರ್ ಡ್ಯಾನ್ಸ್ ಹಲವಾರು ಶೈಲಿಗಳಲ್ಲಿದೆ. ಕಾಂಟ್ರಾ, ಕ್ವಾಡ್ರಿಲ್ ಕ್ಲಾಸಿಕಲ್ ಶೈಲಿ ಅದಲ್ಲದೆ ಸದ್ರನ್ ಮೌಂಟನ್ ಶೈಲಿ, ಕ್ಲಾಸಿಕಲ್ ವೆಸ್ಟರ್ನ್ ಶೈಲಿ, ಮಾಡರ್ನ್ ವೆಸ್ಟರ್ನ್ ಶೈಲಿ, ಮ್ಯಾರೀಟೈಮ್ ಕೆನೆಡಿಯನ್ ಚೌಕ ನೃತ್ಯ, ಸಿಂಗಿಂಗ್ ಸ್ಕ್ವೇರ್ ಡ್ಯಾನ್ಸ್ ಇತ್ಯಾದಿ. 1926ರಲ್ಲಿ ಪ್ರಖ್ಯಾತ ಫೋರ್ಡ್ ಕಾರ್ ಸಂಸ್ಥೆಯ ಸ್ಥಾಪಕರಾದ (ಹೆನ್ರಿ) ಫೋರ್ಡ್ ದಂಪತಿಗಳ ಪುಸ್ತಕ 'ಗುಡ್ ಮಾರ್ನಿಂಗ್' ನಲ್ಲಿ ಹಳೆಯ ಕಾಂಟ್ರಾಸ್, ಕ್ವಾಡ್ರಿಲ್ ಶೈಲಿಯ ಚೌಕ ನೃತ್ಯಗಳ ವಿವರಗಳನ್ನು ಮುದ್ರಿಸಲಾಗಿದೆ. ಹೆನ್ರಿ ಫೋರ್ಡ್ ಚೌಕ ನೃತ್ಯವನ್ನು ಪುನರುಜ್ಜೀವನಗೊಳಿಸಿದರು ಎಂದರೆ ಉತ್ಪ್ರೇಕ್ಷೆ ಏನಲ್ಲ. ಈ ನೃತ್ಯವನ್ನು ಅತ್ಯಾಕರ್ಷಕವೆನ್ನಿಸುವಂತೆ ರೂಪುಗೊಳಿಸುವುದು ಸೂತ್ರಧಾರರ (callers) ಕೈಯಲ್ಲಿರುತ್ತದೆ.

ಪ್ರತೀ ವರುಷ ಚೌಕ ನೃತ್ಯ ಉತ್ಸವಗಳನ್ನು (festivals) ಅಮೆರಿಕಾದ ಬೇರೆ ಬೇರೆ ರಾಜ್ಯಗಳಲ್ಲಿ ಏರ್ಪಡಿಸಲಾಗುತ್ತದೆ.

ಮೇ 31, 1995ರಲ್ಲಿ ಸ್ಕ್ವೇರ್ ಡ್ಯಾನ್ಸ್ ಮಿಸ್ಸೌರಿ ರಾಜ್ಯದ ಜಾನಪದ ನೃತ್ಯವೆಂದು ಅಧಿಕೃತವಾಗಿ ಘೋಷಿಸಲ್ಪಟ್ಟಿತು. ಮಿಸ್ಸೌರಿಯಲ್ಲಿ ಓಜಾರ್ಕ್ ಮೌಂಟನ್ ಶೈಲಿಯಲ್ಲಿ ಈ ನೃತ್ಯ ಮಾಡಲಾಗುತ್ತದೆ. ಚೌಕ ನೃತ್ಯ ಒಂದು ರೀತಿಯಲ್ಲಿ ಗೆಳೆತನದ ಅಥವಾ ಜೋಡಿಗಳು ಮಾಡುವ ಪ್ರಣಯ (courtship) ನೃತ್ಯ.

ಪಾರಂಪರಿಕ ಚೌಕ ನೃತ್ಯಕ್ಕೆ ನಿರ್ದಿಷ್ಟ ವೇಷ ಭೂಷಣ ಇದೆ. ಗಂಡಸರು ಉದ್ದ ತೋಳಿನ ಪಾಶ್ಚಿಮಾತ್ಯ ಶೈಲಿಯ ಶರ್ಟ್, ಷರಾಯಿ, ಸ್ಕಾರ್ಫ್ ಮತ್ತು ಯಾವುದೇ ಕ್ಲಬ್ಬಿಗೆ ಸೇರಿದವರಾಗಿದ್ದರೆ ಆ ಕ್ಲಬ್ಬಿನ ಗುರುತಿರುವ ಸರ (pin) ಮತ್ತು ಹೆಂಗಸರು ವಿನ್ಯಾಸವಿರುವ ಬ್ಲೌಸ್, ವಿಶೇಷವಾದ ಒಳವಿನ್ಯಾಸದಿಂದ ದಪ್ಪವಾಗಿ ಮತ್ತು ನೆರಿಗೆಗಳಿಂದ ಕೂಡಿದಂತೆ ಕಾಣುವ ಸ್ಕರ್ಟ್, ಸೊಂಟಪಟ್ಟಿ ಮತ್ತು ಚೌಕನೃತ್ಯಕ್ಕೆಂದೇ ಇರುವ ಬೂಟುಗಳನ್ನು ಧರಿಸುತ್ತಾರೆ.

ಚೌಕ ನೃತ್ಯದಲ್ಲಿ 4 ಜೋಡಿಗಳು ಇರುತ್ತಾರೆ (ಒಟ್ಟು 8 ಜನ). ಚೌಕ ನೃತ್ಯದ ಸೂತ್ರಧಾರರು (callers) ನೃತ್ಯವನ್ನು ಆಯೋಜಿಸಿ, ನಿರ್ದೇಶಿಸುವುದರಲ್ಲಿ ಪರಿಣತಿ ಹೊಂದಿರುತ್ತಾರೆ. 4 ಜೊತೆಗಳು ಎದುರು ಬದಿರಾಗಿ ಚೌಕಾಕಾರದಲ್ಲಿ ನಿಲ್ಲುತ್ತಾರೆ. ಸೂತ್ರಧಾರರಿಗೆ ಬೆನ್ನು ಹಾಕಿರುವ ಜೋಡಿ ಹಾಗೂ ಅವರ ಎದುರು ಇರುವ ಜೋಡಿಯನ್ನು ಎದುರು ಜೋಡಿ (heads) ಎಂದೂ, ಅವರ ಎಡ ಬಲದ ಜೋಡಿಗಳನ್ನು ಬದಿಯ ಜೋಡಿ (sides) ಎಂದು ತಿಳಿಯಲಾಗುತ್ತದೆ.

ನೃತ್ಯದ ಉದ್ದೇಶ ಈ ನೃತ್ಯ ಶುರುವಾದಾಗ ಜೋಡಿಗಳು ಮೊದಲಿಗೆ ತಾವು ನೃತ್ಯ ಪ್ರಾರಂಭಿಸಿದ ಜಾಗಕ್ಕೇ ತಿರುಗಿ ಬರೋದು. ಮಧ್ಯೆ ತಪ್ಪಾದಾಗ ಜೋಡಿಗಳು ಬೇರೆಯಾಗಿ ಬೇರೆ ಸಂಗಾತಿಗಳೊಂದಿಗೆ ತಮ್ಮ ಜಾಗಕ್ಕೆ ಬರುತ್ತಾರೆ. ಸೂತ್ರಧಾರರು ಕೆಲವೊಮ್ಮೆ ಕುಚೋದ್ಯಕ್ಕೆ ಜೋಡಿಗಳನ್ನು ಗೊಂದಲಕ್ಕೆ ಈಡು ಮಾಡುತ್ತಾರೆ. ನೀವು ನೃತ್ಯದಲ್ಲಿ ಪರಿಣತಿ ಪಡೆದವರಾಗಿದ್ದರೆ ಹಾಗೂ ಅವರು ಹೇಳುವುದನ್ನು ಗಮನ ಇಟ್ಟು ಕೇಳಿದರೆ ಗೊಂದಲಕ್ಕೆ ಸಿಗೋ ಸಂದರ್ಭಗಳು ಬಹಳ ಕಮ್ಮಿ.

ನಮ್ಮ ಕನ್ನಡ ಸಂಘ 'ಸಂಗಮ'ದ ರಜತ ಮಹೋತ್ಸವದ ಸಂದರ್ಭದಲ್ಲಿ ಕನ್ನಡಕ್ಕೆ ಅನುವಾದಿಸಿದ ಸ್ಕ್ವೇರ್ ಡ್ಯಾನ್ಸ್ ಸಂಗೀತಕ್ಕೆ ಹಿಂದಿನ ಎಲ್ಲಾ ಅಧ್ಯಕ್ಷರುಗಳು ನರ್ತಿಸಿ ಕನ್ನಡಾಭಿಮಾನಿಗಳಿಗೆ ಈ ಕಲೆಯನ್ನು ಪರಿಚಯ ಮಾಡಿಕೊಟ್ಟರು. ನೃತ್ಯ ಮಾಡೋವಾಗ ಗೊಂದಲಕ್ಕೆ ಈಡಾಗಿ ನಗೆ ಬುಗ್ಗೆ ಹರಿಸಿದರು.

ನಾನು ಅನುವಾದಿಸಿದ ಈ ಸರಳ ಶೈಲಿ ನೃತ್ಯದ ಹಾಡನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ.

ಚೌಕ ನೃತ್ಯ:

ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ!
ಸಂಗಾತೀ (ಪಾರ್ಟ್ನರೀಗೆ) ತಲೆ ಬಾಗಿಸಿ ಪಕ್ಕದ ಮೂಲೆಗೆ (ಕಾರ್ನರೀಗೆ) ಕತ್ತು ಬಗ್ಗಿಸಿ
ಮುಗುಳ್ನಗೆ ಬೀರಿ ಚೌಕಕ್ಕೇ ಮೊಲದ ಹಾಗೆ ಕುಣೀಬೇಡಿ ಹಂಸದ ಹಾಗೆ ತೇಲಿ ನೀವು
ಎಲ್ಲಾ ಕೈ ಹಿಡಿದುಕೊಂಡೂ
ಎಲ್ಲಾ ಕೈ ಹಿಡಿದುಕೊಂಡು ವೃತ್ತವಾಗಿ ಎಡಕ್ಕೆ ಚಲಿಸಿ
ವೃತ್ತವನ್ನು ಪೂರ್ತಿ ಮಾಡೀ...ಬಲಕ್ಕೀಗ ತಿರುಗಿಕೊಂಡು ವೃತ್ತವನ್ನು ಪೂರ್ತಿ ಮಾಡಿ
ವಾಪಸ್ ಮನೆಗೆ ಬಂದುಬಿಡೀ
ವಾಪಸ್ ಬಂದ ನೀವು ಈಗ ಮುಂದೆ ಹೋಗಿ ಹಿಂದೆ ಬನ್ನಿ
ಎಲ್ಲಾ ಕೈ ಹಿಡಿದುಕೊಂಡು ಬಲಕ್ಕೆ ವೃತ್ತವಾಗಿ ಚಲಿಸಿ
ಮನೆಗೀಗ ವಾಪಸ್ ಬನ್ನೀ
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ!
ಮನೇಗ್ ವಾಪಸ್ ಬಂದ ನೀವು ಸಂಗಾತೀಗೆ ಡೊಸೀ ಡೋ ಪಕ್ಕದವರಿಗೆ ಡೋ ಸೀ ಡೋ...
ಎಲ್ಲಾ ಕೈ ಹಿಡಿದುಕೊಂಡು ಎಡಕ್ಕೆ ವೃತ್ತವಾಗಿ ಚಲಿಸಿ ವೃತ್ತವನ್ನು ಪೂರ್ತಿ ಮಾಡೀ
ಮನೇಗ್ ವಾಪಸ್ ಬಂದ ನೀವು ಸಂಗಾತೀಗೆ ಡೊಸೀ ಡೋ ಪಕ್ಕದವರಿಗೆ ಡೋ ಸೀ ಡೋ
ಮಾಡಿ ನಿಮ್ಮ ಸಂಗಾತಿಯ ಜೊತೆ ಪ್ರಾಮಿನೇಡ್
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ!
ಬದಿಯ ಜೋಡಿ ಈಗ ಮುಂದೆ ಹೋಗಿ ಮತ್ತೆ ಹೋಗಿ ವಾಪಸ್ ಬನ್ನಿ
ಬದಿಯ ಜೋಡಿ ಈಗ ಮುಂದೆ ಹೋಗಿ ಮತ್ತೆ ಹೋಗಿ ವಾಪಸ್ ಬನ್ನಿ
ಸಂಗಾತೀಗೆ ಡೋ ಸೀ ಡೋ... ಪಕ್ಕದವರಿಗೆ ಡೋ ಸೀ ಡೋ
ಎಲ್ಲಾ ಕೈ ಹಿಡಿದುಕೊಂಡು ವೃತ್ತವಾಗಿ ಎಡಕ್ಕೆ ಚಲಿಸಿ ವೃತ್ತವನ್ನು ಪೂರ್ತಿ ಮಾಡೀ
ಮಾಡಿ ನಿಮ್ಮ ಸಂಗಾತೀಗೆ ಡೋ ಸೀ ಡೋ...ಮಾಡಿ ನಿಮ್ಮ ಪಕ್ಕದವರಿಗೆ ಡೋ ಸೀ ಡೋ...
ಮಾಡಿ ನಿಮ್ಮ ಸಂಗಾತಿಯನ್ನು ಪ್ರಾಮಿನೇಡ್
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ!

ಎದುರು ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮಧ್ಯಕ್ಕೆ ಹೋಗಿ ಮಾಡಿ
ಎದುರಿನೋರಿಗೆ ಡೋ ಸೀ ಡೋ
ಎದುರು ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮಧ್ಯಕ್ಕೆ ಹೋಗಿ ಮಾಡಿ
ಎದುರಿನೋರಿಗೆ ಡೋ ಸೀ ಡೋ
ಎಲ್ಲಾ ಕೈ ಹಿಡಿದುಕೊಂಡು ಅರ್ಧ ವೃತ್ತ ಎಡಕ್ಕೆ ಚಲಿಸಿ ಬಲಕ್ಕೆ ತಿರುಗಿ
ಪಕ್ಕದ ಮೂಲೆ ಪ್ರಾಮಿನೇಡ್
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ
ಎದುರು ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮಧ್ಯಕ್ಕೆ ಹೋಗಿ ಚಲಿಸಿ
ವೃತ್ತವಾಗಿ ನಾಲ್ವರೂ
ಪಕ್ಕದ ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮಧ್ಯಕ್ಕೆ ಹೋಗಿ ಚಲಿಸಿ
ವೃತ್ತವಾಗಿ ನಾಲ್ವರೂ
ಎಲ್ಲಾ ಕೈ ಹಿಡಿದುಕೊಂಡು ಅರ್ಧ ವೃತ್ತ ಎಡಕ್ಕೆ ಚಲಿಸಿ ಬಲಕ್ಕೆ ತಿರುಗಿ
ಪಕ್ಕದ ಮೂಲೆ ಪ್ರಾಮಿನೇಡ್
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ
ಎದುರು ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮುಂದಕ್ಕೆ ಹೋಗಿ ಮಾಡಿ ಎದುರಿನೋರಿಗೆ ಡೋ ಸೀ ಡೋ
ಹೆಡ್ಸ್ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮುಂದಕ್ಕೆ ಹೋಗಿ ಮಾಡಿ ಎದುರಿನೋರಿಗೆ ಡೋ ಸೀ ಡೋ
ಎಲ್ಲಾ ಕೈ ಹಿಡಿದುಕೊಂಡು ಅರ್ಧ ವೃತ್ತ ಎಡಕ್ಕೆ ಚಲಿಸಿ ಬಲಕ್ಕೆ ತಿರುಗಿ ಪಕ್ಕದ ಮೂಲೆ ಪ್ರಾಮಿನೇಡ್
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ
ಎದುರು ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮಧ್ಯಕ್ಕೆ ಹೋಗಿ ಚಲಿಸಿ
ವೃತ್ತವಾಗಿ ನಾಲ್ವರೂ
ಎದುರು ಜೋಡಿ ಈಗ ಮಧ್ಯಕ್ಕೆ ಹೋಗಿ ಹಿಂದೆ ಬನ್ನಿ ಮತ್ತೆ ಮಧ್ಯಕ್ಕೆ ಹೋಗಿ ಚಲಿಸಿ
ವೃತ್ತವಾಗಿ ನಾಲ್ವರೂ
ಎಲ್ಲಾ ಕೈ ಹಿಡಿದುಕೊಂಡು ಅರ್ಧ ವೃತ್ತ ಎಡಕ್ಕೆ ಚಲಿಸಿ ಬಲಕ್ಕೆ ತಿರುಗಿ

ಪಕ್ಕದ ಮೂಲೆಗೆ ಪ್ರಾಮಿನೇಡ್....
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ!
ಸಂಗಾತೀ ತಲೆ ಬಾಗಿಸಿ ಪಕ್ಕದ ಮೂಲೆಗೆ ಕತ್ತು ಬಗ್ಗಿಸಿ
ಮುಗುಳ್ನಗೆ ಬೀರಿ ಚೌಕಕ್ಕೇ
ಬನ್ನಿ ಗೆಳೆಯರೇ ಸೇರಿ ನಾವೆಲ್ಲಾ ಚೌಕಾದ ನೃತ್ಯವನ್ನು ಈಗ ಮಾಡೋಣ!
ಚೌಕದ ನೃತ್ಯವನ್ನು ಈಗ ಮಾಡೋಣ!
(ಡೋ ಸೀ ಡೋ – ಪಕ್ಕದವರ ಸುತ್ತ ಇದ್ದಲ್ಲೇ ಸುತ್ತುವುದು)
(ಪ್ರಾಮಿನೇಡ್ – ಸೊಂಟ ಹಿಡಿದು ಹೆಜ್ಜೆ ಇಡುವುದು)

ಆಧಾರ

1. Square Dance Information from internet.
2. The Complete Book of Square Dancing by Betty Casey.

❑

ಅನುಬಂಧ

ಅನುಬಂಧ–1. ಸಹಸ್ಪಂದನ

ಅನುಬಂಧ–2. ನಮ್ಮ ಲೇಖಕರು

ಅನುಬಂಧ–3. ಕಸಾರಂ ಪ್ರಕಟಣೆಗಳು

ಅನುಬಂಧ–4. ಕಸಾರಂ ಪ್ರಕಟಣೆಗಳ ಬಗ್ಗೆ ಅಭಿಪ್ರಾಯಗಳು

ಅನುಬಂಧ 1

ಸಹಸ್ಪಂದನ

ಬಹುಮುಖಿ ಸಂಸ್ಕೃತಿಯ ಪಕ್ಷಿನೋಟ

ಗುರುಪ್ರಸಾದ ಕಾಗಿನೆಲೆ
ರಾಚೆಸ್ಟರ್, ಮಿನೆಸೊಟಾ

*

ಕನ್ನಡ ಸಾಹಿತ್ಯ ರಂಗದಿಂದ ಪ್ರಕಟವಾಗುತ್ತಿರುವ ಅಮೆರಿಕಾದ ಜನಪದವನ್ನೇ ವಿಷಯವನ್ನಾಗಿ ಬರೆದ ಈ ಲೇಖನ ಸಂಗ್ರಹವನ್ನು ಮೊದಲಿಂದ ಕೊನೆಯತನಕ ಓದಿದಾಗ ಒಂದು ರಮ್ಯಾತಿರಮ್ಯಲೋಕಕ್ಕೆ ಹೋಗಿ ವಿಹರಿಸಿ ಬಂದ ಅನುಭವವಾಯಿತು. ಈ ರಮ್ಯತೆ ಎನ್ನುವುದಕ್ಕೆ ಇಂಗ್ಲಿಷಿನಲ್ಲಿ romanticism ಎನ್ನುವ ಅರ್ಥವೂ ಇದೆ. ಈ ಅರ್ಥದ ನೆಲೆಯಿಂದ ರಮ್ಯ ಎನ್ನುವ ಕನ್ನಡ ಶಬ್ದ ತೀರ ಕ್ಲೀಶೆಯಾಗಿ ತನ್ನರ್ಥವನ್ನು ಮೂಡಿಸಿಕೊಂಡಿದೆ. ರಮ್ಯತೆಯನ್ನಷ್ಟೇ ನೆಚ್ಚಿಕೊಂಡ ಕೃತಿಗಳು ಅಕಾರಣವಾಗಿ ನಮ್ಮನ್ನು ದಾರಿ ತಪ್ಪಿಸಬಲ್ಲವು. ಆದರೆ ಅದನ್ನು ದಾಟಿ ಈ ಲೇಖನಗಳು ನನ್ನಲ್ಲಿ ಹಲವು ಪ್ರಶ್ನೆಗಳನ್ನು ಕೂಡ ಮೂಡಿಸಿದವು.

ಇಂತಹ ಒಂದು ಪುಸ್ತಕವನ್ನು ಪ್ರಕಟಿಸುವ ಸಾಧ್ಯತೆಯನ್ನು ಅರಿತು, ಅದರ ಸ್ವರೂಪವನ್ನು ಗ್ರಹಿಸಿ, ಒಬ್ಬೊಬ್ಬರಿಗೆ ಒಂದೊಂದು ವಿಷಯದ ಬಗ್ಗೆ ಸಂಶೋಧಿಸಿ ಬರೆಯಲು ವಹಿಸಿಕೊಟ್ಟು, ಎಲ್ಲವನ್ನೂ ಒಗ್ಗೂಡಿಸಿ ಸಂಶ್ಲೇಷಿಸಿ ಸಂಪಾದಿಸುವುದು ಕಡಿಮೆ ಶ್ರಮದ ಕೆಲಸವಲ್ಲ. ಒಂದು ಲೇಖನವನ್ನು ಬರೆದುಕೊಡಿ ಎಂದು ನನ್ನನ್ನೂ ಸಂಪಾದಕರು ಕೇಳಿದ್ದರು. ಸಂಶೋಧನೆ ಮಾಡಿ ಲೇಖನ ಬರೆಯುವುದು ನನ್ನ ಜಾಯಮಾನವಲ್ಲ. ನಾನೊಬ್ಬ ಕತೆಗಾರ. ಹಾಗಾಗಿ ನನಗೆ ಕೊಟ್ಟಿದ್ದ ವಿಷಯದಲ್ಲಿ ಸಂಶೋಧನೆ ಮಾಡಿದಷ್ಟೂ ಹೊಸದನ್ನು ನಾನೇನೂ ಹೇಳಲಾರೆ ಎಂದು ನನಗನಿಸಿತು. ಅದನ್ನೇ ಸಂಪಾದಕರಿಗೆ ಹೇಳಿದಾಗ 'ಹಾಗಾದರೆ ಇಡೀ ಪುಸ್ತಕವನ್ನು ಓದಿ ಒಂದು ಸಮೀಕ್ಷಾ ಲೇಖನವನ್ನು

ಬರೆದು ಕೊಡಿ' ಎಂದು ಇನ್ನೂ ಗುರುತರವಾದ ಜವಾಬುದಾರಿಯನ್ನು ವಹಿಸಿದರು. ಈ ಎಲ್ಲ ಲೇಖನಗಳನ್ನು ಓದಿ ನನಗೆ ಅನಿಸಿದ್ದನ್ನು ಬರೆದಿದ್ದೇನೆ. ಇಂತಹ ವಿಷಯ ವೈವಿಧ್ಯವಿರುವ ಪುಸ್ತಕಗಳನ್ನು ಓದಿ ಸಮೀಕ್ಷೆಯನ್ನು ಬರೆಯಲು ನನಗಂತೂ ಸಾಧ್ಯವಿಲ್ಲ. ಓದುತ್ತಲೇ ನನ್ನ ಅನಿಸಿಕೆಗಳನ್ನು ಒಂದೆಡೆ ಗುರುತು ಹಾಕಿಕೊಂಡು ನಂತರ ಆ ಅನಿಸಿಕೆಗಳಿಗೆ ಇನ್ನೊಬ್ಬ ಬರಹಗಾರನಾಗಿ ಮಾತ್ರ ಸ್ಪಂದಿಸಿದ್ದೇನೆ. ಇದು ಯಾವ ವಿಮರ್ಶೆಯೂ, ಸಮೀಕ್ಷೆಯೂ ಅಲ್ಲ. ನಿಮ್ಮ ಸಹಲೇಖಕನ ಒಂದು ಸ್ಪಂದನ.

* * *

ಅಮೆರಿಕದಂತಹ ಬಹುಜನಾಂಗೀಯ ಹಿನ್ನೆಲೆಯನ್ನು ಹೊಂದಿರುವ ದೇಶದಲ್ಲಿ ಜನಪದ ಎಂದರೆ ಏನು ಎಂದು ವಿವರಿಸಿಕೊಳ್ಳುವುದೇ ಬಲು ಕಷ್ಟಕರವಾದ ಮಾತು. ಜನಪದ ಎಂಬ ಪದದ ವ್ಯುತ್ಪತ್ತಿ ಮತ್ತು ಅರ್ಥದ ಬಗ್ಗೆ ಹಲವು ವಿವರಣೆಗಳಿವೆ. ಈ ಬಗ್ಗೆ ಬಹಳ ಜಿಜ್ಞಾಸೆಗೆ ಹೋಗದೇ ಅಮೇರಿಕಾದ ಸಂದರ್ಭದಲ್ಲಿ, ನೆಲೆಯಲ್ಲಿ ಜನಪದ ಎಂದರೇನು ಎಂದು ಕೇಳಿಕೊಂಡಾಗ ಸ್ಥೂಲವಾಗಿ ಎರಡು ಬಗೆಯ ಜನಪದವನ್ನು ನಾವು ಕಾಣಬಹುದು.

ಮೊದಲನೆಯದು ಅಮೆರಿಕದಲ್ಲಿಯೇ ನೆಲಸಿದ್ದ ಅಮೆರಿಕನ್ ಇಂಡಿಯನ್ ಎಂಬ ಮೂಲನಿವಾಸಿಗಳ ಜೀವನಶೈಲಿ, ಅವರ ನಂಬಿಕೆಗಳು, ಹಾಡು, ಹಸೆ, ಇತ್ಯಾದಿ. ಎರಡನೆಯದು ನಂತರ ಬಂದ ವಲಸೆಗಾರರು ತಂದ ಅನೇಕ ಕಥೆ, ಕಟ್ಟಳೆಗಳು, ಮುಂತಾದವು. ಇಲ್ಲಿ ಮೂಲ ನಿವಾಸಿಗಳ ಜನಪದ ಮತ್ತು ವಲಸೆಗಾರರ ಜನಪದ ಎಂದು ಎರಡು ಪ್ರತ್ಯೇಕ ವಿಭಾಗಗಳನ್ನು ಕೇವಲ ಭೌಗೋಳಿಕ ನೆಲೆಯಲ್ಲಿ ಮಾಡಲಾಗಿಲ್ಲ. ಸಾಂಸ್ಕೃತಿಕ ಹಾಗೂ ರಾಜಕೀಯವಾಗಿ ಕೂಡ ಈ ವರ್ಗೀಕರಣಕ್ಕೆ ಹಿನ್ನೆಲೆಯಿದೆ. ಮೇಲುನೋಟಕ್ಕೆ ಆಕ್ರಮಣ– ಪ್ರತಿರೋಧಗಳು ಈ ಎಲ್ಲ ಜನಪದದ ಧಾತುವೆನಿಸಿದರೂ ವಸಾಹತುಶಾಹಿ, ವಲಸೆ, ಬಂಡಾಯ, ಸ್ವಮರುಕ, ದೈವಭಕ್ತಿ, ಮೂಢನಂಬಿಕೆ, ಉಡುಗೆ ತೊಡುಗೆ, ಸಂಗೀತ, ಅಡುಗೆ– ಹೀಗೆ ಎಲ್ಲ ಸ್ತರಗಳಲ್ಲಿ ಈ ಎರಡೂ ಬಗೆಯ ಜನಪದದಲ್ಲಿ ಇರುವ ಅನನ್ಯತೆಯನ್ನು ನಾವು ಗಮನಿಸಬೇಕು.

ಮೂಲಭೂತವಾಗಿ ಈ 'ಜನಪದ' ಎಂಬ ಪದದ ಅರ್ಥವನ್ನು ಈ ಪುಸ್ತಕದ ಮಟ್ಟಿಗೆ ದೇಸೀ ಎಂದು ಇಟ್ಟುಕೊಳ್ಳಬಹುದೇನೋ. ಇದನ್ನು ಇದೇ ಪುಸ್ತಕದ ರಾಗು ಕಟ್ಟಿನಕೆರೆ ಅವರ ಲೇಖನದಲ್ಲಿನ ಹಲವು ಭಾಗಗಳು ವಿಸ್ತೃತವಾಗಿ ವಿವರಿಸುತ್ತವೆ. ಅವರೇ ಹೇಳುವಂತೆ "ದೇಶೇ ದೇಶೇ ಜನಾನಾಂ ಯದ್ರುಚ್ಯಾತ್ ಹೃದಯರಂಜಕಮ್" ಎಂದರೆ ಸ್ಥಳೀಯವಾದ ಜನರನ್ನು ರಂಜಿಸುವುದೇ ಜನಪದ ಎಂದರ್ಥ. ಬೇರೆ ಏನೇ ವಿವರಣೆಗಳಿರಲಿ, ಈ ಪುಸ್ತಕದ ಎಲ್ಲ ಲೇಖನಗಳಲ್ಲಿನ ಸಾಮಾನ್ಯ ಎಳೆಯನ್ನು ನಾವು ಒಗ್ಗೂಡಿಸಿ ಅರ್ಥೈಸಿಕೊಳ್ಳಬೇಕಾದರೆ 'ಸ್ಥಳೀಯವಾಗಿ ಹುಟ್ಟಿ, ಸ್ಥಳೀಯ ಜನರನ್ನು ರಂಜಿಸುವುದೇ ಜನಪದ' ಎಂಬರ್ಥವನ್ನು ಇಟ್ಟುಕೊಳ್ಳಬಹುದು. ಇದರ ಸರಳ ಅರ್ಥ ದೇಸೀ.

ಈ ವಿವರಣೆಗಳನ್ನು ನಾವು ಹಾಕಿಕೊಳ್ಳುವುದರಿಂದ ಮತ್ತು ಬಹಳ ಗಂಭೀರವಾಗಿ ಅದಕ್ಕೆ ಬದ್ಧರಾಗಿದ್ದರೆ ಅಮೆರಿಕ ಎಂಬ ವಲಸೆಗಾರರ ದೇಶದಲ್ಲಿ 'ದೇಶ' ಎಂದರೆ ಯಾವುದು ಎಂಬ ಪ್ರಶ್ನೆ ಏಳುತ್ತದೆ. ಕೇವಲ ಇನ್ನೂರು ಮುನ್ನೂರು ವರ್ಷಗಳವರೆಗೆ ಬರೇ ಮೂಲನಿವಾಸಿಗಳಿದ್ದ ಈ ದೇಶಕ್ಕೆ ಪ್ರಪಂಚದಾದ್ಯಂತದಿಂದ ಜನ ವಲಸೆ ಬಂದಿರುವಾಗ ನಾವು ಈ ಎಲ್ಲ ವಲಸಿಗರ ಸಾಹಿತ್ಯ, ಸಂಗೀತ, ಸಂಸ್ಕೃತಿಯನ್ನು ಅಮೆರಿಕದ ಜನಪದ ಎಂದು ಗುರುತಿಸುವುದು ಸಾಧುವೇ?

ಒಂದು ಉದಾಹರಣೆ ತೆಗೆದುಕೊಳ್ಳೋಣ. ಆಫ್ರಿಕನ್ ಜನರು ಗುಲಾಮರಾಗಿ ಬರೇ ಅಮೆರಿಕಾ ಒಂದು ದೇಶಕ್ಕೆ ಬರಲಿಲ್ಲ. ಅವರು ಇಂಗ್ಲೆಂಡಿಗೆ ಹೋದರು. ಕೆರಿಬಿಯನ್ ದೇಶಗಳಿಗೆ ಹೋದರು. ಹಾಗೆಯೇ ಎಲ್ಲ ಗುಲಾಮರೂ ಬರೇ ಆಫ್ರಿಕಾದವರಾಗಿರಲಿಲ್ಲ. ಭಾರತದ ಎಷ್ಟೋ ಜನ ಪ್ರಜೆಗಳು ಆಫ್ರಿಕಾದ ವಿವಿಧ ಭಾಗಗಳಲ್ಲಿ ಗುಲಾಮರಾಗಿ ಬಂದಿದ್ದಾರೆ. ಈ ಎಲ್ಲ ವಲಸೆಗಾರರೂ ತಮ್ಮ ಜತೆ ತಮ್ಮ ಕಥೆಗಳು, ನಡಾವಳಿ, ಸಂಗೀತ, ಅಡುಗೆ ಎಲ್ಲವನ್ನೂ ತಮ್ಮ ಜತೆ ತಾವು ಹೋದೆಡೆಯಲ್ಲೆಲ್ಲಾ ತೆಗೆದುಕೊಂಡು ಹೋಗಿದ್ದಾರೆ.

ಇಲ್ಲಿ ಎರಡು ಪ್ರಶ್ನೆಗಳನ್ನು ನಾವು ಕೇಳಿಕೊಳ್ಳಬೇಕು. ಮೊದಲನೆಯದು, ಅಮೆರಿಕಾದಲ್ಲಿದ್ದಂತೆ ಆಫ್ರಿಕಾದ ಜನಪದ ಬೇರೆಡೆಯಲ್ಲಿಯೂ ಇದೇ ಸ್ವರೂಪದಲ್ಲಿದೆಯಾ? ಆಫ್ರಿಕಾದ ಮಂದಿ ಅಮೆರಿಕಾಕ್ಕೆ ಗುಲಾಮರಾಗಿ ಬಂದದ್ದು ಮತ್ತು ಅದನ್ನು ವಿರೋಧಿಸಿದ್ದು– ಈ ಪ್ರತಿರೋಧದಿಂದ ಹುಟ್ಟಿದ ಸಾಹಿತ್ಯ, ಸಂಗೀತ ಇವೆಲ್ಲವೂ ಆಫ್ರಿಕನ್ ಜನಪದವೇ ಅಥವಾ ಅಮೆರಿಕನ್ ಜನಪದವೇ? ಆಫ್ರಿಕನ್ ಜನಪದವೆಂದೇ ಇಟ್ಟುಕೊಳ್ಳೋಣ. ಅದು ಬೇರೆ ವಸಾಹತುಗಳಲ್ಲಿ ಅಮೆರಿಕಾದಲ್ಲಿರುವಂತೆ ಇರುತ್ತದೆಯೇ? ಜಾಝ್, ಬ್ಲೂಸ್ ಎಲ್ಲವೂ ದಕ್ಷಿಣ ಆಫ್ರಿಕಾದ ನೈಟ್‌ಕ್ಲಬ್ಬಿನಲ್ಲಿ ಮತ್ತು ಬ್ರೂಕ್ಲಿನ್ನಿನ ಅಥವಾ ಫಿಲಡೆಲ್ಫಿಯ ನೈಟ್‌ಕ್ಲಬ್ಬಿನಲ್ಲಿ ಒಂದೇ ಸಮನಾಗಿರುತ್ತವೆಯೇ?

ಎರಡನೆಯದು, 'ಅಮೆರಿಕನ್ ಜನಪದ' ಎಂಬ ವಸ್ತುವನ್ನು ಐರಿಶ್, ಸ್ಕ್ಯಾಂಡಿನೇವಿಯನ್ ಅಥವಾ ನಾರ್ವೇಜಿಯನ್ ಜನಾಂಗದವರಿಗೆ ಕೊಟ್ಟು ಒಂದು ಪುಸ್ತಕವನ್ನು ಬರೆಸಿದರೆ ಅದರ ಒಟ್ಟಂದ ಹೇಗಿರುತ್ತದೆ?

ನಾವು ಭಾರತೀಯರಾಗಿರುವುದು ಮತ್ತು ಅಮೆರಿಕಕ್ಕೆ ವಲಸೆ ಬಂದಿರುವ ನಾವುಗಳು ವಲಸೆಯೆಂಬ ಕಾಮನಬಿಲ್ಲಿನಲ್ಲಿ ನಮ್ಮನ್ನು ನಾವೆಲ್ಲಿ ಸಮೀಕರಿಸಿಕೊಳ್ಳುತ್ತೇವೆ, ಗುರುತಿಸಿಕೊಳ್ಳುತ್ತೇವೆ ಎನ್ನುವುದು ನಾವು ವಿವರಿಸುವ ಅಮೆರಿಕನ್ ಜನಪದವನ್ನು ಹ್ರಸ್ವ ಮಾಡುತ್ತದೆಯಾ?

ಈ ಎಲ್ಲ ಪ್ರಶ್ನೆಗಳನ್ನು ಬಹಳಷ್ಟು ಬಾರಿ ನನಗೆ ನಾನು ಕೇಳಿಕೊಂಡಾಗ, ವಲಸೆಗಾರರೇ ತುಂಬಿಕೊಂಡಿರುವ ಒಂದು ದೊಡ್ಡ ರಾಷ್ಟ್ರದಲ್ಲಿ ಮತ್ತು ಆ ರಾಷ್ಟ್ರವನ್ನು ಮೂಲವೈಖರಿಯಲ್ಲಿ ವಿವರಿಸುವ ಯಾವುದೇ ಒಂದು ಸ್ಪಷ್ಟ ಗುಣಲಕ್ಷಣಗಳಿಲ್ಲದಾಗ, ಮತ್ತು ಆ ನಾಡಿನ ಜನಪದವನ್ನು ವಸಾಹತುಶಾಹಿಯಲ್ಲಿ ಗುಲಾಮಗಿರಿಯ ಇನ್ನೊಂದು ಮುಖವಾದ ಕಾರಕೂನಶಾಹಿಯನ್ನು ಅನುಭವಿಸಿದ ಕಂದು ಚರ್ಮದ ಜನರು ವಿಶ್ಲೇಷಿಸಿ ನೋಡಿದಾಗ

ಆ ಜನಾಂಗದ ಜನಪದದ ವಿವರಣೆಯನ್ನು ತಮ್ಮ ಅನುಭವಕ್ಕೆ ಸಮೀಕರಿಸದೇ ನೋಡುವುದಕ್ಕೆ ಸಾಧ್ಯವೇ ಇಲ್ಲ ಎಂದನಿಸಿತು.

ಈ ವಿಷಯ ನಮಗೆ ಏಕೆ ಮುಖ್ಯವಾಗಬೇಕು? ಈ ಇಡೀ ಪುಸ್ತಕದಲ್ಲಿ ಎಲ್ಲ ಲೇಖಕರಿಂದ ಬಿಳಿಯ ಮನುಷ್ಯ ಮೂಲನಿವಾಸಿಗಳಿಗೆ ಮತ್ತು ಇತರೇ ವಲಸಿಗರನ್ನು ಹೇಗೆ ಶೋಷಣೆ ಮಾಡಿದ ಎಂಬುದು ಮತ್ತೆ ಮತ್ತೆ ಹೇಳಲ್ಪಟ್ಟಿದೆ. ಮತ್ತು ಈ ಜನಪದದ ನಂಬಿಕೆಗಳು, ಹಾಡು, ಹಸೆ, ಮತ್ತು ಜಾನಪದ ಕತೆಗಳು ಕೂಡ ಪುನರಾವರ್ತನೆಯೋ ಎಂಬಂತೆ ಹೇಳಲ್ಪಟ್ಟಿವೆ. ಇಲಿನಾಯ್ ಪ್ರಾಂತ್ಯದ ಇಲಿನಿ ಒಕ್ಕೂಟವಾಗಿರಲಿ, ಆಸ್ಟ್ರೇಲಿಯಾದ ಅಬಾರಿಜಿನ್ ಮೂಲವಾಸಿಗಳಾಗಲೀ, ಪ್ಲಾಂಟೇಶನ್ ಕೆಲಸಗಾರರುಗಳಾಗಲಿ – ಚರಿತ್ರೆಯಲ್ಲಿ ಆಗಿರುವ ಈ ಅನ್ಯಾಯವನ್ನು, ಶೋಷಣೆಯನ್ನು ನಾವು ಅಲ್ಲಗೆಳೆಯಬೇಕೆಂದಾಗಲೀ, ಅಥವಾ ನಿರಾಕರಣೆಯ ಧೋರಣೆಯಲ್ಲಿ ನೋಡಬೇಕೆಂದಾಗಲೀ ನಾನು ಹೇಳುತ್ತಿಲ್ಲ. ಚರಿತ್ರೆಯ ಇಂಥ ನ್ಯಾಯಗಳನ್ನು ಮತ್ತೆ ಮತ್ತೆ ನೆನೆಸಿಕೊಳ್ಳುವುದು ಇಂದಿನ ಸಮಾಜದ ಆರೋಗ್ಯಕ್ಕೆ ಬಹಳ ಅವಶ್ಯಕ ಎಂದು ನಾನು ನಂಬಿದ್ದೇನೆ. ಅಮೆರಿಕಾದಲ್ಲಿದ್ದ ಈ ಬಗೆಯ ಗುಲಾಮಗಿರಿಯನ್ನು ನಾವ್ಯಾರೂ ಅನುಭವಿಸದೇ ಇದ್ದರೂ ಬಿಳಿಯರು ನಮ್ಮನ್ನು ಆಳಿದರು ಎಂಬ ನಮ್ಮ ಭಾವನೆ, ನಮ್ಮೆಲ್ಲರಿಗೂ ಇಂಥವನ್ನೇ ಮತ್ತೆ ಮತ್ತೆ ಒತ್ತಿ ಹೇಳುವ ಅಗತ್ಯವನ್ನು ಮೂಲದಲ್ಲಿಯೇ ಉಳಿಸಿದೆಯೇ?

ಇದರ ವಿಲೋಮವನ್ನು ನೋಡೋಣ

ಈ ಮೂಲನಿವಾಸಿಗಳು ಈಗ ಹೇಗೆ ಬದುಕುತ್ತಿದ್ದಾರೆ? ಬಿಳಿಯ ವ್ಯಕ್ತಿಗೆ ಎಲ್ಲ ಕಳಕೊಂಡು ಅವರ ದೇಶದಲ್ಲಿಯೇ ಅವರು 'ರಿಜರ್ವೇಶನ್'ಗಳಲ್ಲಿ ಬದುಕುತ್ತಿದ್ದಾಗ ಅವರ ಸಮಸ್ಯೆಗಳೇನು? ಅವರ ಈ ಸಮಸ್ಯೆಗಳಿಗೆ ಅವರ ಹಿನ್ನೆಲೆ ಎಷ್ಟು ಕಾರಣ?

ಒಂದು ಅಂಕಿ ಅಂಶದ ಪ್ರಕಾರ ಅಮೆರಿಕನ್ ಮೂಲನಿವಾಸಿಗಳಲ್ಲಿ ಹಿಂಸೆ ಬೇರೆ ಜನಾಂಗಕ್ಕಿಂತ ಎರಡರಷ್ಟಿದೆ. ಗಂಡು ಹೆಣ್ಣುಗಳ ನಡುವಿನ ಪರಸ್ಪರ ಹಿಂಸೆ ಬೇರೆ ಯಾವ ಜನಸಂಖ್ಯಾ ಪ್ರಭೇದಕ್ಕಿಂತ ಹೆಚ್ಚಿದೆ, ಮೂಲನಿವಾಸಿಗಳಲ್ಲಿ ಗಂಡು ಹೆಣ್ಣು ಎಂಬ ಭೇದವಿಲ್ಲದೆ ದಾಂಪತ್ಯದಲ್ಲಿ ಹಿಂಸೆ ಕಾಣುವುದು ಬೇರೆ ಯಾವ ಬಿಳಿಯ, ಕರಿಯ ಅಥವಾ ಆಮಿಶ್, ಮಾರ್ಮನ್ ಜನಾಂಗಕ್ಕಿಂತ ಹೆಚ್ಚಾಗಿದೆ. ಇಂಥ ಒಂದು ಸಮಕಾಲೀನ ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲುವಂತಹ ಒಂದೇ ಒಂದು ಲೇಖನವೂ ನನ್ನ ಕಣ್ಣಿಗೆ ಬೀಳಲಿಲ್ಲ.

ಅಷ್ಟೇ ಅಲ್ಲ, ಈ ಪುಸ್ತಕದಲ್ಲಿ ಅಮೆರಿಕನ್ ಮೂಲನಿವಾಸಿಗಳ ವೈದ್ಯಪದ್ಧತಿ, ಮತ್ತು ಅವರು ಕೇವಲ ನಂಬಿರುವ, ಯಾವುದೇ ಸಾಕ್ಷ್ಯಾಧಾರಿತ ಸಂಶೋಧನೆಗಳಿಲ್ಲದ ವೈದ್ಯವನ್ನು ಪ್ರಮಾಣೀಕರಿಸುವ ಕಾರ್ಯವನ್ನು ಕೆಲ ಲೇಖನಗಳು ಮಾಡಿವೆ. ಇದು ಖಂಡಿತಾ ಉದ್ದೇಶಪೂರ್ವಕವಾಗಿ ಆದುದಲ್ಲ. ಮೂಲನಿವಾಸಿಗಳ ವೈದ್ಯಲೋಕ – ಒಂದು ಕೌತುಕಮಯ ಜಗತ್ತು ಎಂಬ ಲೇಖನದಲ್ಲಿ ಮೂಲನಿವಾಸಿಗಳ ಜೀವನದೃಷ್ಟಿ ಮತ್ತು ವೈದ್ಯಪದ್ಧತಿ, ಶಾಮನ್‌ಗಳು, ವಿಶಿಷ್ಟ ಆಚರಣೆಗಳು, ಪರಂಪರಾನುಗತ ನೃತ್ಯಗಳು,

ಆಟಗಳು, ಗಿಡಮೂಲಿಕೆಗಳು ಇತ್ಯಾದಿಗಳ ಅಗಾಧವಾದ, ಅನನ್ಯವಾದ, ಅಪರೂಪದ ವಿವರಣೆಯಿದೆ. ಇದರ ವಸ್ತುವೈವಿಧ್ಯ, ಲೇಖನದ ನಿರೂಪಣೆ ಮತ್ತು ಜತೆಜತೆಗೇ ಒದಗಿಸಿರುವ ಕೆಲವೊಂದು 'ಹೋಲಿಸಿ ಎದುರಿಸುವ' ವಿವರಗಳು ಒಂದು ಘಟ್ಟದಲ್ಲಿ ಮೂಲನಿವಾಸಿಗಳ ವೈದ್ಯಪದ್ಧತಿಯಲ್ಲಿ ಎಲ್ಲವೂ ಅನನ್ಯವಾಗಿರುವುದರಿಂದ ನಾವು ಒಮ್ಮೆ ಪ್ರಯತ್ನಿಸಿದಲ್ಲಿ ತಪ್ಪೇನಿಲ್ಲವೇನೋ ಎಂಬ ಭಾವನೆಯನ್ನು ತರಿಸುತ್ತದೆ. ಸ್ವತಃ ಲೇಖಕರು ನಿರ್ಮಮವಾಗಿ ಬರೇ ವಿಷಯಮಂಡನೆ ಮಾಡಿದ್ದರೂ, ಆ ವಸ್ತು, ಅದನ್ನು ಮಂಡಿಸಿರುವ ಸೊಗಸಾದ ರೀತಿ, ಮತ್ತು ಒಂದು ಮಟ್ಟದಲ್ಲಿ ನಮ್ಮ ಆಯುರ್ವೇದವನ್ನು ಈ ವೈದ್ಯಪದ್ಧತಿ ನೆನಪಿಸುವುದರಿಂದ ನಮಗೇ ಗೊತ್ತಿರದ ಒಂದು ಪೂರ್ವಗ್ರಹ ನಾವು ಈ ಲೇಖನವನ್ನು ಓದುವ ರೀತಿಯನ್ನೂ ಬದಲಿಸುತ್ತದೆ ಮತ್ತು ಆ ಲೇಖನದ ಗ್ರಹೀತವನ್ನೂ ಬದಲಿಸಬಹುದು.

ಲೇಖನದ ವಸ್ತು, ನಿರೂಪಣೆ, ಬರೆದಿರುವ ಭಾಷೆ (ಕನ್ನಡ) ಮತ್ತು ಓದುಗರ ಹಿನ್ನೆಲೆ ಮತ್ತು ಆ ಮೂಲಕ ಅವರಲ್ಲಿರುವ ಪೂರ್ವಗ್ರಹ –ಇವೆಲ್ಲವೂ ಹೇಗೆ ಯಾರಿಗೂ ಗೊತ್ತಾಗದೇ ಎಲ್ಲರ ಗ್ರಹಿಕೆಯ ಮೇಲೆ ಪರಿಣಾಮ ಮಾಡಬಹುದು ಎನ್ನುವುದಕ್ಕೆ ಇದೊಂದು ಉದಾಹರಣೆ. ಇದನ್ನೇ ಮನಶ್ಶಾಸ್ತ್ರಜ್ಞರು cognitive bias ಎನ್ನುತ್ತಾರೆ.

ಈಗ ಆಧುನಿಕ ಜೀವನಶೈಲಿಯನ್ನು ಒಪ್ಪಿಕೊಂಡು ಬದುಕಲಿ ಇಲ್ಲವೇ ತಮ್ಮದೇ ಆದ ನಂಬುಗೆಗಳಿಗೆ ತಕ್ಕುನಾಗಿ ಮೂಲನಿವಾಸಿಗಳ ಸಂಪ್ರದಾಯದಂತೆಯೇ ಬದುಕಲಿ, ಅವರಿಗೆ ಅವರದೇ ಆದ ಕೆಲವು ವಿಶಿಷ್ಟ ಆರೋಗ್ಯ ಸಮಸ್ಯೆಗಳಿವೆ. ಈಗ ಸುಮ್ಮನೆ ಯಾವ ಅಂಕಿ ಅಂಶಗಳನ್ನು ಕೋಟ್ ಮಾಡದೇ ಹೇಳಿದರೂ ಅಮೆರಿಕನ್ ಇಂಡಿಯನ್ ತಾಣಗಳಲ್ಲಿ ಮಧುಮೇಹ, ಕುಡಿತ ಮತ್ತು ಮಾದಕ ವಸ್ತುಗಳ ಉಪಯೋಗ ಬೇರೆ ಯಾವ ಜನಸಂಖ್ಯಾ ಘಟಕಕ್ಕಿಂತ ಹೆಚ್ಚು. ಅಷ್ಟೇ ಅಲ್ಲ. ಖಿನ್ನತೆ, ಆತ್ಮಹತ್ಯೆ ಮತ್ತು ಮಾರಣಾಂತಿಕ ಹಲ್ಲೆ, ಮತ್ತು ಕೊಲೆಯಂಥ ಅಪರಾಧದ ಅಂಕಿ ಅಂಶಗಳೂ ಬೇರೆ ಯಾವ ಜನಸಂಖ್ಯಾ ಘಟಕಕ್ಕಿಂತ ಹೆಚ್ಚು. ಇದಕ್ಕೆ ಅವರ ಹಿನ್ನೆಲೆ ಕಾರಣವೇ? ವರ್ತಮಾನ ಕಾರಣವೇ? ಇದರ ಬಗ್ಗೆ ಯಾರೂ ಬರೆದಿಲ್ಲ. ಅಷ್ಟೇ ಅಲ್ಲ, ಅವರ ವಿಶಿಷ್ಟ ವೈದ್ಯಪದ್ಧತಿಗಳನ್ನು ನಮ್ಮ ನಾಟಿ ವೈದ್ಯದೊಂದಿಗೆ ಹೋಲಿಸಿ ನೋಡಿ ಒಂದಕ್ಕೊಂದಕ್ಕೆ ಇರಬಹುದಾದ ಸಂಬಂಧಗಳಿಗೆ ಕಾರಣ ಏನಿರಬಹುದು ಎಂದು ನಾವು ವಿಶ್ಲೇಷಿಸುತ್ತೇವೆ. (ಇದಕ್ಕೆ ಜೈವಿಕ ತಂತುಗಳ ಸಂಬಂಧ ಇರಲಾರದು ಎಂದು ವಿಜ್ಞಾನ ಪುರಾವೆಯನ್ನೊದಗಿಸುತ್ತಾ ಇದೆ. ಉತ್ತರ ಭಾರತೀಯರ ಜೀವತಂತುಗಳ ಮೂಲ ಪಶ್ಚಿಮ ಯುರೇಶಿಯಾದಲ್ಲಿದ್ದು, ದಕ್ಷಿಣ ಭಾರತೀಯರ ಮೂಲ ಅಂಡಮಾನ್ ನಿಕೊಬಾರ್ ದ್ವೀಪಗಳು ಮತ್ತು ಆಸ್ಟ್ರೇಲಿಯನ್ ಅಬಾರಿಜಿನ್‌ಗಳ ಹಂಟರ್ ಗ್ಯಾದರರ್ ಜೀವತಂತುಗಳಲ್ಲಿದೆ ಎಂಬುದರ ಬಗ್ಗೆ ಬಹಳ ಬಲವಾದ ಸಾಕ್ಷಿಯಿದೆ.)

ನಾವು ಒಂದು ವಿಷಯದ ಬಗ್ಗೆ ಸಂಶೋಧನೆ ಮಾಡುವಾಗ ನಮ್ಮ ಹಿನ್ನೆಲೆ ಮತ್ತು ಪೂರ್ವಗ್ರಹಗಳು ಹೇಗೆ ಕೆಲಸ ಮಾಡಬಹುದು ಎಂದು ಅರಿತುಕೊಳ್ಳಲು ನಾನು ಈ ಸಾಧ್ಯತೆಯನ್ನು ತಂದಿದ್ದೇನೆ. ನನ್ನ ಗ್ರಹಿಕೆ ತಪ್ಪಿದ್ದರೂ ಇರಬಹುದು.

* * *

ಇನ್ನೊಂದು ಗಮನಾರ್ಹ ವಿಷಯವೆಂದರೆ ವರ್ತಮಾನದಲ್ಲಿ ಅಮೆರಿಕನ್ ಇಂಡಿಯನ್ನರಲ್ಲಿ ಅಪರಾಧದ ಸಂಖ್ಯೆ. ಅಮೆರಿಕನ್ ಇಂಡಿಯನ್ನರಲ್ಲಿ ಹಿಂಸಾತ್ಮಕ ಅಪರಾಧದ ಅನುಪಾತ ಇತರೇ ಜನಸಂಖ್ಯಾ ಘಟಕಕ್ಕಿಂತ ಎರಡು ಪಟ್ಟು ಜಾಸ್ತಿ. ಇದರಲ್ಲಿ ಹೆಂಗಸಿಗಿಂತ ಗಂಡಸಿನ ಮೇಲೆ ಹೆಚ್ಚು ಹಲ್ಲೆ, ಹಿಂಸೆಯಾಗುತ್ತದೆ. ಆದರೂ ಬೇರೆ ಯಾವ ಜನಾಂಗಕ್ಕೆ ಹೋಲಿಸಿದಲ್ಲಿ ಅಮೆರಿಕನ್ ಇಂಡಿಯನ್ ಮಹಿಳೆಯರ ಮೇಲೆ ಹಲ್ಲೆ, ಹಿಂಸೆ ಜಾಸ್ತಿ. ಮಾರಣಾಂತಿಕ ಆಯುಧಗಳನ್ನು ಉಪಯೋಗಿಸಿ ಅಪರಾಧಗೈದ ಅಮೆರಿಕನ್ ಇಂಡಿಯನ್ನರ ಸಂಖ್ಯೆ ಬೇರೆ ಜನಾಂಗಕ್ಕಿಂತ ಜಾಸ್ತಿ. ಹಾಗೆಯೇ ಕುಡಿದು ಬೇರೆಯವರ ಮೇಲೆ ಹಲ್ಲೆ ಮಾಡುವವರ ಸಂಖ್ಯೆಯೂ ಅಮೆರಿಕನ್ ಇಂಡಿಯನ್ನರಲ್ಲಿ ಬೇರೆ ಜನಾಂಗಕ್ಕಿಂತ ಜಾಸ್ತಿ. ಅಷ್ಟೇ ಅಲ್ಲ, ಕುಡಿತಕ್ಕೆ ಸಂಬಂಧಿಸಿದ ಯಾವುದೇ ಅಪರಾಧವನ್ನು ತೆಗೆದುಕೊಂಡರೂ ಅದರಲ್ಲಿ ಅಮೆರಿಕನ್ ಇಂಡಿಯನ್ನರದೇ ಸಿಂಹಪಾಲು (ನೋಡಿ: ಆಕರ–1). ಇದಕ್ಕೆ ಕಾರಣಗಳು ಹಲವಿರಬಹುದು. ಹಿಂಸೆಯೆಂಬುದು ಜೀವನಶೈಲಿಯ ಭಾಗವಾಗಿದ್ದ ಚರಿತ್ರೆಯಿದ್ದಿರಬಹುದೇ ಎಂಬ ಬಲವಾದ ವಾದವೂ ಇದೆ (ನೋಡಿ: ಆಕರ–2).

ಈ ತರದ ಹಿಂಸೆ ಮೂಲನಿವಾಸಿಗಳ ಮೇಲೆ ಆದ, ಈಗಲೂ ಆಗುತ್ತಿರುವ ಅನ್ಯಾಯದ ವಿರುದ್ಧ ಸತತವಾಗಿ ನಡೆಯುತ್ತಿರುವ ಪ್ರತಿರೋಧದ ಕುರುಹೇ? ವರ್ತಮಾನದಲ್ಲಿ ಅವರಿಗೆ ಸರಿಯಾಗಿ ಸಿಗದ ಶಿಕ್ಷಣವೇ? ಕಾನೂನಿನ ಬೆಂಬಲವಿಲ್ಲದಿರುವುದೇ? ಈಗಲೂ ಇಂಡಿಯನ್ ಕಂಟ್ರಿ ಎಂದು ಕರೆಯಲಾಗುವ ಅನೇಕ ಬುಡಕಟ್ಟು ಪ್ರದೇಶಗಳಲ್ಲಿ ಅವರದೇ ಆದ ನ್ಯಾಯಪದ್ಧತಿ ಇದೆ. ಕೆಲವು ಅಪರಾಧಗಳಿಗೆ ಈ ಬುಡಕಟ್ಟುಗಳ ನ್ಯಾಯವ್ಯವಸ್ಥೆಯಲ್ಲಿಯೇ ವಿಚಾರಣೆ, ತೀರ್ಪು ಹಾಗೂ ಶಿಕ್ಷೆ ಕೂಡ ಆಗುತ್ತದೆ. ಇದರಲ್ಲಿ ಇಂಡಿಯನ್ ಅಲ್ಲದ ಅಪರಾಧಿಗೆ ಶಿಕ್ಷೆ ಕೊಡುವ ಅಧಿಕಾರ ಈ ಬುಡಕಟ್ಟಿನ ನ್ಯಾಯವ್ಯವಸ್ಥೆಗಿಲ್ಲ. ಇಬ್ಬರು ಇಂಡಿಯನ್ನರು ಹೊಡೆದಾಡಿ ಬಂದಲ್ಲಿ ಮಾತ್ರ ಅವರಲ್ಲೊಬ್ಬರಿಗೆ ಶಿಕ್ಷೆ ಕೊಡುವ ಅಧಿಕಾರ ಈ ವ್ಯವಸ್ಥೆಗಿದೆ. ಇಂಥ ಮುರಿದಿರುವ ನ್ಯಾಯವ್ಯವಸ್ಥೆ ಮೇಲಿರುವ ಅಪನಂಬಿಕೆ ಈ ಮೂಲನಿವಾಸಿಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವ ಸಂದರ್ಭವನ್ನು ಅನಿವಾರ್ಯ ಮಾಡಿದೆಯೇ?

ಇಂಥ ಪ್ರಶ್ನೆಗಳಿಗೆ ಜನಪದದ ಅಭ್ಯಾಸದಿಂದ ನಮಗೆ ಉತ್ತರ ಸಿಗುತ್ತದೆಯೇ?...

ಸಿಗಬಹುದು ಎನ್ನುತ್ತಾರೆ ಸಂಸ್ಕೃತಿ ಚಿಂತಕರು. ಅಪರಾಧಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಾಫಿಯಾದಂತ ಸಂಘಟಿತ ಅಪರಾಧಕ್ಕೆ (Organized crime) ಈ ಮೂಲನಿವಾಸಿಗಳ ಹಿನ್ನೆಲೆ ಹೇಳಿಮಾಡಿಸಿದ ಹಾಗಿದೆ ಎಂಬ ಅಭಿಪ್ರಾಯ ಪಡುವವರೂ ಇದ್ದಾರೆ. ಈ ಸಂಘಟಿತ ಅಪರಾಧಗಳ ಚರಿತ್ರೆಯನ್ನು ನೋಡಿದಲ್ಲಿ ಕೆಲ ವಿಷಯಗಳು ಸ್ಪಷ್ಟವಾಗುತ್ತವೆ. ಫ್ರೆಂಚರು, ಡಚ್ಚರು ಮತ್ತು ಇಂಗ್ಲೆಂಡಿನ ವಲಸೆಗಾರರು ಅಮೆರಿಕಾಕ್ಕೆ ಬಂದ ತಕ್ಷಣ ಮಾಡಿದ್ದು ಅಮೆರಿಕಾದ ಈಶಾನ್ಯ ಭಾಗದಲ್ಲಿದ್ದ ಮೂಲನಿವಾಸಿಗಳನ್ನು ಅಲ್ಲಿಂದ ಓಡಿಸಿದ್ದು. ನಿಧಾನವಾಗಿ ತಾವಿದ್ದ ಜಾಗದಿಂದ ಬೇರೆಡೆಗೆ

ತಮ್ಮನ್ನು ಸ್ಥಳಾಂತರಿಸಲು ಆಗುತ್ತಿರುವ ಪ್ರಯತ್ನವನ್ನು ಗಮನಿಸಿದ ಮೂಲನಿವಾಸಿಗಳು ತಾವು ಸಂಘಟಿತರಾಗಿ ಈ ವಲಸಿಗರನ್ನು ಎದುರಿಸಲು ಪ್ರಯತ್ನಪಟ್ಟರು. ಈ ಸಂಘಟನೆಯಲ್ಲಿ ಮುಖ್ಯಸ್ಥ (chief) ಮತ್ತು ಆತನ ಕೈಕೆಳಗೆ ಇನ್ನಿತರ ಉಪಮುಖ್ಯಸ್ಥರು, ಉಪೋಪ ಮುಖ್ಯಸ್ಥರು, ಶ್ರೇಣಿ ವ್ಯವಸ್ಥೆಯಲ್ಲಿದ್ದಂತೆ ಶಿಸ್ತುಬದ್ಧವಾಗಿ ವಲಸಿಗರ ದಾಳಿಯನ್ನು ಎದುರಿಸಿದರು. ಅವರನ್ನು ಸೋಲಿಸಿದ ವಲಸಿಗರು ಅವರ ಈ ಶಿಸ್ತಿನ ಶ್ರೇಣಿ ವ್ಯವಸ್ಥೆ, ಗೆರಿಲ್ಲಾ ಯುದ್ಧ ಸಂಸ್ಕೃತಿ, ಆಡಳಿತ ವಿರೋಧಿ ನಡಾವಳಿ ಮತ್ತು ಬಂಡುಕೋರತನ ಇವೆಲ್ಲವನ್ನೂ ಸಂಘಟಿತ ಅಪರಾಧ ಎಂದೇ ಕರೆದರು.

ಇದಕ್ಕೆ ನಮಗೆ ಚರಿತ್ರೆಯಲ್ಲಿ ಸಿಗುವ ಕಾರಣವೂ ಕೂಡ ಕೊಂಚ ವಿಚಿತ್ರವಾದದ್ದು. ಇಟಾಲಿಯನ್ನರಿಗೆ ಅಮೆರಿಕಾದಲ್ಲಿ ಮೊಟ್ಟಮೊದಲು ಸಂಘಟಿತ ಕ್ರೈಮನ್ನು ಆರಂಭಿಸಿದವರು ಎಂಬ ಆರೋಪವನ್ನು ಹೊರೆಸಲಾಗಿತ್ತು. ಆ ಆಪಾದನೆಯಿಂದ ಇಟಾಲಿಯನ್ನರನ್ನು ತಪ್ಪಿಸಲು ಕೆಲ ಚರಿತ್ರಕಾರರು ಮೂಲನಿವಾಸಿಗಳ ಜೀವನಶೈಲಿಯನ್ನೇ ಮಾಫಿಯಾಕ್ಕೆ ಹೋಲಿಸಿದರು. ಮೂಲನಿವಾಸಿಗಳ ತಾಣ ಕದ್ದ ವಲಸಿಗರು ತಮ್ಮ 'ಸಹಾನುಭೂತಿ ವಸಾಹತುಶಾಹಿ' ನೀತಿಯಿಂದ ಅವರನ್ನು ಬೇರೆ ಜಾಗದಲ್ಲಿರಿಸಿ ಅವರ ಜೀವನಶೈಲಿಯನ್ನು ಬದಲಿಸಲು ನೋಡಿದಾಗ ಮೂಲನಿವಾಸಿಗಳು ಈ ನಿಲುವಿನ ವಿರುದ್ಧ ಹೋರಾಡಲು ಸಂಘಟಿತರಾಗಲೇಬೇಕಿತ್ತು. ತಲೆಮಾರುಗಳಿಂದ ನೆಲೆಸಿದ್ದ ತಮ್ಮ ತಾಣಕ್ಕೆ ಬೇರೊಬ್ಬರು ಬಂದು ನೆಲೆಸಿ, ತಮ್ಮನ್ನೇ ಬೇರೆಡೆಗೆ ಸ್ಥಳಾಂತರಿಸಿದಾಗ, ಆಗುವ ಹೋರಾಟದಲ್ಲಿ ಕೆಲ ನಿಯಮಗಳು ಮುರಿಯಲ್ಪಟ್ಟವು. ಕೆಲ ಮೂಲನಿವಾಸಿಗಳು ಲೂಟಿ, ಕೊಲೆ ಮತ್ತು ಇನ್ನಿತರ ಅಪರಾಧಗಳಲ್ಲಿ ತೊಡಗಿಕೊಂಡರು. ಅದನ್ನು ಆಗ ಸಂಘಟಿತ ಅಪರಾಧ ಎಂದು ಕರೆಯದಿದ್ದರೂ ನಂತರ ಇತ್ತೀಚೆಗೆ ಕಾಣಿಸಿಕೊಳ್ಳುತ್ತಿರುವ 'ನೇಟಿವ್ ಗ್ಯಾಂಗ್'ಗಳಲ್ಲಿ ಇದೇ ಶ್ರೇಣೀಕರಣ ವ್ಯವಸ್ಥೆ ಇರುವುದರಿಂದ ಅವರ ಚರಿತ್ರೆ ಗೊತ್ತಿಲ್ಲದವರು ಇದನ್ನು ಇಟಾಲಿಯನ್ ಮಾಫಿಯಾಗಳ ಶ್ರೇಣೀಕರಣ ವ್ಯವಸ್ಥೆಗೆ ಮತ್ತು ಇದಕ್ಕೂ ಹೆಚ್ಚಾಗಿ ಅಮೆರಿಕನ್ ಇಂಡಿಯನ್ನರ ಚೀಫ್, ಡೆಪ್ಯುಟಿ ಚೀಫ್ ಮತ್ತಿನ್ನಿತರ ಮೆಟ್ಟಿಲು-ಮೆಟ್ಟಿಲ ಶ್ರೇಣೀಕೃತ ವ್ಯವಸ್ಥೆಯ ಉದಾಹರಣೆ ತೆಗೆದುಕೊಂಡು ಇಟಾಲಿಯನ್ನರು ಬರುವುದಕ್ಕಿಂತ ಮುಂಚೆಯೇ ಮೂಲನಿವಾಸಿಗಳಲ್ಲಿ ಈ ಗ್ಯಾಂಗ್‌ಸ್ಟರ್ ಸಂಸ್ಕೃತಿ ಇತ್ತು ಎಂದು ಹೇಳಿಕೊಂಡು ಬಂದಿರುವ ಉದ್ಘೋಷಗಳನ್ನು ನಾವು ಅಲ್ಲಲ್ಲಿ ಕಾಣಬಹುದು (ನೋಡಿ: ಆಕರ 3).

ಒಂದು ಕಾಲದ ಜನಪದಕ್ಕೂ ಅವರ ವಸಾಹತುಶಾಹಿ ಚರಿತ್ರೆಗೂ ಮನಸ್ಸಿಗೆ ಬಂದಂತೆ ತಾಳೆ ಹಾಕಲು ಹೋದಾಗ ಇಂಥ ಅನಾಹುತಗಳಾಗಬಹುದು. ಅಂದರೆ ಬರೇ ಜನಪದವೆಂದರೆ ಒಂದು ಜನಾಂಗದ ಸಂಸ್ಕೃತಿ, ಹಾಡು, ಹಸೆ, ಕಥೆಗಳು ಮಾತ್ರವಲ್ಲ. ಅವರ ಜೀವನಶೈಲಿ ಕೂಡ. ಯುದ್ಧ, ಹೋರಾಟ ಮೂಲನಿವಾಸಿಗಳ ಜೀವನದ ಒಂದು ಭಾಗವಾಗಿತ್ತು. ಅದನ್ನು ಅಪರಾಧ ಎಂದು ಕರೆದಿರುವ ವಸಾಹತುಶಾಹಿ ಚರಿತ್ರೆ ಮತ್ತು ಈ ಯುದ್ಧಗಳನ್ನು ದಾಳಿ, ಬಂಡುಕೋರತನ, ದೊಂಬಿ ಎಂದು ಕರೆಯುವುದರಲ್ಲಿ ಯುದ್ಧದ ಸಾಂಸ್ಕೃತಿಕ ವಿವರಣೆ ಹೇಗೆ ಬೇರೆ ಬೇರೆ ಜನಾಂಗಕ್ಕೆ ಬೇರೆಬೇರೆಯಾಗಬಹುದು

ಎನ್ನುವುದು ಕೂಡ ಕುತೂಹಲಕರವಾದ ವಿಷಯ. ಒಬ್ಬರ ದೊಂಬಿ ಇನ್ನೊಬ್ಬರ ಯುದ್ಧವಾಗ ಬಹುದು.

ಮೂಲನಿವಾಸಿಗಳ ಜನಪದದ ಈ ಆಯಾಮಗಳನ್ನು ನಮ್ಮ ಈ ಪುಸ್ತಕ ಅವರ ಚರಿತ್ರೆಯ ಹಿನ್ನೆಲೆಯಲ್ಲಿ ಹೆಚ್ಚಾಗಿ ಪರೀಕ್ಷಿಸದಿರುವುದು ಕುತೂಹಲಕಾರಿಯಾದ ಅಂಶವಾಗಿದೆ.

ಈ ಪುಸ್ತಕದಲ್ಲಿ ಅನೇಕ ವಿಷಯಗಳನ್ನು ಕುರಿತಾದ ಲೇಖನಗಳಿವೆ. ಬಹಳಷ್ಟು ಜನ ಇಲ್ಲಿ ಭಾರತದ ಮೂಲನಿವಾಸಿಗಳಿಗೆ ಮತ್ತು ಅಮೆರಿಕನ್ ಇಂಡಿಯನ್ನರಿಗೆ ಇರುವ ಸಾಮಾನ್ಯ ಅಂಶಗಳನ್ನು ಹೋಲಿಸಲು ಪ್ರಯತ್ನಪಟ್ಟಿದ್ದಾರೆ. ಬರಹವಿಲ್ಲದಾಗ ಮೌಖಿಕ ಪ್ರವೃತ್ತಿ, ಕಾಡಿನಲ್ಲಿ ವಾಸಿಸಬೇಕಾದಾಗ ಬೇಕಾದ ಮೂಲಭೂತ ಅವಶ್ಯಕತೆಗಳಾದ ಊಟ, ವಸತಿ ಇತ್ಯಾದಿಗಳಿಗೆ ಬೇಕಾದ ಪರಿಕರಗಳು, ಇವುಗಳಲ್ಲಿ ಎಲ್ಲ ಮೂಲನಿವಾಸಿಗಳಿಗೂ ಸಾಮ್ಯತೆ ಇದೆ ಎಂಬುದನ್ನು ಬಿಟ್ಟು ಅಲಾಸ್ಕನ್ ಇನ್ಯುಯಿಟ್ ಹರಪ್ಪಾದ ಮೂಲನಿವಾಸಿಯೊಂದಿಗೆ ರಕ್ತಸಂಬಂಧ ಹೊಂದಿದ್ದ ಎಂಬುದಕ್ಕೆ ದಾಖಲೆಯಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಹಾಗಾಗಿ ಆ ರೀತಿಯ ಸಂಬಂಧಗಳನ್ನು ಸೂಚಿಸುವ ಲೇಖನಗಳನ್ನು ನಾವು ಪರೀಕ್ಷಿಸಿ ನೋಡಬೇಕಾಗಿದೆ.

ಮೇಡ್ ಆಫ್ ದ ಮಿಸ್ಟ್ ನ ಜಾನಪದ ಕಥೆಯೊಂದಿಗೆ ಸಂವಾದಿಸುವ ಕಾಳಿಂಗಮರ್ದನದ ಕಥೆ, ಐರೋಪ್ಯರ ವಲಸೆಯ ನಂತರ ಆದ ಮೂಲನಿವಾಸಿಗಳ ಸಂಸ್ಕೃತಿಯ ನಾಶ, ಕೆನಡಾದ ದೇಶೀ ಕಲೆಗಳಲ್ಲಿ ಇರಬಹುದಾದ ಭಾರತೀಯ ಸಂವೇದನೆ ಇತ್ಯಾದಿ ಲೇಖನಗಳಲ್ಲೂ, ಎಲ್ಲ ಮೂಲನಿವಾಸಿಗಳಲ್ಲಿ ಹಾಡುವ, ಬಿದಿರು, ಚರ್ಮಗಳನ್ನು ಉಪಯೋಗಿಸಿ ಸಂಗೀತವಾದ್ಯವನ್ನು ಬಳಸುವ ಪದ್ಧತಿ ಇತ್ತು ಎನ್ನುವುದರ ಉಲ್ಲೇಖ, ಮತ್ತು ಇತರೇ ವಿಷಯಗಳು ಈ ರೀತಿಯ ಸಂವೇದನೆಗಳ ಸಾಮ್ಯತೆಯನ್ನು ಹುಡುಕುವುದರ ಮೂಲಕ ನಾವು ಈ ಮೂಲನಿವಾಸಿಗಳಲ್ಲಿ ನಮ್ಮ ಚರಿತೆಯನ್ನು, ಪುರಾಣವನ್ನು ಹುಡುಕುವ ಪ್ರಯತ್ನವೇ ಆಗಿದೆ.

ಚೆನ್ನಾಗಿ ಓದಿಸಿಕೊಂಡು ಹೋಗುವ ಕೆಲ ಕಥೆಗಳನ್ನು ಕೂಡ ಇಲ್ಲಿ ನೋಡುತ್ತೇವೆ. 'ಹಾರಿ ಹೋದವರು' ಕತೆಯನ್ನು ಓದಿದಾಗ ಮಾಯಾ ವಾಸ್ತವವಾದಿ ಕತೆಯೊಂದನ್ನು ಓದಿದ ಅನುಭವವಾಗುತ್ತದೆ. ಜತೆಗೆ ಕತೆಯಲ್ಲಿರುವ ಭಾಷೆಯಲ್ಲಿನ ಲಯ ಎಲ್ಲ ಸೇರಿ ಕಥೆಗೆ ಒಂದು ಸೊಗಸಾದ ಭಾವವನ್ನು ಕೊಡುತ್ತದೆ. 'ಜೋಳದಮೂರಿ ಜೇನುತುಪ್ಪ' ಕಥೆಯಲ್ಲಿ ವರ್ಷಗಟ್ಟಲೆ ತನ್ನ ಜನಾಂಗದವರ ಉದ್ಧಾರಕ್ಕಾಗಿ ಅಲ್ಲಿಲ್ಲಿ ಹೊಡೆದಾಡಿ ಕೊನೆಗೆ 'ಬಿಳಿಗಾನ ಲಕೋಟ' ಆಗಿಬಿಡುವ 'ಸೇಕ್ರೆಡ್ ಸನ್' ಅಥವಾ ಹಯವದನ, ಅವನ ಪದ ಸಂಪದದಲ್ಲಿರುವ 'ಬಿಳಿ' 'ಕಚಡಾ' ಇತರೇ 'ಕನ್ನಡ ಪದ'ಗಳು ಎದ್ದು ಕಾಣುತ್ತವೆ. ಒಂದು ಭಾವುಕತೆಯನ್ನೇ ನೆಚ್ಚಿಕೊಂಡ ಕತೆಯಾಗಿದ್ದು ಇನ್ನೊಂದು ವಾಸ್ತವವಾದಿ, ವ್ಯವಹಾರಿ ಕಥೆಯಂತೆ ಕಂಡರೂ ಕಾಲ ಮೂಲನಿವಾಸಿಗಳ ಆದ್ಯತೆಯನ್ನು ಬದಲಿಸುವ ವಾಸ್ತವತೆಯನ್ನು ಬಹಳ ಚೆನ್ನಾಗಿ ಹಿಡಿದಿಟ್ಟಿವೆ. 'ವಿ ಶಲ್ ಓವರ್‌ಕಮ್' ಹಿಂದಿಯಲ್ಲಿ ಈಗಾಗಲೇ 'ಹಮ್ ಹೋಂಗೇ ಕಾಮ್‌ಯಾಬ್' ಆಗಿ ಜನಪ್ರಿಯಗೊಂಡಿದೆ. ಶೋಷಿತರ

ನುಡಿಯೆಲ್ಲವೂ ಒಂದೇ ರಾಗ, ಒಂದೇ ತಾನ, ಒಂದೇ ಸಾಹಿತ್ಯ ಎಂಬುದನ್ನು ಈ ಗೀತೆ ಹೇಳುತ್ತದೆ.

ಆಫ್ರಿಕನ್ ಅಮೆರಿಕನ್ ಜನಪದದ ಮೂಲದಲ್ಲಿ ದಾಸ್ಯವನ್ನು ಒಪ್ಪಿಕೊಂಡು ಅದರ ಜತೆಜತೆಗೂ ಬದುಕಬೇಕಾದ ಅನಿವಾರ್ಯತೆಯನ್ನು ಮೊದಮೊದಲ ಜಾನಪದ ನಿರೂಪಿಸಿಕೊಂಡರೆ, ನಂತರದಲ್ಲಿ ಬಂಡಾಯದ ಗುಣಗಳು ಕಾಣಿಸಿಕೊಂಡು ಬ್ಲೂಸ್, ಜಾಝ್ ಇತರೇ ಪ್ರಕಾರಕ್ಕೆ ಆ ಕಾಲದ ಜನಪದ ಶೈಲಿಯ ಗೀತೆಗಳು ಹೇಗೆ ನಾಂದಿಯಾದವು ಎಂಬುದನ್ನು ಬರಹಗಾರರೊಬ್ಬರು ಸೊಗಸಾಗಿ ತಮ್ಮ ಲೇಖನದಲ್ಲಿ ಕಟ್ಟಿಕೊಳ್ಳುತ್ತಾರೆ. ಬರೇ ಅಷ್ಟೇ ಅಲ್ಲದೆ ಇಂದಿನ ಜನಜೀವನ ಹೇಗೆ ನಾಳಿನ ಜನಪದವಾಗಬಹುದೆಂಬುದಕ್ಕೆ ಪುರಾವೆ ಕೊಟ್ಟು ಹೇಳುತ್ತಾರೆ. ಈ ಲೇಖನ ಬಹು ಆಯಾಮಗಳಿಂದ ಕೂಡಿ, ನಾಳಿನ ಜನಪದವನ್ನು ಕಟ್ಟಬಹುದಾದ ಇಂದಿನ ಜನಜೀವನದಲ್ಲಿ ಹಸನನ್ನು ಕಾಪಾಡಿಕೊಳ್ಳುವ ಬಗೆಯನ್ನು ಹುಡುಕಾಡುವುದರಲ್ಲಿ ಮತ್ತು ಹಾಗಾಗಲಿ ಎಂಬ ಸದಾಶಯದಲ್ಲಿ ಕೊನೆಗೊಳ್ಳುತ್ತದೆ.

ಹಾಗೆಯೇ ಪ್ಲಾಂಟೇಶನ್‌ಗಳಲ್ಲಿನ ಗುಲಾಮರ ಉಗಮ ಮತ್ತು ಅದರಿಂದಾದ ಸಾಂಸ್ಕೃತಿಕ ಸಂಕರ ಹಾಗೂ ಆ ಮೂಲಕ ಉಂಟಾದ ಹೊಸ ಸಾಹಿತ್ಯ, ಸಂಗೀತಗಳ ಬಗ್ಗೆ ವಿಸ್ತೃತವಾದ ಲೇಖನವಿದೆ. ಇದರಲ್ಲಿ ಗುಲಾಮರ ಮಾರುಕಟ್ಟೆ ಮತ್ತು ಪ್ರಪಂಚಾದ್ಯಂತ ಅವರ ಸರಬರಾಜಿನ ಜಾಲವನ್ನು ಪರಿಚಯಿಸುವ ಪ್ರಯತ್ನವಿದೆ. ಜತೆಗೇ ಜಾನ್ ಎಂಬ ಗುಲಾಮನ ಜನಪದವಿದೆ. ನಮ್ಮ ಕೆಲವು ದಲಿತ ಲೇಖಕರು ಶೋಷಣೆಯನ್ನು ಮತ್ತು ದಬ್ಬಾಳಿಕೆಯನ್ನು ಎದುರಿಸುವಾಗ ತೋರಿಸಿದ ನಿರ್ಲಿಪ್ತ ಹಾಸ್ಯದಲ್ಲಿ ಅಡಕವಾಗಿದ್ದ ತಮ್ಮ ಸ್ಥಿತಿಯ ಬಗೆಗಿನ ನಿರ್ಲಕ್ಷ್ಯ, ಸ್ವಲ್ಪ ಚೇಷ್ಟೆ, ಹಾಗೂ ಭಾಷೆಯಲ್ಲಿನ ಒಡೆಯ-ಗುಲಾಮರ ಸ್ವಾಮ್ಯ, ಮುಗ್ಧತೆಯ ದೆಸೆಯಿಂದ ಸಂವಹನದಲ್ಲಿನ ಬಿರುಕು ಎದ್ದು ಕಾಣುತ್ತದೆ.

ಒಟ್ಟಾರೆ ಇದೊಂದು ಯಶಸ್ವಿ ಪ್ರಯತ್ನ. ಹೊರನಾಡಿನ ಜನಪದವನ್ನು ಆ ನಾಡಿಗೆ ವಲಸೆ ಹೋದ ಭಾರತೀಯರು ಅದರಲ್ಲಿಯೂ ಕನ್ನಡಿಗರು ಮಾಡಿದಾಗ ಕನ್ನಡ ಜನಪದದಿಂದ ಬಹಳ ದೂರ ನಿಂತು ಅಮೆರಿಕನ್ ಮೂಲನಿವಾಸಿಗಳ ಜನಪದವನ್ನು ನೋಡಲಾಗುವುದಿಲ್ಲ. ಅಷ್ಟಕ್ಕೂ ಹೋಮೋ ಸೆಪಿಯೆನ್ಸ್ ಎಂಬ ಗುಂಪೇ 'ಔಟ್ ಆಫ್ ಆಫ್ರಿಕಾ' ವಲಸಿಗರಲ್ಲವೇ? ಹಾಗಾಗಿ ನಮ್ಮ ಸಂಗೀತ, ಹಾಡು-ಹಸೆ, ಕಥೆ, ಕುಣಿತ ಇವುಗಳು ಎಲ್ಲ ಮನುಷ್ಯರ ಗುಂಪುಗಳು ಅವರವರನ್ನು ರಂಜಿಸಲು ಕಟ್ಟಿಕೊಂಡಿದ್ದಿರ ಬಹುದು. ಜಾನ್ ಎಂಬ ಗುಲಾಮನ ಕತೆ, ಮೂಲನಿವಾಸಿಗಳ ಕೊಯೋಟೆ, ನರಿ, ತೋಳಗಳ ಕಥೆ, ಹಾರಿಕೊಂಡು ಹೋದವರ ಕಥೆ ಎಲ್ಲದರಲ್ಲೂ ಇರುವುದು ಸ್ವಾತಂತ್ರ್ಯ, ಬಿಡುಗಡೆ, ಸುಖದಾಂಪತ್ಯಕ್ಕೆ ಬೇಕಾದ ಹಲವು ಚಿನಕುರುಳಿ ಸೂತ್ರಗಳು- ಒಟ್ಟು ಬದುಕಲು ಬೇಕಾದ ಕೆಲ ಆಣಿಮುತ್ತುಗಳು. ಇಲ್ಲಿ ಜೀವನವನ್ನು ಹಸನು ಮಾಡಿಕೊಳ್ಳುವ ಜತೆ ಮನರಂಜನೆಯ ಅಂಶವೂ ಇರುವುದರಿಂದ ಯಾವ ದೊಡ್ಡ ಸಾಹಿತ್ಯವನ್ನು ರಚಿಸುತ್ತಿದ್ದೇವೆ

ಎಂಬ ಅರಿವೂ ಇಲ್ಲದೆ ಇನ್ನೂ ಹತ್ತು ಪೀಳಿಗೆಗೆ ಸಾಕಾಗುವಷ್ಟು ಕೊಡುಗೆಯನ್ನು ಕೊಟ್ಟು ಹೋಗಿದೆ, ಈ ಜನಪದ.

ಈ ಐನೂರಕ್ಕೂ ಹೆಚ್ಚು ಪುಟಗಳ ಗ್ರಂಥ ಇವೆಲ್ಲದರ ಪರಿಚಯವನ್ನು ಬಹಳ ಫಲಿತವಾಗಿ ಮಾಡಿಕೊಡುತ್ತದೆ.

ಆಧಾರ

1. National Institute of Justice-Violence against American Indian and Alaskan Native Men and Women-Andre B Rosay. June 1, 2016.
2. North American Indigenous Warfare and Ritual Violence-Richard J. Charcon and Ruben G Mendoza; ಯುನಿವರ್ಸಿಟಿ ಆಫ್ ಅರಿಜೋನ ಪ್ರೆಸ್).
3. The Rise and Fall of Organized Crime in America- James Jacobs. University of Chicago Press Journals, 2020.

❑



ಅನುಬಂಧ 2

ನಮ್ಮ ಲೇಖಕರು

*

ಅನಿಲ ದೇಶಪಾಂಡೆ

[ಅಮೇರಿಕಾ - ಭಾರತದ ಜಾನಪದ ಸಾಮ್ಯತೆ]



ಈಗ ಅಮೇರಿಕೆಯಲ್ಲಿ ನೆಲೆಸಿರುವ, ಹುಟ್ಟೂರು - ಮುದಗಲ್, ರಾಯಚೂರು ಜಿಲ್ಲೆಯ ಅನಿಲ ದೇಶಪಾಂಡೆ ವೃತ್ತಿಯಿಂದ ಸಾಫ್ಟ್ವೇರ್ ಕಂಪನಿಯ ಮಾಲಕರು, ಪ್ರವೃತ್ತಿಯಿಂದ ಚಿಂತಕ, ಲೇಖಕ, ಪ್ರವಚನಕಾರ, ಸಮಾಜ ಸೇವಕ, ಕರಕುಶಲ ಕರ್ಮಿ ಹಾಗು ಪಯಣಿಗ! ಲೇಖಕರಾಗಿ ಸುಮಾರು 25 ಲೇಖನಗಳು, 45 ಪದ್ಯಗಳು, 2 ನಾಟಕಗಳು, ಹಲವಾರು ಚುಟುಕುಗಳು ರಚಿಸಿರುವರು. ಇವರ ಪ್ರವಚನಗಳು; ಅಧ್ಯಾತ್ಮ, ಭಾಗವತ, ವೇದ-ಉಪನಿಷತ್ತು, ಬಸವ ತತ್ವ, ಓಶೋ ಚಿಂತನೆ, ಹಾಸ್ಯ-ಹರಟೆ (Standup comedy) ಮತ್ತು ಕಾವ್ಯ ವಾಚನ ಇತ್ಯಾದಿ ಒಳಗೊಂಡಿವೆ. ಕರಕುಶಲತೆಯಲ್ಲಿ ಹೆಚ್ಚಾಗಿ ಕಟ್ಟಿಗೆ ಕೆಲಸಗಳು (ಬಡಿಗ-Carpentry work), ಚಿತ್ರಗಳು, ಕಲಾಕೃತಿಗಳು ಮತ್ತು ಅಮೂರ್ತ ಕಲೆ (abstract art) ಇತ್ಯಾದಿ ಒಳಗೊಂಡಿವೆ. ಸಮಾಜ ಸೇವೆ ಸಂಸ್ಥೆಗಳು; ಕನ್ನಡ ಕೂಟಗಳು, ಸೇವಾ ಇಂಟರ್ ನ್ಯಾಶನಲ್ ಸಂಸ್ಥೆ, ಹಿಂದು ಸ್ವಯಂ ಸೇವಕ ಸಂಘ ಇತ್ಯಾದಿ ಒಳಗೊಂಡಿವೆ. ಅನಿಲ ದೇಶಪಾಂಡೆ ಪಯಣಿಗನಾಗಿ 23 ದೇಶಗಳಲ್ಲಿ ಸುತ್ತಾಡಿದ್ದಾರೆ. ಇವರ ಲೇಖನಗಳು ಮತ್ತು ಪದ್ಯಗಳು - ಹೆಚ್ಚಾಗಿ ದಿನನಿತ್ಯ ನಡೆಯುವ ಸಾಮಾನ್ಯ ಘಟನೆಗಳು ಸಾರುವ ಬದುಕಿನ ಸಂದೇಶಗಳ ಬಗೆಗೆ. ಒಂದು ಚಿಕ್ಕ ಸಂಗತಿಯಿಂದ ಪ್ರಾರಂಭವಾಗುವ ಲೇಖನಗಳು, ಸೃಷ್ಟಿಕರ್ತನ ಇರುವು ಮತ್ತು ಅದರ ಅರಿವಿನ ಬಗೆಗೆ ಅಥವ ವೈಜ್ಞಾನಿಕ ಸಿದ್ಧಾಂತಕ್ಕೆ ಸರಿ ಹೊಂದಿಸಲು ಪ್ರಯತ್ನ ಮಾಡುತ್ತವೆ! ಇವರದು ಚಿಕ್ಕ ಮತ್ತು ಚೊಕ್ಕ ಕುಟುಂಬ, 'ನಾನು, ಆನು, ತಾನು ಮತ್ತು ಅವನು' (ನಾನು, ನನ್ನ ಹೆಂಡತಿ, ನಮ್ಮ ಮಗ ಮತ್ತು

ನಾವೆಲ್ಲ ನಂಬಿರುವ ಅವನು ಭಗವಂತ). ಅನಿಲ ದೇಶಪಾಂಡೆ ಶಿಕಾಗೊ ನಗರದ ಪ್ಯಾಲಟೈನ್ ಉಪನಗರದಲ್ಲಿ ನೆಲೆಸಿದ್ದಾರೆ.

Email: anilrd@yahoo.com

ಅನುರಾಧ ಅರುಣ್

[ಇಲಿನಿ ಒಕ್ಕೂಟ]



ಶ್ರೀಮತಿ ಅನುರಾಧ ಅರುಣ್ ಅವರು 'ಪ್ಯಾರಾಲೀಗಲ್' ವೃತ್ತಿಯಲ್ಲಿ ತಜ್ಞರು. ಪುಸ್ತಕಾಲಯದಲ್ಲಿ ಉದ್ಯೋಗಿಯಾಗಿ ಕೆಲಸ ಮಾಡಿದ್ದಾರೆ. ಈಗ ಪತಿ ಅರುಣ್ ಮತ್ತು ಮಗ ಆಶ್ರಿತ್ ಜೊತೆ ಇಲಿನಾಯ್ ಪ್ರಾಂತ್ಯದ ಬೋಲಿಂಗ್ ಬ್ರೂಕ್‌ನಲ್ಲಿ ನೆಲೆಸಿದ್ದಾರೆ. ಇವರ ಹಲವು ಲೇಖನಗಳು ಶಿಕಾಗೋ ಕನ್ನಡ ಕೂಟದ 'ಸಂಗಮ' ಪತ್ರಿಕೆಯಲ್ಲಿ ಹಾಗೂ ಅಂತರ್ಜಾಲದಲ್ಲಿ ಪ್ರಕಟಗೊಂಡಿವೆ.

Email: arun20002@comcast.net

ಅಹೀಶ ಭಾರದ್ವಾಜ್

[ಕರ್ನಾಟಕ ಮತ್ತು ಅಮೆರಿಕೆಯ ಶ್ರಮಿಕರ ಜನಪದ ಹಾಡುಗಳು – ತೌಲನಿಕ ಅಧ್ಯಯನ]



ಮೂಲತಃ ಬೆಂಗಳೂರಿನವರಾದ ಅಹೀಶ್ ಭಾರದ್ವಾಜ, ವೃತ್ತಿಯಿಂದ ಸಾಫ್ಟ್‌ವೇರ್ ಇಂಜಿನಿಯರ್. 2004ರಲ್ಲಿ ಭಾರತದಿಂದ ಅಮೆರಿಕಾಗೆ ಆಗಮಿಸಿದ್ದು, 2008ರಿಂದ ತಮ್ಮ ಪತ್ನಿ ಮತ್ತು ಮಗನೊಂದಿಗೆ ನ್ಯೂ ಜೆರ್ಸಿಯಲ್ಲಿ ನೆಲೆಸಿದ್ದಾರೆ. ನ್ಯೂ ಜೆರ್ಸಿಯ 'ಬೃಂದಾವನ' ಕನ್ನಡ ಕೂಟದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, 2014ರಲ್ಲಿ 'ಸಾಹಿತ್ಯ ಬೃಂದಾವನ' ಪ್ರಾರಂಭಿಸಿದ ದ್ವೈಮಾಸಿಕ ಪತ್ರಿಕೆಯಾದ 'ಬೃಂದಾವನ ವಾಣಿ'ಯ ವಿನ್ಯಾಸಕಾರನಾಗಿ, ನಂತರ ಸಂಪಾದಕನಾಗಿ ಕೆಲಸ ನಿರ್ವಹಿಸಿದ್ದಾರೆ. ಇವರ ಕಥೆ, ಪ್ರಬಂಧಗಳು, ಅಂಕಣ ಬರಹಗಳು ಕರ್ನಾಟಕ ರಾಜ್ಯದ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. ನ್ಯೂ ಜೆರ್ಸಿಯಲ್ಲಿ ಕನ್ನಡ ಸಾಹಿತ್ಯದ ಚಟುವಟಿಕೆಗಳಿಗೆಂದು 'ಸಾಹಿತ್ಯ ಸುಧೆ' ತಂಡವನ್ನು ರಚಿಸಿದ್ದು, ಸಾಹಿತ್ಯದ ಕುರಿತಾದ ವಿಚಾರ ವಿನಿಮಯ, ಭಾವಸಂಗಮ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಕನ್ನಡ ಸಾಹಿತ್ಯಾಸಕ್ತರಾಗಿ ನ್ಯೂ ಜೆರ್ಸಿಯ ಮನೆಯಲ್ಲಿ 2000 ಕನ್ನಡ ಪುಸ್ತಕಗಳ ಸಂಗ್ರಹವಿಟ್ಟುಕೊಂಡಿದ್ದಾರೆ. ಇಲ್ಲಿ ನೆಲೆಸಿರುವ ಕನ್ನಡಿಗರ ಓದಿಗೆ ಕನ್ನಡದ ಕೃತಿಗಳು ಲಭ್ಯವಾಗಬೇಕೆಂಬ ನಿಟ್ಟಿನಲ್ಲಿ ನ್ಯೂಜೆರ್ಸಿಯ ಕೆಲವು ಪಬ್ಲಿಕ್ ಗ್ರಂಥಾಲಯಗಳಲ್ಲಿ ಕನ್ನಡ ಪುಸ್ತಕಗಳನ್ನು ಕೆಟಲಾಗಿಂಗ್ ಮಾಡಿಸಿದ್ದು, ಈ ಕೆಲಸವನ್ನು ಮುಂದುವರೆಸುತ್ತಿದ್ದಾರೆ.

Email: mailahe@gmail.com

ಆನಂದ ಸಿಂಹ

[ಬೇ ಏರಿಯಾದ ಒಹ್ಲೋನೀಯರು]



ಮೂಲತಃ ಬೆಂಗಳೂರಿನವರು. ವಿದ್ಯಾರ್ಹತೆ: ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ. ನಂತರ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ (IIM), ಬೆಂಗಳೂರಿನಿಂದ MBA ಸ್ನಾತಕೋತ್ತರ ಪದವಿ. ಈಗ ಬೇ ಏರಿಯಾದ 'ಸ್ಯಾನ್ ರಮೋನ್' ನಗರದ ನಿವಾಸಿ. ಎಳೆಯ ವಯಸ್ಸಿನಿಂದಲೂ ಪತ್ರಿಕೆಗಳ 'Letters to the Editor' ಕಾಲಂಗಳಿಗೆ ಬರೆಯುವ ಹವ್ಯಾಸ. East Bayನ ಟ್ರೈವ್ಯಾಲಿ ಕನ್ನಡ ಸಂಘದ 'ಮಿನುಗು' ವಾರ್ಷಿಕ ಸಂಚಿಕೆಯ ಸಂಸ್ಥಾಪಕ–ಸಂಪಾದಕರಾಗಿದ್ದಾರೆ. ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟದ 'ಸ್ವರ್ಣಸೇತು' ಸಂಚಿಕೆಯಲ್ಲಿ ಇವರ ಬಹುಮಾನಿತ ಕವನ/ಕವಿತೆ/ಕತೆಗಳು ಹಲವು ಬಾರಿ ಪ್ರಕಟಿತಗೊಂಡಿವೆ. ಇವರ ಇಂಗ್ಲಿಷ್ ಬರಹಗಳನ್ನು ಕನ್ನಡಿಗರಿಗೆ ಚಿರಪರಿಚಿತವಾದ 'Deccan Herald' ದಿನಪತ್ರಿಕೆಯಲ್ಲಿ ಓದಬಹುದು.

Email: doddanand@hotmail.com

ಉಮಾ ವೆಂಕಟೇಶ್

[ಆಮಿಶ್ ಸಮುದಾಯದ ಸಂಕ್ಷಿಪ್ತ ಇತಿಹಾಸ ಮತ್ತು ಪರಂಪರೆ, ಡಿಯಾನಳ ಸಂಕಲ್ಪ (ಕಥೆ)]



ಹುಟ್ಟಿ, ಬೆಳೆದು, ವಿದ್ಯಾಭ್ಯಾಸ ನಡೆಸಿದ್ದು ಸಂಸ್ಕೃತಿಯ ತವರೂರು ಮೈಸೂರು ನಗರದಲ್ಲಿ. ಮುಂದೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದು, ಅಲ್ಲಿನ ಸ್ಥಳೀಯ ಕಾಲೇಜಿನಲ್ಲಿ 2 ವರ್ಷ ಉಪನ್ಯಾಸಕಿಯಾಗಿ ಕಾರ್ಯನಿರ್ವಹಣೆ. ಮದುವೆಯಾದ ನಂತರ ಪುಣೆಯಲ್ಲಿ ವಾಸ್ತವ್ಯ. 1996ರಲ್ಲಿ, ಪತಿ ಡಾ. ಬೆಂಗಳೂರು ಸತ್ಯಪ್ರಕಾಶ್, ಮಗಳು ಚೈತ್ರ ಹಾಗೂ ಮಗ ರಜತ್ ಜೊತೆಯಲ್ಲಿ ಯುನೈಟೆಡ್ ಕಿಂಗ್ಡಮ್ಮಿನಲ್ಲಿರುವ ಕಾರ್ಡಿಫ್ ನಗರಕ್ಕೆ ವಲಸೆ. ಅಲ್ಲಿ 20 ವರ್ಷಗಳ ವಾಸ್ತವ್ಯದ ನಂತರ, 2016 ಆಗಸ್ಟ್ ತಿಂಗಳಲ್ಲಿ, ಅಮೆರಿಕೆಯ ಪೆನ್ಸಿಲ್ವೇನಿಯ ರಾಜ್ಯದಲ್ಲಿರುವ ಸ್ಟೇಟ್ ಕಾಲೇಜಿಗೆ ಮತ್ತೊಮ್ಮೆ ವಲಸೆ. ಇಲ್ಲಿನ ಪೆನ್ ಸ್ಟೇಟ್ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ತಳಿಶಾಸ್ತ್ರ ಪ್ರಯೋಗಾಲಯದಲ್ಲಿ ಸಂಶೋಧಕಿಯಾಗಿ ಕಾರ್ಯ ನಿರ್ವಹಣೆ. ಬಾಲ್ಯದಿಂದಲೇ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಆಸಕ್ತಿ. ಶಾಲಾ ಕಾಲೇಜು ದಿನಗಳಿಂದಲೇ

ಕನ್ನಡ ಕಥೆ, ಕಾದಂಬರಿ ಮತ್ತು ಪ್ರಬಂಧಗಳನ್ನು ಓದುವ ಹವ್ಯಾಸ. ಬಿ.ಎಸ್‌ಸಿ. ದಿನಗಳಲ್ಲಿ ಉನ್ನತ ಮಟ್ಟದಲ್ಲಿ ಕನ್ನಡ ಭಾಷೆಯ ಅಭ್ಯಾಸ. ಕನ್ನಡದಲ್ಲಿ ಬರೆಯುವ ಹವ್ಯಾಸವಿದ್ದರೂ, ಬರವಣಿಗೆ ಗಂಭೀರ ರೂಪ ಪಡೆದದ್ದು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಯು.ಕೆ. ಕನ್ನಡ ಬಳಗದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ 15 ವರ್ಷಗಳ ಕಾಲ ಭಾಗವಹಿಸಿ, ಬಳಗದ 25ನೆಯ ವರ್ಷದ ಬೆಳ್ಳಿಹಬ್ಬದ ಸಮಾರಂಭದಲ್ಲಿ ಸಾಹಿತ್ಯಗೋಷ್ಠಿ ಸಭೆಯ ಆಗುಹೋಗುಗಳನ್ನು ಯಶಸ್ವಿಯಾಗಿ ನಿರ್ವಹಿಸಿದಾಗ. ಜೊತೆಗೆ ಬೆಳ್ಳಿಹಬ್ಬದ ಸ್ಮರಣಸಂಚಿಕೆಯ ಸಂಪಾದಕೀಯದಲ್ಲಿ ಕಾರ್ಯನಿರ್ವಹಣೆ. ಮುಂದೆ ಕನ್ನಡ ಬಳಗದ ಸಾಹಿತ್ಯ ವೇದಿಕೆ 'ಅನಿವಾಸಿ' ಜಾಲಜಗುಲಿಯ ಸ್ಥಾಪನೆ ಮತ್ತು ವೇದಿಕೆಯ ಕಾರ್ಯಚಟುವಟಿಕೆಗಳಲ್ಲಿ ಮುಂದಾಳತ್ವ. ಅನೇಕ ಲೇಖನಗಳನ್ನು ಪ್ರತಿ ವಾರ ಬರೆದು ಪ್ರಕಟಿಸಿದ್ದಾರೆ. ಕರ್ನಾಟಕದ ದಿನ ಮತ್ತು ವಾರಪತ್ರಿಕೆಗಳಲ್ಲಿ ಜನಪ್ರಿಯ ವಿಜ್ಞಾನದ ಲೇಖನಗಳನ್ನು ಬರೆದಿದ್ದಾರೆ. ಅನಿವಾಸಿ ವೇದಿಕೆಯ ಲೇಖನಗಳನ್ನು ಕ್ರೋಡೀಕರಿಸಿ ಪ್ರಕಟಿಸಿದ 'ಅನಿವಾಸಿಗಳ ಅಂಗಳದಿಂದ' ಪುಸ್ತಕದ ಸಂಪಾದಕೀಯವನ್ನು ನಿರ್ವಹಣೆ. 'ದಿ ಎಡ್ಜ್ ಆಫ್ ಫಿಸಿಕ್ಸ್' ಎನ್ನುವ ಜನಪ್ರಿಯ ಖಭೌತಶಾಸ್ತ್ರ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸದ್ಯದಲ್ಲಿ ಈ ಪುಸ್ತಕವನ್ನು ನವಕರ್ನಾಟಕ ಪ್ರಕಾಶಕರು ಪ್ರಕಟಿಸುವ ಸಲುವಾಗಿ ಪರಿಷ್ಕರಿಸುತ್ತಿದ್ದು, ಮುಂದಿನ ವರ್ಷದ ಮಾರ್ಚ್ ತಿಂಗಳಲ್ಲಿ ಬಿಡುಗಡೆ ಮಾಡುವ ಪ್ರಯತ್ನದಲ್ಲಿದ್ದಾರೆ. ಈಗ ಎರಡು ವರ್ಷದ ಹಿಂದೆ ಬಾಸ್ಟನ್ನಿನಲ್ಲಿ ನಡೆದ ಅಮೆರಿಕೆಯ ಕನ್ನಡ ಸಾಹಿತ್ಯ ರಂಗ ಸಮಾರಂಭದಲ್ಲಿ 'ಭಕ್ತಿ' ವಿಷಯದ ಬಗ್ಗೆ ನಡೆಸಿದ ಕಮ್ಮಟದಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತ, ಗಮಕ ವಾಚನ, ಸಸ್ಯೋದ್ಯಾನಗಳಿಗೆ ಭೇಟಿ, ಚಲನಚಿತ್ರಗಳ ವೀಕ್ಷಣೆ, ಜನಪ್ರಿಯ ವಿಜ್ಞಾನ ಪುಸ್ತಕ, ಕಾದಂಬರಿಗಳನ್ನು ಓದುವುದು ಪ್ರಿಯವಾದ ಹವ್ಯಾಸಗಳು.

ವಿಳಾಸ: Uma Venkatesh, 2385, Sleepy Hollow Drive, State College, PA 16803.

Email: venkatesh.uma@gmail.com

ಕಾವ್ಯ ಕಡಮೆ ನಾಗರಕಟ್ಟೆ

[ನಾಲ್ಕು ಜಾನಪದ ಕತೆಗಳು]




ಕಾವ್ಯಾ ಕಡಮೆ ಉತ್ತರ ಕನ್ನಡ ಜಿಲ್ಲೆಯ ಕಡಮೆಯವರು. 1988ರಲ್ಲಿ ಜನನ. ಬಿಎಸ್ಸಿ ನಂತರ ಕರ್ನಾಟಕ ವಿವಿಯಿಂದ ಆರು ಚಿನ್ನದ ಪದಕಗಳೊಂದಿಗೆ ಪತ್ರಿಕೋದ್ಯಮ ಎಂ.ಎ. ಪದವಿ. 2013ರಿಂದ ಅಮೆರಿಕಾದ ನ್ಯೂ ಜೆರ್ಸಿಯಲ್ಲಿ ವಾಸ. ಧ್ಯಾನಕೆ ತಾರೀಖಿನ ಹಂಗಿಲ್ಲ, ಜೀನ್ಸ್ ತೊಟ್ಟ ದೇವರು ಪ್ರಕಟಿತ ಕವನ ಸಂಕಲನಗಳು. ಪುನರಪಿ ಕಾದಂಬರಿ. ಆಟದೊಳಗಾಟ ಮತ್ತು ಡೋರ್ ನಂಬರ್ ಎಂಟು ನಾಟಕಗಳ ಸಂಕಲನ.

ದೂರ ದೇಶವೆಂಬ ಪಕ್ಕದ ಮನೆ ಪ್ರಬಂಧ ಸಂಕಲನ. ಇವರ ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಯುವ ಪುರಸ್ಕಾರ,' ಯುವ ಬರಹಗಾರರಿಗೆ ನೀಡುವ ಟೋಟೋ ಪುರಸ್ಕಾರ, ಗುಲ್ಬರ್ಗ ಜಿಲ್ಲೆಯ ಸೇಡಂನ ಅಮ್ಮ ಪ್ರಶಸ್ತಿ, ಬೇಂದ್ರೆ ಗ್ರಂಥ ಬಹುಮಾನ, ರತ್ನಮ್ಮ ಹೆಗ್ಗಡೆ ಗ್ರಂಥ ಬಹುಮಾನ, ಕಡಂಗೋಡ್ಲು ಕಾವ್ಯ ಪುರಸ್ಕಾರ, ದಿನಕರ ಕಾವ್ಯ ಪ್ರಶಸ್ತಿ, ಸಾಹಿತ್ಯ ಪರಿಷತ್ತಿನ ಕಾಕೋಳ ಸರೋಜಮ್ಮ ದತ್ತಿ ಬಹುಮಾನ ಮತ್ತು ನಾಟಕ ಅಕಾಡಮಿಯ ನಾಟಕ ಬಹುಮಾನ ದೊರೆತಿವೆ.

ವಿಳಾಸ: 452 Vanderveer Rd, Bridgewater, NJ 08807
ದೂರವಾಣಿ: 848–391–1356
kavya.kadame@gmail.com

ಟಿ. ಎನ್. ಕೃಷ್ಣರಾಜು
[ಆಫ್ರಿಕ ಖಂಡದ ಒಂದಿಷ್ಟು ಗಾದೆಗಳು]



ಮೂಲ ಮತ್ತು 1972ರವರೆಗೆ: ಉಡುಪಿಯ ಹತ್ತಿರದ ತೋನ್ಸೆ ಗ್ರಾಮ. ಹುಟ್ಟಿದ್ದು, ಕೊಡವೂರು. ಹೈಸ್ಕೂಲಿನವರೆಗೆ ವಿದ್ಯಾಭ್ಯಾಸ, ಮೈಸೂರು ಹತ್ತಿರದ ಪಿರಿಯಾಪಟ್ಟದಲ್ಲಿ, ನಂತರ, ಮೈಸೂರಿನ ಯುವರಾಜ ಕಾಲೇಜು (ಪಿ.ಯು.ಸಿ.), ಮೈಸೂರು ಮೆಡಿಕಲ್ ಕಾಲೇಜು (ಎಂ.ಬಿ.ಬಿ.ಎಸ್.), ಮುಂಬಯಿ ವಿಶ್ವವಿದ್ಯಾಲಯದ ಜಿ. ಎಸ್. ಮೆಡಿಕಲ್ ಕಾಲೇಜಿನಲ್ಲಿ ಪೀಡಿಯಾಟ್ರಿಕ್ಸ್‌ನಲ್ಲಿ ಡಿಪ್ಲೊಮ, ಮತ್ತು ಎಂ.ಡಿ. ಪದವಿಗಳು.

1972ರ ನಂತರ: ಚಿಕಾಗೊ ದ ಕುಕ್ ಕೌಂಟಿ ಆಸ್ಪತ್ರೆಯಲ್ಲಿ ಎರಡು ವರ್ಷ ಪೀಡಿಯಾಟ್ರಿಕ್ಸ್‌ನಲ್ಲಿ ತರಬೇತಿ. ನಂತರ ಇಲಿನಾಯ್ ವಿಶ್ವವಿದ್ಯಾನಿಲಯದಲ್ಲಿ ನವಜಾತ ಶಿಶುಶಾಸ್ತ್ರದಲ್ಲಿ ಹೆಚ್ಚಿನ ತರಬೇತಿ. ಅದೇ ಯುನಿವರ್ಸಿಟಿಯಲ್ಲಿ ಅಧ್ಯಾಪಕನಾಗಿ, ನಂತರ ಪ್ರಾಧ್ಯಾಪಕನಾಗಿ 2002ರವರೆಗೆ ದುಡಿದದ್ದು. 2002ರ ನಂತರ 2013ರವರೆಗೆ ವಾಶಿಂಗ್‌ಟನ್ ಡಿ.ಸಿ. ಬಳಿ ಇರುವ ರಾಷ್ಟ್ರೀಯ ಆರೋಗ್ಯ ಸಂಸ್ಥೆಯಲ್ಲಿ ಮೆಡಿಕಲ್ ಆಫೀಸರ್ ಆಗಿ ಸೇರ್ಪಡೆ. 2013ರಲ್ಲಿ ಪ್ರಮೋಶನ್ ಸಿಗಲಾಗಿ, ಆ ಸಂಸ್ಥೆಯಲ್ಲಿ ಒಂದು ಶಾಖೆಯ ಅಧಿಪತಿಯಾದ ಮೊಟ್ಟಮೊದಲ ಭಾರತೀಯ – ಒಂದು ರೀತಿಯಲ್ಲಿ ಹೆಮ್ಮೆಯ ಸಂಗತಿ. ಸಾಹಿತ್ಯದ ಆಸಕ್ತಿ. ಮೊದಲಿನಿಂದಲೂ ಏನನ್ನಾದರೂ ಓದುವ, ಬರೆಯುವ ಗೀಳು. ಮನೆಯಲ್ಲಿ ರಾಮಾಯಣ ಮಹಾಭಾರತ, ಭಾಗವತದ ಕತೆಗಳನ್ನಾಗಲೀ, ಚಂದಮಾಮ, ಮಲ್ಲಿಗೆ ಮುಂತಾದ ಪತ್ರಿಕೆಗಳನ್ನು ನಾನು ಮೊದಲು ನಾನು ಮೊದಲು ಎಂದು ಜಗಳವಾಡಿ ಓದಿ ಮುಗಿಸುವ ಛಲ ಮೊದಲಿನಿಂದಲೂ.

ಕತೆ, ಕಥಾಸಂಕಲನ ಮತ್ತು ಕಾದಂಬರಿಗಳನ್ನಲ್ಲದೇ, ಮೆಡಿಕಲ್ ವೃತ್ತಿಯ ಇತಿಹಾಸದ ಬರಹಗಳನ್ನೂ ಪ್ರಕಟಿಸಿದ್ದಾರೆ.

ಪ್ರಕಟಿತ ಕೃತಿಗಳು

1. ಬೇತಾಳರಾಯ ಮತ್ತು ಇತರ ಕಥೆಗಳು (1979).
2. ಪಶ್ಚಿಮಾಯಣ ಕಾದಂಬರಿ (1983).
3. ಸಾವಿರ ಪಕ್ಷಿಗಳು (2010).
4. ಕತೆಗಳು ಮತ್ತು ಕಾದಂಬರಿ (2011).

Email: Rajutonse@outlook.com.

ಗುರುಪ್ರಸಾದ್ ಕಾಗಿನೆಲೆ

[ಬಹುಮುಖಿ ಸಂಸ್ಕೃತಿಯ ಪಕ್ಷಿನೋಟ (ಸಹ ಸ್ಪಂದನ)]



ಹುಟ್ಟಿದ್ದು ಶಿವಮೊಗ್ಗ. ಬೆಳೆದದ್ದು ಮೈಸೂರು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ. ಬಳ್ಳಾರಿಯ ಸರಕಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಎಂ.ಬಿ.ಬಿ.ಎಸ್. ಮತ್ತು ಎಂ.ಡಿ. ಪದವಿ ಪಡೆದು ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ. 1995ರಲ್ಲಿ ಅಮೆರಿಕೆಗೆ ವಲಸೆ. ಡೆಟ್ರಾಯಿಟ್‌ನ ವೇಯ್ನ್ ಸ್ಟೇಟ್ ವಿಶ್ವವಿದ್ಯಾನಿಲಯ ಹಾಗೂ ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯಗಳಲ್ಲಿ ತರಬೇತಿ. ಸದ್ಯಕ್ಕೆ ಮಿನೆಸೊಟಾ ರಾಜ್ಯದ ರಾಚೆಸ್ಟರ್‌ನಲ್ಲಿ ಪತ್ನಿ ಪದ್ಮ ಮತ್ತು ಮಕ್ಕಳಾದ ಪ್ರಣೀತ ಮತ್ತು ಪ್ರಭವರೊಂದಿಗೆ ವಾಸ. ನಾರ್ತ್ ಮೆಮೋರಿಯಲ್ ಆಸ್ಪತ್ರೆಯ ಎಮರ್ಜೆನ್ಸಿ ಮೆಡಿಸಿನ್ ವಿಭಾಗದಲ್ಲಿ ಎಮರ್ಜೆನ್ಸಿ ವೈದ್ಯನಾಗಿ ಕೆಲಸ. ಪ್ರಕಟಿತ ಕೃತಿಗಳು: ನಿರ್ಗುಣ (2003), ಶಕುಂತಳಾ (2007)– ಕಥಾಸಂಕಲನಗಳು: ವೈದ್ಯ, ಮತ್ತೊಬ್ಬ (2005)– ಲೇಖನ ಸಂಗ್ರಹ. ಸಂಪಾದಿತ ಕಥಾಸಂಕಲನ– ಆಚೀಚೆಯ ಕಥೆಗಳು (2005). ಬಿಳಿಯ ಚಾದರ (2007), ಗುಣ (2010) ಮತ್ತು ಹಿಜಾಬ್ (2017)– ಕಾದಂಬರಿಗಳು. ಕೆಲವು ಕಥೆಗಳು ಮರಾಠಿ, ತೆಲುಗು ಮತ್ತು ಕೊಂಕಣಿ ಭಾಷೆಗಳಿಗೆ ಅನುವಾದವಾಗಿವೆ.

Email:gkaginele@gmail.com

ಗುಂಡೂ ಶಂಕರ್



[ಅಮೇರಿಕನ್ ಮೂಲ ನಿವಾಸಿಗಳ ಪರಂಪರೆಯ ಒಂದು ಅವಲೋಕನ (ಮೂಲ ಇಂಗ್ಲಿಷ್ ಲೇಖನ)


ಮೂಲನಿವಾಸಿಗಳ ಮೇಲೆ ಯೂರೋಪಿನ ವಲಸೆಗಾರರ ಮತ್ತು ಯಾತ್ರಿಕರ ಪ್ರಭಾವ: ಸಾಹಿತ್ಯದಲ್ಲಿ ಪ್ರತಿಧ್ವನಿ (ಮೂಲ ಇಂಗ್ಲಿಷ್ ಲೇಖನ)].

ಪತ್ನಿ ಶೈಲಜ ಮತ್ತು ಇಬ್ಬರು ಮಕ್ಕಳೊಂದಿಗೆ ಫ್ರೀಹೋಲ್ಡ್ ನ್ಯೂ ಜೆರ್ಸಿಯಲ್ಲಿ ವಾಸ ಮಾಡುತ್ತಿದ್ದಾರೆ. B. Tech. ಡಿಗ್ರಿ Indian Institute of Science, Bangalore ಮತ್ತು Indian Institute of Management, Calcutta ನಿಂದ M.B.A. ಡಿಗ್ರಿ ಪಡೆದರು. ಈಗ Management Consultant ಆಗಿ ಕೆಲಸ ಮಾಡುತ್ತಿದ್ದಾರೆ. ಸಾಹಿತ್ಯ ಮತ್ತು ಕಲೆಯಲ್ಲಿ ಆಸಕ್ತಿ. ಕನ್ನಡ ಸಾಹಿತ್ಯ ರಂಗ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ.

Email: gundu.shankar@gmail.com

ಜ್ಯೋತಿ ಮಹಾದೇವ್

[ಜಾನಪದ ವೈದ್ಯ – ಕೆಲವು ಸೌತ್ ಇಂಡಿಯನ್ ಮತ್ತು ರೆಡ್ ಇಂಡಿಯನ್ ಮನೆಮದ್ದುಗಳು]



ವಿದ್ಯಾರ್ಹತೆ: ಬಿಎಸ್ಸಿ, ಕನ್ನಡ ಎಂ.ಎ., ಸೈಕಾಲಜಿ ಎಂ.ಎ., ಹಿಪ್ನೋಥೆರಪಿ, ಪರ್ಸನಲ್ ಫಿಟ್ನೆಸ್ ಟ್ರೈನರ್.

ಪ್ರಕಟಿತ ಕೃತಿಗಳು: ಭಾವಲಹರಿ, ಭಾವಗಾನ, ಭಾವಬಿಂಬ, ಭಾವಲೋಕ, ಅಗ್ನಿಮುಡಿ (ಕವನ ಸಂಕಲನಗಳು); ಭಾವಯಾನ (ಕಥೆ–ಹರಟೆ ಸಂಕಲನ); ಮಿನುಗು ಮಿಂಚು (ಬೆಳಗು–ಬೈಗಿರುಳುಗಳ ಸಂದೇಶ–ಸಾಲ್ಮಿಂಚುಗಳ ವಿಶಿಷ್ಟ ಸಂಕಲನ). 'ಕನ್ನಡ ಸಾಹಿತ್ಯ ರಂಗ'ದ ಆಡಳಿತ ಮಂಡಳಿಯ ಸದಸ್ಯೆಯಾಗಿಯೂ 'ಕನ್ನಡ ಸಾಹಿತ್ಯ ರಂಗ' ಹಾಗೂ 'ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟ'ಗಳಿಗಾಗಿ ಶ್ರೀಗಂಧ, ಸ್ವರ್ಣಸೇತು, ಬೇರು–ಸೂರು, ಅಮೆರಿಕನ್ನಡ ಬರಹಗಾರರು, 'ರಂಗ–ತರಂಗ' ಕೃತಿಗಳ ಸಹ–ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಆಳ್ವಾಸ್ ನುಡಿಸಿರಿಯೂ ಸೇರಿದಂತೆ ಹಲವಾರು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಸಂದರ್ಶನಗಳು, ಕವನವಾಚನ ಕಾರ್ಯಕ್ರಮಗಳು ಪ್ರಸಾರವಾಗಿವೆ. 'ಸಾಹಿತ್ಯ ಲಹರಿ ವಾಟ್ಸಾಪ್ ಬಳಗ'ವೆಂಬ ಸಮೂಹ ಮಾಧ್ಯಮವೊಂದರ ಸದಸ್ಯೆಯಾಗಿ 'ಕಬ್ಬದೊಕ್ಕಲು' ಹಾಗೂ 'ಸೂರ್ಯಕಾಂತಿ' ಕೃತಿಗಳ ಸಂಪಾದಕರಾಗಿದ್ದಾರೆ. ಹಲವಾರು ವರ್ಷಗಳ ಕಾಲ ಅಮೆರಿಕದಲ್ಲಿದ್ದು, ಪ್ರಸ್ತುತ 2010ರಿಂದ ಮಣಿಪಾಲ ಅನಂತನಗರದಲ್ಲಿ 'ಹಿಪ್ನೋಥೆರಪಿಸ್ಟ್' ಆಗಿ ಸ್ವ ಉದ್ಯೋಗದಲ್ಲಿದ್ದಾರೆ. ಕೆಲವಾರು ಶಾಲೆ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮನಃಸ್ವಾಸ್ಥ್ಯದ ಬಗೆಗೆ ಉಪನ್ಯಾಸಗಳನ್ನು ನೀಡುತ್ತಿದ್ದಾರೆ.

Email: jyothimahadev@gmail.com

ಜ್ಯೋತಿ ವೆಂಕಟಸುಬ್ರಹ್ಮಣ್ಯ

[ಮೂಲ ನಿವಾಸಿಗಳ ವೈದ್ಯ ಲೋಕ – ಒಂದು ಕೌತುಕಮಯ ಜಗತ್ತು]

ಮೂಲತಃ ಮೈಸೂರಿನವರು. ವೃತ್ತಿಯಲ್ಲಿ ಆಯುರ್ವೇದ ವೈದ್ಯೆ. ಪ್ರವೃತ್ತಿಯಲ್ಲಿ



ಸಾಹಿತ್ಯಾಸಕ್ತೆ. ಬರೆಯುವುದಕ್ಕಿಂತ ಓದುವುದರಲ್ಲಿ ಹೆಚ್ಚು ಉತ್ಸಾಹ. ಇತ್ತೀಚಿಗೆ ಕೆಲವು ವರ್ಷಗಳಿಂದ ದೃಷ್ಟಿ ವಿಕಲ ಚೇತನರಿಗಾಗಿ ಧ್ವನಿಪುಸ್ತಕಗಳನ್ನು ಹೊರತರುತ್ತಿರುವ 'ಕನ್ನಡ ಪುಸ್ತಕ' ಸಂಸ್ಥೆಗೆ ಸ್ವಯಂಸೇವಕಿಯಾಗಿ ತೊಡಗಿಸಿಕೊಂಡಿದ್ದಾರೆ. ಸದ್ಯಕ್ಕೆ ವಯೋಮಿಂಗ್ ರಾಜ್ಯದ ಲ್ಯಾರೆಮಿಯಲ್ಲಿ ಪತಿಯೊಂದಿಗೆ ವಾಸ.

Email: jyolight@gmail.com

ತಳಿ ನಂಜಪ್ಪ ರಾಜಶೇಖರ

[ಬ್ರೆಜ಼ಿಲ್: ಇತಿಹಾಸ, ಸಂಸ್ಕೃತಿ, ಮತ್ತು ಜಾನಪದ ಸೊಗಡು]



ವಾಸ ಕ್ಲೆಮೆಂಟನ್, ನ್ಯೂ ಜೆರ್ಸಿ. ಹುಟ್ಟಿ ಬೆಳೆದದ್ದು ಬೆಂಗಳೂರು ಸಮೀಪದ ಆನೇಕಲ್. ವಿದ್ಯಾಭ್ಯಾಸ ಆನೇಕಲ್, ಬೆಂಗಳೂರು, ಮತ್ತು ತಿರುವನಂತಪುರ. ಅಂತಿಮ ಪದವಿ ಭಾರತೀಯ ವಿಜ್ಞಾನ ಮಂದಿರದಿಂದ ಪಿಎಚ್.ಡಿ. ಹಾಸನ, ಬೆಂಗಳೂರು, ದಕ್ಷಿಣ ಅಮೆರಿಕದ ಸುರಿನಾಮ್, ಮತ್ತು ಅಮೆರಿಕಗಳಲ್ಲಿ ವೃತ್ತಿ ಜೀವನ ನಡೆಸಿ, ಜುಲೈ 2018ರಿಂದ ನಿವೃತ್ತಿ ಜೀವನದ ಸುಖವನ್ನು ಅನುಭವಿಸುತ್ತಿದ್ದಾರೆ. ತ್ರಿವೇಣಿ ಕನ್ನಡ ಸಂಘದ ಅಧ್ಯಕ್ಷರಾಗಿ ಮತ್ತು ಇತರೆ ಪದಾಧಿಕಾರಿಯಾಗಿ, ಕನ್ನಡ ಸಾಹಿತ್ಯ ರಂಗದ ಮೊದಲ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಲೇಖನಗಳು ಸಾಹಿತ್ಯ ರಂಗದ ಪುಸ್ತಕ ಮಾಲೆ, ಅಕ್ಕ ಸ್ಮರಣಸಂಚಿಕೆ, ನಾವಿಕ ಸ್ಮರಣಸಂಚಿಕೆ, ಮತ್ತು 'ದರ್ಪಣ' ಅಂತರ್ಜಾಲ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ನ್ಯೂಜೆರ್ಸಿಯ ಸಾಹಿತ್ಯಾಸಕ್ತರ ಬಳಗ 'ಪ್ರಸ್ತಾಪ'ದ ಕಾರ್ಯಕ್ರಮಗಳಲ್ಲಿ ಸದಾ ಸಕ್ರಿಯವಾಗಿ ಭಾಗವಹಿಸುತ್ತಾರೆ. ವೈಚಾರಿಕ ಲೇಖನಗಳನ್ನು ಓದುವುದರಲ್ಲಿ ವಿಶೇಷ ಆಸಕ್ತಿ. ಇವರ ಜೀವನೋಲ್ಲಾಸದ ಸ್ಫೂರ್ತಿಯ ಚಿಲುಮೆ ಪತ್ನಿ ಶಂಕರಿ!

Email: rajashankari@gmail.com

ತ್ರಿವೇಣಿ ಶ್ರೀನಿವಾಸರಾವ್



[ಎಸ್ಕಿಮೊ ಅಲ್ಲ! ಇವರು ಇನ್ಯುಯಿಟ್ಸ್]

ಚಿಕ್ಕಮಗಳೂರು ಜಿಲ್ಲೆಯ ಕಡೂರು ತ್ರಿವೇಣೀಯವರ ಹುಟ್ಟೂರು. 'ತುಳಸೀ ವನ' (ಪ್ರಬಂಧ ಸಂಕಲನ) ಮತ್ತು 'ತಿಳಿನೀಲಿ ಪೆನ್ನು' (ಕಥಾ ಸಂಕಲನ) ಇವರ ಪ್ರಕಟಿತ ಪುಸ್ತಕಗಳು. ಕರ್ನಾಟಕದ ಪ್ರಮುಖ ಪತ್ರಿಕೆಗಳಲ್ಲಿ ಕಥೆ ಲೇಖನಗಳು

ಪ್ರಕಟಗೊಂಡಿವೆ. ಲಲಿತ ಪ್ರಬಂಧಗಳು, ವೈಚಾರಿಕ ಲೇಖನ, ಸಿನೆಮಾ, ಸಂಗೀತ, ನಾಟಕ, ದಾಸಸಾಹಿತ್ಯಗಳಲ್ಲಿ ಹೆಚ್ಚಿನ ಆಸಕ್ತಿ. ಅಮೇರಿಕಾದಲ್ಲಿ ಕನ್ನಡ ಸಾಹಿತ್ಯ ಪಸರಿಸಲು ಪ್ರಾರಂಭವಾದ ಸಂಸ್ಥೆಯಾದ ಕನ್ನಡ ಸಾಹಿತ್ಯ ರಂಗದ ಪದಾಧಿಕಾರಿಗಳಲ್ಲಿ ಒಬ್ಬರು. ಕಸಾರಂ ವೆಬ್ ತಾಣದ ನಿರ್ವಾಹಕಿ. ಕನ್ನಡ ಸಾಹಿತ್ಯ ರಂಗವು ಪ್ರಕಟಿಸಿದ 'ಮಥಿಸಿದಷ್ಟೂ ಮಾತು' ಗ್ರಂಥದ ಪ್ರಧಾನ ಸಂಪಾದಕಿ. ಕಸಾರಂ ಪ್ರಕಟಣೆಗಳಾದ 'ಬೇರು ಸೂರು', 'ಬದಲಾವಣೆಯ ಬೆನ್ನಟ್ಟಿ' ಗ್ರಂಥಗಳ ಸಂಪಾದಕ ಮಂಡಳಿಯಲ್ಲಿದ್ದು ಕಾರ್ಯ ನಿರ್ವಹಿಸಿರುವುದರ ಜೊತೆಗೆ ಕನ್ನಡ ಸಾಹಿತ್ಯ ರಂಗವು ಹೊರತಂದಿರುವ ಎಲ್ಲಾ ಗ್ರಂಥಗಳಲ್ಲಿಯೂ ತ್ರಿವೇಣಿಯವರ ಲೇಖನಗಳು ಪ್ರಕಟಗೊಂಡಿವೆ. 'ತುಳಸಿವನ. ಕಾಂ' ಎಂಬ ಸ್ವಂತ ಅಂತರ್ಜಾಲ ತಾಣವಿದೆ. ವಿದ್ಯಾರಣ್ಯ ಕನ್ನಡ ಕೂಟದ 'ಸಂಗಮ' ಸಂಚಿಕೆಯ ಸಂಪಾದಕತ್ವ ನಿರ್ವಹಣೆಯ ಅನುಭವ. ಪ್ರಸ್ತುತ ಪತಿ ಮತ್ತು ಮಕ್ಕಳೊಂದಿಗೆ ಅಮೆರಿಕದ ಇಲಿನಾಯ್ ರಾಜ್ಯದ 'ಆರೋರ' ನಗರದಲ್ಲಿ ವಾಸ.

Email: sritri@gmail.com

ಮೈ. ಶ್ರೀ. ನಟರಾಜ
[ಜೋಳದ ಪೂರಿ ಜೇನುತುಪ್ಪ]



ಆಳ್ವಾಸ್ ನುಡಿಸಿರಿ ಪ್ರತಿಷ್ಠಾನದ 2018ರ ಪ್ರಶಸ್ತಿಗೆ ಭಾಜನರಾದ ಡಾ. ಮೈ. ಶ್ರೀ. ನಟರಾಜರ ಹುಟ್ಟೂರು ಹಾಸನ, ಅರವತ್ತರ ದಶಕದ ಕೊನೆಯಲ್ಲಿ ಅಮೆರಿಕೆಗೆ ಆಗಮಿಸಿ, ಅಮೆರಿಕದ ಅಣುಶಕ್ತಿ ನಿಯಂತ್ರಣ ಆಯೋಗದಲ್ಲಿ ರಾಕ್ ಮೆಕ್ಯಾನಿಕ್ಸ್ ವಿಭಾಗಾಧಿಕಾರಿ ಮತ್ತಿತರ ವಿವಿಧ ಜವಾಬ್ದಾರಿಗಳೊಂದಿಗೆ ಸೇವೆ ಸಲ್ಲಿಸಿ ನಿವೃತ್ತರಾಗಿ ಮೇರಿಲ್ಯಾಂಡಿನಲ್ಲಿ ಪತ್ನಿ ಗೀತಾಳೊಂದಿಗೆ ವಾಸ. 'ನಾನೂ ಅಮೆರಿಕನ್ ಆಗಿಬಿಟ್ಟೆ,' 'ಮಧುಚಂದ್ರ, ಸಿರಿಕೇಂದ್ರ,' (ಕವನ ಸಂಕಲನಗಳು), 'ಮೀನಿನ ಹೆಜ್ಜೆ' ಮತ್ತು 'ನೇಣು' 'ಪರದೇಶಿಗಳ ಪಾರ್ಟಿ ಮತ್ತು ಇತರ ಮೂರು ನಾಟಕಗಳು' ಮತ್ತು 'I am Brahman' (ನಾಟಕಗಳು), 'ಜಾಲತರಂಗ' ಮತ್ತು 'ಜಾಲತರಂಗಿಣಿ' (ಅಂಕಣ ಬರಹಗಳು), 'ಮಾಯಾವಿ ಸರೋವರ' (ಅನುವಾದಿತ ನಾಟಕ), 'The Void and The Womb,' ('ಬಯಲು-ಬಸಿರು' ಕನ್ನಡ ಕಾದಂಬರಿಯ ಆಂಗ್ಲಾನುವಾದ), 'ಭಾಷೆಯಿಂದ ಭಾಷೆಗೆ' ಮತ್ತು 'Beyond Words' (ಅನುವಾದಿತ ಕವನ ಸಂಕಲನಗಳು), 'ಸಿರಿಗನ್ನಡ ಗೀತರಾಮಾಯಣ' (ನೀಳ್ಗಾವ್ಯ), 'ಕಥೆಯಂ ಕೇಳೆಲೊ ಕಂದ' (ಕಥಾಸಂಕಲನ), ಇವು ಇವರ ಮುಖ್ಯ ಪ್ರಕಟಿತ ಕೃತಿಗಳು. 'ಕನ್ನಡ ಕಾದಂಬರಿ ಲೋಕದಲ್ಲಿ ಹೀಗೆ ಹಲವು,' 'ತಂತ್ರ ವಿಜ್ಞಾನ ವಾಹಿನಿ,' 'ಸ್ನೇಹದಲ್ಲಿ ನಿಮ್ಮ, ಹರಿ,' 'ದೀಪ ತೋರಿದೆಡೆಗೆ,' (ಕಥಾ ಸಂಕಲನ), 'ನಾರೀಗೀತ' (ಹಾಸನದ

ರಾಜಾರಾಯರ ಕಾದಂಬರಿಯ ಮರುಸೃಷ್ಟಿ), 'ರಂಗ ತರಂಗ–ಕನ್ನಡದ ಮುನ್ನಡೆಯ ಮಿಂಚು ನೋಟ' (ಆಹ್ವಾನಿತ ಭಾಷಣಗಳ ಸಂಗ್ರಹ), ಇವು ಇವರು ಸಂಪಾದಿಸಿದ ಮುಖ್ಯ ಕೃತಿಗಳು. ಕಾವೇರಿ ಕನ್ನಡ ಸಂಘದ ಕಾರ್ಯಕಾರೀ ಸಮಿತಿಯ ಮತ್ತು ಆಡಳಿತ ಮಂಡಲಿಯ ಅಧ್ಯಕ್ಷತೆ, ಕನ್ನಡ ಸಾಹಿತ್ಯ ರಂಗದ ಅಧ್ಯಕ್ಷತೆ. ಹಲವು ಪತ್ರಿಕೆಗಳ ಮತ್ತು ಸ್ಮರಣ ಸಂಚಿಕೆಗಳ ಸಂಪಾದಕತ್ವ, ಕನ್ನಡ ನಾಟಕ ತಂಡವನ್ನು ತಯಾರು ಮಾಡಿ ಊರೂರಿಗೆ ಕೊಂಡೊಯ್ದ ಖ್ಯಾತಿ, ಸಂಸ್ಕೃತದಲ್ಲಿ 'ನವರತ್ನಮಾಲಿಕಾ' ಎಂಬ ಒಂಬತ್ತು ಕೃತಿಗಳ ಹಾಗೂ ಕನ್ನಡದಲ್ಲಿ 'ನವಮಣಿಮಾಲಿಕಾ' ಎಂಬ ಒಂಬತ್ತು ಕೃತಿಗಳ ಸಾಹಿತ್ಯ ರಚನೆ, ಇವು ಇವರ ಇತರ ಸಾಧನೆಗಳು. ಸಾಹಿತ್ಯಕ್ಷೇತ್ರದಲ್ಲಿ, 'ತ್ರಿವೇಣಿ' ಸಂಸ್ಥೆ ಕೊಟ್ಟ 'ನೀಲಮ್ಮ ಮೆಟ್‌ಗುಡ್' ಪಾರಿತೋಷಕ; 'ಕಾವೇರಿ ಕನ್ನಡ ಸಂಘ', 'ಹ್ಯೂಸ್ಟನ್ ಕನ್ನಡ ವೃಂದ' ಮತ್ತು 'ಅಕ್ಕ' ಸಂಸ್ಥೆ ಕೊಟ್ಟ ವಿಶೇಷ ಪ್ರಶಸ್ತಿ ಫಲಕಗಳು; ಮಂಗಳೂರಿನ ಪತ್ರಿಕೆ 'ಹೃದಯವಾಹಿನಿ' ಕೊಟ್ಟ 'ಹೃದಯವಂತರು' ಪಾರಿತೋಷಕ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ 'ಮಧುಚಂದ್ರ–ಸಿರಿಕೇಂದ್ರ' ಕವನ ಸಂಕಲನಕ್ಕೆ ಕನ್ನಡ ನಾಡಿನಲ್ಲಿ ಸಂದ 'ಗೊರೂರು' ಪ್ರಶಸ್ತಿ. ಇವುಗಳ ಜೊತೆಗೆ, ಇವರ ತಾಂತ್ರಿಕ ನೈಪುಣ್ಯವನ್ನು ಮತ್ತು ಉತ್ತಮ ಸೇವೆಯನ್ನು ಗುರುತಿಸಿ ಅಣುಶಕ್ತಿ ನಿಯಂತ್ರಣ ಆಯೋಗ ಕೊಟ್ಟು ಗೌರವಿಸಿದ ಆಯೋಗದ ಅತ್ಯುನ್ನತ ಪ್ರಶಸ್ತಿಗಳಲ್ಲೊಂದಾದ 'ವಿಶಿಷ್ಟ ಸೇವಾ ಪ್ರಶಸ್ತಿ' ಹಾಗು ರಾಜಧಾನಿಯ National Council of Asian Indian Associations ಕೊಟ್ಟ ಸೇವಾ ಪ್ರಶಸ್ತಿ, ಇವು ಇವರಿಗೆ ಸಂದ ಪ್ರಶಸ್ತಿಗಳ ಪೈಕಿ ಕೆಲವು. ಯು. ಕೆ. ಕನ್ನಡಿಗರು ಮತ್ತು ಟೊರಾಂಟೋ/ಕೆನಡಾ ಕನ್ನಡಿಗರು ಸಹ ಇವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿ ಗೌರವಿಸಿದ್ದಾರೆ.

Email: mysreena@aol.com

ನಳಿನಿ ಮೈಯ

[ಹೋರಾಟಕ್ಕೆ ದನಿಯಾದ ಜನಪದ ಗೀತೆ]




ಬಾಲ್ಯ ಮೈಸೂರಿನ ಹತ್ತಿರದ ಹುಣಸೂರಿನಲ್ಲಿ. ಅಮೆರಿಕಾಗೆ ವಲಸೆ 1969ರಲ್ಲಿ. ವೃತ್ತಿಯಲ್ಲಿ ಆಕ್ಯುಪೇಶನಲ್ ಥೆರಪಿಸ್ಟ್. ಈಗ ನಿವೃತ್ತರಾಗಿದ್ದಾರೆ. ಶಿಕಾಗೊ ವಿದ್ಯಾರಣ್ಯ ಕನ್ನಡ ಕೂಟದ ಸಕ್ರಿಯ ಸದಸ್ಯೆ. ಬರೆಯುವ ಹವ್ಯಾಸ ಶುರುವಾಗಿದ್ದು 'ಅಮೆರಿಕನ್ನಡ' ಪತ್ರಿಕೆಯ ಮೂಲಕ. ಕರ್ನಾಟಕದ ಹಲವಾರು ಪತ್ರಿಕೆಗಳಲ್ಲಿ ಇವರ ಕಥೆ, ಪ್ರಬಂಧಗಳು ಪ್ರಕಟವಾಗಿವೆ. 'ಮರೀಚಿಕೆ ಮತ್ತು ಇತರ ಕಥೆಗಳು' ಕಥಾ ಸಂಕಲನ ಹಾಗೂ 'ಬಂದೀತು ಆ ದಿನ' ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. 'ಬೇಂದ್ರೆ ಅಂದ್ರೆ' ಎಂಬ ಬೇಂದ್ರೆ ಅವರ ಬಗೆಗಿನ ಗ್ರಂಥಕ್ಕೂ, ಮತ್ತು 'ಮನಸಿನ ಓಣಿಯಾಗ ಮಿನುಗುತಾವ ದೀಪ' ಎಂಬ ಶಿವರುದ್ರಪ್ಪನವರ

ಬಗೆಗಿನ ಗ್ರಂಥಕ್ಕೂ ನಾಗ ಐತಾಳರ ಜೊತೆ ಸಹಸಂಪಾದಕಿಯಾಗಿ ಕೆಲಸ ಮಾಡಿದ್ದಾರೆ. 'ಕನ್ನಡ ಸಾಹಿತ್ಯ ರಂಗ' ಪ್ರಕಟಿಸಿದ 'ಅವರವರ ಭಕುತಿಗೆ' ಪುಸ್ತಕಕ್ಕೆ ಪ್ರಧಾನ ಸಂಪಾದಕಿಯಾಗಿದ್ದರು. ಪ್ರಸ್ತುತ ಡೇರಿಯನ್, ಇಲಿನಾಯ್ ನಲ್ಲಿ ಪತಿ ಸುಬ್ರಾಯ ಮೈಯವರೊಡನೆ ವಾಸವಾಗಿದ್ದಾರೆ.

Email: nmaiya@gmail.com

ನಾಗ ಐತಾಳ:

[ನಯಾಗರ ಜಲಪಾತದ (Maid of the Mist)ನ ಮೇಲಿನ ಒಂದು ಐತಿಹ್ಯ ಕಥೆ]



ಹುಟ್ಟೂರು ಕರ್ನಾಟಕದ ಕರಾವಳಿಯ ಕೋಟ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೋಟದಲ್ಲಿ ಮುಗಿಸಿ, ಹೈಸ್ಕೂಲು, ಕಾಲೇಜು ವಿದ್ಯಾಭ್ಯಾಸ ಬೆಂಗಳೂರಿನಲ್ಲಿ. ಮುಂದೆ ಬನಾರಸ್‌ನಲ್ಲಿ B.Pharm. ಡಿಗ್ರಿ ಪಡೆದು, ಬೆಂಗಳೂರಿನ Indian Institute of Scienceನಲ್ಲಿ ಬಯೋಕೆಮಿಸ್ಟ್ರಿಯಲ್ಲಿ M.Sc. ಮತ್ತು Ph.D. ಪದವಿಗಳನ್ನು ಗಳಿಸಿದ್ದಾರೆ. ಬಯೋಕೆಮಿಸ್ಟ್ರಿಯಲ್ಲಿ ಹೆಚ್ಚಿನ ತರಬೇತಿ ಪಡೆಯಲು 1969ರಲ್ಲಿ ಅಮೆರಿಕಕ್ಕೆ ವಲಸೆ. ಮೊದಲಿಗೆ ಲಾಸ್ ಏಂಜಲಿಸ್‌ನ USC School of Medicineನಲ್ಲಿ ಮೂರು ವರ್ಷ, ಕೆನಡಾದಲ್ಲಿ ಮೂರು ವರ್ಷ, University of Chicagoದಲ್ಲಿ 25 ವರ್ಷ ಸಂಶೋಧನಾ ಅಧ್ಯಾಪಕನಾಗಿ ಕೆಲಸ. 2001ರಲ್ಲಿ ನಿವೃತ್ತಿ ಪಡೆದು, ಲಾಸ್ ಏಂಜಲಿಸ್‌ನ ನೆರೆ ಬಡಾವಣೆ ಆರ್ಕೇಡಿಯದಲ್ಲಿ ಮಡದಿ ಲಕ್ಷ್ಮಿ, ಮಗಳು ಅನುರಾಧಾರೊಡನೆ ಹಾಗೂ, ನ್ಯೂ ಜರ್ಸಿಯಲ್ಲಿರುವ ಮಗ ಅರವಿಂದ, ಸೊಸೆ ಸೆಪಿಡೆ, ಮೊಮ್ಮಕ್ಕಳು – ಅಲೆಕ್ಸಾಂಡರ್ ಕೃಷ್ಣ, ಕ್ಯಾಮರಾನ್ ಕವಿನ್‌ರ ಜೊತೆ ತಮ್ಮ ನಿವೃತ್ತ ಜೀವನವನ್ನು ತೃಪ್ತಿಕರವಾಗಿ ಕಳೆಯುತ್ತಿದ್ದಾರೆ. ಹವ್ಯಾಸಕ್ಕೆಂದು ಅಷ್ಟಿಷ್ಟು ಬರಹದಲ್ಲಿ ತೊಡಗಿಸಿಕೊಂಡಿದ್ದಾರೆ. ಕಾರಂತ, ಕುವೆಂಪು, ಮಾಸ್ತಿ, ಬೇಂದ್ರೆ ಮುಂತಾದವರ ಕುರಿತು 7 ಸಂಪಾದಿತ ಕೃತಿ, ಹಾಗೂ, ಅಮೆರಿಕದ ಕನ್ನಡ ಬರಹಗಾರರ ಕಿರುಪರಿಚಯದ (ಜ್ಯೋತಿ ಮಹದೇವ್‌ರೊಡನೆ) ಒಂದು ಸಂಪಾದಿತ ಕೃತಿ. ಅಲ್ಲದೆ ಸ್ವಂತ ಲೇಖಕನಾಗಿ (ಎರಡು ಕಾದಂಬರಿ, ಎರಡು ಪ್ರಬಂಧ ಸಂಕಲನ, ಎರಡು ಕಥಾಸಂಕಲನ, ಒಂದು ವೈಜ್ಞಾನಿಕ ಗ್ರಂಥ, ಎರಡು ಅನುಭವ ಕಥನ) 9 ಕೃತಿಗಳನ್ನೂ ಪ್ರಕಟಿಸಿದ್ದಾರೆ. ಕನ್ನಡ ಸಾಹಿತ್ಯ ರಂಗ ಪ್ರಕಟಿಸಿದ ಕೃತಿಗಳ ಸಂಪಾದಕ ಮಂಡಲಿಯಲ್ಲಿಯೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಕನ್ನಡ ಸಾಹಿತ್ಯ ರಂಗದ ಆಡಳಿತ ಮಂಡಲಿಯ ಅಧ್ಯಕ್ಷ.

Email: nagaaithal@gmail.com

ನಿವೇದಿತಾ ಕಶ್ಯಪ್

[ನನ್ನ ತಲೆಯನ್ನು ಹಿಂತಿರುಗಿಸು]



ನಿವೇದಿತಾ ಎನ್ ಕಶ್ಯಪ್ ಮೂಲತಃ ಕನ್ನಡದ ಹೆಸರಾಂತ ಸಾಹಿತಿಗಳ ಕುಟುಂಬಕ್ಕೆ ಸೇರಿದವರು. ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಮರಿಮೊಮ್ಮಗಳು ಹಾಗು ಶ್ರೀ ತ. ರಾ. ಸುಬ್ಬರಾಯರ ಮೊಮ್ಮಗಳು. ಇಂಗ್ಲಿಷ್, ಕನ್ನಡ ಹಾಗೂ ಸಂಸ್ಕೃತ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದಾರೆ. ತಮ್ಮ ಹಲವು ಲೇಖನಗಳು ಹಾಗೂ ಕವನಗಳು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕೆಲವೊಂದು ವಾರ್ಷಿಕ ಪುರವಣಿಗಳಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿರುವ ಅನುಭವವೂ ಇವರಿಗುಂಟು. ನಿವೇದಿತಾ ಪದವಿಯಲ್ಲಿ ಕಂಪ್ಯೂಟರ್ ಇಂಜಿನಿಯರ್ ಆಗಿದ್ದರೂ ಅವರ ಹವ್ಯಾಸ ಹಲವಾರು. ತನ್ನ 8ನೇ ವಯಸ್ಸಿನಲ್ಲೇ ಶ್ರೀ ಸಿದ್ಧಲಿಂಗ ಪಟ್ಟಣಶೆಟ್ಟಿಯವರ 'ಆಧೇ ಅಧೂರೇ' ನಾಟಕದಲ್ಲಿ ಅಭಿನಯಿಸುವುದರ ಮೂಲಕ ರಂಗಭೂಮಿಗೆ ಪಾದಾರ್ಪಣೆ ಮಾಡಿ ಹಲವಾರು ಗಣ್ಯ ನಿರ್ದೇಶಕರ ಅಡಿಯಲ್ಲಿ ನಾಟಕಗಳನ್ನು ಮಾಡಿ ಸೈ ಎನಿಸಿಕೊಂಡಿದ್ದಾರೆ. ಸ್ಯಾಕ್ರೊಮೆಂಟೊ ಹಾಗು ಬೇ ಏರಿಯಾದಲ್ಲಿ ಭಾರತೀಯ ಹಾಗು ಕನ್ನಡ ಸಂಸ್ಥೆಗಳು ಆಯೋಜಿಸುವ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ಸುಕರಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಇವರು ಕಾರ್ಯಕ್ರಮ ನಿರೂಪಣೆ, ಸ್ವಯಂಸೇವೆ, ಪ್ರವಾಸ, ಚಿತ್ರಕಲೆ, ಛಾಯಾಚಿತ್ರಗ್ರಹಣ, ಇತ್ಯಾದಿ ಹವ್ಯಾಸಗಳನ್ನೂ ಹೊಂದಿದ್ದಾರೆ. ಹೊಸ ಸಂಸ್ಕೃತಿಗಳು, ಹೊಸ ಭಾಷೆಗಳ ಬಗ್ಗೆ ಕಲಿಯುವುದು ಇವರಿಗೆ ಅತ್ಯಂತ ಸಂತಸದ ಸಂಗತಿ. ಬದುಕಿನಲ್ಲಿ ಸಂಗೀತ, ಸಾಹಿತ್ಯ, ನಾಟಕ, ಚಿತ್ರಕಲೆ ಇತ್ಯಾದಿ ಅಮೂಲ್ಯ ಮೌಲ್ಯಗಳನ್ನು ಪರಿಚಯಿಸಿದ ತನ್ನ ತಂದೆ ತಾಯಿ, ಅಜ್ಜಿಗೆ ತಾವು ಕೃತಜ್ಞರೆನ್ನುತ್ತಾರೆ ನಿವೇದಿತಾ.

ಪೂರ್ಣಿಮಾ ಕಶ್ಯಪ್

[ಜಾಣರ ಜಾಣ–ಕಯೋಟಿ ಅಣ್ಣ]



ಪೂರ್ಣಿಮಾ ಮಾಗಡಿ ಹತ್ತಿರದ ಕುದೂರಿನವರು. ವೃತ್ತಿಯಲ್ಲಿ ಇಂಜಿನಿಯರ್. ಪತಿ ಸುಬ್ರಹ್ಮಣ್ಯ ಮತ್ತು ಅವಳಿ ಮಕ್ಕಳು ಅರ್ಣವ್–ಅವನಿ. 21 ವರ್ಷಗಳಿಂದ ಅಮೆರಿಕೆ, 15 ವರ್ಷಗಳಿಂದ ಡ್ಯಾಲಸ್, ಟೆಕ್ಸಸ್ ವಾಸಿ. ಸ್ಥಳೀಯ ಕನ್ನಡ ಸಂಘ, ಕನ್ನಡ ಶಾಲೆಗಳಲ್ಲಿ ಸ್ವಯಂಸೇವಕಿ. ಮಾತೃಭಾಷೆಯ ಬಗ್ಗೆ ಸಹಜ ಅಭಿಮಾನ, ಆಸಕ್ತಿ. ಲಲಿತಕಲೆಗಳು ನೆಚ್ಚು, ಪುಸ್ತಕಗಳು ಅಚ್ಚುಮೆಚ್ಚು. ಅಕ್ಷರಮೋಹಿ. ತೋಚಿದ್ದು ಗೀಚುವ ಹವ್ಯಾಸವಿದೆ. ಕೆಲವು ಕವನಗಳು, ಲೇಖನಗಳು ಜಾಲತಾಣ ಮತ್ತು ಸ್ಮರಣ ಸಂಚಿಕೆಗಳಲ್ಲಿ

ಪ್ರಕಟವಾಗಿವೆ. ಸ್ಥಳೀಯ ಕನ್ನಡ ಸಂಸ್ಥೆಯ ಈ-ಮ್ಯಾಗಜಿನ್ ಸಂಪಾದಕಿ, ಹತ್ತನೇ ಅಕ್ಕ ಸಮ್ಮೇಳನದ ಸಾಹಿತ್ಯ ಸಮಿತಿಯ ಉಸ್ತುವಾರಿಯ ಅನುಭವವಿದೆ. ಜೀವನದ ಅಪಾರ ಸಾಧ್ಯತೆಗಳ ಬಗ್ಗೆ ತೀರದ ಕುತೂಹಲ ಮತ್ತು ಉತ್ಸಾಹ.

Email: poornimakh@gmail.com

ಪ್ರಕಾಶ್ ನಾಯಕ್

[ಮೌಂಟ್ ಶಾಸ್ತಾ - ದಂತ ಕಥೆಗಳ ಬೆಳ್ಳಿ ಶಿಖರ]



ಮೂಲತಃ ಉತ್ತರ ಕನ್ನಡ ಜಿಲ್ಲೆಯ ಹನೇಹಳ್ಳಿಯವರು. ಓದಿದ್ದು ಇಲೆಕ್ಟ್ರಿಕಲ್ ಇಂಜಿನಿಯರಿಂಗ್. ಉತ್ತರ ಕ್ಯಾಲಿಫೋರ್ನಿಯಾದ ಕುಪರ್ಟಿನೋದಲ್ಲಿ ವಾಸ. ಸಾಂತಾ ಕ್ಲಾರಾದಲ್ಲಿನ ಮಾರ್ವೆಲ್ ಸೆಮಿಕಂಡಕ್ಟರ್ ಕಂಪನಿಯಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸಮಾಡುತ್ತಿದ್ದಾರೆ. ಅಮೇರಿಕೆಯಲ್ಲಿನ ಕನ್ನಡ ಕೂಟ, ಅಕ್ಕ, ಕನ್ನಡ ಸಾಹಿತ್ಯ ರಂಗಗಳ ಪ್ರಕಟಣೆಯಲ್ಲಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಅಮೂರ್ತ ಚಿತ್ರ' ಕಥಾಸಂಕಲನ, 'ಅಂತು' ಕಾದಂಬರಿ ಪ್ರಕಟಿಸಿದ್ದಾರೆ. Albert Camusನ 'The Stranger' ಕಾದಂಬರಿಯನ್ನು ಕನ್ನಡಕ್ಕೆ 'ಅಪರಿಚಿತ' ಹೆಸರಿನಲ್ಲಿ ಅನುವಾದಿಸಿದ್ದಾರೆ. ಇವರ ಕಥೆಗಳು ಕನ್ನಡದ ಪ್ರಮುಖ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ.

Email - phn066@gmail.com; Blog - prakashnayak.in

ಪ್ರವೀಣ್ ಶಿವಶಂಕರ್

[ಕಡಲಾನೆಗಳ ಜೊತೆ ಬೆಳೆದ ಬಾಲಕ]



ಪ್ರವೀಣ್ ಶಿವಶಂಕರ್ ಮೂಲತಃ ಬೆಂಗಳೂರಿನವರಾಗಿದ್ದು, ಪ್ರಸ್ತುತದಲ್ಲಿ ಕೆನಡಾದ ಟೊರೊಂಟೋ ನಗರದಲ್ಲಿ ವಾಸಿಸುತ್ತಿದ್ದಾರೆ. ವೃತ್ತಿಯಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಿಣತರಾಗಿದ್ದು, ಪ್ರವೃತ್ತಿಯಲ್ಲಿ ಸಾಹಿತ್ಯ, ಕಲೆ, ಸಂಗೀತದಲ್ಲಿ ಆಸಕ್ತಿಯನ್ನೂ, ಕೃಷಿಯನ್ನೂ ಮಾಡಿಕೊಂಡು ಬಂದಿದ್ದಾರೆ. 12ನೇ ಶತಮಾನದ ವಚನ ಸಾಹಿತ್ಯ, ತತ್ಸಂಬಂಧವಾದ ಕನ್ನಡ ಸಾಹಿತ್ಯ ಸಮೀಕ್ಷೆಯಲ್ಲಿ ವಿಶೇಷವಾಗಿ ಶ್ರಮಿಸುತ್ತಿದ್ದಾರೆ. ಕಥೆ, ಕವನ, ನೀಳ್ಗತೆ, ಪ್ರಬಂಧ, ಭಾಷಾಂತರ ಇವೇ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದು, ಕನ್ನಡ ಸಾಹಿತ್ಯ ಅಕಾಡೆಮಿ ಅವರ 'ಅನಿಕೇತನ' ತ್ರೈಮಾಸಿಕ ಪತ್ರಿಕೆಯಲ್ಲಿ, ಅಲ್ಲದೆ ಇತರ ಸಂಕಲನಗಳಲ್ಲಿ ಇವು ಪ್ರಕಟಗೊಂಡಿವೆ. ಶ್ರೀಯುತರು 'ದ ಹಿಂದು' ದಿನಪತ್ರಿಕೆಯಲ್ಲೂ ಸಂಗೀತ, ಕಲೆ, ಸಾಹಿತ್ಯ, ನೃತ್ಯ ಇವುಗಳನ್ನು

ಕುರಿತಾಗಿ ಹಲವಾರು ಲೇಖನಗಳನ್ನೂ ಬರೆದಿದ್ದಾರೆ. ಭಾರತ, ಅಮೇರಿಕ, ಕೆನಡ – ಈ ಮೂರೂ ದೇಶಗಳಲ್ಲೂ ವಿದ್ಯಾಭ್ಯಾಸವನ್ನು ನಡೆಸಿದ್ದು, ಜಗತ್ತಿನ ಹಲವಾರು ದೇಶಗಳಲ್ಲಿ ಕೆಲಸ ಮಾಡಿ, ಸದ್ಯಕ್ಕೆ ಕೆನಡ ದೇಶದಲ್ಲಿ ವಾಸಿಸುತ್ತಿದ್ದಾರೆ.

Email: praveen.shivashankar@gmail.com

ಮಾಧವಿ ರಾಜಗೋಪಾಲ್ ರಿಜ಼ಿಯೋ

[ಮೂಲ ಲೇಖಕಿ: ಐರೋಪ್ಯ ವಲಸೆಗಾರರ ಬರ್ಬರತೆಗೀಡಾದ ಅಮೆರಿಕದ ಮೂಲ ನಿವಾಸಿಗಳ ನೈಜ ಇತಿಹಾಸ]



ಮಾಧವಿ ಈಗ ಫಿಲಡೆಲ್ಫಿಯಾದ ಚಾರ್ಟರ್ ಶಾಲೆಯೊಂದರಲ್ಲಿ ಅಧ್ಯಾಪಕಿ, ಇದಕ್ಕೂ ಮುನ್ನ ನಾರ್ಥ್‌ಪೆನ್ ಮತ್ತು ಆಬಿಂಗ್ಟನ್ ಸ್ಕೂಲ್ ಡಿಸ್ಟ್ರಿಕ್‌ಗಳಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಬ್ರೆನ್‌ಮಾರ್ ಕಾಲೇಜಿನಿಂದ ಇತಿಹಾಸದಲ್ಲಿ ಪದವಿ ಪಡೆದು ನಂತರ ವಿಲನೋವ ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಮಾಸ್ಟರ್ಸ್ ಪದವಿ ಪಡೆದಿದ್ದಾರೆ. ಕನ್ನಡ ಮತ್ತು ಫ್ರೆಂಚ್ ಭಾಷೆಗಳನ್ನೂ ಈಕೆ ಆಡಬಲ್ಲರು. ಸೈನ್ಸ್ ಫಿಕ್ಷನ್ ಮತ್ತು ಐತಿಹಾಸಿಕ ಫಿಕ್ಷನ್ ಓದುವುದು ಮತ್ತು ಯೋಗಾಭ್ಯಾಸ ಮಾಡುವುದು, ವಿವಿಧ ಸಂಸ್ಕೃತಿಗಳ ಪೌರಾಣಿಕ ಕಥನಗಳನ್ನು ಓದುವುದು ಈಕೆಯ ಹವ್ಯಾಸಗಳು. ಇತಿಹಾಸದ ವಿದ್ಯಾರ್ಥಿನಿಯಾಗಿ, ರಾಜಕೀಯ ಮತ್ತು ಸದ್ಯದ ವಾಸ್ತವಿಕ ಪರಿಸ್ಥಿತಿಗಳನ್ನು ಅರಿತುಕೊಳ್ಳಲು ಇತಿಹಾಸ ಮುಖ್ಯವೆಂಬುದು ಇವರ ನಂಬಿಕೆ.

Email: madhavirizzio@gmail.com

ಮಂಗಳಾ ಕುಮಾರ್

[ಮಾರ್ಮನ್ನರ ಜಾನಪದ ಮತ್ತು ಜೀವನ ಶೈಲಿ]



ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಿಂದ 1979ರಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ ಪಡೆದು, 1980ರಲ್ಲಿ ಅಮೇರಿಕಾಗೆ ಬಂದು ನೆಲೆಸಿದ ಮಂಗಳಾ ಅವರು ನಾರ್ಟೆಲ್, ಸೀಮೆನ್ಸ್, ಆಸ್ಪೆಕ್ಟ್ ಕಮ್ಯೂನಿಕೇಷನ್ಸ್ ಮುಂತಾದ ಹೈಟೆಕ್ ಕಂಪನಿಗಳಲ್ಲಿ ಉನ್ನತ ವರ್ಗದ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಜೊತೆಗೇ ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತ ಬಂದಿದ್ದಾರೆ. 1996ರಿಂದ ಪತಿ ಅರುಣ್ ಮತ್ತು ಮಗ ನಿಶಾಂತನೊಂದಿಗೆ

ಕ್ಯಾಲಿಫೋರ್ನಿಯ ಬೇ ಏರಿಯಾ ನಿವಾಸಿ. ಹವ್ಯಾಸಿ ಬರಹಗಾರ್ತಿ ಮಂಗಳಾ ಅವರ ಕನ್ನಡ ಮತ್ತು ಇಂಗ್ಲಿಷ್ ಕಥೆಗಳು, ವೈಚಾರಿಕ ಲೇಖನಗಳು ಮತ್ತು ವಿಮರ್ಶೆಗಳು ಹಲವಾರು ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ, ಜಾಲತಾಣಗಳಲ್ಲಿ ಪ್ರಕಟಿತವಾಗಿವೆ. ಮಂಗಳಾ ಅವರ ಕಿರುಕಥೆಗಳು ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದ 'ಸ್ವರ್ಣಸೇತು' ವಾರ್ಷಿಕ ಸಂಚಿಕೆಯ ಕಥಾಸ್ಪರ್ಧೆಯಲ್ಲಿ ಸತತವಾಗಿ 10 ವರ್ಷಗಳಿಗೂ ಮೀರಿ ಬಹುಮಾನ ಗಳಿಸಿವೆ.

Email: mangalakumar@gmail.com

ಮೀರಾ ಪಿ. ಆರ್.

[ಪ್ಲಾಂಟೇಷನ್ ಗುಲಾಮರ ಜಾನಪದ]



ಭಾಷಾವಿಜ್ಞಾನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಮೀರಾ ಶಿಕ್ಷಕಿಯಾಗಿ ಹಾಗು ಮೈಸೂರು, ಬೆಂಗಳೂರು ಆಕಾಶವಾಣಿಯಲ್ಲಿ ಹಲವು ವರ್ಷ ಅರೆಕಾಲಿಕ ಉದ್ಘೋಷಕಿಯಾಗಿ ಕೆಲಸ ಮಾಡಿದ್ದಾರೆ. ಈಗ ಸದ್ಯಕ್ಕೆ ನ್ಯೂ ಜೆರ್ಸಿಯ 'ನಾದ' ಸಂಗೀತ ಶಾಲೆಯ ಸಂಸ್ಥಾಪಕಿ ಮತ್ತು ಶಿಕ್ಷಕಿಯಾಗಿದ್ದಾರೆ. ಕನ್ನಡದ ಹಲವು ನಿಯತಕಾಲಿಕೆಗಳಲ್ಲಿ, ವಿಶೇಷಾಂಕಗಳಲ್ಲಿ ಮತ್ತು ವೆಬ್ ಪೋರ್ಟಲ್‌ಗಳಲ್ಲಿ, ಕನ್ನಡ ಸಾಹಿತ್ಯ ರಂಗ ಮತ್ತು ಅಮೆರಿಕದ ಕನ್ನಡ ಕೂಟಗಳ ಹಲವು ಪ್ರಕಟಣೆಗಳಲ್ಲಿ ಇವರ ಹಲವು ಕಥೆ, ಕವಿತೆ, ಪ್ರಬಂಧ, ವಿಮರ್ಶೆ, ಅಂಕಣ ಬರಹಗಳು ಪ್ರಕಟವಾಗಿವೆ. ಮಕ್ಕಳ ಸಾಹಿತ್ಯ ಇವರ ವಿಶೇಷ ಪ್ರೀತಿ. 'ಅಕ್ಕ 2010'ರ ಅಂಗವಾಗಿ ಪ್ರಕಟಗೊಂಡ ಮಕ್ಕಳ ವಿಶೇಷ ಸಂಚಿಕೆ 'ಗುಬ್ಬಿಗೂಡು' ಪುಸ್ತಕದ ಸಂಪಾದಕಿ. ಇವರ ಅಂಕಣ ಬರಹ ಮತ್ತಿತರ ಲೇಖನಗಳ ಸಂಗ್ರಹವಾಗಿ ಹೊರಬಂದ ಪುಸ್ತಕ 'ದೂರಸಾಗರ' 2017ರಲ್ಲಿ ಅಭಿನವ ಪ್ರಕಾಶನದಿಂದ ಪ್ರಕಟವಾಗಿದೆ. 'ಅಕ್ಕ 2012' ಸಮ್ಮೇಳನದ ಅಂಗವಾಗಿ ಹೊರಬರುತ್ತಿದ್ದ 'ಜಗಲಿ' ವಾರ್ತಾಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಮತ್ತು ಕನ್ನಡ ಸಾಹಿತ್ಯ ರಂಗದ ಪುಸ್ತಕ ಮಾಲೆ – 7ರ ಪ್ರಕಟಣೆಗಳಾದ 'ಅನುವಾದ ಸಂವಾದ' ಮತ್ತು 'A Little Taste of Kannada in English' ಕೃತಿಗಳ ಸಂಪಾದಕ ಮಂಡಳಿಯಲ್ಲಿಯೂ ಕೆಲಸ ಮಾಡಿದ್ದಾರೆ. 'ಅಕ್ಕ 2016' ಸಮ್ಮೇಳನಕ್ಕಾಗಿ ಮಕ್ಕಳ ಕಿರುಚಿತ್ರವೊಂದನ್ನು ಬರೆದು, ನಿರ್ದೇಶಿಸಿದ್ದಾರೆ. ತಮ್ಮದೇ ಸಂಗೀತ ಶಾಲೆಯೊಂದನ್ನು ನಡೆಸುತ್ತಿರುವ ಮೀರಾ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ಸಿನಿಮಾ, ವೆಬ್ ಮತ್ತು ಗ್ರಾಫಿಕ್ ಡಿಸೈನಿಂಗ್ ಹೀಗೆ ಹತ್ತು ಹಲವು ಆಸಕ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಭಾರತದಿಂದ ಅಮೆರಿಕಾಗೆ ವರ್ಷ 2000ದಲ್ಲಿ ಬಂದ ಇವರು, ಸದ್ಯಕ್ಕೆ ನ್ಯೂ ಜೆರ್ಸಿಯ 'ಎಡಿಸನ್' ಎಂಬಲ್ಲಿ ತಮ್ಮ ಪತಿ ಭಾರ್ಗವ ಹಾಗು ಮಗ ನಿಶಾಂತ್‌ನ ಜೊತೆ ನೆಲೆಸಿದ್ದಾರೆ.

ಸಂಪರ್ಕ ವಿಳಾಸ: bhameera@gmail.com; ದೂರವಾಣಿ: 774–571–5241

ರಾಗು ಕಟ್ಟಿನಕೆರೆ

[ಕೆನಡಾದ ದೇಶೀ ಕಲೆಗಳು ಮತ್ತು ಭಾರತೀಯ ಸಂವೇದನೆಗಳು]




ವೃತ್ತಿಯಲ್ಲಿ ಐಬಿಎಮ್ ಟೊರಾಂಟೋ ಲ್ಯಾಬಿನಲ್ಲಿ ಸೀನಿಯರ್ ಮ್ಯಾನೇಜರ್. ಭಾರತದ ಹೊರಗೆ ಸ್ಥಾಪಿಸಿದ ಮೊದಲ ಯಕ್ಷಗಾನ ಮೇಳವಾದ ಯಕ್ಷಮಿತ್ರ ಟೊರಾಂಟೋದ ಸ್ಥಾಪಕ ಭಾಗವತರು ಮತ್ತು ಚಂಡೆವಾದಕರು. ಯಕ್ಷಋಷಿ ಹೊಸ್ತೋಟ ಭಾಗವತರ 'ಯಕ್ಷಗಾನ ಶಿಕ್ಷಣ–ಲಕ್ಷಣ' ಪುಸ್ತಕದ ಸಂಪಾದಕರು. ಗಮಕ ಕಲಾವೇದಿಕೆ ಉತ್ತರ ಅಮೇರಿಕಾದಲ್ಲಿ ಸಕ್ರಿಯರು. ಟೊರಾಂಟೋದ ಸ್ಥಳೀಯ ಮಕ್ಕಳಿಗೆ ಉಚಿತವಾಗಿ ಕನ್ನಡವನ್ನು ಹೇಳಿಕೊಡುವ ಮೇಷ್ಟ್ರು. ಜನ RIP ಬಳಕೆ ಬಿಟ್ಟು ಓಂಶಾಂತಿ ಇತ್ಯಾದಿ ಬಳಸುವುದರ ಹಿಂದಿರುವ ಮೂಲ ಲೇಖನದ ಕರ್ತೃ. 'ಗೀತಾನುವರ್ತನೆ,' 'ಪರಿಣಾಮದ ವ್ಯಾಪ್ತಿ', 'ದೇಶೀ ಸಂಗೀತ ಮತ್ತು ಯಕ್ಷಗಾನ' ಇನ್ನಿತರ ರಂಗಭೂಮಿಯ ಪರಿಕಲ್ಪನೆಗಳಿಗೆ ಹೊಸವಿಚಾರ ಸೇರಿಸಿದವರು. ಸಂಸ್ಕೃತಿಗೆ ಸಂಬಂಧಿಸಿದ ಹಲವು ಸಂದರ್ಶನ ದಾಖಲಾತಿ ಮಾಡುವುದು ಲೇಖನ ಬರೆಯುವುದೂ ಹವ್ಯಾಸ. ಮಾಡೆಲ್ಸ್ ಆಫ್ ಕಂಪ್ಯೂಟೇಷನ್ ಸಂಶೋಧನೆ, ಯಕ್ಷಗಾನ ಸಂಶೋಧನೆ, ತಾಳಮದ್ದಲೆ ಅರ್ಥ, ಬರಹ, ಕವನ ಮತ್ತು ಕಾವ್ಯವಾಚನ ವ್ಯಾಖ್ಯಾನ ಮಾಡುವುದರಲ್ಲಿ ಆಸಕ್ತಿ ಇದೆ. ಮೂಲತಃ ಶಿವಮೊಗ್ಗ ಜಿಲ್ಲೆಯ ಸೊರಬ ಪ್ರಾಂತ್ಯದ ಕಟ್ಟಿನಕೆರೆ ಗ್ರಾಮದವರು.

Email: ragu.ks@gmail.com

ವತ್ಸ ಕುಮಾರ್

[ಅಮೆರಿಕದಲ್ಲಿ ಕಂಟ್ರಿ ವೆಸ್ಟರ್ನ್ ಮ್ಯೂಸಿಕ್]



ಬೆಂಗಳೂರಿನ ಒಂದು ಹಿರಿಯ ವೈದಿಕ ಕುಟುಂಬದ ಮಹಾ ವಿದ್ವಾನ್ ವಿದ್ಯಾ ವಿಭೂಷಣ ಶ್ರೀ ನುಗ್ಗೇಹಳ್ಳಿ ತಿರುಮಲಾಚಾರ್ಯರ ಮೊಮ್ಮಗನಾಗಿ ಜನನ. ತಂದೆ ಶ್ರೀ ಶ್ರೀನಿವಾಸ ಅಯ್ಯಂಗಾರ್ ತಾಯಿ ಲಕ್ಷಮ್ಮ. ಚಿಕ್ಕ ವಯಸ್ಸಿನಿಂದಲೇ ಪ್ರೀತಿ ಹಾಗೂ ಶಿಸ್ತಿನಿಂದ ಬೆಳಸಿದರು. ಅಣ್ಣ ಶ್ರೀ ರಾಮನ್ ಸಂಗೀತ ವಿದ್ವಾನ್. ಸಂಗೀತ ಸಾಹಿತ್ಯಗಳಲ್ಲಿ ಅಪಾರ ಆಸಕ್ತಿ ಉಂಟಾಗಲು ಅಣ್ಣನೇ ಕಾರಣ. ಇಂಜಿನಿಯರಿಂಗ್ ಮುಗಿಸಿದ ನಂತರ ಬೆಂಗಳೂರಿನಲ್ಲಿ ಹನ್ನೆರಡು ವರ್ಷಗಳ ನೌಕರಿ ಮಾಡಿ, 1978ರಲ್ಲಿ ಅಮೆರಿಕಾಗೆ ವಲಸೆ. ಸುಮಾರು ಮುವ್ವತ್ತು ವರ್ಷಗಳ ಕಾಲ ಅಣು ವಿದ್ಯುತ್ ಕೇಂದ್ರದಲ್ಲಿ ಚಾಕರಿ ಮುಗಿಸಿ 2006ರಲ್ಲಿ

ನಿವೃತ್ತಿ ಹೊಂದಿದ ನಂತರ, ಕೆಲವು ವರ್ಷಗಳ ಕಾಲ ಅಲ್ಲಿಇಲ್ಲಿ ಕೆಲಸ. 2013ರಿಂದ ಹೂಸ್ಟನ್ ಶ್ರೀ ಮೀನಾಕ್ಷಿ ಅಮ್ಮನ ದೇವಸ್ಥಾನದಲ್ಲಿ ಆಡಳಿತಾಧಿಕಾರಿಯಾಗಿ ಸೇರಿ ಅಂದಿನಿಂದ ಇಂದಿನವರೆಗೆ ಮೀನಾಕ್ಷಿಯ ಕೃಪಾ ಕಟಾಕ್ಷದಲ್ಲಿ ಸಮಾಧಾನದ ಜೀವನ ನಡೆಸುತ್ತಿದ್ದಾರೆ. ಕನ್ನಡ ಸಾಹಿತ್ಯ, ಸಂಗೀತ, ಚಿತ್ರಕಲೆ, ಸ್ವಯಂ ಸೇವೆ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಸಮಯದ ಸದ್ವಿನಿಯೋಗ. ವಾತ್ಸಲ್ಯದಿಂದ ಆದರಿಸುವ ಸ್ನೇಹಿತರ ತಂಡ, ಗೌರವದಿಂದ ಕಾಣುವ ಭಕ್ತಾದಿಗಳ ಗುಂಪು, ಸದಾ ಕಾಲ ಮಂತ್ರಘೋಷಗಳನ್ನು ಕಿವಿತುಂಬ ಕೇಳುವ ಸೌಭಾಗ್ಯಗಳನ್ನು ಎಂಬತ್ತರ ಹರೆಯದಲ್ಲೂ ಅನುವು ಮಾಡಿ ಕೊಟ್ಟಿರುವ ಶ್ರೀ ಮೀನಾಕ್ಷಿಗೆ ಕೋಟಿ ಕೋಟಿ ನಮಸ್ಕಾರಗಳು ಎನ್ನುತ್ತಾರೆ ವತ್ಸ ಕುಮಾರ್.

Email: vatsakumar17130@gmail.com

ವಿಶ್ವನಾಥ್ ಹುಲಿಕಲ್:

[ಅಮೇರಿಕನ್ ಇಂಡಿಯನ್ ಕಥೆ – ವಿಚಾರಣೆ]



ವಿಶ್ವನಾಥ್ ಹುಲಿಕಲ್ ಅವರು ಕನ್ನಡ ಸಣ್ಣಕಥೆಗಾರರು, ಪ್ರಬಂಧಕಾರರು, ಅನುವಾದಕರು ಮತ್ತು ಸಾಹಿತ್ಯ ಸಂಘಟಕರು. ಶ್ರೀಯುತರು ಈವರೆಗೆ 13 ಕೃತಿಗಳನ್ನು ರಚಿಸಿದ್ದಾರೆ; ಅವುಗಳಲ್ಲಿ ಮೂರು ಕಥಾಸಂಕಲನಗಳು, ನಾಲ್ಕು ಅನುವಾದಿತ ಕೃತಿಗಳು, ಎರಡು ಪ್ರಬಂಧಗಳು ಮತ್ತು ನಾಕು ಸಂಪಾದಿತ ಕೃತಿಗಳು ಸೇರಿವೆ. ಬರ್ಟ್ರೆಂಡ್ ರಸೆಲ್, ಜಾನ್ ಸ್ಟೈನ್ ಬೆಕ್, ವಿಲ್ ಡ್ಯುರಾಂಟ್ ಮತ್ತು ಜಾನ್ ಗ್ರೇ ಅವರ ಪ್ರಮುಖ ಕೃತಿಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡದ ಜನಪ್ರಿಯ ಚಲನಚಿತ್ರ 'ಅಮೇರಿಕ, ಅಮೇರಿಕ!'ಕ್ಕೆ ಕಥೆ ಬರೆದವರಲ್ಲಿ ಇವರೂ ಒಬ್ಬರು. ಕನ್ನಡ ಸಾಹಿತ್ಯದ ಬಗ್ಗೆ ಸದಭಿರುಚಿಯನ್ನು ಬೆಳೆಸುವ ದೃಷ್ಟಿಯಿಂದ ಸ್ಯಾನ್ ಹೋಸೆ ಪ್ರದೇಶದಲ್ಲಿ 'ಸಾಹಿತ್ಯ ಗೋಷ್ಠಿ'ಯನ್ನು ಸ್ಥಾಪಿಸಿ, ಹತ್ತು ವರ್ಷಗಳ ಕಾಲ ಪ್ರತಿ ತಿಂಗಳೂ ಉಪನ್ಯಾಸಗಳನ್ನು ಏರ್ಪಡಿಸಿಕೊಂಡು ಬಂದಿದ್ದಾರೆ. ಶ್ರೀಯುತರ ಸಾಹಿತ್ಯ ಸೇವೆಯನ್ನು ಗುರುತಿಸಿ ಅನೇಕ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ: ಅವುಗಳಲ್ಲಿ ಪ್ರಮುಖವಾದವು 'ಸುವರ್ಣ ಕರ್ನಾಟಕ' ಪುರಸ್ಕಾರ. ಇದಲ್ಲದೆ, ಉದಯ ಟಿವಿ ಇವರನ್ನು ತನ್ನ 'ಪರಿಚಯ' ಕಾರ್ಯಕ್ರಮದಲ್ಲಿ ಕನ್ನಡನಾಡಿನ ಜನತೆಗೆ ಪರಿಚಯಿಸಿದೆ.

Email: vhulikal@yahoo.com

ವೈಶಾಲಿ ಹೆಗಡೆ



[ಉಸಿರುಗಟ್ಟಿದವರ ಸುಡುಸುಯ್ಲು ಕಥೆ]

ಊರು, ಪಿಯುಸಿವರೆಗಿನ ಓದು, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ. ಇವರ ಪ್ರಕಟಿತ ಪುಸ್ತಕ 'ಒದ್ದೆಹಿಮ... ಉಪ್ಪುಗಾಳಿ' ಪ್ರಬಂಧ ಸಂಕಲನ. ಹುಬ್ಬಳ್ಳಿಯ ಬಿ.ವಿ.ಬಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಇಲೆಕ್ಟ್ರಾನಿಕ್ಸ್ ಹಾಗೂ ಕಮ್ಯುನಿಕೇಶನ್ ಕ್ಷೇತ್ರದಲ್ಲಿ ಬಿ.ಇ. ಪದವಿ. ಯುನಿವರ್ಸಿಟಿ ಆಫ್ ಮ್ಯಾಸಚೂಸೆಟ್ಸ್, ಕಂಪ್ಯೂಟರ್ ಸೈನ್ಸ್‌ನಲ್ಲಿ ಮಾಸ್ಟರ್ಸ್ ಪದವಿ. ಮಾಸ್ಟರ್ಸ್ ಥೀಸಿಸ್ ಪ್ರಬಂಧ ಲೇಖನ ಕಾನ್ಫರೆನ್ಸಿನಲ್ಲಿ ಮಂಡಿತವಾಗಿದೆ. ಪ್ರಸ್ತುತ ಸಾಫ್ಟವೇರ್ ಇಂಜಿನಿಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಮೆರಿಕೆಯ ಬಾಸ್ಟನ್ ಸಮೀಪದ ವೆಸ್ಟ್ ಫ಼ೋರ್ಡ್‌ನಲ್ಲಿ ವಾಸವಾಗಿದ್ದಾರೆ. ಅಮೆರಿಕೆಯ ಹವ್ಯಾಸಿ ಯಕ್ಷಗಾನ ತಂಡ 'ಯಕ್ಷಲೋಕ'ದ ಪಾತ್ರಧಾರಿಗಳಲ್ಲೊಬ್ಬರು. ಬರವಣಿಗೆಯ ಜೊತೆಯಲ್ಲಿ ಆಗಾಗ ನೃತ್ಯ, ನಾಟಕ, ರಂಗಪ್ರದರ್ಶನಗಳನ್ನು ಸಂಯೋಜಿಸುತ್ತ ಬಂದಿದ್ದಾರೆ. ಬಾಸ್ಟನ್ ಕನ್ನಡ ಕೂಟದಲ್ಲಿ ಮನರಂಜನ ಸಮಿತಿಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದಾರೆ. ನಾವಿಕ ಎರಡನೇ ವಿಶ್ವ ಸಮ್ಮೇಳನದ ಸಾಹಿತ್ಯ ಸಮಿತಿಯ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.

Email:vaishalimadhu@gmail.com

ಶಶಿಕಲಾ ಚಂದ್ರಶೇಖರ್




[ಹಾರಿ ಹೋದವರು]

ಮೂಲತಃ ತುಮಕೂರಿನವರು. ಈಗ ವಾಷಿಂಗ್ಟನ್ ಡಿ.ಸಿ. ಪ್ರದೇಶದಲ್ಲಿ ವಾಸ. ಹನಿಗವನ, ಕವನ, ಸಣ್ಣ ಕಥೆ ಬರೆಯುವ ಹವ್ಯಾಸ. ಪ್ರಕಟವಾಗಿರುವ ಸಣ್ಣ ಕಥಾ ಸಂಕಲನ 'ದೀಪವು ನಿನ್ನದೆ ಗಾಳಿಯು ನಿನ್ನದೆ'ಗೆ ಕನ್ನಡ ಸಾಹಿತ್ಯ ಪರಿಷತ್ತಿನ ರೇವಯ್ಯ ದತ್ತಿ ಪ್ರಶಸ್ತಿ ಬಂದಿದೆ.

Email: shashi.chandra@gmail.com

ಶಂಕರ ಹೆಗಡೆ



[ಅಮೇರಿಕೆಯ ಜಾನಪದ ಕಥೆಗಳಲ್ಲಿ ಭೂತ ಪ್ರೇತಗಳು ಅಮೇರಿಕೆಯ ಮೂಲ ನಿವಾಸಿಗಳ ನಂಬಿಕೆ ಮತ್ತು ಸಂಪ್ರದಾಯಗಳು]

ಹುಟ್ಟಿ ಬೆಳೆದದ್ದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಹತ್ತಿರದ ತ್ಯಾರಗಲ್ ಎಂಬ ಚಿಕ್ಕ ಹಳ್ಳಿ. ಉಚ್ಚ ಶಿಕ್ಷಣ ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಕೆನಡಾದ ಸಸ್ಕಾಚೆವಾನ

ವಿಶ್ವವಿದ್ಯಾನಿಲಯಗಳಲ್ಲಿ. ಕಳೆದ 43 ವರ್ಷಗಳಿಂದ ಶಿಕಾಗೋ ವಲಯದಲ್ಲಿ ವಾಸ್ತವ್ಯ. ಭಾರತ ಮತ್ತು ಅಮೆರಿಕೆಯ ವಿಶ್ವವಿದ್ಯಾನಿಲಯಗಳಲ್ಲಿ ಹಲವು ವರ್ಷ ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನದ ಪ್ರಾಧ್ಯಾಪಕರಾಗಿ, ಮತ್ತು ಕೆಲವು ಕಾಲ ಲೂಸೆಂಟ್ ಟೆಕ್ನಾಲೋಜಿ ಟೆಲಿಕಮ್ಯುನಿಕೇಶನ್ ಕಂಪನಿಯ ವಿವಿಧ ವಿಭಾಗಗಳಲ್ಲಿ ಇಂಜನಿಯರ್/ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದಾಗ ಇವರು ಕನ್ನಡದಲ್ಲಿ ಬರೆದ 'ಬೀಜಗಣಿತ ಪ್ರವೇಶ' ಎಂಬ ಪಠ್ಯಪುಸ್ತಕ ವಿಶ್ವವಿದ್ಯಾನಿಲಯದಿಂದ ಪ್ರಕಾಶಿತವಾಗಿದೆ. ಶಿಕಾಗೋದ ವಿದ್ಯಾರಣ್ಯ ಕನ್ನಡ ಕೂಟ ಮತ್ತು ಕನ್ನಡ ಸಾಹಿತ್ಯ ರಂಗದ ಚಟುವಟಿಕೆಗಳಲ್ಲಿ ಸಕ್ರಿಯ ಸದಸ್ಯರು. ವಿದ್ಯಾರಣ್ಯ ಕನ್ನಡ ಕೂಟದ 'ಸಂಗಮ' ಪತ್ರಿಕೆ ಮತ್ತು ಅಮೆರಿಕೆಯ ಹವ್ಯಕ ಸಂಘದ ಸಮ್ಮೇಳನಗಳ ಸ್ಮರಣ ಸಂಚಿಗೆಳಲ್ಲಿ ಇವರ ಹತ್ತಾರು ಲೇಖನಗಳು ಪ್ರಕಟವಾಗಿವೆ. ಸಂಘದ 2017ನೇ ಸಮ್ಮೇಳನದ ಸ್ಮರಣ ಸಂಚಿಕೆಯ ಸಂಪಾದಕರೂ ಆಗಿದ್ದರು. ಅಲ್ಲದೆ 'ಸಂಗಮ' ಪತ್ರಿಕೆಯ 2020–21ನೇ ವರ್ಷಗಳ ಸಂಪಾದಕರಾಗಿಯೂ ಹಾಗೂ ಸಾಹಿತ್ಯ ರಂಗದ 2019ರ ಪ್ರಕಟನೆ 'ಬದಲಾವಣೆಯ ಬೆನ್ನಟ್ಟಿ' ಪುಸ್ತಕದ ಸಹಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

Email: shankranna@gmail.com

ಶ್ರೀಕಾಂತ್ ಬಾಬು

[ಅಮೆರಿಕನ್ ಮೂಲನಿವಾಸಿಗಳ ಪರಂಪರೆಯ ಒಂದು ಅವಲೋಕನ – ಅನುವಾದ; ಮೂಲನಿವಾಸಿಗಳ ಮೇಲೆ ಯೂರೋಪಿನ ವಲಸೆಗಾರರ ಮತ್ತು ಯಾತ್ರಿಕರ ಪ್ರಭಾವ: ಸಾಹಿತ್ಯದಲ್ಲಿ ಪ್ರತಿಧ್ವನಿ – ಅನುವಾದ; ಐರೋಪ್ಯ ವಲಸೆಗಾರರ ಬರ್ಬರತೆಗೀಡಾದ ಅಮೆರಿಕದ ಮೂಲ ನಿವಾಸಿಗಳ ನೈಜ ಇತಿಹಾಸ – ಅನುವಾದ]



ಶ್ರೀಕಾಂತ ಬಾಬು ಅವರು ಸುಮಾರು 3 ದಶಕಗಳಿಂದ ಅಮೆರಿಕಾದಲ್ಲಿ ನೆಲೆಸಿದ್ದಾರೆ. ಅವರಿಗೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಬಹಳ ಆಸಕ್ತಿ. ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ. ಅವರ ಕೆಲವು ಲೇಖನಗಳು ಅಮೆರಿಕದ 'ಕನ್ನಡ ಸಾಹಿತ್ಯ ರಂಗ'ದ ಪುಸ್ತಕಗಳಲ್ಲಿ ಪ್ರಕಟವಾಗಿವೆ ಮತ್ತು ಕ.ಸಾ.ರಂ.ನ ಏಳನೆಯ ಸಮ್ಮೇಳನದ 'ಅನುವಾದ ಸಂವಾದ' ಪುಸ್ತಕದ ಮತ್ತು ನಾವಿಕ ಸಂಸ್ಥೆಯ ಪ್ರಕಟಣೆಗಳಾದ 'ಅಲೆವಾಣಿ' ಮತ್ತು 'ಸ್ನೇಹ–ಸೇತು'ಗಳ ಪ್ರಧಾನ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕಳೆದ 15 ವರ್ಷಗಳಿಂದ 'ಪ್ರಸ್ತಾಪ' ಎನ್ನುವ ಕನ್ನಡ ಸಾಹಿತ್ಯಾಸಕ್ತ ಗುಂಪಿನ ವಕ್ತಾರರಾಗಿ ನಿರ್ವಹಿಸುತ್ತಿದ್ದಾರೆ ಮತ್ತು 'ಕನ್ನಡ ಸಾಹಿತ್ಯ ರಂಗ'ದ ಕಾರ್ಯದರ್ಶಿಯಾಗಿಯೂ

ಕೆಲಸ ಮಾಡುತ್ತಿದ್ದಾರೆ. ಈಗ ಅವರು ತಮ್ಮ ಪತ್ನಿ ಭಾನುಶ್ರೀ ಅವರೊಂದಿಗೆ ನ್ಯೂ ಜೆರ್ಸಿಯ ಬ್ರಿಡ್ಜ್ ವಾಟರ್‌ನಲ್ಲಿ ನೆಲೆಸಿದ್ದಾರೆ ಮತ್ತು ಸಿಟಿ ಬ್ಯಾಂಕಿನಲ್ಲಿ ಕೆಲಸಮಾಡುತ್ತಿದ್ದಾರೆ.

Email: svenkatesha@hotmail.com



ಸಿಡ್ನಿ ಶ್ರೀನಿವಾಸ್

[ಮಿಯಾಮೈ ಸಪ್ತ ಸಹೋದರಿಯರು]

ಹುಟ್ಟು: 1946

ವಾಸ: ಸಿಡ್ನಿ, ಆಸ್ಟ್ರೇಲಿಯಾ

ವಿದ್ಯೆ: B.E., (ಬೆಂಗಳೂರು ವಿಶ್ವವಿದ್ಯಾಲಯ), ME, PhD (ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು)

ಕೆಲಸ: 1981 – 2012, ಸಿಡ್ನಿ ವಿಶ್ವವಿದ್ಯಾಲಯದ ಏರೋನಾಟಿಕ್ಸ್ ವಿಭಾಗದಲ್ಲಿ, ದ್ರವಚಲನೆ, ಬೈಯೋ ಮೆಡಿಕಲ್ ವಿಜ್ಞಾನಗಳಲ್ಲಿ ಬೋಧನೆ ಮತ್ತು ಸಂಶೋಧನೆ. ಅನೇಕ ಪುಸ್ತಕ, ಪಂಡಿತ ಪ್ರಬಂಧಗಳ ಪ್ರಕಟನೆ. ಜಪಾನ್, ಜರ್ಮನಿ, ಅಮೆರಿಕಾ, ಫಿನ್‌ಲೆಂಡಿಗಳಲ್ಲಿ ಅತಿಥಿ ಪ್ರೊಫೆಸರ್. ಹವ್ಯಾಸ: ವಿಜ್ಞಾನಿಗಳ ಜೀವನ ಚರಿತ್ರೆ ಬರೆಯುವುದು, 'ಶ್ರೀನಿವಾಸ ರಾಮಾನುಜನ್, ಐನ್‌ಸ್ಟೈನ್', ಮೊದಲಾಗಿ ಇಂಗ್ಲೀಷಿನಲ್ಲಿ 5, ಮತ್ತು ಕನ್ನಡದಲ್ಲಿ 10 ಕಿರುಪುಸ್ತಕಗಳ ಪ್ರಕಟಣೆ. ಸುಧಾ, ಮಯೂರ ಮುಂತಾದ ಪತ್ರಿಕೆಗಳಲ್ಲಿ ಅನೇಕ ವಿಜ್ಞಾನ ಲೇಖನಗಳ ಮತ್ತು ಸಣ್ಣ ಕತೆಗಳ ಪ್ರಕಟನೆ.

Email: karksri@gmail.com



ಸರಿತಾ ನವಲಿ

[ವೂಡೂ ಎಂಬ ಜಾನಪದ ಧಾರ್ಮಿಕ ಸಂಸ್ಕೃತಿ]


ಬರಹಗಾರ್ತಿ ಮತ್ತು ಕಥೆಗಾರ್ತಿಯಾಗಿರುವ ಸರಿತಾ ನವಲಿ, ಮೂಲತಃ ಕಲ್ಯಾಣ-ಕರ್ನಾಟಕದ ಗಂಗಾವತಿಯವರು. ಕಾಲೇಜು ಮತ್ತು ಸ್ನಾತಕೋತ್ತರ ಪದವಿಯನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ. 2004ರಲ್ಲಿ ಭಾರತದಿಂದ ಅಮೆರಿಕಾಗೆ ಆಗಮಿಸಿದ್ದು, 2008ರಿಂದ ತಮ್ಮ ಪತಿ ಮತ್ತು ಮಗನೊಂದಿಗೆ ನ್ಯೂ ಜೆರ್ಸಿಯಲ್ಲಿ ನೆಲೆಸಿದ್ದಾರೆ. ನ್ಯೂ ಜೆರ್ಸಿಯ 'ಬೃಂದಾವನ' ಕನ್ನಡ ಕೂಟದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, 2014ರಲ್ಲಿ 'ಸಾಹಿತ್ಯ ಬೃಂದಾವನ' ಪ್ರಾರಂಭಿಸಿದ ದ್ವೈಮಾಸಿಕ ಪತ್ರಿಕೆಯಾದ 'ಬೃಂದಾವನ ವಾಣಿ'ಯ ಮೊದಲ ಸಂಪಾದಕಿಯಾಗಿ ಕೆಲಸ ನಿರ್ವಹಿಸಿದ್ದಾರೆ. ಇವರ ಕಥೆ, ಕವನ, ಪ್ರಬಂಧಗಳು, ಅಂಕಣ ಬರಹಗಳು ಕರ್ನಾಟಕ ರಾಜ್ಯದ ಹಲವಾರು ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. 2019ರ

ಮೇ ತಿಂಗಳಲ್ಲಿ ಅಮೆರಿಕಾದ ಕನ್ನಡ ಸಾಹಿತ್ಯ ರಂಗದ ವತಿಯಿಂದ ನಡೆದ 'ವಸಂತ ಸಾಹಿತ್ಯೋತ್ಸವ'ದಲ್ಲಿ ಇವರ ಮೊದಲ ಕಥಾಸಂಕಲನ 'ಆವನಾವನು ಕಾಯ್ವ' ಪ್ರಕಟಗೊಂಡಿತು. ನೃತ್ಯರೂಪಕಗಳ ಪರಿಕಲ್ಪನೆ-ಸಂಭಾಷಣೆ, ನಿರೂಪಣೆ, ನಾಟಕ ಅನುವಾದ, ನಟನೆ ಮತ್ತು ನಿರ್ದೇಶನ ಇವರ ಇನ್ನೊಂದು ಹವ್ಯಾಸ. ನ್ಯೂಯಾರ್ಕ್‌ನಲ್ಲಿ ನಿರ್ಮಾಣಗೊಂಡಿರುವ ಗಾಂಧೀಜಿ ಅವರ ಬದುಕನ್ನು ಆಧರಿಸಿರುವ ಕಿರುಚಿತ್ರ 'ಮೆಟನೋಯಿಯಾ'ದಲ್ಲಿ ಕಸ್ತೂರ್ ಬಾ ಗಾಂಧಿ ಪಾತ್ರದಲ್ಲಿ ನಟಿಸಿದ್ದಾರೆ. ನ್ಯೂಜೆರ್ಸಿಯಲ್ಲಿ ಕನ್ನಡ ಸಾಹಿತ್ಯದ ಚಟುವಟಿಕೆಗಳಿಗೆಂದು 'ಸಾಹಿತ್ಯ ಸುಧೆ' ತಂಡವನ್ನು ರಚಿಸಿದ್ದು, ಸಾಹಿತ್ಯದ ಕುರಿತಾದ ವಿಚಾರ ವಿನಿಮಯ, ಭಾವಸಂಗಮ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಕನ್ನಡ ಸಾಹಿತ್ಯಾಸಕ್ತರಾಗಿ ನ್ಯೂಜೆರ್ಸಿಯ ಮನೆಯಲ್ಲಿ 2000 ಕನ್ನಡ ಪುಸ್ತಕಗಳ ಸಂಗ್ರಹವಿಟ್ಟುಕೊಂಡಿದ್ದಾರೆ. ಇಲ್ಲಿ ನೆಲೆಸಿರುವ ಕನ್ನಡಿಗರ ಓದಿಗೆ ಕನ್ನಡದ ಕೃತಿಗಳು ಲಭ್ಯವಾಗಬೇಕೆಂಬ ನಿಟ್ಟಿನಲ್ಲಿ ನ್ಯೂಜೆರ್ಸಿಯ ಕೆಲವು ಗ್ರಂಥಾಲಯಗಳಲ್ಲಿ ಕನ್ನಡ ಪುಸ್ತಕಗಳನ್ನು ಕೆಟಲಾಗಿಂಗ್ ಮಾಡಿಸಿದ್ದು, ಈ ಕೆಲಸವನ್ನು ಮುಂದುವರೆಸುತ್ತಿದ್ದಾರೆ. ಕರ್ನಾಟಕದ ವಿವಿಧ ಶಿಕ್ಷಣ ಸಂಸ್ಥೆಗಳು ನಡೆಸಿದ ಅಂತರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ 'ಸಾಹಿತ್ಯ ಸುಧೆ' ಸಾಹಿತ್ಯ ವೇದಿಕೆಯ ಪರವಾಗಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

Email: saritha13@gmail.com

ಸಿಮ್ ಮೂರ್ತಿ

[ಕೆನಡ ದೇಶದ ಮೂಲ ನಿವಾಸಿಗಳು]



ಸಿಮ್ ಮೂರ್ತಿ (ಶ್ರೀಕಂಠ ನರಸಿಂಹ ಮೂರ್ತಿ) 1930ರ ದಶಕದಲ್ಲಿ ಜಿಗಣಿಗ್ರಾಮದಲ್ಲಿ ಜನಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಗಣಿತಶಾಸ್ತ್ರದಲ್ಲಿ ಬಿಎಸ್.ಸಿ. ಆನರ್ಸ್ ಪಡೆದರು. ಟಾಟಾ ಇನ್‌ಸ್ಟಿಟ್ಯೂಟಿನಲ್ಲಿ ಎಲೆಕ್ಟ್ರಿಕಲ್ ಟೆಕ್ನಾಲಜಿ ಡಿಪ್ಲೋಮ ಪದವಿಯನ್ನು ಗಳಿಸಿ ಬೊಂಬಾಯಿನ ಎಲೆಕ್ಟ್ರಿಕ್ ಗ್ರಿಡ್ ಇಲಾಖೆಯ ಕೊಯ್ನಾ ಪ್ರಾಜೆಕ್ಟಿನಲ್ಲಿ ಕೆಲಸ ಶುರು ಮಾಡಿದರು. ಆನಂತರ ಜರ್ಮನಿ, ಇಂಗ್ಲೆಂಡು ದೇಶಗಳಲ್ಲಿ ಹಲವಾರು ವರ್ಷ ಕೆಲಸ ಮಾಡಿ ಭೋಪಾಲ್ ನಗರದಲ್ಲಿ ಇರುವ ಹೆವಿ ಎಲೆಕ್ಟ್ರಿಕಲ್ಸ್ ಎಂಬ ಕಾರ್ಖಾನೆಯಲ್ಲಿ ಡಿಸೈನ್ ಇಂಜಿನಿಯರಾಗಿ ಕೆಲಸ ಮಾಡಿದರು. ತರುವಾಯ ಬೊಂಬಾಯಿನ ವೆಸ್ಟಿಂಗ್‌ಹೌಸ್ ಕಂಪನಿಯಲ್ಲಿ ಕೆಲವು ವರ್ಷ ಕೆಲಸ ಮಾಡಿ 1967ರಲ್ಲಿ ಕೆನಡ ದೇಶಕ್ಕೆ ವಲಸೆ ಬಂದರು. ಕೆನಡಾದಲ್ಲೂ ವ್ಯಾಸಂಗ ಮುಗಿಸಿ, ಜಾಂಬಿಯ ದೇಶದಲ್ಲಿ ಹಲವಾರು ವರ್ಷಗಳು ಕಫ಼ುಯಿ ಪ್ರಾಜೆಕ್ಟಿನಲ್ಲಿ ಸೀನಿಯರ್ ಇಂಜಿನಿಯರ್ ಆಗಿ ಕೆಲಸ ಮಾಡಿ ಕೆನಡಾಕ್ಕೆ

ವಾಪಸು ಬಂದರು. ಆಲ್ಬರ್ಟ ಪ್ರಾಂತ್ಯದಲ್ಲಿ ಕೆನಡ ಸರ್ಕಾರದ ನಾರ್ಥ್‌ವೆಸ್ಟ್ ಮತ್ತು ಯೂಕಾನ್ ಪ್ರಾಂತ್ಯಗಳ ವಿದ್ಯುತ್ ಇಲಾಖೆಯಲ್ಲಿ ಹಲವು ವರ್ಷಗಳು ಸೂಪರ್ವೈಸಿಂಗ್ ಇಂಜಿನಿಯರಾಗಿ ಕೆಲಸ ಮಾಡಿದರು. ತರುವಾಯ ಆಲ್ಬರ್ಟ್ ವಿಶ್ವವಿದ್ಯಾಲಯದಲ್ಲಿ ಪವರ್ ಸಿಸ್ಟಮ್ ಪ್ರೊಟೆಕ್ಷನ್ ಹಾಗೂ ಬ್ರಿಟಿಶ್ ಕೊಲಂಬಿಯಾದ ಇಂಜಿಯರಿಂಗ್ ಕಾಲೇಜಿನಲ್ಲಿ ಡಿಜಿಟಲ್ ಟೆಕ್ನಾಲಜಿ ಬಗ್ಗೆಯೂ ಅಧ್ಯಾಪಕರಾಗಿ ಕೆಲಸ ಮಾಡಿದರು. ಅವರ ಭಾರ್ಯೆ ದಿವಂಗತ ಡಾ. ನಳಿನಿ ಮೂರ್ತಿಯವರು ಸುಧಾ, ಮಯೂರ, ತರಂಗ ಪತ್ರಿಕೆಗಳಲ್ಲಿ ವೈಜ್ಞಾನಿಕ ಮತ್ತು ಸಾಮಾಜಿಕ ಕಥೆಗಳನ್ನೂ, ಪ್ರತಿಜ್ಞೆ, ಊರ್ಮಿಳಾ, ಎಂಬ ಪೌರಾಣಿಕ ಕಥೆಗಳನ್ನೂ, ಗಣಕದ ಕಥೆ, ಮತ್ತು ಗಣಕ ಎಂದರೇನು ಎಂದು ಕಂಪ್ಯೂಟರ್ ಬಗ್ಗೆ ಕನ್ನಡದಲ್ಲಿ 2 ಪುಸ್ತಕಗಳನ್ನೂ ಬರೆದು ಕನ್ನಡ ಓದುಗರಿಗೆ ಸೇವೆ ಸಲ್ಲಿಸಿದ್ದಾರೆ. 1993ರಲ್ಲಿ ನಿವೃತ್ತಿ ಹೊಂದಿದ ಸಿಮ್ ಮೂರ್ತಿಯವರು ಈಗ ಟೊರೊಂಟೊ ನಗರದಲ್ಲಿ ವಾಸವಾಗಿದ್ದಾರೆ. ಟೊರೊಂಟೊ ಕನ್ನಡ ಸಂಘದ ಹಿಂದಿನ ಅಧ್ಯಕ್ಷರಾಗಿಯೂ, ಇಂದಿನ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. 2020 ಜನವರಿ ತಿಂಗಳಲ್ಲಿ ತಮ್ಮ 90 ವರ್ಷದ ಜನ್ಮದಿನವನ್ನು ಕೋವಿಡ್ ಕಾನೂನು ಪ್ರಕಾರ ಕೆಲವೇ ಸ್ನೇಹಿತರೊಡನೆ ಆಚರಿಸಿದರು.

Email: simmurthy@hotmail.com

ಹೇಮಾ ಶ್ರೀಕಂಠ

[ಚೌಕ ನೃತ್ಯ]



20 ವರ್ಷ ಮಿಸ್ಸೌರಿ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ 'Legal Services Developer' ಆಗಿ ಸಮಾಜ ಸೇವೆ ಮಾಡಿ ಈಗ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಇವರ ಹಲವು ಕವನಗಳು ಈಗಾಗಲೇ ಪ್ರಕಟಿತವಾಗಿವೆ.

Email: mallige321@yahoo.com

❑



ಅನುಬಂಧ 3

ಕನ್ನಡ ಸಾಹಿತ್ಯ ರಂಗದ ಪ್ರಕಟಣೆಗಳು

1. 2019: ಬದಲಾವಣೆಯ ಬೆನ್ನಟ್ಟಿ

ಸಂಪಾದಕರು: ಪ್ರಕಾಶ್ ನಾಯಕ್, ಶಂಕರ್ ಹೆಗಡೆ

ಬದಲಾವಣೆ ಅಸ್ತಿತ್ವದ ಕುರುಹು. ಅಣುವಿನಿಂದ ಬ್ರಹ್ಮಾಂಡದವರೆಗೆ ಅಮೀಬಾದಿಂದ ಮನುಷ್ಯನವರೆಗೆ, ಜೀವ – ನಿರ್ಜೀವ ಜಗತ್ತಿನ ಎಲ್ಲಾ ಸದಸ್ಯರಿಗೂ ಬದಲಾವಣೆ ಅನಿವಾರ್ಯ. ತನ್ನ ಇಷ್ಟಾನುಕೂಲಕ್ಕೆ ಈ ಬದಲಾವಣೆಯನ್ನು ಬಗ್ಗಿಸಿಕೊಳ್ಳುವ ಅಥವಾ ಈ ಬದಲಾವಣೆಗೆ ಒಗ್ಗಿಕೊಳ್ಳುವ ಪ್ರಯತ್ನ ಜೀವ ಜಗತ್ತಿನ ಮುಂಚೂಣಿಯಲ್ಲಿ ನಿಂತ ಮಾನವನದ್ದು. ಈ ಪ್ರಯತ್ನದಲ್ಲಿ ನಾಗರಿಕತೆಗಳು ಹುಟ್ಟಿವೆ, ಬೆಳೆದಿವೆ, ಅಳಿದಿವೆ. ದಿನವೂ ಹೊಸ ಸಂಪರ್ಕ ಸಾಧನಗಳ ಆವಿಷ್ಕಾರವಾಗಿ ಜಗತ್ತು ಕಿರಿದಾಗುತ್ತಿದೆ ಎನ್ನುವ ಸಂಭ್ರಮದ ನಡುವೆಯೇ ಮಾನವೀಯ ಸಂಬಂಧಗಳು ಕುಸಿಯುತ್ತಿರುವ ದುರಂತವಿದೆ. ಇಂತಹ ಬಹುರೂಪಿ ಬದಲಾವಣೆಯ ಬೆನ್ನುಹತ್ತಿ, ಅದರ ವಿವಿಧ ಮುಖಗಳನ್ನು ಪುಸ್ತಕ ರೂಪದಲ್ಲಿ ದಾಖಲಿಸ ಹೊರಟ ಕನ್ನಡ ಸಾಹಿತ್ಯ ರಂಗದ ಪ್ರಯತ್ನದ ಫಲ ಈ ಪುಸ್ತಕ.

2. 2017: ಅವರವರ ಭಕುತಿಗೆ

ಪ್ರಧಾನ ಸಂಪಾದಕಿ: ನಳಿನಿ ಮೈಯ

ಬದುಕಿನ ಕನ್ನಡಿಯಾದ ಸಾಹಿತ್ಯದಲ್ಲಿ ಭಕ್ತಿ ಒಂದು ಸುಂದರ ಅಭಿವ್ಯಕ್ತಿಯನ್ನು ಪಡೆದಿದೆ. ಪಂಪ, ರನ್ನರ ಕಾಲದಿಂದ ಹಿಡಿದು ಇತ್ತೀಚಿನ ಕವಿಗಳಾದ ಕುವೆಂಪು, ಬೇಂದ್ರೆ, ಪುತಿನ, ಶಿವರುದ್ರಪ್ಪ ಮುಂತಾದವರವರೆಗೂ ಕನ್ನಡ ಸಾಹಿತ್ಯದಲ್ಲಿ ಭಕ್ತಿಯ ಪ್ರವಾಹ ಪ್ರವಹಿಸುತ್ತಿದೆ. ಈ ಪ್ರವಾಹದ ತುಂತುರು ಹನಿಗಳನ್ನು ಹಿಡಿದು ಅದರಲ್ಲಿ ಸೂಸುವ ಕಾಮನಬಿಲ್ಲನ್ನು ಕಂಡು ಆನಂದಿಸುವ ಪ್ರಯತ್ನ ಮಾಡಿದ್ದೇವೆ ನಾವು ಈ ಗ್ರಂಥದಲ್ಲಿ. ಪರಿಶುದ್ಧ ಸಾಹಿತ್ಯದಲ್ಲಿ 'ದೇವರು' ಎಂದರೆ ಎಲ್ಲಕ್ಕೂ ಮೀರಿದ ಉನ್ನತ ಚೈತನ್ಯ. ಜಗತ್ತನ್ನು ಆವರಿಸಿರುವ ಕ್ಷುಲ್ಲಕಗಳನ್ನು ಅಧ್ಯಾತ್ಮದ ಮೂಲಕ ಮೀರಲು, ಏರಲು

ಸಾಧ್ಯವಾಗಿಸುವ ಸರ್ವನಿಯಾಮಕ ಚೈತನ್ಯ. ಈ ಪರಿಕಲ್ಪನೆಯ ಗ್ರಹಿಕೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆಯಾಗಿ ಕಂಡರೂ ಮೂಲದಲ್ಲಿ ಜಗತ್ತಿನ ಎಲ್ಲ ಕಾವ್ಯಗಳು ಈ ಒಂದೇ ಭಾವವನ್ನು ಸ್ಫುರಿಸುತ್ತದೆ. ಈ ಜಿಜ್ಞಾಸೆಯನ್ನು ಈ ಪುಸ್ತಕದ ಮೂಲಕ ಮತ್ತೆ ಮುನ್ನೆಲೆಗೆ ತಂದು ಜನಮಾನಸದಲ್ಲಿ ಭಕ್ತಿಯ ಕುರಿತು ಯೋಚನೆಗೆ ಹಚ್ಚುವದೇ ನಮ್ಮ ಉದ್ದೇಶವಾಗಿದೆ.

3. 2016: ರಂಗ ತರಂಗ

ಸಂಪಾದಕರು: ಮೈ. ಶ್ರೀ. ನಟರಾಜ, ನಾಗ ಐತಾಳ ಮತ್ತು ಜ್ಯೋತಿ ಮಹಾದೇವ್

ಕರ್ನಾಟಕದ ಹೆಮ್ಮೆಯ ಕಬ್ಬನ್ ಉದ್ಯಾನವನದಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯದ (ದಿವಾನ್ ಬಹದ್ದೂರ್ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಬಿಲ್ಡಿಂಗ್) ತನ್ನ ನೂರನೇ ವರ್ಷದ ಹಬ್ಬವನ್ನು ಸಂಭ್ರಮದಿಂದ ಆಚರಿಸಿದ ಸುಸಂದರ್ಭದಲ್ಲಿ ಅಮೆರಿಕದ ಕನ್ನಡಿಗರ ಪರವಾಗಿ ಕನ್ನಡ ಸಾಹಿತ್ಯ ರಂಗ ಅರ್ಪಿಸಿದ ಗೌರವದ ನುಡಿಕಾಣಿಕೆಯೇ ಈ ಗ್ರಂಥ ಕುಸುಮ. ಕಳೆದ ಏಳು ವಸಂತ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಮುಖ್ಯ ಅತಿಥಿಗಳು ಮಾಡಿದ ಭಾಷಣಗಳ ಮಾಲಿಕೆಯೇ ಈ ಗ್ರಂಥದ ವಸ್ತು.

4. 2015: ಅನುವಾದ ಸಂವಾದ ಮತ್ತು A Little of Taste of Kannada in English

ಪ್ರಧಾನ ಸಂಪಾದಕ: ಶ್ರೀಕಾಂತ್ ಬಾಬು

ಕನ್ನಡ ಸಾಹಿತ್ಯ ರಂಗದ ಏಳನೆಯ ಸಮ್ಮೇಳನದ ಮುಖ್ಯ ವಸ್ತು 'ಅನುವಾದ'. ಈ ಸಮ್ಮೇಳನದಲ್ಲಿ ಎರಡು ಪುಸ್ತಕಗಳನ್ನು ಪ್ರಕಟಿಸಲಾಯಿತು. ಮೊದಲನೆಯದು 'ಅನುವಾದ ಸಂವಾದ'– ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿತ ಕೃತಿಗಳು. ಎರಡನೆಯದು 'A Little Taste of Kannada in English' ಕನ್ನಡದಿಂದ ಇಂಗ್ಲೀಷಿಗೆ ಅನುವಾದಿತ ಕೃತಿಗಳು. ಅಮೇರಿಕಾದ ಕನ್ನಡಿಗರಿಗೆ ಇತರ ಸಂಸ್ಕೃತಿಗಳನ್ನು ಹತ್ತಿರದಿಂದ ನೋಡುವ ಅವಕಾಶವಿದೆ. ಈ ಸಂಸ್ಕೃತಿಗಳ ಸಂಪರ್ಕ ಮತ್ತು ಅವುಗಳ ಸಾಹಿತ್ಯವನ್ನು ಅಭ್ಯಾಸ ಮಾಡುವ ವಿಶೇಷ ಅವಕಾಶವನ್ನು ಉಪಯೋಗಿಸಿಕೊಂಡು ಇತರ ಭಾಷೆಗಳ ಉತ್ತಮ ಕೃತಿಗಳನ್ನು ಕನ್ನಡಕ್ಕೂ ಮತ್ತು ಕನ್ನಡದ ಆಯ್ದ ಕೃತಿಗಳನ್ನು ಇಂಗ್ಲೀಷಿಗೂ ಅನುವಾದಿಸಲು ವಿಪುಲವಾದ ಸೌಲಭ್ಯಗಳಿವೆ. 'ಮಾತೃಭಾಷೆಗೆ ಮತ್ತು ಕನ್ನಡಿಗರಿಗೆ ನಿರಾಯಾಸವಾಗಿ ಕೊಡಬಹುದಾದ ಒಳ್ಳೆಯ ಕೊಡುಗೆ' ಇದು ಎಂದು ನಂಬಿ ಸಾಹಿತ್ಯ ರಂಗದ ಬರಹಗಾರರು ಪ್ರಕಟಿಸಿದ ಗ್ರಂಥಗಳಿವು. ಮೊದಲ ಪುಸ್ತಕದಲ್ಲಿ ಒಟ್ಟು 30 ಅನುವಾದಿತ ಲೇಖನಗಳನ್ನು ಕಥೆ, ಕಾವ್ಯ, ಪ್ರಬಂಧ ಮತ್ತು ನಾಟಕದ ವಿಭಾಗಗಳಲ್ಲಿ ಜೋಡಿಸಲಾಗಿದೆ. ಈ ಪ್ರಯೋಗದಲ್ಲಿ ವಿಶ್ವದ ಅನೇಕ ಶ್ರೇಷ್ಠ ಕೃತಿಗಳ ಅನುವಾದಗಳು ವಿವಿಧ ಭಾಷೆಗಳ ಮೂಲದಿಂದ ಹರಿದು ಬಂದಿವೆ. ವೈವಿಧ್ಯಮಯವಾದ ಚಿಂತನೆಗಳು, ವಿಚಾರಗಳು ಅನುವಾದದ ಮೂಲಕ ಕನ್ನಡಿಗರಿಗೆ ಲಭ್ಯವಾಗಿವೆ. ಸಮ್ಮೇಳನದ ಮುಖ್ಯ ಅತಿಥಿಗಳಾಗಿದ್ದ ಪ್ರಧಾನ್ ಗುರುದತ್ತ

ಅವರ ಅನುವಾದ ಸಾಹಿತ್ಯವನ್ನು ಕುರಿತಾದ ವಿದ್ವತ್ಪೂರ್ಣ ಭಾಷಣವೂ ಈ ಪುಸ್ತಕದಲ್ಲಿದೆ. ಎರಡನೆಯ ಪುಸ್ತಕ ಕನ್ನಡದ ಕತೆ, ಕವಿತೆ ಪ್ರಬಂಧ ಮುಂತಾದುವನ್ನು ಕನ್ನಡೇತರರಿಗೆ ಆಂಗ್ಲಭಾಷೆಯ ಮೂಲಕ ತಲುಪಿಸುವ ಒಂದು ಅಪೂರ್ವ ಯತ್ನ. ಒಟ್ಟಿನಲ್ಲಿ ಈ ಎರಡು ಹೊತ್ತಗೆಗಳು ಕನ್ನಡ ಸಾಹಿತ್ಯ ರಂಗ ಕನ್ನಡಾಂಬೆಗೆ ಅರ್ಪಿಸಿದ ಎರಡು ಉತ್ತಮ ಪ್ರಯೋಗಗಳು.

5. 2013: ಬೇರು ಸೂರು

ಪ್ರಧಾನ ಸಂಪಾದಕ: ಗುರುಪ್ರಸಾದ್ ಕಾಗಿನೆಲೆ

ವಲಸಿಗರಾಗಿ ಅಥವಾ ವಿದ್ಯಾರ್ಥಿಗಳಾಗಿ ಬಂದು ಅಮೆರಿಕವನ್ನು ತಮ್ಮ ದೇಶವನ್ನಾಗಿಸಿಕೊಂಡು ಅಮೆರಿಕದ ಬದುಕಿನ ಪಾಲಾಗುತ್ತಾ ಗಳಿಸಿದ ಅನುಭವಗಳು ಪಟ್ಟ ಸುಖಗಳು ನೊಂದ ನೋವುಗಳು ಇವೆಲ್ಲವನ್ನೂ ಒಳಗೊಂಡ ವೈವಿಧ್ಯಮಯ ಬರಹಗಳ ಸಂಕಲನವೇ 'ಬೇರು ಸೂರು.' ಹಿರಿಯರು, ಕಿರಿಯರು, ಉದ್ಯೋಗಪತಿಗಳು, ವೈದ್ಯರು, ಇಂಜಿನಿಯರುಗಳು, ಗೃಹಿಣಿಯರು, ಶಿಕ್ಷಣತಜ್ಞರು–ಅಮೆರಿಕಾವನ್ನೇ ಕರ್ಮಭೂಮಿ ಮಾಡಿಕೊಂಡ ಅನೇಕರು ಅಮೆರಿಕಾ ಅವರಿಗೆ ಹೇಗೆ ಕಾಣಿಸಿದೆ ಎಂದು ಬರೆದಿದ್ದಾರೆ. ವಲಸೆ ಮೂಡಿಸುವ ಬೆರಗು ದೈನಿಕವಾಗುವ ರೂಪಾಂತರ ಕ್ರಿಯೆ ಇಲ್ಲಿನ ಪ್ರತಿ ಲೇಖನಗಳಲ್ಲಿಯೂ ಪಕ್ಕಾಗಿ ಹಾಸುಹೊಕ್ಕಿದೆ. ಆತ್ಮಚರಿತ್ರಕ ಕಥಾನಕಗಳಿಂದ ಹಿಡಿದು ಪ್ರತಿ ವಲಸಿಗನ ಅಸ್ಮಿತೆಯನ್ನು ಪ್ರಶ್ನಿಸುವ ಹಾಗೆಯೇ ಈ ವಲಸೆ ಎಂಬ ಪ್ರಕ್ರಿಯೆಯನ್ನೇ ವಿಶ್ಲೇಷಿಸುವ ಅನೇಕ ಅಧ್ಯಯನಯುಕ್ತ ಮೌಲಿಕ ಲೇಖನಗಳಿವೆ. ಈ ಪುಸ್ತಕದ ವೈಶಿಷ್ಯವೆಂದರೆ ಬಹಳಷ್ಟು ಲೇಖನಗಳು ವಲಸೆಗಾರರ ಹಳವಂಡ, ನಾಸ್ಟಾಲ್ಜಿಯಾವನ್ನು ಮೀರಿ ವಲಸೆಕ್ರಿಯೆಯ ಮೂಲವನ್ನು ಹುಡುಕುತ್ತಾ ಹೋಗುತ್ತವೆ. ವಲಸೆಯ ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳನ್ನು ಈ ಪುಸ್ತಕ ಚರ್ಚಿಸುತ್ತದೆ.

6. 2011: ಮಥಿಸಿದಷ್ಟೂ ಮಾತು (2011)

ಸಂಪಾದಕರು: ತ್ರಿವೇಣಿ ಶ್ರೀನಿವಾಸ ರಾವ್ ಮತ್ತು ಎಂ. ಆರ್. ದತ್ತಾತ್ರಿ

ಹಲವಾರು ಉತ್ತಮ ಲಲಿತ ಪ್ರಬಂಧಗಳ ಸಂಪುಟ ಈ "ಮಥಿಸಿದಷ್ಟೂ ಮಾತು" ಸಂಕಲನ. ಈ ಸಂಪುಟದ ಬಗ್ಗೆ ಪ್ರಸಿದ್ಧ ಬರಹಗಾರರಾದ ರಹಮತ್ ತರೀಕೆರೆ ಅವರು ಹೀಗೆ ಬರೆಯುತ್ತಾರೆ: "ಅಮೆರಿಕದ ಬಗ್ಗೆ ಅದರ ಹೊರಗಿರುವ ನಮ್ಮಂತಹವರಿಗೆ ಎರಡು ಅತಿರೇಕದ ಗ್ರಹಿಕೆಗಳಿದ್ದಂತಿವೆ. ಒಂದು ರೆಡ್‌ಇಂಡಿಯನ್ನರನ್ನು ಕೊಂದು ದೇಶವನ್ನು ಆಕ್ರಮಿಸಿಕೊಂಡು, ಗುಲಾಮಗಿರಿಯನ್ನು ಎಗ್ಗಿಲ್ಲದೆ ಮಾಡುತ್ತ, ತಮ್ಮ ಹಿತಾಸಕ್ತಿಗಳಿಗೆ ಯುದ್ಧಖೋರ ನೀತಿಯನ್ನು ಮಾಡುತ್ತಿರುವ ದೊಡ್ಡಣ್ಣ ಎಂಬುದು: ಇನ್ನೊಂದು ಅಮೆರಿಕವು ತಂತ್ರಜ್ಞಾನ ವಿಜ್ಞಾನದಲ್ಲಿ ಶಿಕ್ಷಣವುಳ್ಳ ಮಂದಿಗೆ ತೆರೆದಿರುವ ಬುವಿಯ ಮೇಲಣ ಸ್ವರ್ಗ ಎಂಬುದು. ಈ ಎರಡನೆಯ ಚಿತ್ರಕ್ಕೆ ಕಾರಣ, ಪ್ರವಾಸಿಗರಾಗಿ ಅಮೆರಿಕಕ್ಕೆ ಹೋಗಿಬಂದವರ

ಪ್ರವಾಸ ಕಥನಗಳೂ ಇರಬೇಕು. ಆದರೆ ಈ ಎರಡಕ್ಕೂ ಹೊರತಾಗಿ, ಅಲ್ಲಿಯೇ ಬದುಕುತ್ತಿರುವ ಜನರ ಗ್ರಹಿಕೆಗಳು ಬೇರೆ ಬೇರೆ ತರಹ ಇವೆ ಎಂಬುದನ್ನು ಈ ಕೃತಿ ಸಾದರಪಡಿಸುತ್ತದೆ." "ಅಮೆರಿಕೆಯಲ್ಲಿ ಬಿಡಾರ ಹೂಡಿರುವ ಕನ್ನಡ ಪರಿಸರದ ಸ್ಥಾಯೀ ಮತ್ತು ಸಂಚಾರೀ ಭಾವಗಳ, ವೈವಿಧ್ಯಪೂರ್ಣ ಆಧುನಿಕ ಅಭಿವ್ಯಕ್ತಿಯ ವಿಶಿಷ್ಟ ಸಂಕಲನ ಇದು. ಕಾವ್ಯದ ಧ್ವನಿಶಕ್ತಿಯ ಜೊತೆಗೆ ಕಥನದ ಕುತೂಹಲವನ್ನೂ ಹೊಂದಿರುವ ಈ ಲಲಿತ ನಿಬಂಧಗಳು, ತಮ್ಮ ಅನುಭವಜನ್ಯ ವಿವರಗಳಲ್ಲಿ ಮೈದಾಳುತ್ತಲೇ, ಅದರಾಚೆಗೂ ಚಿಂತನಶೀಲವಾಗಿ ರೆಕ್ಕೆ ಬಿಚ್ಚುವ ರೀತಿ ಭಾವೋದ್ದೀಪಕವಾಗಿದೆ. ಹೊಸ ಆವರಣ, ಜೀವನ ಶೈಲಿಯ ವಿವರ, ಮಾಹಿತಿಗಳಷ್ಟೆ ಪ್ರಬಂಧವಾಗಲಾರವು. ವಿವರಗಳು ಅರಿವಿನೆಡೆಯ ಕಿಟಕಿಗಳೂ, ಕಾಲ್ದಾರಿಗಳೂ ಆದಾಗ ಮಾತ್ರ ಅದು ಸಾರ್ಥಕ ಸಲ್ಲಾಪ" ಎಂಬುದಾಗಿ ಪ್ರಸಿದ್ಧ ಸಾಹಿತಿ ಜಯಂತ ಕಾಯ್ಕಿಣಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

7. 2009: ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು...

ಸಂಪಾದಕರು: ಮೈ. ಶ್ರೀ. ನಟರಾಜ

ಇದು ಕನ್ನಡ ಸಾಹಿತ್ಯ ರಂಗದ ಪುಸ್ತಕ ಮಾಲೆಯ ನಾಲ್ಕನೆಯ ಹೂವು. 2009ರಲ್ಲಿ ಅಮೆರಿಕದ ರಾಜಧಾನಿ ಪ್ರದೇಶದ ಕಾವೇರಿ ಕನ್ನಡ ಸಂಘದ ಆಶ್ರಯದಲ್ಲಿ ನಡೆದ ನಾಲಕ್ಕನೆಯ ಅಧಿವೇಶನದ ಸಂದರ್ಭದಲ್ಲಿ ಪ್ರಕಟವಾದ ಪುಸ್ತಕ ಇದು. "ಇಪ್ಪತ್ತಕ್ಕೂ ಮಿಕ್ಕಿದ ಹಿರಿಕಿರಿಯ, ಪಳಗಿದ ಹಾಗೂ ಉದಯೋನ್ಮುಖ ಬರಹಗಾರರು, ಹವ್ಯಾಸಿಗರು ಹಾಗೂ ಹರಿತ ಓದುಗರ ಮೂಲಕ ಕನ್ನಡದ ಕೆಲ ಮುಖ್ಯ ಕಾದಂಬರಿಗಳ ಕುರಿತು ಇಲ್ಲಿ ಅವಲೋಕನವಿದೆ. ಒಮ್ಮೆಗೆ ಒಟ್ಟಿಗೆ ತೆರೆದುಕೊಂಡ ಈ ರೀತಿಯ ಕಾದಂಬರಿಯ ಅವಲೋಕನವೂ, ಚರ್ಚೆಯೂ ಕನ್ನಡ ಸಾಹಿತ್ಯದ ಮಟ್ಟಿಗೆ ಪ್ರಾಯಶಃ ಪ್ರಪ್ರಥಮ ಎನ್ನಿಸುತ್ತಿದೆ." ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ ಕನ್ನಡದ ಖ್ಯಾತ ಕತೆಗಾರ್ತಿ ವೈದೇಹಿ ಅವರು ಈ ಸ್ತುತ್ಯ ಪ್ರಯತ್ನವನ್ನು ಕುರಿತು "ಒಂದು ರೀತಿಯಲ್ಲಿ ಇದು ಗೋಳದ ಇನ್ನೊಂದು ಬದಿಯಲ್ಲಿ ನಡೆಯುತ್ತಿರುವ ಕನ್ನಡದ ಉಸಿರಾಟ, ಅಥವಾ ಪ್ರಾಣಾಯಾಮವೆಂದರೂ ಸರಿಯೆ" ಎಂದು ಉದ್ಗಾರ ತೆಗೆದಿದ್ದಾರೆ. ಅಮೆರಿಕದಲ್ಲಿ ನೆಲೆಸಿರುವ ಬರಹಗಾರರು ಅಭಿವ್ಯಕ್ತಿಗೊಳಿಸಿದ ಕನ್ನಡದ ಇಪ್ಪತ್ನಾಲ್ಕು ಕಾದಂಬರಿಗಳ ಅವಲೋಕನವನ್ನು 'ಸಹೃದಯ ವಿಮರ್ಶೆ' ಎಂಬುದಕ್ಕೆ ಒಂದು ಉತ್ತಮ ಮಾದರಿ ಎಂದಿದ್ದಾರೆ ವೈದೇಹಿ ಅವರು. ಕನ್ನಡದ ಉದ್ದಾಮ ಪಂಡಿತರಾದ ಜಿ. ಎಸ್. ಆಮೂರರ ವಿದ್ವತ್ಪೂರ್ಣ ಮುನ್ನುಡಿಯನ್ನೊಳಗೊಂಡ ಸುಮಾರು ಐನೂರು ಪುಟಗಳ ಈ ಗ್ರಂಥಕ್ಕೆ ಕನ್ನಡದ ಹಲವಾರು ವಿದ್ವಾಂಸರ ಮೆಚ್ಚುಗೆ ದೊರೆತಿರುವುದು ಅಚ್ಚರಿಯ ಮಾತಲ್ಲ. "ತಮಗೆ ಕನ್ನಡದ ಮೂಲಕ ಒಡಲು ಸೇರಿದ ಸಾಹಿತ್ಯಾನುಭವವನ್ನು ತಮಗೂ ಇತರರಿಗೂ ಅನುಭವಿಸುವಂತೆ ಮಾಡುವ ಸ್ತುತ್ಯ ಯತ್ನವಿದು." ಎಂಬ ವೈದೇಹಿಯವರ ಮಾತುಗಳು ಕನ್ನಡ ಸಾಹಿತ್ಯ ರಂಗದ ಕಿರೀಟದ ಮಣಿಗಳಂತಿವೆ.

8. 2007: ನಗೆಗನ್ನಡಂ ಗೆಲ್ಗೆ!

ಸಂಪಾದಕರು: ಎಚ್. ಕೆ. ನಂಜುಂಡಸ್ವಾಮಿ ಮತ್ತು ಎಚ್. ವೈ. ರಾಜಗೋಪಾಲ್

ಶತಾಯುಷಿ ಜಿ. ವೆಂಕಟಸುಬ್ಬಯ್ಯ ಅವರ ಅಭಿಪ್ರಾಯದಲ್ಲಿ– 'ಈ ಗ್ರಂಥ ಒಂದು ಸಾಹಿತ್ಯಕ ಚರಿತ್ರೆ ಮತ್ತು ಸಾಹಿತ್ಯದ ಹಾಸ್ಯ ಸಂಕಲನ ಎರಡೂ ಒಂದೆಡೆ ಸೇರಿ ರಚಿಸುವ ಒಂದು ರಮ್ಯ ಲೋಕ! ಇದರಲ್ಲಿ ಲೇಖಕರ ಸಾಹಿತ್ಯದ ರಸಪ್ರಜ್ಞೆ ನಿರಂತರವಾಗಿ ಪ್ರಕಟಗೊಂಡಿದೆ....ಈ ಬೃಹತ್ ಸಂಕಲನ ಕನ್ನಡ ಸಾಹಿತ್ಯದಲ್ಲಿ ಒಂದು ಪ್ರಮುಖ ರೆಕಾರ್ಡ್ ಆಗಿರುತ್ತದೆ ಸದಾಕಾಲ.' ಸಾಹಿತಿ ಮತ್ತು ಪ್ರಸಿದ್ಧ ವಿಮರ್ಶಕ ಪ್ರೊ. ಎಚ್. ಎಸ್. ರಾಘವೇಂದ್ರರಾವ್ ಅವರು ಈ ಗ್ರಂಥದ ಬಗ್ಗೆ ನುಡಿಯುತ್ತಾ, "ಕತೆ, ಕವಿತೆ ಮತ್ತು ಕಾದಂಬರಿಗಳಿಗೆ ಅತಿಯಾದ ಮಹತ್ವಕೊಟ್ಟು, ಉಳಿದ ಪ್ರಕಾರಗಳನ್ನು ನಿರ್ಲಕ್ಷಿಸಿರುವ ಕರ್ನಾಟಕದ ನಮಗೆ ಬುದ್ಧಿಕಲಿಸುವಂತೆ, ಈ ಕೃತಿಯು ಪ್ರಕಟವಾಗಿದೆ....ಕನ್ನಡದ ಹಾಸ್ಯ ಸಾಹಿತ್ಯವನ್ನು ಬೆಳೆಸಿದ ಮಹನೀಯರ ಸಾಧನೆಗಳನ್ನು ಬಹುಮಟ್ಟಿಗೆ ಮೆಚ್ಚಿಗೆಯಿಂದ ಅಪರೂಪಕ್ಕೆ ವಿಮರ್ಶಾತ್ಮಕವಾಗಿ ನೋಡಿರುವ ಲೇಖನಗಳು ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿವೆ. ಕೈಲಾಸಂ, ರಾಜರತ್ನಂ, ರಾಶಿ, ಬಿ. ಜಿ. ಎಲ್. ಸ್ವಾಮಿ, ಅ.ರಾ.ಸೇ ಅವರಂತಹ ಹಿರಿಯರಿಂದ ಮೊದಲಾಗಿ ಡುಂಡಿರಾಜ್ ಅವರವರೆಗೆ ಈ ಲೇಖನಗಳ ಹರಹಿದೆ. ಕರಾವಳಿ, ಉತ್ತರ ಕರ್ನಾಟಕ, ಜಾನಪದ ಮುಂತಾದವಕ್ಕೆ ವಿಶಿಷ್ಟವಾದ ಹಾಸ್ಯ–ವಿನೋದಗಳ ಸಮೀಕ್ಷೆಯೂ ಇಲ್ಲಿ ನಡೆದಿದೆ. ಇದು ಉಪಯುಕ್ತವಾದ, ಸಂತೋಷಕೊಡುವ ಸಂಪುಟ. ನಗೆಗನ್ನಡವು ಇಲ್ಲಿ ಗೆದ್ದಿದೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. "ಈ ಕೃತಿಯಲ್ಲಿ ನಗೆಗನ್ನಡ ನಲಿದಿದೆ, ವಿಜೃಂಭಿಸಿದೆ. ಕನ್ನಡದ ಹಾಸ್ಯಾಸಕ್ತರೆಲ್ಲರೂ ಅಭಿಮಾನದಿಂದ ತಮ್ಮ ಮೆಚ್ಚಿನ ಹಿರಿ ಕಿರಿಯ ಹಾಸ್ಯಸಾಹಿತಿಗಳನ್ನು ಓದಿ ಅವರ ಕುರಿತು ಪ್ರಬುದ್ಧ ಪರಿಚಯವನ್ನು ಮಾಡಿಕೊಂಡು ಕೃತಾರ್ಥಭಾವ ತಾಳುವಂತೆ ಪುಸ್ತಕ ಹೊರಬಂದಿದೆ... ಹೊರನಾಡ ಬಂಧುಗಳ ಕನ್ನಡ ಪ್ರೇಮ ಅನುಕರಣೀಯವಾದುದು" ಎಂದು ಹೆಸರಾಂತ ಹಾಸ್ಯ ಲೇಖಕಿ ಭುವನೇಶ್ವರಿ ಹೆಗಡೆ ಅಭಿಪ್ರಾಯಪಟ್ಟಿದ್ದಾರೆ. 'ಅಪರಂಜಿ'ಯ ಸಂಪಾದಕರಾದ ಶಿವು, ನಿವೃತ್ತ ಇಂಗ್ಲಿಷ್ ಅಧ್ಯಾಪಕರಾದ ಶ್ರೀನಿವಾಸ ಉಡುಪ, ಲೇಖಕಿಯರಾದ ನೀಳಾದೇವಿ, ಎಚ್. ಎಸ್. ಪಾರ್ವತಿ ಮುಂತಾದವರೂ 'ನಗೆಗನ್ನಡಂ ಗೆಲ್ಗೆ!'ಯನ್ನು ಮನಸಾರೆ ಹಾಡಿ ಹೊಗಳಿದ್ದಾರೆ.

9. 2005: ಆಚೀಚೆಯ ಕಥೆಗಳು

ಸಂಪಾದಕರು: ಗುರುಪ್ರಸಾದ್ ಕಾಗಿನೆಲೆ

ಕನ್ನಡದ ಪ್ರಸಿದ್ಧ ಕಥೆಗಾರ ದಿವಂಗತ ಯಶವಂತ ಚಿತ್ತಾಲರು 'ಆಚೀಚೆಯ ಕಥೆಗಳು' ಬಗ್ಗೆ ಬರೆಯುತ್ತಾ, ಇದನ್ನು "ಕನ್ನಡದಲ್ಲಿ ನಡೆದ ಇತ್ತೀಚಿನ ಆಕರ್ಷಕ ಪ್ರಯೋಗ" ಎಂದಿದ್ದಾರೆ. "ತಾಯಿ ನೆಲದಿಂದ ದೂರವಾದ, ಕನ್ನಡದ ಜೀವಂತ ಸಂಪರ್ಕ ಅಸಾಧ್ಯವಾದ ಜಾಗದಲ್ಲಿ ಕುಳಿತು ಕೇವಲ ಮಾತೃಭಾಷೆಯ ಪ್ರೀತಿಗಾಗಿ 'ಎಂದೆಂದಿಗೂ

ಕನ್ನಡ'ವಾಗಿರುವ ಹಠದಲ್ಲಿ ರಚಿಸಿದ ಈ ಕತೆಗಳು ಕನ್ನಡ ಕಥಾ ಸಾಹಿತ್ಯಕ್ಕೆ ಕಡಲಾಚೆಯ ಕನ್ನಡಿಗರಿತ್ತ ಅಪೂರ್ವ ಕೊಡುಗೆಯಾಗಿದೆ" ಎಂದೂ ಉದ್ಗಾರವೆತ್ತಿದ್ದಾರೆ. ಕನ್ನಡದ ಬರಹಗಾರ್ತಿ ಸುನಂದಾ ಪ್ರಕಾಶ ಕಡಮೆಯವರ ಮಾತುಗಳು ಈ ಸಂಪುಟವನ್ನು ಚೆನ್ನಾಗಿ ವಿವರಿಸುತ್ತದೆ. "ಈ ಕೃತಿಯ ಮಾಲೆಯಲ್ಲಿ ಸೇರಿರುವ ಇಪ್ಪತ್ತೆರಡು ಹೊಚ್ಚಹೊಸ ಕತೆಗಳಲ್ಲಿ ಪ್ರತಿಯೊಂದು ಹೂವೂ ಬೇರೆ ಬೇರೆ ರೀತಿಯ ಬರವಣಿಗೆಯನ್ನು ಹೊಂದಿದೆ. ಓದಿ ಮುಗಿಸಿದ ಮೇಲೆ ಇಪ್ಪತ್ತೆರಡು ವಿವಿಧ ಮನಸ್ಸಿನೊಂದಿಗೆ ಒಡನಾಡಿದ, ಅಲ್ಲಿಯ ಪಾತ್ರಗಳೊಂದಿಗೆ ಮೌನ ಸಂವಾದ ನಡೆಸಿದ ಅನುಭವವಾಗುತ್ತದೆ."

10. 2003: ಕುವೆಂಪು ಸಾಹಿತ್ಯ ಸಮೀಕ್ಷೆ

ಸಂಪಾದಕರು: ಆಹಿತಾನಲ (ನಾಗ ಐತಾಳ)

ಕುವೆಂಪು ಸಾಹಿತ್ಯದ ಹಲವು ಮುಖಗಳನ್ನು ಕುರಿತು ಕಡಲಾಚೆಯ ಕನ್ನಡಿಗರು ಬರೆದ ಲೇಖನಗಳ ಸಂಪುಟ. "ಅಮೆರಿಕದಲ್ಲಿದ್ದೂ ತಮ್ಮ ಕನ್ನಡ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಸಂರಕ್ಷಕ ಕವಚಗಳನ್ನು ಕಂಡುಕೊಳ್ಳುವುದು ಅವರಿಗೆ ಅಗತ್ಯವಾಗಿದೆ. ತಮ್ಮೊಳಗಿನ ಕನ್ನಡತನವನ್ನು ತುಕ್ಕು ಹಿಡಿಯದಂತೆ ಕಾಪಾಡಿಕೊಂಡಿದ್ದಾರೆ. ಹೀಗೆ ತಮ್ಮ ಕನ್ನಡತನವನ್ನು ಉಳಿಸಿಕೊಂಡಿದ್ದರ ಸಂಕೇತವೇ ಈ 'ಕುವೆಂಪು ಸಾಹಿತ್ಯ ಸಮೀಕ್ಷೆ.' ಕುವೆಂಪು ಸಾಹಿತ್ಯ ನಿರ್ಮಿತಿಯನ್ನು ಕುರಿತು ಒಂದು ಒಳ್ಳೆಯ ಸಮೀಕ್ಷೆ ಇದು" ಎಂದು ರಾಷ್ಟ್ರಕವಿ, ದಿವಂಗತ ಜಿ. ಎಸ್. ಶಿವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ. ಅದೇ ರೀತಿ, ಕನ್ನಡದ ಖ್ಯಾತ ಲೇಖಕ ಪ್ರಭುಶಂಕರರು "ಅನಿವಾಸಿ ಕನ್ನಡಿಗರ ಈ ಕೊಡುಗೆ ಕುವೆಂಪು ಅವರಿಗೆ ಅರ್ಪಿಸುವ ಒಂದು ದೊಡ್ಡ ನಮನ. ಕರ್ನಾಟಕದ ಸಮಕಾಲೀನ ಲೇಖಕರ ಮಟ್ಟಕ್ಕೇನೂ ಕಡಿಮೆ ಇಲ್ಲದ ಲೇಖನಗಳು ಇಲ್ಲಿ ಹೊರಬಂದಿವೆ ಎನ್ನಲು ಹೆಮ್ಮೆಯಾಗುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. "ಕುವೆಂಪು ಸಾಹಿತ್ಯ ಸಮೀಕ್ಷೆಯಲ್ಲಿ ಅಧ್ಯಯನಪೂರ್ಣ ಲೇಖನಗಳನ್ನು ಬರೆದಿರುವ ಅಮೆರಿಕದ ಲೇಖಕರ ಬಗ್ಗೆ ಕರ್ನಾಟಕದ ಕನ್ನಡಿಗರೂ ಹೆಮ್ಮೆಪಡಬೇಕು. ಕುವೆಂಪು ಸಾಹಿತ್ಯದ ವಿವಿಧ ಮುಖಗಳನ್ನು ಆಸಕ್ತಿಯಿಂದ ಚರ್ಚಿಸಿದ ಎಲ್ಲ ಲೇಖಕ ಲೇಖಕಿಯರೂ ತಾವು ಆರಿಸಿಕೊಂಡ ವಸ್ತುವಿನ ಬಗ್ಗೆ ಸಮರ್ಥವೆನಿಸುವ ಗ್ರಹಿಕೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ಮತ್ತೊಬ್ಬ ವಿದ್ವಾಂಸರಾದ ವ್ಯಾಸರಾಯ ಬಲ್ಲಾಳರ ಅನಿಸಿಕೆ.

❑

ಅನುಬಂಧ 4

ನಮ್ಮ ಪ್ರಕಟಣೆಗಳ ಬಗ್ಗೆ ಕೆಲವು ಅಭಿಪ್ರಾಯಗಳು

1. ಬದಲಾವಣೆಯ ಬೆನ್ನಟ್ಟಿ (2019)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು
ಸಂಪಾದಕರು: ಪ್ರಕಾಶ್ ನಾಯಕ್, ಶಂಕರ್ ಹೆಗಡೆ

ಕನ್ನಡ ಸಾಹಿತ್ಯ ರಂಗವು ಅಮೆರಿಕದಲ್ಲಿ ಆಯೋಜಿಸಿರುವ 9ನೇ ವಸಂತ ಸಾಹಿತ್ಯೋತ್ಸವದಲ್ಲಿ ಬಿಡುಗಡೆಯಾಗುತ್ತಿರುವ 'ಬದಲಾವಣೆಯ ಬೆನ್ನಟ್ಟಿ...' ಪುಸ್ತಕವು ಜಾಗತಿಕ ಮಟ್ಟದಲ್ಲಿ ಕನ್ನಡವನ್ನು ಒಟ್ಟುಗೂಡಿಸುವ ಪ್ರಯತ್ನದಂತಿದೆ. ಅಮೆರಿಕದಲ್ಲಿರುವ ಕನ್ನಡ ಬೇರಿನ ಲೇಖಕರು ಮತ್ತು ಕರ್ನಾಟಕದ ಒಂದಿಬ್ಬರು ಖ್ಯಾತನಾಮರ ಲೇಖನ, ಪ್ರಬಂಧ, ಕವಿತೆ ಮತ್ತು ಕತೆಗಳ ಗುಚ್ಛ ಇದಾಗಿದ್ದು ಸಮೃದ್ಧ ಓದಿನ ಹೂರಣವನ್ನು ಒಳಗೊಂಡಿದೆ. ಕೆಲವು ಸಡಿಲ ಬರಹಗಳೂ ತೂರಿಗೊಂಡಿವೆ. ಆದಾಗ್ಯೂ, ದೂರದ ಅಮೆರಿಕದಲ್ಲಿರುವ ಕನ್ನಡಿಗರ ಆಲೋಚನೆಗಳು, ಅನುಭವ ಮತ್ತು ಅಕ್ಷರಬಂಧವನ್ನು ಅರ್ಥಮಾಡಿಕೊಳ್ಳಲು ಈ ಪುಸ್ತಕವನ್ನು ತುಲನೆಗೊಡ್ಡಬಹುದು. ಸಾಹಿತ್ಯೋತ್ಸವದ ಮುಖ್ಯ ಅತಿಥಿ ವಸುಧೇಂದ್ರರ ಬರಹದೊಂದಿಗೆ ಬದಲಾವಣೆಯ ಬೆನ್ನಟ್ಟಿ ಆರಂಭವಾಗುತ್ತದೆ. ಕನ್ನಡ ಸಾಹಿತ್ಯಲೋಕದ ಪಲ್ಲಟಗಳನ್ನು ಸುದೀರ್ಘ ಲೇಖನದಲ್ಲಿ ದಾಖಲಿಸಿರುವ ಅವರು, ಅಮೆರಿಕಕ್ಕೆ ವಲಸೆ ಬಂದ ಭಾರತೀಯರು ಅಗ್ನಿದಿವ್ಯದಲ್ಲಿ ಜಯಗಳಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. 'ನಮ್ಮೂರಿನ ಶ್ರೇಷ್ಠತೆಯ ಮಾನದಂಡಗಳನ್ನೆಲ್ಲ ಹಿನ್ನೆಲೆಗೆ ಸರಿಸಿ ಮತ್ತೆ ಹೊಸ ಪ್ರಮಾಣಗಳನ್ನು ಕಲಿತು ಬದುಕನ್ನು ಆರಂಭಿಸಬೇಕಾಗುತ್ತದೆ. ನಮ್ಮ ಶಕ್ತಿ ಮತ್ತು ದೌರ್ಬಲ್ಯಗಳೆರಡೂ ತಿಳಿಯುವುದು ಈ ಗಳಿಗೆಯಲ್ಲಿಯೇ!' ಎಂದು ವಲಸೆ ಬದುಕಿನ ಸವಾಲುಗಳನ್ನು ಲೇಖನದಲ್ಲಿ ಚರ್ಚಿಸಿದ್ದಾರೆ. ಆಹಿತಾನಲ, ಶ್ರೀನಾಥ್ ಭಲ್ಲೆ, ಕಾವ್ಯ ಕಡಮೆ ನಾಗರಕಟ್ಟೆ, ಮೈ. ಶ್ರೀ. ನಟರಾಜ, ತ್ರಿವೇಣಿ ಶ್ರೀನಿವಾಸರಾವ್, ಸುಪ್ತದೀಪ್ತಿ, ಗುರುಪ್ರಸಾದ್ ಕಾಗಿನೆಲೆ, ನಳಿನಿ ಮಯ್ಯ ಸೇರಿದಂತೆ ಹತ್ತಾರು ಲೇಖಕ, ಕತೆಗಾರ, ಕವಿಗಳು ಇಲ್ಲಿ ಬರೆದಿದ್ದಾರೆ. 'ಬದಲಾದ ಸಮಾಜದ ಜಾಗತಿಕ ಬಿಂಬಗಳನ್ನು ಕಟ್ಟಿಕೊಡುತ್ತಲೇ

ಓದುಗರಲ್ಲಿ ಬಹುಮುಖ್ಯವಾದ ಪ್ರಶ್ನೆಗಳನ್ನು ಈ ಪುಸ್ತಕ ಉದ್ದೀಪಿಸುತ್ತದೆ,' ಎಂದು ಸುನಂದಾ ಕಡಮೆ ಪುಸ್ತಕದ ಮಹತ್ವವನ್ನು ವಿವರಿಸಿದ್ದಾರೆ.

–ವಿಜಯ ಕರ್ನಾಟಕ, ಮೇ 19, 2019

2. ಅವರವರ ಭಕುತಿಗೆ (2017)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು.
ಪ್ರಧಾನ ಸಂಪಾದಕರು: ನಳಿನಿ ಮೈಯ

'ಅವರವರ ಭಕುತಿಗೆ' ಪುಸ್ತಕ ಭಕ್ತಿಯನ್ನು ಕುರಿತ ಸಣ್ಣ ಮಟ್ಟಿನ ಒಂದು ಆಕರ ಗ್ರಂಥವೆಂದೇ ಹೇಳಬೇಕು. ಸಣ್ಣ ಮಟ್ಟಿನ ಎಂದೆ ಕಾರಣ ಮಾತನಾಡಿದಷ್ಟೂ ಬೆಳೆಯುವ, ಇನ್ನೂ ಬಾಕಿ ಉಳಿಯುವ ವಿಚಾರ ಭಕ್ತಿ. ಸಾಮಾನ್ಯವಾಗಿ ಭಕ್ತಿಯಂತಹ ವಸ್ತು ವಿಷಯದ ಕುರಿತು ಮಾತಾಡಲು ಹೊರಟಾಗ ತುಸು ತಾಳ ತಪ್ಪಿದರೂ ಬೇಸರ ಬರುವಂಥ ಜಡ ನಿರೂಪಣೆಗೆ ಪಕ್ಕಾಗುವುದೇ ಹೆಚ್ಚು. ಆದರೆ ಇಲ್ಲಿ ಹಾಗಾಗಿಲ್ಲ. ಈ ಕೃತಿಯಲ್ಲಿ ವಿವಿಧ ಕಲಾರಂಗಗಳಲ್ಲಿ ಕಾಣುವ ಭಕ್ತಿಯ ಸುತ್ತಣ ಜಿಜ್ಞಾಸೆ, ವಿವಿಧ ದೃಷ್ಟಿಯ, ವಿವಿಧ ರೂಪದ ಭಕ್ತಿ ಅಭಿವ್ಯಕ್ತಿಗಳ ಸಾಧಾರ ಸಂಗ್ರಹವಿದೆ. ಒಳ ನೋಟಗಳಿಂದ ಕೂಡಿದ ಘನ-ಗಾಢ ಲೇಖನಗಳಿವೆ. ಒಮ್ಮೆ ಕೈಗೆತ್ತಿಕೊಂಡರೆ ಒಂದು ಲೇಖನವನ್ನು ಓದಿ ಮುಗಿಸದೆ ಏಳಲು ಬಿಡದ ಸ್ವಾರಸ್ಯಕರ ಮತ್ತು ವಿದ್ವತ್‌ಪೂರ್ಣ ಚಿಂತನೆಗಳಿವೆ. ಸಂಪಾದಕ ವರ್ಗದ ಪರಿಕಲ್ಪನೆ ನಿಜಕ್ಕೂ ಸಾರ್ಥಕವಾಗಿದೆ. ಇಂಥ ಒಂದು ಸಂಗ್ರಹಯೋಗ್ಯ ಕೃತಿಯನ್ನು ನೀವು ಆ ದೂರದಲ್ಲಿದ್ದೂ ಸಾಧಿಸಲು ಸಾಧ್ಯವಾಗಿದ್ದು ನಿಜಕ್ಕೂ ಸಾಹಸವೇ ಸರಿ. ಅಭಿನಂದನೆಗಳು.

–ವೈದೇಹಿ (ಸಾಹಿತಿ, ಕಥೆಗಾರ್ತಿ)

*

ಅಂತರಂಗದ ಪಿಸುನುಡಿಯು ಭಕ್ತಿಯ ರೂಪಕವಾಗಿ ಧ್ಯಾನವನ್ನು ಸಂಚಲನಗೊಳಿಸುತ್ತದೆ. ಈ ನೆಲೆಯಲ್ಲಿ ಸಾವಿರಾರು ಮೈಲಿ ದೂರದಲ್ಲಿದ್ದೂ 'ಅವರವರ ಭಕುತಿಗೆ' ಯಂಥ ಮಹತ್ವಪೂರ್ಣ ಕೃತಿಯನ್ನು ಅಮೆರಿಕಾದ 'ಕನ್ನಡ ಸಾಹಿತ್ಯ ರಂಗ' ಸಂಪಾದಿಸಿ ಪ್ರಕಟಿಸಿರುವುದು ಬಹು ದೊಡ್ಡ ಮೆಚ್ಚಿಗೆಯ ಗುಣವಾಚಕವನ್ನು ಬಯಸುತ್ತದೆ. ದೇವರು, ಧರ್ಮ, ಗುಡಿ ಗೋಪುರಗಳ ಬಗ್ಗೆ ಅತ್ಯಂತ ಕೃತಕವಾಗಿ ನೋಡುತ್ತಿರುವ ಈ ಸಮಯದಲ್ಲಿ ಇಂಥದೊಂದು ಅಮೂಲ್ಯ ಕೃತಿಯನ್ನು ಓದುಗರಿಗೆ ಕೊಡಬೇಕೆಂದು ಯೋಚಿಸಿರುವುದೇ ಅಪೂರ್ವವಾದ ಸಂಗತಿ. ಧ್ಯಾನಸ್ಥ ನೆಲೆಯಲ್ಲಿ ನಿಂತು ಸ್ಮರಣೀಯ ಮಾದರಿಗಳನ್ನು ನಮ್ಮ ಸಂತ ಮಹನೀಯರು ಬಿಟ್ಟು ಹೋಗಿದ್ದಾರೆ. ಅದು ಬೇರೆ ಬೇರೆ ರೂಪದಲ್ಲಿರಬಹುದು. ಅವುಗಳ ಚೇತೋಹಾರಿ ನೋಟವನ್ನು ಇಲ್ಲಿಯ ಕೆಲವು ಲೇಖನಗಳು ನನಗೆ ಕೊಟ್ಟಿವೆ. 'ಭಕ್ತಿ ಎಂಬ ಜೀವರಸ' ಲೇಖನದಲ್ಲಿ ನಮ್ಮ ನಡುವಿನ ಮಹತ್ವಪೂರ್ಣ ವಿದ್ವಾಂಸರಾದ ಲಕ್ಷ್ಮೀಶ ತೋಳ್ಪಾಡಿಯವರು ಗಂಭೀರವಾದ ಚರ್ಚೆ ನಡೆಸಿದ್ದಾರೆ. ಈ ಕೃತಿ ನನ್ನ

ಪರಿಚಿತರಾದ ಹಲವು ಲೇಖಕರು ಗುಂಪುಗೂಡಿ 'ನಾವು ಹೀಗೆಲ್ಲ ಯೋಚಿಸುತ್ತಿದ್ದೇವೆ' ಎಂದು ಹೇಳುವಂತಿದೆ. ಸಾಹಿತ್ಯದ ಮಹೋನ್ನತಿ ಎಂದರೆ ಇದೇ ಅಲ್ಲವೆ? ಸಮೃದ್ಧತೆಯ ನೆಲೆಯಲ್ಲಿ ಗುಣಾತ್ಮಕತೆಯನ್ನು ಈ ರೀತಿ ಗ್ರಹಿಸಬೇಕು ಎಂದು ಸೂಚಿಸುವ ರೀತಿಯಲ್ಲಿವೆ ಇಲ್ಲಿಯ ಬಹುಪಾಲು ಲೇಖನಗಳು. ನಮ್ಮ ಸಂತ ಮಹನೀಯರ ಬಳಿಗೆ ಮತ್ತೆ ಕರೆದೊಯ್ಯುವಂಥವು. ಈ ಕೃತಿಯು ಬಹು ದೊಡ್ಡ ಪ್ರಮಾಣದಲ್ಲಿ ಸಂವಾದವನ್ನು ಬಯಸುವಂಥದ್ದು. ಸಂಪಾದಕತ್ವದ ಸೂಕ್ಷ್ಮ ಮನಸ್ಸುಗಳಿಗೆ ಧನ್ಯವಾದಗಳು.

–ಶೂದ್ರ ಶ್ರೀನಿವಾಸ್ (ಸಾಹಿತಿ, ಕಾದಂಬರಿಕಾರ)

*

ಈ ತರಹದ ಪ್ರಯತ್ನ ಕನ್ನಡಕ್ಕೆ ಹೊಸದು. ಒಂದೆಡೆ ಭಕ್ತಿ ಮಾರ್ಗದಿಂದ ದೀಪ ಬೆಳಗಿಸಿದ, ಮಳೆ ಸುರಿಸಿದ ದೃಷ್ಟಾಂತಗಳನ್ನು ಕೇಳುತ್ತಲೇ ಬೆಳೆದ ನಮ್ಮ ಭಾವಲೋಕಕ್ಕೆ, ಇನ್ನೊಂದೆಡೆ ಭಕ್ತಿ ಎಂಬುದು ಒಂದು ಗುಲಾಮಗಿರಿ ಎಂಬರ್ಥದಲ್ಲಿ ಚಿಂತನೆಗೆ ಒಳಪಡಿಸಿರುವ ವೈಚಾರಿಕ ಕಾಲಘಟ್ಟದಲ್ಲಿಯೂ ಈ ಕೃತಿ ಕುತೂಹಲದಿಂದಲೇ ಓದಿಸಿಕೊಳ್ಳುವ ಸಾಮರ್ಥ್ಯ ಹೊಂದಿದೆ ಎಂಬುದು ಇದರ ಹೆಗ್ಗಳಿಕೆ. ಇಲ್ಲಿಯ ಕೊನೆಯ ಮೂರು ಲೇಖನಗಳು ವಿಜ್ಞಾನ, ನಂಬಿಕೆ ಮತ್ತು ವೈದ್ಯಶಾಸ್ತ್ರಗಳ ಪ್ರಸ್ತಾಪದೊಂದಿಗೆ ವಿಭಿನ್ನವಾದ ಹೊಳಹುಗಳನ್ನು ನೀಡುವಂತಿವೆ. ನನಗೆ ವೈಯಕ್ತಿಕವಾಗಿ ಭಕ್ತಿ ಎಂದರೆ ಧ್ಯಾನ ಮಾತ್ರ. ಮನಸ್ಸನ್ನು ಕೇಂದ್ರೀಕರಿಸಿ ಬರವಣಿಗೆಗೆ ಬೇಕಾದ ಧ್ಯಾನಸ್ಥ ಮನಸ್ಥಿತಿ ಪಡೆಯಲು ಒಂದು ಅಲೌಕಿಕ ರೂಪದ ಅಗತ್ಯ ಅಷ್ಟೇ. ಇಂತೆಲ್ಲ ಭಕ್ತಿಯ ಹಲವು ಮಜಲುಗಳನ್ನು ಒಳಗೊಂಡ 'ಅವರವರ ಭಕುತಿಗೆ' ಕೃತಿ ಮತ್ತೆ ಮತ್ತೆ ಓದುವ ಬರಹಗಳ ಗುಚ್ಛ.

–ಸುನಂದಾ ಕಡಮೆ (ಸಾಹಿತಿ, ಕಥೆಗಾರ್ತಿ)

*

'ಅವರವರ ಭಕುತಿಗೆ' – ಭಕ್ತಿಯ ಪರಿಕಲ್ಪನೆಯನ್ನು ವಿವಿಧ ಕೋನಗಳಿಂದ, ವಿವಿಧ ಸ್ತರಗಳಲ್ಲಿ ಪರಿಶೀಲಿಸುವ ಮಹತ್ವದ ಪ್ರಕಟಣೆ. ಅದರ ಹೆಸರಿನಂತೆ ಎಲ್ಲರಿಗೆ ಸ್ವೀಕಾರ್ಯವಾಗಿ ಇದೆ. ವಿಸ್ತಾರವಾದ ಹರಹು, ಗಹನ – ಸರಳ ಪರಾಮರ್ಶೆಗಳಿಂದ, ಮಾಹಿತಿ ವಿಶ್ಲೇಷಣೆಗಳಿಂದ ಕೂಡಿದ, ಓರಣವಾಗಿ ಸಂಪಾದಿತವಾದ ಅಧ್ಯಯನ ಯೋಗ್ಯವಾದ ಸಂಕಲನ. ಕನ್ನಡತನವನ್ನು, ಭಾರತೀಯತೆಯನ್ನು ಉಜ್ಜೀವಿಸುವ ಸತ್ಕಾರ್ಯ ಕೂಡಾ. ಇದರ ಯೋಚನೆ, ಯೋಜನೆ ಮತ್ತು ನಿರ್ವಹಣೆಗಳಿಗಾಗಿ ನಿಮ್ಮ ಬಳಗಕ್ಕೆ ಅಭಿನಂದನೆ.

–ಡಾ. ಎಂ. ಪ್ರಭಾಕರ ಜೋಶಿ (ಯಕ್ಷಗಾನ ಕಲಾವಿದ)

ಆಶ್ಚರ್ಯಕರ ಮತ್ತು ಪ್ರಶಂಸನೀಯ ವಿಚಾರವೆಂದರೆ ಕರ್ನಾಟಕದಲ್ಲಿ ಕಳೆದ ಒಂದು ಸಾವಿರ ವರ್ಷಗಳಿಂದಲೂ ಸಾಗಿ ಬಂದಿರುವ ಒಂದು ವಿಶಿಷ್ಟ ಆಧ್ಯಾತ್ಮಿಕ ಪರಂಪರೆ, ದಾರ್ಶನಿಕ ಪ್ರಕಾರ-ಭಕ್ತಿ ಮಾರ್ಗವನ್ನು ಅಮೆರಿಕೆಗೆ ಬರಮಾಡಿಕೊಂಡು ಅದನ್ನು, ಅದರ ಆಯಾಮಗಳನ್ನು ಅರಿಯುವ, ಅರ್ಥೈಸುವ ಪ್ರಕ್ರಿಯೆಯನ್ನು ಅಮೆರಿಕಾದ ಕನ್ನಡಿಗರು ಕೈಗೆತ್ತಿಕೊಂಡದ್ದು. 'ಅವರವರ ಭಕುತಿಗೆ' ಈ ಪ್ರಯತ್ನದ ಫಲ. ಕ್ರಿಸ್ತಪೂರ್ವ ಪಾಣಿನಿಯಿಂದ ಹಿಡಿದು (ವಾಸುದೇವ ಭಕ್ತಿಯ ಉಲ್ಲೇಖ) ಮುಂದಿನ ವೇದೇತರ ಮಾರ್ಗವಾದ ಮಹಾಭಾರತ, ಗೀತೆ, ಸಾತ್ವತ ಸಂಹಿತೆ, ವಿಷ್ಣು ಪುರಾಣ, ನಾರದ ಮತ್ತು ಶಾಂಡಿಲ್ಯ ಭಕ್ತಿಸೂತ್ರ, ಭಾಗವತ, ಹರಿವಂಶ, ಯಮುನಾಚಾರ್ಯ, ರಾಮಾನುಜ, ಮಧ್ವ, ವಚನಕಾರರು, ದಾಸಪಂಥ- ಇತ್ಯಾದಿ ದಾರ್ಶನಿಕ ದಾಖಲೆಗಳ ಮೂಲಕ ಉಳಿದು ಬಂದ, ಹರಿದು ಬಂದ ಆತ್ಮ-ಪರಮಾತ್ಮ ಸಂಬಂಧದ ದಾರ್ಶನಿಕ ಮಾರ್ಗದ ಬಗ್ಗೆ ತಂತಮ್ಮ ಅರಿವು, ಚಿಂತನೆ, ಭಾವನೆಗಳ ನೆಲೆಯಲ್ಲಿ ಅರ್ಥೈಸುವ ಆಕರವೇ ಈ ಹೊತ್ತಗೆ-'ಅವರವರ ಭಕುತಿಗೆ.' ಎಲ್ಲರೂ ಒಂದೇ ರೀತಿಯಲ್ಲಿ ಅರ್ಥೈಸಿಲ್ಲ, ಅರ್ಥೈಸಲು ಸಾಧ್ಯವೂ ಇಲ್ಲ, ಅರ್ಥೈಸಲೂ ಬಾರದು. 'ಅವರವರ ಭಕುತಿಗೆ' ಪ್ರತಿಯೊಬ್ಬನ ವೈಯಕ್ತಿಕ ಅರಿವಿಗೆ ಹಿಡಿದ ಕನ್ನಡಿ. ವ್ಯಕ್ತವನ್ನು ಅವ್ಯಕ್ತದೊಡನೆ ಅನುಸಂಧಾನ ಮಾಡುವ, ಭಾವುಕವಾಗಿ ಅನನ್ಯತೆಯನ್ನು, ಲೀನತೆಯನ್ನು ಸಾಧಿಸುವ ವಿಧಾನ 'ಭಗವದನುರಾಗ -ಭಕ್ತಿ'. ಇದನ್ನು ಅರ್ಥೈಸುವ ನಮ್ಮ ಅಮೆರಿಕಾದ ಬಂಧುಗಳ ಪ್ರಯತ್ನ 'ಅವರವರ ಭಕುತಿಗೆ' ಸಾರ್ಥಕತೆಯನ್ನು ಸಾಧಿಸಿದೆ.

-ಶ್ರೀಪತಿ ತಂತ್ರಿ (ಸಮಾಜ ಶಾಸ್ತ್ರಜ್ಞರು)

*

...ಹೊರನಾಡ ಕನ್ನಡಿಗರಿಗೆ ಕನ್ನಡ ಎಂಬುದು ಒಂದು ಭಾಷೆಯಲ್ಲ, ಕನ್ನಡವೆಂಬುದು ಒಂದು ಜೀವನ ದೃಷ್ಟಿ, ಒಳಗಿನಿಂದಲೇ ಅರಳಿ ನಿಲ್ಲುವ ಒಂದು ಜೀವಂತ ಸೃಷ್ಟಿ ಎಂಬ ಸಂಪಾದಕರ ಮಾತಿಗನುಗುಣವಾಗಿ ಸಂಪುಟದ ಬರಹಗಳ ಆಳ, ವೈವಿಧ್ಯ, ವಿಷಯ ವ್ಯಾಪ್ತಿ ಶ್ರೀಮಂತವಾಗಿದೆ. ಯಕ್ಷಗಾನ ಸಾಹಿತ್ಯದಲ್ಲಿ ಭಕ್ತಿ, ಬೇಂದ್ರೆಯವರು ಕಂಡ ಅಭಂಗ ವಿಟ್ಠಲ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ದೇವರು, ವಚನಗಳಲ್ಲಿ ಮಾಯೆಯ ಕಲ್ಪನೆ, ಶತಮಾನಗಳಾಚೆಯ ಶರಣರ ಸಂದೇಶ, ಬಸವಣ್ಣ-ಒಂದು ಬೆರಗು, ಕಠೋಪನಿಷತ್ತಿನ ನಚಿಕೇತನ ಭಕ್ತಿ, ಅರಿವನರಿವ ಹಾದಿಗೆ ಹೆಣ್ಣೆಂಬ ಹೆಸರು, ಆಧುನಿಕ ವೈದ್ಯಶಾಸ್ತ್ರ ಮತ್ತು ಭಕ್ತಿ ಎಂಬ ಉದ್ಯಮ...ಹೀಗೆ ವಿಷಯ ವ್ಯಾಪ್ತಿ ಬೆಳೆಯುತ್ತಲೇ ಹೋಗುತ್ತದೆ. ಪ್ರತಿ ಲೇಖನದಲ್ಲೂ ಅಡಕವಾಗಿರುವ ಉಲ್ಲೇಖಗಳು, ವಿಮರ್ಶಾತ್ಮಕ ದೃಷ್ಟಿಕೋನ ಗಮನ ಸೆಳೆಯುತ್ತದೆ. ..ಭಕ್ತಿ ಸಾಹಿತ್ಯ ಕುರಿತಂತೆ ಕನ್ನಡದಲ್ಲಿ ಇರುವ ಗ್ರಂಥಗಳಿಗೆ ಈ ಸಂಪುಟ ಒಂದು ಮೌಲಿಕ ಸೇರ್ಪಡೆ.

-ಕೆ. ಸತ್ಯನಾರಾಯಣ (ವಿಜಯ ಕರ್ನಾಟಕ ಪತ್ರಿಕೆಯ ಅಂಕಣ 'ಒಳಕಥನ'ದಿಂದ)

ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಗ್ರಂಥ ಕನ್ನಡ ಸಾಹಿತ್ಯ ಲೋಕಕ್ಕೊಂದು ಅತಿ ವಿಶಿಷ್ಟ ಮತ್ತು ಅತ್ಯಂತ ಮೌಲ್ಯಯುತ ಸೇರ್ಪಡೆ. ವಚನಕಾರರು ಮತ್ತು ಅವರ ವಚನಗಳ ಕುರಿತು, ಸಾಕಷ್ಟು ಅಧ್ಯಯನ ನಡೆಸಿ ಬರೆದ ಪ್ರಬುದ್ಧ ಪ್ರಬಂಧಗಳು ಈ ಗ್ರಂಥದಲ್ಲಿವೆ. ಕುವೆಂಪು, ಬೇಂದ್ರೆ, ಪುತಿನ ಮುಂತಾದ ಕನ್ನಡದ ರಸಋಷಿಗಳು ಭಕ್ತಿಯನ್ನು ಹೇಗೆ ಪರಿಕಲ್ಪಿಸಿದ್ದಾರೆಂಬ ವಿವರಗಳಿವೆ. ಜನಪದ ಸಾಹಿತ್ಯದಲ್ಲಿ ಭಕ್ತಿ ಸಿಂಚನ, ಯಕ್ಷಗಾನ ಸಾಹಿತ್ಯದಲ್ಲಿ ಭಕ್ತಿ, ಸುಗಮ ಸಂಗೀತದಲ್ಲಿ ಭಕ್ತಿ, ಗ್ರಾಮೀಣ ಮಹಿಳೆಯರ ಜೀವನದ ಅಂತರ್ಗಾಮಿ ಭಕ್ತಿ... ಮುಂತಾದ ಶೀರ್ಷಿಕೆಗಳಿಂದಲೇ ಗ್ರಂಥದ ಆಳ, ಹರವಿನ ಅಂದಾಜಾಗುತ್ತದೆ. ಇದಿಷ್ಟು ಭಕ್ತಿ ಹೂರಣವು ಪುಸ್ತಕದ ಒಳಗೆ ತುಂಬಿದ್ದರೆ ಇದಕ್ಕೆ ಸಂಗಾತಿಯಾಗಿ, ಸಂವಾದಿಯಾಗಿ ಒಂದು ಧ್ವನಿಸಂಪುಟವೂ ಇದೆ. ಇದು ಹಿಂದೂಸ್ಥಾನಿ ಸಂಗೀತಗಾರ, ಅಪ್ಪಟ ಕನ್ನಡಿಗ ಪ್ರತಿಭೆ ಪಂ. ನಾಗರಾಜ ಹವಾಲ್ದಾರ್ ಅವರ ಪರಿಶ್ರಮದಿಂದ ಮೂಡಿ ಬಂದ ನಾದಕುಸುಮ. ಹೀಗೆ ಭಕ್ತಿಯ ಕುರಿತಂತೆ ಕನ್ನಡದಲ್ಲಿ ಸಾಹಿತ್ಯ–ಸಂಗೀತ ಸಂಗಮವೊಂದು ಸಪ್ತ ಸಾಗರದಾಚೆ ಅಮೆರಿಕಾದಲ್ಲಿ ಸಾಕಾರಗೊಳ್ಳುತ್ತಿದೆ ಎನ್ನುವುದು ಸಾಂಸ್ಕೃತಿಕ, ಪ್ರಜ್ಞಾವಂತ ಕನ್ನಡಿಗರಿಗೆಲ್ಲ ರೋಮಾಂಚನದ ಸಂಗತಿಯೇ.

–ಶ್ರೀವತ್ಸ ಜೋಶಿ (ವಿಶ್ವವಾಣಿ ಪತ್ರಿಕೆಯ 'ತಳಿರು ತೋರಣ' ಅಂಕಣದಲ್ಲಿ)

3. ರಂಗ ತರಂಗ (2016)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು

ಸಂಪಾದಕರು: ಮೈ. ಶ್ರೀ. ನಟರಾಜ, ನಾಗ ಐತಾಳ ಮತ್ತು ಜ್ಯೋತಿ ಮಹಾದೇವ್

"ವಿವಿಧ ವಿಷಯಗಳ ಮೇಲೆ ಅಧಿಕಾರದಿಂದ ಮಾತಾಡಬಲ್ಲ ವಿದ್ವಾಂಸರ ಸಮೀಕ್ಷೆಗಳು ಕನ್ನಡ ನಾಡಿನಲ್ಲಿರುವ ಕನ್ನಡಿಗರಿಗೆ ಮತ್ತು ವಿದ್ಯಾರ್ಥಿಗಳಿಗೆ ಅಮೂಲ್ಯವಾಗಿವೆ. ಇವು ಕನ್ನಡ ಸಾಹಿತ್ಯದ ಸಾಧನೆಯನ್ನು ಚಿತ್ರಿಸುವುದಲ್ಲದೇ ನಾಡಿನ ಮುಂದಿರುವ ಸವಾಲುಗಳನ್ನು ಗಮನಿಸಿ ಕನ್ನಡದ ಮುನ್ನಡೆಗೆ ದಾರಿಯನ್ನು ಸಿದ್ಧಗೊಳಿಸುವ ಪ್ರಕಟಣೆಗಳು. ಈ ಪ್ರಕಟಣೆಗಳು ಸಾವಿರಾರು ಮೈಲುಗಳ ದೂರವನ್ನು ಗೆದ್ದು ಹತ್ತಿರ ತರುವ ಸೇತುವೆಗಳು. ಇವು ಕನ್ನಡ ನಾಡಿನಲ್ಲಿಯೂ ಪ್ರಚಾರವಾಗಬೇಕು. 'ರಂಗ ತರಂಗ' ಅನಂತವಾಗಿ ಅಮೆರಿಕದ ಕನ್ನಡಿಗರು ಮತ್ತು ಕನ್ನಡ ನಾಡಿನ ಕನ್ನಡಿಗರ ಒಂದು ಬಂಗಾರದ ಬೆಸುಗೆಯಾಗಿ ಸಾರ್ಥಕ ಸೇವೆ ಮಾಡಲಿ"

–ಎಲ್. ಎಸ್. ಶೇಷಗಿರಿರಾವ್ (ಬೆನ್ನುಡಿಯಿಂದ)

*

"ಈ ಸಂಕಲನ ನಿಸ್ಸಂದೇಹವಾಗಿ ಒಂದು ಪರಾಮರ್ಶನ ಗ್ರಂಥ. ಕನ್ನಡ ಭಾಷೆ, ಸಾಹಿತ್ಯವನ್ನು ಒಟ್ಟಂದದಲ್ಲಿ ಹಿಡಿಯುವ ಪ್ರಯತ್ನ ಇಲ್ಲಿದೆ. ಚರಿತ್ರೆಯನ್ನು ಹೀಗೂ ರೂಪಿಸಬಹುದು ಎಂಬ ಸಾಧ್ಯತೆಯನ್ನು ಈ ಸಂಕಲನ ತೋರಿಸಿಕೊಡುತ್ತದೆ. ಕನ್ನಡ ಸಾಹಿತ್ಯರಂಗಕ್ಕೆ ಅಭಿನಂದನೆಗಳು."

–ನರಹಳ್ಳಿ ಬಾಲಸುಬ್ರಹ್ಮಣ್ಯ (ಮುನ್ನುಡಿಯಿಂದ)

4. ಬೇರು ಸೂರು (2013)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ವಸಂತ ಪ್ರಕಾಶನ, ಬೆಂಗಳೂರು.
ಪ್ರಧಾನ ಸಂಪಾದಕರು: ಗುರುಪ್ರಸಾದ್ ಕಾಗಿನೆಲೆ:

'ಬೇರು ಸೂರು' ಗ್ರಂಥದಲ್ಲಿ ಅನೇಕ ಕತೆಗಳಿವೆ, ವೈಚಾರಿಕ ಲೇಖನಗಳಿವೆ: ಕಾರ್ಪೊರೇಟ್ ಜಗತ್ತಿನಲ್ಲಿ ದುಡಿಯುವಾಗ ಗಳಿಸಿದ ಜ್ಞಾನ ಅನುಭವಗಳ ಚಿತ್ರಣವಿದೆ– ದೇವಾಲಯಗಳ ಪರಿಚಯವಿದೆ– ರಂಗಭೂಮಿಯ ಅನುಭವ ಕಥನವಿದೆ– ಒಟ್ಟು ಅಮೆರಿಕದಲ್ಲಿರುವ ಕನ್ನಡಿಗರ ಇಂದಿನ ಜೀವನದ, ಬಹುಮುಖಿಯಾದ ಪರಿಚಯವನ್ನು ಮಾಡಿಕೊಡುವ ವಿವಿಧ ಬರಹಗಳ ಜೇನುಗೂಡು ಈ ಬೇರು ಸೂರು. ನಮ್ಮವರು ಅಲ್ಲಿ ಕಟ್ಟಿಕೊಂಡು ಬಾಳುತ್ತಿರುವ ಸೂರಿನೊಳಗೆ ಹೊಕ್ಕು ಬರೋಣವೆಂದನ್ನಿಸುವಷ್ಟು ಗಮನಿಸಲೇಬೇಕಾದ ತೀರ ಉಪಯುಕ್ತವಾದ ಮಾಹಿತಿಕೋಶ ಇದಾಗಿದೆಯೆಂದು ನಾನಿದರ ಆದ್ಯಂತ ಕಣ್ಣಾಡಿಸಿದಾಗ ಅನ್ನಿಸಿತು. ನಾನು ಓದುವುದರಲ್ಲಿ ಬಹಳ ಹಿಂದೆ. ಆದರೆ ಇದರ ಪ್ರತಿಯೊಂದು ಲೇಖನವೂ ಓದಿಸಿಕೊಂಡು ಹೋಗಿದೆ. ಶ್ರೀಕಾಂತ ಬಾಬುರವರ ನೀಲಿ ಡಬ್ಬಿಯ ಶ್ರೀಖಂಡವು ನನ್ನ ನಿದ್ದೆಯನ್ನು ಕೆಡಿಸಿದ ಕಥೆ– ಅಮೆರಿಕದಲ್ಲಿ ಮಕ್ಕಳ ಬದುಕಿಗೆ ಕನ್ನಡಿ ಹಿಡಿಯುತ್ತದೆ. ಇದಕ್ಕೆ ಪೂರಕವಾದ ಬರವಣಿಗೆ ಎಚ್. ವೈ. ರಾಜಗೋಪಾಲರ 'ಹೊಸ ನೆಲದಲ್ಲಿ ಹೊಸ ಸಸಿಗಳು,' ಈ ಸಸಿಗಳ ಬೇರು ಮತ್ತು ಸೂರು– ಎರಡೂ ಅಮೆರಿಕವೇ. Gene ಮಾತ್ರ ಕನ್ನಡದ್ದು. ತಮ್ಮ 'ಜೀನ್' ಎರಡೋ ಮೂರೋ ತಲೆಮಾರಿನಲ್ಲಿ ಮರೆತೇಹೋಗುವ ಸಾಧ್ಯತೆಯೂ ಇದೆ. ಕನ್ನಡಿ ನೋಡಿಯೇ ಇದರ ಮೂಲವನ್ನು ತಿಳಿದುಕೊಳ್ಳಬೇಕಾದೀತು. ಕನ್ನಡ ನಾಡಿನಿಂದ ಅಮೆರಿಕ ಪ್ರವೇಶಿಸಿ ಅಲ್ಲಿಯ ಸೂರಿನೊಳಗೆ ಬದುಕಲು ಬೇಕಾದ ಸಿದ್ಧತೆಯ ಬಗ್ಗೆ ನಳಿನಿ ಮಯ್ಯರ ಸುಂದರ ಚಿತ್ರಣ, ನಾಗ ಐತಾಳರ ಕಾದಂಬರಿಯನ್ನು ನೆನಪಿಸುವಂಥದ್ದು. ಕಾಗಿನೆಲೆಯವರು ಅಮೆರಿಕದಲ್ಲೇ ನೆಲೆಯನ್ನು ಕಂಡುಕೊಂಡ ಒಬ್ಬ ಶ್ರೇಷ್ಠ ಬರಹಗಾರನೆಂದು ಅವರ 'ನಾನು–ನೀನು' ಓದಿದಾಗ ತಿಳಿಯಿತು. ಶ್ರೀವತ್ಸರು ತನ್ನ ಬರಹಗಳ ಮೂಲಕ ಕರ್ನಾಟಕದಲ್ಲೂ ಪರಿಚಿತರು. ಗುಂಡೂ ಶಂಕರರಲ್ಲೂ ಒಬ್ಬ ಉತ್ತಮ ಬರಹಗಾರನನ್ನು ನಾನು ಗುರುತಿಸಿದ್ದೇನೆ. 'ಅಮೆರಿಕ– ಒಂದು ವಿಶಿಷ್ಟ ರಾಷ್ಟ್ರವೆ?'– ಈ ಲೇಖನ ಒಬ್ಬ ತನ್ನನ್ನು ತಾನೇ ತಿಳಿಯಬಯಸುತ್ತಿರುವ, ಅಮೆರಿಕಕ್ಕೇ ಹೋಗಿ ಬಾಳುವವನ ಒಳಯೋಚನೆಗಳನ್ನು ಬಿಚ್ಚಿಡುತ್ತದೆ. ವಿಮಲಾ ರಾಜಗೋಪಾಲರ ಉಸಿರಿನಲ್ಲೇ ಸಂಗೀತವಿದೆ. ಸುಪ್ತದೀಪ್ತಿಯವರ ವಲಸೆ ವೃತ್ತದ ವರಸೆಯೊಳಗೆ ಅವರ ಸಮ್ಮೋಹನಗೊಳಿಸುವ ಭಾವಗೀತೆಗಳಿಗಿಂತ ಭಿನ್ನವಾದ ಗದ್ಯವನ್ನು ಬರೆಯುವ ಸಾಮರ್ಥ್ಯ ಕಾಣುವ ಅವಕಾಶ. ಮೀರಾ ರಾಜಗೋಪಾಲರು ಒಬ್ಬ ಗಮನಾರ್ಹ ಲೇಖಕಿಯಾಗಿ ಇಲ್ಲಿ ಎದ್ದು ಕಾಣುತ್ತಾರೆ. ಇದೇ ರೀತಿ ಪಟ್ಟಿ ಮಾಡಲು, ಎಚ್. ಕೆ. ಚಂದ್ರಶೇಖರ್, ವೈಶಾಲಿ ಹೆಗಡೆ, ತ್ರಿವೇಣಿ ಶ್ರೀನಿವಾಸರಾವ್, ವತ್ಸ ಕುಮಾರ್, ಎಸ್. ಎನ್. ಶ್ರೀಧರ್, ಕೃಷ್ಣರಾಜು, ಕೆ. ಜಿ. ವಿ. ಕೃಷ್ಣ– ಹೀಗೆ ಎಲ್ಲರ ಬಗ್ಗೆಯೂ ನನ್ನ ಮೆಚ್ಚುಗೆಯನ್ನು ಪ್ರಕಟಿಸಬೇಕಾಗುತ್ತದೆ. ಸಮ್ಮೇಳನಗಳು

ಇಂತಹ ಕೃತಿಯನ್ನು ಹೊರತಂದಲ್ಲಿ ಅವು ಚಿರಸ್ಮರಣೀಯವಾಗುತ್ತವೆ; ಹಕ್ಕಿಗಳು ಒಂದು ಒಳ್ಳೆಯ ಹಣ್ಣಿನ ಮರದ ಹಣ್ಣುಗಳನ್ನು ಕಚ್ಚಿಕೊಂಡು ಗಗನಕ್ಕೆ ಹಾರಿ ಬೀಜ ಪ್ರಸಾರ ಮಾಡಿದಂತೆ.

–ಪ್ರೊ. ಶ್ರೀಪತಿ ತಂತ್ರಿ

*

'ಬೇರು ಸೂರು' ಕೃತಿಯನ್ನು ಬಂದ ಕೂಡಲೇ ಆರಂಭಿಸಿ......ಓದಲು ಆರಂಭಿಸಿದ ಮೇಲೆ ನಿಲ್ಲಿಸಲು ಆಗಲಿಲ್ಲ. ಎಲ್ಲ ಲೇಖನಗಳೂ ಆಸಕ್ತಿದಾಯಕವಾಗಿವೆ. ಈ ಬರಹಗಳಿಗೆ ಕರ್ನಾಟಕದ ಹೊರಗಿನವರು, ಅಮೆರಿಕಾ ದೇಶದಲ್ಲಿ ಕನ್ನಡದ ಜೀವಂತ ಪರಿಸರದಿಂದ ದೂರ ಇರುವವರು, ಪಾಪ, ಅವರು ಕನ್ನಡದಲ್ಲಿ ಬರೆದದ್ದೇ ಹೆಚ್ಚು ಎಂಬ ಯಾವ ರಿಯಾಯಿತಿಯೂ ಬೇಕಾಗಿಲ್ಲ. ಪ್ರಬುದ್ಧ ಚಿಂತನೆ, ಪ್ರಬುದ್ಧ ಬರವಣಿಗೆ. ಇಲ್ಲಿಯವರು ಬರೆಯಲಾರದಂಥ ಅನೇಕ ವಿಷಯಗಳು ಇಲ್ಲಿ ಬಂದಿವೆ. ಇಲ್ಲಿಂದ ಅಲ್ಲಿಗೆ ಹೋದವರ ಆರಂಭದ ಪರದೇಶಿತನ, ಹೊಂದಿಕೊಂಡ ಮೇಲಿನ ನಿರಾಳತೆ, ಬಿಟ್ಟುಬಂದಿದ್ದಕ್ಕಾಗಿ ಒಂದು ಬಗೆಯ ವಿಷಾದ, ಅದನ್ನು ಗೆಲ್ಲುವ ಹುನ್ನಾರ, ಅಲ್ಲೇ ನಿಲ್ಲಬೇಕಾದ ಅನಿವಾರ್ಯತೆ, ತಿರುಗಿ ಬಂದವರ ತುಮುಲ– ಇತ್ಯಾದಿಗಳೆಲ್ಲ ಈ ಬರಹಗಳಲ್ಲಿ ಬಹಳ ಚೆನ್ನಾಗಿ ಬಂದಿವೆ. ಸೈಕಾಲಜಿಯ ದೃಷ್ಟಿಯಿಂದ ಈ ಲೇಖನಗಳನ್ನು ವಿಶ್ಲೇಷಿಸಿದರೆ ಕುತೂಹಲಕರವಾದ ಒಳನೋಟಗಳು ಸಿಗಬಹುದು. ಅಲ್ಲಿಗೆ ಹೋಗುವ ಯಾರಾದರೂ ತರುಣರು ಸಂಶೋಧನೆಗೆ ಈ ವಿಷಯ ಆರಿಸಿಕೊಳ್ಳಬಹುದು. ಇದೆಲ್ಲದರ ನಡುವೆ ಅಲ್ಲಿ ಕನ್ನಡತನವನ್ನು ಉಳಿಸಿಕೊಳ್ಳುವ ಪ್ರಯತ್ನಗಳನ್ನು ನೋಡಿ ನನಗೆ ಬಹಳ ಎಂದರೆ ಬಹಳ ಸಂತೋಷವಾಯಿತು. ಅನೇಕ ಲೇಖನಗಳಲ್ಲಿ ಇಂಥ ಪ್ರಸ್ತಾಪಗಳಿವೆ. ಮುಂದಿನ ಪೀಳಿಗೆಗೆ ಕನ್ನಡ ಹೇಗೂ ದಾಟಲಾರದು. ಇಲ್ಲಿಂದ ನಡೆದಿರುವ ಬಹಳ ದೊಡ್ಡ ವಲಸೆಯನ್ನು ನೋಡಿದರೆ ಹೊಸದಾಗಿ ಹೋಗುವವರಿಗಾದರೂ ಅಲ್ಲಿಯ ಕನ್ನಡ ಸಂಘ–ಸಂಸ್ಥೆಗಳು ಆಸರೆಯಾದಾವು. ಇಂದಿನ ಇಂಗ್ಲಿಷ್ ಮೀಡಿಯಂನ ಭರಾಟೆಯನ್ನು ನೋಡಿದರೆ ಇಲ್ಲಿಂದ ಹೋಗುವವರು ಕನ್ನಡವನ್ನು ಇಲ್ಲೇ ಬಿಟ್ಟು ಹೋದಾರು ಎನಿಸುತ್ತದೆ. ಆದರೆ, ಮನೆಯಲ್ಲಾದರೂ ಕನ್ನಡ ಯಾಕೆ ಅಲ್ಲಿ ಉಳಿದಿಲ್ಲ ಎಂಬುದೊಂದು ಸೋಜಿಗ. ಎಲ್ಲ ಒತ್ತಡಗಳ ನಡುವೆಯೂ ಅನೇಕ ಸಮುದಾಯಗಳು ಹಾಗೆ ತಮ್ಮ ಭಾಷೆಗಳನ್ನು ಉಳಿಸಿಕೊಂಡಿವೆ– ಇಲ್ಲಿ ತುಳುವಿನಂತೆ. ಕನ್ನಡ ಯಾಕೆ ಅಲ್ಲಿ ಉಳಿಯುತ್ತಿಲ್ಲ? ಇರಲಿ. ಕನ್ನಡ ಸಾಹಿತ್ಯ ರಂಗಕ್ಕೆ ಹೋಗುವ ಅವಕಾಶ ಒಮ್ಮೆ ಬಂದಿತ್ತು, ವೀಸಾ ಸಿಗಲಿಲ್ಲ. ಅಲ್ಲಿಯ (ಕಸಾರಂನ) ಎಲ್ಲ ಸ್ನೇಹಿತರಿಗೂ ವಂದನೆಗಳು.

–ಪ್ರೊ. ಗಿರಡ್ಡಿ ಗೋವಿಂದರಾಜು, ಧಾರವಾಡ

*

'ಬೇರು ಸೂರು' ಪರಿಣಾಮಕಾರಿಯಾದ, ಅಷ್ಟೇ ಕಲಾತ್ಮಕವಾದ ಸಂಕಲನ. ಗುರುಪ್ರಸಾದರ ಮುನ್ನುಡಿ ಬಹಳ ಅರ್ಥಪೂರ್ಣವಾಗಿದೆ. ಲೇಖನಗಳು ಮನಸ್ಸು ತಟ್ಟುತ್ತವೆ. ನಿಮ್ಮೆಲ್ಲರ ಕರ್ತೃತ್ವಶಕ್ತಿ, ಬದ್ಧತೆ, ಪ್ರತಿಭೆಗಳು ನಿಜವಾಗಿ ಪ್ರಶಂಸನೀಯ. ಅಭಿನಂದನೆಗಳು.

–ಡಾ. ವೀಣಾ ಶಾಂತೇಶ್ವರ, ಧಾರವಾಡ

*

'ಬೇರು ಸೂರು' ತುಂಬ ಪ್ರೌಢವೂ ಆತ್ಮೀಯವೂ ವಿಚಾರ ಸೀಮೆಯನ್ನು ಹಲವಾರು ಗವಾಕ್ಷಿಗಳಿಂದ ನೋಡಬಲ್ಲ ಸಾಮರ್ಥ್ಯ ಉಳ್ಳವೂ ನೈಜ ಕಳಕಳಿಯವೂ ಆಗಿರುವುದು ನಿಜವಾಗಿ ಕನ್ನಡದ ನಿಲುವುಗಳನ್ನು ಎತ್ತರಿಸುವ ಸದ್–ಪ್ರಯತ್ನ ಎನ್ನಬಹುದಾದ ಸ್ವಾಗತಾರ್ಹ ಸಂಕಲನ. ಶಾಂತಾರಾಮ ಸೋಮಯಾಜಿಗಳು ನಮ್ಮ ಢೋಂಗಿ ಸಂಸ್ಕೃತಿಯನ್ನು ಬಿಚ್ಚಿಟ್ಟಿರುವ ರೀತಿ ಶಾಕ್ ಕೊಡುವಂಥದಾಗಿದೆ. ಎಲ್ಲರ ಬರಹಗಳಲ್ಲಿ ಶಬ್ದಸಿದ್ಧಿ, ನಿರೂಪಣ ಕೌಶಲ, ಮತ್ತು ಪ್ರಾಮಾಣಿಕ ಮಾನಸಿಕ ಒತ್ತಡಗಳನ್ನು ಕಾಣಬಹುದಾಗಿದೆ. 38 ಮಂದಿಯ ಬರಹಗಳಲ್ಲಿ ಮೂರನೆಯ ಒಂದು ಭಾಗವನ್ನು ಮಹಿಳೆಯರು ಹಂಚಿಕೊಂಡು ಸಮತೂಕದ ಬರಹಗಳನ್ನು ನೀಡಿದ್ದಾರೆ. ಯಾವ ದೃಷ್ಟಿಯಿಂದ ನೋಡಿದರೂ ಇದೊಂದು ಸಂಗ್ರಹಯೋಗ್ಯವಾದ ಬರಹಗಳ ಗುಚ್ಛವಾಗಿದೆ.

ಎಲ್ಲ ರಚಯಿತರಿಗೂ ಅವರ ಹಿಂದೆ ನಿಂತು ಬೆಂಬಲಿಸಿರುವ ಹಿರಿ–ಕಿರಿಯರಿಗೂ ನನ್ನ ಆತ್ಮೀಯ ನೆನಪುಗಳು.

–ಪ್ರೊ. ಅ. ರಾ. ಮಿತ್ರ, ಬೆಂಗಳೂರು

*

'ಬೇರು ಸೂರು' ಕುತೂಹಲಕಾರಿಯಾಗಿದೆ. ಆಸಕ್ತಿಯಿಂದ ಕಣ್ಣಾಡಿಸಿದೆ. ಹೊತ್ತಗೆಯ ವೈಶಿಷ್ಟ್ಯಕ್ಕೆ ಕುಂದಿಲ್ಲ. ಅಲ್ಪಾವಧಿಯಲ್ಲಾದರೂ ಆ ನಾಡಿನಲ್ಲಿ ಕೆಲಮಂದಿ ಸಹಜೀವಿಗಳೊಡನೆ ಭಾವನೆಗಳನ್ನು ಹಂಚಿಕೊಂಡ ನೆನಪು ಸದಾ ನನ್ನನ್ನು ಕಾಡುತ್ತಿರುವುದರಿಂದ ಬರಹಗಳ ಅನೇಕ ಸಾಲುಗಳು ಮನಸ್ಸನ್ನು ತಟ್ಟಿದವು. 'ವಲಸೆ' ವ್ಯವಹಾರವನ್ನು ಮೀರಿ ಅಂತರಂಗದಲ್ಲಿ ಭಾವನೆಗಳ ಮೊಟ್ಟೆಗೆ ಕಾವು ಕೊಡುವಂತೆ ಮೂಡಿ ಬಂದುದನ್ನೆಲ್ಲ ಓದಿ ಆಸ್ವಾದಿಸಿದೆ. ಅರ್ಬುದದಿಂದ ಹಿಡಿದು ಹಿಂದೂ ದೇವಾಲಯದ ತನಕ 'ಕಾಯ' ಕಾಯುವ ಕನಸುಗಳ ಅನಾವರಣ ಈ ಬೇರು ಸೂರು. ಸೂರು ನೂರಾಗಿಸಿದ ನಿಮಗೆಲ್ಲರಿಗೆ ನಮೋ ಎನ್ನುವೆ.

–ಉದ್ಯಾವರ ಮಾಧವ ಆಚಾರ್ಯ, ಉಡುಪಿ

*

'ಬೇರು ಸೂರು' ಓದಿದೆ. ದೂರದ ನಾಡಿನಲ್ಲಿದ್ದು ಕನ್ನಡದಲ್ಲಿ ಬರೆಯುವ ನಿಮ್ಮ ಪ್ರಯತ್ನ ಸ್ತುತ್ಯರ್ಹವಾದದ್ದು. ನಿಮ್ಮೆಲ್ಲರನ್ನೂ ಅಭಿನಂದಿಸುತ್ತೇನೆ.

–ಎಸ್. ಎಲ್. ಭೈರಪ್ಪ, ಮೈಸೂರು

5. ಮಥಿಸಿದಷ್ಟೂ ಮಾತು (2011)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು.
ಪ್ರಧಾನ ಸಂಪಾದಕರು: ತ್ರಿವೇಣಿ ಶ್ರೀನಿವಾಸರಾವ್.

'ಅಮೆರಿಕೆಯಲ್ಲಿ ಬಿಡಾರ ಹೂಡಿರುವ ಕನ್ನಡ ಪರಿಸರದ ಸ್ಥಾಯೀ ಮತ್ತು ಸಂಚಾರೀ ಭಾವಗಳ, ವೈವಿಧ್ಯಪೂರ್ಣ ಆಧುನಿಕ ಅಭಿವ್ಯಕ್ತಿಯ ವಿಶಿಷ್ಟ ಸೊಲ್ಲುಗಳ ಸಂಕಲನ ಇದು. ಕಾವ್ಯದ ಧ್ವನಿಶಕ್ತಿಯ ಜೊತೆಗೆ ಕಥನದ ಕುತೂಹಲವನ್ನೂ ಹೊಂದಿರುವ ಲಲಿತ ನಿಬಂಧಗಳು, ತಮ್ಮ ಅನುಭವಜನ್ಯ ವಿವರಗಳಲ್ಲಿ ಮೈದಾಳುತ್ತಲೇ, ಅದರಾಚೆಗೂ ಚಿಂತನಶೀಲವಾಗಿ ರೆಕ್ಕೆ ಬಿಚ್ಚುವ ರೀತಿ ಭಾವೋದ್ದೀಪಕವಾಗಿದೆ. ಇಲ್ಲಿನ ಹೆಚ್ಚಿನ ಬರಹಗಳು ಕನ್ನಡ ಸಂವೇದನೆಯನ್ನು ಹಿಗ್ಗಿಸುವಷ್ಟು ಸತ್ವಶಾಲಿಯಾಗಿವೆ.'

–ಜಯಂತ ಕಾಯ್ಕಿಣಿ (ಬೆನ್ನುಡಿಯಲ್ಲಿ)

*

'ಈ ಸಂಕಲನದಲ್ಲಿರುವ ಬರಹಗಳನ್ನು ಸಂಪಾದಕರು ಸಲ್ಲಾಪ ಹರಟೆ ಚಿಂತನೆ ಎಂದು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಆದರೆ ಅನುಭವ ಮತ್ತು ಚಿಂತನಾ ಪ್ರಧಾನವಾದ ಈ ಬರಹಗಳನ್ನು ಒಟ್ಟಾರೆಯಾಗಿ ಪ್ರಬಂಧಗಳು ಎನ್ನಬಹುದು. ಈ ಪ್ರಬಂಧಗಳನ್ನು ಓದುತ್ತ ನನಗೆ ಅಮೆರಿಕ ಕನ್ನಡಿಗರ ಬಾಳಿನ ಒಂದು ಮುಖದ ದರ್ಶನವಾದಂತಾಯಿತು. ಬೇರೆಬೇರೆ ಕ್ಷೇತ್ರದಲ್ಲಿ ಹಾಗೂ ಜ್ಞಾನಶಿಸ್ತಿನಲ್ಲಿ ಕೆಲಸ ಮಾಡುವ ಜನರು ಕನ್ನಡದೊಳಗೆ ಬರೆಯುವುದರಿಂದ ಕನ್ನಡ ಬರಹಕ್ಕೆ ಹೊಸಶಕ್ತಿಯ ಆವಾಹನೆಯಾಗುತ್ತದೆ ಎಂದು ನಂಬಿದವನು ನಾನು. ಈ ಬರಹಗಳನ್ನು ಓದಿದ ಮೇಲೆ, ಬೇರೆಬೇರೆ ದೇಶಗಳಲ್ಲಿ ಇರುವ ಕನ್ನಡಿಗರು ಬರೆದಾಗಲೂ ಕನ್ನಡಕ್ಕೆ ಹೊಸ ಆಯಾಮದ ಕೂಡಿಕೆಯಾಗುತ್ತದೆ ಎಂದು ಅನಿಸುತ್ತಿದೆ. ಈ ಬರಹಗಳ ಹಿನ್ನೆಲೆಯಲ್ಲಿ ಅಮೆರಿಕಕ್ಕೆ ಹೋಗಿಬಂದವರು ಬರೆದ ಅನೇಕ ಪ್ರವಾಸಕಥನಗಳ ಮಿತಿಯೂ ಹೊಳೆಯುತ್ತಿದೆ.'

–ರಹಮತ್ ತರಿಕೆರೆ

*

6. ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು... (2009)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು.
ಪ್ರಧಾನ ಸಂಪಾದಕರು: ಎಂ. ಎಸ್. ನಟರಾಜ್

'ಕಾದಂಬರಿ ಲೋಕದಲ್ಲಿ...' ಬಹಳ ವಿಶಿಷ್ಟವಾದ ಪ್ರಯತ್ನ. ನಾನು 1987ರಿಂದ ನೋಡುತ್ತಿದ್ದೇನೆ. ಅಮೆರಿಕದ ಕನ್ನಡಿಗರು ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ. ಇಂಥ ಪ್ರಯತ್ನವನ್ನು ನೋಡಿದಾಗ... (ಅವರು) ಕನ್ನಡದ ಕ್ಷಿತಿಜವನ್ನು ಹೆಚ್ಚಿಸಿದ್ದಾರೆನಿಸುತ್ತದೆ...

ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪ

–('ಅಭಿನವ'ದ ಶ್ರೀ ರವಿಕುಮಾರ್ ಅವರೊಂದಿಗೆ ನಡೆಸಿದ ದೂರವಾಣಿ ಸಂಭಾಷಣೆಯಲ್ಲಿ)

ಈ ಪುಸ್ತಕದಲ್ಲಿ ಎದ್ದು ಕಾಣುವ ಒಂದು ವೈಶಿಷ್ಟ್ಯವೆಂದರೆ ಇಲ್ಲಿ ಓದಿಗಾಗಿ ಆಯ್ದುಕೊಂಡ ಎಲ್ಲ ಕಾದಂಬರಿಗಳು... ಕಳೆದ ಮೂರು ದಶಕಗಳಲ್ಲಿ ಪ್ರಕಟವಾದವು. ಇವುಗಳಲ್ಲಿ ಬಹಳಷ್ಟು ಕೃತಿಗಳ ಬಗ್ಗೆ ವಿಶೇಷ ಚರ್ಚೆ ನಡೆದಿಲ್ಲ. ಅಷ್ಟೇ ಮಹತ್ವದ ಇನ್ನೊಂದು ವೈಶಿಷ್ಟ್ಯವೆಂದರೆ ಈ ಪುಸ್ತಕಕ್ಕೆ ಸೇರಿದ ಲೇಖನಗಳನ್ನು ಬರೆದವರಲ್ಲಿ ಹೆಚ್ಚಿನವರು ಸಾಹಿತ್ಯ ಕ್ಷೇತ್ರಕ್ಕೆ ಹೊರಗಿನವರು... ಸಾಹಿತ್ಯೇತರ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದವರು, ಕನ್ನಡ ಓದುಗರಿಗೆ ಹೊಸಬರು. ಆದರೆ ಚೆನ್ನಾಗಿ ಬರೆಯಬಲ್ಲವರು. ಇವರನ್ನು ಒಳಗೊಳ್ಳುವ ಮೂಲಕ ಪುಸ್ತಕಕ್ಕೆ ತಾಜಾತನ ಹಾಗೂ ವೈವಿಧ್ಯ ಬಂದಿದೆ... ಈ ಪುಸ್ತಕದ ಲೇಖನಗಳಲ್ಲಿ ಹೆಚ್ಚಿನವು ಪರಿಚಯಾತ್ಮಕ ಬರಹಗಳು... ಆದರೆ ಕೃತಿಗಳೊಡನೆ ಇನ್ನೂ ಹೆಚ್ಚು ಗಂಭೀರವಾದ ತೊಡಗಿಕೊಳ್ಳುವಿಕೆಯನ್ನು ತೋರುವ ಹಲವಾರು ಲೇಖನಗಳೂ ಈ ಪುಸ್ತಕದಲ್ಲಿವೆಯೆನ್ನುವುದು ಮಹತ್ವದ್ದಾಗಿದೆ... ಆವರಣದ ವಿಶ್ಲೇಷಣೆ ಭೈರಪ್ಪನವರ ಈ ಕಾದಂಬರಿಯನ್ನು ಕುರಿತು ಬಂದ ಅತ್ಯುತ್ತಮ ಲೇಖನಗಳಲ್ಲೊಂದಾಗಿದೆ...

–ಡಾ. ಜಿ. ಎಸ್. ಆಮೂರ (ಮುನ್ನುಡಿಯಲ್ಲಿ)

*

ಕನ್ನಡ ಸಾಹಿತ್ಯ ರಂಗ... ಕನ್ನಡದ ಕೆಲ ಮುಖ್ಯ ಕಾದಂಬರಿಗಳ ಕುರಿತು ಇಲ್ಲಿ ಅವಲೋಕನ ನಡೆಸಿದೆ. ಒಮ್ಮೆಗೇ ಒಟ್ಟಿಗೇ ತೆರೆದುಕೊಂಡ ಈ ರೀತಿಯ ಕಾದಂಬರೀ ಅವಲೋಕನವೂ ಚರ್ಚೆಯೂ ಕನ್ನಡ ಸಾಹಿತ್ಯದ ಮಟ್ಟಿಗೆ ಪ್ರಾಯಶಃ ಪ್ರಪ್ರಥಮ ಎನ್ನಿಸುತ್ತದೆ... 'ಸಹೃದಯ ವಿಮರ್ಶೆ' ಎಂಬುದಕ್ಕೆ ಈ ಹೊತ್ತಗೆ ಒಂದು ಉತ್ತಮ ಮಾದರಿಯೆನ್ನಬಹುದು. ಇಂಥ ಸಾರ್ಥಕ ಹೊಳವಿಗಾಗಿ ಅಮೆರಿಕದ ಕನ್ನಡ ಸಾಹಿತ್ಯ ರಂಗಕ್ಕೆ, ಅದರ ರೂವಾರಿಗಳಿಗೆ ನಮ್ಮೆಲ್ಲರ ಅಭಿನಂದನೆ ಜೊತೆಗೆ ಕೃತಜ್ಞತೆಯೂ ಸಲ್ಲಲೇಬೇಕು.

–ವೈದೇಹಿ (ಬೆನ್ನುಡಿಯಲ್ಲಿ)

7. ನಗೆಗನ್ನಡಂ ಗೆಲ್ಗೆ! (2007)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು.
ಸಂಪಾದಕರು: ಎಚ್. ಕೆ. ನಂಜುಂಡಸ್ವಾಮಿ ಮತ್ತು ಎಚ್. ವೈ. ರಾಜಗೋಪಾಲ್

'...ಒಂದು ಸಾಹಿತ್ಯಕ ಚರಿತ್ರೆ ಮತ್ತು ಸಾಹಿತ್ಯದ ಹಾಸ್ಯ ಸಂಕಲನ ಎರಡೂ ಒಂದೆಡೆ ಸೇರಿ ರಮ್ಯಲೋಕವನ್ನು ಪ್ರಕಟಿಸಿಬಿಟ್ಟಿದ್ದೀರಿ...'

–ಪ್ರೊ. ಜಿ. ವೆಂಕಟಸುಬ್ಬಯ್ಯ
('ಅಭಿನವ'ದ ಶ್ರೀ ರವಿಕುಮಾರ್ ಅವರಿಗೆ ಬರೆದ ಪತ್ರದಲ್ಲಿ)

*

'...ಈ ಕೃತಿಯಲ್ಲಿ ನಗೆಗನ್ನಡ ನಲಿದಿದೆ, ವಿಜೃಂಭಿಸಿದೆ. ಕನ್ನಡದ ಹಾಸ್ಯಾಸಕ್ತರೆಲ್ಲರೂ ಅಭಿಮಾನದಿಂದ ತಮ್ಮ ಮೆಚ್ಚಿನ ಹಿರಿಕಿರಿಯ ಹಾಸ್ಯಸಾಹಿತಿಗಳನ್ನು ಓದಿ, ಅವರ ಕುರಿತು

ಪ್ರಬುದ್ಧ ಪರಿಚಯವನ್ನು ಮಾಡಿಕೊಂಡು ಕೃತಾರ್ಥಭಾವ ತಾಳುವಂತೆ ಪುಸ್ತಕ ಹೊರಬಂದಿದೆ... ಹೊರನಾಡ ಬಂಧುಗಳ ಕನ್ನಡ ಪ್ರೇಮ ಅನುಕರಣೀಯವಾದುದು...'

–ಭುವನೇಶ್ವರಿ ಹೆಗಡೆ (ವಾರ್ತಾ ಭಾರತಿ ಪತ್ರಿಕೆಯ ಅಂಕಣದಲ್ಲಿ)

*

8. ಆಚೀಚೆಯ ಕಥೆಗಳು (2005)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ಅಭಿನವ ಪ್ರಕಾಶನ, ಬೆಂಗಳೂರು.
ಪ್ರಧಾನ ಸಂಪಾದಕರು: ಗುರುಪ್ರಸಾದ್ ಕಾಗಿನೆಲೆ

'ಆಚೀಚೆಯ ಕಥೆಗಳು' ಕನ್ನಡದಲ್ಲಿ ನಡೆದ ಇತ್ತೀಚಿನ ಆಕರ್ಷಕ ಪ್ರಯೋಗವಾಗಿದೆ. ತಾಯಿನೆಲದಿಂದ ದೂರವಾದ– ಕನ್ನಡದ ಜೀವಂತ ಸಂಪರ್ಕ ಅಸಾಧ್ಯವಾದ– ಜಾಗದಲ್ಲಿ ಕುಳಿತು ಕೇವಲ ತಮ್ಮ ಮಾತೃಭಾಷೆಯ ಪ್ರೀತಿಗಾಗಿ, 'ಎಂದೆಂದಿಗೂ ಕನ್ನಡವಾಗಿರುವ' ಹಠದಲ್ಲಿ ರಚಿಸಿದ ಈ ಕತೆಗಳು ಕನ್ನಡ ಕಥಾಸಾಹಿತ್ಯಕ್ಕೆ ಕಡಲಾಚೆಯ ಕನ್ನಡಿಗರಿತ್ತ ಅಪೂರ್ವ ಕೊಡುಗೆಯಾಗಿವೆ...'

–ಯಶವಂತ ಚಿತ್ತಾಲ (ಬೆನ್ನುಡಿಯಿಂದ)

*

9. ಕುವೆಂಪು ಸಾಹಿತ್ಯ ಸಮೀಕ್ಷೆ (2004)

ಪ್ರಕಾಶನ: ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ. ಹಾಗೂ ವಸಂತ ಪ್ರಕಾಶನ, ಬೆಂಗಳೂರು.
ಪ್ರಧಾನ ಸಂಪಾದಕರು: ಆಹಿತಾನಲ

'...ಅನಿವಾಸಿ ಕನ್ನಡಿಗರ ಈ ಕೊಡುಗೆ ಕುವೆಂಪು ಅವರಿಗೆ ಅರ್ಪಿಸುವ ಒಂದು ದೊಡ್ಡ ನಮನ. ಕರ್ನಾಟಕದ ಸಮಕಾಲೀನ ಲೇಖಕರ ಮಟ್ಟಕ್ಕೇನೂ ಕಮ್ಮಿಯಿಲ್ಲದ ಲೇಖನಗಳು ಇಲ್ಲಿ ಹೊರಬಂದಿವೆ ಎನ್ನಲು ಹೆಮ್ಮೆಯಾಗುತ್ತದೆ.'

–ಪ್ರಭುಶಂಕರ

* * *

ಕೃಷ್ಣಕಥನ(ಶ್ರೀಕೃಷ್ಣಆಲನಹಳ್ಳಿಸಮಗ್ರಸಾಹಿತ್ಯಅಧ್ಯಯನ)	ಟಿ.ಪಿ.ಅಶೋಕ	80/-
ದೇವನೂರುಕಥನ(ದೇವನೂರುಮಹಾದೇವಸಮಗ್ರಸಾಹಿತ್ಯಅಧ್ಯಯನ)	ಟಿ.ಪಿ.ಅಶೋಕ	75/-
ನ್ಯಾಯನಿಷ್ಠುರಿಗಳಜತೆಯಲ್ಲಿ(15ಮಾತುಕತೆಗಳು)	ರಹಮತ್‌ತರೀಕೆರೆ	300/-
ಶಾಸನಅಧ್ಯಯನ(ಕೆಲಹೆಜ್ಜೆಗುರುತುಗಳು)	ಎಚ್.ಎಸ್.ಗೋಪಾಲರಾವ್	250/-
ಮೃಗಶಿರ(ಕಾದಂಬರಿ)	ಶ್ರೀಧರಬಳಗಾರ	150/-
ಕಾಲಉರುಳಿಉಳಿದುದುನೆನಪಷ್ಟೇ!	ನಾಗಐತಾಳ(ಆಹಿತಾನಲ)	250/-
ಅಸ್ಮಿತೆ(ಕತೆಗಳು)	ಕೃಷ್ಣಮೂರ್ತಿಚಂದರ್	150/-
ವಿಸರ್ಜನೆ(ಕವನ ಸಂಕಲನ)	ಅರವಿಂದ	125/-
ದ್ಯಾವಾಪೃಥಿವೀ (ಕವನಸಂಕಲನ)	ವಿ.ಕೃ.ಗೋಕಾಕ್	75/-
ಸಿಗ್ಮಂಡ್‌ಫ್ರಾಯ್ಡ್(ಜೀವನಮತ್ತುಸಿದ್ಧಾಂತಗಳು)	ಎಂ.ಬಸವಣ್ಣ	150/-
ಸಮುದ್ರದೀಚೆಯಿಂದ(ಪ್ರವಾಸಕಥನ)	ವಿ.ಕೃ.ಗೋಕಾಕ್	100/-
ಆನೆಕಥೆ	ನಾಗರಾಜ್‌ನವೀಮನೆ	50/-
ಯಕ್ಷಗಾನಜ್ವಾಲಾಪ್ರತಾಪ	ಹೊಸ್ತೋಟಮಂಜುನಾಥಭಾಗವತ	50/-
ಯಕ್ಷಗಾನಲೀಲಾವತಿಪರಿಣಯ	ಮೂಲಕತೆ:ಮಹಾದೇವಯಂಕಹಳ್ಳೇರ್	
	ಯಕ್ಷರೂಪ:ಹೊ.ಮಂಜುನಾಥಭಾಗವತ	50/-
ಬಾಕುವೆಂಪುದರ್ಶನಕೆ(ಕುವೆಂಪುಸಮಸ್ತಸಾಹಿತ್ಯಶೋಧ)	ನರಹಳ್ಳಿಬಾಲಸುಬ್ರಹ್ಮಣ್ಯ	750/-
ಮೋದಾಳಿ (ನಾಟಕ)	ಪಿ.ಚಂದ್ರಿಕಾ	75/-
ಆನಂದಾವಲೋಕನ(ಮಕ್ಕಳಸಾಹಿತ್ಯಕೆಲನುಡಿಚಿತ್ರಗಳು)	ಸಂ:ಕೆ.ಶಿವಲಿಂಗಪ್ಪಹಂದಿಹಾಳು	375/-
ಸುತ್ತುವಗ್ರಹಗಳಿಂದಚಲಿಸುವವಿಗ್ರಹಗಳವರೆಗೆ(ವಿಜ್ಞಾನ–ಸಾಹಿತ್ಯಅಂತರ್‌ಶಿಸ್ತೀಯತೆ)	ಸಂ.ನರಹಳ್ಳಿಬಲಸುಬ್ರಹ್ಮಣ್ಯ	200/-
ಮಾತುತಲೆಎತ್ತಿದಬಗೆ(ಭಾರತೀಯಸಮಾಜಕ್ಕೆಪ್ರತಿಸ್ಪಂದನೆ)	ಸಂ:ನ.ರವಿಕುಮಾರ	125/-
ನನ್ನದೊಂದುಕನಸಿದೆ(ಮಾತುಗಳಲ್ಲಿಮಿಡಿದಮಾನವೀಯತೆವಿಶ್ವಾತ್ಮಕನೋಟ)	ಸಂ:ನ.ರವಿಕುಮಾರ	75/-
ಹೊ.ಮಂಜುನಾಥಭಾಗವತರಚಿತ್ರಪಟರಾಮಾಯಣ	ಸಂ:ಪೃಥ್ವಿರಾಜಕವತ್ತಾರು	100/-
ಕಲೆಯ ನೆಲೆ	ವಿ.ಕೃ.ಗೋಕಾಕ್	75/-
ಸೌಂದರ್ಯಮೀಮಾಂಸೆ	ವಿ.ಕೃ.ಗೋಕಾಕ್	75/-
ಸಾಹಿತ್ಯದಲ್ಲಿಪ್ರಗತಿ	ವಿ.ಕೃ.ಗೋಕಾಕ್	100/-
ಲೈಂಗಿಕಜಾತಕ(ಕಾದಂಬರಿ)	ಕೆ.ಸತ್ಯನಾರಾಯಣ	150/-
ಮಹಾಸತಿಆಚರಣೆ(ಒಂದುಅಧ್ಯಯನ)	ಬಸವರಾಜಕಲ್ಗುಡಿ	500/-
ಮುಗ್ಧ–ಪ್ರಬುದ್ಧ(ಕಾದಂಬರಿಓದುವಾಗ,ಬರೆಯುವಾಗನಮಗೇನಾಗುತ್ತದೆ)	ಮೂಲ:ಓರ್ಹಾನ್‌ಪಮುಕ್,	
	ಅನು:ಓ.ಎಲ್.ನಾಗಭೂಷಣಸ್ವಾಮಿ	150/-
ಹಿತ್ತಲಜಗತ್ತು(ಲಲಿತಪ್ರಬಂಧಗಳು)	ರಹಮತ್‌ತರೀಕೆರೆ	200/-
ನವ್ಯತೆ	ವಿ.ಕೃ.ಗೋಕಾಕ್	175/-
ಸಮುದ್ರದಾಚೆಯಿಂದ(ಪ್ರವಾಸಕಥನ)	ವಿ.ಕೃ.ಗೋಕಾಕ್	200/-
ಜನ್ನನಯಶೋಧರಚರಿತೆ(ತಿಳಿಗನ್ನಡಅವತರಣ)	ಎಚ್.ಎಸ್.ವೆಂಕಟೇಶಮೂರ್ತಿ	150/-
ಅವ್ಯಯಕಾವ್ಯ	ಕೆ.ವಿ.ತಿರುಮಲೇಶ್	275/-
ಕುವೆಂಪುದರ್ಶನಮೀಮಾಂಸೆ	ನರಹಳ್ಳಿಬಾಲಸುಬ್ರಹ್ಮಣ್ಯ	100/-
ಇಹದಪರಿಮಳದಹಾದಿ(ಕೆ.ಎಸ್.ನ.ಜೀವನಮತ್ತುಸಾಹಿತ್ಯಕುರಿತಮಹಾಪ್ರಬಂಧ)	ನರಹಳ್ಳಿಬಾಲಸುಬ್ರಹ್ಮಣ್ಯ	300/-
ರೂವಾರಿ(ಕನ್ನಡನಾಡಿನವಾಸ್ತು–ಶಿಲ್ಪಿಗಳಚಾರಿತ್ರಿಕಹಿನ್ನೆಲೆ)	ಷ.ಶೆಟ್ಟರ್	350/-
ಕರಗಿಸುವಕಡಾಯಿ...ಕೋಸುಂಬರಿಕುಕ್ಕೆ(ಪ್ರಬಂಧಗಳು)	ಮೈ.ಶ್ರೀ.ನಟರಾಜ	350/-
ಪ್ರಗತಿಶೀಲತೆ	ಎಚ್.ಎಸ್.ರಾಘವೇಂದ್ರರಾವ್	150/-
ದೇಹದನಂಟಿನತುದಿಯಪ್ರೇಮದಹೂ	ಪಿ.ಚಂದ್ರಿಕಾ,ಡಿ.ಸಿ.ಗೀತಾ	20/-
ಸಿನಿಮಾಯಾನ(ಕನ್ನಡಚಿತ್ರರಂಗ75:ಒಂದುಫ್ಲಾಷ್‌ಬ್ಯಾಕ್)	ಕೆ.ಪುಟ್ಟಸ್ವಾಮಿ	375/-
ಮರುಕಳಿಸಿದಮಾರ್ದವತೆ(ಎಂ.ಗೋಪಾಲಕೃಷ್ಣಅಡಿಗ–ಕೆಲವುಸಂವೇದನೆಗಳು)	ಕೆ.ಸತ್ಯನಾರಾಯಣ	50/-
ಕರ್ನಾಟಕ–ಬಹುತ್ವದಆಯಾಮಗಳು	ಷ.ಶೆಟ್ಟರ್	75/-
ಅನುರೂಪ(ಲೇಖನಗಳು)	ಶ್ರೀಧರಹೆಗಡೆಭದ್ರನ್	200/-
ಸಾಹಿತ್ಯಚಳುವಳಿಗಳು(ಆಯ್ದಲೇಖನಗಳು)	ಸಂ:ಶ್ರೀಧರಹೆಗಡೆಭದ್ರನ್	100/-
ದಿಯಂಗ್‌ಸೈಂಟಿಸ್ಟ್(ಮಕ್ಕಳಿಗಾಗಿಕಾದಂಬರಿ)	ಅನು:ಕೆ.ಶಿವಲಿಂಗಪ್ಪಹಂದಿಹಾಳು	50/-
ಓಡಿಹೋದಹುಡುಗ(ಮಕ್ಕಳಿಗಾಗಿಕಾದಂಬರಿ)	ಬಸು ಬೇವಿನಗಿಡದ	150/-

ವಚನಸೂಕ್ತಿಸಂಚಯ	ಕೆ.ಸಿ.ಶಿವಪ್ಪ	600/-
ಇಂದಿನಕನ್ನಡಕಾವ್ಯದಗೊತ್ತುಗುರಿಗಳು	ವಿ.ಕೃ.ಗೋಕಾಕ	150/-
ಅದರನಂತರ(ಕವಿತೆಗಳು)	ಎಚ್.ಆರ್.ರಮೇಶ	100/-
ನೀರೊಳಗೆಮಾಯದಜೋಳಿಗೆ(ಕವಿತೆಗಳು)	ರಾಜೇಂದ್ರಪ್ರಸಾದ್	100/-
ಮಾತಿಗೆಮುನ್ನ(ಗೋಪಾಲಕೃಷ್ಣಅಡಿಗರಕಾವ್ಯದಸುತ್ತಮುತ್ತ)	ಲಕ್ಷ್ಮೀಶತೋಳ್ಪಾಡಿ	100/-
ಬೆಟ್ಟಮಹಮದನಬಳಿಗೆಬಾರದಿದ್ದರೆ	ಲಕ್ಷ್ಮೀಶತೋಳ್ಪಾಡಿ	150/-
ಪಾ.ವೆಂ.ಹೇಳಿದಕತೆ	ರವಿಬೆಳಗೆರೆ	150/-
ಆಪ್ತಗೀತೆ(ಭಗವದ್ಗೀತೆಯತಿಳಿಗನ್ನಡಅವತರಣ)	ಎಚ್.ಎಸ್.ವೆಂಕಟೇಶಮೂರ್ತಿ	275/-
ಸ್ಕೂಲುಬಿಡುವಸಮಯ(ಪ್ರಬಂಧಗಳು)	ಕೆ.ಸತ್ಯನಾರಾಯಣ	250/-
ದಾಸ್ಯದಿಂದಆಚೆಗೆ(ಬೂಕರ್‌ಟಿ.ವಾಷಿಂಗ್ಟನ್‌ಆತ್ಮಕತೆ)	ಕನ್ನಡಕ್ಕೆ:ಕೆ.ಪುಟ್ಟಸ್ವಾಮಿ	200/-
ಸ್ತ್ರೀವಾದ(ಪದವಿವರಣಕೋಶ)	ಎಚ್.ಎಸ್.ಶ್ರೀಮತಿ	500/-
ಭೌರತಯಾತ್ರೆ(ಮಹಾಭಾರತಅನುಂಧಾನ)	ಲಕ್ಷ್ಮೀಶತೋಳ್ಪಾಡಿ	200/-
ಸಂರಚನಾವಾದ	ಕಿಕ್ಕೇರಿನಾರಾಯಣ	100/-
ಅನಕೃಮತ್ತುಕನ್ನಡಸಂಸ್ಕೃತಿ	ನರಹಳ್ಳಿಬಾಲಸುಬ್ರಹ್ಮಣ್ಯ	100/-
ವೈದೇಹಿ(ಜೀವನಮತ್ತುಕೃತಿಗಳಶೋಧ)	ಸಂ:ಮುರಳೀಧರಉಪಾಧ್ಯಹಿರಿಯಡಕ	500/-
ಸಂಜೀವನ(ಯಕ್ಷಗಾನಗುರುಬನ್ನಂಜೆಸಂಜೀವಸುವರ್ಣರಅಪೂರ್ಣಆತ್ಮಕಥನ)	ನಿರೂಪಣೆ:ಪೃಥ್ವಿರಾಜಕವತ್ತಾರು	200/-
ಪ್ರಾಕೃತಜಗದ್ವಲಯ(ಪ್ರಾಕೃತ-ಕನ್ನಡ-ಸಂಸ್ಕೃತಭಾಷೆಗಳಅನುಸಂಧಾನ)	ಷ.ಶೆಟ್ಟರ್	250/-
ಅಪರೂಪದಕತೆಗಳು	ಕೆ.ವಿ.ತಿರುಮಲೇಶ್	300/-
ಕುಮಾರವ್ಯಾಸಕಥಾಂತರ(ಉದ್ಯೋಗಪರ್ವ,ಭೀಷ್ಮಪರ್ವ,ದ್ರೋಣಪರ್ವ)	ಎಚ್.ಎಸ್.ವೆಂಕಟೇಶಮೂರ್ತಿ	300/-
ಕಾವ್ಯಸೃಷ್ಟಿಯಸ್ವರೂಪ	ಪ್ರಭುಶಂಕರ	50/-
ಐಸಿರಿ(ಸಿರಿಧಾನ್ಯಗಳಕುರಿತಉಪನ್ಯಾಸಗಳಸಂಕ್ಷಿಪ್ತರೂಪ)	ಡಾ.ಖಾದರ್,ನಿರೂಪಣೆ:ಪಿ.ಚಂದ್ರಿಕಾ	50/-
ಚೆಲುವಿನ ನಿಲುವು	ವಿ.ಕೃ.ಗೋಕಾಕ	100/-
ಕವನಗಳಲ್ಲಿಸಂಕೀರ್ಣತೆ	ವಿ.ಕೃ.ಗೋಕಾಕ	50/-
ಆಂಗ್ಲಸಾಹಿತ್ಯನೀಡಿದಸ್ಫೂರ್ತಿ	ವಿ.ಕೃ.ಗೋಕಾಕ	35/-
ಎಲ್ಲಕತೆ,ಕಾದಂಬರಿಗಳು(ಸಮಗ್ರ)	ದೇವನೂರಮಹಾದೇವ	150/-
ನೆತ್ತರಸೂತಕ(ಧರ್ಮ,ರಾಜಕಾರಣ,ಸಂಸ್ಕೃತಿ,ಸಾಹಿತ್ಯ)	ರಹಮತ್‌ತರೀಕೆರೆ	250/-
ನಕ್ಷೆ-ನಕ್ಷತ್ರ(ಸಾಹಿತ್ಯ,ಇತಿಹಾಸಮತ್ತುಸಂಸ್ಕೃತಿ)	ಬಸವರಾಜಕಲ್ಗುಡಿ	200/-
ವಾಚನಶಾಲೆ(ಸಾಹಿತ್ಯ,ಸಂಸ್ಕೃತಿ,ವಿಚಾರ)	ಕೆ.ವಿ.ತಿರುಮಲೇಶ್	300/-
ಜೀವದಾಯಿನಿ(ಪ್ರಬಂಧಗಳು)	ನರಹಳ್ಳಿಬಾಲಸುಬ್ರಹ್ಮಣ್ಯ	200/-
ಕರ್ನಾಟಕದಲ್ಲಿತುರ್ತುಪರಿಸ್ಥಿತಿ(ಪ್ರಭಾವಮತ್ತುಪರಿಣಾಮಗಳು)	ರಶ್ಮಿ.ಎಸ್.	500/-
ಆಚಾರ್ಯಸಂಪಾದಕಶ್ರೀನಾರಾಯಣದತ್ತ	ವಿಜಯದತ್ತಶ್ರೀಧರ,ಜಿ.ಭಾಸ್ಕರಮಯ್ಯ	250/-
ಭಕ್ತಿಯ ನೆಪದಲ್ಲಿ	ಲಕ್ಷ್ಮೀಶತೋಳ್ಪಾಡಿ	100/-
ಬಾವಲಿಗುಹೆ(ಮಕ್ಕಳಿಗಾಗಿಕಾದಂಬರಿ)	ತಮ್ಮಣ್ಣಬೀಗಾರ	70/-
ತೊಟ್ಟಿಲ ಗೊಂಬೆ(ಮಕ್ಕಳಿಗಾಗಿ ಕಾದಂಬರಿ)	ಮಾದುಪ್ರಸಾದಹುಣಸೂರು	70/-
ನೆನಪಿನ ಓಣಿಯೊಳಗಮಿನುಗುತಾವದೀಪ(ಜಿ.ಎಸ್.ಎಸ್.ವ್ಯಕ್ತಿ:ಶಕ್ತಿಕೆಲನೋಟಗಳು)	ಸಂ:ನಾಗಐತಾಳ,ನಳಿನಿಮೈಯ	150/-
ಸ್ಮರಣೆಸಾಲದೆ...(ಕೆಲವುನೆನಪುಗಳು)	ನಾಗಐತಾಳ	150/-
ಪೂರ್ವಿ(ಮಕ್ಕಳಿಗಾಗಿಕಾದಂಬರಿ)	ಗಣೇಶಪಿ.ನಾಡೋರ	70/-
ಅಂಶು,ಅನುಮತ್ತುರೋಬೋ(ಮಕ್ಕಳಿಗಾಗಿಕಾದಂಬರಿ)	ಮತ್ತೂರುಸುಬ್ಬಣ್ಣ	100/-
ಸೈಕಲಾಜಿಕಲ್‌ಕಾಂಪ್ಲೆಕ್ಸ್‌ಗಳು(ಮನೋವೈಜ್ಞಾನಿಕವಿವರಣೆ)	ಎಂ.ಬಸವಣ್ಣ	175/-
ವರ್ಧಮಾನ(ಕವಿತೆಗಳು)	ಎಂ.ಗೋಪಾಲಕೃಷ್ಣಅಡಿಗ	35/-
ಬಂದೀತು ಆ ದಿನ (ಪ್ರಬಂಧಗಳು)	ನಳಿನಿ ಮೈಯ	100/-
ಭಕ್ತಿಯ ಬೆರಗು(ಸಾಹಿತ್ಯದಲ್ಲಿ ಭಕ್ತಿ)	ಸಂ:ಪಿ.ಚಂದ್ರಿಕಾ	275/-
ಸಾವಿನ ದಶಾವತಾರ(ಕಾದಂಬರಿ)	ಕೆ.ಸತ್ಯನಾರಾಯಣ	150/-
ಮಹಾಯುದ್ಧಕ್ಕೆ ಮುನ್ನ...(ಭಗವದ್ಗೀತೆ:ಕೆಲವು ವಿಚಾರಗಳು)	ಲಕ್ಷ್ಮೀಶ ತೋಳ್ಪಾಡಿ	25/-
ಗೆರೆಮಿರಿವಚಿನ್ನದದಿರು(ಗೋಪಾಲಕೃಷ್ಣಅಡಿಗ-ಒಂದುಪ್ರವೇಶ)	ನರಹಳ್ಳಿಬಾಲಸುಬ್ರಹ್ಮಣ್ಯ	15/-
ಶೈಲಿಶಾಸ್ತ್ರ	ಕೆ.ವಿ.ನಾರಾಯಣ	75/-
ಪುಣ್ಯಕೋಟಿಯಕಥೆಯಹೇಳಲೇನು?(ಹಸುವಿನಪಯಣಅಲ್ಲಿಂದಇಲ್ಲಿಯವರೆಗೆ)	ಡಾ.ಟಿ.ಎಸ್.ರಮಾನಂದ್	150/-
ವಾಸ್ತವತಾವಾದ	ಟಿ.ಪಿ.ಅಶೋಕ	100/-

ಕನಸಬೆನ್ನತ್ತಿನಡಿಗೆ(ಕವನಸಂಕಲನ)	ಸಿದ್ದುಸತ್ಯಣ್ಣವರ	100/-
ಬ್ರೇಕಿಂಗ್ ನ್ಯೂಸ್ (ಕವನಸಂಕಲನ)	ಸಿ.ಪಿ.ರವಿಕುಮಾರ್	100/-
ಡೊಂಕುಸೇತುವೆ(ಮಕ್ಕಳಿಗಾಗಿಕಾದಂಬರಿ)	ಹಿಂದಿಮೂಲ:ಡಾ.ನಾಗೇಶಪಾಂಡೇಯ	
	ಅನು:ಡಾ.ಮಾಲತಿಆರ್.ಭಟ್ಟ್	75/-
ಸೂರಕ್ಕಿಗೇಟ್(ಮಕ್ಕಳಿಗಾಗಿಕಾದಂಬರಿ)	ವಿಜಯಶ್ರೀಹಾಲಾಡಿ	50/-
ಸೂರ್ಯನನೆರಳು	ಅನು:ಸಹನಾಹೆಗಡೆ	
	ಮೂಲ:ರೈಷಾರ್ಡ್‌ಕಪುಶಿನ್‌ಸ್ಕಿ	300/-
ಬಂಡಾಯ-ದಲಿತಚಳುವಳಿಮತ್ತುಸಾಹಿತ್ಯ	ಪುರುಷೋತ್ತಮಬಿಳಿಮಲೆ	175/-
ಬಿನ್ನಪ (ಕನ್‌ಫೇಶನ್)	ಅನು:ಓ.ಎಲ್.ನಾಗಭೂಷಣಸ್ವಾಮಿ	
	ಮೂಲ: ಕೌಂಟ್ ಲಿಯೋಟಾಲ್‌ಸ್ಟಾಯ್	100/-
ಸದ್ಗುರು ನಾನಕ್ ದೇವ್(ಜೀವನಮತ್ತುದರ್ಶನ)	ಎಸ್.ಸೀತಾರಾಮು	270/-
ವೃತ್ತಿವಿಲಾಸ(ಆತ್ಮವೃತ್ತಾಂತದ ಮೂರನೇ ಭಾಗ)	ಕೆ.ಸತ್ಯನಾರಾಯಣ	300/-
ಋಗ್ವೇದಸ್ಫುರಣ(ಆಯ್ದ ಋಕ್ಕುಗಳತಿಳಿಗನ್ನಡಅವತರಣ)	ಎಚ್.ಎಸ್.ವೆಂಕಟೇಶಮೂರ್ತಿ	200/-
ನನ್ನ ಅಜ್ಜಿಯ ಜಗತ್ತು(ನೆನಪುಗಳು)	ರಜನಿನರಹಳ್ಳಿ	200/-
ವಚನ ದರ್ಶನ (ಹೊಸಕಾಲದ ಪರಿವೇಶದಲ್ಲಿ)	ಕೆ.ಸಿ.ಶಿವಪ್ಪ	600/-
ಕಿರುವೆರಳಸಟೆ (ಭರತೇಶವೈಭವದ ಆಯ್ದ ಭಾಗ)	ಶ್ರೀಧರಹೆಗಡೆಭದ್ರನ್	75/-
ಸಾಹಿತ್ಯಅಧ್ಯಯನದನೆಲೆಗಳು	ಪಿ.ಚಂದ್ರಿಕಾ	300/-
ಹಳಗನ್ನಡ (ಭಾಷೆ, ಭಾಷಾ ವಿಕಾಸ, ಭಾಷಾ ಬಾಂಧವ್ಯ)	ಸಂ:ಷ. ಶೆಟ್ಟರ್	600/-
ಹೊಸಗನ್ನಡಕವಿತೆ	ಸಂ:ಜಿ. ಎಚ್. ನಾಯಕ	500/-
ದೂರ ಸಾಗರ(ಅಂಕಣ ಬರಹ ಮತ್ತಿತರ ಲೇಖನಗಳ ಸಂಕಲನ)	ಮೀರಾ ಪಿ. ಆರ್.	120/-
ಸಾಂಸ್ಕೃತಿಕಅಧ್ಯಯನ (ವಿಮರ್ಶೆ)	ರಹಮತ್ ತರೀಕೆರೆ	200/-
ನವ್ಯತೆ (ವಿಮರ್ಶೆ)	ನರಹಳ್ಳಿ ಬಾಲಸುಬ್ರಹ್ಮಣ್ಯ	60/-
ದೇಶೀವಾದ (ವಿಮರ್ಶೆ)	ರಾಜೇಂದ್ರ ಚನ್ನಿ	100/-
ದಾಸಭಾರತ	ರಾಮದಾಸ	375/-
ಝೀರೋಮತ್ತು ಒಂದು(ಕಥೆಗಳು)	ವಿಕ್ರಮ ಹತ್ವಾರ	150/-
ಹಕ್ಕಿಗಳ ಸ್ವಾತಂತ್ರ್ಯೋತ್ಸವ (ಮಕ್ಕಳಿಗಾಗಿ ಕಥನ ಕವನಗಳು)	ವಿಜಯಕಾಂತಪಾಟೀಲ	75/-
ಸಕ್ರೆಮೂಟೆಯಾರಿಗ್ಬೇಕೂ (ಮಕ್ಕಳಿಗಾಗಿಕವನಗಳು)	ನಿರ್ಮಲ ಸೂರತ್ಕಲ್	75/-
ಚುಕ್ಕಿಹೂಗಳಗೆಳತಿ (ಕವಿತೆಗಳು)	ರವಿ ಹಿರೇಮಠ	50/-
ಹೀಗೆಯೇ ಒಂದಷ್ಟು (ಲೇಖನಗಳು)	ಶೂದ್ರ ಶ್ರೀನಿವಾಸ	150/-
ಆ ದಿನ (ಕಾದಂಬರಿ)	ಶೂದ್ರ ಶ್ರೀನಿವಾಸ	150/-
ನಾಟಕರತ್ನಗಳು	ಎಲ್. ಎಸ್. ಶೇಷಗಿರಿ ರಾವ್	150/-
ಭೀಷ್ಮ ಪ್ರಜ್ಞೆ (ಉಳಿದ ಲೇಖನಗಳು)	ಯು. ಆರ್. ಅನಂತಮೂರ್ತಿ	100/-
ಅವರವರ ಭಕುತಿಗೆ (ಭಕ್ತಿಕುರಿತ ನುಡಿಚಿಂತನೆಗಳು)	ಸಂ: ನಳಿನಿಮೈಯ	400/-
ಸಣ್ಣಪುಟ್ಟಆಸೆಗಳಆತ್ಮಚರಿತ್ರೆ(ಆತ್ಮವೃತ್ತಾಂತದಎರಡನೇಭಾಗ)	ಕೆ.ಸತ್ಯನಾರಾಯಣ	150/-
ಟೈಬೀರಿಯಸ್ (ನಾಟಕ)	ಕೆ. ವಿ. ತಿರುಮಲೇಶ್	150/-
ಕಲಿಗುಲ (ನಾಟಕ)	ಕೆ. ವಿ. ತಿರುಮಲೇಶ್	100/-
ಕುವೆಂಪು ಕಥನ ಕೌತುಕ (ವಿಮರ್ಶೆ)	ನರಹಳ್ಳಿ ಬಾಲಸುಬ್ರಹ್ಮಣ್ಯ	100/-
ಶ್ರೀರಾಮಚಾರಣ (ಮಹಾಕಾವ್ಯ)	ಎಚ್.ಎಸ್.ವೆಂಕಟೇಶಮೂರ್ತಿ	250/-
ಜ್ಞಾನವಿಜ್ಞಾನ ತತ್ವಜ್ಞಾನ	ಕೆ. ವಿ. ತಿರುಮಲೇಶ್	300/-
ಮುದ್ದುರಾಮನ ಮನಸು	ಕೆ. ಸಿ. ಶಿವಪ್ಪ	150/-
ಮುದ್ದು ರಾಮನ ಬದುಕು-ಬೆಳಕು	ಕೆ. ಸಿ. ಶಿವಪ್ಪ	150/-
ಚಿಂತನೆಯ ಪಾಡು (ಸಾಹಿತ್ಯ ವಿಮರ್ಶೆ)	ರಹಮತ್ ತರೀಕೆರೆ	200/-
ನಮ್ಮ ಮನೆಗೂ ಬಂದರು ಗಾಂಧೀಜಿ (ಕೆಲವುನೆನಪುಗಳು)	ರಾಜೇಶ್ವರಿತೇಜಸ್ವಿ	150/-
ಹಲವುಮಕ್ಕಳ ತಾಯಿ	ಸಂ: ಹೆಚ್. ವೈ. ರಾಜಗೋಪಾಲ್	
(ಮೈಸೂರು ಮಕ್ಕಳ ಕೂಟದ ಶ್ರೀಮತಿ		
ಎಚ್.ವೈ. ಸರಸ್ವತಮ್ಮನವರ ಜೀವನ – ಸಾಧನೆ–ಧರ್ಶನ)		900/-
ಅನುವಾದ ಸಂವಾದ (ವಿವಿಧಭಾಷಾಸಾಹಿತ್ಯದ ಅನುವಾದ ಸಂಕಲನ)	ಸಂ: ಶ್ರೀಕಾಂತಬಾಬು	400/-
ಸಾಹಿತ್ಯ ಸ್ಪಂದನ (ವಿಮರ್ಶಾ ಲೇಖನಗಳು)	ನಾಗ ಐತಾಳ	250/-
ಅಮೇರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು (ಆತ್ಮಕಥೆ)	ನಾಗ ಐತಾಳ	400/-
ಕಥೆಯಂ ಕೇಳೆಲೊ ಕಂದ	ಮೈ. ಶ್ರೀ. ನಟರಾಜ	100/-
ಪ್ರೇಮಭಿಕ್ಷು (ಕಾದಂಬರಿ)	ಪ್ರಭುಶಂಕರ	75/-
ಅಕ್ಷಯಕಾವ್ಯ(ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)	ಕೆ. ವಿ. ತಿರುಮಲೇಶ್	350/-
ಬಹುವಚನ ಭಾರತ(ವಿಮರ್ಶೆ)	ಜಿ.ರಾಜಶೇಖರ	200/-
ಕುಮಾರವ್ಯಾಸ ಕಥಾಂತರ-2	ಎಚ್. ಎಸ್. ವೆಂಕಟೇಶಮೂರ್ತಿ	300/-
ಹಾಡೆ ಸುವ್ವಿ(ಮಕ್ಕಳಕವಿತೆಗಳು)	ಬಿಳಿಗೆರೆಕೃಷ್ಣಮೂರ್ತಿ	75/-
ಖರ್ಚಾಗದಪದ್ಯಗಳು...(ಕವಿತೆಗಳು)	ರಮೇಶಹೆಗಡೆ	50/-

ಅಕ್ಕನುಡಿಯುತ್ತಾಳೆ (ಕವಿತೆಗಳು)	ಮೂಲ: ಕೆ. ಸಚ್ಚಿದಾನಂದನ್ ಅನು: ಮೋಳಿವರ್ಗೀಸ್	50/-
ವಾರ್ಸಾದಲ್ಲೊಬ್ಬಭಗವಂತ	ಮೂಲ: ಕಾರ್ಲೋಸ್ ಅನುವಾದ: ಜಯಲಲಿತಾ	650/- 350/-
ಅರಬ್ಬಿ(ಕವಿತೆಗಳು)	ಕೆ. ವಿ. ತಿರುಮಲೇಶ್	500/-
ಪತ್ರಸಂವಾದ	ವಿಜಯನಾಥ ಶೆಣೈ	100/-
ಕನ್ನಡರಾಷ್ಟ್ರೀಯತೆ (ಸಾಮಾಜಿಕ, ಸಾಂಸ್ಕೃತಿಕ ಬೇರುಗಳ ರಾಜಕೀಯಾರ್ಥಿಕ ಅಧ್ಯಯನ)	ಬಂಜಗೆರೆ ಜಯಪ್ರಕಾಶ್	250/-
ತಲೆಮಾರು (ರೂಟ್ಸ್ ಕಾದಂಬರಿಯ ಅನುವಾದ)	ಬಂಜಗೆರೆಜಯಪ್ರಕಾಶ್	250/-
ಏನು ಜನ! ಎಂಥ ಗಾನ!	ಮೂಲ: ಅರವಿಂದ ಗಜೇಂದ್ರಗಡ್ಕರ್ ಅನು: ದಮಯಂತಿ ನರೇಗಲ್ಲ	100/-
ಅನುಶ್ರೇಣೀ: ಯಾಜಮಾನಿಕೆ	ಕೆ.ಜಿ. ನಾಗರಾಜಪ್ಪ	200/-
ಆಯ್ದ ವಿಮರ್ಶೆ	ನ. ರವಿಕುಮಾರ	100/-
ವಾಗರ್ಥ ವಿಲಾಸ (ಅಂಕಣ ಬರಹಗಳು)*	ಕೆ. ವಿ. ತಿರುಮಲೇಶ್	200/-
ತೆರೆದ ಮನ (ಪ್ರಬಂಧಗಳು)	ಎಚ್. ನರಸಿಂಹಯ್ಯ	200/-
ಹೋರಾಟದ ಹಾದಿ (ಆತ್ಮ ಕಥೆ)	ಎಚ್. ನರಸಿಂಹಯ್ಯ	400/-
ದಕ್ಷಿಣ ಭಾರತದ ಜನಪದ ಕಾವ್ಯ ಪ್ರಕಾರಗಳು	ಜಿ. ಶಂ. ಪರಮಶಿವಯ್ಯ	600/-
ಅಮ್ಮಮ್ಮ ಹೇಳಿದ ಕತೆಗಳು*	ರಜನಿ ನರಹಳ್ಳಿ	150/-
ಕೊನೆಯಬ್ರಾಹ್ಮಣ(ಅನುವಾದಿತ ಕಾದಂಬರಿ)*	ಮೂಲ: ರಾಣಿಶಿವಶಂಕರ್‌ಶರ್ಮ ಅನು: ಲಕ್ಕೂರು ಆನಂದ	175/-
ಗಂಟೆಗೋಪುರ(ಅನುವಾದಿತ ಕತೆಗಳು)*	ಮೂಲ:ಹರ್ಮನ್‌ಮೆಲ್ವಿಲ್‌ಅನು:ಕೆ.ವಿ.ತಿರುಮಲೇಶ್	150/-
ಗ್ರಾಹಕಸಂರಕ್ಷಣೆ(ಹೊಸ ಆವಿಷ್ಕಾರಗಳು)*	ವೈ.ಜಿ.ಮುರಳೀಧರನ್	150/-
ಅಮೇರಿಕನ್ನಡಬರಹಗಾರರು(ಸಂಕ್ಷಿಪ್ತ ಮಾಹಿತಿಕೋಶ)*	ಸಂ:ನಾಗಐತಾಳ,ಜ್ಯೋತಿಮಹದೇವ	100/-
ಅನುಕ್ರಮ(ವಿಮರ್ಶೆ)*	ಶ್ರೀಧರಹೆಗಡೆಭದ್ರನ್	100/-
ರಂಗ ಕಿನ್ನರಿ(ರಂಗಭೂಮಿ ಕುರಿತ ಬರಹಗಳು)	ಜಿ.ಎನ್.ಮೋಹನ್	50/-
ಥರ್ಡ್‌ಬೆಲ್(ರಂಗಭೂಮಿ ಕುರಿತಬರಹಗಳು)	ಜಿ.ಎನ್.ಮೋಹನ್	75/-
ಕಾಫಿಕಪ್ಪಿನೊಳಗೆಕೊಲಂಬಸ್ (ಅಂಕಣಬರಹಗಳು)*	ಜಿ.ಎನ್.ಮೋಹನ್	100/-
ಜಾತಿ ಮೀಮಾಂಸೆ(ವಿಮರ್ಶೆ)*	ಮೊಗಳ್ಳಿಗಣೇಶ್	300/-
ಲೂಸಿಫರ್‌ಎಫೆಕ್ಟ್(ಮನೋವೈಜ್ಞಾನಿಕ ಲೇಖನಗಳು)	ಎಂ.ಬಸವಣ್ಣ	150/-
ಚಿತ್ರಗುಪ್ತನಕತೆಗಳು	ಕೆ.ಸತ್ಯನಾರಾಯಣ	100/-
ವಿಗಡವಿಕ್ರಮರಾಯ(ನಾಟಕ)	ಸಂಸ	50/-
ಅಮೀರ್‌ಬಾಯಿ ಕರ್ನಾಟಕಿ (ಹಾಡುನಟಿಯ ಜೀವನಕಥನ)	ರಹಮತ್‌ತರೀಕೆರೆ	300/-
ನಿಜದನಿ(ಸಾಹಿತ್ಯವಿಮರ್ಶೆ)	ಜಿ.ಹೆಚ್.ನಾಯಕ	200/-
ಸ್ತ್ರೀವಾದಿಸಾಹಿತ್ಯ ವಿಮರ್ಶೆ	ಸಂ. ತೇಜಸ್ವಿನಿನಿರಂಜನ,ಸೀಮಂತಿನಿನಿರಂಜನ	250/-
ತಕ್ಕೀಎಂದಿತುವೃಕ್ಷ...!(ಕವನ)*	ವಿಕ್ರಮಹತ್ವಾರ	75/-
ಹಸಬಿ (ಕವನ)*	ವಿನಯಾ	90/-
ಏನೇನ್‌ತುಂಬಿ(ಮಕ್ಕಳಪದ್ಯ)*	ಕೆ.ವಿ.ತಿರುಮಲೇಶ್	50/-
ಪ್ರೀತಿಸುವುದೆಂದರೆ(ಮೂಲ:ಎರಿಕ್‌ಫ್ರಾಂ)	ಅನು:ಎಚ್.ಎಸ್.ರಾಘವೇಂದ್ರರಾವ್, ಕೆ.ವಿ.ನಾರಾಯಣ	100/-
ಸಂಪತ್ತಿನೊಳಗೊಬ್ಬಸಂತ (ಎಮ್.ವೈ.ಘೋರ್ಪಡೆ ಜೀವನ ಚಿತ್ರ)	ಸಂ:ಶ್ರೀಧರಹೆಗಡೆಭದ್ರನ್	200/-
ಅಭಿನವರಂತಿದೇವ (ಸುರೇಂದ್ರನಾಥ ಕೌಲಗಿಜೀವನ–ಸಾಧನೆ)	ಸಂ:ಸುಮನಾವಿಶ್ವನಾಥ	40/-
ಎಪ್ಪತ್ತರದಶಕದ ಕತೆ	ಯು.ಆರ್.ಅನಂತಮೂರ್ತಿ	75/-
ಹಿಂದುತ್ವಅಥವಾಹಿಂದ್‌ಸ್ವರಾಜ್?	ಯು.ಆರ್.ಅನಂತಮೂರ್ತಿ	100/-
ಬೇಂದ್ರೆನಾದ,ನಾಡು,ಒಲವು	ಜಿ.ಎಚ್.ನಾಯಕ್	50/-
ಬೇಂದ್ರೆಯವರಕಾವ್ಯಸೃಷ್ಟಿಯಸ್ವರೂಪ	ಜಿ.ಎಸ್.ಶಿವರುದ್ರಪ್ಪ	50/-
ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ	ವಿ.ಕೃ.ಗೋಕಾಕ್	50/-
ಬರ್ಟೋಲ್ ಬ್ರೆಕ್ಟ್ (ಸಂಕ್ಷಿಪ್ತ ಪರಿಚಯ)	ಜಿ.ರಾಜಶೇಖರ	30/-
ಪರಿಸರ ರಕ್ಷಣೆ ಮತ್ತು ಸಮಾಜವಾದ (ಮೂಲ ರೇಮಂಡ್‌ವಿಲಿಯಮ್ಸ್)	ಜಿ.ರಾಜಶೇಖರ	25/-
ಸಿರಿಗನ್ನಡಗೀತರಾಮಾಯಣ*	ಮೈ.ಶ್ರೀನಟರಾಜ	100/-
ಬೇಂದ್ರೆಅಂದ್ರೆ (ಬೇಂದ್ರೆಸಾಹಿತ್ಯದವಿರಾಟ್‌ದರ್ಶನ)*	ಅಹಿತಾನಲ/ನಳಿನಿಮೈಯ	250/-
ಪುಸ್ತಕ ಮತ್ತು ನವಿಲುಗರಿ (ಕವಿತೆಗಳು)	ಗಿರಿಜಾಶಾಸ್ತ್ರಿ	150/-
ಚಿಟ್ಟೆ ಮತ್ತು ಜೀವಯಾನ (ಕವಿತೆಗಳು)	ಯಲ್ಲಪ್ಪ ಟಿ.	75/-
ಸಮಸ್ತ ಕಥೆಗಳು	ಹೆಚ್.ವಿ.ಸಾವಿತ್ರಮ್ಮ	500/-
ಗುಲಾಬಿ ಟಾಕೀಸ್ (ಕಥೆಯಿಂದಕಥೆಗೆ)*	ಸಂ: ಪಿ.ಚಂದ್ರಿಕಾ	85/-
ವಿಮುಕ್ತ (ತೆಲುಗುಕಥಾ ಜಗತ್ತಿನಜೊತೆಗೊಂದು ಮಾತುಕಥೆ)*	ಅನು: ಜಿ. ವೀರಭದ್ರಗೌಡ	125/-
ಜಾರ್ಜ್‌ಲೂಯಿಬೊರ್ಹೆಸ್	ಸಂ: ಪ್ರೊ ಕಾರ್ಲೋಸ್	75/-
ಭಾವನ್ನ (ಕವನ ಸಂಕಲನ)*	ಆನಂದ ಝುಂಝುರವಾಡ	75/-
ಶಾಪೋಲಿನ್ (ಅನುವಾದಿತ ಮಕ್ಕಳ ಕಥೆಗಳು)ವ*	ಅನು: ಶಿವಲಿಂಗಪ್ಪ ಕೆ. ಹಂದಿಹಾಳು	60/-
ಓತಿಕ್ಯಾತ ತಲೆಕುಣ್ಸೆ (ಮಕ್ಕಳಕವಿತೆ)	ವಿಜಯಶ್ರೀ ಹಾಲಾಡಿ	50/-
ಕಲಾಚೇತನ (ದಿ ಆರ್ಟ್ ಸ್ಪಿರಿಟ್)	ಮೂಲ: ರಾಬರ್ಟ್ ಹೆನ್ರಿ, ಅನು: ಕೆ.ವಿ. ತಿರುಮಲೇಶ್	150/-
ಕನಸಿನ ಕತೆ (ಒಂದು ಮನೋವೈಜ್ಞಾನಿಕ ವಿವರಣೆ)	ಎಂ. ಬಸವಣ್ಣ	50/-
ನನ್ನ ಸಾಹಿತ್ಯದ ಐದು ದಶಕಗಳು	ಮೂಲ: ಯು ಆರ್ ಅನಂತಮೂರ್ತಿ ಅನು: ಬಿ.ಎಸ್ ಜಯಪ್ರಕಾಶ ನಾರಾಯಣ	50/-

ಬಾದಾಮಿ ಚಾಳುಕ್ಯರಶಾಸನ ಸಾಹಿತ್ಯ	ಷ.ಶೆಟ್ಟರ್	
(ಕವಿ-ಲಿಪಿಕಾರ ಅಕ್ಷರವೋರುವಿನ ಕಾವ್ಯ, ಕಲೆ ಮತ್ತು ಲಿಪಿಯ ಸಮಗ್ರ ಅಧ್ಯಯನ)		150/-
ಹೇರಾಮ್(ಗಾಂಧಿ-ಗೋಡ್ಸೆಸಂಘರ್ಷ...)*	ಅನಂತ ಚಿನಿವಾರ್	60/-
ಬರ ಅಂದ್ರೆ ಎಲ್ಲರಿಗೂ ಇಷ್ಟ (ಭಾರತದಹತ್ತು ಬಡ ಜಿಲ್ಲೆಗಳಕಥನ)	ಮೂಲ:ಪಿ.ಸಾಯಿನಾಥ್,ಅನು:ಜಿ.ಎನ್.ಮೋಹನ್	400/-
ಮಹತಿ (ಪಾಶ್ಚಾತ್ಯಸಾಹಿತ್ಯ ಸಂಸ್ಕೃತಿಗಳ ತೌಲನಿಕಚಿಂತನೆ) ಭಾಗ-1	ಶಂಕರಮೊಕಾಶಿ ಪುಣೇಕರ, ಸಂ:ಜಿ.ಬಿ.ಹರೀಶ್	250/-
ವಸ್ತುವಿನ್ಯಾಸ (ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಸಾಂಸ್ಕೃತಿಕಬಿದು) ಭಾಗ-2	ಶಂಕರಮೊಕಾಶಿ ಪುಣೇಕರ, ಸಂ:ಜಿ.ಬಿ.ಹರೀಶ್	350/-
ಸುಸಂಧಿ (ಕಥೆ,ಕವಿತೆ,ನಾಟಕ) ಭಾಗ-3	ಶಂಕರಮೊಕಾಶಿ ಪುಣೇಕರ, ಸಂ:ಜಿ.ಬಿ.ಹರೀಶ್	200/-
ತ್ರಿವಳಿ ಕಾದಂಬರಿಗಳು (ನಟ ನಾರಾಯಣಿ, ಗಂಗವ್ವ ಗಂಗಾಮಾಯಿ, ಅವಧೇಶ್ವರಿ)	ಭಾಗ-4 ಶಂಕರಮೊಕಾಶಿ ಪುಣೇಕರ,	
	ಸಂ: ಜಿ.ಬಿ.ಹರೀಶ್	400-
ಎರಡುಲೋಟಗಳು(ಕವನಸಂಕಲನ)	ಚೀಮನಹಳ್ಳಿರಮೇಶ ಬಾಬು	60/-
ಒಂಬತ್ತುನಾಟಕಗಳು	ಬಿ.ಸುರೇಶ	250/-
ಯಾವಮಾಹಿತಿ?ಯಾರಹಕ್ಕು?	ವೈ.ಜಿ.ಮುರಳೀಧರ	125/-
ಅವಿರತ(ವಿಮರ್ಶಾಲೇಖನಗಳು)	ಶ್ರೀಧರ್‌ಹೆಗಡೆಭದ್ರನ್	100/-
ಸಾರೂಪ್ಯ (ಜೈನ ಸಾಹಿತ್ಯ ಸಂಸ್ಕೃತಿ ಕುರಿತ ಲೇಖನಗಳು)	ಶ್ರೀಧರ್‌ಹೆಗಡೆಭದ್ರನ್	75/-
ಕಾಡುವನೆನಪುಗಳು(ಕವಿತೆಗಳು)	ಹೆಚ್.ಎನ್.ರಾಜಶ್ರೀ	50/-
ಆಳ-ನಿರಾಳ:೪(ಅಂಕಣಬರಹ)*	ಕೆ.ವಿ.ತಿರುಮಲೇಶ್	175/-
ಅಪ್ಪನಪ್ರೇಯಸಿ(ಕಾದಂಬರಿ)	ವಿ.ಆರ್.ಕಾರ್ಪೆಂಟರ್	75/-
ದ್ವೀಪಸಮೂಹದಕತೆ (ಪ್ರವಾಸಕಥನ)	ಜಿ.ಎನ್. ಅಶೋಕವರ್ಧನ	75/-
ಸಮಸ್ತಕಾವ್ಯ (ಆರುದಶಕದಕವಿತೆಗಳು)	ಯು.ಆರ್.ಅನಂತಮೂರ್ತಿ	450/-
ಇನ್ನಷ್ಟುಕನ್ನಡ (ಭಾಷೆಮತ್ತುಭಾಷಾಶಾಸ್ತ್ರಕುರಿತಲೇಖನಗಳು)	ಕೆ.ವಿ.ತಿರುಮಲೇಶ್	125/-
ಕಾಪಿರೈಟ್ (ಕೃತಿಸ್ವಾಮ್ಯಕಾಯ್ದೆ)	ವೈ.ಜಿ.ಮುರಳೀಧರ್	60/-
ಕಾರಂತರಜೀವಂತಪಾತ್ರಗಳು	ಪಿ.ಸೋಮಶೇಖರಯ್ಯ	100/-
ಬೆಳಕುನೆರಳು (ಛಾಯಾಗ್ರಾಹಕನೊಬ್ಬನಸೂಕ್ಷ್ಮದಾಟ)	ಮೂಲ:ಎಂ.ವೈ.ಘೋರ್ಪಡೆ	
	ಅನು:ಶ್ರೀಮತಿಶಾಂತಾನಾಗರಾಜ್,ಪಿ.ಎಸ್.ಗೀತಾ	1000/-
ಕೊಂಕಣಿ ತದ್ಭವ ಕೋಶ (ಪ್ರಾಕೃತ, ಸಂಸ್ಕೃತ, ಪಾಲೀ, ದೇಶೀನಾಮಮಾಲೀ, ಕನ್ನಡ)*	ಎಂ. ಮಾಧವ ಪೈ	100/-
ಲೋಕವಿರೋಧಿಗಳಜತೆಯಲ್ಲಿ(ಸಂದರ್ಶನಗಳು)	ರಹಮತ್‌ತರೀಕೆರೆ	200/-
ಬೆತ್ತಲೆಫಕೀರ(ಉರ್ದುಕವಿತೆಗಳು)*	ಮೂಲ:ಅಲಿಸರ್ದಾರ್‌ಜಾಫ್ರಿ,ಅನು:ಜನತೇಜಶ್ರೀ	100/-
ಝಳಕ್ಕೆಮುಖಬೆಳಗುತ್ತದೆ(ಕವಿತೆಗಳು)	ಸಂಧ್ಯಾದೇವಿ	60/-
ನಮ್ಮಕಥೆ(ಮನುಷ್ಯನಪೂರ್ವೋತ್ತರಇತಿಹಾಸ)*	ನೀಲತ್ತಳ್ಳಿಕಸ್ತೂರಿ	60/-
ಆಚೀಚೆ(ಈಚಿನ ಮಾತು, ಬರಹಗಳು)	ಯು.ಆರ್.ಅನಂತಮೂರ್ತಿ	100/-
ಪಚ್ಚೆರೆಸಾರ್ಟ್(ಈಚಿನಕತೆ,ಕವಿತೆಗಳು)	ಯು.ಆರ್.ಅನಂತಮೂರ್ತಿ	60/-
ಕಂಚಿಯಪರಮಾಚಾರ್ಯರು	ಮೂಲ:ಎಂ.ವೈ.ಘೋರ್ಪಡೆ,	
(ಒಂದುಆಧ್ಯಾತ್ಮಿಕಮತ್ತುಮಾನವೀಯಸಂಬಂಧ)*	ಅನು:ಎಸ್.ಆರ್.ರೋಹಿಡೇಕರ್	150/-
ಕಾರ್ಲ್‌ಯೂಂಗ್(ಮನೋವೈಜ್ಞಾನಿಕಸಿದ್ಧಾಂತಗಳು)	ಎಂ.ಬಸವಣ್ಣ	75/-
ಜುಗ್ನು (ಮಕ್ಕಳ ಕಥಾ ಸಂಕಲನ)	ಗಿರೀಶಜಕಾಪುರೆ	75/-
ಹೂವುಮಾರುವವಳು (ಮಕ್ಕಳಕವಿತೆಗಳು)	ಅಕ್ಕಿಮಂಗಲ ಮಂಜುನಾಥ	75/-
ಗಾಂಧೀಯುಗಕ್ಕೆಕನ್ನಡಿ (ಲೇಖನಗಳು)*	ಹೆಚ್.ವೈ.ರಾಜಗೋಪಾಲ	100/-
ವಿಶ್ವಕಂಡದ್ವಿತೀಯಗಾಂಧಿ...ಅಣ್ಣಾಹಜಾರೆ	ಗಿರೀಶ್‌ಲೋಕಾಪುರೆ	100/-
ಹೊಸಜಗತ್ತು (ಅಪ್ರಕಟಿತಕಥಾಸಂಕಲನ)	ಹೆಚ್.ವಿ.ಸಾವಿತ್ರಮ್ಮ	100/-
ಸಾಹಸದಒಂದುಸೀಮಾರೇಖೆ (18ನೇಶತಮಾನದಡೆಕ್ಕನ್)*	ಎಂ.ವೈ.ಗೋರ್ಪಡೆ ಸಾದಾಪ್ರತಿ	125/-
ಬಸವಣ್ಣನಕಲ್ಯಾಣಹುಡುಕುತ್ತಾ.....(ಮಹಾಪ್ರಬಂಧ)*	ಲತಾಮೈಸೂರು	150/-
ಆಡುಕನ್ನಡಹಾಡುಕನ್ನಡಮಾತಾಡು(ಕವಿತೆಗಳು)*	ಕೆ.ವಿ.ತಿರುಮಲೇಶ್	150/-
ಆಷಾಢದಒಂದುದಿನ(ನಾಟಕ)*	ಮೂಲ:ಮೋಹನ್‌ರಾಕೇಶ್,	
	ಅನು:ಸಿದ್ಧಲಿಂಗಪಟ್ಟಣಶೆಟ್ಟಿ	50/-
ಜೀವನರಹಸ್ಯ(ಅಣುವಿಜ್ಞಾನದಒಂದುಸ್ಥೂಲಪರಿಚಯ)*	ನಾಗಐತಾಳ	300/-
ಮತಿಸಿದಪ್ಪೂಮಾತು(ಹರಟೆ,ಸಲ್ಲಾಪಮತ್ತುಚಿಂತನೆ)	ಸಂ:ತ್ರಿವೇಣಿಶ್ರೀನಿವಾಸರಾವ್	150/-
ಕರ್ನಾಟಕಸೂಫಿಗಳು	ರಹಮತ್‌ತರೀಕೆರೆ	150/-
ಹೊಸಾಹತುಪ್ರಜ್ಞೆಮತ್ತುಸಾಂಸ್ಕೃತಿಕಅಧ್ಯಯನ	ಮೂಲ: ಗೂಗಿವಾತಿಯಾಂಗೊಅನು:ರಹಮತ್‌ತರೀಕೆರೆ	50/-
ಎಲೆಮರೆಯಅಲರು(ಉಳಿದನೆನಪುಗಳು)	ಬೆಳಗೆರೆಕೃಷ್ಣಶಾಸ್ತ್ರೀ	60/-
ಸಾಹಿತಿಗಳಸ್ಮೃತಿ(ನೆನಪುಗಳು)	ಬೆಳಗೆರೆಕೃಷ್ಣಶಾಸ್ತ್ರಿ	100/-
ಮರೆಯಲಾದೀತೆ?(ನೆನಪುಗಳು)	ಬೆಳಗೆರೆಕೃಷ್ಣಶಾಸ್ತ್ರಿ	350/-
ಹೊರಲಾರದಗಾಳಿಬಾರದಲ್ಲಿ(ಮಿಲನ್‌ಕುಂದೇರಾ)*	ಅನು:ಸುಕನ್ಯಾಕನಾರಳ್ಳಿ	200/-
ಹದತಪ್ಪಿದಬಾಲ್ಯಬದುಕು(ಬಾಲಪರಾಧಿಗಳುಮತ್ತುಮಹಿಳೆಯರಸತ್ಯಕಥೆಗಳು)*	ಶಾಂತಾನಾಗರಾಜ್	75/-
ಪೂರ್ವಾವಲೋಕನ(ವಸಾಹತುಪ್ರಜ್ಞೆಮತ್ತುಸಾಂಸ್ಕೃತಿಕಅಧ್ಯಯನ)*	ಎಸ್.ಎನ್.ಬಾಲಗಂಗಾಧರ	150/-
ನಮ್ಮದಿದುಇತಿಹಾಸ(ಸ್ಥಳೀಯಚರಿತ್ರೆಗಳುಮತ್ತುಸಂಸ್ಕೃತಿಗಳು)*	ಹೆಚ್.ಎಸ್.ಗೋಪಾಲರಾವ್	100/-
ಆಳ-ನಿರಾಳ:3(ಅಂಕಣಬರಹ)*	ಕೆ.ವಿ.ತಿರುಮಲೇಶ್	175/-
ಮರೆಯಲಾಗದಮಹಾನುಭಾವರು(ನೆನಪುಗಳು)	ಹೊಸಬಾಳೆಸೀತಾರಾಮರಾವ್	125/-
ಕತ್ತಿಯಂಚಿನದಾರಿ(ಸಾಹಿತ್ಯ-ಸಂಸ್ಕೃತಿಚಿಂತನೆ)2010ನೇಸಾಲಿನಕೇಂದ್ರಸಾಹಿತ್ಯಪುರಸ್ಕೃತ ಕೃತಿ-	ರಹಮತ್‌ತರೀಕೆರೆ	250/-
ಕಾಸ್ಮಿಕ್‌ಡಿಟೆಕ್ಟೀವ್(ನಮ್ಮವಿಶ್ವದನಿಗೂಢಗಳಅನ್ವೇಷಣೆ)	ಮೂಲ:ಮಣಿಭೌಮಿಕ್,ಅನು:ಕೆ.ಪುಟ್ಟಸ್ವಾಮಿ	100/-

*ಪ್ರತಿಗಳುಮುಗಿದಿವೆ.

ಮರೆಯಲಾಗದಸಾಮ್ರಾಜ್ಯ(ಮೂಲ:ಎಂ.ವೈ.ಘೋರ್ಪಡೆ)	ಅನು:ಭಾರತೀಕಾಸರಗೋಡು	65/–
ಮುಕ್ತಿಯರಹಸ್ಯ(ಕಥೆಗಳು)(ಮೂಲ:ಎಂ.ವೈ.ಘೋರ್ಪಡೆ)*	ಅನು:ಭಾರತೀಕಾಸರಗೋಡು	75/–
ಬೆಳದಿಂಗಳು (ಮಕ್ಕಳಕಾದಂಬರಿ)*	ಆನಂದ ವಿ. ಪಾಟೀಲ	20/–
ದಿಟನಾಗರಕಂಡರೆ(ಹಾವುಗಳಜಗತ್ತಿಗೊಂದುಪಯಣ)*	ಡಾ. ಟಿ.ಎಸ್.ರಮಾನಂದ	100/–
ಝೆಲ್ಲನ್ನದಿ(ಕವಿತೆಗಳು)*	ಹೆಚ್.ಆರ್.ರಮೇಶ್	50/–
ಅಂಟಿದನಂಟು(ಅಸಮಗ್ರಲೇಖನಗಳು)	ಪಂ.ತಾರಾನಾಥ	600/–
ತಾರಾಸ್ಮರಣೆ (ಪಂ.ತಾರಾನಾಥರನ್ನು ಕುರಿತಲೇಖನಗಳು)*	ಸಂ:ಎಂ.ಧ್ರುವನಾರಾಯಣ	150/–
ಪರಿಮಳದಬೀಜ(ಕವನಸಂಕಲನ)*	ಗೀತಾವಸಂತ	50/–
ಸಾಹಿತ್ಯದಸಪ್ತಧಾತುಗಳು(ಪ್ರಬಂಧಸಂಕಲನ)	ಯಶವಂತ್ ಚಿತ್ತಾಲ	75/–
ಕೆಲವುಕಥಾನಕಗಳು(ಕಥಾಸಂಕಲನ)*	ಕೆ.ವಿ.ತಿರುಮಲೇಶ್	100/–
ವಿಶ್ಲೇಷಣೆ (ವಿಮರ್ಶಾಲೇಖನಗಳು)*	ಹೆಚ್.ಎಸ್.ರಾಘವೇಂದ್ರರಾವ್	100/–
ಶಂಗಂತಮಿಳಗಂಮತ್ತುಕನ್ನಡನಾಡು–ನುಡಿ	(ಆರಂಭಕಾಲದದ್ರಾವಿಡಸಂಬಂಧದಚಿಂತನೆ) ಪ್ರೊ.ಷ.ಶೆಟ್ಟರ್	250/–
ನಾಬಂದಹಾದಿಯಲ್ಲಿ(ಅನುಭವಕಥನ)	ಕೆ.ವಿ.ಘನಶ್ಯಾಮ	200/–
ದೂರತೀರದಿಂದಹರಿದುಬಂದಕತೆಗಳು	ನಾಗಐತಾಳ(ಆಹಿತಾನಲ)	150/–
ಅಕ್ಷಯಕಾವ್ಯ	ಕೆ.ವಿ.ತಿರುಮಲೇಶ್	250/–
ಗಂಗಾವತರಣ (ಗಂಗೂಬಾಯಿಹಾನಗಲ್‌ರವರ ಜೀವನಚಿತ್ರ)	ದಮಯಂತಿನರೇಗಲ್ಲ	75/–
ಮಳೆಬಿದ್ದನೆಲದಲ್ಲಿ (ಕವನಸಂಕಲನ)	ಹೆಚ್.ಎಸ್.ಶಿವಪ್ರಕಾಶ್	50/–
ದೇವರುಎಂಬಸಂಕೇತನಾಮ (ಆತ್ಮಕಥೆ)	ಮೂಲ:ಮಣಿಭೌಮಿಕ್,ಅನು:ಕೆ.ಪುಟ್ಟಸ್ವಾಮಿ	100/–
ಕಣ್ಣಂಚಿನಕಡಲು(ಕವನಸಂಕಲನ)	ನಾಗರಾಜ್‌ಹೆಗಡೆಅಪಗಾಲ	50/–
ವಿಸ್ತರಣೆ (ಲೇಖನಗಳು)	ಶ್ರೀಧರಹೆಗಡೆಭದ್ರನ್	100/–
ಎಲ್ಲಿದೆಶಿವಾಪುರ?(ಕವನಸಂಕಲನ)	ಚಂದ್ರಶೇಖರಕಂಬಾರ	100/–
ಅಭಿವೃದ್ಧಿ, ಆಳಿಕೆಮತ್ತುಮಾನವೀಯಮೌಲ್ಯಗಳು	ಅನು.ಡಾ.ಪಿ.ಎಸ್.ಗೀತಾ, ಶಾಂತಾನಾಗರಾಜ್	30/–
ಅನಂತಮುಖದ ಮೂರ್ತಿ (ಅನಂತಮೂರ್ತಿಕುರಿತು)	ಸಂ:ನಾಗಐತಾಳ	100/–
ಆಳ–ನಿರಾಳ:1(ಅಂಕಣಬರಹ)*	ಕೆ.ವಿ.ತಿರುಮಲೇಶ್	175/–
ಆಳ–ನಿರಾಳ:2 (ಅಂಕಣಬರಹ)*	ಕೆ.ವಿ.ತಿರುಮಲೇಶ್	175/–
ಕಾಲಮಾನ (ಲೇಖನಗಳಸಂಕಲನ)	ಯು.ಆರ್.ಅನಂತಮೂರ್ತಿ	75/–
ನೆನಪಿನಚಿತ್ರಗಳು(ಆತ್ಮಕಥೆ)	ಎಂ.ವೈ.ಘೋರ್ಪಡೆ	100/–
ಸಾಸುವೆಹೂವಚರಿತೆ (ಕವನಸಂಕಲನ)	ಹೆಚ್.ಆರ್‌ರಮೇಶ್	40/–
ಸೈಟಾದರೂ ಬೇಡವೇ ಸ್ವಾಮಿ ನಮಗೆ (ಕವನಸಂಕಲನ)	ಕೆ.ಎಸ್.ಶ್ರೀನಿವಾಸ್‌ಮೂರ್ತಿ	25/–
ಲೆಕ್ಕಕ್ಕೆಸಿಗದವರು(ಕವನಸಂಕಲನ)	ರಶ್ಮಿಹೆಗಡೆ	40/–
ಸಮಕ್ಷಮ(ಲೇಖನಗಳು)	ಯು.ಆರ್.ಅನಂತಮೂರ್ತಿ	100/–
ಸನ್ನಿವೇಶ(ವಿಮರ್ಶೆ)	ಯು.ಆರ್.ಅನಂತಮೂರ್ತಿ	50/–
ಅಂಕಿತಪ್ಪಿದಆರ್ಥುರೋಉಯಿ	ಅನು:ಕೆ.ವಿ.ನಾರಾಯಣ	50/–
ಚಲ್‌ಮೇರಿಲೂನಾ(ಪ್ರಬಂಧಗಳು)	ಆರ್.ನಿರ್ಮಲಾ	75/–
ಬೇಂದ್ರೆಕಾವ್ಯ(ವಿಮರ್ಶೆ)	ರಂ.ಶ್ರೀ.ಮುಗಳಿ	75/–
ಹತುಹತುಇಪ್ಪತು	ಆನಂದ ವಿ. ಪಾಟೀಲ	100/–
ಧ್ವನ್ಯಾಲೋಕದಓದು	ಕೆ.ವಿ.ನಾರಾಯಣ	150/–
ಪಾಶುಪತಾಸ್ತ್ರ (ನಾಟಕ)	ಬೆಳೆಗೆರೆಕೃಷ್ಣಶಾಸ್ತ್ರೀ	25/–
ಅಮೆರಿಕಾಗಾಂಧಿ	ದೇ.ಜ.ಗೌ	75/–
ಯುಗಪಲ್ಲಟ(ಸಂಸ್ಕೃತಿಚಿಂತನೆ)	ಯು.ಆರ್.ಅನಂತಮೂರ್ತಿ	75/–
ಬೆಂಕಿಯನೆನಪು(ಪರ್ಯಾಯಚರಿತ್ರೆ)	ಎಡುವರ್ಡೊಗೆಲಿಯಾನೊ/ಕೆ.ಪಿ.ಸುರೇಶ	75/–
ಶತಮಾನದಕವಿರಿಲ್ಕೆ	ಯು.ಆರ್.ಅನಂತಮೂರ್ತಿ	50/–
ಅಭಾವ(ಕವನ)	ಯು.ಆರ್.ಅನಂತಮೂರ್ತಿ	50/–
ಇಂದಿನಕನ್ನಡ:ರಚನೆಮತ್ತುಬಳಕೆ	ಎಸ್.ಎನ್.ಶ್ರೀಧರ್	75/–
ಪರಿಶ್ರಮ (ಹೋರಾಟದ ಬದುಕು ಬರಹ)	ಎಸ್.ವೆಂಕಟರಾಮ್	250/–
ಜಾಲತರಂಗಿಣಿ (ಅಂಕಣ ಬರಹ)	ಮೈ.ಶ್ರೀ.ನಟರಾಜ	175/–
ಆಗಾಗ (ಪರಿಚಾರಿಕೆಯ ನಡುವಿನ ಮಾತು – ಬರಹ)	ಚಿ.ಶ್ರೀನಿವಾಸರಾಜು	300/–
ನಾನುಒಲಿದಂತೆಹಾಡುವೆ(ಪ್ರಬಂಧಗಳು)	ಚಂದ್ರಶೇಖರಆಲೂರು	75/–
ಬರುವನಾಳೆಗಳಿಗೆರಾತ್ರಿಗಳೇಇರುವುದಿಲ್ಲ	ಸಿದ್ದುದೇವರಮನಿ	50/–
ಒಂದುಮುಷ್ಟಿನಕ್ಷತ್ರ (ಕಥೆಗಳು)	ಕೋಡಿಬೆಟ್ಟುರಾಜಲಕ್ಷ್ಮಿ	50/–
ಪ್ರತಿಸಂಸ್ಕೃತಿ (ವಿಮರ್ಶೆ)	ರಹಮತ್‌ತರೀಕೆರೆ	100/–
ಆಕಣದಸತ್ಯ (ಪ್ರಬಂಧಗಳು)	ಚಂದ್ರಶೇಖರಆಲೂರು	75/–
ನನ್ನರಸಯಾತ್ರೆ (ಆತ್ಮಕಥೆ)	ಮಲ್ಲಿಕಾರ್ಜುನಮನೂರ್	50/–
ಮಬ್ಬಿನಹಾಗೆಕಣಿವೆಯಾಸಿ	ಎಚ್.ಎಸ್.ಶಿವಪ್ರಕಾಶ	50/–
ಶತಮಾನದಕವಿಯೇಟ್	ಯು.ಆರ್.ಅನಂತಮೂರ್ತಿ	75/–
ಯುವಕವಿಗೆಬರೆದಪತ್ರಗಳು(ರಿಲ್ಕೆ)	ಅನು:ಓ.ಎಲ್.ನಾಗಭೂಷಣಸ್ವಾಮಿ	35/–
ಕರೆಯಿತೋಕಡಲತೀರ (ಕೇರಳಕಥನ)	ಜಿ.ಪಿ.ಬಸವರಾಜು	75/–
ಗೆಲುವಿನಚಿಲುಮೆರಾಜರತ್ನಂ	ಸಂ:ಆಹಿತಾನಲ	150/–
ಬಟವಾಡೆಯಾಗದರಸೀತಿ	ಲಕ್ಕೂರು ಆನಂದ	40/–
ಅಗ್ನಿದಿವ್ಯ (ಕಾವ್ಯ)	ಸಂಧ್ಯಾದೇವಿ	30/–

ಕೊಸಿಮೊ (ಕಾದಂಬರಿ) ಇಟಾಲೊ ಕಾಲ್ವಿನೊ.	ಅನು:ಕೆ.ಪಿ.ಸುರೇಶ	100/–
ಹೈದರಾಲಿ(ನಾಟಕ)	ಡಿ.ಎ.ಶಂಕರ್	40/–
ಬೆಳ್ಳೇಕೆರೆಹಳ್ಳಿಥೇಟರ್ (ಗ್ರಾಮೀಣ ರಂಗಭೂಮಿಯ ಆತ್ಮಕಥೆ)	ಪ್ರಸಾದ್ ರಕ್ಷಿದಿ	100/–
ಸೋಮನಾಥಪುರ–ಷಶೆಟ್ಟರ್	(ಇಂಗ್ಲಿಷ್/ಕನ್ನಡಭಾಷೆಗಳಲ್ಲಿ)	450/–ಸಾದಾ100/–
ಗಿರಿಜಾಕಲ್ಯಾಣ– (ನಾಟಕ)	ಬಿಸುರೇಶ	50/–
ನನಗೆದೇವರಗೊಡವೆಕೂಡಬೇಡ(ಮಿರ್ಜಾಗಾಲಿಬ್ ಜೀವನ–ಕೃತಿಗಳು)		50/–
ನಿಮ್ಮ ಸಿಮ್ಮ 3 (ಅಂಕಣ ಬರಹ)	ಸಿ.ಆರ್.ಸಿಂಹ	100/–
ಕನ್ನಡಿದಗರಡಿಯಾಳು (ಜಿ.ಪಿ.ರಾಜರತ್ನಂಕುರಿತನೆನಪುಗಳು)	ವಿವಿಧ ಲೇಖಕರು	100/–
ನಲ್ನುಡಿ ನಿಘಂಟು (ಕನ್ನಡ–ಕನ್ನಡ)	ಎಚ್. ಅಲ್ಲಿಸಾಬ್	175/–
ಮಾಲ್ಟೆಲೌರಿಡ್ ಬ್ರಿಗ್ಗನ ಟಿಪ್ಪಣಿ ಪುಸ್ತಕ–ರಿಲ್ಕೆ (ಕಾದಂಬರಿ)	ಅನು:–ಕೆ.ವಿ.ತಿರುಮಲೇಶ್	100/–
ಮದುವೆಯ ಆಟಗಳು (ನಾಟಕ)	ಎಚ್.ಎಸ್.ಶಿವಪ್ರಕಾಶ್	75/–
ಕರುಳಬಳ್ಳಿಯ ಸೊಲ್ಲು (ಬೇಂದ್ರೆಕಾವ್ಯವಿಮರ್ಶೆ)	ರಾಜೇಂದ್ರ ಚೆನ್ನಿ	50/–
ಆಧುನಿಕ ಕನ್ನಡ ಮಹಾಕಾವ್ಯಗಳು (ರಾಮಾಯಣದ ವಿಷಯಕ್ಕೆ ಸಂಬಂಧಿಸಿದಂತೆ)	ಶ್ರೀಧರ ಹೆಗಡೆ ಭದ್ರನ್	200/–
ಒಂದಾನೊಂದು ಕಾಲದಲ್ಲಿ (ಕಟ್ಟುಕಥೆಗಳು)	ಸಂ. ಆಹಿತಾನಲ (ನಾಗಐತಾಳ)	150/–
ಕಾದೇಇರುವಳುರಾಧೆ (ಕಾದಂಬರಿ)	ಆಹಿತಾನಲ (ನಾಗಐತಾಳ)	50/–
ಶೂನ್ಯಸಂಪಾದನೆಯ ಪರಾಮರ್ಶೆ	ಸಂ.ಶಿ.ಭೂಸನೂರಮಠ	610/–
ಬಲ್ಲವರು ಬಹಳಿಲ್ಲ (ಆಯ್ದ ಲೇಖನಗಳು)	ಎಚ್.ವೈ. ಶಾರದಾಪ್ರಸಾದ್	75/–
ಕುಸುಮಬಾಲೆ– (ಲಯಾಕಾರವಿನ್ಯಾಸ:ಎಲ್.ಬಸವರಾಜು)	ದೇವನೂರ ಮಹಾದೇವ	75/–
ಹಿಂಸೆಯ ಎಡ–ಬಲ	ಯು.ಆರ್. ಅನಂತಮೂರ್ತಿ	10/–
ಮಳೆ ತೊಳೆದ ಕಲ್ಲುಗಳು (ಕವಿತೆ)	ಡಿ.ಆರ್. ಚಂದ್ರಮಾಗಡಿ	35/–
ಜೀವಾಳ (ಕಥೆಗಳು)	ಬಸವರಾಜು ಕುಕ್ಕರಹಳ್ಳಿ	50/–
ಈಡಿಪಸ್ ಕಾಂಪ್ಲೆಕ್ (ಮನೋವೈಜ್ಞಾನಿಕಲೇಖನಗಳು)	ಎಂ.ಬಸವಣ್ಣ	100/–
ಪೊರೆ ಕಳಚಿದ ಮೇಲೆ (ಕವನ)	ಸಿಬಂತಿ ಪದ್ಮನಾಭ	40/–
ಎಲ್ಲಿಹಳು ನನ್ನ ಛಾಯಾ? (ಕವನ)	ಆರತಿ ಪಟ್ರಮೆ	35/–
ಮಾತುಸೋತಭಾರತ (ವಿಮರ್ಶೆ)	ಯು.ಆರ್.ಅನಂತಮೂರ್ತಿ	150/–
ಪ್ರಶ್ನೆಗಳಿರುವುದು ಶೇಕ್ಸ್‌ಪಿಯರನಿಗೆ (ಕವನ)	ಜಿ.ಎನ್. ಮೋಹನ್	50/–
ಉಲ್ಲೇಖ (ವಿಮರ್ಶೆ)	ಕೆ.ವಿ.ತಿರುಮಲೇಶ್	100/–
ಕನ್ನಡಿ ಕಾವ್ಯಾಲಂಕಾರ	ಕೆ.ಕೃಷ್ಣಮೂರ್ತಿ	100/–
ಕನ್ನಡ ಧ್ವನ್ಯಾಲೋಕ	ಕೆ.ಕೃಷ್ಣಮೂರ್ತಿ	150/–
ಕಾಳಿದಾಸ (ವಿಮರ್ಶೆ)	ಶ್ರೀರಂಗ	200/–
ಸಪ್ತಪದಿ (ಕವನ)	ಬಿ.ಸಿ.ರಾಮಚಂದ್ರಶರ್ಮ	40/–
ಬಕುಲದ ಹೂವುಗಳು (ಕವನ)	ಸು.ರಂ.ಎಕ್ಕುಂಡಿ	75/–
ದೇಸಿನಗು (ಲೇಖನಗಳು)	ಎಂ.ಎಸ್.ಮೂರ್ತಿ	75/–
ಬಾಗಿಲು–ಈತನಕದ ತಮಿಳು ಕತೆಗಳು	ಜಯಲಲಿತ	75/–
ಹೀಗೆಹಾಳೆಯಮೇಲೆಹಾಡು (ಕವನ)	ಮಮತಾಜಿ.ಸಾಗರ	25/–
ನಿಮ್ಮ 2 ಸಿಮ್ಮ (ಅಂಕಣ ಬರಹ)	ಸಿ.ಆರ್.ಸಿಂಹ	100/–
ಮೌನ (ಗಜಲ್‌ಗಳು)	ಚಿದಾನಂದ ಸಾಲಿ	35/–
ಪ್ರಶ್ನೆಮತ್ತುದೇವರು (ಕವನ)	ಚೀಮನಹಳ್ಳಿ ರಮೇಶಬಾಬು	50/–
ನಗೆಗನ್ನಡಂ ಗೆಲ್ಗೆ!–ಸಂ.ಎಚ್. ಕೆ. ನಂಜುಂಡಸ್ವಾಮಿ,	ಎಚ್.ವೈ.ರಾಜಗೋಪಾಲ್	250/–
ಅರ್ಥಶಾಸ್ತ್ರ ಪರಿಭಾಷೆ	ಸಿ.ಕೆ.ರೇಣುಕಾರ್ಯ	75/–
ಜೀವಸಂಪಿಗೆ (ಕವನ)	ದು.ಸರಸ್ವತಿ	45/–
ಬಾಪುಕುಟೀ (ಗಾಂಧಿನಂತರದಗಾಂಧೀಚಿಂತನೆಗಳು)	ರಜನಿಭಕ್ಷೀ ಅನು:ವೆಂಕಟರಾಜು	150/–
ಕನ್ನಡದಮರಚೇತನ (ಮಾಸ್ತಿವೆಂಕಟೇಶಅಯ್ಯಂಗಾರ್‌ಸಾಹಿತ್ಯಸಮೀಕ್ಷೆ)	ಸಂ:ಆಹಿತಾನಲ	175/–
ವಾಲ್ಮೀಕಿಯ ನೆವದಲ್ಲಿ (ಸಂಸ್ಕೃತಿಚಿಂತನೆ)	ಯು.ಆರ್. ಅನಂತಮೂರ್ತಿ	300/–
ಆರದದೀಪ (ಜಿ.ಪಿ.ರಾಜರತ್ನಂಜೀವನಚಿತ್ರ)	ನೀಲತಹಳ್ಳಿ ಕಸ್ತೂರಿ	75/–
ಕಸೂತಿ (ಕಾದಂಬರಿ)	ಸ.ಉಷಾ	100/–
ಅಂಗದಧರೆ (ಕಾದಂಬರಿ)	ಕೇಶವ ಮಳಗಿ	50/–
ಚೂರುಪಾರುರೇಷಿಮೆ (ಕವನ)	ಕಮಲಾಕರ ಕಡವೆ	75/–
ನಿಲ್ಲಿಸಬೇಡ ಕಾಯುವುದನ್ನು (ಕವನ)	ಭಾರತೀದೇವಿ	40/–
ಗುಬ್ಬಿಯಸ್ವರ್ಗ (ಮಕ್ಕಳಪದ್ಯಗಳು)	ಭಾಗೀರಥಿಹೆಗಡೆ	30/–
ಹೂಅಂದ್ರೆಹೂ (ಪುಟಾಣಿಗಳಿಗಾಗಿಪುಟಾಣಿಪದ್ಯಗಳು)	ಆನಂದ ಪಾಟೀಲ	40/–
ಕನ್ನಡ–ಇಂಗ್ಲಿಷ್ ನಿಘಂಟು	ಪ್ರಭುಶಂಕರಮತ್ತುಬಾ.ವೇ.ಶ್ರೀಧರ	250/–
ಜೀವಜಾಲ (ಪರಿಸರ ವಿಜ್ಞಾನ)	ಕೆ.ಪುಟ್ಟಸ್ವಾಮಿ, ಕಪೋಕರ–ಸೇನಾನಿ	150/–
ಎಲ್ಲಬಲ್ಲವರಿಲ್ಲ (ಆಯ್ದ ಲೇಖನಗಳು)	ಎಚ್.ವೈ. ಶಾರದಾಪ್ರಸಾದ್	75/–
ಆಕಾಶದಗಲ ನಗುವಿನ ಅವಧೂತ	(ಬೆಳಗೆರೆಕೃಷ್ಣಶಾಸ್ತ್ರೀಅವರನ್ನುಕುರಿತು)	50/–
ಟಿಬೆಟ್ (ಜಗತ್ತುಕೇಳಿಸಿಕೊಳ್ಳಬೇಕಾದಆರ್ತಮೊರೆ)	ಮಂಗ್ಳೂರ ವಿಜಯ	375/–
ಡಂಡಂ ಊರಿಗೆ ಡಿಂಡಿಂ ಗಾಡಿ (ಮಕ್ಕಳಿಗಾಗಿ)	ಆನಂದ ಪಾಟೀಲ	40/–
ವೈದ್ಯರಶಿಕಾರಿ (ಶಿಕಾರಿಯಲ್ಲದಶಿಕಾರಿಅನುಭವಗಳು)	ಟಿ.ಎಸ್.ರಮಾನಂದ್	70/–
ನಮ್ಮ ಕನ್ನಡ (ಕನ್ನಡಚಿಂತನೆ)	ಕೆ.ವಿ.ತಿರುಮಲೇಶ್	60/–
ಅಮೆರಿಕಾಯಣ	ವೈ.ಆರ್. ಮೋಹನ್	650/–
ಮಂದಹಾಸಮೀಮಾಂಸೆ (ಸಮಗ್ರಲಲಿತಪ್ರಬಂಧ)	ಪ್ರಭುಶಂಕರ	150/–
ಖಲೀಲ್ ಗಿಬ್ರಾನ್ (ಜೀವನದರ್ಶನ)	ಪ್ರಭುಶಂಕರ	60/–
ಆಂಟೋನಿಯೊ ಗ್ರಾಮಿ (ಶತಮಾನ ಚಿಂತನೆ)	ಕೆ.ಫಣಿರಾಜ್	50/–*
ಹಳೆಯಕಾಲದ ಹೊಸಕತೆ (ಕಥಾಸಂಕಲನ)	ಕೆ.ಸತ್ಯನಾರಾಯಣ	125/–
ಮನುಕುಲದಮಾತುಗಾರ (ಚಾಮ್‌ಸ್ಕಿಚಿಂತನೆ/ದರ್ಶನ)	ವಿವಿಧ ಲೇಖಕರು	150/–
ಪ್ರೀತಿಸುವುದೆಂದರೆ (ಆರ್ಟ್ ಆಫ್ ಲವಿಂಗ್)	ಮೂಲ: ಎರಿಕ್ ಫ್ರಾಂ	
ಅನು:ಕೆ.ವಿ.ನಾರಾಯಣ, ಎಚ್.ಎಸ್.ರಾಘವೇಂದ್ರರಾವ್		75/–

*ಪ್ರತಿಗಳುಮುಗಿದಿವೆ.

Compendium of American Folklore, History and Culture

ಅಮೆರಿಕಾದಲ್ಲಿ ಕಳೆದ ಎರಡು ದಶಕಗಳಿಂದ ಕ್ರಿಯಾಶೀಲವಾಗಿರುವ 'ಕನ್ನಡ ಸಾಹಿತ್ಯ ರಂಗ' ಎರಡು ವರ್ಷಗಳಿಗೊಮ್ಮೆ ವಸಂತ ಸಾಹಿತ್ಯೋತ್ಸವವನ್ನು ಆಯೋಜಿಸುತ್ತದೆ, ಮತ್ತು ಆ ಉತ್ಸವದ ಅಂಗವಾಗಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದಂತಹ ಒಂದು ಗಂಭೀರ ವಿಮರ್ಶನ ಕೃತಿಯನ್ನು ಪ್ರಕಟಿಸುತ್ತದೆ. ಈ ವರ್ಷ ಆಯೋಜಿಸಲ್ಪಟ್ಟಿರುವ ಹತ್ತನೆಯ ಉತ್ಸವದ ಸಂದರ್ಭದಲ್ಲಿ 'ಅಮೆರಿಕನ್ ಜಾನಪದ' ಎಂಬ (ಕನ್ನಡ ವಾಙ್ಮಯಕ್ಕೆ ಅಪರೂಪವಾದ) 35 ಲೇಖನಗಳ ಸಂಕಲನವನ್ನು ಪ್ರಕಟಿಸುತ್ತಿದೆ.

ಈ ಸಂಕಲನದಲ್ಲಿ 'ಅಮೆರಿಕನ್ ಜಾನಪದ' ಎಂಬ ಎರಡೂ ಪದಗಳನ್ನು ವಿಶಾಲಾರ್ಥದಲ್ಲಿ ಲೇಖಕರು ಅರ್ಥೈಸಿದ್ದಾರೆ. ಅಮೆರಿಕಾ, ಕೆನಡಾ, ಬ್ರಝಿಲ್, ಆಸ್ಟ್ರೇಲಿಯಾ ಇವೇ ಮುಂತಾದ ದೇಶಗಳಲ್ಲಿ ಇರುವ ಮೂಲ ನಿವಾಸಿಗಳು, ಕಪ್ಪು ಜನಾಂಗ, ಮತ್ತು ಭಿನ್ನ ಕಾಲಘಟ್ಟಗಳಲ್ಲಿ ಅಮೆರಿಕಾಕ್ಕೆ ವಲಸೆ ಬಂದ ಯೂರೋಪಿಯನ್ನರು ಇವರುಗಳ ಚರಿತ್ರೆ, ಪುರಾಣ, ನಂಬಿಕೆಗಳು, ಕಥೆ-ಹಾಡು, ಸಂಗೀತ, ವೈದ್ಯವಿದ್ಯೆ, ಇತ್ಯಾದಿ ಅನೇಕ ಜಾನಪದೀಯ ಪ್ರಭೇದಗಳನ್ನು ಈ ಸಂಕಲನದ ಸಂಶೋಧನಾತ್ಮಕ ಲೇಖನಗಳು ಪರಿಚಯಿಸುತ್ತವೆ. ಒಂದೆರಡು ಲೇಖನಗಳು ಕನ್ನಡ ಮತ್ತು ಅಮೆರಿಕನ್/ಕನೇಡಿಯನ್ ಜಾನಪದ ಆಶಯ-ಆಕೃತಿಗಳನ್ನು ತುಲನಾತ್ಮಕವಾಗಿ ಚರ್ಚಿಸುತ್ತವೆ. ಪ್ರಾರಂಭದಲ್ಲಿ ಬರುವ ಪ್ರೊ. ಕೃಷ್ಣಮೂರ್ತಿ ಹನೂರು ಅವರ ಲೇಖನ ಕರ್ನಾಟಕದಲ್ಲಿ ನಡೆದಿರುವ ಜಾನಪದ ಅಧ್ಯಯನದ ಚರಿತ್ರೆಯನ್ನು ವಿದ್ವತ್ಪೂರ್ಣವಾಗಿ ದಾಖಲಿಸಿದರೆ, ಕೊನೆಯಲ್ಲಿ ಖ್ಯಾತ ಕಾದಂಬರಿಕಾರ ಡಾ. ಗುರುಪ್ರಸಾದ್ ಕಾಗಿನೆಲೆ ಅವರ ವಿಮರ್ಶಾತ್ಮಕ ಪಕ್ಷಿನೋಟವಿದೆ. ಒಟ್ಟಾರೆಯಾಗಿ, ಇದೊಂದು ರೋಚಕ ಹಾಗೂ ಸಂಗ್ರಹಯೋಗ್ಯ ಸಂಕಲನ.

ಈಗಿನ ಕನ್ನಡ ಸಾಹಿತ್ಯ ರಂಗದ ಆಡಳಿತ ಮಂಡಲಿಯ ಅಧ್ಯಕ್ಷರಾದ ನಾಗ ಐತಾಳ, ಸಂಪಾದಕರಾದ ಮೈ. ಶ್ರೀ. ನಟರಾಜ ಮತ್ತು ಜ್ಯೋತಿ ವೆಂಕಟಸುಬ್ರಹ್ಮಣ್ಯ, ಸಾಹಿತ್ಯರಂಗದ ಇತರ ಸದಸ್ಯರು, ಈ ವಿಶಿಷ್ಟ ಸಂಕಲನದ ಲೇಖಕರು ಇವರೆಲ್ಲರೂ ಶ್ರಮವಹಿಸಿ ಕನ್ನಡಕ್ಕೆ ಕೊಟ್ಟಿರುವ ಈ ಮಹತ್ವಪೂರ್ಣ ಕೊಡುಗೆಗಾಗಿ ಅಭಿನಂದನೀಯರು. ಜಿ ಎಸ್ ಎಸ್ ಅರ್ಥಪೂರ್ಣವಾಗಿ ಹೇಳಿರುವಂತೆ 'ಇಲ್ಲೂ ಇದೆ ಮಿಡಿಯುವ ಎದೆ ಕನ್ನಡ ನಾಡಿಗೆ ನುಡಿಗೆ.'

ಸಿ. ಎನ್. ರಾಮಚಂದ್ರನ್

ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ